# “ಮೈಸೂರು ನಗರದ ಪಾರಂಪರಿಕ ದೇವಾಲಯಗಳ ಜಾನಪದೀಯ ಅಧ್ಯಯನ”

(ಜಾನಪದ ವಿಷಯದಲ್ಲಿ ಪಿಎಚ್.ಡಿ ಪದವಿಗಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)


**ಸಂಶೋಧಕರು**

**ದಿನೇಶ.ಎಂ.ಎನ್**

ಜಾನಪದ ವಿಭಾಗ

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ

ಮಾನಸಗಂಗೋತ್ರಿ ಮೈಸೂರು–06

**ಮಾರ್ಗದರ್ಶಕರು**

**ಡಾ.ಕೆ.ಸೌಭಾಗ್ಯವತಿ**

ಮುಖ್ಯಸ್ಥರು ಕನ್ನಡ ವಿಭಾಗ

ಯುವರಾಜ ಕಾಲೇಜು

ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–05



ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ

ಮೈಸೂರು ವಿಶ್ವವಿದ್ಯಾನಿಲಯ

ಮಾನಸಗಂಗೋತ್ರಿ, ಮೈಸೂರು–570006

2019

## ಸಂಶೋಧಕರ ಪ್ರಮಾಣ ಪತ್ರ

ಶ್ರೀ ದಿನೇಶ.ಎಂ.ಎನ್ ಆದ ನಾನು, ಡಾ. ಕೆ. ಸೌಭಾಗ್ಯವತಿ, ಮುಖ್ಯಸ್ಥರು, ಕನ್ನಡ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡು **"ಮೈಸೂರು ನಗರದ ಪಾರಂಪರಿಕ ದೇವಾಲಯಗಳ ಜಾನಪದೀಯ ಅಧ್ಯಯನ"** ಎಂಬ ಈ ಮಹಾಪ್ರಬಂಧವನ್ನು ಪಿಎಚ್.ಡಿ (ಜಾನಪದ) ಪದವಿಗಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಸಿದ್ಧಪಡಿಸಿರುತ್ತೇನೆ.

ಪ್ರಸ್ತುತ ಈ ಮಹಾಪ್ರಬಂಧದ ವಿಷಯ ಅಥವಾ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ, ಎಂ.ಎ, ಎಂ.ಫಿಲ್, ಡಿಪ್ಲೋಮಾ ಅಥವಾ ತತ್ಸಮಾನ ಪದವಿಗಾಗಿ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ಮೈಸೂರು                                                ಸಂಶೋಧಕರು

ದಿನಾಂಕ :                                                (ದಿನೇಶ.ಎಂ.ಎನ್)

## ಮೈಸೂರು ವಿಶ್ವವಿದ್ಯಾನಿಲಯ

**ಡಾ.ಕೆ.ಸೌಭಾಗ್ಯವತಿ**
ಮುಖ್ಯಸ್ಥರು ಕನ್ನಡ ವಿಭಾಗ
ಯುವರಾಜ ಕಾಲೇಜು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-05

## ಮಾರ್ಗದರ್ಶಕರ ಪ್ರಮಾಣ ಪತ್ರ

ಶ್ರೀ ದಿನೇಶ.ಎಂ.ಎನ್ ಅವರು ನನ್ನ ಮಾರ್ಗದರ್ಶನದಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿ, ತಮ್ಮ ಸ್ವಂತ ಪರಿಶ್ರಮದಿಂದ ಸಂಶೋಧನೆ ನಡೆಸಿ ಸಿದ್ಧಪಡಿಸಿರುವ **"ಮೈಸೂರು ನಗರದ ಪಾರಂಪರಿಕ ದೇವಾಲಯಗಳ ಜಾನಪದೀಯ ಅಧ್ಯಯನ"** ಎಂಬ ಸಂಶೋಧನಾ ಮಹಾಪ್ರಬಂಧವನ್ನು ಜಾನಪದ ವಿಷಯದಲ್ಲಿ ಪಿಎಚ್.ಡಿ ಪದವಿಗಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿದ್ದಾರೆ.

ಈ ಸಂಶೋಧನಾ ಮಹಾಪ್ರಬಂಧವನ್ನು ಈ ಮೊದಲು ಭಾಗಶಃವಾಗಿಯಾಗಲಿ, ಅಥವಾ ಪೂರ್ಣಪ್ರಮಾಣವಾಗಿಯಾಗಲಿ, ಮೈಸೂರು ವಿಶ್ವವಿದ್ಯಾನಿಲಯ ಅಥವಾ ಬೇರೆ ವಿಶ್ವವಿದ್ಯಾನಿಲಯದ ಯಾವುದೇ ಪದವಿ, ಡಿಪ್ಲೋಮಾ, ಎಂ.ಫಿಲ್ ಅಥವಾ ತತ್ಸಮಾನ ಪದವಿಗಳಿಗಾಗಿ ಸಲ್ಲಿಸಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಮೈಸೂರು — ಮಾರ್ಗದರ್ಶಕರು

ದಿನಾಂಕ :

(ಡಾ.ಕೆ.ಸೌಭಾಗ್ಯವತಿ)

## ಮೈಸೂರು ವಿಶ್ವವಿದ್ಯಾನಿಲಯ

### ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–06

### ನಿರ್ದೇಶಕರ ದೃಢೀಕರಣ ಪತ್ರ

ಶ್ರೀ ದಿನೇಶ.ಎಂ.ಎನ್ ಇವರು ಡಾ.ಕೆ.ಸೌಭಾಗ್ಯವತಿ, ಮುಖ್ಯಸ್ಥರು, ಕನ್ನಡ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಮಾರ್ಗದರ್ಶನದಲ್ಲಿ **"ಮೈಸೂರು ನಗರದ ಪಾರಂಪರಿಕ ದೇವಾಲಯಗಳ ಜಾನಪದೀಯ ಅಧ್ಯಯನ"** ಎಂಬ ವಿಷಯವನ್ನು ಕುರಿತು ಜಾನಪದ ವಿಭಾಗದಲ್ಲಿ ಸಂಶೋಧನೆ ನಡೆಸಿ ಸಿದ್ಧಪಡಿಸಿದ ಈ ಮಹಾಪ್ರಬಂಧವನ್ನು ಪಿಎಚ್.ಡಿ ಪದವಿಗಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿದ್ದಾರೆ.

ಈ ಸಂಶೋಧನೆಯು ಇವರ ಸ್ವಂತ ಪರಿಶ್ರಮದಿಂದ ಕೂಡಿದ್ದು, ಇದನ್ನು ಬೇರೆ ವಿಶ್ವವಿದ್ಯಾನಿಲಯದ ಎಂ.ಎ, ಎಂ.ಫಿಲ್, ಪಿಎಚ್.ಡಿ ಅಥವಾ ಯಾವುದೇ ಸರ್ಟಿಫಿಕೇಟ್ ಕೋರ್ಸ್‌ಗಳ ಪದವಿಗಾಗಿ ಭಾಗಶಃವಾಗಲಿ ಅಥವಾ ಪೂರ್ಣವಾಗಿಯಾಗಲಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

ಸ್ಥಳ : ಮೈಸೂರು                ನಿರ್ದೇಶಕರು

ದಿನಾಂಕ :

(ಪ್ರೊ.ಎನ್.ಎಂ.ತಳವಾರ್)

# ಮೈಸೂರು ವಿಶ್ವವಿದ್ಯಾನಿಲಯ

**ಡಾ.ಕೆ.ಸೌಭಾಗ್ಯವತಿ**
ಮುಖ್ಯಸ್ಥರು ಕನ್ನಡ ವಿಭಾಗ
ಯುವರಾಜ ಕಾಲೇಜು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–05

## ಸಂಶೋಧನಾ ಲೇಖನಗಳ ಪ್ರಮಾಣ ಪತ್ರ

ಶ್ರೀ ದಿನೇಶ.ಎಂ.ಎನ್ ಸಂಶೋಧಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರು **"ಮೈಸೂರು ನಗರದ ಪಾರಂಪರಿಕ ದೇವಾಲಯಗಳ ಜಾನಪದೀಯ ಅಧ್ಯಯನ"** ಎಂಬ ವಿಷಯದ ಬಗ್ಗೆ ನನ್ನ ಮಾರ್ಗದರ್ಶನದಲ್ಲಿ ಸಂಶೋಧನಾ ಕಾರ್ಯವನ್ನು ಕೈಗೊಂಡಿದ್ದು, ಇವರ ಸಂಶೋಧನಾ ಲೇಖನವು 'ಸಂಶೋಧನಾ ಮಾರ್ಗ'ದಲ್ಲಿ **"ಪ್ರಾಚೀನ ಕಾಲದಲ್ಲಿ ದೇವಾಲಯ(ದೇಗುಲ)ಗಳ ಕಲ್ಪನೆ ಮತ್ತು ಬೆಳವಣಿಗೆ"** ಹಾಗೂ 'ಶೋಧ ಭಾರತಿ'ಯಲ್ಲಿ **"ಜೀವದ ಉತ್ಪತ್ತಿ ಮತ್ತು ದೇವರು"** ಪ್ರಕಟವಾಗಿವೆ ಎಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ಮೈಸೂರು — ಮಾರ್ಗದರ್ಶಕರು

ದಿನಾಂಕ :

(ಡಾ.ಕೆ.ಸೌಭಾಗ್ಯವತಿ)

# ಮೈಸೂರು ವಿಶ್ವವಿದ್ಯಾನಿಲಯ

**ಡಾ.ಕೆ.ಸೌಭಾಗ್ಯವತಿ**
ಮುಖ್ಯಸ್ಥರು ಕನ್ನಡ ವಿಭಾಗ
ಯುವರಾಜ ಕಾಲೇಜು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–05

## ಹಾಜರಾತಿ ಪ್ರಮಾಣ ಪತ್ರ

ಶ್ರೀ ದಿನೇಶ.ಎಂ.ಎನ್ ಸಂಶೋಧಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರು **"ಮೈಸೂರು ನಗರದ ಪಾರಂಪರಿಕ ದೇವಾಲಯಗಳ ಜಾನಪದೀಯ ಅಧ್ಯಯನ"** ಎಂಬ ವಿಷಯದ ಬಗ್ಗೆ ನನ್ನ ಮಾರ್ಗದರ್ಶನದಲ್ಲಿ ಸಂಶೋಧನೆ ಮಾಡುವಾಗ ಪೂರ್ಣಕಾಲಿಕ ಮತ್ತು ಅರೆಕಾಲಿಕ ಸಂಶೋಧಕರಾಗಿ ತಮ್ಮ ಹಾಜರಾತಿಯನ್ನು ಪೂರೈಸಿರುತ್ತಾರೆ ಎಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ಮೈಸೂರು — ಮಾರ್ಗದರ್ಶಕರು

ದಿನಾಂಕ :

(ಡಾ.ಕೆ.ಸೌಭಾಗ್ಯವತಿ)

## ಪರಿಶೀಲನಾ ಪ್ರಮಾಣ ಪತ್ರ

ಶ್ರೀ ದಿನೇಶ.ಎಂ.ಎನ್ ಸಂಶೋಧಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರು **"ಮೈಸೂರು ನಗರದ ಪಾರಂಪರಿಕ ದೇವಾಲಯಗಳ ಜಾನಪದೀಯ ಅಧ್ಯಯನ"** ಎಂಬ ಮಹಾಪ್ರಬಂಧದ ಎರಡು ಅಡಕತಟ್ಟೆ(ಸಿ.ಡಿ)ಗಳನ್ನು ಸಲ್ಲಿಸಿರುತ್ತಾರೆ. ಅದು ಸುಸ್ಥಿತಿಯಲ್ಲಿದೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇವೆ.

ಸ್ಥಳ : ಮೈಸೂರು

ದಿನಾಂಕ :

ನಿರ್ದೇಶಕರು — ಮಾರ್ಗದರ್ಶಕರು

(ಪ್ರೊ. ಎನ್.ಎಂ.ತಳವಾರ್) — (ಡಾ.ಕೆ.ಸೌಭಾಗ್ಯವತಿ)

## ಸಂಕೇತಾಕ್ಷರಗಳು

| | | |
|---|---|---|
| ಸಂ | : | ಸಂಪಾದಕರು |
| ಪ್ರ.ಸಂ | : | ಪ್ರಧಾನ ಸಂಪಾದಕರು |
| ಲೇ | : | ಲೇಖಕರು |
| ಪು.ಸಂ | : | ಪುಟ ಸಂಖ್ಯೆ |
| ಎ.ಕ | : | ಎಪಿಗ್ರಾಫಿಯ ಕರ್ನಾಟಿಕ |
| ಕ್ರಿ.ಪೂ | : | ಕ್ರಿಸ್ತ ಪೂರ್ವ |
| ಕ್ರಿ.ಶ | : | ಕ್ರಿಸ್ತ ಶಕ |
| ಗಾ | : | ಗಾದೆ |
| ನು | : | ನುಡಿಗಟ್ಟು |
| ಪ್ರ | : | ಪ್ರಯೋಗ |
| ಕಿ.ಮಿ | : | ಕಿಲೋ ಮೀಟರ್ |
| ಮೀ | : | ಮೀಟರ್ |

## ಪದಗಳ ಅರ್ಥ

ಅಂತರಾಟ = ನಡುವಿನ ಜಾಗ, ಒಳಭಾಗ.

ಅರೆಪಾವು = ಅರ್ಧ ಭಾಗ.

ಆಗಮಶಾಸ್ತ್ರ = ದೇವ ಪೂಜಾತಂತ್ರ ವಿಧಾನವನ್ನು ತಿಳಿಸುವ ಶಾಸ್ತ್ರ.

ಅಗ್ರಹಾರ = ದಾನಕೊಟ್ಟ ಭೂಮಿ(ಬ್ರಾಹ್ಮಣರಿಗೆ), ಬ್ರಾಹ್ಮಣರು ವಾಸ ಮಾಡುವ ಕೇರಿ.

ಅಗ್ರಪೂಜೆ = ಮೊದಲ ಸನ್ಮಾನ.

ಅಧಿದೇವತೆ = ಅಭಿಮಾನಿದೇವತೆ, ಮುಖ್ಯದೇವತೆ.

ಅನುಚಾನ = ಪರಂಪರೆಯಾಗಿ ನಡೆದು ಬಂದ ಪದ್ಧತಿ.

ಅಭಿಷೇಕ = ದೇವರಿಗೆ ಮಾಡಿಸುವ ಮಂಗಳಸ್ನಾನ.

ಆಚಾರ = ಕಟ್ಟುಪಾಡು, ಸಂಪ್ರದಾಯ.

ಇಸ್ತ್ರಿ ಎಲೆ = ಊಟದ ಎಲೆ, ಮುತ್ತುಗದ ಎಲೆ

ಇಳ್ಳೇದೆಲೆ = ವೀಳ್ಯದೆಲೆ, ಒಂದು ಬಗೆಯ ಬಳ್ಳಿ ಮತ್ತು ಅದರ ಎಲೆ, ನಾಗವಲ್ಲಿ, ತಾಂಬೂಲ

ಉತ್ಸವ = ಹಬ್ಬ, ಸಡಗರ, ಮೆರವಣಿಗೆ.

ಉದ್ಭವಮೂರ್ತಿ = ತಾನೇ ತಾನಾಗಿ ಹುಟ್ಟಿದ ಮೂರ್ತಿ.

ಉಪಟಳ = ಹಿಂಸೆ, ತೊಂದರೆ

ಉಪಾಸನೆ = ಪೂಜೆ, ಸೇವೆಸಲ್ಲಿಸುವುದು.

ಎಡೆ = ನೈವೇದ್ಯ, ಊಟ.

ಎಸರು = ಸಾಂಬರ್, ಅಡುಗೆಗಾಗಿ ಕುದಿಯಲಿಟ್ಟ ನೀರು

ಐತಿಹ್ಯ = ಪರಂಪರೆಯಿಂದ ಬಂದಿರುವುದು.

ಒಡಪು = ಒಗಟು.

ಔಡಲ = ಹರಳುಗಿಡ, ಹರಳು.

ಔದುಂಬರ = ಅತ್ತಿಯ ಮರ

ಕಂಠೀರವ = ಸಿಂಹ

ಕಂದಾಚಾರ = ಸಂಪ್ರದಾಯ

ಕಂಕಣಕಟ್ಟು = ಸಂಕಲ್ಪಮಾಡು.

ಕರಗ = ನೀರುತುಂಬುವ ಕಲಶ, ಒಂದು ಉತ್ಸವ.

ಕಾರ್ಪಣ್ಯ = ಬಡತನ

ಕಿಲ್ಲೆ = ಕೋಟೆ, ದರ್ಗ

ಕುಕ್ಕೆ = ಬಿದಿರಿನಿಂದ ಹೆಣೆದಿರುವ ಬುಟ್ಟಿ

ಕುಡಿಕೆ = ಮಣ್ಣಿನಿಂದ ಮಾಡಿದ ಚಿಕ್ಕ ಪಾತ್ರೆ

ಕುಲ = ಗುಂಪು, ವಂಶ, ಜಾತಿ, ಮನೆ

ಕೈಂಕರ್ಯ = ಸೇವೆ

ಕೊಡತಿ = ಮರದ ಸುತ್ತಿಗೆ

ಕೊಳಗ = ಒಂದು ಅಳತೆ; ನಾಲ್ಕು ಬಳ್ಳಗಳ ಪರಿಮಾಣ

ಗಡಿಗೆ = ಮಣ್ಣಿನ ಪಾತ್ರೆ

ಗದ್ಯಾಣ = ಒಂದು ಚಿನ್ನದ ನಾಣ್ಯ

ಗರುಡಗಂಭ = ದೇವಾಲಯಗಳ ಮುಂದಿನ ಧ್ವಜಸ್ತಂಭ

ಗರ್ಭಗುಡಿ = ದೇವಾಲಯಗಳ ಮೂಲ ವಿಗ್ರಹವನ್ನು ಇಟ್ಟಿರುವ ಒಳಭಾಗ

ಗುಗ್ಗಳ = ಧೂಪ

ಗಾದೆ = ನಾಣ್ಣುಡಿ

ತಣಿಗೆ = ತಟ್ಟೆ

ತಮ್ಮಡಿ = ಪೂಜಾರಿ, ಗುರು, ಋಷಿ

ತಾಯಿತ = ಕೇಡಿನ ಬಾಧೆ ತಟ್ಟದಿರಲು ಧರಿಸುವ ರಕ್ಷೆ; ಯಂತ್ರ

ತೊಪ್ಪೆ = ಸಗಣಿಯ ಮುದ್ದೆ

ತೃಟಿ = ಮುರಿಯುವಿಕೆ, ಹಾನಿ, ಲೋಪ

ದವನ = ಸುವಾಸನೆಯ ಎಲೆಗಳುಳ್ಳ ಒಂದು ಬಗೆಯ ಗಿಡ

ದಾಳ = ಪಗಡೆಯಾಟದಲ್ಲಿ ಉಪಯೋಗಿಸುವ ಒಂದು ಸಾಧನ, ಲೆತ್ತ

ನಡೆಮಡಿ = ನಡೆಯುವಾಗ ಕಾಲು ನೆಲಕ್ಕೆ ತಾಗದಂತೆ ಹಾಸುವ ಮಡಿಬಟ್ಟೆ

ನವರಂಗ = ದೇವಾಲಯದ ಸಭಾಮಂಟಪ

ನುಂಗಣಿ = ಕಬಳಿಸು, ಅಪಹರಿಸು, ಕೊಲ್ಲು

ಪಟ್ಟಮಹಿಷಿ = ಪಟ್ಟದ ರಾಣಿ

ಪತ್ರೆ = ಬಿಲ್ವ, ತುಳಸಿ ಮುಂತಾದವುಗಳ ದಳ

ಪರ = ಅನ್ಯ, ಕೈವಲ್ಯ, ಪಕ್ಷ, ಪ್ರತಿಯಾದುದು, ಶ್ರೇಷ್ಠವಾದ

ಪರಂಪರೆ = ಕುಲ, ವಂಶ, ಸಾಲು, ಸಂಪ್ರದಾಯ

ಪರ್ಬ = ಹಬ್ಬ, ಪರ್ವಕಾಲ, ಸಮಾರಂಭ

ಪರ್ಸಾದ = ಪ್ರಸಾದ, ದೇವರಿಗೆ ಅರ್ಪಿಸಿ ಪಡೆದುದು

ಪಾಣಿಪೀಠ = ಪಹಣಿ ಆಸನ

ಪ್ರಭಾವಳಿ = ವಿಗ್ರಹಗಳ ಶಿರೋಭಾಗದಲ್ಲಿ ಅಳವಡಿಸುವ ವರ್ತುಳಾಕಾರವಾದ ಒಂದು ಅಲಂಕಾರ ಸಾಧನ

ಪೋಷಾಕು = ಉಡುಗೆ, ತೊಡುಗೆ

ಪ್ರಾಂಗಣ = ಅಂಗಳ

ಪ್ರಾಕಾರ = ಪೌಳಿ, ಸುತ್ತುಗೋಡೆ

ಪ್ರಕಾರದಲ್ಲಿ = ಗುಂಪಿನಲ್ಲಿ, ಸಮೂಹದಲ್ಲಿ

ಪೀಠ = ಆಸನ, ಗದ್ದುಗೆ, ವಿದ್ಯಾಕ್ಷೇತ್ರ

ಬಾಹತ್ತರ = ಎಪ್ಪತ್ತೆರಡು

ಭಂಡಾಟ = ನಾಚಿಕೆಯಿಲ್ಲದವರಂತೆ ಆಡುವುದು

ಬೋದಿಗೆ = ಕಂಬದ ಮೇಲೆ ತೊಲೆಯನ್ನು ಕೂರಿಸಲು ಮಾಡಿದ ಸಾಧನ

ಮಂದಾಸನ = ದೇವರ ವಿಗ್ರಹವನ್ನಿಡುವ ಮರದ ಮಂಟಪ

ಮಿಂದು = ಜಳಕ, ಸ್ನಾನ, ಮುಳುಗಿ

ಮೋರೆ = ಮುಖ, ಸಮ್ಮುಖ, ಎದುರು

ರಥ = ತೇರು

ಲಷ್ಕರು = ಸೈನ್ಯ, ಸೈನ್ಯವಿರುವ ಜಾಗ

ವಜ್ರಮುಷ್ಠಿ = ಬಿಗಿಮುಷ್ಠಿ

ವಟ = ಆಲದಮರ

ವರ್ಧಂತಿ = ಹುಟ್ಟುಹಬ್ಬ

ವಾಡಿಕೆ = ಸಂಪ್ರದಾಯ, ಪದ್ಧತಿ

ವರಾಹ = ಹಂದಿ

ಶಮಿ = ಬನ್ನಿಮರ

ಶಾಕ್ತ = ಶಕ್ತಿದೇವತೆಯನ್ನು ಪೂಜಿಸುವವನು

ಸಂಜಾತರೂ = ಸಮೂಹ, ಪ್ರಾಪ್ತವಾಗುವಿಕೆ, ಹುಟ್ಟಿದ

ಸಾಲಂಕೃತ = ಸಿಂಗರಿಸಿದ, ಅಲಂಕರಿಸಿದ

ಸುಕನಾಸಿ = ದೇವಾಲಯದಲ್ಲಿರುವ ಗರ್ಭಗುಡಿಯ ಮುಂಭಾಗದ ಅಂಕಣ

ಹಂಗಣಿ = ಹೀಯಾಳಿಸುವಿಕೆ

ಹಜಾರ = ಪಡಸಾಲೆ, ನಡುಮನೆ

ಹಾರವ = ಬ್ರಾಹ್ಮಣ

ಹೊಂಬಾಳೆ = ಅಡಕೆ ಅಥವಾ ತೆಂಗಿನ ಮರದ ಹೂವಿನ ಗೊಂಚಲು

ಹೋತ = ಗಂಡುಮೇಕೆ

# ಕೃತಜ್ಞತೆಗಳು

ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ವಿಭಾಗದಲ್ಲಿ ಸಂಶೋಧನೆಯನ್ನು ಕೈಗೊಳ್ಳಬೇಕು ಎಂಬ ಹಂಬಲದಿಂದ ಮಾರ್ಗದರ್ಶಕರನ್ನು ಹುಡುಕುತ್ತಿರುವಾಗ, ಜಾನಪದ ವಿಭಾಗದ ಮುಖ್ಯಸ್ಥರಾದ ಶ್ರೀ ಡಾ.ಎಂ.ನಂಜಯ್ಯ ಹೊಂಗನೂರು ಅವರು ಯುವರಾಜ ಕಾಲೇಜಿನ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಡಾ.ಕೆ.ಸೌಭಾಗ್ಯವತಿ ಅವರ ಬಳಿಗೆ ಕಳುಹಿಸಿದರು. ಆ ಸಂದರ್ಭದಲ್ಲಿ ನಾನು ಅವರನ್ನು ಭೇಟಿಯಾಗಿ ನನ್ನ ಮನದಾಳದ ಇಂಗಿತವನ್ನು ವ್ಯಕ್ತಪಡಿಸಿದೆ. ಆಗ ಅವರು ನನಗೆ ಮಾರ್ಗದರ್ಶನ ಮಾಡಲು ಒಪ್ಪಿಗೆ ಸೂಚಿಸಿದ್ದು ನನಗೆ ಸಂತೋಷವನ್ನುಂಟುಮಾಡಿತು.

"ಮೈಸೂರು ನಗರದ ಪಾರಂಪರಿಕ ದೇವಾಲಯಗಳ ಜಾನಪದೀಯ ಅಧ್ಯಯನ" ಎಂಬ ಶೀರ್ಷಿಕೆಯಲ್ಲಿ ನನ್ನ ಚಿಂತನಾ ಕ್ರಮಗಳಿಗೆ ಡಾ.ಕೆ.ಸೌಭಾಗ್ಯವತಿ ಅವರು ಒಂದು ನಿರ್ದಿಷ್ಟ ಚೌಕಟ್ಟನ್ನು ಹಾಕಿಕೊಟ್ಟರು. ಅಷ್ಟೇ ಅಲ್ಲದೇ ನಿರಂತರವಾಗಿ ನನ್ನ ಸಂಶೋಧನಾ ಅಧ್ಯಯನದುದ್ದಕ್ಕೂ ಉತ್ತಮ ರೀತಿಯಲ್ಲಿ ಸಲಹೆ ಸೂಚನೆಗಳನ್ನು ನೀಡುತ್ತಾ ನನ್ನ ಬರವಣಿಗೆಯನ್ನು ತಿದ್ದಿ-ತೀಡಿ ಸರಳ ಸಜ್ಜನಿಕೆಯಿಂದ ಸ್ಪಂದಿಸಿ ಸಹಕರಿಸಿದ್ದಾರೆ. ಹೀಗೆ ಸಂಶೋಧನೆಯ ಯಶಸ್ಸು ಆಲೋಚನೆಗಳಿಗೆ ಅನುವು ಮಾಡಿಕೊಟ್ಟ ಮಾರ್ಗದರ್ಶಕರಾದ ಡಾ.ಕೆ.ಸೌಭಾಗ್ಯವತಿ ಅವರಿಗೆ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಸಂಶೋಧನೆಯ ಆರಂಭದಿಂದ ಅಂತ್ಯದವರೆಗೂ ಸಹಕಾರ ನೀಡಿ ವಿದ್ಯಾರ್ಥಿ ಸ್ನೇಹಿಯಾಗಿ, ಸದಾ ಹಸನ್ಮುಖಿಗಳು, ಪ್ರೀತಿಯ ಗುರುಗಳು ಹಾಗೂ ಜಾನಪದ ವಿಭಾಗದ ಮುಖ್ಯಸ್ಥರು ಆದಂತಹ ಡಾ.ಎಂ.ನಂಜಯ್ಯ ಹೊಂಗನೂರು ಅವರಿಗೆ ಸದಾ ಆಭಾರಿಯಾಗಿರುತ್ತೇನೆ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಪ್ರೊ.ಎನ್.ಎಂ.ತಳವಾರ್ ಅವರಿಗೂ ಬೋಧಕ ವೃಂದ ಹಾಗೂ ಬೋಧಕೇತರ ಸಿಬ್ಬಂದಿಗಳಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಪ್ರೊ.ಡಿ.ಬಿ.ನಾಯಕ ಕುಲಪತಿಗಳು, ಪ್ರೊ.ಸ.ಚಿ.ರಮೇಶ್ ಕುಲಪತಿಗಳು, ಪ್ರೊ.ಮಂಜುನಾಥ ಬೇವಿನಕಟ್ಟಿ ಕುಲಸಚಿವರು, ಪ್ರೊ.ಗಂಗಾನಾಯಕ್ ಕುಲಸಚಿವರು, ಪ್ರೊ.ಬರಗೂರು ರಾಮಚಂದ್ರಪ್ಪ, ಡಾ.ವ್ಹಿ.ಎಲ್.ಪಾಟೀಲ್, ಪ್ರೊ.ಮೊಗಳ್ಳಿ ಗಣೇಶ್, ಡಾ.ಹೆಬ್ಬಾಲೆ ನಾಗೇಶ್, ಡಾ.ಸಿ.ಟಿ.ಗುರುಪ್ರಸಾದ್, ಡಾ.ಬಿ.ಕೆ.ರವೀಂದ್ರನಾಥ್, ಡಾ.ಕೆ.ವಾಸುದೇವಮೂರ್ತಿ, ಡಾ.ಹೆಚ್.ಆರ್.ಚೇತನ, ಡಾ.ವಿಜಯಲಕ್ಷ್ಮಿ ಮನಾಪುರ, ಡಾ.ಕೆ.ಎಂ.ವರದರಾಜನ್, ಡಾ.ಪಿ.ಗೌರೀಶ್, ಡಾ.ಜಯಲಕ್ಷ್ಮಿ ಸೀತಾಪುರ, ಡಾ.ಆರ್.ಕೃಷ್ಣ ಹೊಂಬಾಳ್, ಡಾ.ಲೋಲಾಕ್ಷಿ,

ಡಾ.ಸುಜಾತ ಅಕ್ಕಿ, ಡಾ.ಅರುಣ ಜೋಳದಕೂಡ್ಲಿಗಿ, ಡಾ.ಕೆ.ಟಿ.ನಾಗೇಶ್, ಡಾ.ಮಂಜು.ಎನ್.ಡಿ ಹಾಗೂ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಸಂಶೋಧನಾ ಮಹಾಪ್ರಬಂಧದ ರಚನೆಯ ಕಾರ್ಯಚಟುವಟಿಕೆಗಳ ಅನುಕೂಲತೆಗಾಗಿ ಧನಸಹಾಯವನ್ನು ನೀಡಿದ ಮೈಸೂರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿಶೇಷ ಘಟಕ ಹಾಗೂ ರಾಜೀವ್‌ಗಾಂಧಿ ರಾಷ್ಟ್ರೀಯ ಶಿಷ್ಯವೇತನಕ್ಕೆ ಆಯ್ಕೆ ಮಾಡಿದ ವಿಶ್ವವಿದ್ಯಾಲಯಗಳ ಧನಸಹಾಯ ಆಯೋಗಕ್ಕೂ, ಮೈಸೂರು ವಿಶ್ವವಿದ್ಯಾನಿಲಯಕ್ಕೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನನ್ನ ಸಂಶೋಧನೆಯ ಕ್ಷೇತ್ರಕಾರ್ಯದಲ್ಲಿ ಸಂಪೂರ್ಣ ಸಹಾಯ ಹಾಗೂ ಸಹಕಾರ ನೀಡಿದ ಮೈಸೂರು ನಗರದ ದೇವಾಲಯಗಳ ಅರ್ಚಕರು, ಆಡಳಿತ ಮಂಡಳಿ, ವಕ್ತೃಗಳು ಹಾಗೂ ದತ್ತಾಂಶ ಸಂಗ್ರಹಣೆಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ನನ್ನ ಎಲ್ಲಾ ಸ್ನೇಹಿತ ಬಂಧುಗಳಿಗೂ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಓದು–ಬರಹಕ್ಕೆ ಇಂದಿಗೂ ಬೆನ್ನೆಲುಬಾಗಿ ನಿಂತು, ಹೊಟ್ಟೆಬಟ್ಟೆ ಕಟ್ಟಿ ನನ್ನನ್ನು ಬೆಳೆಸಿದ ನನ್ನ ಜೀವದ ಜೀವವಾಗಿರುವ ತಂದೆ ನಂಜುಂಡನಾಯಕ, ತಾಯಿ ಸಾವಿತ್ರಮ್ಮ, ಅಣ್ಣ ಎಂ.ಎನ್.ಪದ್ಮಕುಮಾರ, ಅತ್ತಿಗೆ ಬಿ.ಶೀಲಾ, ತಂಗಿ ಎಂ.ಎನ್.ವೀಣಾ, ಭಾವ ಹೆಚ್.ಪಿ.ಜಯರಾಮ್ ಹಾಗೂ ಬಾಳ ಸಂಗಾತಿ ಶೃತಿ.ಎಂ, ಮತ್ತು ಮಗಳು ಮನ್ವಿತ.ಡಿ, ಹೆಣ್ಣುಕೊಟ್ಟ ಮಾವ ಮಾದಯ್ಯ.ಎಂ, ಅತ್ತೆ ಕೆ.ಸೌಭಾಗ್ಯ ಹಾಗೂ ನನ್ನೆಲ್ಲಾ ಕುಟುಂಬ ವರ್ಗದವರಿಗೂ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಜಾನಪದ ವಿಭಾಗ, ಜಾನಪದ ಸಂಶೋಧಕರು, ಜಾನಪದ ವಿದ್ಯಾರ್ಥಿಗಳು, ಬೋಧಕವೃಂದ, ಐ.ಸೇಸುನಾಥನ್, ಶ್ರೀಮತಿ ಪುಷ್ಪಲತಾ, ಶಿವಕುಮಾರ.ಕೆ, ವಿಜಯಕುಮಾರಿ. ಡಿ.ಜಿ, ರಾಜೇಶ.ಎಂ, ಸೋಮಶೇಖರ್.ಪಿ ಹಾಗೂ ಸಂಶೋಧನೆಯ ಆರಂಭದ ದಿನಗಳಲ್ಲಿ ಜೊತೆಗಿದ್ದ ಗೆಳೆಯ ಶ್ರೀ ಮಂಜು.ಎಚ್.ಪಿ ಅವರನ್ನು ಈ ಸಂದರ್ಭದಲ್ಲಿ ನೆನೆಯುತ್ತೇನೆ.

ದಿನೇಶ.ಎಂ.ಎನ್.

## ಮೈಸೂರು ನಗರದ ಪಾರಂಪರಿಕ ದೇವಾಲಯಗಳ ಜಾನಪದೀಯ ಅಧ್ಯಯನ

**ಪೀಠಿಕೆ** **1–9**

**ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ** **9–11**

**ಪೂರ್ವ ಸಾಹಿತ್ಯ ಅಧ್ಯಯನ ಸಮೀಕ್ಷೆ** **12–22**

**ಅಧ್ಯಯನ ವಿಧಾನ** **22–23**

**ಅಧ್ಯಾಯ–1 ಮೈಸೂರು ನಗರದ ಸಾಂಸ್ಕೃತಿಕ ಹಿನ್ನೆಲೆ.** **24–44**

1.1 ಭೌಗೋಳಿಕ ಹಿನ್ನೆಲೆ.

1.2 ಪೌರಾಣಿಕ ಮತ್ತು ಐತಿಹಾಸಿಕ ಹಿನ್ನೆಲೆ.

1.3 ಧಾರ್ಮಿಕ ಹಿನ್ನೆಲೆ.

1.4 ಸಾಮಾಜಿಕ ಹಿನ್ನೆಲೆ.

1.5 ಆರ್ಥಿಕ ಹಿನ್ನೆಲೆ.

1.6 ಸಾಹಿತ್ಯಿಕ ಹಿನ್ನೆಲೆ.

1.7 ರಾಜಕೀಯ ಮತ್ತು ಶೈಕ್ಷಣಿಕ ಹಿನ್ನೆಲೆ

**ಅಧ್ಯಾಯ–2 ದೇವಾಲಯಗಳ ಪರಂಪರೆ–ಇತಿಹಾಸ** **45–76**

2.1 ಪರಂಪರೆ.

2.2 ದೇವಾಲಯಗಳ ಉಗಮ, ಬೆಳವಣಿಗೆ ಮತ್ತು ಇತಿಹಾಸ.

2.3 ಮೈಸೂರು ನಗರದ ಪಾರಂಪರಿಕ ದೇವಾಲಯಗಳ ಪ್ರಾಚೀನತೆ.

2.4 ಶಾಸನಗಳು.

2.5 ನಾಣ್ಯಗಳು.

2.6 ಪ್ರಾಚೀನ ಗ್ರಂಥಗಳು.

**ಅಧ್ಯಾಯ–3 ದೇವಾಲಯಗಳ ವರ್ಗೀಕರಣ 77–144**

3.1 ಶೈವ ದೇವಾಲಯಗಳು.

3.2 ವೈಷ್ಣವ ದೇವಾಲಯಗಳು.

3.3 ಶಕ್ತಿದೇವತೆ ದೇವಾಲಯಗಳು.

3.4 ಇತರೆ ದೇವಾಲಯಗಳು.

**ಅಧ್ಯಾಯ–4 ಪಾರಂಪರಿಕ ದೇವಾಲಯಗಳ ರಚನೆ ಮತ್ತು ಭೌತಿಕ ಸಂಸ್ಕೃತಿ 145–191**

4.1 ದೇವಸ್ಥಾನಗಳು.

4.2 ದೇವಾಲಯಗಳ ಸ್ವರೂಪ.

4.3 ದೇವಾಲಯಗಳ ರಚನೆ.

4.4 ದೇವರ ಮೂರ್ತಿಶಿಲ್ಪಗಳು.

4.5 ಜನಪದ ವಾದ್ಯಗಳು.

4.6 ಆಭರಣ ಮತ್ತು ವಸ್ತ್ರಗಳು.

4.7 ದೇವರ ವಾಹನಗಳು.

**ಅಧ್ಯಾಯ–5 ಪಾರಂಪರಿಕ ದೇವಾಲಯಗಳ ಸಾಮಾಜಿಕ ಸಂಪ್ರದಾಯಗಳು 192–305**

5.1 ನಂಬಿಕೆ.

5.2 ಆಚರಣೆಗಳು.

5.3 ವಿಧಿ ನಿಷೇಧಗಳು.

5.4 ಹಬ್ಬ, ಜಾತ್ರೆಗಳು ಮತ್ತು ಉತ್ಸವಗಳು.

5.5 ಹರಕೆ ಪದ್ಧತಿ.

5.6 ದೇವಾಲಯಗಳಲ್ಲಿನ ಮರಗಿಡಗಳಿಗೆ ಸಂಬಂಧಿಸಿದ ನಂಬಿಕೆ ಮತ್ತು ಆಚರಣೆಗಳು.

5.7 ದೇವಾಲಯಗಳಲ್ಲಿ ಪ್ರಾಣಿಸಂಬಂಧಿ ನಂಬಿಕೆ ಮತ್ತು ಆಚರಣೆಗಳು.

5.8 ಇತರೆ ವಿಚಾರಗಳು.

**ಅಧ್ಯಾಯ–6 ಪಾರಂಪರಿಕ ದೇವಾಲಯಗಳ ಆಡಳಿತ ಮತ್ತು ಆರ್ಥಿಕತೆ 306–326**

6.1 ಮುಜರಾಯಿ ಇಲಾಖೆ.

6.2 ದೇವಾಲಯಗಳ ಆಡಳಿತ ಮಂಡಳಿ ಅಥವಾ ಟ್ರಸ್ಟ್‌ಗಳ ಪಾತ್ರ.

6.3 ಪೂಜಾರಿಗಳ ಪಾತ್ರ.

6.4 ದೇವಾಲಯಗಳ ಆರ್ಥಿಕತೆ.

**ಅಧ್ಯಾಯ–7 ದೇವಾಲಯಗಳ ವರ್ಣ–ವರ್ಗಗಳ ಸಂಬಂಧ ಹಾಗೂ ಭಕ್ತ ಪರಂಪರೆ**

**327–352**

7.1 ವರ್ಣವ್ಯವಸ್ಥೆ.

7.2 ಜಾತಿ ಹಾಗೂ ಸಮುದಾಯಗಳು ಪೂಜಿಸುವ ದೇವರು.

7.3 ದಲಿತರ ಸ್ಥಿತಿಗತಿ.

7.4 ಸ್ತ್ರೀಯರ ಸ್ಥಾನಮಾನ.

7.5 ದೇವಾಲಯಗಳ ಭಕ್ತ ಪರಂಪರೆ.

**ಅಧ್ಯಾಯ–8 ಪಾರಂಪರಿಕ ದೇವಾಲಯಗಳ ಕಲೆ ಮತ್ತು ಸಾಹಿತ್ಯ 353–445**

8.1 ಜನಪದ ಕಲೆ.

8.2 ಜನಪದ ಸಾಹಿತ್ಯ.

8.3 ಸ್ಥಳನಾಮಗಳು.

**ಅಧ್ಯಾಯ–9 ಆಧುನೀಕರಣದ ಪ್ರಭಾವದಲ್ಲಿ ಪಾರಂಪರಿಕ ದೇವಾಲಯಗಳು 446–458**

9.1 ಆಧುನೀಕರಣದ ಪ್ರಭಾವಗಳು.

9.2 ಹಬ್ಬ–ಜಾತ್ರೆ–ದೈವಾರಾಧನೆ ಮತ್ತು ಆಧುನೀಕತೆ.

9.3 ನಗರ ಜಾನಪದ.

9.4 ಮೌಢ್ಯಾಚರಣೆ ಪ್ರತಿಬಂಧಕ ವಿಧೇಯಕ.

**ಉಪಸಂಹಾರ** **459–467**

**ಮುಂದಿನ ಅಧ್ಯಯನದ ಅಥವಾ ಸಂಶೋಧನೆಯ ಸಾಧ್ಯತೆಗಳು** **468**

**ಅನುಬಂಧಗಳು** **469–497**

1. ಗ್ರಂಥ ಸೂಚಿ.
2. ವಕ್ತೃ ಸೂಚಿ.
3. ಪ್ರಶ್ನಾವಳಿ.
4. ಛಾಯಚಿತ್ರಗಳು.
5. ಮೈಸೂರು ನಗರದ ನಕ್ಷೆ.

## ಪೀಠಿಕೆ

ಜಾನಪದವು ಸಮಸ್ತ ಮಾನವಕುಲದ ಸಂಸ್ಕೃತಿಯ ಹಾಗೂ ಎಲ್ಲಾ ಜ್ಞಾನ ವಿಜ್ಞಾನಗಳ ಮೂಲ ಮಾತೃಕೆ. ಮುಂದುವರೆದಿರುವ ಈ ನಾಗರಿಕ ಜಗತ್ತಿನಲ್ಲೂ ಜಾನಪದವೇ ನಮ್ಮ ನರನಾಡಿಗಳಲ್ಲಿ ಅಂತರವಾಹಿನಿಯಾಗಿ ಸುಪ್ತವಾಗಿ ಹರಿಯುತ್ತಾ ನಮ್ಮ ಪ್ರಜ್ಞಾವಲಯದ ಆಳದಿಂದಲೇ ನಮ್ಮೆಲ್ಲ ಕ್ರಿಯೆ–ಪ್ರಕ್ರಿಯೆಗಳಿಗೆ ಪ್ರೇರಣೆಯನ್ನು ನೀಡುತ್ತದೆ. ಆದಿಮಾನವ ಒಬ್ಬಂಟಿಯಾಗಿ, ಸಮಸ್ಯೆಗಳನ್ನು ಮೆಟ್ಟಿನಿಲ್ಲಲು ಸಹಕಾರದೊಂದಿಗೆ ಜೋಡಿಯಾಗಿ, ಅನಂತರ ಒಂದು ಕುಟುಂಬವಾಗಿ ಬೆಳೆಯುತ್ತಾ ಸಮುದಾಯವಾಗಿ ಹಂತ ಹಂತವಾಗಿ ತನ್ನ ಬದುಕಿನ ವಿನ್ಯಾಸಗಳನ್ನು ಮತ್ತು ಉದ್ದೇಶಗಳನ್ನು ವಿಸ್ತರಿಸುವ ಅವುಗಳನ್ನು ಪೂರೈಸಿಕೊಳ್ಳುವ ದೃಷ್ಟಿಯಿಂದ ಸಾಹಿತ್ಯ, ಕಲೆ, ಜೀವನಾಧಾರಿತ ವ್ಯವಸಾಯ ಹಾಗೂ ಇತರೆ ಕುಲಕಸುಬುಗಳೊಂದಿಗೆ ನಂಬಿಕೆ, ಆಚರಣೆ, ರೂಡಿ ಸಂಪ್ರದಾಯಗಳನ್ನು ರೂಪಿಸಿಕೊಂಡು ಜೀವನ ಸಾಗಿಸಲು ಮುಂದಾಗಿ ನಾಗರೀಕತೆಯೆಡೆಗೆ ಹೆಜ್ಜೆಹಾಕತೊಡಗಿದೆ.

ಮಾನವ ಜೀವನದ ಅಂತರಂಗದ ಅಭಿವ್ಯಕ್ತಿಯೇ ಸಂಸ್ಕೃತಿಯಾಗಿ ಅದು ಪ್ರತಿಯೊಂದು ಸಮುದಾಯದ ಆಚಾರ–ವಿಚಾರ, ರೀತಿ–ನೀತಿ, ನೋವು–ನಲಿವುಗಳನ್ನು ಬಹಿರಂಗವಾಗಿ ತೆರೆದಿಡುತ್ತದೆ. ಆಯಾ ಪ್ರದೇಶದ, ಆಯಾ ಧರ್ಮದ, ಆಯಾ ಭಾಷೆಯ ಜನರು ತಮ್ಮ ಪರಿಸರಕ್ಕನುಗುಣವಾಗಿ ತಮ್ಮದೇ ಆದ ಸಂಸ್ಕೃತಿಯನ್ನು ರೂಪಿಸಿಕೊಂಡಿರುತ್ತಾರೆ. ಪ್ರತಿಯೊಂದು ಸಮುದಾಯವು ತನ್ನದೇ ಆದ ಆಚಾರ–ವಿಚಾರ, ಉಡುಪು ಮತ್ತು ಜೀವನ ಕ್ರಮಗಳಲ್ಲಿ ವಿಶಿಷ್ಟತೆಯನ್ನು ಮೆರೆಯುತ್ತವೆ. ಸಮುದಾಯದ ಹಿರಿಮೆ ಅಡಗಿರುವುದು ಅವರ ಸಂಸ್ಕೃತಿಯ ಹಿದೆ ಇರುವ ದೀರ್ಘಕಾಲದ ಸಂಸ್ಕಾರದ ಕಾರಣದಿಂದ. ಒಂದು ಪ್ರಾಂತ್ಯದೊಳಗೆ ಹಲವು ಸಂಸ್ಕೃತಿಗಳು ಹೊಂದಾಣಿಕೆಯಿಂದ, ಸಾಮರಸ್ಯದಿಂದ ಜೀವನ ನಡೆಸುತ್ತಾ ಬಂದಿರುವುದು ದೃಷ್ಟಿಗೋಚರ ಸಂಗತಿ. ಹೀಗಿದ್ದಾಗಿಯೂ ಪ್ರತಿಯೊಂದು ಸಮುದಾಯವು ತನ್ನ ಸಂಸ್ಕೃತಿಯಲ್ಲಿ ಪ್ರತ್ಯೇಕತೆಯನ್ನು ಕಾಪಾಡಿಕೊಂಡು ಅನನ್ಯತೆಯನ್ನು ಉಳಿಸಿಕೊಂಡಿರುತ್ತವೆ. ಒಂದೇ ಪ್ರಾದೇಶಿಕ ನೆಲೆಯೊಳಗಿನ ಸಂಸ್ಕೃತಿಗಳು ತಮ್ಮ ಸಾಂಸ್ಕೃತಿಕ ಅಂಶಗಳಲ್ಲಿ ಕೊಳುಕೊಡುಗೆಯನ್ನು ನಿರಂತರವಾಗಿ ಸಾಧ್ಯವಾಗಿಸುತ್ತಾ ಬರುತ್ತವೆ. ಪ್ರಧಾನ ಸಂಸ್ಕೃತಿಯಿಂದ ಅಥವಾ ಪ್ರದೇಶದ ಸಂಸ್ಕೃತಿಯಿಂದ ಕೆಲವು ಅಂಶಗಳನ್ನು ಸ್ವೀಕರಿಸಿ ಸಂಸ್ಕೃತಿಯೊಂದು ಶ್ರೀಮಂತಗೊಳ್ಳುತ್ತದೆ.

ದುಷ್ಟಶಕ್ತಿಯನ್ನು ಸಂಹರಿಸಿ ಶಿಷ್ಟರನ್ನು ರಕ್ಷಿಸಿದ ತಾಯಿ ಚಾಮುಂಡಿಯನ್ನು ಭಕ್ತಿಭಾವದೊಂದಿಗೆ ಆರಾಧಿಸುವುದರ ಮೂಲಕ ಪ್ರಾರಂಭಗೊಂಡು ನವರಾತ್ರಿ ಆಚರಣೆ ವಿವಿಧ

ವೈಶಿಷ್ಟ್ಯತೆಯಿಂದ ಆಚರಿಸಿದ ಅನಂತರ ಬರುವುದೇ ವಿಜಯದಶಮಿ. ವಿಜಯದಶಮಿಯ ಮೆರವಣಿಗೆ ಅರಮನೆಯಿಂದ ವಿಧಿ ವಿಧಾನ ಪೂಜೆಗಳಿಂದ ಪ್ರಾರಂಭವಾಗಿ ರಾಜಪಥದಲ್ಲಿ ಸಾಗಿ ಬನ್ನಿಮಂಟಪಕ್ಕೆ ತಲುಪಿ, ಬನ್ನಿಮರಕ್ಕೆ ಪೂಜೆ ಸಲ್ಲಿಸುವುದರೊಂದಿಗೆ ವೈಭವದ ಮೆರವಣಿಗೆ ಅಂತ್ಯಗೊಳ್ಳುತ್ತದೆ. ಅನಂತರ ಮನಸೂರೆಗೊಳ್ಳುವ ಪಂಜಿನ ಕವಾಯತಿನ ಪ್ರದರ್ಶನದಿಂದ ವಿದ್ಯುಕ್ತವಾಗಿ ದಸರಾ ಆಚರಣೆಗೆ ತೆರೆ ಬೀಳುತ್ತದೆ. ವಿಶ್ವವಿಖ್ಯಾತ ದಸರಾ ಜಂಬೂಸವಾರಿಯಿಂದ ಮೈಸೂರು ನಗರವನ್ನು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುವಂತಾಗಿದೆ.

ದೇವಾಲಯಗಳ ಸ್ಥಾಪನೆ ನಾಡಿನ ಸಾಂಸ್ಕೃತಿಕ ಬೆಳವಣಿಗೆಗೆ ಭದ್ರವಾದ ಬುನಾದಿಯನ್ನು ಒದಗಿಸುವುದಲ್ಲದೆ ಜನರ ನೈತಿಕ ಮಟ್ಟವನ್ನು ಹೆಚ್ಚಿಸಿ ಧಾರ್ಮಿಕ ಮನೋಭಾವವನ್ನು ಸಮೃದ್ಧಿಗೊಳಿಸುವಲ್ಲಿ ಸಹಕಾರಿಯಾಗಿದೆ. ಜನರ ಧಾರ್ಮಿಕ ಚಟುವಟಿಕೆಗಳನ್ನು ಅತ್ಯಂತ ಪ್ರಬಲವಾಗಿ ನಿರೂಪಿಸುವ ಮಾಧ್ಯಮವೆಂದರೆ ದೇವಾಲಯಗಳು. ಈ ದೇವಾಲಯಗಳು ಚರಿತ್ರೆಯ ವಿವಿಧ ಯುಗಗಳಲ್ಲಿ, ಕಾಲಗಳಲ್ಲಿ, ದೇಶದ ಬೇರೆ ಬೇರೆ ಭಾಗಗಳಲ್ಲಿ ಪ್ರಚಲಿತದಲ್ಲಿದ್ದ ಧರ್ಮದ ವಿವಿಧ ಛಾಯೆಗಳನ್ನು ಪ್ರತಿಬಿಂಬಿಸುತ್ತವೆ. ಜನರ ಅಭಿರುಚಿ ಧರ್ಮದಲ್ಲಿನ ಆಸ್ಥೆ, ಸಾಮಾಜಿಕ ಸಂಪ್ರದಾಯ, ಆಚರಣೆ, ನಂಬಿಕೆ ಇತ್ಯಾದಿ ಅನೇಕ ಸಮಕಾಲೀನ ವಿಷಯಗಳನ್ನು ತಿಳಿಸುವ ಆಗರ ಎನ್ನಬಹುದು.

ಮೈಸೂರು ಇತಿಹಾಸ ಪ್ರಸಿದ್ಧವಾದ ಸುಂದರ ನಗರ. ಅಷ್ಟೇ ಅಲ್ಲದೇ ಕಲೆ, ಸಾಹಿತ್ಯ, ಸಂಸ್ಕೃತಿಗಳ ಆಗರ. ಮೈಸೂರನ್ನು ಆಳಿದ ರಾಜ ಮಹಾರಾಜರು ಇವೆಲ್ಲವನ್ನು ಬೆಳೆಸಿದ ರೀತಿ ಅವಿಸ್ಮರಣೀಯ. ನೃತ್ಯ, ಸಂಗೀತ, ಸಾಹಿತ್ಯ, ಶಿಕ್ಷಣ, ಚಿತ್ರಕಲೆ, ಶಿಲ್ಪಕಲೆಗಳಿಗೆ ಪ್ರೋತ್ಸಾಹ ನೀಡುತ್ತ ಬಂದದ್ದು ಈ ಅರಸರ ಸಂಸ್ಕೃತಿ ಹಾಗೂ ಸಾಹಿತ್ಯ ಪ್ರಿಯತೆಗೆ ಸಾಕ್ಷಿ.

ಮೈಸೂರಿನ ಅಧಿದೇವತೆ ಚಾಮುಂಡೇಶ್ವರಿ, ಮೈಸೂರು ಅರಮನೆ, ವಿಶ್ವವಿಖ್ಯಾತ ದಸರ ಹಬ್ಬ, ಮೃಗಾಲಯ, ವಿಶಾಲವಾದ ಪ್ರದೇಶ, ಹಿತಕರವಾದ ಹವಾಗುಣ, ಆಕರ್ಷಕವಾದ ಉದ್ಯಾನವನಗಳು, ನಿದಾನಗತಿಯಲ್ಲಿ ಕಾಲಿಡುತ್ತಿರುವ ಮಾಹಿತಿ ಮತ್ತು ತಂತ್ರಜ್ಞಾನ, ಕೈಗಾರಿಕೆ ಇತ್ಯಾದಿ... ಮೈಸೂರನ್ನು ವಿಶ್ವದ ಭೂಪಟದಲ್ಲಿ ಎದ್ದು ಕಾಣುವಂತೆ ಮಾಡಿವೆ. ಮೈಸೂರನ್ನು ಪ್ರಸ್ತಾಪಿಸುವಾಗ ಕವಿವಾಣಿಯೊಂದು ನೆನಪಿಗೆ ಬರುತ್ತದೆ.

ಗಂಧದ ಗುಡಿ ಇದು ಮೈಸೂರು

ಚೆನ್ನದ ನಾಡಿದು ಮೈಸೂರು॥

ವೀಣೆಯ ಬೆಡಗಿದು ಮೈಸೂರು

ನಾಲ್ವಡಿ ಕೃಷ್ಣರ ಮೈಸೂರು॥

ಎಂಬ ಈ ಸಾಲುಗಳು ಮೈಸೂರಿನ ವಿಶೇಷತೆಯನ್ನು ಸಾರುತ್ತದೆ. ಮೈಸೂರಿಗೆ ಹರಿದು ಬರುವ ದೇಶ ವಿದೇಶಗಳ ಪ್ರವಾಸಿಗರ ದಂಡನ್ನು ಗಮನಿಸಿದರೆ ಸಾಕು ಅದರ ಭವ್ಯತೆ, ವಿಶೇಷತೆ, ಸೊಬಗು, ಸೌಂದರ್ಯ ಎಷ್ಟೆಂಬುದು ವೇದ್ಯವಾಗುತ್ತದೆ. ಕರ್ನಾಟಕದಲ್ಲಿ ಅಷ್ಟೇ ಏಕೆ ಇಡೀ ಭಾರತವನ್ನೇ ತೆಗೆದುಕೊಂಡರೂ ಮೈಸೂರಿಗೆ ವಿಶಿಷ್ಟವಾದ ಸ್ಥಾನವಿದೆ. ಅದಕ್ಕೆ ಹಲವು ಪ್ರಮುಖ ಕಾರಣಗಳೂ ಇದೆ.

ಮೈಸೂರು ನಗರ ಸಾಂಸ್ಕೃತಿಕ ನಗರ ಎಂದೇ ಪ್ರಸಿದ್ಧವಾಗಿದೆ. ಕಲೆ, ಸಾಹಿತ್ಯ, ಇತಿಹಾಸ, ಪರಿಸರ, ಶಿಕ್ಷಣ ಈ ಎಲ್ಲಾ ದೃಷ್ಟಿಗಳಿಂದಲೂ ಸಾಂಸ್ಕೃತಿಕ ನಗರ ಮೈಸೂರು ದೇಶ–ವಿದೇಶಿಯರ ಗಮನಸೆಳೆದಿದೆ. ವಿಶ್ವವಿಖ್ಯಾತ ಮೈಸೂರು ಅಂಬಾರಿ ಇಡೀ ಕರ್ನಾಟಕದ ಪ್ರಮುಖ ಆಕರ್ಷಣೆ. ಚಾಮುಂಡಿಬೆಟ್ಟ ಪ್ರಾಕೃತಿಕ ಸೌಂದರ್ಯವನ್ನು ಹೊಂದಿರುವುದೇ ಅಲ್ಲದೆ ಧಾರ್ಮಿಕ, ಭಾವನಾತ್ಮಕ ಸಂಬಂಧವನ್ನು ಬೆಸೆದಿದೆ. ಬೆಟ್ಟದ ಮೇಲಿನ ಸುಂದರವಾದ ನಂದಿಯ ಏಕಶಿಲಾವಿಗ್ರಹ ಎಂತಹವರನ್ನು ಬೆರಗುಗೊಳಿಸುತ್ತದೆ. ನವರಾತ್ರಿ ವೇಳೆ ಬೆಟ್ಟದ ಮೇಲೆ ನಿಂತು ಮೈಸೂರಿನ ಸೊಬಗನ್ನು ನೋಡುವುದೇ ಕಣ್ಣಿಗೆ ಹಬ್ಬ.

ಮೈಸೂರು ಮಲ್ಲಿಗೆ, ಮೈಸೂರಿನ ವಿಳ್ಯದೆಲೆ, ಮೈಸೂರು ಸಿಲ್ಕ್, ಮೈಸೂರುಪಾಕ್, ಮೈಸೂರು ಸ್ಯಾಂಡಲ್ ಸೋಪ್, ಮೈಸೂರು ಪೇಟ ಒಂದೇ ಎರಡೇ! ಎಲ್ಲವೂ ವಿಶೇಷವಾದವುಗಳೇ. ತಮ್ಮ ತಮ್ಮ ವಿಶೇಷತೆಯಿಂದ ಆಕರ್ಷಿಸುವಂತಹವು. ದೊಡ್ಡ ದೊಡ್ಡ ನಗರಗಳ ಗದ್ದಲದ ಬದುಕನ್ನ ಕಂಡಾಗ ಮೈಸೂರು ನೆಮ್ಮದಿಯ ಬೀಡು ಎಂದೆನಿಸುವುದು ಸಹಜ.

ಮೈಸೂರು ನಗರವನ್ನು ಜಾನಪದ ಸಂಪ್ರದಾಯಗಳ ತೌರು ಎಂದು ಕರೆಯಬಹುದು. ಈ ನಗರದ ಅನೇಕ ಭಾಗಗಳಲ್ಲಿ ಗ್ರಾಮೀಣ ಸಂಸ್ಕೃತಿ ತುಂಬಾ ದಟ್ಟವಾಗಿಯೇ ಕಂಡುಬರುತ್ತದೆ. ಪಡುವಾರಹಳ್ಳಿ, ಒಂಟಿಕೊಪ್ಪಲು, ಕನ್ನೇಗೌಡನ ಕೊಪ್ಪಲು, ಕುಂಬಾರಕೊಪ್ಪಲು, ಅಶೋಕಪುರಂ, ಗಾಂಧಿನಗರ, ಬೊಗಾದಿ, ಆಲನಹಳ್ಳಿ, ರಾಜೇಂದ್ರನಗರ ಮುಂತಾದ ಭಾಗಗಳ ಜನಜೀವನದಲ್ಲಿ ಜನಪದ ಸಂಪ್ರದಾಯ ಹಾಸುಹೊಕ್ಕಾಗಿದೆ.

ಮೈಸೂರನ್ನು ಒಂದು ದೊಡ್ಡ ಹಳ್ಳಿ ಎಂದು ಕರೆದಿರುವುದುಂಟು. ಅದನ್ನು ಸಮರ್ಥಿಸುವಂತೆ ಮೈಸೂರಿನ ಒಳಗೆ ಅಡಗಿಕೊಂಡಂತಿರುವ ಪಡುವಾರಹಳ್ಳಿ, ಕನ್ನೇಗೌಡನ

ಕೊಪ್ಪಲು, ತೊಣಚಿಕೊಪ್ಪಲು, ಕುಕ್ಕರಹಳ್ಳಿ ಮುಂತಾದವು ಪರಿವರ್ತನೆಯ ಹಾದಿಯನ್ನು ಹಿಡಿದಿದ್ದರು ಪೂರ್ಣ ಬದಲಾಗಿಲ್ಲ. ತಮ್ಮ ತಮ್ಮ ನೈಜ ಗುಣಗಳನ್ನು ಇಂದಿಗೂ ಸ್ವಲ್ಪ ಮಟ್ಟಿಗೆ ಉಳಿಸಿಕೊಂಡಿವೆ. ಗ್ರಾಮಾಂತರ ಪ್ರದೇಶಗಳಲ್ಲಿಯೂ ನಡೆಯದಷ್ಟು ವಿಜೃಂಭಣೆಯಿಂದ ಮೈಸೂರು ನಗರದ ಹಲವುಕಡೆಗಳಲ್ಲಿ ಮಾರಿಹಬ್ಬ ನಡೆಯುತ್ತದೆ. ಆಳಿದ ರಾಜರ ಮೇಲಿನ ಗೌರವ ಇಂದಿಗೂ ಕೆಲವರಲ್ಲಿ ಮಾಸಿದಂತೆ ತೋರುವುದಿಲ್ಲ. ಅವರ ಭಾವ ಚಿತ್ರಗಳು ಎಷ್ಟೋ ಮನೆಗಳ ಗೋಡೆಗಳ ಮೇಲೆ ರಾರಾಜಿಸುತ್ತಿವೆ. ನವರಾತ್ರಿಯ ಸಂದರ್ಭದಲ್ಲಿ ಇಂದಿಗೂ ಅವರಿಗೆ ಗೌರವಗಳು ಸಲ್ಲುತ್ತವೆ. ಹಿಂದಿನಂತೆ ವೈಭವ ಪೂರಿತವಾಗಿ ಅಲ್ಲದಿದ್ದರೂ ಆಚರಣೆಯಲ್ಲಿರುವ ಸರಸ್ವತಿ ಪೂಜೆ, ಆಯುಧ ಪೂಜೆ, ಬಣ್ಣ ಬಣ್ಣದ ನವರಾತ್ರಿ ಬೊಂಬೆ ಕೂರಿಸುವ ಸಂಪ್ರದಾಯ ಜೀವಂತವಾಗಿಯೇ ಉಳಿದು ಬಂದಿದೆ. ಅರಸರ ಆಳ್ವಿಕೆಯಲ್ಲಿದ್ದುದರಿಂದ ಮೈಸೂರು ಈಗಲೂ ಅದರ ಪ್ರಭಾವದಿಂದ ಪೂರ್ಣ ಮುಕ್ತಗೊಂಡಿಲ್ಲ.

ಮೈಸೂರು ದಸರಾ ತನ್ನ ವೈಭವವನ್ನು, ಜನಾಕರ್ಷಣೆಯನ್ನು ಇಂದಿಗೂ ಉಳಿಸಿಕೊಂಡೆ ಬಂದಿದೆ. ರಾಜರು ಅಂಬಾರಿಯನ್ನೇರಿ ಆನೆಯ ಮೇಲೆ ಮೆರವಣಿಗೆ ಹೊರಡುತ್ತಿದ್ದ ಪರಿಯೇ ಬೇರೆ. ಈಗ ಅದಕ್ಕೆ ಬದಲಾಗಿ ಶ್ರೀ ಚಾಮುಂಡೇಶ್ವರಿ ದೇವಿ ಅಂಬಾರಿಯ ಮೇಲೆ ಬರುವ ದೃಶ್ಯ ಮನಮೋಹಕವಾಗಿದ್ದು, ದಸರ ಹಬ್ಬ ತನ್ನ ಹಿಂದಿನ ವೈಭವವನ್ನು ಕಳೆದುಕೊಂಡಿಲ್ಲ. ಹಿಂದಿನಕಾಲದಲ್ಲಿ ಎತ್ತಿನಗಾಡಿ ಕಟ್ಟಿಕೊಂಡು ದೂರದ ಊರುಗಳಿಂದ ಬರುತ್ತಿದ್ದ ಜನ ಈಗ ಆಧುನಿಕ ವಾಹನಗಳಲ್ಲಿ ಅಷ್ಟು ಉತ್ಸುಕರಾಗಿ ಬರುವ ದೃಶ್ಯ ತುಂಬಾ ಸಾಮಾನ್ಯವಾಗಿದೆ. ಜಂಬೂಸವಾರಿಯ ದಿನ ನಡೆಯುವ ಮೆರವಣಿಗೆ ಗತಕಾಲದ ಸಾಂಸ್ಕೃತಿಕ ಹಾಗೂ ಐತಿಹಾಸಿಕ ಪರಂಪರೆಯನ್ನು ಬಿತ್ತರಿಸುತ್ತವೆ, ವೈಭವವನ್ನು ಪ್ರತಿಬಿಂಬಿಸುತ್ತವೆ. ಇವುಗಳನ್ನು ನೋಡಲು ಹೊರಗಿನಿಂದ ಬರುವವರ ಸಂಖ್ಯೆ ಈಗಲೂ ಕಡಿಮೆಯಾಗಿಲ್ಲ. ವಿದೇಶಿಯರೂ ಹೆಚ್ಚಿನ ಆಸಕ್ತಿಯಿಂದ ಇಲ್ಲಿನ ದಸರೆಗೆ ಆಗಮಿಸುತ್ತಾರೆ.

## ಮೈಸೂರು: ಅರ್ಥ ನಿಷ್ಪತ್ತಿ, ಸ್ಥಳಪುರಾಣ

ನಾವು ಪ್ರಸ್ತುತ ಮೈಸೂರು ಎಂದು ಕರೆಯುತ್ತಿರುವ ಸ್ಥಳದ ಹೆಸರು ನಮ್ಮ ದೇಶದ ಪುರಾಣೇತಿಹಾಸದ, ಸಾಹಿತ್ಯದ ಗ್ರಂಥಗಳಲ್ಲಿ ಮಾಹಿಷಿಕ, ಮಹಿಷಿಕ, ಮಾಹಿಷ್ಮತಿ, ಮಹಿಷಮಂಡಲ, ಮಹಿಷರಾಷ್ಟ್ರ, ಮಹಿಷ ವಿಷಯ ಮುಂತಾದ ಹೆಸರುಗಳಿಂದ ಪ್ರಸಿದ್ಧವಾಗಿತ್ತು ಎನ್ನುವ ಅಭಿಪ್ರಾಯವಿದೆ.

ದೊರೆತಿರುವ ಶಾಸನಗಳು ಮತ್ತು ಇತ್ತೀಚಿನ ಕಾಲದ ಸಾಹಿತ್ಯ ಗ್ರಂಥಗಳಲ್ಲಿ ಮೈಸುನಾಡು, ಮೈಸೆನಾಡು, ಮೈಸನಾಡು, ಮಯಿಸೂರು, ಮೈಸೂರು ಸ್ಥಳ, ಮಹಿಸೂರು ಇತ್ಯಾದಿ ಹೆಸರುಗಳಿಂದ ಪ್ರಸಿದ್ಧವಾಗಿರುವ ಸ್ಥಳವೆಂದರೆ ಮೈಸೂರು ಎನ್ನುವುದು ನಿರ್ವಿವಾದ ಸಂಗತಿಯಾಗಿದೆ. ಮೈಸೂರು ಎಂಬುದಾಗಿ ಕರೆಯುತ್ತಿರುವ ಇಂದಿನ ಸ್ಥಳದೊಂದಿಗೆ ಈ ಸ್ಥಳನಾಮಗಳ ಸಂಬಂಧವನ್ನು ಕುರಿತು ವಿದ್ವಾಂಸರಾದ ಜೆ.ಇ.ಫ್ಲೀಟ್, ಬಿ.ಎಲ್.ರೈಸ್, ಆರ್.ನರಸಿಂಹಚಾರ್, ಜಿ.ಎಸ್.ಗಾಯ್ ಮೊದಲಾದವರು ವಿಶೇಷವಾಗಿ ಚರ್ಚಿಸಿದ್ದಾರೆ.

ಪಾಳಿ ಭಾಷೆಯ ಧರ್ಮಗ್ರಂಥವಾದ ದೀಪವಂಶದಲ್ಲಿ (4ನೇಯ ಶತಮಾನದ ಅಂತ್ಯದಲ್ಲಿ ರಚಿತವಾಯಿತೆಂದು ತಿಳಿದಿರುವ ಸಿಂಹಳದ ಒಂದು ಅಜ್ಞಾತ ಕರ್ತೃರಚನೆ) ಮಹಿಷರಾಷ್ಟ್ರ ಎಂಬುದಾಗಿ ಕರೆಯಲ್ಪಡುವ ದೇಶಕ್ಕೆ ಮಹಾದೇವನೆಂಬ ಬೌದ್ಧ ಸನ್ಯಾಸಿಯನ್ನು ಮತ ಪ್ರಸಾರಕ್ಕಾಗಿ ಕಳುಹಿಸಲಾಗಿತ್ತೆಂದು ಹೇಳಿದೆ. ಹೀಗೆಯೇ ಮಹಾವಂಶದಲ್ಲಿ (5ನೇಯ ಶತಮಾನದ ಅಂತ್ಯದ ವೇಳೆಗೆ ಥೇರಾಮಹನಾಮ ಎಂಬುವನಿಂದ ರಚಿತವಾಯಿತೆಂದು ತಿಳಿದಿರುವ ಸಿಂಹಳದ ಒಂದು ಕಥಾನಕವಿದೆ). ಮೌರ್ಯಚಕ್ರವರ್ತಿ ಅಶೋಕನ ಕಾಲದಲ್ಲಿ ಮೊಗ್ಗಲಿಪುತ್ರ ತಿಸ್ಸನು ಬೌದ್ಧಮತ ಪ್ರಸಾರಕ್ಕಾಗಿ ಒಂದು ತಂಡವನ್ನು ಮಹಿಷಮಂಡಲಕ್ಕೆ ಕಳುಹಿಸಿದನೆಂದು ಹೇಳಿದೆ. ಬುದ್ಧಘೋಷ (ಕ್ರಿ.ಶ.409–431ರ ಅವದಿಯಲ್ಲಿ ಸಿಂಹಳವನ್ನು ಮಹಾನಾಮನೆಂಬ ದೊರೆ ಆಳುತ್ತಿದ್ದಾಗ ಅನುರಾಧಪುರಕ್ಕೆ ಬಂದವನು). ಸಮಂತಪಸಾದಿರದಲ್ಲಿ (ವಿನಯಪಿಟಕ್ಕೆ ಇರುವ ಒಂದು ವ್ಯಾಖ್ಯಾನ) ಈ ಪ್ರದೇಶವನ್ನು 'ಮಹಿಷ ಮಂಡಲವೆಂದು' ಕರೆದಿದೆ ಇದು ಬೌದ್ಧ ಗ್ರಂಥಗಳ ವಿಚಾರವಾಯಿತು.

ಸಂಸ್ಕೃತ ಮಹಾಭಾರತದಲ್ಲಿ ರಾಜಾಸುಯಾಗ ಮಾಡಲು ಸಂಕಲ್ಪಸಿದ್ಧ ಯುಧಿಷ್ಠಿರ ತನ್ನ ಸೋದರ ಸಹದೇವನನ್ನು ದಕ್ಷಿಣದ ಕಡೆ ವಿಜಯಕ್ಕೆ ಕಳುಹಿಸಿದ್ದು, ಅವನು ಗೆದ್ದ ಅರಸರಲ್ಲಿ ಮಹಿಷ್ಮತಿಯ ಅರಸನೂ ಒಬ್ಬ. ಅಲ್ಲಿಯೇ ಭೀಷ್ಮಪರ್ವದಲ್ಲಿ ದಕ್ಷಿಣ ಭಾರತ ಸ್ಥಳಗಳನ್ನು ಕುರಿತಾಗ ಉನ್ನತ್ಯಕದೊಂದಿಗೆ ಮಾಹಿಷಿಕವನ್ನು ಹೇಳಿದೆ (9–59). ಪುರಾಣದ ಗ್ರಂಥಗಳಲ್ಲಿ ಮಾರ್ಕಂಡೇಯ ಮತ್ತು ಮತ್ಸ್ಯಪುರಾಣಗಳಲ್ಲಿ 'ಮಾಹಿಷಿಕ' (54,47,114–46). ಬ್ರಹ್ಮಾಂಡ ಪುರಾಣದಲ್ಲಿ 'ಮಹಿಷಿಖ' (16–55). ಪದ್ಮಪುರಾಣದಲ್ಲಿ 'ಮಾಹಿಷಿಕ' (1–6–54). ಹೀಗೆ ವಿವಿಧ ರೂಪದಲ್ಲಿ ಮಹಿಷಪುರವಾದ ಹೆಸರು ದಕ್ಷಿಣ ಭಾರತದ ಪ್ರದೇಶಗಳನ್ನು ಹೆಸರಿಸುವಾಗ ಬಂದಿದೆ. ವಾಯುನಾಮ ಪುರಾಣಗಳಲ್ಲಿಯೂ ಈ ಹೆಸರನ್ನು ಕಾಣಬಹುದು.

'ಮಹಿಷಮಂಡಲ' ಎಂಬುದು ದಕ್ಷಿಣ ಭಾರತದ ಯಾವ ಪ್ರದೇಶವನ್ನು ಸೂಚಿಸುತ್ತದೆ ಎಂಬ ಮಾತು 1854ರವರೆಗೆ ತಿಳಿದಿರಲಿಲ್ಲ. 1840ರಲ್ಲಿ ಎಚ್.ವಿಲ್ಸನ್ ಅವರು ವಿಷ್ಣು ಪುರಾಣವನ್ನು ಸಂಪಾದಿಸುವಾಗ ಮಹಾಭಾರತದ ಮಾಹಿಷಕರು ಈಗಿನ ಮೈಸೂರಿನ ಜನ ಎಂದು ಮಾತ್ರ ತಿಳಿಸಿದ್ದರು. ಪಾಳಿ ಧರ್ಮಗ್ರಂಥಗಳ ಮಹಿಷಮಂಡಲ ಆಧುನಿಕ ಮೈಸೂರನ್ನು ಸೂಚಿಸುತ್ತದೆಂದು 'ಇಂಪಿರಿಯಲ್ ಗೆಜೆಟಿಯರ್'ನಲ್ಲಿಯೂ (1908) ಆಧುನಿಕ ಮೈಸೂರನ್ನು ಬಳಸಿದ ಸುತ್ತಣ ಪ್ರದೇಶಗಳನ್ನು ಸೂಚಿಸುತ್ತದೆಂದು ಬಿ.ಎಲ್.ರೈಸ್ ತಮ್ಮ ಮೈಸೂರು(1897), ಮತ್ತು ಶಾಸನಾಧಾರಗಳಿಂದ ತಿಳಿಯುವಂತೆ ಮೈಸೂರು ಮತ್ತು ಕೊಡಗಿನ ಇತಿಹಾಸ(1909) ಎಂಬ ಆಂಗ್ಲ ಗ್ರಂಥದಲ್ಲಿ ನಿರೂಪಿಸಿದರು.

ಜೆ.ಎಫ್.ಫ್ಲೀಟ್ ರವರು ಮಹಿಷಮಂಡಲ ಮತ್ತು ಮಾಹಿಷ್ಮತಿ ಎಂಬ ತಮ್ಮ ಲೇಖನದಲ್ಲಿ ಮಹಾಭಾರತದ ಮಾಹಿಷ್ಮತಿ ಮಹಿಷಮಂಡಲದ ರಾಜಧಾನಿಯಾಗಿದ್ದ ಸ್ಥಳವೆಂದೂ, ಈ ಪ್ರದೇಶ ಇಂದಿನ ಮೈಸೂರಿಗೆ ಸಂಬಂಧಿಸಿದ್ದಲ್ಲ, ಮಧ್ಯಪ್ರದೇಶದ ನೆಮಾಡ್ ಜಿಲ್ಲೆಯ ಮಾಂಧಾತವೆಂಬುದೆಂದು ಸೂಚಿಸಿದರು. ಫ್ಲೀಟ್ ಅವರ ಈ ಅಭಿಪ್ರಾಯವನ್ನು ರೈಸ್ ಅವರು ಒಪ್ಪದೆ ಇಂದಿನ ಮೈಸೂರಿಗೆ ದಕ್ಷಿಣದ ಸೀಮೆಯೇ 'ಮಹಿಷಮಂಡಲ'ವೆಂದೂ ಮೈಸೂರು ಮುಖ್ಯನಗರವಾಗಿದ್ದು ಮೈಸೂರು ರಾಜ್ಯವೇ ಆ ಪ್ರದೇಶವೆಂದು ಮತ್ತೆ ವಾದಿಸಿ ಕ್ರಿ.ಪೂ. ಎರಡನೆಯ ಶತಮಾನದ ತಮಿಳು ಸಾಹಿತ್ಯ ಗ್ರಂಥವಾದ ಆಗನಾನೂರುವಿನಲ್ಲಿ ಬಂದಿರುವ ಎರಮೈನಾಡು, ಎರಮೈಯೂರನ (ಎಮ್ಮೆಗಳ ನಾಡು, ಎಮ್ಮೆಗಳ ಊರವನು) ಎಂಬ ಶಬ್ದಗಳು ಪರ್ಯಾಯ ಶಬ್ದಗಳೆಂದೂ ಗ್ರಹಿಸಿದ್ದಾರೆ.

ಕೆಲವರು ಪಾಣಿನಿಯ ವ್ಯಾಖ್ಯಾನಕಾರನಾದ ಕತ್ಯಾಯನ(ಕ್ರಿ.ಪೂ.4000)ಹೇಳುವ ಮಾಹಿಷ್ಮತ್ ಎಂಬುದು ಮೈಸೂರು ದೇಶವನ್ನು ಕುರಿತಿರಬಹುದು. ಏಕೆಂದರೆ ಆ ಹೆಸರು ಬರಲು ಅದು ಮಹಿಷಗಳು ತುಂಬಿರುವ ನಾಡು ಎಂಬುದೆ ಕಾರಣ ಎಂದು ಆತ ಹೇಳಿದ್ದಾನೆ ಎಂಬುದಾಗಿ ಭಾವಿಸಿದ್ದಾರೆ. ಇದು ಫ್ಲೀಟ್ ಅವರು ಹೇಳುವ ನರ್ಮದೆಯ ದ್ವೀಪದ ಮೇಲೆ ಇರುವಂತಹ ಮಾಂಧಾತವೇ ಇದ್ದರೂ ಇರಬಹುದೇ ಎಂಬುದು ನಿಶ್ಚಯವಿಲ್ಲ.

ವಿಜಯನಗರ ಕಾಲದಲ್ಲಿ ಮತ್ತು ಈಚೆಗೆ ಮಯ್ಸೂರು/ ಮೈಸೂರು ಎಂಬ ಮಾತು ಮಹಿಶೂರು, ಮಹೀಶೂರು, ಮಾಹಿಶೂರು ಮುಂತಾದ ಹಕಾರ ಘಟಿತ ರೂಪಗಳಲ್ಲಿ ಕಾಣತೊಡಗಿದಂತೆ ಕಾಣುತ್ತದೆ. ಅಲ್ಲದೆ ಪುರ, ನಗರ, ರಾಜ್ಯ, ಸಂಸ್ಥಾನ, ಮಹಾಸಂಸ್ಥಾನ ಮೊದಲಾದ ಮಹತ್ವದ್ಯೋತಕವಾದ ಮಾತುಗಳಲ್ಲಿಯೂ ಕಾಣಿಸಿಕೊಂಡಿದೆ.

ವಿಜಯನಗರ ಕಾಲದಲ್ಲಿ ಮಲ್ಲಿಕಾರ್ಜುನ ಎಂಬುವವನ (1446–87) ಮಗ ಪರ್ವತಯ್ಯನೆಂಬುವನು 1448ರಲ್ಲಿ ಹಾಕಿಸಿದ ಶಾಸನವೊಂದರಲ್ಲಿ 'ಮಹಿಸೂರ ದೇವರ ಸನ್ನಿದಾನ' ಎಂದು ಬರೆದಿರುವುದು ಆರಂಭದ ಉಲ್ಲೇಖಗಳಲ್ಲಿ ಒಂದಾಗಿದೆ. ಈಚಿನ ಕಾಲದ ದೇವಚಂದ್ರನ (1770–1841) ರಾಜಾವಳಿ ಕಥಾಸಾಗರದಲ್ಲಿ 'ಮಹಿಸೂರು' ಎಂಬ ಮಾತು ಹೆಚ್ಚು ಪ್ರಸಿದ್ಧವಾಗಿ ಬಳಕೆಯಾಗಿದೆ.

ಮಯ್ಸೂರು, ಮೈಸೂರು ಎಂಬ ಮಾತುಗಳೇ ಉಚ್ಚಾರ ವೈಚಿತ್ರ್ಯದಿಂದಲೋ, ವಿಶ್ವವಿಜಯ ಲೋಕನಾಯಕ ಆದ ಊರು ಎಂಬ ಅರ್ಥ ಕೊಡುವಂತಹ ಪಂಡಿತ ಪದ ವ್ಯುತ್ಪತ್ತಿಯ ಪರಿಣಾಮದಿಂದಲೋ, ಹಕಾರ ಘಟಿತ ರೂಪಗಳು ಆರಂಭಗೊಂಡು ಮುಂದೆ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿರುವ ಸಾಧ್ಯವಿದೆ. ಹೀಗಾಗಿ ಮೈಸೂರು ಮಹಿಷಪುರಗಳ ಜೊತೆ ಜೊತೆಗೆ ಮಹಿಶೂರಪುರ/ ಮಹೀಶೂರಪುರ ಎಂಬ ಮಾತುಗಳು ಶಾಸನಗಳಲ್ಲಿಯೂ ಸಾಹಿತ್ಯ ಕೃತಿಗಳಲ್ಲಿಯೂ ಉತ್ತರೋತ್ತರ ಕಾಲದ ಪ್ರಯೋಗಗಳಲ್ಲಿ ಸ್ಥಾನ ಪಡೆಯುವಂತಾಯಿತು.

ಫ್ಲೀಟ್ ಅವರು ಉಂಟು ಎಂದು ಭಾವಿಸುವಂತೆ ಮಾಹಿಷ್ಮತಿಗೂ ಮೈಸೂರಿಗೂ ಸಂಬಂಧವನ್ನು ಕಲ್ಪಿಸುವುದಕ್ಕೆ ಆಧಾರಗಳು ಒಪ್ಪುವಂತಹದಲ್ಲ. ಮಹಿಷಮಂಡಲ ಎಂಬುದು ಈಚೆಗೆ ಒಡೆಯರ ಕಾಲದಲ್ಲಿ ಈ ಪ್ರದೇಶಕ್ಕೆ ನಿರ್ದಿಷ್ಟವಾಗಿ ಬಳಕೆಯಾಗಿದ್ದು, ಅದಕ್ಕೆ ಮೈಸುನಾಡು/ ಮೈಸನಾಡು ಎಂಬ ಪದಗಳಲ್ಲಿಯ 'ಮೈಸ' ಶಬ್ಧವು 'ಮಹಿಷ' ಶಬ್ಧದ ತದ್ಭವವಾಗಿರುವುದೇ ಕಾರಣವಾಗಿರಬಹುದು. ಮಹಿಷ>ಮೈಸಿ (ಶಬ್ಧಮಣಿದರ್ಪಣ, ಸೂ.289) ಆಗಬಹುದಾದರೆ, ಮಹಿಷ>ಮೈಸ ಎಂದಾಗಬಹುದು. ಮೈಸ+ಊರ್+ನಾಡು=ಮೈಸೂರ ನಾಡು ಆಗಿ ಬರವಣಿಗೆಯಲ್ಲಿ ತಪ್ಪುಗಳು ಹೊಕ್ಕಿ ಮೈಸನಾಡು/ ಮೈಸುನಾಡು ಎಂದು ಕಾಣಿಸಿಕೊಂಡಿರಬಹುದು.

ಈ ವಿಷಯವನ್ನು ಸಿ.ಹಯವದನರಾವ್ ರವರು ಸಮರ್ಥಿಸುತ್ತ ಮೈಸೂರು ಜಿಲ್ಲೆ ಈಗಲೂ ಆನೆ, ಹುಲಿ ಮೊದಲಾದ ಕಾಡು ಪ್ರಾಣಿಗಳ ಜೊತೆಗೆ ಎಮ್ಮೆಗಳಿಂದ, ಕಾಡು ಕೋಣಗಳಿಂದ ವಿಶೇಷವಾಗಿ ದಟ್ಟೈಸಿರುವುದೆಂದು ಅಭಿಪ್ರಾಯ ಪಟ್ಟಿದ್ದಾರೆ. ದೇವಿ ಚಾಮುಂಡಿಯು ಮಹಿಷಾಸುರನನ್ನು (ಕೋಣದ ತಲೆಯ ದಾನವನನ್ನು) ನೀಗಿಸಿದ ಕಥೆ ಅನಂತರ ಅದಕ್ಕೆ ಪುರಾಣದ ಸಂಬಂಧವನ್ನು ಕಲ್ಪಿಸುವ ಪ್ರಯತ್ನದ ಫಲ ಎಂದಿದ್ದಾರೆ.

ಮೈಸೂರು ರಾಜ್ಯ, ಮೈಸೂರು ನಗರ 10ನೆಯ ಶತಮಾನದ ಆರಂಭದಿಂದಲೇ ಇತಿಹಾಸದಲ್ಲಿ ಕಂಡುಬಂದರೂ ಅದು ಒಡೆಯರ ಕಾಲದ ರಾಜ್ಯ ರಾಜಧಾನಿಯಾಗಿ ಪ್ರಶಸ್ತಿಗೆ ಪಾತ್ರವಾದದ್ದು. ಅನಂತರ ಕಾಲದಲ್ಲಿ ಆಗ ಪಂಡಿತ ವ್ಯುತ್ಪತ್ತಿಯ 'ಮಹೀಶೂರಪುರ'ವು (ಜಗತ್ಪ್ರಸಿದ್ಧವಾದ ಶೂರರ ಪಟ್ಟಣ) ಮೈಸೂರು ಮಹಿಷಪುರಗಳ ಜೊತೆ ಜೊತೆಗೆ ಕಾಣಿಸಿಕೊಂಡು ನಮ್ಮ ಗಮನಕ್ಕೆ ಬರುತ್ತದೆ.

## ಸ್ಥಳಪುರಾಣ

ಮೈಸೂರಿನ ಸ್ಥಳದ ಮಹತ್ವ ತಿಳಿಯಲು ಪುರಾಣ ಕಾಲದ ಮುಸುಕಿನೊಳಗೆ ಇಣುಕಿದರೆ ಶೌರ್ಯ, ಸಾಹಸ, ಪ್ರೀತಿ ಪ್ರಣಯಗಳ ದರ್ಶನ, ತ್ರೇತಾಯುಗದ ಹಿಮತೆರೆಯನ್ನು ಸರಿಸಿದರೆ ಮರ್ಯಾದಾ ಪುರುಷೋತ್ತಮ ಶ್ರೀರಾಮಚಂದ್ರ ಮೈಸೂರು ಪ್ರಾಂತ್ಯದ ಹಲವಾರು ಕ್ಷೇತ್ರಗಳಲ್ಲಿ ಸಂಚರಿಸಿ ತನ್ನ ದಿವ್ಯಸ್ಪರ್ಶದಿಂದ ಪಾವನಗೊಳಿಸಿದ್ದಾನೆಂದು ಜನರ ನಂಬಿದ್ದಾರೆ.

ಮೈಸೂರು ಜಿಲ್ಲೆಯ ಚುಂಚನಕಟ್ಟೆಯ ಬಂಡೆಗಳ ಸಂಧಿಯಲ್ಲಿ ಹರಿಯುವ ಕಾವೇರಿಯ ನೊರೆನೊರೆ ನೀರಿನಲ್ಲಿ ಸೀತಾಮಾತೆ ಸ್ನಾನ ಮಾಡಿದ್ದಕ್ಕೆ ಎಣ್ಣೆನೀರು ಸಾಕ್ಷಿ ಎನ್ನುವ ಜನರಿಗೆ ಚಿತ್ರದುರ್ಗ ಜಿಲ್ಲೆ ಜಟಿಂಗ ರಾಮೇಶ್ವರ ಬೆಟ್ಟ ಜಟಾಯುವಿನ ಶೌರ್ಯಕ್ಕೆ ಸಾಕ್ಷಿಯಾಗಿದೆ. ಸೀತಾಮಾತೆಯನ್ನು ಅಪಹರಿಸಿಕೊಂಡು ರಾವಣ ಲಂಕೆಗೆ ಹೋಗುವ ಮಾರ್ಗದಲ್ಲಿ ಈ ಬೆಟ್ಟದ ಬಳಿ ಬಂದಾಗ ವೃದ್ಧ ಜಟಾಯು ರಾವಣನೊಡನೆ ಸೆಣಸಿ ಮಾರಣಾಂತಿಕವಾಗಿ ಗಾಯಗೊಂಡು ರಾಮನ ನಿರೀಕ್ಷೆಯಲ್ಲಿ ಕಾದು ಬಿದ್ದಿದ್ದ ಸ್ಥಳ ಈ ಬೆಟ್ಟ.

ಮೈಸೂರಿನ ಅರಸರ ವಿಚಾರಕ್ಕೆ ಬಂದರೆ ಯದುರಾಯ ಮತ್ತು ಕೃಷ್ಣರಾಯರು ದ್ವಾರಕೆಯ ಮೂಲದವರು, ಶ್ರೀಕೃಷ್ಣ ಜನಿಸಿದ ಯದುವಂಶದಲ್ಲಿ ಜನಿಸಿದವರು. ಮೈಸೂರಿಗೆ ಬಂದು ನೆಲೆಸುವಂತೆ ದೈವಿಕವಾದ ಸ್ವಪ್ನಗಳ ಪ್ರಕಾರ ನಡೆದ ಘಟನೆಗಳ ಕಾರಣದಿಂದ ಎನ್ನುವ ಸಂಗತಿಗಳು ಸ್ವಾಭಾವಿಕವಾಗಿಯೇ ಐತಿಹ್ಯ ಮೂಲವಾಗಿ ಹುಟ್ಟಿ ಬೆಳೆದಿವೆ ಎನ್ನಬಹುದು. ಇದು ಪ್ರಚಲಿತವಾದದ್ದು 17 ರಿಂದ 19ನೇ ಶತಮಾನಗಳ ನಡುವೆ. ಆದರೆ ಈ ಐತಿಹ್ಯಗಳನ್ನು ಇತಿಹಾಸಕಾರರು ವಿಮರ್ಶಿಸಿ ನೋಡಿದ್ದಾರೆ. 1399 ಎನ್ನುವುದನ್ನು ದೃಢಪಡಿಸುವ ಆಧಾರಗಳು ಸುಮಾರು 1550ರ ಪೂರ್ವದ ಯಾವುದೇ ಶಾಸನಗಳಲ್ಲಿಯಾಗಲೀ ಇತರ ಆಕರಗಳಲ್ಲಿಯಾಗಲಿ ಸಿಗುವುದಿಲ್ಲ. ದೇವಚಂದ್ರನ ರಾಜಾವಳಿ ಕಥೆಯಲ್ಲಿ ಆಳ್ವಿಕೆಯ ಆರಂಭದ ವಿವರಗಳು ಇತರ ಆಕರಗಳಲ್ಲಿ ಹೇಳಿರುವುದಕ್ಕಿಂತ ಭಿನ್ನವಾಗಿದೆ. ಹೊಯ್ಸಳವಂಶ ಮತ್ತು ಜೈನ ಧರ್ಮದೊಂದಿಗೆ

ಸಂಬಂಧವನ್ನು ಜೋಡಿಸುವ ಪ್ರಯತ್ನ ಇಲ್ಲಿ ನಡೆದಿದೆ. ಆದರೆ ಇದನ್ನು ದೃಢಪಡಿಸುವ ಆಧಾರಗಳೇನೂ ಕಾಣುತ್ತಿಲ್ಲ. ಇದ್ದುದರಲ್ಲಿ ಮೈಸೂರು ನಗರದ ಪೂರ್ವೋತ್ತರ ಎಂಬ ಐತಿಹಾಸಿಕ ಆಕರದ ಭಾಷೆ ಮತ್ತು ವಿವರಗಳನ್ನು ನೋಡಿದರೆ ಸ್ವಲ್ಪ ನಿಜಾಂಶವಿರುವುದು ಸಂಭವನೀಯ ಎನಿಸುತ್ತದೆ. ವಿಜಯ ಮತ್ತು ಕೃಷ್ಣ ಎಂಬ ರಾಜಕುಮಾರರು ತಮ್ಮ ಸಂಚಾರದಲ್ಲಿ ಹಡದಣ ಎಂಬ ಸ್ಥಳಕ್ಕೆ ಬಂದರೆಂದು ಹೇಳುವುದು ಗಮನಾರ್ಹ. (ಕೆಲವರು ಭಾವಿಸುವಂತೆ ನಂಜನಗೂಡು ತಾಲೂಕಿನ ಹದಿನಾರು ಅಲ್ಲ) ಈ ಗ್ರಂಥದ ನಿರೂಪಣೆ ಶ್ರೀ ವೈಷ್ಣವ ಸಂಪ್ರದಾಯದ ಕಥನಕ್ಕೆ ಅನುಸಾರವಾದುದು.

ಮಹಾಬಲಾದ್ರಿ ಮಹಾಬುದ ತೀರ್ಥವೆಂದು ಪ್ರಸಿದ್ಧವಾದ ಶೈವ ದೇವಾಲಯದ ಕ್ಷೇತ್ರವಾಗಿದ್ದು, ಅನಂತರದಲ್ಲಿ ಚಾಮುಂಡೇಶ್ವರಿ ದೇವಿಯ ಸನ್ನಿಧಿಯಿಂದ ಚಾಮುಂಡಿ ಬೆಟ್ಟವಾದದ್ದು ತಿಳಿದ ವಿಷಯ. ಚಾಮುಂಡೇಶ್ವರಿಯ ಕಥೆ ದೇವಿ ಭಾಗವತ, ಶಿವಪುರಾಣ ಮೊದಲಾದ ಮೂಲಗಳಲ್ಲಿ ವರ್ಣಿತವಾಗಿದೆ. ಆದರೆ ದೇವಚಂದ್ರನು ರಾಜಾವಳಿ ಕಥಾಸಾರದಲ್ಲಿ ದೇವರಾಜನೆಂಬುವನು ಮೈಸೂರಿಗೆ ಸಲ್ಲುವ ಕೆಲವು ಗ್ರಾಮಗಳನ್ನು ಸ್ವಾಧೀನ ಪಡಿಸಿಕೊಂಡು ಬೆಟ್ಟದಲ್ಲಿ ಈ ಮೊದಲು ತಮ್ಮ ವಂಶದ ಬಲ್ಲಾಳರಿಗೆ (ಹೊಯ್ಸಳ ರಾಜರಿಗೆ) ಪ್ರಸನ್ನಳಾದ ಪದ್ಮಾವತಿದೇವಿಯನ್ನು, ವಾಸಂತಿಕದೇವಿಯೆಂದು ಪೂಜೆಗೊಳ್ಳುತ್ತಿದ್ದವಳನ್ನು ಚಾಮುಂಡೇಶ್ವರಿ ಎಂದು ಹೆಸರು ಕೊಟ್ಟು ಗುಡಿಗೋಪುರ ಮಾಡಿಸಿದನೆಂದು ಹೇಳಿದ್ದಾನೆ. ಮೈಸೂರಿನ ಕೋಟೆಯನ್ನು ಅವನೇ ಕಟ್ಟಿಸಿದನೆಂದು ಹೇಳಿದ್ದಾನೆ. ಅಲ್ಲದೆ ಅವನ ಸೋದರ ಶಾಂತರಾಜನು ಕಾರುಗಹಳ್ಳಿಯಲ್ಲಿ ಇರುತ್ತಿದ್ದವನು ಮಹಾಬಲೇಶ್ವರ ಗುಡಿ ನಿರ್ಮಿಸಿ ಚಾಮುಂಡೇಶ್ವರಿಯನ್ನು ಸ್ಥಾಪಿಸಿದನೆಂದು ಹೇಳಿರುವುದು ಪುನರುಕ್ತಿಯಾಗಿ ತೋರಿ ಗೊಂದಲವುಂಟು ಮಾಡುವಂತಿದೆ.

## ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಮೈಸೂರು ಇತಿಹಾಸ ಪ್ರಸಿದ್ಧವಾದ ಕರ್ನಾಟಕ ರಾಜ್ಯದ ಹೆಮ್ಮೆಯ ನಗರ. ಇದು ದೊಡ್ಡ ದೊಡ್ಡ ರಸ್ತೆ, ಉತ್ತಮ ಸೌಧಗಳು, ವಿದ್ಯಾಕೇಂದ್ರಗಳು, ಗೋಪುರ, ಅರಮನೆ, ದೇವಾಲಯ, ಮಠ, ಮಸೀದಿ, ಚರ್ಚ್, ಬಸದಿಗಳಿಂದಲೂ ಶೋಭಾಯಮಾನವಾಗಿದೆ. ಇಲ್ಲಿ ಎಲ್ಲಾ ಧರ್ಮಗಳ ಜನರ ಭಜನೆ, ಪೂಜೆ, ನಮಾಜ್, ಪ್ರಾರ್ಥನೆ, ಇತರೇ ದೈವಭಕ್ತಿಯ ಕಾರ್ಯಗಳು ಶಾಂತಿಯುತವಾಗಿ ಇಂದಿಗೂ ನಡೆಯತ್ತಿವೆ ಹೀಗೆ ಮೈಸೂರು ನಗರ ಸರ್ವಧರ್ಮ ಸೌಹಾರ್ದ ಹಾಗೂ ಸಹೋದರ ಭಾವನೆಗೆ ಇದು ಸಾಕ್ಷೀಭೂತವಾಗಿದೆ.

ಮೈಸೂರು ನಗರವು ಸುಮಾರು 11ನೇ ಶತಮಾನದಲ್ಲಿ ನಿರ್ಮಾಣವಾಗಿ ತನ್ನದೇ ಆದ ವಿಶಿಷ್ಟತೆಗಳಿಂದ ಜಗತ್ತಿನಾದ್ಯಾಂತ ಕೀರ್ತಿಯನ್ನು ಪಡೆದುಕೊಂಡಿದೆ. ರಾಜ ಮಹಾರಾಜರ ಆಡಳಿತದಿಂದ ಹಾಗೂ ವೈವಿಧ್ಯಮಯ ಸುಂದರ ತಾಣಗಳಿಂದ ಕೂಡಿದ್ದು ತನ್ನದೇ ಆದ ಪಾರಂಪರಿಕತೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿರುವುದರಿಂದ ಮೈಸೂರು ನಗರವನ್ನು ಪಾರಂಪರಿಕ ನಗರ ಎಂಬುದಾಗಿ ಗುರುತಿಸಲಾಗಿದೆ.

ಹೀಗೆ ಪಾರಂಪರಿಕ ನಗರ ಎಂದು ಬಿಂಬಿಸಿಕೊಳ್ಳಲು ಹಲವಾರು ಅಂಶಗಳು ಕಾರಣವಾಗಿವೆ. ಮೈಸೂರು ನಗರದಲ್ಲಿ ಪಾರಂಪರಿಕವಾಗಿ ಬೆಳೆದು ಧಾರ್ಮಿಕವಾಗಿ ರೂಪುಗೊಂಡ ನಂಬಿಕೆ, ಆಚರಣೆಗಳು, ಹಬ್ಬ–ಹರಿದಿನಗಳು, ಜಾತ್ರೆ–ಉತ್ಸವಗಳು, ಪೂಜೆ–ಪುನಸ್ಕಾರಗಳಿಂದ ಒಳಗೊಂಡಿರುವ ದೇವಾಲಯಗಳೂ ಕೂಡ ಪಾರಂಪರಿಕತೆಗೆ ಸಾಕ್ಷಿಯಾಗಿ ಮೈಸೂರು ನಗರದ ಪಾರಂಪರಿಕ ದೇವಾಲಯಗಳು ಎಂದು ಕರೆಸಿಕೊಂಡಿವೆ.

'ಮೈಸೂರು ನಗರದ ಪಾರಂಪರಿಕ ದೇವಾಲಯಗಳ ಜಾನಪದೀಯ ಅಧ್ಯಯನ' ಮೈಸೂರು ನಗರ ಪಾರಂಪರಿಕತೆಗೆ ಹೆಸರುವಾಸಿಯಾಗಿದ್ದು, ಹಲವಾರು ಪಾರಂಪರಿಕ ದೇವಾಲಯಗಳನ್ನು ಒಳಗೊಂಡಿದೆ ಉದಾಹರಣೆಗೆ: ಚಾಮುಂಡೇಶ್ವರಿ ದೇವಾಲಯ ಚಾಮುಂಡಿಬೆಟ್ಟ, ಉತ್ತನಹಳ್ಳಿ ಮಾರಮ್ಮನ ದೇವಾಲಯ, ಅರಮನೆಯ ಒಳಗೆ ಹಾಗೂ ಅರಮನೆಯ ಕೋಟೆಗೆ ಅಂಟಿಕೊಂಡಂತೆ ಇರುವ ಹೊರಗಿನ ದೇವಾಲಯಗಳು (ಸುಮಾರು 12 ದೇವಾಲಯಗಳು), ಒಂಟಿಕೊಪ್ಪಲಿನ ಶ್ರೀ ವೆಂಕಟೇಶ್ವರ, ಬೋಗಾದಿಯ ಭೋಗೇಶ್ವರ, ಬಿಸಿಲು ಮಾರಮ್ಮ, ಮೈಸೂರು ಕರಗ, ಹೀಗೆ ಪ್ರತಿಯೊಂದು ಬಡಾವಣೆಗಳಲ್ಲಿಯೂ ಒಂದಲ್ಲಾ ಒಂದು ದೇವಾಲಯ ಪ್ರಸಿದ್ಧಿಯಾಗಿದೆ.

ಇದುವರೆಗೂ ಮೈಸೂರು ನಗರದಲ್ಲಿರುವ ಪಾರಂಪರಿಕ ದೇವಾಲಯಗಳಲ್ಲಿ ಕೇವಲ ಬೆರಳೆಣಿಕೆಯ ಹಾಗೂ ಬಹಳ ಪ್ರಸಿದ್ಧವಾದ ದೇವಾಲಯಗಳಿಗೆ ಸಂಬಂಧಿಸಿದಂತೆ ಅಧ್ಯಯನಗಳು ನಡೆದಿದ್ದು, ಆ ಅಧ್ಯಯನಗಳು ಜಾನಪದೀಯ ಅಂಶಗಳತ್ತ ಹೆಚ್ಚು ಬೆಳಕನ್ನು ಚೆಲ್ಲಿರುವುದಿಲ್ಲ. ಆದುದರಿಂದಾಗಿ ನಾನು 'ಮೈಸೂರು ನಗರದ ಪಾರಂಪರಿಕ ದೇವಾಲಯಗಳ ಜಾನಪದೀಯ ಅಧ್ಯಯನ' ಎಂಬ ವಿಷಯವನ್ನು ಆಯ್ದುಕೊಂಡು ದೇವಾಲಯಗಳನ್ನು ಜಾನಪದೀಯ ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸುತ್ತಿದ್ದೇನೆ.

ಇಂದು ಜನಸಾಮಾನ್ಯರು ಜಾನಪದೀಯತೆಯಿಂದ ಆಧುನೀಕತೆಯೆಡೆಗೆ, ಆಧುನೀಕತೆಯಿಂದ ಮರಳಿ ಜಾನಪದೀಯತೆಯೆಡೆಗೆ ವಾಲುತ್ತಿದ್ದಾರೆ. ಆದರೂ ಜಗತ್ತಿನಾದ್ಯಂತ ಆಧುನೀಕತೆಯ ಸ್ಪರ್ಶದೊಂದಿಗೆ ವೈಜ್ಞಾನಿಕವಾಗಿ ಎಷ್ಟೆಲ್ಲ ಮುಂದುವರೆದಿದ್ದರೂ ಸಹಾ ಪರಂಪರಾನುಗತವಾಗಿ ಉಳಿಸಿಕೊಂಡು ಬಂದಿರುವ ಜಾನಪದೀಯತೆಯನ್ನು ಕೈಬಿಡಲು ಸಾಧ್ಯವಾಗದೆ ಇರುವುದನ್ನು ಗಮನಿಸಿದರೆ ಪರಂಪರೆ ಹಾಗೂ ಜಾನಪದೀಯತೆಯ ಮಹತ್ವ ಅರಿಯಬಹುದಾಗಿದೆ.

ಆದುದರಿಂದಾಗಿ ಪಾರಂಪರಿಕ ದೇವಾಲಯಗಳಲ್ಲಿನ ಜಾನಪದೀಯ ಅಧ್ಯಯನವು ಬಹಳ ಅವಶ್ಯಕವಾದುದಾಗಿದ್ದು ಈ ಅಧ್ಯಯನದಲ್ಲಿ ಜಾನಪದೀಯ ಅಂಶಗಳನ್ನು ಜಾನಪದೀಯತೆ ಹಾಗೂ ಆಧುನೀಕತೆಯೊಂದಿಗಿನ ಸವಾಲು ಹಾಗೂ ಜವಾಬುಗಳು, ಸಮಸ್ಯೆಗಳು, ಪರಿಹಾರಗಳು, ನಶಿಸುವಿಕೆಗೆ ಕಾರಣಗಳು, ಬದಲಾಗುತ್ತಿರುವ ಹಾದಿಗಳು, ಮುಂತಾದ ವಿಚಾರಗಳೊಂದಿಗೆ ವಿಶ್ಲೇಷಣೆ ಹಾಗೂ ವಿಮರ್ಶಾತ್ಮಕವಾಗಿ ನೋಡಲಾಗಿದೆ.

ಈ ಅಧ್ಯಯನವು ತನ್ನದೇ ಆದ ವ್ಯಾಪ್ತಿಯನ್ನು ಒಳಗೊಂಡಿದೆ. ಮೈಸೂರು ನಗರವು ಬಹಳ ವಿಶಾಲ ಹಾಗೂ ಐತಿಹಾಸಿಕವಾದುದಾಗಿದ್ದು, ಸಾಮಾಜಿಕವಾಗಿ ಹಲವು ನಂಬಿಕೆ, ಸಂಪ್ರದಾಯ, ಆಚರಣೆಗಳನ್ನು ಹೊಂದಿರುವುದರಿಂದಾಗಿ ಬಹಳ ವಿಸ್ತೃತವಾಗಿ ಅಧ್ಯಯನ ಕೈಗೊಳ್ಳಬೇಕಾಗುತ್ತದೆ. ಆದುದರಿಂದಾಗಿ ಸಂಶೋಧನೆಗೆ ಬೇಕಾದಷ್ಟು ಎಲ್ಲೆಯನ್ನು ಮಾತ್ರ ಗುರುತಿಸಿಕೊಂಡು ಅಧ್ಯಯನಕ್ಕೆ ಒಳಪಡಿಸುತ್ತಿದ್ದೇನೆ. ಅಧ್ಯಯನದ ವ್ಯಾಪ್ತಿಯನ್ನು ಈ ಕೆಳಗಿನಂತೆ ಪಟ್ಟಿ ಮಾಡಿಕೊಳ್ಳಲಾಗಿದೆ.

- ಮೈಸೂರು ನಗರದ ವ್ಯಾಪ್ತಿಗೆ ಮಾತ್ರ ಈ ಅಧ್ಯಯನವನ್ನು ಸೀಮಿತಗೊಳಿಸಿಕೊಳ್ಳಲಾಗಿದೆ.
- ಪಾರಂಪರಿಕ ದೇವಾಲಯಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ.
- 2000ದ ಇಸವಿಗೂ ಮೊದಲು ನಿರ್ಮಾಣವಾಗಿರುವ ದೇವಾಲಯಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ.
- ಹಿಂದೂ ದೇವಾಲಯಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ.
- ಪ್ರಾತಿನಿಧಿಕವಾಗಿ ಮತ್ತು ಸಂದರ್ಭೋಚಿತವಾಗಿ ಕೆಲವೊಂದು ಪ್ರಮುಖ ದೇವಾಲಯಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ.

## ಪೂರ್ವ ಸಾಹಿತ್ಯ ಅಧ್ಯಯನ ಸಮೀಕ್ಷೆ

### ಡಾ.ಅಂಬಳಿಕೆ ಹಿರಿಯಣ್ಣ: ಜಾನಪದ ವೀಕ್ಷಣೆ–1987

ಈ ಕೃತಿಯಲ್ಲಿ ಜಾತ್ರೆ ಪದದ ವಿವಿಧ ಅರ್ಥ, ಅದರ ಅನುಕೂಲಗಳನ್ನು ವಿವರಿಸಿದ್ದಾರೆ. ಮಲೆನಾಡಿಗೆ ಸಂಬಂಧಿಸಿದ ಜಾತ್ರೆಗಳನ್ನು ಕೇಂದ್ರವಾಗಿಟ್ಟುಕೊಂಡು ಶಿಷ್ಟ ಹಾಗೂ ಜನಪದರು ಆಚರಿಸುವ ಜಾತ್ರೆಗಳಿಗೂ ವ್ಯತ್ಯಾಸಗಳನ್ನು ಗುರುತಿಸಿದ್ದಾರೆ. ಯಾವ ಸಂದರ್ಭದಲ್ಲಿ ಹಬ್ಬ ಜಾತ್ರೆಗಳು ನಡೆಯುತ್ತವೆ. ಅದರ ಸ್ವರೂಪವೇನು? ಜಾತ್ರೆಗಳು ಜನರಿಗೆ ಹೇಗೆ ಸಹಾಯಕವಾಗಿವೆ. ಜಾತ್ರೆಗಳು ಸಮಾಜದ ಸಾಮೂಹಿಕ ಬಾಂಧವ್ಯವನ್ನು ಹೇಗೆ ಉಳಿಸಿಕೊಂಡು ಬರುತ್ತಿವೆ. ಜಾತ್ರೆಯ ಆರಂಭ, ಆಚರಣೆಗಳು, ವಿಧಿನಿಷೇಧಗಳು, ಹಬ್ಬ ಜಾತ್ರೆಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿದ್ದಾರೆ. ಯಾವುದೇ ಒಂದು ನಿರ್ದಿಷ್ಟ ಕಾರಣವಿಲ್ಲದೆ ಹಬ್ಬ, ಜಾತ್ರೆ, ದೇವರ ಪೂಜೆ ಮಾಡಲು ಸಾಧ್ಯವಿಲ್ಲ. ಪ್ರತಿಯೊಂದು ಕಾರ್ಯಕ್ಕೂ ತನ್ನದೇ ಆದ ಕಾರಣಗಳು ತನ್ನದೇ ಆದ ಮಹತ್ವದೊಂದಿಗೆ ನಂಬಿಕೆ, ಆಚರಣೆಗಳಾಗಿ ಮೂಡಿಬರುತ್ತಿವೆ. ಹಾಗೆಯೇ ಮಲೆನಾಡಿನ ಹಬ್ಬ ಜಾತ್ರೆಗಳಲ್ಲಿನ ವಿಧಿ–ನಿಷೇಧಗಳು, ಆಚರಣೆಗಳ ವೈಖರಿಯನ್ನು ವೈಚಾರಿಕತೆಯ ನೆಲೆಯಲ್ಲಿ ವಿಮರ್ಶಿಸಿದ್ದಾರೆ. ಈ ವಿಷಯಗಳೆಲ್ಲವೂ ನನ್ನ ಸಂಶೋಧನೆಗೆ ಸಹಾಯಕವಾಗಿವೆ.

### ವಾಲೀಕಾರ ಚೆನ್ನಣ್ಣ : 'ಹೈದರಾಬಾದ್ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ'–1995

ಇದೊಂದು ಮಹಾಪ್ರಬಂಧವಾಗಿದ್ದು, ಇದರಲ್ಲಿ ಹದಿನೈದು ಅಧ್ಯಾಯಗಳನ್ನು ಕಾಣಬಹುದಾಗಿದೆ. ಅಧ್ಯಾಯ–ಮೂರು ಗ್ರಾಮದೇವತೆಗಳ ಪರಿಕಲ್ಪನೆ, ದೇವರ ಪರಿಕಲ್ಪನೆ ಬಗ್ಗೆ ಚರ್ಚಿಸಲಾಗಿದೆ. ಇದು ನನ್ನ ಸಂಶೋಧನೆಯ ಮೂರನೆಯ ಅಧ್ಯಾಯಕ್ಕೆ ಸಂಬಂಧಿಸಿದ ಪೂರಕ ಅಧ್ಯಯನ ಮಾಹಿತಿಯನ್ನು ಒದಗಿಸುತ್ತದೆ. ಅಲ್ಲದೆ ಅಧ್ಯಾಯ ಆರು ಗ್ರಾಮದೇವತೆಗಳ ಮೂರ್ತಿಗಳು ಹಾಗೂ ಗುಡಿಗಳ ರಚನಾ ವಿನ್ಯಾಸ, ಅದಕ್ಕಿರುವ ಕಾರಣಗಳು ಮುಂತಾದ ವಿಚಾರಗಳನ್ನು ವಿವರಿಸಲಾಗಿದೆ. ಅಧ್ಯಾಯ ಎಂಟು ಗ್ರಾಮದೇವತೆಗಳಿಂದ ಹುಟ್ಟಿದ ಕಲೆ, ಸಾಹಿತ್ಯ, ಜನಪದ ಜೀವನ, ಸಂಸ್ಕೃತಿ ಮತ್ತು ಶಾಸ್ತ್ರಗಳ ಬಗ್ಗೆ ಅಪಾರವಾದಂತಹ ಮಾಹಿತಿಯನ್ನು ವಿವರಿಸಿದ್ದಾರೆ. ಒಟ್ಟಾರೆಯಾಗಿ ಈ ಮಹಾಪ್ರಬಂಧವು ನನ್ನ ಅಧ್ಯಯನಕ್ಕೆ ಬಹಳ ಅಮೂಲ್ಯವಾದುದಾಗಿದೆ.

**ಡಾ.ಜಿ.ವಿ.ದಾಸೇಗೌಡ: ಗ್ರಾಮ ಸಂಸ್ಕೃತಿ ಮಾಲೆ–6 ಮಂಡ್ಯ ಜಿಲ್ಲೆಯ ಜಾತ್ರೆಗಳು–2000.**

ಈ ಕೃತಿಯಲ್ಲಿ ಮಂಡ್ಯ ಜಿಲ್ಲೆಯ 7 ತಾಲೂಕುಗಳಲ್ಲಿ ನಡೆಯುವ ಜಾತ್ರೆಗಳ ಬಗ್ಗೆ ಕ್ಷೇತ್ರಕಾರ್ಯದ ಮೂಲಕ ವಿಷಯ ಸಂಗ್ರಹಿಸಿದ್ದಾರೆ. ಜಾತ್ರೆಗಳ ಬಗ್ಗೆ ವಿವರಣೆ, ಜಾತ್ರೆಗಳ ಬಗೆಗಳನ್ನು ವಿವರಿಸಿದ್ದಾರೆ. ಜನಗಳ ಜಾತ್ರೆ, ದನಗಳ ಜಾತ್ರೆ, ಶಿಷ್ಟ ಸಂಪ್ರದಾಯದಲ್ಲಿ ಬರುವ ದೇವರ ಜಾತ್ರೆಗಳಿಗೂ ಗ್ರಾಮಾಂತರ ಜಾತ್ರೆಗಳಿಗೂ ವಿಶಿಷ್ಟ ಹಾಗೂ ವಿಭಿನ್ನತೆಗಳಿವೆ. ಗ್ರಾಮೀಣ ಜಾತ್ರೆಗಳಲ್ಲಿ ವಿಶೇಷ ಕಟ್ಟುಕಟ್ಟಳೆಗಳಿರುತ್ತವೆ. ಸಂಸ್ಕೃತಿ ಹಾಸು ಹೊಕ್ಕಾಗಿರುವುದು ಸಹ ಗ್ರಾಮೀಣರ ಜಾತ್ರೆಗಳಲ್ಲಿಯೆ. ಜಾತ್ರೆಯ ಜೊತೆಯಲ್ಲಿ ಹಬ್ಬ, ಮನರಂಜನೆ, ತೇರು–ರಥ ಮುಂತಾದವನ್ನು ಹೊಂದಿಸಿ, ಹೋಲಿಸಿ ವಿವರಿಸಿದ್ದಾರೆ. ಮಂಡ್ಯ ಜಿಲ್ಲೆಯ ಜಾತ್ರೆಗಳನ್ನು, ಹಬ್ಬಗಳನ್ನು ಸ್ಥೂಲವಾಗಿ ವಿಂಗಡಣೆ ಮಾಡಿಕೊಂಡು ಬಂಡಿ ಮತ್ತು ಕೊಂಡ, ಸಿಡಿ, ಕರಗ, ರಥೋತ್ಸವ ತೇರು, ಬಲಿ ಹೀಗೆ ಒಂದೊಂದನ್ನು ವಿಭಾಗ ಮಾಡಿ ಇವುಗಳ ಬಗ್ಗೆ ವಿವರಣೆ ನೀಡಿ, ಸಂದರ್ಭಗಳನ್ನು ಸಾರ್ವತ್ರಿಕವಾಗಿ ಕಂಡುಬರುವಂತೆ ವಿವರಿಸಿದ್ದಾರೆ. ಇದರಿಂದ ಮೈಸೂರು ನಗರದ ಪಾರಂಪರಿಕ ದೇವಾಲಯಗಳಿಗೂ ಹಾಗೂ ಇವರು ವಿವರಿಸಿರುವ ಗ್ರಾಮ ದೇವತೆಗಳಿಗೂ ಇರುವ ಎಲ್ಲಾ ಅಂಶಗಳ ಬಗ್ಗೆ ಅಧ್ಯಾಯನಕ್ಕೆ ಒಳಪಡಿಸಲು ಸಹಕಾರಿಯಾಗಿದೆ.

**ಡಾ.ಹೆಬ್ಬಾಲೆ ಕೆ ನಾಗೇಶ್(ಸಂ.) : ಜನಪದರು ಮತ್ತು ಜಾತ್ರೆಗಳು**

ಈ ಕೃತಿಯಲ್ಲಿ ಆದಿಮಾನವನಾಗಿದ್ದ ಮಾನವ ಹೇಗೆ ನಾಗರೀಕನಾದ, ಹೊಂದಾಣಿಕೆಯನ್ನು ಕಲಿತುಕೊಂಡ, ದೇವರ ಆರಾಧನೆಯನ್ನು ಹೇಗೆ ಆರಂಭಿಸಿದ ಎನ್ನುವುದಿದೆ. ಹಾಗೆಯೇ ಜಾತ್ರೆಗಳು ಹೇಗೆ ವಿಕಾಸ ಹೊಂದಿದವು. ಜಾತ್ರೆ ಹೇಗೆ ಜಾನಪದ ಸಾಹಿತ್ಯದಲ್ಲಿ ಸೇರಿತು ಎಂಬುದನ್ನು ವಿವರಸಿದ್ದಾರೆ. ಜಾತ್ರೆ ಸಂದರ್ಭದಲ್ಲಿ ನಡೆಯುವ ವರ್ಗ ಸಂಘರ್ಷ ಹಾಗೂ ಹೊಂದಾಣಿಕೆ ಬಗ್ಗೆ ತಿಳಿಸಿದ್ದಾರೆ. ಭಯದಿಂದ ಮಾನವ ಹೇಗೆ ಆಚರಣೆಗಳನ್ನು ಮುಂದುವರಿಸಿಕೊಂಡು ಬರುತ್ತಿದ್ದಾನೆ. ಇದರ ಲಾಭವೇನು? ಹಾಗೂ ಜಾತ್ರೆಯ ವಿವಿಧ ಉಪಯೋಗಗಳನ್ನು ತಿಳಿಸಿದ್ದಾರೆ. ವೈಜ್ಞಾನಿಕ ನೆಲೆಯಲ್ಲಿ ಜಾತ್ರೆಗಳನ್ನು ನೋಡಿದ್ದಾರೆ. ಜಾತ್ರೆಗಳು ಮೊದಲು ಪುಣ್ಯ ಕ್ಷೇತ್ರಗಳಲ್ಲಿ ನಡೆಯುತ್ತಿದ್ದು ಅನಂತರ ತಮ್ಮ ತಮ್ಮ ಗ್ರಾಮಗಳಲ್ಲೆ ನಡೆಸಲು ಆರಂಭಿಸಿದರು. ಇದರಿಂದ ಗ್ರಾಮ ಜಾತ್ರೆಗಳು, ಊರ ಜಾತ್ರೆಗಳು ಆರಂಭವಾದವು. ಇಲ್ಲಿ ಯಾವುದೇ ಜಾತಿಭೇದಗಳಿಗೆ ಆಸ್ಪದವಿಲ್ಲ. ಗಂಡು, ಹೆಣ್ಣು, ಮಕ್ಕಳು, ಬಡವ, ಬಲ್ಲಿದ ಎಂಬ ಆಕ್ಷೇಪಗಳಿಲ್ಲದೆ ಜಾತ್ರೆ ಜರುಗುತ್ತಿದ್ದರೂ ಜಾತೀಯ, ಮತೀಯ ಮನಸ್ಸುಗಳ ನಡುವೆ ತಾರತಮ್ಯ ಇದ್ದದೆ. ಇದ್ದರೂ ಸಹಿಸಿಕೊಳ್ಳುವುದು ಇದೆ. ಎಲ್ಲಾ ಜನಾಂಗದವರು ಹೇಗೆ ಕೆಲಸ

ಕಾರ್ಯಗಳನ್ನು ಹಂಚಿಕೊಂಡು ಸಾಮಾಜಿಕ ಸಾಮರಸ್ಯ ಸಾರುತ್ತಿವೆ ಎನ್ನುವುದನ್ನು ಈ ಲೇಖನ ಮನವರಿಕೆ ಮಾಡುವುದರಿಂದ ಅಧ್ಯಯನಕ್ಕೆ ಪೂರಕ ಮಾಹಿತಿಯನ್ನು ಒದಗಿಸುತ್ತದೆ

**ಡಾ.ಹೆಬ್ಬಾಲೆ ಕೆ.ನಾಗೇಶ್(ಸಂ) : ವಿಭಿನ್ನ ಧಾರೆಯಲ್ಲಿ ಜಾತ್ರೆಗಳು–2006**

ಜಾತ್ರೆಗಳು ಸಂಪ್ರದಾಯಬದ್ಧ ಆಚರಣೆಗಳಾಗಿ ಕಾಣುತ್ತವೆ. ಇಂದಿನ ದಿನಗಳಲ್ಲಿ ವೈವಿಧ್ಯಮಯವಾಗಿವೆ. ಇವುಗಳ ಉದ್ದೇಶ ಧರ್ಮ ಪ್ರತಿಪಾದನೆ ಒಂದೆ ಅಲ್ಲ ವ್ಯಾಪಾರ ದೃಷ್ಟಿಕೋನವನ್ನು ಕಾಣಬಹುದು. ಜಾತ್ರೆಗಳು ಆರ್ಥಿಕವಾಗಿ ಹೇಗೆ ಸಮಾಜದ ವ್ಯವಸ್ಥೆಯನ್ನು ಬಾಚಿಕೊಂಡಿವೆ, ವ್ಯಾಪಾರ ಕೇಂದ್ರಗಳಾಗಿವೆ ಎಂಬುದನ್ನು ತಿಳಿಯಬಹುದು. ಧಾರ್ಮಿಕ ನೆಲೆಗಳಾಗಿ ಹೇಗೆ ಪರಿವರ್ತಿತಗೊಂಡಿವೆ. ಸಾಮಾಜಿಕ ಭಾವೈಕ್ಯತೆಯನ್ನು ಹೇಗೆ ಸಾಧಿಸುತ್ತಿದೆ ಎನ್ನುವುದನ್ನು ತಿಳಿಸಿದ್ದಾರೆ. ಪ್ರಕೃತಿಯ ಬದಲಾವಣೆಗಳಿಗೆಲ್ಲಾ ಆ ದೈವದ ಶಕ್ತಿಯೇ ಕಾರಣ ಎಂದು ತಿಳಿದು ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿರುವುದನ್ನು ಗಮನಿಸಬಹುದಾಗಿದೆ. ಹಿಂದೆ ಜಾತ್ರೆಯ ಸಂದರ್ಭದಲ್ಲಿ ಬಂದ ಭಕ್ತರಿಗೆ ಅನ್ನ ಛತ್ರ, ಅರವಟಿಗೆಗಳು ಇದ್ದವು ಈಗಲೂ ಇದೆ. ಆದರೂ ಜನರು ಬೇರೆ ಬೇರೆ ಕಡೆ ಹೋಗಲು ಬಯಸುತ್ತಾರೆ. ಹಿಂದೆ, ಇಂದು ಹೇಗೆ ಬದಲಾವಣೆಗಳಾಗಿವೆ ಎಂಬುದನ್ನು ವೈಚಾರಿಕ ನೆಲೆಯಲ್ಲಿ ವಿವರಿಸಿದ್ದಾರೆ. ಜಾತ್ರೆಯ ನೆಪದಲ್ಲಾಗುವ ತೊಂದರೆಗಳು ಹಾಗೂ ಉಪಯೋಗಗಳನ್ನು ವಿಶ್ಲೇಷಿಸಿರುವುದು ಹೊಸ ಅಧ್ಯಯನಕ್ಕೆ ಹೊಳಹನ್ನ ನೀಡುತ್ತದೆ.

**ಡಾ.ಬಸವರಾಜ ಸಬರದ : ಜಾನಪದ ಆಯಾಮಗಳು–2010**

ಜನಪದರು ದೈವಭಕ್ತರು, ಅವರು ಬಹುದೇವೋಪಾಸಕರು. ಪ್ರಕೃತಿಯಲ್ಲಿರುವ ಒಳ್ಳೆಯದೆಲ್ಲವನ್ನೂ ಅವರು ದೇವರ ರೂಪದಲ್ಲಿ ಕಾಣುತ್ತಾರೆ. ಯಾರು ಕೈಬಿಟ್ಟರೂ ದೈವ ತನ್ನ ಕೈಬಿಡಲಾರದೆಂಬ ನಂಬಿಕೆ ಜನಪದರದು. 'ಹುಟ್ಟಿಸಿದ ದೇವರು ಹುಲ್ಲು ಮೇಯಿಸುವುದಿಲ್ಲ' ವೆಂಬ ಗಾದೆ ಮಾತು ಇದನ್ನೇ ಹೇಳುತ್ತದೆ. ಎದ್ದಕೂಡಲೇ ಭೂದೇವಿಯನ್ನು ನೆನೆಯುವ ಜನಪದರು ಕೃಷಿ ಕಾಯಕಗಳಲ್ಲಿಯೇ ದೇವರನ್ನು ಕಂಡಿದ್ದಾರೆ. 'ಕರುಣೆ ಬಂದರೆ ಕಾಯೋ, ಮರಣ ಬಂದರೆ ಒಯ್ಯೋ' ಎಂಬ ಅವರ ಈ ನುಡಿಯಲ್ಲಿ ಬದುಕಿನ ನಿಷ್ಠೂರತೆಯನ್ನು ಕಾಣಬಹುದಾಗಿದೆ. ಜನಪದರ ದೃಷ್ಟಿಯಲ್ಲಿ ಭಕ್ತಿಯೆಂದರೆ ಪ್ರೀತಿ, ಅವರು ಪ್ರಕೃತಿಯಲ್ಲಿರುವ ಗಿಡ ಮರ–ಬಳ್ಳಿ–ಫಲ–ಪುಷ್ಪಗಳನ್ನೆಲ್ಲ ದೈವ ರೂಪದಲ್ಲಿಯೇ ಕಾಣುತ್ತಾರೆ. ಜನಪದ ದೈವಗಳಲ್ಲಿ ಹೆಣ್ಣು ದೈವಗಳೇ ಪ್ರಧಾನವಾಗಿದೆ. ಜನಪದರ ಒಂದು ವಿಶಿಷ್ಟ ಸಂಗತಿಯೆಂದರೆ ಇಲ್ಲಿ

ಸಾಮಾನ್ಯವಾದದ್ದು ವಿಶೇಷವಾಗಿ ಕಾಣಿಸುತ್ತದೆ ನರ–ಹರನಾಗುತ್ತಾನೆ, ಜೀವ–ದೇವನಾಗುವ, ವ್ಯಕ್ತಿ–ಶಕ್ತಿಯಾಗುವ ಸಾಧ್ಯತೆಗಳು ಇಲ್ಲಿವೆ. ಸಾಮಾನ್ಯವಾದ ಮಣ್ಣು, ಕಲ್ಲು, ಗಿಡ, ಮರಗಳು ಜನಪದರಲ್ಲಿ ಮೂರ್ತಸ್ವರೂಪ ಪಡೆದು ದೇವತೆಯಾಗುತ್ತದೆ. ಸಾಧಾರಣವಾದ ಕಲ್ಲು, ಶಿಲ್ಪಮೂರ್ತಿಯಾಗಿ, ಗ್ರಾಮದೇವತೆಯಾಗಿ ಪೂಜೆಗೊಳ್ಳುತ್ತದೆ. ಸಾಮಾನ್ಯವಾದ ಸ್ಥಳವೊಂದು ದೈವ ಪ್ರತಿಷ್ಠಾಪನೆಯಿಂದ ಪವಿತ್ರಸ್ಥಳವಾಗಿ ಪರಿವರ್ತನೆಗೊಂಡು ಪುಣ್ಯಕ್ಷೇತ್ರವಾಗುತ್ತದೆ. ಜಾಗತೀಕರಣದ ಸಂದರ್ಭದಲ್ಲಿ ಆಧ್ಯಾತ್ಮ–ಅನುಭವ–ದೈವತ್ವದ ಪರಿಕಲ್ಪನೆಗಳು ಬೇರೆಯಾಗ ತೊಡಗಿವೆ. ಪರಸ್ಪರರಲ್ಲಿ ನಂಬಿಕೆದ್ರೋಹ ಹೆಚ್ಚಾಗಿದೆ. ಮನುಷ್ಯ ಇಂದು ಕೇವಲ ಸರಕಾಗಿದ್ದಾನೆ. ಇಂತಹ ಸಂದರ್ಭದಲ್ಲಿ ದೈವ ಜಾನಪದವನ್ನು ಕುರಿತು, ಅದರ ಒಳಿತುಗಳನ್ನು ಕುರಿತು ವಸ್ತುನಿಷ್ಠವಾಗಿ ಚರ್ಚಿಸುವುದು ತುಂಬ ಅಗತ್ಯವಾಗಿದೆ.

### ತಾಪಿ ಧರ್ಮಾರಾವ್ : ದೇವಾಲಯಗಳು ಮತ್ತು ಲೈಂಗಿಕ ಶಿಲ್ಪ–2004

ಈ ಕೃತಿಯು 2004ರಲ್ಲಿ ಆರನೆಯ ಮುದ್ರಣವನ್ನು ಕಂಡಿದ್ದು ನಮ್ಮ ದೇವಾಲಯಗಳು ದೇವ–ದೇವತೆಗಳ ವಾಸಸ್ಥಳಗಳು ಮಾತ್ರವಲ್ಲ. ನಮ್ಮ ಕಲೆ, ಸಂಸ್ಕೃತಿಗಳ ಸಂಕೇತವೂ ಆಗಿವೆ. ಮನುಷ್ಯರಾಗಿ ನಾವು ತಲೆಯಮೇಲೆ ಸೂರಿಲ್ಲದಿದ್ದರೂ ಕೊರತೆ ಪಡಲಾರೆವು. ಆದರೆ ದೇವರಿಗೆ ಭವ್ಯದೇವಾಲಯ ಬೇಕೆನ್ನುವರು. ಈ ದೇವಲಯಗಳ ಹೊರಗೆ ಮತ್ತು ಒಳಗೆ ಲೈಂಗಿಕ ಶಿಲ್ಪಗಳು ಏಕಿರಬೇಕು? ಈ ಶಿಲ್ಪಗಳು ಅಶ್ಲೀಲವೇ ಹಿಂದಿನವರು ಅನುಸರಿಸುತ್ತ ಬಂದಿರುವ ಈ ರೂಢಿಯ ಹಿನ್ನೆಲೆ ಏನು? ಇದಕ್ಕೆ ಏನಾದರೂ ಅರ್ಥವಿದೆಯೇ ದೇವರಿಗೆ ಮನುಷ್ಯದಾಸಿಯರು ಏಕೆ ಬೇಕು? ಮನುಷ್ಯರ ಎಲ್ಲ ಕ್ರಿಯೆಗಳನ್ನು ದೇವರಿಗೆ ಆರೋಪಿಸಬಹುದೆ? ಇಂತಹ ಹಲವಾರು ಪ್ರಶ್ನೆಗಳಿಗೆ ಈ ಕೃತಿಯು ಉತ್ತರವನ್ನು ನೀಡುತ್ತದೆ. 'ದೇವಾಲಯಗಳು ಶೋಭನ ಕೊಠಡಿಗಳು' ಎಂಬ ಶೀರ್ಷಿಕೆಯಲ್ಲಿ ವ್ಯಭಿಚಾರದಿಂದ ಗಳಿಸಿದ ಹಣ ಒಳ್ಳೆಯ ಬಳಕೆಯ ಬಗ್ಗೆ ದೇವದಾಸಿ, ಆರಾಧನೆ, ಸತ್ಯದೇವತೆ, ಬಲಹೀನತೆ, ಸಂಧ್ಯಾವಂದನೆ, ದೇವರು ಮಾನವ ಸೃಷ್ಟಿ, ಅಶ್ಲೀಲವೂ ದೇವತಾರ್ಪಣೆ, ಲಿಂಗಪೂಜೆ, ಲಿಂಗಕ್ಕೆ ಅಭಿಷೇಕ ಚಿಹ್ನೆ, ಸಂಗತಿ, ರತಿವಿಲಾಸಪಾನಿಯಗಳು, ನಿತ್ಯಶೋಭನ ಕೊಠಡಿಗಳು, ವಿಶ್ವದಲ್ಲಿ ಎಲ್ಲೆಡೆಯೂ ಈ ಲೈಂಗಿಕ ಪೂಜೆ ಇದೆ. ಸ್ತಂಭಗಳ ಪೂಜೆ, ಲೈಂಗಿಕ ಕಾರ್ಯದ ಜೊತೆಯಲ್ಲಿ ಬಯ್ಗುಳು, ಲೈಂಗಿಕ ರೂಪದ ತಿಂಡಿಗಳು, ಮಂಗಳ ಸೂತ್ರಗಳು ಆ ಚಿಹ್ನೆಗಳೇ! ಮುಂತಾದ ವಿಚಾರಗಳ ಬಗ್ಗೆ ವಿವರಿಸಿದ್ದಾರೆ. ಈ ಎಲ್ಲಾ ವಿಷಯಗಳು ಸಂಶೋಧನೆಯ ಅಧ್ಯಯನಕ್ಕೆ ಸಹಕಾರಿಯಾಗಿವೆ.

**ಪ್ರೊ.ಶ್ರೀಕಂಠ ಕೂಡಿಗೆ : ಜಾನಪದ ವಿವಿಧ ಮುಖಗಳು**

ಈ ಕೃತಿಯಲ್ಲಿ 'ವರ್ಣ–ಜಾತಿ ಮತ್ತು ಲೋಕದೃಷ್ಟಿ' ಎಂಬ ಲೇಖನವನ್ನು ಶ್ರೀಕಂಠ ಕೊಡಿಗೆಯವರು ಬರೆದಿದ್ದು ಭೂ:ಭುವ:ಸುವ: ಎಂಬುದು ಜಗತ್ತಿನ ಎರಡು ಸಂಪ್ರದಾಯಗಳನ್ನು ಹೇಳುತ್ತದೆ ಒಂದು ಪ್ರಕೃತಿ ಮೂಲ ಮತ್ತೊಂದು ಪುರುಷ ಮೂಲ. ಪ್ರಕೃತಿಯ ಸಂಸ್ಕೃತಿಯನ್ನು ಅಂತರ್ಗತಗೊಳಿಸುತ್ತ ಹೋಗುವಲ್ಲಿ ಪುರುಷನನ್ನು ಅವುಂಚಿಕೊಳ್ಳಲು ವಿಫಲವಾಗುತ್ತದೆ. ಆಗ ಪುರುಷ ಸಫಲನಾಗುತ್ತಾನೆ. ಸಮಾನತೆ ಎಂಬುದು ಎಲ್ಲದರಲ್ಲಿಯೂ ದಕ್ಕಿದೆ ಎಂದಲ್ಲಾ, ದಕ್ಕುವ ಹಾದಿಯಲ್ಲಿದೆ. ಜನಾಂಗ, ವರ್ಣ, ಜಾತಿಗಳು ಲೋಕದೃಷ್ಟಿಯಲ್ಲಿ ಹೇಗೆ ಉಗಮವಾದವು. ಅವು ಎಲ್ಲಿಂದ ಬಂದವು ಹೇಗೆ ಬೆಳವಣಿಗೆ ಹೊಂದಿವೆ. ಹಾಗೂ ಇಂದು ಯಾವ ಹಂತ ತಲುಪಿದೆ ಎಂಬುದು ಮುಖ್ಯವಾಗಿದ್ದು ಇಂದಿಗೂ ಕೂಡ ಹೇಗೆ ನಡೆಯುತ್ತಿದೆ ಎಂಬ ಮಾಹಿತಿಯನ್ನು ಹಿಂದಿನಿಂದ ಇಂದಿನವರೆಗೂ ತುಲನಾತ್ಮಕ ಹಾಗೂ ವಿಮರ್ಶಾತ್ಮಕ ಚಿಂತನೆಯಿಂದ ಈ ಲೇಖನ ಬಹಳ ಉಪಯುಕ್ತವಾಗಿದೆ.

**ಡಾ.ಎಸ್.ಕೆ.ಕರೀಂಖಾನ್ : ಕರ್ನಾಟಕ ಜಾನಪದ–1989**

ಈ ಕೃತಿಯಲ್ಲಿ 'ನಂಬಿಕೆ ಸಂಪ್ರದಾಯಗಳು' ಎಂಬ ಲೇಖನವನ್ನು ಡಾ.ಶ್ರೀರಾಮ ಇಟ್ಟಣ್ಣರವರು ಬರೆದಿದ್ದು ನಂಬಿಕೆ, ಸಂಪ್ರದಾಯಗಳು ಜಾನಪದ ಬದುಕಿನೊಂದಿಗೆ ಏಕರಸವಾಗಿರುವ ಬಹು ಮುಖ್ಯ ಅಂಶಗಳು. ನಂಬಿಕೆ, ಮಾನಸಿಕ ಸ್ಥಿತಿಯ ಒಂದು ಪದರಾದರೆ, ಸಂಪ್ರದಾಯ ನಂಬಿಕೆಯನ್ನು ಒಳಗೊಂಡಂತೆ, ಒಂದೊಂದು ಪ್ರದೇಶದ, ಒಂದೊಂದು ಜನಾಂಗದ ಜೀವನ ಕ್ರಮವಾಗುತ್ತದೆ. ನಂಬಿಕೆಗಿಂತಲೂ ಸಂಪ್ರದಾಯಕ್ಕೆ ಹೆಚ್ಚಿನ ವ್ಯಾಪ್ತಿಯಿದೆ. ಮಾನಸಿಕಸ್ತರದಲ್ಲಿ ಆಳವಾಗಿರುವ ನಂಬಿಕೆ ಕ್ರಮೇಣ ಸಾಂಸ್ಕೃತಿಕ ಆವರಣಕ್ಕೆ ಬಿದ್ದು ಸಾಮಾಜಿಕ ಚೌಕಟ್ಟನ್ನು ಪಡೆದು ಕ್ರಿಯಾಶೀಲವಾಗಿ ಆಚರಣೆಗಳಿಗೆ ಹಿಗ್ಗುತ್ತದೆ. ನಂಬಿಕೆಗಳು ಪರಂಪರೆಯಿಂದ ಬಂದಿರುಬಹುದಾದ ಸಾಧ್ಯತೆ ಹೆಚ್ಚು. ಈ ಪರಂಪರೆಯ ಮೂಲ ಎಂದು? ಹೇಗೆ ಹುಟ್ಟಿತು? ಹೇಳುವುದು ತುಂಬ ಕಷ್ಟದ ಕೆಲಸ. ನಂಬಿಕೆಗಳಲ್ಲಿ ಅತಿಮಾನುಷ ನಂಬಿಕೆಗಳು, ಸಾಂಸ್ಕೃತಿಕ ನಂಬಿಕೆಗಳು ಮತ್ತು ವೈಯಕ್ತಿಕ ನಂಬಿಕೆಗಳೆಂದು ವಿಂಗಡಿಸಿ ವಿವರಿಸಿದ್ದಾರೆ. ಹಾಗೂ ಮಾಟ–ಮಂತ್ರದ ಬಗ್ಗೆ ವಿಶ್ಲೇಷಿಸಿದ್ದಾರೆ. ಅಲ್ಲದೆ ಸಂಪ್ರದಾಯಗಳನ್ನು ಭಾವುಕ ಸಂಪ್ರದಾಯ ಮತ್ತು ಭೌತಿಕ ಸಂಪ್ರದಾಯಗಳೆಂದು ವಿಂಗಡಿಸಿ ಸಂಪ್ರದಾಯಗಳ ಸಾರಾಸಂಗ್ರಹವನ್ನು ವಿಮರ್ಶಾತ್ಮಕ ಹಾಗೂ ವೈಚಾರಿಕ ನೆಲೆಯನ್ನು ಜಾನಪದೀಯವಾಗಿ ವಿಶ್ಲೇಷಿಸಿ ವಿವರಿಸಿದ್ದಾರೆ.

ಇದೇ ಕೃತಿಯಲ್ಲಿ 'ಜನಪದ ಚಿತ್ರ ಮತ್ತು ಶಿಲ್ಪಕಲೆ' ಎಂಬ ಲೇಖನವನ್ನು ಪಿ.ಆರ್.ತಿಪ್ಪೇಸ್ವಾಮಿಯವರು ಬರೆದಿದ್ದು ಇದರಲ್ಲಿ ಜನಪದ ಚಿತ್ರಕಲೆ, ಜನಪದ ಶಿಲ್ಪಕಲೆ ಮತ್ತು ಭಿತ್ತಿಚಿತ್ರಗಳು ಎಂಬುದಾಗಿ ವಿಭಾಗಿಸಿ ವಿವರಿಸಿದ್ದಾರೆ.

**ಎ.ಎಸ್.ಪ್ರಭಾಕರ : ಬುಡಕಟ್ಟು ಅಧ್ಯಯನ ಮಾಲೆ-3 ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು**

ಈ ಕೃತಿಯಲ್ಲಿ ಪಾರಂಪರಿಕ ಜ್ಞಾನದ ಬಗ್ಗೆ ಬಹಳ ವಿವೇಚಿತವಾಗಿ ಹಾಗೂ ಆಳವಾಗಿ ವಿವರಿಸಿದ್ದಾರೆ. ಇದರಿಂದ ಪಾರಂಪರಿಕತೆ ಎಂದರೇನು, ಅದು ಹೇಗೆ ಬೆಳವಣಿಗೆ ಹೊಂದುತ್ತಾ ಸಾಗಿ ಬಂದಿದೆ ಎಂಬುದನ್ನು ತಿಳಿಸಿದ್ದಾರೆ. ಅಲ್ಲದೆ ದೈವಾರಾಧನೆಯ ಬಗ್ಗೆ ವಿವರಣೆ ನೀಡುತ್ತಾ ದೈವ ಎಂದರೇನು? ಅದು ಹೇಗೆ ಆರಾಧನೆಗೆ ಒಳಪಟ್ಟಿದೆ ಅದಕ್ಕೆ ಕಾರಣಗಳೇನು ಹಾಗೂ ಬುಡಕಟ್ಟು ಜನರ ದೈವಾರಾಧನೆಗಳ ಬಗ್ಗೆ ಸವಿವರವಾಗಿ ವಿವರಿಸಿ ವಿಶ್ಲೇಷಿಸಿದ್ದಾರೆ. ಹಾಗೂ ವಿಮರ್ಶಾತ್ಮಕ ಚಿಂತನೆಗಳನ್ನು ಹರಿಬಿಟ್ಟಿದ್ದಾರೆ. ಆದುದರಿಂದಾಗಿ ಈ ಕೃತಿಯು ನನ್ನ ಸಂಶೋಧನೆಯ ಅಧ್ಯಯನಕ್ಕೆ ವೈಚಾರಿಕವಾಗಿ ಹಾಗೂ ವಿಮರ್ಶಾತ್ಮಕವಾಗಿ ನೋಡಲು ಸಹಕಾರಿಯಾದ ಪೂರಕ ಕೃತಿಯಾಗಿದೆ.

**ಎನ್.ಪಿ.ಶಂಕರನಾರಾಯಣರಾವ್ : ಪಂಜಿರಿಯರವ ಸಮಾಜ ಮತ್ತು ಜಾನಪದ ಇತಿಹಾಸ**

ಈ ಕೃತಿಯು ಪಂಜಿರಿಯರವ ಸಮುದಾಯದವರ ಕುರಿತಾದ ಕ್ಷೇತ್ರಾಧ್ಯಯನದಿಂದ ಬಂದಂತಹುದಾಗಿದ್ದು, ಭಾಗ-1ರಲ್ಲಿ ದೇವರುಗಳು ಮತ್ತು ಸಂಸ್ಕಾರಗಳು ಎಂಬ ಶೀರ್ಷಿಕೆಯಡಿಯಲ್ಲಿ ಹಲವಾರು ವಿಷಯಗಳನ್ನು ಕ್ಷೇತ್ರಾಧ್ಯಯನದ ಮೂಲಕ ಸಂಗ್ರಹಿಸಿ ವಿಶ್ಲೇಷಿಸಿ ವಿವರಿಸಿದ್ದಾರೆ. ಪಂಜಿರಿಯರವರ ದೇವತಾ ಪ್ರಪಂಚ, ಪಂಜಿರಿಯವರ ತಿಥಿ ಹಾಡಿನಲ್ಲಿ ಅವರ ಪುರಾಣವು ಅಡಕಗೊಂಡಿದೆ. ತಮ್ಮದಾಗಿಸಿಕೊಂಡಿರುವ ಇತರರ ದೇವರುಗಳು, ಸಂಸ್ಕಾರಗಳು ಇವೆಲ್ಲವುಗಳ ಬಗ್ಗೆ ವಿವರಿಸಿದ್ದಾರೆ. ಪಂಜಿರಿಯರವರ ದೇವರ ಮೇಲಿನ ನಂಬಿಕೆ, ಆಚರಣೆ ಹಾಗೂ ಅವರ ವಿಶೇಷತೆಗಳನ್ನು ವಿವರಿಸಿ ಹಲವಾರು ವಿಚಾರಗಳನ್ನು ತಿಳಿಸಿರುವುದು ನನ್ನ ಕ್ಷೇತ್ರಾಧ್ಯಾಯನಕ್ಕೆ ಹೊಸ ರೂಪವನ್ನು ನೀಡಲು ಸಹಕಾರಿಯಾಗಿದೆ.

**ಡಾ.ಎನ್.ಆರ್.ನಾಯಕ : ಉತ್ತರ ಕನ್ನಡ ಜಿಲ್ಲೆಯ ಗ್ರಾಮದೇವತೆಗಳ ಹಾಡುಗಳು**

ಈ ಕೃತಿಯು ಗ್ರಾಮದೇವತೆಗಳ ಅಧ್ಯಯನದ ಅವಶ್ಯಕತೆ ಅವುಗಳ ಹುಟ್ಟು, ವಿಕಾಸಪಥ ಹಾಡುಗಳ ಸಂದರ್ಭ ಹಾಗೂ ದಾಖಲಾದ ದೇವತೆಗಳ ಕಿರುಚಿತ್ರಗಳು, ಪ್ರಮುಖ ಉತ್ಸವ ಬಂಡಿ

ಹಬ್ಬ ಹೀಗೆ ಹಲವಾರು ಅಂಶಗಳನ್ನು ಪ್ರಸ್ತಾವನೆಯಲ್ಲಿ ವಿವರಿಸಲಾಗಿದ್ದು ನಂತರದಲ್ಲಿ ಗ್ರಾಮದೇವತೆಗಳಿಗೆ ಸಂಬಂಧಿಸಿದಂತೆ ಇರುವ ಹಾಡುಗಳನ್ನು ಸಂಗ್ರಹಿಸಲಾಗಿದೆ. ಒಟ್ಟಾರೆಯಾಗಿ ಈ ಕೃತಿಯು ಗ್ರಾಮದೇವತೆಗಳ ಸಾಹಿತ್ಯಕ್ಕೆ ಹಿಡಿದ ಕನ್ನಡಿಯಾಗಿ ನನ್ನ ಸಂಶೋಧನಾ ಸಾಹಿತ್ಯಕ್ಕೆ ಪೂರಕವಾದುದಾಗಿದೆ.

**ಡಾ.ಎಸ್.ಲಕ್ಷ್ಮೀದೇವಿ : ಗ್ರಾಮ ಮತ್ತು ಶಿಷ್ಟ ದೇವತೆಗಳು–2007**

ಈ ಕೃತಿಯು ಕ್ಷೇತ್ರಾಧ್ಯಾಯನದಿಂದ ಸಂಶೋಧನೆಗೆ ಒಳಪಡಿಸಿ ಸಾದರ ಪಡಿಸಿದ ಮಹಾಪ್ರಬಂಧವಾಗಿದೆ. ಗ್ರಾಮ ಮತ್ತು ಶಿಷ್ಟ ದೇವತೆಗಳು ತೌಲನಿಕ ಅಧ್ಯಯನ ಎಂಬ ಶೀರ್ಷಿಕೆಯಡಿಯಲ್ಲಿ ಸಂಶೋಧನೆ ಕೈಗೊಂಡಂತಹುದಾಗಿದ್ದು, ಗ್ರಾಮ ಮತ್ತು ಶಿಷ್ಟ ದೇವತೆಗಳ ಕುರಿತಾಗಿ ಲೇಖನ, ಕೃತಿ, ಸಂಶೋಧನೆ ಕೈಗೊಳ್ಳುವವರು ನೋಡಲೇಬೇಕಾದಂತಹ ಕೃತಿಗಳಲ್ಲಿ ಬಹಳ ಪ್ರಮುಖವಾಗಿದೆ. ಎಂಟು ಅಧ್ಯಾಯಗಳನ್ನಾಗಿ ವಿಂಗಡಿಸಿಕೊಂಡು ಗ್ರಾಮ ಮತ್ತು ಶಿಷ್ಟ ದೇವತೆಗಳ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಗೆ ಸಂಬಂಧಿಸಿ ವಿವರಿಸಿದ್ದಾರೆ. ಛಾಯಾಚಿತ್ರ ಸಹಿತ ಶಿಷ್ಟದೈವಗಳ ಮತ್ತು ಗ್ರಾಮದೇವತೆಗಳ ಸಾಮ್ಯ ಮತ್ತು ಭೇದಗಳ ಬಗೆಗೆ ವಿವರಿಸಿ, ನಂಬಿಕೆ ಮತ್ತು ಆಚರಣೆಗಳ ಮಾಹಿತಿಯನ್ನು ನೀಡಿದ್ದಾರೆ. ಪ್ರಮುಖವಾದ ಗ್ರಾಮದೇವತೆಗಳ ಜಾತ್ರೆಗಳನ್ನು ಪಟ್ಟಿ ಮಾಡಿ ವಿವರಿಸಿ, ಭಿನ್ನತೆ ಮತ್ತು ಸಾಮ್ಯತೆಯನ್ನು ವಿಮರ್ಶಾತ್ಮಕವಾಗಿ ವಿವೇಚಿಸಿದ್ದಾರೆ. ಗ್ರಾಮದೇವತೆ ಹಾಗೂ ಪೂರಕ ದೇವತೆಗಳಿಗೆ ಸಂಬಂಧಿಸಿದಂತೆ ವಿಶ್ಲೇಷಿಸಿದ್ದಾರೆ. ಗ್ರಾಮದೇವತೆಗಳ ಆರಾಧನೆಯ ಹಿನ್ನೆಲೆಯಲ್ಲಿ ವಿಧಿ–ನಿಷೇಧಗಳು, ಆಧುನೀಕತೆಯಲ್ಲಿ ಗ್ರಾಮ ದೇವತೆಗಳು ಹೇಗೆ ಪ್ರಸ್ತುತವಾಗಿವೆ ಎಂಬುದರ ಬಗ್ಗೆ ಹಲವಾರು ಮಾಹಿತಿಯನ್ನು ಸಂಗ್ರಹಿಸಿ ತೌಲನಿಕವಾಗಿ ವಿಮರ್ಶಿಸಿದ್ದಾರೆ.

**ಪ್ರೊ.ಪಿ.ವಿ. ನಂಜರಾಜ ಅರಸು : ಮೈಸೂರು ನೂರಿನ್ನೂರು ವರ್ಷಗಳ ಹಿಂದೆ**

ಈ ಕೃತಿಯು ಅತ್ಯಂತ ಮಹತ್ವದ ಕೃತಿಯಾಗಿದ್ದು, ಒಟ್ಟು ಹದಿನೇಳು ಅಧ್ಯಾಯಗಳು ಸಂಪೂರ್ಣವಾಗಿ ಮೈಸೂರು ನಗರಕ್ಕೆ ಸಂಬಂಧಿಸಿದುದಾಗಿದೆ. ಮೊದಲನೆಯ ಅಧ್ಯಾಯದಲ್ಲಿ ಮೈಸೂರಿನ ಇತಿಹಾಸದ ಬಗ್ಗೆ ತಿಳಿಸಲಾಗಿದ್ದು, ಅದರ ಉಗಮ ಹಾಗೂ ರಾಜ ಮನೆತನಗಳ ಆಡಳಿತ ಹಾಗೂ ರಾಜ ಮಹಾರಾಜರ ಬಗ್ಗೆ ಇರುವ ಮಾಹಿತಿಯೊಂದಿಗೆ ಅವರ ಚಿತ್ರಪಟಗಳನ್ನು ನೀಡಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಮೈಸೂರು ಪಾರಂಪರಿಕ ನಗರ, ಮೈಸೂರು ರಾಜ್ಯದ ರಾಜಧಾನಿ ಮೈಸೂರು ನಗರ, ಐತಿಹಾಸಿಕ ನಗರ, ಸಾಂಸ್ಕೃತಿಕ ನಗರ, ತನ್ನ ಒಡಲಲ್ಲಿ ಒಂದು

ಸುದೀರ್ಘ ಇತಿಹಾಸ, ಸಂಸ್ಕೃತಿಯ ಭವ್ಯ ಪರಂಪರೆಯನ್ನು ತುಂಬಿಟ್ಟುಕೊಂಡಿರುವ ನಗರ, ಹೇಗಿತ್ತು ಮೈಸೂರು ನೆನ್ನೆ? ಕಳೆದ ಶತಮಾನದಲ್ಲಿ? ಸುಮಾರು ನೂರು ವರ್ಷಗಳ ಹಿಂದೆ? ಕ್ರಿ.ಶ.1900ರ ಅಕ್ಕಪಕ್ಕದಲ್ಲಿ, ಇನ್ನೂರು ವರ್ಷಗಳ ಹಿಂದೆ? 1800ರ ಅಕ್ಕಪಕ್ಕದಲ್ಲಿ ಎಂಬ ಮಾಹಿತಿಯೊಂದಿಗೆ ಮೈಸೂರು ನಗರದ ಗಡಿಯನ್ನು ಗುರುತಿಸಿದ್ದಾರೆ. ಮೂರನೆಯ ಅಧ್ಯಾಯ ಪ್ರಭುತ್ವ ಭವನದತ್ತ ವೀರಕಲ್ಲು, ಮಾಸ್ತಿಕಲ್ಲು, ವೀರನಗೆರೆ ಪ್ರದೇಶದಲ್ಲಿರುವ ಈ ಶಿಲಾಸ್ಮಾರಕಗಳು ಕ್ರಿ.ಶ.1626ರಲ್ಲಿ ನಡೆದ ಪಿರಿಯಾಪಟ್ಟಣ ಕಾಳಗದಲ್ಲಿ ಮಡಿದ ಮೈಸೂರಿನ ದಳವಾಯಿ ಮನೆತನಗಳಿಗೆ ಸೇರಿದ ವೀರರಿಗೆ ಹಾಗೂ ಅವರ ಪತ್ನಿಯರಿಗೆ ಸಂಬಂಧಿಸಿದವುಗಳಾಗಿವೆ.

ಐದನೆಯ ಅಧ್ಯಾಯದಲ್ಲಿ ಚಾಮುಂಡಿಬೆಟ್ಟ ಅದರ ಮೆಟ್ಟಿಲು ಮತ್ತು ನಂದಿ ದೇವರಿಗೆ ಸಂಬಂಧಿಸಿದ ಮಾಹಿತಿಗಳೂ ಹಾಗೂ ಬೆಟ್ಟದಲ್ಲಿರುವಂತಹ ದೇವಾಲಯಗಳು ಮತ್ತು ರಥೋತ್ಸವ, ಸಾವಿರ ದೀಪಗಳ ದೇವಿಕೆರೆ, ಗವಿಮಠಗಳ ಬಗ್ಗೆ ಕೂಲಂಕಷವಾದ ಮಾಹಿತಿಯನ್ನು ಈ ಕೃತಿಯು ನೀಡುತ್ತದೆ. ಏಳನೆಯ ಅಧ್ಯಾಯದಲ್ಲಿ ಪೂಜಾ ಮಂದಿರಗಳಾದ ಅರಮನೆಯಂಗಳದ ದೇವಸ್ಥಾನಗಳ ಸ್ಥಾಪನೆ, ಅವುಗಳ ನಿರ್ಮಾಣಶೈಲಿ, ಪೂಜೆ ಪುನಸ್ಕಾರಗಳು, ನಂಬಿಕೆ ಆಚರಣೆಗಳು, ಕೆಲವು ಸ್ತೋತ್ರಗಳು ಹಾಗೂ ಅವುಗಳಿಗೆ ವಿವರಣೆಯನ್ನು ಸಹಾ ನೀಡಿದ್ದಾರೆ. ಹದಿನಾರನೆಯ ಅಧ್ಯಾಯದಲ್ಲಿ ಅರಮನೆಯ ಹಬ್ಬಗಳು, ಅಂಧಕಾಸುರನ ಸಂಹಾರ, ಸಂಕ್ರಾಂತಿ, ಗೋಕುಲಾಷ್ಟಮಿ, ನವರಾತ್ರಿ, ಸಾಂಪ್ರದಾಯಿಕ ಹಿನ್ನೆಲೆ, ವಿಜಯನಗರದಲ್ಲಿ ನವರಾತ್ರಿ, ಶ್ರೀರಂಗಪಟ್ಟಣದಲ್ಲಿ ನವರಾತ್ರಿ, ಮೈಸೂರಿನಲ್ಲಿ ನಡೆಯುವ ನವರಾತ್ರಿಗಳ ಬಗ್ಗೆ ವಿವರಿಸಿದ್ದಾರೆ.

**ಡಾ.ಸಿದ್ದಲಿಂಗಯ್ಯ : ಗ್ರಾಮದೇವತೆಗಳು–2009**

ಈ ಕೃತಿಯು ಒಂದು ಸಂಶೋಧನಾ ಮಹಾಪ್ರಬಂಧವಾಗಿದ್ದು, ಕ್ಷೇತ್ರಾಧ್ಯಾಯನದಿಂದ ಕೂಡಿದೆ. 'ಗ್ರಾಮದೇವತೆಗಳ' ಸಂಶೋಧನಾ ಮಹಾಪ್ರಬಂಧವನ್ನು 12ಅಧ್ಯಾಯಗಳಾಗಿ ಮಾಡಿಕೊಂಡು ಅಧ್ಯಯನ ನಡೆಸಲಾಗಿದೆ. ಮುಖ್ಯವಾಗಿ ಬೆಂಗಳೂರು ಪ್ರಾಂತ್ಯದ ಏಳು ತಾಲ್ಲೂಕುಗಳ ಗ್ರಾಮದೇವತೆಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಮೊದಲ ಭಾಗದಲ್ಲಿ ಹಿಂದಿನ ಗ್ರಾಮದೇವತೆಗಳ ಆಧುನೀಕರಣಗೊಳ್ಳುತ್ತಿರುವುದು, ಆಚರಣೆಗಳಲ್ಲಿ ವ್ಯತ್ಯಾಸ, ಅವುಗಳಿಗಿರುವ ಸಾಹಿತ್ಯ ಹಾಡು, ಕಥೆ, ಗಾದೆ, ಐತಿಹ್ಯ, ಪುರಾಣಗಳ ಕಣ್ಮರೆಯಾಗುತ್ತಿರುವುದರ ಬಗ್ಗೆ ಬಹಳ ವಿಮರ್ಶಾತ್ಮಕವಾಗಿ ವಿವರಿಸಿದ್ದಾರೆ. ಎರಡನೆಯ ಅಧ್ಯಾಯ ಗ್ರಾಮದೇವತೆಗಳ ಪರಿಕಲ್ಪನೆಯಲ್ಲಿ ಮಾತೃದೇವತಾ ಪಂಥದ ಚಾರಿತ್ರಿಕ ಹಿನ್ನೆಲೆ, ವಿವಿಧ ಯುಗಗಳಲ್ಲಿ ಇದ್ದಂತಹ ಹೆಣ್ಣಿನ ಸ್ಥಾನಮಾನಗಳು, ಉಗಮ ಹಾಗೂ ವಿಕಾಸದ ಪ್ರಾಧಾನ್ಯತೆಯನ್ನು ಚರ್ಚಿಸಿದ್ದಾರೆ. ಮೂರನೆಯ

ಅಧ್ಯಾಯ ಗ್ರಾಮದೇವತೆಗಳ ವರ್ಗೀಕರಣದಲ್ಲಿ ಗುಣ–ಸ್ವಭಾವ, ಜನಾಂಗ, ಬಣ್ಣ, ಆಹಾರ, ಲಿಂಗಾನುಸಾರವಾಗಿ ವರ್ಗೀಕರಿಸಿದ್ದಾರೆ. ನಾಲ್ಕನೆಯ ಅಧ್ಯಾಯ ಗ್ರಾಮದೇವತೆಗಳನ್ನು ಕುರಿತ ಐತಿಹ್ಯ, ಪುರಾಣಗಳಲ್ಲಿ ಗ್ರಾಮದ ಹೆಣ್ಣು ಮಗಳು ಹೇಗೆ ದೇವತೆಯ ಸ್ಥಾನ ಪಡೆದಳು. ಜಾತೀಯ ಮನಸ್ಸುಗಳ ಕೈವಾಡವನ್ನು ಐತಿಹ್ಯ ಹಾಗೂ ಪುರಾಣಗಳಲ್ಲಿ ಗುರುತಿಸಬಹುದಾಗಿದೆ. ಐದನೆಯ ಅಧ್ಯಾಯ ಗ್ರಾಮದೇವತೆಗಳ ನಂಬಿಕೆ ಹಾಗೂ ಆಚರಣೆಗೆ ಸಂಬಂಧಿಸಿದ ವಿಷಯಗಳನ್ನು ವಿಮರ್ಶಿಸಿ ಚರ್ಚಿಸಲಾಗಿದೆ. ಆರನೆಯ ಅಧ್ಯಾಯ ಗ್ರಾಮದೇವತೆಗಳ ವಿಶಿಷ್ಟತೆಯ ಬಗ್ಗೆ ವಿವರಿಸುತ್ತಾ, ಒಂದೊಂದು ಗ್ರಾಮದಲ್ಲಿಯೂ ಒಂದೊಂದು ವಿಶಿಷ್ಟತೆಯನ್ನು ಕಾಣಬಹುದಾಗಿದೆ. ಒಂದು ಗ್ರಾಮದಲ್ಲಿ ಮಹಾಸತಿಗೆ ಸಂಬಂಧಿಸಿದ್ದರೆ ಮತ್ತೊಂದರಲ್ಲಿ ಸತಿಸಹಗಮನೆಯ ಬಗ್ಗೆ ಹೀಗೆ ಒಂದೊಂದು ವಿಶಿಷ್ಟತೆಯಿಂದ ಗ್ರಾಮದೇವತೆಗಳಾದ ವಿವರವನ್ನು ನೀಡಿದ್ದಾರೆ. ಏಳನೆ ಅಧ್ಯಾಯ ಬದಲಾಗುತ್ತಿರುವ ಪರಿಸರದಲ್ಲಿ ಗ್ರಾಮದೇವತೆಗಳು, ಆಧುನೀಕರಣ ಗೊಳ್ಳುತ್ತಿರುವ ಆಹಾರ ಪದ್ಧತಿಯಲ್ಲಿ ಬದಲಾವಣೆ, ಆಡುಭಾಷೆಯಲ್ಲಿ ಬದಲಾವಣೆ, ಸ್ತ್ರೀದೇವತೆಯೊಡನೆ ಪುರುಷ ದೇವರ ನಿರ್ಮಾಣ, ಗ್ರಾಮೀಣ ವಾದ್ಯಗಳು ಮರೆಯಾಗುತ್ತಿರುವುದು ಮುಂತಾದ ವಿಷಯಗಳ ಬಗ್ಗೆ ಬಹಳ ಸೂಕ್ಷ್ಮವಾಗಿ ವಿಮರ್ಶಿಸಿ ವಿವರಿಸಿದ್ದಾರೆ.

**ಕೆ.ಆರ್.ಕೃಷ್ಣಮೂರ್ತಿ : ಜೀವದ ಉತ್ಪತ್ತಿ ಮತ್ತು ದೇವರು**

ಈ ಕಿರು ಹೊತ್ತಿಗೆ ನಿಸರ್ಗದಲ್ಲಿ ಜೀವಿಯ ಉಗಮ ಮತ್ತು ವಿಕಾಸದ ಕಥಾನಕವನ್ನು ಬಿಂಬಿಸುತ್ತದೆ. ಎರಡು ಪ್ರಮುಖ ಭಾಗಗಳಲ್ಲಿ ವಿಭಾಗಿಸಲ್ಪಟ್ಟಿರುವ ಈ ಕೃತಿಯು ದೇವರುಗಳ ಅಥವಾ ದೇವಾಲಯಗಳ ಕುರಿತಾದ ಅಧ್ಯಯನಕ್ಕೆ ಮಹತ್ವದ ಮಾರ್ಗದರ್ಶಿಯಾಗಿದೆ ಮೊದಲ ಭಾಗದಲ್ಲಿ ನಿಸರ್ಗದಲ್ಲಿ ಭೂಮಿಯ ಉಗಮ ಹಾಗೂ ಭೂಮಿಯಲ್ಲಿ ಜೀವಸಂಕುಲದ ಉಗಮ ಹೇಗಾಯಿತೆಂಬುದನ್ನು ಹಂತಹಂತವಾಗಿ ಸಂಕ್ಷಿಪ್ತವಾಗಿ ತಿಳಿಸಲಾಗಿದೆ. ಎರಡನೆಯ ಭಾಗದಲ್ಲಿ ದೇವರ ಸೃಷ್ಟಿಯನ್ನು ಕುರಿತು ಚರ್ಚಿಸಲಾಗಿದೆ. ನಾಗರೀಕತೆಯ ವಿವಿಧ ಹಂತಗಳನ್ನು ತಲುಪಿ ಆಧುನೀಕತೆಯ ತುತ್ತತುದಿಯಲ್ಲಿರುವ ಮಾನವನಿಗೆ ದೈವದ ಮೇಲಿರುವ ಭಯ ನಂಬಿಕೆಗಳು ಕೇವಲ ಅವನು ಭಯದಿಂದ ನಿರ್ಮಿಸಿಕೊಂಡವು ಎಂಬುದನ್ನು ಈ ಕಿರು ಹೊತ್ತಿಗೆಯಲ್ಲಿ ಚರ್ಚಿಸಲಾಗಿದೆ. ಪ್ರಾಕೃತಿಕ ಶಕ್ತಿಗಳಿಂದ ಒದಗುವ ಕಂಟಕಗಳಿಂದ ಸಮಾದಾನ ಹೊಂದಲು ದೇವನರನ್ನು ಸದಾ ತನ್ನ ಬಳಿಯಲ್ಲಿಯೇ ಉಳಿಸಿಕೊಳ್ಳುವ ಪ್ರಯತ್ನ ಮಾಡಿದನು ತನ್ನಲ್ಲಿರುವ ಆತ್ಮದ ಕಲ್ಪನೆಗೆ ದೈವವನ್ನು ಕಲ್ಪಿತ ರೂಪದಲ್ಲಿ ಸೃಷ್ಟಿಸಿಕೊಂಡ ಮಾನವ ವಿಕಾಸ

ಹೊಂದಿದಂತೆಲ್ಲಾ ಕಂದಾಚಾರಗಳಿಗೆ ಕಟ್ಟುಬಿದ್ದು ಹಲವು ಕೋಮುಗಳಾಗಿ, ಜಾತಿ–ಪಂಗಡಗಳಾಗಿ ವಿಭಾಗಿಸಿಕೊಂಡು ದೇವರಿಗೆ ಮೂರ್ತರೂಪವನ್ನು ಕೊಡಲು ಪ್ರಾರಂಭಿಸಿದುದರ ಫಲವೇ ಮೂರ್ತಿಪೂಜೆಯ ಅಸ್ತಿತ್ವಕ್ಕೆ ಕಾರಣವಾಯಿತು. ಮನುಷ್ಯ ಮನೆಗಳನ್ನು ಕಟ್ಟಿ ವಾಸಮಾಡುವಂತೆ ದೇವರುಗಳಿಗೂ ಮಂದಿರಗಳನ್ನು ನಿರ್ಮಿಸಿದ ಇಂದು ದೇವಾಲಯಗಳು ಧಾರ್ಮಿಕ ಜಾಡ್ಯ ನಂಬಿಕೆಗಳಿಂದಾಗಿ ಸಂಕುಚಿತ ಸಂಸ್ಕೃತಿಯನ್ನು ಬೆಳಸಿಕೊಂಡು ಹಲವು ಕಟ್ಟುಕಟ್ಟಳೆಗಳಿಂದ ಹಲವು ಧರ್ಮ–ಜಾತಿ–ಮತಗಳಿಗೆ ಕಾರಣವಾಗಿವೆ.

**ಪ್ರೊ.ಕೆ.ಎಸ್.ರಂಗಪ್ಪ (ಪ್ರ.ಸಂ.) : ಮೈಸೂರು ದರ್ಶನ ಸಂಪುಟ–1**

ಈ ಕೃತಿಯಲ್ಲಿ ಎನ್.ಎಸ್.ತಾರಾನಾಥರು 'ಅರಮನೆ ದೇವಾಲಯಗಳು' ಎಂಬ ಲೇಖನವನ್ನು ಮೈಸೂರು ಅರಮನೆಯ ಒಳಗೆ ಮತ್ತು ಹೊರಗೆ ಇರುವಂತಹ ದೇವಾಲಯಗಳಿಗೆ ಸಂಬಂಧಿಸಿದ ಮಾಹಿತಿಯನ್ನು ನೀಡಿದ್ದಾರೆ. ವಿವಿಧ ದೇವಾಲಯಗಳ ಗೋಪುರದ ಔನತ್ಯ, ವಾಸ್ತು ಸೌಂದರ್ಯಗಳಿಂದ ಅರಮನೆಯ ಹೊರ ಆವರಣ ವಿಜೃಂಭಿಸುತ್ತದೆ. ಈ ದೇವಾಲಯಗಳಲ್ಲಿ ಶಿಲ್ಪ, ಭಿತ್ತಿಚಿತ್ರ, ಶಾಸನ, ಐತಿಹ್ಯಗಳಿವೆ, ಆಭರಣಗಳು ಅಭ್ಯಾಸಗಳು ಇವೆ. ಸ್ವಾತಂತ್ರ್ಯೋತ್ತರ ಕಾಲದ ಜಯಚಾಮರಾಜೇಂದ್ರರಿಂದ ನಿರ್ಮಾಣವಾದ ದೇವಸ್ಥಾನಗಳಿವೆ. ದ್ರಾವಿಡ, ಹೊಯ್ಸಳ, ವಿಜಯನಗರ ಶೈಲಿಗಳ ನಿದರ್ಶನಗಳಿವೆ. ಯದುರಾಯರ, ರಾಜ ಒಡೆಯರ, ಚಿಕ್ಕದೇವರಾಜರ, ಕಂಠೀರವ ನರಸರಾಜರ, ಮುಮ್ಮಡಿ ಕೃಷ್ಣರಾಜರ, ಜಯಚಾಮರಾಜರ ಜೀವನ ವೃತ್ತಾಂತರಗಳೊಂದಿಗೆ ಬೆರೆತಿರುವ ರಚನೆಗಳಿವೆ. ಒಟ್ಟಿನಲ್ಲಿ ಕಾಲ, ಕಲೆ, ಶೈಲಿಗಳ ದೃಷ್ಟಿಗಳಿಂದ ಪ್ರಾಚೀನ ನವೀನಗಳ ಸಂಗಮವಿರುವಂತೆ, ಪುನಃಸ್ಥಾಪನೆ, ಪುನರುಜ್ಜೀವಕತೆಗಳೂ ಇವೆ. ಅರಮನೆಯ ಒಳಹೊರಗೆ ಇರುವ ದೇವಾಲಗಳ ಕಾಲ, ನಿರ್ಮಾಣ ಶೈಲಿ ಹಾಗೂ ಅವುಗಳಿಗೆ ಸಂಬಂಧಿಸಿದ ಹಲವು ವೈಶಿಷ್ಟ್ಯಗಳು ಇವೆ.

ಇದೇ ಕೃತಿಯಲ್ಲಿ 'ನಗರದ ದೇವಾಲಯಗಳು' ಎಂಬ ಲೇಖನವನ್ನು ಬಿ.ವಿ.ಸುಧಾಮಣಿಯವರು ಮೈಸೂರು ನಗರಕ್ಕೆ ಸಂಬಂಧಿಸಿದಂತೆ ಇರುವ ದೇವಾಲಯಗಳನ್ನು ಪಟ್ಟಿ ಮಾಡುವುದರ ಜೊತೆಗೆ ಅವುಗಳ ಛಾಯಾಚಿತ್ರವನ್ನು ಸಹ ನೀಡಿದ್ದಾರೆ. ಅರಮನೆ ನಗರ, ಸಾಂಸ್ಕೃತಿಕ ನಗರ, ಪಾರಂಪರಿಕ ನಗರ ಎನಿಸಿಕೊಂಡಿರುವ ಮೈಸೂರು 'ದೇವಾಲಯಗಳ ನಗರ'ವೂ ಆಗಿದೆ. ಇಲ್ಲಿ ಪ್ರಾಚೀನಕಾಲದಿಂದ ಇಂದಿನವರೆಗೆ ನಿರ್ಮಿಸಿರುವ ದೇಗುಲಗಳು ಗಣನೀಯ ಸಂಖ್ಯೆಯಲ್ಲಿವೆ. ಮೈಸೂರು ಜಿಲ್ಲಾ ಗೆಸೆಟಿಯರ್‌ನಲ್ಲಿ ದಾಖಲಿಸಿರುವಂತೆ 1966ರಲ್ಲಿ ಮೈಸೂರು ನಗರದಲ್ಲಿ 196 ದೇವಾಲಯಗಳಿದ್ದವು. ಅವುಗಳಲ್ಲಿ 44 ಶೈವ, 23 ವಿಷ್ಣು, 27

ರಾಮ, 11 ಆಂಜನೇಯ, 11 ಸಿದ್ದಪ್ಪಾಜಿ ಹಾಗೂ 47 ವಿವಿಧ ಶಕ್ತಿ ದೇವತೆಗಳು. ಇವುಗಳಲ್ಲಿ ಬೇರೆ ಬೇರೆ ಜಾತಿವರ್ಗಗಳಿಗೆ ಸೇರಿದ ದೇವಾಲಯಗಳೂ ಸೇರಿವೆ. ಹಳೆಯ ದೇವಾಲಯಗಳು ಹಾಗೂ ಹೊಸ ದೇವಾಲಯಗಳು ಕೂಡ ಜಾನಪದೀಯ ನೆಲೆಯ ಹಲವಾರು ಅಂಶಗಳಿಂದ ಕೂಡಿದ್ದು ಅದಕ್ಕೆ ಜಾನಪದೀಯತೆಯ ಅಂಶವೇ ಪ್ರಮುಖವಾದುದಾಗಿದ್ದು, ದೇವರ ಮೇಲಿನ ನಂಬಿಕೆಗೆ ಹಾಗೂ ಮಾನವ ಎಷ್ಟೇ ಬುದ್ಧಿಜೀವಿಯಾದರೂ ಅವನಿಗೂ, ಅವನ ಬುದ್ಧಿಗೂ ನಿಲುಕದ ಒಂದು ಶಕ್ತಿ ಅಗೋಚರವಾಗಿರುವುದಂತು ಸತ್ಯ.

## ಪ್ರೊ.ಸಾ.ಕೃ.ರಾಮಚಂದ್ರರಾವ್ : ಭಾರತದ ದೇವಾಲಯಗಳ ನೆಲೆ–ಹಿನ್ನೆಲೆ

ಲೇಖಕರು 1925–2006ರ ತಲೆಮಾರಿನ ಪ್ರಖ್ಯಾತ ವಿದ್ವಾಂಸರು, ಚಿಂತಕರು, ಸಂಗೀತಜ್ಞರು, ಕಲಾಕಾರರು, ಪ್ರಬಂಧಕಾರರು ಹಾಗೂ ಉತ್ತಮ ವಾಗ್ಮಿಗಳಾಗಿದ್ದರು. ಇವರು ಭಾರತದ ಇತಿಹಾಸ, ಸಾಹಿತ್ಯ, ಸಂಸ್ಕೃತಿಯ ಬಗ್ಗೆ ಅಧ್ಯಯನ ಮಾಡಿ ವಿಶಿಷ್ಟತೆಯನ್ನು ಪಡೆದಿದ್ದಾರೆ. ಈ ನಿಟ್ಟಿನಲ್ಲಿ ಹೊರ ಬಂದ ಕೃತಿಗಳಲ್ಲಿ ಭಾರತೀಯ ದೇವಾಲಯಗಳ ನೆಲೆ, ಹಿನ್ನೆಲೆ ಕೃತಿಯು ಒಂದಾಗಿದೆ. ಭಾರತೀಯ ದೇವಾಲಯಗಳ ತಾತ್ಪರ್ಯವನ್ನು ಬಹುಮಟ್ಟಿಗೆ ಜನರು ಅರಿಯರು ಆದ್ದರಿಂದ ದೇವಾಲಯಗಳ ಬಗ್ಗೆ ತಪ್ಪುಕಲ್ಪನೆಯಲ್ಲಿ ತೊಡಗಿರುತ್ತಾರೆ. ಹಾಗೂ ದೇವಾಲಯಗಳ ವಾಸ್ತುಶಿಲ್ಪ, ಇತಿಹಾಸ, ಸಾಮಾಜಿಕ ನೆಲೆ, ಅಲ್ಲದೆ ದೇವಾಲಯಗಳ ವಿವಿಧ ರೂಪರೇಷೆಗಳು ಇವೆಲ್ಲದರ ಬಗ್ಗೆ ಇತ್ತೀಚಿನ ದಿನಗಳಲ್ಲಿ ಮರೆಯಾಗುತ್ತಿರುವುದು ಸಹಜವೇ ಆಗಿದೆ. ದೇವಾಲಯಗಳ ನಿರ್ಮಾಣ ಅಲ್ಲಿ ನಡೆಯುವ ಆಚಾರ ವಿಚಾರಗಳ ಬಗ್ಗೆ ಕುರಿತಾದ ಎಲ್ಲಾ ಜಾಡನ್ನು ತಿಳಿಸುವ ಪ್ರಯತ್ನವನ್ನು ರಾಮಚಂದ್ರರಾವ್ ಮಾಡಿದ್ದಾರೆ. ದೇವಾಲಯಗಳ ಸಾಂಕೇತಿಕ ಸ್ವರೂಪವನ್ನು, ಆಧ್ಯಾತ್ಮಿಕ ಪ್ರಯೋಜನವನ್ನು ಕುರಿತು ವಿಚಾರ ಮಾಡಿದ್ದಾರೆ.

## ಅಧ್ಯಯನ ವಿಧಾನ

'ಮೈಸೂರು ನಗರದ ಪಾರಂಪರಿಕ ದೇವಾಲಯಗಳ ಜಾನಪದೀಯ ಅಧ್ಯಯನ' ಈ ವಿಷಯವು ಜಾನಪದೀಯ ಮತ್ತು ಸಾಂಸ್ಕೃತಿಕ ನೆಲೆಯಿಂದ ರೂಪುಗೊಂಡಿದ್ದು, ಇಲ್ಲಿ ಒಂದೇ ಭೌಗೋಳಿಕ ಹಿನ್ನೆಲೆಯಲ್ಲಿರುವ ಹಿಂದೂ ದೇವಾಲಯಗಳಲ್ಲಿನ, ಜಾನಪದೀಯ ಸಂಸ್ಕೃತಿಯ ಮಜಲುಗಳನ್ನು ಅಧ್ಯಯನಕ್ಕೊಳಪಡಿಸಿ ವಿಶ್ಲೇಷಿಸಲಾಗಿದೆ. ಈ ಮಹಾಪ್ರಬಂಧದ ರಚನೆಗೆ ಸಾಹಿತ್ಯದ ಅನುಷಂಗಿಕ ಆಕರಗಳ ಜೊತೆಗೆ ಮೂಲ ಆಕರವಾದ ಕ್ಷೇತ್ರಕಾರ್ಯದೊಂದಿಗೆ ವಕ್ತೃಗಳನ್ನು ಕೂಡ ಸಂದರ್ಭೋಚಿತವಾಗಿ ಬಳಸಿಕೊಳ್ಳಲಾಗಿದೆ. ಸಂದರ್ಶನ, ಕ್ಷೇತ್ರ

ಅವಲೋಕನ, ಜಾತ್ರೆ, ಉತ್ಸವ ಮತ್ತು ಹಬ್ಬಗಳಂದು ದೇವಾಲಯಗಳಿಗೆ ಭೇಟಿ ನೀಡುವ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ. ಜಾನಪದದ ಅನನ್ಯತೆಯನ್ನು ಉಳಿಸಿಕೊಂಡು ಬರುತ್ತಿರುವ ಮೈಸೂರು ನಗರವನ್ನು ಅಧ್ಯಯನ ಪ್ರದೇಶವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

ಮೈಸೂರು ನಗರದ ಪಾರಂಪರಿಕ ದೇವಾಲಯಗಳ ಜಾನಪದೀಯ ಅಧ್ಯಯನ' ಎಂಬ ವಿಷಯದಲ್ಲಿ ಈವರೆಗೆ ಸಂಶೋಧನಾ ಪ್ರಬಂಧಗಳು ಹೊರಬರದ ಕಾರಣ ಈ ಮಹಾಪ್ರಬಂಧವನ್ನು ರಚಿಸಲಾಗಿದೆ. ಇದುವರೆಗೆ ಪ್ರಕಟವಾಗಿರುವ ಲೇಖನಗಳು, ಗ್ರಂಥಗಳಲ್ಲಿ ನಗರದಲ್ಲಿರುವ ಪಾರಂಪರಿಕ ದೇವಾಲಯಗಳ ಜಾನಪದೀಯತೆಯ ಬಗ್ಗೆ ಹೆಚ್ಚಿನ ವಿವರಗಳಿರುವುದಿಲ್ಲ. ಈ ನಿಟ್ಟಿನಲ್ಲಿ ಈ ಅಧ್ಯಯನವು ಪ್ರತ್ಯೇಕವಾಗಿ ನಿಲ್ಲುತ್ತದೆ. ನಿರೂಪಣೆಯಲ್ಲಿ ಒಟ್ಟಾರೆಯಾಗಿ ಕಂಡುಕೊಂಡ ಅಂಶಗಳನ್ನು ಸಂಕ್ಷಿಪ್ತವಾಗಿ ಮತ್ತು ವಿಶ್ಲೇಷಣಾತ್ಮಕವಾಗಿ ನಿರೂಪಿಸಲಾಗಿದೆ.

# ಅಧ್ಯಾಯ–1

## ಮೈಸೂರು ನಗರದ ಸಾಂಸ್ಕೃತಿಕ ಹಿನ್ನೆಲೆ

ಸಾಂಸ್ಕೃತಿಕ ನಗರಿ, ಗಂಧರ್ವ ನಗರಿ, ಯೋಗ ನಗರಿ, ಶಾಂತಿ ಪ್ರಿಯರ ನಾಡು, ಶಿಕ್ಷಣಕಾಶಿ ಎಂದು ಹೆಸರುವಾಸಿಯಾಗಿರುವ ಮೈಸೂರು, ರಾಜ್ಯ ರಾಜಧಾನಿಯಿಂದ 140ಕಿಲೋ ಮೀಟರ್ ಅಂತರದಲ್ಲಿದ್ದು ವರ್ಷದ 365 ದಿನವೂ ಕೂಡ ಪ್ರವಾಸಿಗರನ್ನು, ಭಕ್ತರನ್ನು ಸ್ವಾಗತಿಸುವ ರಾಜ್ಯದ ಏಕೈಕ ನಗರವಾಗಿದೆ. ನಾಡಿನ ವೈವಿಧ್ಯ, ಪರಂಪರೆ, ವಾಸ್ತುಶಿಲ್ಪ, ಕಲೆ ಮತ್ತು ಸಂಸ್ಕೃತಿಗಳ ಸಮ್ಮಿಲನದೊಂದಿಗೆ ಮುಕುಟ ಮಣಿಯಂತಿರುವ ಮೈಸೂರು ಹಿಂದೆ ಮಹಿಷಾಸುರನ ಊರಾಗಿದ್ದು, ಅನೇಕ ಶತಮಾನಗಳ ಕಾಲ ಆಳ್ವಿಕೆ ನಡೆಸಿದ ಮೈಸೂರು ಮಹಾರಾಜರ ರಾಜಧಾನಿಯಾಗಿದೆ. ವಿಶ್ವವಿಖ್ಯಾತ ದಸರಾ ಜಂಬುಸವಾರಿಯಿಂದ ಮೈಸೂರು ನಗರ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುವಂತಾಗಿದೆ. ಹೀಗೆ ಸಾಂಸ್ಕೃತಿಕವಾಗಿ ಮೈಸೂರು ನಗರ ಮಹತ್ವವನ್ನು ಪಡೆದಿರುವುದರಿಂದ ಈ ಅಧ್ಯಾಯದಲ್ಲಿ ಮೈಸೂರು ನಗರದ ಹಿನ್ನೆಲೆಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

### 1.1 ಭೌಗೋಳಿಕ ಹಿನ್ನೆಲೆ

ಯಾವುದೇ ಒಂದು ಸಂಸ್ಕೃತಿ ಅಥವಾ ನಾಗರಿಕತೆಯ ಬೆಳವಣಿಗೆಯಲ್ಲಿ ಆ ಸ್ಥಳದ ಭೌಗೋಳಿಕ ಅಂಶಗಳು ಪ್ರಾಥಮಿಕ ಮತ್ತು ಪ್ರಧಾನ ಪಾತ್ರವಹಿಸುತ್ತವೆ. ಮೈಸೂರು ನಗರದಲ್ಲಿ ಪಾರಂಪರಿಕವಾಗಿ ನಡೆಸಿಕೊಂಡು ಬರುತ್ತಿರುವ ವಿಶ್ವವಿಖ್ಯಾತ 'ಮೈಸೂರು ದಸರಾ ಉತ್ಸವ ಹಾಗೂ ತಾಯಿ ಚಾಮುಂಡೇಶ್ವರಿ ನೆಲೆಗೊಂಡಿರುವ ಪವಿತ್ರ ಸ್ಥಾನ ಎಂಬ ಮುಖ್ಯವಾದ ಕಾರಣದಿಂದ ಮೈಸೂರು ನಗರ ಮಹತ್ವದ ಸ್ಥಾನ ಪಡೆದುಕೊಂಡಿದೆ.

'ದಿ ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್' 1919ರ ಪ್ರಕಾರ ಮೈಸೂರು ಪ್ರಾರಂಭಿಕ ವರ್ಷಗಳಲ್ಲಿ ಕಡೆಗಣಿಸಲ್ಪಡದೆ ಮಹತ್ವಪೂರ್ಣ ವ್ಯಕ್ತಿಗಳೊಡನೆ ಬಾಂಧವ್ಯ ಬೆಸೆದುಕೊಂಡಿತ್ತು. ಚಂದ್ರಗುಪ್ತ, ಅಶೋಕ ಮತ್ತು ನೆಪೋಲಿಯನ್ ಬೋನಾಪಾರ್ಟೆ, ಡ್ಯೂಕ್ ಆಫ್ ವೆಲ್ಲಿಂಗ್‌ಟನ್ ಜೊತೆಗೆ ಸಂಪರ್ಕ ಹೊಂದಿರುವುದಾಗಿ ತಿಳಿದು ಬರುತ್ತದೆ.[1] ಮೈಸೂರು ಎಂಬ ಹೆಸರು ಬರುವ ಹಿಂದಿನ ದಿನಗಳು ಮಹಿಷ ಮಂಡಲ, ಎರಮೈನಾಡು ಹೀಗೆ ಅನೇಕ ಹೆಸರುಗಳು ಪೂರ್ವದಲ್ಲಿ ಬಳಕೆಯಲ್ಲಿದ್ದಾಗಲೇ ಹಲವು ಸಾಮ್ರಾಜ್ಯಗಳ ಸಂಬಂಧಗಳಿದ್ದುದು ತಿಳಿಯುತ್ತದೆ.

ಖ್ಯಾತ ಇತಿಹಾಸಕಾರ ಸಿ ಹಯವದನರಾವ್ ಅವರು 1927ರಲ್ಲಿ ಮೈಸೂರು ಗೆಜೆಟಿಯರ್‌ನಲ್ಲಿ ಹೀಗೆ ಹೇಳುತ್ತಾರೆ. ಇಂದಿನ ಹಳೇ ಅಗ್ರಹಾರ, ಕೋಟೆ, ದೊಡ್ಡಪೇಟೆ ಮತ್ತು ಲಷ್ಕರ್ ಮೊಹಲ್ಲಾ ಇವು 19ನೇ ಶತಮಾನದ ಮೊದಲ ದಿನಗಳಲ್ಲಿದ್ದ ಮೈಸೂರಿನ ಭೂ ಗಡಿಗಳು.[2] ಎಂದು ಗುರುತಿಸಿದ್ದಾರೆ. ಆಗ ಮೈಸೂರು ನಗರದ ಭೂ ಗಡಿ ಅಥವಾ ವ್ಯಾಪ್ತಿ ಕಿರಿದಾಗಿತ್ತು. ಮೈಸೂರು ನಗರ ಬೆಳವಣಿಗೆಯ ಆರಂಭದಲ್ಲಿ ರಾಜ ಮಹಾರಾಜರನ್ನು ತನ್ನ ಮಡಿಲಿನಲ್ಲಿ ಪಡೆದಿದ್ದು, ಮೈಸೂರು ದಸರ ಮತ್ತು ಚಾಮುಂಡಿಬೆಟ್ಟವೇ ಅತ್ಯಂತ ಮಹತ್ವದ ಪಾತ್ರ ವಹಿಸಿದ್ದು, ಮೈಸೂರು ನಗರ ಸಾಂಸ್ಕೃತಿಕ ಮತ್ತು ಧಾರ್ಮಿಕ ಕ್ಷೇತ್ರವಾಗಿ ಬೆಳೆಯಲು ಅಗತ್ಯವಾದ ಪವಿತ್ರ ಪರಿಸರವನ್ನು ಒದಗಿಸಿದೆ ಎಂಬ ಅಂಶವನ್ನು ಇಲ್ಲಿ ಮರೆಯುವಂತಿಲ್ಲ. ಉದಾಹರಣೆ ಚಾಮುಂಡಿಬೆಟ್ಟದಂತಹ ಒಂದು ಸ್ಥಾನ ಬಲದಿಂದ ಗಟ್ಟಿಯಾಗಿ ನೆಲೆಯೂರಿ ಬಿಟ್ಟರೆ ಅನಂತರ ಬರುವ ಯಾವುದೇ ಏರುಪೇರುಗಳು ಆ ನೆಲೆಯನ್ನು ಸುಲಭವಾಗಿ ಅಲುಗಾಡಿಸಲಾರವು ಎಂಬ ಅನಿಸಿಕೆಯನ್ನು ಇದು ದೃಢಪಡಿಸುತ್ತದೆ.

ವಿಶ್ವವಿಖ್ಯಾತ ದಸರ ಸಂಸ್ಕೃತಿ ಮತ್ತು ಚಾಮುಂಡಿಬೆಟ್ಟದಲ್ಲಿರುವ ಚಾಮುಂಡಿ ತಾಯಿಯ ಪವಿತ್ರ ಸ್ಥಳದ ಬಲದಿಂದ ಧಾರ್ಮಿಕ ಮಹತ್ವ ಪಡೆದಿರುವ ಮೈಸೂರು ನಗರದ ಭೌಗೋಳಿಕ ಹಿನ್ನೆಲೆಯನ್ನು ಅದರ ಸ್ಥಾನ ನಿರ್ದೇಶನ, ಭೂ ವಿನ್ಯಾಸ, ವಾತಾವರಣ ಇಲ್ಲಿನ ನದಿ ನೀರಿನ ಸೌಕರ್ಯ, ಜನಸಂಖ್ಯೆ, ಪಟ್ಟಣ ರಚನೆ, ವ್ಯವಸಾಯ ಮತ್ತು ಇಲ್ಲಿನ ವಾಣಿಜ್ಯ ಅಂಶಗಳಿಗೆ ಮುಖ್ಯ ಗಮನ ನೀಡಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಸಮುದ್ರ ಮಟ್ಟದಿಂದ ಸುಮಾರು 762ಮೀ(2500ಅಡಿ)ಗಳಷ್ಟು ಎತ್ತರವಿರುವ ಮೈಸೂರು $12^0$ ಇಂದ $8^0$ ಉತ್ತರ ಅಕ್ಷಾಂಶ ಮತ್ತು $76^0$ ಇಂದ $12^0$ ಪೂರ್ವ ರೇಖಾಂಶಗಳನ್ನು ಪ್ರತಿನಿಧಿಸುತ್ತದೆ.[3] ಮೈಸೂರು ನಗರ ಆಗ್ನೇಯದಲ್ಲಿ ಮತ್ತು ಪೂರ್ವದಲ್ಲಿ ಟಿ.ನರಸೀಪುರ, ದಕ್ಷಿಣದಲ್ಲಿ ನಂಜನಗೂಡು, ಪಶ್ಚಿಮದಲ್ಲಿ ಹುಣಸೂರು, ನೈರುತ್ಯದಲ್ಲಿ ಹೆಗ್ಗಡದೇವನಕೋಟೆ, ಉತ್ತರದಲ್ಲಿ ಶ್ರೀರಂಗಪಟ್ಟಣ, ವಾಯುವ್ಯದಲ್ಲಿ ಕೃಷ್ಣರಾಜಸಾಗರ ಈ ತಾಲ್ಲೂಕುಗಳಿಂದ ಸುತ್ತುವರೆದಿದ್ದರೆ, ಮೈಸೂರು ನಗರದ ಗಡಿಗೆ ಸೇರಿದಂತೆ ದಕ್ಷಿಣದಲ್ಲಿ ಅಗ್ರಹಾರ, ಚಾಮುಂಡಿಪುರಂ, ದತ್ತನಗರ, ನೈರುತ್ಯದಲ್ಲಿ ಅಶೋಕಪುರಂ, ಜಯನಗರ, ಕುವೆಂಪುನಗರ, ಪಶ್ಚಿಮಕ್ಕೆ ಸರಸ್ವತಿಪುರಂ, ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿ, ವಾಯುವ್ಯದಲ್ಲಿ ಒಂಟಿಕೊಪ್ಪಲು, ಉತ್ತರದಲ್ಲಿ ಬನ್ನಿಮಂಟಪ, ರಾಜೇಂದ್ರನಗರ, ಈಶಾನ್ಯದಲ್ಲಿ ಗಾಂಧಿನಗರ, ಉದಯಗಿರಿ, ಎನ್.ಆರ್.ಮೊಹಲ್ಲಾ, ಪೂರ್ವದಲ್ಲಿ ಇಟ್ಟಿಗೆಗೂಡು, ವಸಂತಮಹಲ್, ಕೆ.ಹೆಚ್.ಬಿ.ಕಾಲೋನಿ, ಜ್ಯೋತಿನಗರ, ಈಶಾನ್ಯದಲ್ಲಿ

ಸಿದ್ಧಾರ್ಥನಗರ, ಲಲಿತಮಹಲ್, ಸಮುದ್ರ ಮಟ್ಟದಿಂದ ಸುಮಾರು 3489 ಅಡಿ ಎತ್ತರದಲ್ಲಿರುವ ಚಾಮುಂಡಿಬೆಟ್ಟ ಮುಂತಾದ ಸ್ಥಳಗಳನ್ನು ಕಾಣಬಹುದಾಗಿದೆ.

ಪ್ರಸ್ತುತ ಮೈಸೂರು ನಗರದಲ್ಲಿ ಜನರು ವಾಸವಿರುವ ಭೂ ವಿಸ್ತೀರ್ಣ–12,834.49 ಹೆಕ್ಟೇರ್, ಖಾಲಿ ನಿವೇಶನಗಳ ಭೂ ವಿಸ್ತೀರ್ಣ–4086.9 ಹೆಕ್ಟೇರ್, ವಾಣಿಜ್ಯ ಕಾರಣಕ್ಕಾಗಿ–875.85 ಹೆಕ್ಟೇರ್, ಕೈಗಾರಿಕೆಗಳಿಗಾಗಿ–1203 ಹೆಕ್ಟೇರ್, ಸಾರಿಗೆ ಮತ್ತು ಸಂಪರ್ಕಕ್ಕಾಗಿ–4997.82 ಹೆಕ್ಟೇರ್, ಸಾರ್ವಜನಿಕ ಉಪಯೋಗಕ್ಕಾಗಿ–132.8 ಹೆಕ್ಟೇರ್, ಸಾರ್ವಜನಿಕ ಮತ್ತು ಸ್ಥಳೀಯ ಸಂಸ್ಥೆಗಳಿಗೆ–3648.4 ಹೆಕ್ಟೇರ್, ಮುಕ್ತ ಸ್ಥಳಗಳಾಗಿ–3597.8 ಹೆಕ್ಟೇರ್, ಕೃಷಿಗಾಗಿ–283.45 ಮತ್ತು ಇತರೆ–84.79 ಹೆಕ್ಟೇರ್‌ಗಳಷ್ಟು ಒಟ್ಟು–31,745.5 ಹೆಕ್ಟೇರ್ ಭೂ ವಿಸ್ತೀರ್ಣವನ್ನು ಹೊಂದಿದೆ.

ದಕ್ಷಿಣ ಮತ್ತು ಆಗ್ನೇಯಕ್ಕೆ ಕೊಂಚ ಇಳಿಜಾರಾಗಿ ಉಳಿದಂತೆ ಸಮತಟ್ಟಾಗಿರುವ ಮೈಸೂರು ನಗರ ಬಹುತೇಕ ತಟ್ಟೆಯಾಕಾರದಲ್ಲಿರುವುದನ್ನು ಕಾಣಬಹುದು. ಬಯಲುಸೀಮೆಯ ಇತರೆಡೆಗಳಂತೆ ಇಲ್ಲಿಯೂ ಬೇಸಿಗೆ, ಮಳೆ, ಚಳಿಗಾಲಗಳನ್ನು ಗುರುತಿಸಬಹುದು. ಮಳೆಯ ಆಧಾರದಿಂದ ಹೇಳುವುದಾದರೆ ವರ್ಷದಲ್ಲಿ ಮಾರ್ಚ್ ಪ್ರಾರಂಭದಿಂದ ಮೇ ಅಂತ್ಯದವರೆಗೆ ಬಿಸಿಲು ಮತ್ತು ಶುಷ್ಕ ಹವೆಯಿಂದ ಕೂಡಿದ ಬೇಸಿಗೆಕಾಲ, ಜೂನ್ ಆರಂಭದಿಂದ ಸೆಪ್ಟೆಂಬರ್ ಅಂತ್ಯದವರೆಗೆ ನೈರುತ್ಯ ಮಾನ್ಸೂನ್ ಮಾರುತದ ಅವಧಿ ಅಥವಾ ಮುಂಗಾರು ಗುಡುಗು ಮತ್ತು ಮಿಂಚಿನಿಂದ ಕೂಡಿದ ಆಲಿಕಲ್ಲು ಮಳೆ ಬೀಳುತ್ತದೆ. ಅಕ್ಟೋಬರ್ ನವೆಂಬರ್ ತಿಂಗಳುಗಳು ಈಶಾನ್ಯ ಮಾರುತದ ಅವಧಿ ಅಥವಾ ಹಿಂಗಾರು ಹೆಚ್ಚು ಮಳೆ ಸುರಿದು ಕೆರೆಕಟ್ಟೆಗಳು ತುಂಬಿರುತ್ತವೆ. ಡಿಸೆಂಬರ್‌ನಿಂದ ಫೆಬ್ರವರಿವರೆಗೆ ಆರ್ದ್ರ ಹವೆಯಿಂದ ಸ್ವಚ್ಛವಾದ ಹೊಳಪಿನಿಂದ ಕೂಡಿದ ಚಳಿಗಾಲವನ್ನು ಗಮನಿಸಬಹುದು. ಇದು ವಾರ್ಷಿಕವಾಗಿ 89ಮಿ.ಮೀ.ನಷ್ಟು ಮಳೆ ಪಡೆಯುತ್ತದೆ. ಇಲ್ಲಿನ ಸಾಮಾನ್ಯ ಉಷ್ಣಾಂಶವು $11^0$ ಸೆಲ್ಸಿಯಸ್‌ನಿಂದ ಬೇಸಿಗೆ ಕಾಲದಲ್ಲಿ $38^0$ ಸೆಲ್ಸಿಯಸ್‌ವರೆಗೆ ಇರುತ್ತದೆ.

ಮೈಸೂರಿನಲ್ಲಿ ಮುಖ್ಯವಾಗಿ ಕಾವೇರಿ, ಕಪಿಲಾ, ಲಕ್ಷ್ಮಣತೀರ್ಥ ನದಿಗಳು ಕಂಡುಬರುತ್ತವೆ. ಕಾವೇರಿ ತಲಕಾವೇರಿಯಲ್ಲಿ ಹುಟ್ಟಿದರೆ, ಕಪಿಲಾ ಕೇರಳದ ವೈನಾಡಿನಲ್ಲಿ ಹುಟ್ಟುತ್ತದೆ. ಈ ನದಿಗಳೆಲ್ಲ ಮೈಸೂರಿನ ಮೂಲಕ ಹಾದು ಹೋಗುವುದರಿಂದ ಮೈಸೂರಿಗೆ ಹೆಚ್ಚಿನ ನೀರಾವರಿ ಸೌಕರ್ಯವನ್ನು ಒದಗಿಸಿಕೊಟ್ಟಿದೆ. ಈ ಪ್ರದೇಶದಲ್ಲಿ ಎಮ್ಮೆ, ಕುದುರೆ, ಕತ್ತೆ, ಮೊಲ, ಕುರಿ, ಕೋಳಿ, ಆಡು, ಹಸು, ಎತ್ತು, ನಾಯಿ ಮುಂತಾದವು ಸಾಮಾನ್ಯವಾದ ಸಾಕು

ಪ್ರಾಣಿಗಳಾದರೆ, ಚಿರತೆ, ಹುಲಿ, ಕರಡಿ, ನರಿ, ಜಿಂಕೆ, ತೋಳ, ಕಾಡುಹಂದಿ ಮುಂತಾದ ನಾನಾ ಬಗೆಯ ಕಾಡು ಪ್ರಾಣಿಗಳಿಂದ ಸಂಪತ್ತು ಸಮೃದ್ಧವಾಗಿದೆ.

ಮನುಕುಲದ ಪ್ರಮುಖ ಕಸುಬಾದ ವ್ಯವಸಾಯದ ಆವಿಷ್ಕಾರದಿಂದ ಅಲೆಮಾರಿ ಮಾನವ ಒಂದೆಡೆ ನಿಲ್ಲಲು ಅನುವಾಯಿತು. ಅಷ್ಟೇ ಅಲ್ಲದೆ ಅವನ ಆಲೋಚನಾ ಶಕ್ತಿ ಬೆಳೆಯಲು ಅವನು ಹದವಾದ ಸಂಸ್ಕೃತಿಯನ್ನು ರೂಪಿಸಿಕೊಳ್ಳಲು ಪ್ರೇರಣೆ ನೀಡಿತು. ಮೈಸೂರಿನಲ್ಲಿ ಹಿತಕರವಾದ ವಾಯುಗುಣ ಇರುವುದರಿಂದ ಇಂದಿಗೂ ಬಹುತೇಕ ರೈತರು ಪಾರಂಪರಿಕವಾಗಿ ಬಂದ ಸಾಂಪ್ರದಾಯಿಕ ಕಂಠಸ್ಥ ಮೂಲದ ವ್ಯವಸಾಯ ಕ್ರಮವನ್ನು ಅಳವಡಿಸಿಕೊಂಡು ಎಲ್ಲಾ ತರಹದ ಬೆಳೆಗಳನ್ನು ಬೆಳೆಯುತ್ತಾರೆ. ಮೈಸೂರು ಕೃಷಿ ಪ್ರಧಾನವಾದ ಜಿಲ್ಲೆಯಾಗಿದ್ದು ಇಲ್ಲಿ ಕೆಂಪು ಮಣ್ಣು, ಮರಳು ಮಣ್ಣು, ಲ್ಯಾಟರೈಟ್ ಮಣ್ಣು, ಕೆಂಪು ಜೇಡಿಮಣ್ಣು ಮತ್ತು ಕಪ್ಪು ಮಣ್ಣಿನಿಂದ ಕೂಡಿದೆ. ಈ ಭೂಮಿಯು ಹೆಚ್ಚು ಮಳೆ ಆಧಾರಿತ ಪ್ರದೇಶವಾಗಿದೆ. ಇಲ್ಲಿ ಪ್ರಮುಖವಾಗಿ ಬತ್ತ, ರಾಗಿ, ಜೋಳ, ಕಡಲೆ, ಹುರುಳಿ, ಅಲಸಂದೆ, ತೊಗರಿ ಮುಂತಾದ ಆಹಾರ ಬೆಳೆಗಳ ಜೊತೆಗೆ ವಾಣಿಜ್ಯ ಬೆಳೆಗಳಾದ ಹತ್ತಿ, ಹೊಗೆಸೊಪ್ಪು, ಕಬ್ಬು, ಹರಳು ಮುಂತಾದವು. ನಿಂಬೆ, ಸಪೋಟ, ಸೀಬೆ, ಹಲಸು, ಬಾಳೆ, ಮಾವು ಮುಂತಾದ ಹಣ್ಣುಗಳು ಮಲ್ಲಿಗೆ, ಗುಲಾಬಿ, ಸಂಪಿಗೆ, ಜಾಜಿ, ಕಾಕಡ, ಕನಕಾಂಬರ ಮುಂತಾದ ಹೂವುಗಳನ್ನು ಬೆಳೆಯುತ್ತಾರೆ. ಇಲ್ಲಿ ಗೃಹ ಕೈಗಾರಿಕೆಯಲ್ಲಿ ರೇಷ್ಮೆ ಕೃಷಿಯು ಮುಖ್ಯವಾಗಿದ್ದು, ಮೈಸೂರಿನಲ್ಲಿ ಕೇಂದ್ರೀಯ ರೇಷ್ಮೆ ಸಂಶೋಧನಾಲಯವಿದೆ. ಅಲ್ಲದೆ ಇಲ್ಲಿನ ನಂಜನಗೂಡು ರಸಬಾಳೆ, ಮೈಸೂರು ಮಲ್ಲಿಗೆ, ಮೈಸೂರು ವಿಳ್ಳೆದೆಲೆ, ಮೈಸೂರು ಪಾಕು ಮತ್ತು ಮೊಗರು ಬದನೆಕಾಯಿ ದೇಶ ವಿದೇಶಗಳಲ್ಲಿ ಹೆಸರುವಾಸಿಯಾಗಿದೆ.

ಪಾರಂಪರಿಕವಾಗಿ ಪ್ರಖ್ಯಾತವಾಗಿರುವ ಮೈಸೂರು ನಗರ ಹಲವು ಹಳ್ಳಿಗಳನ್ನು ತನ್ನ ಒಡಲಿನಲ್ಲಿ ಅಡಗಿಸಿಕೊಂಡಿರುವ ಸಾಂಸ್ಕೃತಿಕ ನಗರವಾಗಿದೆ. ನಾಗರಿಕ ಬದುಕಿನ ಮೇಲ್ಮೈ ಲಕ್ಷಣಗಳನ್ನು ಈ ನಗರ ಹೊಂದಿದ್ದರೂ ಹಳ್ಳಿಯ ಮಣ್ಣಿನ ಸೊಗಡು ವಾಸನೆಯನ್ನು, ತನ್ನ ತಾಜಾತನವನ್ನು ಉಳಿಸಿಕೊಂಡು ಬರುತ್ತಿರುವುದು ಒಂದು ಸೋಜಿಗವಾಗಿದೆ. ಮೈಸೂರು ನಗರ ಪ್ರದೇಶ ಬಹುಬೇಗ ಬೆಳವಣಿಗೆಗೆ ಹೊಂದಿಕೊಂಡರೂ ಇನ್ನೂ ಗ್ರಾಮೀಣ ವ್ಯಕ್ತಿತ್ವವನ್ನು ಉಳಿಸಿಕೊಂಡಿದೆ. ಮೈಸೂರು ನಗರದ ಸುತ್ತಲು ಇದ್ದ ಹಳ್ಳಿಗಳೆಲ್ಲವೂ ಮೈಸೂರಿಗೆ ಸೇರಿಹೋಗಿವೆ.

## 1.2 ಪೌರಾಣಿಕ ಮತ್ತು ಐತಿಹಾಸಿಕ ಹಿನ್ನೆಲೆ

ಪುರಾಣ ಮತ್ತು ಇತಿಹಾಸವು ಮಾನವನ ಉಗಮ ಮತ್ತು ವಿಕಾಸದ ಬಗೆಗೆ ತಿಳುವಳಿಕೆ ನೀಡುವುದರ ಮೂಲಕ ಪ್ರಾಚೀನ ಪರಂಪರೆಯ ಮೇಲೂ ಬೆಳಕನ್ನು ಚೆಲ್ಲುತ್ತದೆ. ಒಂದು ಸಮಾಜದ ಸರ್ವತೋಮುಖ ಅಭಿವೃದ್ಧಿಯ ಒಟ್ಟು ಚಿತ್ರಣವನ್ನು ನೀಡುವ ಐತಿಹಾಸಿಕ ಮತ್ತು ಪೌರಾಣಿಕ ಜ್ಞಾನ, ಮಾನವ ಜ್ಞಾನದ ಪೂರ್ಣತೆಗೆ ಅತ್ಯವಶ್ಯಕವಾಗಿದೆ. ಈ ಕಾರಣಗಳಿಂದ ಒಂದು ಪ್ರದೇಶದ ಕ್ಷೇತ್ರಕಾರ್ಯ ಅಧ್ಯಯನದಲ್ಲಿ ಪೌರಾಣಿಕ ಮತ್ತು ಐತಿಹಾಸಿಕ ಅಧ್ಯಯನವು ಪ್ರಮುಖ ಪಾತ್ರವಹಿಸುತ್ತದೆ.

ಮೈಸೂರಿನ ಪ್ರದೇಶಗಳಲ್ಲಿ ಇತಿಹಾಸ ಪೂರ್ವಕಾಲದ ನೆಲೆಗಳ ಶೋಧ ವಿರಳವಾಗಿದ್ದರೂ, ಮೈಸೂರು ತಾಲ್ಲೂಕಿನ ಹಳೆ ಶಿಲಾಯುಗದ ನಿವೇಶನಗಳಲ್ಲಿ ಮೈಸೂರು ನಗರವೂ ಒಂದು. ಹಾಗೆಯೇ, ತಾಮ್ರ ಯುಗದ ನಾಗರೀಕತೆಯಲ್ಲಿ ಈ ತಾಲ್ಲೂಕಿನ ಸೋಮನಹಳ್ಳಿ ಹಾಗೂ ವರಕೊಡು ಬೆಟ್ಟಗಳು ಮತ್ತು ನವ ಶಿಲಾಯುಗ ಹಾಗೂ ಕಬ್ಬಿಣ ಯುಗ ಸಂಸ್ಕೃತಿಗಳಿಗೆ ಆಯರಹಳ್ಳಿ, ಲಕ್ಷ್ಮೀಪುರ ಮತ್ತು ಮೈಸೂರು ನಗರಗಳು ನೆಲೆಯಾಗಿತ್ತೆಂದು ತಿಳಿದುಬರುತ್ತದೆ.[4]

ಕರ್ನಾಟಕ ರಾಜ್ಯದಲ್ಲಿ ಮೈಸೂರು ನಗರವು ಸಾಂಸ್ಕೃತಿಕ ನಗರ ಎಂದು ಹೆಸರುವಾಸಿಯಾಗಿದೆ. ಸ್ವಾತಂತ್ರ್ಯ ನಂತರ 1973ರಲ್ಲಿ ಕರ್ನಾಟಕ ರಾಜ್ಯ ಎಂದು ನಾಮಕರಣ ಆಗುವವರೆಗೂ ಮೈಸೂರು ರಾಜ್ಯ ಎಂದೇ ಹೆಸರನ್ನು ಹೊಂದಿತ್ತು. ಇದು ಮೈಸೂರಿನ ಮಹತ್ವವನ್ನು ಸೂಚಿಸುತ್ತದೆ. ಮೈಸೂರನ್ನು ಆಳಿದ ರಾಜವಂಶಗಳು ಅದರಲ್ಲೂ ನಾಲ್ವಡಿ ಕೃಷ್ಣರಾಜ ಒಡೆಯರು, ಸರ್.ಎಂ.ವಿಶ್ವೇಶ್ವರಯ್ಯ ಮತ್ತು ಅನೇಕ ದಿವಾನರುಗಳ ಸೇವೆಯು ಮೈಸೂರು ನಗರದ ಅಭಿವೃದ್ಧಿಗೆ ಕಾರಣವಾಗಿದೆ. ಮೈಸೂರು ನಗರವು ಭಾರತದಲ್ಲಿ ಮೊಟ್ಟ ಮೊದಲು ವಿದ್ಯುತ್ ಉತ್ಪಾದಿಸಿದ ಹಾಗೂ ಮೊದಲ ಮಹಿಳಾ ಕಾಲೇಜನ್ನು ಸ್ಥಾಪಿಸಿದ ಹೆಗ್ಗಳಿಕೆಗೆ ಪಾತ್ರವಾಗಿದೆ. ಮೈಸೂರು ನಗರದ ಚಾಮುಂಡಿಬೆಟ್ಟ, ಅರಮನೆ, ದಸರೆ, ಜಂಬೂಸವಾರಿ, ಬೃಂದಾವನ, ಮೃಗಾಲಯ, ರೇಷ್ಮೆಸೀರೆ, ಶ್ರೀಗಂಧದ ಕರಕುಶಲ ವಸ್ತುಗಳು ದೇಶ ವಿದೇಶಗಳಲ್ಲಿ ಪ್ರಸಿದ್ಧಿಯನ್ನು ಪಡೆದಿವೆ.

## ಪೌರಾಣಿಕ ಹಿನ್ನೆಲೆ

'ಮೈಸೂರು' ಪ್ರಾಚೀನ ಕಾಲದಿಂದಲೂ ಪ್ರಸಿದ್ಧಿಯನ್ನು ಪಡೆದಿದ್ದು ಇದರ ಹಿನ್ನೆಲೆಯಾಗಿ ಅನೇಕ ಕತೆ, ಪುರಾಣ, ಹಾಡುಗಳನ್ನು ಹೊಂದಿದೆ "ಮಹಿಷಾಸುರನೆಂಬ ರಾಕ್ಷಸ ಬ್ರಹ್ಮನನ್ನು ಕುರಿತು ತಪಸ್ಸು ಮಾಡಿ ಹೆಣ್ಣಿನಿಂದ ಮಾತ್ರ ತನಗೆ ಸಾವೆಂಬ ವರ ಪಡೆದು ಮಹಿಷಮಂಡಲವನ್ನಾಳುತ್ತಿದ್ದ. ಅವನ ಉಪಟಳವನ್ನು ಸಹಿಸಲಾಗದ ದೇವತೆಗಳು ತಮ್ಮೆಲ್ಲ ಶಕ್ತಿಯನ್ನು ಚಾಮುಂಡೇಶ್ವರಿಗೆ ನೀಡಿ ಆ ಮೂಲಕ ಮಹಿಷನನ್ನು ಸಂಹರಿಸಿದರೆಂದು ಹೇಳಲಾಗುತ್ತದೆ. ಮಹಿಷ ಮರ್ಧಿನಿ ಮೈಸೂರು ಅರಸರ ಮನೆದೇವರಾಗಿ ಇಂದಿಗೂ ಪೂಜಿಸಲ್ಪಡುತ್ತಿದ್ದಾಳೆ. ಮಹಿಷಮಂಡಲ, ಮಹಿಷಪುರಿ, ಮಹಿಶೂರು ಈಗಿನ ಮೈಸೂರಾಗಿದೆ.[5]

ಪುರಾಣ ಗ್ರಂಥಗಳಾದ ಮಾರ್ಕಂಡೇಯ ಮತ್ತು ಮತ್ಸ್ಯಪುರಾಣಗಳಲ್ಲಿ 'ಮಾಹಿಷಿಕ' (54–47–144–46), ಬ್ರಹ್ಮಾಂಡ ಪುರಾಣದಲ್ಲಿ 'ಮಹಿಸಿಕ' (16–55), ಪದ್ಮಪುರಾಣದಲ್ಲಿ 'ಮಾಹಿಷಿಕ' (1–6–54) ಹೀಗೆ ಮಹಿಷ ಪ್ರದೇಶವನ್ನು ಉಲ್ಲೇಖಿಸಲಾಗಿದೆ.[6] ವಾಯುನಾಮ ಪುರಾಣದಲ್ಲಿಯೂ ಈ ಹೆಸರನ್ನು ಕಾಣಬಹುದಾಗಿದೆ. ಪಾಣಿನಿಯ ವ್ಯಾಖ್ಯಾನಕಾರನಾದ ಕಾತ್ಯಾಯನ (ಕ್ರಿ.ಪೂ.400) ಹೇಳುವ 'ಮಹಿಷತ್' ಎಂಬುದು ಮೈಸೂರು ದೇಶವನ್ನು ಕುರಿತಿರಬಹುದು; ಏಕೆಂದರೆ ಆ ಹೆಸರು ಬರಲು ಅದು ಮಹಿಷಗಳೂ ತುಂಬಿರುವ ನಾಡು ಎಂಬುದೇ ಕಾರಣ ಎಂದು ಆತ ಹೇಳಿದ್ದಾನೆ.[7] ವಿಜಯನಗರ ಕಾಲದಲ್ಲಿ ಮತ್ತು ಈಚೆಗೆ ಮಯ್ಯೂರು/ಮೈಸೂರು ಎಂಬ ಮಾತು ಮಹಿಸೂರು, ಮಹಿಶೂರು ಇತ್ಯಾದಿ ಹಕಾರ ಘಟಿತ ರೂಪಗಳಲ್ಲಿ ಕಾಣತೊಡಗಿದಂತೆ ಕಾಣುತ್ತದೆ. ಅಲ್ಲದೆ ಪುರ, ನಗರ, ರಾಜ್ಯ, ಸಂಸ್ಥಾನ, ಮಹಾಸಂಸ್ಥಾನ ಮೊದಲಾದ ಮಹತ್ವದ್ಯೋತಕವಾದ ಮಾತುಗಳಲ್ಲಿಯೂ ಕಾಣಿಸಿಕೊಂಡಿದೆ.[8]

ಮೂರು ಸಾವಿರ ವರ್ಷಗಳ ಐತಿಹಾಸಿಕ ಪರಂಪರೆಯಲ್ಲಿ ಮಹಿಷಾಸುರನೆಂಬ ರಾಕ್ಷಸನ ಅವದಿಯಿಂದ ಮೈಸೂರು ನಗರದ ಐತಿಹಾಸಿಕ ಮೆರಗು ಆರಂಭವಾಗುತ್ತದೆ ಮತ್ತು ಕೆಲವು ಪ್ರಮುಖ ಘಟನಾವಳಿಗಳು ಈ ನಗರದಲ್ಲಿ ಜರಗುತ್ತವೆ. ಮಹಿಷಾಸುರನ ರಾಕ್ಷಸ ಕುಲವು ಮೂರು ಸಾವಿರ ವರ್ಷಗಳ ಅವಧಿಯ ಇತಿಹಾಸದಲ್ಲಿ ಅಜರಾಮರವಾದ ಸ್ಥಾನವನ್ನು ಪಡೆದಿದೆ ಎಂಬ ಅಂಶವು ಹಿಂದೂ ಪುರಾಣಗಳ ಪ್ರಕಾರ ತಿಳಿದುಬರುತ್ತದೆ.

## ಚಾರಿತ್ರಿಕ ಹಿನ್ನೆಲೆ

ಮೈಸೂರು ನಗರವು ಮೈಸೂರು ಎಂಬ ಹೆಸರಿನ ಹಿನ್ನೆಲೆಯಾಗಿ ತನ್ನ ಸ್ಥಳದ ಹೆಸರಿನಲ್ಲಿ ಪುರಾಣ ಇತಿಹಾಸದ ಜೊತೆಗೆ ಸಾಹಿತ್ಯದ ಗ್ರಂಥಗಳಲ್ಲಿ ಮಾಹಿಷಿಕ, ಮಾಹಿಷ್ಮತಿ, ಮಹಿಷಮಂಡಲ, ಮಹಿಷರಾಷ್ಟ್ರ, ಮಹಿಷ ವಿಷಯ ಇತ್ಯಾದಿ ಹೆಸರುಗಳಿಂದ ಪ್ರಸಿದ್ಧಿಯನ್ನು ಹೊಂದಿದೆ. ಇದರ ಹಿನ್ನೆಲೆಯು ವಿಶಿಷ್ಟವಾಗಿದೆ. ಪ್ರಾಚೀನ ಬೌದ್ಧ ಗ್ರಂಥದಲ್ಲಿ 'ಮಹಿಷರಾಷ್ಟ್ರ' ಎಂಬ ಹೆಸರಿದ್ದು, ಅದು ಮೈಸೂರಿಗೆ ಸಂಬಂಧಿಸಿದ್ದೆಂಬ ಅಭಿಪ್ರಾಯವಿದೆ. ಅಶೋಕ ಚಕ್ರವರ್ತಿಯು ಬೌದ್ಧ ಭಿಕ್ಷುಗಳನ್ನು ಮತ ಪ್ರಸಾರಕ್ಕೆ ಈ ಪ್ರದೇಶಗಳಿಗೆ ಕಳುಹಿಸಿದ್ದನೆಂದು ಹೇಳಲಾಗುತ್ತದೆ. ಅಂತೆಯೇ ತಮಿಳಿನ ಬಹು ಪ್ರಾಚೀನ ಗ್ರಂಥವೊಂದರಲ್ಲಿರುವ 'ಇರುಮೈನಾಡೇ' ಮಹಿಷಮಂಡಲ ಎಂದು ಅಭಿಪ್ರಾಯ ಪಡಲಾಗಿದೆ.

ಕರ್ನಾಟಕ ಇತಿಹಾಸವನ್ನು ಗಮನಿಸಿದಾಗ ಕ್ರಿ.ಪೂ.3ನೇ ಶತಮಾನದಲ್ಲಿ ಆಳುತ್ತಿದ್ದ ಮೌರ್ಯ ವಂಶಸ್ಥನಾದ ಅಶೋಕನು ಬೌದ್ಧ ಧರ್ಮದ ಪ್ರಸಾರಕ್ಕಾಗಿ ಥೇರ ಮಹಾದೇವನನ್ನು ಮಹಿಷ ಮಂಡಲಕ್ಕೆ ಕಳುಹಿಸಿದ್ದು ಅವನು ಇಲ್ಲಿ ಅನೇಕ ಜನರಿಗೆ ದೀಕ್ಷೆಯನ್ನು ನೀಡಿದ್ದನೆಂದು ಮಹಾವಂಶದಲ್ಲಿ ಉಲ್ಲೇಖವಾಗಿದೆ. ಅದೇ ರೀತಿ ಗಂಗ ವಂಶಸ್ಥರು, ತಲಕಾಡಿನ ಗಂಗರು ಎಂದೇ ಪ್ರಸಿದ್ಧರಾಗಿದ್ದು ಮೈಸೂರು ಜಿಲ್ಲೆಯ ತಲಕಾಡು ಇವರ ರಾಜಧಾನಿಯಾಗಿತ್ತು. "ಈ ವಂಶಸ್ಥರು ಕೋಲಾರ, ಬೆಂಗಳೂರು, ಮಂಡ್ಯ, ಮೈಸೂರು ಪ್ರದೇಶದಲ್ಲಿ ಇಂದಿಗೂ ವ್ಯವಸಾಯವನ್ನೇ ಅವಲಂಬಿಸಿ, ಕನ್ನಡವನ್ನೇ ಮಾತೃಭಾಷೆಯಾಗುಳ್ಳ ಹಾಗೂ ಅಧಿಕ ಸಂಖ್ಯೆಯಲ್ಲಿ ವಾಸಿಸುತ್ತಿರುವ ಗಂಗಡಿಕಾರ ಒಕ್ಕಲಿಗರ ಗುಂಪಿಗೆ ಸೇರಿದವರು ಆದ್ದರಿಂದ ಅವರ ರಾಜ್ಯಕ್ಕೆ ಗಂಗವಾಡಿ ಎಂದು, ಅವರ ಸಂತತಿಗೆ ಗಂಗರೆಂದು ಹೆಸರಾಯಿತೆಂಬ ಅಭಿಪ್ರಾಯವಿದೆ"[9]

ಮೈಸೂರನ್ನು ಯದುವಂಶದ ಮೈಸೂರು ಒಡೆಯರ್ ಸಂತತಿ ನೇರವಾಗಿ ಆಳ್ವಿಕೆ ನಡೆಸಿದ್ದು, ವಸಾಹತುಶಾಹಿ ಕಾಲದಲ್ಲಿ ಸಾಮಂತರಾಗಿ ಆಡಳಿತ ನಡೆಸಿದ್ದಾರೆ. ಮೈಸೂರು ಸಾಮ್ರಾಜ್ಯದ ಮೇಲೆ ಆಳ್ವಿಕೆ ನಡೆಸಿದ ಪ್ರಮುಖ ಸಾಮ್ರಾಜ್ಯಗಳೆಂದರೆ ಗಂಗರು, ಚೋಳರು, ಹೊಯ್ಸಳರು, ವಿಜಯನಗರ ಅರಸರು, ಮೈಸೂರು ಅರಸು ಮನೆತನಗಳು, ಹೈದರ್ ಆಲಿ, ಟಿಪ್ಪುಸುಲ್ತಾನ್ ಮತ್ತು ಬ್ರಿಟಿಷರು. ಕ್ರಿ.ಶ. 350ರಲ್ಲಿ ಮೈಸೂರು ಪ್ರದೇಶವು ಗಂಗರ ಆಡಳಿತಕ್ಕೆ ಒಳಪಟ್ಟಿತು. ನಂತರ 9ನೇ ಶತಮಾನದ ಆದಿ ಭಾಗದಲ್ಲಿ ಗಂಗರು ಮತ್ತು ರಾಷ್ಟ್ರಕೂಟರ ಅಧೀನಕ್ಕೆ ಒಳಗಾಗಿದ್ದರು. ಇದರ ಕುರುಹಾಗಿ ರಾಷ್ಟ್ರಕೂಟರ ದೊರೆ ದ್ರುವನ ಮಗ ಕಂಬಯ್ಯನ ಶಾಸನವು ಇಲ್ಲಿ ದೊರೆತಿದೆ. ಕ್ರಿ.ಶ.1004ರಲ್ಲಿ 1ನೇ ರಾಜ ರಾಜಚೋಳನು ನರಸೀಪುರದ

ಕಲಿಯೂರಿನ ಬಳಿ ಗಂಗರನ್ನು ಸಂಪೂರ್ಣವಾಗಿ ಸೋಲಿಸಿ ಗಂಗವಾಡಿಯನ್ನು ವಶಪಡಿಸಿಕೊಳ್ಳುವ ಮೂಲಕ ಮೈಸೂರಿನ ಮೇಲು ತನ್ನ ಅಧಿಪತ್ಯವನ್ನು ಸ್ಥಾಪಿಸಿದನು.[10] ರಾಜೇಂದ್ರಚೋಳ, ವೀರ ರಾಜೇಂದ್ರಚೋಳ, ಕುಲೋತುಂಗಚೋಳ ಇವರು ಈ ಪ್ರದೇಶದಲ್ಲಿ ಆಡಳಿತ ನಡೆಸಿದ ಪ್ರಮುಖ ಚೋಳ ದೊರೆಗಳೆಂದು ತಿಳಿದುಬರುತ್ತದೆ.

ಕ್ರಿ.ಶ. 11ನೇ ಶತಮಾನದಲ್ಲಿ ಮೈಸೂರಿನ ಸ್ಥಾಪನೆಯಾಯಿತು ಎಂಬುದು ವಿದ್ವಾಂಸರ ಅಭಿಪ್ರಾಯ. ಕ್ರಿ.ಶ.14ನೇ ಶತಮಾನದ ಕೊನೆಯ ಹೊತ್ತಿಗೆ ಒಡೆಯರ್ ವಂಶದ ಅರಸರು ಮೈಸೂರನ್ನು ಆಳಲಾರಂಭಿಸಿದರು. ಈ ವಂಶದ ಮೊದಲ ಅರಸ ಯದುರಾಯ. ಹಾಗಾಗಿ ಇವರ ವಂಶಕ್ಕೆ ಯದುವಂಶ ಎಂದು ಹೆಸರಾಯಿತು. ಮೊದಲಿಗೆ ವಿಜಯನಗರ ಸಾಮ್ರಾಜ್ಯದ ಭಾಗವಾಗಿದ್ದ ಮೈಸೂರು ಸಂಸ್ಥಾನ 1565ರಲ್ಲಿ ವಿಜಯನಗರ ಸಾಮ್ರಾಜ್ಯ ಪತನಾ ನಂತರ ಸ್ವತಂತ್ರವಾಯಿತು. ರಣಧೀರ ಕಂಠೀರವ ನರಸಿಂಹರಾಜ ಒಡೆಯರ್ ಮೈಸೂರು ಸಂಸ್ಥಾನವನ್ನು ವಿಸ್ತರಿಸಿದವರಲ್ಲಿ ಪ್ರಮುಖರು. 18ನೇ ಶತಮಾನದಲ್ಲಿ ಅರಸರ ಪ್ರಭಾವ ಕಡಿಮೆಯಾಗಿ ಹೈದರಾಲಿ ಮತ್ತು ಟಿಪ್ಪು ಸುಲ್ತಾನರು ಮೈಸೂರು ರಾಜ್ಯವನ್ನಾಳಿದರು. ಈ ಕಾಲದಲ್ಲಿ ಬಹುತೇಕ ಹಿಂದೂ ದೇವಾಲಯಗಳು ಬಹಳ ತೊಂದರೆಯನ್ನು ಅನುಭವಿಸಿದುದನ್ನು ಇತಿಹಾಸ ಹೇಳುತ್ತದೆ. ಅಲ್ಲದೇ ಮೈಸೂರು ಸಾಮ್ರಾಜ್ಯದ ರಾಜಧಾನಿ ಶ್ರೀರಂಗಪಟ್ಟಣ ಮತ್ತು ಮೈಸೂರು ನಗರಗಳ ನಡುವೆ ಬದಲಾಗುತ್ತಿತ್ತು. ಮೈಸೂರು ಸಂಸ್ಥಾನ ಆಧುನಿಕ ಕರ್ನಾಟಕದ ದಕ್ಷಿಣ ಭಾಗದ ಬಹುಭಾಗವನ್ನು ಒಳಗೊಂಡಿತ್ತು. ಕ್ರಿ.ಶ.1799ರಲ್ಲಿ ಟಿಪ್ಪುಸುಲ್ತಾನನನ್ನು ಸೋಲಿಸಿದ ನಂತರ ಬ್ರಿಟಿಷರು ಒಡೆಯರ್ ಮನೆತನವನ್ನು ಪುನಃ ಸ್ಥಾಪಿಸಿದರು. ಮೈಸೂರು ಬ್ರಿಟಿಷ್ ಸಾಮ್ರಾಜ್ಯದ ಅಧೀನದಲ್ಲಿ ಉಳಿಯಿತು. 1834ರಲ್ಲಿ ರಾಜಧಾನಿಯನ್ನು ಬೆಂಗಳೂರಿಗೆ ವರ್ಗಾಯಿಸಲಾಯಿತು. ಮೈಸೂರು ಸಂಸ್ಥಾನ 1947ರಲ್ಲಿ ಭಾರತ ಸ್ವಾತಂತ್ರ್ಯ ನಂತರ ಭಾರತದ ಗಣರಾಜ್ಯವನ್ನು ಸೇರಿ 1950ರಲ್ಲಿ 'ಮೈಸೂರು ರಾಜ್ಯ' ಎಂಬ ಹೆಸರು ಪಡೆಯಿತು. ಅನಂತರ ಈ ರಾಜ್ಯ 1956ರಲ್ಲಿ ಏಕೀಕರಣವಾಗಿ 'ವಿಶಾಲ ಮೈಸೂರು ರಾಜ್ಯ' ಎಂಬ ಹೆಸರು ಪಡೆಯಿತು. ಆ ಬಳಿಕ 1973ರಲ್ಲಿ 'ಕರ್ನಾಟಕ ರಾಜ್ಯ' ಎಂಬ ಹೆಸರು ಸ್ಥಿರವಾಯಿತು.

ಹೀಗೆ ಮೈಸೂರು ತನ್ನದೇ ಆದ ಸುದೀರ್ಘ ಇತಿಹಾಸವನ್ನು ಒಳಗೊಂಡಿದ್ದು ಸುಮಾರು 2000 ವರ್ಷಗಳ ಐತಿಹಾಸಿಕ ಪರಂಪರೆ, ಉದಾತ್ತ ಸಾಂಸ್ಕೃತಿಕ ಮೌಲ್ಯಗಳು ಹಾಗೂ ಕಲೆ ಮತ್ತು ವಾಸ್ತುಶಿಲ್ಪಗಳನ್ನು ಒಳಗೊಂಡು ಜನಪ್ರಿಯತೆಯನ್ನು ಪಡೆದಿದೆ.

## 1.3 ಧಾರ್ಮಿಕ ಹಿನ್ನೆಲೆ

ಪ್ರತಿಯೊಂದು ಧರ್ಮವು ತನ್ನದೆ ಆದ ಸಂಸ್ಕೃತಿ, ಸಂಪ್ರದಾಯ, ಆಚರಣೆ ವಿಧಿ–ವಿಧಾನಗಳನ್ನು ಬೆಳೆಸಿಕೊಂಡು ಬಂದಿದೆ. ತನಗಿಂತಲೂ ಮಿಗಿಲಾದ ಶಕ್ತಿಯೊಂದು ತನ್ನನ್ನು ನಿಯಂತ್ರಿಸುತ್ತದೆ ಎಂಬುದನ್ನು ಅನುಭವಗಳ ಮೂಲಕ ಅರಿತುಕೊಂಡ ಆದಿಮಾನವ ಅದರ ನಂತರವೂ ಅನುಭವಗಳ ಒತ್ತಾಸೆಯಿಂದ ವಿವಿಧ ರೀತಿಯ ಧಾರ್ಮಿಕ ಪರಿಭಾವಗಳನ್ನು ಬಳಸಿಕೊಂಡ. ಹೀಗೆ ಧಾರ್ಮಿಕ ಭಾವನೆಯು ನೆಲೆಗೊಂಡು ವಿವಿಧ ಧರ್ಮಗಳು ರೂಪುಗೊಂಡಿರುವುದನ್ನು ಕಾಣಬಹುದು. ಈ ಧಾರ್ಮಿಕ ಪರಿಕಲ್ಪನೆಗಳಿಗೆ ತಮ್ಮದೇ ಆದ ದೈವತ್ವವನ್ನು ಕಂಡುಕೊಂಡಿದ್ದಾರೆ. ಇದಕ್ಕೆ ಮೈಸೂರಿನಲ್ಲಿರುವ ವಿವಿಧ ಧರ್ಮಗಳು ಹೊರತಾಗಿಲ್ಲ.

ಮೈಸೂರು ಹಲವು ಧರ್ಮಿಯರ ನಾಡು ಮತ್ತು ವಿವಿಧ ಸಂಸ್ಕೃತಿಗಳ ಸಂಗಮವಾಗಿ ಬೆಳೆದು ಬಂದಿದೆ. ಹಿಂದೂ ಧರ್ಮದ ಆಸರೆಯಲ್ಲಿ ರೂಪುಗೊಂಡಿರುವ ಅದ್ವೈತ, ದ್ವೈತ ಪಂಥಗಳ ವೈದಿಕ ಧರ್ಮ, ಶೈವ, ಲಕುಲೀಶ, ಪಾಶುಪಥ ಮುಂತಾದ ಪಂಥಗಳನ್ನು ಖಂಡಿಸಿ ರೂಪುಗೊಂಡಿದೆ. ವೀರಶೈವ ಧರ್ಮ, ಅಹಿಂಸೆಯನ್ನೇ ಪರಮ ಧ್ಯೇಯವಾಗಿಟ್ಟುಕೊಂಡ ಜೈನಧರ್ಮ, ಹೊರ ದೇಶಗಳಿಂದ ಇಲ್ಲಿಗೆ ಪ್ರವೇಶಿಸಿ ಮಾನ್ಯತೆ ಪಡೆದುಕೊಂಡಿರುವ ಇಸ್ಲಾಂ, ಕ್ರೈಸ್ತ ಧರ್ಮಗಳೂ ದೇವರ ಮೇಲಿನ ನಂಬಿಕೆಯ ಅಡಿಪಾಯದ ಮೇಲೆ ನಿಂತಿರುವುದು ಗಮನಾರ್ಹವಾದ ಅಂಶವಾಗಿದೆ.

ಒಟ್ಟು ಜನಸಂಖ್ಯೆಯಲ್ಲಿ ಪ್ರತಿಶತ 80ರಷ್ಟಿರುವ ಜನಪದರು ಹಿಂದೂ ಧರ್ಮದ ಚೌಕಟ್ಟಿನಲ್ಲಿದ್ದೂ ವೈದಿಕ ಧರ್ಮದತ್ತ ಭಯ ಮಿಶ್ರಿತ ಗೌರವದಿಂದ ಕೈಮುಗಿದು, ತಮಗೆ ಪರಂಪರೆಯಿಂದ ರಕ್ತಗತವಾಗಿ ಉಳಿದು ಬಂದಿರುವ ಧರ್ಮಕ್ಕೆ ನಿಷ್ಠೆ ತೋರುತ್ತಾರೆ. ದೇವರ ವಿಗ್ರಹಗಳಿರುವ ದೇವಾಲಯಗಳು, ಮಸೀದಿಗಳು, ಚರ್ಚ್‌ಗಳು ಧಾರ್ಮಿಕತೆಯ ಕೇಂದ್ರ ಬಿಂದುಗಳಾಗಿವೆ. ಅಷ್ಟೆ ಅಲ್ಲದೇ ಚಾಮುಂಡೇಶ್ವರಿ ಮೈಸೂರಿನ ಅಧಿದೇವತೆ, ರಕ್ಷಣಾ ದೇವತೆಯಾಗಿದ್ದಾಳೆ.

ಮೈಸೂರಿನ ದಸರಾ ಪರಂಪರೆ ಮತ್ತು ಚಾಮುಂಡೇಶ್ವರಿ ದೇವಸ್ಥಾನದ ಭವ್ಯ ಇತಿಹಾಸ ಪಾರಂಪರಿಕವಾಗಿ ಬೆಳೆದು ಬಂದಿದೆ. ಚಾಮುಂಡೇಶ್ವರಿ ತಾಯಿ ಜನಪದರ ಅಧಿದೇವತೆಯಾಗಿ ನೆಲೆಗೊಂಡಿದ್ದಾಳೆ. ಜನರಿಗೆ ಹಿಂಸೆ ನೀಡುತ್ತಿದ್ದ ಮಹಿಷಾಸುರ ಎಂಬ ರಾಕ್ಷಸನನ್ನು ವಿಜಯ ದಶಮಿಯಂದು ಕೊಂದ ಮಹಿಷಾಸುರಾ ಮರ್ದಿನಿ ಚಾಮುಂಡೇಶ್ವರಿಯಾಗಿ ನೆಲೆಗೊಂಡ ಸ್ಥಳ

ಚಾಮುಂಡಿಬೆಟ್ಟ ಎಂಬುದು ಜನಪದರ ಧಾರ್ಮಿಕ ನಂಬಿಕೆ. ಮೈಸೂರು ನಗರದ ಕೇಂದ್ರ ಬಿಂದುವಿನಿಂದ ಕೊಂಚ ಆಗ್ನೇಯ ದಿಕ್ಕಿಗೆ ದಕ್ಷಿಣಾಭಿಮುಖವಾಗಿ ಈ ದೇವಾಲಯವಿದೆ. ಚಾಮುಂಡಿ ಹಬ್ಬವು ಈ ನಗರದಲ್ಲಿ ವಿಶೇಷವಾದ ನಾಡಹಬ್ಬವಾಗಿದೆ. ಅಷ್ಟೆ ಅಲ್ಲದೆ ಮಹಿಷಾಸುರನನ್ನು ಕೊಂದು ವಿಜಯ ಸಾಧಿಸಿದ ವಿಜಯ ದಶಮಿಯ ದಿನ ವಿಶ್ವವಿಖ್ಯಾತ ದಸರಾವನ್ನು ಆಚರಿಸಲಾಗುತ್ತದೆ. ಆನೆಯ ಮೇಲೆ 750ಕೆ.ಜಿ ತೂಕದ ಚಿನ್ನದ ಅಂಬಾರಿಯಲ್ಲಿ ಚಾಮುಂಡಿ ತಾಯಿಯ ಉತ್ಸವಮೂರ್ತಿಯನ್ನು ಇಟ್ಟು ನಗರದ ಅರಮನೆಯಿಂದ ಬನ್ನಿಮಂಟಪದವರೆಗೆ ವೈಭವಯುತವಾಗಿ ಮೆರವಣಿಗೆ ಮಾಡಲಾಗುತ್ತದೆ. ಅಲ್ಲದೆ ನಗರದ ಒಂಟಿಕೊಪ್ಪಲಿನಲ್ಲಿ ವೆಂಕಟರಮಣಸ್ವಾಮಿ ದೇವಸ್ಥಾನ, ನಾರಾಯಣಶಾಸ್ತ್ರಿ ರಸ್ತೆಯ ರಾಘವೇಂದ್ರಸ್ವಾಮಿ ದೇವಸ್ಥಾನ, ಕೋಟೆ ಆಂಜನೇಯಸ್ವಾಮಿ ಹಾಗೂ ನಗರದ ಬೀದಿ ಬೀದಿಯಲ್ಲೂ ಹಲವಾರು ದೇವಾಲಯಗಳಿದ್ದು, ಎಲ್ಲ ಹಬ್ಬಗಳನ್ನು ಆಚರಿಸಲಾಗುತ್ತದೆ.

ಹಿಂದೂ ದೇವಾಲಯಗಳು ಹಿಂದೂಗಳಿಗೆ ಪವಿತ್ರವಾದ ಸ್ಥಳವಾದರೆ, ಮುಸ್ಲಿಮರಿಗೆ ಮಸೀದಿಗಳೇ ಪವಿತ್ರ ತಾಣಗಳಾಗಿವೆ. ಮೈಸೂರು ನಗರದಲ್ಲಿ ಸುಮಾರು 45 ರಿಂದ 50 ಮಸೀದಿಗಳಿದ್ದು, ಮುಖ್ಯವಾಗಿ ಮೀರ್ ಮಹಮ್ಮದ್ ಮಸೀದಿ ಇದು ಮೈಸೂರು ನಗರದಲ್ಲೇ ಅತಿ ದೊಡ್ಡದು. ಇದು ನೂರಡಿ ರಸ್ತೆಯಲ್ಲಿದೆ. ಮೈಸೂರು ಬೆಂಗಳೂರು ರಸ್ತೆಯಲ್ಲಿನ ಯಾ ಅಲ್ಲಾಹ್ ಮತ್ತು ಫಿರ್‌ದೌಸ್ ಮಸೀದಿ, ದೊಡ್ಡ ಗಡಿಯಾರದ ಹತ್ತಿರದ ಖಾಕಿಷಾ ಮಸೀದಿ, ಮೀನಾ ಬಜಾರ್ ಹತ್ತಿರದ ಅಜಮ್ ಮಸೀದಿ, ಇರ್ವಿನ್ ರಸ್ತೆಯಲ್ಲಿನ ಜಾಮೀಯಾ ಮಸೀದಿ, ಹಾಲೈನ್ ಮೆಮ್ಮನ್ ಮಸೀದಿ ಶಿವರಾಂಪೇಟೆ, ಬನ್ನಿಮಂಟಪದಲ್ಲಿನ ಮಸ್ಜಿದ್ ಎ ಕೌಸರ್ ಮಸೀದಿ ಮುಂತಾದ ಕಡೆಗಳಲ್ಲಿ ಮಸೀದಿಗಳಿದ್ದು ಅವು ಮುಸ್ಲಿಮರ ಧಾರ್ಮಿಕ ಕೇಂದ್ರಗಳಾಗಿವೆ. ಮುಸ್ಲಿಮರು ಕೂಡ ರಂಜಾನ್, ಈದ್ ಮಿಲಾದ್‌ನಂತಹ ಪ್ರಸಿದ್ದ ಹಬ್ಬಗಳನ್ನು ಆಚರಿಸುವ ಮೂಲಕ ತಮ್ಮ ಧರ್ಮವನ್ನು ಪಾಲಿಸುವುದರಿಂದ ಕಷ್ಟಗಳು ನಿವಾರಣೆಯಾಗುತ್ತದೆ. ಜೀವನದಲ್ಲಿ ಬದಲಾವಣೆ ಉಂಟಾಗುತ್ತದೆ ಎಂಬ ಧಾರ್ಮಿಕ ಭಾವನೆ ಮತ್ತು ನಂಬಿಕೆಯನ್ನು ಹೊಂದಿದ್ದಾರೆ.

ರೋಮನ್ ಕ್ಯಾಥೋಲಿಕ್, ಪ್ರೊಟೊಸ್ಟೆಂಟ್ ಎಂಬ ಎರಡು ಪಂಥಗಳಿಗೆ ಸೇರಿದ್ದ ಪ್ರತ್ಯೇಕ ಚರ್ಚ್‌ಗಳಿದ್ದು ಕ್ರೈಸ್ತರ ಧಾರ್ಮಿಕ ಸ್ಥಳಗಳಾಗಿವೆ. ಇತಿಹಾಸ ಪ್ರಸಿದ್ಧಿಯಾದ ಮೈಸೂರಿನ ಅಶೋಕರಸ್ತೆಯ ಸೇಂಟ್‌ಫಿಲೋಮಿನಾ ಚರ್ಚ್ ನಗರದಲ್ಲಿನ ಕ್ರೈಸ್ತರೆಲ್ಲರಿಗೂ ಪವಿತ್ರ ಧಾರ್ಮಿಕ ಕೇಂದ್ರವಾಗಿದೆ. ಸಂತ ಬಾರ್ತಲೋಮಿಯ ಚರ್ಚ್ ಊಟಿರಸ್ತೆ, ಸಾಡೆಚರ್ಚ್ ತಿಲಕ್‌ನಗರ, ವೆಸ್ಲಿ ಮೆಮೊರಿಯಲ್ ಕೆಥಿಡ್ರೆಲ್ ಕೆ.ಎಸ್.ಆರ್.ಟಿ.ಸಿ ಬಸ್‌ಸ್ಟಾಂಡ್ ಎದುರು, ಹಾರ್ಡ್‌ವಿಕ್‌ಚರ್ಚ್

ವಾಣಿವಿಲಾಸರಸ್ತೆ, ಅಷ್ಟೇ ಅಲ್ಲದೆ ಮೈಸೂರು–ಬೆಂಗಳೂರು ರಸ್ತೆಯ ಛತ್ರಿಮರದ ಹತ್ತಿರ ಮತ್ತೊಂದು ಚರ್ಚ್ ಇದ್ದು, ಕ್ರೈಸ್ತರ ಧಾರ್ಮಿಕತೆಯನ್ನು ಪ್ರತಿಬಿಂಬಿಸುವ ಪವಿತ್ರ ಧಾರ್ಮಿಕ ತಾಣಗಳಾಗಿವೆ.

ಕರ್ನಾಟಕ ಸರ್ಕಾರದ ಮುಜರಾಯಿ ಇಲಾಖೆ ಮತ್ತು ಸಾರ್ವಜನಿಕ ಹಾಗೂ ಖಾಸಗಿ ಸಂಘ ಸಂಸ್ಥೆಗಳು ಪಾರಂಪರಿಕ ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿ, ಉಳಿಸುವ ಮತ್ತು ಸಂರಕ್ಷಿಸುವ ಪ್ರಯತ್ನವನ್ನು ಮಾಡುತ್ತಿವೆ. ಕರ್ನಾಟಕದಲ್ಲಿಯೇ ಸಾಂಸ್ಕೃತಿಕ ನಗರ ಎಂದು ಹೆಸರಾಗಿರುವ ಮೈಸೂರಿಗೆ ಪಾರಂಪರಿಕ ದೇವಾಲಯಗಳ ಕೊಡುಗೆ ಅಪಾರವಾಗಿದೆ.

ಮೇಲಿನ ಅಂಶಗಳಷ್ಟೆ ಅಲ್ಲದೆ ಹಬ್ಬ, ಜಾತ್ರೆ, ಉತ್ಸವ, ಮದುವೆ, ಸೇವೆಗಳು, ಹರಕೆ, ಕಾಣಿಕೆಗಳು ಮೈಸೂರಿನ ಧಾರ್ಮಿಕತೆಗೆ ಸಹಕಾರಿಯಾಗಿ ಧಾರ್ಮಿಕ ಪರಂಪರೆಯನ್ನು ಅನುಚಾನವಾಗಿ ಉಳಿಸಿಕೊಂಡು ಬಂದಿವೆ.

## 1.4 ಸಾಮಾಜಿಕ ಹಿನ್ನೆಲೆ

"ಮಾನವ ಸಮಾಜ ಜೀವಿ. ಇವನು ಸಮಾಜವಿಲ್ಲದೆ ಏಕಾಂಗಿಯಾಗಿ ಬಾಳಲಾರ ತನ್ನ ಅನಿಸಿಕೆಗಳನ್ನು ಮಾತಿನ ಮೂಲಕ ಸಮಾಜದ ಇತರ ಸದಸ್ಯರೊಡನೆ ಹಂಚಿಕೊಂಡು ಅವರೊಡನೆ ನಿಕಟವಾದ ಸಂಬಂಧವನ್ನು ಬೆಳೆಸಿಕೊಳ್ಳುತ್ತಾನೆ. ಈ ಪ್ರಯತ್ನದಲ್ಲಿ ವ್ಯಕ್ತಿ ಮತ್ತು ಸಮಾಜದ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ಎಲ್ಲಾ ಕಾರ್ಯಕಲಾಪಗಳು ಸಮಾಜದ ಕ್ರಿಯೆಗೆ ಕಾರಣವಾಗುತ್ತವೆ. ತನ್ನ ಈ ಎಲ್ಲ ಕಾರ್ಯಕಲಾಪಗಳು ಸಮಾಜದ ಚೌಕಟ್ಟಿನಲ್ಲಿಯೇ ನಡೆಯುವಂತೆ ಅವನು ಕಾಯ್ದುಕೊಳ್ಳುತ್ತಾನೆ"[11] ಮಾನವನು ಒಂದು ಸಮಾಜದಲ್ಲಿ ಜೀವಿಸುವಾಗ ಸಾಮಾಜಿಕ ಹಿನ್ನೆಲೆಯಲ್ಲಿ ಸಮಾಜದ ಕಟ್ಟುಪಾಡುಗಳಿಗೆ ಅನುಗುಣವಾಗಿಯೇ ಜೀವಿಸಬೇಕು. ಇಲ್ಲವಾದಲ್ಲಿ ಅವನನ್ನು ಆ ಸಮಾಜದಿಂದ ದೂರವಿಡುವಂತಹ ಘಟನೆಗಳು ಸಹ ಸಂಭವಿಸುತ್ತವೆ.

ಮೈಸೂರು ನಗರವು ಸುಸಂಸ್ಕೃತ, ಸುಸರ್ಜಿತವಾದ ಸಾಮಾಜಿಕ ಹಿನ್ನೆಲೆಯನ್ನು ಹೊಂದಿದೆ. ಎಲ್ಲಾ ಸಮಾಜದಂತೆಯೇ ಮೈಸೂರಿನಲ್ಲೂ ಸಹ ಮಾನವನಿಗೆ ಅವಶ್ಯಕವಾಗಿರುವ ಆಹಾರ, ವಸತಿ, ಶಿಕ್ಷಣ, ನೌಕರಿ, ಲೈಂಗಿಕತೆ, ಕುಟುಂಬ, ಧರ್ಮ, ಸಂಸ್ಕೃತಿ ಮುಂತಾದ ಸಾಮಾಜಿಕ ನಂಬಿಕೆ ಆಚರಣೆಗಳನ್ನು ಕಾಣಬಹುದಾಗಿದೆ.

ಮಾನವ ನಿರ್ಮಿತ ಸಂಸ್ಥೆಯಾದ ಸಮಾಜದ ವಿಧಿವಿಧಾನಗಳು ಮೇಲ್ನೋಟಕ್ಕೆ ಸರಳ ಮತ್ತು ಸಹಜ ಅನಿಸಿದರೂ ಇದರೊಳಗಿನ ಅಧ್ಯಯನಕ್ಕೆ ಆಳವಾಗಿ ಇಳಿದಂತೆ ಒಂದೊಂದೇ ಪದರಗಳು ತೆರೆದುಕೊಳ್ಳುತ್ತಾ ತನ್ನ ಜಟಿಲವಾದ ಸಂಕೀರ್ಣ ವ್ಯವಸ್ಥೆಯನ್ನು ಬಿಚ್ಚಿಕೊಡುತ್ತದೆ. ಇಂತಹ ಸಮಾಜದ ಸಾಮಾಜಿಕ ಅಧ್ಯಯನವನ್ನು ಒಂದು ಸ್ಥಳಕ್ಕೆ ಸೀಮಿತವಾದಂತೆ ಕೈಗೊಂಡರೂ ಕೂಡ ಆ ಅಧ್ಯಯನ ವಿಶಾಲವಾದ ದೃಷ್ಟಿಯಲ್ಲಿ ವ್ಯಾಪಕ ಸಮಾಜದ ಪ್ರತಿನಿಧಿಯಾಗಿ ನಿಲ್ಲುತ್ತದೆ ಎನ್ನುವುದು ಗಮನಾರ್ಹವಾಗಿದೆ.

ಮೈಸೂರು ನಗರ ಇಂದು ಸುಮಾರು 89,9228 ಜನಸಂಖ್ಯೆಯನ್ನು ಒಳಗೊಂಡು ನಗರ ಮಟ್ಟದಿಂದ ಮಹಾನಗರ ಅಥವಾ ಬೃಹತ್ ನಗರ ಮಟ್ಟಕ್ಕೂ ನಿರೀಕ್ಷೆಯಲ್ಲಿದೆ. ಜೊತೆಗೆ ನಾನಾ ಕಾರಣಗಳಿಂದ ಪ್ರತಿದಿನ ಇಲ್ಲಿಗೆ ಭೇಟಿಕೊಟ್ಟು ಹೋಗುವವರ ಸಂಖ್ಯೆಯೇ ಇಲ್ಲಿನ ಜನಸಂಖ್ಯೆಯ ಅರ್ಧ ಭಾಗದಷ್ಟಿರುತ್ತದೆ. ಮೈಸೂರು ನಗರದ ಸಾಮಾಜಿಕ ಜೀವನವನ್ನು ಕೌಟುಂಬಿಕ ವ್ಯವಸ್ಥೆ, ಜಾತಿ ವ್ಯವಸ್ಥೆ, ಔದ್ಯೋಗಿಕ ವ್ಯವಸ್ಥೆ ಮತ್ತು ಆಡಳಿತ ವ್ಯವಸ್ಥೆ ಎಂಬ ನಾಲ್ಕು ವಿಭಾಗಗಳನ್ನು ಮಾಡಿಕೊಳ್ಳಲಾಗಿದೆ. ಕುಟುಂಬವು ಸಾಮಾಜಿಕ ಜೀವನದಲ್ಲಿ ಹೊಂದಾಣಿಕೆಯ ಜೀವನ ನಡೆಸಲು ಆಧಾರವಾಗಿಸುವ ಅತ್ಯಂತ ಮುಖ್ಯವಾದ ಮೊದಲನೆಯ ಸಂಘಟಿತ ವ್ಯವಸ್ಥೆಯಾಗಿ ಬೆಳೆದು ಬಂದಿದೆ. ಸದಸ್ಯರ ಪಾಲನೆ, ಪೋಷಣೆ, ಅವರ ಆಹಾರ ಉಡುಗೆ–ತೊಡುಗೆಗಳ ನಿರ್ವಹಣೆ, ಕುಟುಂಬದ ಆಸ್ತಿಯ ರಕ್ಷಣೆ ಮತ್ತು ಸದಸ್ಯರ ಸಂಬಂಧಗಳ ಔಚಿತ್ಯದ ಬಗೆಗಿನ ಮೂಲಭೂತ ಭಾವನೆ ಇವುಗಳನ್ನು ಯಶಸ್ವಿಯಾಗಿ ಪೂರೈಸಲು ಪ್ರತಿಯೊಂದು ಕುಟುಂಬವು ಹಾತೊರೆಯುತ್ತದೆ.

ಒಗ್ಗಟ್ಟು ಮತ್ತು ಅಪ್ರಯತ್ನವಾಗಿ ಮಾಡಿದ ಸಾಂಘಿಕ ಸಂಘಟನೆಯಿಂದ ರೂಪುಗೊಂಡಿರುವ ಜಾತಿಪದ್ಧತಿಯು ಮೈಸೂರು ನಗರದ ಸಾಮಾಜಿಕ ಸ್ತರವಿನ್ಯಾಸದಲ್ಲಿ ತನ್ನದೇ ಆದ ವಿಶಿಷ್ಟವಾದ ಸ್ಥಾನವನ್ನು ಗಳಿಸಿಕೊಂಡಿದೆ. ಹಲವು ಸಮಾಜದ ಜನರನ್ನು ಒಳಗೊಂಡು ಉತ್ತಮ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿದೆ. ಇಲ್ಲಿನ ಜನರು ಶಾಂತಿ ಮತ್ತು ನೆಮ್ಮದಿಯಿಂದ ಯಾವುದೇ ಭಯವಿಲ್ಲದೆ ಬದುಕುವ ವಾತಾವರಣವು ಈ ನಗರದಲ್ಲಿದೆ. ಪ್ರವಾಸಿಗರಿಗೆ ಮೈಸೂರು ನಗರವೇ ಸ್ವರ್ಗ ಎಂದು ಹೆಸರಾಗಿದ್ದು, ಇಲ್ಲಿಯ ಅರಮನೆ, ದೇವಸ್ಥಾನಗಳು, ಉದ್ಯಾನವನಗಳು, ಪ್ರಾಣಿ ಸಂಗ್ರಾಹಾಲಯ, ಅರಣ್ಯಧಾಮ, ಪಾರಂಪರಿಕ ಕಟ್ಟಡಗಳು, ಚಾಮುಂಡಿಬೆಟ್ಟ ಮುಂತಾದವುಗಳನ್ನು ನೋಡಲು ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿನೀಡುತ್ತಾರೆ.

ಬ್ರಹ್ಮನ ಮುಖದಿಂದ ಉದ್ಭವರಾದವರೆಂದು ಹೇಳುತ್ತಾ ಭಗವದ್ಗೀತೆಯಲ್ಲಿ ಉಲ್ಲೇಖಿಸಲ್ಪಟ್ಟಿರುವ ವರ್ಣಾಶ್ರಮ ಧರ್ಮದ ಪ್ರಕಾರ ಮೊದಲಿನಿಂದಲೂ ಅತ್ಯುತ್ತಮ ಸಾಮಾಜಿಕ ಸ್ಥಾನಮಾನ ಪಡೆದುಕೊಂಡು ಬಂದಿರುವ ಬ್ರಾಹ್ಮಣರಿಗೆ ಈಗಲೂ ಆ ಸ್ಥಾನಕ್ಕೆ ಚ್ಯುತಿ ಬಂದಿಲ್ಲ. ಇವರು ಮೈಸೂರು ನಗರದ ಅಗ್ರಹಾರದಲ್ಲಿ ಅಧಿಕವಾಗಿ ಕಂಡುಬರುತ್ತಾರೆ. ಇವರಲ್ಲಿ ಪ್ರಮುಖವಾಗಿ ಎರಡು ವಿಧ ಒಂದು ಮಾಧ್ವರು ಮತ್ತೊಂದು ಸ್ಮಾರ್ತರು, ವೈಷ್ಣವರು ಆ ನಂತರದಲ್ಲಿ ಬಂದವರು. ಇವರು ಪೂಜಾರಿಗಳಾಗಿ, ಉನ್ನತ ಅಧಿಕಾರಿಗಳಾಗಿ, ಕಾರ್ಮಿಕ ವಲಯದಲ್ಲಿ ಉನ್ನತ ಹುದ್ದೆಯಲ್ಲಿದ್ದು ಉತ್ತಮ ಜೀವನ ನಡೆಸುತ್ತಿದ್ದಾರೆ. ಇವರಿಗೆ ಗೋತ್ರ ಪ್ರಮುಖವಾಗಿ, ಗಂಡು ಮಕ್ಕಳಿಗೆ 8ವರ್ಷ ತುಂಬಿದ ಬಳಿಕ ಉಪನಯನ ಮಾಡುವುದಕ್ಕೆ ವಿಶೇಷ ಪ್ರಾಧಾನ್ಯತೆಯನ್ನು ಕೊಡುತ್ತಾರೆ.

ವೈಶ್ಯರು ತಮ್ಮ ವ್ಯವಹಾರಿಕ ಚತುರತೆಗೆ ವ್ಯಾಪಾರಿ ಮನೋಭಾವಕ್ಕೆ ಪ್ರಸಿದ್ಧರಾಗಿದ್ದಾರೆ. ಚಿನ್ನ, ಬೆಳ್ಳಿ, ಪಾತ್ರೆ, ದಿನಸಿ ಮುಂತಾದ ವ್ಯಾಪಾರ ಇವರ ಕಸುಬು. ನಗರದ ಅಶೋಕ ರಸ್ತೆ, ದೇವರಾಜ ಅರಸು ರಸ್ತೆ, ಸಯ್ಯಾಜಿರಾವ್ ರಸ್ತೆ ಹಾಗೂ ಇನ್ನಿತರ ನಗರ ಪ್ರದೇಶದ ಬಹುಮಹಡಿಗಳು ಇವರ ವ್ಯಾಪಾರ ಕೇಂದ್ರಗಳಾಗಿವೆ. ವ್ಯವಸಾಯವನ್ನು ಪ್ರಧಾನ ಕಸುಬನ್ನಾಗಿ ಮಾಡಿಕೊಂಡಿರುವ ಒಕ್ಕಲಿಗರು ಮತ್ತು ಲಿಂಗಾಯಿತರು ಕನ್ನೇಗೌಡನ ಕೊಪ್ಪಲು, ಜೆ.ಪಿ.ನಗರ ಮುಂತಾದ ಪ್ರದೇಶಗಳಲ್ಲಿ ಹರಿದು ಹಂಚಿಹೋಗಿದ್ದಾರೆ. ಕಾಯಕದ ಮಹತ್ವವನ್ನು ಸಾರುವ ಲಿಂಗಾಯಿತರು ಶಿವನನ್ನು ಪ್ರಧಾನ ದೇವರನ್ನಾಗಿ ಪೂಜಿಸುತ್ತಾರೆ. ಚಿನ್ನ, ಕಂಚು, ಮರ, ಕಲ್ಲು ಮತ್ತು ಕಬ್ಬಿಣ ಈ ಐದು ರೀತಿಯ ಸಾಮಾಗ್ರಿಗಳಿಂದ ಕೆಲಸ ಮಾಡುವವರನ್ನು ಅಕ್ಕಸಾಲಿಗ, ಕಂಚುಗಾರ, ಬಡಗಿ, ಶಿಲ್ಪಿ ಮತ್ತು ಕಮ್ಮಾರರು ಎಂದು ಗುರುತಿಸಬಹುದು. ಹಾಗೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ನಗರದ ಗಾಂಧೀನಗರ, ಅಶೋಕಪುರಂ, ಇಟ್ಟಿಗೆಗೂಡು, ಸುಣ್ಣದ ಕೇರಿ, ಹಳ್ಳದ ಕೇರಿಗಳಂತಹ ಪ್ರದೇಶಗಳಲ್ಲಿ ಅಧಿಕವಾಗಿ ವಾಸಿಸುತ್ತಿದ್ದು, ತಮ್ಮ ಜೀವನಕ್ಕೆ ಕೂಲಿಯನ್ನು ಅವಲಂಭಿಸಿದ್ದಾರೆ. ಹಲವಾರು ಮಹಲ್‌ಗಳು, ಸಂಸ್ಥೆಗಳು, ಅಂಗಡಿಗಳಲ್ಲಿ ಕೂಲಿ ಕೆಲಸಗಾರರಾಗಿ ಜೀವನ ನಿರ್ವಹಣೆಯನ್ನು ಮಾಡುತ್ತಾರೆ. ಈ ನಗರದಲ್ಲಿ 69 ಸ್ಲಂಗಳಿದ್ದು 11,840 ಜನರು ತಮ್ಮದೇ ಆದ ಸಾಮಾಜಿಕ ಸ್ತರದಲ್ಲಿ ವಾಸಿಸುತ್ತಿದ್ದಾರೆ.

ಮುಸ್ಲಿಮರು ಎನ್‌ಆರ್ ಮೊಹಲ್ಲಾ, ಗಾಂಧೀನಗರ, ಬನ್ನಿಮಂಟಪ, ಗೌಸಿಯಾ ನಗರ ಮುಂತಾದ ನಗರಗಳಲ್ಲಿ ವಾಸವಾಗಿದ್ದು, ಮಾಂಸ ಮಾರಾಟ, ಕಬ್ಬಿಣದ ಮಾರಾಟ ಇನ್ನಿತರ ಅಂಗಡಿಗಳ ವ್ಯಾಪಾರ ಮತ್ತು ಕೂಲಿ ಮಾಡಿಕೊಂಡು ಜೀವನ ನಿರ್ವಹಣೆ ಮಾಡುತ್ತಾರೆ.

ಕ್ರೈಸ್ತರು, ಜೈನರು ಕೂಡ ಕೆಲವು ಪ್ರದೇಶದಲ್ಲಿ ವಾಸವಿದ್ದು, ಹಾಗೆಯೆ ಗಾಣಿಗರು, ಕ್ಷೌರಿಕರು, ಮೇದರು ಮೈಸೂರು ನಗರದಲ್ಲಿ ಕಂಡುಬರುತ್ತಾರೆ.

ಹೀಗೆ ಮೈಸೂರು ನಗರದಲ್ಲಿ ಕುಟುಂಬ ವ್ಯವಸ್ಥೆಯನ್ನು ಹೊಂದಿ ಅವಿಭಕ್ತ ಕುಟುಂಬ, ವಿಭಕ್ತ ಕುಟುಂಬ, ಪಿತೃಪ್ರಧಾನ ಮತ್ತು ಮಾತೃಪ್ರಧಾನ ಕುಟುಂಬ ಪದ್ಧತಿ ಇದೆ. ಆಡಳಿತ ಪದ್ಧತಿಯಲ್ಲಿ ಯಜಮಾನಿಕೆ, ಗೌಡ, ಕೂಟ ಎಂಬ ವ್ಯವಸ್ಥೆ ನಾಮಕಾವಸ್ಥೆಯಲ್ಲಿ ಕಂಡು ಬರುತ್ತದೆ. ಪ್ರಸ್ತುತ ನ್ಯಾಯಾಲಯಗಳೆ ನ್ಯಾಯಕೇಂದ್ರಗಳಾಗಿವೆ. ಭೌತಿಕ ಮತ್ತು ಭಾವನಾತ್ಮಕ ಅವಶ್ಯಕತೆಗಳಿಗೆ ಅನುಗುಣವಾಗಿ ಮೈಸೂರು ನಗರದ ಜನರು ಸಾಮಾಜಿಕವಾಗಿ ಅವಿಭಾಜ್ಯ ಅಂಗವಾಗಿದ್ದಾರೆ.

## 1.5 ಆರ್ಥಿಕ ಹಿನ್ನೆಲೆ

ಯಾವುದೇ ಸಂಸ್ಕೃತಿ ವಿಕಸಿಸಲು ಅಲ್ಲಿನ ಪರಿಸರ ಪ್ರಮುಖ ಪಾತ್ರ ವಹಿಸುತ್ತದೆ. ಪರಿಸರದಲ್ಲಿನ ಮಾನವ ಸಂಪನ್ಮೂಲ ಮತ್ತು ಪ್ರಾಕೃತಿಕ ಸಂಪತ್ತು ಮೈಸೂರು ನಗರದಲ್ಲಿ ಹೇರಳವಾಗಿದ್ದು ಆರ್ಥಿಕತೆಗೆ ಬೆಂಬಲವಾಗಿದೆ. ಮೈಸೂರು ನಗರ ಹಿಂದೆ ವ್ಯವಸಾಯವನ್ನೇ ಪ್ರಧಾನವಾಗಿ ಅವಲಂಬಿಸಿತ್ತು. ಆದರೆ ಪ್ರಸ್ತುತ ಎಲ್ಲಾ ಸೌಲಭ್ಯಗಳನ್ನು ಹೊಂದಿರುವುದರಿಂದ ಜೊತೆಗೆ ನೀರಾವರಿ ಭೂಮಿ ಮತ್ತಿತರ ಸೌಕರ್ಯಗಳಿಂದ ಕಚ್ಚಾವಸ್ತುಗಳನ್ನು ಸಾಗಿಸಲು ವ್ಯವಸ್ಥಿತವಾದ ಸಾರಿಗೆಯ ವ್ಯವಸ್ಥೆಯನ್ನು ಹೊಂದಿದೆ. ವಾಣಿಜ್ಯ ಕೇಂದ್ರವಾಗಿ ಅತ್ಯುತ್ತಮವಾದ ಸಾಧನೆ ಮಾಡುತ್ತಿರುವ ಮೈಸೂರು ನಗರ ವಿವಿಧ ರಾಜ್ಯಗಳಿಗೆ ಹೆದ್ದಾರಿಯನ್ನು ಹೊಂದಿರುವುದರಿಂದ ವಾಣಿಜ್ಯ ದೃಷ್ಟಿಯಲ್ಲಿ ಸಾರಿಗೆ ವ್ಯವಸ್ಥೆ ಲಾಭದಾಯಕವಾಗಿದೆ. ಮೈಸೂರು ಪ್ರದೇಶ ಉತ್ತಮವಾದ ರಸ್ತೆ, ರೈಲು ಮತ್ತು ವಾಯುಯಾನ ಸಂಪರ್ಕವನ್ನು ಹೊಂದಿ, ಮೈಸೂರಿನಿಂದ 8.ಕಿ.ಮೀ ದೂರದಲ್ಲಿರುವ ಮಂಡಕಳ್ಳಿ ವಿಮಾನ ನಿಲ್ದಾಣವಿದೆ. ಅಂತೆಯೇ ಮೈಸೂರು ನಗರದಲ್ಲಿ ರೈಲ್ವೇ ಜಂಕ್ಷನ್, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ನಗರ ಸಾರಿಗೆ ವ್ಯವಸ್ಥೆಗಳಿದ್ದು ಹಲವಾರು ರಾಜ್ಯ ಮತ್ತು ರಾಷ್ಟ್ರಗಳ ಕೇಂದ್ರ ಸ್ಥಳಗಳಿಗೆ ಸಂಪರ್ಕ ಕಲ್ಪಿಸುತ್ತದೆ. ಕೈಗಾರಿಕೆ ಪ್ರಮುಖ ವ್ಯಾಪಾರ ಕೇಂದ್ರವಾಗಿ, ಮೈಸೂರು ನಗರ ಹೆಚ್ಚು ಆದಾಯವನ್ನು ಗಳಿಸುತ್ತಿದೆ. ಕರ್ನಾಟಕ ರಾಜ್ಯದಲ್ಲೇ ಕೈಗಾರಿಕಾ ಕ್ಷೇತ್ರದಲ್ಲಿ ಉದ್ಯೋಗ ನೀಡುವ ಎರಡನೆಯ ನಗರವಾಗಿರುವ ಮೈಸೂರು, ಅರವತ್ತಕ್ಕೂ ಹೆಚ್ಚು ಕೈಗಾರಿಕೆಗಳನ್ನು ಒಳಗೊಂಡಿದ್ದು, ಇವು ನಗರದ ಆರ್ಥಿಕತೆಯ ಆದಾಯದ ಕೇಂದ್ರಗಳಾಗಿವೆ. ಉದಾಹರಣೆಗೆ ಹೆಬ್ಬಾಳಿನಲ್ಲಿರುವ ಹಲವಾರು ಕೈಗಾರಿಕೆಗಳು ವಿಕ್ರಾಂತ್‌ಟೈರ್ ಕಾರ್ಖಾನೆ, ಇನ್ಫೋಸಿಸ್, ಪಾಲ್ಕಾನ್ ಮುಂತಾದವು.

ಪ್ರವಾಸೋದ್ಯಮ ಕೇಂದ್ರವಾಗಿ, ಪ್ರವಾಸೋದ್ಯಮ ಸ್ಥಳಗಳಾದ ಚಾಮುಂಡಿಬೆಟ್ಟ, ಮೃಗಾಲಯ, ಅರಮನೆ, ಕಾರಂಜಿ ಕೆರೆ ಮತ್ತು ಪಾರಂಪರಿಕ ಕಟ್ಟಡಗಳು ಹಾಗೂ ವ್ಯಾಪಾರ ಕೇಂದ್ರಗಳಾದ ದೇವರಾಜ ಮಾರುಕಟ್ಟೆ, ವಾಣಿವಿಲಾಸ ಮಾರುಕಟ್ಟೆ, ಮೀನಾಬಜಾರ್ ಮುಂತಾದ ಮಾರುಕಟ್ಟೆಗಳು ಮೈಸೂರು ನಗರದ ಆದಾಯವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ.

ತಮ್ಮ ದೈನಂದಿನ ಅವಶ್ಯಕತೆಗಳನ್ನು ಸುಲಭವಾಗಿ ಪೂರೈಸಿಕೊಳ್ಳಲು ನಗರದ ಜನರು ಮಾರುಕಟ್ಟೆಗಳನ್ನು ಅವಲಂಬಿಸಿದ್ದಾರೆ. ಮುಖ್ಯವಾಗಿ ಕೃಷ್ಣರಾಜ ವೃತ್ತದ ಬಳಿ ಇರುವ ಚಿಕ್ಕ ಗಡಿಯಾರದ ಹತ್ತಿರ ಸಯ್ಯಾಜಿರಾವ್ ರಸ್ತೆ ಸೇರಿದಂತೆ ಇರುವ ದೇವರಾಜ ಮಾರುಕಟ್ಟೆ ಪ್ರಮುಖ ವಾಣಿಜ್ಯ ಕೇಂದ್ರವಾಗಿದೆ. ಅಲ್ಲದೆ ಅಗ್ರಹಾರದ ವೃತ್ತದ ಬಳಿ ಇರುವ ವಾಣೀವಿಲಾಸ ಮಾರುಕಟ್ಟೆ, ಚರ್ಚ್ ಹತ್ತಿರವಿರುವ ಮೀನಾಬಜಾರ್ ಮೈಸೂರು ನಗರದ ಆರ್ಥಿಕತೆಯ ಕೇಂದ್ರಗಳಾಗಿವೆ. ಮೈಸೂರು ಒಂದು ಸ್ವಚ್ಚಂದ ಸಾಂಸ್ಕೃತಿಕ ನಗರವಾಗಿದ್ದು, ಮೃಗಾಲಯ ಕಾರಂಜಿ ಕೆರೆ ಮೈಸೂರು ಅರಮನೆ, ಚರ್ಚ್, ಮೈಸೂರು ವಿಶ್ವವಿದ್ಯಾನಿಲಯಗಳಷ್ಟೆ ಅಲ್ಲದೆ ಧಾರ್ಮಿಕ ಪ್ರಧಾನ ಕೇಂದ್ರವಾದ ಚಾಮುಂಡಿಬೆಟ್ಟ ಪ್ರವಾಸ ಕೇಂದ್ರಗಳಾಗಿದ್ದು ಉದ್ಯಮವಾಗಿ ಮಾರ್ಪಟ್ಟು ನಗರದ ಆರ್ಥಿಕತೆಯಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ. ಜನಪದರು ಆರ್ಥಿಕತೆಯ ಜೊತೆಗೆ ಸುಂಕವನ್ನು ಕಟ್ಟಿ ನಗರದ ಆರ್ಥಿಕ ಆದಾಯಕ್ಕೆ ಪ್ರಮುಖ ಕಾರಣರಾಗಿದ್ದಾರೆ.

ಮೈಸೂರು ನಗರ ಉದ್ಯಾನವನಗಳಿಗೆ ಹೆಸರಾದ ನಗರವಾಗಿದ್ದು, ರಾಜ ಮಹಾರಾಜರ ಕಾಲದಿಂದಲೂ ಉದ್ಯಾನವನಗಳಿಗೆ ಪ್ರಾಧಾನ್ಯತೆ ನೀಡಲಾಗುತ್ತಿದೆ. ಮೈಸೂರು ನಗರದಲ್ಲಿ ಉಲ್ಲೇಖಿಸಬಹುದಾದ ಅನೇಕ ಉದ್ಯಾನವನಗಳಿವೆ. ಕುಪ್ಪಣ್ಣ ಪಾರ್ಕ್, ಕರ್ಜನ್ ಪಾರ್ಕ್, ಕಾರಂಜಿಕೆರೆ, ಪರಿಕರ ಪಾರ್ಕ್, ಚೆಲುವಾಂಬ ಪಾರ್ಕ್, ಡಾ.ಬಿ.ಆರ್.ಅಂಬೇಡ್ಕರ್ ಪಾರ್ಕ್, ಸಂಜೀವಿನಿ ಪಾರ್ಕ್ ಮುಂತಾದವುಗಳನ್ನು ಇಲ್ಲಿ ಹೆಸರಿಸಬಹುದು. ಈ ಉದ್ಯಾನವನಗಳಲ್ಲಿ ಕೆಲವು ಉದ್ಯಾನವನಗಳು ನಗರದ ಆರ್ಥಿಕತೆಯ ಮೇಲೆ ಪ್ರಭಾವ ಬೀರುತ್ತವೆ. ಇವುಗಳಲ್ಲಿ ವಿದೇಶಿ ಮೂಲದ ಮರ–ಗಿಡಗಳನ್ನು ಬೆಳೆಸಿರುವುದು ಸಹ ಗಮನಾರ್ಹವಾಗಿದೆ.

ಮೈಸೂರ ನಗರ ಕೈಗಾರಿಕೆ, ವಾಣಿಜ್ಯ, ಪ್ರವಾಸೋದ್ಯಮ ಕೇಂದ್ರ ಮತ್ತು ಸಾಂಸ್ಕೃತಿಕ ನಗರವಾಗಿ ಬೆಳವಣಿಗೆ ಸಾಧಿಸಿದರೂ ಅದು ಪ್ರಧಾನವಾಗಿ ಐತಿಹಾಸಿಕ ಮತ್ತು ಧಾರ್ಮಿಕ ಕ್ಷೇತ್ರ ಎಂಬುದನ್ನು ಮರೆಯುವಂತಿಲ್ಲ. ಜನಪದರಿಗೆ ನಂಬಿಕೆ, ಆಚರಣೆಗಳೇ ಮೂಲವಾಗಿದ್ದು, ಚಾಮುಂಡೇಶ್ವರಿಯ ದರ್ಶನಕ್ಕೆ ಪ್ರತಿದಿನ ಸಾವಿರಾರು ಭಕ್ತರು ಆಗಮಿಸಿ ವ್ಯಾಪಾರ ವಹಿವಾಟಿನಲ್ಲಿ

ತಮ್ಮದೆ ಕೊಡುಗೆ ನೀಡಿ ಪ್ರವಾಸೋದ್ಯಮ ಬೆಳವಣಿಗೆಗೆ ಕಾರಣರಾಗಿದ್ದಾರೆ. ಇದೇ ಅಲ್ಲದೆ ಅರಮನೆಯ ಕೋಟೆ ಆಂಜನೇಯ, ಒಂಟಿಕೊಪ್ಪಲಿನ ಲಕ್ಷ್ಮೀರಮಣಸ್ವಾಮಿ, ಅಗ್ರಹಾರದ ನೂರೊಂದುಗಣಪತಿ, ಉತ್ತನಹಳ್ಳಿ ತ್ರಿಪುರಸುಂದರಿ ದೇವಾಲಯ ಮುಂತಾದವುಗಳು ಸಹ ಪ್ರವಾಸ ಕೇಂದ್ರಗಳಾಗಿ ಗುರುತಿಸಿಕೊಂಡು ಆರ್ಥಿಕತೆಗೆ ತಮ್ಮದೇ ಆದ ಕೊಡುಗೆಯನ್ನು ನೀಡುತ್ತಿವೆ.

ಇಲ್ಲಿ ಬರುವ ಯಾತ್ರಾರ್ಥಿಗಳ ಮತ್ತು ಸ್ಥಳೀಯರ ಅಗತ್ಯಗಳನ್ನು ಪೂರೈಸುವಲ್ಲಿ ಚಿಲ್ಲರೆ ವ್ಯಾಪಾರಿಗಳು ಪ್ರಮುಖ ಪಾತ್ರ ವಹಿಸುತ್ತಾರೆ. ಬಟ್ಟೆ ಅಂಗಡಿ, ಪಾತ್ರೆ ಅಂಗಡಿ, ದಿನಸಿ ಅಂಗಡಿ, ಹೂವಿನ ಅಂಗಡಿ, ಪೆಟ್ಟಿಗೆ ಅಂಗಡಿ, ತರಕಾರಿ ಅಂಗಡಿ ಹಲವಾರು ಮಹಲ್‌ಗಳಾದ ಮಾಲ್ ಆಫ್ ಮೈಸೂರು, ಬಿಗ್‌ಬಜಾರ್, ಮೋರ್, ರಿಲಿಯನ್ಸ್ ಟ್ರೆಂಡ್, ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಸಂಸ್ಥೆಗಳು, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಅಂಗಡಿಗಳು ಹಾಗೂ ಪ್ರವಾಸಿ ಸ್ಥಳದಲ್ಲಿರುವ ಅಂಗಡಿಗಳು ಮೈಸೂರು ನಗರವನ್ನು ಆರ್ಥಿಕವಾಗಿ ಬೆಳೆಸಲು ಕಾರಣವಾಗಿವೆ. ಈ ಎಲ್ಲಾ ವಾಣಿಜ್ಯ ದೃಷ್ಟಿಗಳಿಗೆ ಪೂರಕವಾಗಿ ಜನರು ವ್ಯವಹರಿಸಲು ಬ್ಯಾಂಕ್‌ಗಳನ್ನು ಅವಲಂಬಿಸಿದ್ದಾರೆ. ಸ್ಟೇಟ್‌ಬ್ಯಾಂಕ್ ಆಫ್ ಇಂಡಿಯಾ, ಕೆನರಾಬ್ಯಾಂಕ್, ವಿಜಯಾಬ್ಯಾಂಕ್, ಹೆಚ್.ಡಿ.ಎಫ್.ಸಿಬ್ಯಾಂಕ್, ಕಾರ್ಪೋರೇಷನ್‌ಬ್ಯಾಂಕ್, ಕರ್ನಾಟಕಬ್ಯಾಂಕ್, ಸಹಕಾರ ಸಂಸ್ಥೆಗಳು ಮುಂತಾದವುಗಳನ್ನು ಈ ನಗರ ಹೊಂದಿದೆ. ಹೀಗೆ ಮೈಸೂರು ನಗರ ಕೈಗಾರಿಕಾ, ಸಾಂಸ್ಕೃತಿಕ, ಪ್ರವಾಸೋದ್ಯಮ ಮತ್ತು ವಾಣಿಜ್ಯಕ್ಕೆ ಬೇಕಾದ ಭೌಗೋಳಿಕ ಪರಿಸರವನ್ನು ಹೊಂದಿ ನಗರದ ಆರ್ಥಿಕತೆಯನ್ನು ಉತ್ತಮಪಡಿಸಲು ನೆರವಾಗಿದೆ.

## 1.6 ಸಾಹಿತ್ಯಿಕ ಹಿನ್ನೆಲೆ

ಸಾಹಿತ್ಯವನ್ನು ಪೋಷಿಸಿ ಕವಿಗಳಿಗೆ ಆಶ್ರಯ ನೀಡಿ ಬೆಳೆಸಿದ ರಾಜರುಗಳಲ್ಲಿ ಮೈಸೂರು ಒಡೆಯರು ಕೂಡ ಪ್ರಮುಖರು. ಇವರ ಕಾಲದಲ್ಲಿ ಸಾಹಿತ್ಯ ಬಹುಮುಖವಾಗಿ ಬೆಳೆದು ಸಂಪದ್ಭರಿತವಾಯಿತು. ವಿಜಯನಗರ ಸಾಮ್ರಾಜ್ಯದ ಪತನಾ ನಂತರ(1565) ಸಾಹಿತ್ಯದ ಪೋಷಣೆಯ ಕೈಂಕರ್ಯವನ್ನು ಮೈಸೂರು ಒಡೆಯರು ಯಶಸ್ವಿಯಾಗಿ ಕೈಗೊಂಡರು. ರಾಜ ಒಡೆಯರಿಂದ ಆರಂಭಿಸಿ(1610) ಜಯಚಾಮರಾಜ ಒಡೆಯರವರೆಗೆ ನಿರಂತರವಾದ ಪ್ರೋತ್ಸಾಹ ದೊರೆಯಿತು. ರಾಜ ಒಡೆಯರ ಪ್ರಧಾನಿಯಾಗಿದ್ದ ತಿರುಮಲಾರ್ಯನು 'ಕರ್ಣವೃತ್ತಾಂತ' ಎಂಬ ಕೃತಿಯ್ನು ರಚಿಸಿದನು. ಇದರಲ್ಲಿ ಮಹಾಭಾರತದ ಕಥೆಯನ್ನು ವರ್ಣಿಸಲಾಗಿದೆ. ರಾಜ ಒಡೆಯರ ಮಗ ಚಾಮರಾಜ ಒಡೆಯರು ಕವಿಗಳಿಗೆ ಆಶ್ರಯ ನೀಡಿದುದೇ ಅಲ್ಲದೆ ತಾವೇ 'ವಾಲ್ಮಿಕಿ

ರಾಮಾಯಣ ಟೀಕೆ' 'ಬ್ರಹ್ಮೋತ್ತರಖಂಡ' ಎಂಬ ಕೃತಿಗಳನ್ನು ರಚಿಸಿದ್ದಾರೆ. ಅವರ ಆಶ್ರಿತ ಕವಿಗಳಾದ ರಾಮಚಂದ್ರ ಎಂಬುವನು 'ಅಶ್ವವೈದ್ಯ' ಎಂಬ ಕೃತಿಯನ್ನು, ಪದ್ಮಪಂಡಿತ 'ಹಯಸಾರ ಸಮುಚ್ಚಯ'ವನ್ನು ರಚಿಸಿದ್ದಾರೆ. ಅನಂತರ ಬಂದ ರಣಧೀರ ಕಂಠೀರವ ನರಸರಾಜ ಒಡೆಯರ ಪ್ರೋತ್ಸಾಹ ಅಪಾರವಾದುದು. ತದನಂತರ ಬಂದ ಚಿಕ್ಕದೇವರಾಜರು ಸ್ವತಃ ಕವಿಯೂ ಆಗಿದ್ದರಲ್ಲದೆ, ಹಲವಾರು ಕವಿಗಳಿಗೆ ಆಶ್ರಯದಾತರೂ ಆಗಿದ್ದರು. ಇವರ ಆಶ್ರಯ ಪಡೆದ ಕವಿಗಳಲ್ಲಿ ಚಿಕ್ಕೂಪಾಧ್ಯಾಯ, ಸಿಂಗಾರಾರ್ಯ, ಶೃಂಗಾರಮ್ಮ, ಹೊನ್ನಮ್ಮ, ತಿಮ್ಮಕವಿ, ಮಲ್ಲಿಕಾರ್ಜುನ, ಚಿದಾನಂದ ಕವಿ, ಮಲ್ಲರಸ ಮೊದಲಾದವರು ಪ್ರಮುಖರಾಗಿದ್ದಾರೆ. ಆ ಕಾಲದಲ್ಲಿ ರಚಿತವಾದ ಕೃತಿಗಳಲ್ಲಿ ಚಿಕ್ಕದೇವರಾಜರ 'ಚಿಕ್ಕದೇವರಾಜ ಬಿನ್ನಪ', 'ಗೀತಗೋಪಾಲ', 'ಭಾರತ', 'ಭಾಗವತ' ಮತ್ತು 'ಶೇಷಧರ್ಮ', ಆಸ್ಥಾನಕವಿ ಹಾಗೂ ಮಂತ್ರಿಯಾಗಿದ್ದ ತಿರುಮಲಾರ್ಯನ 'ಅಪ್ರತಿಮ ವೀರಚರಿತೆ', 'ಚಿಕ್ಕದೇವರಾಜ ವಿಜಯ', 'ಚಿಕ್ಕದೇವರಾಜ ವಂಶಾವಳಿ', ಚಿಕ್ಕದೇವರಾಜರಲ್ಲಿ ಕರಣಿಕ ಹಾಗೂ ಮಂತ್ರಿಯಾಗಿದ್ದ, ಚಿಕ್ಕೂಪಾಧ್ಯಯ ರಚಿಸಿದ ಸುಮಾರು ನಲವತ್ತು ಕೃತಿಗಳಲ್ಲಿ 'ದಿವ್ಯಸೂರಿ ಚರಿತೆ', 'ಕಾಮಂಧಕ ನೀತಿ', ವಿಷ್ಣು ಪುರಾಣ, ಕಮಲಾಚಲ ಮಹಾತ್ಮೆ, ತಿಮ್ಮಕವಿಯ 'ಯಾದವಗಿರಿ ಮಹಾತ್ಮೆ', 'ವೆಂಕಟಗಿರಿ ಮಹಾತ್ಮೆ', 'ಪಶ್ಚಿಮರಂಗ ಕ್ಷೇತ್ರಮಹಾತ್ಮೆ', ಸಿಂಗರಾರ್ಯನ 'ಮಿತ್ರಾವಿಂದ ಗೋವಿಂದ', ಸಂಚಿಹೊನ್ನಮ್ಮಳ 'ಹದಿಬದೆಯ ಧರ್ಮ', ಶೃಂಗಾರಮ್ಮನ 'ಪದ್ಮಿನಿ ಕಲ್ಯಾಣ', ಒಟ್ಟಿನಲ್ಲಿ ಚಿಕ್ಕದೇವರಾಜರ ಆಸ್ಥಾನ ಸರಸ್ವತಿಯ ಮಂದಿರವಾಗಿತ್ತು.

ದೊಡ್ಡಕೃಷ್ಣರಾಜ ಒಡೆಯರ ಆಶ್ರಯದಲ್ಲಿ ಬಾಲವೈದ್ಯ ಎಂಬುವನು 'ಕನ್ನಡ ಲೀಲಾವತಿ', ರತ್ನಶಾಸ್ತ್ರ' ಎಂಬ ಕೃತಿಗಳನ್ನು, ರಾಜರ ಪಟ್ಟಮಹಿಷಿ ಚೆಲುವಾಂಬೆ 'ವರನಂದಿ ಕಲ್ಯಾಣಿ', 'ವೆಂಕಟಾಚಲ ಮಹಾತ್ಮೆ', 'ಕಾವೇರಿ ಮಹಾತ್ಮೆ' ಮುಂತಾದ ಕಾವ್ಯಗಳನ್ನೂ ಇಮ್ಮಡಿ ಕೃಷ್ಣರಾಜ ಒಡೆಯರ ಆಶ್ರಯದಲ್ಲಿ ಅವರ ಮಾವ ಕತ್ತಿಗೋಪಾಲರಾಜರು 'ಕಮಲಾಚಲ ಮಹಾತ್ಮೆ ಟೀಕೆಯನ್ನೂ ರಚಿಸಿದ್ದಾರೆ. ಶಾಲ್ಯದ ಕೃಷ್ಣರಾಜ 'ಅಕ್ಷರಾದಿ ನಿಘಂಟು', 'ಅನುಭವ ರಸಾಯನ', 'ನಳನಾಟಕ', 'ಸದಾಶಿವ ಶತಕ'ವನ್ನು ವೆಂಕಾಮಾತ್ಯ ಎಂಬುವನು ರಾಮಾಯಣ ಹನುಮದ್ವಿಲಾಸ ಮತ್ತು ಇಂದಿರಾಭ್ಯುದಯ ಕೃತಿಗಳನ್ನೂ, ಬೆಟ್ಟದ ಚಾಮರಾಜ ಒಡೆಯರಿಗೆ ಉಪಾಧ್ಯಾಯನಾಗಿದ್ದ ಸಿಂಗರಾರ್ಯನು ಶ್ರೀರಂಗ ಮಹಾತ್ಮೆಯನ್ನು, ಖಾಸಾ ಚಾಮರಾಜ ಒಡೆಯರ ಆಶ್ರಯದಲ್ಲಿದ್ದ ದೇವಚಂದ್ರನು ರಾಜಾವಳಿ ಕಥೆ, ರಾಮಕಥಾವತಾರ, ಪೂಜ್ಯಪಾದಚರಿತೆ ಕೃತಿಗಳನ್ನು, ಕಳಲೆ ದೇವರಾಜನ ಆಶ್ರಯದಲ್ಲಿದ್ದ ರಂಗಯ್ಯನೆಂಬುವನು ಕಾವೇರಿ ಮಹಾತ್ಮೆಯನ್ನು ರಚಿಸಿದ್ದಾರೆ.

ಚಿಕ್ಕದೇವರಾಜ ಒಡೆಯರ ನಂತರ ಸಾಹಿತ್ಯ, ಕಲೆ, ಸಂಸ್ಕೃತಿಗಳ ಬಗ್ಗೆ ಅಪಾರ ಅಭಿಮಾನ ಹೊಂದಿದ್ದ ರಾಜರೆಂದರೆ ಮುಮ್ಮಡಿ ಕೃಷ್ಣರಾಜ ಒಡೆಯರು. ಮಹಾಕವಿಯೂ, ಕವಿಪೋಷಕರೂ ಆಗಿದ್ದ ಇವರ ಕಾಲದಲ್ಲಿ ಸಾಹಿತ್ಯ ಸಮೃದ್ಧವಾಗಿ ಬೆಳೆಯಿತು. ತಾವೇ ಸ್ವತಃ ಐವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಕೃಷ್ಣರಾಜ ವಾಣೀವಿಲಾಸ, ಸೌಗಂಧಿಕಾ ಪರಿಣಯ, ಬತ್ತೀಸು ಪುತ್ಥಳಿ ಕಥೆ, ಭಾಗವತ, ಉತ್ತರರಾಮ ಚರಿತೆ, ಅಖಂಡ ಕಾವೇರಿ ಮಹಾತ್ಮೆ, ಆಧ್ಯಾತ್ಮ ರಾಮಾಯಣ, ತಲಕಾವೇರಿ ಮಹಾತ್ಮೆ, ಯಾದಗಿರಿ ಮಹಾತ್ಮೆ, ರಾಮಕಥಾ ಕಲ್ಪವೃಕ್ಷ, ಲಿಂಗಪುರಾಣ, ಶಂಕರ ಸಂಹಿತೆ, ಶಕ ಸಪ್ತಸತಿ, ಶ್ರೀತತ್ತ್ವನಿಧಿ ಮುಂತಾದ ಇವರ ಆಶ್ರಿತರಾದ ವೆಂಕಟರಾಮ ಶಾಸ್ತ್ರಿಯು 'ಅಮರಕ ಟೀಕೆ', 'ಗಜಗೌರಿವ್ರತದ ಕಥೆ', ಶ್ರೀನಿವಾಸ ಕವಿಯು 'ಕೃಷ್ಣ ನೃಪವಿಯೋತ್ಕರ್ಷ'ವನ್ನು ಬರೆದಿದ್ದಾರೆ. ಕೆಂಪುನಾರಾಯಣನ 'ಮುದ್ರ ಮಂಜೂಷ', ಒಂದು ಚಾರಿತ್ರಿಕ ಮಹತ್ವದ ಕೃತಿ ಒಡೆಯರ ಅಳಿಯನಾದ ಅಳಿಯಲಿಂಗರಾಜ ಉಭಯ ಭಾಷಾ ವಿಶಾರದ ಇವನು ಸಂಸ್ಕೃತ ಮತ್ತು ಕನ್ನಡ ಭಾಷೆಗಳೆರಡರಲ್ಲೂ ಐವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾನೆ. 'ಇಂದ್ರಕೀಲ', 'ಚೂಡಾಮಣಿ', 'ಲಂಕಾ ದಹನ', 'ಗಿರಿಜಾ ಕಲ್ಯಾಣ', ವೀರಭದ್ರ ಶತಕ', ಮಹಲಿಂಗ ಶತಕ, ಮುಂತಾದವು ಮುಖ್ಯವಾದವುಗಳು. ಆನಂತರ ನಾಲ್ವಡಿ ಕೃಷ್ಣರಾಜ ಒಡೆಯರು, ಜಯ ಚಾಮರಾಜ ಒಡೆಯರು ಮಹಾ ಮೇಧಾವಿಗಳಾಗಿ ಕನ್ನಡ ಸಾಹಿತ್ಯಕ್ಕೆ ಅಪಾರ ಪ್ರೋತ್ಸಾಹ ನೀಡಿ ಅದರ ಶ್ರೇಯೋಭಿವೃದ್ಧಿಗೆ ಕಾರಣರಾಗಿದ್ದಾರೆ.

## 1.7 ರಾಜಕೀಯ ಮತ್ತು ಶೈಕ್ಷಣಿಕ ಹಿನ್ನೆಲೆ

ರಾಜ ಮಹಾರಾಜರ ಆಳ್ವಿಕೆಗೆ ಒಳಪಟ್ಟ ಮೈಸೂರು ನಗರ ರಾಜಕೀಯದಲ್ಲೂ ಪ್ರಬುದ್ಧವಾಗಿದೆ. ಪ್ರಜಾಪ್ರಭುತ್ವತೆಗೆ ಪ್ರಧಾನವಾದುದು ರಾಜಕೀಯ. ಏಕೆಂದರೆ ದೇಶದ ಸರ್ವತೋಮುಖ ಅಭಿವೃದ್ಧಿಗೆ ರಾಜಕೀಯ ಪ್ರಧಾನ ಪಾತ್ರವಹಿಸುತ್ತದೆ. ಸಾವಿರಾರು ವರ್ಷಗಳಿಂದಲೂ ಮತ್ತು ಬ್ರಿಟಿಷರ ಕಾಲದಿಂದಲೂ ರಾಜಕೀಯವಾಗಿ ಗುರುತಿಸಿಕೊಂಡಿದೆ. ಸ್ವಾತಂತ್ರ್ಯ ಹೋರಾಟಗಾರರನ್ನು ಕಂಡಿರುವ ಮೈಸೂರು ನಗರ ಹಲವಾರು ರಾಜಕೀಯ ವ್ಯಕ್ತಿಗಳನ್ನು ಒಳಗೊಂಡಿದೆ. ಹಾಗಾಗಿ ಇದು ರಾಜಕೀಯ ಧುರೀಣರ ತವರೂರಾಗಿದೆ.

ಯಜಮಾನಿಕೆ, ಪಟೇಲ, ಗೌಡ ಪದ್ಧತಿ ಹಲವಾರು ವರ್ಷಗಳಿಂದಲೂ ಇದ್ದು, ಗೌಡ ಯಜಮಾನನೇ ಸಭೆಯ ಮುಖ್ಯಸ್ಥನಾಗಿರುತ್ತಿದ್ದನು. ಯಾವುದೇ ಸಮಸ್ಯೆಗಳು ಎದುರಾದರೂ ನ್ಯಾಯ ಪಂಚಾಯಿತಿ ಮಾಡಿ ಸರಿಪಡಿಸಿಕೊಳ್ಳುತ್ತಿದ್ದರು. ಇಂತಹ ಜನಪದ ನ್ಯಾಯ ಪ್ರಸ್ತುತ ದಿನಗಳಲ್ಲಿ ಪಡುವರಹಳ್ಳಿ, ಕುಕ್ಕರಹಳ್ಳಿ, ಗಾಂಧಿನಗರ, ಅಶೋಕಪುರಂ, ಹಳ್ಳಿಬೋಗಾದಿಗಳಂತಹ

ಪ್ರದೇಶಗಳಲ್ಲಿ ಕೂಟ ಸೇರುವುದು, ಕೂಟ ಸೇರುವುದಕ್ಕೆ ಬೀದಿ ಬೀದಿಯಲ್ಲಿ(ಸಾರುವುದು) ಕೂಗುವುದು, ಯಜಮಾನಿಕೆ, ಗೌಡಿಕೆ ಕಂಡುಬರುತ್ತದೆ.

ಮೈಸೂರು ನಗರದ ಸ್ಥಳೀಯ ಸರ್ಕಾರ 1888ರಲ್ಲಿ ಸ್ಥಾಪನೆಯಾಗಿ 1977ರಲ್ಲಿ ಮಹಾನಗರಪಾಲಿಕೆಯಾಗಿ ಬದಲಾವಣೆಯಾಯಿತು. ಮೈಸೂರು ನಗರ 31 ನಗರ ಪ್ರದೇಶಗಳನ್ನು ಒಳಗೊಂಡಿದ್ದು, 65 ವಾರ್ಡ್‌ಗಳಿವೆ ಮತ್ತು ಜಿಲ್ಲಾ ಪಂಚಾಯಿತಿ, ನಗರಾಭಿವೃದ್ಧಿ ಪ್ರಾಧಿಕಾರ, ಕೇಂದ್ರೀಯ ಆಹಾರ ಸರಬರಾಜು ನಿಗಮ, ಜಿಲ್ಲಾಧಿಕಾರಿ ಕಛೇರಿ, ಪಾರಂಪರಿಕ ಇಲಾಖೆ, ಡಿ.ಎಫ್.ಆರ್.ಎಲ್. ಮುಂತಾದವುಗಳನ್ನು ಕಾಣಬಹುದು. ಮೈಸೂರು ಮಹಾನಗರ ಪಾಲಿಕೆಯ 29ನೇ ಮೇಯರ್ ಪುಷ್ಪಲತಾ ಜಗನ್ನಾಥ್‌ರವರು, ಉಪಮೇಯರ್ ಷಫಿ ಅಹಮದ್‌ರವರು, ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀ ಎಂ.ಮಹದೇವುರವರು, ನಗರದ ಅಶೋಕಪುರಂನ ದಲಿತ ನಾಯಕ ಸನ್ಮಾನ್ಯ ಶ್ರೀ ವಿ.ಶ್ರೀನಿವಾಸ್‌ಪ್ರಸಾದ್‌ರವರು, ಶ್ರೀ ಪುರುಷೋತ್ತಮ್, ಎಸ್.ಎ. ರಾಮದಾಸ್, ಜಿ.ಟಿ.ದೇವೇಗೌಡ, ಎಂ.ಕೆ.ಸೋಮಶೇಖರ್, ತನ್ವೀರ್‌ಸೇಠ್, ಸಂಸದ ಪ್ರತಾಪಸಿಂಹ, ದೃವನಾರಾಯಣ್, ವಾಸು ಹೀಗೆ ಹಲವಾರು ರಾಜಕೀಯ ವ್ಯಕ್ತಿಗಳು ಪಕ್ಷಾತೀತವಾಗಿ ಕೆಲಸ ಮಾಡುತ್ತಾ, ಮೈಸೂರು ರಾಜಕೀಯದಲ್ಲಿ ಪ್ರಬುದ್ಧತೆಯನ್ನು ಹೊಂದುವಂತೆ ಮಾಡಿದ್ದಾರೆ.

ಅನಾಗರಿಕನಾಗಿದ್ದ ಮಾನವ ಇಂದು ಆಧುನೀಕತೆಯನ್ನು ತಲುಪಲು ಹಲವಾರು ಏಳುಬೀಳುಗಳನ್ನು ಕಂಡು ಯಶಸ್ವಿಯತ್ತ ನಡೆಯುತ್ತಿದ್ದಾನೆ. ಈ ಮಾನವನನ್ನು ನಾಗರೀಕನನ್ನಾಗಿ ಮಾಡಿರುವುದು ಶಿಕ್ಷಣ. ಮೈಸೂರು ನಗರ ಶಾಂತ ಸ್ವಭಾವದ ಮತ್ತು ಶಿಸ್ತಿನ ಜನರನ್ನು ಹೊಂದಿದೆ. ಇದಕ್ಕೆ ಉತ್ತಮ ಶಿಕ್ಷಣವೇ ಕಾರಣ ಎಂದು ಹೇಳಬಹುದು. ಮೈಸೂರು ಮಹಾನಗರವಾಗಿದ್ದು, ಸುತ್ತಮುತ್ತಲಿನ ಹಳ್ಳಿಗಳಿಗೆ ತಾಲ್ಲೂಕ, ತಾಲ್ಲೂಕುಗಳಿಗೆ ಜಿಲ್ಲೆಯಾಗಿದೆ. ಸುತ್ತಮುತ್ತಲಿನ ಗ್ರಾಮೀಣ ವಿದ್ಯಾರ್ಥಿಗಳಿಗೆ ಶಿಕ್ಷಣ ಕೇಂದ್ರವಾಗಿದೆ.

ಇತ್ತೀಚೆಗೆ ಮೈಸೂರು ನಗರ ದೇಶದ ಒಂದು ಪ್ರಮುಖ ಶಿಕ್ಷಣ ಕೇಂದ್ರವಾಗಿ ಬೆಳೆಯುತ್ತ ಶಿಕ್ಷಣಕಾಶಿ ಎನ್ನಿಸಿಕೊಳ್ಳತೊಡಗಿದೆ. ಶಿಶುವಿಹಾರ, ಕಾನ್ವೆಂಟ್‌ಗಳಿಂದ ಆರಂಭಿಸಿ ಉನ್ನತ ಶಿಕ್ಷಣದವರೆಗೂ ಶಿಕ್ಷಣ ಸಂಸ್ಥೆಗಳಿವೆ. ವಿಶ್ವ ಪ್ರಸಿದ್ಧವಾದ ಮೈಸೂರು ವಿಶ್ವವಿದ್ಯಾನಿಲಯ, ಗೀತಾ ಶಿಶು ಶಿಕ್ಷಣ ಸಂಸ್ಥೆ, ಸದ್ವಿದ್ಯಾ ಶಿಕ್ಷಣ ಸಂಸ್ಥೆ, ಮರಿಮಲ್ಲಪ್ಪ ಶಿಕ್ಷಣ ಸಂಸ್ಥೆ, ಮಹರ್ಷಿ ಕಾನ್ವೆಂಟ್, ಸೇಂಟ್‌ಜೋಸೆಫ್ ಕಾನ್ವೆಂಟ್, ಮೈಸೂರಿನಲ್ಲಿ ಪ್ರಪಥಮವಾಗಿ ಸ್ಥಾಪನೆಯಾದ ಮಹಾರಾಜ ಕಾಲೇಜು, ಮಹಾರಾಣಿ ಕಾಲೇಜು, ಜೆಎಸ್‌ಎಸ್ ಡಿಮ್ಡ್ ವಿಶ್ವವಿದ್ಯಾನಿಲಯ, ಮೈಸೂರು ಮೆಡಿಕಲ್ ಕಾಲೇಜು, ಯುವರಾಜ ಕಾಲೇಜು, ಬನುಮಯ್ಯ ಕಾಲೇಜು, ಮಹಾಜನಾ ಕಾಲೇಜು,

ಟೆರೇಷಿಯನ್ ಕಾಲೇಜು, ಟಿಟಿಎಲ್ ಕಾಲೇಜು, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಗಳು, ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಮುಂತಾದ ಶಿಕ್ಷಣ ಸಂಸ್ಥೆಗಳನ್ನು ಹೊಂದಿರುವ ಮೈಸೂರು ಎಲ್ಲಾ ವರ್ಗದ ಎಲ್ಲಾ ಧರ್ಮದ ವಿದ್ಯಾರ್ಥಿಗಳಿಗೆ ವಿದ್ಯಾ ಕೇಂದ್ರವಾಗಿದೆ.

ಸರ್ವ ಶಿಕ್ಷಣ ಅಭಿಯಾನ ಯೋಜನೆಯಿಂದ ಎಲ್ಲಾ ಮಕ್ಕಳು ಕಡ್ಡಾಯವಾಗಿ ಶಿಕ್ಷಣ ಪಡೆಯಲು ಮುಂದಾಗುತ್ತಿದ್ದಾರೆ ಮತ್ತು ಶಿಕ್ಷಣ ಹಕ್ಕು ಕಾಯ್ದೆಯ ಪ್ರಕಾರ ಖಾಸಗೀ ವಿದ್ಯಾಸಂಸ್ಥೆಗಳಲ್ಲಿ ಗ್ರಾಮೀಣ ಬಡ ವಿದ್ಯಾರ್ಥಿಗಳಿಗೆ ಶುಲ್ಕ ರಹಿತ ಪ್ರವೇಶವನ್ನು ನೀಡುತ್ತಿರುವುದರಿಂದ ಶಿಕ್ಷಣ ಪಡೆಯುವಲ್ಲಿ ಆಸಕ್ತರಾಗಿದ್ದಾರೆ. ಪ್ರೌಢಶಾಲೆಗಳಿಗೆ ಗಣನೀಯವಾಗಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದೆ. ವಿವಿಧ ವಿದ್ಯಾರ್ಥಿ ವೇತನಗಳು, ಉಚಿತ ಕಂಪ್ಯೂಟರ್ ವಿತರಣೆ, ಸೈಕಲ್ ವಿತರಣೆ ಮತ್ತು ಬಿಸಿಯೂಟ ಯೋಜನೆಯು ಮೈಸೂರು ನಗರದ ಶಿಕ್ಷಣವನ್ನು ಉತ್ತಮ ಪಡಿಸುವಲ್ಲಿ ಯಶಸ್ವಿಯಾಗಿದೆ. ಸರ್ಕಾರವು ಹೆಣ್ಣು ಮಕ್ಕಳಿಗೆ ವಿಶೇಷ ಕಾಳಜಿಯನ್ನು ವಹಿಸಿ ಉಚಿತ ಶಿಕ್ಷಣವನ್ನು ನೀಡುತ್ತಿವೆ. ಮೈಸೂರು ಉತ್ತಮ ಶೈಕ್ಷಣಿಕ ವ್ಯವಸ್ಥೆಯನ್ನು ಹೊಂದಿ ಒಳ್ಳೆಯ ವಾತಾವರಣವನ್ನು ಉಂಟು ಮಾಡಿದೆ.

ಒಟ್ಟಾರೆಯಾಗಿ ಮೈಸೂರು ನಗರ ತನ್ನ ಸಂಸ್ಕೃತಿಯಿಂದ ವಿಶ್ವವಿಖ್ಯಾತಿಯನ್ನು ಪಡೆದು, ಪಾರಂಪರಿಕತೆ ಮತ್ತು ಆಧುನಿಕತೆಯ ಒಡನಾಟದೊಂದಿಗೆ ಅತಿವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಒಂದಾಗಿದ್ದು, ನಗರದ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುವ ಭರಾಟೆಯಲ್ಲಿ ಸುತ್ತ ಮುತ್ತಲ ಗ್ರಾಮಗಳನ್ನು ತನ್ನ ತೆಕ್ಕೆಯೊಳಗೆ ಹುದುಗಿಸಿಕೊಳ್ಳುತ್ತ ಸಾಗುತ್ತಿದೆ. ಐತಿಹಾಸಿಕವಾಗಿ ಮತ್ತು ಪೌರಾಣಿಕವಾಗಿ ಮಹಿಷಮಂಡಲ ಮಹಿಷನ ಊರಾಗಿ, ಮೈಸೂರಾಗಿ, ಚಾಮುಂಡೇಶ್ವರಿಯು ನಗರದ ಅಧಿದೇವತೆಯ ಸ್ಥಾನಕ್ಕೇರಿ, ಮೈಸೂರಿನ ಮಹಾರಾಜರ ಆಡಳಿತದವರೆಗೆ ತನ್ನದೇ ಆದ ದಾಖಲೆಗಳನ್ನು ಸೃಷ್ಟಿಸಿದೆ. ಧಾರ್ಮಿಕವಾಗಿ ಸರ್ವಧರ್ಮ ಸಮನ್ವಯವನ್ನು ಸಾಧಿಸಿ, ಸಾಮಾಜಿಕವಾಗಿ ಎಲ್ಲರೊಡಗೂಡಿ ಆರ್ಥಿಕತೆಯ ಶಿಖರದಲ್ಲಿ ರಾಜಕೀಯ ಮತ್ತು ಶೈಕ್ಷಣಿಕವಾಗಿ ಉನ್ನತೀಕರಿಸಿಕೊಂಡು ಸಾಗುತ್ತಿರುವುದನ್ನು ಕಾಣಬಹುದಾಗಿದೆ.

# ಕೊನೆ ಟಿಪ್ಪಣಿಗಳು

1. ಪಿ.ವಿ.ನಂಜರಾಜ ಅರಸು, ನೂರಿನ್ನೂರು ವರ್ಷಗಳ ಹಿಂದೆ, ಪು.ಸಂ–17.
2. ಅದೇ, ಪು.ಸಂ–18.
3. ಬಿ.ಎಲ್.ರೈಸ್, ಗ್ಯಾಸೆಟಿಯರ್, ಸಂಪುಟ–2, ಪು.ಸಂ–275.
4. ಡಾ.ಎನ್.ಎನ್.ಚಿಕ್ಕಮಾದು, ಮೈಸೂರು ತಾಲೂಕು ಗ್ಯಾಸೆಟಿಯರ್, ಪು.ಸಂ–10.
5. ಅದೇ, ಪು.ಸಂ–11.
6. G.S.Gai, Antiquity of Mysore cultural profiles of Mysore city Antropological survey of India Colcata, page.no-9-10.
7. ಪ್ರೊ.ರಂಗಪ್ಪ.ಕೆ.ಎಸ್.(ಪ್ರ.ಸಂ,), ಮೈಸೂರು ದರ್ಶನ, ಭಾಗ–1, ಪು.ಸಂ–8.
8. ಅದೇ, ಪು.ಸಂ–8.
9. ಎನ್.ಎನ್.ಚಿಕ್ಕಮಾದು, ಮೈಸೂರು ತಾಲೂಕು ಗ್ಯಾಸೆಟಿಯರ್, ಪು.ಸಂ–12.
10. ಬಾ.ರಾ.ಗೋಪಾಲ್, ಎ.ಕ, ಸಂಪುಟ–5, ಪೀಠಿಕೆ, ಪು.ಸಂ–3.
11. ಡಾ.ಕೆ.ಕೆಂಪೇಗೌಡ(ಲೇ), ಭಾಷೆ ಸಮಾಜ ಸಂಸ್ಕೃತಿ, ಪು.ಸಂ–1.

# ಅಧ್ಯಾಯ–2

## ದೇವಾಲಯಗಳ ಪರಂಪರೆ–ಇತಿಹಾಸ

ಮಾನವನ ಹುಟ್ಟಿನೊಂದಿಗೆ ಪರಂಪರೆಯು ಉಗಮಗೊಂಡು ಸಂಸ್ಕೃತಿಯೊಂದಿಗೆ ಮಿಳಿತವಾಗಿ ತಲೆಮಾರಿನಿಂದ ತಲೆಮಾರಿಗೆ ಕೆಲವು ಬದಲಾವಣೆಗಳೊಂದಿಗೆ ಅಲ್ಪ ಸ್ವಲ್ಪ ಮೂಲ ಸೊಗಡಿನ ವಾಸನೆಯನ್ನು ಉಳಿಸಿಕೊಂಡು ಮುನ್ನಡೆಯುತ್ತಿದೆ. ಪ್ರತಿಯೊಂದು ವಿಷಯವಸ್ತುವು ತನ್ನದೇ ಆದ ಒಂದು ಪರಂಪರೆಯನ್ನು ಹೊಂದಿರುತ್ತದೆ. ಅಂತೆಯೇ ದೇವಾಲಯಗಳು ಕೂಡ ತನ್ನದೇ ಆದ ವಿಶಿಷ್ಟತೆಯೊಂದಿಗೆ ಪಾರಂಪರಿಕ ಇತಿಹಾಸವನ್ನು ಹೊಂದಿದೆ. ಆದರೆ ದೇವಾಲಯಗಳ ಪಾರಂಪರಿಕ ಇತಿಹಾಸದ ಬಗ್ಗೆ ನಿಖರವಾಗಿ ಹೇಳುವುದು ಅಸಾಧ್ಯವಾಗಿದೆ. ಮಾನವ ದೇವರು ಮತ್ತು ದೇವಾಲಯಗಳ ಕಲ್ಪನೆಯನ್ನು ಅವನದೇ ಆದ ರೀತಿಯಲ್ಲಿ ಮಾಡಿಕೊಂಡು ಧಾರ್ಮಿಕ ನೆಲೆಯನ್ನು ಹುಟ್ಟುಹಾಕಿದ್ದಾನೆ. ಪ್ರಕೃತಿಯನ್ನು ದೇವರೆಂದು ಪೂಜಿಸಿದ್ದಾನೆ. ದೇವರು ತನ್ನಂತೆಯೇ ಎಂದು ಭಾವಿಸಿ ಗುಡಿಗುಂಡಾರಗಳನ್ನು ಕಟ್ಟಿದ್ದಾನೆ. ಸಂಬಂಧಗಳನ್ನು ಕಲ್ಪಿಸಿದ್ದಾನೆ. ಹೀಗೆ ಹಲವಾರು ಅಂಶಗಳನ್ನು ಗಮನಿಸಿ ದೇವಾಲಯಗಳ ಪಾರಂಪರಿಕ ಇತಿಹಾಸ, ದೇವಾಲಯಗಳ ಉಗಮ, ಬೆಳವಣಿಗೆ ಹಾಗೂ ಮೈಸೂರು ನಗರದ ದೇವಾಲಯಗಳ ಪ್ರಾಚೀನತೆಯನ್ನು ತಿಳಿಯಲು ಶಾಸನಗಳು, ಪ್ರಾಚೀನ ಗ್ರಂಥಗಳು, ನಾಣ್ಯಗಳು ಮುಂತಾದವುಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

### 2.1 ಪರಂಪರೆ

ಪರಂಪರೆ ಎನ್ನುವುದು ವ್ಯಾಪಕವಾದ ಪರಿಕಲ್ಪನೆಯನ್ನು ಹೊಂದಿದೆ. ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಪರಂಪರೆಯ ಪರಿಕಲ್ಪನೆಯಿದೆ. ಪರಂಪರೆ ಒಂದೆರಡು ದಿನಗಳಲ್ಲಿ, ವರ್ಷಗಳಲ್ಲಿ ರೂಪುಗೊಳ್ಳುವಂತದ್ದಲ್ಲ. ಅನೇಕ ವರ್ಷಗಳ, ದಶಕಗಳ, ಸಹಸ್ರ ವರ್ಷಗಳ ಕಾಲಾವಧಿಯಲ್ಲಿ ರೂಪುಗೊಳ್ಳುವಂತದ್ದು. ಒಂದು ಸಾಂಸ್ಕೃತಿಕ ವರ್ಗ ತನ್ನ ಸಂಸ್ಕೃತಿಯಲ್ಲಿ, ಆಂತರಿಕ, ಬಾಹ್ಯ ಕಾರಣಗಳಿಂದ ಕೆಲವನ್ನು ಕೈಬಿಟ್ಟು, ಕೆಲವನ್ನು ಸೇರಿಸಿಕೊಂಡು, ಪರಿಷ್ಕರಿಸಿಕೊಂಡು ಪರಂಪರೆಯನ್ನು ಸೃಷ್ಟಿಸುತ್ತದೆ. ಪರಂಪರೆ ಎಂಬುದು ಒಂದು ಸಂಸ್ಕೃತಿಯ ಅಂತರ್ಗತ ಸತ್ವವೇ ಹೊರತು, ಬೇರೆಯೇನು ಅಲ್ಲ.

ಪರಂಪರೆಯನ್ನು ಮೂರು ರೀತಿಗಳಲ್ಲಿ ಪರಿಭಾವಿಸಲು ಸಾಧ್ಯ. 1.ಪರಂಪರೆ ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಗೊಳ್ಳುವಂತದ್ದು. 2.ಸಂಸ್ಕೃತಿಯಿಂದ ರೂಪುಗೊಂಡ ಸಾಮಗ್ರಿ. (ಇದನ್ನು ವಸ್ತುಸಂಗ್ರಹಾಲಯಗಳಲ್ಲಿ, ದಾಖಲಾತಿ ಸಂಗ್ರಹಾಲಯಗಳಲ್ಲಿ ಸಂಗ್ರಹಿಸಿ ಸಂರಕ್ಷಿಸಬಹುದು) 3.ಪರಂಪರೆ ಯಾವುದೇ ಒಂದು ಸಂಸ್ಕೃತಿಯ ಗುಣಮಟ್ಟ ಸೂಚಕ. ಪರಂಪರೆಯ ಪರಿಕಲ್ಪನೆ ಈ ಮೂರು ರೀತಿಗಳಲ್ಲಿಯೂ ಬಳಕೆಗೊಳ್ಳುತ್ತಿದೆ.

ಜಾನಪದ ವಿದ್ವಾಂಸರು ಮೂರು ಬಗೆಯ ಪರಂಪರೆಗಳನ್ನು ಗುರುತಿಸುತ್ತಾರೆ. 1.ಮೃತ ಪರಂಪರೆ 2.ಜೀವಂತ/ನಿಷ್ಕ್ರಿಯ ಪರಂಪರೆ 3.ಕ್ರಿಯಾಶೀಲ ಪರಂಪರೆ. ಪರಂಪರೆಯನ್ನು ಇನ್ನೊಂದು ರೀತಿಯಲ್ಲಿಯೂ ವರ್ಗೀಕರಿಸಬಹುದು. 1.ಶಿಷ್ಟ ಪರಂಪರೆ, 2.ಜಾನಪದ ಪರಂಪರೆ, 3.ಜನಪ್ರಿಯ ಪರಂಪರೆ. ಬರವಣಿಗೆಯ ಮೂಲಕ ಸಾಗಿಬರುವುದು ಶಿಷ್ಟ ಪರಂಪರೆ. ಮೌಖಿಕ ವಿಧಾನದಲ್ಲಿ ಸಾಗಿಬರುವುದು ಜಾನಪದ ಪರಂಪರೆ, ಸಮೂಹ ಸಂಪರ್ಕ ಮಾಧ್ಯಮಗಳ ಮೂಲಕ ಸಾಗಿಬರುವುದು ಜನಪ್ರಿಯ ಪರಂಪರೆ.

ಮಾನವ ವಿಜ್ಞಾನಿ ರೆಡ್‌ಫೀಲ್ಡ್ Little Tradition ಮತ್ತು Great Tradition ಎಂಬ ಬಗೆಗಳನ್ನು ಗುರುತಿಸಿದ್ದಾರೆ. ಇವುಗಳನ್ನು ಕಿರು ಪರಂಪರೆ ಮತ್ತು ಮಹಾ ಪರಂಪರೆ ಎಂದು ಕರೆಯುತ್ತಾರೆ. ಮಹಾ ಪರಂಪರೆ ಸಮಾಜದಲ್ಲಿ ಪ್ರಧಾನ ಸ್ಥಾನದಲ್ಲಿಯೂ, ಕಿರು ಪರಂಪರೆ ಅಧೀನ ಸ್ಥಾನದಲ್ಲಿಯೂ ಇರುತ್ತದೆ. ಈ ವರ್ಗೀಕರಣದಲ್ಲಿ ಮೇಲು ಕೀಳಿನ ಕಲ್ಪನೆ ಇರುವುದರಿಂದ ಇದನ್ನು ವಿದ್ವಾಂಸರು ಒಪ್ಪುವುದಿಲ್ಲ.

ಭಾರತೀಯ ಪರಂಪರೆಯಲ್ಲಿ ಮಾರ್ಗ ಮತ್ತು ದೇಶಿ ಎಂಬ ಪರಂಪರೆಗಳು ರೂಪುಗೊಂಡಿವೆ. ಕನ್ನಡದಲ್ಲಿ ಪರಂಪರೆ ಮತ್ತು ಸಂಪ್ರದಾಯ ಎಂಬ ಎರಡು ಪರಿಕಲ್ಪನೆಗಳು ರೂಢಿಯಲ್ಲಿವೆ. ಪರಂಪರೆ ಕ್ರಿಯಾಶೀಲವಾದುದು, ಪರಿವರ್ತನ ಶೀಲವಾದುದು, ಸಂಪ್ರದಾಯ ಜಡವಾದುದು ಎಂಬ ಅರ್ಥದಲ್ಲಿ ಬಳಕೆಯಾಗಿದೆ. Tradition ಎಂಬ ಪದ ಲ್ಯಾಟಿನ್ನಿನ Trader ಎಂಬ ಪದದಿಂದ ನಿಷ್ಪನ್ನವಾಗಿದೆ. ಇದು ಕೊಡು, ತಲುಪಿಸು, ವರ್ಗಾವಣೆ ಮಾಡು ಎಂಬುದಾಗಿದೆ. ಜಾನಪದ ಅಧ್ಯಯನದಲ್ಲಿ ಇದನ್ನು ಪರಂಪರೆಯ ವಿಜ್ಞಾನ ಎಂದು ಕರೆಯಲಾಗಿದೆ.

ಪರಂಪರೆಗಳನ್ನು ಅಭ್ಯಾಸ ಮಾಡುವ ಪ್ರಯತ್ನಗಳು ಮಾತ್ರವಲ್ಲದೆ ತಮ್ಮ ರಾಷ್ಟ್ರೀಯವಾದಿ ಉದ್ದೇಶಗಳಿಗಾಗಿ ಪರಂಪರೆಗಳನ್ನು ಸೃಷ್ಟಿಸುವ ಪ್ರಯತ್ನಗಳೂ ನಡೆದಿವೆ. ಶಿಷ್ಟ ಪರಂಪರೆಗೆ

ಸಮಾನವಾದ ಪರಂಪರೆ ತಮ್ಮ ದೇಶದಲ್ಲಿಯೂ ಇದೆ ಎಂದು ತೋರಿಸುವ ಸಲುವಾಗಿ ಜರ್ಮನಿಯಲ್ಲಿ ಗ್ರೀಮ್ ಸಹೋದರರ Household Tale, ಅಮೆರಿಕಾದ Paul Bunyan ಕಾವ್ಯ, ಫಿನ್‌ಲ್ಯಾಂಡಿನ ಕಲೇವಾಲ ಮಹಾಕಾವ್ಯ ಈ ಕೃತಿಗಳನ್ನು ಉದ್ದೇಶ ಪೂರ್ವಕವಾಗಿ ತಿದ್ದಿ ಅವುಗಳಿಗೆ ಹೊಸ ರೂಪವನ್ನು ಕೊಟ್ಟು ಖೋಟಾ ಜಾನಪದವನ್ನು ಸೃಷ್ಟಿಸುವ ಪ್ರಯತ್ನವೂ ನಡೆದಿವೆಯೆಂದು ಅಲೆನ್ ಡೆಂಡಸ್ ಸಮರ್ಪಕವಾಗಿ ಆಧಾರಸಹಿತ ಪ್ರತಿಪಾದಿಸಿದ್ದಾರೆ. ಕೀಳರಿಮೆಯಿಂದ ಬಳಲುತ್ತಿದ್ದ ದೇಶದ ಜನರಿಗೆ ಜಾನಪದದ ಮೂಲಕ ಪರಂಪರೆಯನ್ನು ಸೃಷ್ಟಿಸುವ ಅಗತ್ಯವಿತ್ತು. ಅದಕ್ಕಾಗಿ ಪರಂಪರೆಗಳನ್ನು ಸೃಷ್ಟಿಸುವ ಕಾರ್ಯ ನಡೆಯಿತು; ಈಗಲೂ ನಡೆಯುತ್ತಿದೆ. ಕಳೆದ ನಾಲ್ಕೈದು ದಶಕಗಳಲ್ಲಿ ಜಗತ್ತಿನ ಅನೇಕ ದೇಶಗಳು ವಸಾಹತು ಶಾಹಿಯಿಂದ ಬಿಡುಗಡೆ ಹೊಂದಿ ರಾಜಕೀಯ ಸ್ವಾತಂತ್ರ್ಯವನ್ನು ಪಡೆದುಕೊಂಡಿವೆ. ಸಾಂಸ್ಕೃತಿಕ ಪರಂಪರೆಗಳನ್ನು ಸೃಷ್ಟಿಸಿಕೊಳ್ಳುವ ಪ್ರಯತ್ನದಲ್ಲಿವೆ.

ಭಾರತದಲ್ಲಿ ಜಾತಿಪದ್ಧತಿಯ ತುಳಿತಕ್ಕೆ ಒಳಗಾದ ಅನೇಕ ಹಿಂದುಳಿದ, ದಲಿತ ಜಾತಿಗಳು, ಬುಡಕಟ್ಟುಗಳು ಪ್ರತಿಭಟನೆಯ ಸಲುವಾಗಿ ಮೇಲು ಜಾತಿಗಳ ಪರಂಪರೆಯನ್ನು ಬಿತ್ತರಿಸಿ, ತಮ್ಮ ತಮ್ಮ ಪರಂಪರೆಗಳನ್ನು ಸೃಷ್ಟಿಸಿಕೊಳ್ಳುವ, ಪರಿಷ್ಕರಿಸಿಕೊಳ್ಳುವ ಪ್ರಯತ್ನದಲ್ಲಿವೆ. 19ನೇ ಶತಮಾನದಲ್ಲಿ ಆರಂಭವಾದ ರಮ್ಯರಾಷ್ಟ್ರೀಯವಾದಿ ಚಳುವಳಿಯ ಎರಡನೆಯ ಹಂತ ಇನ್ನೂ ಮುಂದುವರಿಯುತ್ತಿದೆ. ವಸಾಹತುಶಾಹಿಯಿಂದ ಬಿಡುಗಡೆ ಹೊಂದಿದ ದೇಶಗಳು ಸಾಂಸ್ಕೃತಿಕ ಅನನ್ಯತೆಗಾಗಿ ಪ್ರಯತ್ನಿಸುತ್ತಿರುವುದರಿಂದ ಈ ಪರಿಸ್ಥಿತಿ ಉಂಟಾಗಿದೆ. ಸಮಕಾಲೀನ ರಾಜಕೀಯ ಪರಿಸ್ಥಿತಿಗಳಿಂದ ಜಾನಪದ ಅಧ್ಯಯನದ ಮೇಲೂ ಪ್ರಭಾವ ಬೀರಿ ಪರಂಪರೆಯ ಬಗ್ಗೆ ಹೊಸ ರೀತಿಯಲ್ಲಿ ಸಂಶೋಧನೆಗಳು ನಡೆಯಲು ಕಾರಣವಾಗಿದೆ.

ಪರಂಪರೆ ಮತ್ತು ಅನನ್ಯತೆಗೆ ಪರಸ್ಪರ ಸಂಬಂಧವಿದೆ. ಪರಂಪರೆಯುಳ್ಳ ಪ್ರತಿಯೊಬ್ಬ ವ್ಯಕ್ತಿಯೂ ಪರಂಪರೆಯಲ್ಲಿ ತನ್ನ ವೈಯಕ್ತಿಕ ಪ್ರತಿಭೆಯನ್ನು ತೋರಿಸುವ ಪ್ರಯತ್ನ ಮಾಡುವಂತೆಯೇ ಪ್ರತಿಯೊಂದು ಸಾಂಸ್ಕೃತಿಕ ವರ್ಗವೂ, ದೇಶವೂ ತನ್ನ ಸಾಂಸ್ಕೃತಿಕ ಪರಂಪರೆ ಇತರೆ ಸಾಂಸ್ಕೃತಿಕ ವರ್ಗ, ದೇಶಗಳ ಪರಂಪರೆಗಿಂತ ಭಿನ್ನವಾದುದೆಂದೂ, ಅನನ್ಯವಾದುದೆಂದೂ ಸಾಧಿಸಿ, ತೋರಿಸುವ ಪ್ರಯತ್ನ ಮಾಡುತ್ತಿರುತ್ತದೆ. ಇವುಗಳ ಪರಸ್ಪರ ಸಂಬಂಧಗಳ ಬಗ್ಗೆ ಮನೋವೈಜ್ಞಾನಿಕ, ಸಮಾಜ ವಿಜ್ಞಾನ, ಇತಿಹಾಸ, ಜಾನಪದ ವಿಜ್ಞಾನ ಮಾನವ ವಿಜ್ಞಾನದ ದೃಷ್ಟಿಯಿಂದ ಅಧ್ಯಯನಗಳು ನಡೆಯುತ್ತಿವೆ.

## 2.2 ದೇವಾಲಯಗಳ ಉಗಮ, ಬೆಳವಣಿಗೆ ಮತ್ತು ಇತಿಹಾಸ

ಪ್ರಾಣಿವರ್ಗದಲ್ಲಿ ಮನುಷ್ಯ ಅತ್ಯಂತ ಮೇಲ್ಮಟ್ಟದ ಸ್ಥಾನದಲ್ಲಿ ಪ್ರಮುಖವಾಗಿರುವುದು ಅವನು ನಡೆದುಕೊಂಡು ಬರುತ್ತಿರುವ ಸಂಸ್ಕೃತಿಯಿಂದ. ಉಳಿದ ಪ್ರಾಣಿಗಳಲ್ಲಿ ಸಂಸ್ಕೃತಿಯಿರುವ ಕುರುಹುಗಳು ಎಲ್ಲಿಯೂ ಕಂಡುಬಂದಿಲ್ಲ. ಮನುಷ್ಯನ ಮುಖ್ಯವಾದ ಬಂಡವಾಳವೇ ಸಂಸ್ಕೃತಿ. ಸಂಸ್ಕೃತಿ ಎನ್ನುವುದು ಇರದಿದ್ದರೆ ಮನುಷ್ಯ–ಮನುಷ್ಯತ್ವದ ಇರುವು ಸಾಧ್ಯವಾಗುತ್ತಿರಲಿಲ್ಲ. ಸಂಸ್ಕೃತಿ ಎನ್ನುವುದು ಕೇವಲ ಬೆಡಗಿನ ಬಿನ್ನಾಣವಲ್ಲ, ಯಾವುದೋ ಕನಸಿನ ಗಂಟಲ್ಲ, ಗಾಳಿ ಗೋಪುರವಲ್ಲ, ಅದು ಮಾನವನ ಬದುಕಿನ, ಉಳಿವಿನ ಊರುಗೋಲು. ಅದೇ ಬದುಕಿನ ಇಂದಿನ ಅಡ್ಡಿ. ಮುಂದಿನ ಆತಂಕಗಳನ್ನೆಲ್ಲ ಬದಿಗೊತ್ತಿ ಮುಂದೆ ಸಾಗಲು ಸಂಸ್ಕೃತಿ ಒಂದು ಸಾಧನವಾಗಿದೆ. ಸಂಸ್ಕೃತಿಯಲ್ಲಿನ ಭೇದವೊಂದನ್ನು ಬಿಟ್ಟರೆ ಮನುಷ್ಯನಿಗೂ ಇತರ ಪ್ರಾಣಿಗಳಿಗೂ ವ್ಯತ್ಯಾಸ ಅಷ್ಟೇನು ಇರದು. ಅಲ್ಲದೆ ಪ್ರಾಣಿಗಳು ಬಾಳಿ ಬದುಕಲು ಇರುವ ಸಾಧನ ಸೌಲಭ್ಯಗಳು ಮನುಷ್ಯನಿಗೆ ಇಲ್ಲ. ಪ್ರಕೃತಿಯೇ ಮಾನವರನ್ನು ದುರ್ಬಲರನ್ನಾಗಿಸಿದೆ. ಆದರೆ ಅವನ ಉಳಿವು ಸಾಗಲೆಂದು ಮೆದುಳನ್ನು–ಬುದ್ಧಿಶಕ್ತಿಯನ್ನು ಧಾರಳವಾಗಿ ನೀಡಿದೆ. ತನ್ನ ಬುದ್ಧಿಶಕ್ತಿಯನ್ನು ಬಳಸಿಕೊಂಡೇ ಮನುಷ್ಯ ಸಂಸ್ಕೃತಿಯನ್ನು ಮೂಡಿಸಿಕೊಂಡಿರುವುದು.

ಸಂಸ್ಕೃತಿಯ ವಿಸ್ತಾರವಾದ ಹರವಿನಲ್ಲಿ ಮನುಷ್ಯ ತನ್ನ ಕೈಗಳಿಂದ ಮಾಡಿರುವ ವಿವರಗಳೆಲ್ಲವೂ ಸೇರುತ್ತದೆ. ಮನಸ್ಸಿನಿಂದ ಒದಗಿಸಿಕೊಂಡಿರುವ ಸಾಧನೆಗಳನ್ನೆಲ್ಲ ಎದುರಿಸಲು ಮನುಷ್ಯನ ಕಪೋಲಕಲ್ಪಿತ ನಂಬಿಕೆಗಳೇ ಮುಂದೆ ಧರ್ಮವೆಂದಾಯಿತು. ಮಾನಸಿಕ ಕಲ್ಪನೆಗಳಿಗೆ ವಿಶಿಷ್ಟ ರೂಪಗಳನ್ನು ಒದಗಿಸಿತು. ಕೈಯಿಂದ ಶ್ರಮಿಸಿ, ನಿರ್ಮಿಸಿದ ಕೆಲಸವೇ ಮೂರ್ತಿಶಿಲ್ಪವಾಯಿತು. ಮನುಷ್ಯ ಭೂಮಿಯ ಮೇಲೆ ಕಾಣಿಸಿಕೊಂಡಾಗಿನಿಂದಲೂ ಕಲ್ಪನೆಗಳೂ, ಮೂರ್ತಿಗಳೂ ಇದ್ದೇ ಇವೆ. ಅವುಗಳು ಬದುಕಿನ ಮುಖ್ಯ ವಿವರಗಳಾಗಿಯೇ ಇವೆ. ದೇವಾಲಯದಲ್ಲಿ ಕಲ್ಪನೆ–ಮೂರ್ತಿಗಳೆರಡೂ ಕಲೆಯುತ್ತವೆ. ಅದರಲ್ಲೂ ಧರ್ಮವೂ ಉಂಟು, ಕಲೆಯೂ ಉಂಟು. ಮನುಷ್ಯ ಪ್ರಾಣಿವರ್ಗದ ಕೆಳ ಹಂತಗಳಿಂದ ಸಂಸ್ಕೃತಿಯ ನೆಲೆಯನ್ನು ತಲೆಯ ಮೇಲೆತ್ತಿ ನಿಂತಾಗಲೇ ಧರ್ಮವೂ ಅವನ ನೆರವಿಗೆ ಎದ್ದು ನಿಂತದ್ದು. ಪ್ರಾಕ್ತನ ಸಂಶೋಧನೆಗಳಿಂದ ಈ ವಿಚಾರ ಸ್ಪಷ್ಟವಾಗಿದೆ. ಮಾನವನ ಅತ್ಯಂತ ಪ್ರಾಚೀನ ಅವಶೇಷಗಳೊಂದಿಗೆ ಧಾರ್ಮಿಕ ಎನ್ನಬಹುದಾದ ವಿವರಗಳ ಸೂಚನೆಯೂ ಇದೆ.

ಮನುಷ್ಯನಿಗೆ ಧರ್ಮದ ಅಗತ್ಯವಿದೆ. ಪ್ರಕೃತಿಯ ವಿಕೋಪಗಳಿಂದ ನೆರೆಹೊರೆಯ ಜನರ ಆಕ್ರಮಣದಿಂದ ತನ್ನನ್ನು ತಾನು ಕಾಪಾಡಿಕೊಳ್ಳಲು ಧಾರ್ಮಿಕ ಕಲ್ಪನೆಗಳು ನೆರವಾದವು. ಬದುಕಿನ

ಪ್ರತಿಯೊಂದು ಕ್ಷಣದ ಆತಂಕಕ್ಕೆ ಧರ್ಮವೊಂದು ರಕ್ಷಾಕವಚವಾಯಿತು. ಪ್ರಸ್ತುತ ಕಿರಿಕಿರಿ ಉಂಟುಮಾಡುವ ಭವಿಷ್ಯದ ಅನಿಶ್ಚಿತತೆ ಎರಡೂ ಅವನಲ್ಲಿ ಭಯವನ್ನು ಮೂಡಿಸಿದವು. ಧರ್ಮಕ್ಕೆ ಭಯವೇ ಮೂಲ ಎನ್ನುವುದನ್ನು ಯಾರು ಅಲ್ಲಗಳೆಯಲಾರರು. ಈಗಲೂ ನಮ್ಮನ್ನು ಸುತ್ತುವರಿದಿರುವುದು ಭಯದ ಭೀತಿ ಎಂಬುದನ್ನು ಮನಗಾಣುತ್ತೇವೆ. ನಿಸರ್ಗದ ಮಡಿಲಲ್ಲಿ ಅಡಗಿಕೊಂಡಿರುವ ವಿಶಿಷ್ಟ ವೈಚಿತ್ರ್ಯ ಅದ್ಭುತಗಳನ್ನು ಮನುಷ್ಯ ಅಡಿಗಡಿಗೆ ಆಲೋಚಿಸಿ ತನ್ನ ದೌರ್ಬಲ್ಯವನ್ನೂ, ಅಸಹಾಯಕತೆಯನ್ನೂ ಮನದಟ್ಟು ಮಾಡಿಕೊಂಡಿದ್ದಾನೆ. 'ಹರ ಮುನಿದರೆ ನರ ಕಾವನೇ?' ಪ್ರಕೃತಿ ಸಿಟ್ಟಿಗೆದ್ದರೆ ಮಾನವನ ಆಟ ಏನೇನೂ ಸಾಗದು.

ಮನುಷ್ಯ ಜೀವನ ನಡೆಸುವುದು ಈ ಆತಂಕ, ಭಯ–ಭೀತಿಗಳಿಂದಷ್ಟೆ ಎಂದು ತಿಳಿಯಬಾರದು. ಪ್ರಕೃತಿಯ ಸ್ವಾರಸ್ಯವನ್ನು ಕಂಡು ಅದರ ಆಳ, ಎತ್ತರಗಳನ್ನು ಅದರೊಂದಿಗೆ ಅಚ್ಚರಿಯಾಗಿ ಕಾಣಿಸಿಕೊಳ್ಳುತ್ತದೆ. ಅದ್ಭುತಗಳನ್ನು ನೋಡಿದಾಗ ಆಶ್ಚರ್ಯಪಡುವ ಸಾಮರ್ಥ್ಯ ತನ್ನಲ್ಲಿ ಭಯವನ್ನು ಒದಗಿಸುವ ವಿವರವನ್ನು ನೋಡಿ ತಲೆದೂಗಿ ಮೆಚ್ಚಿಕೊಳ್ಳುವ ಸಾವಧಾನ ಅವನ ಹಿರಿಮೆಗಳನ್ನು ಅವನು ಕಾಣದೆ ಇರಲಾರ. ತಲೆಯೆತ್ತಿ ಆಕಾಶವನ್ನು ನೋಡಿದಾಗ, ಎದುರಿಗೆ ಎದ್ದುನಿಂತಿರುವ ಬೆಟ್ಟವನ್ನು ದಿಟ್ಟಿಸಿದಾಗ, ಮೇರೆಯನ್ನು ಅರಿಯದೆ ಹರಿದಾಡುವ ಸಾಗರವನ್ನು ಕಂಡಾಗ, ಮೇಲೆರಗುವಂತೆ ಮೇಲಿಂದ ಜಾರಿ ಬರುವ ಮಿಂಚು ತನ್ನ ಕಣ್ಣನ್ನು ಕೋರೈಸಿದಾಗ ಅವನಿಗೆ ಭಯವೂ ಆಗುತ್ತದೆ, ಅಚ್ಚರಿಯೂ ಆಗುತ್ತದೆ. ಧರ್ಮಕ್ಕೆ ಭಯ ತಾಯಿಯಾದರೆ ಆಶ್ಚರ್ಯ ತಂದೆ; ಎರಡರ ಕೂಸು ಅದು. ಇವುಗಳೊಂದಿಗೆ ಪ್ರವೃತ್ತಿಯು ಬೆರೆಯುತ್ತದೆ.

ತನ್ನ ಪರಿಸರದಿಂದ ಮುಂದೆ ಸಾಗುವ ತನ್ನ ನೆಲೆಯಿಂದ ಮೇಲೇಳುವ, ಕಣ್ಣಿಗೆ ಕಾಣದುದನ್ನು ಕಾಣಬಯಸುವ, ಕೈಗೆ ಎಟುಕದುದನ್ನು ಹಿಡಿಯುವ ಪ್ರವೃತ್ತಿ ಮನುಷ್ಯನಿಗೆ ಸಹಜವಾದುದು. ಭಯದಿಂದ ಅದರ ಹಿಂದಿರುವ ತತ್ವವನ್ನು ಕಂಡು ಅದನ್ನು ತನ್ನದಾಗಿಸಿಕೊಳ್ಳುವ ಹಂಬಲ ಮಾನವನಲ್ಲಿದೆ. ದೂರವಿರುವುದನ್ನು ಹತ್ತಿರ ಸೆಳೆದುಕೊಳ್ಳಬೇಕು, ಮೇಲಿರುವುದನ್ನು ಕೆಳಗಿಳಿಸಿಕೊಳ್ಳಬೇಕು, ಅಡಗಿರುವುದನ್ನು ಹೊರಗೆಳೆಯಬೇಕು, ಅದ್ಭುತ ವಾದುದನ್ನು ತನ್ನ ಬುದ್ಧಿಶಕ್ತಿಯೊಳಗೆ ಅಂತಃಕರಿಸಿ ಕೊಳ್ಳಬೇಕು ಎನ್ನುವ ತವಕ ಮಾನವನಿಗೆ ಹಿಂದಿನಿಂದಲೂ ಇದೆ. ಆಶ್ಚರ್ಯಪಡುವ ಪ್ರವೃತ್ತಿಯೂ, ಹೊಂದಿಕೊಳ್ಳುವ ಗುಣವೂ, ಅರಿಯುವ ಕುತೂಹಲವೂ ಸೇರಿ ಧರ್ಮಕ್ಕೆ ಹೊಸದೊಂದು ಹೊಳಪು ಬಂದಿದೆ. ಅದರಲ್ಲಿ ಕಲೆಯ ಅಂಶವೂ ಅವಶ್ಯವೆಂಬಂತೆ ಸೇರಿಕೊಂಡಿದೆ. 'ಪವಿತ್ರವೆಂಬ ಭಾವನೆ ಅಭಿವ್ಯಕ್ತಿಗಳೆನಿಸಿದ ಪೂಜೆ,

ವ್ರತ, ಕಲ್ಪ, ಮಂತ್ರ, ತಂತ್ರ, ಮೂರ್ತಿ, ದೇಗುಲ ಮೊದಲಾದವುಗಳಲ್ಲಿ ಕಲೆಯ ಪಾತ್ರ ಮೈಗೂಡಿದೆ. ಧಾರ್ಮಿಕ ಕಲ್ಪನೆಗಳಲ್ಲಿ ಕಲೆಗಾರಿಕೆಯ ಮೂಲದಲ್ಲಿ ಅಚ್ಚರಿಯೂ, ಕುತೂಹಲವೂ ಅಡಗಿಕೊಂಡಿವೆ. ಇವೆರಡಕ್ಕೂ ವಿಷಯವಾದುದನ್ನು ಅನುಭವಕ್ಕೆ ತಂದುಕೊಳ್ಳುವ ಹಠವೂ, ಸಾಹಸವೂ ಒದಗಿಬರುತ್ತದೆ.

ಆತಂಕ ಆಶ್ಚರ್ಯ ಕುತೂಹಲವೇ ಮೊದಲಾದ ಭಾವನೆಗಳನ್ನು ಮೂಡಿಸುತ್ತ ಸುತ್ತುವರಿದ ಪ್ರಪಂಚದ ಗರ್ಭದಲ್ಲಿ ಅಡಗಿರುವ ಶಕ್ತಿಯನ್ನು ಅರಿತುಕೊಳ್ಳಬೇಕು. ಪ್ರಕೃತಿಯಲ್ಲಿನ ವಿವರ ಗಾಢವಾಗಿದ್ದಷ್ಟು, ವಿಸ್ಮಯಕಾರಿಯಾದಷ್ಟೂ ಅದರಲ್ಲಿನ ಶಕ್ತಿಯ ಕಲ್ಪನೆ ಆಳವಾಗುತ್ತದೆ. ಇದರಲ್ಲಿ ಪೂಜ್ಯಭಾವನೆ ಮೂಡುತ್ತದೆ. ಪೂರ್ವಜರು ಪ್ರಕೃತಿಯ ಆರಾಧಕರಾಗಿದ್ದ, ಬೆಟ್ಟಗುಡ್ಡಗಳನ್ನು, ಕಾಡುಮೇಡುಗಳನ್ನು, ನದಿ ಸಾಗರಗಳನ್ನು ದೇವತೆಗಳೆಂದು ಭಾವಿಸಿದ್ದು, ಈ ನೆಲೆಯಲ್ಲಿಯೇ ಅಂತೆಯೇ ಅಪೂರ್ವವೆನಿಸಿದ, ಚಿತ್ರ–ವಿಚಿತ್ರವೆನಿಸಿದ, ಭಯಾನಕವೆನಿಸಿದ ವಸ್ತುಗಳಲ್ಲಿಯೂ ಅವರು ಅದ್ಭುತ ಶಕ್ತಿಗಳನ್ನು ಕಂಡರು. ಅಪರೂಪದ ಕಲ್ಲು, ಸೋಜಿಗವಾದ ಆಕಾರ, ಆಕಾಶದಿಂದ ಬಿದ್ದ ಧೂಮಕೇತುವಿನ ಕುರುಹು ಮುಂತಾದುವುಗಳಲ್ಲಿ ಅವರು ಶಕ್ತಿಯನ್ನು ಕಲ್ಪಿಸಿಕೊಳ್ಳುವುದು ಕಷ್ಟವಾಗಲಿಲ್ಲ. ಪೂಜಾಸ್ಥಾನಗಳು ಮತ್ತು ಮೂರ್ತಿಶಿಲ್ಪಗಳ ಹಿನ್ನೆಲೆಯನ್ನು ಇಲ್ಲಿ ಗುರುತಿಸಬೇಕು.

ಪ್ರಾಚೀನ ಕಾಲದ ಮನುಷ್ಯನಿಗೆ ಪೂಜಾಭಾವನೆ ಬೆಳೆದದ್ದು ಅವನ ಅಲ್ಪ ಅರಿವಿನಿಂದ, ಅಜ್ಞಾನದಿಂದಷ್ಟೆ ಎಂದು ಹೇಳಲಾಗದು. ಅಪೂರ್ವವಾದುದರ, ಆಶ್ಚರ್ಯವೆನಿಸಿದುದರ ಎದುರು ನಿಂತಾಗ ಅವನಲ್ಲಿ ಮೂಡಿದ ಭಾವನೆಗಳು ಇಲ್ಲಿ ಕೆಲಸ ಮಾಡುತ್ತವೆ. ಅದ್ಭುತವಾದುದನ್ನು ಅನುಭವಕ್ಕೆ ತಂದುಕೊಳ್ಳುವ, ಸುಂದರವಾದುದನ್ನು ಸವಿಯುವ ಸಾಮರ್ಥ್ಯ ಮಾನವನಿಗೆ ಇರುವುದರಿಂದಲೇ ಅವನಲ್ಲಿ ಆರಾಧನಾ ಪ್ರವೃತ್ತಿ ಕಾಣಿಸಿಕೊಂಡಿತು. ಈ ಸಾಮರ್ಥ್ಯ ಇಂದಿಗೂ ಕಳೆಗುಂದಿ ಹಳತಾಗಿಲ್ಲ. ವಿಜ್ಞಾನದಲ್ಲಿಯೂ ಇದರ ಪಾತ್ರವಿಲ್ಲದಿಲ್ಲ. ಸಾಹಿತ್ಯ, ಕಲೆ, ಧರ್ಮಗಳ ವಿಚಾರವಂತೂ ಮಹತ್ವವಾದುದಾಗಿ ಅರ್ಥವತ್ತಾಗುತ್ತದೆ.

ಅಪೂರ್ವ, ಅದ್ಭುತ, ದಿವ್ಯವಾದುದನ್ನು ಅನುಭವಿಸುವ ಸಾಮರ್ಥ್ಯವಿರುವಂತೆಯೇ ಮನುಷ್ಯನಿಗೆ ಅದರ ಪ್ರತಿಕೃತಿಗಳನ್ನು ಕಲ್ಪಿಸಿಕೊಳ್ಳುವ, ರೂಪಿಸುವ ಸೃಜನಾಶಕ್ತಿಯೂ ಇದೆ. ಪ್ರಕೃತಿಸಿದ್ಧವಾದ ವಸ್ತುಗಳನ್ನು ಕಲಾತ್ಮಕವಾಗಿ ಮಾಡಿಟ್ಟುಕೊಳ್ಳುವ ಶಕ್ತಿಯೂ ಪ್ರಕೃತಿದತ್ತವಾದುದೆ. ಬೆಟ್ಟದ ಆಕಾರವನ್ನು ಹೋಲುವ ದೇಗುಲ, ಶಿಖರದಂತೆ ಕಾಣುವ ಗೋಪುರ, ಮರದ ದಿಮ್ಮಿಯನ್ನು ಹೋಲುವ ಲಿಂಗ ಇವೆಲ್ಲ ಮಾನವನ ಹವ್ಯಾಸದ ಅಭಿವ್ಯಕ್ತಿಗಳೇ ಆಗಿದೆ.

ಪ್ರತಿಮೆಗಳನ್ನೂ ಪ್ರತಿಕೃತಿಗಳನ್ನೂ ಮೂಡಿಸುವಾಗ ಮನುಷ್ಯ ತನ್ನ ಅನುಭವವನ್ನಷ್ಟೆ ಅವಲಂಭಿಸದೆ ಆಕಾಂಕ್ಷೆ–ಪ್ರತೀಕ್ಷೆಗಳನ್ನು, ಕಲ್ಪನೆಗಳನ್ನೂ ಬಳಸಿಕೊಂಡ.

ಧರ್ಮದ ನೆಲೆಯಲ್ಲಿ ಪ್ರತಿಕೃತಿಗಳ ಬಳಕೆ ಆರಂಭವಾಗುವ ಮೊದಲೇ ಪ್ರಕೃತಿಸಿದ್ಧವಾದ ಪ್ರತಿಮೆಗಳನ್ನು ಬಳಸುವುದಿತ್ತು. ಯಾವುದೇ ಕೆಲಸಕ್ಕೆ ಕೈಹಾಕುವ ಮೊದಲು ಆದಿಮಾನವ ಪ್ರತಿಮೆಗಳನ್ನು ಬಳಸಿಕೊಳ್ಳುತ್ತಿದ್ದ ನಿದರ್ಶನಗಳಿವೆ. ಬೇಟೆಗೆ ಹೊರಡುವ ಮುನ್ನ ಯಾವುದಾದರೂ ಅಪೂರ್ವವಾದ ವಸ್ತುಗಳಾದ ಮರ, ಬಂಡೆ, ನದಿ, ಬೆಟ್ಟ, ಆಕಾಶ, ಸೂರ್ಯ, ಚಂದ್ರ, ಪ್ರಾಣಿ ಹಾಗೂ ಪಕ್ಷಿಗಳನ್ನು ನೋಡಿದರೆ, ಆ ದಿನದ ಬೇಟೆ ಯಶಸ್ವಿಯಾದರೆ, ನೋಡಿದ ವಸ್ತುವಿನೊಂದಿಗೆ ನಂಟನ್ನು ಕಲ್ಪಿಸಿಕೊಳ್ಳುತ್ತಿದ್ದುದ್ದು ಸಾಮಾನ್ಯವಾಗಿತ್ತು. ನಂತರ ಬೇಟೆಗೆ ಹೊರಡುವಾಗಲೆಲ್ಲ ಅದೇ ವಸ್ತುವನ್ನು ನೋಡಿ ಹೊರಡುವ ಹಂಬಲ ಅವನಲ್ಲಿ ಮೂಡುತ್ತಿದ್ದುದು ಆಶ್ಚರ್ಯವಲ್ಲ. ಹೀಗೆ ಪ್ರಕೃತಿಯ ವಸ್ತು ಅವನ ಪಾಲಿಗೆ ಪಡಿಯಚ್ಚುಗಳು. ಕಲೆಗಾರನ ಕಲ್ಪನೆ ಇಲ್ಲಿ ಮೂಡತೊಡಗಿದ ಮೊದಲಿನ ನೆಲೆ ಇದಾಗಿತ್ತು.

ಪ್ರಾಚೀನ ಕಾಲದ ಧಾರ್ಮಿಕ ಕಲ್ಪನೆ ಇನ್ನೊಂದು ಬಗೆಯಾಗಿಯೂ ನಡೆದಿದೆ. ಆದಿಮಾನವನು ಬೇಟೆಗೆ ಹೊರಡುವ ಮುನ್ನ ಯಶಸ್ಸು ಗಳಿಸಲು, ತಾನು ವಾಸವಾಗಿದ್ದ ಗುಹೆಯ ಎದುರು ಚಚೌಕಾಕಾರದ ಮಂಡಲವೊಂದನ್ನು ಸ್ಥೂಲವಾಗಿ ಬರೆದು ನಡುವೆ ತನಗೆ ಬೇಕಾದ ಪ್ರಾಣಿಯ ಆಕಾರವನ್ನು ಬರೆದು ಅದರ ಮೈಮೇಲೆ ಬಾಣವೊಂದು ನಾಟಿದಂತೆ ಚಿತ್ರಿಸಿ ಹೊರಡುತ್ತಿದ್ದ. ಇದೇ ಅವರ ಬೇಟೆಗೆ ಪೂರ್ವಸಿದ್ಧತೆ. ಹೀಗೆ ಮಾಡಿದ ನಂತರ ಹೊರಟರೆ ಬೇಟೆ ದಕ್ಕುತ್ತದೆ ಎಂದು ಅವರ ನಂಬಿಕೆಯಾಗಿತ್ತು ಅಥವಾ ಯಾವುದಾದರೊಂದು ಅಪೂರ್ವವಾದ ಪದಾರ್ಥವೊಂದನ್ನು ತನ್ನ ಮೈಮೇಲೆ ಧರಿಸಿ ಹೊರಟರೆ ಕೈಗೊಂಡ ಕೆಲಸದಲ್ಲಿ ಯಶಸ್ಸು ದೊರೆಯುತ್ತದೆ ಎಂಬ ನಂಬಿಕೆಯಿತ್ತು. ಕಾಕತಾಳೀಯವಾಗಿ ಆ ದಿವಸ ಜಯ ಸಿಕ್ಕರೆ ಅದಕ್ಕೆ ಕಾರಣ ಆ ವಸ್ತು ಎಂಬ ನಂಬಿಕೆ ಬೇರೂರುವುದು ಸಾಮಾನ್ಯ. ಮುಂದೆ ಯಾವ ಕಾಯಕಕ್ಕೆ ಹೊರಟರೂ ಜೊತೆಯಲ್ಲಿ ಆ ವಸ್ತು ಅದೃಷ್ಟದ ಸಂಕೇತವಾಗಿರುತ್ತಿತ್ತು. ಹೀಗಿರುವಾಗ ಗೆಲುವನ್ನು ಬದಲಾಯಿಸಿಕೊಡುವ ವಸ್ತುವಿನ ಮೇಲೆ ಅಭಿಮಾನ, ಗೌರವ ಬೆಳೆಯದೆ ಇರುತ್ತದೆಯೇ? ಆದ್ದರಿಂದ ವಸ್ತುವನ್ನು ಮೈಮೇಲೆ ಜೋಪಾನವಾಗಿ ಕಾಪಾಡಿಕೊಳ್ಳುವನು, ಬೇರೆಯವರು ಅದನ್ನು ಮುಟ್ಟದಂತೆ ನೋಡಿಕೊಳ್ಳುವನು, ತಾನು ಮುಟ್ಟುವಾಗಲು ಬಹಳ ಎಚ್ಚರಿಕೆ ವಹಿಸುವನು. ಆ ವಸ್ತುವೇ ಮುಂದೆ ಅವನ ಆರಾಧ್ಯದೈವ, ಜೀವನ ರಕ್ಷೆ. ಅದನ್ನು ಇರಿಸಿದ ಸ್ಥಳವೇ ದೇಗುಲ. ನೆಲದ ಮೇಲೋ, ಗುಹೆಯ ಒಳಗೋ, ಮರದಡಿಯೋ, ಮರದ

ಪೊಟರೆಯ ಒಳಗೋ, ಕಲ್ಲುಬಂಡೆಯ ಮೇಲೋ, ಕಲ್ಲು ಪೊಟರೆಯ ಒಳಗೋ ಆವರಣವೊಂದನ್ನು ರಚಿಸಿ ಅದರಲ್ಲಿರಿಸುವನು. ಅಲ್ಲದೆ ಬೇರೆ ಯಾರು ಬರದಂತೆ ತನ್ನ ವಸ್ತು ಅಥವಾ ಪ್ರತಿಮೆಯನ್ನು ಯಾರು ಕೊಂಡೊಯ್ಯದಂತೆ ಕಟ್ಟೆಯನ್ನು ಕಟ್ಟಿಕೊಂಡು ಪ್ರತಿಮೆ ಯಾರಿಗೂ ಕಾಣದಂತೆ ಅದನ್ನು ಮುಚ್ಚುವನು. ಹೀಗೆ ದೇಗುಲಗಳ ಕಟ್ಟಡದ ಬೆಳವಣಿಗೆ ಮೊದಲಾಯಿತು.

ಪ್ರತಿಮೆಯನ್ನು ಹೀಗೆ ನೋಡಿಕೊಳ್ಳುವಾಗ ವಸ್ತುವಿಗಿಂತ ಹೆಚ್ಚಾಗಿ ಕಲ್ಪನೆಯು ಕೆಲಸ ಮಾಡುತ್ತದೆ. ಆ ವಸ್ತುವಿಗೆ ಇಲ್ಲದ ಗುಣಧರ್ಮಗಳೆಲ್ಲ, ಹಿರಿಮೆ ಸಾಮಾರ್ಥ್ಯಗಳೆಲ್ಲ ಅವನ ಕಲ್ಪನೆಯ ಸಹಾಯದಿಂದ ಅದರಲ್ಲಿ ಮೂಡಿಬರುತ್ತದೆ. ಸಾಧಾರಣವಾದ ವಸ್ತುವೊಂದು ಆರಾಧ್ಯ ಪ್ರತಿಮೆಯಾಗುವುದು ಮನುಷ್ಯನ ಭಾವನಾ ಬಲದಿಂದ. ಹೀಗೆ ಪ್ರಾಕೃತಿಕ ಪ್ರತಿಮೆಗಳನ್ನು ಬಳಸುವ ಪ್ರತಿಕೃತಿಗಳನ್ನು ಸಿದ್ಧಪಡಿಸಿಕೊಳ್ಳುವ ಪ್ರವೃತ್ತಿ ಮನುಷ್ಯನಲ್ಲಿ ಮೂಡಿಬಂದಂದೇ ಧರ್ಮದ ಕಲ್ಪನೆಗಳಿಗೂ, ಪದ್ಧತಿಗಳಿಗೂ ಅಭಿವ್ಯಕ್ತಿ ಮೂಡಿಬಂದಿತು. ವಾಸ್ತವವಾಗಿ ಪ್ರತಿಮೆಗಳನ್ನು ಬಳಸತೊಡಗಿದ ಮೇಲೆ ಪಾವಿತ್ರ್ಯದ ಕಲ್ಪನೆ ಮೂಡಿತು. ವಸ್ತುವೆಂಬ ಭಾವನೆಗಿಂತ ತನ್ನ ದೈವವೆಂಬ ನಂಬಿಕೆ ಮಾತ್ರವಲ್ಲದೆ ಭಾವಾಭಿವೃದ್ಧಿಯೂ ಕೈಗೂಡುವಂತೆ ಇರುತ್ತದೆ.

ಪ್ರತಿಮೆಗಳನ್ನು ಬಳಸುವುದು ಮತ್ತು ತಯಾರಿಸುವುದು ಮಾನವನಲ್ಲಿ ಮಾತ್ರ ಕಾಣಬಹುದು. ಇತರ ಪ್ರಾಣಿಗಳಲ್ಲಿ ಇದರ ಸಾಧ್ಯತೆ ಇದ್ದಂತಿಲ್ಲ. ಆದರೆ ಮೇಲ್ಮಟ್ಟದ ಕೆಲವು ಪ್ರಾಣಿಗಳಲ್ಲಿ ಪ್ರತಿಮೆಗೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವ ಪ್ರವೃತ್ತಿಯನ್ನು ಕಾಣಬಹುದು. ವಾನರ ವರ್ಗ, ನಾಯಿಗಳು ಇದರಲ್ಲಿ ಪ್ರಮುಖವಾದವುಗಳಾಗಿವೆ. ಪ್ರತಿಮೆಯೆಂದರೆ ರೂಪ, ನಿರೂಪಣೆ, ಸಾದೃಶ್ಯ, ಮೂಲಭೂತವಾಗಿ ಅದೊಂದು ಕಲ್ಪನೆ. ಆದರೆ ಪ್ರತಿಮೆಯೆಂಬ ಕಲ್ಪನೆಯಲ್ಲಿ ವಿಶೇಷ ಅಂಶವೊಂದಿದೆ. ಮಾನವ ಪ್ರತಿಮೆಯನ್ನು ನಿರ್ಮಿಸಿದಾಗ, ಅಚಿಂತ್ಯಾದ್ಭುತವಾದ ಶಕ್ತಿಯನ್ನು ಅದರಲ್ಲಿ ಆವಾಹಿಸುವುದೇ ಅವನ ಉದ್ದೇಶ. ಯಾವ ಕೆಲಸವನ್ನಾದರೂ ಭಯ ಭಕ್ತಿಗಳಿಂದ ಮಾಡಿದರೆ ಅದು ಕಲ್ಪನೆ(ಆಚರಣೆ). ಹೀಗೆ ಶಕ್ತಿಸಂಪನ್ನರಾದ ಪ್ರತಿಮೆಯನ್ನು ಒಳಗೊಳ್ಳುವ ಸ್ಥಳದಲ್ಲೇ ಶಕ್ತಿಯ ಸನ್ನಿಧಾನವಿದೆಯೆಂಬ ನಂಬಿಕೆ ಸಹಜವಾಗಿಯೇ ಬೇರೂರಿತು. ಆದಿಮಾನವನು ತನಗೆ ನೆರವಾಗುವ ಪ್ರತಿಮೆಯನ್ನು ಇರಿಸಿದ ಕಟ್ಟೆ, ಅದರ ಸುತ್ತ ನಿರ್ಮಿಸಿದ ಆವರಣ, ಅದನ್ನು ಮರೆಮಾಡಿದ ಗುಡಿ ಇವೆಲ್ಲವೂ ಪ್ರತಿಮೆಯ ಶಕ್ತಿಯಲ್ಲಿ ಪಾಲ್ಗೊಳ್ಳುವ ವಿವರಗಳು. ಪ್ರತಿಮೆ ಪವಿತ್ರವಾದಂತೆಯೇ ಅದನ್ನು ಇರಿಸಿದ ಕಟ್ಟೆಯೂ ಪವಿತ್ರವೇ, ಅದಕ್ಕಾಗಿ ಕಟ್ಟಿದ ಗುಡಿಯೂ ಪವಿತ್ರವೇ. ಪವಿತ್ರವೆನಿಸಿದ ಪ್ರತಿಮೆಗಾಗಿ ಮಾಡಿಕೊಂಡ ಕಟ್ಟಡಗಳು ಬೇರೆಲ್ಲ

ಕಟ್ಟಡಗಳಿಗಿಂತ ಬೇರೆಯಾಗಿರುವುದನ್ನು ಹಿಂದಿನ ಕಾಲದಿಂದಲೂ ನಾವು ನೋಡಬಹುದು. ಜನಾಂಗ ವ್ಯವಸ್ಥೆಯಲ್ಲಿ ಪ್ರತಿಮೆಯೊಂದಿಗೆ ಸಂಪರ್ಕವನ್ನು ಬೆಳಸಿಕೊಂಡು ಬಂದ ಯಜಮಾನ, ಪುರೋಹಿತ ಇದರಲ್ಲಿ ಪ್ರತಿಮೆಯ ಅಲೌಕಿಕ ಶಕ್ತಿಯ ಪಾಲೊಂದು ಉಳಿಯುವುದೆಂಬ ಭಾವನೆ ಆದಿಮಾನವರಿಗಿದ್ದಿತು. 'ರಾಜಾ ಪ್ರತ್ಯಕ್ಷ ದೇವತಾ' ಎಂಬ ಮಾತು ಈ ಸಂದರ್ಭದಲ್ಲಿ ನೆನಪಾಗುತ್ತದೆ. ಪುರೋಹಿತರು ಭೂ–ಸುರರಾದರು. ರಾಜನ ಶಕ್ತಿಯೊಂದಿಗೆ, ಸ್ಥಾವರ ಪ್ರತಿಮೆಯ ಜಂಗಮ ಪ್ರತಿನಿಧಿ ಅವರು ಎಂದು, ಮೊದಲಾದ ನಂಬಿಕೆಗಳು ಎಲ್ಲಾ ದೇಶದ ಜನರಲ್ಲಿಯೂ ಒಂದು ಕಾಲದಲ್ಲಿ ಇದ್ದವು. ಜನಾಂಗದ ನಾಯಕ ಅಥವಾ ಯಜಮಾನನು ತನ್ನ ಅಸಾಧಾರಣ ಸಾಮರ್ಥ್ಯ ಸಮುದಾಯವನ್ನು ಕಾಪಾಡಲು ಈ ಅಜ್ಞಾತ ಶಕ್ತಿಯೊಂದನ್ನು ಪಡೆದಿದ್ದಾನೆಂಬ ನಂಬಿಕೆ ಇದ್ದಿತು. ಆದುದರಿಂದ ಅವನು ತೀರಿಕೊಂಡಾಗ, ಅವನಲ್ಲಿರುವ ಶಕ್ತಿಯು ಸಮುದಾಯಕ್ಕೆ ಹಿಂದಿರುಗುವುದು, ಯಾವುದೋ ಒಂದು ಬಗೆಯಲ್ಲಿ ಉಳಿದುಕೊಳ್ಳುವುದೂ ಈ ಶ್ರದ್ಧೆಯಲ್ಲಿ ಸೇರಿದ್ದ ವಿವರಗಳೇ. ಈ ಶಕ್ತಿಗೆ ನೆಲೆಯೊಂದನ್ನು ಒದಗಿಸುವ ಹೊಣೆ ಸಮುದಾಯದ್ದು. ಸಮುದಾಯದ ಜನರು ತೀರಿಕೊಂಡ ನಾಯಕನ ಹೆಸರಿನಲ್ಲಿಯೇ ಗುಡಿಯೊಂದನ್ನು ಕಟ್ಟಿ ಅದರಲ್ಲಿ ಆ ಶಕ್ತಿ ನೆಲೆಸುವ ಸನ್ನಾಹ ಮಾಡುತ್ತಿದ್ದರು.

ತುಂಬಾ ಪ್ರಾಚೀನ ಗುಡಿಗಳು ಸತ್ತವರ ಸಮಾಧಿಗೆ ಸಂಬಂಧಿಸಿದವೆ ಆಗಿವೆ. ಸತ್ತವನ ನೆನಪನ್ನು ಉಳಿಸುವುದು ಈ ಗುಡಿಗಳ ಉದ್ದೇಶವಲ್ಲ. ಅವರಲ್ಲಿ ತಾತ್ಕಾಲಿಕವಾಗಿ ನೆಲೆಗೊಂಡಿದ್ದ ಅಜ್ಞಾತಾದ್ಭುತ ಶಕ್ತಿಗೊಂದು ಆಲಯವನ್ನು ನಿರ್ಮಿಸುವುದೇ ಉದ್ದೇಶವಾಗಿತ್ತು. ಸಮುದಾಯದ ರಕ್ಷಣೆ ಈ ಶಕ್ತಿಯಿಂದಲೇ ಎಂದಾದುದರಿಂದ ಜನರಿಗೆ ಇಂಥ ಗುಡಿಗಳು ವಿಶೇಷವಾದ ಗೌರವಾದರಗಳಿಗೆ ತಕ್ಕುವಾಗಿವೆ. ಸಮುದಾಯದ ಜನರು ಗುಡಿಗಳನ್ನು ಮಾಡಿಕೊಂಡರು. ಕಾಲ ಉರುಳಿದಂತೆ ನಾಯಕನ ನೆನಪು ಮರೆಯಾಗತೊಡಗಿತು. ಆ ನಾಯಕನ ಸಾಹಸ–ಸಾಧನೆಗಳು ಪುರಾಣ ಕಥೆಗಳಂತೆ ಮಾರ್ಪಟ್ಟವು. ಗುಡಿಗೊಂದು ಕಥೆ, ಕ್ಷೇತ್ರಕ್ಕೊಂದು ಮಹಾತ್ಮೆ; ಆಲಯಕ್ಕೊಂದು ಹಿನ್ನೆಲೆ. ಇತಿಹಾಸ ವಿವರಗಳು ಮುಸುಕಾಗಿ ಶಕ್ತಿಯ ಪ್ರಭಾವ ಮೆರೆಯಿತು. ಸಮುದಾಯದ ಉಳಿವಿಗೆ ಈ ಮಾರ್ಪಾಡು ಅವಶ್ಯಕವೆ. ಸಾವೆಂಬದು ಗಂಭೀರ ಸಮಸ್ಯೆ ಅದರ ಒಗಟನ್ನು ಬಿಡಿಸುವುದು ಅಂದಿನಿಂದ ಇಂದಿನವರೆಗೂ ಸಾಧ್ಯವಾಗಿಲ್ಲ. ಒಗಟು ಬಿಡಿಸುವ ಪ್ರಯತ್ನವೂ ನಿಂತಿಲ್ಲ. ಮಾನವನ ಆಸೆ, ಆಶಯ, ಯೋಜನೆಗಳಿಗೆಲ್ಲ ಸಾವು ಸಂಚಕಾರಿಯಾಗಿದೆ. ಸಾವಿಗೆ ಮಾನವ ಭಯಪಡುವಷ್ಟು ಬೇರೆ ಯಾವ ಪ್ರಸಂಗಕ್ಕೂ ಹೆದರುವುದಿಲ್ಲ. ಸಾವಿನ ಹೆದರಿಕೆ ಸತ್ತವನಿಗೂ ಹರಡಿದ್ದು ಸೋಜಿಗ. ಸಾವನ್ನು ಕಂಡರೆ ಹೆದರುವವರು ಸತ್ತವನನ್ನು ಕಂಡು ಅಂಜತೊಡಗಿದರು. ಸತ್ತವರನ್ನು ಒಪ್ಪಮಾಡುವ ಪದ್ಧತಿಗಳೂ ಸತ್ತವರು ಮತ್ತೆ ಬರದಂತೆ

ಬದುಕಿರುವ ಇತರರಿಗೆ ಅವರಿಂದ ತೊಂದರೆಯಾಗದಂತೆ ನೋಡಿಕೊಳ್ಳುವ ಉಪಾಯಗಳೇ! ಸತ್ತವರಿಗೆ ಸಿದ್ಧಪಡಿಸಿದ ಸ್ಮಾರಕಗಳೇ ಎರಡು ಬಗೆಯ ಮನೋವೃತ್ತಿಗಳು ಸತ್ತವನ ನೆನಪನ್ನು ಉಳಿಸಿಕೊಳ್ಳಬೇಕು ಮತ್ತು ಅವನು ಮೇಲೆದ್ದು ಹಿಂದಿರುಗಿ ಬಂದು ಕಾಡಬಾರದು ಎಂಬುದಾಗಿದೆ.

ಸತ್ತವರನ್ನು ಶವಸಂಸ್ಕಾರ ಮಾಡಿ ಅದನ್ನು ಸೂಚಿಸಲು ಮಣ್ಣನ್ನು ಗುಡ್ಡದಂತೆ ಅದರ ಮೇಲೆ ರಾಶಿ ಮಾಡುವುದು, ಕಲ್ಲುಗಳ ರಾಶಿಯನ್ನು ಇಡುವುದು ತುಂಬಾ ಪ್ರಾಚೀನವಾದ ಪದ್ಧತಿಯಾಗಿದ್ದು, ಈ ಸ್ಥಳ ಜನರ ನೆನಪಿನಲ್ಲಿ ಉಳಿಯಲು ಹಾಗೂ ಅದರ ಮೇಲೆ ಕಾಲಿಡದೆ, ಅದರ ಸುತ್ತಮುತ್ತ ಓಡಾಡದಂತೆ ಗುರುತಾಗಿದೆ. ಇಲ್ಲಿ ಗೌರವವೊಂದೇ ತಾತ್ಪರ್ಯವಲ್ಲ, ಭೀತಿಯೂ ಅಡಗಿದೆ. ಕಲ್ಲು ಮಣ್ಣುಗಳ ರಾಶಿ ಮಾಡುವುದು ಬೆಟ್ಟದ ಸಂಕೇತವಾಗಿದ್ದು ಸತ್ತವನ ಉಸಿರು ಬೆಟ್ಟದ ಮೇಲೇರಿ ಹೋಗುವುದರಿಂದ ಅವನು ಸ್ವರ್ಗದಲ್ಲಿ ನೆಲೆಗೊಳ್ಳುತ್ತಾನೆಂಬ ನಂಬಿಕೆ ಇತ್ತು. ಹಿಂದಿನವರ ನಂಬಿಕೆ, ಪ್ರಾಚೀನ ಜನರು ಬೆಟ್ಟಗುಡ್ಡಗಳನ್ನು ಪೂಜಿಸುತ್ತಿದ್ದುದ್ದರ ತಾತ್ಪರ್ಯವು ಇದೇ ಆಗಿದೆ.

ಕೆಲವು ಜನಾಂಗಗಳಲ್ಲಿ ಹೆಣವನ್ನು ಮಲಗಿಸಿ ಹೂತ ಮೇಲೆ ಅದರ ಹೃದಯ ಇರುವೆಡೆ ಒಂದು ದೊಡ್ಡಕಲ್ಲು, ತಲೆ ಮತ್ತು ಕಾಲಿನ ಕಡೆ ಒಂದೊಂದು ಕಲ್ಲು ಹೀಗೆ ಮೂರು ಕಲ್ಲುಗಳನ್ನು ಇರಿಸುವ ಪದ್ಧತಿಯಿದ್ದಿತು. ಇದರಲ್ಲಿ ಹೃದಯ ಭಾಗದಲ್ಲಿರಿಸಿದ ಕಲ್ಲು ಪ್ರಧಾನವಾದುದು. ಈ ಕಲ್ಲು ಕಾಲಕಳೆದಂತೆ ಲಿಂಗದ ಆಕಾರವನ್ನು ಪಡೆಯಿತು. ಅಕ್ಕಪಕ್ಕದ ಕಲ್ಲುಗಳು ಕಂಭಗಳಾದವು. ಹೀಗೆ ಈ ಕಂಭಗಳ ಮೇಲೆ ಸೂರನ್ನು ಹಾಕಿ ಸಮಾಧಿಯನ್ನು 'ಸಾವು ಮನೆ'ಯನ್ನಾಗಿಸಿದರು. ಇದರ ರೂಪ ಹಳೆಯ ಗುಡಿಸಲುಗಳಂತೆಯೇ ಇರುತ್ತಿದ್ದುದ್ದು ಸಹಜವೆ. ತೋಡ ಜನಾಂಗದವರು ಇಂದಿಗೂ ಕಲ್ಲಿನ ವೃತ್ತದೊಳಗೆ ಸಾವು ಮನೆಯನು ಕಟ್ಟುವ ಅಭ್ಯಾಸವನ್ನು ಉಳಿಸಿಕೊಂಡಿದ್ದಾರೆ. ಇವುಗಳ ತಳಾಕೃತಿ ಚಚ್ಚೌಕಾಕಾರ ಅಥವಾ ವೃತ್ತಾಕಾರವಾಗಿದ್ದು, ಮೇಲು ಭಾಗದ ಗುಡಿಗಳು ಇದೇ ರೂಪದಲ್ಲಿದ್ದುದನ್ನು ಕಾಣಬಹುದು. ಕೆಲವು ಸಮಾಧಿಗಳು ಸ್ತೂಪದ ಮಾದರಿಯಲ್ಲಿದ್ದು ಇವು ಬೌದ್ಧ ಕಟ್ಟಡಗಳೆಂದು ಪ್ರಸಿದ್ಧವಾಗಿವೆ. ದೇವಾಲಯದ ಹಿನ್ನೆಲೆಯನ್ನು ಸ್ತೂಪಗಳಲ್ಲೆ ಗುರುತಿಸಬೇಕೆಂದು ಹೇಳುತ್ತಾರೆ. ಆದರೆ ಸ್ತೂಪದ ಹಿನ್ನೆಲೆಯಲ್ಲಿ ವೈದಿಕ ಯುಗದ ಅಗ್ನಿಪ್ರಿಯ ಎಂಬ ಸಮಾಧಿ ಮಂದಿರವಿರುವುದನ್ನು ಹಲವರು ಅರಿಯರು. ಇದು ಗುಂಭಾ ಕಾರವಾದ ರಚನೆಯಾಗಿದ್ದು ಒಳಗೆ ಟೊಳ್ಳಾಗಿರುತ್ತಿದ್ದಿತು. ಅದರ ನಡುವೆ ನಾಳ ಮಾದರಿಯ ಕಂಭ ಅದರ ಪಕ್ಕದಲ್ಲಿ ಕಲ್ಲುಕಟ್ಟೆಗಳು ಇರುತ್ತಿದ್ದವು. ಈ ಕಟ್ಟೆಗಳ ಮೇಲೆ ಅಗ್ನಿ ಮತ್ತು ಸೋಮ ಎಂಬ ಎರಡು ಹೋಮಗಳನ್ನು ಮಾಡುತ್ತಿದ್ದರು. ಗುಂಭವನ್ನು ಮರದ ಹಲಗೆಗಳಿಂದ ಮಾಡಿ

ಮೇಲ್ಭಾಗವನ್ನು ಮಣ್ಣಿನಿಂದ ಮುಚ್ಚುತ್ತಿದ್ದರು. ಇಡೀ ಕಟ್ಟಡದ ರಚನೆ ಆರ್ಯರ ಗುಡಿಸಲನ್ನು ನೆನಪಿಗೆ ತರುವಂತಿರುತ್ತಿದ್ದಿತು. ನಡುವಣ ನಾಳದಿಂದ ಅಗ್ನಿಕಾರ್ಯದ ಹೊಗೆ ಹೊರಗೆ ಹೋಗುವ ವ್ಯವಸ್ಥೆಯಿದ್ದಿತು. ಇದು ವೈದಿಕ ಸ್ತೂಪ, ಸ್ತೂಪವೆಂಬ ಮಾತೂ ವೇದಗಳ ಕಾಲದಷ್ಟೇ ಪ್ರಾಚೀನವಾದುದು. ಆದರೆ ಸ್ತೂಪದ ಪ್ರಖ್ಯಾತಿಗೆ ಬೌದ್ಧಯುಗ ನೆರವಾಯಿತು. ಬೌದ್ಧಯುಗದಲ್ಲಿ ಸ್ತೂಪ ಸಮಾಧಿ, ಸ್ಮಾರಕ, ಆರಾಧನೆ ಎಂಬ ಮೂರು ವಿವರಗಳನ್ನೊಳಗೊಂಡಿದೆ.

ದೇವಾಲಯದ ಕಲ್ಪನೆಗೆ, ರಚನೆಗೆ ಸ್ತೂಪ ನೇರವಾದ ಹಿನ್ನೆಲೆಯನ್ನೊದಗಿಸಿತು. ಸ್ತೂಪದ ಹಿನ್ನೆಲೆ ಅಗ್ನಿದ್ರಿಯದಲ್ಲಿದ್ದಿತು. ಈ ಸಂಪ್ರದಾಯದುದ್ದಕ್ಕೂ ಸಾವು, ಸಮಾಧಿ, ಸ್ಮಾರಕ, ಆಲಯ, ಆರಾಧನೆಗಳು ಕಲೆತು ಬಂದಿರುವುದನ್ನು ಕಾಣಬಹುದು. ಹಳೆಯ ಕಾಲದಲ್ಲಿ ಸಮಾಧಿ ಸ್ಥಳದಲ್ಲಿ ಗಿಡನೆಡುವ ಪದ್ಧತಿಯಿದ್ದು ಅದನ್ನು ಚೈತ್ಯವೃಕ್ಷಗಳೆಂದು ಕರೆಯುತ್ತಾರೆ. ಸಂಸ್ಕೃತದಲ್ಲಿ 'ಚಿತೆ' ಎಂದರೆ ಹೆಣವನ್ನು ಸುಟ್ಟು ಭೂದಿಯನ್ನು ರಾಶಿ ಮಾಡುವುದೆಂದರ್ಥ. ಅದಕ್ಕೆ ಸಂಬಂಧಿಸಿದ್ದು 'ಚೈತ್ಯ' ಸತ್ತವರ ಚೇತನಗಳು ಮರಗಳಲ್ಲಿ ಮನೆಮಾಡಿಕೊಂಡಿರುತ್ತದೆ ಎಂದು ಪ್ರಾಚೀನ ಕಲ್ಪನೆ. ಮರ ಪೂಜೆಗೊಳ್ಳುವಂತಾದರೆ ಆಶ್ಚರ್ಯವಲ್ಲವೆ? ಸತ್ತವರಿಗೆ ಮಾಡುವ ಸತ್ಕಾರ ಈ ಮರಕ್ಕೆ ನಡೆಯುತ್ತಿತ್ತು. ವೃಕ್ಷಾರಾಧಾನೆಯ ಮೂಲವೇ ಇದು. ಈಗಲೂ ದೇವಾಲಯಗಳಲ್ಲಿ ಬಹುಮಟ್ಟಿಗೆ ಮರಗಳಿದ್ದೇ ಇರುತ್ತದೆ. ಪ್ರಸಿದ್ಧವಾದ ದೇವಾಲಯವೊಂದಕ್ಕೆ ವಿಶಿಷ್ಟವಾದ 'ಸ್ಥಳವೃಕ್ಷ' ಇರುತ್ತದೆ.

## 2.3 ಮೈಸೂರು ನಗರದ ಪಾರಂಪರಿಕ ದೇವಾಲಯಗಳ ಪ್ರಾಚೀನತೆ

ಮೈಸೂರು ನಗರದ ಪಾರಂಪರಿಕ ದೇವಾಲಯಗಳು ಬಹಳ ಪ್ರಾಚೀನತೆಯನ್ನು ಹೊಂದಿರುವುದನ್ನು ಕಾಣಬಹುದಾಗಿದ್ದು, ಪ್ರಾಚೀನತೆಯ ನಿಖರತೆಯನ್ನು ಸ್ಪಷ್ಟವಾಗಿ ಹೇಳಲು ಸಾಧ್ಯವಾಗದಿದ್ದರೂ ಕೆಲವೊಂದು ಮಾಹಿತಿಗಳ ಅಧ್ಯಯನದಿಂದ ದೇವಾಲಯಗಳ ಪ್ರಾಚೀನತೆಯನ್ನು ಗುರುತಿಸಲು ಸಹಕಾರಿಯಾಗುತ್ತದೆ. 'ಮೈಸೂರು' ನಿಷ್ಪತ್ತಿಗೂ ಮೈಸೂರು ನಗರದ ದೇವಾಲಯಗಳ ಪ್ರಾಚೀನತೆಗೂ ನಿಕಟವಾದ ಸಂಬಂಧವಿರುವುದನ್ನು ಗಮನಿಸಬಹುದು. ಈಗ ಮೈಸೂರು ಎನ್ನುತ್ತಿರುವ ಸ್ಥಳದ ಹೆಸರು ನಮ್ಮ ದೇಶದ ಪುರಾಣೇತಿಹಾಸದ, ಸಾಹಿತ್ಯ ಗ್ರಂಥಗಳಲ್ಲಿ ಮಾಹಿಷಿಕ, ಮಹಿಷಿಕ, ಮಾಹಿಷ್ಮತಿ, ಮಹಿಷ ಮಂಡಲ, ಮಹಿಷರಾಷ್ಟ್ರ, ಮಹಿಷವಿಷಯ ಇತ್ಯಾದಿ ಹೆಸರುಗಳಿಂದ ಪ್ರಸಿದ್ಧವಾಗಿತ್ತು ಎನ್ನುವ ಅಭಿಪ್ರಾಯವಿದೆ.

ಶಾಸನ ಮತ್ತು ಇತ್ತೀಚಿನ ಕಾಲದ ಸಾಹಿತ್ಯ ಗ್ರಂಥಗಳಲ್ಲಿ ಮೈಸೆನಾಡು, ಮೈಸುನಾಡು, ಮೈಸನಾಡು, ಮಯಿಸೂರು, ಮೈಸೂರುಸ್ಥಳ, ಮಹಿಸೂರು ಇತ್ಯಾದಿ ಹೆಸರುಗಳಿಂದ ಪ್ರಸಿದ್ಧವಾಗಿರುವ ಸ್ಥಳವೆಂದರೆ ಮೈಸೂರು ಎನ್ನುವುದು ನಿರ್ವಿವಾದವಾದ ಸಂಗತಿಯಾಗಿದೆ.

ಮೈಸೂರು ನಗರಕ್ಕೆ ತನ್ನದೇ ಆದ ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆಯಿದೆ. ಮಹಿಷನೆಂಬ ರಾಕ್ಷಸನು ಇಲ್ಲಿ ವಾಸಿಸುತ್ತಿದ್ದುದರಿಂದ ಇದಕ್ಕೆ ಮೈಸುರು (ಮಹಿಷ + ಪುರ > ಮಹಿಷಪುರ > ಮಹಿಸೂರು > ಮೈಸೂರು) ಎಂಬ ಹೆಸರುಂಟಾಯಿತೆಂದು ಪುರಾಣಗಳು ಮತ್ತು ಜನಪದ ಕತೆ, ಗೀತೆಗಳು ಹೇಳುತ್ತವೆ. **"**ಮಹಿಷಾಸುರನೆಂಬ ರಾಕ್ಷಸ ಬ್ರಹ್ಮನನ್ನು ಕುರಿತು ತಪಸ್ಸುಮಾಡಿ ಹೆಣ್ಣಿನಿಂದ ಮಾತ್ರ ತನಗೆ ಸಾವು ಬರಬೇಕೆಂಬ ವರಪಡೆದು ಮಹಿಷ ಮಂಡಲವನ್ನ ಆಳುತ್ತಿದ್ದ. ಅವನ ಉಪಟಳವನ್ನು ಸಹಿಸಲಾಗದ ದೇವತೆಗಳು ತಮ್ಮೆಲ್ಲ ಶಕ್ತಿಯನ್ನು ನೀಡಿ ಚಾಮುಂಡೇಶ್ವರಿ ಮೂಲಕ ಅವನನ್ನು ಸಂಹರಿಸಿದರೆಂದು ಹೇಳಲಾಗುತ್ತದೆ. ಮಹಿಷ ಮರ್ಧಿನಿ, ಮೈಸೂರು ಅರಸರ ಮನೆದೇವರಾಗಿ ಇಂದಿಗೂ ಪೂಜೆಗೊಳ್ಳುತ್ತಿದ್ದಾಳೆ. ಮಹಿಷ ಮಂಡಲ, ಮಹಿಷಪುರಿ, ಮಹಿಶೂರು ಈಗಿನ ಮೈಸೂರಾಗಿದೆ**"**[1]

**"**ಕ್ರಿ.ಶ.3ನೇ ಶತಮಾನದ ಮೌರ್ಯ ಚಕ್ರವರ್ತಿ ಅಶೋಕನ ಕಾಲದಲ್ಲಿ ಮೊಗ್ಗಲಿಪುತ್ರ ತಿಸ್ಸನು ಬೌದ್ಧ ಮತ ಪ್ರಸಾರಕ್ಕೆಂದು ಒಂದು ತಂಡವನ್ನು ತಯಾರು ಮಾಡಿ 'ಮಹಿಷ ಮಂಡಲ' ಪ್ರಾಂತ್ಯಕ್ಕೆ ಥೇರಮಹಾದೇವನನ್ನು, ಬನವಾಸಿ ಪ್ರಾಂತ್ಯಕ್ಕೆ ರಖ್ಖಿತ ಮಹಾದೇವನನ್ನು ಕಳುಹಿಸಿದ್ದನು ಎಂಬ ಉಲ್ಲೇಖ ಶ್ರೀಲಂಕಾದ 'ದೀಪವಂಶ' ಮತ್ತು 'ಮಹಾವಂಶ' ಎಂಬ ಪವಿತ್ರ ಬೌದ್ಧ ಧಾರ್ಮಿಕ ಗ್ರಂಥಗಳಲ್ಲಿ ಉಲ್ಲೇಖವಾಗಿದೆ. ಥೇರಮಹಾದೇವನು ಮಹಿಷ ಮಂಡಲದಲ್ಲಿ ಬುದ್ಧ ಹೇಳಿದ ದೇವದೂತ ಉಪದೇಶವನ್ನು ಬೋಧಿಸಿದ. ಇದರಿಂದ ಪ್ರೇರೇಪಿತರಾದ ನಲವತ್ತುಸಾವಿರ ಜನ ಬೌದ್ಧಧರ್ಮದ ಅನುಯಾಯಿಗಳಾದರು**"**[2]

ಈ ಮೇಲಿನ ಮೈಸೂರು ನಗರದ ನಿಷ್ಪತ್ತಿ, ಸ್ಥಳಪುರಾಣ ಮತ್ತು ಮೌರ್ಯರ ಕಾಲದಲ್ಲಿ ಬೌದ್ಧ ಧರ್ಮಪ್ರಸಾರಕ್ಕಾಗಿ ಕ್ರಿ.ಶ.3ನೇ ಶತಮಾನದಲ್ಲಿ ಬಂದ ಸ್ಥಳ ಅಥವಾ ಪ್ರಾಂತ್ಯದ ಹೆಸರು ನಿಕಟವಾಗಿರುವುದು ನಿಸ್ಸಂದೇಹವಾಗಿದ್ದು, ಅದು ಮೈಸೂರು ಆಗಿರುವುದರಿಂದ ಮೈಸೂರು ನಗರದ ದೇವಾಲಯಗಳ ಪ್ರಾಚೀನತೆಯು ಕ್ರಿ.ಶ.ಸುಮಾರು 3 ಅಥವಾ 4ನೇ ಶತಮಾನವನ್ನು ತಿಳಿಸುತ್ತದೆ. ಪುರಾಣದ ಪ್ರಕಾರವಾಗಿ ಮಹಿಷಾಸುರನನ್ನು ಚಾಮುಂಡೇಶ್ವರಿ ಕೊಂದದ್ದು, ಹಾಗೂ ಥೇರಾಮಹದೇವನು ಬೌದ್ಧ ಪ್ರಸಾರಕ್ಕೆ ಮಹಿಷಮಂಡಲಕ್ಕೆ ಬಂದದ್ದು 3ನೇ ಶತಮಾನ ಎಂದಾದರೆ, ಆ ಪ್ರದೇಶ 3ನೇ ಶತಮಾನ ಅಥವಾ ಅದಕ್ಕಿಂತ ಹಿಂದಿನದೆ ಆಗಿರಬಹುದು.

ಆದುದರಿಂದ ನಿಖರವಾಗಿ ಹೇಳಲು ಸಾಧ್ಯವಾಗದೆ ಇದ್ದರೂ ಸುಮಾರು ಕ್ರಿ.ಶ.3ನೇ ಶತಮಾನದಿಂದ 5ನೇ ಶತಮಾನ ಎಂದು ಅಂದಾಜಿಸಲು ಸಾಧ್ಯವಿದೆ. ಈ ಆಧಾರದ ಮೇಲೆ ದೇವಾಲಯಗಳ ಪ್ರಾಚೀನತೆಯನ್ನು ಸುಮಾರು ಕ್ರಿ.ಶ. 3 ರಿಂದ 5ನೇ ಶತಮಾನವೆಂದು ಅಂದಾಜಿಸಬಹುದಾಗಿದೆ.

ಚಾಮುಂಡಿಬೆಟ್ಟ 12ನೇ ಶತಮಾನಕ್ಕಿಂತ ಹಿಂದೆ ಜೈನರ ತೀರ್ಥ ಕ್ಷೇತ್ರವಾಗಿತ್ತೆಂದು ತಿಳಿದು ಬರುತ್ತದೆ. ಚಾಮುಂಡಿಬೆಟ್ಟ ಎಂಬ ಹೆಸರು 12ನೇ ಶತಮಾನದ ಆ ನಂತರದಲ್ಲಿ ಬಂದಿರ ಬಹುದು. ಶಾಸನಗಳಲ್ಲಿ ಚಾಮುಂಡಿಬೆಟ್ಟದ ಉಲ್ಲೇಖ ಅದುವರೆವಿಗೂ ಕಂಡು ಬರುವುದಿಲ್ಲ. ಆ ಬೆಟ್ಟಕ್ಕೆ ಇದ್ದ ಮೊದಲ ಹೆಸರು ಮರ್ಬ್ಬಲದ/ಮಹಾಬಲ ತೀರ್ಥ ಎಂದು ಕರೆಯಲಾಗುತ್ತಿತ್ತು. ಅಲ್ಲದೇ ಇದು ಜೈನರ ಪವಿತ್ರ ಸ್ಥಳವಾಗಿತ್ತು. ಅಲ್ಲಿನ ಮಹಾಬಲಾಚಲ ಜೈನ ಯಕ್ಷನ ಕಾಲಾನಂತರದಲ್ಲಿ ಮಹಾಬಲೇಶ್ವರ ಎಂದೇ ಜನ ಜನಿತವಾಗಿರಬಹುದು ಎಂದು ವಿಶ್ಲೇಷಿಸಲಾಗಿದೆ.

"ಚಾಮುಂಡಿಬೆಟ್ಟವನ್ನು ಮಹಾಬಲಾದ್ರಿ, ಮಹಾಬಲಾಚಲ ಎಂಬ ಹೆಸರಿನಿಂದಲೇ ಕರೆಯಲಾಗುತ್ತಿತ್ತು. ಈ ವಿವರಗಳು 17ನೇ ಶತಮಾನದ ಹಸ್ತಪ್ರತಿಗಳಲ್ಲೂ ದಾಖಲಾಗಿದೆ. ಸಿ ಹಯವದನರಾವ್ ಅವರು ಈ ದೇವಾಲಯವು ಗಂಗರ ಕಾಲಕ್ಕೆ ಸೇರಿದ ದೇವಾಲಯವಾಗಿದೆ ಎಂದು ಹೇಳಿರುವುದಲ್ಲದೇ ಪ್ರಾಚೀನ ಹಿನ್ನೆಲೆಯನ್ನೊಂದಿರುವ ಇದರ ಕಾಲ ಕ್ರಿ.ಶ.ಸುಮಾರು 950 ಎಂದು ಗುರುತಿಸಿದ್ದಾರೆ. ಆದರೆ ಇತ್ತೀಚೆಗೆ ದೇವಾಲಯವನ್ನು ದುರಸ್ಥಿ ಮಾಡುವ ಸಂದರ್ಭದಲ್ಲಿ ಈ ಶಾಸನಗಳು ಹಾಳಾಗಿವೆ. ಆದರೆ ಪ್ರಸ್ತುತ ಇರುವ ಪ್ರಾಚೀನತೆಯೆಂದರೆ ಕ್ರಿ.ಶ.1127ರ ಹೊಯ್ಸಳ ವಿಷ್ಣುವರ್ಧನನ ಶಾಸನವಾಗಿದೆ"[3]

"ಚಾಮುಂಡಿ ಎಂಬ ಹೆಸರು ಒಂಬತ್ತನೇ ಶತಮಾನದಿಂದೀಚೆಗೆ ಪ್ರಚಾರಕ್ಕೆ ಬಂದಿತೆಂದೂ ಹೊಯ್ಸಳರು, ಚಾಳುಕ್ಯ-ಚೋಳ ಸಂಪರ್ಕದಿಂದ ಮಹಿಷ ಮರ್ದಿನಿ ಚಾಮುಂಡಿಯ ವಿಗ್ರಹಗಳನ್ನು ತಾವು ನಿರ್ಮಿಸಿದ ದೇವಾಲಯಗಳಲ್ಲಿ ಸ್ಥಾಪಿಸಿದರೆಂದು"[4] ಎಸ್ ಶ್ರೀಕಂಠ ಶಾಸ್ತ್ರಿಯವರು ಅಭಿಪ್ರಾಯಪಟ್ಟಿದ್ದಾರೆ.

ಬೋಗಾದಿಯ ಭೋಗೇಶ್ವರ ದೇವಾಲಯ ಗಂಗರ ಕಾಲದ್ದಾಗಿದ್ದು 11ನೇ ಶತಮಾನ ಎಂದು ಗುರುತಿಸಲಾಗಿದೆ. ಹೆಬ್ಬಾಳದ ಲಕ್ಷ್ಮೀಕಾಂತೇಶ್ವರ ದೇವಾಲಯ ಚೋಳರ ಕಾಲದ್ದಾಗಿದೆ. ಕೋಡಿಭೈರವೇಶ್ವರ ದೇವಾಲಯವು ಪ್ರಾಚೀನ ದೇವಾಲಯಗಳಲ್ಲಿ ಒಂದಾಗಿದ್ದು, ಸುಮಾರು

ಕ್ರಿ.ಶ.1400ಕ್ಕೂ ಹಿಂದಿನ ದೇವಾಲಯವೆಂದು ಗುರುತಿಸಲಾಗಿದೆ. ಈ ದೇವಾಲಯ ಮೈಸೂರು ರಾಜಮನೆತನದ ಮೊದಲ ತಂಗುದಾಣ ಮತ್ತು ಇಲ್ಲಿಂದಲೇ ಅರಸು ಮನೆತನ ಸ್ಥಾಪನೆಗೆ ನಾಂದಿಹಾಡಿದ್ದು. ಲಕ್ಷ್ಮೀರಮಣಸ್ವಾಮಿ ದೇವಾಲಯಕ್ಕೆ ಕೃಷ್ಣದೇವರಾಯನ ತಂದೆ ನರಸನಾಯಕ ಕ್ರಿ.ಶ.1499ರಲ್ಲಿ ದತ್ತಿ ಬಿಟ್ಟ ವಿವರ ಶಾಸನದಲ್ಲಿ ಉಲ್ಲೇಖವಿದೆ. ಕ್ರಿ.ಶ.1500ರಲ್ಲಿ ಈ ದೇವಾಲಯ ಸ್ಥಾಪನೆಯಾಯಿತು.

ಈ ಮೇಲಿನ ದೇವಾಲಯಗಳೇ ಅಲ್ಲದೆ 1809ರಲ್ಲಿ ಅರಮನೆಯ ಕೋಟೆಯ ಶ್ವೇತವರಹಾಸ್ವಾಮಿ ದೇವಾಲಯ, 1829ರಲ್ಲಿ ಪ್ರಸನ್ನ ಕೃಷ್ಣಸ್ವಾಮಿ ದೇವಾಲಯ ಕಟ್ಟಲಾಗಿದ್ದು, ಈ ದೇವಾಲಯದ ವೈಭವಕ್ಕೆ ಮುಮ್ಮಡಿ ಕೃಷ್ಣರಾಜರು ಕಾರಣರಾಗಿದ್ದಾರೆ. 1836ರಲ್ಲಿ ಸುಬ್ಬರಾಯದಾಸ್(ಗೋಪಾಲದಾಸ) ರಿಂದ ಪ್ರಸನ್ನ ವೆಂಕಟರಮಣಸ್ವಾಮಿ ದೇಗುಲ ಕೃಷ್ಣವಿಲಾಸ ರಸ್ತೆಯಲ್ಲಿ ನಿರ್ಮಾಣವಾಯಿತು. 1858ರಲ್ಲಿ ಮುಮ್ಮಡಿ ಕೃಷ್ಣರಾಜರ ಮಂತ್ರಿ ಹಾಗೂ ಕೋಶಾಧಿಕಾರಿಯಾಗಿದ್ದ ಭಕ್ಷಿ ನರಸಪ್ಪ ಅವರು ಮೆಕ್ಕಾಜಿ ಚೌಕದಲ್ಲಿ ಸುಬ್ರಹ್ಮಣ್ಯಸ್ವಾಮಿ ದೇಗುಲ ಕಟ್ಟಿಸಿದ್ದಾರೆ. ನಜರಾಬಾದ್‌ನ ನಿಂಬುಜಾದೇವಿ ದೇವಾಲಯ(1883), ಧನ್ವಂತರಿ ರಸ್ತೆಯ ಧನ್ವಂತರಿ ಚಿದಂಬರೇಶ್ವರ ದೇವಾಲಯ, ಅಗ್ರಹಾರದ ನೂರೊಂದುಗಣಪತಿ ದೇವಾಲಯ (1955), ಕೆ.ಇ.ಬಿ.ಸರ್ಕಲ್ ಮಾತೃಮಂಡಳಿ ಬಳಿ ಇರುವ ಚಂದ್ರಮೌಳೇಶ್ವರ ದೇವಾಲಯ (1942), ತ್ಯಾಗರಾಜ ರಸ್ತೆಯಲ್ಲಿರುವ ವೀರಭದ್ರೇಶ್ವರ–ಚಾಮರಾಜೇಶ್ವರ ದೇವಾಲಯ(1950), ಆನೆ ಸಾರೋಟ್ ಬೀದಿ(ದಿವಾನ್ಸ್ ರಸ್ತೆ)ಯಲ್ಲಿ ಅಮೃತಬಿಂದು ಎಂಬ ರತ್ನಪಡಿ ವ್ಯಾಪಾರಿ ಕಟ್ಟಿಸಿದ ಸುಮಾರು 300 ವರ್ಷಗಳಷ್ಟು ಹಳೆಯದಾದ ಅಮೃತೇಶ್ವರ ದೇವಾಲಯ, 1936ರಲ್ಲಿ ಚಿಕ್ಕಣ್ಣದಾಸರಿಂದ ಒಂಟಿಕೊಪ್ಪಲಿನಲ್ಲಿ ಸ್ಥಾಪನೆಯಾದ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಾಲಯ, 1946ರಲ್ಲಿ ಅಕ್ಬರ ರಸ್ತೆಯ ವೆಂಕಟರಮಣ ದೇವಾಲಯ, ಇರ್ವಿನ್ ರಸ್ತೆಯ ಸುಮಾರು 400 ವರ್ಷಗಳಷ್ಟು ಹಳೆಯದಾದ ಪಂಚಮುಖಿ ಆಂಜನೇಯ ದೇವಾಲಯ, 1907ರಲ್ಲಿ ಅಶೋಕ ರಸ್ತೆಯ ಪಾಂಡುರಂಗ ವಿಠಲಸ್ವಾಮಿ ದೇವಾಲಯ, 1954ರ ವಿದ್ಯಾರಣ್ಯಪುರಂನ ರಾಮಲಿಂಗೇಶ್ವರ ದೇವಾಲಯ, 1977ರಲ್ಲಿ, ಕಾಳಿದಾಸ ರಸ್ತೆಯ ಲಕ್ಷ್ಮೀನರಸಿಂಹ ದೇವಾಲಯ, 1982ರಲ್ಲಿ ಇಟ್ಟಿಗೆಗೂಡಿನ ದುರ್ಗಾಪರಮೇಶ್ವರಿ ದೇವಾಲಯ, ಮಂಡಿಮೊಹಲ್ಲದ ಅಕ್ಬರ್ ರಸ್ತೆಯ ಶ್ರೀಎಲ್ಲಮ್ಮಾಂಬ, ಚಂದ್ರಗುಪ್ತಾಂಬ ದೇವಾಲಯ, ಗಂಗರ ಕಾಲದ ಉತ್ತನಹಳ್ಳಿಯ ಉತ್ತನಾಳಮ್ಮ ದೇವಾಲಯ, 1954ರಲ್ಲಿ ಚಾಮರಾಜ ಒಡೆಯರ್ ನಿರ್ಮಿಸಿದ ರಾಮಾನುಜ ರಸ್ತೆಯ ಕಾಮೇಶ್ವರ–ಕಾಮೇಶ್ವರಿ ದೇವಾಲಯ, ವಿದ್ಯಾರಣ್ಯಪುರಂನ ಚಾಮುಂಡೇಶ್ವರಿ ದೇವಾಲಯ (1955), ಕುಂಬಾರಕೊಪ್ಪಲಿನ ಚಾಮುಂಡೇಶ್ವರಿ ದೇವಾಲಯ (1991), ರಾಜ ಮನೆತನದೊಂದಿಗೆ

ಸಂಬಂಧವನ್ನು ಹೊಂದಿ ಗಂಗೋತ್ರಿ ಬಡಾವಣೆಯಲ್ಲಿರುವ ಸುಮಾರು 300 ವರ್ಷಗಳಷ್ಟು ಹಳೆಯದಾದ ಬಿಸಿಲುಮಾರಮ್ಮ ದೇವಾಲಯ, ವಿಶ್ವೇಶ್ವರ ನಗರದಲ್ಲಿರುವ ಶ್ರೀರಾಜರಾಜೇಶ್ವರಿ ದೇವಾಲಯ(1994), ಬೆಟ್ಟದ ಮೇಲಿರುವ 19ನೇ ಶತಮಾನದ ನಾರಾಯಣಸ್ವಾಮಿ ದೇವಾಲಯ, 1951ರಲ್ಲಿ ಜಯಚಾಮರಾಜ ಒಡೆಯರಿಂದ ಅರಮನೆಯ ಕೋಟೆಯಲ್ಲಿ ಭುವನೇಶ್ವರಿ ದೇವಾಲಯ, ಮಾರಮ್ಮ ದೇಗುಲ ಮತ್ತು 1953ರಲ್ಲಿ ನಿರ್ಮಾಣವಾದ ಗಾಯಿತ್ರಿದೇವಿ ದೇವಾಲಯ, 1977ರಲ್ಲಿ ಬೀರಪ್ಪ ಮಹಾಸ್ವಾಮಿಯವರು ರಾಜೇಂದ್ರನಗರದ ಪೆನ್ಷನರ್‌ಬ್ಲಾಕ್‌ನಲ್ಲಿ ನಿರ್ಮಿಸಿದ ಶನೇಶ್ವರಸ್ವಾಮಿ ದೇವಾಲಯ, ವಿಶ್ವೇಶ್ವರ ನಗರದ ಸುಬ್ರಹ್ಮಣ್ಯೇಶ್ವರ ದೇವಾಲಯ(1974), ನಾರಾಯಣ ಮಹಾರಾಜರು 1954ರಲ್ಲಿ ಸಾಯಿಬಾಬ ಮಂದಿರವನ್ನು ತ್ಯಾಗರಾಜ ರಸ್ತೆಯಲ್ಲಿ ನಿರ್ಮಿಸಿದ್ದಾರೆ.

ಈ ಮೇಲೆ ತಿಳಿಸಿರುವ ದೇವಾಲಯಗಳೇ ಅಲ್ಲದೆ ಮೈಸೂರು ನಗರದಲ್ಲಿ ಇನ್ನು ಹಲವಾರು ದೇವಾಲಯಗಳು ನಿರ್ಮಾಣವಾಗಿದ್ದು ತನ್ನ ಪ್ರಾಚೀನತೆಯನ್ನು ಸಾರುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

## 2.4 ಶಾಸನಗಳು

ಶಾಸನಗಳು ಮೈಸೂರು ನಗರದ ಪ್ರಾಚೀನತೆಯನ್ನು ಅರಿಯಲು ಬಹಳ ಪ್ರಮುಖವಾದ ಆಕರವಾಗಿದೆ. ಮೈಸೂರು ಪ್ರಾಂತ್ಯವನ್ನು ಆಡಳಿತ ನಡೆಸಿದ ಅರಸು ಮನೆತನಗಳು ತಮ್ಮ ಆಡಳಿತ ಕಾಲದಲ್ಲಿ ಹಲವಾರು ಸಮಾಜೋಪಯೋಗಿ ಕೆಲಸ ಕಾರ್ಯಗಳನ್ನು ಮಾಡಿ ಜನಸಾಮಾನ್ಯರ ಜನಮಾನಸದಲ್ಲಿ ಉಳಿದಿದ್ದಾರೆ. ದೇವಾಲಯಗಳು, ಕೋಟೆ ಕೊತ್ತಲಗಳನ್ನು ಕಟ್ಟಿಸಿ ಅವುಗಳಿಗೆ ದಾನ ಧರ್ಮಗಳನ್ನು ನೀಡಿ ಅವುಗಳನ್ನು ಶಾಸನಗಳಲ್ಲಿ ಕಡೆದು ನಿಲ್ಲಿಸಿದ್ದಾರೆ. ಶಾಸನಗಳು ಕೇವಲ ರಾಜ ಮಹಾರಾಜರುಗಳ ಆಡಳಿತವನ್ನು ಅವರ ಸಾಧನೆಯನ್ನು ಮಾತ್ರ ತಿಳಿಸದೇ, ಅಂದಿನ ಸಮಾಜದ ಸ್ಥಿತಿಗತಿಗಳನ್ನು ತಿಳಿಯಲು ಸಹಕರಿಸುತ್ತವೆ. ಅಲ್ಲದೇ ದೇವಾಲಯಗಳು, ದೇವರುಗಳು, ದಾನ ಧರ್ಮ, ಪೂಜೆ–ಪುನಸ್ಕಾರಗಳ ಬಗ್ಗೆ ಹಾಗೂ ಜನ ಸಾಮಾನ್ಯರ ಸಮಾಜೋಪಯೋಗಿ ಕೆಲಸಗಳ ಬಗ್ಗೆಯೂ ತಿಳಿಸುತ್ತವೆ.

ಮೈಸನಾಡು–70: ತಮಿಳಿನ ಕ್ರಿ.ಪೂ.1ರ ಸಿತ್ತನ್ನವಾಸಿಲ್ ಶಾಸನದಲ್ಲಿ ಉಕ್ತಗೊಂಡಿರುವ 'ಎರುಮೈನಾಟ್ಟು' ಮತ್ತು ಅಶೋಕನ ಶಾಸನಗಳಲ್ಲಿ ಉಲ್ಲೇಖಿಸಿರುವ 'ಮಹಿಷಮಂಡಲ' ಪದವು ಮೈಸೂರನ್ನು ಸೂಚಿಸುತ್ತದೆಯೆಂದು ಅನೇಕ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ,

ಕ್ರಿಸ್ತಶಕದ ಆರಂಭದಲ್ಲಿ ಪ್ರಸಿದ್ಧಿಗೆ ಬಂದ ಪುನ್ನಾಟ ಮತ್ತು ಇದರ ವಿಭಾಗವಾದ ಎಡತೊರೆ ನಾಡುಗಳಿಂದ ಮಹಿಷ ಮಂಡಲದ ಕೀರ್ತಿ ಹಿನ್ನೆಲೆಗೆ ಸರಿದು ಅದು ಎಡತೊರೆ ನಾಡಿನ ಒಂದು ಉಪವಿಭಾಗವಾಗಿ ಮೈಸನಾಡು–70 ಎಂದು ಕರೆಯಲ್ಪಟ್ಟಿತು. ಇದು ವ್ಯಕ್ತಿಯೊಬ್ಬನ ಹೆಸರಾದ ಮಯಿಸನ ನಾಡು – ಮೈಸೆನಾಡು – ಮೈಸೆವೂರು ನಾಡು – ಮೈಸೂರು ಆಗಿ ಬದಲಾಗಿದೆಯೆಂದು, ಡಾ.ಚನ್ನಬಸವಯ್ಯ ಹಿರೇಮಠ ಅವರು ಅಭಿಪ್ರಾಯ ಪಡುತ್ತಾರೆ"[5]

"ಮೈಸೂರಿನ ಕುಕ್ಕರಹಳ್ಳಿ"[6] ಶಾಸನದಲ್ಲಿ 'ಬಯಿನಾಡು' ಎಂದು ಉಲ್ಲೇಖಿಸಿರುವುದು ಈ ಬಯಲ್ನಾಡನ್ನೇ ಎಂದು ಅರ್ಥೈಸಲಾಗಿದೆ.

"ಹೊಯ್ಸಳ ವಿಷ್ಣುವರ್ಧನನು ಗಂಗವಾಡಿಯನ್ನು ಆಳುತ್ತಿದ್ದ ಕಾಲದಲ್ಲಿ ಮರ್ಬ್ಬಳದ ತೀರ್ಥಕ್ಕೆ ಮಣಲೆವಾಡಿಯಲ್ಲಿ ದತ್ತಿ ನೀಡಿದ ವಿಷಯವನ್ನು ಮೈಸೂರಿನ ಚಾಮುಂಡಿಬೆಟ್ಟದಲ್ಲಿ ದೊರೆತ ಶಾಸನ ತಿಳಿಸುತ್ತದೆ"[7] ಚಾಮುಂಡಿಬೆಟ್ಟದ ಮೇಲಿನ ಮಹಾಬಲೇಶ್ವರ ದೇವಾಲಯವು ಆಗ ಮರ್ಬ್ಬಳತೀರ್ಥ ಎಂದು ಪ್ರಸಿದ್ಧವಾಗಿತ್ತು. ಇಲ್ಲಿ ನಡೆಯುವ ದೇವರ ಅಥವಾ ಧಾರ್ಮಿಕ ಕಾರ್ಯಕ್ಕೆಂದು ದತ್ತಿ ನೀಡಿರುತ್ತಾರೆ.

"ಮೈಸೂರು ಹಿರಿದೇವರಾಜ ಒಡೆಯರ ಮೊಮ್ಮಗ, ದೊಡ್ಡದೇವರಾಜ ಒಡೆಯರ ಮಗನಾದ ಚಾಮರಾಜ ಒಡೆಯರು, ಅವರ ತಂದೆಯಿಂದ ನಿರ್ಮಿತವಾದ ದೇವರಾಯ–ಅಗ್ರಹಾರದ ಗೋಪಾಲಕೃಷ್ಣ ದೇವಾಲಯದ ದೇವರಿಗೆ ನಂದಾದೀವಿಗೆ ಮತ್ತು ನೈವೇದ್ಯಗಳಿಗಾಗಿ ಮಾಣಿಕಪುರ ಗ್ರಾಮವನ್ನು ಅದಕ್ಕೆ ಸೇರಿದ ಇತರ ಉಪಗ್ರಾಮಗಳೊಡನೆ ಅವರ ಮುಖ್ಯಾಶ್ರಿತರಾದ ಅಳಶಿಂಗರೈಯಂಗಾರರಿಗೆ ಬರೆದುಕೊಟ್ಟ ಉಲ್ಲೇಖ ಕ್ರಿ.ಶ.1685ರ ಶಾಸನದಲ್ಲಿದೆ"[8] ಈ ದಾನದಲ್ಲಿ ಈ ಹಿಂದೆ ತಿರುಮಲಯ್ಯಂಗಾರರಿಗೆ ಧಾರೆಯೆರೆದಿದ್ದ ತೋಟದ ಸ್ಥಳವನ್ನು ಹೊರತುಪಡಿಸಲಾಗಿದೆ. ಶಾಸನೋಕ್ತ ಅಗ್ರಹಾರದಲ್ಲಿ ಶ್ರೀವೈಷ್ಣವರು ಪ್ರಭಾವಶಾಲಿಗಳಾಗಿದ್ದರೆಂದು ತಿಳಿದುಬರುತ್ತದೆ. ದೇವರ ನಂದಾದೀವಿಗೆಗೆ ಮತ್ತು ನೈವೇದ್ಯಗಳಿಗಾಗಿ ಒಂದೊಂದು ಗ್ರಾಮಗಳನ್ನು ದೇವಾಲಯದ ಮುಖ್ಯಸ್ಥರಿಗೆ ಬರೆದು ಕೊಡುತ್ತಿದ್ದ ಪದ್ಧತಿ ಇದ್ದುದು ಕಂಡುಬಂದಿದೆ.

"ಶ್ರೀರಾಮಾನುಜಾಚಾರ್ಯರ ಶಿಷ್ಯಪರಂಪರೆಯಿಂದ ಸ್ಥಾಪಿತವಾದ ಮೈಸೂರಿನ ಪರಕಾಲ ಮಠವು, ಇಂದಿಗೂ ಶ್ರೀವೈಷ್ಣವ ಆಚರಣೆಗಳನ್ನು ಮುನ್ನಡೆಸಿಕೊಂಡು ಬರುತ್ತಿದೆ. ಹಯಗ್ರೀವ ಉಪಾಸನೆ, ಶ್ರೀಕೃಷ್ಣ ಜನ್ಮಾಷ್ಟಮಿಯ ಆಚರಣೆಯನ್ನು ಪಾಲಿಸಲಾಗುತ್ತಿದೆ. ಈ ಮಠದಲ್ಲಿನ ವಜ್ರದ ತೊಟ್ಟಿಲಿನ ಮೇಲಿರುವ ಕ್ರಿ.ಶ.1816ರ ಶಾಸನದಿಂದ, ಇದು ಮಠದಲ್ಲಿನ ಹಯಗ್ರೀವ ಮತ್ತು

ಲಕ್ಷ್ಮೀನಾರಾಯಣ ದೇವರುಗಳ ಡೋಲೋತ್ಸವಕ್ಕಾಗಿ ಮೈಸೂರು ಅರಸರಾದ ಮುಮ್ಮಡಿ ಕೃಷ್ಣರಾಜ ಒಡೆಯರು ಮಾಡಿಸಿಕೊಟ್ಟ ಕೊಡುಗೆಯೆಂದು ತಿಳಿದು ಬರುತ್ತದೆ"[9] ಕೊಡುಗೆಯನ್ನು ಸ್ವೀಕರಿಸಿದವರು ಪರಕಾಲ ಮಠದ ಅಂದಿನ ಸ್ವಾಮಿಯಾದ ಬ್ರಹ್ಮತಂತ್ರ ಘಂಟಾವತಾರ ಪರಕಾಲಸ್ವಾಮಿಯವರು. ಇಂದಿಗೂ ಶ್ರೀಕೃಷ್ಣ ಜನ್ಮಾಷ್ಟಮಿಯಂದು ಪರಕಾಲ ಮಠದಲ್ಲಿರುವ ಚಿನ್ನದಿಂದ ನಿರ್ಮಿತವಾಗಿ ವಜ್ರದ ಹರಳುಗಳನ್ನು ಹೊಂದಿಸಿರುವ ವಜ್ರದ ತೊಟ್ಟಿಲಿನಲ್ಲಿ ಶ್ರೀಹಯಗ್ರೀವ ಮತ್ತು ಲಕ್ಷ್ಮೀನಾರಾಯಣ ದೇವರಿಗೆ ಡೋಲೋತ್ಸವ ಸೇವೆಯನ್ನು ನಡೆಸಲಾಗುತ್ತದೆ.

"ಪರಕಾಲ ಮಠದಲ್ಲಿನ ಚಿನ್ನದ ತೊಟ್ಟಿಲಿನ ಮೇಲಿರುವ ಕ್ರಿ.ಶ.19ನೇ ಶತಮಾನದ ಇನ್ನೊಂದು ಶಾಸನವು ಮುಮ್ಮಡಿ ಕೃಷ್ಣರಾಜ ಒಡೆಯರ ಧರ್ಮಪತ್ನಿಯಾದ ಕೃಷ್ಣ ವಿಲಾಸದ ಅಮ್ಮಣ್ಣಿಯವರು ಮಠದ ಹಯಗ್ರೀವ ಸನ್ನಿಧಿಗೆ ಅರ್ಪಿಸಿದ ಚಿನ್ನದ ತೊಟ್ಟಿಲಿನ ಕೊಡುಗೆಯನ್ನು ದಾಖಲಿಸಿದೆ"[10] ಮಠದ ಚಿನ್ನದ ಬಟ್ಟಲುಗಳು, ಬೆಳ್ಳಿಯ ಮುಕ್ಕಾಲು ಮಣೆಗಳು, ರತ್ನಮಯವಾದ ಶಠಗೋಪಗಳ ಮೇಲೆ ಮೈಸೂರು ಅರಸರ ಕೊಡುಗೆಗಳನ್ನು ದಾಖಲಿಸುವ ಅನೇಕ ಶಾಸನಗಳಿವೆ. ಇದು ಮೈಸೂರು ಅರಸರು ಶ್ರೀವೈಷ್ಣವ ಪರಂಪರೆಗೆ ನೀಡಿರುವ ಪ್ರೋತ್ಸಾಹಗಳ ದ್ಯೋತಕವಾಗಿದೆ. ಅರಸರ ಧರ್ಮಪತ್ನಿಯರೂ ಧಾರ್ಮಿಕ ಕಾರ್ಯಗಳಲ್ಲಿ ಮುಕ್ತವಾಗಿ ತೊಡಗಿರುವುದನ್ನು ತಿಳಿಸುತ್ತದೆ.

"ಆದಿ ವರಾಹ ಲಾಂಛನ ಚಾಳುಕ್ಯಾರ್ಜುನನೆಂದು ಬಿರುದಾಂಕಿತನಾದ ಮಹಾಸಾಮಂತ ನರಸಿಂಗಯ್ಯನು ನರಸಿಂಗೇಶ್ವರ ದೇವಾಲಯವನ್ನು ಕಟ್ಟಿಸಿ ಅದರ ಅಭ್ಯಂತರ ಸಿದ್ಧಿಗಾಗಿ ಮಣಲೆವಾಡಿ ಗ್ರಾಮವನ್ನು ದತ್ತಿ ಬಿಟ್ಟ ವಿಷಯವನ್ನು ಕ್ರಿ.ಶ.8ನೇ ಶತಮಾನದ ಕುಕ್ಕರಹಳ್ಳಿ ಶಾಸನವು ದಾಖಲಿಸಿದೆ"[11]

"ಮೈಸೂರು ಅರಮನೆಯ ಪ್ರಸನ್ನ ನಂಜುಂಡೇಶ್ವರ ದೇವಾಲಯದ ಬಾಗಿಲಿನ ಬಲಭಾಗದಲ್ಲಿರುವ ಕಲ್ಲಿನ ಶಾಸನ ಕ್ರಿ.ಶ.1821ರ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ಕಾಲಘಟ್ಟದ ಶಾಸನವು, ದೊರೆಯ ಪಟ್ಟಮಹಿಷಿಯಾದ ಲಕ್ಷ್ಮೀವಿಲಾಸದ ದೇವಾಜಮ್ಮಣ್ಣಿಯು ಮೈಸೂರು ಕೋಟೆಯ ಪಶ್ಚಿಮ ಭಾಗದಲ್ಲಿ ದೇವಾಂಬಾ ಅಗ್ರಹಾರವನ್ನು ನಿರ್ಮಿಸಿ, ಇಪ್ಪತ್ತೆರಡು ವಿತ್ತಿಗಳಾಗಿ ವಿಭಾಗಿಸಿ, ಒಂದು ವಿತ್ತಿಯನ್ನು ದೇವರಿಗೆ ಮತ್ತು ಇನ್ನುಳಿದ ಇಪ್ಪತ್ತೊಂದು ವಿತ್ತಿಗಳನ್ನು ಬ್ರಾಹ್ಮಣರಿಗೆ ಸರ್ವಮಾನ್ಯವಾಗಿ ಹಂಚಿಕೆ ಮಾಡಿರುವ ವಿವರವನ್ನು ಉಲ್ಲೇಖಿಸಲಾಗಿದೆ"[12] ಮುಮ್ಮಡಿ ಕೃಷ್ಣ ಒಡೆಯರು ಈಶಾನ್ಯ ಭಾಗದಲ್ಲಿ ಶಿವದೇವಾಲಯವನ್ನು

ನಿರ್ಮಿಸಿ, ಅದಕ್ಕೆ ಪ್ರಸನ್ನ ನಂಜುಂಡೇಶ್ವರ ದೇವಾಲಯವೆಂದು ನಾಮಕರಣ ಮಾಡಿದರು. ಹೀಗೆ ವಿಶೇಷ ಪಡಿತರ ದೀಪಾರಾಧನೆ ರಥೋತ್ಸವಾದಿಗಳಿಗೆ ಸಮರ್ಪಿಸಿರುವ ವಿವರಗಳಿವೆ.

"ಮೈಸೂರು ಅರಮನೆಯ ಪ್ರಸನ್ನ ನಂಜುಂಡೇಶ್ವರ ದೇವಾಲಯದ ಬಾಗಿಲಿನ ಎಡಭಾಗದಲ್ಲಿರುವ ಕಲ್ಲಿನ ಶಾಸನ ಮುಮ್ಮಡಿ ಕೃಷ್ಣರಾಜ ಒಡೆಯರ ಇನ್ನೊಬ್ಬ ಧರ್ಮ ಪತ್ನಿಯಾದ ಕೃಷ್ಣವಿಲಾಸದ ಲಿಂಗಾಜಮ್ಮಣ್ಣಿಯವರು ಲಿಂಗಾಂಬಾ ಅಗ್ರಹಾರವನ್ನು ಇಪ್ಪತ್ತು ಮನೆಗಳೊಡನೆ ನಿರ್ಮಿಸಿ, ಜೊತೆಗೆ ಪರಕಾಲ ಮಠವನ್ನು ಕಟ್ಟಿಸಿ, ಅಲ್ಲಿ ಹಯಗ್ರೀವ ದೇವರನ್ನು ಪ್ರತಿಷ್ಠಾಪಿಸಿ, ಮಂಟಪವನ್ನು ಕಟ್ಟಿಸಿದರು. ಗೃಹಸೋಪಾಸಕರಾಗಿ ಬ್ರಾಹ್ಮಣರಿಗೆ ಧಾರೆಯೆರೆದ ವಿಷಯವನ್ನು ದಾಖಲಿಸಿದೆ"[13]

"ಕ್ರಿ.ಶ.1821ರ ಮೈಸೂರು ಶಾಸನದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಮತ್ತೊಬ್ಬ ಧರ್ಮಪತ್ನಿಯಾದ ರಮಾವಿಲಾಸದ ಚಲುವಾಜಮ್ಮಣ್ಣಿಯವರು ಚಲುವಾಂಬಾ ಅಗ್ರಹಾರವನ್ನು ಮೈಸೂರು ಅರಮನೆ ಕೋಟೆಯ ಪಶ್ಚಿಮಭಾಗದಲ್ಲಿ ಇಪ್ಪತ್ತು ಮನೆಗಳೊಡನೆ ನಿರ್ಮಿಸಿ, ಅಹೋಬಲ ಮಠವನ್ನು ಸ್ಥಾಪಿಸಿ, ಮಠದಲ್ಲಿ ಲಕ್ಷ್ಮೀನರಸಿಂಹ ದೇವರನ್ನು ಪ್ರತಿಷ್ಠಾಪಿಸಿ, ಅಗ್ರಹಾರಕ್ಕೆ ಬೂಕನಕೆರೆ ತಾಲೂಕಿನ ಡಿಂಕ, ಬೇಬಿ ಮತ್ತು ಹೊನಗಾನಹಳ್ಳಿ ಗ್ರಾಮಗಳನ್ನು ಅವುಗಳ ಉಪಗ್ರಾಮಗಳ ಸಹಿತ ವಿಂಗಡಿಸಿಕೊಟ್ಟು ಹುಟ್ಟುವಳಿಗಳನ್ನು ಅಗ್ರಹಾರದ ಮಹಾಜನಗಳು ಅನುಭವಿಸಿಕೊಂಡು ಬರುವಂತೆ ಸರ್ವಮಾನ್ಯವಾಗಿ ನೀಡಿದ ವಿವರವನ್ನು ಉಲ್ಲೇಖಿಸಿದೆ"[14]

"ಮುಮ್ಮಡಿ ಕೃಷ್ಣರಾಜ ಒಡೆಯರ ಇನ್ನೊಬ್ಬ ಧರ್ಮಪತ್ನಿಯಾದ ಮುದ್ದುಲಿಂಗಮ್ಮನವರು ಉತ್ತನಳ್ಳಿ ದೇವಸ್ಥಾನಕ್ಕೆ ಅಡ್ಡಣಿಗೆಯನ್ನು ಮಾಡಿಸಿಕೊಟ್ಟ ಉಲ್ಲೇಖವಿದೆ"[15]. "ಮುಮ್ಮಡಿ ಕೃಷ್ಣರಾಜ ಒಡೆಯರ ಮತ್ತೊಬ್ಬ ಪತ್ನಿ ಮಹಾಬಲೇಶ್ವರ ದೇವಾಲಯದ ಸುಖನಾಸೀ ಬಾಗಿಲುವಾಡಕ್ಕೆ ಗುಬ್ಬಿಕದ ಸಹಿತ ಹಿತ್ತಾಳೆ ಚೌಕಟ್ಟು ಮಾಡಿಸಿದ ವಿವರವಿದೆ"[16]

"ಮುಮ್ಮಡಿ ಕೃಷ್ಣರಾಜ ಒಡೆಯರ ಇನ್ನೊಬ್ಬ ಪತ್ನಿ ಕೃಷ್ಣವಿಲಾಸದ ಸನ್ನಿಧಾನದ ಲಿಂಗಾಜಮ್ಮಣ್ಣಿಯು ಚಾಮುಂಡೇಶ್ವರಿ ದೇವಾಲಯದ ಸುಖನಾಸೀ ಬಾಗಿಲಿಗೆ ಹಿತ್ತಾಳೆ ಚೌಕಟ್ಟು, ನವರಂಗದ ಕದ ಗುಬ್ಬೀಕದ ಸಹಿತವಾಗಿ ಮಾಡಿಸಿಕೊಟ್ಟ ವಿಷಯವನ್ನು ಈ ಶಾಸನವು ದಾಖಲಿಸಿದೆ"[17]

"ಕ್ರಿ.ಶ.19ನೇ ಶತಮಾನದ ಶಾಸನವು ಮೈಸೂರಿನ ಚಾಮುಂಡಿಬೆಟ್ಟದ ಮೇಲಿರುವ ಮಹಾಬಲೇಶ್ವರ ದೇವಾಲಯಕ್ಕೆ ಪುಟ್ಟತಾಯಮ್ಮ ನೀಡಿದ ಬೆಳ್ಳಿಯ ಬಟ್ಟಲುಗಳ ಸೇವೆಯನ್ನು ದಾಖಲಿಸಿದೆ."[18] ಇದೇ ಕಾಲಘಟ್ಟದ ಕ್ರಿ.ಶ.19ನೇ ಶತಮಾನದ ಚಾಮುಂಡೇಶ್ವರಿ ದೇವಾಲಯದ ಬೆಳ್ಳಿಯ ಬಟ್ಟಲಿನ ಮೇಲಿರುವ ಶಾಸನವು, ಉಗ್ರಾಣದ ಲಕ್ಷ್ಮೀಶ್ವರ ಸೇವೆಯೆಂದು ಉಲ್ಲೇಖಿಸಿದೆ"[19]

"ಕ್ರಿ.ಶ.1667ರ ಮೈಸೂರಿನ ಒಂದು ಶಾಸನದಲ್ಲಿ ಮೈಸೂರಿನ ಅರಸರಾದ ದೇವರಾಜ ಒಡೆಯರ ಆಳ್ವಿಕೆಯ ಕಾಲದಲ್ಲಿ ಅಮೂಲ್ಯ ಹರಳುಗಳ ವರ್ತಕನಾದ ಗುಜರಾತಿನ ಧನ್ನೋಜಿಯು, ಕನ್ನಂಬಾಡಿ ಸ್ಥಳದ ಹೊಸಕೋಟೆ ಗ್ರಾಮವನ್ನು ಧನ್ನೋಜಿ–ರಾಮ ಭಾಯಮ್ಮನಪುರ ಎಂಬ ಅಗ್ರಹಾರವಾಗಿ ಮಾರ್ಪಡಿಸಿ ಅನೇಕ ಗೋತ್ರಗಳ ಬ್ರಾಹ್ಮಣರಿಗೆ ನೀಡಿದ ವಿವರವನ್ನು ಹೊಂದಿದೆ"[20]

ಮೈಸೂರಿನಲ್ಲಿ ದೊರೆತಿರುವ ಹತ್ತು ಹಲಗೆಗಳಿಂದ ಕೂಡಿರುವ ತಾಮ್ರ ಶಾಸನದ ಕಾಲ ಕ್ರಿ.ಶ.1674 ಆಗಿದ್ದು, ಮೈಸೂರಿನ ಅರಸರಾದ ಚಿಕ್ಕದೇವರಾಜ ಒಡೆಯರು ಶ್ರೀರಂಗಪಟ್ಟಣ, ಮೇಲುಕೋಟೆ ಮುಂತಾದ ಕಡೆಗಳಲ್ಲಿ ವಜ್ರಮುಕುಟ ಮತ್ತು ಗಜೇಂದ್ರ ಉತ್ಸವಗಳಿಗೆ ಉದ್ಘಾಟನೆಯ ಮೂಲಕ ಚಾಲನೆ ನೀಡಿದ ಸಮಯದಲ್ಲಿ ಅಗ್ರಹಾರಗಳನ್ನು ನಿರ್ಮಿಸಿ ಬ್ರಾಹಣರಿಗೆ ದಾನ ನೀಡಿದ ವಿವರಗಳನ್ನು ಒಳಗೊಂಡಿದೆ. ಹೀಗೆ ದಾನ ನೀಡಿದ ಅಗ್ರಹಾರಗಳ ಚಕ್ಕುಬಂದಿಗಳನ್ನು ನಿರ್ದೇಶಿಸುವಾಗ "ಈ ಗ್ರಾಮಕ್ಕೂ ಪಡುವಲು ಹೊಲೇರ ಬಿಳಿಗಿರಿ ಹೊಲದ ಚುಜ್ಜಲತಾಳಲ್ಲೂ ನೆಟ್ಟ ಕಲ್ಲು ಎಂದು ಹೇಳುವಲ್ಲಿ ದಲಿತನೋರ್ವನ ಹೊಲದ ಉಲ್ಲೇಖ ಕಂಡುಬಂದಿರುತ್ತದೆ"[21] ಇದು ಅಂದಿನ ಕಾಲದ ಸಮಾಜದಲ್ಲಿ ದಲಿತರ ಜೀವನವು ಸ್ವತಂತ್ರವಾಗಿ ಎಲ್ಲರಂತೆ ಇದ್ದಿತೆನ್ನುವ ಬಗ್ಗೆ ಪುರಾವೆಯನ್ನು ಒದಗಿಸುತ್ತದೆ.

ಕ್ರಿ.ಶ.1627ರಲ್ಲಿ ಬೆಟ್ಟದ ಮಹಾಬಲೇಶ್ವರ ದೇವರ ಪಾತ್ರದವಳಾಗಿದ್ದ ಸೂಳೆ ಮಾಯಿದೇವಿಯ ಮಗಳು ನಾಗಸಂಭು ಮಹಾಬಲೇಶ್ವರ ದೇವಾಲಯದ ಮಂಟಪದ ಕಂಭವೊಂದನ್ನು ಮಾಡಿಸಿದ್ದನ್ನು ಚಾಮುಂಡಿಬೆಟ್ಟದ ಶಾಸನವೊಂದರಲ್ಲಿ ಉಲ್ಲೇಖಿಸಲಾಗಿದೆ"[22] ಮೈಸೂರು ಅರಸರ ಆಳ್ವಿಕೆಯ ಕಾಲದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಮೂವತ್ತು ಪತ್ನಿಯರಲ್ಲದೆ ಹಲವಾರು ಉಪಪತ್ನಿಯರಿದ್ದುದು ಶಾಸನಗಳಿಂದ ತಿಳಿದುಬರುತ್ತದೆ. ಅಲ್ಲದೇ ಸೂಳೆ ಮಾಯಿದೇವಿಯ ಮಗಳು ನಾಗಸಂಭು ಮತ್ತು ಅವರ ಸಮುದಾಯದವರಿಗೂ ಸಮಾಜಮುಖಿಯಾದ ಧಾರ್ಮಿಕ ಕೆಲಸಗಳಲ್ಲೂ ತೊಡಗಿಸಿಕೊಳ್ಳಲು ಅವಕಾಶವಿತ್ತೆಂಬುದು ಇದರಿಂದ ತಿಳಿದುಬರುತ್ತದೆ.

ಕ್ರಿ.ಶ.1828ರ ಶಾಸನದಲ್ಲಿ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರ ಧರ್ಮಪತ್ನಿಯಾದ ಕೃಷ್ಣವಿಲಾಸ ಅರಮನೆಯ ಮಹಾರಾಣಿಯಾದ ಲಿಂಗಾಜಮ್ಮಣ್ಣಿಯು ಮಹಾಲಿಂಗೇಶ್ವರ ದೇವಾಲಯವನ್ನು ಕಟ್ಟಿಸಿ, ಅದರ ದಕ್ಷಿಣಭಾಗದಲ್ಲಿ ಲಿಂಗಾಂಬುಧಿಯೆಂಬ ಕೆರೆಯನ್ನು ನಿರ್ಮಿಸಿರುವುದಾಗಿ ಉಲ್ಲೇಖವಿದೆ"[23] ಈ ಕೆರೆಯು ಇಂದಿಗೂ ಮೈಸೂರಿನ ಲಿಂಗಾಂಬುಧಿ ಪಾಳ್ಯ ಗ್ರಾಮದಲ್ಲಿ ಕಾಣಬಹುದಾಗಿದೆ. ಅಲ್ಲದೆ ದೇವಾಲಯಗಳ ಹತ್ತಿರದಲ್ಲಿ ದೇವರ ಪೂಜಾ ಕಾರ್ಯಗಳಿಗೆ ಅನುಕೂಲವಾಗಲೆಂದು ಕಲ್ಯಾಣಿಗಳನ್ನು ನಿರ್ಮಿಸುತ್ತಿದ್ದರು. ಉದಾಹರಣೆಗೆ: ಹಿನಕಲ್ಲಿನ ನನ್ನೇಶ್ವರ ದೇವರ ಕಲ್ಯಾಣಿ, ಕುಂಬಾರ ಕಪ್ಪಲಿನ ತಪತಿ ಕಲ್ಯಾಣಿ ಮುಂತಾದವುಗಳನ್ನು ಕಾಣಬಹುದು.

ಮೈಸೂರು ಅರಸರ ಕಾಲದ ಶಾಸನಗಳಲ್ಲಿ ದೇವ–ದೇವತೆಯರುಗಳಿಗೆ ಹಾಗೂ ಅವರ ವಾಹನಗಳಿಗೆ ಸಮರ್ಪಿಸಿರುವ ಆಭರಣಗಳನ್ನು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಕ್ರಿ.ಶ.1857ರ ಶಾಸನದಲ್ಲಿ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರು ಚಾಮುಂಡಿಬೆಟ್ಟದ ಮೇಲಿರುವ ಅವರ ಕುಲದೇವತೆ ಚಾಮುಂಡೇಶ್ವರಿ ದೇವಿಗೆ ಪದಕವನ್ನು ಹೊಂದಿದ ಬಂಗಾರದ ನಕ್ಷತ್ರ ಮಾಲಿಕೆಯನ್ನು ಸಮರ್ಪಿಸಿರುವ ಸಂಗತಿ ಉಲ್ಲೇಖವಾಗಿದೆ"[24]

ಮೈಸೂರಿನ ಚಾಮುಂಡಿಬೆಟ್ಟದ ಮೇಲಿರುವ ಶಾಸನವು ಕ್ರಿ.ಶ.1211ರ ಕಾಲದೆನ್ನಲಾಗಿದೆ. ಇದು ಕೊಂಠಿಯ ಮಲ್ಲಿಕಾರ್ಜುನ, ಕುದೂರು ಮಲ್ಲಿಕಾರ್ಜುನ, ಸಿಂದಗಟ್ಟದ ಕಲಿದೇವ ಮತ್ತು ಚಾಮುಂಡಿಬೆಟ್ಟದ ಮರ್ಬ್ಬಳೇಶ್ವರ ದೇವರ ಪಾದಗಳಿಗೆ ಬಿಟ್ಟ ದಾನದ ವಿವರ ದಾಖಲಾಗಿದೆ"[25]

ಮುಮ್ಮಡಿಯವರ ಆಡಳಿತಾವಧಿಗೆ ಸಂಬಂಧಿಸಿದ ಶಾಸನವು ಕ್ರಿ.ಶ.1810ರ ಕಾಲ ಘಟ್ಟದ್ದಾಗಿದೆ. ಅರಮನೆಯ ಕೋಟೆಯ ಶ್ವೇತವರಹಸ್ವಾಮಿ ದೇವಾಲಯದಲ್ಲಿರುವ ಬೆಳ್ಳಿಪೀಠ ಮತ್ತು ಪ್ರಭಾವಳಿಯನ್ನು ದಾನವಾಗಿ ಕೊಟ್ಟಿರುವ ಉಲ್ಲೇಖವಿದೆ"[26]

ಕ್ರಿ.ಶ.1753ರ ಶಾಸನ ಅರಮನೆಯ ಕೋಟೆಯ ಉತ್ತರ ಪಾರ್ಶ್ವದ ಗೋಡೆಯ ಮೇಲಿದೆ. ಕಳಲೆಯ ನಂಜರಾಜನು ತ್ರಿನಯನೇಶ್ವರ ದೇವಾಲಯದ ಗೋಪುರದ ಕೆಲಸವನ್ನು ಮಾಡಿಸಿದನೆಂದು ತಿಳಿದುಬರುತ್ತದೆ. ಈ ಗೋಪುರಾಕೃತಿಯನ್ನು ನಿರ್ಮಿಸಿದನೆಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ"[27]

ಮೈಸೂರು ಅರಮನೆಯ ಕೋಟೆಯಲ್ಲಿನ ಲಕ್ಷ್ಮೀರಮಣಸ್ವಾಮಿ ದೇವಾಲಯದ ಮಹಾದ್ವಾರದ ಗೋಪುರದ ತೊಲೆಯ ಮೇಲಿರುವ ಶಾಸನವು ಕ್ರಿ.ಶ.1851ರ ಕಾಲದ್ದಾಗಿದೆ. ಈ

ಶಾಸನದಲ್ಲಿ ರಾಜಒಡೆಯರ್ ಅವರಿಗೆ ವಿಷಪ್ರಾಶನ ಮಾಡಿಸಿದ್ದು ದೇವರ ಕೃಪೆಯಿಂದ ಬದುಕುಳಿದ ಹಾಗೂ ಆ ದೇವಾಲಯದ ಗೋಪುರ ಸುವರ್ಣಕಳಸ ಪ್ರತಿಷ್ಠಾಪಿಸಿದ ವಿವರವಿದೆ. ಅನಂತರದಲ್ಲಿ ಗೋಪುರ ಜೀರ್ಣೋದ್ಧಾರವಾಗಲು, ಅದನ್ನು ಪುನರ್ ಪ್ರತಿಷ್ಠಾಪಿಸಿದ ಮುಮ್ಮಡಿಯವರ ಕೊಡುಗೆಯನ್ನು ಸಾರುತ್ತದೆ"[28]

ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಆಳ್ವಿಕೆಯ ಕಾಲದ ಶಾಸನ ಕ್ರಿ.ಶ.1829 ಎಂದು ಗುರುತಿಸಲಾಗಿದೆ. ಮೈಸೂರು ಅರಮನೆಯ ಕೋಟೆಯಲ್ಲಿರುವ ಪ್ರಸನ್ನ ಕೃಷ್ಣಸ್ವಾಮಿ ದೇವಾಲಯದ ಮುಂದಿರುವ ಶಾಸನದಲ್ಲಿ ಪ್ರಸನ್ನ ಕೃಷ್ಣದೇವಾಲಯ, ಚಾಮುಂಡೇಶ್ವರಿ, ಲಕ್ಷ್ಮೀರಮಣಸ್ವಾಮಿ ದೇವಾಲಯಗಳ ಗೋಪುರಗಳು ಮುಂತಾದ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿದ್ದ ವಿವರಗಳು ಶಾಸನಗಳಲ್ಲಿ ದಾಖಲಾಗಿದೆ"[29]

ಮೈಸೂರಿನ ಕೃಷ್ಣವಿಲಾಸ ಅಗ್ರಹಾರದಲ್ಲಿರುವ ಸುಬ್ರಾಯದಾಸರ ಪ್ರಸನ್ನ ವೆಂಕಟರಮಣಸ್ವಾಮಿ ಅವರ ದೇವಸ್ಥಾನದಲ್ಲಿ ಪ್ರಾಣ ದೇವರಗುಡಿ ಬಾಗಿಲುವಾಡದ ಮೇಲುಗಡೆ ಗೋಡೆಯಲ್ಲಿರುವ ಶಿಲಾಶಾಸನವಿದೆ. ಇದರ ಕಾಲ ಸುಮಾರು ಕ್ರಿ.ಶ.1836. ಇದರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಗೋಪಾಲದಾಸರಿಗೆ ದಾನ ನೀಡಿರುವ ವಿವರವಿದೆ. ಪ್ರಸನ್ನ ವೆಂಕಟೇಶ್ವರ ದೇವಸ್ಥಾನ, ಚಿತ್ರಮಂಟಪ, ರಥ, ತಟಾಕ, ತೋಪು, ಪ್ರಸನ್ನ ಪುಷ್ಕರಣಿ, ಪ್ರಸನ್ನ ಪ್ರಾಣದೇವರು, ರಾಮದೇವರು, ಉತ್ಸವ ಮಂಟಪ, ಸಂಧ್ಯಾ ಮಂಟಪ ಮುಂತಾದವುಗಳನ್ನು ಮುಮ್ಮಡಿ ಕೃಷ್ಣರಾಜರು ಶೀನಪ್ಪದಾಸರ ಸಮ್ಮತಿಯ ಮೇರೆಗೆ ಈ ದಾನಗಳನ್ನು ಕೊಟ್ಟಿರುವ ವಿವರಗಳಿವೆ"[30]

ಚಾಮುಂಡಿಬೆಟ್ಟದ ದೇವಾಲಯದ ಮಹಾದ್ವಾರದ ಹೊಸಲಿನ ಮೇಲೆ ತಮಿಳು ಶಾಸನವಿದ್ದು, 19ನೇ ಶತಮಾನಕ್ಕೆ ಸೇರಿದ್ದಾಗಿದೆ. ತಿರುಪ್ಪತಿ ಮಲ್ಯೆವಪ್ಪನ್ ಎಂಬುವವನು ಈ ಮಹಾದ್ವಾರದ ಹೊಸಲನ್ನು ಕೊಡುಗೆಯಾಗಿ ನೀಡಿರುವ ಬಗ್ಗೆ ಉಲ್ಲೇಖವಿದೆ"[31]

ಶ್ರೀ ಲಕ್ಷ್ಮೀರಮಣಸ್ವಾಮಿಯವರ ಸನ್ನಿಧಿಯಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಆಳ್ವಿಕೆ ಸಂದರ್ಭ ಅವರ ಪಾದ ಸೇವಕಳು, ದಾನಿಯೂ ಆದ ಹೊಸೂರು ಸುಬ್ಬಮ್ಮಯ್ಯಳು ಅಮ್ಮನವರ ಗುಡಿಯ ಉಯ್ಯಾಲೆ ಉತ್ಸವದ ಕರೀಮರದ ಮಂಚವನ್ನು ಅರ್ಪಿಸಿರುವರು ಎಂದು ಉಲ್ಲೇಖಿಸಲಾಗಿದೆ"[32] ರಾಜರು, ಅಧಿಕಾರಿಗಳು ಅಲ್ಲದೇ ಸೇವಕರು, ದಾನಿಗಳು ಸಹ ಸಮಾಜೋಪಯೋಗಿ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ನಿದರ್ಶನಗಳು ಅಪಾರ ಪ್ರಮಾಣದಲ್ಲಿ ಸಿಗುತ್ತವೆ.

ಮೈಸೂರು ಅರಮನೆಯ ಕೋಟೆಯ ಒಳಗೆ ತ್ರಿನಯನೇಶ್ವರ ದೇವಾಲಯದಲ್ಲಿರುವ ವಿಘ್ನೇಶ್ವರನ ದೇವಾಲಯದಲ್ಲಿ ಕ್ರಿ.ಶ.1858ರ ಕಾಲದ ಶಾಸನವಿದೆ. ವಿಘ್ನೇಶ್ವರನಿಗೆ ಕಾಳಾಯುಕ್ತಿ ಸಂವತ್ಸರದಲ್ಲಿ ಗೊಲ್ಲರ ತಿರುಮಲೆ ಪೈಯನ ಮಗ ಪುಟ್ಟಣ್ಣನು ನೀಡಿದ ಸೇವೆಯ ವಿವರಗಳಿವೆ"[33] ದೇವರಿಗೆ ವಿವಿಧ ಸೇವೆಗಳನ್ನು ನಡೆಸುತ್ತಿದ್ದರೆಂದು ಇದರಿಂದ ತಿಳಿದು ಬರುತ್ತದೆ.

ಮುಮ್ಮಡಿಯವರ ಮಂತ್ರಿಯಾದ ಬಕ್ಷಿನರಸಪ್ಪನವರು ಪುರಭವನದ ಹಿಂಭಾಗದಲ್ಲಿ ನಿರ್ಮಿಸಿರುವ ಸುಬ್ರಹ್ಮಣ್ಯೇಶ್ವರ ದೇವಾಲಯದ ಗೋಡೆಗೆ ಸೇರಿಸಿರುವ ಕ್ರಿ.ಶ.1859ರ ಶಾಸನದಲ್ಲಿ ಬಕ್ಷಿನರಸಪ್ಪನವರು ಕಲ್ಯಾಣಿಯನ್ನದೆ ಆದಿತ್ಯ, ಅಂಬಿಕಾ, ವಿಷ್ಣು, ಗಣನಾಥ, ಮಹೇಶ್ವರ, ದಕ್ಷಿಣಾಮೂರ್ತಿ, ಚಂಡಿಕೇಶ್ವರ ಮುಂತಾದ ವಿಗ್ರಹಗಳನ್ನು ಸ್ಥಾಪಿಸಿ ದತ್ತಿ ಬಿಟ್ಟಿರುವ ವಿವರಗಳು ದಾಖಲಾಗಿವೆ"[34]

ಮುಮ್ಮಡಿ ಕೃಷ್ಣರಾಜ ಒಡೆಯರು ಜನಪದ ಅಧಿದೇವತೆಯಾದ ಚಾಮುಂಡೇಶ್ವರಿಗೆ ಬೆಳ್ಳಿಯ ಉತ್ಸವಮೂರ್ತಿ, ಬಾಗಿಲುವಾಡ, ಬಂಗಾರದ ನಕ್ಷತ್ರಮಾಲೆ, ಬೆಳ್ಳಿಬಟ್ಟಲು, ಬೆಳ್ಳಿತಟ್ಟೆ, ಅಡ್ಡಣಿಗೆ ಮತ್ತು ಚಿನ್ನದ ವಸ್ತುಗಳನ್ನು ಮಾಡಿಸಿ ಧಾರೆಯೆರೆದು ಕೊಟ್ಟಿರುವ ವಿವರಗಳಿವೆ"[35] ದೇವರ ಅಲಂಕಾರಕ್ಕೆ ಮತ್ತು ದೇವರ ಪೂಜೆ–ಪುನಸ್ಕಾರಗಳಿಗೆ ಕೆಲವೊಂದು ಬೆಳ್ಳಿಯ ಮತ್ತು ಚಿನ್ನದ ಪೂಜಾ ಪರಿಕರಗಳನ್ನು ಕೊಡುಗೆಯಾಗಿ ನೀಡಿರುವುದು ತಿಳಿಯುತ್ತದೆ.

ಸರ್ವವ್ಯಾಪಿಯಾದ ಜಾನಪದ ಶಾಸನಗಳಲ್ಲಿಯೂ ವ್ಯಕ್ತಗೊಂಡಿರುವುದನ್ನು ಕಾಣಬಹುದು. ಸ್ವತಃ ಜಾನಪದವೇ ಅಲಿಖಿತ ದಾಖಲಾತಿಯಾಗಿದ್ದರೂ, ಆ ಅಲಿಖಿತ ದಾಖಲಾತಿಯನ್ನೇ ದಾಖಲಿಸಿದ ಶಾಸನಗಳಲ್ಲಿನ ಜಾನಪದ ಗಮನ ಸೆಳೆಯುತ್ತದೆ. ಶಾಸನಗಳು ಪ್ರಧಾನವಾಗಿ ಇತಿಹಾಸದ ಪುನರಚನೆಯ ಆಕರಗಳು. ನಮ್ಮ ಹಿರಿಯರು ಅನುಸರಿಸಿದ ಧ್ಯೇಯ ಧೋರಣೆಗಳನ್ನು, ಬಾಳಿ ಬದುಕಿದ ರೀತಿ ನೀತಿಗಳನ್ನು, ನಡೆಸಿದ ಯುದ್ಧ ಹೋರಾಟಗಳನ್ನು, ಕಟ್ಟಿಸಿದ ಕೆರೆ, ದೇವಾಲಯಗಳನ್ನು, ನೀಡಿದ ದಾನ ಧರ್ಮಗಳನ್ನು ಒಟ್ಟಾರೆ ಹಿಂದಿನ ಜನಜೀವನ ಮತ್ತು ಸಂಸ್ಕೃತಿಯನ್ನು ತಿಳಿದುಕೊಳ್ಳಲು ಇರುವ 'ಲಿಖಿತ' ಸಾಧನಗಳು. ದೇವತಾಸ್ತುತಿ, ರಾಜವಂಶಾವಳಿ, ಪೂರ್ವಿಕರ ಮತ್ತು ಆಳರಸರ ಸಾಹಸ ವರ್ಣನೆಗಳು ಮತ್ತು ಬಿರುದು ಬಾವಲಿಗಳು, ಅಧಿಕಾರಿಗಳ ಬಗೆಗಿನ ಪ್ರಶಂಸೆಗಳು, ದಾನ ವಿವರಗಳು, ದಾನದಿಂದ ಉಂಟಾಗುವ ಪಾಪ ಪರಿಹಾರ ಇತ್ಯಾದಿಗಳು. ಹೀಗಾಗಿ ಮಧ್ಯಕಾಲಿನ ಶಾಸನಗಳು ಜನಜೀವನದ ಕನ್ನಡಿಗಳಂತಾದವು. ತತ್ಕಾಲೀನ ಆಚಾರ ವಿಚಾರಗಳೂ ನಂಬುಗೆ ಭಾವನೆಗೂ ಆಂಶಿಕವಾಗಿ ಶಾಸನ ಪಾಠಗಳಲ್ಲಿ ಬೆರೆತುಕೊಂಡವು. ಆದರೆ ಶಾಸನ ಸಾಗರದಿಂದ ಜಾನಪದ ಮುತ್ತುಗಳನ್ನು

ಒಂದೊಂದಾಗಿ ಹೆಕ್ಕಿ ತೆಗೆಯಲು ತುಂಬ ಕಾಲಾವಕಾಶ, ಬಹಳ ಸಹನೆ ಹಾಗೂ ಶ್ರದ್ಧಾನಿರತ ಶ್ರಮ ಅತ್ಯವಶ್ಯಕವಾಗಿದೆ.

## 2.5 ನಾಣ್ಯಗಳು

ನಾಣ್ಯಗಳು ಮೈಸೂರು ನಗರದ ದೇವರು ಮತ್ತು ದೇವಾಲಯಗಳ ಪ್ರಾಚೀನತೆಯ ಬಗ್ಗೆ ಹಲವಾರು ಮಾಹಿತಿಯನ್ನು ಒದಗಿಸುವ ಪ್ರಮುಖ ಸಾಧನಗಳಾಗಿವೆ. ಮೈಸೂರು ಅರಸರ ಕಾಲದಲ್ಲಿ ನಾಣ್ಯಗಳ ಚಲಾವಣೆ ಬಹಳ ಪ್ರಗತಿಯನ್ನು ಕಂಡಿತ್ತು. ಚಿನ್ನ ಮತ್ತು ತಾಮ್ರ ವಿಶೇಷವಾಗಿ ಬೆಳ್ಳಿಯನ್ನು ಬಳಸಿದ್ದಾರೆ. ಇದನ್ನು ಒತ್ತುಮುದ್ರೆ ನಾಣ್ಯಗಳೆಂದು ಕರೆಯುತ್ತಾರೆ. ಮೈಸೂರು ಒಡೆಯರ ನಾಣ್ಯಗಳಲ್ಲಿ ವಿಶೇಷವಾಗಿ ದೇವ–ದೇವತೆಗಳ ಚಿತ್ರಗಳು ಮುಮ್ಮುಖದಲ್ಲಿಯೂ, ರಾಜರ ಹೆಸರಿನ ವಿವಿಧ ಲಿಪಿಗಳು ಹಿಮ್ಮುಖದಲ್ಲಿಯೂ ಕಾಣಬರುತ್ತವೆ. ಈ ನಾಣ್ಯಗಳ ಮೇಲೆ ನಾಗರೀ, ಕನ್ನಡ, ಪರ್ಷಿಯನ್ ಹಾಗೂ ರೋಮನ್ ಲಿಪಿಯ ಬರಹಗಳನ್ನು ಕಾಣುತ್ತೇವೆ. ಈ ನಾಲ್ಕು ಲಿಪಿಗಳಿರುವ ಕೆಲವು ನಾಣ್ಯಗಳು ವಿಶಿಷ್ಟವಾದುವು. ನಾಣ್ಯಗಳ ಇತಿಹಾಸದಲ್ಲಿಯೇ ಇಂತಹ ನಾಣ್ಯಗಳು ಕಾಣಸಿಗುವುದು ಅತಿವಿರಳವಾಗಿವೆ.

ಒಡೆಯರ್‌ರವರು ಶಿವ–ಪಾರ್ವತಿ, ವಿಷ್ಣು–ಲಕ್ಷ್ಮಿ, ಲಕ್ಷ್ಮಿ–ನರಸಿಂಹ, ಚಾಮುಂಡಿ, ಕೃಷ್ಣ ಮುಂತಾದ ದೇವತೆಗಳನ್ನು ತಮ್ಮ ನಾಣ್ಯಗಳಲ್ಲಿ ಅಳವಡಿಸಿದರು. ಇದರಿಂದ ಒಡೆಯರ ಕಾಲಾವಧಿಯಲ್ಲಿ ಹಲವಾರು ಬಗೆಯ ನಾಣ್ಯಗಳನ್ನು ಟಂಕಿಸಲಾಗಿದೆ ಅದರಲ್ಲಿ ದೇವರುಗಳ ಚಿತ್ರವಿರುವ ನಾಣ್ಯಗಳು, ಅಂದು ಮೈಸೂರು ಸಂಸ್ಥಾನದಲ್ಲಿ ಆರಾಧಿಸುತ್ತಿದ್ದ, ಪೂಜಿಸುತ್ತಿದ್ದ ಕುಲದೇವರು ಹಾಗೂ ಇತರೆ ದೇವರುಗಳ ಬಗೆಗೆ ತಿಳಿಸುತ್ತದೆ.

ಕಂಠೀರವ ನರಸರಾಜ ಒಡೆಯರ್ ಅವರು(1638–59) ಶ್ರೀರಂಗಪಟ್ಟಣದಲ್ಲಿ ಟಂಕಶಾಲೆಯನ್ನು ಸ್ಥಾಪಿಸಿ ನಾಣ್ಯಗಳನ್ನು ಟಂಕಿಸಿದರು. ಮುಮ್ಮಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ಪ್ರಾರಂಭದಲ್ಲಿ ದಿವಾನ್ ಪೂರ್ಣಯ್ಯನವರು ಇಕ್ಕೇರಿಯ ವರಹಗಳ ಮಾದರಿಯಲ್ಲಿ ಚಿನ್ನದ ನಾಣ್ಯಗಳನ್ನು ಟಂಕಿಸಿದರು. ಇದು 'ಹೊಸ ಇಕ್ಕೇರಿ ವರಹ' ಎಂದು ಪ್ರಸಿದ್ಧಿಯಾಯಿತು. ಇದರ ಮುಂಭಾಗದಲ್ಲಿ ಕೃಷ್ಣರಾಜರು ಆಡಳಿತಾರೂಢರಾದ ಮೇಲೆ ಪೂರ್ಣಯ್ಯನವರು ಟಂಕಿಸಿದ ನಾಣ್ಯವನ್ನೇ ಸ್ವಲ್ಪ ಬದಲಾಯಿಸಿ ಅಚ್ಚು ಹಾಕಿಸಿದರು. ಆ ನಾಣ್ಯದ ಮುಂಭಾಗದಲ್ಲಿ ಶಿವಪಾರ್ವತಿ ಚಿತ್ರ ಮತ್ತು ಹಿಂಭಾಗದಲ್ಲಿ ನಾಗರೀ ಲಿಪಿಯಲ್ಲಿ 'ಶ್ರೀಕೃಷ್ಣದೇವರಾಯ' ಎಂಬ ಬರಹವಿದೆ.

ಮುಮ್ಮಡಿ ಕೃಷ್ಣರಾಜ ಒಡೆಯರು ಮೈಸೂರಿನಲ್ಲಿ ಟಂಕಶಾಲೆಯನ್ನು ಸ್ಥಾಪಿಸಿ, ಸುಮಾರು 1833ವರೆಗೆ ನಾಣ್ಯಗಳನ್ನು ಇಲ್ಲಿ ಟಂಕಿಸಿದರು. ಅನಂತರ ಟಂಕಶಾಲೆಯನ್ನು ಬೆಂಗಳೂರಿಗೆ ವರ್ಗಾಯಿಸಲಾಯಿತು. 1843ರಿಂದ ಬ್ರಿಟಿಷ್ ನಾಣ್ಯಗಳೇ ಚಲಾವಣೆಗೆ ಬಂದಿದ್ದರಿಂದ ಬೆಂಗಳೂರು ಟಂಕಶಾಲೆಯನ್ನು ಮುಚ್ಚಲಾಯಿತು.

**ಕಂಠೀರವ ನರಸರಾಜ ಒಡೆಯರ ಕಾಲದ ನಾಣ್ಯಗಳು(1638–59)**

ಈ ದೊರೆಯ ಕಾಲದ ಚಿನ್ನ ಮತ್ತು ತಾಮ್ರದ ನಾಣ್ಯಗಳು ದೊರಕಿವೆ.

**ಚಿನ್ನದ ನಾಣ್ಯಗಳು**

**ಮುಮ್ಮುಖದಲ್ಲಿ:** ಲಕ್ಷ್ಮಿಯೊಡನೆ ಕುಳಿತಿರುವ ನಾಲ್ಕು ಬಾಹುಗಳ ನರಸಿಂಹ, ನರಸಿಂಹನ ಕೈಗಳಲ್ಲಿ ಶಂಕ–ಚಕ್ರಗಳಿವೆ. ಇದನ್ನು 'ಕಂಠೀರವಹಣ' ಎಂದು ಕರೆಯಲಾಗುತ್ತಿತ್ತು.

**ಹಿಮ್ಮುಖ:** ಮೂರು ಸಾಲುಗಳ ನಾಗರೀ ಬರಹ

ಶ್ರೀ ಕಂಠೀ

ರವ ನರ

ಸರಾಜ

**ಮುಮ್ಮುಖ:** ಲಕ್ಷ್ಮೀನರಸಿಂಹ

**ಹಿಮ್ಮುಖ:** ಶ್ರೀ ಕಂಠೀರವ

**ತಾಮ್ರದ ನಾಣ್ಯಗಳು**

ತಾಮ್ರದ ಎಲ್ಲಾ ನಾಣ್ಯಗಳು ವೈವಿಧ್ಯದಿಂದ ಕೂಡಿದ್ದು ಹನ್ನೊಂದು ನಮೂನೆಗಳಲ್ಲಿ ದೊರಕಿವೆ.

**ಮುಮ್ಮುಖ:** ಶಿವಲಿಂಗ, ಬಲಕ್ಕಿರುವ ನವಿಲು, ಮೀನು, ಕುಳಿತಿರುವ ಗಣಪತಿ, ಕಾರ್ತಿಕೇಯ, ನಿಂತಿರುವ ದೇವತೆ ಮತ್ತು ಆನೆಯ ಮೇಲಿನ ಸವಾರ ಚಿತ್ರಗಳಿವೆ.

**ಹಿಮ್ಮುಖ:** ಚುಕ್ಕೆಗಳಿಂದ ವಿನ್ಯಾಸಗೊಳಿಸಲಾದ ವೃತ್ತದಲ್ಲಿ ಎರಡು ಸಾಲುಗಳು 'ಕಂಠೀರವ' ಎನ್ನುವ ಕನ್ನಡಲಿಪಿಯ ಬರಹ (ಎಲ್ಲಾ ನಾಣ್ಯಗಳಲ್ಲಿಯು) ಕಾಣಬರುತ್ತದೆ.

ಈ ಮೇಲಿನ ನಾಣ್ಯಗಳನ್ನು ಗಮನಿಸಿದಾಗ ಶ್ರೀಕಂಠೀರವ ನರಸರಾಜ ಒಡೆಯರು ಲಕ್ಷ್ಮೀ, ನರಸಿಂಹ, ಶಿವ, ಗಣಪತಿ, ಕಾರ್ತಿಕೇಯ ಮುಂತಾದ ದೇವರುಗಳ ಆರಾಧಕರಾಗಿ ಇದ್ದಿರ ಬಹುದಾಗಿ ತಿಳಿದುಬರುತ್ತದೆ.

**ಚಿಕ್ಕದೇವರಾಜ ಒಡೆಯರ್ ಕಾಲದ ನಾಣ್ಯಗಳು (1673–1704)**

ಚಿಕ್ಕದೇವರಾಜ ಒಡೆಯರ ಕಾಲದ ಚಿನ್ನದ ನಾಣ್ಯಗಳು ಮಾತ್ರ ದೊರಕಿದ್ದು, ವರಹ ಮತ್ತು ಹಣ ಎಂಬುದಾಗಿ ಕರೆಯಲಾಗಿದೆ.

**ವರಹ**

**ಮುಮ್ಮುಖ:** ಅಲಂಕೃತ ಕಮಾನಿನ ಮಂಟಪದೊಳಗೆ ನಾಟ್ಯಮಾಡುತ್ತಿರುವ ಬಾಲಕೃಷ್ಣ: ಕೈಯಲ್ಲಿ ಬೆಣ್ಣೆಯ ಮುದ್ದೆ ಇದೆ, ಕೆಳಭಾಗದಲ್ಲಿ ಸರ್ಪದ ಚಿತ್ರ ಕಂಡು ಬಂದಿದೆ.
**ಹಿಮ್ಮುಖ:** ಮೂರು ಸಾಲುಗಳ ನಾಗರೀ ಬರಹ: ಸಾಲುಗಳ ಮಧ್ಯೆ ಅಡ್ಡಗೆರೆಗಳಿವೆ

ಶ್ರೀ ಚಿ

ಕ ದೇವ

ರಾಜ ಎಂಬ ಬರಹವಿದೆ.

**ಅರ್ಧವರಹ**

**ಮುಮ್ಮುಖ:** ಮೇಲಿನ ನಾಣ್ಯದಲ್ಲಿರುವಂತೆ ಬಾಲಕೃಷ್ಣ

**ಹಿಮ್ಮುಖ:** ಶ್ರೀ ಚಿಕ

ದೇವರಾ

ಜ

"ಶಾಸನಗಳಲ್ಲಿ ಈ ನಮೂನೆಯ ನಾಣ್ಯಗಳನ್ನು ತಾಂಡವ ಕೃಷ್ಣಮೂರ್ತಿ ವರಹಗಳೆಂದು ಹೆಸರಿಸಲಾಗಿದೆ. ಈ ದೊರೆಯು ಮಧುರೆಯ ನಾಯಕರನ್ನು ಸೋಲಿಸಿದುದರ ಜ್ಞಾಪಕಾರ್ಥವಾಗಿ ಈ ನಾಣ್ಯಗಳನ್ನು ಟಂಕಿಸಿದರೆಂದು ಭಾವಿಸಲಾಗಿದೆ"[36] ಜಯದ ಸಂಕೇತವಾಗಿಯು ನಾಣ್ಯಗಳನ್ನು ಟಂಕಿಸಿ ತಮ್ಮ ಘನತೆಯನ್ನು ಹೆಚ್ಚಿಸಿಕೊಂಡಿರುವುದಾಗಿದೆ.

**ಹಣ**

**ಮುಮ್ಮುಖ:** ನಿಂತಿರುವ ಚಾಮುಂಡಿ

**ಹಿಮ್ಮುಖ:** ಚಿಕ

ದೇವ

ರಾಜ

ಈ ಮೇಲಿನ ಮೂರು ಬಗೆಯ ನಾಣ್ಯಗಳ ಮುಮ್ಮುಖದಲ್ಲಿ ದೇವರ ಚಿತ್ರಗಳಿರುವುದರಿಂದ ಕೃಷ್ಣ ಮತ್ತು ಸರ್ಪದ ಚಿತ್ರದಿಂದ ಕೃಷ್ಣನ ಆರಾಧಕರಾಗಿ ಅಥವಾ ಕಾಳಿಂಗ ಮರ್ದನ ಮಾಡಿದ ಶ್ರೀಕೃಷ್ಣ ಸರ್ಪರಕ್ಷಕನಾಗಿದ್ದರ ಕುರುಹು ಇದಾಗಿರಬಹುದು. ಸರ್ಪವನ್ನು ಇಂದಿನ ನಾಗರಕಲ್ಲಗಳ ಪೂಜೆಯ ಮಾದರಿಯಲ್ಲಿ ಅಂದು ಕೂಡ ಪೂಜಿಸುತ್ತಿದ್ದಿರ ಬಹುದಾಗಿದೆ. 'ಹಣ' ಎಂಬ ನಾಣ್ಯದಲ್ಲಿ ನಿಂತಿರುವ ಚಾಮುಂಡಿಯ ಚಿತ್ರವು ಒಡೆಯರ ಕುಲದೇವತೆ ಚಾಮುಂಡಿಯನ್ನು ಆರಾಧಿಸುತ್ತಿರುವುದನ್ನು ಪ್ರತಿನಿಧಿಸುತ್ತದೆ.

**ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ನಾಣ್ಯಗಳು(1799–1868)**

ಇವರ ಕಾಲದ ನಾಣ್ಯಗಳು ಚಿನ್ನ, ಬೆಳ್ಳಿ ಮತ್ತು ತಾಮ್ರಗಳಲ್ಲಿ ದೊರಕಿದ್ದು ವೈವಿಧ್ಯಮಯವಾಗಿ ಕಂಡುಬಂದಿವೆ.

**ವರಹ**

**ಮುಮ್ಮುಖ:** ಕುಳಿತಿರುವ ಶಿವ, ಪಾರ್ವತಿ, ಶಿವನ ಬಲಗೈಯಲ್ಲಿ ತ್ರಿಶೂಲ ಹಾಗೂ ಎಡಗೈಯಲ್ಲಿ ಡಮರುಗ ಇರುವ ಚಿತ್ರವಿದೆ.

**ಹಿಮ್ಮುಖ:** ಶ್ರೀ ಎಂಬ ಕನ್ನಡದ ಅಕ್ಷರವಿದೆ.

**ಚಿನ್ನದ ವರಹ**

**ಮುಮ್ಮುಖ:** ಕುಳಿತಿರುವ ಶಿವ–ಪಾರ್ವತಿ, ಕೈಗಳಲ್ಲಿ ತ್ರಿಶೂಲ ಮತ್ತು ಡಮರುಗ, ಅಕ್ಕಪಕ್ಕದಲ್ಲಿ ಸೂರ್ಯ–ಚಂದ್ರರ ಚಿತ್ರಗಳಿವೆ.

**ಹಿಮ್ಮುಖ:** ಶ್ರೀ

ಕೃಷ್ಣರಾ

ಜಾ ಎಂಬ ಅಕ್ಷರವಿದೆ.

ಈ ರೀತಿಯ ಶಿವ–ಪಾರ್ವತಿಯ ನಮೂನೆಯ ನಾಣ್ಯಗಳು ಅಂದು ಶಿವ–ಪಾರ್ವತಿಯನ್ನು ಪೂಜಿಸುತ್ತಿದ್ದರೆನ್ನಲು ಇರುವ ಸಾಕ್ಷ್ಯಾಧಾರಗಳಲ್ಲಿ ವಿಶೇಷವೆನಿಸಿದೆ.

**ಬೆಳ್ಳಿಯ ನಾಣ್ಯ**

**ಮುಮ್ಮುಖ:** ಚುಕ್ಕೆಗಳಿಂದ ವಿನ್ಯಾಸಗೊಳಿಸಿದ ವೃತ್ತದೊಳಗೆ ಕೈಯಲ್ಲಿ ಬೆಣ್ಣೆಮುದ್ದೆ ಹಿಡಿದಿರುವ ಬಾಲಕೃಷ್ಣನ ಚಿತ್ರವಿದೆ.

**ಹಿಮ್ಮುಖ:** ಜುಲುಸ್

ಕಿಷನ್‌ರಾಜವಡಿಯರ್

ಜರ್ಬ್ ಇ ಮಹಿಸೂರ್ ಎಂಬ ಬರಹವಿದೆ.

**ಕಾಸು**

**ಮುಮ್ಮುಖ:** ಅಲಂಕೃತ ಆನೆ: ಅದರ ಮೇಲೆ ಶ್ರೀ ಎನ್ನುವ ಕನ್ನಡ ಅಕ್ಷರ, ಅಕ್ಕಪಕ್ಕದಲ್ಲಿ ಸೂರ್ಯ–ಚಂದ್ರರು

**ಹಿಮ್ಮುಖ:** ಚುಕ್ಕೆಗಳ ವೃತ್ತದೊಳಗೆ ಮೂರು ಸಾಲುಗಳ ಬರಹ

ಮಯಿಲಿ ಕಾ

ಸು ನಲ್ವತ್ತು

XL CASH

ಈ ನಾಣ್ಯವನ್ನು ಗಮನಿಸಿದರೆ ಮುಮ್ಮುಖದಲ್ಲಿ ಅಲಂಕೃತ ಆನೆ ಅದರ ಮೇಲೆ ಶ್ರೀ ಎನ್ನುವ ಕನ್ನಡ ಅಕ್ಷರ ಇರುವುದು ದಸರೆ ಹಬ್ಬದ ಆನೆಯ ಮೇಲೆ ಶ್ರೀಗಳು ಕುಳಿತು ಮೆರವಣಿಗೆ ಮಾಡುತ್ತಿದ್ದ ಸನ್ನಿವೇಶ ಇದಾಗಿರಬಹುದಾಗಿದೆ.

**ಮುಮ್ಮುಖ:** ಚುಕ್ಕೆಗಳ ವೃತ್ತದೊಳಗೆ ನಿಂತಿರುವ ಸಿಂಹ: ಅದರ ಮೇಲೆ ಚಾಮುಂಡಿ ಎನ್ನುವ ಕನ್ನಡ ಬರಹ: ಅದರ ಮೇಲೆ ಶ್ರೀ ಎನ್ನುವ ಕನ್ನಡ ಅಕ್ಷರ: ಅಕ್ಕಪಕ್ಕದಲ್ಲಿ ಸೂರ್ಯ–ಚಂದ್ರರು.

ಈ ನಾಣ್ಯವನ್ನು ನೋಡಿದಾಗ ಹಿಂದಿನದರಂತೆಯೇ ದಸರಾ ಮೆರವಣಿಗೆಯಲ್ಲಿ ಸಿಂಹಾವರೋಹಣಳಾದ ಒಡೆಯರ ಕುಲದೇವತೆ ಚಾಮುಂಡಿಯನ್ನು ಆನೆಯ ಮೇಲೆ ಮೆರವಣಿಗೆ ಮಾಡುತ್ತಿದ್ದು, ಜೊತೆಯಲ್ಲಿ ಶ್ರೀ ಎಂಬ ಅಕ್ಷರವಿರುವುದರಿಂದ ಅದರ ಜೊತೆಯಲ್ಲಿಯೇ ರಾಜರು ಕುಳಿತು ಕೊಳ್ಳುತ್ತಿದ್ದಿರಬೇಕೆಂದು ಉಹಿಸಬಹುದಾಗಿದೆ.

**ಮುಮ್ಮುಖ**: ನಿಂತಿರುವ ಸಿಂಹ: ಚಾಮುಂಡಿ ಎಂಬ ಕನ್ನಡ ಬರಹ: ಸೂರ್ಯ–ಚಂದ್ರರು: ಕೆಳಭಾಗದಲ್ಲಿ 1834

ಈ ನಾಣ್ಯವನ್ನು ಹಿಂದಿನಂತೆಯೇ ಊಹಿಸಿ ಮುಂದುವರೆದಂತೆ 1834 ಎಂಬ ಬರಹವಿರುವುದರಿಂದ ಇದನ್ನು 1834ರಲ್ಲಿ ಟಂಕಿಸಲಾಗಿದೆ ಎಂದು ತಿಳಿದುಬರುತ್ತದೆ.

ಒಟ್ಟಾರೆಯಾಗಿ ಮೈಸೂರು ಅರಸರ ನಾಣ್ಯಗಳು ಕ್ರಿ.ಶ.1638ರಿಂದ 1834ರವರೆಗೆ ಚಲಾವಣೆಯಲ್ಲಿದ್ದು ಪ್ರಾಚೀನ ನಾಣ್ಯಗಳ ಪರಂಪರೆಗೆ ಕೊನೆಯ ಕೊಂಡಿಯಂತೆ ಪಳೆಯುಳಿಕೆಗಳಾಗಿ ತಮ್ಮ ಮನೆದೇವತೆ ಚಾಮುಂಡಿಯೊಂದಿಗೆ ಶಿವ–ಪಾರ್ವತಿ, ಲಕ್ಷ್ಮಿ–ನರಸಿಂಹ, ಗಣೇಶ, ವಿಷ್ಣು–ಲಕ್ಷ್ಮಿ, ಕೃಷ್ಣ, ಸಿಂಹ, ಆನೆ, ಮೀನು, ಕಾರ್ತಿಕೇಯ, ನವಿಲು, ವೃಷಭ ಮುಂತಾದ ದೇವರು, ಪ್ರಾಣಿ, ಪಕ್ಷಿಗಳನ್ನು ದೇವರೆಂದು, ದೇವರ ವಾಹನಗಳೆಂದು ಆರಾಧಿಸಿರುವುದು ಹಾಗೂ ಕನ್ನಡ ಲಿಪಿಯನ್ನು ಗೌರವಿಸಿರುವುದು ಈ ನಾಣ್ಯಗಳ ಅಧ್ಯಯನದಿಂದ ತಿಳಿದುಬರುತ್ತದೆ.

## 2.6 ಪ್ರಾಚೀನ ಗ್ರಂಥಗಳು

ಮೈಸೂರು ನಗರದ ಇತಿಹಾಸದ ರಚನೆಯ ಆರಂಭಕಾಲದ ಸಂಗತಿಗಳನ್ನು ಹಾಗೂ ದೇವಾಲಯಗಳ ಬಗ್ಗೆ ತಿಳಿಯಲು 17ನೇ ಶತಮಾನದ ಕೆಲವು ಸಾಹಿತ್ಯ ಗ್ರಂಥಗಳಾಗಿರುವ 'ಕಂಠೀರವ ನರಸರಾಜ ವಿಜಯ'(1648), 'ಚಿಕ್ಕದೇವರಾಯ ವಂಶಾವಳಿ'(1678–80), 'ಮೈಸೂರು ದೊರೆಗಳ ವಂಶಾವಳಿ'(ಸು.1800), 'ಮೈಸೂರು ರಾಜರ ಚರಿತ್ರೆ'(ಸು.1800), ಬಿ.ರಾಮಕೃಷ್ಣರಾವ್ ಅವರು ಸಂಪಾದಿಸಿ ಎರಡು ಭಾಗಗಳಲ್ಲಿ ಪ್ರಕಟಿಸಿರುವ 'ಶ್ರೀಮನ್ಮಹಾರಾಜರವರ ವಂಶಾವಳಿ'ಯಲ್ಲಿಯೂ (1916,1922) ಗಮನಿಸಬಹುದಾಗಿದೆ.[37]

"ದೇವಚಂದ್ರನ ರಾಜಾವಳೀ ಕಥಾಸಾರದಲ್ಲಿ ದೇವರಾಜರೆಂಬುವರು ಮಹಿಸೂರಿಗೆ ಸಲ್ಲುವ ಕೆಲವು ಗ್ರಾಮಗಳನ್ನು ಸ್ವಾಧೀನ ಪಡಿಸಿಕೊಂಡು, ಬೆಟ್ಟದಲ್ಲಿ ಆ ಮೊದಲು ತಮ್ಮ ವಂಶದ ಬಲ್ಲಾಳರಿಗೆ(ಹೊಯ್ಸಳ ರಾಜರಿಗೆ) ಪ್ರಸನ್ನಳಾದ ಪದ್ಮಾವತಿ ದೇವಿಯನ್ನು, ವಾಸಂತಿಕಾ

ದೇವಿಯೆಂದು ಪೂಜೆಗೊಳ್ಳುತ್ತಿದ್ದವಳನ್ನು, ಚಾಮುಂಡೇಶ್ವರಿ ಎಂದು ಹೆಸರುಕೊಟ್ಟು ಗುಡಿಗೋಪುರ ಮಾಡಿಸಿದನೆಂದು ಹೇಳಿದ್ದಾರೆ."[38] ಚಾಮುಂಡಿಬೆಟ್ಟ ಮೈಸೂರು ನಗರದ ವೈಭವದ ನೋಟಕ್ಕೆ, ಸುಂದರ ದೃಶ್ಯಕ್ಕೆ ಕಾರಣವಾಗಿದೆ. ಅದರ ಕಲ್ಲುಬಂಡೆಗಳು ನಗರದ ಸುತ್ತಮುತ್ತಲಿನ ಜನತೆಗೆ ಪವಿತ್ರವೆನಿಸಿದೆ. ಈ ಕ್ಷೇತ್ರವನ್ನು ಸ್ಕಂದಪುರಾಣವು 'ತ್ರಿಮುಕುಟ ಕ್ಷೇತ್ರ'ವೆಂದು ಕರೆದಿದೆ. ಎಂಟು ಪವಿತ್ರ ಬೆಟ್ಟಗಳಿಂದ ಕೂಡಿದ್ದು ಅವುಗಳಲ್ಲಿ ಚಾಮುಂಡಿಬೆಟ್ಟ ಒಂದೆಂಬ ವರ್ಣನೆ ಇದೆ. ಮಹಾಬಲಗಿರಿ ಮಹಾತ್ಮೆಯು (ಚಾಮುಂಡಿಬೆಟ್ಟದ ಮಹಾತ್ಮೆ–1913) ಸಾಕಷ್ಟು ವಿವರಗಳನ್ನು ನೀಡುತ್ತದೆ.

ಮೊದಲಿಗೆ ಮೈಸೂರು ಸಂಸ್ಥಾನದ ಬಗ್ಗೆ 1879ರಲ್ಲಿ ಬಿ.ಎಲ್.ರೈಸ್ ಅವರ ಸಂಪಾದಕತ್ವದಲ್ಲಿ 'ಮೈಸೂರ್ ಅಂಡ್ ಕೂರ್ಗ್ ಗ್ಯಾಸೆಟಿಯರ್' ಗ್ರಂಥವನ್ನು ಎರಡು ಸಂಪುಟಗಳಲ್ಲಿ ಸಂಪಾದಿಸಿ ಪ್ರಕಟಿಸಿದ್ದಾರೆ. ಆ ಕಾಲಘಟ್ಟದಲ್ಲಿ ಮೈಸೂರಿನ ಬಗೆಗೆ ಹಲವಾರು ಮಾಹಿತಿಗಳನ್ನು ಇದು ಒದಗಿಸುತ್ತದೆ.

ಸಿ ಹಯವದನರಾವ್ ಅವರು 'ಮೈಸೂರ್ ಗ್ಯಾಸೆಟಿಯರ್' ಅನ್ನು ಐದು ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. ಈ ಸಂದರ್ಭದಲ್ಲಿ ಮೈಸೂರು ಯಾವ ರೀತಿ ಇತ್ತು ಎಂಬುದರ ಸ್ಪಷ್ಟ ಚಿತ್ರಣವನ್ನು ಇದು ನೀಡುತ್ತದೆ. ಈ ನಗರ ಚಾಮುಂಡಿಬೆಟ್ಟದ ಉತ್ತರಕ್ಕಿದ್ದು, ಒಂಬತ್ತುವರೆ ಚದರ ಮೈಲಿಗಳು ಸುತ್ತುವರೆದಿತ್ತು ಎಂಬ ಮಾಹಿತಿ ನೀಡುತ್ತದೆ. ಆದುದರಿಂದ ಈ ಗ್ರಂಥವು ಮೈಸೂರಿನ ಪೂರ್ವ ಚರಿತ್ರೆಯಷ್ಟೇ ಅಲ್ಲದೆ ಕಳೆದ ಶತಮಾನದ ಪೂರ್ವಾರ್ಧದಲ್ಲಿದ್ದ ಮೈಸೂರು ನಗರದ ಚಿತ್ರಣವನ್ನು ಒಳಗೊಂಡಿದೆ.

ಬಿ.ಎಸ್.ಸಣ್ಣಯ್ಯ ಅವರು ಸಂಪಾದಿಸಿ ಪ್ರಕಟಿಸಿರುವ ದೇವಚಂದ್ರನ 'ರಾಜಾವಳಿ ಕಥಾಸಾರ'ದಲ್ಲಿ ಮೈಸೂರಿನ ಒಡೆಯರ ವಂಶವನ್ನು ಕುರಿತು ಹಾಗೂ ಚಾಮುಂಡೇಶ್ವರಿಯನ್ನು ವಿಭಿನ್ನ ನಾಮಗಳಿಂದ(ವಾಸಂತಿಕಾ ದೇವಿ)ಕರೆದಿರುವ, ಹೇಳಿಕೆ ನೀಡಿರುವ ವಿವರ ಕಾಣಸಿಗುತ್ತದೆ.

ಡಾ.ಕುಲಕರ್ಣಿ ಬಿ.ಎಸ್ ಸಂಪಾದಕತ್ವದ ಕೈಪಿಯತ್ತು ಮತ್ತು ಮೈಸೂರು ರಾಜರ ಚರಿತ್ರೆ, ವಚನ ಕಾವ್ಯವು 1985ರಲ್ಲಿ ಪ್ರಕಟಿಸಿದ್ದು ಮೈಸೂರು ನಗರ, ರಾಜರುಗಳ ಚರಿತ್ರೆ ಹಾಗೂ ದೇವಾಲಯಗಳ ಬಗೆಗೆ ಹಲವಾರು ಮಾಹಿತಿಯನ್ನು ನೀಡುವ ಗ್ರಂಥವಾಗಿದೆ.

1968ರಲ್ಲಿ ಡಾ.ತಿಪ್ಪೇರುದ್ರಸ್ವಾಮಿಯವರ ಸಂಪಾದಕತ್ವದಲ್ಲಿ 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ' ಎಂಬ ಗ್ರಂಥದಲ್ಲಿ ಮೈಸೂರು ನಗರದ ಕೆಲವೊಂದು ಶಾಸನಗಳ ಬಗೆಗೆ ಮಾಹಿತಿಯಿದ್ದು, ಆ

ಶಾಸನಗಳು ಮೈಸೂರು ನಗರದ ಕೆಲವೊಂದು ದೇವಾಲಯಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸುವ ಕೃತಿಯಾಗಿದೆ.

ಈ ಮೇಲಿನ ಗ್ರಂಥಗಳಲ್ಲದೆ, ಚಂದ್ರಶೇಖರ್ ಅವರ ಸಾಮಾಜಿಕ ಹಿನ್ನೆಲೆಯಲ್ಲಿ 'ಮೈಸೂರು ರಾಜಕೀಯ'(1983), ತಿಪ್ಪೇಸ್ವಾಮಿ.ಜಿ.ಆರ್ ಅವರ 'ಮೈಸೂರು ಚಾಮುಂಡಿ' ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಪ್ರಸನ್ನಕುಮಾರ್ ಎಂ ಅವರ 'ಮೈಸೂರಿನ ಇತಿಹಾಸದಲ್ಲಿ ದಾನ'(2001), ಮಂಜಪ್ಪಶೆಟ್ಟಿ ಮಸಗಲಿ ಅವರ 'ಮೈಸೂರು ಅರಮನೆ'(2003), ರಾಜಶೇಖರ ಪಿ.ಕೆ ಅವರ 'ಚಾಮುಂಡಿ ಸಿರಿ ಚಾಮುಂಡಿ'(1994), ಲಕ್ಷ್ಮೀನಾರಾಯಣರಾವ್ ಎನ್, ಪಂಚಮುಖಿ ಆರ್.ಎಸ್ ಅವರ 'ಅರಸು ಮನೆತನಗಳು'(1946), ಲಿಂಗಯ್ಯ ಎಂ.ಕೆ. ಅವರ 'ಮೈಸೂರು ಒಂದು ಅಧ್ಯಯನ'(1982), ಡಾ.ಚಿಕ್ಕಮಾದು.ಎನ್.ಎನ್ ಅವರ 'ಮೈಸೂರು ತಾಲೂಕು ಗ್ಯಾಸೆಟಿಯರ್'(2010), ನಾಗರಾಜರಾವ್ ಎಚ್.ಎಂ ಅವರ 'ಶಿವಶೋಧ'(2008), ಡಾ.ಡಿ.ಕೆ ರಾಜೇಂದ್ರ ಮತ್ತು ಇತರರು ಸಂಪಾದಿಸಿರುವ 'ಮೈಸೂರು ದರ್ಶನ' ಎರಡು ಸಂಪುಟಗಳು ಮೈಸೂರು ನಗರದ ದೇವಾಲಯಗಳ ಪ್ರಾಚೀನತೆಯನ್ನು ತಿಳಿಸಲು ಸಹಾಯಕವಾಗಿರುವ ಪ್ರಮುಖ ಆಕರ ಗ್ರಂಥಗಳಾಗಿವೆ.

ಒಟ್ಟಾರೆಯಾಗಿ ಮಾನವನ ಇತಿಹಾಸವು ಸಂಸ್ಕೃತಿಯೊಂದಿಗೆ ಮಿಳಿತಗೊಂಡು ಪರಂಪರೆಯಿಂದ ಪರಂಪರೆಗೆ ಸಾಗಿ ಬಂದಿವೆ. ಧಾರ್ಮಿಕ ನೆಲೆಯಲ್ಲಿ ದೇವಾಲಯಗಳು ಉಗಮವಾಗಿ ಸಮಾಜದಲ್ಲಿನ ಧಾರ್ಮಿಕ ಕಾರ್ಯಗಳು ನಡೆಯಲು ಸಹಕಾರಿಯಾಗಿದ್ದು, ಹಾಗೂ ಅವುಗಳ ಪ್ರಸ್ತುತತೆ ಮತ್ತು ಪ್ರಾಚೀನತೆಯನ್ನು ಅರಿಯಲು ಶಾಸನಗಳು, ನಾಣ್ಯಗಳು, ಪ್ರಾಚೀನ ಗ್ರಂಥಗಳು ಪ್ರಮುಖ ಆಕರಗಳಾಗಿವೆ. ದೇವಾಲಯಗಳ ಉಗಮ, ವಿಕಾಸ, ಬೆಳವಣಿಗೆ, ಇತಿಹಾಸ ಮತ್ತು ಮೈಸೂರು ನಗರದ ದೇವಾಲಯಗಳ ಪ್ರಾಚೀನತೆಯನ್ನು ತಿಳಿಯಲು ಸಹಾಯಕವಾಗಿವೆ.

## ಕೊನೆ ಟಿಪ್ಪಣಿಗಳು

1. ಡಾ.ಎನ್.ಎನ್.ಚಿಕ್ಕಮಾದು, ಮೈಸೂರು ತಾಲೂಕು ಗ್ಯಾಸೆಟಿಯರ್, ಪು.ಸಂ–11.
2. ಅದೇ, ಪು.ಸಂ–65.
3. ಮಹದೇವ.ಸಿ(ಲೇ), ಮೈಸೂರು ದರ್ಶನ, ಸಂಪುಟ–1, ಪು.ಸಂ–67.
4. ಎಸ್.ಶ್ರೀಕಂಠಶಾಸ್ತ್ರಿ, ಸಂಶೋಧನ ಲೇಖನಗಳು, ಪು.ಸಂ–455.
5. ಡಾ.ಚನ್ನಬಸವಯ್ಯ ಹಿರೇಮಠ, ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು, ಪು.ಸಂ–277.
6. ಬಾ.ರಾ.ಗೋಪಾಲ್(ಸಂ), ಎ.ಕ, ಸಂಪುಟ–5, ಮೈಸೂರು–223, ಕುಕ್ಕರಹಳ್ಳಿ, ಪು.ಸಂ–321.
7. ಅದೇ, ಮೈಸೂರು–136, ಚಾಮುಂಡಿಬೆಟ್ಟ, ಪು.ಸಂ–276.
8. ಅದೇ, ಮೈಸೂರು–213, ಮಾಣಿಕ್ಯಪುರ, ಪು.ಸಂ–314.
9. ಅದೇ, ಮೈಸೂರು–17, ಪು.ಸಂ–157.
10. ಅದೇ, ಮೈಸೂರು–18, ಪು.ಸಂ–158.
11. ಅದೇ, ಮೈಸೂರು–223, ಕುಕ್ಕರಹಳ್ಳಿ, ಪು.ಸಂ–321.
12. ಅದೇ, ಮೈಸೂರು–1, ಪು.ಸಂ–144.
13. ಅದೇ, ಮೈಸೂರು–2, ಪು.ಸಂ–145.
14. ಅದೇ, ಮೈಸೂರು–3, ಪು.ಸಂ–146.
15. ಅದೇ, ಮೈಸೂರು–145, ಚಾಮುಂಡಿಬೆಟ್ಟ, ಪು.ಸಂ–279.
16. ಅದೇ, ಮೈಸೂರು–143, ಚಾಮುಂಡಿಬೆಟ್ಟ, ಪು.ಸಂ–279.
17. ಅದೇ, ಮೈಸೂರು–152, ಚಾಮುಂಡಿಬೆಟ್ಟ, ಪು.ಸಂ–283.
18. ಅದೇ, ಮೈಸೂರು–147, ಚಾಮುಂಡಿಬೆಟ್ಟ, ಪು.ಸಂ–280.
19. ಅದೇ, ಮೈಸೂರು–160, ಚಾಮುಂಡಿಬೆಟ್ಟ, ಪು.ಸಂ–290.
20. ಅದೇ, ಮೈಸೂರು–104, ಪು.ಸಂ–239.
21. ಅದೇ, ಮೈಸೂರು–99, ಪು.ಸಂ–221.
22. ಅದೇ, ಮೈಸೂರು–137, ಚಾಮುಂಡಿಬೆಟ್ಟ, ಪು.ಸಂ–277.
23. ಅದೇ, ಮೈಸೂರು–205, ಲಿಂಗಾಂಬುದಿ, ಪು.ಸಂ–309.

24. ಅದೇ, ಮೈಸೂರು–157, ಚಾಮುಂಡಿಬೆಟ್ಟ, ಪು.ಸಂ–285.

25. ಅದೇ, ಮೈಸೂರು–139, ಪು.ಸಂ–277.

26. ಅದೇ, ಮೈಸೂರು–69, ಪು.ಸಂ–192.

27. ಅದೇ, ಮೈಸೂರು–85, ಪು.ಸಂ–197.

28. ಅದೇ, ಮೈಸೂರು–73, ಪು.ಸಂ–193.

29. ಅದೇ, ಮೈಸೂರು–37, ಪು.ಸಂ–181.

30. ಅದೇ, ಮೈಸೂರು–4, ಪು.ಸಂ–147.

31. ಅದೇ, ಮೈಸೂರು–140, ಚಾಮುಂಡಿಬೆಟ್ಟ, ಪು.ಸಂ–275.

32. ಅದೇ, ಮೈಸೂರು–83, ಪು.ಸಂ–197.

33. ಅದೇ, ಮೈಸೂರು–85, ಪು.ಸಂ–198.

34. ಅದೇ, ಮೈಸೂರು–16, ಪು.ಸಂ–157.

35. ಅದೇ, ಮೈಸೂರು–155,156,157, ಚಾಮುಂಡಿಬೆಟ್ಟ, ಪು.ಸಂ–284.

36. ಎ.ವಿ.ನರಸಿಂಹಮೂರ್ತಿ,(ಲೇ), ಮೈಸೂರು ದರ್ಶನ, ಭಾಗ–1, ಪು.ಸಂ–118.

37. ಬಿ.ರಾಮಕೃಷ್ಣರಾವ್, ಶ್ರೀಮನ್ಮಹಾರಾಜರವರ ವಂಶಾವಳಿ, ಭಾಗ–1, ಪು.ಸಂ–1–12.

38. ಟಿ.ವಿ.ವೆಂಕಟಾಚಲ ಶಾಸ್ತ್ರಿ,(ಲೇ), ಮೈಸೂರು ದರ್ಶನ, ಭಾಗ–1, ಪು.ಸಂ–12.

# ಅಧ್ಯಾಯ–3

## ದೇವಾಲಯಗಳ ವರ್ಗೀಕರಣ

ಹಿಂದೂಗಳು ಸೃಷ್ಟಿಸಿದ ದೇವತೆಗಳಲ್ಲಿ ತ್ರಿಮೂತಿಗಳಿಗೆ ವಿಶಿಷ್ಟ ಸ್ಥಾನವಿದೆ. ಬ್ರಹ್ಮ, ವಿಷ್ಣು, ಮಹೇಶ್ವರರನ್ನು ತ್ರಿಮೂರ್ತಿಗಳೆಂದು, ಸೃಷ್ಟಿ, ಸ್ಥಿತಿ, ಲಯಗಳ ಕಾರಣಕರ್ತರೆಂದು ಭಾವಿಸಲಾಗಿದೆ. ಇತರ ದೈವಗಳಲ್ಲೆ ಶ್ರೇಷ್ಠ ದೇವತೆಯೆಂದು ಭಾವಿಸಿದ ಶಿವನನ್ನು ಆರಾಧಿಸುವ ವೈದಿಕರ ಪಂಗಡಕ್ಕೆ ಶೈವರು ಎಂದು, ವಿಷ್ಣುವನ್ನು ಆರಾಧಿಸುವ ಗುಂಪಿಗೆ ವೈಷ್ಣವರು ಎಂದು ಕರೆಯಲಾಗಿದೆ. ಮೈಸೂರಿನಲ್ಲಿ ಬ್ರಹ್ಮನನ್ನು ಆರಾಧಿಸುವುದು ಅಪರೂಪ. ಆದರೆ ಲಿಂಗದ ರೂಪದಲ್ಲಿ ಈತನನ್ನು ಪೂಜಿಸುವ ಪದ್ಧತಿ ಅತ್ಯಂತ ಪ್ರಾಚೀನ ಕಾಲದಲ್ಲಿ ಇತ್ತೆಂದು ಹೇಳಲಾಗಿದೆ. ಬ್ರಹ್ಮ, ವಿಷ್ಣು, ಮತ್ತು ಮಹೇಶ್ವರರನ್ನು ಪೂಜಿಸುವ ಪದ್ಧತಿ ಇತ್ತು ಎಂಬುದಕ್ಕೆ ವಾಜಮಂಗಲದಲ್ಲಿ ಸಿಕ್ಕಿರುವ ತ್ರೈಪುರುಷ ವಿಗ್ರಹ ಇಂಬು ನೀಡುತ್ತದೆ.

**“**ಸಂಪ್ರದಾಯದ ಪ್ರಕಾರ ಆಗಮಗಳ ಕರ್ತೃ ಪರಮಾತ್ಮನಾದ ಶಿವನೆ. ಆಗಮಗಳನ್ನು ತಂತ್ರಗಳೆಂದು ಕರೆದು, ಶಿವನನ್ನು ಆರಾಧ್ಯದೈವವಾಗಿ ಭಾವಿಸುವ ಆಗಮಗಳು ಶೈವಾಗಮಗಳು, ಶಕ್ತಿಯನ್ನು ಆರಾಧ್ಯ ದೈವವಾಗಿ ಆರಾಧಿಸುವ ಆಗಮಗಳು ಶಾಕ್ತಾಗಮಗಳು ಅಥವಾ ತಂತ್ರಗಳು, ವಿಷ್ಣುವನ್ನು ಆರಾಧ್ಯ ದೈವವಾಗಿ ಭಾವಿಸುವ ಆಗಮಗಳು ವೈಷ್ಣವಾಗಮಗಳು. ಹೀಗೆ ಮೂರು ಬಗೆಗಳನ್ನು ವಿದ್ವಾಂಸರು ಗುರುತಿಸಿದ್ದಾರೆ**”**[1]

ಮೈಸೂರು ನಗರದಲ್ಲಿನ ಪ್ರಮುಖ ದೇವಾಲಯಗಳನ್ನು ಅಧ್ಯಯನದ ದೃಷ್ಟಿಯಿಂದ ಶೈವ, ವೈಷ್ಣವ, ಶಕ್ತಿದೇವತೆಗಳು ಮತ್ತು ಇತರೆ ದೇವಾಲಯಗಳು ಎಂದು ವರ್ಗೀಕರಿಸಿಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ.

### 3.1 ಶೈವ ದೇವಾಲಯಗಳು

ಶೈವಧರ್ಮ ಭಾರತದ ಅತ್ಯಂತ ಪ್ರಾಚೀನ ಧರ್ಮಗಳಲೊಂದು. ವೇದಪೂರ್ವ ಹರಪ್ಪ ಮಹೆಂಜೋದಾರೋಗಳ ಕಾಲದಿಂದಲೂ ಅವ್ಯಾಹತವಾಗಿ ಸಾಗಿ ಬಂದ ಶಿವೋಪಾಸನೆ ಈ ಅವಧಿಯಲ್ಲಿಯೂ ನಾನಾ ಬಗೆಗಳಲ್ಲಿ ಬೆಳೆದು ಬಂದಿದೆ. ಋಗ್ವೇದದಲ್ಲಿ ಕಾಣಿಸಿಕೊಳ್ಳುವ ರುದ್ರ ಕ್ರಮೇಣ ಶಿವನಾಗಿ ಶೈವ ಧರ್ಮಿಯರಿಗೆ ಆರಾಧ್ಯ ದೈವವಾಗಿ ಬೆಳೆದ ಶಿವನನ್ನು ಲಿಂಗ ರೂಪವಾಗಿಯೂ ಸಾಕಾರ ಮತ್ತು ನಿರಾಕಾರವಾಗಿಯೂ ಆರಾಧಿಸುವ ರೂಢಿ ಬೆಳೆದು ಬಂದಿದೆ. ಶಿವೋಪಾಸನೆಗಳಿಗೆ ಆಧಾರಗಳಾದ ಶಿವಾಗಮಗಳನ್ನು ಶಿವನೇ ಪಾರ್ವತಿಗೆ ಉಪದೇಶಿಸಿದನೆಂಬ

ನಂಬಿಕೆ ಇದೆ. ಅವುಗಳ ಸಂಖ್ಯೆ ಇಪ್ಪತ್ತೆಂಟು ಎಂದು ಹೇಳಲಾಗುತ್ತದೆ. ಕಾಲದ ಪ್ರವಾಹದಲ್ಲಿ ವೇದ, ಆಗಮಗಳ ಅಭಿಪ್ರಾಯಗಳು ಒಂದರೊಡನೊಂದು ಬೆರೆತು ಶಿವೋಪಾಸನೆಯಲ್ಲಿ ವಿಶಿಷ್ಟ ಸಂಕೀರ್ಣತೆ ತಲೆದೋರಿದೆ.

"ಶೈವಧರ್ಮವು ಭಾರತದ ಪ್ರಾಚೀನ ಧರ್ಮಗಳಲೊಂದು ಶಿವನ ಆರಾಧನೆಯ ವಿವರವು ವೇದಗಳ ಕಾಲಕ್ಕಿಂತಲೂ ಹಿಂದಕ್ಕೆ ಹೋಗುತ್ತದೆ. ಹರಪ್ಪ ಮತ್ತು ಮಹೆಂಜೋದಾರೊಗಳ ಸೈಂಧವ ಸಂಸ್ಕೃತಿಯಲ್ಲಿ (ಸುಮಾರು ಕ್ರಿ.ಪೂ.3250–2750) ಕೊಂಬುಗಳಿರುವ ದೇವತೆಗೆ ಮೂರು ಮುಖಗಳಿದ್ದವು. ಅವನ ಸುತ್ತಲು ಪ್ರಾಣಿಗಳು ಸುತ್ತುವರೆದಿರುವ ದೃಶ್ಯವಿದೆ. ಇದನ್ನು ಪರಿಶೀಲಿಸಿದರೆ ಇದು ಪಶುಪತಿ, ಮಹಾಯೋಗಿಯೂ ಆದ ಶಿವನ ಪ್ರಾಚೀನ ರೂಪವನ್ನು ಸೂಚಿಸುತ್ತದೆ. ಎಂದು ಸರ್.ಜಾನ್.ಮಾರ್ಷಲ್ ಅಭಿಪ್ರಾಯ ಪಟ್ಟಿದ್ದಾರೆ"[2] ಕರ್ನಾಟಕವು ಆರಂಭದಿಂದಲೂ ಶೈವರ ಆರಾಧನೆಯ ನೆಲೆಯಾಗಿದ್ದುದರಿಂದ ಶೈವಾರಾಧನೆಗೆ ರಾಜಾಶ್ರಯ ದೊರೆತು ಸಮೃದ್ಧವಾಗಿ ಬೆಳೆಯಿತು. ಈ ಹಿನ್ನೆಲೆಯಲ್ಲಿ ಮೈಸೂರು ನಗರವು ಶೈವಾರಾಧನೆಗೆ ವಿಶೇಷ ಪ್ರಾಶಸ್ತ್ಯವಿತ್ತಿದ್ದುದು ಇತಿಹಾಸದ ಆಧಾರಗಳಿಂದ ಅರಿಯಬಹುದಾಗಿದೆ.

ಶೈವ ಧರ್ಮವು ಆಗಮಗಳಿಂದ ಹಾಗೂ ಪೌರಾಣಿಕ ಹಿಂದೂ ಧರ್ಮದಿಂದ ಕ್ರಮೇಣ ಪ್ರಭಾವಿತವಾಗಿದೆ. ಶೈವ ಧರ್ಮದ ಉಪಾಸಕರಲ್ಲಿ ಪಾಶುಪತರು, ಕಾಳಮುಖರು ಉತ್ತರ ಭಾಗದಿಂದ ದಕ್ಷಿಣ ಭಾಗಕ್ಕೆ ಬಂದರು. ಇಲ್ಲಿಗೆ ಬಂದ ಶೈವರೆಲ್ಲರೂ ಪ್ರಮುಖವಾಗಿ ಆಗಮಗಳಲ್ಲಿರುವ ವಿಧಿ ನಿಯಮಗಳನ್ನು ಆಚರಿಸುತ್ತಿದ್ದರು. ಅವುಗಳಲ್ಲಿ ಲಿಂಗಾಧಾರಣೆಯು ಒಂದಾಗಿತ್ತು. ಆದರೆ ಅದು ಕಡ್ಡಾಯವಾಗಿರಲಿಲ್ಲ. ಆದ ಕಾರಣ ಮೈಸೂರು ನಗರ ಪ್ರದೇಶದಲ್ಲಿ ಶೈವ ಪರಂಪರೆಗೆ ಪೂರಕವಾಗಿ ಹಲವಾರು ದೇವರುಗಳನ್ನು ಪೂಜಿಸುವ ಪದ್ಧತಿ ಇದೆ. ಅಲ್ಲದೆ ಕೆಳವರ್ಗದ ಜನರು ಇದನ್ನು ಹೆಚ್ಚಾಗಿ ಆಚರಿಸುತ್ತಾ ಬಂದಿದ್ದಾರೆ. ವೇದ ಪೂರ್ವಕಾಲದಲ್ಲಿ ಶೈವ ಧರ್ಮದ ಪೂಜಾ ಪದ್ಧತಿಗಳಿಂದ ಭಾರತದ ಹಲವಾರು ಭಾಗಗಳಲ್ಲಿ ಶೈವ ಧರ್ಮದ ಅನೇಕ ಪಂಥಗಳು ಹುಟ್ಟಿಕೊಂಡಿವೆ. ಮೈಸೂರು ನಗರದಲ್ಲಿ ಕಂಡುಬರುವ ಶೈವ–ವೀರಶೈವ ಪರಂಪರೆಯಲ್ಲಿ ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಪಾದೋದಕ, ಪ್ರಸಾದ, ಮಂತ್ರಗಳಿರುತ್ತವೆ. ಭಕ್ತರು ಆಧ್ಯಾತ್ಮಿಕ ಪ್ರಗತಿಯನ್ನು ಸಾದಿಸಲು ಎಂಟು ನಿಯಮಗಳನ್ನು ಪಾಲಿಸಬೇಕು. ಅವುಗಳೆಂದರೆ ಗುರುವಿನಲ್ಲಿ ವಿಧೇಯತೆ, ನಿತ್ಯಲಿಂಗಾರ್ಚನೆ, ಜಂಗಮರಲ್ಲಿ ಗೌರವಭಾವ, ಹಣೆ ಮತ್ತು ದೇಹದ ಮೇಲೆ ವಿಭೂತಿಧಾರಣೆ, ರುದ್ರಾಕ್ಷಿಧಾರಣೆ,

ಗುರುಜಂಗಮರನ್ನು ಪೂಜಿಸಿ ಅವರ ಪಾದದ ಮೇಲೆ ಎರೆದ ಪಾದೋದಕ ಸ್ವೀಕರಣ ಅಥವಾ ಶಿವಾರ್ಚನೆಯಾದ ಮೇಲೆ ಲಿಂಗದ ಮೇಲೆ ಎರೆದ ತೀರ್ಥ ಸ್ವೀಕರಣ ಈ ರೀತಿಯಾದ ಶುದ್ಧೋದಕ ಪವಿತ್ರವಾದುದರಿಂದ ತೀರ್ಥವಾಗಿ ಸ್ವೀಕರಿಸಬೇಕು. ಪ್ರಸಾದವನ್ನು ಗುರು ಅಥವಾ ಲಿಂಗ ಅಥವಾ ಜಂಗಮಕ್ಕೆ ಅರ್ಪಿಸಿದ ಅನಂತರ ಉಳಿದುದನ್ನು ಪವಿತ್ರ ಭಾವನೆಯಿಂದ ಸ್ವೀಕರಿಸಬೇಕು. ದೇವರನ್ನು ಧ್ಯಾನ ಮಾಡುತ್ತಾ ನಮಶಿವಾಯ ಎಂಬ ಪಂಚಾಕ್ಷರಿಯನ್ನು ಜಪಿಸಬೇಕು. ಇದನ್ನೆ ಮಂತ್ರ ಎಂದು ಕರೆಯಲಾಗುತ್ತದೆ.

ಮೈಸೂರು ಪ್ರದೇಶದಲ್ಲಿ ಶೈವ ಪರಂಪರೆಗೆ ಪೂರಕವಾಗಿ ಭೈರವ ಸಂಸ್ಕೃತಿಯನ್ನು ಗುರುತಿಸಬಹುದು. ಕಾಲಭೈರವ ಸಂಸ್ಕೃತಿ ಶೈವ ಪರಂಪರೆಯಲ್ಲಿ ಬರುವ ಸಂಸ್ಕೃತಿಯೇ ಆಗಿದೆ. ಮೈಸೂರು ನಗರದಲ್ಲಿ ಹಲವು ಶೈವ ದೇವಾಲಯಗಳನ್ನು ಕಾಣುತ್ತೇವೆ. ಈ ದೇವಾಲಯಗಳಿಗೆ ಹಲವಾರು ಹೆಸರುಗಳಿಂದ ಕರೆದಿರುವುದು ಕೂಡ ಪ್ರಮುಖವಾದ ವಿಷಯವಾಗಿದೆ. ಉದಾಹರಣೆಗೆ: ಸೋಮೇಶ್ವರ, ನಂಜುಂಡೇಶ್ವರ, ತ್ರಿನೇಶ್ವರ, ಮಹದೇಶ್ವರ, ಸಿದ್ದೇಶ್ವರ, ಬಸವೇಶ್ವರ, ಭೈರವೇಶ್ವರ, ಕಾಲಭೈರವೇಶ್ವರ, ಮೃತ್ಯುಂಜಯೇಶ್ವರ, ಚಂದ್ರಮೌಳೇಶ್ವರ, ದೇಶಲಿಂಗೇಶ್ವರ ಹಾಗೂ ಸಿದ್ದಪ್ಪಾಜಿ, ರಾಚಪ್ಪಾಜಿ, ಮಂಟೇಸ್ವಾಮಿ ಈ ಹೆಸರುಗಳಿಂದ ಶೈವ ಆರಾಧನೆಯ ಆರಾಧಕರು ಕಂಡುಬರುತ್ತಾರೆ. ಈ ಆರಾಧನೆಯಲ್ಲಿ ಲಿಂಗಾಯಿತರು, ವೀರಶೈವರು, ಒಕ್ಕಲಿಗರು, ದಲಿತರು, ಕುರುಬರು, ನಾಯಕರು ಇನ್ನಿತರ ಹಿಂದುಳಿದ ವರ್ಗದವರು ಪಾಲ್ಗೊಳ್ಳುವುದು ಕಂಡುಬರುತ್ತದೆ. ಕೆಲವೊಂದು ಶಿವದೇವಾಲಯಗಳಲ್ಲಿ ಭೈರವನ ಶಿಲ್ಪಗಳನ್ನು ಕಾಣಬಹುದು.

ಮೈಸೂರು ಪ್ರದೇಶದಲ್ಲಿ ಗಂಗರ ಕಾಲದಿಂದಲೂ ಶೈವ ಧರ್ಮ ಅಸ್ತಿತ್ವದಲ್ಲಿದೆ. ಚೋಳರ ಕಾಲಕ್ಕೆ ಬಲ ಪಡೆದ ಶೈವ ಧರ್ಮವು, ಹೊಯ್ಸಳರು ಮತ್ತು ವಿಜಯನಗರದ ಅರಸರ ಕಾಲದಲ್ಲೂ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಮೈಸೂರು ಅರಸರ ಕಾಲದಲ್ಲಿ ಶೈವ ಧರ್ಮ ತನ್ನ ಪ್ರಾಬಲ್ಯವನ್ನು ಉಳಿಸಿಕೊಂಡಿದೆ. ಬೋಗಾದಿಯ ಭೋಗೇಶ್ವರ, ಚಾಮುಂಡಿಬೆಟ್ಟದ ಮಹಾಬಲೇಶ್ವರ, ಹಿನಕಲ್ಲಿನ ನನ್ನೇಶ್ವರ, ಮೈಸೂರಿನ ಕೋಡಿಭೈರವೇಶ್ವರ, ಶಂಕರೇಶ್ವರ, ಮಹಾದೇಶ್ವರ, ತ್ರಿಣೇಶ್ವರ, ಪ್ರಸನ್ನ ನಂಜುಂಡೇಶ್ವರ ದೇವಾಲಯಗಳು ಪ್ರಸ್ತುತದಲ್ಲಿಯೂ ತನ್ನ ಇರುವಿಕೆಯನ್ನು ಸಾಬೀತು ಪಡಿಸಿವೆ. ಕೆಲವು ದೇವಾಲಯಗಳು ಐತಿಹಾಸಿಕವಾಗಿ, ಜಾನಪದೀಯವಾಗಿ ಪ್ರಸಿದ್ಧಿ ಸ್ಥಳವಾಗಿ ಗೋಚರಿಸಿವೆ. ಈ ಪ್ರಾಚೀನ ದೇವಾಲಯಗಳಲ್ಲಿ ಗಂಗರ ಕಾಲದ ಕೊಡುಗೆಯೇ ಅಧಿಕವೆನ್ನಬಹುದು.

**ಮೈಸೂರು ನಗರದ ಪ್ರಮುಖ ಶೈವ ದೇವಾಲಯಗಳ ಪಟ್ಟಿ**

| **ದೇವರು** | **ದೇವಾಲಯ ಇರುವ ಸ್ಥಳ** |
|---|---|
| ಗಣಪತಿ | ಅರಮನೆಕೋಟೆಗೆ ಅಂಟಿಕೊಂಡಂತೆ |
| ಮಲೆಮಹದೇಶ್ವರ<br>ಬಸವೇಶ್ವರ | ಅಶೋಕರಸ್ತೆ |
| ವಿಶ್ವೇಶ್ವರ ದೇವಾಲಯ | ಅಗ್ರಹಾರ(ಹಳೆಯ) |
| ಮಹಾಗಣಪತಿ ದೇವಾಲಯ | ಇಟ್ಟಿಗೆಗೂಡು |
| ಮರುಳೇಶ್ವರ | ಕನ್ನೇಗೌಡನಕೊಪ್ಪಲು |
| ಸಿದ್ದಪ್ಪಾಜಿ | ಕನ್ನೇಗೌಡನಕೊಪ್ಪಲು |
| ಚಂದ್ರಮೌಳೇಶ್ವರ | ಸರಸ್ವತಿಪುರಂ (ಸರಸ್ವತಿ ಚಿತ್ರಮಂದಿರದ ಸಮೀಪ) |
| ಕಾಲಭೈರವೇಶ್ವರ | ಕಾಳಮ್ಮದೇವಾಲಯದ ರಸ್ತೆ |
| ಗಣಪತಿ | ಕಾರಂಜಿಕೆರೆ (ಕೆಳಗೆ) |
| ಚಂದ್ರಮೌಳೇಶ್ವರ | ಕೆ.ಇ.ಬಿ.ಸರ್ಕಲ್ |
| ಶ್ರೀ ಪ್ರಸನ್ನ ಶಿವಲಿಂಗೇಶ್ವರ | ವಿಶ್ವಮಾನವ ಜೋಡಿ ರಸ್ತೆ, ಕುವೆಂಪುನಗರ |
| ಗಣಪತಿ<br>ಮಲೆಮಹದೇಶ್ವರ | ಕುಂಬಾರಕೊಪ್ಪಲು |
| ಜೋಡಿ ಬಸವೇಶ್ವರ | ಕುವೆಂಪುನಗರ, ಅನಿಕೇತನ ರಸ್ತೆ |
| ಮಲೇಮಹದೇಶ್ವರ | ಕುವೆಂಪುನಗರ, ಅಪೋಲೋ ಆಸ್ಪತ್ರೆ ರಸ್ತೆ |
| ಗಣಪತಿ | ಗೋಕುಲಂ, ಕಾಂಟೂರ್ ರಸ್ತೆ |
| ಗಣಪತಿ | ಗೋಕುಲಂ ಇ.ಡಬ್ಲ್ಯೂ.ಎಸ್ |
| ಗಣಪತಿ | ಗರ್ಗೇಶ್ವರಿ ಚೌಕ |
| ಮಹಾಬಲೇಶ್ವರಸ್ವಾಮಿ | ಚಾಮುಂಡಿಬೆಟ್ಟ |
| ಬೇಡರಕಣ್ಣಪ್ಪ | ಜಯನಗರ |
| ಪಂಚಮುಖಿ ಗಣಪತಿ | ಜೆ.ಪಿ.ನಗರ(ನಾಚನಹಳ್ಳಿ ಪಾಳ್ಯ) |
| ಗಣಪತಿ(ನವಗ್ರಹ) | ಡಿಪೋ ರಸ್ತೆ, ಶಾಂತಿಸಾಗರದ ಎದುರು ರಸ್ತೆ |

| | |
|---|---|
| ನೂರೊಂದು ಗಣಪತಿ<br>ಮೃತ್ಯುಂಜಯೇಶ್ವರ<br>ಮಂಟೇಸ್ವಾಮಿ–ಸಿದ್ದಪ್ಪಾಜಿ<br>ವೀರಭದ್ರೇಶ್ವರ<br>ಚಾಮರಾಜೇಶ್ವರ | ತ್ಯಾಗರಾಜ ರಸ್ತೆ(ಅಗ್ರಹಾರ) |
| ಧನ್ವಂತರಿ ಚಿದಂಬರ | ಧನ್ವಂತರಿ ರಸ್ತೆ |
| ಶ್ರೀರಾಚಪ್ಪಾಜಿ–ಸಿದ್ದಾಪ್ಪಾಜಿ | ಸಯ್ಯಾಜಿರಾವ್ ರಸ್ತೆ |
| ಅಮೃತೇಶ್ವರ | ದಿವಾನ್ಸ್ ರಸ್ತೆ |
| ಚಂದ್ರಮೌಳೇಶ್ವರ | ನಾರಾಯಣಶಾಸ್ತ್ರೀ ರಸ್ತೆ |
| ಗಣಪತಿ | ಗೋಕುಲಂ, ನಿರ್ಮಲ ಕಾನ್ವೆಂಟ್ ರಸ್ತೆ |
| ಪಂಚಮುಖಿ ಗಣಪತಿ | ನ್ಯೂ ಸಯ್ಯಾಜಿರಾವ್ ರಸ್ತೆ |
| ಮಂಟೇಸ್ವಾಮಿ<br>ಪ್ರಸನ್ನ ಮಹಾಗಣಪತಿ<br>ಗಣಪತಿ | ಎನ್.ಆರ್.ಮೊಹಲ್ಲಾ |
| ಗಣಪತಿ<br>ಶ್ರೀ ವರಸಿದ್ಧಿ ವಿನಾಯಕ<br>ಮಹದೇಶ್ವರಸ್ವಾಮಿ | ಪಡುವಾರಹಳ್ಳಿ |
| ಮಲೇಮಹದೇಶ್ವರ | ಬನ್ನೂರು ರಸ್ತೆ |
| ಗಣಪತಿ<br>ಗಣಪತಿ<br>ಈಶ್ವರ | ಬಂಬೂಬಜಾರ್ |
| ಮಂಜುನಾಥಸ್ವಾಮಿ<br>ವರಸಿದ್ಧಿ ವಿನಾಯಕ | ಬನ್ನಿಮಂಟಪ, ಕೆ.ಎಸ್.ಆರ್.ಟಿ.ಸಿ.ಡಿಪೋ ಎದುರು |
| ಮಹಾಗಣಪತಿ | ಬೃಂದಾವನ ಬಡಾವಣೆ |
| ಗಣಪತಿ<br>ಬೋಗೇಶ್ವರ | ಬೋಗಾದಿ, ವರ್ತುಲ ರಸ್ತೆ |

| | |
|---|---|
| ಮಂಟಪದ ಬಸವ | |
| ಗಣಪತಿ | ಬೋಗಾದಿ ಊರೊಳಗೆ |
| ಚಿಕ್ಕಲಿಂಗೇಶ್ವರಸ್ವಾಮಿ | ಮಂಡಿಮೊಹಲ್ಲಾ(ಉಪ್ಪಿನ ಕೇರಿ) |
| ಗಣಪತಿ | ಮಂಡಿಮೊಹಲ್ಲಾ( ಮಿಷನ್ ಆಸ್ಪತ್ರೆ ರಸ್ತೆ) |
| ಗಣಪತಿ<br>ಮಂಜುನಾಥೇಶ್ವರ<br>ಮೈಲಾರೇಶ್ವರ | ಮಂಡಿಮೊಹಲ್ಲಾ(ಅಶೋಕ ರಸ್ತೆ) |
| ಗಣಪತಿ | ಮಂಜುನಾಥಪುರ |
| ಸುಬ್ರಹ್ಮಣ್ಯೇಶ್ವರ | ಮೆಕ್ಕಾಜಿ ಚೌಕ(ರಂಗಾಚಾರ್ಲು ಭವನದ ಹಿಂಭಾಗ) |
| ಗಣಪತಿ | ಮಧುವನ ಬಡಾವಣೆ |
| ವೀರಭದ್ರೇಶ್ವರ | ಮಧುವನ ಬಡಾವಣೆ(ಲಿಂಗಾಬುಧಿ ಕೆರೆ) |
| ಗುಡ್ಡದ ಕಾಲಭೈರವೇಶ್ವರ | ಮೇಟಗಳ್ಳಿ, ವರ್ತುಲ ರಸ್ತೆ |
| ನೂರೊಂದು ಲಿಂಗ<br>ನಾಗಲಿಂಗಸ್ವಾಮಿ ಮಠ ಮತ್ತು ದೇವಾಲಯ | ರಾಮಾನುಜ ರಸ್ತೆ |
| ಈಶ್ವರ | ರಾಜೀವನಗರ, 2ನೇಹಂತ |
| ಬಸವನಗುಡಿ<br>ಸಿದ್ದಾಪ್ಪಾಜಿ | ಲೋಕನಾಯಕ ನಗರ |
| ಸಿದ್ದಾಪ್ಪಾಜಿ | ಚಾಮುಂಡಿವಿಹಾರ ಬಡಾವಣೆ |
| ಗಣಪತಿ | ವಾಣೀವಿಲಾಸ ರಸ್ತೆ |
| ಗಣಪತಿ | ವಿಜಯನಗರ, ಕೃಷ್ಣದೇವರಾಯ ವೃತ್ತ |
| ಗಣಪತಿ | ವಿಜಯನಗರ, ರೈಲ್ವೆ ಬಡಾವಣೆ |
| ಗಣಪತಿ | ವಿಜಯಶ್ರೀಪುರ |
| ಮಂಟೇಸ್ವಾಮಿ | ಪುಲಿಕೇಶಿ ರಸ್ತೆ, ಮಂಡಿಮೊಹಲ್ಲಾ |
| ಗಣಪತಿ | ವೀರನಗೆರೆ(ಮಂಟಪದ ವೀರನಗೆರೆ ರಸ್ತೆ) |
| ಸದ್ದಾಪ್ಪಾಜಿ | ಶ್ರೀರಾಂಪುರ, ಎಚ್.ಡಿ.ಕೋಟೆ ರಸ್ತೆ |

| | |
|---|---|
| ಗಣಪತಿ | ವಿವೇಕಾನಂದ ವೃತ್ತ |
| ಸುಬ್ರಹ್ಮಣ್ಯೇಶ್ವರ | ವಿಶ್ವೇಶ್ವರನಗರ |
| ಗಣಪತಿ | ಶಕ್ತಿನಗರ |
| ಗಣಪತಿ | ಶ್ರೀರಾಂಪುರ, 2ನೇಹಂತ |
| ಚಂದ್ರಮೌಳೇಶ್ವರ | ಸರಸ್ವತಿಪುರಂ ,ಮೊದಲನೆ ಮುಖ್ಯರಸ್ತೆ |
| ಮಲೇಮಹದೇಶ್ವರ | ಸೆಂಟ್ ಫಿಲೋಮಿನಾ ಪ್ರೌಢಶಾಲೆ |
| ಶಂಕರಾಲಯ(ಶಾರದಾದೇವಿ) | ಹರಿಶ್ಚಂದ್ರ ರಸ್ತೆ(ದೊಡ್ಡಕೆರೆ) |
| ಸಿದ್ದಾಪ್ಪಾಜಿ | ಅಶೋಕಪುರಂ, 8ನೇ ಹಂತ |
| ಭಕ್ತಗಣಪತಿ | ಹೆಬ್ಬಾಳು, 1ನೇಹಂತ |
| ಗಣಪತಿ | ಹೆಬ್ಬಾಳು, 2ನೇಹಂತ |
| ಸಿದ್ದಾಪ್ಪಾಜಿ | ಟಿ.ಕೆ.ಲೇಔಟ್ |
| ಮಹಾಗಣಪತಿ(ಜೋಡಿ ಅರಳಿಕಟ್ಟೆ)<br>ಮಲೆಮಹಾದೇಶ್ವರ<br>ಗಣಪತಿ | ಹೊಸಬಂಡಿಕೇರಿ(ನಾರಾಯಣಶಾಸ್ತ್ರಿ ರಸ್ತೆ) |
| ನನ್ನೇಶ್ವರ | ಹಿನಕಲ್ |
| ಭೈರವೇಶ್ವರ<br>ತ್ರಿನಯನೇಶ್ವರ<br>ಸೋಮೇಶ್ವರ | ಅರಮನೆ ಕೋಟೆಯ ಪೂರ್ವದಿಕ್ಕಿನ ಅಂಚಿನಲ್ಲಿವೆ |
| ಶ್ರೀದೇಶಾಲಿಂಗೇಶ್ವರ ಸ್ವಾಮಿ | ವರ್ತುಲ ರಸ್ತೆ, ದಟ್ಟಗಳ್ಳಿ, 3ನೇಹಂತ |
| ಸಿದ್ದಾಪ್ಪಾಜಿ | ಆಲನಹಳ್ಳಿ |

## ಉದ್ಭವಮೂರ್ತಿ ಬಸವೇಶ್ವರ ಸ್ವಾಮಿ ಮತ್ತು ಮಲೆಮಹದೇಶ್ವರ ಸ್ವಾಮಿ ದೇಗುಲ:

ಈ ದೇವಾಲಯವು ಮೈಸೂರು ನಗರದ ಹಳೆಯದೇಗುಲಗಳಲ್ಲಿ ಒಂದಾಗಿದ್ದು, ನಜರ್‌ಬಾದ್‌ನ ಬನ್ನೂರು–ಮೈಸೂರು ರಸ್ತೆಯಲ್ಲಿ ನಿರ್ಮಾಣವಾಗಿದೆ. ಸುಮಾರು 200ವರ್ಷಗಳ ಹಳೆಯದಾದ ಈ ದೇವಾಲಯದಲ್ಲಿ ಬಸವೇಶ್ವರ ಮೂರ್ತಿ ಮೊದಲು ಉದ್ಭವವಾಗಿದ್ದು, ಅನಂತರ ಆ ಮೂರ್ತಿಗೆ ಮಹದೇಶ್ವರ ಮೂರ್ತಿಯ ಪ್ರತಿರೂಪವನ್ನು ನೀಡಲಾಗಿದೆ. ಆದ್ದರಿಂದ

ಈ ದೇಗುಲ ಬಸವೇಶ್ವರ ಮತ್ತು ಮಹದೇಶ್ವರ ದೇವಾಲಯವೆಂದೇ ಪ್ರಸಿದ್ಧವಾಗಿದೆ. ಈ ದೇವಾಲಯವು ರಾಜವಂಶಸ್ಥರಾದ ನಾಲ್ವಡಿ ಕೃಷ್ಣರಾಜ ಒಡೆಯರ ಸಹೋದರಿ ಪಚ್ಚೇದೇಸರಾಯಿ ಅರಸ್‌ರವರಿಗೆ ಸೇರಿದ್ದಾಗಿದ್ದು, ಪಚ್ಚೆದೇಸಾಯಿ ಅರಸುರವರು ಮದುವೆಯಾದ ನಂತರ ಈ ದೇಗುಲ ಅಭಿವೃದ್ಧಿಯನ್ನು ಹೊಂದಿತು. ವಂಶಪಾರಂಪರಿಕವಾಗಿ ಶಿವಾರ್ಚಕ ನಿಂಗಪ್ಪನವರಿಂದ ಆರಂಭಿಕವಾಗಿ ಮಗ ನಂಜಪ್ಪ ಮೊಮ್ಮಗನಾದ ಬಸವರಾಜುರವರೆಗೆ ಪ್ರಸ್ತುತ ಅರ್ಚಕರಾಗಿ ಸೇವೆಸಲ್ಲಿಸುತ್ತಿದ್ದಾರೆ.

ಈ ದೇವಾಲಯವು ಸುಮಾರು ಐದು ವರ್ಷಗಳ ಹಿಂದೆ ಶಿಥಿಲಾವಸ್ಥೆಯಲ್ಲಿತ್ತು. 2012ರಲ್ಲಿ ಜೀರ್ಣೋದ್ಧಾರ ಮಾಡಲಾಗಿದೆ. ಕರ್ನಾಟಕ ಸರ್ಕಾರದ ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಯಡಿಯೂರಪ್ಪನವರು ತಮ್ಮ ಸರ್ಕಾರದ ಬೊಕ್ಕಸದಿಂದ 2ಲಕ್ಷ ರೂಪಾಯಿಗಳನ್ನು ನೀಡಿದ್ದು, ಉಳಿದಂತೆ ಭಕ್ತಾದಿಗಳು ಮತ್ತು ಕೊಡುಗೆ ನೀಡಿದವರಿಂದ ದೇಣಿಗೆ ಪಡೆದು ಜೀರ್ಣೋದ್ಧಾರಕ್ಕೆ ಬಳಸಿಕೊಳ್ಳಲಾಗಿದೆ. ಇಂದು ಈ ದೇವಾಲಯ ಹೊಸ ರೂಪವನ್ನು ಪಡೆದಿದ್ದು ಆಕರ್ಷಣೀಯವಾದ ಮಾರ್ಬಲ್ಸ್‌ನಿಂದ ಗೋಡೆಗಳು ಮತ್ತು ನೆಲ ಹಾಸುಗಳು ಕಂಗೊಳಿಸುತ್ತದೆ. ಗರ್ಭಗುಡಿಯ ಬಾಗಿಲನ್ನು ಹಿತ್ತಾಳೆಯ ಕವಚದಿಂದ ಮಾಡಿಸಲಾಗಿದೆ.

ಈ ದೇವಾಲಯದಲ್ಲಿ ಹಬ್ಬ ಹರಿದಿನಗಳಲ್ಲಿ ವಿಶೇಷದಿನಗಳಾದ ಕಾರ್ತಿಕ ಮಾಸ ಮತ್ತು ಇತರೆ ವಿಶೇಷ ದಿನಗಳಲ್ಲಿ ವಿಶೇಷ ಪೂಜೆ ಪುನಸ್ಕಾರಗಳು ನಡೆಯುತ್ತವೆ.[3]

## ಶ್ರೀ ಮಹದೇಶ್ವರ ದೇವಾಲಯ(ಕುಂಬಾರ ಕೊಪ್ಪಲು)

ಈ ದೇವಾಲಯವು ಸುಮಾರು 250 ವರ್ಷಗಳಷ್ಟು ಹಳೆಯದಾಗಿದೆ. ಇಲ್ಲಿರುವ ಮಹದೇಶ್ವರ ಮೂರ್ತಿಯು ಉದ್ಭವ ಮೂರ್ತಿಯಾಗಿದ್ದು, ಸುಮಾರು ಒಂದು ಅಡಿ ಎತ್ತರವಾಗಿದೆ ಈ ಮೂರ್ತಿಗೆ ಬೆಳ್ಳಿಯ ಕವಚವನ್ನು ಹೊದಿಸಲಾಗಿದೆ. ವಿಶೇಷವಾಗಿ ಈ ಮೂರ್ತಿಯು ಮಲೆಮಹದೇಶ್ವರ ಬೆಟ್ಟದಲ್ಲಿರುವ ಮೂರ್ತಿಯ ಪ್ರತಿರೂಪದಂತೆಯೇ ಕಾಣುತ್ತದೆ. ಇದರ ಜೊತೆಯಲ್ಲಿ ವೀರಭದ್ರಸ್ವಾಮಿಯ ಮೂರ್ತಿಯೂ ಸಹಾ ಇದ್ದು, ಅದು ಸುಮಾರು 2ಅಡಿ ಎತ್ತರವಾಗಿದೆ. ಯುಗಾದಿ ಮತ್ತು ದೀಪಾವಳಿಯಲ್ಲಿ ವಿಶೇಷ ಜಾತ್ರೆಗಳು ಈ ದೇವಾಲಯದಲ್ಲಿ ನಡೆಯುತ್ತವೆ. ಯುಗಾದಿಯಂದು ದೇವರ ವಿಗ್ರಹವನ್ನು ಬಲಮುರಿ ಕ್ಷೇತ್ರಕ್ಕೆ ತಗೆದುಕೊಂಡು ಹೋಗಿ ತೊಳೆದು ಗಂಗೆಗೆ ಪೂಜೆ ಸಲ್ಲಿಸಿ ಅಲ್ಲಿಂದ ಕಾಲ್ನಡಿಗೆಯಲ್ಲಿ ದೇವರ ವಿಗ್ರಹವನ್ನು ಹೊತ್ತುಕೊಂಡು ಮೂಲಸ್ಥಾನಕ್ಕೆ ಬಂದು ಸೇರುತ್ತಾರೆ. ಆ ದಿನ ರಾತ್ರಿ ಸುಮಾರು 11ಗಂಟೆಗೆ

ದೇವರ ಮೆರವಣಿಗೆ ಪ್ರಾರಂಭವಾಗಿ ಊರಿನ ಪ್ರತಿ ಬೀದಿಯಲ್ಲೂ ಮೆರವಣಿಗೆ ಸಾಗುತ್ತದೆ. ಮೆರವಣಿಗೆ ಮುಗಿಸಿ ದೇವಾಲಯಕ್ಕೆ ಬರುವ ಹೊತ್ತಿಗೆ ಬೆಳಗ್ಗೆ ಸುಮಾರು 10ಗಂಟೆಯಾಗುತ್ತದೆ. ವಿಶೇಷವೆಂದರೆ ಆದಿನ 11ಗಂಟೆಗೆ ದೇವಸ್ಥಾನದ ಮುಂಭಾಗ ಕೊಂಡ ಹಾಯುವ ಕಾರ್ಯಕ್ರಮ ನಡೆಸುತ್ತಾರೆ. ಸಾಮಾನ್ಯವಾಗಿ ಇತರೆಡೆಗಳಲ್ಲಿ ಸಂಜೆ ಅಥವಾ ರಾತ್ರಿಯ ವೇಳೆ ಈ ಕೊಂಡ ಹಾಯುವ ಪದ್ಧತಿಯನ್ನು ಕಾಣುತ್ತೇವೆ.

ದೀಪಾವಳಿಯ ಹಬ್ಬದಂದು ವೀರಭದ್ರೇಶ್ವರಸ್ವಾಮಿಯ ಮರದ ವಿಗ್ರಹ ಮತ್ತು ಮಹದೇಶ್ವರಸ್ವಾಮಿಯ ವಿಗ್ರಹವನ್ನು ಕುಂಬಾರಕೊಪ್ಪಲಿನ ಟೋಲ್‌ಗೇಟ್ ಬಳಿಯಲ್ಲಿರುವ ತಿಪ್ಪಾಜಿ ಕೊಳಕ್ಕೆ ತಗೆದುಕೊಂಡು ಹೋಗಿ ತೊಳೆದು ಹಾಲರಬಿ ಸೇವೆ ನೆರವೇರಿಸಲಾಗುತ್ತದೆ. ಹರಕೆ ಹೊತ್ತ ಭಕ್ತಾದಿಗಳು ಅಲ್ಲಿಂದ ಬಾಯಿಬೀಗ ಹಾಕಿಕೊಂಡು ದೇವಸ್ಥಾನದವರೆಗೂ ಕಾಲ್ನಡಿಗೆಯಲ್ಲಿಯೆ ಬಂದು ತಲುಪುತ್ತಾರೆ.[4]

## ಶ್ರೀ ಭೈರವೇಶ್ವರಸ್ವಾಮಿ ದೇವಾಲಯ

ಸುಮಾರು 400ವರ್ಷಗಳ ಹಿಂದೆ ಸ್ಥಾಪನೆಯಾಗಿರುವ ಬಹಳ ಪ್ರಾಚೀನವಾದ ದೇವಾಲಯವಾಗಿದೆ. ಈ ದೇವಾಲಯವು ನಗರದ ಗನ್‌ಹೌಸ್ ಹತ್ತಿರವಿರುವ ಪ್ರಮುಖ ದೇವಾಲಯಗಳಲ್ಲಿ ಒಂದಾಗಿದೆ. ಇದು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಹಲವಾರು ಜನರು ನೀಡಿದ ದೇಣಿಗೆಯಿಂದ ಚಿಕ್ಕದಾದ ಗುಡಿಯಾಗಿ ಸ್ಥಾಪನೆಯಾಯಿತು. ಮುಂದೆ ಮೈಸೂರು ಶ್ರೀ ಮನ್ಮಣಾ ಪ್ರಭುಗಳವರಾದ ಶ್ರೀ ಮನ್ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರು ಹಾಗೂ ಅಂದು ಅರಮನೆಯ ಕಂಟ್ರೋಲರ್ ಆಗಿದ್ದ ಮೇಜರ್ ಮಹದೇವಯ್ಯನವರು ನೂತನವಾಗಿ ಜೀರ್ಣೋದ್ಧಾರ ಮಾಡಿಸಿ ಶಕವರ್ಷ 1874ರಲ್ಲಿ ಸಮರ್ಪಿಸಿದರು.

ದೇವಾಲಯಕ್ಕೆ ಪ್ರವೇಶವಾಗುತ್ತಿದ್ದಂತೆ ಕಾಲಭೈರವೇಶ್ವರಸ್ವಾಮಿಯ ಗರ್ಭಗುಡಿಯು ಕಾಣಿಸುತ್ತದೆ. ಪುಟ್ಟದಾದ ಲಿಂಗದ ತಲೆಯ ಮೇಲೆ ಐದು ಹೆಡೆಯ ಹಾವು ತಲೆ ಎತ್ತಿ ನಿಂತಿರುವಂತೆ ನಿರ್ಮಿಸಲಾಗಿದ್ದು ನೋಡುಗರಿಗೆ ಭಕ್ತಪರವಶತೆಯನ್ನು ಮೂಡಿಸುತ್ತದೆ. 9ನೇ ತಲೆಮಾರಿನವರಾದ ಶ್ರೀ ಸುಂದ್ರೇಶ್‌ರವರು ಪ್ರಸ್ತುತ ಅರ್ಚಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರ ಜೊತೆಯಲ್ಲಿಯೇ ತಂದೆಯವರಾದ ಶ್ರೀ ನಾರಾಯಣಶಾಸ್ತ್ರಿಯವರು ಇದ್ದರು.[5] ಯುಗಾದಿ, ದೀಪಾವಳಿ, ಶಿವರಾತ್ರಿ ಮುಂತಾದ ದಿನಗಳಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ.

## ಕೋಡಿ ಭೈರವೇಶ್ವರಸ್ವಾಮಿ ದೇವಾಲಯ

ಈ ದೇವಾಲಯವು ಸುಮಾರು 1400ವರ್ಷಗಳ ಹಿಂದಿನ ದೇವಾಲಯವಾಗಿದೆ. ಇದು ದೊಡ್ಡಕೆರೆ ಅಥವಾ ದೇವರಾಜಸಾಗರ ಕೋಡಿ ಬಳಿಯಿದ್ದುದರಿಂದ ಇದಕ್ಕೆ ಕೋಡಿಭೈರವೇಶ್ವರ ಎಂಬ ಹೆಸರು ಬಂದಿದೆ. ಶಿವ ಇಲ್ಲಿ ಭೈರವನ ರೂಪದಲ್ಲಿದ್ದಾನೆ. ಕೋಟೆಯಲ್ಲಿದ್ದ ಮನೆ ಕಟ್ಟಡಗಳನ್ನು ಒಡೆಯುವಾಗ ಜನರು ಈ ಗುಡಿಯ ನಾಶಕ್ಕೆ ಮುಂದಾಗಿದ್ದರು. ಇದರ ಐತಿಹಾಸಿಕ ಮಹತ್ವವನ್ನು ಅರಿತಿದ್ದ ನಾಲ್ವಾಡಿ ಕೃಷ್ಣರಾಜ ಒಡೆಯರೇ ಸ್ವತಃ ತಾವೇ ಮಧ್ಯಪ್ರವೇಶಿಸಿ ಇದನ್ನು ರಕ್ಷಿಸಿದರು. ಭೈರವ ವಿಗ್ರಹದ ಸ್ಥಾಪನೆ ಹಾಗೂ ಗರ್ಭಗೃಹ ನಿರ್ಮಾಣವಾದುದು ಸುಮಾರು 1400ಕ್ಕೂ ಹಿಂದೆ. ಇದೊಂದು ಚಿಕ್ಕದಾದ ಗುಡಿಯಾಗಿದೆ. ಗೋಪುರ ಕಲಶ ಇತಾದಿಗಳೇನೂ ಇಲ್ಲದ ಒಂದು ಗರ್ಭಗೃಹವಿದೆ. ಮೂರಡಿ ಎತ್ತರ ಕೂಡ ಇರದ ಭೈರವನ ನಾಲ್ಕು ಹಸ್ತಗಳಲ್ಲಿ ಕ್ರಮವಾಗಿ ತ್ರಿಶೂಲ, ಡಮರುಗ, ಕಪಾಲ ಹಾಗೂ ಕತ್ತಿಗಳಿವೆ. ಭೈರವನ ಎಡಭಾಗಕ್ಕೆ ಬಲಗೈಯಲ್ಲಿ ಕುಡುಗೋಲು ಎತ್ತಿಹಿಡಿದಿರುವ ಭದ್ರಕಾಳಿಯ ವಿಗ್ರಹವಿದೆ.

ಮೈಸೂರು ಒಡೆಯರ ವಂಶದ ಉಗಮ ಮತ್ತು ಆರಂಭಗಳಿಗೆ ಸಂಬಂಧಿಸಿದಂತೆ ಈ ದೇವಾಲಯ ಬಹಳ ಪ್ರಮುಖವಾದುದಾಗಿದೆ. ಒಡೆಯರ ವಂಶದ ಮೂಲ ಪುರುಷರಾದ ಯದುರಾಯರ ಸ್ವಪ್ನದಲ್ಲಿ ಚಾಮುಂಡೇಶ್ವರಿ ಕಾಣಿಸಿಕೊಂಡು 'ಮೈಸೂರಿನಲ್ಲಿ ತೃಣಬಿಂದು ಋಷಿಯಿಂದ ಆರಾಧಿತನಾದ ಈಶ್ವರನ ಆಲಯದ ಹಿಂಭಾಗದ ತಟಾಕದ ಕೋಡಿ ಭೈರವೇಶ್ವರ ದೇವಾಲಯಕ್ಕೆ ಹೋಗು, ಅಲ್ಲಿ ನಿನಗೆ ಒಬ್ಬ ಜಂಗಮರು ಕಾಣುತ್ತಾರೆ, ಅವರು ಹೇಳಿದಂತೆ ನಡೆದುಕೋ' ಎಂದು ಹೇಳುತ್ತಾಳೆ. ಅದರಂತೆಯೇ ಯದುರಾಯರು ಅನುಜ ಕೃಷ್ಣರಾಯರೊಂದಿಗೆ ಮೈಸೂರಿಗೆ ಬಂದಾಗ ಕೋಡಿ ಭೈರವೇಶ್ವರಸ್ವಾಮಿಯ ಗುಡಿಯಲ್ಲಿ ಒಂದು ರಾತ್ರಿ ಮಲಗಿ ವಿಶ್ರಮಿಸಿಕೊಳ್ಳುತ್ತಾರೆ. ಮರುದಿನ ಅಲ್ಲಿಗೆ ಬಂದ ಜಂಗಮರು ಹೇಳಿದಂತೆ ಪಟ್ಟಣ ಪ್ರವೇಶಿಸಿ ರಾಜಮನೆತನಕ್ಕೆ ಮಾರನಾಯಕನು ನೀಡುತ್ತಿದ್ದ ಕಿರುಕುಳದ ಬಗ್ಗೆ ತಿಳಿದು ದುಷ್ಟಸೇನಾಪತಿ ಮಾರನಾಯಕನನ್ನು ಕೊಂದು, ರಾಜಪುತ್ರಿ ದೇವಾಜಮ್ಮಣ್ಣಿಯನ್ನು ವಿವಾಹವಾಗುತ್ತಾರೆ. ಹೀಗೆ ಯದುವಂಶದ ಮೊದಲ ತಂಗುದಾಣವಾಗಿ ಈ ದೇವಾಲಯ ಪ್ರಸಿದ್ಧವಾಗಿದೆ. ರಾಜವಂಶದ ಮೂಲಪುರುಷ ಯದುರಾಯರು ತಮ್ಮ ರಾಜ್ಯಸ್ಥಾಪನೆಗೆ ಪ್ರಥಮ ಪೂಜೆಯನ್ನು ಈ ದೇವಾಲಯದಲ್ಲಿ ಮಾಡಿದರೆಂದು ಪ್ರತೀತಿ ಇದೆ.

## ಕೋಡಿ ಸೋಮೇಶ್ವರಸ್ವಾಮಿ ದೇವಾಲಯ

ಈ ದೇವಾಲಯದಲ್ಲಿ ಚೋಳ ರಾಜನಿಂದ ಕೋಡಿಸೋಮೇಶ್ವರ ಲಿಂಗ ಪ್ರತಿಷ್ಠಾಪನೆಗೊಂಡಿದೆ ಎಂಬ ಪ್ರತೀತಿ ಇದೆ. ಇದು ಸಾಮಾನ್ಯವಾದ ಆಲಯವಾಗಿದ್ದು, ಕೋಡಿ

ಭೈರವೇಶ್ವರ ದೇವಾಲಯದ ಎಡಮಗ್ಗುಲಿನಲ್ಲಿದೆ. ತಳಭಾಗದಲ್ಲಿರುವ ದೇವರ ಲಿಂಗದ ಎತ್ತರ ಸುಮಾರು ಒಂದುವರೆ ಅಡಿಯಷ್ಟಿದೆ. ಈ ದೇವಾಲಯದ ಶಿಲ್ಪ, ವಾಸ್ತುಗಳ ದೃಷ್ಟಿಯಿಂದ ಆಕರ್ಷಣೀಯವಾಗೇನಿಲ್ಲ. ಇದರ ಕಾಲದ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಇದು ಮೊದಲಿಗೆ ಪುಟ್ಟ ಗರ್ಭಗುಡಿಯಂತಿದ್ದು, ಕಾಲಾನಂತರದಲ್ಲಿ ವಿಸ್ತೃತಗೊಂಡಿರಬೇಕು. ಈ ದೇವಾಲಯದ ಮತ್ತೊಂದು ಪ್ರತೀತಿ ಎಂದರೆ ಒಳ್ಳೆಯ ಕೆಲಸಕ್ಕಾಗಿ, ಒಳ್ಳೆಯ ಉದೇಶಗಳನ್ನು ಹೊಂದಿ ಹರಕೆಯನ್ನು ಕಟ್ಟಿಕೊಂಡರೆ ಅದು ಕ್ಷಿಪ್ರಗತಿಯಲ್ಲಿ ಸಾಧ್ಯವಾಗುತ್ತದೆ ಎಂಬುದಾಗಿ ನಂಬಿದ್ದಾರೆ. ನವರಾತ್ರಿಯ ಸಮಯದಲ್ಲಿ ಮಹಾನವಮಿ(ಆಯುಧಪೂಜೆ) ದಿನ ಗಜಾಶ್ವ, ಬೆಳ್ಳಿರಥ, ಫಿರಂಗಿ ಸಹಿತ 32ಆಯುಧಗಳನ್ನು ಮೆರವಣಿಗೆಯಲ್ಲಿ ಈ ದೇವಸ್ಥಾನಕ್ಕೆ ತಂದು ಮಹಾರಾಜರು ಪೂಜೆ ಮಾಡುತ್ತಿದ್ದರೆಂದು ದೇವಾಲಯದ ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

## ತ್ರಿನಯನೇಶ್ವರಸ್ವಾಮಿ ದೇವಾಲಯ

ಈ ದೇವಾಲಯವು ಮೊದಲು ಅರಮನೆಯ ಕೋಟೆಯ ಹೊರಗಿತ್ತು. ಇದು ಯದುರಾಯರ ಕಾಲಕ್ಕಿಂತಲು ಪ್ರಾಚೀನವಾದುದು. ಏಕೆಂದರೆ ಯದುರಾಯರು ಕೋಟೆಗೆ ಬಂದು ನೆಲೆಸುವ ಮೊದಲೇ ಈ ದೇವಾಲಯ ನೆಲೆಗೊಂಡಿತ್ತು. ಇದನ್ನು ಕೋಟೆಯ ಒಳಕ್ಕೆ ಸ್ಥಳಾಂತರಿಸಿ ಕೈಸಾಲೆಯಲ್ಲಿ ಪಂಚಲಿಂಗಗಳೊಂದಿಗೆ ದಕ್ಷಿಣಾಮೂರ್ತಿ, ಕ್ಷೇತ್ರಪಾಲ, ಕುಮಾರಸ್ವಾಮಿ, ಸೂರ್ಯನಾರಾಯಣ ಪ್ರತಿಮೆಗಳನ್ನು ಸ್ಥಾಪಿಸಿದ್ದು ರಣಧೀರ ಕಂಠೀರವ ನರಸರಾಜರು. ಭಾರಿಗಾತ್ರದ ತ್ರಿನಯನೇಶ್ವರ ಲಿಂಗದ ಎತ್ತರ ಸುಮಾರು ಮೂರು ಅಡಿ. ಮಹಾಶಿವರಾತ್ರಿ ದಿನ ಇದಕ್ಕೆ ಮಾಡುವ ಬಂಗಾರದ ಕೊಳಗದ ಅಲಂಕಾರ ಅಪೂರ್ವವಾದುದು. ಚಾಮುಂಡೇಶ್ವರಿ ಅಮ್ಮನವರನ್ನೂ ರಣಧೀರ ಕಂಠೀರವ ನರಸರಾಜರೇ ಸ್ಥಾಪಿಸಿದ್ದು. ದೇವಾಲಯಕ್ಕೆ 27ಅಂಕಣಗಳ ಕಲ್ಲುಮಂಟಪ, ಗಣಪತಿ, ವೃಷಭ ಸಹಿತವಾದ ಶಿಲಾಸ್ತಂಭ, ಮಹಾದ್ವಾರದ ಏಳುನೆಲೆಯ ಗೋಪುರ, ಪಂಚವಿಂಶತಿ ಲೀಲಾಮೂರ್ತಿ ವಿಗ್ರಹಗಳ ಸೇರ್ಪಡೆಯಾದದ್ದು ದೊಡ್ಡದೇವರಾಜರಿಂದ.

ಈ ದೇವಾಲಯಕ್ಕೆ ಸಂಬಂಧಿಸಿದಂತೆ ಒಂದು ಸ್ಥಳಪುರಾಣವಿದೆ. ತೃಣಬಿಂದು ಎಂಬ ಋಷಿ ತಪ್ಪಸ್ಸು ಮಾಡಿದ್ದು ಇದೇ ಸ್ಥಳದಲ್ಲೆ. ಆದ್ದರಿಂದಲೇ ಈ ಲಿಂಗಕ್ಕೆ ತೃಣೇಶ್ವರನೆಂಬ ಹೆಸರೂ ಇದೆ. ಶಿವ ಮುಕ್ಕಣ್ಣನಾದುದರಿಂದ ತ್ರಿನಯನೇಶ್ವರ ಎಂಬುದು ಸರಿಹೊಂದುತ್ತದೆ. ಈ ಲಿಂಗಕ್ಕೆ ಮೊದಲ ಅಭಿಷೇಕ ಮಾಡಿ ಅದನ್ನು ಸ್ಥಾಪಿಸದನೆನ್ನಲಾದ ತೃಣಬಿಂದುವಿನ ಮೂರ್ತಿಯೂ ಇಲ್ಲಿ ಇದೆ. ಈ ದೇವಾಲಯದ ಮಹಾದ್ವಾರದ ಮೇಲಣ ಉತ್ತುಂಗ ಗೋಪುರ 18ನೇಯ

ಶತಮಾನದ ಕೊನೆಯಲ್ಲಿ ನಾಶವಾಗಿದೆ. ಪಶ್ಚಿಮಾಭಿಮುಖವಾಗಿರುವ ಶಿವ ಶ್ರೇಷ್ಠನೆಂದು ಜನಪದರ ನಂಬಿಕೆಯಾಗಿದೆ. ದೀಪಾವಳಿ ಹಾಗೂ ಶಿವರಾತ್ರಿಯಂದು ದೇವಾಲಯದಲ್ಲಿ ಮೂರ್ತಿಗೆ ಚಿನ್ನದ ಕೊಳಗವನ್ನು ತೊಡಿಸಿ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ಪೂಜೆಯಲ್ಲಿ ಇಂದಿನ ರಾಜಮನೆತನದವರು ಭಾಗಿಯಾಗುವುದು ವಿಶೇಷವಾಗಿದೆ.

## ಮಹಾಬಲೇಶ್ವರ ದೇವಾಲಯ

ಚಾಮುಂಡಿ ಬೆಟ್ಟದಲ್ಲಿರುವ ಮಹಾಬಲೇಶ್ವರ ದೇವಾಲಯವು ನಗರದ ಎಲ್ಲಾ ದೇವಾಲಯಗಳಿಗಿಂತ ಪಾರಂಪರಿಕವಾದುದು. ಈ ದೇವಾಲಯ ಪೂರ್ವಾಭಿಮುಖವಾಗಿದ್ದು, ಪ್ರವೇಶದ್ವಾರ ಮಂಟಪದಸಹಿತ ಪ್ರಾಕಾರಗೋಡೆಯನ್ನು ಹೊಂದಿದೆ. ಇಲ್ಲಿನ ಅರ್ಚಕರ ವಶದಲ್ಲಿರುವ ಕ್ರಿ.ಶ.17ನೇಶತಮಾನದ ಹಸ್ತ ಪ್ರತಿಯಲ್ಲಿ ಈ ಬೆಟ್ಟವನ್ನು ಮಹಾಬಲಾದ್ರಿ ಅಥವಾ ಮಹಾಬಲ ಕ್ಷೇತ್ರವೆಂದು ಕರೆಯಲಾಗಿದೆ. ಹಯವದನರಾವ್‌ರವರು ದೇವಾಲಯದ ಬಿಲ್ವವೃಕ್ಷದ ಬಳಿ ಎರಡು ಶಾಸನಗಳಿದ್ದು ಅವು ತಲಕಾಡಿನ ಗಂಗರ ಕಾಲಕ್ಕೆ ಸೇರಿದವು ಅವುಗಳಲ್ಲಿ ಮಹಾಬಲೇಶ್ವರ ದೇವಾಲಯವನ್ನು ಉಲ್ಲೇಖಿಸಿರುವುದರಿಂದ ಈ ದೇವಾಲಯದ ಕಾಲ ಕ್ರಿ.ಶ. ಸುಮಾರು 950ಎಂದು ತಿಳಿಸಿದ್ದಾರೆ. ಆದರೆ ಇತ್ತೀಚೆಗೆ ದೇವಾಲಯದ ಪ್ರಾಕಾರವನ್ನು ದುರಸ್ಥಿ ಮಾಡುವ ಸಂದರ್ಭದಲ್ಲಿ ಪ್ರಾಚೀನ ಶಾಸನಗಳು ಕಂಡುಬರುತ್ತಿಲ್ಲ.

ಈ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಚ್ಚಿದ ಮಂಟಪವನ್ನು ಹೊಂದಿದೆ. ಗರ್ಭಗೃಹವು ಚೌಕಕಾರವಾಗಿದ್ದು ಅದರ ಗೋಡೆಯನ್ನು ನಯವಲ್ಲದ ಕಲ್ಲಿನಿಂದ ನಿರ್ಮಿಸಲಾಗಿದೆ. ಗರ್ಭಗೃಹದ ಮೇಲಿನ ಶಿಖರ ಹತ್ತು ಅಡಿ ಎತ್ತರವಿದ್ದು, ಇಟ್ಟಿಗೆ ಮತ್ತು ಗಾರೆಗಳಿಂದ ರಚಿಸಲ್ಪಟ್ಟಿದೆ. ಇದು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ರಚನೆಯಾಗಿದೆ. ಹೊಯ್ಸಳ ವಿಷ್ಣುವರ್ಧನನು ಈ ದೇವಾಲಯಕ್ಕೆ ಗ್ರಾಮವೊಂದನ್ನು ದತ್ತಿಬಿಟ್ಟಿದ್ದಾನೆ. ಹಾಗೆಯೇ ಮೈಸೂರು ಅರಸರು ಸಹ ಅನೇಕ ಕೊಡುಗೆಗಳನ್ನು ನೀಡಿದ್ದಾರೆ. "ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತು ಪಟ್ಟದ ಮಹಿಷಿ ಕೃಷ್ಣವಿಲಾಸ ಸನ್ನಿದಾನ ಅವರು ಅನೇಕ ಕಾಣಿಕೆಗಳನ್ನು ನೀಡಿದ್ದಾರೆ"[6] ಚಾಮುಂಡಿ ಬೆಟ್ಟದಲ್ಲಿ ನಡೆಯುವ ಪ್ರತಿಯೊಂದು ಹಬ್ಬ, ಉತ್ಸವ, ಜಾತ್ರೆಯಂದು ಭಕ್ತರು ಈ ದೇವಾಲಯಕ್ಕೂ ಬೇಟಿನೀಡಿ ಪೂಜೆ ಸಲ್ಲಿಸುತ್ತಾರೆ.

## ಚಂದ್ರಮೌಳೇಶ್ವರ ದೇವಾಲಯ (ಕಾಳಿದಾಸ ರಸ್ತೆ ಕೆ.ಇ.ಬಿ ಸರ್ಕಲ್)

ಈ ದೇವಾಲಯ ನಗರದಲ್ಲಿರುವ ಚಂದ್ರಮೌಳೇಶ್ವರ ದೇವಾಲಯಗಳಲ್ಲೇ ಬಹಳ ವಿಶೇಷತೆಯಿಂದ ಕೂಡಿದ ದೇವಾಲಯವಾಗಿದೆ. 1942ರಲ್ಲಿ ಟ್ರಸ್ಟ್‌ವತಿಯಿಂದ ಈ ದೇವಾಲಯ

ಸ್ಥಾಪನೆಯಾಗಿದೆ. ಇಲ್ಲಿ ವಿಶೇಷವಾಗಿ ಮೂರು ಗರ್ಭಗುಡಿಗಳಿದ್ದು, ಮಧ್ಯದಲ್ಲಿ ಚಂದ್ರಮೌಳೇಶ್ವರನ ಲಿಂಗ ಹಾಗೂ ಅದರ ಎದುರಿಗೆ ನಂದಿಯ ವಿಗ್ರಹವಿದೆ. ಗರ್ಭಗುಡಿಯ ಬಲಕ್ಕೆ ಗಣಪತಿ ಹಾಗೂ ಎಡಗಡೆ ಅಮ್ಮನವರ ಸನ್ನಿದಿ ಇದೆ. ದೇವಾಲಯದ ಪ್ರಾಂಗಣದಲ್ಲಿ ನವಗ್ರಹ, ಸುಬ್ರಹ್ಮಣ್ಯ ದತ್ತಾತ್ರೇಯ ಗುಡಿಗಳಿವೆ. ಗರ್ಭಗುಡಿಯ ಎದುರು ಸುಮಾರು ಹದಿಮೂರು ಅಡಿ ಎತ್ತರದ ಮರದ ಧ್ವಜಸ್ತಂಭವಿದ್ದು, ಹಿತ್ತಾಳೆಯ ಕವಚದ ಹೊದಿಕೆಯನ್ನು ಹಾಕಲಾಗಿದೆ. ಇದರ ಮೇಲೆ ಸುತ್ತಲು ತ್ರಿಶೂಲ, ಗಣೇಶ, ನಂದಿ ಹಾಗೂ ಸುಬ್ರಹ್ಮಣ್ಯ ದೇವರುಗಳ ಮೂರ್ತಿಯ ಕೆತ್ತನೆ ಇದೆ. ಚಂದ್ರಮೌಳೇಶ್ವರನಿಗೆ ಬೆಳ್ಳಿಯ ಕವಚ ಮಾಡಿಸಲಾಗಿದ್ದು, ವಿಶೇಷ ದಿನಗಳಲ್ಲಿ ತೊಡಿಸಲಾಗುತ್ತದೆ.

ದ್ವಾದಶಲಿಂಗ ಸ್ಥಾಪನೆ ಮಾಡಿರುವುದೇ ಈ ದೇಗುಲದ ಪ್ರಾಧಾನ್ಯತೆ ಹೆಚ್ಚಲು ಕಾರವಾಗಿದೆ. ಇದರಿಂದ ದೇಶದ ನಾನಾ ಭಾಗಗಳಲ್ಲಿರುವ ದ್ವಾದಶಲಿಂಗಗಳ ದರ್ಶನವು ಭಕ್ತರಿಗೆ ಒಂದೇ ಕಡೆ ಒದಗಿದಂತಾಗುತ್ತದೆ. ಜ್ಯೋತಿರ್ಲಿಂಗ ಇರುವ ದೇವಾಲಯಗಳ ಲಿಂಗಗಳ ಮಾದರಿಯಲ್ಲಿಯೇ ಸಾಲಾಗಿ ಎರಡು ಕಡೆ(ಪ್ರಕಾರದಲ್ಲಿ)ಗಳಲ್ಲಿ ಪ್ರತಿಷ್ಠಾಪಿಸಲಾಗಿದೆ. ಆಯಾ ಜ್ಯೋತಿರ್ಲಿಂಗ ಇರುವ ದೇವಾಲಯಗಳ ಗೋಪುರದ(ಶೈಲಿ) ಮಾದರಿಯಲ್ಲೇ ಗೋಪುರಗಳನ್ನು ನಿರ್ಮಿಸಲಾಗಿದೆ. ಇಲ್ಲಿ ಸ್ಥಾಪನೆಯಾಗಿರುವ ಜ್ಯೋತಿರ್ಲಿಂಗಗಳು ಇಂತಿವೆ.

| | |
|---|---|
| ಓಂಕಾರೇಶ್ವರ | ಮಾಳವ, ಮಧ್ಯಪ್ರದೇಶ. |
| ಮಲ್ಲಿಕಾರ್ಜುನ | ಶ್ರೀಶೈಲ, ಆಂಧ್ರ. |
| ಸೋಮನಾಥ | ಸೌರಾಷ್ಟ್ರ, ಗುಜರಾತ್. |
| ಮಹಾಕಾಲ | ಉಜ್ಜಯಿನಿ, ಮಧ್ಯಪ್ರದೇಶ. |
| ರಾಮನಾಥ | ರಾಮೇಶ್ವರ, ತಮಿಳುನಾಡು. |
| ತ್ರ್ಯಂಬಕೇಶ್ವರ | ನಾಸಿಕ್. |
| ಕಾಶಿವಿಶ್ವನಾಥ | ವಾರಣಾಸಿ. |
| ಕೇದಾರನಾಥ | ಹಿಮಾಲಯದ ಉತ್ತರಖಂಡ. |
| ನಾಗೇಶ್ವರ | ಗೋಮತಿದಾರುಕ, ಗುಜರಾತ್. |

| | |
|---|---|
| ವೈದ್ಯನಾಥ | ಚಿತಾಭೂಮಿ ಸಡೀಸ್, ಬಿಹಾರ. |
| ಭೀಮಾಶಂಕರ | ಸಹ್ಯಾದ್ರಿಯ ಧಾಕಿನಿ, ಮಹಾರಾಷ್ಟ್ರ. |
| ಘೃಶ್ನೇಶ್ವರ | ಔರಂಗಬಾದ್, ಮಹಾರಾಷ್ಟ್ರ. |

ದ್ವಾದಶ ಲಿಂಗಗಳ ದರ್ಶನ ಭಾಗ್ಯ ಈ ದೇವಾಲಯದ ಪ್ರಮುಖ ಆಕರ್ಷಣೆಯಾಗಿದೆ. ಇದರ ಸಮೀಪದಲ್ಲೇ ನಾಗಗಳ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಗಿದೆ. ಕಾರ್ತಿಕ ಸೋಮವಾರ ಮತ್ತು ಶಿವರಾತ್ರಿಯಂದು ವಿಶೇಷ ಪೂಜೆಗಳು ನಡೆಯುತ್ತವೆ. ಶಿವರಾತ್ರಿಯ ದಿನ ಮೈಲೂದೂರದ ಉದ್ದನೆಯ ಸಾಲು ನಿಂತು, ಲಿಂಗಗಳ ದರ್ಶನ ಭಾಗ್ಯ ಪಡೆಯುವ ಜನಸ್ತೋಮವಿರುತ್ತದೆ. ಪ್ರತಿವರ್ಷ ಜೂನ್–ಜುಲೈನಲ್ಲಿ ಬ್ರಹ್ಮರಥೋತ್ಸವ ಅತ್ಯಂತ ವಿಜೃಂಭಣೆಯಿಂದ ನಡೆಯುತ್ತದೆ. ಪ್ರವಾಸಿಗರೂ ಸಹ ಭೇಟಿ ನೀಡುವ ದೇವಾಲಯಗಳಲ್ಲಿ ಈ ದೇವಾಲಯವು ಒಂದಾಗಿದೆ.

## ಶ್ರೀ ಚಂದ್ರಮೌಳೇಶ್ವರ ದೇವಾಲಯ(ನಾರಾಯಣಶಾಸ್ತ್ರಿ ರಸ್ತೆ)

ಈ ದೇವಾಲಯವು ನೂರುವರ್ಷಗಳಿಗೂ ಪ್ರಾಚೀನವಾದ ಪರಂಪರೆಯನ್ನು ಹೊಂದಿರುವ ದೇವಾಲಯವಾಗಿದೆ. ಮೂರು ಗರ್ಭಗುಡಿಗಳನ್ನು ಹೊಂದಿದೆ. ಗರ್ಭಗುಡಿಯ ಎದುರಿಗೆ ಸುಮಾರು ಹದಿನೈದು ಅಡಿ ಎತ್ತರವಿರುವ ಮರದ ಧ್ವಜಸ್ತಂಭವನ್ನು ನಿರ್ಮಿಸಲಾಗಿದ್ದು, ಅದರ ಪೀಠದಲ್ಲಿ ಹಿತ್ತಾಳೆಯ ದೇವರ ಪಾದುಕೆಗಳಿವೆ. ಈ ದೇವಾಲಯದಲ್ಲಿ ಆರಿದ್ರಾ ನಕ್ಷತ್ರ ಬರುವ ಹಿಂದಿನ ದಿನ (ಡಿಸೆಂಬರ್–ಜನವರಿ) ಅಂಧಕಾಸುರ ಸಂಹಾರ ಆಚರಣೆ ಮತ್ತು ಕಾರ್ತಿಕ ಉತ್ಸವ ವಿಜೃಂಭಣೆಯಿಂದ ನಡೆಯುತ್ತದೆ.

## ಚಂದ್ರಮೌಳೇಶ್ವರ ದೇವಾಲಯ (ಕೆ.ಜಿ.ಕೊಪ್ಪಲು)

ಮೈಸೂರು ನಗರದ ಸರಸ್ವತಿಪುರಂ, ಕೆ.ಜಿ.ಕೊಪ್ಪಲಿನ ಕಾಂತರಾಜ ಅರಸ್ ಮುಖ್ಯ ರಸ್ತೆಯಲ್ಲಿರುವ ಚಂದ್ರಮೌಳೇಶ್ವರ ದೇವಾಲಯವನ್ನು ಸುಮಾರು 1900ನೇ ಇಸವಿಯಲ್ಲಿ ಅದೇ ಗ್ರಾಮದ ಲೇಟ್ ಬುಂಡೆ ಮಾದೇಗೌಡರ ಮಕ್ಕಳಾದ ಸಾಹುಕಾರ್ ವಸ್ತಾದ್ ಲಿಂಗೇಗೌಡರು, ಜಮೀನ್ದಾರರಾದ ಪುಟ್ಟೇಗೌಡರು ಮತ್ತು ಹೆಸರಾಂತ ಫೈಲ್ವಾನ್ ಚಿಕ್ಕೈದೇಗೌಡರು ಇವರುಗಳು ಸೇರಿ ದೇವಾಲಯದ ಜಾಗವನ್ನು ಮೈಸೂರಿನ ವಿಶ್ವಸ್ಥ ಮಂಡಳಿಯವರಿಂದ ಮೊದಲನೇ ಮಗನ ಹೆಸರಿನಲ್ಲಿ ದೇವಾಲಯದ ಅಭಿವೃದ್ಧಿ ಕಾರ್ಯಕ್ಕಾಗಿ ಖರೀದಿಸಲಾಗಿತ್ತು. ಆದರೆ ದೇವಾಲಯದ

ಮುಂಭಾಗದಲ್ಲಿ ರಸ್ತೆಕಾರ್ಯಕ್ಕೆ ಸ್ವಲ್ಪ ಜಾಗವನ್ನು ಸರ್ಕಾರ ವಶಕ್ಕೆ ಪಡೆದು ಪರಿಹಾರವಾಗಿ 16,000/–ರೂಪಾಯಿಗಳನ್ನು ನೀಡಿತು. ಆ ಹಣವನ್ನು ಸಹ ದೇವಸ್ಥಾನದ ಕಾರ್ಯಕ್ಕೆ ವಿನಿಯೋಗಿಸಲಾಗಿದೆ.

1965ರಲ್ಲಿ ಚಂದ್ರಮೌಳೇಶ್ವರ ದೇವಾಲಯವನ್ನು ಜಗದ್ಗುರು ಶಿವರತ್ನಪುರಿ ಭಗವತಾಚಾರ್ಯ ತಿರುಚಿ ಮಹಾಸ್ವಾಮಿ, ಬೆಂಗಳೂರು ಇವರಿಂದ ಶಂಕುಸ್ಥಾಪನೆ ಮಾಡಿಸಲಾಗಿದೆ. ಈ ದೇವಾಲಯದ ಆವರಣವು ಪೂರ್ವಪಶ್ಚಿಮವಾಗಿ 450ಅಡಿಗಳು, ಉತ್ತರದಕ್ಷಿಣವಾಗಿ 225ಅಡಿಗಳಿದೆ. ಇದು ಅತ್ಯಂತ ಪಾರಂಪರಿಕವಾದ ಹಾಗೂ ಪ್ರಸಿದ್ಧವಾದ ದೇವಾಲಯವಾಗಿದ್ದು, ಗರ್ಭಗುಡಿಯಲ್ಲಿ ನಾಲ್ಕು ಅಡಿ ಎತ್ತರದ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗುಡಿಯ ಬಲಭಾಗದಲ್ಲಿ ತಲಾ ಎರಡುವರೆ ಅಡಿ ಎತ್ತರವಿರುವ ಗಣಪತಿ ಮತ್ತು ಸುಬ್ರಹ್ಮಣ್ಯ ಸ್ವಾಮಿಯನ್ನು, ಎಡಭಾಗದಲ್ಲಿ ಪಾರ್ವತಿ ಅಮ್ಮನವರ ಮೂರ್ತಿಯನ್ನು ಸ್ಥಾಪಿಸಲಾಗಿದೆ. ಗರ್ಭಗುಡಿಯ ಮುಂಭಾಗದಲ್ಲಿ ಅಂದರೆ ಶಿವಲಿಂಗಕ್ಕೆ ಎದುರಾಗಿ ನಂದಿಯ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಬಹುಭಾಗ ಚಪ್ಪಡಿಯ ಕಲ್ಲಿನಿಂದಲೇ ವಿನ್ಯಾಸಗೊಳಿಸಲಾಗಿದೆ. ದೇವಾಲಯದ ಮುಂಭಾಗದಲ್ಲಿ ಎಂಟು ಅಡಿ ಎತ್ತರವಿರುವ ನಂದಿಕಂಭವನ್ನು, ಹಿಂಭಾಗದಲ್ಲಿ ಚಂಡಿಕೇಶ್ವರಸ್ವಾಮಿ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಗೋಪುರದ ಮಧ್ಯಭಾಗದಲ್ಲಿ ಈಶ್ವರ, ಪಾರ್ವತಿ ಮತ್ತು ಗಣಪತಿ ಮೂರ್ತಿಗಳನ್ನು, ಅವರ ಪಾದದ ಕೆಳಗೆ ಬಸವ ಮೂರ್ತಿಯನ್ನು ಸ್ಥಾಪಿಸಲಾಗಿದೆ.

ದೇವಾಲಯದ ಹೊರ ಆವರಣದ ಬಲಭಾಗದಲ್ಲಿ ನವಗ್ರಹ ಪ್ರತಿಮೆಗಳನ್ನು ಸ್ಥಾಪಿಸಿ ಪ್ರತ್ಯೇಕ ಗುಡಿಯನ್ನು ನಿರ್ಮಿಸಲಾಗಿದೆ. ಹಿಂಭಾಗ ಮತ್ತು ಎಡಭಾಗದಲ್ಲಿ ದೊಡ್ಡ ಅರಳಿಮರದ ಕೆಳಗೆ ನಾಗರಕಲ್ಲುಗಳನ್ನು ಸ್ಥಾಪಿಸಲಾಗಿದೆ. ಈ ನವಗ್ರಹ ಮತ್ತು ನಾಗರಕಲ್ಲುಗಳಿಗೆ ಧನುರ್ಮಾಸದಂದು ಭಕ್ತಾದಿಗಳು ವಿಶೇಷ ಪೂಜೆಯನ್ನು ಸಲ್ಲಿಸುತ್ತಾರೆ. ದೇವಾಲಯದ ಆವರಣದಲ್ಲಿ ಕಲ್ಯಾಣಿ ಅಂದರೆ ದೇವರ ಕೊಳ ಎಂಬ ಕೊಳವಿದ್ದು, ಅದರಲ್ಲಿ ನೀರು ಯಾವಾಗಲೂ ತುಂಬಿರುತ್ತಿತ್ತು. ಕೆ.ಜಿ.ಕೊಪ್ಪಲಿನ ಭಕ್ತಾದಿಗಳು ಯಾವುದೇ ಶುಭಕಾರ್ಯ ಮಾಡಿದರೂ ಆ ಕೊಳದ ನೀರನ್ನು ಪೂಜಿಸಿ ಮುಂದುವರೆಯುತ್ತಿದ್ದರು. ಆದರೇ ಇತ್ತೀಚೆಗೆ ಈ ಕೊಳದಲ್ಲಿದ್ದ ನೀರು ಬತ್ತಿಹೋಗಿದೆ. ಈ ದೇವಾಲಯದಲ್ಲಿ ಪ್ರತಿ ಹಬ್ಬದಂದು ಅಂದರೆ ಮಹಾಶಿವರಾತ್ರಿ, ದೀಪಾವಳಿ, ಕಾರ್ತಿಕ ಮಾಸ ಮುಂತಾದ ಹಬ್ಬಗಳ ದಿನದಂದು ಸ್ವಾಮಿಗೆ ವಿಶೇಷ ಅಲಂಕಾರ ಮತ್ತು ಪೂಜೆಯನ್ನು ನಡೆಸಲಾಗುತ್ತದೆ.

## ಅಗ್ರಹಾರದ ನೂರೊಂದುಗಣಪತಿ ದೇವಾಲಯ:

ಈ ದೇವಾಲಯವನ್ನು 1955ರಲ್ಲಿ ಸ್ಥಾಪಿಸಲಾಗಿದೆ. ನೂರು ಚಿಕ್ಕ ಚಿಕ್ಕ ಗಣಪತಿಯ ವಿಗ್ರಹವನ್ನು ಮೆಟ್ಟಿಲಾಕಾರದ ಪೀಠದ ಸುತ್ತಲೂ ಸ್ಥಾಪಿಸಿ ಮಧ್ಯದಲ್ಲಿ ಬೃಹದಾಕಾರದ ಗಣಪತಿಯ ವಿಗ್ರಹವನ್ನು ಸ್ಥಾಪಿಸಲಾಗಿದೆ. ಈ ದೇವಾಲಯ ಜನಸಂದಣಿಯಿರುವ ಪ್ರದೇಶದಲ್ಲಿರುವುದರಿಂದ ಭಕ್ತರ ಆಕರ್ಷಣೆಯ ಕೇಂದ್ರವಾಗಿದೆ. ಪ್ರತಿದಿನವೂ ಸಾವಿರಾರು ಭಕ್ತರು ದೇವರ ದರ್ಶನಕ್ಕೆ ಬರುವುದು ಕಂಡುಬರುತ್ತದೆ. ಯಾವುದೇ ಧಾರ್ಮಿಕ ವಿಧಿ ವಿಧಾನಗಳಲ್ಲಾದರೂ ಗಣಪತಿಗೆ ಮೊದಲ ಪೂಜೆ ಸಲ್ಲುತ್ತದೆ. ಏಕೆಂದರೆ ವಿಘ್ನಗಳನ್ನು ನಿವಾರಿಸುವ ದೇವರು ಎಂಬ ನಂಬಿಕೆಯನ್ನು ಹೊಂದಿದೆ. ಅಲ್ಲದೆ ಹೊಸ ವಾಹನಗಳನ್ನು ಕೊಂಡಾಗ ಮೊದಲು ನೂರೊಂದುಗಣಪತಿ ದೇವಾಲಯದಲ್ಲಿ ಪೂಜೆ ಮಾಡಿಸಿದರೆ ಅದರಿಂದ ವಾಹನಕ್ಕೆ ಹಾಗೂ ವಾಹನ ಚಲಾಯಿಸುವವರಿಗೆ ಯಾವುದೆ ತೊಂದರೆ ಆಗದಂತೆ ಗಣಪತಿಯು ಕಾಪಾಡುತ್ತಾನೆಂಬ ನಂಬಿಕೆ ಮೈಸೂರು ನಗರದ ಜನರಲ್ಲಿ ಹಿಂದಿನಿಂದಲೂ ಇದೆ. ಶುಕ್ರವಾರದ ದಿನ ಈ ದೇವಾಲಯದಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ. ವಿನಾಯಕ ಚೌತಿಯ ದಿನ ಮತ್ತು ಇತರ ವಿಶೇಷ ದಿನಗಳಲ್ಲಿ ಧಾರ್ಮಿಕ ಕಾರ್ಯಗಳು ನಡೆಯುತ್ತಲೇ ಇರುತ್ತವೆ.

## ಅರಮನೆ ಕೋಟೆಗಣಪತಿ:

ಅರಮನೆಯ ಕೋಟೆಗೆ ಸೇರಿದಂತೆ ಬಲರಾಮ– ಜಯರಾಮ ದ್ವಾರದಲ್ಲಿರುವ ಆಂಜನೇಯ ದೇಗುಲದ ಸಮೀಪದಲ್ಲಿ ಈ ಕೋಟೆಗಣಪತಿ ದೇವಾಲಯ ಇದೆ. ಈ ದೇವಾಲಯ ಹೆಚ್ಚು ಪ್ರಸಿದ್ಧಿ ಹಾಗೂ ಜನಪ್ರಿಯವಾಗಲು ಕಾರಣವೆಂದರೆ ಭಕ್ತರ ಬೇಡಿಕೆಗಳು ಬೇಗ ಈಡೇರುತ್ತವೆಂಬ ಪಾರಂಪರಿಕವಾಗಿ ಉಳಿಸಿಕೊಂಡು ಬಂದಿರುವ ನಂಬಿಕೆಯಾಗಿದೆ. ಭಕ್ತರು ಹರಕೆಯನ್ನು ಕಟ್ಟಿಕೊಂಡು ಅದು ಈಡೇರಿದರೆ ಬೆಣ್ಣೆಸೇವೆ ಮಾಡಿಸುತ್ತಾರೆ. ಇದು ಹಿಂದಿನಿಂದಲು ನಡೆದು ಬಂದಿರುವ ಪದ್ಧತಿಯಾಗಿದೆ. ಈ ದೇಗುಲದ ಎದುರಿಗಿರುವ ಸುಮಾರು ನಲವತ್ತು ಅಡಿ ಎತ್ತರದ ಗರುಡಗಂಬವನ್ನು ಬೆಳಗೊಳದ ಭಕ್ತವತ್ಸಲ ದೇಗುಲದ ಮುಂದೆ ಇದ್ದುದನ್ನು ಕಾಲಾನಂತರದಲ್ಲಿ ಇಲ್ಲಿಗೆ ತಂದು ಸ್ಥಾಪಿಸಲಾಗಿದೆ.

## ಬೃಂದಾವನ ಬಡಾವಣೆಯ ಮಹಾಗಣಪತಿ ದೇಗುಲ

ಮೈಸೂರು ನಗರದ ಪ್ರಮುಖ ದೇವಾಲಯಗಳಲ್ಲಿ ಇದು ಕೂಡ ಒಂದಾಗಿದೆ. 1976ರಲ್ಲಿ ಮೃತ್ಯುಂಜಯ ಎಂಬುವವರು ದಳವಾಯಿ ತೋಟದಲ್ಲಿ ಸಂಗ್ರಹಿಸಿದ್ದ ವಿಗ್ರಹಗಳಾದ ಬಸವಣ್ಣ,

ಚಿಕ್ಕಗಣಪತಿ, ಲಕ್ಷ್ಮೀನಾರಾಯಣ, ನಾಗಪ್ಪ, ಸೂರ್ಯ ಮುಂತಾದ ವಿಗ್ರಹಗಳನ್ನು ಬೃಂದಾವನ ಬಡಾವಣೆಯ ಸ್ಥಳಿಯರಿಗೆ ನೀಡಿದರು. ಅವುಗಳನ್ನು ಮೊದಲು ಮಂಗಳೂರು ಹಂಚಿನ ಒಂದು ಚಿಕ್ಕ ಮನೆಯಲ್ಲಿ ಪ್ರತಿಷ್ಠಾಪಿಸಿದರು. ಅನಂತರ ದೇವಾಲಯ ಸಮೀತಿಯೊಂದನ್ನು ರಚಿಸಿ ದೇಣಿಗೆಯನ್ನು ಸಂಗ್ರಹಿಸಿ ಬಂದ ಹಣದಿಂದ 1990 ಜೂನ್ 3ರಂದು ಹೊಸ ದೇವಾಲಯವನ್ನು ನಿರ್ಮಿಸಿ ಅಲ್ಲಿ ಈ ವಿಗ್ರಹ ಪ್ರತಿಷ್ಠಾಪಿಸಲಾಯಿತು. ಈ ವಿಗ್ರಹಗಳು ಬಹಳ ಪ್ರಾಚೀನ ಕಾಲದವುಗಳಾಗಿದ್ದು, ಇವುಗಳ ಜೊತೆಗೆ ಮಹಾಬಲಿಪುರದಿಂದ ಕೋದಂಡರಾಮ, ವೆಂಕಟೇಶ್ವರ ಪದ್ಮಾವತಿ (ಸೂರ್ಯ ಗ್ರಹವನ್ನು ಬಿಟ್ಟು) ಉಳಿದ ಎಂಟು ಗ್ರಹಗಳ ವಿಗ್ರಹಗಳನ್ನು ತಂದು ಪ್ರತಿಷ್ಠಾಪಿಸಲಾಗಿದೆ.

ಈ ದೇವಾಲಯದಲ್ಲಿರುವ ಈಶ್ವರ ಲಿಂಗ ಓಂಕಾರೇಶ್ವರ ಜೇನುತುಪ್ಪದ ಲಿಂಗ. ಇದನ್ನು ಸತ್ಯನಾರಾಯಣ ವಟವಾಲ್ ಎಂಬುವವರಿಂದ ಪಡೆಯಲಾಗಿದೆ. ನರ್ಮದ ನದಿಯಿಂದ ತಂದಿರುವ ಈ ವಿಗ್ರಹಕ್ಕೆ ಉಳಿ ಏಟು ಬಿದ್ದಿಲ್ಲ. ಅದ್ದರಿಂದಲೇ ಇದನ್ನು "ಬಾಣಲಿಂಗ"[7] ಎಂಬುದಾಗಿ ಕರೆಯುವುದಾಗಿ ತಿಳಿಸಲಾಗಿದೆ. ಈ ಲಿಂಗದಲ್ಲಿ ವಿಭೂತಿ ಪಟ್ಟೆ ಇದೆ ಅದು ಪ್ರತಿಷ್ಠಾಪನೆಯ ಸಮಯದಲ್ಲಿ ಗರ್ಭಗುಡಿಯಲ್ಲಿ ಬಹಳ ಕತ್ತಲು ಆವರಿಸಿದ್ದು ವಿಭೂತಿಪಟ್ಟೆ ಇದ್ದ ಭಾಗವು ಹಿಂಬದಿಗೆ ಬರುವಂತೆ ಪ್ರತಿಷ್ಠಾಪಿಸಲಾಗಿದೆ[8] ಎಂದು ಹೇಳಲಾಗುತ್ತಿದೆ. ಕಾರ್ತಿಕಮಾಸ, ಗಣೇಶ ಚತುರ್ಥಿ, ಶರನ್ನವರಾತ್ರಿ, ವಾರ್ಷಿಕೋತ್ಸವ ಮುಂತಾದ ಧಾರ್ಮಿಕ ಚಟುವಟಿಕೆಗಳು ವಿಜೃಂಭಣೆಯಿಂದ ಜರುಗುತ್ತವೆ. ಶರನ್ನವರಾತ್ರಿಯ ಒಂಬತ್ತು ದಿನಗಳಲ್ಲಿ ವಿವಿಧ ಪೂಜೆಗಳು ದೇವರ ಅಲಂಕಾರಗಳು ನಡೆಯುತ್ತವೆ. ಹತ್ತನೆಯ ದಿನ ರಾಜಬೀದಿಯಲ್ಲಿ ಉತ್ಸವ ಹಾಗೂ ಶಮೀಪೂಜೆ ನಡೆಯುತ್ತವೆ. ಆಗಾಗ ಈ ದೇವಾಲಯದಲ್ಲಿ ಹೋಮ ಹವನಾದಿಗಳು ನಡೆಯುತ್ತಿರುತ್ತವೆ.

## ಪಂಚಮುಖಿ ಗಣಪತಿ ದೇಗುಲ

ಈ ದೇವಾಲಯವು ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿದ್ದು, 1985ರಲ್ಲಿ ನಿರ್ಮಾಣವಾದ, ವರ್ತುಲಾಕಾರದ ಚಿಕ್ಕದಾದ ಚೊಕ್ಕವಾಗಿರುವ ದೇವಾಲಯವಾಗಿದೆ. ಗಣಪತಿಗೆ ಐದು ಮುಖಗಳಿರುವುದರಿಂದ ಪಂಚಮುಖಿ ಗಣಪತಿ ಎಂದೇ ಪ್ರಸಿದ್ಧವಾಗಿದೆ. ಹತ್ತು ಕೈಗಳುಳ್ಳ ಗಣೇಶನ ಪ್ರತಿಮೆ ಅತ್ಯಂತ ಸುಂದರ ಕೆತ್ತನೆಯಿಂದ ಕೂಡಿದೆ. ಈ ವಿಗ್ರಹವು ಸುಮಾರು ನಾಲ್ಕು ಅಡಿ ಎತ್ತರವಾಗಿದೆ. ಕೈಯಲ್ಲಿ ವಿವಿಧ ಆಯುಧಗಳು, ಮೋಧಕ ಹಾಗೂ ಅಭಯಹಸ್ತ ನೀಡುತ್ತಿರುವ ಭಂಗಿಯು ಇದೆ.

## ಭಕ್ತಗಣಪತಿ ದೇವಾಲಯ

ಈ ದೇವಾಲಯ ಸುಮಾರು 18–19ವರ್ಷಗಳ ಹಿಂದೆ ಹೆಬ್ಬಾಳು ಮೊದಲನೇ ಹಂತದಲ್ಲಿ ಸ್ಥಾಪನೆಯಾಗಿದೆ. ಈ ವೇಳೆಯಲ್ಲಿ ಮೊದಲಿಗೆ ಸುಮಾರು ನಾಲ್ಕು ಅಡಿ ಎತ್ತರದ ಗಣಪತಿಯ ವಿಗ್ರಹ ಮಾತ್ರ ಸ್ಥಾಪನೆಯಾಗಿ, ಕ್ರಮೇಣ ಈಶ್ವರ, ಅನ್ನಪೂರ್ಣೇಶ್ವರಿ, ಆಂಜನೇಯ ವಿಗ್ರಹಗಳನ್ನು ಪ್ರತ್ಯೇಕ ಗುಡಿಗಳಲ್ಲಿ ಪ್ರತಿಷ್ಠಾಪಿಸಲಾಗಿದೆ. ಈ ದೇವಾಲಯದ ಪ್ರಮುಖ ಆಕರ್ಷಣೆ ಎಂದರೆ ವೃಕ್ಷ ನವಗ್ರಹ ದೇವಾಲಯ. ವೃಕ್ಷ ನವಗ್ರಹ ಮತ್ತು ರಾಶಿಗಳ ಸ್ಥಾಪನೆ ನಗರದಲ್ಲೇ ಬಹಶಃ ಪ್ರಥಮವಾಗಿದ್ದು, ಪ್ರತಿ ಗ್ರಹಕ್ಕೂ ಆಯಾ ಗ್ರಹಕ್ಕೆ ಸಂಬಂಧಪಟ್ಟ ಮರಗಳನ್ನು(ವೃಕ್ಷ) ನೆಟ್ಟು ಕೆಳಗೆ ಚಿಕ್ಕ ಚಿಕ್ಕ ಗುಡಿಗಳನ್ನು ಕಟ್ಟಿ ಅದರಲ್ಲಿ ಗ್ರಹಗಳ ಸ್ಥಾಪನೆ ಮಾಡಲಾಗಿದೆ. ಇದರ ಪಕ್ಕದಲ್ಲಿ ಹನ್ನೆರಡು ರಾಶಿಗಳನ್ನು ಸ್ಥಾಪಿಸಲಾಗಿದೆ.

## ಇಷ್ಟಾರ್ಥಸಿದ್ಧಿ ಸಂಕಷ್ಟಹರಗಣಪತಿ ದೇವಾಲಯ

ಮೈಸೂರು ನಗರದ, ಕನ್ನೇಗೌಡನ ಕೊಪ್ಪಲು, ಸರಸ್ವತಿಪುರಂ ಎಂಟನೆ ಕ್ರಾಸ್, ಮುಖ್ಯ ರಸ್ತೆಯಲ್ಲಿ 'ಇಷ್ಟಾರ್ಥಸಿದ್ಧಿ ಸಂಕಷ್ಟಹರಗಣಪತಿ ದೇವಾಲಯ'ವಿದ್ದು ಸುಮಾರು 300ವರ್ಷಗಳ ಹಿಂದೆ ಈ ಜಾಗವು 'ಬಸಪ್ಪನಕಟ್ಟೆ' ಎಂದು ಹೆಸರುವಾಸಿಯಾಗಿದ್ದು, ಈ ಗ್ರಾಮದ ಯಜಮಾನ್ ಕ್ಯಾತಪ್ಪನವರು ಅರಳಿಕಟ್ಟೆ ಮತ್ತು ನಾಗರಕಲ್ಲನ್ನು ನಿರ್ಮಿಸಿ ಪೂಜೆ ಸಲ್ಲಿಸುತ್ತಿದ್ದರು. ಅನಂತರ ಅಲ್ಲಿ ಯಾರು ಪೂಜೆ ಸಲ್ಲಿಸದ ಕಾರಣ ಆ ಗಣಪತಿ ವಿಗ್ರಹವನ್ನು ಅಲ್ಲೇ ಇರುವ ಸಿದ್ದಪ್ಪಾಜಿ ದೇವಾಲಯಕ್ಕೆ ಸ್ಥಳಾಂತರಿಸಲಾಯಿತು. ಅನಂತರ ಕಾರಣಾಂತರದಿಂದ ಮತ್ತೆ ಹಳೆಯ ಜಾಗದಲ್ಲಿ ಒಂದು ಗುಡಿಯನ್ನು ನಿರ್ಮಿಸಿ ಗಣಪತಿ ವಿಗ್ರಹವನ್ನು ತಂದು ಪ್ರತಿಷ್ಠಾಪಿಸಲಾಯಿತು. ಹಾಗೂ 2000ನೇ ವರ್ಷದಲ್ಲಿ ಗ್ರಾಮದ ಯುವಕರು, ಯಜಮಾನರು ಸೇರಿಕೊಂಡು ಎಚ್.ಎನ್.ಹನುಮಂತು ಅವರ ಅಧ್ಯಕ್ಷತೆಯಲ್ಲಿ ದೇವಾಲಯದ ಜೀರ್ಣೋದ್ಧಾರ ಮಾಡಿಸಿ, ಪ್ರತಿನಿತ್ಯ ಪೂಜೆಯನ್ನು ನೆರವೇರಿಸಿಕೊಂಡು ಬರಲಾಗುತ್ತಿದೆ.

ಈ ದೇವಾಲಯದ ವಿಸ್ತೀರ್ಣವು ಉತ್ತರ ದಕ್ಷಿಣವಾಗಿ ಹನ್ನೆರಡು ಅಡಿಗಳು, ಪೂರ್ವಪಶ್ಚಿಮವಾಗಿ ಹದಿನಾಲ್ಕು ಅಡಿಗಳಿದ್ದು, ದೇವಾಲಯದ ಗರ್ಭಗುಡಿಯಲ್ಲಿ ಮೂರು ಅಡಿ ಎತ್ತರದ ಪಾಣಿ ಮೆಟ್ಟಿಲುಗಳ ಮೇಲೆ ಮೂರು ಅಡಿ ಎತ್ತರದ ಬಾಲಗಣಪತಿ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಈ ದೇವಾಲಯದ ಗರ್ಭಗುಡಿಯಲ್ಲಿ ಬಾಲಗಣಪತಿ ವಿಗ್ರಹವನ್ನು ಬಿಟ್ಟರೆ ಗರ್ಭಗುಡಿ ಅಕ್ಕಪಕ್ಕ ಯಾವುದೇ ವಿಗ್ರಹವು ಕಂಡುಬರುವುದಿಲ್ಲ. ದೇವಾಲಯದ ಹಿಂಭಾಗದಲ್ಲಿ

ಅರಳಿಮರ ಮತ್ತು ಮರದ ಕೆಳಗೆ ನಾಗರಕಲ್ಲನ್ನು ಪೂಜಿಸಲಾಗುತ್ತಿದೆ ಹಾಗೂ ಬಲಭಾಗದಲ್ಲಿ ನವಗ್ರಹ ಪ್ರತಿಮೆಗಳನ್ನು ಪ್ರತಿಷ್ಠಾಪಿಸಲಾಗಿರುವ ಚಿಕ್ಕಗುಡಿಯಿದೆ.

ಈ ದೇವಾಲಯವು ಚೋಳರ ಕಾಲದ ಆದಿದ್ರಾವಿಡ ಶೈಲಿಯಲ್ಲಿದೆ. ಇಲ್ಲಿನ ಬಾಲಗಣಪತಿ ವಿಗ್ರಹವನ್ನು ಬಳಪದ ಶಿಲೆಯಿಂದ ನಿರ್ಮಿಸಲಾಗಿದೆ. ಹಾಗೂ ಗರ್ಭಗುಡಿಯ ಬಾಗಿಲನ್ನು ತೇಗದ ಮರದಿಂದ ಅತ್ಯಂತ ಸುಂದರವಾಗಿ ನಿರ್ಮಿಸಲಾಗಿದೆ. ಈ ಬಾಗಿಲ ಎಡ–ಬಲಭಾಗಗಳಲ್ಲಿ ವಿಶೇಷವಾದ ಐದು ವಿಭಿನ್ನ ಗಣಪತಿ ಭಂಗಿಗಳನ್ನು ಕೆತ್ತಲಾಗಿದ್ದು, ಬಾಗಿಲ ಮೇಲ್ಭಾಗದಲ್ಲಿ ಈಶ್ವರ, ಪಾರ್ವತಿ ಮತ್ತು ಗಣಪತಿಯ ಭಂಗಿಯನ್ನು ಕೆತ್ತಲಾಗಿದೆ.

## ಗಣಪತಿ ದೇವಾಲಯ(ಕಾಮಾಕ್ಷಿ ಆಸ್ಪತ್ರೆ ಆವರಣ)

ವೈಜ್ಞಾನಿಕವಾಗಿ ಎಷ್ಟೇ ಮುಂದುವರೆದಿದ್ದರು ಮಾನವ ಪಾರಂಪರಿಕವಾಗಿ ನಂಬಿಕೆ ಮತ್ತು ಆಚರಣೆಗಳನ್ನು ನಡೆಸಿಕೊಂಡೆ ಬರುತ್ತಿದ್ದಾನೆ. ಇದಕ್ಕೆ ಉದಾಹರಣೆಯಾಗಿ ಕಾಮಾಕ್ಷಿ ಆಸ್ಪತ್ರೆಯ ಆವರಣದಲ್ಲಿರುವ ಗಣೇಶ ದೇವಾಲಯದಲ್ಲಿ ನಂಬಿಕೆ, ಆಚರಣೆಯ ಪೂಜೆ ಪುನಸ್ಕಾರಗಳು ನಡೆಯುತ್ತಿವೆ. ಮಾಧವಶಣೈರವರು ಆಸ್ಪತ್ರೆಯನ್ನು ಕಟ್ಟಬೇಕೆಂಬ ಮಹದಾಸೆಯಿಂದ 1971ರಲ್ಲಿ ಭೂಮಿಯನ್ನು ಖರೀದಿಮಾಡಿ ಖಾತೆಯನ್ನು ಮಾಡಿಸಿ 1972ರಲ್ಲಿ ಮೊದಲು ಗಣೇಶ ದೇವಾಲಯವನ್ನು ಅಮೃತ ಶಿಲೆಯಿಂದ ಕಟ್ಟಿಸಿ ಅನಂತರ ಆಸ್ಪತ್ರೆಯನ್ನು ಕಟ್ಟಿಸಿದರು ಇದರಿಂದ ತಿಳಿಯುವುದೇನೆಂದರೆ ಆಸ್ಪತ್ರೆ ವೈಜ್ಞಾನಿಕತೆಗೆ ಸಾಕ್ಷಿಯಾದರೂ ಅದನ್ನು ಕಟ್ಟುವ ಮುನ್ನವೇ ಗಣೇಶ ದೇವಾಲಯವನ್ನು ಕಟ್ಟಿಸಿದ್ದು ಅವರ ನಂಬಿಕೆಯ ಪ್ರತೀಕವೇ ಆಗಿದೆ. ಏಕೆಂದರೆ ಆಸ್ಪತ್ರೆ ಕಟ್ಟುವ ಮುನ್ನವೇ ದೇವಾಲಯ ಕಟ್ಟಿಸಿದರೆ ಮುಂದೆ ಯಾವುದೇ ತೊಂದರೆಗಳು ಉದ್ಭವಿಸುವುದಿಲ್ಲ ಹಾಗೂ ಮುಂದೆ ಎಲ್ಲವೂ ಒಳ್ಳೆಯದೇ ಆಗಲಿ ಎಂಬ ಹಂಬಲದೊಂದಿಗೆ ಆರಂಭವಾದದ್ದು, 1973ರಲ್ಲಿ ಆಸ್ಪತ್ರೆ ನಿರ್ಮಾಣ ಸುಗಮವಾಗಿ ನೆರವೇರಿ ಜನಸಾಮಾನ್ಯರ ಸೇವೆಗೆ ಮುಕ್ತವಾಗಿ ಇಂದಿಗೆ 46 ವರ್ಷಗಳು ಸಂದಿವೆ.[9]

ದೇವಾಲಯ ಬೆಳಗ್ಗೆ 8.15 ರಿಂದ 12.15 ರವರೆಗೆ ಮತ್ತು ಸಂಜೆ 6 ರಿಂದ 9 ಗಂಟೆಯವರೆಗೆ ತೆರೆದಿರುತ್ತದೆ. ಭಕ್ತಾದಿಗಳು ತಮಗೆ ಎದುರಾಗಿರುವ ಕಷ್ಟಗಳಿಗೆ ಎದೆಗುಂದದೆ ತಮ್ಮ ಏಕಾಗ್ರತೆಯನ್ನು ಕಾಪಾಡಿಕೊಳ್ಳಲು ದ್ಯಾನಸ್ಥಳವಾಗಿ ಹಾಗೂ ದೇವರಲ್ಲಿ ಮೊರೆ ಹೋಗುವ ಸ್ಥಳವಾಗಿ ಹರಕೆಗಳನ್ನು ಕಟ್ಟಿಕೊಂಡು ಬೇಡಿಕೊಳ್ಳುತ್ತಾರೆ.

**ಹರಕೆಗಳು**

- ಆಸ್ಪತ್ರೆಗೆ ಬಂದ ರೋಗಿಯ ಕಡೆಯವರು ರೋಗ ಗುಣವಾದರೆ ಬೆಲ್ಲದಾರತಿಯನ್ನು ತುಪ್ಪದಲ್ಲಿ ಮಾಡುವುದಾಗಿ ಹರಸಿಕೊಳ್ಳುತ್ತಾರೆ. ಅಲ್ಲದೆ ಈ ದೇವಾಲಯದಲ್ಲಿ ಕರ್ಪೂರ ಹಚ್ಚುವುದು ನಿಷಿದ್ಧ. ಆರತಿಯನ್ನು ತುಪ್ಪದಿಂದ ಹಚ್ಚಿದ ದೀಪದಿಂದಲೇ ಮಾಡಲಾಗುತ್ತದೆ.
- ರೋಗ ಗುಣವಾದರೆ ವಿವಿಧ ಹಣ್ಣುಗಳಿಂದ ಅಲಂಕರಿಸುತ್ತೇನೆ ಎಂದು ಹರಕೆ ಹೊತ್ತು ರೋಗ ಗುಣವಾದಾಗ ಬಂದು ಗಣೇಶನ ಮೂರ್ತಿಗೆ ಹಣ್ಣುಗಳಿಂದ ಅಲಂಕರಿಸಿ ಹರಕೆ ತೀರಿಸಿ ಹೋಗುತ್ತಾರೆ.
- ದೇವಾಲಯದ ಮುಂಭಾಗದಲ್ಲಿ ನಿಂಬೆಹಣ್ಣಿನ ದೀಪ ಹಚ್ಚುವುದಾಗಿ ಹರಸಿಕೊಂಡು ಒಳ್ಳೆಯದಾದಾಗ ಬಂದು ನಿಂಬೆಹಣ್ಣಿನ ದೀಪ ಹಚ್ಚುತ್ತಾರೆ.

ಈ ಮೇಲಿನ ಹರಕೆಗಳನ್ನು ಗಮನಿಸಿದರೆ ಕಷ್ಟಬಂದಾಗ ದೇವರ ಮೊರೆಹೋಗುವುದು ಸಾಮಾನ್ಯವಾಗಿದೆ. ಅಲ್ಲದೆ ಕಷ್ಟಗಳು ಪರಿಹಾರವಾದಾಗ ಹರಕೆಗಳನ್ನು ತೀರಿಸುವುದನ್ನು ಕಾಣಬಹುದಾಗಿದೆ.

## ಮಹಾಗಣಪತಿ ದೇವಾಲಯ(ಅಪೋಲೋ ಆಸ್ಪತ್ರೆ ಆವರಣ)

ಈ ದೇವಾಲಯ ಸುಮಾರು ಮೂರು ವರ್ಷಗಳ ಹಿಂದೆ ಕಟ್ಟಲಾಗಿದೆ ಎಂದು ದೇವಾಲಯದ ಅರ್ಚಕರಾದ ಶ್ರೀನಿಧಿ ಅಯ್ಯಂಗಾರ್‌ರವರು ಮಾಹಿತಿ ನೀಡಿರುತ್ತಾರೆ. ಈ ದೇವಾಲಯವು ಅಪೋಲೋ ಆಸ್ಪತ್ರೆಯ ಒಳ ಆವರಣದಲ್ಲಿದ್ದು ಪ್ರವೇಶದ್ವಾರದ ಎಡಭಾಗದಲ್ಲಿ ಸೂರ್ಯಾಭಿಮುಖವಾಗಿದೆ. ಇದು ಇತ್ತೀಚೆಗೆ ಅಂದರೆ 2015ರಲ್ಲಿ ನಿರ್ಮಾಣವಾದ ದೇವಾಲಯವಾದರೂ, ವೈಜ್ಞಾನಿಕವಾಗಿ ಚಿಕಿತ್ಸೆ ನೀಡುವ ಸ್ಥಳದಲ್ಲಿ ದೇವಾಲಯ ಕಟ್ಟಿರುವುದಕ್ಕೆ ದೇವರ ಮೇಲಿನ ನಂಬಿಕೆಯೇ ಕಾರಣವಾಗಿದೆ.

ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾದವರ ಕಡೆಯವರು ಮಹಾಗಣಪತಿಯ ಮೊರೆಹೋಗುವುದು ಸಾಮಾನ್ಯವಾಗಿ ಕಂಡುಬರುವ ದೃಶ್ಯವಾಗಿದೆ. ಬೇಗ ಗುಣಮುಖ ವಾಗಲೆಂದು ಹಲವಾರು ರೀತಿಯ ಹರಕೆಗಳನ್ನು ಕಟ್ಟಿಕೊಳ್ಳುತ್ತಾರೆ. ಗುಣಮುಖವಾದಾಗ ಬಂದು ಹರಕೆ ತೀರಿಸುತ್ತಾರೆ.

**ಹರಕೆಗಳು**

- ಗುಣಮುಖವಾದರೆ ತುಪ್ಪದ ಅಭಿಷೇಕ ಮಾಡಿಸುತ್ತೇನೆ ಎಂದು ಹರಕೆ ಕಟ್ಟಿಕೊಳ್ಳುವುದು

* ಹೂವಿನ ಅಲಂಕಾರ ಮಾಡಿಸುವುದಾಗಿ ಹರಕೆ ಹೊರುವುದು.
* ದೀಪಗಳಿಗೆ ಎಣ್ಣೆ ಕೊಡಿಸುವುದಾಗಿ ಹರಕೆ ಹೊರುವುದು.
* ದವಸ ಧಾನ್ಯಗಳನ್ನು, ವಸ್ತ್ರಗಳನ್ನು ದಾನಮಾಡುವುದಾಗಿ ಹರಕೆ ಹೊರುವುದು.
* ಬೆಲ್ಲದಾರತಿ ಮಾಡಿಸುವುದಾಗಿ ಹರಕೆ ಹೊರುವುದು.
* ಪಂಚಾಮೃತ ಮಾಡಿಸುವುದಾಗಿ ಹರಕೆ ಹೊರುತ್ತಾರೆ.

ಪ್ರತಿನಿತ್ಯ ಒಂದಲ್ಲಾ ಒಂದು ಹರಕೆ ತೀರಿಸುವ ಪ್ರಕ್ರಿಯೆಯಿಂದ ದೇವಾಲಯದಲ್ಲಿ ಪ್ರತಿದಿನ ವಿಶೇಷವಾಗಿ ಪೂಜೆ-ಪುನಸ್ಕಾರಗಳು ನೆರವೇರುತ್ತಿರುತ್ತವೆ. ಅಲ್ಲದೆ ಅಲ್ಲಿಯ ಅರ್ಚಕರಾದ ಶ್ರೀನಿಧಿ ಅಯ್ಯಂಗಾರ್‌ರವರು ಭಕ್ತರ ಸಮಸ್ಯೆಗಳನ್ನು ಆಲಿಸಿ ಅವರ ರಾಶಿ ಮತ್ತು ನಕ್ಷತ್ರಗಳ ಆಧಾರದ ಮೇಲೆ ದೋಷ ಪರಿಹಾರಾರ್ಥವಾಗಿ ಹಲವಾರು ಪರಿಹಾರೋಪಾಯ ಗಳನ್ನು ತಿಳಿಸುವರು.

ಒಟ್ಟಾರೆಯಾಗಿ ಮೈಸೂರು ನಗರದ ಆಸ್ಪತ್ರೆಗಳು ಎಷ್ಟೇ ವೈಜ್ಞಾನಿಕವಾಗಿ ಮುಂದುವರೆದಿದ್ದರೂ ಆಸ್ಪತ್ರೆಯ ಆವರಣದಲ್ಲಿ, ಪ್ರವೇಶದ್ವಾರದಲ್ಲಿ ಒಂದಲ್ಲಾ ಒಂದು ದೇವರ ಚಿಕ್ಕಗುಡಿಗಳನ್ನು ಕಟ್ಟಿ ಪ್ರತಿದಿನ ಪೂಜಿಸುತ್ತಿರುವುದನ್ನು ಕಾಣಬಹುದಾಗಿದೆ. ಪಾರಂಪರಿಕವಾಗಿ ನಂಬಿ ಪೂಜಿಸಿಕೊಂಡು ಬಂದಿರುವುದೇ ಇದಕ್ಕೆ ಕಾರಣವಾದರೂ, ಎಲ್ಲೋ ಒಂದು ಕಡೆ ದೇವಾಲಯಗಳು ಮನಸ್ಸಿಗೆ ಶಾಂತಿ ನೆಮ್ಮದಿಯನ್ನು ನೀಡುತ್ತವೆ ಹಾಗೂ ನಮ್ಮನ್ನು ಸಮಸ್ಯೆಯಿಂದ ಪಾರುಮಾಡುತ್ತವೆ ಎಂಬ ಬಲವಾದ ಮಾನಸಿಕ ನಂಬಿಕೆಯೇ ಇದಕ್ಕೆ ಕಾರಣವಾಗಿರಬುಹುದಾಗಿದೆ.

## ನನ್ನೇಶ್ವರ ದೇವಾಲಯ

ಈ ದೇವಾಲಯವು ಚೋಳ-ಗಂಗರ ಕಾಲದ್ದಾಗಿದ್ದು, ವಿಶಾಲವಾದ ಪ್ರದೇಶದಲ್ಲಿ ಪೂರ್ವಾಭಿಮುಖವಾಗಿ ನಿರ್ಮಿಸಲಾಗಿದೆ. ಈ ದೇವಾಲಯವನ್ನು ಕುರಿತಂತೆ ಅರ್ಚಕರಾದ 76 ವರ್ಷದ ನಾಗಪ್ಪನವರು 'ಹಿನಕಲ್‌ನಂಥ ಊರಿಲ್ಲ, ನನ್ನೇಶ್ವರನಂಥ ದೇವರಿಲ್ಲ' ಎಂಬ ಮಾತು ಪಾರಂಪರಿಕವಾಗಿ ಬಂದಿರುವ ನಾಣ್ನುಡಿಯಾಗಿದೆ ಎಂದು ಹೇಳುತ್ತಾರೆ. ಗರ್ಭಗುಡಿ, ಅಂತರಾಳ, ನವರಂಗ ಗಂಗರ ಕಾಲದಲ್ಲಿ ನಿರ್ಮಾಣಗೊಂಡಿದೆ. ಮುಖಮಂಟಪ ಮತ್ತು ಪ್ರಕಾರ ಹೊಯ್ಸಳರ ಶೈಲಿಯಲ್ಲಿದೆ. ಗರ್ಭಗೃಹದ ಮೇಲಿರುವ ವಿಮಾನ ಶಿಖರವು ಇವರ ಕಾಲದಲ್ಲಿಯೇ ಜೀರ್ಣೋದ್ಧಾರಗೊಂಡಿದೆ. ಚಿಕ್ಕದಾದ ಗರ್ಭಗೃಹದಲ್ಲಿರುವ ಶಿವಲಿಂಗವು ಪಾಣಿಪೀಠಸೇರಿದಂತೆ

ಸುಮಾರು ಐದು ಅಡಿ ಎತ್ತರವಿದೆ. ಲಿಂಗವು ಗೋಳಾಕಾರವಾಗಿದ್ದು ಪೀಠವು ಚೌಕಾಕಾರವಾಗಿದೆ. ಅಂತರಾಳ ವಿಶಾಲವಾಗಿದ್ದು ಅದರ ರಚನೆಯು ಗಂಟೆಸರಗಳಿಂದ ಕೂಡಿರುವುದರಿಂದ ಇದನ್ನು ಗಂಗರ ಕಾಲದ್ದೆಂದು ಗುರುತಿಸಬಹುದಾಗಿದೆ. ನವರಂಗದ ಬಲಪಾರ್ಶ್ವದಲ್ಲಿ ಗಂಗರ ಕಾಲದ ಸಪ್ತಮಾತೃಕೆಯ ವಾಹನ ಸಮೇತವಾದ ಶಿಲ್ಪಾಕೃತಿಗಳಿವೆ. ಎಡಪಾರ್ಶ್ವದಲ್ಲಿ ಅಪರೂಪದ ಮಹಿಷಾಸುರ ಮರ್ಧಿನಿಯ ಮನಮೋಹಕವಾದ ವಿಗ್ರಹವಿದ್ದು, ಅದು ಮಹಿಷನನ್ನು ಮರ್ಧಿಸುತ್ತಿರುವಂತೆ ಕಡೆಯಲಾಗಿದೆ. ದೇವಾಲಯದ ಪ್ರಾಂಗಣದಲ್ಲಿ ಶಾಸನ ಸಮೇತ ನಂದಿಯ ಶಿಲ್ಪವನ್ನು ಕಡೆಯಲಾಗಿದ್ದು ಅದು ಈಗ ತ್ರುಟಿತವಾಗಿದೆ. ಇದರ ಪಕ್ಕದಲ್ಲಿರುವ ಮತ್ತೊಂದು ಶಾಸನವು ದೇವಾಲಯದ ನಂದಾದೀವಿಗೆಗೆಂದು ಎಣ್ಣೆಗಾಣವನ್ನು ದಾನವಾಗಿ ಕೊಟ್ಟಿರುವ ಕುರುಹಾಗಿದೆ. ಶಿವರಾತ್ರಿ, ದೀಪಾವಳಿ ಮುಂತಾದ ದಿನಗಳಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ. ದೇವಾಲಯದ ಬಳಿಯ ಕಲ್ಯಾಣಿಯನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡಿಸಲಾಗಿದೆ. ಇಲ್ಲಿ ಕಾರ್ತಿಕ ಮಾಸದಲ್ಲಿ ಲಕ್ಷ ದೀಪೋತ್ಸವ ನಡೆಸಲಾಗುತ್ತದೆ.

## ಧನ್ವಂತರಿ ಚಿದಂಬರೇಶ್ವರ ದೇವಾಲಯ

1886ರಲ್ಲಿ ನಿರ್ಮಾಣವಾದ ಚಿದಂಬರೇಶ್ವರ ದೇವಾಲಯವು ನಗರದ ಪ್ರಾಚೀನ ದೇವಾಲಯಗಳಲ್ಲಿ ಒಂದಾಗಿದ್ದು, ಧನ್ವಂತರಿ ರಸ್ತೆಯಲ್ಲಿದೆ. ಚಿದಂಬರ ಸ್ವಾಮಿಯ ಜೊತೆಯಲ್ಲಿ ಗಣಪತಿ, ಪಾರ್ವತಿ ಹಾಗೂ ಶ್ರೀ ಸೀತಾ, ರಾಮ, ಲಕ್ಷ್ಮಣ, ಹನುಮಂತನ ವಿಗ್ರಹವೂ ಇದೆ. ಗಣಪತಿಯ ಗುಡಿಯ ಮುಂದೆ ಕಮಲದಲ್ಲಿ ಕುಳಿತಿರುವ ಲಕ್ಷ್ಮಿಪಾರ್ವತಿ ಗುಡಿಯಿದೆ. ಗರ್ಭಗುಡಿಯ ಬಾಗಿಲ ಇಕ್ಕೆಲಗಳಲ್ಲಿ ದ್ವಾರಪಾಲಕರ ವಿಗ್ರಹಗಳಿವೆ. ಮೂಲ ದೇವರ ಹಿಂಭಾಗದಲ್ಲಿರುವ ಗಣೇಶ ವಿಗ್ರಹ ಪ್ರಕಾರದ ಹಿಂದೆ ಚಂಡಿಕೇಶ್ವರ, ಉತ್ತರ ದಿಕ್ಕಿನ ಸೂರ್ಯನಾರಾಯಣ ಮತ್ತು ದಕ್ಷಿಣ ಮೂರ್ತಿ ಈ ಎಲ್ಲಾ ವಿಗ್ರಹಗಳು ದೇವಾಲಯ ಪ್ರಾರಂಭವಾದಾಗಲೆ ಕೆತ್ತಿಸಿದವುಗಳಾಗಿವೆ. ಈ ದೇವಾಲಯದಲ್ಲಿ ಪತ್ನಿಸಮೇತರಾಗಿರುವ ನವಗ್ರಹಗಳು ಬಹಶಃ ಮೈಸೂರಿನಲ್ಲೇ ಪ್ರಾಚೀನವಾದುದಾಗಿದೆ.

## ಜೋಡಿ ಬಸವೇಶ್ವರ ದೇವಾಲಯ

ಚೋಳರ ಕಾಲದ್ದು ಎನ್ನಲಾಗುವ ಈ ದೇವಾಲಯ ಕುವೆಂಪುನಗರದ ಅನಿಕೇತನ ರಸ್ತೆಯಲ್ಲಿದೆ. ನಾಲ್ಕು ಕಂಭಗಳುಳ್ಳ ಸರಳ ದೇವಾಲಯ ಇದಾಗಿದ್ದು ಶಿಥಿಲವಾಗಿದ್ದ ಈ

ದೇವಾಲಯವನ್ನು ಪುನಃ ಚಿಕ್ಕದಾಗಿ ನಿರ್ಮಿಸಲಾಗಿದೆ. ಇದರಲ್ಲಿ ಒಂದು ಬಸವ ಕಳುವಾಗಲಾಗಿ ಮತ್ತೊಂದನ್ನು ಈಗ ಕಡೆದು ನಿಲ್ಲಿಸಲಾಗಿದೆ.

## ನಾಗರಲಿಂಗ ಮಠ ಮತ್ತು ದೇಗುಲ

ರಾಮಾನುಜ ರಸ್ತೆಯಲ್ಲಿರುವ ನಾಗರಲಿಂಗ ಮಠ ಮತ್ತ ದೇಗುಲವನ್ನು ಶಿಲ್ಪಿ ಸಿದ್ಧಲಿಂಗಸ್ವಾಮಿಗಳು ಸ್ವಂತವಾಗಿ ಕಟ್ಟಿಸಿದುದಾಗಿದೆ. ಇದು 115 ವರ್ಷಗಳ ಪ್ರಾಚೀನತೆಯನ್ನು ಹೊಂದಿದೆ ಎಂದು ಅವರ ವಂಶಸ್ಥರು ತಿಳಿಸುತ್ತಾರೆ. 15*8ಅಡಿ ವಿಸ್ತೀರ್ಣವುಳ್ಳ ಗರ್ಭಗುಡಿಯಲ್ಲಿ ಒಂದು ಅಡಿ ಶಿವಲಿಂಗವನ್ನು ಮರದ ಮಂಟಪದೊಳಗೆ ಪ್ರತಿಷ್ಠಾಪಿಸಲಾಗಿದೆ. ಗರ್ಭಗುಡಿಯ ಮೇಲ್ಛಾವಣಿಯನ್ನು ಮರದಿಂದ ಮಾಡಲಾಗಿದೆ. ಈಶ್ವರನ ಜಟಾಮುಕುಟ ಪಂಚಲೋಹದಿಂದ ಮಾಡಲಾಗಿದ್ದು ಅದರ ಮುಂದೆ ಹಿತ್ತಾಳೆಯ ನಂಜುಂಡ ಶಿವಯೋಗಿ ಹಾಗೂ ಹಿತ್ತಾಳೆಯಿಂದ ಮಾಡಿದ ನಂದಿಯ ವಿಗ್ರಹವಿದೆ. ಈ ದೇವಾಲಯಕ್ಕೆ ಭಕ್ತರ ಆಗಮನ ತೀರಾ ವಿರಳವಾಗಿದ್ದು, ಶಿವರಾತ್ರಿ ಹಾಗೂ ಗಣೇಶ ಚತುರ್ಥಿ ಹಬ್ಬಗಳಲ್ಲಿ ವಿಶೇಷ ಪೂಜೆ ನಡೆಸಲಾಗುತ್ತದೆ. ಅಂದು ಮಾತ್ರ ಭಕ್ತರ ಸಂಖ್ಯೆ ಹೆಚ್ಚಿರುತ್ತದೆ.

## ಭೋಗೇಶ್ವರ ದೇವಾಲಯ

ಚೋಳ ಗಂಗದೇವನ ಕಾಲದ್ದೆನ್ನಲಾಗುವ ಈ ದೇವಾಲಯವು ಹಳೆ ಬೋಗಾದಿ ವರ್ತುಲ ರಸ್ತೆಯಲ್ಲಿದೆ. ಈ ದೇವಾಲಯದ ಜಗಲಿಕಟ್ಟೆಯ ಮೇಲೆ ಚೋಳ ಗಂಗದೇವನ 13ನೇ ಆಳ್ವಿಕೆಯ ವರ್ಷದ ಶಾಸನ ಒಂದು ಇದ್ದುದ್ದಾಗಿ ಎಫಿಗ್ರಾಫಿಯಾ ಕರ್ನಾಟಕದ 5ನೇ ಸಂಪುಟದಲ್ಲಿ ದಾಖಲಿಸಿದೆ. ಆದರೆ ಇಂದು ಅಲ್ಲಿ ಯಾವ ಶಾಸನವೂ ಇಲ್ಲ. ಈ ದೇವಾಲಯ ಸುಮಾರು 11ನೇ ಶತಮಾನದ್ದಾಗಿದ್ದು ಪ್ರಾಚೀನ ದೇಗುಲಗಳಲ್ಲಿ ಪ್ರಮುಖವೆನಿಸಿದೆ.

## ಮರುಳೇಶ್ವರ ದೇವಾಲಯ

ಚೋಳರ ಕಾಲದ್ದೆಂದು ಹೇಳಲಾಗುವ ಮರುಳೇಶ್ವರ ದೇವಾಲಯವು ಕೆ.ಜಿ.ಕೊಪ್ಪಲಿನಲ್ಲಿದೆ. ಇದನ್ನು ಮಳಲವಾಡಿ ಮರುಳೇಶ್ವರ ಎಂದೂ ಕರೆಯಲಾಗುತ್ತದೆ. ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಿರುವ ಲಿಂಗವು ಸಾಲಿಗ್ರಾಮ ಶಿಲೆಯಿಂದ ಮಾಡಿದುದಾಗಿದೆ. ಅದರ ಎದುರಿಗೆ ಒಂದು ಚಿಕ್ಕ ನಂದಿಯನ್ನು ಹಜಾರದಲ್ಲಿ ಸ್ಥಾಪಿಸಲಾಗಿದೆ. ಇದೇ ದೇವಾಲಯದಲ್ಲಿ ಸುಬ್ರಹ್ಮಣ್ಯ, ಗಣೇಶ, ಪಾರ್ವತಿ ವಿಗ್ರಹಗಳನ್ನು ಪ್ರತಿಷ್ಠಾಪನೆ ಮಾಡಲಾಗಿದೆ. ಅರ್ಚಕರು

ವಂಶಪಾರಂಪರ್ಯದಿಂದ ಬಂದವರಾಗಿದ್ದು ಪ್ರಸ್ತುತ 14ನೇ ತಲೆಮಾರಿನವರಾದ ಲೋಕೇಶ್‌ರವರು ಅರ್ಚಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

## ಸುಬ್ರಹ್ಮಣ್ಯಸ್ವಾಮಿ ದೇವಾಲಯ(ಮಕ್ಕಾಜಿ ಚೌಕ)

ಈ ದೇವಾಲಯವನ್ನು ಕ್ರಿ.ಶ.1858ರಲ್ಲಿ ರಂಗಾಚಾರ್ಲು ಭವನದ ಹಿಂಭಾಗ ಮಕ್ಕಾಜಿ ಚೌಕದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಮಂತ್ರಿ ಹಾಗೂ ಕೋಶಾಧಿಕಾರಿಯಾದ ಭಕ್ಷಿ ನರಸಪ್ಪನವರು ಕಟ್ಟಿಸಿದರು. ಸುಬ್ರಹ್ಮಣ್ಯ, ಆದಿತ್ಯ, ಅಂಬಿಕ, ವಿಷ್ಣುಗಣನಾಥ, ಮಹೇಶ್ವರ, ದಕ್ಷಿಣಾಮೂರ್ತಿ ಮತ್ತು ಚಂಡಿಕೇಶ್ವರ ವಿಗ್ರಹಗಳನ್ನು ಭಕ್ಷಿ ನರಸಪ್ಪನವರು ಪ್ರತಿಷ್ಠಾಪನೆ ಮಾಡಿಸಿದರು. ದೇವಾಲಯದ ಪ್ರವೇಶದ್ವಾರದಲ್ಲಿರುವ ಸುಮಾರು 20ಅಡಿ ಎತ್ತರದ ದ್ವಾರಗೋಪುರದ ಸುತ್ತ ಹಲವಾರು ದೇವರುಗಳ ಕೆತ್ತನೆ ಇದೆ.

## ಸುಬ್ರಹ್ಮಣ್ಯಸ್ವಾಮಿ ದೇವಾಲಯ(ವಿಶ್ವೇಶ್ವರನಗರ)

ವಿಶ್ವೇಶ್ವರ ನಗರದಲ್ಲಿರುವ ಈ ದೇವಾಲಯದಲ್ಲಿ ಸುಬ್ರಹ್ಮಣ್ಯಸ್ವಾಮಿಯ ಪ್ರತಿಷ್ಠಾಪನೆ ಯಾಗಿರುವ ಪ್ರಾಚೀನ ದೇವಾಲಯವಾಗಿದೆ. ಎದುರಿಗೆ ಪ್ರಕಾರದಲ್ಲಿ ಹಿತ್ತಾಳೆಯ ಧ್ವಜಸ್ತಂಭವಿದೆ. ಇದರ ಪೀಠದ ಮೇಲೆ ಕಲ್ಲಿನ ನವಿಲೊಂದನ್ನು ಕಡೆದಿಡಲಾಗಿದೆ. ಸುಮಾರು 20ಅಡಿ ಎತ್ತರದ ರಾಜಗೋಪುರವು 2001ರಲ್ಲಿ ನಿರ್ಮಿಸಲಾಗಿದೆ. ಅದರ ಸುತ್ತ ಅನೇಕ ದೇವಾನುದೇವತೆಗಳ ಚಿತ್ರವನ್ನು ಕೆತ್ತನೆ ಮಾಡಲಾಗಿದೆ. ಈ ದೇವಾಲಯವು ಎತ್ತರದ ಸ್ಥಳದಲ್ಲಿದೆ.

## ವೀರಭದ್ರೇಶ್ವರ ಚಾಮರಾಜೇಶ್ವರ ದೇವಾಲಯ

1950ರಲ್ಲಿ ಸ್ಥಾಪನೆಗೊಂಡ ಈ ದೇವಾಲಯಗಳು ತ್ಯಾಗರಾಜ ರಸ್ತೆಯಲ್ಲಿ ಒಂದೇ ಸ್ಥಳದಲ್ಲಿವೆ. ದೇವಾಲಯದ ಒಳಗೆ ಪ್ರವೇಶಿಸಿದ ಕೂಡಲೇ ವೀರಭದ್ರೇಶ್ವರನ ಗುಡಿ ಹಾಗೂ ಅದರ ಹಿಂಭಾಗದಲ್ಲಿ ಚಾಮರಾಜೇಶ್ವರನ ಗುಡಿ ಇದೆ ವೀರಭದ್ರೇಶ್ವರ ಲಿಂಗವು ಸುಮಾರು 2.1/4ಅಡಿ ಇದ್ದು, ಚಾಮರಾಜೇಶ್ವರನ ವಿಗ್ರಹವು ಸುಮಾರು 1.1/4ಅಡಿ ಇದೆ. ಎರಡೂ ದೇವಾಲಯಗಳ ಮುಂದೆ ಚಿಕ್ಕದಾದ ನಂದಿಯನ್ನು ಸ್ಥಾಪಿಸಲಾಗಿದೆ. ವೀರಭದ್ರೇಶ್ವರ ದೇವರ ಮುಂಭಾಗದಲ್ಲಿ 18ಅಡಿ ಎತ್ತರದ ಮರದ ಧ್ವಜಸ್ತಂಭ ಇದೆ. ಪ್ರಕಾರದಲ್ಲಿ ಸಿದ್ಧಪ್ಪಸ್ವಾಮಿಗಳ ಅನುಷ್ಠಾನದ ಗವಿ ಇದೆ. ಕಾರ್ತಿಕಮಾಸ ಹಾಗೂ ಶಿವರಾತ್ರಿ ದಿನ ಇಲ್ಲಿ ವಿಶೇಷ ಪೂಜೆ ನಡೆಯುತ್ತವೆ. ಕಾರ್ತಿಕ ಮಾಸದ ಒಂದು ಸೋಮವಾರದಂದು ಅಥವಾ ಅದರ ಮರುದಿನ

ಮಂಗಳವಾರದಂದು ಹರಕೆ ಹೊತ್ತವರು ಕೊಂಡ ಹಾಯುವ ಪದ್ಧತಿ ಇಂದಿಗೂ ಈ ದೇವಾಲಯದಲ್ಲಿ ಆಚರಣೆಯಲ್ಲಿದೆ.

## ಅಮೃತೇಶ್ವರ ದೇವಾಲಯ

ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಅಮೃತಬಿಂದು ಎಂಬ ರತ್ನಪಡಿವ್ಯಾಪಾರಿ ಸುಮಾರು 300ವರ್ಷಗಳಷ್ಟು ಪ್ರಾಚೀನವಾದ ಈ ದೇವಾಲಯವನ್ನು ತಾನೆ ಸ್ವಂತಕ್ಕೆ ಕಟ್ಟಿಸಿದ್ದಾನೆ. ಈ ದೇವಾಲಯವು ಆನೆ ಸಾರೋಟ್ ಬೀದಿ ಎಂದು ಕರೆಯಲಾಗುವ ದಿವಾನ್ ರಸ್ತೆಯಲ್ಲಿದ್ದು, ಜನನಿಬಿಡವಾದ ಸ್ಥಳವಾಗಿದೆ ಆರಂಭದಲ್ಲಿ ಅಮೃತೇಶ್ವರ ಲಿಂಗ ಮಾತ್ರ ಇದ್ದು ಅಮೃತೇಶ್ವರನಿಗಾಗಿ ಚಿಕ್ಕಗುಡಿ ಮಾತ್ರ ಕಟ್ಟಿಸಿದ್ದರು. ವಿಶಾಲವಾದ ಸ್ಥಳವನ್ನು ಹೊಂದಿದ್ದರಿಂದ ಕಾಲಕ್ರಮೇಣ ಬೇರೆ ಬೇರೆ ದೇವರುಗಳ ಪ್ರತ್ಯೇಕ ಗರ್ಭಗುಡಿಗಳನ್ನು ನಿರ್ಮಿಸಿರುವುದರಿಂದ ಈಗ ಅದು ದೇವಾಲಯಗಳ ಸಂಕೀರ್ಣ ಎನಿಸಿದೆ. ಇಲ್ಲಿ ಸುಬ್ರಹ್ಮಣ್ಯೇಶ್ವರ, ಶ್ರೀಲಕ್ಷ್ಮೀನರಸಿಂಹ, ಲಕ್ಷ್ಮೀಸತ್ಯನಾರಾಯಣ, ಶ್ರೀ ಸಾಮ್ರಾಜ್ಯ ಮಹಾಲಕ್ಷ್ಮಿಯ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಅಮೃತೇಶ್ವರ ಗರ್ಭಗುಡಿಯ ಎದುರಿಗೆ ಸುಮಾರು 13ಅಡಿ ಎತ್ತರದ ಮರದ ಧ್ವಜಸ್ತಂಭವನ್ನು ನಿರ್ಮಿಸಿದ್ದು, ಅದರ ಶಿಲಾಪೀಠದ ಮೇಲೆ ಸಣ್ಣ ಶಿಲಾನಂದಿಯನ್ನು ಕೆತ್ತಿಡಲಾಗಿದೆ. ದೇವಾಲಯದ ಪ್ರಕಾರದಲ್ಲಿ ನವಗ್ರಹಗಳನ್ನು ಪ್ರತಿಷ್ಠಾಪನೆ ಮಾಡಲಾಗಿದೆ. ಶಿವರಾತ್ರಿ, ನವರಾತ್ರಿ ಹಬ್ಬಗಳಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ.

## ಸಿದ್ದಪ್ಪಾಜಿ ದೇವಾಲಯ (ಅಶೋಕಪುರಂ)

ಅಶೋಕಪುರಂನ ಎರಡನೆ ಮುಖ್ಯರಸ್ತೆಯ ಎಂಟನೆಯ ಬೀದಿಯಲ್ಲಿ ಸಿದ್ದಪ್ಪಾಜಿ ದೇವಾಲಯವಿದೆ. ಧರೆಗೆ ದೊಡ್ಡವರಾದ ಸಿದ್ದಪ್ಪಾಜಿಯವರು ಪರಂಜ್ಯೋತಿ ಮಂಟೆಸ್ವಾಮಿಯವರ ಶಿಷ್ಯರು. ಅಪಾರವಾದ ಮಹಿಮೆಗಳನ್ನು ಮೆರೆದು, ಅನೇಕ ಮಂದಿ ಶಿಷ್ಯರನ್ನು ಪಡೆದು, ನೂರಾರು ಬಿರುದುಗಳನ್ನು ಧರಿಸಿ ಜನರ ಮನದಲ್ಲಿ ಅಚ್ಚಳಿಯದೆ ಉಳಿದಿದ್ದಾರೆ. ಊರಿಗೆ ಸಂಬಂಧಿಸಿದಂತಹ, ಗಹನವಾದಂತಹ ವಿಚಾರಗಳ ಬಗೆಗಿನ ಚರ್ಚೆಗೆ ಎಲ್ಲಾ ಬೀದಿಯ ಮುಖ್ಯಸ್ಥರು ಈ ದೇವಾಲಯದಲ್ಲಿ ಸೇರಿ ವಿಚಾರ ವಿನಿಮಯ ನಡೆಸುತ್ತಾರೆ. ನ್ಯಾಯ ತೀರ್ಮಾನಗಳು, ದಂಡವಿಧಿಸುವುದು, ಊರಿನ ಹಬ್ಬಗಳ ನಿರ್ಧಾರ ಇತ್ಯಾದಿ ವಿಷಯಗಳು ಇಲ್ಲಿಯೇ ನಿರ್ಧಾರವಾಗುತ್ತವೆ. ಸಿದ್ದಪ್ಪಾಜಿ ಹಬ್ಬವನ್ನು ಮಾಡುವುದರಿಂದ ಊರಿನ ಜನರ ಸಂಕಷ್ಟಗಳು ಪರಿಹಾರವಾಗುತ್ತವೆ ಎಂಬ ಬಲವಾದ ನಂಬಿಕೆಯಿಂದ ಅದನ್ನು

ಆಚರಿಸುವುದುಂಟು. ಊರಿನ ಪ್ರಮುಖರೆಲ್ಲರೂ ಸೇರಿ ಹಬ್ಬದ ದಿನವನ್ನು ನಿಗಧಿ ಮಾಡುತ್ತಾರೆ. ಹಾಗೆಯೇ ತಮ್ಮ ಕುಟುಂಬದಲ್ಲಿ ಯಾರಾದರೊಬ್ಬರನ್ನು ಪ್ರತಿ ತಲೆಮಾರಿಗೂ ದೇವರಗುಡ್ಡರಾಗಿ ಬಿಡುವುದುಂಟು. ಈ ದೇವಸ್ಥಾನದ ವತಿಯಿಂದ ಪ್ರತಿ ಬೀದಿಯ ಜನರ ಪರವಾಗಿ ಮುಖ್ಯಸ್ಥರು ತಮ್ಮ ಬೀದಿಯ ಜನರಿಗಾಗುವಷ್ಟು ಅಕ್ಕಿ, ಒಂದು ಕುರಿ ಮತ್ತು ಅಡುಗೆ ಮಾಡಲು ಬೇಕಾಗುವ ಪದಾರ್ಥಗಳನ್ನು ಕೊಡುತ್ತಾರೆ. ದೇವರಿಗೆ ಮಹಾಪೂಜೆಯಾಗುವ ವೇಳೆಯಲ್ಲಿ ಅಡುಗೆಯನ್ನು ಸಿದ್ಧಗೊಳಿಸಿಕೊಂಡು ಬರಬೇಕೆಂದು ತಾಕೀತು ಮಾಡಿದ್ದು, ಅದಕ್ಕೆ ಆಯಾ ಬೀದಿಯವರು ಒಪ್ಪಿಗೆ ಕೊಟ್ಟು ಅದರಂತೆಯೇ ನಡೆದು ಕೊಳ್ಳುವುದುಂಟು. ಎಲ್ಲ ಆದ ಮೇಲೆ ದೇವರನ್ನು ಚಿಕ್ಕ ತೇರಿನಲ್ಲಿ ಊರಿನಲ್ಲಿ ಮೆರವಣಿಗೆ ಮಾಡಿ ಪುನಃ ದೇವಾಲಯಕ್ಕೆ ತರಲಾಗುತ್ತದೆ.

## ಸಿದ್ದಪ್ಪಾಜಿ ದೇವಾಲಯ(ಹಳೆಯದು ಕನ್ನೇಗೌಡನ ಕೊಪ್ಪಲು)

ಸುಮಾರು 100 ವರ್ಷಗಳ ಹಿಂದೆ ಕನ್ನೇಗೌಡನ ಕೊಪ್ಪಲಿನ ಪಂಚಾಯ್ತಿ ಸ್ಥಳವಾಗಿದ್ದ ಈ ಜಾಗದಲ್ಲಿ ಲೇಟ್. ಸಿದ್ದಪ್ಪಾಜಿ ಗುಡ್ಡಪ್ಪ ಎಂಬುವವರು ಗರಿಚಪ್ಪರಗಳಿಂದ ಒಂದು ಗುಡಿಸಲನ್ನು ನಿರ್ಮಿಸಿ ದೇವರನ್ನು ಪ್ರತಿಷ್ಠಾಪಿಸಿದರು. ಅನಂತರ ಜನತೆಯಿಂದ ಬಂದ ದೇಣಿಗೆಯ ಸಹಾಯದಿಂದ ದೇವಾಲಯವನ್ನು 1999ರಲ್ಲಿ ಜೀರ್ಣೋದ್ಧಾರ ಗೊಳಿಸಲಾಗಿದೆ.

ದೇವಾಲಯದ ಗರ್ಭಗುಡಿಯಲ್ಲಿ ಅವಧೂತರಾದ ಸಿದ್ದಪ್ಪಾಜಿಯವರ ಕಂಡಾಯವಿದ್ದು, ಗರ್ಭಗುಡಿಯ ಬಲಭಾಗದಲ್ಲಿ ಧರೆಗೆ ದೊಡ್ಡವರಾದ ಮಂಟೇಸ್ವಾಮಿ ಮೂರ್ತಿಯನ್ನು ಸುಮಾರು ಹನ್ನೆರಡು ವರ್ಷಗಳ ಹಿಂದೆ ಐದುವರೆ ಅಡಿ ಎತ್ತರದ ಬಳಪದ ಕಲ್ಲಿನಲ್ಲಿ ಕೆತ್ತಿಸಿ ನಿರ್ಮಿಸಲಾಗಿದೆ. ಎಡಭಾಗದಲ್ಲಿ ಸುಮಾರು ಐದುವರೆ ಅಡಿ ಎತ್ತರದ ಸಿದ್ದಪ್ಪಾಜಿಸ್ವಾಮಿ ಮೂರ್ತಿಯನ್ನು ಬಳಪದ ಕಲ್ಲಿನಿಂದ ನಿರ್ಮಿಸಲಾಗಿದೆ. ದೇವಾಲಯದ ಬಹುಭಾಗವು ಚಪ್ಪಡಿ ಕಲ್ಲಿನಿಂದ ನಿರ್ಮಿತವಾಗಿದ್ದು ಗರ್ಭಗುಡಿಯ ಆವರಣದ ಮುಂದೆ ಒಂದು ಹೋಮಕುಂಡವಿದೆ. ದೇವಾಲಯದ ಹೆಬ್ಬಾಗಿಲ ಮೇಲೆ ಕಲ್ಲಿನಿಂದ ಕೆತ್ತಿದ ಬಸವನ ಮೂರ್ತಿಯಿದೆ. ಹಾಗೂ ಹೆಬ್ಬಾಗಿಲ ಬಲಭಾಗದಲ್ಲಿ ಒಂದು ಬಸವನ ಗುಡಿಯನ್ನು ನಿರ್ಮಿಸಲಾಗಿದೆ. ಏಕೆಂದರೆ ದೇವಾಲಯದ ಆವರಣದಲ್ಲಿ ಸುಮಾರು ವರ್ಷಗಳಿಂದ ಒಂದು ಬಸವ ವಾಸವಾಗಿತ್ತು. ಅದನ್ನು ಗ್ರಾಮದ ಜನತೆ ದೇವರೆಂದೇ ನಂಬಿದ್ದರು. ಅದು ಸುಮಾರು ಹನ್ನೊಂದು ವರ್ಷಗಳ ಹಿಂದೆ ವಿಧಿವಶವಾಯಿತು. ಇದರ ಅಂತ್ಯಸಂಸ್ಕಾರವನ್ನು ಆ ಜಾಗದಲ್ಲೇ ನೆರವೇರಿಸಿ ಅದರ ನೆನಪಿನಾರ್ಥವಾಗಿ ಆ ಸ್ಥಳದಲ್ಲೇ ಒಂದು ಬಸವನ ವಿಗ್ರಹವನ್ನು ಸ್ಥಾಪಿಸಿ ಪ್ರತಿನಿತ್ಯ ಪೂಜೆಯನ್ನು ಸಲ್ಲಿಸಲಾಗುತ್ತಿದೆ.

## ಸಿದ್ದಪ್ಪಾಜಿ ದೇವಾಲಯ (ಹೊಸದು ಕನ್ನೇಗೌಡನ ಕೊಪ್ಪಲು)

ನೂರು ವರ್ಷಗಳ ಹಿಂದಿನಿಂದಲೂ ಕೆ.ಜಿ.ಕೊಪ್ಪಲಿನ ಗ್ರಾಮಸ್ಥರು ನೂರು ವರ್ಷಗಳಷ್ಟೇ ಹಳೆಯದಾದ ಬಸರಿ ಮರ ಮತ್ತು ಅದರ ಕೆಳಗೆ ಒಂದು ನಾಗರಕಲ್ಲನ್ನು ಸ್ಥಾಪಿಸಿ ಅದನ್ನೇ ಪೂಜಿಸುತ್ತಿದ್ದರು. ಊರಿನ ಗ್ರಾಮಸ್ಥರು, ಮುಖ್ಯಸ್ಥರು ಮತ್ತು ಯಜಮಾನರು ಈ ದೇವಾಲಯವನ್ನು ಅಭಿವೃದ್ಧಿಪಡಿಸುವ ತೀರ್ಮಾನಕ್ಕೆ ಬಂದರು. ಈ ಜಾಗದಲ್ಲಿ ಯಾವುದೇ ಗರ್ಭ ಗುಡಿಯಾಗಲಿ, ಸೂರಾಗಲಿ ಇರಲಿಲ್ಲ. ಇಡೀ ಜಾಗವನ್ನು ಬಸರಿ ಮರವೆ ಆವರಿಸಿತ್ತು. ಆ ಮರವನ್ನು ಕಡಿದು ದೇವಾಲಯವನ್ನು ನಿರ್ಮಿಸುವ ತೀರ್ಮಾನಕ್ಕೆ ಬಂದಾಗ ಕೆಲವು ಭಿನ್ನಾಭಿಪ್ರಾಯಗಳು ಹುಟ್ಟಿಕೊಂಡವು. ಆ ಮರವನ್ನು ದೇವರೆಂದು ನಂಬಿದ್ದರಿಂದ ಕಡಿಯುವುದು ಸುಲಭದ ಕಾರ್ಯವಾಗಿರಲಿಲ್ಲ. ಮರವನ್ನು ಕಡಿದರೆ ಅವಘಡಗಳು ಸಂಭವಿಸಬಹುದೆಂದು ಊರಿನ ಹಿರಿಯರು ಅಭಿಪ್ರಾಯಪಟ್ಟರು. ಅನಂತರ ಎಲ್ಲರೂ ಒಮ್ಮತದಿಂದ  ನುರಿತ ಜ್ಯೋತಿಷ್ಯ ಶಾಸ್ತ್ರಿಗಳಿಂದ ಕೆಲವು ಪರಿಹಾರಗಳನ್ನು ಮಾಡಿಸುವುದರ ಮೂಲಕ ಆ ಬೃಹತ್ ಮರವನ್ನು ಕಡಿದು, ಅದೇ ಮರದ ತುಂಡುಗಳನ್ನು ದೇವಾಲಯದ ನಿರ್ಮಾಣ ಕಾರ್ಯಕ್ಕೆ ಉಪಯೋಗಿಸಿಕೊಂಡರು. 26.11.2010ರಂದು ದೇವಾಲಯವನ್ನು ಉದ್ಘಾಟಿಸಲಾಯಿತು.

ದೇವಾಲಯದ ವಿಸ್ತೀರ್ಣವು 33*33ಅಡಿ ಉದ್ದಗಲವಿದ್ದು, ಗರ್ಭಗುಡಿಯಲ್ಲಿ ನಾಲ್ಕು ಅಡಿ ಎತ್ತರವಿರುವ ಸಿದ್ದಪ್ಪಾಜಿ ಮೂರ್ತಿಯನ್ನು ಬಳಪದ ಕಲ್ಲಿನಲ್ಲಿ ಕೆತ್ತಿಸಲಾಗಿದೆ. ಗರ್ಭಗುಡಿಯ ಬಾಗಿಲನ್ನು ತೇಗದ ಮರದಲ್ಲಿ ಸಿದ್ದಪ್ಪಾಜಿಯವರು ವಿವಿಧ ಭಂಗಿಯಲ್ಲಿರುವಂತೆ ವಿನ್ಯಾಸ ಗೊಳಿಸಲಾಗಿದೆ. ಗರ್ಭಗುಡಿಯ ಬಲಭಾಗದಲ್ಲಿ ಎರಡು ಅಡಿ ಎತ್ತರದ ವಿದ್ಯಾಗಣಪತಿ ಮತ್ತು ಎಡಭಾಗದಲ್ಲಿ ಎರಡು ಅಡಿ ಎತ್ತರದ ಸುಬ್ರಹ್ಮಣ್ಯ ಮೂರ್ತಿಗಳನ್ನು ಬಳಪದಕಲ್ಲಿನಿಂದ ನಿರ್ಮಿಸಲಾಗಿದೆ. ದೇವಾಲಯದ ಮುಂಭಾಗದಲ್ಲಿ ಸುಮಾರು ಏಳು ಅಡಿ ಎತ್ತರವಿರುವ ನಂದಿಕಂಭ ಹಾಗೂ ಕಂಭದ ಕೆಳಗೆ ಪಾದುಕೆಗಳನ್ನು ನಿರ್ಮಿಸಲಾಗಿದೆ. ಪ್ರತಿವರ್ಷ ಜನವರಿಯಲ್ಲಿ ವಿಶೇಷ ಪೂಜೆ ಮತ್ತು ಉತ್ಸವವನ್ನು ಹಾಗೂ ನವೆಂಬರ್ 26ರಂದು ವಾರ್ಷಿಕೋತ್ಸವದ ಅಂಗವಾಗಿ ಕುಂಭಾಭಿಷೇಕ ಮತ್ತು ಅನ್ನಸಂತರ್ಪಣೆಯನ್ನು ನಡೆಸಲಾಗುತ್ತದೆ.

## ವೀರಭದ್ರೇಶ್ವರ ದೇವಾಲಯ

ಮಧುವನದ ಹೆಬ್ಬಾಗಿಲಿನ ಬಲಭಾಗದಲ್ಲಿ ಈ ದೇವಾಲಯವಿದ್ದು, ಅದರಲ್ಲಿರುವ ವೀರಭದ್ರನ ಕಪ್ಪುಶಿಲೆಯ ವಿಗ್ರಹ ಬಲು ಸುಂದರವಾಗಿದೆ. ಇದನ್ನು ಸ್ಥಾಪಿಸಿದವರು ಮುಮ್ಮಡಿ ಕೃಷ್ಣರಾಜ ಒಡೆಯರು. ಹೆಬ್ಬಾಗಿಲಿನ ಎಡಭಾಗದಲ್ಲಿ ಮುಮ್ಮಡಿಯವರ ಸಮಾಧಿ ಇದೆ. ಇದೂ

ಕೂಡ ಒಂದು ಸಣ್ಣ ದೇವಾಲಯದಂತೆ ಕಾಣುವ ಭವ್ಯವಾದ ಕಲಾತ್ಮಕ ಎತ್ತರವಾದ ಸಮಾಧಿ ಮತ್ತು ಮೇಲೊಂದು ಬೃಂದಾವನವಿದೆ. ಅದರೊಳಗೊಂದು ಕೃಷ್ಣನ ವಿಗ್ರಹವಿದೆ.

ಈ ರುದ್ರಭೂಮಿಯಲ್ಲಿ ವೀರಭದ್ರಸ್ವಾಮಿಯ ದೇವಾಲಯವೇ ಅಲ್ಲದೆ, ಬೇರೊಂದು ಶಿವಾಲಯವಿದೆ. ಅದರ ಮುಂಭಾಗದಲ್ಲಿ ಪಾರ್ವತಿಯ ಗುಡಿಯಿದ್ದು, ಅದರಲ್ಲಿದ್ದ ಪಾರ್ವತಿಯ ಸುಂದರ ವಿಗ್ರಹವನ್ನು ದುಷ್ಕರ್ಮಿಗಳು ನಾಶಮಾಡಿದ್ದಾರೆ. ಅದರ ಪಕ್ಕದಲ್ಲಿಯೇ ತುಸು ದೂರದಲ್ಲಿ ಮಹಿಷಾಸುರನ ವಿಗ್ರಹವಿದ್ದು, ಅದು ಚಾಮುಂಡಿಬೆಟ್ಟದಲ್ಲಿರುವ ವಿಗ್ರಹವನ್ನು ಹೋಲುತ್ತದೆ. ಇತ್ತ ಮುಂಭಾಗಕ್ಕೆ ಬಂದರೆ ಅಲ್ಲೊಂದು ಮನ ಸೆಳೆಯುವ ಈಜುಕೊಳವಿದೆ. ಅದರಲ್ಲಿ ಅರಸರು ಜಲಕ್ರೀಡೆಯಾಡುತ್ತಿದ್ದರಂತೆ. ಅದೇ ಮಧುವನದ ಮಧ್ಯಭಾಗದಲ್ಲಿ ಕಾಶಿವಿಶ್ವನಾಥನ ದೇವಾಲಯವೂ ಅದರ ಬಲಭಾಗದಲ್ಲಿ ಸಣ್ಣದೊಂದು ಗಣೇಶನ ಗುಡಿ ಮತ್ತು ಎಡಭಾಗದಲ್ಲಿ ಕಾಳಮ್ಮ ದೇವಿಯ ಗುಡಿಯೂ ಇದೆ. ಇಂಥ ಒಂದು ಪವಿತ್ರವಾದ ಮತ್ತು ಕಲಾಸೌಂದರ್ಯಭರಿತವಾದ ತಾಣ ಇಲ್ಲಿಯವರೆಗೆ ಸ್ವಲ್ಪ ನಿರ್ಲಕ್ಷ್ಯಕ್ಕೆ ಒಳಗಾಗಿತ್ತು.

## 3.2 ವೈಷ್ಣವ ದೇವಾಲಯಗಳು

ಭಾರತದ ತುಂಬ ಜನಪ್ರಿಯ ಮತ್ತು ಶಕ್ತಿಯುತ ದೇವರಲ್ಲಿ ಒಬ್ಬನಾಗಿ 'ತ್ರಿಮೂರ್ತಿ'ಗಳಲ್ಲಿ ಒಂದು ಸ್ಥಾನವನ್ನು ಪಡೆದುಕೊಂಡಿರುವ ವಿಷ್ಣು ವೈಷ್ಣವರ ಆರಾಧ್ಯದೈವ. ಈ ದೇಶದ ಎಲ್ಲ ದೇವ ದೇವತೆಗಳ ವಿಕಾಸದಂತೆ ವಿಷ್ಣುವಿನ ಕ್ರಮವಿಕಾಸವೂ ಕುತೂಹಲಕರವಾಗಿದೆ. ವೈಷ್ಣವ ಧರ್ಮದ ಮೂಲಗಳನ್ನು ವೇದಗಳಲ್ಲಿ ಗುರುತಿಸುತ್ತಾರೆ. ವೈಷ್ಣವ ಧರ್ಮ ಬೆಳೆಯುತ್ತಾ ಭಾಗವತ ಧರ್ಮವನ್ನು ಅವತಾರಗಳ ಹಿನ್ನೆಲೆಯಲ್ಲಿ ಒಳಗೊಂಡು ಕೃಷ್ಣ, ರಾಮ ಮತ್ತು ಬುದ್ಧರನ್ನು ತನ್ನಲ್ಲಿ ಅಳವಡಿಸಿಕೊಂಡಿದೆ.

ಕರ್ನಾಟಕದಲ್ಲಿ ಸುಮಾರು ಕ್ರಿ.ಶ.ದ ಪ್ರಾರಂಭಕಾಲದಲ್ಲಿಯೇ ವೈಷ್ಣವ ಧರ್ಮ ಪ್ರಚಾರ ಕಾರ್ಯದಲ್ಲಿ ತೊಡಗಿತ್ತೆಂದು ತಿಳಿದುಬರುತ್ತದೆ. ಕನ್ನಡ ಭಾಷೆಯಲ್ಲಿರುವ ಕ್ರಿ.ಶ.450ರಲ್ಲಿ ಕದಂಬರ ಕಾಲದ ಕಾಕುತ್ಸವರ್ಮನ ಹಲ್ಮಿಡಿ ಶಾಸನವು ಕೂಡ ವಿಷ್ಣುವಿನ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗುತ್ತದೆ. ಕ್ರಿ.ಶ.6–7ನೇ ಶತಮಾನಗಳಲ್ಲಿ ಬಾದಾಮಿ ಚಾಲುಕ್ಯರ ರಾಜ ಮಂಗಳೇಶನು ಬಾದಾಮಿಯಲ್ಲಿ ಪ್ರಸಿದ್ಧವಾದ ವೈಷ್ಣವ ಗುಹಾಂತರ ದೇವಾಲಯವನ್ನು ನಿರ್ಮಿಸಿರುವುದಾಗಿ ಶಾಸನಗಳಿಂದ ತಿಳಿದುಬರುತ್ತದೆ. ಕರ್ನಾಟಕದಲ್ಲಿ ರಾಜಕೀಯವಾಗಿ ಆಡಳಿತ ನಡೆಸಿದ ರಾಷ್ಟ್ರಕೂಟ, ಗಂಗ, ನೊಳಂಬ, ಕಲ್ಯಾಣಿಚಾಲುಕ್ಯರು, ಹೊಯ್ಸಳರು, ಚೋಳರು, ವಿಜಯನಗರದ

ಅರಸರು, ಮೈಸೂರಿನ ಒಡೆಯರು ಇನ್ನಿತರ ಅರಸು ಮನೆತನದವರು ವೈಷ್ಣವ ಧರ್ಮಕ್ಕೆ ಪ್ರಾಮುಖ್ಯತೆ ನೀಡಿರುವುದು ಹಲವಾರು ದಾಖಲೆ ಸಹಿತ ಕಾಣಬಹುದು. ರಾಮಾನುಜ ಚಾರ್ಯರಿಗಿಂತ ಹಿಂದೆಯೇ ಚೋಳರಾಳ್ವಿಕೆಯಲ್ಲಿದ್ದ ಮೈಸೂರಿನ ಪೂರ್ವಭಾಗದಲ್ಲಿ ಶ್ರೀವೈಷ್ಣವ ರಿದ್ದರೆಂದು ಮಾದೇಹಳ್ಳಿ, ತಡಿಮಾಲಂಗಿ ಊರುಗಳಲ್ಲಿ ಕಂಡುಬರುವ ಶಿಲಾಶಾಸನಗಳಿಂದ ತಿಳಿದುಬರುತ್ತದೆ. ಆದುದರಿಂದ ರಾಮಾನುಜಾಚಾರ್ಯರು ಚೋಳರ ಹಿಂಸೆಯಿಂದ ತಪ್ಪಿಸಿ ಕೊಳ್ಳಲು ಮೈಸೂರು ಪ್ರಾಂತ್ಯಕ್ಕೆ ಬರಲಿಲ್ಲವೆಂದೂ, ಇಲ್ಲಿನ ಶ್ರೀವೈಷ್ಣವ ಮತವನ್ನು ಮತ್ತಷ್ಟು ಪ್ರಬಲಗೊಳಿಸಲು ಬಂದವರೆಂದು ತಿಳಿಯಬಹುದಾಗಿದೆ.

ವೈಷ್ಣವ ಧರ್ಮವೆಂದರೆ ವಿಷ್ಣುವಿನ ಪೂಜೆಯು ಪ್ರಮುಖವಾಗಿದ್ದು, ಇವರು ವಿಷ್ಣುವೇ ಸರ್ವೋತ್ತಮನೆಂದು ನಂಬಿ ಅವನನ್ನೇ ಆರಾಧಿಸುವ ಪಂಥದವರಾಗಿದ್ದಾರೆ. ಇವರಲ್ಲಿ ಪ್ರಮುಖವಾಗಿ ಆರು ಪಂಗಡಗಳಿವೆ. 1.ಶ್ರೀ ರಾಮಾನುಜ ಸಂಪ್ರದಾಯದ ಶ್ರೀವೈಷ್ಣವರು, 2.ಶ್ರೀ ಮಧ್ವಾಚಾರ್ಯರ ಸಂಪ್ರದಾಯದ ಸದ್ವೈಷ್ಣವರು, 3.ಶ್ರೀ ಚೈತನ್ಯಸ್ವಾಮಿ ಸಂಪ್ರದಾಯದ ಶ್ರೀ ಚೈತನ್ಯ ವೈಷ್ಣವರು, 4.ಶ್ರೀ ರಾಮಾನಂದ ಸಂಪ್ರದಾಯದ ಶ್ರೀ ರಾಮನಂದಿ ವೈಷ್ಣವರು, 5.ಶ್ರೀ ನಿಂಬಾರ್ಕ ಸಂಪ್ರದಾಯದ ನಿಂಬಾರ್ಕ ವೈಷ್ಣವರು, 6.ಶ್ರೀ ವಲ್ಲಭಚಾರ್ಯ ಸಂಪ್ರದಾಯದ ರಾಧಾವಲ್ಲಭ ವೈಷ್ಣವರು.[10] ಈ ಎಲ್ಲಾ ಪಂಥದವರು ಸಹ ವಿಷ್ಣುವಿನ ನಿರೂಪಣಾ ಶಿಲ್ಪಗಳನ್ನು ಪೂಜಿಸುತ್ತಿದ್ದರು. ವಿಷ್ಣುವಿನ ನಿರೂಪಣ ಶಿಲ್ಪಗಳ ಉಗಮವು ಕಾಲಾನಂತರದಲ್ಲಿ ಪ್ರಬುದ್ಧಮಾನವಾಗಿ ಬೆಳೆದುಬಂದಿತು. ಇಲ್ಲಿ ಕೇಶವ, ನರಸಿಂಹ, ಸೂರ್ಯನ ಆರಾಧನೆ ಈ ರೀತಿಯಾಗಿ ವೈಷ್ಣವ ಧರ್ಮದಲ್ಲಿ ಅವಿಭಾಜ್ಯ ಅಂಗವಾಗಿ ಬೆಳೆದು ವಿಭಿನ್ನ ಆರಾಧನೆಗೆ ಪ್ರೇರಣೆ ನೀಡಿತು. ಇವುಗಳಲ್ಲಿ ದಶಾವತಾರಗಳು ಪ್ರಮುಖವಾದವು. ಮತ್ಸ್ಯ(ಮೀನು), ಕೂರ್ಮ(ಆಮೆ), ವರಾಹ(ಹಂದಿ), ನರಸಿಂಹ, ವಾಮನ(ಕುಬ್ಜ), ಪರಶುರಾಮ, ರಾಮ, ಕೃಷ್ಣ, ಬುದ್ಧ, ಕಲ್ಕಿ ಇವುಗಳು ವಿಷ್ಣುವಿನ ದಶಾವತಾರ ಶಿಲ್ಪಗಳು.[11]

"ಕರ್ನಾಟಕದ ವೈಷ್ಣವ ಧರ್ಮದಲ್ಲಿ ಪ್ರಮುಖವಾಗಿ ಮೂರು ಸೆಲೆಗಳು ಬೆಳೆದು ಬಂದಿರುವುದನ್ನು ಕಾಣಬಹುದು. ಮೊದಲನೆಯದು ವೈದಿಕ ಭಾಗವತ ಮೂಲದ ವೈಷ್ಣವಧರ್ಮ ಕ್ರಿಸ್ತ ಶಕದ ಮೊದಲ ಹತ್ತು ಅಥವಾ ಹನ್ನೊಂದು ಶತಕಗಳಲ್ಲಿ ಪ್ರಚೂರವಾಗಿದ್ದಿರಬೇಕು"[12] ಎರಡನೆಯದು ರಾಮಾನುಜರು ಕರ್ನಾಟಕಕ್ಕೆ ಬರುವ ಮೊದಲೇ ಅಲ್ಪಸ್ವಲ್ಪ ಮಟ್ಟಿಗೆ ಪರಿಚಿತವಾಗಿದ್ದ ಆಳ್ವಾರರ ವೈಷ್ಣವಧರ್ಮ, ಅವರ ಆಗಮನದೊಂದಿಗೆ ಶ್ರೀವೈಷ್ಣವಧರ್ಮ ಹನ್ನೊಂದು ಹನ್ನೆರಡನೆಯ ಶತಮಾನದಲ್ಲಿ ಹೆಚ್ಚಿನ ಪ್ರಚಾರವನ್ನು ಪಡೆದು ಮುಂದೆ

ವೈಭವದಿಂದ ಬೆಳೆಯಿತು. ಮೂರನೆಯದು ಕರ್ನಾಟಕದ ದಕ್ಷಿಣ ಕನ್ನಡ ಪ್ರಾಂತ್ಯದಿಂದ ಹುಟ್ಟಿಬಂದ ಮಧ್ವಾಚಾರ್ಯರಿಂದ (ಕ್ರಿ.ಶ.13ನೆಯ ಶತಮಾನ)ಬೆಳೆದು ಬಂದ ಮಾಧ್ವ ಸಂಪ್ರದಾಯ, ಮುಂದೆ ಹರಿದಾಸ ಪರಂಪರೆಯಾಗಿ ಸಮೃದ್ಧವಾಗಿ ಬೆಳೆಯಿತು. ವೈಷ್ಣವ ಧರ್ಮದ ಈ ಮೂರು ಪರಂಪರೆಗಳು ಪರಸ್ಪರ ಪ್ರಭಾವವನ್ನು ಬೀರಿರುವು ವಾದರೂ ತಮ್ಮ ತಮ್ಮ ಅಸ್ತಿತ್ವವನ್ನು ಇಂದಿಗೂ ಉಳಿಸಿಕೊಂಡು ಬಂದಿರುವುದು ಗಮನಾರ್ಹ ವಾಗಿದೆ.

ಒಂಟಿಕೊಪ್ಪಲಿನ ಲಕ್ಷ್ಮೀವೆಂಕಟರಮಣಸ್ವಾಮಿ, ಇರ್ವಿನ್ ರಸ್ತೆಯಲ್ಲಿರುವ ಪಂಚಮುಖಿ ಆಂಜನೇಯ, ಇಟ್ಟಿಗೆಗೂಡಿನ ಸತ್ಯನಾರಾಯಣಸ್ವಾಮಿ, ಮಂಡಿಮೊಹಲ್ಲದ ವೆಂಕಟರಮಣಸ್ವಾಮಿ, ಗೋಕುಲಂನ ಶ್ರೀಕೃಷ್ಣ ದೇವಸ್ಥಾನ, ಕೃಷ್ಣವಿಲಾಸ ರಸ್ತೆಯ ಪ್ರಸನ್ನ ವೆಂಕಟರಮಣಸ್ವಾಮಿ, ವಿಜಯನಗರದ ಯೋಗನರಸಿಂಹಸ್ವಾಮಿ, ಲಕ್ಷ್ಮೀಕಾಂತನಗರದ ಲಕ್ಷ್ಮೀಕಾಂತಸ್ವಾಮಿ ದೇವಾಲಯ ಗಳು ಪ್ರಸ್ತುತದಲ್ಲಿಯೂ ತನ್ನ ಇರುವಿಕೆಯನ್ನು ಸಾಬೀತು ಪಡಿಸಿವೆ. ಕೆಲವು ದೇವಾಲಯಗಳು ಐತಿಹಾಸಿಕವಾಗಿ, ಜಾನಪದೀಯವಾಗಿ ಪ್ರಸಿದ್ಧಿಯ ಸ್ಥಳವಾಗಿ ಗೋಚರಿಸಿವೆ.

**ಮೈಸೂರು ನಗರದ ಪ್ರಮುಖ ವೈಷ್ಣವ ದೇವಾಲಯಗಳ ಪಟ್ಟಿ**

| **ದೇವರು** | **ದೇವಾಲಯ ಇರುವ ಸ್ಥಳ** |
|---|---|
| ಆಂಜನೇಯ | ಅರಮನೆಕೋಟೆ |
| ಪಾಂಡುರಂಗ ವಿಠ್ಠಲ | ಅಶೋಕ ರಸ್ತೆ |
| ಪಂಚಮುಖಿ ಆಂಜನೇಯ | ಇರ್ವಿನ್ ರಸ್ತೆ |
| ಆಂಜನೇಯ | ಒಂಟಿಕೊಪ್ಪಲು |
| ಲಕ್ಷ್ಮೀನರಸಿಂಹ | ಕಾಳಿದಾಸ ರಸ್ತೆ |
| ವೀರಾಂಜನೇಯ | ಕೃಷ್ಣರಾಜ ಸಾಗರ ರಸ್ತೆ |
| ಪ್ರಸನ್ನ ವೆಂಕಟರಮಣ | ಕೃಷ್ಣವಿಲಾಸ ರಸ್ತೆ |
| ಮಾರುತಿ ವೆಂಕಟರಮಣ | ಗಂಗೋತ್ರಿ ಬಡಾವಣೆ |
| ಕೃಷ್ಣ | ಗೋಕುಲಂ |
| ಶಂಕರನಾರಾಯಣ (ಶೈವ–ವೈಷ್ಣವ) | ಚಾಮುಂಡಿಪುರಂ ಸರ್ಕಲ್ |
| ಬಂಡಿ ಶ್ರೀನಿವಾಸ<br>ರಾಧಾಕೃಷ್ಣ (ಇಸ್ಕಾನ್) | ಜಯನಗರ |

| | |
|---|---|
| ಆಂಜನೇಯ | ಡಿಪೋರಸ್ತೆ<br>(ಶಾಂತಿಸಾಗರ ಹೊಟೇಲ್ ಎದುರು) |
| ಚಿಕ್ಕ ಆಂಜನೇಯ<br>ವೇಣುಗೋಪಾಲ | ತ್ಯಾಗರಾಜ ರಸ್ತೆ(ಅಗ್ರಹಾರ) |
| ಆಂಜನೇಯ | ದೇವರಾಜ ಅರಸು ರಸ್ತೆ |
| ವೆಂಕಟರಮಣ | ನಂಜನಗೂಡು ರಸ್ತೆ<br>(ಗಣಪತಿ ಸಚ್ಚಿದಾನಂದ ಆಶ್ರಮ) |
| ಕೃಷ್ಣದೇವಾಲಯ | ನಾರಾಯಣಶಾಸ್ತ್ರೀ ರಸ್ತೆ |
| ಲಕ್ಷ್ಮೀವೆಂಕಟರಮಣ | ಎನ್.ಆರ್.ಮೊಹಲ್ಲಾ |
| ಲಕ್ಷ್ಮೀ ಹಯಗ್ರೀವ ಮಂದಿರ | ಪೆನ್ಷನರ್ಸ್ ಬ್ಲಾಕ್ ಪರಕಾಲಮಠ ಸರ್ಕಲ್ |
| ಮುರುಗ | ಬಂಬೂಬಜಾರ್ |
| ಆಂಜನೇಯ | ಬೆಂಗಳೂರು ಮೈಸೂರು ರಸ್ತೆ |
| ವೆಂಕಟರಮಣ | ಮಂಡಿಮೊಹಲ್ಲಾ(ಅಶೋಕರಸ್ತೆ) |
| ಆಂಜನೇಯ | ಮಾನಂದವಾಡಿ ರಸ್ತೆ |
| ಆಂಜನೇಯ | ಮಂಜುನಾಥಪುರ |
| ಪಾತಾಳ ಆಂಜನೇಯ | ಮಹಾತ್ಮಗಾಂಧಿ ರಸ್ತೆ |
| ಸೂರ್ಯನಾರಾಯಣ | ರಾಜೀವನಗರ, 2ನೇ ಹಂತ |
| ಲಕ್ಷ್ಮೀಕಾಂತಸ್ವಾಮಿ | ಲಕ್ಷ್ಮೀಕಾಂತನಗರ |
| ಆಂಜನೇಯ | ಲೋಕೋಕಾಲೋನಿ |
| ಲಕ್ಷ್ಮೀವೆಂಕಟರಮಣ | ವಿ.ವಿ.ಮೊಹಲ್ಲಾ |
| ಯೋಗನರಸಿಂಹಸ್ವಾಮಿ | ವಿಜಯನಗರ 1ನೇಹಂತ |
| ದೊಡ್ಡ ಆಂಜನೇಯ | ವೀರನಗೆರೆ(ಮಂಟಪದ ವೀರನಗೆರೆ ರಸ್ತೆ) |
| ರಾಮಲಿಂಗೇಶ್ವರ | ವಿದ್ಯಾರಣ್ಯಪುರಂ, ಚಾಮುಂಡಿಪುರಂ |
| ಲಕ್ಷ್ಮೀನರಸಿಂಹ | ಶ್ರೀರಾಂಪುರ, 2ನೇಹಂತ |
| ನಾರಾಯಣಸ್ವಾಮಿ–ಸೀತಾರಾಮಸ್ವಾಮಿ | ಸಿದ್ಧಾರ್ಥ ಬಡಾವಣೆ<br>(ಜೂನಿಯರ್ ಕಾಲೇಜು ರಸ್ತೆ) |

| | |
|---|---|
| ಕೃಷ್ಣಧಾಮ–ಕೃಷ್ಣದೇಗುಲ | ಸಾಹುಕಾರ್ ಚೆನ್ನಯ್ಯರಸ್ತೆ |
| ವೇಣುಗೋಪಾಲಸ್ವಾಮಿ | ಹೊಸಬಂಡಿಕೇರಿ(ನಾರಾಯಣಶಾಸ್ತ್ರಿ ರಸ್ತೆ) |

**ವೆಂಕಟರಮಣ ದೇವಾಲಯ**

1946ರಲ್ಲಿ ದೊಡ್ಡ ದಾಸಪ್ಪನವರಿಂದ ನಗರದ ಮುಖ್ಯ ಭಾಗವಾದ ಮಂಡಿ ಮೊಹಲ್ಲಾದ ಅಕ್ಬರ್ ರಸ್ತೆಯಲ್ಲಿ ನಿರ್ಮಾಣ ಮಾಡಲಾಗಿದೆ. ಪ್ರಾರಂಭದಲ್ಲಿ ಒಂದು ಸಣ್ಣ ಗುಡಿಯಲ್ಲಿ ವೆಂಕಟರಮಣನನ್ನು ಪೂಜಿಸುತ್ತಿದ್ದರು. ಇದರ ಮೂಲ ಹೆಸರು ಶ್ರೀ ಸಕ್ಕರೆಕೃಷ್ಣ ತುಳಸಿ ಮಹಾಲಕ್ಷ್ಮಿ ವೆಂಕಟರಮಣ. ಈ ದೇವಾಲಯವು ಗೋಪುರ ಮತ್ತು ಕಳಶಗಳಿಂದ ಕೂಡಿದ್ದು ಗೋಪುರವೂ ಕೆಲವು ಸೂಕ್ಷ್ಮ ಕೆತ್ತನೆಗಳಿಂದ ಕೂಡಿದೆ. ದೊಡ್ಡ ದಾಸಪ್ಪನವರ ಮನೆತನದವರೇ ಈ ದೇಗುಲದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದಾರೆ. ಸ್ವಾಮಿಯ ಮೂರ್ತಿಯು ಸುಮಾರು ಮೂರು ಅಡಿಗಳಷ್ಟಿದ್ದು ಸುಂದರವಾಗಿ ಕಾಣುತ್ತದೆ ಜೊತೆಗೆ ಮಹಾಲಕ್ಷ್ಮೀ, ಪದ್ಮಾವತಿ ಮೂರ್ತಿಗಳು ಸಹಾ ಇವೆ. ಪ್ರತಿನಿತ್ಯ ದೇವರಿಗೆ ಪೂಜೆಗಳು ನಡೆಯುತ್ತಿದ್ದು ಶ್ರಾವಣ ಮಾಸದಲ್ಲಿ ಮತ್ತು ಪ್ರತಿ ಶನಿವಾರ ವಿಶೇಷ ಪೂಜೆಗಳು ನಡೆಯುತ್ತವೆ. ಅಲ್ಲದೆ ರಥೋತ್ಸವ, ಕಲ್ಯಾಣೋತ್ಸವ, ಉಯ್ಯಾಲೋತ್ಸವಗಳು ಮತ್ತು ಶಯನೋತ್ಸವಗಳು ನಡೆಯುತ್ತಿರುತ್ತವೆ. ಶ್ರಾವಣ ಮಾಸದಲ್ಲಿ ಅನ್ನಸಂತರ್ಪಣೆ ಕಾರ್ಯವು ಸ್ವಾಮಿಯವರ ಹೆಸರಿನಲ್ಲಿ ನಡೆಯುತ್ತದೆ.[13]

**ಕೋಟೆ ಆಂಜನೇಯ ದೇವಾಲಯ**

ಅರಮನೆಯ ಕೋಟೆಗೆ ಸೇರಿದಂತೆ ಉತ್ತರ ದಿಕ್ಕಿಗಿರುವ ಬಲರಾಮ ಜಯರಾಮ ದ್ವಾರಗಳ ನಡುವೆ ಇರುವ ಆಂಜನೇಯನಿಗೆ ಕೋಟೆ ಆಂಜನೇಯ ಎಂದೇ ಕರೆಯಲಾಗುತ್ತಿದೆ. ಈ ದೇವಾಲಯದಲ್ಲಿರುವ ಆಂಜನೇಯ ವಿಗ್ರಹವು ಮೂಲತಃ ಮೈಸೂರಿನ ಸಮೀಪ ಬೆಳಗೊಳದಲ್ಲಿತ್ತೆಂದೂ, ಅನಂತರ ಅದನ್ನು ಇಲ್ಲಿಗೆ ತಂದು ಅರಮನೆಯ ಕೋಟೆಗೆ ಸೇರಿದಂತೆ ದೇವಾಲಯ ನಿರ್ಮಿಸಿ ವಿಗ್ರಹವನ್ನು ಪ್ರತಿಷ್ಠಾಪಿಸಲಾಯಿತೆಂದು ಹೇಳಲಾಗಿದೆ. ಈ ದೇವಾಲಯವು ದ್ರಾವಿಡ ಶೈಲಿಯಲ್ಲಿರುವ ಪುಟ್ಟ ದೇವಾಲಯವಾಗಿದೆ. ಸಂತಾನದಾಯಕ ಮತ್ತು ರೋಗಭಯನಿವಾರಕ ದೇವಾಲಯವೆಂದು ಮೈಸೂರು ನಗರದ ಭಕ್ತರು ನಂಬಿದ್ದಾರೆ. ಅಲ್ಲದೆ ಈ ದೇವಾಲಯದಲ್ಲಿ ಮಕ್ಕಳಿಗೆ ಹೆದರಿಕೆ ಹೋಗಲಾಡಿಸಲು ಆಂಜನೇಯ ಯಂತ್ರ (ತಾಯತ) ಕಟ್ಟಲಾಗುತ್ತದೆ. ಈ ದೇವಾಲಯಕ್ಕೆ ಮುಸಲ್ಮಾನರು ಕೂಡ ತಮ್ಮ ಮಕ್ಕಳಿಗೆ ತಾಯತ ಕಟ್ಟಿಸಲು

ಬರುತ್ತಾರೆಂಬುದು ದೇವಾಲಯದ ಭೇಟಿಯ ವೇಳೆಯಲ್ಲಿ ಕಂಡುಬಂದಿದೆ. ದೇವಾಲಯದ ಎದುರು ಹೊರಗೆ ಸುಮಾರು ನಲವತ್ತು ಅಡಿ ಎತ್ತರದ ಗರುಡಗಂಬ ಇದೆ.

## ಪಂಚಮುಖಿ ಆಂಜನೇಯ ದೇವಾಲಯ

ನಗರದ ಇರ್ವಿನ್ ರಸ್ತೆಯಲ್ಲಿರುವ ಪ್ರಾಚೀನ ದೇವಾಲಯಗಳಲ್ಲಿ ಇದು ಒಂದಾಗಿದೆ. ಈ ದೇವಾಲಯದ ಪ್ರಧಾನ ಅರ್ಚಕರಾದ ಎಸ್.ಕೃಷ್ಣಮೂರ್ತಿಯವರು ಹೇಳುವ ಪ್ರಕಾರ ಇರ್ವಿನ್ ರಸ್ತೆಯಲ್ಲಿ ಈಗಿರುವ ಪಂಚಮುಖಿ ಆಂಜನೇಯ ದೇವಾಲಯವನ್ನು ಮೂರನೇ ಬಾರಿಗೆ ಪ್ರತಿಷ್ಠಾಪಿಸಲಾಗಿದೆ. ಮೊದಲು ಚರ್ಚ್ ಸಮೀಪ ಇದ್ದ ವಿಗ್ರಹವನ್ನು ನಂತರ ಅಶೋಕ ರಸ್ತೆಯಲ್ಲಿ ದೇವಾಲಯ ಕಟ್ಟಿ ಪ್ರತಿಷ್ಠಾಪಿಸಲಾಯಿತು. ಅನಂತರ ಅದನ್ನು ಈಗಿನ ದೇವಾಲಯದಲ್ಲಿ ಪ್ರತಿಷ್ಠಾಪಿಸಲಾಗಿದೆ. ಸುಮಾರು 400 ವರ್ಷಗಳಷ್ಟು ಪ್ರಾಚೀನತೆ ಹೊಂದಿರುವ ಈ ಪಂಚಮುಖಿ ಆಂಜನೇಯ ವಿಗ್ರಹ ಇರ್ವಿನ್ ರಸ್ತೆಯ ದೇವಾಲಯದಲ್ಲಿ ಪ್ರತಿಷ್ಠಾಪಿಸಲಾಗಿದೆ. ಸುಮಾರು 90 ವರ್ಷಗಳು ಕಳೆದಿವೆ ಎಂದಿದ್ದಾರೆ. ಆದರೆ ಅರ್ಚಕರ ಈ ಹೇಳಿಕೆಗೆ ಯಾವುದೆ ಪುರಾವೆಗಳು ದೊರೆತಿಲ್ಲ. ಇಲ್ಲಿರುವ ಆಂಜನೇಯ ವಿಗ್ರಹದ ಪಂಚಮುಖಗಳಲ್ಲಿ ಐದು ಅವತಾರಗಳನ್ನು ಕೆತ್ತಲಾಗಿದೆ. ಆಂಜನೇಯ, ನರಸಿಂಹ, ವರಹಾ, ಹಯಗ್ರೀವ ಮತ್ತು ಗರುಡ ಕೆತ್ತನೆ ವಾಸ್ತುಶಿಲ್ಪಿಯ ಕಲಾ ಕೌಶಲ್ಯಕ್ಕೆ ಸಾಕ್ಷಿಯಾಗಿದೆ.

## ಪಾತಾಳ ಆಂಜನೇಯ ದೇಗುಲ

ಸುಮಾರು 300 ವರ್ಷಗಳಷ್ಟು ಪ್ರಾಚೀನ ದೇವಾಲಯವನ್ನು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ರಾಮಾಚಾರ್ ಎಂಬುವವರು ತಮ್ಮ ಸ್ವಂತ ಖರ್ಚಿನಿಂದ ನಗರದ ಮಹಾತ್ಮಗಾಂಧಿ ರಸ್ತೆಯಲ್ಲಿ ಈ ದೇವಾಲಯವನ್ನು ಕಟ್ಟಿಸಿದರು. ಈ ದೇವಾಲಯದ ಗರ್ಭಗುಡಿ ನೆಲಮಟ್ಟದಿಂದ ಕೆಳಗಿರುವುದರಿಂದ ಇದನ್ನು ಪಾತಾಳ ಆಂಜನೇಯ ಎಂದು ಕರೆಯಲಾಗಿದೆ. ಈ ದೇಗುಲಕ್ಕೆ ಶನಿವಾರದಂದು ಭಕ್ತರ ಸಂಖ್ಯೆ ಹೆಚ್ಚಿರುತ್ತದೆ. ರಾಮೋತ್ಸವ ಮತ್ತು ಹನುಮಂತೋತ್ಸವಗಳಲ್ಲಿ ವಿಜೃಂಭಣೆಯ ಪೂಜ ಕೈಂಕರ್ಯಗಳು ನಡೆಯುತ್ತವೆ. ರಾಮಾಚಾರ್ ಅವರ ವಂಶಸ್ಥರ ಉಸ್ತುವಾರಿ ಇದೆ. ಹಾಗೂ ಈ ಮನೆತನದ ಅರ್ಚಕರೇ ವಂಶಪಾರಂಪರಿಕವಾಗಿ ಮೂರನೇ ತಲೆಮಾರನ್ನು ತಲುಪಿದ್ದಾರೆ. ಇಂದು ನಾಗರಾಜ್‌ರವರು ನಡೆಸಿಕೊಂಡು ಹೋಗುತ್ತಿದ್ದಾರೆ.

## ಲಕ್ಷ್ಮೀರಮಣಸ್ವಾಮಿ ದೇವಾಲಯ

ಕೃಷ್ಣದೇವರಾಯನ ತಂದೆ ನರಸನಾಯಕ 1499ರಲ್ಲಿ ಈ ದೇವಾಲಯಕ್ಕೆ ದತ್ತಿಬಿಟ್ಟ ಶಾಸನದ ಉಲ್ಲೇಖವಿದೆ. ಎಂದರೆ ಇದರ ಕಾಲ ಸುಮಾರು 1500ಕ್ಕೂ ಹಿಂದೆ ಎಂದೆ ಹೇಳಬಹುದು. ಆದುದರಿಂದ ಈ ದೇವಾಲಯವನ್ನು ಮೈಸೂರು ನಗರದಲ್ಲೇ ಅತ್ಯಂತ ಪಾರಂಪರಿಕವಾದ ದೇವಾಲಯ ಎಂದು ಗುರುತಿಸಬಹುದಾಗಿದೆ. ಲಕ್ಷ್ಮೀರಮಣಸ್ವಾಮಿ ಆಕರ್ಷಣೀಯವಾಗಿದೆ. ಅಮ್ಮನವರು ಅರವಿಂದ ನಾಯಿಕೆ ನವರಂಗದಲ್ಲಿ ಆಳ್ವಾರರ ವಿಗ್ರಹಗಳಿವೆ. ಹೊರಗಡೆ ಕೈಮುಗಿದು ನಿಂತಿರುವ ರಾಜ ಒಡೆಯರ ವಿಗ್ರಹವಿದೆ. ಇದರ ಮುಂಭಾಗದಲ್ಲಿ ಅಂಟಿಕೊಂಡಂತೆ ಇರುವ ಮಂಟಪದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಪಟ್ಟಾಭಿಷೇಕವಾದದ್ದು. ಆದುದರಿಂದ ಇದಕ್ಕೆ ಪಟ್ಟಾಭಿಷೇಕ ಮಂಟಪವೆಂದೇ ಹೆಸರು. ಇದರ ನಿರ್ಮಾತೃ ಗುರಿಕಾರ ಪುಟ್ಟಯ್ಯನವರು. ಇಲ್ಲಿಯ ಉಭಯನಾಚ್ಯಾರು ಸಹಿತವಾದ ಉತ್ಸವ ವಿಗ್ರಹ, ಐದು ನೆಲೆಯ ಗೋಪುರ, ಐದು ಸುವರ್ಣಕಲಶ, ಎರಡು ಕೋರಂಬು ಮುಮ್ಮಡಿ ಕೃಷ್ಣರಾಜರ ಕೊಡುಗೆಯಾಗಿವೆ.

ಮೈಸೂರಿನ ಆಳ್ವಿಕೆಯನ್ನು ತನ್ನ ಕೈಗೆ ತೆಗೆದುಕೊಂಡ ಮೇಲೆ ಟಿಪ್ಪುಸುಲ್ತಾನ್ ಮೈಸೂರಿನ ಹಳೆಯ ಕೋಟೆ ಅರಮನೆಗಳನ್ನು ಒಡೆದು ಹಾಕಿದ. ಆತನ ನಿಧನಾ ನಂತರ ಜನರಲ್ ಹ್ಯಾರಿಸ್ ಹಾಗೂ ದಿವಾನ್ ಪೂರ್ಣಯ್ಯ ಮುಮ್ಮಡಿ ಕೃಷ್ಣರಾಜರಿಗೆ ಮೈಸೂರಲ್ಲೇ ಪಟ್ಟಕಟ್ಟಲು ಸಂಕಲ್ಪಿಸಿದರು. ದೈವಮಹಿಮೆ, ಸ್ಥಳ ಪ್ರಾಶಸ್ತ್ಯ, ಪರಂಪರೆ ಬೆರೆತಿದ್ದ ಈ ಆಲಯದ ಸಮ್ಮುಖದಲ್ಲಿ 1799ರಲ್ಲಿ ಪಟ್ಟೋತ್ಸವ ನಡೆಸಿದರು. ಆದ್ದರಿಂದಲೇ ಮುಮ್ಮಡಿಯವರು ಇಲ್ಲಿ ಶಾಸನ ಹಾಕಿಸಿ, ಪ್ರೋತ್ಸಾಹಿಸಿ ಪ್ರಾಶಸ್ತ್ಯ ನೀಡಿದ್ದುದಾಗಿದೆ.

## ಶ್ವೇತವರಹಾಸ್ವಾಮಿ ದೇವಾಲಯ

ಮೂಲತಃ ಇದರ ಆಲಯ ಶ್ರೀರಂಗಪಟ್ಟಣದ ಅರಮನೆಯ ಬಲಭಾಗದಲ್ಲಿತ್ತು. ಚಿಕ್ಕದೇವರಾಜರು ಅಲ್ಲಿಯೇ ಅಂಬುಜವಲ್ಲಿಯಮ್ಮ, ಉಭಯ ನಾಚ್ಚಿಯಾರ್ ಉತ್ಸವ ವಿಗ್ರಹ ಮಾಡಿಸಿದ್ದು. ಟಿಪ್ಪುಸುಲ್ತಾನನ ಕಾಲದಲ್ಲಿ ಆ ಗುಡಿ ಹಾಳಾಯಿತು. ಮುಮ್ಮಡಿಯವರಿಗೆ ದಿವಾನ್ ಪೂರ್ಣಯ್ಯ ಅದರ ಬಗ್ಗೆ ಅರಿಕೆ ಮಾಡಿಕೊಟ್ಟದ್ದರಿಂದ ಶ್ರೀರಂಗಪಟ್ಟಣದ ರಂಗನಾಥಸ್ವಾಮಿಯ ಮಂಟಪದಲ್ಲಿದ್ದ ಶ್ವೇತವರಹಾಸ್ವಾಮಿಯ ವಿಗ್ರಹವನ್ನು, ಶಿವಮೊಗ್ಗೆಯ ಬಳಿ ಶಿಥಿಲವಾಗಿ ಬಿದ್ದಿದ್ದ ಹೊಯ್ಸಳ ದೇವಾಲಯದ ಅವಶೇಷಗಳನ್ನು ತಂದು ಅವುಗಳನ್ನು ಬಳಸಿಕೊಂಡು ಈ ದೇವಾಲಯ ಕಟ್ಟಿದರು. ಐದುನೆಲೆಯ ಗೋಪುರ, ಐದು ಚಿನ್ನದ ಕಲಶ, ಎರಡು ಕೊರಂಬು, ಮಂಟಪ, ಪ್ರಾಕಾರ ಮಾಡಿಸಿ 1809ರಲ್ಲಿ ವಿಗ್ರಹ ಪ್ರತಿಷ್ಠಾಪಿಸಿದರು.

ಇದು ತನ್ನ ಎಲ್ಲ ಲಕ್ಷಣಗಳಲ್ಲೂ ಹೊಯ್ಸಳ ವಾಸ್ತುಶೈಲಿಯನ್ನು ಪ್ರತಿನಿಧಿಸುವ ದೇವಾಲಯ. ಈ ದೇವಾಲಯ ಸಂಪೂರ್ಣವಾಗಿ ಜಗತಿಯ ಮೇಲಿದೆ. ಕೆತ್ತನೆಯ ಕುಸುರಿಯಿರುವ ದ್ವಾರ, ನುಣುಪು ಕಂಭಗಳು ಅತ್ಯಾಕರ್ಷಕ ಗೋಪುರಗಳಿರುವುದು ಈ ದೇವಾಲಯದ ವಿಶೇಷಗಳಲ್ಲೊಂದಾಗಿದೆ. ದೇವಾಲಯದ ಭಿತ್ತಿಚಿತ್ರಗಳು ರಾಮಾಯಣ, ಭಾಗವತಗಳಿಗೆ ಸಂಬಂಧಪಟ್ಟ ಅನೇಕಾನೇಕ ಅತ್ಯಾಕರ್ಷಕ ಚಿತ್ರಕಲೆಗಳೂ ಇವೆ. ದೇವಸ್ಥಾನದ ನೈರುತ್ಯ ಮೂಲೆಯಲ್ಲಿ ಎತ್ತರದ ಗೋಡೆಯಲ್ಲಿ ಕೃಷ್ಣಲೀಲೆಯ, ರಾಮಪಟ್ಟಾಭಿಷೇಕದ ದೃಶ್ಯಗಳು ನಯನ ಮನೋಹರವಾಗಿವೆ. ಇದನ್ನು ಚಿತ್ರಿಸಿದ ವರ್ಷ 1875. ದೇವರ ವಿಗ್ರಹದ ಗಾತ್ರ ಮತ್ತು ಎತ್ತರ ಕಿರಿದಾದುದೆ. ಆದರೆ ಅಮ್ಮನವರ ವಿಗ್ರಹ ಶಂಖದ ಬಿಳುಪಿನದು. ಆದ್ದರಿಂದಲೇ ಶ್ವೇತವರಹಾವೆಂಬ ಹೆಸರು ಪ್ರಸಿದ್ಧವಾಗಿದೆ. ಅಮ್ಮನವರ ವಿಗ್ರಹಕ್ಕೆ ಇದು ವ್ಯತಿರಿಕ್ತವಾಗಿದೆ. ಪ್ರಸನ್ನ ಮುಖಭಾವ, ದಿವ್ಯತೇಜಸ್ಸಿನ ಅಂಬುಜವಲ್ಲಿಯಮ್ಮ ಸಾತ್ವಿಕ ಕಳೆಯ ಕೃಷ್ಣವರ್ಣ ಪ್ರತಿಮೆ. ಇದು ಕೇವಲ ಶಿಲೆಯ ಗುಡಿಯಾಗಿರದೆ ಕಲೆಯ ಬಲೆಯಾಗಿದೆ.

## ಪ್ರಸನ್ನ ಕೃಷ್ಣಸ್ವಾಮಿ ದೇವಾಲಯ

ಮುಮ್ಮಡಿ ಕೃಷ್ಣರಾಜರೇ ಈ ದೇವಾಲಯದ ಸಕಲ ವೈಭವಗಳಿಗೂ ಕಾರಣ ಕರ್ತೃ. ಇದು 1825ರಲ್ಲಿ ಆರಂಭವಾಗಿ 1829ರಲ್ಲಿ ಅಮೋಘವಾದ ಆಲಯದ ನಿರ್ಮಾಣದೊಂದಿಗೆ ಮುಕ್ತಾಯವಾಯಿತು. ಬೆಣ್ಣೆ ಮುದ್ದೆ ಹಿಡಿದ ಉತ್ತರಾಭಿಮುಖವಾಗಿರುವ ಅಂಬೆಗಾಲಿನ ಕೃಷ್ಣನ ಮುಗ್ಧ ಮೋಹನಮೂರ್ತಿ. ಗರ್ಭಗೃಹ, ನವರಂಗ, ಮುಖಮಂಟಪಗಳಿರುವ ಇದಕ್ಕೆ ಹದಿಮೂರು ವಿಮಾನಗೋಪುರ, ಇಪ್ಪತ್ತೊಂದು ಸುವರ್ಣಕಳಶಗಳಿವೆ. ನವರಂಗದಲ್ಲಿ ರುಕ್ಮಿಣಿ, ಸತ್ಯಭಾಮ, ರಂಗನಾಥ, ಚೆಲುವರಾಯ, ಲಕ್ಷ್ಮಿನರಸಿಂಹ, ವರದರಾಜ, ವೆಂಕಟರಮಣ ಮುಂತಾದ ಮೂರ್ತಿಗಳಿವೆ. ಅದರೊಂದಿಗೆ ಇಪ್ಪತ್ತನಾಲಕ್ಕು ಆಳ್ವಾರರ ವಿಗ್ರಹಗಳು ಕಂಗೊಳಿಸಿವೆ. ಪೆರುಂದೇವಿ ಅಮ್ಮನ ವಿಗ್ರಹ ಕಂಚಿಯಿಂದ ತಂದದ್ದು. ಭಾಗವತಾಧಾರಿತ ತೈಲಚಿತ್ರಗಳು ನವರಂಗದ ಗೋಡೆಗಳನ್ನು ಅಲಂಕರಿಸಿವೆ. ಬಣ್ಣ, ಭಾವ, ಬೆಡಗುಗಳಿಂದ ತುಂಬಿದ ಈ ಚಿತ್ರ ವೀಕ್ಷಣೆ ಸೊಗಸಾದ ಅನುಭವವನ್ನು ನೀಡುತ್ತದೆ. ಮುಮ್ಮಡಿಯವರು ಮುಕ್ತಹಾರ, ರತ್ನಾಭರಣ, ಕಿರೀಟ, ಬೆಳ್ಳಿ ಪೂಜೋಪಕರಣಗಳನ್ನು, ಬಗೆಬಗೆಯ ಉತ್ಸವಗಳ ಸಂದರ್ಭದಲ್ಲಿ ಅನೇಕಾನೇಕ ದಾನಗಳನ್ನು ನೀಡಿ ಈ ದೇವಾಲಯವನ್ನು ಶ್ರೀಮಂತಗೊಳಿಸಿದ್ದಾರೆ. ಮುಮ್ಮಡಿಯವರು ಮಾಡಿದ ವಿವಿಧ ದಾನ, ಧರ್ಮವನ್ನು ನಿರೂಪಿಸುವ ಶಿಲಾಶಾಸನ ಎಡಪಕ್ಕದಲ್ಲಿದೆ. ಒಡೆಯರು ಆತ್ರೇಯ ಗೋತ್ರದವರಾದ್ದರಿಂದ ಆಲಯದ ಮೊದಲ ಅರ್ಚಕನ ಗೋತ್ರವೂ ಅದೇ ಆದ್ದರಿಂದ

ಪ್ರಾಕಾರದಲ್ಲಿ ಅತ್ರಿ ಮಹರ್ಷಿಯ ಗುಡಿ ನಿರ್ಮಿಸಲಾಗಿದೆ. ಮೇಲುಕೋಟೆಯಿಂದ ತಂದ ಚೆಲುವರಾಯಸ್ವಾಮಿಯ ಪಾದುಕೆಗಳು ಹೊರ ಪ್ರಾಕಾರದಲ್ಲಿವೆ. ಇಲ್ಲಿ ನಡೆಯುವ ಕೃಷ್ಣ ಜಯಂತಿ, ಕೊಠಾರೋತ್ಸವಗಳು ಸುಪ್ರಸಿದ್ಧವಾದವು.

## ಖಿಲ್ಲೆ ವೆಂಕಟರಮಣಸ್ವಾಮಿ ದೇವಾಲಯ

ಈ ದೇವಾಲಯ ಆಧುನಿಕ ಕಾಲದ ನಿರ್ಮಾಣವಾಗಿದೆ. ಮೂರ್ನಾಲ್ಕು ಅಡಿ ಎತ್ತರದ ವೆಂಕಟರಮಣ ಮೂರ್ತಿ, ಗರ್ಭಗೃಹ, ತೂಗು ಹಾಕಿರುವ ಕಲ್ಕಿಯ ಅವತಾರ ಹಾಗೂ ಮುಮ್ಮಡಿಯವರ ತೈಲಚಿತ್ರಗಳು ಚಿತ್ತಾಕರ್ಷಕವಾಗಿವೆ. ಇದೇ ಜಾಗದಲ್ಲಿ ಮೊದಲು ಹಾಡ್ಯದ ನರಸಿಂಹನ್ ಗುಡಿಯಿತ್ತು. ಟಿಪ್ಪುವಿನ ಕಾಲದಲ್ಲಿ ಅರಮನೆ, ಕೋಟೆಗಳೊಂದಿಗೆ ಅದೂ ನಾಶವಾಗಿತ್ತು. ರಾಜ್ಯ ಕೈತಪ್ಪಿದ್ದರಿಂದ ಲಕ್ಷಮ್ಮಣ್ಣಿಯವರು ತೀವ್ರ ಚಿಂತಾಕ್ರಾಂತರಾಗಿದ್ದರು. ಕನಸಿನಲ್ಲಿ ಬಂದ ವೆಂಕಟರಮಣ 'ಬಲಮುರಿಯಲ್ಲಿರುವ ನನ್ನ ವಿಗ್ರಹವನ್ನು ಕೊಂಡೊಯ್ದು ಮೈಸೂರು ಅರಮನೆಯ ಕೋಟೆಯಲ್ಲಿ ಪ್ರತಿಷ್ಠಾಪಿಸು, ನಿನ್ನ ವಂಶಕ್ಕೆ ರಾಜ್ಯ ಮರಳಿ ದೊರೆಯುತ್ತದೆ' ಎಂದು ಹೇಳಲಾಗಿ, ಟಿಪ್ಪುವಿಗೆ ತಿಳಿಯದಂತೆ ವೆಂಕಟರಮಣನ ವಿಗ್ರಹವನ್ನು ಹೊತ್ತುತಂದು ಲಕ್ಷಮ್ಮಣ್ಣಿ ಅರಮನೆಯ ಕೋಟೆಯಲ್ಲಿ ಸ್ಥಾಪಿಸಿದರು. ಇದರಿಂದ ರಾಜವಂಶಸ್ಥರಿಗೆ ರಾಜ್ಯ ಮರಳಿ ಪ್ರಾಪ್ತವಾಯಿತು. ಇದರ ವಿವರವಿರುವ 19ನೇ ಶತಮಾನದ ಒಂದು ಸಾಲಿನ ಶಾಸನ ದೇವಾಲಯದ ಬಾಗಿಲುವಾಡದ ಮೇಲಿದೆ.

## ನಾರಾಯಣಸ್ವಾಮಿ ದೇವಾಲಯ

ಈ ದೇವಾಲಯವು ಮಹಾಬಲೇಶ್ವರ ದೇಗುಲದ ಹಿಂಭಾಗದಲ್ಲಿದೆ. ಇದು ಸಹ ಚಾಮುಂಡಿಬೆಟ್ಟದ ಪ್ರಮುಖ ದೇವಾಲಯಗಳಲ್ಲಿ ಒಂದಾಗಿದ್ದು, ಇದರ ನಿರ್ಮಾಣ 19ನೇ ಶತಮಾನದಲ್ಲಿ ಆಗಿದೆ. ಗರ್ಭಗೃಹ, ಅಂತರಾಳ, ಸಭಾಮಂಟಪ ಮತ್ತು ತೆರೆದ ಮಂಟಪಗಳನ್ನು ಹೊಂದಿರುವ ಈ ದೇವಾಲಯದಲ್ಲಿ ನಾರಾಯಣಸ್ವಾಮಿ ವಿಗ್ರಹವೇ ಪ್ರಮುಖವಾದುದು. ತನ್ನ ಕೈಗಳಲ್ಲಿ ಶಂಖ, ಚಕ್ರ, ಗದಾ, ಪದ್ಮಗಳನ್ನು ಹೊಂದಿರುವ ನಾರಾಯಣಸ್ವಾಮಿ ಶಿಲ್ಪವು ಮನಮೋಹಕವಾಗಿದೆ. ದೇವಾಲಯವು ಸುತ್ತಲು ಪ್ರಕಾರ ಗೋಡೆಯನ್ನು ಹೊಂದಿದೆ. ಬೆಟ್ಟಕ್ಕೆ ಬರುವ ಭಕ್ತಾದಿಗಳು ಇಲ್ಲಿಗೂ ಭೇಟಿ ನೀಡುತ್ತಾರೆ. ಪ್ರತಿನಿತ್ಯ ಪೂಜೆ–ಪುನಸ್ಕಾರಗಳು ನಡೆಯುತ್ತಿರುತ್ತವೆ.

## ಸತ್ಯನಾರಾಯಣ ದೇವಾಲಯ

1960ರಲ್ಲಿ ಈ ದೇವಾಲಯವು ಇಟ್ಟಿಗೆಗೂಡಿನಲ್ಲಿ ಸ್ಥಾಪಿಸಲಾಗಿದೆ. ಪ್ರತಿನಿತ್ಯ ದೇವರಿಗೆ ಬೆಳಿಗ್ಗೆ ಸಂಜೆ ಪೂಜೆ ಪುನಸ್ಕಾರಗಳು ನೆರವೇರುತ್ತವೆ. ಈ ದೇಗುಲವು ಪ್ರತ್ಯೇಕ ಗರ್ಭಗುಡಿಯನ್ನು ಹೊಂದಿದ್ದು ಅದಕ್ಕೆ ಮೂರು ದ್ವಾರಗಳಿರುವುದು ವಿಶೇಷವಾಗಿದೆ. ಪ್ರತಿನಿತ್ಯ ದೇವರಿಗೆ ಬೆಳಗ್ಗಿನ ಜಾವವೇ ಹೋಮ, ಅಭಿಷೇಕ, ಪ್ರಸಾದ ವಿತರಣೆ ಹೀಗೆ ಹಲವಾರು ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ದೇಗುಲದ ಮುಂಭಾಗ ಸಣ್ಣದಾದ ಗೋಪುರದಲ್ಲಿ ನಾರಾಯಣನ ಮೂರ್ತಿಯನ್ನು ಕಾಣಬಹುದಾಗಿದೆ.

## ಶ್ರೀ ಕೃಷ್ಣ ದೇವಾಲಯ

ಈ ದೇವಾಲಯ ನಿರ್ಮಾಣವಾಗಿ ಸುಮಾರು 24ವರ್ಷಗಳಾಗಿದೆ. ಮೈಸೂರು ನಗರದ ಗೋಕುಲಂನಲ್ಲಿ ಇರುವ ಈ ದೇವಾಲಯದಲ್ಲಿ ಕೃಷ್ಣಶಿಲೆಯಿಂದ ಸುಮಾರು 4.1/2ಅಡಿ ಎತ್ತರದ ಕೊಳಲುಕೃಷ್ಣನ ಮೂರ್ತಿಯನ್ನು ಸುಮಾರು 1.1/2ಅಡಿ ಎತ್ತರದ ಪೀಠದ ಮೇಲೆ ಸ್ಥಾಪಿಸಲಾಗಿದೆ. ಇಲ್ಲಿರುವ ಹಿತ್ತಾಳೆಯ ಉತ್ಸವಮೂರ್ತಿ ಶ್ರೀದೇವಿ–ಭೂದೇವಿ ಸಮೇತ ಶ್ರೀಮನ್ನಾರಾಯಣನ ಕೆತ್ತನೆ ನಯನಮನೋಹರವಾಗಿದೆ. ಪ್ರಧಾನ ದೇವರ ಗರ್ಭಗುಡಿಯ ಮೇಲೆ ಸುಮಾರು 9ಅಡಿ ಎತ್ತರದ ಶಿಖರವಿದ್ದು ವೈವಿಧ್ಯಮಯ ಕೆತ್ತನೆಯಿಂದ ಕೂಡಿದೆ. ಕೃಷ್ಣ ಜನ್ಮಾಷ್ಟಮಿಯ ಸಂದರ್ಭದಲ್ಲಿ ಪೂಜಾವಿಧಿಗಳು ಜರುಗುತ್ತವೆ. ವೈಶಾಖ ಶುದ್ಧ ದಶಮಿಯಂದು ಬ್ರಹ್ಮರಥೋತ್ಸವ ಆರಂಭವಾಗಿ ಐದುದಿನಗಳು ವಿವಿಧ ಪೂಜಾ ಕಾರ್ಯಕ್ರಮಗಳು ವಿಜೃಂಭಣೆಯಿಂದ ಜರುಗುತ್ತವೆ.

## ಪಾಂಡುರಂಗ ವಿಠಲಸ್ವಾಮಿ ದೇವಾಲಯ

1907ರಲ್ಲಿ ನಿರ್ಮಿತವಾಗಿರುವ ಈ ದೇವಾಲಯವು ನಗರದ ಅಶೋಕ ರಸ್ತೆಯಲ್ಲಿದ್ದು, ಪಾಂಡುರಂಗ ಹಾಗೂ ಪತ್ನಿಯರಾದ ಸಕ್ಕೂಬಾಯಿ ಮತ್ತು ರಕ್ಮಾಬಾಯಿಯರ ವಿಗ್ರಹವನ್ನು ಅಮೃತಶಿಲೆಯಿಂದ ಕೆತ್ತನೆ ಮಾಡಲಾಗಿದೆ. ಪಾಂಡುರಂಗನ ಪ್ರತಿಮೆ ಸುಮಾರು 4.1/2ಅಡಿ, ರುಕ್ಮಬಾಯಿ–ಸಕ್ಕೂಬಾಯಿಯರ ವಿಗ್ರಹಗಳು ಸುಮಾರು ನಾಲ್ಕು ಅಡಿಯವುಗಳಾಗಿವೆ. ಈ ಗರ್ಭಗುಡಿಯ ಬಲಭಾಗದಲ್ಲಿ ಸೂರ್ಯನಾರಾಯಣ ಮತ್ತು ಗಣಪತಿಯ ವಿಗ್ರಹಗಳನ್ನು, ಎಡಭಾಗದಲ್ಲಿ ಚಂದ್ರಮೌಳೇಶ್ವರ ಲಿಂಗ ಮತ್ತು ಪಾರ್ವತಿ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಈ

ದೇವಾಲಯದ ಎಲ್ಲಾ ಪೂಜಾ ವಿಧಿ–ವಿಧಾನಗಳು ಪಂಡರಾಪುರದ ಸಂಪ್ರದಾಯದಂತೆ ನಡೆಯುತ್ತವೆ.

## ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯ

1836ರಲ್ಲಿ ಅಗ್ರಹಾರದ ಕೃಷ್ಣವಿಲಾಸ ರಸ್ತೆಯಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಸಮೀಪವರ್ತಿಯಾಗಿದ್ದ ಸುಬ್ಬರಾಯದಾಸರು(ಗೋಪಾಲದಾಸರು) ಕಟ್ಟಿಸಿದರು. ಈ ದೇವಾಲಯದ ಸ್ಥಳ ಸುಬ್ರಹ್ಮಣ್ಯ ಅಗ್ರಹಾರವಾಗಿತ್ತು (ಕೃಷ್ಣವಿಲಾಸ ಅಗ್ರಹಾರ) ಪ್ರಜೆಗಳಿಗೆ ಉಂಟಾಗಿದ್ದ ರೋಗ ನಿವಾರಣೆಗಾಗಿ ಸುಬ್ಬರಾಯದಾಸರು ದೇವರಲ್ಲಿ ಮಾಡಿದ ಪ್ರಾರ್ಥನೆಯಿಂದಾಗಿ ಪ್ರಜೆಗಳು ರೋಗದಿಂದ ಮುಕ್ತರಾದರು. ಇದರಿಂದ ತೃಪ್ತರಾದ ಮುಮ್ಮಡಿ ಕೃಷ್ಣರಾಜ ಒಡೆಯರು ಸುಬ್ಬರಾಯದಾಸರಿಗೆ ಕೃಷ್ಣವಿಲಾಸ ಅಗ್ರಹಾರದಲ್ಲಿ ಮನೆ ನಿವೇಶನ ನೀಡಿದರು. ಅದೇ ಈ ದೇವಾಲಯವಾಗಿದೆ. ಈಗ ಸುಬ್ಬರಾಯದಾಸರ ವಂಶದ 5ನೇ ತಲೆಮಾರಿನ ವೆಂಕಟೇಶ್‌ದಾಸರು ಈ ದೇವಾಲಯದ ಅರ್ಚಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಗುರುವಾರದಂದು ಪ್ರಕಾರದಲ್ಲಿ ಉತ್ಸವಮೂರ್ತಿ ಕೂರಿಸಿ ತೇರೆಳೆಯುತ್ತಾರೆ (ಮರದ ತೇರು). ಹಬ್ಬ ಹಾಗೂ ಶರನ್ನವರಾತ್ರಿಯಲ್ಲಿ ವಿಶೇಷ ಪೂಜೆ ಮತ್ತು ಅಲಂಕಾರಗಳಿರುತ್ತವೆ. ವಿಜಯ ದಶಮಿಯದಿನದವರೆಗೂ ವಿವಿಧ ಅಲಂಕಾರಗಳು ನಡೆಯುತ್ತಲೆ ಇರುತ್ತವೆ. ಆ ಸಂದರ್ಭದಲ್ಲಿ ವಿಜೃಂಭಣೆಯ ಬ್ರಹ್ಮರಥೋತ್ಸವಕ್ಕೆ ಸಾವಿರಾರು ಮಂದಿ ಭಕ್ತರು ಬಂದು ಸಾಕ್ಷಿಯಾಗುತ್ತಾರೆ.

## ಯೋಗನರಸಿಂಹಸ್ವಾಮಿ ದೇವಾಲಯ

ಭಾಷ್ಯಂ ಸ್ವಾಮಿಜಿಯವರ ನೇತೃತ್ವದಲ್ಲಿ 1998ರಲ್ಲಿ ಯೋಗನರಸಿಂಹ ದೇವಾಲಯವನ್ನು, ವಿಜಯನಗರ ಬಡಾವಣೆಯ ಮೊದಲನೇ ಹಂತದಲ್ಲಿ ನಿರ್ಮಿಸಲಾಗಿದೆ. ಗರ್ಭಗುಡಿಯಲ್ಲಿರುವ ಯೋಗನರಸಿಂಹಸ್ವಾಮಿ ವಿಗ್ರಹವನ್ನು ಸಾಲಿಗ್ರಾಮ ಶಿಲೆಯಿಂದ ತಯಾರಿಸಲಾಗಿದೆ. ಯೋಗಮುದ್ರೆಯಲ್ಲಿ ಕುಳಿತಿರುವ ಸ್ವಾಮಿಯ ಬಲವೃಕ್ಷದಲ್ಲಿ ಲಕ್ಷ್ಮಿ ಇದ್ದಾಳೆ. ಸುಮಾರು ಆರು ಅಡಿ ಎತ್ತರದ ಯೋಗನರಸಿಂಹ ವಿಗ್ರಹವನ್ನು ಸುಮಾರು ಒಂದು ಅಡಿ ಎತ್ತರದ ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ನರಸಿಂಹನ ಹಸ್ತಗಳಲ್ಲಿ ಶಂಖ–ಚಕ್ರಗಳಿವೆ. ಗರ್ಭಗುಡಿಯ ಬೆಳ್ಳಿಯ ಬಾಗಿಲಿನ ಮೇಲೆ ಅಷ್ಟಲಕ್ಷ್ಮಿಯರ ಕೆತ್ತನೆ ಇದೆ. ಅಂತರಾಳದ ಬಾಗಿಲಿನಲ್ಲಿ ಸುಮಾರು ಆರು ಅಡಿ ಎತ್ತರದ ಜಯ–ವಿಜಯ ಎಂಬ ದ್ವಾರಪಾಲಕರನ್ನು ಕರಿಯಶಿಲೆಯಲ್ಲಿ ಕೆತ್ತಿ ನಿಲ್ಲಿಸಲಾಗಿದೆ. 18 ಕಂಭಗಳಿರುವ ಪ್ರಕಾರದಲ್ಲಿ 9 ಕಂಭಗಳ ಮಧ್ಯದಲ್ಲಿ ದೇವರ ಸ್ಥಾಪನೆ ಮಾಡಿದ್ದು ನವಗ್ರಹಾಧಿಪತಿ

ನರಸಿಂಹ ಎಂದೂ ಕರೆಯಲಾಗುತ್ತದೆ. ಒಳಗೆ ಹಜಾರದ ಗೋಡೆಗಳಲ್ಲಿ ನವನರಸಿಂಹಗಳ ಕೆತ್ತನೆ ಸುಂದರವಾಗಿದೆ. ಹಿತ್ತಾಳೆ ಕವಚ ಹೊಂದಿರುವ ನಲವತ್ತು ಅಡಿ ಎತ್ತರವಿರುವ ಮರದ ಗರುಡಸ್ತಂಭವನ್ನು ಗರ್ಭಗುಡಿಯ ಎದುರಿಗೆ ನಿಲ್ಲಿಸಲಾಗಿದೆ. ಗರುಡಸ್ತಂಭದ ಪೀಠವನ್ನು ಶಿಲೆಯಲ್ಲಿ ಮಾಡಲಾಗಿದ್ದು ಅದಕ್ಕೂ ಕೂಡ ಕವಚ ಹಾಕಲಾಗಿದೆ. ಗರ್ಭಗೃಹದ ಮೇಲಿರುವ ಶಿಖರವು ಸುಮಾರು 20ಅಡಿ ಎತ್ತರ ಇದ್ದು, ಅದರ ಸುತ್ತ ದಶಾವತಾರಗಳು, ವೆಂಕಟೇಶ್ವರ ಇತ್ಯಾದಿ ವಿಗ್ರಹಗಳ ಕೆತ್ತನೆ ಮಾಡಲಾಗಿದೆ.

ಹಬ್ಬ ಹರಿದಿನಗಳು, ನವರಾತ್ರಿ, ಶ್ರಾವಣ, ಕಾರ್ತಿಕಮಾಸಗಳಲ್ಲಿ ಸಾವಿರಾರು ಭಕ್ತರು ದರ್ಶನ ಪಡೆಯುತ್ತಾರೆ. ವರ್ಷದಲ್ಲಿ ಎರಡುಬಾರಿ ಮಹಾ ಸುದರ್ಶನ ಹೋಮ ನಡೆಯುತ್ತದೆ. ಮೇ ತಿಂಗಳಲ್ಲಿ ಲಕ್ಷಾರ್ಚನೆ, ಸಹಸ್ರ ಕಳಶಾಭಿಷೇಕ, ಶ್ರಾವಣ ಮತ್ತು ನವರಾತ್ರಿಗಳಲ್ಲಿ ವಿಶೇಷಾಲಂಕಾರಗಳು, ಪೂಜೆಗಳು ನಡೆಯುತ್ತವೆ. ಪಂಚಲೋಹದ ಸುದರ್ಶನ ಚಕ್ರ ಇರುವುದೇ ಇಲ್ಲಿನ ವಿಶೇಷವಾಗಿದೆ. ಹೊಸವರ್ಷದಂದು ವಿಶೇಷ ಪೂಜೆ ನಡೆಯುವುದರೊಂದಿಗೆ ಸಾವಿರಾರು ಭಕ್ತರಿಗೆ ಉಚಿತವಾಗಿ ಲಾಡು ಪ್ರಸಾದ ವಿನಿಯೋಗ ಮಾಡಲಾಗುತ್ತದೆ.

## ರಾಮಲಿಂಗೇಶ್ವರ ದೇವಾಲಯ

ಈ ದೇವಾಲಯ 1954ರಲ್ಲಿ ವಿದ್ಯಾರಣ್ಯಪುರಂನ ಸ್ಥಳಿಯರಿಂದ ನಿರ್ಮಿಸಲಾಗಿದೆ. ಪ್ರಧಾನ ಗರ್ಭಗುಡಿಯಲ್ಲಿ ರಾಮ, ಸೀತೆ, ಲಕ್ಷ್ಮಣ ಹಾಗೂ ಆಂಜನೇಯ ವಿಗ್ರಹಗಳಿವೆ. ಪೀಠಸಹಿತ ರಾಮನ ವಿಗ್ರಹ ಸುಮಾರು 5.1/2ಅಡಿ ಎತ್ತರವಿದ್ದು, ಉಳಿದವು ಸುಮಾರು ನಾಲ್ಕು ಅಡಿ ಎತ್ತರದಿಂದ 4.1/2ಅಡಿ ಎತ್ತರವುಳ್ಳವಾಗಿವೆ. ಹನುಮಂತನ ವಿಗ್ರಹ ಸುಮಾರು 2.1/2ಅಡಿ ಎತ್ತರವಾಗಿದೆ. ಈ ಗರ್ಭಗುಡಿಯ ಬಲಕ್ಕೆ ಪಾರ್ವತಿ ಹಾಗೂ ಗಣಪತಿ ಸನ್ನಿಧಿ, ಎಡಭಾಗಕ್ಕೆ ರಾಮಲಿಂಗೇಶ್ವರ ಇದೆ. ಗರ್ಭಗುಡಿಯ ಮೇಲಿರುವ ಶಿಖರ ಸುಮಾರು ನಾಲ್ಕು ಅಡಿ ಎತ್ತರವಾಗಿದೆ. ರಾಮನವಮಿಯಂದು ವಿಶೇಷ ಪೂಜಾ ಪುನಸ್ಕಾರಗಳು, ಪಾರಾಯಣಗಳು ಜರುಗುತ್ತವೆ.

## ಲಕ್ಷ್ಮೀಕಾಂತಸ್ವಾಮಿ ದೇಗುಲ

ಈ ದೇವಾಲಯವನ್ನು ಚೋಳರು ನಿರ್ಮಿಸಿರುವುದಾಗಿ ಹೇಳಲಾಗಿದೆ. ಹಿಂದೆ ಅದಕ್ಕೆ ಸಂಬಂಧಿಸಿದ ಶಾಸನಗಳಿದ್ದವಂತೆ, ಆದರೆ ಈಗ ಅವು ಲಭ್ಯವಿಲ್ಲ. ನಗರದ ಪ್ರಾಚೀನ ದೇವಾಲಯಗಳಲ್ಲಿ ಇದು ಕೂಡ ಒಂದಾಗಿದ್ದು, ಹಲವಾರು ವರ್ಷಗಳಿಂದ ಪಾಳುಬಿದ್ದಿತ್ತು. ಈಗ

ಸುಮಾರು 25–30 ವರ್ಷಗಳಿಂದೀಚೆಗೆ ಕುಂಬಾರ ಕೊಪ್ಪಲಿನ ನಾಗರಿಕರ ಕಾಳಜಿಯಿಂದಾಗಿ ಮಾದೇಗೌಡರ ನೇತೃತ್ವದಲ್ಲಿ ಪುನರ್ ಪೂಜಾಕೈಂಕರ್ಯಗಳು ನಡೆಯುವಂತಾಗಿದೆ.

ಲಕ್ಷ್ಮೀಕಾಂತಸ್ವಾಮಿ ದೇವಾಲಯವು ಗರ್ಭಗುಡಿ, ಅಂತರಾಳ, ಸ್ತಂಭಾಲಯಗಳನ್ನು ಒಳಗೊಂಡಿದ್ದು, ಗರ್ಭಗುಡಿಯಲ್ಲಿ ಸುಮಾರು ನಾಲ್ಕು ಅಡಿ ಎತ್ತರದ ಲಕ್ಷ್ಮೀಕಾಂತಸ್ವಾಮಿ ವಿಗ್ರಹವನ್ನು ಸುಮಾರು ಎರಡು ಅಡಿ ಎತ್ತರದ ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ಅದಕ್ಕೆ ಬಳಸಿರುವ ಶಿಲೆ ಕೆಂಪುಬಣ್ಣ (ಜೇನುತುಪ್ಪದ ಬಣ್ಣ) ಎಂಬುದಾಗಿ ರವಿಚಂದ್ರರವರು ತಿಳಿಸಿದ್ದಾರೆ. ಹೊರಗಿನಿಂದ ಅದು ಕರಿಯಶಿಲೆಯಂತೆ ಕಂಡುಬರುತ್ತದೆ. ಪಂಚಾಮೃತ ಅಭಿಷೇಕ, ತೈಲಮಜ್ಜನದಿಂದಾಗಿ ಅದು ಕಪ್ಪು ಬಣ್ಣದಂತೆ ಕಾಣುವುದಾಗಿ ಅವರು ಹೇಳುತ್ತಾರೆ. ತುಲಾಸಂಕ್ರಮಣದ ದಿನ ಸೂರ್ಯಕಿರಣ ಲಕ್ಷ್ಮೀಕಾಂತಸ್ವಾಮಿಯ ಪಾದದ ಮೇಲೆ ಬೀಳುತ್ತದೆಂದು ಅರ್ಚಕರು ಹೇಳುತ್ತಾರೆ.

## ಲಕ್ಷ್ಮೀನರಸಿಂಹಸ್ವಾಮಿ ದೇಗುಲ

ಈ ದೇವಾಲಯವು 1977ರಲ್ಲಿ ಕಾಳಿದಾಸ ರಸ್ತೆಯಲ್ಲಿ ನಿರ್ಮಾಣ ಮಾಡಲಾಗಿದೆ. ಗರ್ಭಗುಡಿಯಲ್ಲಿ ಸುಮಾರು ಐದು ಅಡಿ ಎತ್ತರದ ಲಕ್ಷ್ಮೀನರಸಿಂಹಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಪ್ರದಕ್ಷಿಣಾ ಪಥದಲ್ಲಿ ಗರ್ಭಗುಡಿಯ ಹಿಂಭಾಗದಲ್ಲಿ ಚಿಕ್ಕ ಚಿಕ್ಕ ಗರ್ಭಗೃಹಗಳನ್ನು ಕಟ್ಟಿ ಸೀತಾರಾಮ, ಲಕ್ಷ್ಮಣ, ಹನುಮಂತ, ರಾಮಾನುಜಚಾರ್ಯ, ಮನವಾಳ್ ಮಹಾಮುನಿ, ನಮ್ಮಾಳ್ವಾರ್, ತಿರುಮಂಗೈಲ್ವಾರ್, ಅಂಡಾಳ್ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಲಾಗಿದೆ. ಇಲ್ಲಿ ಶ್ರೀವೈಷ್ಣವ ಸಂಪ್ರದಾಯದಂತೆ ಪೂಜಾ ವಿಧಿಗಳನ್ನು ನೆರವೇರಿಸಲಾಗುತ್ತದೆ.

## ಶಂಕರನಾರಾಯಣಸ್ವಾಮಿ ದೇವಾಲಯ

ಈ ದೇವಾಲಯವು ಸುಮಾರು 80–90 ವರ್ಷಗಳಷ್ಟು ಹಳೆಯದಾಗಿದ್ದು, ಚಾಮುಂಡಿಪುರಂ ಸರ್ಕಲ್‌ನಲ್ಲಿದೆ. ಇದು ಒಂದು ಕುಟುಂಬಕ್ಕೆ ಸೇರಿದ ದೇವಾಲಯವಾಗಿದೆ. ಈ ದೇವಾಲಯವನ್ನು ಹೊರಗಿನಿಂದ ಗುರುತಿಸಲು ಸಾಧ್ಯವಿಲ್ಲ. ತುಂಬಾ ಹಳೆಯ ಮನೆಯಂತಿರುವ ಈ ದೇವಾಲಯ ಶಿಥಿಲಾವಸ್ಥೆಯಲ್ಲಿದೆ. ಅರ್ಚಕರ ಮನೆಯ ಒಳಗೆ ಹೋಗಲು ದೇವಾಲಯದ ಚಿಕ್ಕದ್ವಾರದ ಮೂಲಕವೇ ಹೋಗಬೇಕು. ಇದೇ ದೇವಾಲಯಕ್ಕೆ ಸೇರಿದಂತೆ ಅವರ ವಾಸದ ಮನೆಗಳು ಇವೆ. ಒಳಗೆ ಬಿಲ್ವಪತ್ರೆ, ಅತ್ತಿಮರಗಳು ಹಾಗೂ ಹೊರಗಿರುವ ಸ್ವಲ್ಪ ಸ್ಥಳದಲ್ಲಿ

ಅರಳಿಮರಗಳಿವೆ. ಇವೆಲ್ಲವೂ ಬಹುಶಃ ದೇವಸ್ಥಾನದಷ್ಟೇ ಪ್ರಾಚೀನವಾದವು. ಇದೇ ದೇವಾಲಯದ ಆವರಣದಲ್ಲಿ ನವಗ್ರಹ, ಚಂಡಿಕೇಶ್ವರ ದೇವರುಗಳನ್ನು ಪ್ರತಿಷ್ಠಾಪಿಸಲಾಗಿದೆ.

**ಸೂರ್ಯನಾರಾಯಣಸ್ವಾಮಿ ದೇವಾಲಯ**

ಸುಮಾರು ನೂರು ವರ್ಷಗಳಷ್ಟು ಹಳೆಯದಾದ ದೇವಾಲಯ ಇದಾಗಿದ್ದು, ಶಿಥಿಲವಾಗಿದ್ದ ಕಾರಣದಿಂದ ಅದೇ ಸ್ಥಳದಲ್ಲಿ 2005–2006ರಲ್ಲಿ ಜಿ.ಕೆ.ರಘುವೀರ್‌ಸಿಂಗ್ ಎಂಬುವವರು ಸ್ವಂತವಾಗಿ ರಾಜೀವನಗರ ಬಡಾವಣೆಯ ಎರಡನೇ ಹಂತದಲ್ಲಿ ಹೊಸದಾಗಿ ನಿರ್ಮಿಸಿದರು. ಹಳೆಯ ದೇವಾಲಯದಲ್ಲಿ ಸೂರ್ಯ, ಗಣಪತಿ, ಆಂಜನೇಯ ಮತ್ತು ಈಶ್ವರ ದೇವರುಗಳನ್ನು ಪ್ರತಿಷ್ಠಾಪಿಸಲಾಗಿತ್ತು. ಈಗ ಜೀರ್ಣೋದ್ಧಾರಗೊಳಿಸಿದ್ದರಿಂದ ದೇವಾಲಯವು ಒಂದು ಗರ್ಭಗುಡಿ ಹಾಗೂ ಮಧ್ಯಮ ಮಟ್ಟದ ಒಂದು ಹಜಾರವನ್ನು ಒಳಗೊಂಡಿದೆ. ಗರ್ಭಗುಡಿಯಲ್ಲಿ ಸುಮಾರು ಮೂರು ಅಡಿ ಎತ್ತರದ ಕಮಲದಾಕಾರದ ಪೀಠದ ಮೇಲೆ ಹತ್ತು ಅಡಿ ಎತ್ತರದ ಕರಿಶಿಲೆಯ ಸೂರ್ಯನಾರಾಯಣಸ್ವಾಮಿಯನ್ನು ಸ್ಥಾಪಿಸಲಾಗಿದೆ. ವಿಗ್ರಹಕ್ಕೆ ನಾಲ್ಕು ಕೈಗಳಿದ್ದು ಶಂಖ, ಚಕ್ರ ಹಾಗೂ ಕಮಲದ ಹೂವು ಒಂದೊಂದು ಕೈಗಳಲ್ಲಿದ್ದು ಮತ್ತೊಂದು ಅಭಯ ಹಸ್ತವಾಗಿದೆ. ಇದೇ ಮಾದರಿಯ ಮತ್ತು ಇಷ್ಟು ಎತ್ತರದ ಸೂರ್ಯನಾರಾಯಣ ವಿಗ್ರಹ ಒರಿಸ್ಸಾ ರಾಜ್ಯದಲ್ಲಿದೆ. ಮೈಸೂರಿನಲ್ಲಿರುವ ಈ ವಿಗ್ರಹವು ಭಾರತದಲ್ಲಿ ಎರಡನೆಯದು ಕರ್ನಾಟಕದಲ್ಲಿ ಮೊದಲನೆಯದು ಎಂದು ದೇವಾಲಯದ ಪ್ರಧಾನ ಅರ್ಚಕರಾದ ಕಿರಣ್ ಭಟ್‌ರವರು ತಿಳಿಸಿದ್ದಾರೆ. ದೇವಾಲಯದ ಹೊರಗೆ ಕಮಲದ ಹೂವನ್ನು ಕೆತ್ತಿ ಅದರ ಪೀಠದಲ್ಲಿ ಭಕ್ತರಿಗೆ ನಮಸ್ಕರಿಸಲು ಅನುಕೂಲವಾಗುವಂತೆ ಸೂರ್ಯ ನಾರಾಯಣಸ್ವಾಮಿಯ ಪಾದಗಳನ್ನು ಕೆತ್ತಿಡಲಾಗಿದೆ. ರಥಸಪ್ತಮಿ ಹಾಗೂ ವಾರ್ಷಿಕ ದಿನೋತ್ಸವಗಳಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ. ಇದೇ ಸಂದರ್ಭದಲ್ಲಿ ಅನ್ನಸಂತರ್ಪಣೆ, ಅಭಿಷೇಕ ಮುಂತಾದ ಪೂಜಾ ಕೈಂಕರ್ಯಗಳು ನಡೆಯುತ್ತವೆ. ಹಳೆಯ ದೇವಾಲಯದ ದೇವರ ಮೂರ್ತಿಗಳನ್ನು ಸಮೀಪದಲ್ಲೇ ಇರುವ ಈಶ್ವರ ದೇವಾಲಯದಲ್ಲಿ ಸಂಗ್ರಹಿಸಿಡಲಾಗಿದೆ.

## 3.3 ಶಕ್ತಿದೇವತೆ ದೇವಾಲಯಗಳು

ಪ್ರಾಚೀನ ಹಿಂದೂ ಪರಂಪರೆಯು ನೆಲೆಗೊಂಡ ದಿನದಿಂದಲೇ ಶಾಕ್ತ ಪರಿಕಲ್ಪನೆ ತಲೆಯೆತ್ತಿರಬಹುದು. ಶಕ್ತಿಯ ಪ್ರತಿರೂಪವೇ ಕಾಳಿ ಅಥವಾ ಭಗವತಿ. ದುರ್ಗಿಯನ್ನು ಪೂಜಿಸುವ ಆರಾಧಿಸುವ ಪರಿಪಾಠ ಭೂಮಿ ಉಗಮವಾದ ದಿನದಿಂದಲೂ ಅಸ್ತಿತ್ವದಲ್ಲಿತ್ತೆಂದು ಭಾವಿಸಬಹುದು. ದಾಖಲೆಗಳ ಕೊರತೆಯಿದ್ದರೂ ಶಕ್ತಿಯ ಆರಾಧನೆ ಅನಾದಿಕಾಲದಿಂದಲೂ

ನಡೆದು ಬಂದಿರುವುದು ಪುರಾಣಗಳಲ್ಲಿ ಉಲ್ಲೇಖಿತವಾಗಿದೆ. ಅಂಬಿಕೆ, ದುರ್ಗೆ, ಕಾಳಿ, ಕ್ಯಾತ್ಯಾಯಿನಿ, ಭಗವತಿ ಹೀಗೆ ಭಿನ್ನ ಭಿನ್ನ ಹೆಸರುಗಳಿಂದ ಶಕ್ತಿದೇವತೆಗಳ ಪೂಜೆಯು ಬೆಳೆದುಬಂದಿರಲು ಅವಕಾಶವಿದೆ.

ಹಿಂದೂ ಧರ್ಮದ ಶಕ್ತಿಯುತ ಮತ್ತು ವ್ಯಾಪಕ ಪ್ರಸಾರದ ಮತಗಳಲ್ಲಿ ಶಾಕ್ತ ಪಂಥ ಒಂದು ಕಾಲದಲ್ಲಿ ಈ ದೇಶದ ಬಹುಭಾಗವನ್ನು ವ್ಯಾಪಿಸಿತ್ತು. ಈ ಮತದ ಆರಾಧ್ಯ ದೇವತೆ ದೇವಿ ಅಥವಾ ಶಕ್ತಿ. "ಆರ್ಯರ ಆಗಮನ ಪೂರ್ವದಿಂದಲೂ ದೇವಿಯ ಉಪಾಸನೆ ಇದ್ದಿತೆಂದೂ, ಈಗ ಪ್ರಚಾರದಲ್ಲಿರುವ ಶಾಕ್ತಮತ ಒಂದಿಲ್ಲೊಂದು ರೂಪದಿಂದ ನಡೆಯುತ್ತ ಬಂದಿದೆ"[14] ಎಂಬ ಅಭಿಪ್ರಾಯವಿದೆ. ಕ್ರಿ.ಶ.ಆರನೆಯ ಶತಮಾನದಿಂದ ಹತ್ತನೆಯ ಶತಮಾನದವರೆಗೆ ಈ ಮತದ ಪ್ರಭಾವ ಅಧಿಕವಾಗಿದ್ದಿತೆಂದು ತಿಳಿದು ಬರುತ್ತದೆ. ಇದರ ಪ್ರಭಾವ ಭಾರತದ ಎಲ್ಲ ಪ್ರಮುಖ ಧರ್ಮಗಳ ಮೇಲೆ ಆಗಿದೆಯೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಈ ಮತದ ಮುಖ್ಯ ಆರಾಧ್ಯ ದೇವತೆ ಕಾಳಿ ಅಥವಾ ದುರ್ಗಾದೇವಿ.

ಮೈಸೂರು ಪ್ರದೇಶದಲ್ಲಿ ಶಕ್ತಿದೇವತೆಗಳ ಪರಂಪರೆಯ ಅಸ್ತಿತ್ವವನ್ನು ಸಾಬೀತು ಪಡಿಸಲು ಗಂಗರಕಾಲದ ಆಧಾರದ ಮೊರೆ ಹೋಗಬೇಕಾಗುತ್ತದೆ. ಮೈಸೂರಿನ ಹಿನಕಲ್ ಗ್ರಾಮದ ನನ್ನೇಶ್ವರ ದೇವಾಲಯದಲ್ಲಿ ಪ್ರಾಚೀನ ಕಾಲದ ಸಪ್ತಮಾತೃಕೆಯರ ವಿಗ್ರಹಗಳಿದ್ದು ಸುಮಾರು ಕ್ರಿ.ಶ.8ನೇ ಶತಮಾನದವು ಎಂದು ಗುರುತಿಸಲಾಗಿದೆ. ಕ್ರಿ.ಶ.7 ಮತ್ತು 8ನೇ ಶತಮಾನದವರೆಗೂ ಮೈಸೂರು ಪ್ರದೇಶದಲ್ಲಿ ಜೈನಧರ್ಮ, ಬೌದ್ಧಧರ್ಮ ಹಾಗೂ ವೈದಿಕಧರ್ಮದ ಪ್ರಾಬಲ್ಯ ಹೆಚ್ಚಾಗಿದ್ದು, ಅದರ ನಡುವೆಯೂ ಶಕ್ತಿದೇವತೆಗಳು ಅಸ್ತಿತ್ವವನ್ನು ಪಡೆದು ಕೊಂಡಿತ್ತು ಎಂಬುದಕ್ಕೆ ಆಧಾರಗಳು ಸಮರ್ಥಿಸುತ್ತವೆ. ಮುಂದುವರಿದಂತೆ ಈ ಪ್ರದೇಶದಲ್ಲಿ ಮೈಸೂರು ಅರಸರ ಮನೆ ದೇವತೆಯಾಗಿ ಶ್ರೀಚಾಮುಂಡೇಶ್ವರಿಯನ್ನು ಆರಾಧಿಸಲು ತೊಡಗಿದ ತರುವಾಯ ಶಾಕ್ತ ಪಂಥವು ವಿಜೃಂಭಿಸಿದಂತೆ ಕಂಡುಬರುತ್ತದೆ.

## ಮೈಸೂರು ನಗರದ ಪ್ರಮುಖ ಶಕ್ತಿದೇವತೆ ದೇವಾಲಯಗಳ ಪಟ್ಟಿ

| **ದೇವರು** | **ದೇವಾಲಯ ಇರುವ ಸ್ಥಳ** |
|---|---|
| ಚಾಮುಂಡೇಶ್ವರಿ–ಕನ್ಯಕಾಪರಮೇಶ್ವರಿ | ಅಶೋಕ ರಸ್ತೆ |
| ದುರ್ಗಾಪರಮೇಶ್ವರಿ | ಇಟ್ಟಿಗೆಗೂಡು |
| ಉತ್ತನಳಮ್ಮ | ಉತ್ತನಹಳ್ಳಿ |
| ಮಾರಮ್ಮ | |

| | |
|---|---|
| ಚಾಮುಂಡೇಶ್ವರಿ | ಒಂಟಿಕೊಪ್ಪಲು |
| ಜೋಡಿಮಾರಮ್ಮ | ಪಡುವಾರಹಳ್ಳಿ |
| ಚಾಮುಂಡೇಶ್ವರಿ | ಕನ್ನೇಗೌಡನ ಕೊಪ್ಪಲು |
| ಬಂದಂತಮ್ಮ ಕಾಳಮ್ಮ | ನ್ಯೂ ಕಾಂತರಾಜ ಅರಸ್ ರಸ್ತೆ (ಕನ್ನೇಗೌಡನ ಕೊಪ್ಪಲು) |
| ಕಾಳಮ್ಮ ದೇವಾಲಯ | ಕಾಳಮ್ಮ ದೇವಾಲಯದ ರಸ್ತೆ |
| ಆದಿಶಕ್ತಿ(ಬನ್ನಿಮರದಮ್ಮ)<br>ಮೂರುಮಾರಿ ಅಮ್ಮನ ದೇಗುಲಗಳು<br>ಮಹಾಲಕ್ಷ್ಮಿ | ಕುಂಬಾರ ಕೊಪ್ಪಲು |
| ಚಾಮುಂಡೇಶ್ವರಿ | ಕುವೆಂಪುನಗರ, ಅನಿಕೇತನ ರಸ್ತೆ |
| ಉದ್ಭವ ಬನಶಂಕರಿ ಕನ್ಯಕಾಪರಮೇಶ್ವರಿ | ಅಪೋಲೋ ಆಸ್ಪತ್ರೆ ರಸ್ತೆ, ಕುವೆಂಪುನಗರ |
| ಚಾಮುಂಡೇಶ್ವರಿ (ಚಿಕ್ಕಗುಡಿ) | ಗೋಕುಲಂ(ಡಾಕ್ಟರ್ಸ್ ಕಾಲೋನಿ) |
| ಚಾಮುಂಡೇಶ್ವರಿ | ಚಾಮುಂಡಿಬೆಟ್ಟ |
| ಚಾಮುಂಡೇಶ್ವರಿ ದೇವಾಲಯ | ಜಯನಗರ |
| ಅಷ್ಟೈಶ್ವರ್ಯಲಕ್ಷ್ಮಿ<br>ಮಾರಿಗುಡಿ | ಜೆ.ಪಿ.ನಗರ(ನಾಚನಹಳ್ಳಿ ಪಾಳ್ಯ) |
| ಬಿಸಿಲು ಮಾರಮ್ಮ | ಟೆಲಿಕಾಂ ಬಡಾವಣೆ, ತೊಣಚಿಕೊಪ್ಪಲು |
| ಶ್ರೀ ಕೋಟೆ ಮಾರಮ್ಮ | ಅರಮನೆ ಕೋಟೆ |
| ಗಂಗಮ್ಮ | ದಿವಾನ್ಸ್ ರಸ್ತೆ |
| ನಿಂಬುಜಾದೇವಿ(ಜಟ್ಟಿಗಳ ದೇಗುಲ) | ನಜರಾಬಾದ್ |
| ಅನ್ನಪೂರ್ಣೇಶ್ವರಿ<br>ಪದ್ಮಾವತಿ ಆಂಡಾಳ್ | ಎನ್.ಆರ್.ಮೊಹಲ್ಲಾ |
| ಚಾಮುಂಡೇಶ್ವರಿ(ಎರಡು ಇದೆ)<br>ಮಾರಿಯಮ್ಮ(ಎರಡು ಇದೆ)<br>ಹೂಮಾರಮ್ಮ | ಬಂಬೂಬಜಾರ್ |

| | |
|---|---|
| ದಂಡಿಮಾರಮ್ಮ | ಬೆಂಗಳೂರು ಮೈಸೂರು ರಸ್ತೆ |
| ಸಪ್ತಮಾತೃಕಾ ದೇವಾಲಯ<br>ಹಿರಿದೇವಮ್ಮ ದೇವಾಲಯ | ಬೋಗಾದಿ(ವರ್ತುಲ ರಸ್ತೆ) |
| ಮಾರಮ್ಮ | ದಟ್ಟಗಳ್ಳಿ |
| ಚಾಮುಂಡೇಶ್ವರಿ | ಬೋಗಾದಿ ಊರೊಳಗೆ |
| ಎಲ್ಲಾಮಾಂಬ | ಅಕ್ಬರ್ ರಸ್ತೆ |
| ಚಂದ್ರಗುಪ್ತಾಂಬ | ಮಾನಂದವಾಡಿ ರಸ್ತೆ |
| ಆದಿಶಕ್ತಿ | ಮಹದೇಶ್ವರ ಬಡಾವಣೆ |
| ಚಾಮುಂಡೇಶ್ವರಿ | ಮಧುವನ ಬಡಾವಣೆ(ಲಿಂಗಾಬುಧಿ ಕೆರೆ) |
| ಮಾರಿಯಮ್ಮ | ಮಂಚೇಗೌಡನ ಕೊಪ್ಪಲು |
| ಚಾಮುಂಡೇಶ್ವರಿ | ಮಹಾತ್ಮಗಾಂಧಿ ರಸ್ತೆ |
| ಕಾಮೇಶ್ವರ–ಕಾಮೇಶ್ವರಿ | ರಾಮಾನುಜ ರಸ್ತೆ |
| ರೇಣುಕಾಂಬ | ವಾಣೀವಿಲಾಸ ರಸ್ತೆ |
| ಸಪ್ತಮಾತೃಕ ಚೌಡೇಶ್ವರಿ | ವಿಜಯನಗರ 3ನೇ ಹಂತ |
| ಚಾಮುಂಡೇಶ್ವರಿ | ವೀರನಗೆರೆ(ಮಂಟಪದ ವೀರನಗೆರೆ ರಸ್ತೆ) |
| ಚಿಕ್ಕಮ್ಮ–ಚಿಕ್ಕದೇವಿ<br>ನರೆತಲೆ ಅಮ್ಮ | ವೀರನಗೆರೆ |
| ರಾಜರಾಜೇಶ್ವರಿ | ವಿಶ್ವೇಶ್ವರನಗರ, 3ನೇಹಂತ |
| ಚಾಮುಂಡೇಶ್ವರಿ | ವಿದ್ಯಾರಣ್ಯಪುರಂ, ಚಾಮುಂಡಿಪುರಂ |
| ಕನ್ಯಕಾಪರಮೇಶ್ವರಿ | ಶಿವರಾಂಪೇಟೆ |
| ಗಾಯತ್ರಿದೇವಿ | ಶಿವರಾಂಪುರ, 2ನೇಹಂತ |
| ಚಾಮುಂಡೇಶ್ವರಿ | ಹೆಬ್ಬಾಳು, ಬ್ಯಾಂಕ್ ರಸ್ತೆ |
| ಮಹಾಲಕ್ಷ್ಮೀ | ದಟ್ಟಗಳ್ಳಿ ನೇತಾಜಿ ಸರ್ಕಲ್ |

**ಚಾಮುಂಡೇಶ್ವರಿ ದೇವಾಲಯ ಚಾಮುಂಡಿಬೆಟ್ಟ**

ಚಾಮುಂಡೇಶ್ವರಿ ದೇವಾಲಯ ಚಾಮುಂಡಿಬೆಟ್ಟದ ಸುಪ್ರಸಿದ್ಧ ದೇವಾಲಯವಾಗಿದೆ. ಈ ದೇವಾಲಯ ದ್ರಾವಿಡ ಶೈಲಿಯಲ್ಲಿದೆ. ಮೂಲ ದೇವಾಲಯದ ನಿರ್ಮಾಣದ ಕಾರ್ಯವನ್ನು ಖಚಿತವಾಗಿ ಹೇಳಲು ಬರುವುದಿಲ್ಲವಾದರೂ ಒಡೆಯರ ಕಾಲದಲ್ಲಿ ಇದು ಸಾಕಷ್ಟು ಬದಲಾವಣೆಗಳನ್ನು ಹೊಂದಿದೆ. ಈ ದೇವಾಲಯದ ಪ್ರಾಚೀನತೆಯನ್ನು ಕುರಿತಾದ ನಿಖರ ದಾಖಲೆಗಳಿರುವುದಿಲ್ಲ. ದೇವಾಲಯವನ್ನು ಇಟ್ಟಿಗೆ ಗಾರೆಗಳಿಂದ ಕಟ್ಟಿರುವ ಗೋಪುರವು ಮೇಲೆ ಹೋಗುತ್ತ ಕಿರಿದಾಗುವ ಏಳು ಅಂತಸ್ತುಗಳಿಂದ ಕೂಡಿ ಉನ್ನತವಾಗಿದೆ. ಗರ್ಭಗೃಹ, ಅಂತರಾಳ, ಚಿಕ್ಕ ಮಹಾದ್ವಾರ ಮಂಟಪವು ಕ್ರಿ.ಶ.1659ರಲ್ಲಿ ನಿರ್ಮಿಸಲಾಗಿದ್ದು, ಅದು ದೊಡ್ಡ ದೇವರಾಜ ಒಡೆಯರ ಕಾಲಕ್ಕೂ ಹಿಂದಿನದಾಗಿದೆ. ಗರ್ಭಗೃಹವು ಚೌಕೋನವಾಗಿದೆ. ಆ ಕೋಣೆಯ ಮಧ್ಯಭಾಗದಲ್ಲಿ ಮಹಿಷಾಸುರ ಮರ್ಧಿನಿಯ ವಿಗ್ರಹವು ಚಾಮುಂಡಿಯು ಸಿಂಹದ ಮೇಲೆ ಕುಳಿತಿದ್ದು ಮಹಿಷಾಸುರನನ್ನು ಕೊಲ್ಲುವಂತೆ ಚಿತ್ರಿಸಲಾಗಿದೆ. ಹೊರಮೈಯಲ್ಲಿ ಒಂದೊಂದು ಅಂತಸ್ತಿನಲ್ಲಿ ಕಿರುಗೋಪುರಗಳು ತುಂಬಿದ್ದು ನಡುವಿನ ದ್ವಾರಗಳ ಇಕ್ಕೆಲಗಳಲ್ಲಿ ದ್ವಾರಪಾಲಕರೂ, ಗೋಪುರದ ಎರಡೂ ಪಕ್ಕಗಳಲ್ಲಿ ಕುಳಿತಿರುವ ಮೂರ್ತಿಗಳೂ, ತುದಿಯಲ್ಲಿ ಏಳು ಕಲಶಗಳುಳ್ಳ ಶಿಖರವೂ ಇದೆ. ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತು ಅವರ ಪತ್ನಿಯರಾದ ದೇವಾರಾಜಮ್ಮಣ್ಣಿ, ಚೆಲುವಾಜಮ್ಮಣ್ಣಿ, ಲಿಂಗಾಜಮ್ಮಣ್ಣಿಯ ಭಕ್ತ ವಿಗ್ರಹಗಳನ್ನು ಈ ಗುಡಿಯಲ್ಲಿ ನಿಲ್ಲಿಸಲಾಗಿದೆ.

ಗರ್ಭಗೃಹದ ಬಾಗಿಲುವಾಡವು ಬೆಳ್ಳಿಯಿಂದ ಅಲಂಕೃತವಾಗಿದೆ. ಹಾಗೆಯೇ ಚಾಮುಂಡೇಶ್ವರಿಯ ಬೆಳ್ಳಿಯ ಆಕೃತಿಯನ್ನು ದ್ವಾರಬಂಧದಲ್ಲಿ ಪಟ್ಟಿರಿಸಲಾಗಿದೆ. ಸಭಾಮಂಟಪ ಮತ್ತು ಮುಖಮಂಟಪಗಳಲ್ಲಿ ಎರಡು ಪ್ರವೇಶ ದ್ವಾರಗಳನ್ನು ಒಳಗೊಂಡು ಪೂರ್ವ ಮತ್ತು ದಕ್ಷಿಣ ದಿಕ್ಕಿಗಿವೆ. ಮುಖಮಂಟಪದ ಪ್ರವೇಶ ದ್ವಾರದಲ್ಲಿ ಬಲಿಪೀಠವಿದೆ. ಕ್ರಿ.ಶ.1827ರಲ್ಲಿ ಚಾಮುಂಡೇಶ್ವರಿ ದೇವಾಲಯದ ಮುಖ್ಯದ್ವಾರದ ಗೋಪುರವನ್ನು ಮುಮ್ಮಡಿಯವರು ಕಟ್ಟಿಸಿದರು.

ಮೈಸೂರು ಅರಸರು ಚಾಮುಂಡಿಯನ್ನು ತಮ್ಮ ಕುಲದೇವತೆಯೆಂದು ಆರಾಧಿಸ ತೊಡಗಿದ ನಂತರವಂತೂ ಚಾಮುಂಡಿ ಚಾಮುಂಡೇಶ್ವರಿಯಾಗಿ ಪ್ರತಿಷ್ಠಾಪಿತಳಾದಳು. ಈ ದೇವಾಲಯಕ್ಕೆ ವರ್ಷದ 365ದಿನವು ಭಕ್ತರು ತುಂಬಿರುತ್ತಾರೆ. ಇದರಿಂದ ಚಾಮುಂಡೇಶ್ವರಿಯ ಮೇಲಿರುವ ನಂಬಿಕೆಯ ಶಕ್ತಿಯನ್ನು ತಿಳಿಯಬಹುದು. ಅಲ್ಲದೇ ಇದೊಂದು ಪ್ರವಾಸೋದ್ಯಮ ಕೇಂದ್ರವಾಗಿಯು ಅಭಿವೃದ್ಧಿ ಹೊಂದಿರುವುದು ಕಾರಣವಾಗಿದೆ. ಈ ದೇವಾಲಯದ ಒಳಾಂಗಣದಲ್ಲಿ ಬಿಲ್ವಪತ್ರೆಯ ಮರವಿದೆ. ಇದರ ಪತ್ರೆ ಪೂಜೆಗೆ ಬಹಳ ಪವಿತ್ರವಾದುದು.

ಕನ್ನಕನ್ನಾಡಿ, ಮಡೆಹುಯ್ಯುವ ಆಚರಣೆ, ರಥೋತ್ಸವ, ತೆಪ್ಪೋತ್ಸವ, ವರ್ಧಂತಿ ಉತ್ಸವ, ಅಮಾವಾಸ್ಯೆ, ಹುಣ್ಣಿಮೆ, ಆಷಾಢ, ಶ್ರಾವಣ ಮುಂತಾದ ಆಚರಣೆಗಳು ವಿಜೃಂಭಣೆಯಿಂದ ನಡೆಯುತ್ತವೆ.

**ಜೈನ ಯಕ್ಷಿ:** "ಮೈಸೂರಿನ ಬೆಟ್ಟದ ಮೇಲಿರುವ ಚಾಮುಂಡಿಯು ಮೂಲತಃ ಜೈನಯಕ್ಷಿ ಎಂದು, ಇದು ಗಂಗರ ಚಾವುಂಡರಾಯನಿಂದ ಪ್ರತಿಷ್ಠಾಪಿಸಲ್ಪಟ್ಟಿದ್ದರಿಂದ ಚಾಮುಂಡಾ ಯಕ್ಷಿ ಎಂದು ಪ್ರಸಿದ್ಧವಾಗಿದ್ದು, ಜೈನಧರ್ಮವು ಕ್ಷೀಣಿಸಿದ ಮೇಲೆ ಅದು ಹಿಂದೂ ಪುರಾಣದೇವಿ ಚಾಮುಂಡೇಶ್ವರಿಯಾಯಿತೆಂದು ಒಂದು ಊಹೆ. ರಾಜಾವಳಿ ಕಥಾಸಾರದ ದೇವಚಂದ್ರನು ಈ ವಿಗ್ರಹ ಜೈನಯಕ್ಷಿ ವಾಸಂತಿಕಾ ದೇವಿಯದೆಂದು ಹೇಳುತ್ತಾನೆ. ಚಾಮುಂಡಿಯ ತಂಗಿಯೆಂದು ಹೇಳಲಾಗುವ ಉತ್ತನಹಳ್ಳಿ ಉರಿಕಾತಿ ಕೂಡ ಜೈನ ಯಕ್ಷಿ 'ಜ್ವಾಲಾಮಾಲಿನಿ' ಎಂಬುದಾಗಿ ತಿಳಿದುಬರುತ್ತದೆ. ಹೀಗೆ ಮೂಲದಲ್ಲಿ ಜೈನ ಯಕ್ಷಿಯರಾಗಿದ್ದ ಚಾಮುಂಡಾ ಹಾಗೂ ಜ್ವಾಲಾ ಮಾಲಿನಿಯರು ಜೈನಧರ್ಮ ನಶಿಸುತ್ತ ಬಂದಕಾಲಕ್ಕೆ ಶಾಸ್ತ್ರ ಸಂಪ್ರದಾಯದ ಜನಪದ ದೇವತೆಗಳಾಗಿ ಪರಿವರ್ತನೆ ಹೊಂದಿದಂತೆ ಕಾಣುತ್ತದೆ"[15]

## ಕನ್ಯಕಾ ಪರಮೇಶ್ವರಿ ದೇವಾಲಯ

ಈ ದೇವಾಲಯ ಅಶೋಕ ರಸ್ತೆಯಲ್ಲಿದೆ. ಇದರ ಕಾಲ ನಿರ್ಧರಿಸಲು ಅಲ್ಲೆ ಇರುವ ಸುಮಾರು 180 ವರ್ಷಗಳಷ್ಟು ಹಿಂದಿನ ಹಿತ್ತಾಳೆಯ ಗಂಟೆ ನೆರವಾಗುತ್ತದೆ. ಗಂಟೆಯ ಮೇಲೆ ಅದನ್ನು ದೇವಾಲಯಕ್ಕೆ ಕೊಡುಗೆಯಾಗಿ ಕೊಟ್ಟ ದಿನಾಂಕವನ್ನು ದಾಖಲಿಸಲಾಗಿದೆ ಎಂದು ದೇವಾಲಯದ ಟ್ರಸ್ಟ್‌ನ ಕಾರ್ಯದರ್ಶಿಗಳಾದ ವಿ.ಎಚ್.ಅಮರನಾಥ್ ಅವರು ತಿಳಿಸಿರುತ್ತಾರೆ. ಅಂದರೆ ದೇವಾಲಯ ಸುಮಾರು 180 ವರ್ಷಗಳಿಗಿಂತ ಹಿಂದಿನದಾಗಿದೆ. ಸುಮಾರು ಮೂರು ಅಡಿ ಎತ್ತರದ ನಿಂತಿರುವ ಶ್ರೀ ಕನ್ಯಕಾ ಪರಮೇಶ್ವರಿಯನ್ನು ಪ್ರತಿಷ್ಠಾಪಿಸಲಾಗಿದೆ. ಈ ವಿಗ್ರಹಕ್ಕೆ ಪಂಚಲೋಹದ ಪ್ರಭಾವಳಿಯನ್ನು ಹಾಕಲಾಗಿದೆ. ಈ ದೇವಾಲಯದಲ್ಲಿರುವ ಮರದ ನವರಾತ್ರಿ ಮಂಟಪ ಸುಮಾರು 120 ವರ್ಷಗಳಷ್ಟು ಹಳೆಯದು. ಇದನ್ನು ಮೈಸೂರಿನ ಆಸ್ಥಾನದ ಸಂಗೀತ ವಿದ್ವಾನ್ ಸದಾಶಿವರಾಯರು ಕೊಪ್ರಂ ಎಂಬ ಮನೆತನಕ್ಕೆ ಕೊಟ್ಟಿದ್ದರೆಂದು ಹೇಳಲಾಗಿದೆ. ಈ ಮಂಟಪವನ್ನು ದೇವಾಲಯದಲ್ಲ ನಡೆಯುವ ಉತ್ಸವಾದಿ ಕಾರ್ಯಕ್ರಮಗಳಲ್ಲಿ ಬಳಸಲಾಗುತ್ತಿತ್ತು. ಈಗ ಅದು ಹಳೆಯದಾದ್ದರಿಂದ ಕೆಲವು ವರ್ಷಗಳಿಂದ ಮಂಟಪವನ್ನು ಉಳಿಸಿಕೊಳ್ಳುವ ಸಲುವಾಗಿ ಒಂದು ಕೊಠಡಿಯಲ್ಲಿ ಸಂರಕ್ಷಿಸಲಾಗಿದೆ. ದೇವಾಲಯದ ಹಜಾರದಲ್ಲಿ (ಸ್ತಂಭಮಂದಿರ) ಹದಿನಾರು ಕಂಭಗಳಿವೆ. ಇವು ದೇವಾಲಯ ನಿರ್ಮಾಣ ಕಾಲದಲ್ಲಿ ಹಾಕಿದಂತಹವು. ಮೇಲ್ಛಾವಣಿಗೆ ಹಾಕಿರುವ ಕಲ್ಲುಚಪ್ಪಡಿಗಳೂ ಕೂಡ ಹಾಗೇ ಇವೆ. ಒಳಗಿನಿಂದ

ಗಾರೆ ಮಾಡಿಸಲಾಗಿದೆ(1983ರಲ್ಲಿ). ಮೈಸೂರಿನ ಮಹಾರಾಜರು ದೇವಿಯ ದರ್ಶನ ಪಡೆದು ಪೂಜೆ ಸಲ್ಲಿಸುತ್ತಿದ್ದರೆಂದು ಹೇಳುತ್ತಾರೆ.

ವರ್ಷದಾದ್ಯಂತ ಇಲ್ಲಿ ದೇವರಿಗೆ ಹಲವಾರು ವಿಶೇಷ ಪೂಜೆಗಳು, ಆಚರಣೆಗಳು, ಅಲಂಕಾರಗಳು ನಡೆಯುತ್ತವೆ. ವರ್ತಕ ಸಮುದಾಯಕ್ಕೆ ಸೇರಿರುವ ಈ ದೇವಾಲಯಕ್ಕೆ ಹಣದ ಕೊರತೆ ಇಲ್ಲದಿರುವುದರಿಂದ ನಡೆಯುವ ಕಾರ್ಯಕ್ರಮಗಳೆಲ್ಲ ವಿಜೃಂಭಣೆಯಿಂದ ಕೂಡಿರುತ್ತವೆ. ಶೈವ ಸಂಪ್ರದಾಯದಲ್ಲಿ ನಡೆಯುವ ಗಿರಿಜಾಕಲ್ಯಾಣ, ಕನ್ಯಕಾಪರಮೇಶ್ವರಿಯ ವರ್ಧಂತಿ ಉತ್ಸವ, ವಾಸವಿ ಜಯಂತಿ, ಆಕೆ ಅಗ್ನಿಕುಂಡ ಪ್ರವೇಶ ಮಾಡಿದ ದಿನ ನಡೆಸುವ ವಿಶ್ವರೂಪದರ್ಶನದ ಕೆಲವು ವಿಶಿಷ್ಟ ಆಚರಣೆಗಳು. ವಿಶ್ವರೂಪ ದರ್ಶನ ಸಮಾರಂಭದ ಸಂದರ್ಭದಲ್ಲಿ ಸುಮಾರು ಹದಿನೈದು ದಿನಗಳು ದೇವಿಗೆ ವಿವಿಧ ಪೂಜಾಲಂಕಾರಗಳನ್ನು ಮಾಡಲಾಗುತ್ತದೆ. ಕೊನೆಯ ದಿನದಂದು ನಗರದ ಪ್ರಮುಖ ಬೀದಿಗಳಲ್ಲಿ ಅಮ್ಮನಿಗೆ ಮಂಟಪೋತ್ಸವ ನಡೆಸಲಾಗುತ್ತದೆ. ಸಾವಿರಾರು ಜನರಿಗೆ ಅನ್ನಸಂತರ್ಪಣೆ ಮಾಡಲಾಗುತ್ತದೆ. ಇಲ್ಲಿಯ ಅಮ್ಮನವರ ಮೂರ್ತಿಗೆ ಬೆಳ್ಳಿಯ ಮಂದಾಸನ ಮಾಡಿಸಲಾಗಿದೆ.

## ಭುವನೇಶ್ವರಿ ದೇವಾಲಯ

ಈ ದೇವಾಲಯವು 1951ರಲ್ಲಿ ಜಯಚಾಮರಾಜೇಂದ್ರರಿಂದ ನಿರ್ಮಾಣವಾಯಿತು. ಮುಖ್ಯಮೂರ್ತಿ ಭುವನೇಶ್ವರಿಯನ್ನು ಕಡೆದಿದ್ದು ಶಿಲ್ಪಿ ಸಿದ್ಧಲಿಂಗಸ್ವಾಮಿ. ಇಲ್ಲಿರುವ ಸೂರ್ಯ, ಮಹಾವಿಷ್ಣು, ಮಹೇಶ್ವರ, ರಾಜರಾಜೇಶ್ವರಿ, ಗಣಪತಿ ಮತ್ತು ಚಾಮುಂಡೇಶ್ವರಿ ವಿಗ್ರಹಗಳು ಅವರ ರಚನೆಗಳೇ. ಅರಮನೆಯ ಕೋಟೆಯ ಉತ್ತರಭಾಗದಲ್ಲಿ ಯಾವುದೇ ಆಲಯವಿರಲಿಲ್ಲ. ದಕ್ಷಿಣದ ವರಹಾಸ್ವಾಮಿಗೆ ಹೊಂದಿಕೆಯಾಗುವಂತೆ ಇದನ್ನು ನಿರ್ಮಿಸಿದೆ. ಇದರ ಗೋಪುರ ದ್ರಾವಿಡ ಶೈಲಿಯಲ್ಲಿದೆ. ಭಾವ, ಮಾಟ, ಸೌಂದರ್ಯಗಳಿಂದ ಮೂರ್ತಿಗಳು ಮನಸ್ಸನ್ನು ಸೆಳೆಯುತ್ತವೆ. ಜಯಚಾಮರಾಜರು ಸಂತಾನ ಪ್ರಾಪ್ತಿಗಾಗಿ ಮೂರ್‍ನಾಲ್ಕು ವರ್ಷ ಪ್ರತಿ ತಿಂಗಳೂ ಭುವನೇಶ್ವರಿ ಹೋಮ ನಡೆಸಿ ಅಂತ್ಯದಲ್ಲಿ ಇದನ್ನು ಕಟ್ಟಿದರು. ಇಲ್ಲಿರುವ ತಾಮ್ರದ ಸೂರ್ಯ ಮಂಡಲ ಮೊದಲು ಅರಮನೆಯಲ್ಲಿತ್ತು. ಅನಂತರದಲ್ಲಿ ಇಲ್ಲಿಗೆ ತಂದು ಇರಿಸಲಾಗಿದೆ.

## ಗಾಯಿತ್ರಿದೇವಿ ದೇವಾಲಯ

ಈ ದೇವಾಲಯ 1953ರಲ್ಲಿ ಜಯಚಾಮರಾಜರಿಂದ ನಿರ್ಮಾಣವಾಗಿದೆ. ಉತ್ತುಂಗ ಗೋಪುರ, ಶಿಖರ, ಸಾವಿತ್ರಿ–ಗಾಯಿತ್ರಿ–ಲಕ್ಷ್ಮಿಯರ ವಿಗ್ರಹ ಮನಮೋಹಕವಾಗಿವೆ. ನವರಂಗದಲ್ಲಿರುವ ಗಣೇಶ, ಶಿವ, ಸೂರ್ಯ ಮತ್ತು ಮಹಾವಿಷ್ಣುವಿನ ಕೆತ್ತನೆಯ ಸೌಂದರ್ಯ ಅತಿಶಯವಾಗಿದೆ. ತ್ರಿಣೇಶ್ವರಾಲಯಕ್ಕೆ ಹೊಂದಿಕೆಯಾಗುವಂತೆ ಕಟ್ಟಲಾಗಿದೆ. ಜಗತಿಯ

ಮೇಲಿರುವ ಆಲಯ, ಹೊಯ್ಸಳ ಪದ್ಧತಿ ನೆನಪಿಸುತ್ತದೆ. ಇಡೀ ಆಲಯ ಕಟ್ಟಿದ್ದು ಶಿಲ್ಪಿ ಸಿದ್ಧಲಿಂಗಸ್ವಾಮಿ. ಜಯಚಾಮರಾಜರು ತಮ್ಮ ಮೊದಲ ಮಗಳಾದ ಗಾಯತ್ರಿದೇವಿ ಹುಟ್ಟಿದ ಮೇಲೆ ಆ ಸಂದರ್ಭಾಚರಣೆಯ ಕುರುಹಾಗಿ ಇದನ್ನು ನಿರ್ಮಿಸಿದರೆಂಬ ಪ್ರತೀತಿಯಿದೆ.

## ಶ್ರೀಕನ್ಯಕಾ ಪರಮೇಶ್ವರಿ ದೇವಾಲಯ

ಈ ದೇವಾಲಯ ಸುಮಾರು ನೂರು ವರ್ಷಗಳ ಹಿಂದಿನದು. ಬಿರುಸಿನ ವ್ಯಾಪಾರ ವಹಿವಾಟು ಇರುವ ಶಿವರಾಂಪೇಟೆಯಲ್ಲಿ ದೇವಾಲಯವನ್ನು ಗುರುತಿಸುವುದು ಕಷ್ಟವೆನಿಸುತ್ತದೆ. ಈ ದೇವಾಲಯವನ್ನು ಪ್ರವೇಶಿಸಿದಂತೆ ಪ್ರಶಾಂತ ವಾತಾವರಣ ಇದ್ದು ಅಲ್ಲಿ ಬೇರೆಯೇ ಲೋಕಕ್ಕೆ ಹೋದಂತೆ ಭಾಸವಾಗುತ್ತದೆ. ಈ ದೇವಾಲಯ ಸಂಕೀರ್ಣವಾಗಿದ್ದು ಒಂದೇ ಪ್ರದೇಶದಲ್ಲಿ ಅನೇಕ ದೇವತೆಗಳನ್ನು ಪ್ರತಿಷ್ಠಾಪಿಸಲಾಗಿದೆ. ಸುಮಾರು ಮೂರು ಅಡಿ ಎತ್ತರದ ಜಗತಿಯ ಮೇಲೆ ಪ್ರತ್ಯೇಕ ಗರ್ಭಗುಡಿಗಳನ್ನು ನಿರ್ಮಿಸಿ ದೇವರುಗಳನ್ನು ಪ್ರತಿಷ್ಠಾಪಿಸಿದ್ದಾರೆ. ಇಲ್ಲಿರುವ ದೇವರುಗಳೆಂದರೆ ಶ್ರೀಮತ್ ಕನ್ಯಕಾಪರಮೇಶ್ವರಿ, ವಿಘ್ನೇಶ್ವರ, ಶ್ರೀ ನೀಲಕಂಠೇಶ್ವರ ಸ್ವಾಮಿ, ಶ್ರೀ ಸತ್ಯನಾರಾಯಣಸ್ವಾಮಿ, ಶ್ರೀ ಪೂರ್ಣಮಂಗಳ ಕಾಮಾಕ್ಷಿ ಅಮ್ಮ, ವಲ್ಲಿ ದೇವಸೇನ, ಸುಬ್ರಹ್ಮಣ್ಯ, ಅಯ್ಯಪ್ಪಸ್ವಾಮಿ, ಪಂಚಮುಖಿ ಗಾಯಿತ್ರಿದೇವಿ. ಇದರ ಪ್ರದಕ್ಷಿಣಾ ಪಥದ ಹಿಂಭಾಗದಲ್ಲಿ ಅತ್ಯಂತ ಚಿಕ್ಕ ಅಂಡಾಕಾರದ ಕಲ್ಲಿನ ಮೇಲೆ ನವಗ್ರಹ ಶಿಲ್ಪಗಳನ್ನು ಇರಿಸಲಾಗಿದೆ. ಈ ದೇವಾಲಯದಲ್ಲಿ ಲೋಹದ ಉತ್ಸವಮೂರ್ತಿಗಳು, ವಾಹನಗಳು, ಮರದ ರಥ ಇವೆ.

## ಕಾಮೇಶ್ವರ–ಕಾಮೇಶ್ವರಿ ದೇವಾಲಯ

ಮಹಾರಾಜ ಜಯಚಾಮರಾಜ ಒಡೆಯರ್‌ರವರು ನಗರದ ರಾಮಾನುಜ ರಸ್ತೆಯಲ್ಲಿ ಕಾಮೇಶ್ವರ ಕಾಮೇಶ್ವರಿ ದೇವಾಲಯವನ್ನು 1954ರಲ್ಲಿ ಕಟ್ಟಿಸಿದರು. ಇದು ಜನರ ಬಾಯಲ್ಲಿ ಕಾಮ–ಕಾಮೇಶ್ವರಿ ದೇವಾಲಯ ಎಂದೇ ಪ್ರಸಿದ್ಧಿಯಾಗಿದೆ. ಈ ದೇವಾಲಯ ಕಟ್ಟಲು ಮಹಾರಾಜರು ನೇಪಾಳಕ್ಕೆ ಯಾತ್ರೆ ಕೈಗೊಂಡ ಸಂದರ್ಭದಲ್ಲಿ ಕಾಮೇಶ್ವರ–ಕಾಮೇಶ್ವರಿ ಮೂರ್ತಿಯನ್ನು ನೋಡಿ ಪುಳಕಿತಗೊಂಡು ಇದೇ ಮಾದರಿಯಲ್ಲಿ ಮೈಸೂರಿನಲ್ಲೂ ದೇವಾಲಯ ನಿರ್ಮಾಣ ಮಾಡಬೇಕು ಎಂದು ನಿರ್ಧರಿಸಿದರು. ಸುಮಾರು ಹನ್ನೊಂದು ವರ್ಷಗಳ ಶ್ರಮದ ಫಲವೇ ಈ ದೇವಾಲಯ ನಿರ್ಮಾಣವಾಗಿದೆ.

ದೇವಾಲಯದ ವಿಶಾಲವಾದ ಗರ್ಭಗೃಹದಲ್ಲಿ ಪಂಚಬ್ರಹ್ಮಾಸನ ಸ್ಥಿತೆ ಕಾಮೇಶ್ವರ–ಕಾಮೇಶ್ವರಿ ಪ್ರತಿಮೆ ಪ್ರಭಾವಳಿ ಸಹಿತ ಇದೆ. ಇದರ ಎತ್ತರ ಸುಮಾರು ನಾಲ್ಕುವರೆ ಅಡಿ ಇದ್ದು ಸುಮಾರು ಮೂರುಮುಕ್ಕಾಲು ಅಡಿ ಪೀಠದ ಮೇಲೆ ಪ್ರತಿಷ್ಠಾಪನೆ ಮಾಡಲಾಗಿದೆ. ಗರ್ಭಗೃಹದ ಒಳಗೆ ಕಾಮೇಶ್ವರ–ಕಾಮೇಶ್ವರಿ ವಿಗ್ರಹದ ಮುಂದೆ ಸುಮಾರು ಐದು ಅಡಿ ಎತ್ತರವಿರುವ

ಲಿಂಗವನ್ನು ಒಂದು ಅಡಿ ಪೀಠದಮೇಲೆ ಸ್ಥಾಪಿಸಲಾಗಿದೆ. ಅದರ ಮುಂದೆ ಶ್ರೀಚಕ್ರ ಹಾಗೂ ನಂದಿ ವಿಗ್ರಹಗಳಿವೆ. ಗರ್ಭಗುಡಿಯ ಅನಂತರದ ಅಂತರಾಳದಲ್ಲಿ ಉತ್ಸವಮೂರ್ತಿಗಳನ್ನು ಇಡಲಾಗಿದೆ. ಇದರ ದ್ವಾರದ ಇಕ್ಕೆಲಗಳಲ್ಲಿ ಧಾತ್ರಿ–ವಿಧಾತ್ರಿ ದ್ವಾರಪಾಲಕರನ್ನು ಕಡೆಯಲಾಗಿದೆ.

**ಚಾಮುಂಡೇಶ್ವರಿ ದೇವಾಲಯ**

ಈ ದೇವಾಲಯವು 1991ರಲ್ಲಿ ಕುಂಬಾರಕೊಪ್ಪಲು–ಹೆಬ್ಬಾಳು ಮುಖ್ಯರಸ್ತೆಯಲ್ಲಿ ನಿರ್ಮಾಣಗೊಂಡಿದೆ. ಸುಮಾರು ನಾಲ್ಕು ಅಡಿ ಎತ್ತರದ ಸಿಂಹವಾಹಿನಿ ಚಾಮುಂಡೇಶ್ವರಿ ಅಮ್ಮನವರ ಕಣಶಿಲೆಯ ವಿಗ್ರಹವನ್ನು ಪ್ರಧಾನ ಗರ್ಭಗುಡಿಯಲ್ಲಿ ಪ್ರತಿಷ್ಠಾಪನೆ ಮಾಡಲಾಗಿದೆ. ಇದು ಪ್ರದಕ್ಷಿಣ ಪಥವನ್ನು ಹೊಂದಿದ್ದು ಅಂತರಾಳದ ಬಾಗಿಲಿನ ಎರಡು ಕಡೆಯಲ್ಲಿಯೂ ಧಾತ್ರಿ–ವಿಧಾತ್ರಿ ದ್ವಾರಪಾಲಕಿಯರ ಕೆತ್ತನೆ ಇದೆ. ಗರ್ಭಗುಡಿಯ ಮೇಲೆ ಸುಮಾರು ಹತ್ತು ಅಡಿ ಎತ್ತರದ ಶಿಖರವಿದ್ದು ಅದರಲ್ಲಿ ದೇವಾನುದೇವತೆಗಳ ಕೆತ್ತನೆ ಮಾಡಲಾಗಿದೆ. ದೇವಾಲಯದ ಹಜಾರದಲ್ಲಿ ಗಣಪತಿ ಮತ್ತು ನವಗ್ರಹಗಳನ್ನು 2001ರಲ್ಲಿ ಪ್ರತಿಷ್ಠಾಪನೆ ಮಾಡಲಾಗಿದೆ. ಆಷಾಢ, ಶ್ರಾವಣ, ಧನುರ್ಮಾಸಗಳಲ್ಲಿ ಮಂಗಳವಾರ, ಶುಕ್ರವಾರದ ದಿನಗಳಲ್ಲಿ ದೇವಿಗೆ ವಿಶೇಷ ಪೂಜಾಲಂಕಾರಗಳನ್ನು ಮಾಡಲಾಗುತ್ತದೆ. ಭಕ್ತರ ಸಂಖ್ಯೆಯೂ ವಾರದದಿನಗಳಲ್ಲಿ ಹೆಚ್ಚಾಗಿರುತ್ತದೆ. ಚಾಮುಂಡೇಶ್ವರಿಯ ವರ್ಧಂತಿ ಉತ್ಸವವನ್ನು ಮೂರುದಿನಗಳ ಕಾಲ ವಿಜೃಂಭಣೆಯಿಂದ ಆಚರಿಸಲಾಗುತ್ತದೆ.

**ಚಾಮುಂಡೇಶ್ವರಿ ದೇವಾಲಯ (ವೀರನಗೆರೆ)**

ಮೈಸೂರು ನಗರದ ಪ್ರಮುಖ ಚಾಮುಂಡೇಶ್ವರಿ ದೇವಾಲಯಗಳಲ್ಲಿ ವೀರನಗೆರೆ ಮಂಟಪದ ರಸ್ತೆಯಲ್ಲಿರುವ ಚಾಮುಂಡೇಶ್ವರಿ ದೇವಾಲಯ ಒಂದಾಗಿದೆ. ಇಲ್ಲಿ ಕಲ್ಲಿನ ಮಂಟಪವೊಂದಿರುವುದರಿಂದ ಈ ರಸ್ತೆ ಮಂಟಪದರಸ್ತೆ ಎಂದೇ ಪ್ರಸಿದ್ಧವಾಗಿದೆ. ಮಹಾರಾಜರು ವಿಜಯ ದಶಮಿಯ ದಿವಸ ಜಂಬೂಸವಾರಿ ಬರುವಾಗ ಈ ಭಾಗದ ಜನರು ಮಂಟಪದ ರಸ್ತೆಯ ಇಕ್ಕೆಲಗಳಲ್ಲಿ ನಿಂತು ಮಹಾರಾಜರಿಗೆ ಗೌರವ ನೀಡುತ್ತಿದ್ದುದಾಗಿ ತಿಳಿದುಬರುತ್ತದೆ. ಅದೇ ರೀತಿ 'ವೈರಮುಡಿ'ಯು ಮೇಲುಕೋಟೆಗೆ ಅರಮನೆಯಿಂದ ಹೋಗುವ ಸಂದರ್ಭದಲ್ಲಿ ಅದನ್ನು ಇದೇ ಮಂಟಪದಲ್ಲಿರಿಸಿ ಪೂಜೆಸಲ್ಲಿಸಿದ ಅನಂತರ ನೆರೆದಿದ್ದ ಜನರಿಗೆ ದಣಿವಾರಿಸಲು ಪಾನಕ ಹಾಗೂ ನೀರುಮಜ್ಜಿಗೆ ಹಂಚಿದ ನಂತರವೇ ಮೇಲುಕೋಟೆಗೆ ತೆಗೆದುಕೊಂಡು ಹೋಗುತ್ತಿದ್ದರು. ಇತ್ತೀಚೆಗೆ 2002ರಲ್ಲಿ ಮಂಟಪದ ಹಿಂಭಾಗಕ್ಕಾದಂತೆ ಗರ್ಭಗುಡಿಯನ್ನು ನಿರ್ಮಿಸಿ ಸುಮಾರು ನಾಲ್ಕು ಅಡಿ ಎತ್ತರದ ಚಾಮುಂಡೇಶ್ವರಿ ವಿಗ್ರಹವನ್ನು ಸುಮಾರು ಎರಡುವರೆ ಅಡಿ ಎತ್ತರದ ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ಈಗ ದೇವಾಲಯದ ಜೀರ್ಣೋದ್ಧಾರ ಕೆಲಸಗಳಿಂದ

ವಿಶಾಲವಾದ ದೇವಾಲಯವಾಗಿ ರೂಪುಗೊಂಡರು ಹಳೆಯ ಕಲ್ಲಿನ ಮಂಟಪವನ್ನು ಹಾಗೇ ಉಳಿಸಿಕೊಳ್ಳಲಾಗಿದೆ.

## ಬಂದಂತಮ್ಮ ಆಧಿಶಕ್ತಿ ಕಾಳಮ್ಮ ದೇವಾಲಯ

ನಗರದ ಪ್ರಮುಖ ಶಕ್ತಿದೇವಿಯರ ದೇಗುಲಗಳಲ್ಲಿ ಕೆ.ಜಿ.ಕೊಪ್ಪಲು ನ್ಯೂ ಕಾಂತರಾಜ ಅರಸ್ ರಸ್ತೆಯಲ್ಲಿರುವ ಆಧಿಶಕ್ತಿ ಬಂದಂತಮ್ಮ–ಕಾಳಮ್ಮ ದೇವಾಲಯವು ಪ್ರಸಿದ್ಧವಾಗಿದೆ. ಶ್ರೀಬಂದಂತಮ್ಮ ಮತ್ತು ಶ್ರೀ ಕಾಳಮ್ಮ ಕನ್ನೇಗೌಡನ ಕೊಪ್ಪಲಿನ ಗ್ರಾಮದೇವತೆಯರು. ಬಹಳ ಹಿಂದಿನಿಂದಲೂ ಮಣ್ಣಿನಲ್ಲಿ ಮಾಡಿದ ದೇವಿಯರನ್ನು ವರ್ಷಕ್ಕೊಮ್ಮೆ ಗ್ರಾಮದ ನ್ಯಾಯ ತೀರ್ಮಾನಿಸುವ ಜಾಗವಾದ ಮರದ ಕೆಳಗೆ ಪ್ರತಿಷ್ಠಾಪನೆ ಮಾಡಿ ಪೂಜಿಸುತ್ತಿದ್ದರು. ಇತ್ತೀಚೆಗೆ 2002ರಲ್ಲಿ ಒಂದು ದೇವಾಲಯವನ್ನು ದೇವಿಯರಿಗಾಗಿ ನಿರ್ಮಿಸಲಾಗಿದೆ. ಈ ದೇವಾಲಯದಲ್ಲಿ ಸಾಲಾಗಿ ಮೂರು ಗರ್ಭಗುಡಿಗಳಿದ್ದು, ಮಧ್ಯದಲ್ಲಿ ಆಧಿಶಕ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಅದರ ಬಲಭಾಗದಲ್ಲಿ ಬಂದಂತಮ್ಮ, ಎಡಭಾಗದಲ್ಲಿ ಕಾಳಮ್ಮತಾಯಿಯನ್ನು ಪ್ರತಿಷ್ಠಾಪಿಸಲಾಗಿದೆ. ಮಂಗಳವಾರ ಮತ್ತು ಶುಕ್ರವಾರ ಮತ್ತು ಹಬ್ಬಹರಿದಿನಗಳಲ್ಲಿ ಭಕ್ತರಸಂಖ್ಯೆ ಅಪಾರವಾಗಿ ರಾತ್ರಿ ಹತ್ತುಗಂಟೆಯವರೆಗೂ ತುಂಬಿರುತ್ತಾರೆ. ಈ ದೇವಾಲಯದಲ್ಲಿ ಶಿವರಾತ್ರಿ ಹಬ್ಬ ನಡೆಯುವ ಉತ್ಸವ ಮತ್ತು ಪದ್ಧತಿಯು ಬಹಳ ವಿಶೇಷವಾದ ನಂಬಿಕೆ ಆಚರಣೆಗಳಿಂದ ಕೂಡಿದೆ.

## ಬಿಸಿಲು ಮಾರಮ್ಮ ದೇವಾಲಯ

ಗಂಗೋತ್ರಿ ಬಡಾವಣೆಯಲ್ಲಿರುವ ಬಿಸಿಲು ಮಾರಮ್ಮ ಸುಮಾರು ಮುನ್ನೂರು ವರ್ಷಗಳಷ್ಟು ಪಾರಂಪರಿಕವಾದ ದೇವತೆ. ಬಿಸಿಲು ಮಾರಮ್ಮ ಶಕ್ತಿದೇವತೆ, ಆರೋಗ್ಯದೇವತೆ ಹಾಗೂ ಬೇಡಿದ ವರಗಳನ್ನು ತಪ್ಪದೇ ನೀಡುವವಳು ಎಂಬ ನಂಬಿಕೆ ಇಂದಿಗೂ ಜನಮಾನಸದಲ್ಲಿದೆ. ಸಾಮಾನ್ಯವಾಗಿ ಮಾರಮ್ಮನಿಗೆ ದೇವಾಲಯಗಳೇ ಇರುತ್ತಿರಲಿಲ್ಲ. ಮರದ ಕೆಳಗೋ ಅಥವಾ ನಾಲ್ಕು ಚಪ್ಪಡಿಯ ಕಲ್ಲುಗಳ ಒಳಗೋ ಮಾರಮ್ಮನ ಶಿಲೆಯನ್ನಿಟ್ಟು (ಮೂರ್ತಿರೂಪ ಇಲ್ಲ) ವರ್ಷಕೊಮ್ಮೆ ಊರಮ್ಮನ ಜಾತ್ರೆಯಲ್ಲಿ ಪೂಜೆ ನಡೆಯುತಿತ್ತು. ರೋಗರುಜಿನಗಳು ದೊಡ್ಡಮಾರಿ, ಸಿಡುಬು–ಸೀತಾಳೆ, ಕಾಲರ ಜ್ವರ ಇತ್ಯಾದಿ ಸಂದರ್ಭದಲ್ಲಿ ಹರಕೆ ಮಾಡಿಕೊಂಡು ಮಾರಮ್ಮನಿಗೆ ತಂಪು ತೋರಿಸುತ್ತಿದ್ದರು. ಹರಳೆಣ್ಣೆ, ಕಣಿಗಿಲೆ ಹೂವು, ಬೇವಿನಸೊಪ್ಪು, ಎಳನೀರು, ಅರಿಶಿಣ–ಕುಂಕುಮ, ಗಂಧದಕಡ್ಡಿ, ಕರ್ಪೂರ, ತಂಬಿಟ್ಟು ಅಷ್ಟೇ ಅವಳಿಗೆ ಪೂಜೆಯ ಸಾಮಾಗ್ರಿಗಳು. ಆದರೆ ಈಗ ಇತರ ದೇವಿಯರಿಗಿರುವಂತೆ ದೇವಾಲಯ ನಿರ್ಮಾಣ ಮಾಡಲಾಗುತ್ತಿದೆ. ಆದರೂ ಬಿಸಿಲು ಮಾರಮ್ಮ ಮೇಲ್ಚಾವಣಿಯನ್ನು ಹೊಂದದೆ ಬಿಸಿಲಿನಲ್ಲಿ ಇರುವುದನ್ನು ಕಾಣಬಹುದು. ಸುತ್ತಲು ಗೋಡೆ ನಿರ್ಮಿಸಲಾಗಿದೆ ಆದರೆ ಮೇಲ್ಚಾವಣಿ

ಮಾತ್ರ ಇಲ್ಲದೆ ಬಿಸಿಲು, ಮಳೆ, ಗಾಳಿ ಎಂದೆಂದಿಗೂ ಮೇಲಿಂದ ಒಳಪ್ರವೇಶಿಸುವಂತಿದೆ. ಈ ದೇವಾಲಯದಲ್ಲಿ ಭಾನುವಾರ, ಮಂಗಳವಾರ, ಗುರುವಾರ ಹಾಗೂ ಶುಕ್ರವಾರ ನಾಲ್ಕುದಿನಗಳು ವಿಶೇಷವಾದ ಪೂಜೆಪುನಸ್ಕಾರಗಳು ನಡೆಯುತ್ತವೆ. ದೇವರಿಗೆ ಬೆಳ್ಳಿಯ ಮುಖವಾಡ, ಕಿರೀಟ ಹಾಗೂ ಆಭರಣಗಳಿವೆ. ಶಿವರಾತ್ರಿ ಹಬ್ಬಕ್ಕೆ ಮೊದಲು ನಡೆಯುವ ಮಾರಮ್ಮನ ಜಾತ್ರೆಯಲ್ಲಿ ಸಾವಿರಾರು ಭಕ್ತರು ಭಾಗವಹಿಸುತ್ತಾರೆ. ಅಂದು ಅನ್ನಸಂತರ್ಪಣೆ ನಡೆಯುತ್ತದೆ.

## ಶ್ರೀ ರಾಜರಾಜೇಶ್ವರಿ ದೇವಾಲಯ

1994ರಲ್ಲಿ ಶ್ರೀರಾಜರಾಜೇಶ್ವರಿ ದೇವಾಲಯವನ್ನು ವಿಶ್ವೇಶ್ವರನಗರದ ಮೂರನೆ ಹಂತದಲ್ಲಿ ನಿರ್ಮಿಸಲಾಗಿದೆ. ರಾಷ್ಟ್ರಪ್ರಶಸ್ತಿ ವಿಜೇತರಾದ ನರಸಿಂಹಾಚಾರ್‌ರವರು ಗರ್ಭಗುಡಿಯಲ್ಲಿರುವ ಶ್ರೀರಾಜರಾಜೇಶ್ವರಿ ದೇವಿಯ ವಿಗ್ರಹ ಕೆತ್ತನೆ ಮಾಡಿದ ಶಿಲ್ಪಿಯಾಗಿದ್ದಾರೆ. ದೇವಿಯ ವಿಗ್ರಹವನ್ನು ಬಳಪದ ಕಲ್ಲಿನಿಂದ ಕೆತ್ತಲಾಗಿದೆ ಎಂದು ದೇವಾಲಯದ ಅರ್ಚಕರು ತಿಳಿಸಿದ್ದಾರೆ. ಸುಮಾರು ಒಂದುವರೆ ಅಡಿ ಎತ್ತರದ ಪೀಠದ ಮೇಲೆ ಸುಮಾರು ಐದು ಅಡಿಯ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ದೇವಿಯ ವಿಗ್ರಹದ ಮುಂದೆ ಶ್ರೀಚಕ್ರವನ್ನು ನಿಲ್ಲಿಸಲಾಗಿದೆ. ಗರ್ಭಗುಡಿಯು ಒಂದುವರೆ ಅಡಿ ಎತ್ತರದ ಜಗತಿಯ ಮೇಲೆ ನಿರ್ಮಾಣ ಮಾಡಲಾಗಿದೆ. ಗರ್ಭಗುಡಿಯ ಮುಂಭಾಗ ಹನ್ನೆರಡು ಕಂಭಗಳ ತೆರೆದ ಮಂಟಪವಿದೆ. ಇಲ್ಲೇ ಪ್ರದಕ್ಷಿಣ ಪಥವಿದ್ದು, ಗಣಪತಿ, ದಕ್ಷಿಣಾಮೂರ್ತಿ, ಅಯ್ಯಪ್ಪಸ್ವಾಮಿ, ದತ್ತಾತ್ರೇಯ, ಸುಬ್ರಹ್ಮಣ್ಯ ಗುಡಿಗಳಿವೆ. 27.09.2009ರ ಮಹಾನವಮಿಯಂದು ವೀರಭದ್ರೇಶ್ವರ ಮತ್ತು ನವಗ್ರಹಗಳ ಪ್ರತಿಷ್ಠಾಪನೆ ಮಾಡಲಾಗಿದೆ. ಗರ್ಭಗುಡಿಯ ಶಿಖರದಲ್ಲಿ ದೇವಾನುದೇವತೆಗಳ ಕೆತ್ತನೆ ಮಾಡಲಾಗಿದೆ. ಗರ್ಭಗುಡಿಯ ಎದುರಿಗೆ ಸುಮಾರು ಇಪ್ಪತ್ತೈದು ಅಡಿ ಎತ್ತರದ ಧ್ವಜಸ್ತಂಭ ನಿಲ್ಲಿಸಲಾಗಿದೆ. ದೇವಾಲಯದಲ್ಲಿ ಫಲ–ಪುಷ್ಪ ವನಗಳು, ಔದುಂಬರ, ಬಿಲ್ವ, ಶಮೀವೃಕ್ಷಗಳೂ ಇವೆ. ದತ್ತಾತ್ರೇಯ ಪಂಚವಟಿಯೂ ಇಲ್ಲಿರುವುದು ಗಮಾನರ್ಹ. ಇಲ್ಲಿ ಮಂಗಳವಾರ, ಶುಕ್ರವಾರ, ಆಷಾಡ, ನವರಾತ್ರಿಗಳಲ್ಲಿ ವಿಶೇಷ ಪೂಜಾಲಂಕಾರಾಗಳು ಜರುಗುತ್ತವೆ.

## ಸಪ್ತಮಾತೃಕಾ ಚೌಡೇಶ್ವರಿ ದೇವಾಲಯ

ಅಪೂರ್ವವಾದ ಸಪ್ತಮಾತೃಕೆಯರ ದೇವಾಲಯವನ್ನು 2002ರಲ್ಲಿ ವಿಜಯನಗರದ ಮೂರನೇ ಹಂತದಲ್ಲಿ ನಿರ್ಮಿಸಲಾಗಿದೆ. ಇಲ್ಲಿರುವ ಶಿಲಾಫಲಕದಲ್ಲಿ, ಇದು ಮೈಸೂರು ನಗರದಲ್ಲಿ ಪ್ರಪ್ರಥಮವಾಗಿ ಸ್ಥಾಪನೆಯಾಗಿರುವ ಸಪ್ತಮಾತೃಕೆಯರ ದೇವಾಲಯ ಎಂಬುದಾಗಿ ತಿಳಿಸಲಾಗಿದೆ. ಆದರೆ ಇದಕ್ಕೂ ಪ್ರಾಚೀನವಾದ ಸಪ್ತಮಾತೃಕೆಯ ದೇವಾಲಯ ಚೋಳರ ಕಾಲದೆನ್ನಲಾದ ಬೋಗಾದಿಯ ಭೋಗೇಶ್ವರ ದೇವಾಲಯದ ಸಮೀಪದಲ್ಲಿದ್ದು, ಅದು

ಶಿಥಿಲವಾಗಿರುವ ಕಾರಣ ಅಲ್ಲಿಯ ವಿಗ್ರಹಗಳನ್ನು ಪಕ್ಕದ ಕೊಠಡಿಯಲ್ಲಿ ಸಂರಕ್ಷಿಸಿಡಲಾಗಿದೆ. ವಿಜಯನಗರದ ಸಪ್ತಮಾತೃಕೆಯ ದೇವಾಲಯ ಆಧುನಿಕವಾದುದು. ಸುಮಾರು ಎರಡು ಅಡಿ ಎತ್ತರದ ಜಗತಿಯ ಮೇಲೆ ಹಿರಿದಾದ ಗರ್ಭಗುಡಿಯಲ್ಲಿ ಸಪ್ತಮಾತೃಕೆಯರಾದ ಬ್ರಾಹ್ಮೀ, ಮಾಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ, ಚೌಡೇಶ್ವರಿಯರ ಶಿಲಾ ವಿಗ್ರಹಗಳನ್ನು ಆಗಮಶಾಸ್ತ್ರಕ್ಕನುಗುಣವಾಗಿ ಸ್ಥಾಪಿಸಲಾಗಿದೆ. ಈ ದೇವಿಯರ ವಿಗ್ರಹಗಳ ಮುಂಭಾಗದಲ್ಲಿ ಅಖಂಡ ಶಿಲಾ ಶ್ರೀಚಕ್ರದ ರಚನೆ ಇದೆ. ಅದರ ಮುಂಭಾಗದ ಬಲಕ್ಕೆ ಗಣಪತಿ, ಎಡಕ್ಕೆ ಭೈರವ ಮೂರ್ತಿ, ಉತ್ತರಕ್ಕೆ ಸುಖ–ದುಃಖ ದೇವಿಯರನ್ನು ಪ್ರತಿಷ್ಠಾಪಿಸಲಾಗಿದೆ. ಪ್ರತಿನಿತ್ಯ ಭಕ್ತರು ಪೂಜೆ ಪುನಸ್ಕಾರಗಳಲ್ಲಿ ತೊಡಗಿರುತ್ತರೆ.

## ನಿಂಬುಜಾದೇವಿ ದೇವಾಲಯ

ಶ್ರೀ ಸದಾನಂದ ಸುಬ್ಬಜಟ್ಟಪ್ಪನವರ ಜಟ್ಟಿಗಳ ಗರಡಿ ನಿಂಬುಜಾದೇವಿ ದೇವಸ್ಥಾನ ಟ್ರಸ್ಟ್ ನಜರಾಬಾದ್ ಮೈಸೂರು. ಇಲ್ಲಿರುವ ದೇವಾಲಯ ಒಂದು ಪುಟ್ಟದಾದ ಆಲಯವಾಗಿದೆ. 1883ರಿಂದ ಈ ಆಲಯದಲ್ಲಿ ಮಣ್ಣಿನಿಂದ ಮಾಡಿದ ದೇವಿಯ ವಿಗ್ರಹವನ್ನು ಆರಾಧಿಸಲಾಗುತ್ತಿತ್ತು. ಕಳೆದ ಇಪ್ಪತ್ತೈದು ವರ್ಷಗಳ ಹಿಂದೆ ರಾಮಜಟ್ಟಪ್ಪನವರು ಮತ್ತು ಅವರ ಸಮುದಾಯದವರು ಹಾಗೂ ಭಕ್ತಾದಿಗಳೆಲ್ಲರೂ ಸೇರಿ ನಿಂಬುಜಾದೇವಿಯ ದೇವಾಲಯ ನಿರ್ಮಿಸಿದ್ದಾರೆ. ಈ ದೇವಿಯು ಮಹಾಲಕ್ಷ್ಮಿ, ಪಾರ್ವತಿ, ಸರಸ್ವತಿ ಈ ಮೂರು ದೇವತೆಗಳ ಪ್ರತಿರೂಪವೆಂದು ನಂಬಲಾಗಿದೆ. ಈ ದೇವಿಯ ವಾಹನವು ನವಿಲಾಗಿದೆ. ನಿಂಬುಜಾದೇವಿಯು ಜಟ್ಟಿಗಳ ಕುಲದೇವತೆಯಾಗಿದ್ದು, ಪುರಾಣದಲ್ಲಿ ಈ ದೇವಿಯು ದೇವುಮಲ್ಲಚಾರ್ ಅನ್ನೋ ದೇವ ಪುರುಷನಿಗೆ ಒಲಿದಿರುವುದು ತಿಳಿದು ಬರುತ್ತದೆ. ಈ ದೇವಿಯನ್ನು ಚಾಮುಂಡೇಶ್ವರಿಯ ಸಹೋದರಿ ಎಂದು ನಂಬಲಾಗಿದೆ. ವಿಶೇಷವಾಗಿ ಪ್ರತಿ ಶುಕ್ರವಾರ ಮಹಾಲಕ್ಷ್ಮಿ ಹೋಮ, ಅಮಾವಾಸ್ಯೆಯಂದು ದುರ್ಗಾ ಹೋಮ, ಹುಣ್ಣಿಮೆಯಂದು ಚಂಡಿ ಹೋಮ ಮತ್ತು ದಾಸೋಹ ಕಾರ್ಯಕ್ರಮಗಳು ನಡೆಯುತ್ತದೆ. ನವರಾತ್ರಿ, ಆಷಾಢ ಮತ್ತು ಹಬ್ಬಗಳಲ್ಲಿ ವಿಶೇಷ ಪೂಜೆ ಪುನಸ್ಕಾರಗಳು, ದೇವಿಗೆ ಅಲಂಕಾರಗಳು ನಡೆಯುತ್ತವೆ. ಪ್ರತಿದಿನ ದೇವಿಗೆ ತುಪ್ಪದ ದೀಪದ ಸೇವೆ ನಿರಂತರವಾಗಿ ನಡೆಯುತ್ತದೆ. ಇಲ್ಲಿನ ವಿಶೇಷತೆಯೆಂದರೆ ವರ್ಷಪೂರ್ತಿ ದೇವಿಯ ಗರ್ಭಗುಡಿಯ ಮುಂದೆ ದೀಪವೊಂದು ಉರಿಯುತ್ತಿರುತ್ತದೆ. ಆ ದೀಪವು ದೊಡ್ಡದಾಗಿದ್ದು, ದೀಪದ ಕಂಬದಲ್ಲಿರುವ ಕಿಂಡಿಯಿಂದ(ಸಂದಿಯಿಂದ) ನೋಡಿದರೆ ಗರ್ಭಗುಡಿಯೊಳಗಿನ ದೇವಿಯ ಮೂರ್ತಿ ಕಾಣಿಸುತ್ತದೆ.

## ದುರ್ಗಾಪರಮೇಶ್ವರಿ ದೇವಾಲಯ

ಈ ದೇವಾಲಯವು ಇಟ್ಟಿಗೆಗೂಡಿನಲ್ಲಿ. ದುರ್ಗಾಪರಮೇಶ್ವರಿ ದೇವಾಲಯ ನಿರ್ಮಾಣಕ್ಕೂ ಮೊದಲು ಇಲ್ಲೆ ಇರುವ ಮರದ ಕೆಳಗೆ ದೇವಿಯ ಮೂರ್ತಿ ಇದ್ದು, ಅದಕ್ಕೆ ಭಕ್ತರು ಪೂಜೆ ಪುನಸ್ಕಾರಗಳನ್ನು ನೆರವೇರಿಸುತ್ತಿದ್ದರು. ಅನಂತರ ಒಂದು ಪುಟ್ಟ ಗುಡಿಯನ್ನು ಭಕ್ತರು ನಿರ್ಮಿಸಿದರು. ಈ ಗುಡಿಯ ಪಕ್ಕದಲ್ಲೇ ಮೈಸೂರು ಮಹಾರಾಜರ ವಿಶ್ರಾಂತಿ ಅರಮನೆಯಿದ್ದು ಅಲ್ಲಿಗೆ ಬರುತ್ತಿದ್ದ ಜಯಚಾಮರಾಜೇಂದ್ರ ಒಡೆಯರು ವಿಶ್ರಾಂತಿ ಪಡೆದ ಬಳಿಕ ತೆರಳುವಾಗ ಈ ದೇವಿಯ ದರ್ಶನ ಮಾಡುತ್ತಿದ್ದರು. 1982ರಲ್ಲಿ ಭಕ್ತಾದಿಗಳು ಮತ್ತು ದುರ್ಗಾಪರಮೇಶ್ವರಿ ದೇವಾಲಯದ ಟ್ರಸ್ಟ್ ಸೇರಿ ದೇವಿಗೆ ಬೃಹದ್ಧಾಕಾರದ ದೇವಾಲಯವನ್ನು ನಿರ್ಮಿಸಿದ್ದಾರೆ. ದುರ್ಗಾಪರಮೇಶ್ವರಿಯು ಶಕ್ತಿದೇವತೆಯಾಗಿದ್ದು ಭಕ್ತರ ಪಾಲಿಗೆ ಸಂಕಷ್ಟಗಳ ನಿವಾರಕಳಾಗಿದ್ದಾಳೆ. ಪ್ರಸ್ತುತ ಈ ದೇವಾಲಯವು ಸುಮಾರು ಇಪ್ಪತ್ತು ಅಡಿಗೂ ಹೆಚ್ಚು ಎತ್ತರದ ಗೋಪುರವನ್ನು ಹಾಗೂ ದೇವಸ್ಥಾನದ ಮುಂಭಾಗ ಹನ್ನೆರಡು ಅಡಿಗೂ ಎತ್ತರದ ಗರಡಗಂಬವನ್ನು ಹೊಂದಿದೆ. ಈ ದೇವಾಲಯವು ನಗರದ ಜನಸಂದಣಿ ಪ್ರದೇಶದಲ್ಲಿದ್ದು, ಪ್ರತಿನಿತ್ಯ ಬೆಳಿಗ್ಗೆ ಮತ್ತು ಸಂಜೆ ತೆರೆದಿರುತ್ತದೆ. ವಿಶೇಷ ದಿನದಂದು ದೇವಿಗೆ ವಿವಿಧ ಅಲಂಕಾರ ಹಾಗೂ ವಿಶೇಷ ಪೂಜೆಗಳು ನಡೆಯುತ್ತಿರುತ್ತವೆ ಜೊತೆಗೆ ದಾಸೋಹ ಕಾರ್ಯಕ್ರಮಗಳು ಜರುಗುತ್ತಿರುತ್ತವೆ.

## ರೇಣುಕಾಂಬ ದೇವಾಲಯ

ರೇಣುಕಾಂಬ ದೇವಾಲಯವು ಇಟ್ಟಿಗೆಗೂಡಿನ ಪ್ರದೇಶದ ಮಧ್ಯಭಾಗದಲ್ಲಿದೆ. ದೇವಾಲಯವು ತುಂಬಾ ಆಕರ್ಷಕವಾಗಿದ್ದು, ದೇವಿಗೆ ಪ್ರತ್ಯೇಕ ಗರ್ಭಗುಡಿ ಇದೆ. ದೇವಾಲಯದ ಗರ್ಭಗುಡಿಯ ಬಾಗಿಲುಗಳನ್ನು ಹಿತ್ತಾಳೆಯ ಕವಚದಿಂದ ಸಿಂಗರಿಸಲಾಗಿದೆ. ದೇವಾಲಯದ ಮುಂಭಾಗದಲ್ಲಿ ಸುಮಾರು 25–30 ಅಡಿ ಎತ್ತರದ ಸೂಕ್ಷ್ಮ ಕೆತ್ತನೆಗಳ ಗೋಪುರವನ್ನು ನಿರ್ಮಿಸಲಾಗಿದೆ. ಇಟ್ಟಿಗೆಗೂಡಿನ ಜನರು ದೇವಿಯನ್ನು ಬಹಳ ನಂಬಿಕೆಯಿಂದ ಪೂಜಿಸುತ್ತಾರೆ. ಏನೇ ಕಷ್ಟಗಳು ಬಂದರು ತಾಯಿ ನಿವಾರಿಸುತ್ತಾಳೆ ಎಂಬ ನಂಬಿಕೆ ಅವರಲ್ಲಿದೆ. ಈ ದೇವಾಲಯದಲ್ಲಿನ ವಿಶೇಷವೆಂದರೆ, ಮೈಸೂರು ಕರಗ, ಹಾಗಾಗಿ ಇದು ನಗರದ ಮಿನಿ ದಸರೆ ಎಂದು ಪ್ರಸಿದ್ಧಿಯಾಗಿದೆ.

## ಶ್ರೀ ಎಲ್ಲಮ್ಮಾಂಬ, ಚಂದ್ರಗುಪ್ತಾಂಬ ದೇವಾಲಯ

ಮೈಸೂರು ನಗರದ ಮಂಡಿಮೊಹಲ್ಲಾದ ಅಕ್ಬರ ರಸ್ತೆಯಲ್ಲಿರುವ ಶ್ರೀ ಎಲ್ಲಮ್ಮಾಂಬ ಚಂದ್ರಗುಪ್ತಾಂಬ ದೇವಾಲಯವು 1946ರಲ್ಲಿ ನಿರ್ಮಾಣವಾಗಿದೆ. ಅಂದು ಗೋಧೂಳಿ ಲಗ್ನದಲ್ಲಿ ಮೈಸೂರು ಸಿಟಿ ಮುನ್ಸಿಪಲ್ ಕೌನ್ಸಿಲ್ ಪ್ರೆಸಿಡೆಂಟರಾದ ಶ್ರೀಮಾನ್ ಆರ್.ರಾಮಚಂದ್ರರಾವ್

ಬಾಂಬೋರ ಅವರ ಅಮೃತ ಹಸ್ತದಿಂದ ಶಿಲಾನ್ಯಾಸ ಕಾರ್ಯನಡೆಯಿತು. ಇದು ಮಂಡಿ ಮೊಹಲ್ಲಾದ ಶಕ್ತಿದೇವತೆಯಾಗಿದ್ದು, ಅಲ್ಲಿನ ಜನರು ಭಕ್ತಿಭಾವಗಳಿಂದ ಪೂಜಿಸುತ್ತಾರೆ. ಈ ದೇವಾಲಯವು ಚಿಕ್ಕದಾಗಿದ್ದು ಒಂದೇ ಗರ್ಭಗುಡಿಯಲ್ಲಿ ಎಲ್ಲಮ್ಮಾಂಬ ಮತ್ತು ಚಂದ್ರಗುಪ್ತಾಂಬ ದೇವಿಯರ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. 1997ರಲ್ಲಿ ಈ ದೇವಾಲಯಕ್ಕೆ ಹೊಂದಿಕೊಂಡಂತೆ ನವಗ್ರಹಗಳ ಮಂಟಪವನ್ನು ನಿರ್ಮಿಸಲಾಗಿದೆ.

## ಆಧಿಶಕ್ತಿ ಬನ್ನಿಮರದಮ್ಮ

ಆಧಿಶಕ್ತಿ ಬನ್ನಿಮರದಮ್ಮ ದೇವಾಲಯವು ಮೈಸೂರು ನಗರದ ಕುಂಬಾರ ಕೊಪ್ಪಲಿನಲ್ಲಿರುವ ದೇವಾಲಯಗಳಲ್ಲಿ ಪ್ರಮುಖ ದೇವಾಲಯವಾಗಿದೆ. ಈ ದೇವಿಯು ಮೊದಲು ಹೆಬ್ಬಾಳು ಗ್ರಾಮದಲ್ಲಿದ್ದ ನಾರಾಯಣಸ್ವಾಮಿ ದೇಗುಲದಲ್ಲಿದ್ದಳು. ಆನಂತರದಲ್ಲಿ ಕುಂಬಾರ ಕೊಪ್ಪಲಿನಲ್ಲಿ ಬಂದು ನೆಲೆಸಿದಳು. ಇಲ್ಲಿ ದೇವಿ ನೆಲೆಸಲು ಬಂದ ಕಾರಣವನ್ನು ಊರಿನ ಅಧ್ಯಕ್ಷರಾದ ಮಾದೇಗೌಡರು ಈ ರೀತಿ ಹೇಳುತ್ತಾರೆ. "ಹೆಬ್ಬಾಳು ಗ್ರಾಮದಲ್ಲಿದ್ದ ಆಧಿಶಕ್ತಿ ದೇವಾಲಯದಲ್ಲಿ ನಾಯಕ ಸಮುದಾಯದವರು ಮತ್ತು ಅರಸು ಸಮುದಾಯದವರುಗಳ ನಡುವೆ ಕಲಹವಾಗಿ ಅಲ್ಲಿದ್ದ ದೇವಾಲಯವು ಸಂಪೂರ್ಣವಾಗಿ ನಾಶವಾಗಿ ಹೋಯಿತು. ಅಲ್ಲಿಂದ ಕೆಲವು ನಾಯಕ ಸಮುದಾಯದವರು ಈಗಿನ ಕುಂಬಾರಕೊಪ್ಪಲಿನಲ್ಲಿ ಬಂದು ನೆಲೆಸಿದರು. ಆದ್ದರಿಂದಾಗಿ ದೇವಿಯು ಇಲ್ಲಿ ಬಂದು ನೆಲೆ ನಿಲ್ಲಲು ಕಾರಣವಾಯಿತೆಂದು ಊರಿನ ಜನರು ನಂಬಿಕೊಂಡು ಬಂದಿದ್ದಾರೆ" ಎಂದು ಹೇಳುತ್ತಾರೆ.

ಆಧಿಶಕ್ತಿ ಬನ್ನಿಮರದಮ್ಮನವರಿಗೆ ಜನವರಿಯ ಕೊನೆಯವಾರ ಅಥವಾ ಫೆಬ್ರವರಿಯ ಮೊದಲವಾರದಲ್ಲಿ ವಿಜೃಂಭಣೆಯಿಂದ ಜಾತ್ರೆ ನಡೆಯುತ್ತದೆ. ಇಲ್ಲಿ ಪೂಜೆ ನಡೆಸುವವರು ಒಂದೇ ಮನೆತನಕ್ಕೆ ಸೇರಿದವರಾಗಿದ್ದಾರೆ. ಮೊದಲಿಗೆ ಕೆಂಪಣ್ಣ, ಲಿಂಗಪ್ಪ ಈಗ ಶಿವಣ್ಣನವರು ದೇವಿಗೆ ಪೂಜೆ ಸಲ್ಲಿಸುತ್ತಾ ಬಂದಿದ್ದಾರೆ. ಇವರುಗಳು ನಾಯಕ ಸಮುದಾಯಕ್ಕೆ ಸೇರಿದವರಾಗಿದ್ದಾರೆ.

## ಚಾಮುಂಡೇಶ್ವರಿ ದೇವಾಲಯ (ವಿದ್ಯಾರಣ್ಯಪುರಂ)

ಮೈಸೂರು ನಗರದ ವಿದ್ಯಾರಣ್ಯಪುರಂ ಬಡಾವಣೆಯ ಚಾಮುಂಡಿವನಂನಲ್ಲಿರುವ ಚಾಮುಂಡೇಶ್ವರಿ ದೇವಾಲಯವು ಜಯಚಾಮರಾಜ ಒಡೆಯರ ಕಾಲದ್ದಾಗಿದೆ. ದೇವಾಲಯ ನಿರ್ಮಾಣ ಮಾಡಲು ನಿವೇಶನವನ್ನು ರಾಜೇ ಅರಸ್‌ರವರು ಹಾಗೂ ಅವರ ಸಹೋದರರು ಹಿರಿಯರ ಗೌರವಾರ್ಥ ನೀಡಿದರು. 1955ರಲ್ಲಿ ಜಯಚಾಮರಾಜ ಒಡೆಯರು ಈ ದೇವಾಲಯ ಉದ್ಘಾಟನೆ ಮಾಡಿದರು. ಗರ್ಭಗುಡಿಯಲ್ಲಿರುವ ಚಾಮುಂಡೇಶ್ವರಿ ಸಿಂಹವಾಹಿನಿ ವಿಗ್ರಹವು ಸುಮಾರು ನಾಲ್ಕು ಅಡಿ ಇದ್ದು, ಒಂದು ಅಡಿ ಎತ್ತರದ ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ.

ದೇವಾಲಯದ ಅರ್ಚಕರು ತಿಳಿಸುವ ಪ್ರಕಾರ ದೇವಿಯ ವಿಗ್ರಹವು ಕೆಂಪು ಶಿಲೆಯದು. ವಿಗ್ರಹಕ್ಕೆ ಅಭಿಷೇಕ ಹಾಗೂ ತೈಲ ಮಜ್ಜನಗಳಿಂದಾಗಿ ಕಪ್ಪಾಗಿರುವಂತೆ ಕಾಣುತ್ತದೆ. ಇತ್ತೀಚೆಗೆ ಈ ದೇವಿಯ ಗರ್ಭಗೃಹದಲ್ಲಿ ಮೇರುಚಕ್ರವನ್ನು ಮಾಡಿಸಲಾಗಿದೆ ಗರ್ಭಗೃಹದ ಬಾಗಿಲ ಇಕ್ಕೆಲಗಳಲ್ಲಿ ದ್ವಾರಪಾಲಕಿಯರ ಕೆತ್ತನೆಗಳಿವೆ. ಈ ಗರ್ಭಗೃಹದ ಬಲಭಾಗದಲ್ಲಿ ಗಣಪತಿ ಸನ್ನಿಧಿ, ಎಡಭಾಗದಲ್ಲಿ ಶ್ರೀವಲ್ಲಿ ದೇವಸೇನ ಸಮೇತ ಶ್ರೀಸುಬ್ರಹ್ಮಣ್ಯ ಸನ್ನಿಧಿಗಳಿವೆ. ಪ್ರಕಾರದಲ್ಲಿ ದಕ್ಷಿಣಮೂರ್ತಿ, ಪರಶುರಾಮ, ಶ್ರೀನಿವಾಸ ದೇವರುಗಳನ್ನು ಪ್ರತಿಷ್ಠಾಪಿಸಲಾಗಿದೆ. ಈ ದೇವಾಲಯದಲ್ಲಿ ಚಾಮುಂಡೇಶ್ವರಿಯ ವರ್ಧಂತಿ ಉತ್ಸವವು ಬಹಳ ವಿಜೃಂಭಣೆಯಿಂದ ನಡೆಯುತ್ತದೆ.

## ಚಾಮುಂಡೇಶ್ವರಿ ದೇವಾಲಯ (ಕನ್ನೇಗೌಡನ ಕೊಪ್ಪಲು)

ಸುಮಾರು 300 ವರ್ಷಗಳ ಹಿಂದೆ ಕೆ.ಜಿ.ಕೊಪ್ಪಲಿನ ಆಗ್ನೇಯ ದಿಕ್ಕಿನಲ್ಲಿರುವ ಗ್ರಾಮದೇವತೆಯಾದ ಚಾಮುಂಡೇಶ್ವರಿ ಅಮ್ಮನವರನ್ನು ದಿವಂಗತ ಚಾಮಯ್ಯನ ಮನೆತನದವರು ಆಗಿನ ರಾಜರ ಆಳ್ವಿಕೆಯಲ್ಲಿ ನಾಲ್ಕು ಕಂಭಗಳ ಆಧಾರದ ಮೇಲೆ ಕಲ್ಲು ಚಪ್ಪಡಿಯನ್ನು ಹಾಕಿ ಗರ್ಭಗುಡಿಯನ್ನು ನಿರ್ಮಿಸಿದರು.

ಸುಮಾರು ನಾಲ್ಕು ತಲೆಮಾರುಗಳಿಂದ ದಿವಂಗತ ಚಾಮಯ್ಯನವರ ಮನೆತನದವರು ಪೂಜೆಯನ್ನು ಸಲ್ಲಿಸುತ್ತಾ ಬರುತ್ತಿದ್ದಾರೆ. ಇತ್ತೀಚೆಗೆ 1984ರಲ್ಲಿ ಗ್ರಾಮಸ್ಥರು ಮತ್ತು ಯಜಮಾನರು ದೇವಾಲಯವನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಚಾಮುಂಡೇಶ್ವರಿ ಅಮ್ಮನವರ ಗರ್ಭಗುಡಿಯನ್ನು ಹೊಸದಾಗಿ ನವೀಕರಿಸಿ ಜೀರ್ಣೋದ್ಧಾರ ಮಾಡಿದರು. ಮಂಚಯ್ಯನ ಮಗ ದೇಶೀಗೌಡರು ಸುಮಾರು 25ಲಕ್ಷವನ್ನು ದೇಣಿಗೆ ನೀಡಿ ದೇವಿಯ ಗರ್ಭಗುಡಿಯ ಮುಂಬಾಗಿಲ ಬಲಬದಿಯಲ್ಲಿ ವಿದ್ಯಾಗಣಪತಿ ಮತ್ತು ಸುಬ್ರಹ್ಮಣ್ಯ ಮೂರ್ತಿಗಳನ್ನು ಬಳಪದ ಕಲ್ಲಿನಲ್ಲಿ ಕೆತ್ತಿಸಿದರು ಹಾಗೂ ಎಡಬದಿಯಲ್ಲಿ ಸುಮಾರು ಎರಡೂವರೆ ಅಡಿ ಎತ್ತರದ ಕಂಚಿನ ಲೋಹದಿಂದ ತಯಾರಿಸಿರುವ ಅಮ್ಮನವರ ಉತ್ಸವ ಮೂರ್ತಿಯನ್ನು ಇರಿಸಿ, ಇದರ ಪಕ್ಕದಲ್ಲೇ ಬಳಪದ ಕಲ್ಲಿನ ಶಿವಲಿಂಗ ಮತ್ತು ಆ ಲಿಂಗಕ್ಕೆ ಎದುರಾಗಿ ಒಂದು ನಂದಿಯನ್ನು ಕೆತ್ತಿಸಿದ್ದಾರೆ.

ಎಂಟು ಕಂಭಗಳ ಆದಾರದ ಮೇಲೆ ಸುಂದರ ಸಭಾಂಗಣವನ್ನು ನಿರ್ಮಿಸಲಾಗಿದೆ. ದೇವಾಲಯದ ಹೆಬ್ಬಾಗಿಲಿನ ಮುಂದೆ ಸುಮಾರು ಏಳು ಅಡಿ ಎತ್ತರದ ಒಂದು ನಂದಿಕಂಬವನ್ನು ನಿರ್ಮಿಸಲಾಗಿದೆ. ಗೋಪುರದ ಮೇಲೆ ಸುಮಾರು 35 ಬಗೆಯ ದೇವಿಯ ವಿಗ್ರಹಗಳನ್ನು ನಿರ್ಮಿಸಲಾಗಿದೆ. ಗೋಪುರದ ಮಧ್ಯಭಾಗದಲ್ಲಿ ಸುಮಾರು ಐದು ಅಡಿ ಎತ್ತರದ ಸಿಂಹದ ಮೇಲೆ

ಕುಳಿತ ಮಹಿಷನನ್ನು ಸಂಹಾರ ಮಾಡುತ್ತಿರುವ ಮೂರ್ತಿಯನ್ನು ಕಾಣಬಹುದು. ಚಾಮುಂಡೇಶ್ವರಿಯ ವರ್ಧಂತಿ ಉತ್ಸವ, ಆಷಾಢ, ಮುಂತಾದ ಹಬ್ಬಗಳು ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ಇಲ್ಲಿ ದೇವರ ಮುಂದೆ ಹೂವು ಕೇಳುವ ಪದ್ಧತಿ ರೂಢಿಯಲ್ಲಿದೆ.

## ಜೋಡಿ ಮಾರಮ್ಮ

ಜೋಡಿ ಮಾರಮ್ಮ ದೇವಾಲಯವು ಪಡುವಾರಹಳ್ಳಿ ಪೂರ್ವದಿಕ್ಕಿನ ಕೊನೆಯಲ್ಲಿದೆ. ಜೋಡಿಮಾರಮ್ಮ ದೇವರುಗಳು ಅಕ್ಕತಂಗಿಯರಾದ ಪಡುವಾರಹಳ್ಳಿ ಮಾರಮ್ಮ ಮತ್ತು ಕುಕ್ಕರಹಳ್ಳಿ ಮಾರಮ್ಮಂದಿರು. ಈ ಎರಡು ದೇವರುಗಳನ್ನು ಒಟ್ಟಾಗಿ ಪೂಜಿಸುವುದರಿಂದ ಜೋಡಿಮಾರಮ್ಮ ಎಂದು ಕರೆದಿದ್ದಾರೆ. ದೇವಾಲಯದ ಮೂಲಗುಡಿ ಸ್ಥಾಪಿತವಾದ ವರ್ಷದ ಬಗೆಗೆ ಎಲ್ಲಿಯೂ ಖಚಿತವಾದ ಮಾಹಿತಿ ದೊರೆತಿಲ್ಲ. ಆದರೆ ನಾಯಕ ಸಮುದಾಯದ ಹಿರಿಯ ಹೆಂಗಸಾದ ಮಂಚಮ್ಮನವರು ಮೂಲದಲ್ಲಿದ್ದ ಪುಟ್ಟಗುಡಿಯನ್ನು ಕಟ್ಟಿಸಿದವರು. ಅವರೆ ಮೊದಲು ಜೋಡಿಮಾರಮ್ಮ ದೇವರ ಪೂಜೆಯನ್ನು ಮಾಡುತ್ತಿದ್ದರು. ಪುಟ್ಟಗುಡಿಯಲ್ಲಿ ನಂದಿಮರದಿಂದ ಮಾಡಿದ ದೇವರುಗಳ ಮೂರ್ತಿಯನ್ನು ಪ್ರತಿಷ್ಠಾಪಿಸಿ ಪೂಜಿಸಲಾಗುತ್ತಿತ್ತು. 2000ದ ವರ್ಷದಲ್ಲಿ ಪುಟ್ಟಗುಡಿಯ ಸುತ್ತಲು ದೊಡ್ಡದಾದ ದೇವಸ್ಥಾನವನ್ನು ನಿರ್ಮಿಸಲಾಗಿದೆ. ಮಂಚಮ್ಮನವರ ಆ ನಂತರದಲ್ಲಿ ಅವರ ಮನೆಯವರು, ಒಕ್ಕಲಿನವರು, ಪಾರಂಪರಿಕವಾಗಿ ಜೋಡಿಮಾರಮ್ಮ ದೇವತೆಯರ ಪೂಜೆಯನ್ನು ಮಾಡಿಕೊಂಡು ಬಂದಿದ್ದಾರೆ. ಮಂಚಮ್ಮನವರ ನಂತರದಲ್ಲಿ ಕಚ್ಚೆಸಿದ್ದಯ್ಯನವರು, ಚಿಕ್ಕರಸಿನಾಯಕರು ಹಾಗೂ ಇವರ ಮಗ ಸಿದ್ದಪ್ಪನಾಯಕ ಆಮೇಲೆ ಚಿಕ್ಕಣ್ಣನಾಯಕ ಹೀಗೆ ಮುಂದುವರೆದಿದೆ. ಪ್ರಸ್ತುತ ಎಂಟುವರ್ಷಗಳಿಂದ ಚಿಕ್ಕಣ್ಣನಾಯಕರವರ ಅಣ್ಣನ ಮಗ ಚಿಕ್ಕರಸಿನಾಯಕರವರು ಪೂಜೆ ಮಾಡಿಕೊಂಡು ಬರುತ್ತಿದ್ದಾರೆ. ಈ ದೇವಾಲಯಕ್ಕೆ ಈಗ ಸುಮಾರು ಐವತ್ತೈದು ಜನ ಟ್ರಸ್ಟಿಗಳಿದ್ದಾರೆ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಜೋಡಿ ಮಾರಮ್ಮನ ಹಬ್ಬದ ಆಚರಣೆ ಬಹಳ ಪ್ರಮುಖವಾದುದಾಗಿದ್ದು, ಈರನಗೆರೆಯೊಂದಿಗೆ ಸಂಬಂಧ ಹೊಂದಿ ಅಲ್ಲಿನ ಜನರು ಈ ಜಾತ್ರೆಯಲ್ಲಿ ಭಾಗವಹಿಸುತ್ತಾರೆ.

## ಮಾರಮ್ಮ ದೇವಸ್ಥಾನ (ಕೆ.ಜಿ.ಕೊಪ್ಪಲು)

ಮೈಸೂರು ನಗರದ ಚಾಮಾರಾಜಪುರಂನ ಬಜ್ಜಣ್ಣ ರಸ್ತೆಯಲ್ಲಿರುವ ಕನ್ನೇಗೌಡನ ಕೊಪ್ಪಲಿನ ಮಾರಮ್ಮ ದೇವಾಲಯವು ಸುಮಾರು 300–400 ವರ್ಷಗಳಷ್ಟು ಹಳೆಯದು. ಹಿಂದೆ ಕೆ.ಜಿ.ಕೊಪ್ಪಲಿನ ಹಿರಿಯರು ಮತ್ತು ದೇವಿಯ ಒಕ್ಕಲಿನವರಾದ ಪಟೇಲ್ ರಂಗಪ್ಪನವರು ಹಾಗೂ

ಅವರ ಕುಟುಂಬದವರೆಲ್ಲ ಸೇರಿ ಒಂದು ಸಣ್ಣ ಗುಡಿ ಕಟ್ಟಿಸಿ, ಅದರಲ್ಲಿ ದೇವಿಯನ್ನು ಪ್ರತಿಷ್ಠಾಪಿಸಿ ಪೂಜಿಸಿಕೊಂಡು ಬರುತ್ತಿದ್ದರು. 1995ರಲ್ಲಿ ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಲಾಗಿದೆ. ದೇವಾಲಯದ ವಿಸ್ತೀರ್ಣವು ಪೂರ್ವ ಪಶ್ಚಿಮವಾಗಿ 90 ಅಡಿಗಳು, ಉತ್ತರ ದಕ್ಷಿಣವಾಗಿ ಸುಮಾರು 100 ಅಡಿಗಳಿದ್ದು, ಇದನ್ನು ನುರಿತ ಕಲಾವಿದರಾದ ತಮಿಳುನಾಡಿನ ಶಿಲ್ಪಿಗಳಿಂದ ಕೆತ್ತನೆ ಕೆಲಸವನ್ನು ಮಾಡಿಸಿ ಒಳ ಮತ್ತು ಹೊರ ಆವರಣವನ್ನು ಸುಂದರಗೊಳಿಸುವ ಜೊತೆಗೆ ವಿಶೇಷವಾದ ಗೋಪುರವನ್ನು ನಿರ್ಮಿಸಲಾಗಿದೆ. 2007ರಲ್ಲಿ ಪುನಃ ಜೀರ್ಣೋದ್ಧಾರ ಮಾಡಿ ಅಮ್ಮನವರ ಸುಂದರ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ.

ಗರ್ಭಗುಡಿಯಲ್ಲಿ ಮಾರಮ್ಮನ ವಿಗ್ರಹವನ್ನು, ಗರ್ಭಗುಡಿಯ ಬಲಭಾಗದಲ್ಲಿ ಉತ್ತನಾಳಮ್ಮನವರ ವಿಗ್ರಹ, ಎಡಭಾಗದಲ್ಲಿ ಪಿರಿಯಾಪಟ್ಟಣದ ಅಮ್ಮನವರ ವಿಗ್ರಹ ಮತ್ತು ಗರ್ಭಗುಡಿಯ ಎದುರಿನಲ್ಲಿ ಒಂದು ಸಿಂಹದ ವಿಗ್ರಹ ಹಾಗೂ ತ್ರಿಶೂಲವನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಎಡಭಾಗದಲ್ಲಿ ನಾಗರಕಲ್ಲುಗಳು ಮತ್ತು ಅಶ್ವತ್ಥಕಟ್ಟೆಯನ್ನು ಕಟ್ಟಿ ಪೂಜಿಸಿಕೊಂಡು ಬರಲಾಗುತ್ತಿದೆ. 1995ರಲ್ಲಿ ಗ್ರಾಮದ ಯಜಮಾನರು, ಯುವಕರು ಸೇರಿ ಮಾರಮ್ಮ ಸೇವಾ ಸಮಿತಿಯನ್ನು ರಚಿಸಿ ಅಧ್ಯಕ್ಷರಾಗಿ ಎಂ.ರಾಮೇಗೌಡರು, ಉಪಾಧ್ಯಕ್ಷರಾಗಿ ಆರ್.ಮೂರ್ತಿಯವರು, ಕಾರ್ಯದರ್ಶಿಯಾಗಿ ಆರ್.ಗಣೇಶ್, ಖಜಾಂಚಿಯಾಗಿ ಕೆ.ಆರ್.ಚಿಕ್ಕಣ್ಣರವರು ಕಾರ್ಯ ನಿರ್ವಹಿಸುತ್ತಿದ್ದಾರೆ. ಮಾರಮ್ಮದೇವಿಗೆ ಗ್ರಾಮದ ಗೃಹಿಣಿಯರು ಪ್ರತಿ ಮಂಗಳವಾರ ಮತ್ತು ಶುಕ್ರವಾರದಂದು ವಿಶೇಷ ಪೂಜೆ ಮಾಡಿಕೊಂಡು ದೇವಿಯ ಕೃಪೆಗೆ ಪಾತ್ರರಾಗಿದ್ದಾರೆ.

## ಆಧಿಶಕ್ತಿ ದೇವಾಲಯ

ಮೈಸೂರು ನಗರ ಕನ್ನೇಗೌಡನ ಕೊಪ್ಪಲಿನ ನ್ಯೂ ಕಾಂತರಾಜ ಅರಸು ರಸ್ತೆಯಲ್ಲಿರುವ ಆಧಿಶಕ್ತಿ ದೇವಾಲಯವನ್ನು ಸುಮಾರು 40 ವರ್ಷಗಳ ಹಿಂದಿನಿಂದಲು ಪೂಜಿಸುತ್ತಿರುವುದು ಕಂಡುಬಂದಿದೆ. ಕನ್ನೇಗೌಡನ ಕೊಪ್ಪಲಿನ ಜನರು ಜೀವನೋಪಾಯಕ್ಕಾಗಿ ವ್ಯವಸಾಯ ಮಾಡುತ್ತಿದ್ದು, ದನಕರುಗಳು ಮತ್ತು ಜಾನುವಾರುಗಳನ್ನು ಸಾಕುತ್ತಿದ್ದರು. ಈ ಜಾನುವಾರುಗಳಿಗೆ ಮತ್ತು ಜನರಿಗೆ ಏನಾದರೂ ತೊಂದರೆ ಉಂಟಾದರೆ, ಹಾಗೂ ಅಂದಿನ ಖಾಯಿಲೆಗಳಾದ ಕಾಲರ, ಪ್ಲೇಗ್ ಮುಂತಾದವುಗಳು ಬರುತ್ತಿದ್ದುದರಿಂದ ಭಕ್ತಾದಿಗಳು ದೇವಿಯ ಮೊರೆ ಹೋಗುತ್ತಿದ್ದರು. ಆಗ ಬಂದಂತಮ್ಮ, ಕಾಳಮ್ಮನವರನ್ನು ಭಕ್ತಿಯಿಂದ ಪೂಜೆ ಮಾಡಿದರೆ ಎಲ್ಲಾ ರೋಗಗಳು ನಿವಾರಣೆಯಾಗುತ್ತಿತ್ತು. ಹೀಗೆ ದೇವಿಯರ ಪ್ರಭಾವ ಭಕ್ತಾದಿಗಳಲ್ಲಿ ಬೀರಿದ್ದರಿಂದ ಈ

ದೇವಾಲಯವನ್ನು ಕೆ.ಜಿ.ಕೊಪ್ಪಲಿನ ಯಜಮಾನರು, ಗ್ರಾಮಸ್ಥರು ಸೇರಿ 2002–03ರಲ್ಲಿ ಜೀರ್ಣೋದ್ಧಾರ ಮಾಡಿದ್ದಾರೆ.

ಈ ದೇವಾಲಯದ ವಿಸ್ತೀರ್ಣವು ಪೂರ್ವಪಶ್ಚಿಮವಾಗಿ 280 ಅಡಿಗಳು ಮತ್ತು ಉತ್ತರ ದಕ್ಷಿಣವಾಗಿ 180 ಅಡಿಗಳಾಗಿದ್ದು, ದೇವಾಲಯದ ಗರ್ಭಗುಡಿಯಲ್ಲಿ ಐದುಅಡಿ ಎತ್ತರದ ಆಧಿಶಕ್ತಿಯ ವಿಗ್ರಹವಿದೆ. ಗರ್ಭಗುಡಿಯ ಬಲಭಾಗದಲ್ಲಿ ನಾಲ್ಕುಅಡಿ ಎತ್ತರದ ಬಂದಂತಮ್ಮ ವಿಗ್ರಹ ಮತ್ತು ಎರಡು ಅಡಿ ಎತ್ತರದ ಸುಬ್ರಹ್ಮಣ್ಯಸ್ವಾಮಿ ವಿಗ್ರಹಗಳನ್ನು ಕಾಣಬಹುದು. ದೇವಾಲಯದ ಮುಂಬಾಗಿಲಿನಲ್ಲಿ 21ಅಡಿ ಎತ್ತರದ ಸ್ತಂಭವಿದ್ದು ಕೆಳಗೆ ಸಿಂಹದ ವಿಗ್ರಹ ಮತ್ತು ಅಮ್ಮನವರ ಪಾದ, ಬಲಿಪೀಠ ಹಾಗೂ ಗಜರಾಜನ ಮೂರ್ತಿಯನ್ನು ನಿರ್ಮಿಸಲಾಗಿದೆ. ದೇವಾಲಯದ ಆವರಣದ ಅರಳಿಕಟ್ಟೆಯಲ್ಲಿ ಐದುಹೆಡೆ ಸರ್ಪದ ಕೆಳಗೆ ನಾಗರಕಲ್ಲನ್ನು ಪ್ರತಿಷ್ಠಾಪಿಸಲಾಗಿದೆ. ಇದೇ ಆವರಣದಲ್ಲಿ ಬಿಳಿಯ ಎಕ್ಕದ ಗಿಡವಿದ್ದು, ಭಕ್ತಾದಿಗಳು ಭಕ್ತಿಯಿಂದ ಪೂಜಿಸಿದರೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಇದೆ.

**ವಿಶೇಷ ಪೂಜೆ:** ಈ ದೇವಾಲಯದಲ್ಲಿ ಪ್ರನಿತ್ಯವು ಪೂಜೆ ನಡೆಯುತ್ತದೆ. ವಿಶೇಷವಾಗಿ ಪ್ರತಿ ಮಂಗಳವಾರ, ಶುಕ್ರವಾರ, ಅಮಾವಾಸ್ಯೆ ಮತ್ತು ಹುಣ್ಣಿಮೆ ದಿನದಂದು ವಿಶೇಷ ಹೂವಿನ ಅಲಂಕಾರ, ವೀಳ್ಯೆದೆಲೆ ಅಲಂಕಾರ, ಧಾನ್ಯಗಳ ಅಲಂಕಾರ ಮತ್ತು ಹಣ್ಣುಗಳ ಅಲಂಕಾರ, ತರಕಾರಿಗಳ ಅಲಂಕಾರದೊಂದಿಗೆ ವಿಶೇಷ ಪೂಜೆಯನ್ನು ಸಲ್ಲಿಸಲಾಗುತ್ತದೆ. ಅಲ್ಲದೇ ನಿಂಬೆಹಣ್ಣಿನ ದೀಪ ಹಚ್ಚುವ ಪದ್ಧತಿಯೂ ರೂಢಿಯಲ್ಲಿದೆ.

## ಶ್ರೀ ಮಹಾಲಕ್ಷ್ಮಿ ಕೊಲ್ಲಾಪುರದಮ್ಮ

ಮೈಸೂರಿನ ಹಳೇ ಬಂಡಿಕೇರಿ ಕ್ಷೇತ್ರಯ್ಯ ರಸ್ತೆಯಲ್ಲಿರುವ ಶ್ರೀ ಮಹಾಲಕ್ಷ್ಮಿ ಕೊಲ್ಲಾಪುರದಮ್ಮ ದೇವಸ್ಥಾನದ 240ನೇ ವಾರ್ಷಿಕೋತ್ಸವ ನಡೆಯಿತು. ಶ್ರೀ ಮಹಾಲಕ್ಷ್ಮಿ ಕೊಲ್ಲಾಪುರದಮ್ಮ ದೇವಾಲಯದ ಅಭಿವೃದ್ಧಿ ಸಮಿತಿಯಿಂದ ವಾರ್ಷಿಕೋತ್ಸವ ನಡೆಸಲಾಯಿತು. ವಾರ್ಷಿಕೊತ್ಸವದ ಹಿಂದಿನದಿನ ಸಂಜೆ ದೇವಾಲಯ ಉತ್ಸವಮೂರ್ತಿಯನ್ನು ಶ್ರೀರಂಗಪಟ್ಟಣದ ಪಶ್ಚಿಮ ವಾಹಿನಿಗೆ ಕೊಂಡೊಯ್ದು ಪೂಜೆ ಪುನಸ್ಕಾರಗಳನ್ನು ನೆರವೇರಿಸಲಾಯಿತು. ಬೆಳಿಗ್ಗೆ ಉತ್ಸವಮೂರ್ತಿಗೆ ಅಭಿಷೇಕವನ್ನು ಹೋಮ–ಹವನದ ಮೂಲಕ ನೆರವೇರಿಸಿ ದೇವರನ್ನು ದರ್ಶನಕ್ಕೆ ಮುಕ್ತಗೊಳಿಸಲಾಯಿತು. ನೆರೆದಿದ್ದ ಭಕ್ತಾದಿಗಳಿಗೆ ಅಲ್ಲಿಯೇ ಅನ್ನಸಂತರ್ಪಣೆಯನ್ನು ಏರ್ಪಡಿಸಲಾಗಿತ್ತು. ಅಂದೇ ಸಂಜೆ ಉತ್ಸವಮೂರ್ತಿಯನ್ನು ಅದ್ದೂರಿ ಮೆರವಣಿಗೆಯೊಂದಿಗೆ ದೇವಸ್ಥಾನಕ್ಕೆ ತರಲಾಯಿತು. ದೇವಿಗೆ ಬಗೆ ಬಗೆಯ ಅಭಿಷೇಕಗಳನ್ನು ಮಾಡಿ ಅನಂತರ

ವಸ್ತ್ರಾಲಂಕಾರದ ಜೊತೆಯಲ್ಲಿ ಕಣ್ಣು ಕೋರೈಸುವಂತೆ ಹೂವಿನ ಅಲಂಕಾರವನ್ನು ಮಾಡಲಾಗಿತ್ತು. ದೇವಸ್ಥಾನದಲ್ಲಿ ಅಭಿಷೇಕ ಪೂಜೆ-ಪುನಸ್ಕಾರಗಳಾದ ಬಳಿಕ ಸಾರ್ವಜನಿಕರಿಗೆ ಪೂಜೆಸಲ್ಲಿಸಲು ಅವಕಾಶ ಮಾಡಿಕೊಡಲಾಯಿತು.

## ಶ್ರೀ ಜ್ವಾಲಾಮುಖಿ ತ್ರಿಪುರಸುಂದರಿ ದೇವಿ

ಆಧಿಶಕ್ತಿಯೆಂಬ ದೇವಿಯ ಉಪಾಸನೆಯು ಋಗ್ವೇದದಷ್ಟೆ ಪುರಾತನವಾದದ್ದು. ಋಗ್ವೇದದ ಹತ್ತನೆ ಮಂಡಲದಲ್ಲಿ ಬರುವ ದೇವಿಸೂಕ್ತ, ರಾತ್ರಿ ಸೂಕ್ತಗಳು ದೇವಿಯ ಪರವಾಗಿದೆ. ಈ ಸೂಕ್ತಗಳ ಪ್ರಕಾರ ದೇವಿಯು ವಿಶ್ವೇಶ್ವರಿ, ಜಗದ್ಧಾತ್ರೀ, ಉತ್ಪತ್ತಿ. ಇವಳೆ ಸ್ಥಿತಿ ಲಯಗಳಿಗೆ ಕಾರಣಳು, ಎಲ್ಲಾ ಮಂತ್ರಗಳ ಸ್ವರೂಪಳು, ಮಹಾವಿದ್ಯೆಯೂ, ಮಹಾಮೋಹಳೂ ಹೌದು. ಇವಳೇ ಸರ್ವಕ್ಕೂ ಕಾರಣಳಾಗಿ ಗುಣತ್ರಯವನ್ನು ಕಾರ್ಯರೂಪಕ್ಕೆ ತಂದಿರುತ್ತಾಳೆ. ಇವಳೇ ಕಾಳರಾತ್ರಿ. ಮಹಾರಾತ್ರಿ ಮತ್ತು ಮೋಹರಾತ್ರಿ ನಾನಾ ಆಯುಧಗಳನ್ನು ಧರಿಸಿ ಭಯಂಕರಳಾಗಿ ಕಂಡರೂ ಸಹ ಜಗನ್ಮಾತೆಯು ಸೌಮ್ಯ ಸ್ವರೂಪಳು. ಅತಿ ಸುಂದರಿಯೂ ಪರಾಪರಗಳನ್ನು ಮೀರಿರುವ ಪರಮೇಶ್ವರಿಯು. ಇವಳೇ ಸಮಸ್ತ ದೇವತೆಗಳ ರೂಪದಲ್ಲಿ ಸಂಚರಿಸುತ್ತಾಳೆ. ಎಲ್ಲಾ ಪ್ರಾಣಿಗಳಲ್ಲೂ ಜೀವರೂಪದಿಂದ ನೆಲೆಸಿರುತ್ತಾಳೆ. ಮನುಷ್ಯನು ತನ್ನ ಸಕಲ ಕ್ರಿಯೆಗಳನ್ನೂ ಜೀವಿಯ ಮೂಲಕವೇ ನಡೆಸುತ್ತಾನೆ. ರುದ್ರನು ದುಷ್ಟರನ್ನು ಸಂಹರಿಸುವಾಗ ದೇವಿಯೇ ಅವನ ಧನುಸ್ಸನ್ನು ಬಗ್ಗಿಸುತ್ತಾಳೆ ಮತ್ತು ದ್ಯಾವಾ, ಪೃಥ್ವಿಗಳನ್ನು ಅಂತರ್ಯಾಮಿ ರೂಪದಿಂದ ಪ್ರವೇಶಿಸುತ್ತಾಳೆ. ಸಚ್ಚಿದಾನಂದ ಸ್ವರೂಪನಾದ ಭಗವಂತನೇ ಜಗದ್ರೂಪದಿಂದ ಇರುವನೆಂಬುದೂ, ಸಮಸ್ತ ದೇವತೆಗಳ ಶಕ್ತಿಯಾಗಿರುವನೆಂಬುದೂ ದೇವಿಸೂಕ್ತದ ತಾತ್ಪರ್ಯವಾಗಿದೆ.

ದೇವೀ ಮಹಾತ್ಮೆ ಮಾರ್ಕಂಡೇಯ ಪುರಾಣದ 13 ಅಧ್ಯಾಯಗಳ ವಿಷಯವಾಗಿದೆ. ಇದು ಪುರಾಣದ ಒಂದು ಭಾಗವಾಗಿದ್ದರೂ ಮಂತ್ರಶಾಸ್ತ್ರವೆಂದು ತಂತ್ರಗಳಲ್ಲಿ ಪ್ರಸಿದ್ಧವಾಗಿದೆ. ಮಂತ್ರಕ್ಕೂ ದೇವಿಗೂ ಯಾವ ಬೇಧವೂ ಇಲ್ಲ. ಮಂತ್ರವೇ ದೇವಿ. ದೇವೀ ಮಹಾತ್ಮೆಯಲ್ಲಿ ಮೂರು ಚರಿತ್ರೆಗಳಿವೆ. ದೇವಿಯ ವಿವಿಧ ರೂಪಗಳಾದ ಮಹಾಕಾಳಿ, ಮಹಾಲಕ್ಷ್ಮಿ ಮತ್ತು ಮಹಾಸರಸ್ವತಿಯ ವಿಸ್ತೃತ ಮಹಾತ್ಮೆ ಈ ಚರಿತ್ರೆಗಳಲ್ಲಿವೆ.

ಕಾಲಾಂತರದಲ್ಲಿ ಜಗತ್ತೆಲ್ಲಾ ಜಲಮಯವಾಗಿರಲು ಭಗವಂತನಾದ ಶ್ರೀಮನ್ನಾರಾಯಣನು ಆದಿಶೇಷವೆಂಬ ಶಯನದ ಮೇಲೆ ಯೋಗ ನಿದ್ರೆಯನ್ನು ಹೊಂದಿದನು. ಆಗ ಮಧು-ಕೈಭಟರೆಂಬ ಅಸುರರು ವಿಷ್ಣುಕರ್ಣ ಮಂಡಲದಿಂದ ಉದ್ಭೂತರಾಗಿ ಕರ್ತೃವಾದ ಬ್ರಹ್ಮನನ್ನು

ಕೊಲ್ಲಲು ಪ್ರಯತ್ನಿಸಿದರು. ಆಗ ಬ್ರಹ್ಮನು ವಿಷ್ಣುವನ್ನು ಎಚ್ಚರಗೊಳಿಸಲು ಅವನ ಕಣ್ಣುಗಳಲ್ಲಿದ್ದ ಯೋಗ ನಿದ್ರೆಯನ್ನು ಪ್ರಾರ್ಥಿಸಿದನು. ಆಗ ತಾಮಸೀ ರಾತ್ರಿಯಾದ ಯೋಗನಿದ್ರೆಯು ವಿಷ್ಣುವನ್ನು ಎಚ್ಚರಗೊಳಿಸಿ ಅವನ ಮೂಲಕ ಮಧು–ಕೈಭಟರನ್ನು ನಾಶಪಡಿಸಿದಳು. ಆದುದರಿಂದ ದೇವಿಗೆ ಮಧು–ಕೈಭಟನಾಶಿನಿಯೆಂಬ ಹೆಸರು ಬಂದಿದೆ. ಇದು ಪ್ರಥಮ ಚರಿತ್ರೆಯ ವಿಷಯ.

ದ್ವಿತೀಯ ಚರಿತ್ರಯಲ್ಲಿ ಮಹಾಲಕ್ಷ್ಮಿಯ ಕಥೆಯಿದೆ. ಅಸುರೇಶ್ವರನಾದ ಮಹಿಷಾಸುರನು ದೇವಸೈನ್ಯವನ್ನು ಸೋಲಿಸಿ ಇಂದ್ರ ಪದವಿಯನ್ನು ಪಡೆದನು. ಆಗ ಪರಾಜಿತರಾದ ದೇವತೆಗಳು ಬ್ರಹ್ಮನನ್ನು ಮುಂದೆ ಮಾಡಿಕೊಂಡು ಹರಿ–ಹರರು ಇದ್ದಲ್ಲಿಗೆ ಬಂದು ತಮ್ಮ ಅಳಲನ್ನು ತೋಡಿಕೊಂಡರು. ದೇವತೆಗಳ ಅವಮಾನ ಪರಾಜಯಗಳನ್ನು ಕೇಳಿದ ಕೂಡಲೆ ಹರಿ–ಹರರು ತೀವ್ರ ಕೋಪಗೊಂಡರು. ಆಗ ಅವರ ಮುಖಗಳಿಂದಲೂ ಇತರ ದೇವತೆಗಳ ದೇಹಗಳಿಂದಲೂ ಮಹತ್ತಾದ ಒಂದು ತೇಜಃಪುಂಜವು ಹೊರಗೆ ಬಂದು ಒಂದು ನಾರಿಯ ಸ್ವರೂಪವನ್ನು ಪಡೆದು ದಿಗಂತವನ್ನು ವ್ಯಾಪಿಸಿಕೊಂಡು ಇತರೆ ದೇವತೆಗಳ ತೇಜಸ್ಸುಗಳು ಆ ಮಹಾನಾರಿಯ ವಿವಿಧ ಅಂಗಾಂಗಗಳಾದವು. ಆ ಮಹಾನಾರಿಯೇ ಮಹಾಲಕ್ಷ್ಮಿಯು. ಜಗನ್ಮಾತೆಯೂ, ಸರ್ವೇಶ್ವರಿಯೂ ಆದ ಮಹಾಲಕ್ಷ್ಮಿ ಸ್ವರೂಪದ ದೇವಿಯು ರಾಕ್ಷಸ ನಾಯಕರನ್ನೆಲ್ಲಾ ವಧಿಸಿ, ತನ್ನ ಪಾದದಿಂದ ಮಹಿಷಾಸುರನನ್ನು ಆಕ್ರಮಿಸಿಕೊಂಡು ಶೂಲದಿಂದ ಪ್ರಹರಿಸಿ ಆತನನ್ನು ಕೊಂದಳು.

ತೃತೀಯ ಚರಿತೆಯಲ್ಲಿ ಬರುವ ದೇವಿಯ ಮಹಾತ್ಮೆ ಹೀಗಿದೆ. ಶುಂಭ, ನಿಶುಂಭ ಎಂಬ ಅಸುರ ಸೋದರರು ತಮ್ಮ ಪರಾಕ್ರಮದಿಂದ ಇಂದ್ರನ ಅಧಿಕಾರವನ್ನೂ, ದೇವತೆಗಳ ಹವಿರ್ಭಾಗಗಳನ್ನೂ ಅಪಹರಿಸಿದ್ದರು. ಅಯೋನಿಜೆಯಾದ ಕನ್ಯೆಯಿಂದ ಹೊರತು ಮತ್ತೆ ಯಾರಿಂದಲೂ ಮೃತ್ಯು ಸಂಭವಿಸುವುದಿಲ್ಲವೆಂಬ ಬ್ರಹ್ಮನ ವರವೂ ಇವರಿಗಿತ್ತು. ಇಂಥವನಿಂದ ಆಪತ್ತಿಗೆ ಗುರಿಯಾದ ದೇವತೆಗಳೆಲ್ಲರೂ ಹಿಮಾಲಯಕ್ಕೆ ಹೋಗಿ ವಿಷ್ಣುಮಾಯೆಯಾದ ದೇವಿಯನ್ನು ಸ್ತುತಿಸಿದರು. ಆಗ ಪಾರ್ವತಿಯು ಜಾಹ್ನವೀ, ಜಲದಲ್ಲಿ ಸ್ನಾನಮಾಡಲು ಬಂದು ದೇವತೆಗಳಿಗೆ ಪ್ರತ್ಯಕ್ಷಳಾದಳು. ಪಾರ್ವತಿಯ ಶೃರೀರಕೋಶದಿಂದ ಅತೀವ ಸುಂದರಿಯೂ ಮಂಗಳ ಮೂರ್ತಿಯೂ ಆದ ದೇವಿ ಉದ್ಭವಿಸಿದಳು.

ದೇವಿಯ ಲಾವಣ್ಯದಿಂದ ಮೋಹಿತನಾದ ಶುಂಭಾಸುರನು ಅವಳನ್ನು ಕರೆತರಲು ತನ್ನ ದೈತ್ಯರನ್ನು ಕಳುಹಿಸಿದನು. ಧೂಮ್ರಲೋಚನನೆಂಬ ದಂಡಾಧಿಕಾರಿಯು ದೇವಿಯ ಹುಂಕಾರದಿಂದಲೇ ಭಸ್ಮೀಭೂತನಾದನು. ಅನಂತರ ರೋಷಾವಿಷ್ಟೆಯಾಗಿದ್ದ ದೇವಿಯ ಹಣೆಯಿಂದ ಕತ್ತಿಯನ್ನೂ, ಪಾಶವನ್ನೂ ಧರಿಸಿದ ಕರಾಳವಧನೆಯಾದ ಕಾಳಿಕಾದೇವಿಯು ಚಂಡ

ಮುಂಡರನ್ನು ವಧಿಸಿದ್ದರಿಂದ ಕಾಳಿಗೆ ಚಾಮುಂಡಿಯೆಂಬ ಹೆಸರು ಬಂದಿತು. ಅನಂತರ ರಕ್ತಬೀಜ, ಶನಿಶುಂಭ ಇವರೆಲ್ಲರೂ ದೇವಿಯ ವಿವಿಧ ಶಕ್ತಿರೂಪಗಳಾದ ಶಿವದೂತಿ, ಕೌಮಾರಿ, ಬ್ರಹ್ಮಿಣಿ, ಮಾಹೇಶ್ವರಿ, ವೈಷ್ಣವಿ ಮೊದಲಾದ ಮಾತೃಕೆಗಳಿಂದ ಮಡಿದರು. ಆ ಮೇಲೆ ದೇವಿಯು ತನ್ನ ಶಕ್ತಿಗಳನ್ನೆಲ್ಲಾ ತನ್ನಲ್ಲಿಯೇ ಉಪಹರಿಸಿಕೊಂಡು ಶುಂಭನನ್ನು ಸಂಹರಿಸಿದಳು.

ದೇವೀ ಮಹಾತ್ಮೆಯನ್ನು 'ಶ್ರೀದರ್ಗಾಸಪ್ತಶತಿ' ಎಂದೂ ಕರೆಯುತ್ತಾರೆ. ಇದರ ಎಂಟನೆಯ ಅಧ್ಯಾಯದಲ್ಲಿ ರಕ್ತಬೀಜಾಸುರನ ಸಂಹಾರದ ವರ್ಣನೆ ಇದೆ. ಅಸುರೇಶ್ವರ ಶುಂಭನ ಆದೇಶದಂತೆ ಅಪಾರ ರಾಕ್ಷಸ ಸೇನೆಯು ಚಂಡಿಕಾದೇವಿಯ ವಿರುದ್ಧ ಯುದ್ಧ ಮಾಡಲು ಹೊರಟರು. ಈ ಮಧ್ಯೆ ದೇವಶತ್ರುಗಳ ಅಳಿವಿಗಾಗಿಯೂ, ದೇವಶ್ರೇಷ್ಠರ ಉಳಿವಿಗಾಗಿಯೂ, ಬ್ರಹ್ಮ ಈಶ್ವರ, ಸ್ಕಂದ, ವಿಷ್ಣು, ಇಂದ್ರ ಇವರ ಅತ್ಯಂತ ವೀರ್ಯ ಬಲಯುಕ್ತವಾದ ಶಕ್ತಿಗಳು ಅವರವರ ದೇಹದಿಂದ ಹೊರಬಂದು ಆಯಾ ರೂಪದಿಂದಲೇ ಚಂಡಿಕೆಯನ್ನು ಸೇರಿದರು. ಯಾವ ದೇವತೆಗೆ ಯಾವ ರೂಪವಿತ್ತೋ, ಯಾವ ಭೂಷಣ, ವಾಹನಗಳಿದ್ದವೋ ಅವುಗಳ ಆಕಾರವನ್ನೇ ಹೊಂದಿ ಆಯಾ ಶಕ್ತಿಯ ಅಸುರರೊಡನೆ ಯುದ್ಧ ಮಾಡಲು ಬಂದಿತು. ಆದರೆ ರಕ್ತಬೀಜಾಸುರನಿಗೆ ಒಂದು ವರವಿತ್ತು. ಅವನ ಶರೀರದಿಂದ ಒಂದು ತೊಟ್ಟು ರಕ್ತ ನೆಲಕ್ಕೆ ಬಿದ್ದರೆ ಆ ಬೀಜಾಸುರನ ರಕ್ತ ಚೆಲ್ಲಿದಂತೆಲ್ಲಾ ಸಾವಿರಾರು ರಾಕ್ಷಸರು ಎದ್ದು ಬರುತ್ತಿದ್ದರು. ಅವರನ್ನೆಲ್ಲಾ ಕೊಂದು ಕೊಂದು ದೇವಿ ದಣಿದಳು. ಇದನ್ನು ಕಂಡ ದೇವ ದೇವತೆಯರು ಗಾಬರಿಗೊಂಡು ದುಃಖಿತರಾದರು. ಆಗ ದೇವಿಯು ಕಾಳಿಯನ್ನು ಕುರಿತು "ಹೇ ಕಾಳಿಕೆ ನಿನ್ನ ನಾಲಿಗೆಯನ್ನು ವಿಸ್ತರಿಸು ನನ್ನ ಶಸ್ತ್ರಗಳ ಏಟಿನಿಂದ ಹರಿಯುವ ರಕ್ತದ ಹನಿಗಳನ್ನು ರಕ್ತಬಿಂದುವಿನಿಂದ ಹುಟ್ಟಿದ ಮಹಾಶೂರರನ್ನೂ ವೇಗಶಾಲಿಯಾದ ಈ ನಿನ್ನ ಬಾಯಿಂದ ಹೀರಿಬಿಡು. ಆ ಮಹಾಶೂರರನ್ನು ತಿನ್ನುತ್ತಾ ರಣಭೂಮಿಯಲ್ಲಿ ಸಂಚರಿಸುತ್ತಿರು" ಎಂದು ಹೇಳಿದಳು. ಅದರಂತೆಯೇ ಕಾಳಿಕೆಯು ತನ್ನ ನಾಲಿಗೆಯನ್ನು ನೆಲದಲ್ಲಿ ಹರಡಿದಳು. ರಕ್ಕಸರ ರಕ್ತವನ್ನೆಲ್ಲಾ ಕುಡಿದಳು. ರಕ್ಕಸರ ದೇಹಗಳನ್ನು ನುಂಗಿದಳು. ಈ ರೀತಿಯ ನೆರವಿನಿಂದ ದೇವಿಯು ರಕ್ತಬೀಜಾಸುರನನ್ನು ಸಂಹರಿಸಿದಳು. ಈ ಕಾಳಿಯೇ ಉತ್ತನಹಳ್ಳಿಯ ಗುಡ್ಡದಲ್ಲಿ ನೆಲಸಿರುವ ಉರಿಮಾರಿ, ಇವಳನ್ನು ಜ್ವಾಲಮಾಲಾ, ಜ್ವಾಲಮಾಲಿನಿ, ಜ್ವಾಲಾಮುಖಿ, ತ್ರಿಪುರಸುಂದರಿ ಎಂದೂ ಕರೆಯುತ್ತಾರೆ. ಉದ್ದನಾಲಿಗೆ ದೇವಿ ಅನಂತರದ ದಿನಗಳಲ್ಲಿ ಉತ್ತನಹಳ್ಳಿ ಗ್ರಾಮ ದೇವತೆಯಾದಳು.

'ದೇವಿ ಎಲ್ಲರಿಗೂ ಮಂಗಳವನ್ನುಂಟು ಮಾಡಲಿ'

"ದೇವಿಯ ಪರಾಕ್ರಮದ ಕಥೆಯನ್ನು ಓದಿ

ದೇವಿಯ ದರ್ಶನ ಮಾಡಿ ಅವಳ ಕೃಪೆಗೆ

ಪಾತ್ರರಾಗಿರಿ"

ಪ್ರಾಚೀನ ಕಾಲದಲ್ಲಿ ಗಾಣಿಗರು ಎಣ್ಣೆಯ ಗಾಣಗಳನ್ನು ಕೊಡುಗೆ ನೀಡುವ ಸಂಪ್ರದಾಯವಿದ್ದು, ಧಾರ್ಮಿಕ ಕಾರ್ಯಗಳಿಗೆ ಎಣ್ಣೆಗಾಣವನ್ನು ದಾನವಾಗಿ ಕೊಡುವುದು ಸಾಮಾನ್ಯ ವಿಚಾರವಾಗಿತ್ತು. ಮರದ ಮತ್ತು ಕಲ್ಲಿನ ಗಾಣಗಳು ಪ್ರಮುಖವಾದುವಾಗಿದ್ದು, ಇಂದು ಕೂಡ ಮೈಸೂರಿನ ನನ್ನೇಶ್ವರ ಹಾಗೂ ಉತ್ತನಹಳ್ಳಿ ಜ್ವಾಲಾಮುಖಿ ದೇವಾಲಯದ ಮುಂಭಾಗದಲ್ಲಿ ಶಾಸನ ಸಹಿತವಾದ ಕಲ್ಲಿನ ಗಾಣಗಳನ್ನು ಕಾಣಬಹುದಾಗಿದೆ.

## 3.4 ಇತರೆ ದೇವಾಲಯಗಳು

ಮೈಸೂರು ನಗರದಲ್ಲಿ ಶೈವ, ವೈಷ್ಣವ, ಶಕ್ತಿದೇವತೆಗಳ ದೇವಾಲಯಗಳೇ ಅಲ್ಲದೆ ಭಿನ್ನವಾಗಿರುವ ಹಾಗೂ ಈ ಮೇಲಿನ ಮೂರು ವಿಧಗಳಿಂದ ಹೊರತಾದ ದೇವಾಲಯಗಳನ್ನು ಕಾಣಬಹುದಾಗಿದೆ. ಅವುಗಳನ್ನು ಇತರೆ ದೇವಾಲಯಗಳ ಗುಂಪಿನಲ್ಲಿ ವರ್ಗೀಕರಿಸಿಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದ್ದು, ದೇವಾಲಯಗಳ ಮಾಹಿತಿಯನ್ನು ನೀಡಲಾಗಿದೆ.

### ಮೈಸೂರು ನಗರದ ಇತರೆ ಪ್ರಮುಖ ದೇವಾಲಯಗಳ ಪಟ್ಟಿ

| **ದೇವರು** | **ದೇವಾಲಯ ಇರುವ ಸ್ಥಳ** |
|---|---|
| ನವಗ್ರಹ | ಇಟ್ಟಿಗೆಗೂಡು |
| ಶನೇಶ್ವರ | ಸರಸ್ವತಿಪುರಂ, ಈಜುಕೊಳದ ರಸ್ತೆ |
| ಮಡಿವಾಳ ಮಾಚಯ್ಯ | ಸರಸ್ವತಿಪುರಂ ಈಜುಕೊಳದ ಹಿಂಭಾಗ |
| ರಾಘವೇಂದ್ರ ಮಠ | ಕೆಂಡಗಣ್ಣಮ್ಮ ಬಡಾವಣೆ |
| ರಾಮಮಂದಿರ | ಕುಂಬಾರಕೊಪ್ಪಲು |
| ರಾಮಮಂದಿರ | ಜಯನಗರ |
| ರಾಘವೇಂದ್ರ ಮಠ | ಜಯಲಕ್ಷ್ಮೀಪುರಂ |
| ಶನೇಶ್ವರ | ಜೆ.ಪಿ.ನಗರ(ನಾಚನಹಳ್ಳಿ ಪಾಳ್ಯ) |
| ಸಾಯಿಬಾಬಾ | ತ್ಯಾಗರಾಜ ರಸ್ತೆ, ಅಗ್ರಹಾರ |
| ಶನೇಶ್ವರ | ತಿಲಕನಗರ |

| | |
|---|---|
| ರಾಘವೇಂದ್ರ ಮಠ | ನಾರಾಯಣಶಾಸ್ತ್ರಿ ರಸ್ತೆ |
| ಅಂಬಾಭವಾನಿ | ಪೆನ್ಷನರ್ಸ್ ಬ್ಲಾಕ್ ಪರಕಾಲಮಠ ಸರ್ಕಲ್ |
| ಶನೇಶ್ವರ | ಬಂಬೂ ಬಜಾರ್ |
| ನವಗ್ರಹ | ಬನ್ನಿಮಂಟಪ |
| ಶನೇಶ್ವರ | ಮಂಡಿಮೊಹಲ್ಲಾ ಮಿಷನ್ ಆಸ್ಪತ್ರೆ ರಸ್ತೆ |
| ನವಗ್ರಹ | ಮಂಜುನಾಥಪುರ |
| ಶನೇಶ್ವರ | ಮಧುವನ ಬಡಾವಣೆ, ಲಿಂಗಾಂಬುಧಿಕೆರೆ |
| ರಾಘವೇಂದ್ರ ಮಠ | ಸುಬ್ಬರಾಯನಕೆರೆ ಪಕ್ಕ |
| ವೃಕ್ಷ ನವಗ್ರಹ | ಹೆಬ್ಬಾಳು, 1ನೇ ಹಂತ |
| ನವಗ್ರಹ | ಹೊಸಬಂಡಿಕೇರಿ |
| ಶನೇಶ್ವರ | ದಟ್ಟಗಳ್ಳಿ, ಕೆ.ಇ.ಬಿ ಸರ್ಕಲ್ |
| ಶ್ರೀ ಶಿರಡಿ ಸಾಯಿಬಾಬಾ | ಲಕ್ಷ್ಮೀಕಾಂತನಗರ, ಹೆಬ್ಬಾಳ್, 1ನೇಹಂತ |
| ರಾಘವೇಂದ್ರ ಮಠ | ಚಿತ್ರಬಾನು ರಸ್ತೆ, ಕುವೆಂಪುನಗರ |
| ಸಾಗರಕಟ್ಟೆ ರಾಘವೇಂದ್ರ ಸ್ವಾಮಿ ದೇವಾಲಯ | 2ನೇಹಂತ, ಗೋಕುಲಂ |
| ಶ್ರೀರಾಘವೇಂದ್ರಸ್ವಾಮಿ ಮಠ | ಕುಂಬಾರ ಕೊಪ್ಪಲು, ಮಹದೇಶ್ವರ ಬಡಾವಣೆ |
| ಶ್ರೀರಾಘವೇಂದ್ರಸ್ವಾಮಿ ಮಠ | ಕೃಷ್ಣಮೂರ್ತಿಪುರಂ |
| ಶ್ರೀರಾಘವೇಂದ್ರಸ್ವಾಮಿ ಮಠ | ದಿವಾನ್ಸ ರೋಡ್, ದೇವರಾಜ ಮೊಹಲ್ಲಾ |
| ಶ್ರೀರಾಘವೇಂದ್ರಸ್ವಾಮಿ ಮಠ | ರಾಘವೇಂದ್ರನಗರ, ವಿಜಯಕಾನ್ವೆಂಟ್ |
| ಶ್ರೀಸಾಯಿ ಸರ್ವೇಶ್ವರ ಮಂದಿರ | 2ನೇ ಹಂತ, ಗೋಕುಲಂ |
| ಸಾಯಿಬಾಬಾ | ಅರವಿಂದನಗರ–ವಿವೇಕನಂದನಗರ |
| ಸಾಯಿಬಾಬಾ | ವಿದ್ಯಾರಣ್ಯಪುರಂ–ವಿಶ್ವೇಶ್ವರನಗರ |
| ಸಾಯಿಬಾಬಾ | ಸಾತಗಳ್ಳಿ |
| ಶ್ರೀಪ್ರಸನ್ನ ಗಣಪತಿ ಶಿರಡಿಸಾಯಿ ಶಕ್ತಿ | ನಿರ್ವಿಕಲ್ಪ ರಸ್ತೆ, ರಾಮಕೃಷ್ಣನಗರ |

## ಅಂಬಾಭವಾನಿ ದೇವಾಲಯ

ಛತ್ರಪತಿ ಶಿವಾಜಿ ಟ್ರಸ್ಟ್ ವತಿಯಿಂದ 2005ರಲ್ಲಿ ಈ ದೇವಾಲಯವನ್ನು ನಿರ್ಮಿಸಲಾಗಿದೆ. ಇದು ನಗರದ ಪೆನ್ಷನರ್ಸ್ ಬ್ಲಾಕ್‌ನ ಅಂಬಾಭವಾನಿ ವೃತ್ತದಲ್ಲಿದೆ. ಈ ದೇವಾಲಯದಿಂದಾಗಿ ಈ ವೃತ್ತಕ್ಕೆ ಆ ಹೆಸರು ಬಂದಿದೆ. ದೇವಾಲಯದ ಒಳಗೆ ಮೂರು ಅಡಿ ಜಗತಿಯ ಮೇಲೆ ಸಾಲಾಗಿ ಮೂರು ಗರ್ಭಗುಡಿಗಳನ್ನು ಕಟ್ಟಿ ಅವೆಲ್ಲಕ್ಕೂ ಸೇರಿದಂತೆ ಒಂದು ಅಂತರಾಳವನ್ನು ನಿರ್ಮಿಸಲಾಗಿದೆ. ಮಧ್ಯದ ಗರ್ಭಗೃಹದಲ್ಲಿ ಸುಮಾರು ನಾಲ್ಕುವರೆ ಅಡಿ ಎತ್ತರದ ಕರಿಶಿಲೆಯ ಅಂಬಾಭವಾನಿ ವಿಗ್ರಹವನ್ನು ಸುಮಾರು ಒಂದುವರೆ ಅಡಿ ಎತ್ತರದ ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ಇಲ್ಲಿ ಆಷಾಢ, ಶ್ರಾವಣ, ನವರಾತ್ರಿಗಳಲ್ಲಿ ಹೋಮ–ಹವನಾದಿಗಳು ಜರಗುತ್ತವೆ. ಅಮ್ಮನವರ ಜನ್ಮದಿನೋತ್ಸವವನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಅಂದು ಅನ್ನಸಂತರ್ಪಣಾ ಕಾರ್ಯವಿರುತ್ತದೆ.

## ರಾಘವೇಂದ್ರ ಮಠ ಹಾಗೂ ದೇವಾಲಯ

1959ರಲ್ಲಿ ಜಯಲಕ್ಷ್ಮೀಪುರಂನ ರಾಘವೇಂದ್ರ ಮಠ ಅಥವಾ ದೇವಾಲಯ ಕಟ್ಟಲು ಶಂಕುಸ್ಥಾಪನೆ ಮಾಡಲಾಯಿತು. 1982ರಲ್ಲಿ ಬೃಂದಾವನ ಸ್ಥಾಪನೆ ಮಾಡುವುದರೊಂದಿಗೆ ರಾಘವೇಂದ್ರ ದೇವಾಲಯ ಅಸ್ತಿತ್ವಕ್ಕೆ ಬಂದಿತು. ಇಲ್ಲಿರುವ ಬೃಂದಾವನದ ಕೆತ್ತನೆಯನ್ನು ಮಾಡಿದವರು ಶಿಲ್ಪಿ ಶ್ರೀ ಶ್ರೀನಿವಾಸಚಾರರು. ವಿಶಾಲವಾದ ಈ ದೇಗುಲದಲ್ಲಿ ಸುಮಾರು ನಾಲ್ಕು ಅಡಿ ಎತ್ತರದ ಜಗತಿಯ ಮೇಲೆ ಗರ್ಭಗುಡಿ ನಿರ್ಮಿಸಲಾಗಿದೆ. ಗರ್ಭಗುಡಿಯಲ್ಲಿ ಸುಮಾರು ಒಂದುವರೆ ಅಡಿ ಎತ್ತರದ ಬೃಂದಾವನದ ಪ್ರತಿಷ್ಠಾಪನೆ ಮಾಡಲಾಗಿದೆ. ಇದಕ್ಕೆ ಬೆಳ್ಳಿಯ ರಾಘವೇಂದ್ರಸ್ವಾಮಿಯ ಕೆತ್ತನೆ ಇರುವ ಕವಚ ತೊಡಿಸಲಾಗಿದೆ. ಬೃಂದಾವನದ ಹಿಂಭಾಗದಲ್ಲಿ ಎತ್ತರದ ಪೀಠದ ಮೇಲೆ ಸೀತಾ, ರಾಮ, ಲಕ್ಷ್ಮಣ ಪಥವಿದ್ದು, ಅದು ಅರ್ಚಕರು ಹಾಗೂ ಅಲ್ಲಿಯ ಪುರೋಹಿತರುಗಳಿಗೆ ಮಾತ್ರ ಮೀಸಲಾಗಿದೆ. ಭಕ್ತರಿಗಾಗಿ ವಿಶಾಲವಾದ ಹಜಾರದಲ್ಲಿ ಪ್ರದಕ್ಷಿಣಾ ಪಥವಿದ್ದು ಇದರ ಸುತ್ತಾ ರಾಘವೇಂದ್ರಸ್ವಾಮಿಯ ಚಿತ್ರಪಟ ನೇತುಹಾಕಲಾಗಿದೆ.

ಮಠಕ್ಕೆ ಸೇರಿದ ಸ್ಥಳದಲ್ಲಿ ಗಣೇಶ, ನವಗ್ರಹಗಳು ಹಾಗೂ ಅರಳಿಕಟ್ಟೆಯಲ್ಲಿ ನಾಗರಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ. ರಾಯರ ಆರಾಧನೆಯ ಸಂದರ್ಭದಲ್ಲಿ ಮೂರುದಿನಗಳು ದೇವಾಲಯದಲ್ಲಿ ಹೋಮ, ಅಭಿಷೇಕ, ವಿಶೇಷ ಅಲಂಕಾರ, ಪೂಜೆಗಳು ನಡೆಯುತ್ತವೆ. ಗುರುವಾರ, ಶನಿವಾರಗಳಂದು ನೂರಾರು ಭಕ್ತರು ದೇವಾಲಯಕ್ಕೆ ಆಗಮಿಸಿ ಪೂಜೆ–ಪುನಸ್ಕಾರ ನೆರವೇರಿಸುತ್ತಾರೆ. ವಿಶೇಷ ದಿನಗಳಲ್ಲಿ ಅನ್ನಸಂತರ್ಪಣೆಯನ್ನು ನಡೆಸಲಾಗುತ್ತದೆ.

## ಶನೇಶ್ವರಸ್ವಾಮಿ ದೇವಾಲಯ

ಮೈಸೂರು ನಗರದಲ್ಲೇ ಅತ್ಯಂತ ಪ್ರಮುಖವಾದ ಶನೇಶ್ವರಸ್ವಾಮಿ ದೇವಾಲಯವೆಂದರೆ, ಅದು ರಾಜೇಂದ್ರನಗರದ ಪೆನ್ಷನರ್ಸ್ ಬ್ಲಾಕ್‌ನಲ್ಲಿರುವ ಶನೇಶ್ವರಸ್ವಾಮಿ ದೇವಾಲಯ. ಈ ದೇವಾಲಯವನ್ನು ಬೀರಪ್ಪ ಮಹಾಸ್ವಾಮಿಯವರು 1977ರಲ್ಲಿ ತಾವೇ ತಮ್ಮ ಸ್ವಂತವಾಗಿ ಕಟ್ಟಿಸಿದರು. ಆದುದರಿಂದ ಇದರ ಉಸ್ತುವಾರಿಯೆಲ್ಲ ಅವರ ವಂಶಸ್ಥರೆ ನೋಡಿಕೊಳ್ಳುತ್ತಿದ್ದಾರೆ. ಬೀರಪ್ಪ ಮಹಾಸ್ವಾಮಿಯವರ ಮನೆತನದವರೆ ಇಲ್ಲಿ ಅರ್ಚಕರಾಗಿಯು ಕೆಲಸ ನಿರ್ವಹಿಸುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಈ ದೇವಾಲಯದ ಅಭಿವೃದ್ಧಿಕಾರ್ಯಗಳ ದೃಷ್ಟಿಯಿಂದಾಗಿ 'ಶನೇಶ್ವರಸ್ವಾಮಿ ಭಕ್ತಮಂಡಳಿ'ಯನ್ನು ರಚಿಸಿಕೊಂಡು ಅದರ ಮೂಲಕ ದೇವಾಲಯದ ಆಗು ಹೋಗುಗಳನ್ನು ನೋಡಿಕೊಳ್ಳುತ್ತಿದ್ದಾರೆ. ವಿಶಾಲವಾದ ಗರ್ಭಗುಡಿಯಲ್ಲಿ ಸುಮಾರು ಎರಡು ಅಡಿ ಎತ್ತರದ ಪೀಠದ ಮೇಲೆ ಕರಿಶಿಲೆಯಲ್ಲಿ ಕಡೆದಿರುವ ಸುಮಾರು ಏಳು ಅಡಿ ಎತ್ತರದ ಶನೇಶ್ವರಸ್ವಾಮಿಯನ್ನು 1994ರಲ್ಲಿ ವಾಹನ ಕಾಗೆ ಸಹಿತ ಪ್ರತಿಷ್ಠಾಪಿಸಲಾಗಿದೆ. ಬಳಿಕ 1999ರಲ್ಲಿ ಪಂಚಲೋಹದ ಶನೇಶ್ವರಸ್ವಾಮಿಯ ಉತ್ಸವಮೂರ್ತಿಯನ್ನು ಮಾಡಿಸಿಡಲಾಗಿದೆ. ಈ ದೇವಾಲಯದ ವಿಸ್ತೀರ್ಣ 7080ಚದರ ಅಡಿಗಳಷ್ಟಿದೆ. ಮುಖ್ಯದ್ವಾರದ ಬಾಗಿಲು ಬೃಹತ್ತಾಗಿದ್ದು ಅದರ ಉತ್ತರಾಂಗದಲ್ಲಿ ಸೂರ್ಯ, ಅದರ ಕೆಳಗೆ ಗಣಪತಿ ಅನಂತರ ಎರಡೂ ಬಾಗಿಲುಗಳಲ್ಲಿ ಉಳಿದ ಎಂಟು ಗ್ರಹಗಳನ್ನು ಸುಂದರವಾಗಿ ಕೆತ್ತಲಾಗಿದೆ. ಶನೇಶ್ವರಸ್ವಾಮಿಯ ಬಲಭಾಗದಲ್ಲಿ ಗರುಡಗಂಭ ಹಾಗೂ 2005ರಲ್ಲಿ ಬೃಹತ್ ಗೋಪುರವನ್ನು ಸ್ಥಾಪಿಸಲಾಗಿದೆ. ಈ ದೇವಾಲಯದಲ್ಲಿ ಶನಿವಾರ, ಬುಧವಾರ ಹಾಗೂ ಅಮಾವಾಸ್ಯೆಗಳಲ್ಲಿ ವಿಶೇಷ ಪೂಜೆ ಇರುತ್ತದೆ. 'ಶನೇಶ್ವರಸ್ವಾಮಿ ಭಕ್ತಮಂಡಳಿ'ಯಿಂದ ಮೈಸೂರಿನ ಜಯನಗರದಲ್ಲಿ ಛಾಯಾದೇವಿ ಅನಾಥಾಶ್ರಮ ನಡೆಸುತ್ತಿದ್ದು, ಸುಮಾರು 46 ವಿದ್ಯಾರ್ಥಿಗಳು ಅದರಲ್ಲಿ ಆಶ್ರಯ ಪಡೆದಿದ್ದಾರೆ. ಅಲ್ಲಿ ಅವರಿಗೆ ವಸತಿ ಮತ್ತು ಊಟ, ಪ್ರೌಢಶಾಲೆ ಹಾಗೂ ಮಹಾವಿದ್ಯಾಲಯವನ್ನು ನಡೆಸಲಾಗುತ್ತಿದೆ. ಇದರ ಅಂಗಸಂಸ್ಥೆಗಳು ಹುಣಸೂರು ಮತ್ತು ಕೆ.ಆರ್.ಪೇಟೆಯಲ್ಲೂ ಶಿಕ್ಷಣ ಸಂಸ್ಥೆಗಳಿದ್ದು ಒಟ್ಟು 2,500 ವಿದ್ಯಾರ್ಥಿಗಳು ಓದುತ್ತಿದ್ದಾರೆ. (ಮಾಹಿತಿ: ಭಾನುಪ್ರಕಾಶ್, ಶನೇಶ್ವರ ಭಕ್ತಮಂಡಳಿಯ ಸದಸ್ಯರು, ರಾಜೇಂದ್ರನಗರ)

## ಪ್ರಸನ್ನ ಸಾಯಿಮಂದಿರ

ಮೈಸೂರು ನಗರದ ತ್ಯಾಗರಾಜ ರಸ್ತೆಯಲ್ಲಿ ನಾರಾಯಣ್ ಮಹಾರಾಜ್ ಎಂಬುವವರು 1954ರಲ್ಲಿ ಪ್ರಸನ್ನ ಸಾಯಿಮಂದಿರವನ್ನು ಕಟ್ಟಿಸಿದರು. ಪ್ರತ್ಯೇಕ ಗರ್ಭಗುಡಿಯನ್ನೇನು ಹೊಂದದೇ

ವಿಶಾಲವಾದ ಪ್ರಾರ್ಥನ ಮಂದಿರದಲ್ಲೇ ಸುಮಾರು ನಾಲ್ಕುವರೆ ಅಥವಾ ಐದು ಅಡಿ ಎತ್ತರವಾದ ಜಗತಿಯ ಮೇಲೆ ಸುಮಾರು ಮೂರು ಅಡಿ ಎತ್ತರದ ಕುಳಿತಿರುವ ಶೈಲಿಯಲ್ಲಿ ಸಾಯಿಬಾಬಾರ ಕರಿಶಿಲೆಯ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಗೋಡೆಯ ಸುತ್ತಲೂ ಬಾಬಾರ ಜೀವನ ಚರಿತ್ರೆಯನ್ನು ತಿಳಿಸುವ ಭಾವಚಿತ್ರಗಳನ್ನು ತೂಗುಹಾಕಲಾಗಿದೆ.

## ರಾಮ ಮಂದಿರ

ಮೈಸೂರು ನಗರದಲ್ಲಿರುವ ರಾಮಮಂದಿರಗಳಲ್ಲಿ ಜಯನಗರದಲ್ಲಿರುವ ರಾಮ ಮಂದಿರವು ಅತ್ಯಂತ ಪಾರಂಪರಿಕವಾದುದಾಗಿದೆ. ಈ ಮಂದಿರವು ಶಿಥಿಲವಾಗಿದ್ದ ಕಾರಣ ಸ್ಥಳೀಯರ ಸಹಕಾರದಿಂದ 2007ರಲ್ಲಿ ಜೀರ್ಣೋದ್ಧಾರ ಮಾಡಲಾಗಿದೆ. ಈ ಮಂದಿರದಲ್ಲಿ ಮೂರು ಗರ್ಭಗುಡಿಗಳಿದ್ದು, ಮಧ್ಯದ ಗರ್ಭಗೃಹದಲ್ಲಿ ಶ್ರೀ ಸೀತಾ, ರಾಮ, ಲಕ್ಷ್ಮಣ, ಆಂಜನೇಯರ ಕಣಶಿಲೆಯ ವಿಗ್ರಹಗಳಿವೆ. ರಾಮನ ಮೂರ್ತಿ ಸುಮಾರು ಮೂರು ಅಡಿ ಎತ್ತರವಾಗಿದೆ. ಲಕ್ಷ್ಮಣ ಮತ್ತು ಸೀತೆಯರ ವಿಗ್ರಹಗಳು ಸುಮಾರು ಎರಡರಿಂದ ಎರಡೂವರೆ ಅಡಿ ಎತ್ತರದ ಮೂರ್ತಿಗಳಾಗಿವೆ. ಹನುಮನ ವಿಗ್ರಹ ಸುಮಾರು ಒಂದು ಅಡಿ ಎತ್ತರವಿದೆ. ಬಲಭಾಗದ ಗರ್ಭಗೃಹದಲ್ಲಿ ಸುಮಾರು ಎರಡುವರೆ ಅಡಿ ಎತ್ತರದ ಸತ್ಯನಾರಾಯಣ ವಿಗ್ರಹವು, ಎಡಭಾಗದ ಗರ್ಭಗುಡಿಯಲ್ಲಿ ಸುಮಾರು ಎರಡೂವರೆ ಅಡಿ ಎತ್ತರದ ಗೋಪಾಲಕೃಷ್ಣ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಪ್ರದಕ್ಷಿಣಾ ಪಥದಲ್ಲಿ ವೀರಾಂಜನೇಯ ಹಾಗೂ ಗಣಪತಿ ವಿಗ್ರಹಗಳನ್ನು ಚಿಕ್ಕ ಚಿಕ್ಕ ಗೂಡುಗಳಲ್ಲಿ ಸ್ಥಾಪಿಸಲಾಗಿದೆ. ಇದರ ಪಕ್ಕದಲ್ಲೇ ನವಗ್ರಹಗಳನ್ನು ಪ್ರತಿಷ್ಠಾಪನೆ ಮಾಡಲಾಗಿದೆ. ರಾಮನವಮಿಯಂದು ವಿಶೇಷ ಪೂಜೆ-ಪುನಸ್ಕಾರ, ಉತ್ಸವಗಳು, ಅನ್ನಸಂತರ್ಪಣೆ ನಡೆಯುತ್ತವೆ.

ಒಟ್ಟಾರೆಯಾಗಿ ಮೈಸೂರು ನಗರದ ಪಾರಂಪರಿಕ ದೇವಾಲಯಗಳು ತನ್ನದೇ ಆದ ಪೂಜೆ-ಪುನಸ್ಕಾರಗಳು, ಹಬ್ಬ-ಜಾತ್ರೆ, ಉತ್ಸವ ಮೆರವಣಿಗೆ, ನಂಬಿಕೆ ಆಚರಣೆಗಳು ಒಂದು ದೇವಾಲಯದಿಂದ ಮತ್ತೊಂದು ದೇವಾಲಯಕ್ಕೂ ಭಿನ್ನವಾಗಿರುತ್ತವೆ. ಅಲ್ಲದೇ ಭಿನ್ನ-ವಿಭಿನ್ನವಾದ ಭಕ್ತರನ್ನು ಹೊಂದಿ, ಅಂದರೆ ಶೈವ, ವೈಷ್ಣವ, ಶಕ್ತಿದೇವತೆಗಳ ಭಕ್ತರು ತಮ್ಮ ಪೂಜಾ ವಿಧಿ ವಿಧಾನಗಳಿಂದಲೂ ಭಿನ್ನರಾಗಿ ಕಾಣುತ್ತಾರೆ. ಕಾರ್ತಿಕ ಮಾಸದಲ್ಲಿ ಶಿವನ ಆರಾಧನೆ, ಶ್ರಾವಣ ಮಾಸದಲ್ಲಿ ವಿಷ್ಣುವಿನ ಆರಾಧನೆ ಮತ್ತು ಆಷಾಢ ಮಾಸದಲ್ಲಿ ಶಕ್ತಿದೇವತೆಯರ ಆರಾಧನೆ ಮಾಡುತ್ತಾರೆ. ದೇವಾಲಯಗಳ ರಚನೆ, ದಾನ ದತ್ತಿ, ಮೂರ್ತಿಗಳ ರಚನೆಯಲ್ಲಿಯೂ ಭಿನ್ನತೆಗಳನ್ನು ಕಾಣಬಹುದಾಗಿರುವುದರಿಂದ ದೇವಾಲಯಗಳನ್ನು ಅಧ್ಯಯನದ ದೃಷ್ಟಿಯಿಂದ

ವರ್ಗೀಕರಿಸಿಕೊಂಡು ಮಾಹಿತಿ ನೀಡಲಾಗಿದೆ. ದೇವಾಲಯಗಳ ಸಾಮಾಜಿಕ ಸಂಪ್ರದಾಯಗಳು ಎಂಬ ಐದನೆ ಅಧ್ಯಾಯದಲ್ಲಿ ನಂಬಿಕೆ, ಆಚರಣೆ, ವಿಧಿ–ನಿಷೇಧ, ಹಬ್ಬ–ಜಾತ್ರೆ, ಉತ್ಸವ, ಹರಕೆ ಮುಂತಾದ ವಿಚಾರಗಳ ಬಗ್ಗೆ ಹೆಚ್ಚಿನ ವಿವರವನ್ನು ನೀಡಲಾಗಿದೆ.

# ಕೊನೆ ಟಿಪ್ಪಣಿಗಳು

1. ಡಾ.ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.ಸಂ–139.
2. ಸರ್.ಜಾನ್.ಮಾರ್ಷಲ್, ಮಹೆಂಜೋದಾರೊ ಅಂಡ್ ದ ಇಂಡಸ್ ಸಿವಿಲೈಜೇಸನ್, ಪು.ಸಂ–52.
3. ವಕ್ತೃ: ಅರ್ಚಕರಾದ ಬಸವರಾಜುರವರು ನೀಡಿರುತ್ತಾರೆ.
4. ವಕ್ತೃ: ದೇವಸ್ಥಾನದ ಅಧ್ಯಕ್ಷರಾದ ಮಾದೇಗೌಡರು ನೀಡಿರುತ್ತಾರೆ.
5. ವಕ್ತೃ: ಅರ್ಚಕರಾದ ಸುಂದ್ರೇಶ್ ನೀಡಿರುತ್ತಾರೆ.
6. ಪ್ರೊ.ರಂಗಪ್ಪ.ಕೆ.ಎಸ್.(ಪ್ರ.ಸಂ), ಮೈಸೂರು ದರ್ಶನ, ಸಂಪುಟ–1, ಪು.ಸಂ–67.
7. ಬಿ.ವಿ.ಸುಧಾಮಣಿ,(ಲೇ), ನಗರದ ದೇವಾಲಯಗಳು, ಪು.ಸಂ–485.
8. ಅದೇ, ಪು–485.
9. ವಕ್ತೃ: ಪ್ರಸನ್ನ ಕುಮಾರ್, ಜನರಲ್ ಮ್ಯಾನೆಜರ್, ಕಾಮಾಕ್ಷಿ ಆಸ್ಪತ್ರೆ, ಸರಸ್ವತಿಪುರಂ.
10. ಎದುರ್ಕಳ.ಕೆ.ಶಂಕರನಾರಾಯಣ ಭಟ್ಟ, ಹಿಂದೂ ಧರ್ಮದ ಪರಿಚಯ, ಪು.ಸಂ–360.
11. ಕನ್ನಡ ರತ್ನಕೋಶ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ಪು.ಸಂ–374.
12. ಎಂ.ಚಿದಾನಂದ ಮೂರ್ತಿ, ಕರ್ನಾಟಕ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.ಸಂ–164.
13. ವಕ್ತೃ: ಶ್ರೀನಿಧಿಯವರು, ದೇವಸ್ಥಾನದ ಸದಸ್ಯರು ಮಾಹಿತಿಯನ್ನು ನೀಡಿರುತ್ತಾರೆ.
14. ಎಸ್.ಸಿ.ನಂದೀಮಠ, ಕನ್ನಡ ನಾಡಿನ ಚರಿತ್ರೆ, ಭಾಗ–2, ಪು.ಸಂ–111.
15. ಪಿ.ಕೆ.ರಾಜಶೇಖರ, ಚಾಮುಂಡಿ ಸಿರಿ ಚಾಮುಂಡಿ, ಪು.ಸಂ–5.

# ಅಧ್ಯಾಯ–4

## ಪಾರಂಪರಿಕ ದೇವಾಲಯಗಳ ರಚನೆ ಮತ್ತು ಭೌತಿಕ ಸಂಸ್ಕೃತಿ

ಭಾರತದಲ್ಲಿನ ದೇವಾಲಯಗಳಿಗೆ ಪ್ರಾದೇಶಿಕ ಪ್ರಕಾರಗಳುಂಟು. ಆಯಾ ಪ್ರದೇಶದ ಜನರ ಅಗತ್ಯಗಳನ್ನು ಅನುಸರಿಸಿ ಆಯಾ ಕಾಲದ ವಿಶೇಷ ಗುಣ ಧರ್ಮಗಳನ್ನವಲಂಭಿಸಿ ದೇವಾಲಯಗಳ ಸ್ವರೂಪವೂ, ಸ್ವಭಾವವೂ, ರಚನೆಯೂ, ಪ್ರಯೋಜನವೂ ಮಾರ್ಪಡುತ್ತವೆ. ಬೇರೆ ಬೇರೆ ಪ್ರದೇಶಗಳಲ್ಲಿ ಕಾಣಸಿಗುವ ದೇವಾಲಯಗಳಲ್ಲಿ ಬಹುಮಟ್ಟಿಗೆ ವೈವಿಧ್ಯತೆ ಇರುವುದು ಸರಿಯೆ. ಮೈಸೂರಿನ ಬೆಟ್ಟದ ಚಾಮುಂಡೇಶ್ವರಿ ದೇವಾಲಯವೂ, ಒಂಟಿಕೊಪ್ಪಲಿನ ಶ್ರೀ ಲಕ್ಷ್ಮೀ ವೆಂಕಟರಮಣ ದೇವಾಲಯವೂ ಹೊರ ಆಕಾರದಲ್ಲಿ ಮಾತ್ರ ಬೇರೆ ಬೇರೆಯಲ್ಲ; ಅವುಗಳ ರಚನೆಯೂ ಬೇರೆ ಬೇರೆಯಾಗಿದ್ದು, ಒಂದೊಂದು ಪ್ರದೇಶದಲ್ಲಿ ಒಂದೊಂದು ಬಗೆಯ ದೇವಾಲಯಗಳು ಕಂಡುಬರುತ್ತವೆ.

### 4.1 ದೇವಸ್ಥಾನಗಳು

ದೇವಸ್ಥಾನಗಳು ಎಂದರೆ ಸಾರ್ವಜನಿಕವಾಗಿ ಇರುವ ಸಾಮೂಹಿಕ ಪೂಜೆಗೆ ಮತ್ತು ವ್ಯಕ್ತಿಗತವಾದ ಪೂಜೆ ಆರಾಧನೆಗಳನ್ನು ನಡೆಸಲು ಅವಕಾಶ ಒದಗಿಸುವ ಪೂಜಾಸ್ಥಳವಾಗಿರುತ್ತದೆ. ದೇವಾಲಯಗಳು ಹಿಂದೂ ಸಮಾಜದ ವ್ಯಕ್ತಿಗತ ಹಾಗೂ ಸಾಮಾಜಿಕ ಜೀವನದಲ್ಲಿ ಮಹತ್ವವಾದ ಪಾತ್ರವನ್ನು ವಹಿಸಿ ವಿಶೇಷವಾದ ಪ್ರಭಾವವನ್ನು ಬೀರಿವೆ. ಹಿಂದುವಿನ ಜೀವನಕ್ಕೆ ದೇವಾಲಯ ಎಂದರೆ ಲೌಕಿಕ ಮತ್ತು ಆಧ್ಯಾತ್ಮಿಕವಾದ ಸ್ಫೂರ್ತಿ, ಬೆಳಕು ಮತ್ತು ಬಲಗಳನ್ನು ನೀಡುವ ಕೇಂದ್ರವಾಗಿರುತ್ತದೆ. ಅಷ್ಟು ಮಾತ್ರವಲ್ಲದೆ ದೇವಾಲಯ ಎಂದರೆ ಧಾರ್ಮಿಕ ಜೀವನದ ಪ್ರಾಯೋಗಿಕ ನಿದರ್ಶನದ ಜೀವಂತ ಸಂಕೇತವೂ, ಸಂಸ್ಕೃತಿಯ ಸ್ಫೂರ್ತಿಯುತವಾದ ಪ್ರತೀಕವೂ, ಪರಂಪರೆಗಳ ಪ್ರಾಮಾಣಿಕವಾದ ರಕ್ಷಣೆ ಮತ್ತು ಪೋಷಣೆಯ ನೆಲೆಯೂ ಆಗಿರುತ್ತದೆ.

ಭಾರತೀಯ ಸಂಸ್ಕೃತಿಯಲ್ಲಿ ದೇವಾಲಯಗಳ ಪಾತ್ರ ಬಹುಮುಖ್ಯವಾದದ್ದು. ಅಂದಿನ ದೇವಾಲಯಗಳ ಕಾರ್ಯವ್ಯಾಪ್ತಿ ಕೇವಲ ಪೂಜೆ ಪುನಸ್ಕಾರಗಳಿಗೆ ಮಾತ್ರ ಸೀಮಿತವಾಗಿರಲ್ಲಿಲ್ಲ. ಇದು ಸಂಗೀತ–ನಾಟ್ಯಗಳ ಕಲಾ ಕೇಂದ್ರ, ವಿದ್ಯಾಪ್ರಸಾರ ಕೇಂದ್ರ, ನ್ಯಾಯತೀರ್ಮಾನ ಕೇಂದ್ರ, ಹಣಕಾಸು ಕೇಂದ್ರ, ಧಾರ್ಮಿಕ ಕೇಂದ್ರ ಹೀಗೆ ವ್ಯಾಪಕವಾದ ಕಾರ್ಯಗಳನ್ನು ದೇವಸ್ಥಾನಗಳು ನಿರ್ವಹಿಸುತ್ತಿದ್ದವು. ಇಂತಹ ಸಂಗತಿಯನ್ನು ಗಮನಿಸಿಯೇ ಡಿ.ಎಲ್.ನರಸಿಂಹಚಾರ್ ಅವರು

"ಹಿಂದಿನ ದೇವಾಲಯಗಳು ಊರಿಗೆ ಕಣ್ಣಾಗಿದ್ದವು ಹಾಗೂ ಗ್ರಾಮ ಸಮಾಜಕ್ಕೆ ಕೇಂದ್ರವಾಗಿದ್ದವು"[1] ಎಂದಿರುವುದು

"ಪ್ರಾಚೀನ ಕರ್ನಾಟಕದ ಊರಿಗೆ ದೇವಸ್ಥಾನವೇ ಕೇಂದ್ರಬಿಂದು. ಅದರ ಸುತ್ತ ಆ ಊರಿನ ಸಾಮಾಜಿಕ ಹಾಗೂ ಕೇಂದ್ರವಾಗಿದ್ದಂತೆ ವಿದ್ಯಾಕೇಂದ್ರವೂ ಆಗಿದ್ದವು. ದೇವಸ್ಥಾನವು ಜನರ ನ್ಯಾಯಾಲಯವೂ ಆಗಿದ್ದಿತು"[2]

"ಅನಾಗರೀಕ ಅಥವಾ ಗ್ರಾಮ್ಯ ಜನಾಂಗಗಳಲ್ಲಿ ಆದಿಕಾಲದಿಂದಲೂ ಉಳಿದು ಬಂದಿರುವ ದೇವತೆಗಳನ್ನು ಜನಪದ ದೇವತೆಗಳೆಂದು ಕರೆಯಬಹುದು"[3]

"ಒಂದು ಊರು ಪ್ರಾರಂಭವಾದಾಗಲೇ ಇದ್ದ ಅಥವಾ ಪ್ರಾರಂಭವಾದಾಗ ಸ್ಥಾಪಿಸಿದ ಆ ಊರಿನ ರಕ್ಷಣಾ ದೇವತೆ ಅಥವಾ ಅಧಿದೇವತೆ ಅಥವಾ ಮೂಲ ದೇವತೆಯೇ ಆ ಊರಿನ ಗ್ರಾಮದೇವತೆ"[4] ಎಂದು ಮತ್ತೆ ಕೆಲವರು ಅಭಿಪ್ರಾಯ ಪಡುತ್ತಾರೆ.

ದೇವಾಲಯ ನಿರ್ಮಾಣಗಳು ಎಲ್ಲಾ ಕಾಲದಲ್ಲಿಯೂ ಪ್ರಮುಖ ಪುಣ್ಯಕಾರ್ಯವೆಂದು ಪರಿಗಣಿತವಾಗಿದೆ. ದೇವಾಲಯ ನಿರ್ಮಾಣ, ಕೆರೆ ನಿರ್ಮಾಣ ಉತ್ತಮ ಧರ್ಮ ಕಾರ್ಯಗಳೆಂಬ ಭಾವನೆ ಅನೇಕ ಶಾಸನಗಳಲ್ಲಿ ವ್ಯಕ್ತವಾಗಿದೆ. ದೇವಾಲಯ ನಿರ್ಮಾಣಕ್ಕೆ ಕೊಟ್ಟಷ್ಟೇ ಗಮನವನ್ನು ಅವುಗಳ ನಿರಂತರ ಸಂರಕ್ಷಣೆಗೆ ಮತ್ತು ಪೂಜಾಕಾರ್ಯಗಳಿಗೆ ಕೊಡುತ್ತಿದ್ದರು. ಹೀಗಾಗಿ ದೇವಾಲಯವನ್ನು ಕಟ್ಟಿಸಿದ ಮೇಲೆ ಪೂಜಾಕಾರ್ಯಗಳಿಗೆ, ದೇವಾಲಯದ ದುರಸ್ತಿ ಕಾರ್ಯಗಳ ನಿರ್ವಹಣೆಯ ಖರ್ಚು ವೆಚ್ಚಗಳಿಗಾಗಿ ಸಾಕಷ್ಟು ದಾನವನ್ನು ಮಾಡುತ್ತಿದ್ದರು. ಎಷ್ಟೋ ಸಾರಿ ಆ ಸಂದರ್ಭವನ್ನು  ಉಪಯೋಗಿಸಿಕೊಂಡು ವಿವಿಧ ವ್ಯಕ್ತಿಗಳು, ವಿವಿಧ ಅಧಿಕಾರಿಗಳು, ಸಂಘ ಸಂಸ್ಥೆಗಳು ದಾನಗಳನ್ನು ನೀಡುತ್ತಿದ್ದರು. ದೇವಾಲಯ ಒಬ್ಬ ವ್ಯಕ್ತಿಯಿಂದ ನಿರ್ಮಾಣವಾದರೂ ಮುಂದೆ ಆ ದೇವಾಲಯದ ಸಂರಕ್ಷಣೆ ಇಡೀ ಊರಿನ ಜವಬ್ದಾರಿಯೂ ಆಗಿ ಹೋಗುತ್ತಿತ್ತು; ಅದರ ಸಂರಕ್ಷಣೆಗೆ ಊರಿನವರೆಲ್ಲ ಬದ್ಧರಾಗಿರುತ್ತಿದ್ದರು.

## 4.2 ದೇವಾಲಯಗಳ ಸ್ವರೂಪ

ಅನಾದಿಕಾಲದಿಂದಲು ಮಾನವನು ದೇವರ ಕಲ್ಪನೆಯನ್ನು ಕಟ್ಟಿಕೊಂಡೇ ಬೆಳೆಯುತ್ತಾ ಬರುತ್ತಿದ್ದಾನೆ. ದೇವರ ಅಸ್ಥಿತ್ವದ ಬಗ್ಗೆ ಅವನಿಗೆ ಮೊದಲು ಇದ್ದ ಕಲ್ಪನೆಗಳೇ ತುಂಬ ಕುತೂಹಲಕರವಾದವುಗಳಾಗಿವೆ. ಗಾಳಿ, ನೀರು, ಸೂರ್ಯ, ಚಂದ್ರ, ಬೆಟ್ಟ, ಗುಡ್ಡ, ಗಿಡ, ಮರ ಇವುಗಳ ಬಗ್ಗೆ ಕುತೂಹಲ ಹೊಂದಿದ್ದ ಮಾನವ ಅನಂತರ ಅದರ ಬಗ್ಗೆ ಭಯವನ್ನು

ವ್ಯಕ್ತಪಡಿಸಿದನು. ಕಾರಣ ಇದೇ ಪ್ರಕೃತಿಯ ಮತ್ತೊಂದು ರೂಪವಾದ ಪ್ರವಾಹ, ಬಿರುಗಾಳಿ, ಭೂಕಂಪ, ಉಲ್ಕಾಪಾತ, ಜ್ವಾಲಾಮುಖಿಗಳಂತಹ ಪ್ರಕೃತಿ ವಿಕೋಪಗಳನ್ನು ನೋಡಿದಾಗ ಅವನಿಗೆ ಆಘಾತವಾಯಿತು. ಹೀಗೆ ಕೆಲವು ಅನಿರೀಕ್ಷಿತ ಮತ್ತು ಆಘಾತಕಾರಿ ಘಟನೆಗಳಿಂದ ತಾನು ತಪ್ಪಿಸಿಕೊಳ್ಳುವ ಸಲುವಾಗಿ ಅವುಗಳನ್ನೇ ದೇವರೆಂದು ಬಗೆದು ಅವುಗಳ ಮೊರೆ ಹೋದ. ಅವುಗಳನ್ನೇ ನಂಬಿ ಬಾಳತೊಡಗಿದ. ನಿಸರ್ಗದ ಉಗ್ರ ಪರಿಸರದೊಂದಿಗೆ ಬದುಕಲು ಸದಾ ಕಾಲವೂ ಹೋರಾಡಬೇಕಿದ್ದ ಆದಿ ಮಾನವನು ತನ್ನೆಲ್ಲ ಕೃತಿಗಳಲ್ಲಿಯೂ ಪ್ರಯೋಜನದ ದೃಷ್ಟಿಯನ್ನೇ ಪ್ರಧಾನವಾಗಿ ಹೊಂದಿದ್ದು ಸ್ವಾಭಾವಿಕವಾಗಿತ್ತು. ಧರ್ಮವು ಹುಟ್ಟಿದ್ದು ಇಂತಹ ಪ್ರಯೋಜನಿಕ ಉದ್ದೇಶದಿಂದಲೇ ಎಂಬುದನ್ನು ಮರೆಯುವಂತಿಲ್ಲ.

ಧರ್ಮ ಎಂಬ ಶಬ್ದವು ನಾನಾರ್ಥಗಳಲ್ಲಿ ಇಂದು ಬಳಕೆಯಾಗುತ್ತಿದೆ ಹಿಂದೂ ಧರ್ಮವನ್ನು ಧರ್ಮ ಎಂದು ಒಪ್ಪುವುದಾದರೆ, ಅದರಲ್ಲಿರುವ ವರ್ಣಾಶ್ರಮ ಧರ್ಮವನ್ನು, ಅವತಾರ ಕಲ್ಪನೆಯನ್ನು, ವಿಗ್ರಹಾರಾಧನೆಯನ್ನು, ಪಿತೃಪೂಜೆ ಮುಂತಾದ ಪ್ರಧಾನ ಕಲ್ಪನೆಗಳನ್ನು ಸ್ವೀಕರಿಸಬೇಕಾಗುತ್ತದೆ. ಧರ್ಮ ಅನೇಕ ಕಟ್ಟು ಕಟ್ಟಳೆಗಳನ್ನು ಹೇರುತ್ತದೆ. ಅದನ್ನು ಮೀರಿ ಹೊರ ಬಂದವನನ್ನು 'ಧರ್ಮಬಾಹಿರ' ಎಂದು ಹೊರಹಾಕಲಾಗುತ್ತದೆ.

ಧಾರಣಾಧರ್ಮ ಇತ್ಯಾಹು:

ಧರವೇತಿ ಧರ್ಮ

ಧೃತಿಯಿಂದ ಕೂಡಿದ, ಧರಿಸುವ ಸ್ವಭಾವವುಳ್ಳ ಗುಣವೇ ಧರ್ಮ

ಮನ ಏವ ಮನುಷ್ಯಾಣಂ

ಕಾರಣಂಬಂಧ ಮೋಕ್ಷ ಯೋ:॥

ಮನುಷ್ಯನ ಬಂಧನ ಮೋಕ್ಷಗಳಿಗೆ ಮನಸ್ಸೇ ಕಾರಣ. ಶರೀರ ಮನಸ್ಸು ಎರಡೂ ಒಂದರೊಡನೊಂದು ಹೊಂದಿಕೊಂಡು ಸಾಗಿದಾಗಲೇ ವ್ಯಕ್ತಿಯ ವ್ಯಕ್ತಿತ್ವ ಇಡಿಯಾಗಿ ತೆರೆದುಕೊಳ್ಳುತ್ತದೆ. ಇಲ್ಲದಿದ್ದರೆ ಆ ವ್ಯಕ್ತಿತ್ವ ಪೂರ್ಣವಾಗಿರುವುದಿಲ್ಲ. ಹೀಗಾಗಿ ಮಾನಸಿಕ ಆರೋಗ್ಯಕ್ಕೆ ಅಗತ್ಯವಾದ ಪೋಷಕ ವಸ್ತುವೇ ಧರ್ಮ"[5]

ಹೀಗೆ ಮೊದಲಿಗೆ ದೇವರನ್ನು ಪೂಜಿಸತೊಡಗಿದ ಮಾನವ ಕಾಲಾನಂತರದಲ್ಲಿ ಆ ದೇವರಿಗೂ ಕೆಲವು ಸಂಬಂಧಗಳನ್ನೂ ಅನ್ವಯಿಸತೊಡಗಿದ, ದೇವರನ್ನು ತನ್ನಂತೆ ಎಂದು ಬಗೆದ, ಉದಾಹರಣೆಗೆ: ದೇವರಿಗೂ ಮದುವೆ, ಸತಿ, ಪತಿ, ಸುತ, ವಾಹನ, ಅರಮನೆಗಳು

ಇವೆಯೆಂದು ಕಲ್ಪಿಸತೊಡಗಿದ. ಅದರಂತೆ ಇಹದಲ್ಲೂ ದೇವರಿಗೆ ಒಂದು ಆಲಯದ ಅವಶ್ಯಕತೆ ಇದೆ ಎಂದು ಅವನಿಗೆ ಗೋಚರಿಸಿತು. ಮಳೆಗಾಳಿಗಳಿಂದ ದೇವರನ್ನು ರಕ್ಷಿಸುವ ಸಲುವಾಗಿ ಒಂದು ಆಲಯದ ನಿರ್ಮಾಣವೂ ಆಯಿತು. ಶಿಲೆ, ಶಿಲ್ಪ, ಶೃಂಗಾರಗಳು ಒಂದು ಕಾಲದಲ್ಲಿ ದೇವಾಲಯಕ್ಕೆ ಮಾತ್ರ ಸೀಮಿತವಾಗಿದ್ದವು. ತಾವು ಎಂಥ ಚಿಂತಾಜನಕ ಸ್ಥಿತಿಯಲ್ಲಿ ಬದುಕುತ್ತಿದ್ದರೂ ಭಕ್ತಜನ ತಮ್ಮ ದೇವರಿಗೆ ಆ ಕೊರತೆಯ ಬಿಸಿಯನ್ನು ತಾಕಿಸುತ್ತಿರಲಿಲ್ಲ. ದೇವರು ಸತ್ಯ ಮತ್ತು ಮನುಷ್ಯನ ಬದುಕು ಕ್ಷಣಿಕ ಎನ್ನುವ ಕಲ್ಪನೆ ಅವರಲ್ಲಿ ಬೇರೂರಿತ್ತು. ಇಂದಿಗೂ ಸಹ ಹಳ್ಳಿಗಳಲ್ಲಿ ತಾವೆಲ್ಲ ಚಪ್ಪರದ ಮನೆಗಳಲ್ಲಿದ್ದು ಅನ್ನ ನೀರಿಗೆ ಪರದಾಡುತ್ತಿದ್ದರೂ ತಮ್ಮ ಕೇರಿಯಲ್ಲಿರುವ ದೇವರನ್ನು, ದೇವರ ಗುಡಿಯನ್ನು ಕಲ್ಲು, ಸೀಮೆಂಟುಗಳಂತಹ ಘನವಸ್ತುಗಳಿಂದ ಕಟ್ಟಿಸುತ್ತಾರೆ.

ಹೀಗೆ ದೇವಸ್ಥಾನವನ್ನು ಕಟ್ಟುವ ಕಾರ್ಯ ಪ್ರಾರಂಭವಾಗುವುದಕ್ಕೂ ಮೊದಲು ದೇವರಿಗೆ ಅನೇಕ ಬಗೆಯ ದೇವಾಲಯಗಳನ್ನು ಆರೋಪಿಸುವ ಅಥವಾ ದೇವಾಲಯಗಳ ಅಸ್ತಿತ್ವವನ್ನು ಭಿನ್ನರೀತಿಯಲ್ಲಿ ಅರ್ಥೈಸುವುದನ್ನು ಸಾಹಿತ್ಯದಲ್ಲಿ ಕಾಣಬಹುದು. ಹನ್ನೆರಡನೆ ಶತಮಾನದಲ್ಲಿ ದೇವಾಲಯಗಳ ಕಲ್ಪನೆಯನ್ನು ಬಸವಣ್ಣನವರು ಕಟ್ಟಿಕೊಟ್ಟ ಬಗೆಯೇ ಬೇರೆಯದು. ಗುಡಿ ಸಂಸ್ಕೃತಿ ಹಾಗೂ ಮಡಿವಂತಿಕೆಯ ಸಂಸ್ಕೃತಿಯಿಂದ ಹೊರಬಂದು ದೇಹವನ್ನೆ ದೇಗುಲವಾಗಿಸಿದ ಪರಿಕಲ್ಪನೆ ಬಸವಣ್ಣನವರದು. ಹಾಗೆಂದ ಮಾತ್ರಕ್ಕೆ ಅಂದು ದೇವಾಲಯಗಳ ಅಸ್ತಿತ್ವ ಇಲ್ಲವೆಂದಲ್ಲ. ಬಸವಣ್ಣನವರ ಆರಾಧ್ಯ ದೈವ 'ಕೂಡಲ ಸಂಗಮದೇವ' ಎಂಬುದನ್ನು ಇಲ್ಲಿ ಸ್ಮರಿಸಬಹುದು. ಆದ್ದರಿಂದ ಈ ದೇವಾಲಯಕ್ಕೆ ಪ್ರಾಮುಖ್ಯವಿದೆ.

16ನೇ ಶತಮಾನದಲ್ಲಿ ಕನಕದಾಸರು ಕೊಟ್ಟ ದೇವರ ಹಾಗೂ ದೇವಾಲಯಗಳ ಕಲ್ಪನೆ ಬಹಳ ಭಿನ್ನವಾದದ್ದು, 'ಬಯಲು ಆಲಯದೊಳಗೋ, ಆಲಯವು ಬಯಲೊಳಗೋ' ಎಂಬ ದಾಸರ ವಾಣಿಯಲ್ಲಿ ದೇವರು ಒಂದು ದೇಗುಲ ಇಲ್ಲವೇ ಒಂದು ವರ್ಗದ ಜನರಿಗಷ್ಟೇ ಸೀಮಿತವಾದವನಲ್ಲ, ಯಾವ ಜಾತಿ, ಎಲ್ಲೆ, ಹಾಗೂ ಬಂಧನಗಳಿಗೂ ನಿಲುಕದ ಅವನು ಎಲ್ಲರೊಳಗೂ ಇದ್ದಾನೆ. ಎಲ್ಲ ಸ್ಥಳಗಳಲ್ಲೂ ವಾಸವಾಗಿದ್ದಾನೆ ಎಂದು ಸಾರಿದರು.

ಸುಸಂಸ್ಕೃತ ಜನರು ಮನುಷ್ಯನನ್ನು ದೇವರ ಎತ್ತರಕ್ಕೆ ಒಯ್ಯುವ ವಿಚಾರ ಹೊಂದಿದ್ದರೆ, ನಿರಕ್ಷರ ದೀನ ದಲಿತ ದುರ್ಬಲ ಜನರು ದೇವರನ್ನು ಮನುಷ್ಯನ ಹತ್ತಿರಕ್ಕೆ ತರುವ ಪ್ರಯತ್ನ ಮಾಡಿದ್ದಾರೆ. ಮೊದಲನೆಯದಕ್ಕಿಂತ ಎರಡನೆಯ ಪ್ರಯತ್ನವೇ ಜನಪದರಿಗೆ ತುಂಬ ಹತ್ತಿರವಾದುದು. ಕಾರಣ ಮೊದಲನೆಯದು ಕೈಗೆ ನಿಲುಕದ ಅಮೂರ್ತ ವಿಚಾರವಾದರೆ

ಎರಡನೆಯದು ಅನುಭವಕ್ಕೆ ನಿಲುಕುವ ಮೂರ್ತ ವಿಚಾರವಾಗಿದೆ. ಈ ಎರಡೂ ಸಂದರ್ಭದಲ್ಲಿ ದೇವರು ಹುಟ್ಟಿದ್ದು ಮನುಷ್ಯನಿಂದಲೆ ಆದರೂ ದುರ್ಬಲವರ್ಗ ನಿರ್ಮಿಸಿದ ದೇವರು ಜನಪದರಿಗೆ ಹತ್ತಿರವಾಗಲು ಕಾರಣ ದೇವರು ಸಾಮಾನ್ಯ ಜನರಂತೆ ಬದುಕಿ ಬಾಳಿದ್ದು.

ದೇವನಿಗಾಗಿಯೇ ಒಂದು ಆಲಯ ಎಂಬ ಮಾತಿನಲ್ಲಿ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳೆರಡರ ವಿಚಾರಗಳ ಬಗ್ಗೆ ಚಿಂತನೆ ಇದೆ. ವಾಸ್ತುಶಿಲ್ಪ ದೇವರುಗಳಿಗೆ ಆಲಯಗಳನ್ನು ಕಟ್ಟಿದರೆ, ಮೂರ್ತಿಶಿಲ್ಪ ಈ ದೇವಾಲಯಗಳ ಕಲ್ಪನೆಗೆ ಸಾಂಕೇತಿಕವಾದ ವ್ಯಕ್ತ ಸ್ವರೂಪವನ್ನು ನೀಡಿತು. ಮನುಷ್ಯನಿಗಾಗಿ ಮನೆ ಎಂಬಂತೆ ದೇವನಿಗಾಗಿ ದೇವಾಲಯ ಎಂದಾಯಿತು. ಮೊದಲು ದೇವರು ಅನಂತರ ದೇವಾಲಯ ಅಂದರೆ ವಾಸ್ತು ಶಿಲ್ಪಕ್ಕಿಂತ ಮೂರ್ತಿ ಶಿಲ್ಪದ ಇತಿಹಾಸವು ಅತೀ ಪ್ರಾಚೀನವಾದುದೆಂದು ಕಂಡುಬರುತ್ತದೆ.

ಆದರೆ ಇಷ್ಟೊಂದು ಸ್ಪಷ್ಟವಾದ ವೈವಿಧ್ಯದ ಅಡಿಯಲ್ಲಿ ಒಂದು ನೆಲೆ ಅಸ್ಪಷ್ಟವಾದರೂ ದಿಟವಾಗಿರುವುದು ಜಾನಪದ ಕಲ್ಪನೆಗಳು, ಪದ್ಧತಿಗಳು. ಈ ವಿವರವನ್ನು ಮರೆತರೆ ಎಲ್ಲ ದೇವಾಲಯಗಳ ತುಂಡುಗಳನ್ನು ತೇಪೆಹಾಕಿ ಹೊಲೆದ ಬಟ್ಟೆಯಂತೆ; ಎಲ್ಲ ದೇವಾಲಯಗಳಿಗೆ ಒಂದು ಚೌಕಟ್ಟಾಗಲೀ ಸಮಾನವಾದ ಸ್ವಾರಸ್ಯವಾಗಲೀ ಇರಲಾರದು. ಜನರಿಗೆ ತಂತಮ್ಮ ಪ್ರಾದೇಶಿಕತೆಗೆ ಸಂಬಂಧಿಸಿದ ದೇವಾಲಯಗಳು ಪ್ರಿಯವಾಗಿವೆ, ಪ್ರಯೋಜನಕಾರಿಯಾಗಿವೆ, ಅರ್ಥವತ್ತಾಗಿವೆ; ಇಷ್ಟೇ ಅಲ್ಲ ಯಾವ ಪ್ರದೇಶದ ಜನರಾಗಲಿ ಬೇರೆ ಎಲ್ಲ ಪ್ರದೇಶಗಳ ದೇವಾಲಯಗಳನ್ನು ಇದೇ ದೃಷ್ಟಿಯಿಂದ, ಶ್ರದ್ಧೆಯಿಂದ ಅರಿತುಕೊಳ್ಳಬಲ್ಲರು. ಇದು ಸಾಧ್ಯವಾಗಿರುವುದು, ಎಲ್ಲ ದೇವಾಲಯಗಳ ಅಡಿಪಾಯ ಸಮಾನವಾದ ಜಾನಪದೀಯ ಚೌಕಟ್ಟನ್ನು ಹೊಂದಿರುವುದರಿಂದ ಮಾತ್ರ.

ದೇವಾಲಯಗಳ ಈ ಜಾನಪದ ನೆಲೆಯಿಂದಲೇ ದೇವಾಲಯಗಳಿಗೆ ಜನಪ್ರೀತಿ, ಹಿರಿಮೆ, ಪ್ರಯೋಜಕತೆ ಒದಗಿ ಬಂದಿರುವುದು. ಈ ಜಾನಪದನೆಲೆಯಿಂದ ದೂರ ಸರಿದಂತೆಲ್ಲ ದೇವಾಲಯಗಳ ಸಾರ್ಥಕತೆಯೂ ಕಡಿಮೆಯಾಗುತ್ತಾ ಸಾಗುತ್ತದೆ. ಜನರ ಅಂತರಾಳದೊಂದಿಗೆ ನಂಟನ್ನು ಉಳಿಸಿಕೊಂಡಿರುವ ದೇವಾಲಯಗಳು ಮಾತ್ರ ಉಳಿಯುತ್ತವೆ. ಕೆಲವು ದೇವಾಲಯಗಳ ಆಚಾರ ಪದ್ಧತಿ ಮತ್ತು ಆರಾಧನೆಯ ವಿವರಗಳನ್ನು, ಬಳಕೆಯಲ್ಲಿರುವ ಕಥೆಗಳನ್ನು ಗಮನಿಸಿದರೆ ಜಾನಪದ ನೆಲೆಯ ಹಿಡಿತ ಸ್ಪಷ್ಟವಾಗುತ್ತದೆ. ಮೂಲಭೂತವಾದ ಪ್ರವೃತ್ತಿಗಳನ್ನು ಮುಟ್ಟುವ ವಿವರಗಳು ಇಲ್ಲಿರುವುದರಿಂದಲೇ ಈ ದೇವಾಲಯಗಳ ವಿಚಾರವಾಗಿ ಜನರ ಪ್ರೀತಿ

ಅಷ್ಟಿರುವುದು. ಇವುಗಳಲ್ಲೆಲ್ಲ ಸಮಾನವಾದ ಮನೋಧರ್ಮವನ್ನು ಅರಿತುಕೊಳ್ಳಬಹುದು. ಅಂದರೆ ಜಾನಪದ ಮನೋಧರ್ಮವೇ ಈ ಸಂಸ್ಕೃತಿಯ ಉಸಿರೆಂದರೆ ಉತ್ಪ್ರೇಕ್ಷೆಯಲ್ಲ.

ನಾಡಿನ ಹಲವು ದೇವಾಲಯಗಳ ಧಾರ್ಮಿಕ ಒಲವು ಬದಲಾಗುತ್ತ ಬಂದಿರುವುದಿದೆ. ಇತಿಹಾಸದ ನಡಾವಳಿ ಜನರ ಧರ್ಮವನ್ನು ಬದಲಿಸಿದಂತೆ, ಅವರ ನೆರೆಯಲ್ಲಿರುವ ಗುಡಿಯ ಆಕಾರವೂ, ಆಚಾರವೂ ಮಾರ್ಪಡುವುದು ಸಹಜವೇ. ಗರ್ಭಗುಡಿಯೊಳಗಣ ಮೂರ್ತಿ ಮೊದಲಿಗೆ ಜಾನಪದನೆಲೆಯದೇ ಆಗಿದ್ದರೂ ಮುಂದೆ ಬೌದ್ಧ, ಜೈನ, ಶೈವ, ವೈಷ್ಣವ, ಶಾಕ್ತ ಮೊದಲಾದ ಪಂಥಗಳಿಗೆ ಪಕ್ಕಾಗುವಂತಾಯಿತು. ಜಗನ್ನಾಥ–ಪೂರಿಯ ದೇವರು ಈಗ ವಿಷ್ಣು; ಆದರೆ ಅದರ ಬೌದ್ಧ ಹಿನ್ನೆಲೆಯನ್ನಾಗಲೀ, ಶಾಕ್ತ ಪ್ರಭಾವವನ್ನಾಗಲಿ ಮರೆಯಲಾಗಿಲ್ಲ. ಮೊದಲಿಗಂತೂ ಅದು ಜಾನಪದ ದೈವವೇ. ಬೌದ್ಧರ ತಾರಾಭಗವತಿ, ಮಂಗಳಾದೇವಿ, ಕಾಮಾಕ್ಷಿ ದೇವಿಯರಾದ ನಿದರ್ಶನಗಳಿಲ್ಲವೇ? ಜೈನರ ಯಕ್ಷಿಣಿ ಪದ್ಮಾವತಿಯು ಲಕ್ಷ್ಮಿಯಾಗಲಿಲ್ಲವೇ? ಜೈನರ ಬಸದಿಗಳು ಶಿವ ದೇವಾಲಯಗಳಾದ ಉದಾಹರಣೆಗಳಿವೆ. ಶೈವ–ವೈಷ್ಣವ ಪಂಥಗಳಲ್ಲಂತೂ ಈ ಬಗೆಯ ವಿನಿಮಯ ನಡೆದೇ ಇದೆ. ಧಾರ್ಮಿಕ ಸ್ವರೂಪ ಏನೇ ಇರಲಿ; ಎಷ್ಟೇ ಬದಲಾಗಲಿ ಮೂಲ ಮೂರ್ತಿಯ ಪಾವಿತ್ರ್ಯದ ಬಗ್ಗೆಯಂತೂ ಶ್ರದ್ಧೆ ಕದಲುವುದಿಲ್ಲ ಎಂಬುದು ಗಮನಾರ್ಹವಾದುದು. ಜಾನಪದ ಚೌಕಟ್ಟಿನ ಹಿಡಿತ ಅಷ್ಟು ಬಲವಾದುದು[6]

## 4.3 **ದೇವಾಲಯಗಳ ರಚನೆ**

ದೇವಾಲಯ ಅಥವಾ ಗುಡಿ ಕಟ್ಟಲು ಜಾಗ ಗುರುತಿಸಿ ಅಲ್ಲಿ ಹಳ್ಳವನ್ನು ತೋಡಿದಾಗ ಬರುವ ಮಣ್ಣಿನೊಡನೆ ಬೆಣಚುಕಲ್ಲುಗಳು, ಪ್ರಕಾಶಮಾನವಾಗಿರುವ ಕಲ್ಲುಗಳು, ಲೋಹದ ಚೂರು, ಹಾವಿನ ಪೊರೆ ಅಥವಾ ಹಾವು ಕಂಡುಬಂದರೆ ಅದು ಮಂಗಳಕರವಾದ ಕುರುಹಾಗಿದೆ. ಮೂಳೆಯ ಚೂರುಗಳು, ಗೆಜ್ಜಲು ಹುಳುಗಳು, ಹರಿದ ಬಟ್ಟೆ ಕಂಡುಬಂದರೆ ಅದು ಅಮಂಗಳಕರ ಅಲ್ಲಿ ದೇವಾಲಯವನ್ನು ಕಟ್ಟಬಾರದು ಎಂಬುದು ಜನಪದರ ನಂಬಿಕೆಯಾಗಿದೆ.

> **“**ದ್ವಾಪರೇತು ತಥಾ ಜ್ಞೇಯಂ ಪ್ರತಿಷ್ಠಾ ತು ಕಲೌ ಯುಗೇ।
>
> ದೇವತಾವೇಶ್ಮಪೂರ್ವಆಣಿ ನಗರಾಣಿ ಕಲೌ ಯುಗೇ**”**

**ಅರ್ಥ:** ದ್ವಾಪರದಲ್ಲಿಯೂ, ಕಲಿಯುಗದಲ್ಲಿಯೂ ಪ್ರತಿಷ್ಠಾವಿಧಿಯೇ ಹೆಚ್ಚಾಗಿ ಪ್ರಚಾರಕ್ಕೆ ಬಂದಿದೆ. ಸ್ವರ್ಗವೆಂಬ ಪುರುಷಾರ್ಥವನ್ನು ಅಪೇಕ್ಷಿಸುವ ರಾಜರುಗಳು ಕಲಿಯುಗದಲ್ಲಿ ನಗರಗಳನ್ನು

ನಿರ್ಮಿಸಬೇಕು. ಹಾಗೆ ನಿರ್ಮಿಸುವಾಗ ಮೊದಲು ದೇವಾಲಯಗಳನ್ನು ಕಟ್ಟಿಯೇ ನಗರಗಳನ್ನು ಕಟ್ಟಬೇಕು"[7]

"ಗ್ರಾಮೇ ವಾ ಯುದಿವಾ ಘೋಷೇ ನಾಸ್ತಿ ಯತ್ರಾಪಣಂ ನೃಪ।

ತತ್ರೋದ್ಯಾನೇ ಬಹಿಃ ಕಾರ್ಯ ಗ್ರಾಮಮರ್ಧಯೇನ ಕಾರಯತ್"

**ಅರ್ಥ:** ಗ್ರಾಮಗಳಲ್ಲಿಯೂ, ಸಣ್ಣಹಳ್ಳಿಗಳಲ್ಲಿಯೂ ಅಂಗಡಿಗಳೇ ಎಲ್ಲಿ ಇಲ್ಲದಿರುವುವೋ ಅಂತಹ ಸ್ಥಳಗಳಲ್ಲಿ, ಊರಿನ ಹೊರಗಿನ ಉದ್ಯಾನದಲ್ಲಿ ದೇವತಾ ಗೃಹವನ್ನು ನಿರ್ಮಿಸಿ ಪ್ರತಿಷ್ಠಾಪಿಸಬೇಕು. ಗ್ರಾಮದಲ್ಲಿ ರಚಿಸಬೇಕು"[8]

ಈ ಮೇಲಿನ ವಿಷಯವನ್ನು ಗಮನಿಸಿದಾಗ ಯಾವುದೇ ನಗರ ಅಥವಾ ಗ್ರಾಮಗಳ ನಿರ್ಮಾಣಕ್ಕೂ ಮುನ್ನ ದೇವಾಲಯಗಳ ನಿರ್ಮಾಣ ಮಾಡಬೇಕು ಅಥವಾ ಎಲ್ಲಿ ದೇವಾಲಯ ನಿರ್ಮಾಣವಾಗಿದೆಯೋ ಅದನ್ನು ಗಮನಿಸಿ ಅನಂತರ ಅದರ ಹಿಂಬದಿಗೆ ಬರುವಂತೆ ನಗರ ಅಥವಾ ಗ್ರಾಮಗಳ ನಿರ್ಮಾಣವಾಗಬೇಕು. ಏಕೆಂದರೆ ನಗರ ಅಥವಾ ಗ್ರಾಮವನ್ನು ಅಲ್ಲಿಯ ಜನರನ್ನು ಕಾಪಾಡುವ ಕಾರ್ಯ ಆ ದೇವಾಲಯದ್ದಾಗಿರುತ್ತದೆ. ಅದು ನಮ್ಮನ್ನು ಕಾಪಾಡುತ್ತದೆ ಎಂಬುದು ಅಂದಿನಿಂದಲು ಹೊಂದಿರುವ ನಂಬಿಕೆಯನ್ನು ಅವಲಂಬಿಸಿರುವುದನ್ನು ಕಾಣಬಹುದು. ಆದರೆ ಇಂದು ಗ್ರಾಮಗಳು ನಗರಗಳಾಗಿ ಪರಿವರ್ತನೆ ಹೊಂದುತ್ತಾ ಸಾಗಿದಂತೆ ಎಷ್ಟೋ ದೇವಾಲಯಗಳು ಗ್ರಾಮ ಅಥವಾ ನಗರಗಳ ಮಧ್ಯಭಾಗಕ್ಕೆ ಸೇರಿಕೊಂಡಂತೆ ಬೆಳವಣಿಗೆ ಹೊಂದಿವೆ.

## ದೇವಾಲಯಗಳ ರಚನೆಯಲ್ಲಿನ ಕೆಲವೊಂದು ಜಾನಪದೀಯ ಅಂಶಗಳು

**ಮರ** : ದೇವಾಲಯ ನಿರ್ಮಾಣವಾಗಿರುವ ಸ್ಥಳಗಳಲ್ಲಿ ಮರವಿದ್ದುದು, ಮರವಿರುವುದು ಕಂಡುಬರುತ್ತದೆ. ಉದಾಹರಣೆಗೆ: ಅರಳೀಮರ, ಬನ್ನೀಮರ, ಬಿಲ್ವಪತ್ರೆಮರ, ಬಸರಿಮರ, ಬೇವಿನಮರ ಮುಂತಾದ ಮರಗಳು.

"ದೇವಾಲಯಗಳ ಕಲ್ಪನೆ ಮೂಡುವ ತನಕ ಮರಗಳೇ ದೇವಾಲಯಗಳಾಗಿದ್ದವು. ಅನಂತರ ಮರಗಳ ಕೆಳಗಿನ ಒಂದು ಮೊರಡುಗಲ್ಲೇ ದೇವರ ಸಂಕೇತವಾಯಿತು. ಒಂದೊಂದು ವನದೇವತೆ ಸ್ವತಂತ್ರ ದೇವತೆಯಾಗಿ ಬಹದೇವತೋಪಾಸನೆ ಪ್ರಾರಂಭವಾಯಿತು. ಇಂದಿಗೂ ಕೂಡ ಅನೇಕ ಜನಪದ ದೇವರುಗಳು ಕಾಡಿನ ಮಧ್ಯದ ಹಾಗೂ ಮರದ ತೋಪುಗಳ ಮಧ್ಯದಲ್ಲೇ ಇರುವುದನ್ನು ಕಾಣುತ್ತೇವೆ."[9]

ಮೈಸೂರು ನಗರದ ಪಾರಂಪರಿಕ ದೇವಾಲಯಗಳು ನಿರ್ಮಾಣವಾಗಿರುವ ಪ್ರದೇಶದಲ್ಲಿ ನಿರ್ಮಾಣಕ್ಕೂ ಮೊದಲು ಆ ಸ್ಥಳದಲ್ಲಿ ಮರವಿದ್ದು ಅದನ್ನು ಕಡಿದು ದೇವಾಲಯ ನಿರ್ಮಾಣ ಮಾಡಲಾಗಿರುತ್ತದೆ. ಇಲ್ಲವಾದಲ್ಲಿ ದೇವಾಲಯದ ಹಿಂಭಾಗಕ್ಕೆ ಸೇರಿದಂತೆ ಇಂದೂ ಕೂಡ ಮರವಿರುವುದನ್ನು ಕಾಣಬಹುದು. ಅಂತೆಯೇ ಕೆಲವು ದೇವಾಲಯಗಳ ಆವರಣದಲ್ಲಿ ಮರವಿರುವುದನ್ನು ಕಾಣುತ್ತೇವೆ. ಪುರಾತನ ಕಾಲದಿಂದಲು ವೃಕ್ಷಗಳನ್ನು ಪೂಜಿಸಿಕೊಂಡು ಬರುತ್ತಿರುವುದು ಇದಕ್ಕೆ ಕಾರಣವಿರಬಹುದು.

ಬ್ರಹ್ಮದೇವನು ವಟ ವೃಕ್ಷವನ್ನು ಆಶ್ರಯಿಸಿ ಇರುತ್ತಾನೆ. ವಟವೃಕ್ಷದ ಪೋಷಣೆಯಿಂದ ಬ್ರಹ್ಮನು ತೃಪ್ತನಾಗುತ್ತಾನೆ, ಸಾವಿತ್ರಿದೇವಿಯು ಎಳ್ಳಿನ ಗಿಡದಲ್ಲಿ ಇರುತ್ತಾಳೆ. ಇಂದ್ರನು ಗೋಧಿ ಧಾನ್ಯದಲ್ಲಿ ಇರುತ್ತಾನೆ. ಎಲ್ಲಾ ವೃಕ್ಷಗಳಲ್ಲೂ ಗರಿಕೆಯಂಥ ಚಿಕ್ಕ ಸಸ್ಯಗಳಲ್ಲಿ ದೇವತೆಗಳ ಅಂಶವಿರುತ್ತದೆ. ದೇವತೆಗಳು ವೃಕ್ಷಗಳನ್ನು ಆಶ್ರಯಿಸಿಕೊಂಡು ಇರುವರು ಯಾವ ಕಾರಣದಿಂದಲೂ ವೃಕ್ಷಗಳನ್ನು ಉಪೇಕ್ಷಿಸುವುದು, ಕಡಿಯುವುದು ಪಾಪಜನಕವಾದ ಕಾರ್ಯವೆನಿಸುತ್ತದೆ.

ಮಾವಿನ ವೃಕ್ಷದಲ್ಲಿ ಪ್ರಜಾಪತಿ, ಪುನ್ನಾಗ ವೃಕ್ಷದಲ್ಲಿ ಯಕ್ಷರು, ನಾಗ ವೃಕ್ಷದಲ್ಲಿ ನಾಗ, ಕಂತೋಲ ವೃಕ್ಷದಲ್ಲಿ ಸಿದ್ದರು, ಹಲಸಿನ ವೃಕ್ಷದಲ್ಲಿ ಗುಯಕರು, ಮೆಣಸಿನ ಗಿಡದಲ್ಲಿ ಕಿನ್ನರರು, ರಕ್ತಾಂಜನ ವೃಕ್ಷದಲ್ಲಿ ಅಗ್ನಿಯು, ಖರ್ಜುರೀ ವೃಕ್ಷದಲ್ಲಿ ವರುಣ ದೇವತೆ, ಪೊಗ ವೃಕ್ಷದಲ್ಲಿ ಹನುಮ, ಅಶೋಕ ವೃಕ್ಷದಲ್ಲಿ ಕುಬೇರ, ಬದರೀ ವೃಕ್ಷದಲ್ಲಿ ರುದ್ರನು, ಮಹಾತಾಲ ವೃಕ್ಷದಲ್ಲಿ ಸಪ್ತರ್ಷಿಗಳು, ಜಂಬೂ ವೃಕ್ಷದಲ್ಲಿ ಮೇಘಾಭಿಮಾನಿ ದೇವತೆಗಳ ಅಂಶವಿರುವುದು ಈ ಎಲ್ಲ ವೃಕ್ಷಗಳನ್ನು ಬೆಳಸಿ ಸರಿಯಾಗಿ ಪೋಷಿಸಿದವನಿಗೆ ಅನಂತಪುಣ್ಯ ಪ್ರಾಪ್ತಿಯಾಗುತ್ತದೆ.

ಚಾಮುಂಡೇಶ್ವರಿಯ ದೇವಾಲಯದ ಗುಡಿಯ ಒಳಾಂಗಣದಲ್ಲಿ ಗರ್ಭಗುಡಿಯ ಎಡಭಾಗಕ್ಕೆ ಸೇರಿದಂತೆ ಬಿಲ್ವಪತ್ರೆಯ ಮರವಿದೆ. ಇದರ ಪತ್ರೆ ಪೂಜೆಗೆ ಬಹಳ ಪವಿತ್ರವಾದದ್ದು.[10]

ಕನ್ನೇಗೌಡನ ಕೊಪ್ಪಲಿನಲ್ಲಿ ಈಗ ಇರುವ ಸಿದ್ದಪ್ಪಾಜಿ ದೇವಾಲಯ(ಹೊಸದು)ದಲ್ಲಿ ಈ ಹಿಂದೆ ಬೃಹದಾಕಾರದ ಬಸರಿ ಮರವಿತ್ತು. ಅದರ ಕೆಳಗೆ ನಾಗರಕಲ್ಲನ್ನು ಪ್ರತಿಷ್ಠಾಪಿಸಿ ಪೂಜಿಸುತ್ತಿದ್ದರು. ದೇವಾಲಯದ ಅಭಿವೃದ್ಧಿಗಾಗಿ ತೀರ್ಮಾನ ಕೈಗೊಂಡಾಗ ಆ ಜಾಗದಲ್ಲಿ ಯಾವುದೇ ಗರ್ಭಗುಡಿಯಾಗಲಿ ಸೂರಾಗಲಿ ಇರಲಿಲ್ಲ. ಇಡೀ ಜಾಗವನ್ನು ಬಸರಿ ಮರವೇ ಆವರಿಸಿತ್ತು. ಆ ಮರವನ್ನು ದೇವರೆಂದು ನಂಬಿದ್ದರಿಂದ ಅದನ್ನು ಕಡಿಯುವುದು ಸುಲಭದ ಮಾತಾಗಿರಲಿಲ್ಲ. ಏಕೆಂದರೆ ಆ ಮರವನ್ನು ದೇವರ ಸ್ವರೂಪ ಎಂದು ನಂಬಿ ಪೂಜಿಸುತ್ತಿದ್ದರು.

ಊರಿನ ಮುಖ್ಯಸ್ಥರು, ಪುರೋಹಿತರು ಎಲ್ಲರೂ ಸೇರಿ ಒಂದು ತೀರ್ಮಾನಕ್ಕೆ ಬಂದು ಕೆಲವೊಂದು ಪರಿಹಾರಗಳನ್ನು ಮಾಡಿಸುವ ಮೂಲಕ ಮರವನ್ನು ಕಡಿದು ಅದೇ ಜಾಗದಲ್ಲಿ ದೇವಾಲಯ ನಿರ್ಮಿಸಲಾಯಿತು. ಮರದ ಭಾಗಗಳನ್ನು ದೇವಾಲಯ ನಿರ್ಮಾಣಕ್ಕೆ ಬಳಸಿಕೊಳ್ಳಲಾಯಿತು.

ಪಡುವಾರಹಳ್ಳಿಯ ಜೋಡಿಮಾರಮ್ಮ ದೇವಾಲಯದಲ್ಲಿ ತೆಂಗು, ಆಲ, ಹೊನ್ನೆ ಮರಗಳನ್ನು ಕೊಡಗಿನಿಂದ ತಂದು ನೆಟ್ಟಿರುವುದು. ಅವುಗಳು ಇಂದು ಕೂಡ ಬೃಹದಾಕಾರವಾಗಿ ಬೆಳೆದು ನಿಂತಿರುವುದನ್ನು ಕಾಣಬಹುದು. ಅಲ್ಲದೆ ಮರಗಳನ್ನು ಬೆಳೆಸಲು ಸಂಬಂಧಿಸಿದ ವಿಷಯವನ್ನು ಅಧ್ಯಾಯ ಐದು ದೇವಾಲಯಗಳ ಸಾಮಾಜಿಕ ಸಂಪ್ರದಾಯದಲ್ಲಿ ವಿವರಿಸಲಾಗಿದೆ.

ಅರಮನೆ ಕೋಟೆಯ ಭುವನೇಶ್ವರಿ ದೇವಾಲಯದಲ್ಲಿ ಬನ್ನಿಮರವಿದೆ ದಸರೆಯಂದು ಆ ಬನ್ನಿಮರಕ್ಕೆ ಅರಸರು ಪೂಜೆ ಸಲ್ಲಿಸುತ್ತಾರೆ. ಅಂತೆಯೆ ಶ್ವೇತವರಹಾಸ್ವಾಮಿ ಹಾಗೂ ತ್ರಿನಯನೇಶ್ವರ ದೇವಾಲಯದಲ್ಲಿ ಬಿಲ್ವಪತ್ರೆಮರವಿದೆ. ಪುರಭವನದ ಹಿಂಭಾಗದಲ್ಲಿರುವ ಸುಬ್ರಹ್ಮಣ್ಯೇಶ್ವರ ದೇವಾಲಯದಲ್ಲಿ ಶಮಿವೃಕ್ಷವಿದೆ. ತೊಣಚಿಕೊಪ್ಪಲಿನ ಬಿಸಿಲು ಮಾರಮ್ಮ ದೇವಾಲಯ ಮೇಲೆ ಯಾವುದೇ ಸೂರನ್ನು ಹೊಂದದಿದ್ದರೂ ಅರಳಿ ಮತ್ತು ಬೇವಿನ ಮರದ ನೈಸರ್ಗಿಕ ಸೂರನ್ನು ಹೊಂದಿ ಪೂಜೆಗೊಳ್ಳುತ್ತಿದೆ.

ಅರಮನೆಯ ಕೋಟೆ ಮಾರಮ್ಮನ ಗುಡಿಯ ಪಕ್ಕದಲ್ಲಿ ಅರಳಿ ಮರವಿತ್ತು. ಅದು ವಯಸ್ಸಾದ ಕಾರಣ ಎರಡು ವರ್ಷಗಳ ಹಿಂದೆ ದೇವಾಲಯದ ಮೇಲೆ ಬಿದ್ದು, ದೇವಾಲಯಕ್ಕೆ ಹಾಗೂ ಭಕ್ತರಿಗೂ ಅಪಾರವಾದ ಹಾನಿಯನ್ನುಂಟು ಮಾಡಿತು. ಇದಕ್ಕೆ ಸಂಬಂಧಿಸಿದಂತೆ ಹಲವಾರು ಊಹಾಪೂಹಗಳು ಅರಸರು, ಸರ್ಕಾರ ಹಾಗೂ ದಸರೆಯ ವಿಚಾರವಾಗಿ ಹುಟ್ಟಿಕೊಂಡವು. ಈ ವಿಚಾರವನ್ನು ಐದನೆಯ ಅಧ್ಯಾಯ ದೇವಾಲಯಗಳ ಸಾಮಾಜಿಕ ಸಂಪ್ರದಾಯದಲ್ಲಿ ವಿವರಿಸಲಾಗಿದೆ.

ಚಾಮುಂಡಿಬೆಟ್ಟದಲ್ಲಿರುವ ಮಹಾಬಲೇಶ್ವರ ದೇವಾಲಯದಲ್ಲಿ ಬಿಲ್ವವೃಕ್ಷವಿದೆ. ಚಾಮುಂಡಿಪುರಂನ ಶಂಕರನಾರಾಯಣ ದೇವಾಲಯದಲ್ಲಿ ಬಿಲ್ವ, ಅತ್ತಿ, ಅರಳಿ ಮರಗಳಿರುವುದನ್ನು ಕಾಣಬಹುದು. ಕುಂಬಾರಕೊಪ್ಪಲಿನ ಆಧಿಶಕ್ತಿ ಬನ್ನಿಮರದಮ್ಮ, ಬನ್ನಿಮರದ ಬುಡದಲ್ಲಿರುವುದನ್ನು ಕಾಣಬಹುದು.

ಪ್ರತಿಯೊಂದು ವೃಕ್ಷಗಳಲ್ಲಿಯು ಒಂದಲ್ಲ ಒಂದು ದೇವರನ್ನು ಗುರುತಿಸಿರುವ ಜನಪದರು ದೇವಾಲಯಗಳನ್ನು ಕಟ್ಟುವಾಗ ಮರದ ಮುಂದೆ ಅಥವಾ ಮರ ದೇವಾಲಯದ ಆವರಣದೊಳಗೆ ಬರುವಂತೆ ಕಟ್ಟಿರುವುದನ್ನು ಕಾಣುತ್ತೇವೆ. ಮರವನ್ನು ಕಡಿಯಬಾರದು ಎಂಬ ನಂಬಿಕೆ ಒಂದು ಕಡೆಯಾದರೆ, ಮರದ ನೆರಳು ದೇವಾಲಯಕ್ಕೆ ಬಂದವರಿಗೆ ಆಶ್ರಯಕ್ಕೆ ಬರುತ್ತದೆ ಎಂಬುದೊಂದು ಕಾರಣವಿರಬಹುದು. ಕೆಲವು ಕಡೆಗಳಲ್ಲಿ ದೇವಾಲಯವನ್ನು ಮೊದಲು ಕಟ್ಟಿ, ಅನಂತರದಲ್ಲಿ ಅದರ ಆವರಣದಲ್ಲಿ ಅಥವಾ ದೇವಾಲಯದ ಸುತ್ತಲು ಮರಗಿಡಗಳನ್ನು ಬೆಳಸುತ್ತಿದ್ದಾರೆ. ಮರಗಳಲ್ಲಿ ದೇವರು ವಾಸಿಸುತ್ತಿರುವುದರಿಂದ ಆ ದೇವರಿಗೆ ಒಂದು ಸೂರನ್ನು ನಿರ್ಮಿಸಬೇಕು ಬಿಸಿಲು, ಮಳೆಗಾಳಿಯಿಂದ ರಕ್ಷಿಸಬೇಕು ಎಂದು ಅದರ ಬುಡದ ಸಮೀಪದಲ್ಲೇ ದೇವಾಲಯವನ್ನು ನಿರ್ಮಿಸಿದ್ದಿರಬೇಕು.

**ದೇವಾಲಯ ಮತ್ತು ದೇವರ ಮೂರ್ತಿಯು ಸೂರ್ಯನಿಗೆ ಅಭಿಮುಖವಾಗಿರುವುದು :** ಮೈಸೂರು ನಗರದ ಪಾರಂಪರಿಕ ದೇವಾಲಯಗಳಲ್ಲಿ ಸುಮಾರು 90%ರಷ್ಟು ದೇವಾಲಯಗಳು ಸೂರ್ಯಾಭಿಮುಖವಾಗಿ ಕಟ್ಟಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಹಲವಾರು ನಂಬಿಕೆಗಳನ್ನು ಜನಪದರು ಕಟ್ಟಿಕೊಂಡು ಬದುಕುತ್ತಿದ್ದಾರೆ. ಸೂರ್ಯಾಭಿಮುಖವಾಗಿ ದೇವಾಲಯಗಳಲ್ಲಿನ ದೇವರ ಮೂರ್ತಿಗಳನ್ನು ಪ್ರತಿಷ್ಠಾಪಿಸಿದರೆ ಉತ್ತಮ ಗಾಳಿ ಬೆಳಕು ದೇವಾಲಯವನ್ನು ಪ್ರವೇಶಿಸುತ್ತದೆ. ಸೂರ್ಯನ ಬೆಳಕು ನೇರವಾಗಿ ದೇವರ ಮೇಲೆ ಬೀಳಲಿ ಎಂದಿರಬಹುದು. ಏಕೆಂದರೆ ಸೂರ್ಯನಿಂದ ಪ್ರವಹಿಸುವ ತರಂಗಗಳು ದೇವರಿಗೆ ನೇರವಾಗಿ ಪ್ರವಹಿಸುವುದರಿಂದ ಜಗತ್ತನ್ನು ಬೆಳಗುವ ಸೂರ್ಯನ ಉದಯ ದೇವರಿಗೆ ಚೈತನ್ಯವನ್ನು ಉಂಟುಮಾಡುತ್ತದೆ ಅಲ್ಲಿನ ಜನರಿಗೂ ಚೈತನ್ಯಕಾರಕವಾಗಿ ಪರಿಣಮಿಸುತ್ತದೆ.

ಬೆಟ್ಟದ ಚಾಮುಂಡೇಶ್ವರಿ ದೇವಾಲಯ, ಚಂದ್ರಮೌಳೇಶ್ವರ ದೇವಾಲಯ ಕೆ.ಇ.ಬಿ ಸರ್ಕಲ್, ನನ್ನೇಶ್ವರ ದೇವಾಲಯ ಹಿನಕಲ್, ವೆಂಕಟರಮಣ ದೇವಾಲಯ ಒಂಟಿಕೊಪ್ಪಲ್, ಕೋಟೆ ಆಂಜನೇಯ ದೇವಾಲಯ, ಮಹದೇಶ್ವರ ದೇವಾಲಯ ಕುಂಬಾರಕೊಪ್ಪಲು, ಶನೇಶ್ವರ ದೇವಾಲಯ ರಾಜೇಂದ್ರನಗರ, ಸಿದ್ದಪ್ಪಾಜಿ ದೇವಾಲಯ ಅಶೋಕಪುರಂ, ಬಿಸಿಲು ಮಾರಮ್ಮ ತೊಣಚಿಕೊಪ್ಪಲು, ಯೋಗನರಸಿಂಹಸ್ವಾಮಿ ದೇವಾಲಯ ವಿಜಯನಗರ ಮುಂತಾದ ದೇವಾಲಯಗಳು ಸೂರ್ಯಾಭಿಮುಖವಾಗಿರುವುದನ್ನು ಗುರುತಿಸಲಾಗಿದೆ.

**ಚಿಕ್ಕದಾದ ಗರ್ಭಗುಡಿ** : ಮೈಸೂರು ನಗರದ ಪಾರಂಪರಿಕ ದೇವಾಲಯಗಳ ಗರ್ಭಗುಡಿಗಳೆಲ್ಲವೂ ಚಿಕ್ಕದಾದ ಆಕಾರದಲ್ಲಿವೆ. ಮಾನವ ದೇವರಿಗೆ ನಮ್ಮಂತೆ ವಾಸಿಸಲು ಪ್ರತ್ಯೇಕವಾಗಿ ಒಂದು ಆಲಯವನ್ನು ನಿರ್ಮಿಸಬೇಕು ಎಂದು ಅವನ ಮನದಲ್ಲಿ ಮೂಡಿದಾಗಿನಿಂದಲೂ ಇಲ್ಲಿಯವರೆವಿಗೂ ದೇವರ ಗರ್ಭಗುಡಿಗಳನ್ನು ಗಮನಿಸಿದರೆ ಜನಪದ ರಚನೆ, ವಿನ್ಯಾಸಗಳು ತಿಳಿಯುತ್ತವೆ. ಮೊದಲಿಗೆ ಚಿಕ್ಕ ಚಿಕ್ಕ ಕಲ್ಲುಚಪ್ಪಡಿಗಳ ಗುಡಿಗಳು, ಮಣ್ಣು ಕಲ್ಲುಗಳ ಗುಡಿಗಳು, ಅನಂತರದಲ್ಲಿ ಇಟ್ಟಿಗೆ ಗಾರೆಗಳಿಂದ ಕಟ್ಟಿದ ಗುಡಿಗಳು ಹಾಗೂ ವೈಭವಯುತವಾಗಿ ಕಾಣುವ, ಆರ್ಥಿಕವಾಗಿ ಅಧಿಕ ವೆಚ್ಚವಾಗುವ ಮಾರ್ಬಲ್ಸ್‌ನಿಂದ ರಚಿಸಿದ ಗರ್ಭಗುಡಿಗಳನ್ನು ಕಾಣುತ್ತೇವೆ. ಇತ್ತೀಚಿನ ದಿನಗಳಲ್ಲಿ ದೊಡ್ಡ ದೊಡ್ಡ ದೇವಾಲಯಗಳು ನಿರ್ಮಾಣವಾದರೂ ಅದರಲ್ಲಿರುವ ದೇವರ ಗರ್ಭಗುಡಿಯ ಆಕಾರ ಮಾತ್ರ ಚಿಕ್ಕದಾಗಿ ಜನಪದರ ಕಲ್ಪನೆಯಂತೆ ಇದೆಯಲ್ಲದೆ ಮತ್ತೇನು ಅಲ್ಲ. ವಾಸ್ತು ಶಿಲ್ಪಶೈಲಿಯಲ್ಲಿ ದ್ರಾವಿಡ, ವೇಸರ, ನಾಗರ ಎಂದು ಗಂಗರು, ಹೊಯ್ಸಳರ ಕಾಲದೆಂದು ಗುರುತಿಸಿದರು ಗರ್ಭಗುಡಿಯ ವಿಸ್ತಾರ ಚಿಕ್ಕದಾಗಿರುವುದನ್ನು ಕಾಣಬಹುದಾಗಿದೆ.

ಉದಾಹರಣೆಗೆ: ಚಾಮುಂಡೇಶ್ವರಿ ದೇವಾಲಯ, ಉತ್ತನಹಳ್ಳಿ ತ್ರಿಪುರ ಸುಂದರಿ ದೇವಾಲಯ, ನನ್ನೇಶ್ವರ ದೇವಾಲಯ, ಶ್ರೀ ಲಕ್ಷ್ಮಿವೆಂಕಟೇಶ್ವರ ದೇವಾಲಯ ಒಂಟಿಕೊಪ್ಪಲು, ಚಂದ್ರಮೌಳೇಶ್ವರ ದೇವಾಲಯ ಸರಸ್ವತಿಪುರಂ, ತ್ರಿನಯನೇಶ್ವರ ದೇವಾಲಯ, ಮಹದೇಶ್ವರ ದೇವಾಲಯ ಕುಂಬಾರಕೊಪ್ಪಲು, ಲಕ್ಷ್ಮಿಕಾಂತಸ್ವಾಮಿ ದೇವಾಲಯ ಲಕ್ಷ್ಮಿಕಾಂತನಗರ ಮುಂತಾದ ಎಲ್ಲಾ ದೇವಾಲಯಗಳ ಗರ್ಭಗುಡಿಗಳು ಚಿಕ್ಕದಾದ ಆಕಾರದಲ್ಲಿರುವುದನ್ನು ಕಾಣಬಹುದಾಗಿದೆ.

**ಪೀಠದ ಮೇಲೆ ದೇವರನ್ನು ಪ್ರತಿಷ್ಠಾಪಿಸುವುದು :** ಮನುಷ್ಯನ ಪ್ರಜ್ಞಾ ಪಾತಳಿಯ ಪ್ರಾರಂಭದಲ್ಲಿ ದೇವರ ಕಲ್ಪನೆ ಗೊತ್ತಾಗಿ, ಗರ್ಭಗುಡಿಯ ಪೀಠದಂತಹ ಜಾಗವು 'ಜಗಲಿ' ಎಂಬ ಹೆಸರನ್ನು ಪಡೆದು ಜಗತ್ತಿನ ಪ್ರತಿಮೆಯಾಗಿದೆ. ವೇದಕಾಲದಲ್ಲಿ ಯಜ್ಞದ ಪೀಠವೂ ಜಗಲಿ ಎಂದು ಕರೆಯಿಸಿಕೊಂಡಿದೆ. ಜಗಲಿಯ ಬಗೆಗೆ ಧಾರ್ಮಿಕ ಹಾಗೂ ಸಾಂಸ್ಕೃತಿಕ ಪ್ರತಿಮೆಗಳು ದಕ್ಷಿಣ ಭಾರತದಲ್ಲೆಲ್ಲ ಕಂಡುಬರುತ್ತವೆ. ಮನುಷ್ಯನ ಪ್ರಜ್ಞೆ ತೀಕ್ಷ್ಣಗೊಂಡು ಗರ್ಭಗುಡಿಯಲ್ಲಿ ಕಟ್ಟೆ, ಗದ್ದುಗೆ, ಪೀಠ, ಜಾಗ 'ಜಾಗ ಸ್ಥಳ' ತಿಳಿದು ದೇವರ ಪ್ರತಿಮೆ ಸ್ಥಾಪಿತವಾಯಿತು. ಒಟ್ಟಿನಲ್ಲಿ ಪೀಠ ಅಥವಾ ಜಗಲಿ ಎರಡು ಒಂದೇ ಕೆಲಸವನ್ನು ನಿರ್ವಹಿಸುತ್ತವೆ. ಜನಪದರು ನೆಲಮಟ್ಟಕ್ಕಿಂತ

ಹಾಗೂ ತಾವು ನಿಂತಿರುವ ಸ್ಥಳಕ್ಕಿಂತ ಎತ್ತರದ ಪೀಠದಲ್ಲಿ ದೇವರನ್ನು ಪ್ರತಿಷ್ಠಾಪಿಸುವುದು, ದೇವರಿಗೆ ನೀಡುವ ಗೌರವ ಮತ್ತು ಭಕ್ತಿಯ ಸಂಕೇತವಾಗಿದೆ.

ಮೈಸೂರು ನಗರದ ಪಾರಂಪರಿಕ ದೇವಾಲಯಗಳಲ್ಲಿ ಶೇಕಡ 99ರಷ್ಟು ದೇವರ ಮೂರ್ತಿಗಳನ್ನು ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ ಉದಾಹರಣೆಗೆ: ಮಹಲಕ್ಷ್ಮಿ ದೇವಾಲಯ ದಟ್ಟಗಳ್ಳಿ, ಮಾರುತಿ ದೇವಾಲಯ ಗಂಗೊತ್ರಿ ಬಡಾವಣೆ, ಚಾಮುಂಡೇಶ್ವರಿ ದೇವಾಲಯ ಚಾಮುಂಡಿಬೆಟ್ಟ, ಉತ್ತನಹಳ್ಳಿ ತ್ರಿಪುರಸುಂದರಿ ದೇವಾಲಯ, ಮಹದೇಶ್ವರ ದೇವಾಲಯ ಆಲನಹಳ್ಳಿ ಮುಂತಾದ ದೇವಾಲಯಗಳನ್ನು ಗಮನಿಸಬಹುದಾಗಿದೆ. ಆದರೆ ಪಾತಾಳ ಆಂಜನೇಯ ದೇವಾಲಯವು ನೆಲಮಟ್ಟಕ್ಕಿಂತ ಕೆಳಗಿದೆ. ಇದು ವಿಶೇಷವಾದರು ಜನಪದರೊಂದಿಗಿನ ಸಂಬಂಧದೊಂದಿಗೆ ಬೆಸೆದು, ದೇವರನ್ನು ನಂಬಿ, ಗೌರವಿಸಿ ತಗ್ಗಿ ಬಗ್ಗಿ ನಡೆದು ಕೊಳ್ಳುವುದಕ್ಕೆ ಇದು ಉದಾಹರಣೆಯಾಗಿದೆ.

**ಕಲ್ಲು ಚಪ್ಪಡಿ ಹಾಸುಗಳು :** ಮೈಸೂರು ನಗರದ ಪಾರಂಪರಿಕ ದೇವಾಲಯಗಳಲ್ಲಿ ಚಪ್ಪಡಿ ಕಲ್ಲಿನ ಹಾಸುಗಳು ಇಂದಿಗೂ ಕಾಣಸಿಗುತ್ತವೆ. ಈ ಹಿಂದೆ ದೇವಾಲಯಗಳ ನಿರ್ಮಾಣದಲ್ಲಿ ಕಂಬಗಳನ್ನು ನಿಲ್ಲಿಸಿ ಅದರ ಮೇಲೆ ಚಪ್ಪಡಿಗಳನ್ನು ಹಾಸಿ ಮಂಟಪವನ್ನು ಕಟ್ಟಲಾಗುತ್ತಿತ್ತು. ದೇವಾಲಯದ ಆವರಣವನ್ನು ಚಪ್ಪಡಿ ಕಲ್ಲುಗಳನ್ನು ಹಾಸಿ ನಿರ್ಮಿಸಲಾಗುತ್ತಿತ್ತು. ಅಂತಹ ಕುರುಹುಗಳು ಕೆಲವೊಂದು ದೇವಾಲಯಗಳಲ್ಲಿ ಇಂದಿಗೂ ಕಾಣಸಿಗುತ್ತವೆ. ಇದೂ ಕೂಡ ದೇವಾಲಯಗಳ ರಚನೆಯಲ್ಲಿ ಜಾನಪದೀಯತೆಯ ಅಂಶವಾಗಿ ಬಳಕೆಗೊಂಡಿರುವುದಕ್ಕೆ ಸಾಕ್ಷಿಯಾಗಿವೆ.

ಸಿದ್ಧೇಶ್ವರಸ್ವಾಮಿ ದೇವಾಲಯವು ಉತ್ತನಹಳ್ಳಿ ತ್ರಿಪುರಸುಂದರಿ ದೇವಾಲಯದ ಹಿಂಭಾಗದಲ್ಲಿದ್ದು, ಇಂದಿಗೂ ನಿರಲಂಕೃತವಾಗಿದೆ. ಮೇಲ್ಛಾವಣಿ ಕಲ್ಲುಚಪ್ಪಡಿಗಳಿಂದ ಕೂಡಿರುವುದನ್ನು ಕಾಣಬಹುದಾಗಿದೆ.

ಅಶೋಕರಸ್ತೆಯಲ್ಲಿರುವ ಶ್ರೀ ಕನ್ಯಾಕ ಪರಮೇಶ್ವರಿ ದೇವಾಲಯದ ಹಜಾರದ ಮೇಲ್ಛಾವಣಿಗೆ ಹಾಕಿರುವ ಕಲ್ಲುಚಪ್ಪಡಿಗಳು ದೇವಾಲಯದ ನಿರ್ಮಾಣ ಸಂದರ್ಭದಲ್ಲಿ ಹಾಕಿರುವುದಾಗಿದ್ದು, ಇಂದಿಗೂ ಎಲ್ಲೆಲ್ಲಿ ಸಂದುಗಳು ಕಾಣಿಸಿಕೊಂಡಿದೆ ಅಲ್ಲಿಗೆ ಸಿಮೆಂಟಿನ ಗಾರೆಯಿಂದ ಮುಚ್ಚಲಾಗಿದೆ. ಹೊರಗೆ ಎಷ್ಟೇ ಬಿಸಿಲು ಇದ್ದರೂ ಸಹ ದೇವಾಲಯದ ಒಳ ಪ್ರವೇಶಿಸಿದಂತೆ ತಂಪಾದ ಹವಾಮಾನವಿರುವುದಕ್ಕೆ ಕಲ್ಲುಚಪ್ಪಡಿಗಳಿರುವುದೇ ಕಾರಣವಾಗಿದೆ.

ಕನ್ನೇಗೌಡನ ಕೊಪ್ಪಲಿನ ಶ್ರೀ ಚಂದ್ರಮೌಳೇಶ್ವರ ದೇವಾಲಯದ ಬಹುಭಾಗವನ್ನು ಕಲ್ಲುಚಪ್ಪಡಿಗಳಿಂದಲೇ ವಿನ್ಯಾಸಗೊಳಿಸಲಾಗಿದೆ. ಇಂದಿಗೂ ಕಲ್ಲಿನಿಂದ ಕಟ್ಟಿರುವ ಕಲ್ಯಾಣಿಯನ್ನು ಕಾಣಬಹುದು.

ಬೆಟ್ಟದ ಚಾಮುಂಡೇಶ್ವರಿ ದೇವಾಲಯದ ಗರ್ಭಗುಡಿಯ ಒಳ ಆವರಣವನ್ನು ಹೊರತುಪಡಿಸಿ ಉಳಿದೆಲ್ಲ ಭಾಗಗಳಲ್ಲಿಯೂ ಕಂಬಗಳು, ಕಲ್ಲುಚಪ್ಪಡಿಗಳಿಂದ ಪ್ರಾಕಾರ ಆವರಣಗಳೆಲ್ಲವನ್ನು ಹೊದಿಸಿರುವುದು ಕಾಣಬಹುದು. ಗರ್ಭಗುಡಿಯ ಹೊರ ಆವರಣದಲ್ಲಿ ಹಾಗೂ ದೇವಾಲಯದ ಹೊರ ಆವರಣದಲ್ಲಿ ಕಲ್ಲುಚಪ್ಪಡಿಗಳ ಹಾಸನ್ನು ಹಾಕಿರುವುದನ್ನು ಕಾಣಬಹುದಾಗಿದೆ.

ಕನ್ನೇಗೌಡನ ಕೊಪ್ಪಲಿನ ಚಾಮುಂಡೇಶ್ವರಿ ದೇವಾಲಯಕ್ಕೆ ದಿವಂಗತ ಚಾಮಯ್ಯನ ಮನೆತನದವರು ಆಗಿನ ರಾಜರ ಆಳ್ವಿಕೆಯಲ್ಲಿ ನಾಲ್ಕು ಕಂಬಗಳ ಆಧಾರದ ಮೇಲೆ ಕಲ್ಲುಚಪ್ಪಡಿಯನ್ನು ಹಾಕಿ ಗರ್ಭಗುಡಿಯನ್ನು ನಿರ್ಮಿಸಿದ್ದರು. 1984ರಲ್ಲಿ ಜೀರ್ಣೋದ್ಧಾರ ಮಾಡುವಾಗ ಅದನ್ನು ಬದಲಾಯಿಸಲಾಗಿದೆ.

ಕುಂಬಾರಕೊಪ್ಪಲಿನ ಮಹದೇಶ್ವರ ದೇವಾಲಯದ ಪ್ರಾಂಗಣದ ಸುತ್ತಲು ಕಲ್ಲುಚಪ್ಪಡಿಗಳನ್ನು ಹಾಸಿರುವುದು ಹಾಗೂ ಕಲ್ಲುಕಂಬಗಳನ್ನು ನಿಲ್ಲಿಸಿರುವುದು ಇಂದಿಗೂ ಕಾಣಸಿಗುತ್ತವೆ.

ಈ ಮೇಲಿನ ದೇವಾಲಯಗಳೇ ಅಲ್ಲದೆ ಹಿನಕಲ್ಲಿನ ನನ್ನೇಶ್ವರ, ಕೆ.ಇ.ಬಿ ಸರ್ಕಲ್‌ನ ಚಂದ್ರಮೌಳೇಶ್ವರ, ಇಟ್ಟಿಗೆಗೂಡಿನ ಕಾಳಮ್ಮ, ಒಂಟಿಕೊಪ್ಪಲಿನ ವೆಂಕಟೇಶ್ವರ ಮುಂತಾದ ದೇವಾಲಯಗಳಲ್ಲಿ ಕಲ್ಲಿನ ಚಪ್ಪಡಿಗಳ ಹಾಸನ್ನು ಕಾಣಬಹುದಾಗಿದೆ.

ಈ ಮೇಲಿನ ಕಾರಣಗಳೇ ಅಲ್ಲದೆ ಹಲವಾರು ದೇವಾಲಯಗಳಲ್ಲಿ ಕುಳ್ಳದಾಗಿರುವ ಗರ್ಭಗುಡಿಯ ಬಾಗಿಲು ಹಾಗೂ ದೇವರ ಮೂರ್ತಿಯ ಹಿತ್ತಾಳೆಯ ಮುಖವಾಡಗಳನ್ನು ಕಾಣಬಹುದಾಗಿದೆ. ಇತ್ತೀಚೆಗೆ ಮುಖವಾಡಗಳನ್ನು ಚಿನ್ನ, ಬೆಳ್ಳಿಗಳಲ್ಲಿಯು ಮಾಡಿಸಿದ್ದಾರೆ. ಇದು ಭಕ್ತರ ಹರಕೆಯ ರೂಪ ಮತ್ತು ದೇವಾಲಯದ ಪ್ರಸಿದ್ಧಿ ಹಾಗೂ ಅದು ಇರುವ ಪ್ರದೇಶವನ್ನು ಅವಲಂಭಿಸಿರುತ್ತದೆ.

**ಜನಪದ ವಾಸ್ತು :**

ನಾಗರಿಕ ಸಮಾಜಗಳಲ್ಲಿ ವಿಶಿಷ್ಟವಾಗಿ ಕಂಡುಬರುವ ಸಾಮಾಜಿಕ, ರಾಜಕೀಯ, ಔದ್ಯಮಿಕ ಸಂಸ್ಥೆಗಳು, ಸಂಪತ್ತು ಕೇಂದ್ರಿತವಾಗಿರುವ ಕೆಲವು ವರ್ಗಗಳು ವ್ಯವಹಾರ ಕ್ಲಿಷ್ಟತೆ, ವಿವಿಧ ಅವಶ್ಯಕತೆಗಳು ಮುಂತಾದ ಕಾರಣಗಳಿಂದಾಗಿ ರೂಪಿಸಿಕೊಂಡಿರುವ ವಾಸ್ತು ನಿರ್ಮಾಣಗಳು ದೊಡ್ಡವಾಗಿಯೂ ವೈವಿಧ್ಯಮಯವಾಗಿಯೂ, ಕಲಾತ್ಮಕವಾಗಿಯೂ ಇರುತ್ತವೆ. ಇವುಗಳ ಪರಿಚಯವಿರುವ ಆಧುನಿಕ ಯುಗದಲ್ಲಿ ವಾಸ್ತುವೆಂಬ ಪದವನ್ನು ಇಂಥ ವಿಶಿಷ್ಟ ರೀತಿಯ ಕೃತಿಗಳಿಗೆ ಬಳಸುವುದು ರೂಢಿಯಾಗಿದೆ.

"ನಾಗರಿಕ ಸಮಾಜದಿಂದ ಭಿನ್ನವಾಗಿರುವ ಸರಳವಾದ ಜನಪದ ಸಮಾಜಗಳಲ್ಲಿ ವಿಶಿಷ್ಟ ವಾಸ್ತುರಚನೆಗಳಿಗೆ ಅವಶ್ಯಕವಾದ ಸಂಪನ್ಮೂಲಗಳಾಗಲಿ ಅಗತ್ಯಗಳಾಗಲಿ ಇಲ್ಲದಿರುವುದರಿಂದ, ಇಲ್ಲಿಯ ಸಾಮಾನ್ಯ ರಚನೆಗಳನ್ನು ಮೇಲಿನ ಅರ್ಥದಲ್ಲಿ ವಾಸ್ತುಕೃತಿಗಳು ಎಂದು ಹೆಸರಿಸುವುದು ಅಷ್ಟುಸಾಧುವಾಗಿ ಕಾಣುವುದಿಲ್ಲ. ಜನಪದ ನಿರ್ಮಾಣಗಳು ಬಹುಮಟ್ಟಿಗೆ ಬಿಸಿಲು ಮಳೆಯಿಂದ ರಕ್ಷಣೆಯೊದಗಿಸುವ ಆವರಣಗಳು, ಅಷ್ಟೆ. ಜೋಪಡಿ, ಗುಡಿಸಲು ಮುಂತಾದವನ್ನು ಕಟ್ಟಡಗಳೆಂದು ಹೆಸರಿಸುವುದೂ ಇಂದು ಆ ಪದಕ್ಕೆ ರೂಢಿಗತವಾಗಿರುವ ಅರ್ಥದ ದೃಷ್ಟಿಯಿಂದ ತಪ್ಪಾದೀತೇನೋ. ಹೀಗಿದ್ದರೂ ಜನಪದ ಆವರಣ ನಿರ್ಮಾಣಗಳನ್ನೆಲ್ಲ ಒಟ್ಟಾಗಿ ಹೇಳುವ ಯಾವುದೇ ಪದದ ಅಭಾವದಿಂದಾಗಿ ಇವನ್ನು ನಿರ್ದೇಶಿಸಲು ವಾಸ್ತು ಎಂಬ ಪದವನ್ನೇ ಬಳಸಲಾಗಿದೆ"[11]

ಜನಪದ ದೇವಾಲಯಗಳ ವಾಸ್ತು ರಚನೆಗಳಲ್ಲಿ ಮುಖ್ಯವಾಗಿ ಕಂಡುಬರುವ ಒಂದು ಅಂಶವೆಂದರೆ ಅದು ಅವುಗಳ ಸರಳತೆ. ಅದಕ್ಕೆ ಕಾರಣ ಆರ್ಥಿಕ ಬಲದ ಅಭಾವ ಮತ್ತು ಸೀಮಿತ ಅವಶ್ಯಕತೆಗಳು. ದೇವಾಲಯಗಳು ಧಾರ್ಮಿಕ ರೀತಿಯ ವಾಸ್ತುಗಳು. ಇವುಗಳ ಸಂಖ್ಯೆ ಬಹುಕಡಿಮೆ. ನಾಗರಿಕ ಸಮಾಜದ ಪ್ರಭಾವ ಕಡಿಮೆ ಇರುವ ಜನಪದ ಗ್ರಾಮಗಳಲ್ಲಿ ಒಂದೋ ಎರಡೋ ಇದ್ದರೆ ಹೆಚ್ಚು. ಹೆಚ್ಚುಬಾರಿ ಮರ, ನದಿ ದಡ, ಬಯಲುಗಳೇ ಪೂಜಾಸ್ಥಾನಗಳಾಗಿದ್ದು ಕೆಲವು ಗ್ರಾಮಗಳಲ್ಲಿ ದೇವಾಲಯಗಳು ಇಲ್ಲದಿರುವುದೂ ಉಂಟು. ಎಷ್ಟೋ ವೇಳೆ ಎರಡು ಪಕ್ಕಗಳಲ್ಲಿ ಕಲ್ಲು ನೆಟ್ಟು ಅದರ ತಲೆಯ ಮೇಲೆ ಒಂದು ಚಪ್ಪಡಿ ಎಳೆದು ಅದನ್ನೆ ಗುಡಿ ಎಂದು ಬಳಸುವುದೂ ಉಂಟು. ಕಲ್ಲುಗುಂಡು ಮಾರಿ ಆಗಬಹುದಾದರೆ ಇದು ಅದರ ದೇವಾಲಯವಾಗುವುದರಲ್ಲಿ ಯಾವ ಅಚ್ಚರಿಯೂ ಇಲ್ಲ. ಒಂದೇ ದೇವಾಲಯ ಹಲವು ಗ್ರಾಮಗಳ ಧರ್ಮಿಕ ಅವಶ್ಯಕತೆಯನ್ನು ಪೂರೈಸುವುದು ಅಪರೂಪವೇನಲ್ಲ. ಕೆಲವು ಸಂದರ್ಭಗಳಲ್ಲಿ ಈ ದೇವಾಲಯಗಳು ನ್ಯಾಯ ತೀರ್ಮಾನಗಳಿಗೂ ಉಪಯೋಗವಾಗುತ್ತವೆ.

ಒಟ್ಟಿನಲ್ಲಿ ಹೇಳುವುದಾದರೆ ಜನಪದ ವಾಸ್ತು ನಿರ್ಮಾಣಗಳು ಜನರ ನಿತ್ಯ ಜೀವನದ ಕನಿಷ್ಠ ಅವಶ್ಯಕತೆಗಳಿಗಷ್ಟೇ ಸೀಮಿತವಾಗಿರುತ್ತವೆ.

ಜನಪದ ದೇವಾಲಯಗಳ ವಾಸ್ತು ರಚನೆಯಲ್ಲಿ ಪರಿಸರದ ಗಾಢಪ್ರಭಾವ ಎದ್ದುಕಾಣುತ್ತದೆ. ಇದನ್ನು ರಚನೆಗೆ ಉಪಯೋಗಿಸುವ ವಸ್ತುಗಳಲ್ಲಿಯೂ ಮತ್ತು ರಚನೆಯ ಆಕಾರದಲ್ಲೂ ಕಾಣಬಹುದು. ನೈಸರ್ಗಿಕವಾಗಿ ಸಿಗುವ ಮಣ್ಣು, ಕಲ್ಲು, ಚಪ್ಪಡಿ, ಸೀಮೆಯಕಲ್ಲು, ಕಾಡು ಪ್ರದೇಶಗಳಲ್ಲಿ ಮರ, ಬಿದಿರು, ಗರಿ ಮುಂತಾದವುಗಳನ್ನು ಬಳಸಿಕೊಂಡು ನಿರ್ಮಿಸುತ್ತಾರೆ. ಅಲ್ಲದೆ ಜನಪದ ದೇವಾಲಯಗಳ ವಾಸ್ತು ಕೃತಿಗಳಲ್ಲಿ ತೀರ ಕನಿಷ್ಠ ಅಲಂಕರಣವನ್ನು ಕಾಣುತ್ತೇವೆ ಹಾಗೂ ಆಗಿಂದಾಗ್ಗೆ ನವೀಕರಿಸುವುದು ಸಾಮಾನ್ಯವಾಗಿರುತ್ತದೆ.

## ವಾಸ್ತುಶಿಲ್ಪ

ಮೈಸೂರು ನಗರ ಸಂಸ್ಕೃತಿಯ ವೈವಿಧ್ಯತೆಗಳಿಗೆ ಅನುಗುಣವಾಗಿ ವಿಭಿನ್ನವಾದ ವಾಸ್ತು ಶೈಲಿಗಳಿಂದ ಬೆಳೆದು ಬಂದಿದೆ. ನಗರದಲ್ಲಿ ವಿಭಿನ್ನ ವಾಸ್ತು ಶೈಲಿಯಲ್ಲಿ ರಚನೆಗೊಂಡ ದೇವಸ್ಥಾನಗಳು, ಚರ್ಚುಗಳು, ಮಸೀದಿಗಳು, ಅರಮನೆಗಳು ಮುಂತಾದವುಗಳು ಅಸಂಖ್ಯಾತವಾಗಿ ಕಂಡುಬರುತ್ತವೆ. ಇವುಗಳು ನಾಡಿನ ಸಂಸ್ಕೃತಿಯ ಅಪಾರವಾದ ವಾಸ್ತು ವೈವಿಧ್ಯಗಳಿಗೆ ಜೀವಂತ ನಿದರ್ಶನಗಳಾಗಿವೆ. ಕರ್ನಾಟಕದ ಪ್ರಸಿದ್ಧ ರಾಜವಂಶಗಳಾದ ಕದಂಬರು, ಗಂಗರು, ಹೊಯ್ಸಳರು, ರಾಷ್ಟ್ರಕೂಟರು, ವಿಜಯನಗರದ ಅರಸರು, ಮೈಸೂರು ಒಡೆಯರು ಮತ್ತು ಹೈದರಾಲಿ, ಟಿಪ್ಪುಸುಲ್ತಾನ್ ಹಾಗೂ ಬ್ರಿಟಿಷ್ ಆಡಳಿತಾಧಿಕಾರಿಗಳು ಒಳಗೊಂಡಂತೆ ವೈಭವೋಪೇತ, ಅದ್ಭುತ, ಆಕರ್ಷಕ ಕಟ್ಟಡಗಳನ್ನು ನಿರ್ಮಾಣ ಮಾಡಿ ವಿಭಿನ್ನವಾದ ವಾಸ್ತು ಸೌಂದರ್ಯಕ್ಕೆ ಮಹೋನ್ನತಿಯನ್ನು ತಂದುಕೊಟ್ಟಿದ್ದಾರೆ. ಅಲ್ಲದೆ ರಾಜ ಮಹಾರಾಜರುಗಳು ಕಟ್ಟಡಗಳ ನಿರ್ಮಾಣ ಮಾತ್ರವಲ್ಲದೆ ಅದಕ್ಕೆ ಪೂರಕವಾದ ವ್ಯವಸ್ಥೆಯನ್ನು ಕಲ್ಪಿಸಿಕೊಡುವ ಸಂಸ್ಕೃತಿಯ ನೆಲಗಟ್ಟಿನಲ್ಲಿ ದೇವಾಲಯ, ಬಾವಿ, ಕೊಳ, ಕೆರೆ, ಸೇತುವೆಗಳು, ರಸ್ತೆಗಳು, ಕೋಟೆಗಳು ಮುಂತಾದವುಗಳನ್ನು ನಿರ್ಮಿಸಿದ್ದಾರೆ.

**ಶಿಲ್ಪಗಳು** : ದೇವಾಲಯದಲ್ಲಿರುವ ಮುಖ್ಯವಸ್ತುವಿಗೆ ದೇವರು ಎಂದು ಕರೆಯುವುದು, ಅವುಗಳನ್ನು ಒಂದು ರೂಪದಲ್ಲಿ ತಯಾರಿಸಿರುವ ದೇವರುಗಳ ಬಿಂಬವನ್ನೇ ಶಿಲ್ಪ ಎನ್ನುತ್ತಾರೆ[12] ದೇವಾಲಯಗಳು ಬೆಳೆದಂತೆ ಶಿಲ್ಪಗಳು ರೂಪುಗೊಂಡು ವಾಸ್ತುವಿನ ಶ್ರೀಮಂತಿಕೆಯನ್ನು ಹೆಚ್ಚಿಸಿದವು. ವಾಸ್ತುಶಿಲ್ಪವು ಬಹಳ ವರ್ಷಗಳ ಕಾಲ ಉಳಿಯಬೇಕು, ಆಕರ್ಷಕವಾಗಿರಬೇಕು, ಗಾಂಭೀರ್ಯತೆಯ ಜೊತೆಗೆ ಚೆಲುವು ಮೈಗೂಡಿಕೊಂಡಿರಬೇಕು ಇತ್ಯಾದಿ ಉದಾತ್ತ

ಭಾವನೆಗಳಿಂದ ವಾಸ್ತುಶಿಲ್ಪಗಳು ಹೆಚ್ಚಾಗಿ ದೇವಾಲಯಗಳ ವಾಸ್ತುವಿನ ಜೊತೆಗೆ ಶಿಲ್ಪಕ್ಕೆ ಹೆಚ್ಚು ಆಧ್ಯತೆನೀಡಿ ಬೆಳೆಸಿದ್ದಾರೆ.

## ವಾಸ್ತುಶಿಲ್ಪದ ವೈಶಿಷ್ಟ್ಯಗಳು

ಕಿಟಿಕಿಗಳು, ಬಾಗಿಲುಗಳು, ಕಂಬಗಳು, ಕಮಾನುಗಳು, ಗುಮ್ಮಟಗಳು, ಗೋಪುರಗಳು, ಮಿನಾರ್‌ಗಳು, ಬುರುಜುಗಳು, ಮೂರ್ತಿಶಿಲ್ಪಗಳು ಮತ್ತು ಅವುಗಳ ಮೇಲಿನ ಕುಸುರಿ ಕೆತ್ತನೆಗಳು ಇವುಗಳ ಕಟ್ಟಡಗಳ ವಿಭಿನ್ನ ವಾಸ್ತುಶೈಲಿಯನ್ನು ಪರಿಚಯಿಸುವ ಬಾಹ್ಯನೋಟಗಳು. ಇವುಗಳ ರಚನೆಯಲ್ಲಿ ಶಿಲ್ಪಿಯ ತಾಂತ್ರಿಕ ಪರಿಣತಿ, ಕೌಶಲ ಮತ್ತು ಆಯಾಕಾಲದ ರಚನಾ ತಂತ್ರದ ಪರಿಕಲ್ಪನೆಗಳು ನಿಖರವಾಗಿ ಗೋಚರಿಸುತ್ತವೆ. ಆಗ ಲಭ್ಯವಿದ್ದ ಸಾಮಾಗ್ರಿಗಳು ಮತ್ತು ಅವುಗಳು ಪ್ರತಿನಿಧಿಸುವ ಸಾಂಸ್ಕೃತಿಕ ಮೌಲ್ಯಗಳಿಂದ ಕೂಡ ಅವುಗಳಲ್ಲಿ ಪ್ರತಿಬಿಂಬಿತವಾಗಿವೆ.

ವಾಸ್ತುಶಿಲ್ಪ ಕಲೆಯ ಐತಿಹಾಸಿಕ ಅಧ್ಯಯನಕ್ಕೆ ದೊರಕುವ ವಿಶಿಷ್ಟವಾದ ಸಾಮಾಗ್ರಿಗಳೆಂದರೆ ದೇವಾಲಯಗಳು, ಬಸದಿಗಳು, ಮಸೀದಿಗಳು, ಗೋರಿಗಳು ಮತ್ತು ಚರ್ಚುಗಳು ಇತ್ಯಾದಿ ಇವುಗಳನ್ನು ವಾಸಿಸುವ ಮನೆಗಳಿಗಿಂತಲೂ ಬಹುಶಃ ಭದ್ರವಾಗಿ ಕಟ್ಟುತ್ತಿದ್ದರು. ಆದ್ದರಿಂದ ಇವು ಇಂದಿಗೂ ಉಳಿದುಬಂದಿವೆ. ಈ ವಾಸ್ತುಶಿಲ್ಪದ ಪ್ರಗತಿಗೆ ಧರ್ಮ ದೃಷ್ಟಿಯೇ ಮೂಲ ಕಾರಣವೆನ್ನಬಹುದು. ವಾಸ್ತು ಶಿಲ್ಪದ ಬಗೆಗೆ ಪ್ರಾಚೀನ ಅವಶೇಷಗಳು ಹರಪ್ಪ, ಮೊಹೆಂಜೋದಾರೊಗಳಲ್ಲಿ ದೊರೆತಿವೆ.[13]

## ವಾಸ್ತುಶಿಲ್ಪ ಶೈಲಿಗಳು

**ದ್ರಾವಿಡಶೈಲಿ :** ಮೂಲ ದಕ್ಷಿಣ ಭಾರತದ ವಾಸ್ತುಶಿಲ್ಪ ಶೈಲಿಗೆ ದ್ರಾವಿಡವೆಂದು ಕರೆಯುವರು. ಚೌಕೋನಾಕೃತಿಯ ತಳವಿನ್ಯಾಸದ ಮೇಲೆ ಅನೇಕ ಅಂತಸ್ತುಗಳಾಗಿ ಏಳುವ ಗೋಪುರಗಳಿಂದಲೂ ಕೂಡಿದ್ದಕ್ಕೆ ದ್ರಾವಿಡಶೈಲಿ ಎನ್ನುವರು ಇದರ ಶಿಖರಗಳು ಮೆಟ್ಟಿಲುಗಳಂತೆ ಮೇಲೇರಿ ಕೊನೆಗೆ ಕಿರಿದಾಗುತ್ತ ಹೊಗುತ್ತದೆ. ಈ ಶೈಲಿಗೆ ಉತ್ತಮ ಉದಾಹರಣೆ ಎಂದರೆ ಐಹೊಳೆ ದೇವಾಲಯಗಳಲ್ಲಿ ಕಾಣಬಹುದು.

**ನಾಗರಶೈಲಿ :** ಔತ್ತರೇಯ ರೀತಿಗೆ ನಾಗರಶೈಲಿ ಎನ್ನುವರು. ಎತ್ತರವಾದ ಜಗಲಿಗಳ ಮೇಲೆ ಬಾಗಿದಗೋಡೆಗಳುಳ್ಳ ವಿಮಾನಗಳಿಂದಲೂ, ಕೂಷ್ಮಾಂಡ ಮೊದಲಾದ ಆಕೃತಿಗಳುಳ್ಳ

ಶಿಖರಗಳಿಂದಲೂ ಕೂಡಿದುದಕ್ಕೆ ಔತ್ತರೇಯ ರೀತಿ ಎನ್ನುವರು. ಈ ಶೈಲಿಗೆ ಉತ್ತಮ ಉದಾಹರಣೆಗಳು ಭುವನೇಶ್ವರ, ಖಜುರಾಹೋ ದೇವಾಲಯಗಳಾಗಿವೆ.

**ವೇಸರ ಶೈಲಿ :** ಭಾರತೀಯ ಮತ್ತು ಗ್ರೀಕರ ಶೈಲಿಯ ಸಮ್ಮಿಶ್ರರೀತಿಗೆ ವೇಸರಶೈಲಿ ಎನ್ನುವರು. ನಾಗರ ಮತ್ತು ದ್ರಾವಿಡ ಶೈಲಿಗಳೇರಡರಲ್ಲಿಯೂ ದೇವಾಲಯಗಳ ಮೇಲೆ ಶಿಖರಗಳಿರುತ್ತವೆ. ವೇಸರ ದೇವಾಲಯಗಳಲ್ಲಿ ಶಿಖರಗಳಲ್ಲದೆ ಮಟ್ಟಸವಾದ ಮೇಲ್ಛಾವಣಿ ಮಾತ್ರ ಇರುತ್ತದೆ.

ಹೀಗೆ ವಾಸ್ತುಶಿಲ್ಪದಲ್ಲಿ ಪ್ರಸಿದ್ಧವಾದ ದ್ರಾವಿಡ, ನಾಗರ ಮತ್ತು ವೇಸರ ಶೈಲಿಗಳಿಗೆ ಅಡಿಪಾಯ ನಮ್ಮ ಗ್ರಾಮದೇವತೆಗಳ ಗುಡಿಗಳಾದವೆಂಬ ವಿಚಾರ ಕರ್ನಾಟಕದ ಗ್ರಾಮದೇವತೆಗಳ ಗುಡಿಗಳನ್ನು ನೋಡಿದಾಗ ತಿಳಿದುಬರುತ್ತದೆ. ಹೀಗೆ ಭಾರತದಲ್ಲಿ ಬೆಳೆದು ಬಂದ ಮೂರ್ತಿಶಿಲ್ಪ ಮತ್ತು ವಾಸ್ತುಶಿಲ್ಪಕ್ಕೆ ಅಡಿಪಾಯವಾಗಿ ಗ್ರಾಮದೇವತೆಗಳ ಮೂರ್ತಿಗಳು ಮತ್ತು ಗುಡಿಗಳು ಇದ್ದುದನ್ನು ಕಾಣಬಹುದು.

ಮೈಸೂರು ಒಡೆಯರ ಪ್ರೋತ್ಸಾಹದಿಂದಾಗಿ ಇತರೆ ಕಲೆಗಳಂತೆಯೇ ವಾಸ್ತು ಮತ್ತು ಶಿಲ್ಪಕಲೆಯೂ ನಾಡಿನಾದ್ಯಂತ ತನ್ನ ಉಚ್ಛ್ರಾಯಸ್ಥಿತಿಯನ್ನು ಮುಟ್ಟಿತು. ಆದರೆ ಆ ಕಾಲದಲ್ಲಿ ವ್ಯಕ್ತಿಗಳ ಹಾಗೂ ದೇವತೆಗಳ ಮೂರ್ತಿಶಿಲ್ಪ ಮತ್ತು ದೇವಾಲಯ ಕಟ್ಟಡಗಳ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಲಾಯಿತು. ರಾಜ ಒಡೆಯರ ಕಾಲದಿಂದಾರಂಭಿಸಿ, ಜಯಚಾಮರಾಜ ಒಡೆಯರ ಕಾಲದವರೆಗೂ ಈ ಪ್ರೋತ್ಸಾಹ ದೊರೆಯಿತು. ಅವರು ಹಲವಾರು ಗುಡಿ ಗೋಪುರಗಳನ್ನು ಕಟ್ಟಿಸಿದರು.

ರಾಜ ಒಡೆಯರು ಚಾಮುಂಡೇಶ್ವರಿ, ಉತ್ತನಹಳ್ಳಿ ಜ್ವಾಲಾಮುಖಿ, ತೃಣೇಶ್ವರ, ಶ್ರೀರಂಗ ಪಟ್ಟಣದ ರಂಗನಾಥಸ್ವಾಮಿ ದೇವಸ್ಥಾನಗಳನ್ನು ಕಟ್ಟಿಸಿ ಜೊತೆಗೆ ಉತ್ಸವ ಮಂಟಪ, ಸಂಧ್ಯಾ ಮಂಟಪ, ಸೋಪಾನ, ಅಗ್ರಹಾರಗಳನ್ನು ಕಟ್ಟಿಸಿದರು. ಹಲವು ದೇವಸ್ಥಾನಗಳ ಗೋಪುರಗಳನ್ನು ನಿರ್ಮಿಸಿದರು. ಬೆಟ್ಟದ ಚಾಮರಾಜರು ಚಾಮುಂಡಿ ಬೆಟ್ಟದಲ್ಲೊಂದು ಕೆರೆಯನ್ನು ಕಟ್ಟಿಸಿದರು. ದೊಡ್ಡ ದೇವರಾಜ ಒಡೆಯರು ಮೈಸೂರು ಕೋಟೆಯೊಳಗಿನ ತೃಣೇಶ್ವರ ದೇವಸ್ಥಾನಕ್ಕೆ ಇಪ್ಪತ್ತೇಳು ಅಂಕಣದ ಮಂಟಪ ಹಾಗೂ ಏಳುನೆಲೆಯ ಗೋಪುರ; ಚಾಮುಂಡಿಬೆಟ್ಟಕ್ಕೆ ಒಂದುಸಾವಿರ ಮೆಟ್ಟಿಲು; ಆ ಮಾರ್ಗ ಮಧ್ಯದಲ್ಲಿರುವ ಬೃಹದಾಕಾರದ ಕಲ್ಲಿನಬಸವ ವಿಗ್ರಹವನ್ನು ಮುಂತಾದವುಗಳನ್ನು ನಿರ್ಮಿಸಿದರು. ಮುಮ್ಮಡಿ ಕೃಷ್ಣರಾಜ ಒಡೆಯರು ಮೈಸೂರಿನಲ್ಲಿ ಶ್ವೇತವರಹಾಸ್ವಾಮಿ ದೇವಾಲಯ, ಕೃಷ್ಣಸ್ವಾಮಿ ದೇವಾಲಯ, ಚಾಮುಂಡೇಶ್ವರಿ ದೇವಾಲಯದ

ಮುಂಭಾಗದ ಗೋಪುರ, ತೃಣೇಶ್ವರ, ಲಕ್ಷ್ಮೀರಮಣಸ್ವಾಮಿ, ಹಾಡ್ಯದ ನರಸಿಂಹ, ಬಿಸಿಲುಮಾರಮ್ಮ ಅವರುಗಳ ದೇವಾಲಯಗಳನ್ನು ಕಟ್ಟಿಸಿದರು. ಮೈಸೂರು ಕೋಟೆಯ ಪಶ್ಚಿಮದಲ್ಲಿ ಬ್ರಹ್ಮಪುರಿ ದ್ವಾರವನ್ನೂ, ದೇವಾಂಬುಧಿ, ಲಿಂಗಾಂಬುಧಿ, ಕಾರಂಜಿ ಕೆರೆಯನ್ನು ಕಟ್ಟಿಸಿದರು. ಒಟ್ಟಿನಲ್ಲಿ ಮುಮ್ಮಡಿಯವರು ಕಾಲದಲ್ಲಿ ವಾಸ್ತುಶಿಲ್ಪಕಲೆ ಪ್ರವರ್ಧಮಾನಕ್ಕೆ ಬರತೊಡಗಿತು. ಇವರ ಕಾಲದಲ್ಲಿ ವ್ಯಕ್ತಿಗಳ ಹಾಗೂ ದೇವತೆಗಳ ಮೂರ್ತಿಶಿಲ್ಪ ನಿರ್ಮಾಣಕ್ಕೂ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ಜಯಚಾಮರಾಜ ಒಡೆಯರು ನಾಡಿನ ಬೇರೆ ಬೇರೆ ಕಡೆಗಳಲ್ಲಿನ ದೇವಾಲಯಗಳ ದುರಸ್ತಿಗೆ ಸಹಾಯ ಮಾಡಿದರಲ್ಲದೆ ಮೈಸೂರು ಅರಮನೆಯ ಆವರಣದಲ್ಲಿ ಭುವನೇಶ್ವರಿ, ರಾಜರಾಜೇಶ್ವರಿ, ಚಾಮುಂಡೇಶ್ವರಿ, ಗಾಯಿತ್ರಿ ಮೊದಲಾದ ದೇವಾಲಯಗಳನ್ನು ಕಟ್ಟಿಸಿದರು.

## 4.4 ದೇವರ ಮೂರ್ತಿಶಿಲ್ಪಗಳು

ಶಿಲ್ಪ ಮೂಲತಃ ವೃತ್ತಿಜನ್ಯವಾದುದರಿಂದ, ಇದರ ಸೃಷ್ಟಿಗೆ ಲಿಖಿತಶಾಸ್ತ್ರಗಳ ಉಪಯೋಗ ಅಲ್ಪ; ಇದು ಬಹುಮಟ್ಟಿಗೆ ಗುರು–ಶಿಷ್ಯ ಪರಂಪರೆಯಲ್ಲಿ ಕಲಿಕೆ ಅನುಭವದ ಸೂತ್ರದ ಮೇಲೆ ಮುಂದುವರಿಯುತ್ತದೆ.

ಜನಪದ ಸಮಾಜಗಳಲ್ಲಿ ಪ್ರಚಲಿತವಾಗಿರುವ ಶಿಲ್ಪವೇ ಜನಪದಶಿಲ್ಪ ಎಂಬ ವಿವರಣೆ ಸಾಧುವಾಗಿ ಕಂಡರೂ ಶಿಲ್ಪಗಳ ಆಳ ಅಧ್ಯಯನಕ್ಕೆ ತೊಡಗಿದಾಗ ಈ ವಿವರಣೆ ಅಸಮರ್ಪಕವೆನಿಸುತ್ತದೆ. ಜನಪದದಂಥ ಸರಳ ಸಮಾಜದಲ್ಲಿ ಹಲವು ಕಡೆಗಳಿಂದ ಬಂದ ಅನುಭವ, ಜ್ಞಾನ ಮತ್ತು ವಿಧಾನಗಳು ತಮ್ಮದೇ ಆದ ಮಾರ್ಗದಲ್ಲಿ ರೂಪುಗೊಂಡು ಜನಪದದ ಸ್ವತ್ತಾಗಿ ಬಿಡುತ್ತವೆ. ಆದಿವಾಸಿ ಶಿಲ್ಪಗಳ ಮತ್ತು ಜನಪದ ಶಿಲ್ಪಗಳ ನಡುವಿನ ವಿಭಜನಾ ರೇಖೆಯನ್ನು ಸ್ಪಷ್ಟವಾಗಿ ಗುರುತಿಸಲಾಗುವುದಿಲ್ಲ. ಭಾರತದಲ್ಲಿ ಭಿಲ್ಲರೇ ಮೊದಲಾದ ಆದಿವಾಸಿ ಸಮುದಾಯಗಳು ತಮಗೆ ಅವಶ್ಯವಾದ ಶಿಲ್ಪ ನಿರ್ಮಾಣಕ್ಕೆ ಪಕ್ಕದ ಗ್ರಾಮೀಣ ಕಲೆಗಾರರನ್ನೇ ಅವಲಂಬಿಸಿರುತ್ತಾರೆ. ಇಂಥ ಸಂದರ್ಭಗಳಲ್ಲಿ ಆದ ನಿರ್ಮಾಣಗಳು ಜನಪದದ್ದೊ, ಆದಿವಾಸಿಗಳದ್ದೊ ಎಂದು ಹೇಳುವುದು ಅಸಾಧ್ಯವಾಗುತ್ತದೆ.

ಮೂಲ ಮತ್ತು ರೂಪ ಯಾವುದೇ ಆದರೂ ಸಮಾಜಗಳಲ್ಲಿ ಪ್ರಚಲಿತವಾಗಿರುವ ಕೆಲವು ಸಾಮಾನ್ಯಾಂಶಗಳನ್ನು ಗಮನಿಸಬಹುದು. ಜನಪದದ ಸರಳ ಮನೋಭೂಮಿಕೆಗೆ, ಆರ್ಥಿಕಸ್ಥಿತಿಗೆ ಒಗ್ಗುವ ಸರಳತೆ ಜನಪದ ಶಿಲ್ಪಗಳ ಮುಖ್ಯ ಅಂಶ. ಸಾಮಾಗ್ರಿ, ತಂತ್ರ ಮತ್ತು ನಿರೂಪಣೆಯಲ್ಲಿ ಈ ಸರಳತೆ ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತದೆ. ಮಣ್ಣು, ಕಲ್ಲು, ಮರ, ಹೊಟ್ಟು, ಹಿತ್ತಾಳೆ ಮುಂತಾಗಿ ಆಯಾ ಪ್ರದೇಶಗಳಲ್ಲಿ ಸುಲಭವಾಗಿ ದೊರಕುವ ಸಾಮಾಗ್ರಿಗಳನ್ನಷ್ಟೇ ಶಿಲ್ಪಗಳ ತಯಾರಿಕೆಯಲ್ಲಿ

ಬಳಸಲಾಗುತ್ತದೆ. ನಿರೂಪಣೆಯಲ್ಲಿ ಆಯಾ ಶಿಲ್ಪಗಳಿಗೆ ಸಂಬಂಧಿಸಿದ ಮುಖ್ಯ ಭಾವನೆಗಳ ಅಭಿವ್ಯಕ್ತಿ ಶಿಲ್ಪದ ಗುರಿಯಾಗಿರುತ್ತದೆ. ಇಲ್ಲಿ ಶಿಲ್ಪಿಗಿಂತಲೂ ಶಿಲ್ಪಗಳನ್ನು ಉಪಯೋಗಿಸುವವರ ದೃಷ್ಟಿ, ಅವಶ್ಯಕತೆಗಳೇ ಶಿಲ್ಪ ಸೃಷ್ಟಿಯ ಚೇತನ. ಯಾರಿಗಾಗಿ ಕಲೆ ನಿರ್ಮಾಣವಾಗುತ್ತದೆಯೋ ಆ ಜನಪದವೇ ಜನಪದ ಶಿಲ್ಪದ ಜೀವಾಳ. ಈ ಜನಪದ ಶಿಲ್ಪಗಳು ಕೇವಲ ಕಲಾಕೃತಿಗಳಾಗಿರದೆ, ಅವು ಹೆಚ್ಚು ಮಟ್ಟಿಗೆ ಯಾವುದೋ ಸಾಮಾಜಿಕ ಉದ್ದೇಶಗಳಿಗಾಗಿ ರೂಪಿಸಲಾಗಿರುತ್ತದೆ.

ಜನಪದ ಕಲೆಯ ಅಧ್ಯಯನದಲ್ಲಿ ಸಾಕಷ್ಟು ಕೆಲಸ ಮಾಡಿರುವ ಜೋಸೆಫ್ ವ್ಯದ್ರ ಎಂಬ ವಿದ್ವಾಂಸ ಸಹ ಶಿಲ್ಪಿಗಿಂತಲೂ ಶಿಲ್ಪಗಳನ್ನು ಉಪಯೋಗಿಸುವ ಜನರ ಮನೋಭಾವ, ದೃಷ್ಟಿ ಮತ್ತು ಉದ್ದೇಶದ ಗಾಢ ಪ್ರಭಾವ ಜನಪದ ಶಿಲ್ಪಸೃಷ್ಟಿಯಲ್ಲಿರುವುದನ್ನು ಒತ್ತಿ ಹೇಳುತ್ತಾನೆ. ಕರ್ನಾಟಕದ ಹಲವೆಡೆ ಮಾರಮ್ಮ ಇತ್ಯಾದಿ ಜನಪದ ದೇವತೆಗಳ ಮುಖವಾಡಗಳನ್ನು ಹಿತ್ತಾಳೆಯಲ್ಲಿ ಮಾಡುವ ರೂಢಿ ಇದೆ.

ಮೈಸೂರು ನಗರದಲ್ಲಿರುವ ಪಾರಂಪರಿಕ ದೇವಾಲಯಗಳಲ್ಲಿರುವ ಕೆಲವೊಂದು ಜನಪದ ಮೂರ್ತಿಶಿಲ್ಪಗಳ ಈ ಕೆಳಗಿನಂತೆ ಗುರುತಿಸಿ ವಿಶ್ಲೇಷಿಸಲಾಗಿದೆ.

**ಭೈರವೇಶ್ವರ :** 9ನೇ ಶತಮಾನಕ್ಕೆ ಸೇರಿದ ಮೈಸೂರಿನ ಕೋಡಿಭೈರವೇಶ್ವರ ಮತ್ತು ಉತ್ತನಹಳ್ಳಿ ಸಿದ್ದೇಶ್ವರ ದೇವಾಲಯದಲ್ಲಿರುವ ಭೈರವೇಶ್ವರ ವಿಗ್ರಹವು ನಗ್ನ ರೂಪದಲ್ಲಿದೆ. ಈ ವಿಗ್ರಹವು ಚತುರ್ಭುಜಗಳನ್ನು ಹೊಂದಿದ್ದು, ಹಿಂದಿನ ಎರಡು ಕೈಗಳಲ್ಲಿ ಒದರಲ್ಲಿ ತ್ರಿಶೂಲ ಮತ್ತೊಂದರಲ್ಲಿ ಡಮರುಗವನ್ನು ಹಿಡಿದಿದ್ದಾನೆ. ಮುಂದಿನ ಬಲಗೈಯಲ್ಲಿ ಖಡ್ಗವನ್ನು, ಎಡಗೈಯಲ್ಲಿ ಪಾನಪಾತ್ರೆ ಹಾಗೂ ರುಂಡವನ್ನು ಹಿಡಿದಿದ್ದಾನೆ. ರುಂಡಮಾಲೆಯನ್ನು ಕೊರಳಿಗೆ ಧರಿಸಿರುವುದನ್ನು ಕಾಣಬಹುದು.

**ಮಹಿಷಾಸುರ ಮರ್ಧಿನಿ :** ಮೈಸೂರಿನ ಹಿನಕಲ್‌ನ ಕೆಲ್ಲಮ್ಮ ದೇವಾಲಯದಲ್ಲಿ ಮಹಿಷ ಮರ್ಧಿನಿಯ ಶಿಲ್ಪವಿದೆ. ಈ ಶಿಲ್ಪವು ಸಿಂಹವಾಹಿನಿಯಾಗಿದ್ದು, ಸುಮಾರು ಮೂರುವರೆ ಅಡಿ ಎತ್ತರವಿದೆ. ಎಂಟು ಕೈಗಳನ್ನು ಹೊಂದಿದ್ದು ಖಡ್ಗ, ಚಕ್ರ, ವಿಸ್ಮಯ, ಬಿಲ್ಲು, ಬಾಣ, ಶಂಖ ಮುಂತಾದ ಆಯುಧಗಳನ್ನು ಹಿಡಿದಿರುವುದು ಕಂಡುಬರುತ್ತದೆ.

**ಶ್ರೀನಿವಾಸ :** ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿ ಮತ್ತು ಪ್ರಸನ್ನ ಕೃಷ್ಣಸ್ವಾಮಿ ದೇವಾಲಯ ಮೈಸೂರು ನಗರ ಇಲ್ಲಿ ಶ್ರೀನಿವಾಸ ಅಥವಾ ತಿಮ್ಮಪ್ಪನ ಶಿಲ್ಪದಲ್ಲಿ ಚತುರ್ಭುಜಗಳಿವೆ. ಹಿಂಬದಿಯ ಬಲಗೈಯಲ್ಲಿ ಚಕ್ರವನ್ನು, ಎಡಗೈಯಲ್ಲಿ ಶಂಖವನ್ನು ಹಿಡಿಯಲಾಗಿದೆ. ಮುಂದಿನ

ಬಲಗೈ ವರದ ಹಸ್ತದಲ್ಲಿದ್ದರೆ, ಎಡಗೈಯಲ್ಲಿ ಕಟೀ ಹಸ್ತವಿದೆ. ಇವರ ವಾಹನ ಗರುಡನನ್ನು ಎದುರುಗಡೆಯಲ್ಲಿ ಕಡೆಯಲಾಗಿದೆ.

**ವರದರಾಜಸ್ವಾಮಿ :** ವರದರಾಜನೆಂದರೆ ವಿಷ್ಣುವಿನ ಪ್ರತಿರೂಪ. ಮೈಸೂರಿನ ಲಕ್ಷ್ಮಿರಮಣಸ್ವಾಮಿ ಮತ್ತು ಪ್ರಸನ್ನ ಕೃಷ್ಣಸ್ವಾಮಿ ದೇವಾಲಯದಲ್ಲಿರುವ ಮೂರ್ತಿಗಳಿಗೆ ಚತುರ್ಭುಜಗಳಿರುತ್ತವೆ. ಮುಂದೆ ಇರುವ ಕೈಗಳಲ್ಲಿ ಬಲಗಡೆ ಪದ್ಮ ಹಾಗೂ ಎಡಗೈಯಲ್ಲಿ ಗದೆಯಿದ್ದರೆ, ಹಿಂಬದಿಯ ಕೈಗಳಲ್ಲಿ ಶಂಖ, ಚಕ್ರ ಇರುವ ಶಿಲ್ಪವನ್ನು ವರದರಾಜನೆಂದು ಕರೆಯಲಾಗುತ್ತದೆ.

**ಆಂಜನೇಯ :** ಮೈಸೂರು ನಗರದ ಚಾಮುಂಡಿಬೆಟ್ಟ ಮತ್ತು ಸುಬ್ರಾಯ ಗೋಪಾಲದಾಸ ದೇವಾಲಯಗಳಲ್ಲಿನ ಆಂಜನೇಯ ಮೂರ್ತಿಯು ದಕ್ಷಿಣಾಭಿಮುಖವಾಗಿ ನಿಂತಿದ್ದು, ಬಾಲದಲ್ಲಿ ಘಂಟೆ ಇರುವುದನ್ನು ಕಾಣಬಹುದು. ಅಭಯ ಹಸ್ತವಿರುವ ಬಲಗೈಯನ್ನು ಬಾಲದಿಂದ ಆಚೆಗೆ ಚಾಚಿರುವುದು ಕಂಡುಬರುತ್ತದೆ. ಕತ್ತಿನಲ್ಲಿ ಕಂಠೀಹಾರ, ಸೊಂಟದ ಮೇಲೆ ಸೌಗಂಧಿಕ ಪುಷ್ಪ ಸಹಿತವಾದ ಮಾವಿನಕಾಯಿಯ ಗೊಂಚಲು ಕಂಡುಬರುತ್ತದೆ. ಕೈಕಾಲುಗಳಲ್ಲಿ ಖಡಗಗಳಿದ್ದು, ಸೊಂಟದಲ್ಲಿ ಚಿಕ್ಕ ಕತ್ತಿಯಿರುವುದನ್ನು ಕಾಣಬಹುದು.

**ವೀರಭದ್ರಸ್ವಾಮಿ :** ಮೈಸೂರಿನ ಚಾಮುಂಡಿಬೆಟ್ಟದ ಮಹಾಬಲೇಶ್ವರ ದೇವಾಲಯದ ನವರಂಗದ ಕಟ್ಟೆಯ ಮೇಲೆ ಇರುವ ಸಪ್ತಮಾತೃಕೆಯರೊಂದಿಗೆ ವೀರಭದ್ರಸ್ವಾಮಿ ಶಿಲ್ಪವಿದೆ. ಸುಮಾರು ಎರಡೂವರೆ ಅಡಿ ಎತ್ತರವಿರುವ ವೀರಭದ್ರನ ಮೂರ್ತಿಯು ಚತುರ್ಭುಜಗಳನ್ನು ಹೊಂದಿದೆ. ತನ್ನ ಹಿಂದಿನ ಕೈಗಳಲ್ಲಿ ಬಿಲ್ಲು ಬಾಣವನ್ನು ಹಿಡಿದಿದ್ದಾನೆ. ಮುಂದಿನ ಕೈಗಳಲ್ಲಿ ಖಡ್ಗ ಮತ್ತು ಗುರಾಣಿಯನ್ನು ಹಿಡಿದಿದ್ದು, ಕೊರಳಿಗೆ ರುಂಡಮಾಲೆಯನ್ನು ಧರಿಸಿರುವುದನ್ನು ಕಾಣಬಹುದಾಗಿದೆ. ಅಲ್ಲದೆ ಕೈಕಾಲುಗಳಿಗೆ ಖಡಗವನ್ನು ಹಾಕಿಕೊಂಡಿರುವುದು ಕಂಡುಬರುತ್ತದೆ.

**ಭದ್ರಕಾಳಿ :** ಕೋಡಿ ಭೈರವೇಶ್ವರಸ್ವಾಮಿ ದೇವಾಲಯ ದೊಡ್ಡ ಕೆರೆಯ ಕೋಡಿ ಬಳಿ ಇರುವ ದೇವಾಲಯ. ಈ ದೇವಾಲಯದಲ್ಲಿ ಭೈರವನ ಎಡಪಾರ್ಶ್ವದಲ್ಲಿ ಬಲಗೈಯಲ್ಲಿ ಕುಡಗೋಲು ಹಿಡಿದಿರುವ ಭದ್ರಕಾಳಿಯ ಶಿಲ್ಪವಿದೆ. ಇದೂ ಕೂಡ ಜಾನಪದೀಯ ನೆಲೆಯಲ್ಲಿ ಹೆಣ್ಣು ಯಾವಾಗಲೂ ಗಂಡಿನ ಎಡಪಾರ್ಶ್ವದಲ್ಲಿಯೇ ನೆಲೆಸಬೇಕು ಅಥವಾ ನಿಲ್ಲಬೇಕು ಎಂಬಕಲ್ಪನೆಯನ್ನು ನೀಡುತ್ತದೆ.

**ಗಣೇಶ :** ಗಣೇಶನ ಮೂರ್ತಿಗಳು ಕ್ರಿ.ಶ.10ನೇ ಶತಮಾನದ ನಂತರ ನಾಲ್ಕು ಕೈಗಳನ್ನೊಳಗೊಂಡಿವೆ. ದೀರ್ಘಕಾಯವನ್ನು ಹೊಂದಿರುವ ಗಣೇಶನಿಗೆ ಹೊಟ್ಟೆಯು ತುಂಬಾ

ದೊಡ್ಡದಾಗಿಯೇ ಇರುವುದನ್ನು ಕಾಣಬಹುದು. ಆನೆಯ ಸೊಂಡಿಲು ಮತ್ತು ಶಿರವನ್ನು ಹೊಂದಿರುವ ಗಣೇಶನಿಗೆ ಅಗಲವಾದ ಕಿವಿಗಳಿವೆ. ಉದರಬಂಧ, ಕೇಯೂರ, ಕೈಕಾಲಿಗೆ ಕಡಗ, ತೋಳಬಂದಿಗಳಿರುತ್ತವೆ. ಉತ್ತನಹಳ್ಳಿಯ ಸಿದ್ದೇಶ್ವರಸ್ವಾಮಿ ದೇವಾಲಯದಲ್ಲಿ ಸುಮಾರು ಒಂದೂವರೆ ಅಡಿಯಿರುವ ಬಲಮುರಿ ಗಣೇಶನ ಕಂಚಿನ ಸುಂದರ ಆಕೃತಿಯಿದೆ. ಇದು ಕ್ರಿ.ಶ.15ನೇ ಶತಮಾನಕ್ಕೆ ಸೇರಿದುದಾಗಿದೆ ಎಂದು ಪ್ರಾಧ್ಯಾಪಕರಾದ ಡಾ.ಎಂ.ಜಿ.ಮಂಜುನಾಥ್ ಅವರು ಗುರುತಿಸಿದ್ದಾರೆ. ಈ ಗಣೇಶ ಶಿಲ್ಪವು ಚತುರ್ಭುಜವನ್ನು ಹೊಂದಿದ್ದು ಅಂಕುಶ, ಪದ್ಮ, ಫಲ ಮತ್ತು ಮೋದಕಗಳಿದ್ದು ಸೊಂಡಿಲು ಸಣ್ಣ ಪ್ರಮಾಣದಲ್ಲಿರುವುದು ಕಂಡು ಬಂದಿದೆ.

ಗಣೇಶನ ಮೂರ್ತಿಯು ಶೈವ ದೇವಾಲಯಗಳಲ್ಲದೆ, ವೈಷ್ಣವ ಮತ್ತು ಶಕ್ತಿದೇವತೆಗಳ ದೇವಾಲಯಗಳಲ್ಲೂ ಕಾಣಸಿಗುತ್ತವೆ. ನನ್ನೇಶ್ವರ ದೇವಾಲಯದಲ್ಲಿ ಹೊಯ್ಸಳರ ಕಾಲದ ಗಣೇಶನ ವಿಗ್ರಹವಿದ್ದು, ಸುಮಾರು ಮೂರುವರೆ ಅಡಿ ಎತ್ತರವಿದೆ. ಚಾಮುಂಡಿಬೆಟ್ಟದ ಮಹಾಬಲೇಶ್ವರ ದೇವಾಲಯದಲ್ಲಿರುವ ಗಣೇಶನ ಮೂರ್ತಿಯು ಸುಮಾರು ಎರಡು ಅಡಿ ಎತ್ತರವಿದ್ದು, ಸುಖಾಸೀನ ಭಂಗಿಯಲ್ಲಿ ಕುಳಿತಿರುವಂತೆ ಚಿತ್ರಿಸಲಾಗಿದೆ. ಸೊಂಡಿಲು ಭಿನ್ನವಾಗಿದೆ. ಮೈಸೂರು ನಗರದ ದೇವಾಲಯಗಳಲ್ಲಿ ಶೈವರು, ವೈಷ್ಣವರು ಮತ್ತು ಶಾಕ್ತ ಪಂಥದವರೂ ಸಹಾ ಗಣೇಶನನ್ನು ಪೂಜಿಸುತ್ತಿದ್ದುದಾಗಿ ತಿಳಿದು ಬರುತ್ತದೆ.

**ನಂದಿ** : ಈ ಶಿಲ್ಪವು ಶಿವದೇವಾಲಯಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಶಿವಲಿಂಗವಿರುವಲ್ಲಿ ಎದುರಿಗೆ ನಂದಿಯನ್ನು ಪ್ರತಿಷ್ಠಾಪಿಸಿರಲಾಗುತ್ತದೆ. ಗಂಗರ ಕಾಲದ ನಂದಿ ಶಿಲ್ಪಗಳು ಅಲಂಕಾರ ರಹಿತವಾಗಿದ್ದು ಚಿಕ್ಕದಾಗಿವೆ. ಅನಂತರದ ಕಾಲಘಟ್ಟದಲ್ಲಿ ಕಲಾತ್ಮಕತೆಗೆ ಹೆಚ್ಚು ಒತ್ತುಕೊಟ್ಟಂತೆ ಕಾಣುತ್ತದೆ. ಅಲಂಕಾರ ರಹಿತವಾಗಿ ನಮ್ರಭಾವದಿಂದ ತಲೆತಗ್ಗಿಸಿ ಕುಳಿತಿರುವಂತೆ ಚಿಕ್ಕದಾದ ನಂದಿಶಿಲ್ಪಗಳನ್ನು ಗಂಗರು ನಿರ್ಮಿಸಿದ್ದಾರೆ. ಚಾಮುಂಡಿಬೆಟ್ಟ, ಉತ್ತನಹಳ್ಳಿ, ಬೋಗಾದಿ ಮತ್ತು ಹಿನಕಲ್‌ನ ದೇವಾಲಯಗಳಲ್ಲಿ ಈ ಶಿಲ್ಪವನ್ನು ಕಾಣಬಹುದು.

ಮೆಟ್ಟಿಲುಗಳ ಮೂಲಕ ಚಾಮುಂಡಿಬೆಟ್ಟವನ್ನು ಹತ್ತುವಾಗ 700ನೇ ಮೆಟ್ಟಿಲಿನ ಬಳಿ ದೊಡ್ಡ ದೇವರಾಜ ಒಡೆಯರು 16ಅಡಿ ಎತ್ತರ ಹಾಗೂ 25ಅಡಿ ಉದ್ದವಿರುವ ನಂದಿಯನ್ನು ಕಪ್ಪು ಶಿಲೆಯಲ್ಲಿ ಕೆತ್ತಿಸಿದ್ದಾರೆ. ಅಂತೆಯೇ ಬೆಟ್ಟಕ್ಕೆ ಹೋಗಲು ಸಾವಿರ ಮೆಟ್ಟಿಲುಗಳನ್ನು ಹಾಕಿಸಿದವರು ಇವರೆ. ನಂದಿಯ ಕೊರಳಿನಲ್ಲಿರುವ ಕತ್ತಿನಹಗ್ಗ, ಸರಪಳಿ ಮತ್ತು ಘಂಟೆ, ಕಾಲುಗಳಿಗೆ ಗೆಜ್ಜೆ, ಹಣೆಪಟ್ಟಿಗಳಿಂದ ಅಲಂಕರಿಸಲ್ಪಟ್ಟಿದೆ. ಬಾಲದ ಮೊನೆಯನ್ನು ಸಹಜವಾಗಿ ಕಾಣುವ ರೀತಿಯಲ್ಲಿ ಕೆತ್ತಿರುವುದು ಶಿಲ್ಪಿಯ ಕಲಾನೈಪುಣ್ಯತೆಗೆ ಸಾಕ್ಷಿಯಂತಿದೆ.

## ದಂಡಿ ಮಾರಮ್ಮನ ವಿಗ್ರಹ (ಚಾಮುಂಡೇಶ್ವರಿ ದೇವಾಲಯ ಚಾಮುಂಡಿಬೆಟ್ಟ)

ರಾಜರ ಆಳ್ವಿಕೆಯ ಕಾಲದಲ್ಲಿ ವಿವಿಧ ಸಾಮ್ರಾಜ್ಯದ ಅರಸರು, ದಂಡನಾಯಕರು ತಮ್ಮ ಸಾಮ್ರಾಜ್ಯ ವಿಸ್ತರಿಸಲು ದಂಡೆತ್ತಿ ಬಂದು ದೇವಾಲಯ ಸೇರಿದಂತೆ ಇನ್ನಿತರ ಪ್ರಮುಖ ಮಹಲುಗಳ ಮೇಲೆ ದಾಳಿ ಮಾಡುತ್ತಿದ್ದರು. ಇಂತಹ ಧಾಳಿಗಳಿಂದ ಚಾಮುಂಡೇಶ್ವರಿಯ ಮೂಲ ವಿಗ್ರಹವನ್ನು ರಕ್ಷಿಸುವುದಕ್ಕಾಗಿ ಮೈಸೂರು ಅರಸರು ಬೇರೆಯದೇ ಆದ ಎರಡು ವಿಗ್ರಹಗಳನ್ನು ಮಾಡಿಸಿದ್ದರಂತೆ. ದಾಳಿ ನಡೆಯುವ ಮುನ್ನೆಚ್ಚರಿಕೆಯನ್ನು ಅರಿತ ಇವರು ಆ ಸಂದರ್ಭದಲ್ಲಿ ಗರ್ಭಗುಡಿಯಲ್ಲಿ ಬೇರೊಂದು ವಿಗ್ರಹವನ್ನಿಟ್ಟು ಮೂಲ ವಿಗ್ರಹವನ್ನು ಮರೆಮಾಚುತಿದ್ದರಂತೆ. ದಾಳಿಕೋರರು ವಾಪಸಾದ ಮೇಲೆ ಹಾಗೂ ವಿಗ್ರಹಕ್ಕೆ ಯಾರಿಂದಲು ಅಪಾಯವಿಲ್ಲ ಎಂದು ಧೃಡವಾದಾಗ ಗರ್ಭಗುಡಿಯಲ್ಲಿ ಮೂಲ ವಿಗ್ರಹವನ್ನು ಮತ್ತೆ ಪ್ರತಿಷ್ಠಾಪಿಸುತ್ತಿದ್ದರಂತೆ. ದಾಳಿಕೋರರಿಂದ ಮೂಲ ವಿಗ್ರಹದ ರಕ್ಷಣೆಗೆ ಬಳಸುತ್ತಿದ್ದ ಪರ್ಯಾಯ ವಿಗ್ರಹಕ್ಕೆ 'ದಂಡಿ ಮಾರಮ್ಮ' ಎಂದು ಕರೆಯಲಾಗುತ್ತಿದ್ದು, ಇಂದಿಗೂ ಅದೇ ಹೆಸರಿನಿಂದ ದೇವಾಲಯದ ಗರ್ಭಗುಡಿಯ ಹಿಂಭಾಗವಿರುವ ಆವರಣದಲ್ಲಿ(ಲಾಡು ಮಾರುವ ಸ್ಥಳದ ಪಕ್ಕ) ಈ ದಂಡಿ ಮಾರಮ್ಮ ವಿಗ್ರಹವಿದೆ. ಚಾಮುಂಡೇಶ್ವರಿಯಷ್ಟೇ ಮಹತ್ವವನ್ನು ದಂಡಿ ಮಾರಮ್ಮನಿಗೂ ನೀಡಿ ಆರಾಧಿಸುತ್ತಾರೆ.

## ಶೈವ ಮೂರ್ತಿಶಿಲ್ಪಗಳು

**ಸಂಹಾರಮೂರ್ತಿ** : ಈ ಶಿವನ ಮೂರ್ತಿಯಲ್ಲಿ ಹತ್ತು ಕೈಗಳು, ಮೂರು ಕಣ್ಣುಗಳು, ಅಕ್ಷಮಾಲಾ, ಖಟಕ ಹಸ್ತ, ಸೂಚಿಹಸ್ತಕದಲ್ಲಿದ್ದು ಕಾಮನನ್ನು ದಹನ ಮಾಡುತ್ತಿರುವಂತೆಯೂ, ಪಾರ್ವತಿಯು ಭಯದಿಂದ ಶಿವನತ್ತ ನೋಡುತ್ತಿರುವಂತೆಯೂ ಚಿತ್ರಿಸಲಾಗಿದೆ. ಅಂಧಕಾಸುರ ಮೂರ್ತಿಯನ್ನು ಶಿವನು ತ್ರಿಶೂಲದಿಂದ ಕೊಲ್ಲುತ್ತಿರುವಂತೆಯೂ, ಕಪಾಲವನ್ನು ಧರಿಸಿದ್ದು, ಕೈಗಳಲ್ಲಿ ಡಮರುಗ, ಕುಂಡಲಗಳನ್ನು ಹಿಡಿದಿರುವಂತೆ ನಿರ್ಮಿಸಲಾಗಿರುತ್ತದೆ.

**ಸುಖಾಸನಮೂರ್ತಿ** : ಪೀಠದ ಮೇಲೆ ಎಡಗಾಲನ್ನು ಮಡಚಿ ಬಲಗಾಲನ್ನು ಇಳಿಬಿಟ್ಟು ಕುಳಿತಿರುತ್ತಾನೆ. ಮುಕ್ಕಣ್ಣನೂ, ಜಟಾಮುಕುಟನೂ, ಸರ್ವಾಭರಣ ಧಾರಿಯು, ಹುಲಿಚರ್ಮ ಧಾರಿಯು ಆಗಿದ್ದು, ಕೈಗಳಲ್ಲಿ ಪರಶು, ಮೃಗೆ ಅಭಯ ವರದಗಳಿರುತ್ತವೆ. ಉಮಾಮಹೇಶ್ವರ ಮೂರ್ತಿ ಕೂಡ ಸುಖಾಸನ ಮೂರ್ತಿಯಂತೆ ಎಡಗೈಯಲ್ಲಿ ದೇವಿಯನ್ನು ಹಿಡಿದಿದ್ದಾನೆ. ಮತ್ತೆರಡು ಕೈಗಳಲ್ಲಿ ತ್ರಿಶೂಲ ಮತ್ತು ಹಾವನ್ನು ಹಿಡಿದಿರುತ್ತಾನೆ.

**ರುದ್ರಮೂರ್ತಿ** : ಈ ಶಿವನ ಮೂರ್ತಿಗಳು ಸಾಮಾನ್ಯ ಲಕ್ಷಣಗಳೆಂದರೆ ಶಿವನು ನಾಲ್ಕು ಕೈಗಳನ್ನೂ ಹೊಂದಿದ್ದು ಅವುಗಳಲ್ಲಿ ತ್ರಿಶೂಲ, ಡಮರುಗ, ಪಾಶ, ಕಪಾಲ, ದಂಡ, ಧನಸ್ಸು, ಬಾಣ, ಖಡ್ಗ ಹಿಡಿದಿರುವನು. ಇವನ ಗಂಟಲು ನೀಲಿಬಣ್ಣದಿಂದ ಕೂಡಿರುತ್ತದೆ. ಇವನು ಸಿಂಹ, ಹುಲಿ ಅಥವಾ ಆನೆಯ ಚರ್ಮವನ್ನು ಧರಿಸಿದ್ದು ಸರ್ಪಗಳೇ ಇವನ ಆಭರಣಗಳು, ಗಂಗೆಯನ್ನು ಜಡೆಯಲ್ಲಿ ಧರಿಸದವನೇ ಗಂಗಾಧರ, ಅರ್ಧಪಾರ್ವತಿಯ ರೂಪದಲ್ಲಿರುವವನು ಅರ್ಧ ನಾರೀಶ್ವರ, ಅರ್ಧವಿಷ್ಣು ಅರ್ಧ ಶಿವನು ಹರಿಹರ, ನಂದಿಯೊಂದಿಗೆ ನಿಂತಿದ್ದರೆ ಅಥವಾ ಕುಳಿತಿದ್ದರೆ ವೃಷಭಾರೂಢ ಮೂರ್ತಿಯಾಗಿರುತ್ತದೆ.

**ನೃತ್ಯಮೂರ್ತಿ** : ಈ ಮೂರ್ತಿಯ ಸಾಮಾನ್ಯ ಲಕ್ಷಣವೆಂದರೆ ಶಿವನ ದೇಹವು ತ್ರಿಭಂಗಿಯಲ್ಲಿದ್ದು, ಕಾಲುಗಳೂ ಬಾಗಿಕೊಂಡಿರುತ್ತವೆ. ಜಟಾಮುಕುಟನೂ, ಸರ್ಪಭೂಷಣನೂ, ಚರ್ಮಧಾರಿಯೂ ಆಗಿದ್ದು, ಪಾದಗಳ ಕೆಳಗೆ ಅಪಸ್ಮಾರ ಪುರುಷನು ಇರುತ್ತಾನೆ. ಶಿವನಿಗೆ 16 ಅಥವಾ 12 ಇಲ್ಲವೆ 8 ಕೈಗಳನ್ನು ಚಿತ್ರಿಸಿರುತ್ತಾರೆ.

**ಅನುಗ್ರಹಮೂರ್ತಿ** : ನಂದಿಶಾನುಗ್ರಹ ಮೂರ್ತಿ ಶಿವನು ನಂದಿಯೊಡನೆ ಇದ್ದು ತನ್ನ ಜಡೆಯಿಂದ ಗಂಗೆಯನ್ನು ನಂದಿಯ ಮೇಲೆ ಬೀಳಿಸುತ್ತಿರುವಂತೆ ಇರುತ್ತದೆ.

**ಭೈರವಮೂರ್ತಿ** : ಲಂಬೋದರನು ಒರಟಾದ ಹಳದಿ ಕಂಗಳು, ಎರಡುಬದಿಗಳಲ್ಲಿ ಕೋರೆಹಲ್ಲುಗಳು, ಅಗಲವಾದ ಮೂಗಿನ ಹೊಳ್ಳೆಗಳು, ಸರ್ಪಭೂಷಣ, ಗಜಚರ್ಮಾಂಬರ, ಆಯುಧ ಹಿಡಿದ ಕೈಗಳಿರುವಂತೆ ಚಿತ್ರಿಸಲಾಗಿರುತ್ತದೆ.

**ಲಿಂಗಸ್ವರೂಪ** : ಶೈವ ಧರ್ಮದಲ್ಲಿ ಶಿವನನ್ನು ಮೂರ್ತಿರೂಪ ಹಾಗೂ ಲಿಂಗದ ರೂಪದಲ್ಲಿ ಪೂಜಿಸುತ್ತಾರೆ. ಮೂರ್ತಿರೂಪದ ಪೂಜೆಗಿಂತ ಲಿಂಗದ ಪೂಜೆಯೇ ಹೆಚ್ಚಾಗಿ ಕಂಡುಬರುತ್ತದೆ. ಇವನು ರುದ್ರ ಹೆಸರಿನಿಂದ ಪರಿಚಿತವಾದರೆ, ಲಿಂಗವು ಶಿಲ್ಪ ದೃಷ್ಟಿಯಲ್ಲಿ ಸಿಂಧೂ ಸಂಸ್ಕೃತಿ ಯಿಂದಲೂ ಕಾಣಬಹುದು. ಸ್ತಂಭ, ಬೆಟ್ಟ, ಕಾಡು, ಹುತ್ತ ಮುಂತಾದವುಗಳನ್ನು ಲಿಂಗವಾಗಿ ಪರಿವರ್ತಿಸಲು ಸಾಧ್ಯವಾಗಿದೆ. ಇವೇ ಮೂಲಗಳೆಂದು ಎಸ್.ಕೆ.ರಾಮಚಂದ್ರರಾಯರ ಅಭಿಪ್ರಾಯವಾಗಿದೆ. ಹೀಗೆ ಶೈವ ಪರಂಪರೆಯು ಮೂರ್ತಿ ಶಿಲ್ಪಕಲೆಯಲ್ಲಿಯೂ ಪ್ರಧಾನವಾಗಿ ಧಾರ್ಮಿಕ ಪ್ರೇರಣೆಯಿಂದ ಬೆಳೆದುಬಂದಿದೆ. ಆಯಾ ಕಾಲಘಟ್ಟದಲ್ಲಿ ಆಯಾ ಪ್ರದೇಶದ ಶೈಲಿಯು ಬೆಳೆದು ಬಂದಿರುವುದನ್ನು ಗುರುತಿಸಬಹುದಾಗಿದೆ.

## ವೈಷ್ಣವ ಮೂರ್ತಿಶಿಲ್ಪಗಳು

**ವಿಷ್ಣು** : ಈ ಶಿಲ್ಪದ ಸಾಮಾನ್ಯ ಲಕ್ಷಣಗಳೆಂದರೆ, ಸಾಮಾನ್ಯವಾಗಿ ಸಮಭಂಗಿಯಲ್ಲಿದ್ದು ಚತುರ್ಭುಜನಾಗಿರುತ್ತಾನೆ. ಬಲ ಮೇಲ್ಗೈಯಲ್ಲಿ ಚಕ್ರ, ಬಲ ಕೆಳಗೈಯಲ್ಲಿ ಶಂಖ, ಎಡ ಮೇಲ್ಗೈಯಲ್ಲಿ ಪದ್ಮ, ಎಡ ಕೆಳಗೈಯಲ್ಲಿ ಗದೆಯನ್ನು ಹಿಡಿದಿರುತ್ತಾನೆ. ಮತ್ತೆ ಕೆಲ ಶಿಲ್ಪಗಳಲ್ಲಿ ಬಲ ಮುಂಗೈಯಲ್ಲಿ ಫಲ, ಹಿಂಗೈಯಲ್ಲಿ ಪ್ರಯಾಗ ಚಕ್ರ, ಎಡ ಹಿಂಗೈಯಲ್ಲಿ ಶಂಖ, ಮುಂಗೈ ಕಠಿಹಸ್ತ, ಕಿರೀಟ ಕೊಳಗದಂತಿರುತ್ತದೆ. ಕರ್ಣಕುಂಡಲ, ಕೊರಳಲ್ಲಿ ಅಗಲವಾದ ದಪ್ಪ ಅಡ್ಡಿಗೆ, ಎಡಭುಜದಿಂದ ಹಾದು ಬಲ ತೋಳ ಮೇಲೆ ಇಳಿದಿರುವ ಯಜ್ಞೋಪವೀತ, ನಡುವನ್ನು ಬಿಗಿದು ಮುಂಭಾಗದಲ್ಲಿ ಗಂಟು ಬಿದ್ದಿರುವ ನಡುಬಂಧ, ನಡುವಿನ ಎರಡೂ ಕಡೆಗಳಲ್ಲಿ ಇಳಿಬಿಟ್ಟಿರುವ ಬಟ್ಟೆಯನ್ನು ಸೇರಿಸುವಂತೆ ಮಧ್ಯೆ ಅರ್ಧಚಂದ್ರಾಕಾರದ ಇಳಿಬಟ್ಟೆ, ಕೈಗಳಲ್ಲಿ ದಪ್ಪ ಕಡಗಗಳನ್ನು ಕಾಣಬಹುದು. ಇವನ ವಾಹನ ಗರುಡವಾಗಿದೆ.

**ಕೇಶವ** : ವೈಷ್ಣವ ದೇವರಲ್ಲಿ ಪ್ರಮುಖನಾದವನು ಇವನು ಚತುರ್ಭುಜವನ್ನು ಹೊಂದಿದ್ದು ಕೈಗಳಲ್ಲಿ ಶಂಖ, ಚಕ್ರ, ಗದೆ, ಪದ್ಮಗಳಿರುತ್ತವೆ. ಅನೇಕ ಶಿಲ್ಪಗಳು ಅಭಯ ಹಸ್ತವನ್ನು ಹೊಂದಿರುತ್ತವೆ. ಶಿಲ್ಪಗಳಲ್ಲಿ ಇವನ ಮುಖಭಾವ ಅತ್ಯಂತ ಸುಂದರವಾಗಿ ಕೆತ್ತಿರುವುದರಿಂದ ಇವನನ್ನು ಸೌಮ್ಯಕೇಶವ, ಚೆನ್ನಕೇಶವ, ಪ್ರಸನ್ನಕೇಶವ ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ. ಕೇಶವ ಶಿಲ್ಪ ಸಾಮಾನ್ಯವಾಗಿ ಸುಂದರ ಪ್ರಭಾವಳಿಯನ್ನು ಹೊಂದಿರುತ್ತವೆ. ಕೆಲವು ಪ್ರಭಾವಳಿಗಳಲ್ಲಿ ವಿಷ್ಣುವಿನ ದಶಾವತಾರಗಳನ್ನು ಕೆತ್ತಲಾಗಿದೆ. ಅವುಗಳಲ್ಲಿ ಬುದ್ಧ ಮತ್ತು ಕಲ್ಕಿ ಅವತಾರಗಳನ್ನು ಕೆಲವರು ಅವತಾರಗಳೆಂದು ಒಪ್ಪುವುದಿಲ್ಲ. ಇದಕ್ಕೆ ಬದಲು ಬಲರಾಮನನ್ನು ಸೇರಿಸುತ್ತಾರೆ. ಪುರಾಣಗಳಲ್ಲಿ ಈ ಅವತಾರಗಳ ಕಥೆಗಳು ವಿಶೇಷವಾಗಿ ಕಂಡುಬರುತ್ತವೆ.

**ನರಸಿಂಹ** : ನರಸಿಂಹನ ಬಗ್ಗೆ ಒಂದೊಂದು ಪುರಾಣದಲ್ಲಿ ಒಂದೊಂದು ರೀತಿಯಿದೆ. ನರಸಿಂಹನು ಮುಖ್ಯ ದೈವವಾಗಿ ದೇವಾಲಯಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಲಕ್ಷ್ಮೀನರಸಿಂಹ, ಉಗ್ರನರಸಿಂಹ ಮತ್ತು ಯೋಗನರಸಿಂಹನನ್ನು ಕಾಣಬಹುದು. ಇವನ ವಿವಿಧ ರೂಪಗಳು ಗುಡಿಯಲ್ಲಿರುವ ಬಿಡಿಶಿಲ್ಪಗಳು ಹಾಗೂ ದೇವಾಲಯದ ಭಿತ್ತಿಶಿಲ್ಪಗಳಲ್ಲಿ ಕಂಡುಬರುತ್ತವೆ. ಕಾಲನ್ನು ಮಡಚಿ ಯೋಗಮುದ್ರೆಯಲ್ಲಿ ಕುಳಿತಿದ್ದು ಮಂಡಿಯ ಕೆಳಭಾಗದ ಸುತ್ತಲೂ ಯೋಗಪಟ್ಟಿಯು ಬಂದಿದ್ದರೆ ಅದು ಯೋಗನರಸಿಂಹ, ಲಕ್ಷ್ಮಿಯನ್ನು ಎಡತೊಡೆಯ ಮೇಲೆ ಕುಳ್ಳಿರಿಸಿಕೊಂಡಿದ್ದರೆ ಅದು ಲಕ್ಷ್ಮಿನರಸಿಂಹ, ಉಗ್ರ ರೂಪದಲ್ಲಿ ಹಿರಣ್ಯಕಶುಪುವಿನ ಸಂಹಾರ ಮಾಡುತ್ತಿರುವವನು

ಉಗ್ರನರಸಿಂಹ, ಎಡ ಮತ್ತು ಬಲ ಭಾಗದಲ್ಲಿ ಶ್ರೀದೇವಿ ಮತ್ತು ಭೂದೇವಿಯರಿದ್ದರೆ ಭೋಗನರಸಿಂಹ, ಶಂಖ ಚಕ್ರ ಹಿಡಿದು ಸಮಭಂಗಿಯಲ್ಲಿ ನಿಂತಿರುವವನು ಸ್ಥಾನಕ ನರಸಿಂಹ, ಹೀಗೆ ಅನೇಕ ಹೆಸರುಗಳಿಂದ ನರಸಿಂಹನನ್ನು ಕರೆಯಲಾಗುತ್ತದೆ. ಯೋಗನರಸಿಂಹಸ್ವಾಮಿಯ ಶಿಲ್ಪವನ್ನು ವಿಜಯನಗರದ ಯೋಗನರಸಿಂಹಸ್ವಾಮಿ ದೇವಾಲಯದಲ್ಲಿ, ಲಕ್ಷ್ಮಿವೆಂಕಟೇಶ್ವರ ಸ್ವಾಮಿಯನ್ನು ಒಂಟಿಕೊಪ್ಪಲಿನ ವೆಂಕಟರಮಣಸ್ವಾಮಿ ದೇವಾಲಯದಲ್ಲಿ ಕಾಣಬಹುದು.

## ಶಕ್ತಿದೇವತೆ ಮೂರ್ತಿಶಿಲ್ಪಗಳು

**ಚಾಮುಂಡಿ :** ಶಕ್ತಿ ಸ್ವರೂಪಿಣಿಯಾದ ಚಾಮುಂಡಿಯು ಸಪ್ತಮಾತೃಕೆಯರಲ್ಲಿ ಕೊನೆಯವಳು. ಪೀಠದ ಮೇಲೆ ವೀರಾಸನ ಭಂಗಿಯಲ್ಲಿ ಕುಳಿತಿದ್ದು, ತನ್ನ ಕೈಗಳಲ್ಲಿ ಖಡ್ಗ, ತ್ರಿಶೂಲ, ಶಂಖ ಮತ್ತು ಪಾನ ಪಾತ್ರೆಯನ್ನು ಹಿಡಿದಿರುತ್ತಾಳೆ.

**ಮಹಿಷಾಸುರ ಮರ್ಧಿನಿ :** ಶಾಕ್ತ ದೇವತೆಯಾದ ಇವಳು ಶಕ್ತಿ ದೇವತೆಗಳಲ್ಲೆಲ್ಲಾ ಪ್ರಖ್ಯಾತಳು. ಸಿಂಹವಾಹನೆಯಾಗಿದ್ದು, ಎಂಟು ಕೈಗಳನ್ನು ಹೊಂದಿದ್ದಾಳೆ. ಖಡ್ಗ, ಚಕ್ರ, ವಿಸ್ಮಯ, ಬಿಲ್ಲು, ಬಾಣ, ಶಂಖ ಮುಂತಾದ ಅಸ್ತ್ರಗಳನ್ನು ಹಿಡಿದಿರುತ್ತಾಳೆ. ಯಜ್ಞೋಪವೀತ ಹಾಗೂ ಸ್ತನಬಂಧವನ್ನು ಹೊಂದಿರುತ್ತದೆ. ದೇವಿಯು ಸರ್ವಾಭರಣ ಅಲಂಕೃತಳಾಗಿದ್ದು, ಮುಕುಟಧಾರಿಯಾಗಿರುತ್ತಾಳೆ.

**ಯೋಗಿನಿ :** ಇವಳು ಸಪ್ತಮಾತೃಕೆಯರ ತಾಯಿ. ಇವಳಿಗೆ ದ್ವಿಭುಜಗಳಿದ್ದು, ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತ್ತಿದ್ದಾಳೆ. ಒಂದು ಕೈಯಲ್ಲಿ ಫಲವನ್ನು, ಇನ್ನೊಂದು ಕೈಯನ್ನು ತೊಡೆಯ ಮೇಲಿರಿಸಿಕೊಂಡಿರುತ್ತಾಳೆ. ಬೈತಲೆ ತೆಗೆದು ತುರುಬು ಗಂಟಿಕ್ಕಿರುವ ದೇವಿಯು ಸರ್ವಾಭರಣ ಸುಂದರಿಯಾಗಿರುತ್ತಾಳೆ.

**ಲಕ್ಷ್ಮಿ :** ಪದ್ಮಾಸನದಲ್ಲಿ ಕುಳಿತಿದ್ದು, ನಾಲ್ಕು ಕೈಗಳನ್ನು ಹೊಂದಿದ್ದು ಹಿಂದಿನ ಕೈಗಳು ಆಯುಧ ಪಾಣಿಯಾಗಿವೆ. ಮುಂದಿನ ಕೈಗಳು ಅಭಯ ಮತ್ತು ವರದ ಹಸ್ತವನ್ನೊಂದಿವೆ.

**ರುಕ್ಮಿಣಿ :** ಪದ್ಮಾಸನದಲ್ಲಿ ಕುಳಿತಿದ್ದು, ಚತುರ್ಭುಜಗಳನ್ನು ಹೊಂದಿದ್ದಾಳೆ. ಹಿಂದಿನ ಎರಡು ಕೈಗಳಲ್ಲಿ ಕಮಲದ ಮೊಗ್ಗನ್ನು ಹಿಡಿದಿದ್ದಾಳೆ. ಮುಂದಿನ ಎರಡು ಕೈಗಳು ವರದಾ ಹಸ್ತ ಮುದ್ರೆಯನ್ನೊಂದಿದ್ದು ವಿವಿಧ ಆಭರಣಗಳಿಂದ ಅಲಂಕೃತಳಾಗಿರುತ್ತಾಳೆ.

**ತ್ರಿಪುರ ಸುಂದರಿ :** ನಾಲಗೆಯನ್ನು ಹೊರ ಚಾಚಿರುತ್ತಾಳೆ. ನಾಲ್ಕುಕೈಗಳನ್ನು ಹೊಂದಿದ್ದು, ಬಲಗೈಯಲ್ಲಿ ಕತ್ತಿಯನ್ನು, ಎಡಗೈಯಲ್ಲಿ ಕಪಾಲ ಹಸ್ತವನ್ನು ಹಿಡಿದಿರುತ್ತಾಳೆ.

**ಬ್ರಾಹ್ಮಿ :** ಬ್ರಾಹ್ಮಿಯು ಪೀಠದ ಮೇಲೆ ವೀರಾಸನ ಭಂಗಿಯಲ್ಲಿ ಕುಳಿತಿರುತ್ತಾಳೆ. ಚತುರ್ಮುಖ ಧಾರಿಣಿಯಾಗಿದ್ದು, ಉಬ್ಬುಶಿಲ್ಪಗಳಲ್ಲಿ ಮೂರು ಮುಖಗಳನ್ನು ಮಾತ್ರ ಚಿತ್ರಿಸಲಾಗಿರುತ್ತದೆ. ಈಕೆ ಚತುರ್ಭುಜವನ್ನು ಹೊಂದಿದ್ದು, ಕೈಗಳಲ್ಲಿ ಕ್ರಮವಾಗಿ ಅಭಯ, ಅಕ್ಷಮಾಲೆ, ಕಮಂಡಲಗಳಿರುತ್ತವೆ. ಎಡಗಾಲ ತೊಡೆಯ ಮೇಲೆ ಎಡಗೈ ಹಸ್ತವಿಟ್ಟಿರುವ ಆರಾಮ ಹಸ್ತಗಳನ್ನು ಹೊಂದಿರುತ್ತಾಳೆ. ಕೊರಳಲ್ಲಿ ಕಂಠೀಹಾರದ ಜೊತೆಗೆ ಪದಕ ಹಾರವಿದೆ. ಪೀಠದಲ್ಲಿ ಹಂಸ ಲಾಂಛನವಿರುತ್ತದೆ.

**ಮಾಹೇಶ್ವರಿ :** ವೀರಾಸನ ಭಂಗಿಯಲ್ಲಿ ಪೀಠದ ಮೇಲೆ ಕುಳಿತಿರುತ್ತಾಳೆ. ಚತುರ್ಮುಖವನ್ನು ಹೊಂದಿರುವ ಇವಳ ಕೈಯಲ್ಲಿ ಅಭಯ, ಅಂಕುಶ, ತ್ರಿಶೂಲ, ಆರಾಮ ಹಸ್ತಗಳಿರುತ್ತವೆ. ಪೀಠದಲ್ಲಿ ವೃಷಭಲಾಂಛನವಿರುತ್ತದೆ.

**ಕೌಮಾರಿ :** ಚತುರ್ಭುಜ ಹೊಂದಿದ್ದು, ವೀರಾಸನ ಭಂಗಿಯಲ್ಲಿ ಕುಳಿತಿರುತ್ತಾಳೆ. ತನ್ನ ಕೈಗಳಲ್ಲಿ ಅಭಯ ಹಸ್ತ, ದಂಡ, ಶಕ್ತಿ, ಅಸ್ತ್ರಗಳನ್ನು ಧರಿಸಿದ್ದು ಮತ್ತೊಂದು ಕೈ ಆರಾಮ ಹಸ್ತವಾಗಿದೆ. ಪೀಠದಲ್ಲಿ ನವಿಲು ಲಾಂಛನವಿರುತ್ತದೆ.

**ವೈಷ್ಣವಿ :** ಪೀಠದ ಮೇಲೆ ವೀರಾಸನ ಭಂಗಿಯಲ್ಲಿ ಕುಳಿತಿರುತ್ತಾಳೆ. ಚತುರ್ಭುಜ ಹೊಂದಿದ್ದು, ಕೈಗಳಲ್ಲಿ ಶಂಖ, ಚಕ್ರ, ಅಭಯಹಸ್ತ ಮತ್ತು ಆರಾಮ ಹಸ್ತವಿದೆ. ಪೀಠದಲ್ಲಿ ಗರುಡ ಲಾಛನವಿದ್ದು, ಸರ್ವಾಭರಣಗಳಿಂದ ಅಲಂಕೃತಳಾಗಿರುತ್ತಾಳೆ.

**ವರಾಹಿ :** ಪೀಠದ ಮೇಲೆ ವೀರಾಸನ ಭಂಗಿಯಲ್ಲಿ ಕುಳಿತಿರುತ್ತಾಳೆ. ಇವಳು ಚತುರ್ಭುಜ ಹೊಂದಿದ್ದು, ಕೈಗಳಲ್ಲಿ ಅಭಯ, ಬಾಣ, ಖೇಟಕ ಮತ್ತು ಆರಾಮ ಹಸ್ತಗಳಿವೆ. ಪೀಠದಲ್ಲಿ ಸಿಂಹ ಲಾಂಛನವಿರುತ್ತದೆ.

**ಇಂದ್ರಾಣಿ :** ಪೀಠದ ಮೇಲೆ ವೀರಾಸನ ಭಂಗಿಯಲ್ಲಿ ಕುಳಿತಿರುತ್ತಾಳೆ. ಚತುರ್ಭುಜ ಹೊಂದಿದ್ದು, ಕೈಗಳಲ್ಲಿ ಅಭಯ, ದಂಡ, ಟಂಕೆ ಮತ್ತು ಆರಾಮ ಹಸ್ತಗಳಿವೆ. ಪೀಠದಲ್ಲಿ ಗಜ ಲಾಂಛನವಿದ್ದು, ಸರ್ವಾಭರಣಗಳಿಂದ ಅಲಂಕೃತಳಾಗಿರುತ್ತಾಳೆ.

## ಮಿಥುನ ಮತ್ತು ದೇವಾಂಗನ ಶಿಲ್ಪಗಳು

ಮಿಥುನ ಮತ್ತು ದೇವಾಂಗನಾ ಶಿಲ್ಪಗಳು ಭಾರತೀಯರ ಶಿಲ್ಪಕಲೆ ಮತ್ತು ವಾಸ್ತುಶಿಲ್ಪದ ಅವಿಭಾಜ್ಯ ಅಂಗವಾಗಿ ಬೆಳೆದುಬಂದಿವೆ. ಇವುಗಳ ಬೆಳವಣಿಗೆ ಮತ್ತು ಭಾರತೀಯ ವಾಸ್ತುಕಲೆಯಲ್ಲಿ ಇವುಗಳ ಪಾತ್ರ ಬಹಳ ಪ್ರಮುಖವಾದುದು. ಸಾಮಾನ್ಯವಾಗಿ ಶೃಂಗಾರ ರಸಭಂಗಿಯಲ್ಲಿಯೇ ಇರುವ ಈ ಶಿಲ್ಪಗಳು ಮೂಲತಃ ದಂಪತಿ ಶಿಲ್ಪಗಳೇ ಆಗಿವೆ. ಇವುಗಳನ್ನು ಮಿಥುನ ಶಿಲ್ಪಗಳು ಎಂದೂ ಕೂಡ ಕರೆಯಬಹುದಾಗಿದೆ. ಅಂತೆಯೇ ದೇವಾಂಗನಾ ಶಿಲ್ಪವು ಅಪ್ಸರೆಯ ಶಿಲ್ಪಕ್ಕೆ ಅನ್ವಯಿಸುತ್ತದೆ.

ಭಾರತೀಯ ವಾಸ್ತುಶಿಲ್ಪದಲ್ಲಿ ಧಾರ್ಮಿಕ ತಾರತಮ್ಯವಿಲ್ಲದೆ ಹಿಂದೂ, ಬೌದ್ಧ, ಜೈನ ಪಂಥಗಳ ಪ್ರಾಚೀನ ಸ್ಮಾರಕಗಳಲ್ಲಿ ಮಿಥುನ ಶಿಲ್ಪಗಳು ಮತ್ತು ದೇವಾಂಗನಾ ಶಿಲ್ಪಗಳು ರಚನೆಗೊಂಡಿವೆ. ಸಾಮಾಜಿಕ ಪ್ರಕ್ರಿಯೆಗಳನ್ನು ಬಿಂಬಿಸುವ ದಂಪತಿಶಿಲ್ಪಗಳು ಮತ್ತ ಅಪ್ಸರೆಯ ಶಿಲ್ಪಗಳು ದೇವಾಲಯ, ಚೈತ್ಯ ಮತ್ತು ಸ್ತೂಪ ವಿಹಾರಗಳ ಮೇಲೆ ಅಲಂಕೃತವಾಗಿ ಮೂಡಿ ಬಂದಿರುವುದು ನೂರಾರು ಉದಾಹರಣೆಗಳಿಂದ ತಿಳಿದು ಬರುತ್ತದೆ.

ಪ್ರಾಚೀನ ಸ್ಮಾರಕಗಳಲ್ಲಿ ಮಿಥುನ ಹಾಗೂ ದೇವಾಂಗನಾ ಶಿಲ್ಪಗಳು ರಚನೆಗೊಂಡಿರುವುದನ್ನು ಬಹುತೇಕವಾಗಿ ಕಾಣಬಹುದಾಗಿದೆ. ಇವುಗಳ ರಚನೆಯ ಹಿಂದಿನ ಉದ್ದೇಶ, ಅರ್ಥ, ವ್ಯಾಪ್ತಿ ಮತ್ತು ವಾಸ್ತುಕಲೆಯು ಮೂಡಿಬರುವಲ್ಲಿ ಇವುಗಳ ಪಾತ್ರಗಳು ಮಹತ್ವ ಮತ್ತ ಕುತೂಹಲಕಾರಿಯಾದುದು. ಮಿಥುನ ಮತ್ತು ದೇವಾಂಗನಶಿಲ್ಪಗಳ ಪರಿಕಲ್ಪನೆಯು ವೈದಿಕ ಹಿನ್ನೆಲೆಯಿಂದ ಉಗಮವಾಗಿದೆ, ವೇದಗಳಲ್ಲಿ ಹಾಗೂ ವಿಶೇಷವಾಗಿ ಪುರಾಣಗಳಲ್ಲಿ ಇವುಗಳ ಉಲ್ಲೇಖ ಕಂಡುಬರುತ್ತವೆ. ಪುರಾಣಗಳಲ್ಲದೇ ಪ್ರಾಚೀನ ವಾಸ್ತು ಮತ್ತು ಚಿತ್ರಗ್ರಂಥಗಳಾದ ವಿಷ್ಣು ಧರ್ಮೋತ್ತರ ಪುರಾಣದ 'ಚಿತ್ರಸೂತ್ರ', 'ಮಾನಸೋಲ್ಲಾಸ', 'ಶ್ರೀ ತತ್ತ್ವನಿಧಿ' ಮೊದಲಾದ ಗ್ರಂಥಗಳಲ್ಲಿ ಇವುಗಳ ಕುರಿತು ಉಲ್ಲೇಖಗಳು ದೊರೆಯುತ್ತವೆ.

ದೇವತಾ ತಾರತಮ್ಯದಲ್ಲಿ ಎರಡನೆಯ ಹಂತದ ದೇವತೆಗಳಾದ ಇವರು ಪ್ರಮುಖ ದೇವತೆಗಳ ಆಜ್ಞೆಗಳನ್ನು ಪಾಲಿಸುವ ಸಹಾಯಕರ ವರ್ಗ ಇದಾಗಿದೆ. ಇವರುಗಳನ್ನು ಗಂಧರ್ವ, ಕಿನ್ನರ, ಕಿಂಪುರುಷ, ಯಕ್ಷ-ಯಕ್ಷಿಣಿ ಮೊದಲಾದ ಹೆಸರುಗಳಿಂದ ಕರೆಯುವುದು ವಾಡಿಕೆಯಾಗಿದೆ. ಇವುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ದೇವತಾ ವರ್ಗದ ರೀತಿಯಲ್ಲಿ ಇವುಗಳದೇ ಒಂದು ಪ್ರತ್ಯೇಕವರ್ಗ ಸೃಷ್ಠಿಯಾಗಿರುವುದನ್ನು ನಿರೂಪಿಸಬಹುದು. ದೇವಾಲಯದ

ಅಲಂಕರಣಗಳಲ್ಲಿ ಇವುಗಳ ಸಾಮಾಜಿಕ ಸಂಬಂಧವನ್ನೂ ಕೂಡ ಗಮನಿಸಿ ಪರಿಗಣನೆಗೆ ತೆಗೆದುಕೊಳ್ಳಬಹುದು. ಅಂದರೆ ಅಂದಿನ ಸಮಕಾಲೀನ ಸಮಾಜದಲ್ಲಿ ಶೃಂಗಾರ ಶಿಲ್ಪಗಳ ಪ್ರಾಮುಖ್ಯತೆ ಮತ್ತು ಅವುಗಳ ಮಹತ್ವವು ಗಮನಕ್ಕೆ ಬರುತ್ತವೆ.

'ಮಿಥುನ' ಎಂಬ ಪದ ಪ್ರಾಯಶಃ ಮೊಟ್ಟಮೊದಲು ಚರ್ಚೆಗೆ ಬಂದದ್ದು ವೇದಗಳ ಕಾಲದಲ್ಲಿ. ಈ ಪದ ಸ್ತ್ರೀ ಮತ್ತು ಪುರುಷ ಜೊತೆಯಾಗಿ ಇರುವ ಶೃಂಗಾರದ ಪರಿಕಲ್ಪನೆಯನ್ನು ಕೊಡುವ ದಂಪತಿಗಳನ್ನು ಸೂಚಿಸುತ್ತದೆ. 'ಶತಪಥ ಬ್ರಾಹ್ಮಣ'ದಲ್ಲಿ 'ಮಿಥುನ'ದ ಪರಿಕಲ್ಪನೆಯ ಕುರಿತಾದ ಉಲ್ಲೇಖ ದೊರೆಯುತ್ತದೆ.[14] ಇದರಲ್ಲಿ ದಂಪತಿ ಅಥವಾ ಸ್ತ್ರೀ–ಪುರುಷ ಜೊತೆಯಾಗಿರುವುದು ವಂಶವಾಹಿನಿಯ ಬೆಳವಣಿಗೆಗೆ ಕಾರಣವಾಗಿ ಅದರಿಂದ ವಂಶಾಭಿವೃದ್ಧಿ ಯಾಗುವುದು ಎಂದು ಸೂಚ್ಯವಾಗಿ ಹೇಳಲಾಗಿದೆ. ಇದರ ಅರ್ಥ ಮಿಥುನ ಪದ ಸಾಂಕೇತಿಕವಾಗಿ ಅಭಿವೃದ್ಧಿಯ ಸಂಕೇತವಾಗಿ ಸ್ತ್ರೀ ಮತ್ತು ಪುರುಷರನ್ನು ಮಿಥುನದ ಚೌಕಟ್ಟಿನಲ್ಲಿ ತರುತ್ತದೆ. ಪ್ರಾಚೀನ ಭಾರತೀಯ ನಂಬಿಕೆಗಳ ಪ್ರಕಾರ ಮಿಥುನ ಎನ್ನುವುದು ಎರಡು ಎಂದರ್ಥ ಅಥವಾ ಜೊತೆ ಎಂದರ್ಥ. ಇಲ್ಲಿ ಸ್ತ್ರೀ ಮತ್ತು ಪುರುಷ ಜೊತೆಯ ಭಾಗವಾಗಿ, ದೈಹಿಕ ಸಂಬಂಧವೇ ಸಂಭೋಗವಾಗಿ ಇದರಿಂದ ವಂಶಾಭಿವೃದ್ಧಿಯಾಗುವ ಪ್ರಕ್ರಿಯೆಗೆ ಎಡೆಮಾಡಿ ಕೊಡುವುದನ್ನು ಶತಪಥ ಬ್ರಾಹ್ಮಣ ಸ್ಪಷ್ಟಪಡಿಸುತ್ತದೆ.

ವಾಸ್ತವಿಕವಾಗಿ ಕರ್ನಾಟಕದಲ್ಲಿ ಶಿಲ್ಪಕಲಾ ಚಟುವಟಿಕೆಗಳು 'ಸನ್ನತಿ'ಯಲ್ಲಿಯೇ ಮೊಟ್ಟ ಮೊದಲ ಬಾರಿಗೆ ಆರಂಭವಾಗಿದ್ದಿರಬಹುದಾದ ಸಾಧ್ಯತೆ ಇದೆ[15] ಐತಿಹಾಸಿಕವಾಗಿ ಕರ್ನಾಟಕದ ಆರಂಭಿಕ ಶಿಲ್ಪಕಲೆಯ ಪ್ರಾರಂಭವನ್ನು ಕ್ರಿ.ಪೂ.3ನೇ ಶತಮಾನದಲ್ಲೇ ಗುರುತಿಸಲಾಗಿದೆ. ವಿಶೇಷವಾಗಿ ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿ ಬೌದ್ಧಶಿಲ್ಪಕಲೆ ವಿಕಾಸನಗೊಳ್ಳುತ್ತಿದ್ದಂತಹ ಕಾಲವಾಗಿದೆ. ಇದುವರೆವಿಗೂ ಸಿಂಧೂ ನಾಗರೀಕತೆಯ ಅವಶೇಷಗಳ ಅನಂತರದ ಕಾಲಘಟ್ಟದಲ್ಲಿ ಮತ್ತು ಕ್ರಿ.ಪೂ. 3–4ನೇ ಶತಮಾನಗಳಿಗಿಂತ ಮೊದಲು ಸ್ಪಷ್ಟವಾದಂತಹ ಕಲಾ ಚಟುವಟಿಕೆಗಳ ದಾಖಲೆಗಳು ಬೆಳಕಿಗೆ ಬಾರದೇ ಇರುವುದರಿಂದ ಸಾಮಾನ್ಯವಾಗಿ ಮೌರ್ಯರ ಕಾಲಘಟ್ಟವನ್ನು ಆರಂಭಿಕ ಕಾಲವೆಂದು ಪರಿಗಣಿಸಬಹುದಾಗಿದೆ.

ಮೈಸೂರು ನಗರದಲ್ಲಿರುವ ಪಾರಂಪರಿಕ ದೇವಾಲಯಗಳಲ್ಲಿ ಲೈಂಗಿಕ ಅಥವಾ ಮಿಥುನ ಶಿಲ್ಪಗಳು ಎಲ್ಲಿಯೂ ಕಂಡುಬರುವುದಿಲ್ಲ. ಆದರೆ ಮೈಸೂರಿನ ಸಮೀಪವಿರುವ ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ದೇವಾಲಯದಲ್ಲಿ ಈ ಶಿಲ್ಪಗಳು ಕಂಡುಬಂದಿವೆ.

## 4.5 ಜನಪದ ವಾದ್ಯಗಳು

ಹಾಡು, ಕುಣಿತ, ಬಡಿತಗಳಿಗೆ ಜನಪದರೇ ಕಂಡುಕೊಂಡಂತಹ ವಾದ್ಯಗಳು. 'ವಾದ್ಯ' ಎಂಬುದು ಪ್ರಕೃತಿಯ ಚಲನಪ್ರಕ್ರಿಯೆಯನ್ನು ಅನುಕರಿಸುತ್ತ ಕುತೂಹಲಿತ ಮನಸ್ಕ ಮಾನವ ರೂಪಿಸಿಕೊಂಡ ಲಯಗತಿ ಸಾಧನ. 'ವಾದ್ಯ' ಎಂಬ ಸಂಸ್ಕೃತ ಪದ 'ನುಡಿ'ಯೆಂಬರ್ಥದಲ್ಲಿ ಬಳಕೆಯಾಗಿದ್ದು, ವಾದನಕ್ಕೊಳಗಾಗಿದ್ದೇ 'ವಾದ್ಯ' ಎಂದಾಗಿದೆ. ವಾದ್ಯದ ಮೂಲಕ ನುಡಿಗೊಳ್ಳುವುದು ಮನುಷ್ಯನ ಆಪ್ತ ಅನುಭವಗಳೇ ವಾದ್ಯದ ಹುಟ್ಟು ಹೇಗೆ ಎಂಬುದಕ್ಕೆ ನಿಖರವಾದ ದಾಖಲೆಗಳು ಇಲ್ಲ.

ಪ್ರಕೃತಿಯೊಂದಿಗೆ ತನ್ನ ಬದುಕನ್ನು ಕಟ್ಟಿಕೊಂಡ ಮಾನವ ಅಲ್ಲಿಯ ಪ್ರತಿಯೊಂದು ವಸ್ತುಗಳು ಉಂಟುಮಾಡುವ ಕಂಪನದ ನಾದ ಮಾಧುರ್ಯಕ್ಕೆ ತಲೆಭಾಗಿ ಆ ವಸ್ತುಗಳನ್ನೇ ಕೆಲವನ್ನು ವಾದ್ಯಗಳಾಗಿ ಮಾಡಿಕೊಂಡ. ಅಲ್ಲದೆ ಕೆಲವು ಶಬ್ಧಗ್ರಹಣದ ಅನುಕರಣೆಯ ಕಾರಣದಿಂದಲೇ ವಾದ್ಯವಿಶೇಷಗಳ ರಚನಾತಂತ್ರವನ್ನು ರೂಢಿಸಿಕೊಂಡ. ವಾದ್ಯದ ಹುಟ್ಟು ಹೇಗೆ ಎಂಬುದಕ್ಕೆ ನಿಖರವಾದ ದಾಖಲೆಗಳಿಲ್ಲ. ವಾದ್ಯ ಎಂಬುದನ್ನು ಪ್ರಕೃತಿಯ ಚಲನ ಪ್ರಕ್ರಿಯೆಯನ್ನು ಅನುಕರಿಸುತ್ತ ಕುತೂಹಲಿತ ಮಾನವ ರೂಪಿಸಿಕೊಂಡ ಲಯಗತಿ ಸಾಧನ. 'ವಾದ' ಎಂಬ ಸಂಸ್ಕೃತ ಪದ 'ನುಡಿ' ಎಂಬರ್ಥದಲ್ಲಿ ಬಳಕೆಯಾಗಿದ್ದು, ವಾದನಕ್ಕೊಳಗಾಗಿದ್ದೇ 'ವಾದ್ಯ' ಎಂಬುದಾಗಿದೆ.[16]

ಜನಪದ ಕುಣಿತಗಳಲ್ಲಿ ವಾದ್ಯಗಳದ್ದೇ ವಿಶೇಷ ಆಕರ್ಷಣೆ. ಜನಪದ ಕುಣಿತಗಳಲ್ಲಿ ಕುಣಿತ, ಗೀತೆ, ವಾದ್ಯಗಳ ಸಂಗಮವಾಗಿದ್ದು, ಯಾವುದೇ ಕುಣಿತಗಳು ಇವುಗಳಿಲ್ಲದೆ ಪೂರ್ಣಗೊಳ್ಳುವುದಿಲ್ಲ. ವಾದ್ಯಗಳು ಕೇವಲ ಕಲಾ ಮಾಧ್ಯಮಕ್ಕೊಸ್ಕರವಲ್ಲದೆ ಆದಿಮಾನವ ಕ್ರೂರಮೃಗಗಳಿಂದ ರಕ್ಷಣೆಗಾಗಿ ಶಬ್ಧಗಳನ್ನು ಹೊರಡಿಸುತ್ತಿದ್ದರು. ಈ ಶಬ್ಧಗಳು ಬೇರೆ ಬೇರೆ ಕಲ್ಪನೆಗಳಿಂದ ಹೊಸ ಹೊಸ ನಾದವಾಗಿ ರೂಪುಗೊಂಡವು. ನಾಗರಿಕತೆ ಬೆಳೆದಂತೆ ವಾದ್ಯಗಳ ಅನ್ವೇಷಣೆಯಲ್ಲಿಯೂ ಹೊಸ ಶೋಧಗಳು ನಡೆದಿವೆ.

ವಾದ್ಯಗಳ ಉಗಮದ ಬಗ್ಗೆ ಅನೇಕ ಪುರಾಣ ಕಲ್ಪನೆಗಳೂ ಇದ್ದು ಪವಿತ್ರವಾದ ಭಾವನೆಗಳನ್ನು ಒಳಗೊಂಡಿವೆ. ಪ್ರತಿಯೊಂದು ದೇವರ ಅಸ್ತಿತ್ವದೊಂದಿಗೆ ವಾದ್ಯಗಳನ್ನು ಸಮೀಕರಿಸಲಾಗಿದೆ. ಉದಾಹರಣೆಗೆ: ಡಮರುಗ ಶಿವನ ವಾದ್ಯ, ವೀಣೆ ಸರಸ್ವತಿಯ ವಾದ್ಯ, ಕೊಳಲು ಕೃಷ್ಣನ ವಾದ್ಯ. ಮೂಲತಃ ಆರಾಧನಾ ಹಾಗೂ ಸಮರ್ಪಣಾ ಭಾವದ ಇಮ್ಮುಖ ಅಭಿವ್ಯಕ್ತಿಯಿಂದ ವಾದ್ಯ ವೈವಿಧ್ಯವನ್ನು ಹರವಿಕೊಂಡು ಕುಳಿತಿರುವ ಜಾನಪದ ಜಗತ್ತನ್ನೊಮ್ಮೆ

ಇಣುಕಿ ನೋಡಿದರೆ ಶತಾಯಗತಾಯ ಅವು ಬರೀ ಮನರಂಜನಾರ್ಥವಾಗಿ ಹುಟ್ಟಿಕೊಂಡವಲ್ಲ ಎಂಬುದು ಹಾಗೂ ಅದಕ್ಕೆ ಬೇರೆ ಬೇರೆ ಸತ್ವಯುತ ಕಾರಣಗಳು ಇರುವುದು ಸ್ಪಷ್ಟವಾಗುತ್ತದೆ.

**ಘಂಟೆ :** ಇದೊಂದು ಲೋಹವಾದ್ಯ, ದೇವಾಲಯಗಳಲ್ಲಿ ಘಂಟೆ ಪ್ರಮುಖ ಸ್ಥಾನವನ್ನು ಹೊಂದಿದೆ. ಘಂಟೆ ಇಲ್ಲದ ದೇವಾಲಯಗಳು ಕಾಣಸಿಗುವುದು ಅಪರೂಪವಾಗಿದೆ. ದೇವಾಲಯ ಪ್ರವೇಶಿಸುತ್ತಿದ್ದಂತೆಯೇ ಇಳಿಬಿಟ್ಟ ಘಂಟೆಯನ್ನು ಬಾರಿಸುವುದು ವಾಡಿಕೆ. ದೊಡ್ಡ ಮತ್ತು ಚಿಕ್ಕಗಾತ್ರದ ಘಂಟೆಗಳು ದೇವಾಲಯಗಳಲ್ಲಿ ಬಳಕೆಯಾಗುತ್ತವೆ. ಇದನ್ನು ಕಂಚಿನಿಂದ ತಯಾರಿಸಿರುತ್ತಾರೆ. ಮೇಲ್ಭಾಗದಲ್ಲಿ ಕೈಯಲ್ಲಿ ಹಿಡಿದು ಇದರ ಒಳಭಾಗದಲ್ಲಿ ಕೈ ಬೆರಳಿನಗಾತ್ರದ ಕಂಚಿನ ತುಂಡನ್ನು ಸಿಕ್ಕಿಸಿರುತ್ತಾರೆ. ಇದನ್ನು ಘಂಟೆಯ ನಾಲಿಗೆ ಎಂತಲೂ ಕರೆಯುತ್ತಾರೆ. ಇದನ್ನು ಅಲುಗಾಡಿಸಿದಂತೆ ಸುನಾದ ಕೇಳಿ ಬರುತ್ತದೆ.

ಜಾನಪದದಲ್ಲಿ ಇದಕ್ಕೊಂದು ವಿಶೇಷವಾದ ಸ್ಥಾನವಿದೆ. ಶಿಷ್ಟಪದದಲ್ಲಿರುವಂತೆ ಜಾನಪದದಲ್ಲಿಯೂ ಮಂಗಳಕರವಾದದು. ತಮ್ಮ ಹರಕೆಗಳು ಈಡೇರಿದಾಗ ದೇವಾಲಯಗಳಿಗೆ ಘಂಟೆ ದಾನ ಮಾಡುವ ಸಂಪ್ರದಾಯವೂ ಇದೆ. ತಮಗೆ ಅನ್ಯಾಯವಾದಾಗ ಪ್ರಾಣಿಗಳು ನ್ಯಾಯದ ಘಂಟೆಗೆ ಕಟ್ಟಿರುವ ಹಗ್ಗವನ್ನು ಎಳೆದು ಘಂಟೆಯಸದ್ದು ಮಾಡುವುದರ ಮೂಲಕ ನ್ಯಾಯ ಕೇಳುವ ಸಂದರ್ಭಗಳು ನಮ್ಮ ಜನಪದ ಕಥೆಗಳಲ್ಲಿ ಇವೆ. ಜನರು ದೇವಾಲಯದ ಮೂಲ ವಿಗ್ರಹದ ದರ್ಶನಕ್ಕೆ ಬಂದಾಗ ಘಂಟೆನಾದ ಮಾಡುವ ಪದ್ಧತಿ ಇದೆ. ವೈಜ್ಞಾನಿಕವಾಗಿ ಚಿಂತಿಸಿದರೆ ನಮ್ಮ ಮನದಲ್ಲಿರುವ ದುರ್ಭಾವನೆಗಳು ದೂರವಾಗಿ ಏಕಾಗ್ರ ಚಿತ್ತದಿಂದ ಅಂದಿನ ದೈವೀಕಾರ್ಯಗಳು ಸುಸೂತ್ರವಾಗಿ ನಡೆಸಲು ಪೂರಕವೆನಿಸುತ್ತದೆ.

ಘಂಟೆಗೆ ಸಂಬಂಧಿಸಿದಂತೆ ಜನಪದರಲ್ಲಿ ಹಲವಾರು ನಂಬಿಕೆಗಳಿವೆ. ದೇವಾಲಯಕ್ಕೆ ಹೋಗಿ ಘಂಟೆಯನ್ನು ಬಾರಿಸಿದಾಗ ದೇವರ ಕಿವಿಗೆ ಅದು ತಲುಪುತ್ತದೆ ಅದರಿಂದ ದೇವರಿಗೆ ಘಂಟೆ ಬಾರಿಸಿದವರ ಕಡೆ ಗಮನ ಹರಿಯುತ್ತದೆ. ಇದರಿಂದ ಆ ಸಂದರ್ಭದಲ್ಲಿ ದೇವರಿಗೆ ನಮ್ಮ ನಿವೇದನೆಯನ್ನು ಹೇಳಿಕೊಂಡರೆ ದೇವರು ಒಳ್ಳೆಯದು ಮಾಡುತ್ತಾನೆ ಎಂದು ನಂಬಿದ್ದಾರೆ. ದೇವಾಲಯಗಳು ಬೆಳಗಿನ ಜಾವ ಬೇಗ ತೆರೆದಿರುತ್ತವೆ ಆ ಸಂದರ್ಭದಲ್ಲಿ ಘಂಟೆ ಬಾರಿಸುವುದರಿಂದ ಜನರಿಗೆ ಬೆಳಗಾಗಿದೆ ಎಂದು ಎಚ್ಚರವಾಗುತ್ತದೆ. ಅಲ್ಲದೆ ಅವರು ಪ್ರತಿ ದಿನ ಎದ್ದ ತಕ್ಷಣ ದೇವರನ್ನು ನೆನೆಯುವುದು ಪದ್ಧತಿ. ಘಂಟೆಯನ್ನು ಸಾಮಾನ್ಯವಾಗಿ ಮೂರು ಬಾರಿ ಬಾರಿಸುವುದು ವಾಡಿಕೆ. ಹರಕೆ ಹೊತ್ತವರು ದೇವಾಲಯಕ್ಕೆ ಘಂಟೆಯನ್ನು ಮಾಡಿಸಿಕೊಟ್ಟು ತಮ್ಮ ಹರಕೆಯನ್ನು ತೀರಿಸುವುದು ಇದೆ.

ಮೈಸೂರಿನ ಹೆಸರಾಂತ ಎಂ.ಬಿ.ಸಿ ಪ್ರೈವೇಟ್ ಸಂಸ್ಥೆ ಹೆಸರಿನಲ್ಲಿ ಅದರ ಮುಖ್ಯಸ್ಥರು ದೇವರಿಗೆ ಝೇಂಕರಿಸುವ ಬೃಹದಾಕಾರದ ಗಂಟೆಯನ್ನು ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿ ಟ್ರಸ್ಟ್‌ಗೆ ಹಸ್ತಾಂತರಿಸಿರುವುದನ್ನು ಕಾಣಬಹುದು. ಅಲ್ಲದೆ ಮೈಸೂರು ನಗರದ ದಟ್ಟಗಳ್ಳಿಯಲ್ಲಿ ಜೋಡಿಬೇವಿನ ಮರದ ಬುಡದಲ್ಲಿ 'ಗಂಟೆ ಬಸಪ್ಪ' ಎಂಬ ದೇವಾಲಯ ಇದೆ. ಸಾಮಾನ್ಯವಾಗಿ ಮೈಸೂರು ನಗರದಲ್ಲಿರುವ ಎಲ್ಲಾ ದೇವಾಲಯಗಳಲ್ಲಿಯೂ ಘಂಟೆ ಇರುವುದನ್ನು ಗುರುತಿಸಲಾಗಿದೆ.

**ನಗಾರಿ :** ನಗಾರಿ ಒಂದು ಚರ್ಮವಾದ್ಯ. ಇದನ್ನು ದೇವ ದುಂದುಭಿ, ಭೇರಿ, ಸೌಬತ್ತು ಎಂಬ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತಿತ್ತು. ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದ್ದ ಈ ವಾದ್ಯ ಹಲವಾರು ಉದ್ದೇಶಗಳಿಗಾಗಿ ಬಳಕೆಯಾಗುತ್ತಿತ್ತು. ಅರಸೊತ್ತಿಗೆಯ ಕಾಲದಲ್ಲಿ ಪ್ರಜೆಗಳು ತಮಗಾದ ಅನ್ಯಾಯವನ್ನು ಅರಸನಿಗೆ ತಿಳಿಸಲು ಕೋಟೆಯ ಬಾಗಿಲಿನಲ್ಲಿಟ್ಟ ನಗಾರಿಯನ್ನು ಬಡಿಯುತ್ತಿದ್ದರು. ಕೆಲವು ಮೆರವಣಿಗೆ, ಉತ್ಸವದಂತಹ ಕಾರ್ಯಗಳಲ್ಲಿಯೂ ಈ ವಾದ್ಯಗಳನ್ನು ಎತ್ತುಗಳ ಮೇಲೆ ಹೇರಿಕೊಂಡು ಬಾರಿಸುತ್ತ ಉತ್ಸವದ ಮುಂಚೂಣಿಯಲ್ಲಿ ಸಾಗುತ್ತಿದ್ದರು. ಈಗಲೂ ಹಲವೆಡೆಗಳಲ್ಲಿ ಇದು ರೂಢಿಯಲ್ಲಿದೆ. ದೇವತೆಯ ಪೂಜಾ ಸಂದರ್ಭದಲ್ಲಿ ನಗಾರಿಯನ್ನು ನುಡಿಸುತ್ತಾರೆ.

ಚರ್ಮವಾದ್ಯಗಳಲ್ಲಿ ಮತ್ತು ನಾದಗಳಲ್ಲಿ ಜಗ್ಗಲಿಗೆ ಡೊಳ್ಳನ್ನು ಬಿಟ್ಟರೆ ನಗಾರಿಯೆ ಅತ್ಯಂತ ದೊಡ್ಡವಾದ್ಯ. ಈ ವಾದ್ಯವನ್ನು ಕಬ್ಬಿಣ, ಹಿತ್ತಾಳೆ ಅಥವಾ ತಾಮ್ರದ ಲೋಹದಿಂದ ತಯಾರಿಸಿದ ಪಡಗದ ವ್ಯಾಸಕ್ಕೆ ಎಮ್ಮೆಯ ಚರ್ಮವನ್ನು ಬಾರುಗಳಿಂದ ಬಿಗಿದಿರುತ್ತಾರೆ. ತಳದಲ್ಲಿ ಕಿರಿದಾಗುತ್ತಾ ಹೋದ ಹಿರಿದಾದ ವ್ಯಾಸ ಬಾಯುಳ್ಳ ಪಡಗಕ್ಕೆ ಚರ್ಮ ಕಟ್ಟಲಾಗಿರುತ್ತದೆ. ಈ ವಾದ್ಯವನ್ನು ಬಾರಿಸಲು ಗಟ್ಟಿಕೋಲನ್ನು ಬಳಸಲಾಗುತ್ತದೆ. ನಗಾರಿ ಬಡಿಯುವುದು ಒಂದು ಕಲೆ. ಇದರಿಂದ ಸೂಕ್ಷ್ಮವಾದ ಶಬ್ಧತರಂಗಗಳನ್ನು ಹೊರಡಿಸಲು ಆಗದಿದ್ದರೂ ಲಯ-ತಾಳಬದ್ಧವಾಗಿ ಬಡಿದರೆ ಕರ್ಣಮಾಧುರ್ಯವನ್ನುಂಟು ಮಾಡುವ ಶಕ್ತಿ ಅದಕ್ಕಿದೆ. ಪಟಕುಣಿತ, ಪೂಜಾಕುಣಿತ, ಸುಗ್ಗಿ ಮೇಳಗಳಲ್ಲಿ ಇದರ ಬಳಕೆ ಹೆಚ್ಚು.

ಮೈಸೂರು ನಗರದ ದೇವಾಲಯಗಳ ಉತ್ಸವಗಳು ನಡೆಯುವಾಗ, ಮೆರವಣಿಗೆ ನಡೆಯುವಾಗ ಈ ನಗಾರಿ ವಾದ್ಯವನ್ನು ಮುಂಚೂಣಿಯಲ್ಲಿ ಬಾರಿಸುತ್ತಾ ಸಾಗುವುದನ್ನು ಕಾಣಬಹುದು. ಉದಾಹರಣೆಗೆ: ಚಾಮುಂಡೇಶ್ವರಿಯ ಉತ್ಸವದಲ್ಲಿ, ಕರಗೋತ್ಸವದಲ್ಲಿ, ದಸರಾ ಮಹೋತ್ಸವದಲ್ಲಿ ಹಾಗೂ ಇತ್ಯಾದಿ ಉತ್ಸವಗಳಲ್ಲಿ ಈ ನಗಾರಿಯನ್ನು ಕಾಣಬಹುದಾಗಿದ್ದು, ಇದು ಪ್ರತಿಷ್ಠೆಯ ವಿಷಯವೆಂಬಂತೆ ಎಲ್ಲ ಚಿಕ್ಕ ಪುಟ್ಟ ಉತ್ಸವಗಳು, ಜಾತ್ರೆಗಳು, ಮೆರವಣಿಗೆಗಳಲ್ಲಿ ಶಬ್ಧ

ಮಾಧುರ್ಯಕ್ಕಾಗಿ ಹಾಗೂ ಜನರನ್ನು ಆಕರ್ಷಿಸಲು ಹಾಗೂ ಅದರ ಗತ್ತಿಗೆ ಕುಣಿತ ಮಾಡುವ ಉದ್ದೇಶದಿಂದ ಇದನ್ನು ಬಳಸಲಾಗುತ್ತಿದೆ. ಅಲ್ಲದೆ ಹಲವು ದೇವಾಲಯಗಳಲ್ಲಿ ಪೂಜೆ, ಮಂಗಳಾರತಿಯ ಸಮಯದಲ್ಲಿ ಯಾಂತ್ರಿಕವಾಗಿ ನಗಾರಿಗಳ ಬಾರಿಸುವ ಸದ್ದನ್ನು ಕೇಳಬಹುದಾಗಿದೆ. ಉದಾಹರಣೆಗೆ: ಕೆ.ಜಿ.ಕೊಪ್ಪಲಿನ ಮಾರಮ್ಮನ ದೇವಾಲಯ, ದಟ್ಟಗಳ್ಳಿಯ ಮಹಾಲಕ್ಷ್ಮಿ ದೇವಾಲಯಗಳಲ್ಲಿ ಆಧುನಿಕತೆಯಿಂದ ತಯಾರಾಗಿರುವ ಹಾಗೂ ಹೆಚ್ಚು ಶಬ್ಧವನ್ನು ಉಂಟುಮಾಡುವ ನಗಾರಿಗಳನ್ನು ಕಾಣಬಹುದಾಗಿದೆ.

**ಕಹಳೆ** : ಕಹಳೆಯನ್ನು ಸ್ವತಂತ್ರವಾದ್ಯ ಎಂದು ಕರೆಯಲಾಗುತ್ತದೆ. ಕಹಳೆಯು ಒಂದು ಗಾಳೀವಾದ್ಯವಾಗಿದೆ. ಇದು ಪುರಾತನ ವಾದ್ಯಗಳಲ್ಲಿ ಒಂದು. ದನಗಳ ಕೊಂಬನ್ನೆ ಹೋಲುವ ಹಲವು ವಾದ್ಯಗಳ ಚಿತ್ರಣವನ್ನು ನಮ್ಮ ಪ್ರಾಚೀನ ಶಿಲ್ಪಗಳಲ್ಲಿ ಕಾಣಬಹುದಾಗಿದೆ. ಆದುದರಿಂದ ಕಹಳೆಯನ್ನು ಕೊಂಬು ಎಂತಲು ಹಲವಾರು ಕಡೆಗಳಲ್ಲಿ ಕರೆಯಲಾಗುತ್ತದೆ. ದೇವತೆಗಳ ಮೇರವಣಿಗೆ, ಉತ್ಸವ, ಜಾತ್ರೆ ಮುಂತಾದ ಸಂದರ್ಭಗಳಲ್ಲಿ ಕಹಳೆಯನ್ನು ಊದುತ್ತಿದ್ದರು. ಜನಪದರು ಹದಿನಾಲ್ಕು ರೀತಿಯ ಕಹಳೆಗಳನ್ನು ಬಳಸುತ್ತಿದ್ದರೆಂದು ತಿಳಿದು ಬರುತ್ತದೆ. ಅಲ್ಲದೆ ರಾಜ ಮಹಾರಾಜರು ಯುದ್ಧಕ್ಕೆ ಹೊರಡುವ ಮುಂಚೆ ರಣಕಹಳೆ, ರಣಭೇರಿಯನ್ನು ಊದುತ್ತಿದ್ದರು. ಕಹಳೆಯನ್ನು ಹೆಚ್ಚಿನದಾಗಿ ಪರಿಶಿಷ್ಟರು ಊದುತ್ತಿದ್ದರೆಂದು ತಿಳಿದು ಬರುತ್ತದೆ. ಮೈಸೂರಿನ ದೇವಾಲಯಗಳಲ್ಲಿ ಕಹಳೆ ಇಂದು ಮರೆಯಾಗಿದೆ. ಆದರೆ ಹಬ್ಬ–ಜಾತ್ರೆ, ಉತ್ಸವ, ಕರಗೋತ್ಸವಗಳ ಸಂದರ್ಭದಲ್ಲಿ ಕೆಲವು ಕಡೆಗಳಲ್ಲಿ ಮಾತ್ರ ಬಳಕೆಯಲ್ಲಿರುವುದನ್ನು ಕಾಣುತ್ತೇವೆ. ಉದಾಹರಣೆಗೆ: ಮೈಸೂರು ಕರಗಮಹೋತ್ಸವ, ದಸರಾ ಮಹೋತ್ಸವಗಳಲ್ಲಿ ಬಳಕೆಯಲ್ಲಿದೆ.

**ಶಂಖ** : ಶಂಖವು ಒಂದು ವಿಶೇಷವಾದ ಗಾಳೀವಾದ್ಯವಾಗಿದೆ. ಇದಕ್ಕೆ ತನ್ನದೇ ಆದ ಧಾರ್ಮಿಕ ಮಹತ್ವವಿದೆ. ಶ್ರೀಕೃಷ್ಣನು ಯುದ್ಧದ ಆರಂಭ ಮತ್ತು ಮುಗಿಯುವ ವೇಳೆಯಲ್ಲಿ ಶಂಖನಾದವನ್ನು ಮೊಳಗಿಸುತ್ತಿದ್ದನು. ಕಾವ್ಯಗಳಲ್ಲಿ ಶಂಖದ ಪ್ರಸ್ತಾಪವಿದೆ. ಪೂಜೆಯ ಆರಂಭಕ್ಕಿಂತ ಮುಂಚಿತವಾಗಿ ಮತ್ತು ಮಂಗಳಾರತಿಯ ಸಮಯದಲ್ಲಿ ದೇವಾಲಯಗಳಲ್ಲಿ ಊದುವುದು ವಾಡಿಕೆಯಾಗಿದೆ. ದಾಸಯ್ಯ, ದಾಸರು ಶಂಖವನ್ನು ಊದಿ ಭಿಕ್ಷೆ ಬೇಡುತ್ತಿದ್ದರೆಂದು ತಿಳಿದು ಬರುತ್ತದೆ. ವೈಷ್ಣವ ಸಂಪ್ರದಾಯಕ್ಕೆ ಸೇರಿದ ಮೈಸೂರು ನಗರದ ಕೆಲವು ದೇವಾಲಯಗಳಲ್ಲಿ ಇಂದಿಗೂ ವಿಶೇಷ ಪೂಜೆ, ಮಂಗಳಾರತಿ ಸಂದರ್ಭದಲ್ಲಿ ಶಂಖವನ್ನು ಊದುತ್ತಾರೆ. ಉದಾಹರಣೆಗೆ: ಒಂಟಿಕೊಪ್ಪಲಿನ ಶ್ರೀ ವೆಂಕಟೇಶ್ವರ ದೇವಾಲಯದಲ್ಲಿ.

**ಜಾಗಟೆ** : ದೇವಸ್ಥಾನಗಳ ಪೂಜಾ ಸಮಯದಲ್ಲಿ ಬಳಸುವ ಲೋಹವಾದ್ಯ ಜಾಗಟೆ. ಒಂದಡಿ ವ್ಯಾಸದ ವೃತ್ತಾಕಾರದ ಕಂಚನ್ನು ರಚಿಸಿ ಅದನ್ನು ಬೆರಳಿನಷ್ಟು ದಪ್ಪ ಹಾಗೂ ಅದೇ ಗಾತ್ರದ ಉದ್ದವಿರುವ ಕಟ್ಟಿಗೆಯಿಂದ ಬಾರಿಸಿದಾಗ ಡಣ್ ಡಣ್ ಅಥವಾ ಟಣ್ ಟಣ್ ಎಂಬ ಸುನಾದ ಕೇಳಿಬರುತ್ತದೆ. ಪ್ರಾಚೀನ ವಾದ್ಯವಾದ ಜಾಗಟೆಯ ಬಗ್ಗೆ ಕಾವ್ಯಗಳಲ್ಲಿ ಪ್ರಸ್ತಾಪವಾಗಿದೆ. ಇದನ್ನು ಗುಗ್ಗಳ(ಧೂಪ) ಒಯ್ಯುವಾಗ, ದಾಸರು ಮೃತರನ್ನು ಸ್ಮಾಶನಕ್ಕೆ ಒಯ್ಯುವಾಗಲೂ, ವಿಧಿಕ್ರಿಯೆಯ ಸಮಯದಲ್ಲಿ ಜಾಗಟೆಯನ್ನು ಬಾರಿಸುತ್ತಾ ಸಾಗುತ್ತಾರೆ. ಪೂಜೆ, ಮಂಗಳಾರತಿ, ದೇವರ ಉತ್ಸವ, ಮೆರವಣಿಗೆ ಮತ್ತು ಜಾತ್ರೆಗಳಂತಹ ಸಂದರ್ಭದಲ್ಲಿಯೂ ಜಾಗಟೆಯ ಬಳಕೆ ಇಂದಿಗೂ ಹಲವಾರು ದೇವಾಲಯಗಳಲ್ಲಿ ಕಂಡುಬರುತ್ತದೆ. ವೈಷ್ಣವ ಸಂಪ್ರದಾಯದ ದೇವಾಲಯಗಳಲ್ಲಿ ಶಂಖ ಹಾಗೂ ಜಾಗಟೆಯನ್ನು ಒಟ್ಟಿಗೆ ಬಳಸುತ್ತಾರೆ. ಉದಾಹರಣೆಗೆ: ಒಂಟಿಕೊಪ್ಪಲಿನ ಶ್ರೀ ವಂಕಟೇಶ್ವರ ದೇವಾಲಯದಲ್ಲಿ ಕಾಣಬಹುದು.

**ತಮಟೆ** : ತಮಟೆ ಒಂದು ಚರ್ಮವಾದ್ಯ. ಪ್ರಾಚೀನ ಕಾಲದಿಂದಲು ಚಿರಪರಿಚಿತವಾಗಿರುವ ವಾದ್ಯವಾಗಿದೆ. ಇದನ್ನು ಕುರಿತಾಗಿ ಗಾದೆಯೊಂದಿದೆ. 'ಒಲೆಯಿಲ್ಲದ ಒಕ್ಕಲಿಲ್ಲ, ತಮಟೆಯಿಲ್ಲದ ಊರಿಲ್ಲ' ಎಂಬುದನ್ನು ಗಮನಿಸಿದಾಗ ಇದರ ಸರ್ವವ್ಯಾಪಕತೆ ತಿಳಿಯುತ್ತದೆ. ಇದನ್ನು 'ತಮಟೆ', 'ತಬಟೆ' ಎಂತಲೂ ಕರೆಯುವರು. ಎರಡು ಅಡಿ ವ್ಯಾಸದ ವೃತ್ತಾಕಾರದ ಕಟ್ಟಿಗೆ ಚರ್ಮವನ್ನು ಒಂದುಕಡೆ ಬಿಗಿಸಿರುತ್ತಾರೆ. ಬೆಂಕಿಗೆ ಕಾಯಿಸಿದಂತೆಲ್ಲಾ ಇದರ ನಾದ ಬಲಿಷ್ಠವಾಗಿ ಹೊರಹೊಮ್ಮುತ್ತದೆ. ಇದೊಂದು ರಣವಾದ್ಯವಾಗಿ ಪರಿಣಮಿಸಿದೆ. ದನಗಳ ಮತ್ತು ಮೇಕೆಯ ಚರ್ಮದಿಂದ ಮಾಡಿದ ಈ ವಾದ್ಯವನ್ನು ಪರಿಶಿಷ್ಟರು ಬಳಸುವರು. ದೇವರ ಉತ್ಸವ, ಮೆರವಣಿಗೆ, ಜಾತ್ರೆಗಳಲ್ಲಿ ಅಂತೆಯೇ ಸತ್ತ ವ್ಯಕ್ತಿಯನ್ನು ಸ್ಮಶಾನಕ್ಕೆ ಒಯ್ಯುವಾಗ, ಊರಿನಲ್ಲಿ ಸಾರಿಕೆ ಮಾಡುವಾಗ ಇದರ ಬಳಕೆ ವಿಶಿಷ್ಟವಾಗಿರುತ್ತದೆ. ಸುಖದ ಸಂದರ್ಭದಲ್ಲಿ ಒಂದು ನಾದ, ಸತ್ತ ಸಂದರ್ಭದಲ್ಲಿ ಮತ್ತೊಂದು ನಾದ ಬಾರಿಸುವರು. ದೇವಿಯ ಮೈದುಂಬಿದಾಗ ತಮಟೆಯ ಗತ್ತಿಗೆ ತಕ್ಕಂತೆ ಹೆಜ್ಜೆಹಾಕುವುದನ್ನು ಕಾಣಬಹುದು. ಇದರಿಂದ ಇದೊಂದು ಜನಪದರ ಸಾಂಸ್ಕೃತಿಕ ಜೀವನದ ಅವಿಭಾಜ್ಯ ಅಂಗವಾಗಿದೆ ಎಂದೇ ಹೇಳಬಹುದಾಗಿದೆ. ಮೈಸೂರು ನಗರದ ದೇವಾಲಯಗಳ ಉತ್ಸವ, ಜಾತ್ರೆ, ಹಬ್ಬ ಮುಂತಾದ ವಿಶೇಷ ದಿನಗಳಲ್ಲಿ ಈ ವಾದ್ಯವನ್ನು ಬಳಸುತ್ತಾರೆ. ಗ್ರಾಮದ ಸೊಗಡನ್ನು ಉಳಿಸಿಕೊಂಡಿರುವ ಪಡುವಾರಹಳ್ಳಿ, ಕುಂಬಾರ ಕೊಪ್ಪಲು, ಅಶೋಕಪುರಂ, ರಾಜೇಂದ್ರನಗರ, ಆಲನಹಳ್ಳಿ ಮುಂತಾದ ಪ್ರದೇಶಗಳಲ್ಲಿ ಯಾವುದೇ ಉತ್ಸವ, ಮೆರವಣಿಗೆಯಲ್ಲಿ ಮುಂಚೂಣಿಯಲ್ಲಿ ಈ ತಮಟೆ ವಾದ್ಯವನ್ನು ಕಾಣಬಹುದು. ಇಂದಿಗೂ

ಮೈಸೂರು ನಗರದ ಹಲವು ಕಡೆಗಳಲ್ಲಿ ಸಾರಿಕೆ ಮಾಡಲು ತಮಟೆ ವಾದ್ಯ ಬಳಕೆಯಲ್ಲಿದೆ. ಹಬ್ಬ ಹರಿದಿನಗಳ ಉತ್ಸವಗಳ, ಮುಖ್ಯ ವಿಷಯಗಳನ್ನು ಚರ್ಚಿಸುವಾಗ ಊರಿನ ಬೀದಿ ಬೀದಿಗಳಲ್ಲಿ ಸಾರಿಕೆ ಮಾಡಲು ಬಳಸಲಾಗುತ್ತಿದೆ. ಅಲ್ಲದೆ ಈ ವಾದ್ಯದ ನಾದ ಮತ್ತು ಗತ್ತು ಎಂತವರನ್ನು ಕುಣಿಯಲು ಪ್ರೇರೇಪಿಸುತ್ತದೆ. ಇಂದು ಚರ್ಮವಾದ್ಯದ ಬದಲು ಫೈಬರ್ ವಾದ್ಯಗಳು ತಮಟೆಯ ಸ್ಥಾನವನ್ನು ಆಕ್ರಮಿಸಲು ಪೈಪೋಟಿಗೆ ಇಳಿದಿವೆ.

## 4.6 ಆಭರಣ ಮತ್ತು ವಸ್ತ್ರಗಳು

ಮನುಷ್ಯನ ಸೌಂದರ್ಯವರ್ಧನೆಗೆ ಧರಿಸುವ ಲೋಹ, ಮುತ್ತು ರತ್ನಗಳಿಂದ ತಯಾರಿಸಿದ ಅಲಂಕರಣ ಸಾಧನ. ದಾಗೀನ, ಸಾಮಾನು, ಒಡವೆ, ಬಂಗಾರ ಇವು ಇದರ ಪರ್ಯಾಯ ನಾಮಗಳು. ಆಭರಣಗಳು ರಚನೆಗೊಳ್ಳುವ ಪೂರ್ವದಲ್ಲಿ ನಿಸರ್ಗದ ವಸ್ತುಗಳೇ ಆಭರಣಗಳಾಗಿ ಬಳಕೆಯಾಗಿದ್ದವು. ಮಾನವ ನಾಗರಿಕನಾದಂತೆ ಮಣ್ಣಿನಿಂದ ಆಭರಣ ಮಾಡಲು ಕಲಿತ ಅನಂತರ ಶಿಲಾಯುಗದಿಂದ ಲೋಹಯುಗಕ್ಕೆ ಬಂದಾಗ ಮೃದುಲೋಹಗಳಾದ ಚಿನ್ನ, ಬೆಳ್ಳಿ, ಹಿತ್ತಾಳೆ, ತಾಮ್ರಗಳ ಆವಿಷ್ಕಾರ ಆಭರಣಗಳ ಬೆಳವಣಿಗೆಗೆ ನೂತನ ಆಯಾಮವನ್ನು ನೀಡಿತು.

ದೇವರುಗಳು ತಮ್ಮಂತೆಯೇ ಎಂದು ಅರಿತಿದ್ದ ಮಾನವ ದೇವರಿಗೆ ಗುಡಿ, ದೇವಾಲಯಗಳನ್ನು ಕಟ್ಟಿಸಿದಂತೆ ದೇವರ ಮೂರ್ತಿಗಳಿಗೆ ಆಭರಣಗಳಿಂದ ಅಲಂಕಾರ ಮಾಡುತ್ತಿದ್ದ. ಅಲ್ಲದೆ ಹರಕೆ, ದಾನ, ಪ್ರತಿಷ್ಠೆ ಮುಂತಾದ ರೂಪಗಳಲ್ಲಿ ಆಭರಣಗಳನ್ನು ದೇವರಿಗೆ ಸಮರ್ಪಿಸುತ್ತಿದ್ದ. ಈ ಪದ್ಧತಿಯನ್ನು ಇಂದಿಗೂ ಮೈಸೂರು ನಗರದ ದೇವಾಲಯಗಳಲ್ಲಿ ಕಾಣಬಹುದಾಗಿದೆ.

ಮೈಸೂರು ನಗರದ ಪಾರಂಪರಿಕ ದೇವಾಲಯಗಳಿಗೆ ಈ ಹಿಂದೆ ಆಭರಣಗಳನ್ನು ನೀಡಿರುವ ಬಗ್ಗೆ ಹಲವಾರು ಶಾಸನಗಳಲ್ಲಿ ಅಲ್ಪ ಪ್ರಮಾಣದ ಮಾಹಿತಿ ದೊರೆಯುತ್ತದೆ. ಆಭರಣ ಸಂಸ್ಕೃತಿ ಗಂಗರ ಕಾಲದಿಂದಲೂ ಬಳಕೆಯಲ್ಲಿದೆ. ಆಭರಣಗಳನ್ನು ಧರಿಸುತ್ತಿದ್ದುದಕ್ಕೆ ಗಂಗರ ಕಾಲದ ಸ್ಮಾರಕ ಶಿಲ್ಪಗಳು ಪೂರಕ ಸಾಕ್ಷಿಯಾಗಿವೆ.

ಮೈಸೂರು ಅರಸರ ಕಾಲದ ಶಾಸನಗಳಲ್ಲಿ ದೇವ–ದೇವತೆಯರುಗಳಿಗೆ ಹಾಗೂ ಅವರ ವಾಹನಗಳಿಗೆ ಸಮರ್ಪಿಸಿರುವ ಆಭರಣಗಳನ್ನು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಕ್ರಿ.ಶ.1857ರ ಶಾಸನದಲ್ಲಿ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರು ಚಾಮುಂಡಿಬೆಟ್ಟದ ಮೇಲಿರುವ ಅವರ ಕುಲದೇವತೆ ಚಾಮುಂಡೇಶ್ವರಿ ದೇವಿಗೆ ಪದಕವನ್ನು ಹೊಂದಿದ ಬಂಗಾರದ ನಕ್ಷತ್ರ

ಮಾಲಿಕೆಯನ್ನು ಸಮರ್ಪಿಸಿರುವ ಸಂಗತಿ ಉಲ್ಲೇಖವಾಗಿದೆ"[17] ಭಕ್ತರು, ಅರಸರು, ಮಹಾರಾಣಿಯರು, ಸಾಮಾನ್ಯ ಜನರು, ಮಹಿಳೆಯರಾದಿಯಾಗಿ ಹಲವಾರು ಜನರು ಮೈಸೂರು ನಗರದ ಕೆಲವೊಂದು ದೇವಾಲಯಗಳಿಗೆ ದಾನ, ಹರಕೆ, ಭಕ್ತಿ ಪೂರ್ವಕವಾಗಿ ಆಭರಣಗಳನ್ನು ನೀಡಿದ್ದಾರೆ.

**ಚಾಮುಂಡೇಶ್ವರಿಯ ಆಭರಣಗಳು :** ನವರಾತ್ರಿಯ ಏಳನೇ ದಿನ ಕಾಳರಾತ್ರಿಯಂದು ಖಜಾನೆಯಲ್ಲಿರುವ ದೇವಿಯ ಆಭರಣಗಳನ್ನು ಮತ್ತು ಒಡೆಯರ್ ಬಳಿ ಇರುವ ಆಭರಣಗಳನ್ನು ತಂದು ದೇವಿಗೆ ತೊಡಿಸಲಾಗುತ್ತದೆ. ಸರ್ಕಾರದ ಬಳಿ 12 ಆಭರಣಗಳು ಮತ್ತು ಒಡೆಯರ್ ಬಳಿ 34 ಆಭರಣಗಳು ಇವೆ. ಈ ಆಭರಣಗಳನ್ನು ಮೂಲ ವಿಗ್ರಹಕ್ಕೆ ತೊಡಿಸಲಾಗುವುದಿಲ್ಲ. ಚಾಮುಂಡಿ ಉತ್ಸವಮೂರ್ತಿಗೆ ತೊಡಿಸಲಾಗುತ್ತದೆ. ಅದಕ್ಕಾಗಿಯೇ ಇದು ವರ್ಷದಲ್ಲಿ ಒಮ್ಮೆ ಮಾತ್ರ ಭಕ್ತರಿಗೆ ನೋಡಲು ಸಿಗುತ್ತದೆ.

ಈ ಆಭರಣಗಳಲ್ಲಿ ಒಂದು ಪಚ್ಚೆಹಾರವಿದ್ದು ಇದರ ಬೆಲೆಯನ್ನು ನಿರ್ಧರಿಸಲು ಬೆಂಗಳೂರಿನ ಪ್ರತಿಷ್ಠಿತ ವಜ್ರ ವ್ಯಾಪಾರಿಯನ್ನು ಆಕಾಲದಲ್ಲಿ ಆಹ್ವಾನಿಸಿದಾಗ ಅವರು ಹಾಲಿ ಇರುವ ಮೈಸೂರು ನಗರವನ್ನು ಎರಡು ಬಾರಿ ಹರಾಜು ಹಾಕಿದಾಗ ಎಷ್ಟು ಮೊತ್ತ ಸಿಗುವುದೋ ಆ ಮೊತ್ತವೂ ಕೂಡ ಈ ಹಾರದ ಬೆಲೆಯ ಹತ್ತಿರಕ್ಕೂ ಬರಲಾರದು ಎಂದಿದ್ದಾರೆ.

- **ಸರ್ಕಾರದ ಬಳಿ ಇರುವ ಆಭರಣಗಳು**

1. ಚಾಮರಾಜ ಮುಡಿ(ಕಿರೀಟ)
2. ಕೋರಂಬು
3. ಕರ್ಣಪತ್ರ
4. ಡಾಬು
5. 3 ಪದಕಗಳು
6. ಖಾಸಾಹಾರ
7. ಪಚ್ಚೆಕಂಠೀ (28 ಜಪ ಮಣಿ)
8. ರುಂಡಮಾಲ
9. ಜಡೆಸರ
10. ಜಡೆಬಿಲ್ಲೆ

**ಒಡೆಯರ್ ಬಳಿ ಇರುವ ಆಭರಣಗಳು**

1. ವಜ್ರಖಚಿತ ತ್ರಿಶೂಲ
2. ಪಾನ ಪಾತ್ರ ಹಸ್ತ
3. ನಾಗಹಸ್ತ ಕವಚ
4. ಘಂಟಾ ಹಸ್ತ ಕವಚ
5. ಕಳಶ
6. ಡಮರುಗ ಹಸ್ತ
7. ಖಡ್ಗ ಹಸ್ತ
8. ಕೇಟ ಹಸ್ತ(ಭರ್ಜಿ)

ಈ ಮೇಲಿನ ಆಭರಣಗಳಲ್ಲದೇ ಚಾಮುಂಡೇಶ್ವರಿಗೆ ತೊಡಿಸುವ ನೂರಾರು ಆಭರಣಗಳು ಇವೆ ಎಂದು ತಿಳಿದುಬಂದಿದೆ.[18]

**ತ್ರೀನಯನೇಶ್ವರ :** ಶಿವರಾತ್ರಿಯ ಪ್ರಯುಕ್ತ ಶಿವಲಿಂಗಕ್ಕೆ ಚಿನ್ನದ ಕೊಳಗ ತೊಡಿಸಿ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ಜಿಲ್ಲಾ ಖಜಾನೆಯಲ್ಲಿದ್ದ 11ಕೆಜಿ ತೂಕದ ಕೊಳಗವನ್ನು ರಾಜ ಮನೆತನದವರು ಈ ದೇವಾಲಯಕ್ಕೆ ನೀಡಿರುವುದಾಗಿ ತಿಳಿದು ಬರುತ್ತದೆ.

**ಮೈಸೂರು ಕರಗ :** ಚಾಮುಂಡೇಶ್ವರಿ ಹಾಗೂ ಮಾರಮ್ಮ ತಾಯಿಯರ ಪ್ರತೀಕವಾದ ಕರಗಗಳಿಗೆ ಪ್ರತಿಷ್ಠಾಪಿಸುವ ಬೆಳ್ಳಿಯ ಎರಡು ಮುಖವಾಡಗಳು ತಲಾ ಕಾಲು ಕೆಜಿ ತೂಕ ಹೊಂದಿವೆ. ಇವುಗಳನ್ನು ಮೈಸೂರಿನ ಅಂದಿನ ಮಹಾರಾಜ ಜಯಚಾಮರಾಜ ಒಡೆಯರ್ ಕೊಡುಗೆಯಾಗಿ ನೀಡಿದ್ದಾರೆ. ಉತ್ಸವ ಮುಗಿದ ಮೇಲೆ ಬೆಳ್ಳಿ ಮುಖವಾಡಗಳು ಸೇರಿದಂತೆ ಕರಗಗಳಿಗೆ ಹಾಕಲಾಗುವ ಚಿನ್ನಾಭರಣಗಳನ್ನು ಬ್ಯಾಂಕ್ ಲಾಕರ್‌ನಲ್ಲಿ ಇಡಲಾಗುತ್ತದೆ ಎಂದು ದೇವಸ್ಥಾನದ ಟ್ರಸ್ಟ್‌ನ ಧರ್ಮದರ್ಶಿ ಪಿ.ಸಂಪತ್ ತಿಳಿಸಿದರು.

ಜಯಲಕ್ಷ್ಮೀಪುರಂನಲ್ಲಿರುವ ಮೇಲುಕೋಟೆಯ ಯದುಗಿರಿ ಯತಿರಾಜ ಮಠದ ಶಾಖಾ ಮಠದಲ್ಲಿರುವ ಶ್ರೀಲಕ್ಷ್ಮೀನರಸಿಂಹಸ್ವಾಮಿ ದೇವರಿಗೆ ಬೆಂಗಳೂರಿನ ಖ್ಯಾತ ಉದ್ಯಮಿ ರಾಜೇಶ್ ಮಾಡ್ಯಂರವರು 'ಮಾತ್ತಂಗಿ'(ಮುತ್ತಿನ ಕವಚ)ಸಮರ್ಪಿಸಿದ್ದಾರೆ.[19]

**ವಜ್ರಾಂಗಿ ಆಭರಣ :** ಒಂಟಿಕೊಪ್ಪಲಿನ ಶ್ರೀ ಲಕ್ಷ್ಮಿವೆಂಕಟರಮಣಸ್ವಾಮಿ ದೇವಸ್ಥಾನಕ್ಕೆ ಮೈಸೂರಿನ ಭಕ್ತರೊಬ್ಬರು ವಜ್ರಾಂಗಿ ಆಭರಣವನ್ನು ಸಮರ್ಪಿಸಿದ್ದಾರೆ. ನವರಾತ್ರಿಯ ಉತ್ಸವದ ಅಂಗವಾಗಿ ಈ ಆಭರಣವನ್ನು ಶ್ರೀ ಲಕ್ಷ್ಮಿ ವೆಂಕಟರಮಣಸ್ವಾಮಿಗೆ ಧಾರಣೆ ಮಾಡಲಾಗಿತ್ತು.

ವಜ್ರಾಂಗಿ ಆಭರಣದ ಅಲಂಕಾರದಲ್ಲಿ ಹೊಳೆಯುತ್ತಿದ್ದ ದೇವರನ್ನು ನೋಡಲು ಭಕ್ತಾದಿಗಳ ದಂಡೇ ದೇವಸ್ಥಾನಕ್ಕೆ ಆಗಮಿಸಿತ್ತು. ಮೈಸೂರಿನ ಹೆಸರಾಂತ ಎಂ.ಬಿ.ಸಿ ಪ್ರೈವೇಟ್ ಸಂಸ್ಥೆ ಹೆಸರಿನಲ್ಲಿ ಅದರ ಮುಖ್ಯಸ್ಥರು ದೇವರಿಗೆ ವಜ್ರಖಚಿತ ವಜ್ರಾಂಗಿ ಆಭರಣವನ್ನು ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿ ಟ್ರಸ್ಟ್‌ಗೆ ಹಸ್ತಾಂತರಿಸಿದರು. ತಮ್ಮ ಅಥವಾ ತಮ್ಮ ಕುಟುಂಬದ ಹೆಸರನ್ನು ಪ್ರಚಾರ ಮಾಡಲು ದಾನಿಗಳು ಇಚ್ಚಿಸಲಿಲ್ಲ. ಅಂದು ದಾನಿಗಳ ಕುಟುಂಬವರ್ಗದಿಂದ ವಿಶೇಷ ಪೂಜೆ ನಡೆಯಿತು. ವಜ್ರದ ಹರಳು ಬಳಸಿ ತಯಾರಿಸಿರುವ ವಜ್ರಾಂಗಿ ಆಭರಣವನ್ನು ತಂಜಾವೂರಿನ ಕೌಶಲ್ಯಯುತ ಕಲಾವಿದರ ಮೂಲಕ ವಿನ್ಯಾಸಗೊಳಿಸಿ ಮೈಸೂರಿನ ಲಲಿತ ಜ್ಯುವೆಲ್ಲರಿ ಮಾರ್ಟ್‌ನವರು ಸಿದ್ಧಪಡಿಸಿದ್ದಾರೆ ಎಂದು ತಿಳಿದುಬಂದಿದೆ. ತಿರುಪತಿಯ ಶ್ರೀವೆಂಕಟೇಶ್ವರ ದೇವಸ್ಥಾನ, ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀವೆಂಕಟೇಶ್ವರ ದೇವಸ್ಥಾನ ಹಾಗೂ ಬೆಂಗಳೂರಿನ ಇಸ್ಕಾನ್ ದೇವಸ್ಥಾನಗಳನ್ನು ಹೊರತು ಪಡಿಸಿದರೆ ರಾಜ್ಯದ ಬೇರೆಯಾವ ದೇವಸ್ಥಾನಗಳಲ್ಲೂ ವಜ್ರಾಂಗಿ ಆಭರಣ ಅಲಂಕಾರದ ವ್ಯವಸ್ಥೆ ಇಲ್ಲ ಎನ್ನುತ್ತಾರೆ ಶ್ರೀಲಕ್ಷ್ಮೀವೆಂಕಟರಮಣಸ್ವಾಮಿ ದೇವಸ್ಥಾನದ ಅರ್ಚಕ ಶ್ರೀನಿವಾಸರವರು.

ವಜ್ರಾಂಗಿ ಆಭರಣ ನೀಡಿರುವ ಭಕ್ತರೇ ಈ ಹಿಂದೆ ಸ್ವಾಮಿಗೆ ಝೇಂಕರಿಸುವ ಬೃಹದಾಕಾರದ ಘಂಟೆ ಹಾಗೂ ಚಿನ್ನ-ಬೆಳ್ಳಿ ಆಭರಣಗಳನ್ನು ಸಮರ್ಪಿಸಿದ್ದರಾದರೂ ಅವರ ಹೆಸರನ್ನು ಹೇಳಿಕೊಳ್ಳಲಿಚ್ಚಿಸುವುದಿಲ್ಲ ಎಂದೂ ಶ್ರೀನಿವಾಸ ಅರ್ಚಕರು ತಿಳಿಸಿದರು. ಬ್ರಹ್ಮೋತ್ಸವ, ರಥೋತ್ಸವ ಸೇರಿದಂತೆ ವಿಶೇಷ ದಿನಗಳಂದು ಈ ಆಭರಣವನ್ನು ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿಗೆ ಧಾರಣೆ ಮಾಡಲಾಗುತ್ತದೆ.

**ವಸ್ತ್ರಗಳು** : ವಸ್ತ್ರಗಳು ಬಹಳ ಪ್ರಾಚೀನತೆಯನ್ನು ಹೊಂದಿದೆ. ಆದಿಮಾನವ ನಾರು, ಬೇರು ತೊಗಟೆಗಳನ್ನೇ ತನ್ನ ವಸ್ತ್ರಗಳನ್ನಾಗಿ ಧರಿಸಿರುವುದುಂಟು. ಮನುಷ್ಯ ದೇಹವನ್ನು ಮುಚ್ಚಿ ಅವನ ಮಾನವನ್ನು ಉಳಿಸುವ ಸಾಧನವಾಗಿ ವಸ್ತ್ರವನ್ನು ಧಾರಣೆ ಮಾಡಿಕೊಳ್ಳಲಾಗಿದೆ. ಅಲ್ಲದೆ ವಸ್ತ್ರವು ಮಾನವನ ಸೌಂದರ್ಯವನ್ನು ಹೆಚ್ಚಿಸುವಲ್ಲಿಯು ವಿವಿಧ ವಸ್ತ್ರಾಲಂಕಾರಗಳಿಂದಲು ಸಾಧ್ಯವಾಗಿದೆ. ಬಟ್ಟೆ, ಅರಿವೆ ಇವು ಇದರ ಪರ್ಯಾಯ ನಾಮಗಳು. ಬಟ್ಟೆಯನ್ನು ಹತ್ತಿ, ರೇಷ್ಮೆ ಮುಂತಾದ ವಸ್ತುಗಳಿಂದ ನಯನಾಜುಕಾಗಿ ತಯಾರಿಸಲಾಗುತ್ತದೆ.

ಮಾನವನಂತೆ ತಾವು ಭಕ್ತಿಯಿಂದ ನಡೆದುಕೊಳ್ಳುವ ದೇವರಿಗೂ ವಸ್ತ್ರಗಳನ್ನು ತೊಡಿಸುವುದನ್ನು ಹಿಂದಿನಿಂದಲೂ ರೂಢಿಸಿಕೊಂಡು ಬಂದಿದ್ದಾನೆ. ಆದರೆ ದೇವರಿಗೆ ವಸ್ತ್ರಗಳನ್ನು ನೀಡಿರುವ ಬಗ್ಗೆ ಹೆಚ್ಚಿನ ಮಾಹಿತಿಗಳು ಲಭ್ಯವಿಲ್ಲ. ಇಂದು ಗಂಡು ದೇವರುಗಳಿಗೆ ಪಂಚೆ ಶಲ್ಯ ಟವೆಲ್‌ಗಳನ್ನು, ಹೆಣ್ಣು ದೇವರುಗಳಿಗೆ ಸೀರೆ ರವಿಕೆ ಮುಂತಾದ ವಸ್ತ್ರಗಳಿಂದ ಅಲಂಕರಿಸುತ್ತಾರೆ.

ದೇವರಿಗೆ ಈ ಹಿಂದೆ ನೀಡಿರುವ ವಸ್ತ್ರಗಳಬಗ್ಗೆ ಶಾಸನಗಳಲ್ಲಿ ಉಲ್ಲೇಖಿಸಲಾಗಿಲ್ಲ. ಆದರೂ ಆ ಕಾಲದಲ್ಲಿ ದೇವರಿಗೆ ಮಡಿಯಾದ ರೇಷ್ಮೆಯ ವಸ್ತ್ರವನ್ನು ನೀಡುವ ಪದ್ಧತಿ ಚಾಲ್ತಿಯಲ್ಲಿತ್ತು ಎಂದು ತಿಳಿದು ಬರುತ್ತದೆ. ವಸ್ತ್ರಾಧಾರಣೆ ಮಾಡುವುದು ಸಹಜವಾದ ಪ್ರಕ್ರಿಯೆಯಾಗಿದ್ದು, ವಸ್ತ್ರಗಳನ್ನು ಭಕ್ತರು ಹರಕೆಯ ರೂಪದಲ್ಲಿ ಸಮರ್ಪಿಸುತ್ತಿದ್ದರು. ಉದಾಹರಣೆಗೆ: ರೇಷ್ಮೆ ಸೀರೆ, ರೇಷ್ಮೆ ಪಂಚೆ ಕೊಡಿಸುವುದಾಗಿ ಅಲ್ಲದೆ ಅದರ ಮೌಲ್ಯವನ್ನು ಮೊದಲೇ ನಿರ್ಧರಿಸಲಾಗಿರುತ್ತದೆ. 5,00, 1,000, 2,000, 5,000, 10,000 ಹೀಗೆ ಅವರ ಸಾಮರ್ಥ್ಯಕ್ಕೆ ತಕ್ಕಂತೆ ವಸ್ತ್ರಗಳನ್ನು ಕೊಡಿಸುವ ಹರಕೆ ಹೊರುತ್ತಾರೆ.

**ಕನ್ನಡಿ :** ದೇವರ ಉತ್ಸವಾದಿಗಳಲ್ಲಿ ಬಳಸುವ ಒಂದು ಮಂಗಳ ವಸ್ತುವಾಗಿರುವಂತೆಯೇ ದೈನಂದಿನ ಬದುಕಿನಲ್ಲಿ ಅತ್ಯಗತ್ಯವಾಗಿರುವ ನಿತ್ಯ ಬಳಕೆಯ ವಸ್ತುವಾಗಿದೆ. ಇಂದಿಗೂ ಮುತ್ತೈದೆಯರಿಗೆ ಬಾಗಿನ ಕೊಡುವಾಗ, ದೇವರಿಗೆ ಕಳಸವಿಡುವಾಗ, ಮದುವೆಗಳಲ್ಲಿ ಕಳಸದ ಜೊತೆಯಾಗಿ ಕನ್ನಡಿಯ ಪ್ರಸ್ತಾಪವೂ ಬಹಳವಾಗಿ ಬರುವುದನ್ನು ಗಮನಿಸಬಹುದು.

ಕಳಸ ಕನ್ನಡಿ ಬಂದೋ
ಪೂಜೆಗೆ ಮಡಿ ಬಂದೋ
ತಾಯಿ ಚಾಮುಂಡಿಯ ಗುಡಿಯ ಮುಂದೆ ಬಾಳೆ ಬಾಗಿದವೊ

ಎಂಬ ಜನಪದ ಗೀತೆಯೊಂದರಲ್ಲಿ ಕಳಸದೊಂದಿಗೆ ಕನ್ನಡಿಯ ಪ್ರಸ್ತಾಪ ಶುಭದ ಸಂಕೇತವಾಗಿ ಬರುತ್ತದೆ.

ಎಲ್ಲಾ ದೇವಾಲಯಗಳಲ್ಲಿ ಗರ್ಭಗುಡಿಯ ದೇವರು ಗರ್ಭಗುಡಿಗೆ ಎದುರಾಗಿರುವ ಕನ್ನಡಿಯಲ್ಲಿ ಕಾಣುವಂತೆ ಕನ್ನಡಿಯನ್ನು ಅಳವಡಿಸಲಾಗಿರುತ್ತದೆ. ಇದು ಜನಪದರ ಶುಭ ಸಂಕೇತ ಹಾಗೂ ದೇವರ ನೇರ ದೃಷ್ಟಿಗೆ ಒಳಗಾಗ ಬಾರದು ದೇವರು ತನ್ನ ದೃಷ್ಟಿಯನ್ನು ಕನ್ನಡಿಯ ಮೂಲಕ ಬೀರಲಿ ಎಂದು ಇರಬಹುದು. ದೇವರು ಕೋಪಗೊಂಡಾಗ ಭಕ್ತರ ಮೇಲೆ ನೇರ ದೃಷ್ಟಿ ಬೀರಬಾರದೆಂದು ಇರಬಹುದು ಹಾಗೂ ಭಕ್ತರು ಹೊರ ಹೋಗುವಾಗ ಕನ್ನಡಿಯಲ್ಲಿ ನೋಡಲಿ ಎಂದು ಇರಬಹುದಾಗಿದೆ.

## 4.7 ದೇವರ ವಾಹನಗಳು

ಮಾನವ ತಾನು ಓಡಾಡಲು ವಾಹನವನ್ನು ಬಳಸಿದಂತೆ, ದೇವರಿಗೂ ಜಾತ್ರೆ, ಉತ್ಸವ, ಹಬ್ಬಗಳಂದು ಮೆರವಣಿಗೆ ಮಾಡಲು ವಾಹನಗಳನ್ನು ಮಾಡಿಕೊಂಡಿದ್ದಾನೆ. ಅವುಗಳನ್ನೇ ದೇವರ ವಾಹನಗಳು ಎಂದು ಕರೆಯಲಾಗುತ್ತದೆ.

**ಪಾರಂಪರಿಕ ದೇವಾಲಯಗಳಲ್ಲಿ ತೇರು**

ತೇರನ್ನು 'ರಥ' ಎಂದೂ ಕರೆಯುವುದಿದೆ ರಥೋತ್ಸವ ಎಂಬ ಅರ್ಥದಲ್ಲೂ ತೇರಿನ ಉತ್ಸವವನ್ನು ಕರೆಯಲಾಗುತ್ತದೆ. ಸಾಮಾನ್ಯವಾಗಿ ದೇವರ ವಾರ್ಷಿಕ ಉತ್ಸವ ಸಮಾರಂಭಗಳಲ್ಲಿ ಉತ್ಸವಮೂರ್ತಿಯನ್ನು ಕೂರಿಸಿ ಮೆರವಣಿಗೆ ಮಾಡಲು ಬಳಸುವ ನಾಲ್ಕುಚಕ್ರದ ಸಾಲಂಕೃತ ವಾಹನವೇ ತೇರು ಅಥವಾ ರಥವಾಗಿದೆ. ಕಲ್ಲಿನಿಂದ ರಚಿಸಲ್ಪಟ್ಟ ರಥಗಳು ಬಹಳ ಹಿಂದಿನವು ಇಂದಿಗೂ ದೇವಾಲಯಗಳಲ್ಲಿ ಉಳಿದುಕೊಂಡಿವೆ. ಉತ್ಸವಗಳಲ್ಲಿ ಎಳೆಯುವ ರಥಗಳನ್ನು ಹಿಂದಿನಂತೆ ಇಂದಿಗೂ ಮರದಿಂದ ಮಾಡುವುದೇ ವಾಡಿಕೆಯಾಗಿದೆ.

**ತೇರಿನ ಪರಿಕಲ್ಪನೆ :** ಮಾನವ ವಾಸಮಾಡಲು ಮನೆಯನ್ನು ನಿರ್ಮಾಣ ಮಾಡಿಕೊಂಡಂತೆ ದೇವರಿಗೆ ಗುಡಿಗಳು, ದೇವಾಲಯಗಳನ್ನು ನಿರ್ಮಿಸಿದ. ತಾನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೋಗಲು, ತನ್ನ ವಸ್ತುಗಳನ್ನು ಸಾಗಿಸಲು ಅನುಕೂಲವಾಗಲೆಂದು ಸಾರಿಗೆ ವ್ಯವಸ್ಥೆಯನ್ನು ಕಂಡುಕೊಂಡ. ತಾನು ವಾಹನದ ಮೇಲೆ ಕುಳಿತಾಗ ಅಪಾಯಗಳು ಸಂಭವಿಸಬಾರದೆಂದು ದೇವರಿಗೂ ವಾಹನದ ಕಲ್ಪನೆಯನ್ನು ಮಾಡಿದುದರ ಫಲವೆ ತೇರಿನ ಉಗಮಕ್ಕೆ ಕಾರಣವಾಯಿತು. ಪ್ರಾಣಿ–ಪಕ್ಷಿಗಳು, ಮನುಷ್ಯರು ಅಲ್ಲದೇ ಮಾನವ ನಿರ್ಮಿಸಿದ ಕಲ್ಲಿನ, ಮರದ ತೇರು, ಪಲ್ಲಕ್ಕಿ, ರಥ, ತೆಪ್ಪಗಳು ದೇವರ ವಾಹನಗಳಾದವು. ದೇವರು ಯಾವಾಗಲೂ ತನಗಿಂತ ಮೇಲೆ ಇರಬೇಕೆಂದು ಎತ್ತರದ ಸ್ಥಳಗಳಲ್ಲಿ ಕೂರಿಸಿ ಮೆರವಣಿಗೆ ಮಾಡತೊಡಗಿದ. ಹೀಗೆ ದೇವರಿಗೆ ಎತ್ತರದ ಸ್ಥಾನ ಕಲ್ಪಿಸಲು ತೇರಿನ ಉಗಮವಾಗಿದೆ.

**ತೇರಿನ ರಚನೆ :** ತೇರಿನ ರಚನಾಕಾರ್ಯಕ್ಕೂ ಮೊದಲು ಅದರ ನಕ್ಷೆಯನ್ನು ತಯಾರಿಸಿಕೊಳ್ಳುವ ಪ್ರತೀತಿ ಇದೆ. ತೇರನ್ನು ಹೇಗೆ ರಚಿಸಬೇಕು, ಎಷ್ಟು ಅಡಿ ಎತ್ತರವಾಗಿರಬೇಕು, ಎಷ್ಟು ಅಡಿ ಅಗಲವಾಗಿರಬೇಕು ಎಂಬುದರ ವಿವರ ಇತ್ಯಾದಿಗಳನ್ನು ಶಿಲ್ಪಿ ಕಾಗದದ ಮೇಲೆ ಪೆನ್ಸಿಲ್(ಸೀಸದಕಡ್ಡಿ), ಅಥವಾ ಕಪ್ಪು ಮಸಿಯಿಂದ ನಕ್ಷೆಯನ್ನು ಬರೆಯುತ್ತಾನೆ. ಕೆಲವು ಕಡೆಗಳಲ್ಲಿ ಮರಗೆಲಸ ಮಾಡುವ ಆಚಾರಿಯೇ ಈ ಕೆಲಸವನ್ನು ಸಂಭಾವನೆ ಪಡೆಯದೆಯೇ ದೇವರ ಕಾರ್ಯಕ್ಕೆ ನನ್ನದು ಸಹಾಯ ಹಸ್ತ ಸಲ್ಲಲಿ ಎಂದು ಮಾಡಿಕೊಡುವುದುಂಟು. ಮತ್ತೆ ಕೆಲವು ಕಡೆಗಳಲ್ಲಿ ಶಿಲ್ಪಿಯನ್ನು ಗುರುತಿಸಿ ಕರೆತರುವಾಗ ಕುಶಲಕರ್ಮಿ, ಕಟ್ಟಡಶಿಲ್ಪಿ, ಪ್ರತಿಮಾಶಿಲ್ಪಿ, ಆಗಮಗಳಲ್ಲಿನ ವಿವರಗಳೆಲ್ಲವನ್ನು ಬಲ್ಲವನಾಗಿದ್ದು ಈ ಹಿಂದೆ ಯಾವುದಾದರು ದೇವಾಲಯಕ್ಕೆ ಉತ್ತಮವಾದ ತೇರನ್ನು ಮಾಡಿ ಪ್ರಸಿದ್ಧಿ ಪಡೆದಿರುವವರನ್ನೇ ಆಯ್ಕೆ ಮಾಡಿ ಕರೆತರಲಾಗುತ್ತದೆ.

ತೇರಿನ ತಯಾರಿಕೆಯ ಕಾರ್ಯ ಪ್ರಾರಂಭಿಸಿದಾಗಿನಿಂದ ಅದು ತಯಾರಾಗುವವರೆಗೂ ಸಾಂಪ್ರದಾಯಿಕವಾಗಿ ನಡೆದುಕೊಳ್ಳಲಾಗುತ್ತದೆ.

ತೇರಿನ ತಯಾರಿಕೆಗೆ ಬೇಕಾದ ಮರಗಳನ್ನು ಹಿರಿಯ ಸಸ್ಯ ಶಾಸ್ತ್ರಜ್ಞರೊಂದಿಗೆ, ಶಿಲ್ಪಿಗಳು, ದೇವಾಲಯದವರು ಹಾಗೂ ಊರಿನ ಮುಖಂಡರುಗಳು ಒಗ್ಗೂಡಿ ಅರಣ್ಯವನ್ನು ಸುತ್ತಾಡಿ ಯೋಗ್ಯವಾದ ಸಾಗುವಾನಿ, ಜಾಲಿ, ಹೊನ್ನೆ, ಮತ್ತಿ, ಬೇವು ಮುಂತಾದ ಮರಗಳನ್ನು ಆಯ್ಕೆಮಾಡಿಕೊಂಡು ಅವುಗಳಿಗೆ ಶಾಸ್ತ್ರೋಕ್ತವಾದ ವಿಧಿವಿಧಾನಗಳಿಂದ ಪೂಜಾಕೈಂಕರ್ಯಗಳನ್ನು ನೆರವೇರಿಸಿದ ನಂತರವೇ ಮರಗಳನ್ನು ಕಡಿಯುವ ಪ್ರಕ್ರಿಯೆ ಪ್ರಾರಂಭಿಸಿ ಉಪಾಯದಿಂದ ಮೃದುವಾಗಿ ಧರೆಗೆ ಉರುಳಿಸುತ್ತಾರೆ ಆ ಮರಗಳು ಮುರಿಯದಂತೆ, ಬಿದ್ದರಬಸಕ್ಕೆ ಇಬ್ಭಾಗವಾಗದಂತೆ ಎಚ್ಚರವಹಿಸಲಾಗುತ್ತದೆ. ಮುಖ್ಯ ಶಿಲ್ಪಿಯೊಂದಿಗೆ ಸಹಾಯಕ್ಕೆ ಹಲವಾರು ಶಿಲ್ಪಿಗಳು ನೆರವಿಗಿರುತ್ತಾರೆ. ಮುಖ್ಯಶಿಲ್ಪಿಯ ಮಾರ್ಗದರ್ಶನದ ಮೇರೆಗೆ ಉಳಿದವರು ಕೆಲಸ ನಿರ್ವಹಿಸುತ್ತಾರೆ. ಗರಗಸ, ಉಜ್ಜುಗೊರಡು, ನಾನಾ ತರಹದ ಚಾಣ, ಮೊಳೆ, ತಿರುಗುಮೊಳೆಗಳಿಂದ ವಿನ್ಯಾಸ, ರಚನೆ, ಕಲಾ ಕೌಶಲ್ಯಗಳೊಟ್ಟಿಗೆ ಅಲಂಕಾರಗೊಂಡ ತೇರುಗಳು ಎಲ್ಲರ ಕಣ್ಮನಗಳನ್ನು ಕೋರೈಸುತ್ತವೆ. ಆದುದರಿಂದ ತೇರು ಕೆತ್ತುವ ಮತ್ತು ಕಟ್ಟುವ ಶಿಲ್ಪಿಯ ಕೆಲಸ ಲಲಿತ ಕಲೆಗಳಲೊಂದೆನಿಸಿದೆ.

ಜನಪದರಲ್ಲಿ ಶಕುನ ಅಪಶಕುನಗಳಲ್ಲಿ ನಂಬಿಕೆಯಿದ್ದುದರಿಂದ ತೇರು ರಚನೆಯ ಸಮಯದಲ್ಲಿ ಯಾವುದೇ ರೀತಿಯ ಅನಿಷ್ಟ ಘಟನೆಗಳು ನಡೆಯದೇ ಇರುವಂತೆ ನೋಡಿಕೊಳ್ಳುತ್ತಾರೆ. ಒಂದುವೇಳೆ ಏನಾದರೂ ಅಂತಹ ಘಟನೆಗಳು ನಡೆದುದೇ ಆದಲ್ಲಿ ಊರಿಗೆ, ಊರಿನ ಜನರಿಗೆ ಏನೋ ಕೆಟ್ಟದಾಗುತ್ತದೆ ಎಂಬ ನಂಬಿಕೆಯಿಂದ ಸ್ವಲ್ಪ ದಿನಗಳವರೆಗೆ ರಚನಾಕಾರ್ಯವನ್ನು ಸ್ಥಗಿತಗೊಳಿಸಿ, ತದನಂತರ ಕೆಲದಿನಗಳಲ್ಲಿಯೇ ಪುನಃ ಊರದೇವರಿಗೆ ತಪ್ಪು ಕಾಣಿಕೆಗಳನ್ನು ಕಟ್ಟಿಕೊಂಡು ಪೂಜೆ ಪುನಸ್ಕಾರಗಳನ್ನು ನೆರವೇರಿಸಿ ಕೆಟ್ಟ ಘಟನೆಗಳು ನಡೆಯದಿರಲೆಂದು ದೇವರಲ್ಲಿ ಪ್ರಾರ್ಥಿಸಿ, ತೇರಿನ ರಚನಾಕಾರ್ಯವನ್ನು ಮುಂದುವರೆಸಲಾಗುತ್ತದೆ. ಅಮವಾಸ್ಯೆಯ ದಿನಗಳಂದು ಮಾತ್ರ ರಚನಾಕಾರ್ಯ ಮಾಡುವುದಿಲ್ಲ.

ತೇರುಗಳಲ್ಲಿ ಚೌಕ, ಅಷ್ಟಮ, ನಕ್ಷತ್ರ, ಕಮಲ, ದ್ವಾದಸ, ವರ್ತುಲಾಕೃತಿ ಮುಂತಾದ ಬಗೆ ಬಗೆಯ ರಚನೆಗಳು ರೂಢಿಯಲ್ಲಿದ್ದು, ದೇವಸ್ಥಾನದ ಶಿಖರ ಮಾದರಿಯಲ್ಲಿರುತ್ತದೆ. ರಚನಾಕಾರ್ಯವು ಯಾವಾಗಲು ಕೆಳಭಾಗದಿಂದ ಮೇಲ್ಭಾಗಕ್ಕೆ ಒಂದೊಂದು ಅಂತಸ್ತುಗಳಲ್ಲಿ ನಡೆಯುತ್ತದೆ. ದೇವರು ಮತ್ತು ದೇವಾಲಯಗಳಿಗೆ ಅನುಗುಣವಾಗಿ ತೇರನ್ನು ನಿರ್ಮಿಸಲಾಗುತ್ತದೆ.

ತೇರಿನ ಗಾಲಿಗಳು ಸಾಮಾನ್ಯವಾಗಿ ಬಹಳ ದಪ್ಪವಾದ ಮರದ ಧಿಮ್ಮಿಗಳಿಂದ ಮಾಡಿದ್ದಾಗಿರುತ್ತದೆ ಅವು ಆಕೃತಿಯಲ್ಲಿ, ಗಡಸುತನದಲ್ಲಿ ಒಡ್ಡರಬಂಡಿಯ ಗಾಲಿಗಳನ್ನು ಹೋಲುತ್ತವೆ. ಈ ಹಿಂದೆ ಗಾಲಿಗಳನ್ನು ಒಂದೇ ದೊಡ್ಡ ಮರದ ದಿಮ್ಮಿಯಿಂದ ತಯಾರಿಸಲಾಗುತ್ತಿತ್ತು.

ಆದರೆ ಇಂದು ಹಲವು ದಿಮ್ಮಿಗಳನ್ನು ಜೋಡಿಸಿ ಗಾಲಿಗಳನ್ನು ತಯಾರಿಸಿ ಅದರ ಸುತ್ತಲು ಕಬ್ಬಿಣದ ಪಟ್ಟಿಯನ್ನು ಅಥವಾ ಕಬ್ಬಿಣದ ಬಳೆಗಳನ್ನು ಗಾಲಿಯ ಸುತ್ತಲು ಜೋಡಿಸಿ ಬೆಸುಗೆ ಮಾಡಲಾಗುತ್ತದೆ. ಹೀಗೆ ಮಾಡುವುದರಿಂದ ಚಕ್ರವು ಬಹಳ ಕಾಲದವರೆಗೆ ಬಾಳಿಕೆಗೆ ಬರುತ್ತದೆ. ತೇರಿನ ಹೊರಮೈಸುತ್ತಲೂ ನಂಬಿಕೆ ಹಾಗೂ ಆಚರಣೆಗಳಿಗೆ ಸಂಬಂಧಿಸಿದಂತೆ ವಿವಿಧ ಆಕೃತಿಗಳೂ, ಚಿತ್ರಗಳೂ ಕೆತ್ತಲ್ಪಡುತ್ತವೆ. ಅವುಗಳಲ್ಲಿ ಪಂಚತಂತ್ರಕಥೆ, ನವಗ್ರಹ, ದಶಾವಾತಾರ, ಪುರಾಣೇತಿಹಾಸ, ಕಾಮಶಾಸ್ತ್ರ, ಕಿನ್ನರ, ದ್ವಾರಪಾಲಕ, ಗಂಧರ್ವ, ದೇವತೆ, ಮನುಷ್ಯ, ಸ್ತ್ರೀಮೂರ್ತಿ, ದಂಪತಿ ವಿಗ್ರಹ, ಗಜಸಿಂಹ, ಕುಂಜರ, ಸಿಂಹ, ಮೊಸಳೆ, ಶರಭ, ಮಕರ, ನಾಗ, ಹನುಮಂತ, ಗರುಡ, ಪ್ರಾಣಿಪಕ್ಷಿಗಳು, ನಂದಿ, ಲತೆ, ನೇಗಿಲು ಹೀಗೆ ಮುಂತಾದ ಬಗೆಯ ಕುಸುರಿ ಕೆತ್ತನೆ ಮಾಡಲಾಗುತ್ತದೆ. ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ, ಕೃಷ್ಣಾವತಾರದ ಬಗೆಗಳನ್ನು ಅಲ್ಲಲ್ಲಿ ಕಾಣುತ್ತೇವೆ.

ತೇರು ಹೆಚ್ಚು ಕಾಲ ಬಾಳಿಕೆ ಬರುವಂತೆ ಮಾಡಲು ಕಟ್ಟಿಗೆ ಎಣ್ಣೆ, ಹೊಂಗೆ ಎಣ್ಣೆ, ಬೇವಿನ ಎಣ್ಣೆ ಬಳಿಯುವುದು ರೂಢಿಯಲ್ಲಿತ್ತು. ಇತ್ತೀಚೆಗೆ ಫ್ರೆಂಚ್ ವಾರ್ನಿಷ್ ಬಳಸಲಾಗುತ್ತಿದೆ. ಇದರಿಂದ ಬಹಳ ಹೊಳಪು ಬರುತ್ತದೆ. ಅಲ್ಲದೆ ತೇರಿನ ಹೊರಮೈಗೆ ಬೆಳ್ಳಿಯ(ಹಾಳೆಗಳನ್ನು) ತಗಡುಗಳನ್ನು ಜೋಡಿಸುವ ವಿಧಾನ ಬಳಕೆಯಲ್ಲಿದೆ. ಚಕ್ರಗಳ ಪರಿಧಿಗೆ, ರಂಧ್ರಗಳಿಗೆ ಹಾಗೂ ಪ್ರತಿಯೊಂದು ಜೋಡಣೆಯ ಭಾಗಗಳಲ್ಲಿ ಲೋಹದ ಪಟ್ಟಿಗಳನ್ನು ಸೇರಿಸುವುದರಿಂದ ತೇರನ್ನು ಹೆಚ್ಚು ಬದ್ರತೆಯಿಂದ ಕೂಡಿರುವಂತೆಯೂ, ಬಹಳ ವರ್ಷಗಳ ಕಾಲ ಬಾಳಿಕೆ ಬರುವಂತೆಯೂ ಮಾಡಲಾಗುತ್ತದೆ. ತೇರು ಸುಗಮವಾಗಿ ಸಾಗಲು ಹಾಗೂ ಅದು ದಾರಿಯಲ್ಲಿ ಅತ್ತ ಇತ್ತ ಸರಿದಾಡದಂತೆ ಅದನ್ನು ನಡೆಸಲು ಸನ್ನೆಗೋಲುಗಳನ್ನು ಬಳಸಲಾಗುತ್ತದೆ. ಚಕ್ರದ ಕೆಳಗೆ ಆ ಸನ್ನೆಗೋಲುಗಳನ್ನು ಬಳಸಿ ಸರಿದಾರಿಯಲ್ಲಿ ಸಾಗುವಂತೆ ನೋಡಿಕೊಳ್ಳಲಾಗುತ್ತದೆ. ಅಲ್ಲದೆ ಅದನ್ನು ಬಳಸಲು ಅದರಲ್ಲಿ ನುರಿತವರನ್ನೇ ಹಾಗೂ ಬಲಿಷ್ಠರಾದ ದೇಹಕಾಯವನ್ನು ಹೊಂದಿರುವವರನ್ನೇ ಬಳಸಲಾಗುತ್ತದೆ.

ದೇವರ ಉತ್ಸವ ಆರಂಭವಾಗುವ ಒಂದು ವಾರದ ಮೊದಲೇ ತೇರಿನ ಮೇಲ್ಭಾಗದಲ್ಲಿ ಶೃಂಗಾರದ ಗೋಪುರಗಳನ್ನು ಕಟ್ಟುತ್ತಾರೆ. ಗೋಪುರಗಳನ್ನು ಬಿದಿರು ಅಥವಾ ಅಡಕೆ ಮರದ

ಪಟ್ಟಿಗಳಿಂದ ತಯಾರಿಸಿ ವಿವಿಧ ಬಣ್ಣದ ಬಟ್ಟೆಯ ಪತಾಕೆ(ಬಾವುಟ)ಗಳನ್ನು ಸುತ್ತಲು ಸೇರಿಸುತ್ತಾರೆ. ಬಂಗಾರ, ಬೆಳ್ಳಿ ಅಥವಾ ಹಿತ್ತಾಳೆಯ ಕಳಶವನ್ನು ತುದಿಯಲ್ಲಿ(ನೆತ್ತಿಯಲ್ಲಿ) ಇಡುತ್ತಾರೆ. ತಳಿರುತೋರಣ, ಬಾಳೆಯ ಕಂದು, ಹೂಗಳಿಂದ ಅಲಂಕರಿಸುತ್ತಾರೆ. ಸಾಮಾನ್ಯವಾಗಿ ತೇರಿನ ನೆಲೆ ಸುಮಾರು 20ಅಡಿಗಳಿಂದ 80ಅಡಿ ಎತ್ತರವಾಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ವಿದ್ಯುದೀಪಗಳಿಂದ ತೇರನ್ನು ಅಲಂಕರಿಸುವುದು ರೂಢಿಯಾಗಿದ್ದು ರಾತ್ರಿಯ ವೇಳೆಯಲ್ಲಿ ಆ ಅಲಂಕಾರವನ್ನು ನೋಡುವುದೇ ಒಂದು ಆನಂದವಾದರೇ, ಅದರೊಳಗೆ ಪೂಜಿರುವ ದೇವರನ್ನು ನೋಡುವುದೇ ಕಣ್ಣಿಗೆ ಪರಮಾನಂದ, ಮನಸ್ಸಿಗೆ ಶಾಂತಿ, ನೆಮ್ಮದಿಯ ಭಾವವುಂಟಾಗುತ್ತದೆ. ಉತ್ಸವದ ವಿಗ್ರಹವನ್ನು ತೇರಿನೊಳಗೆ ಕೂರಿಸುವುದಕ್ಕೆ ರಥಾರೋಹಣವೆಂದು ಹೆಸರು. ಪ್ರಮುಖವಾದ ಎಲ್ಲಾ ದೇವಾಲಯಗಳಲ್ಲು ಸಾಮಾನ್ಯವಾಗಿ ತೇರು ಇದ್ದೇ ಇರುತ್ತದೆ.

ಮೈಸೂರು ನಗರದಲ್ಲಿ ಚಾಮುಂಡೇಶ್ವರಿ ದೇವಾಲಯದಲ್ಲಿನ ತೇರು ಪ್ರಮುಖವಾದುದು. ಉಳಿದಂತೆ ಒಂಟಿಕೊಪ್ಪಲಿನ ಶ್ರೀ ವೆಂಕಟೇಶ್ವರ ದೇವಾಲಯದಲ್ಲಿ ಚಿಕ್ಕ ಮರದ ಹಾಗೂ 600ಕೆ.ಜಿ.ಯ ಬೆಳ್ಳಿಯ ರಥವಿದೆ. ವೆಂಕಟರಮಣ ದೇವಾಲಯ ಅಕ್ಬರ ರಸ್ತೆ, ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯ, ಕೃಷ್ಣವಿಲಾಸ ರಸ್ತೆ, ಚಂದ್ರಮೌಳೇಶ್ವರ ದೇವಾಲಯ, ಕೆ.ಇ.ಬಿ.ಸರ್ಕಲ್, ಕೃಷ್ಣಧಾಮ, ಸರಸ್ವತಿಪುರಂ ಇನ್ನು ಮುಂತಾದ ದೇವಾಲಯಗಳಲ್ಲಿ ರಥಗಳಿರುವುದನ್ನು ಗುರುತಿಸಲಾಗಿದೆ. ರಥೋತ್ಸವಗಳ ಬಗ್ಗೆ ದೇವಾಲಯಗಳ ಸಾಮಾಜಿಕ ಸಂಪ್ರದಾಯ ಎಂಬ ಐದನೇ ಅಧ್ಯಾಯದಲ್ಲಿ ವಿವರಿಸಲಾಗಿದೆ.

**ಕೃಷ್ಣಧಾಮ** : ಮೈಸೂರಿನ ಸರಸ್ವತಿಪುರಂನ ಶ್ರೀಕೃಷ್ಣಧಾಮದ ಶ್ರೀಕೃಷ್ಣನಿಗೆ ಭಕ್ತರೆಲ್ಲರೂ ಸೇರಿ ದಕ್ಷಿಣ ಕನ್ನಡದ ಪಾರಂಪರಿಕ ಶೈಲಿಯ ಭವ್ಯಮರದ ರಥವನ್ನು ನಿರ್ಮಿಸಿ ಸಮರ್ಪಿಸಿದ್ದಾರೆ. ಸುಮಾರು ಒಂಬತ್ತು ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಾಣಗೊಂಡು ಹನ್ನೆರಡು ಅಡಿ ಎತ್ತರದ ಈ ರಥವನ್ನು ದಕ್ಷಿಣ ಕನ್ನಡದ ಮೂಡಬಿದಿರೆ ತಾಲೂಕಿನ ಪಳಕಳದಲ್ಲಿ ವಾಸವಾಗಿದ್ದು, ವಂಶ ಪಾರಂಪರ್ಯವಾಗಿ ರಥಶಿಲ್ಪಿಗಳಾಗಿ ನೂರಾರು ರಥಗಳನ್ನು ನಿರ್ಮಿಸಿರುವ ದಿ॥ಪರಮೇಶ್ವರ ಆಚಾರ್ಯರ ಪುತ್ರ ಉಮೇಶ್ ಆಚಾರ್ಯರು ನಿರ್ಮಿಸಿದ್ದಾರೆ. ಈ ರಥದ ಕೆಳಗಿನ ಅರ್ಧಭಾಗವು ಉಡುಪಿಯ ಬ್ರಹ್ಮರಥದ ಮಾದರಿಯಾಗಿದ್ದು, ಅನೇಕ ಕುಸುರಿ ಕೆಲಸಗಳಿಂದ ಅತ್ಯಂತ ಆಕರ್ಷಣೀಯವಾಗಿದೆ. ಮೇಲ್ಭಾಗ ಚಂದ್ರ ಮಂಡಲ ರಥ ಆಕಾರದಲ್ಲಿದ್ದು, ಮೈಸೂರಿಗೆ ಈ ನಮೂನೆ ವಿನೂತನವಾಗಿದೆ. ಶ್ರೀಕೃಷ್ಣ ಲೀಲೋತ್ಸವದ ಪ್ರಯುಕ್ತ ಸರಸ್ವತಿಪುರಂ ಮತ್ತು

ಕುವೆಂಪುನಗರದ ರಾಜಬೀದಿಗಳಲ್ಲಿ ಇದೇ ರಥ ಶ್ರೀಕೃಷ್ಣನನ್ನು ಹೊತ್ತು ಮೆರವಣಿಗೆಯಲ್ಲಿ ಸಾಗುತ್ತದೆ.

**ಪಲ್ಲಕ್ಕಿ** : ಜಾತ್ರೆಗಳಲ್ಲಿ ದೇವರ ಉತ್ಸವ ಮೂರ್ತಿ ಹೊರಡುವುದು ಪಲ್ಲಕ್ಕಿಗಳಲ್ಲಿಯೇ ಇದನ್ನು ಪಲ್ಲಕ್ಕಿ ಸೇವೆ ಅಥವಾ ಹೂವಿನ ಪಲ್ಲಕ್ಕಿ ಎಂದು ಜನಪದರು ಕರೆಯುತ್ತಾರೆ. ಇತ್ತೀಚೆಗೆ ಮುತ್ತಿನ ಪಲ್ಲಕ್ಕಿಯು ಇದಕ್ಕೆ ಸೇರ್ಪಡೆಯಾಗಿದೆ. ಹೂವಿನಿಂದ ಅಲಂಕೃತಗೊಂಡರೆ ಹೂವಿನ ಪಲ್ಲಕ್ಕಿ ಎಂದೂ, ಹೂಗಳನ್ನು ಹೊರತುಪಡಿಸಿ ಕೇವಲ ಮುತ್ತುಗಳಿಂದ ಅಲಂಕಾರಗೊಂಡ ಪಲ್ಲಕ್ಕಿ ಯಾದರೆ ಮುತ್ತಿನ ಪಲ್ಲಕ್ಕಿ ಎಂದೂ ಜನಪದರು ಗುರುತಿಸುತ್ತಾರೆ. ಮೊದಲು ದೇವಸ್ಥಾನದಲ್ಲಿ ಪೂಜಿಸಿ ಉತ್ಸವ ಮೂರ್ತಿಯನ್ನು ಈ ಪಲ್ಲಕ್ಕಿಗಳಲ್ಲಿ ತಂದು ಪೂಜುತ್ತಾರೆ. ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಕರೆದೊಯ್ಯುತ್ತಾರೆ. ಅಲ್ಲಲ್ಲಿ ನಿಂತು ಭಕ್ತರ ಪೂಜೆ ಸ್ವೀಕರಿಸಿ ಹೊರಡುವ ಪಲ್ಲಕ್ಕಿಗಳ ಮುಂದೆ ವಾದ್ಯಗೋಷ್ಠಿಯವರು ಸಾಗುತ್ತಾರೆ. ಮೆರವಣಿಗೆ ಮಾಡಿ ಮತ್ತೆ ಬಂದು ದೇವಸ್ಥಾನದ ಬಳಿ ಸೇರುತ್ತದೆ. ಪಲ್ಲಕ್ಕಿಗಳು ಹೊರಡುವಾಗ ಪಲ್ಲಕ್ಕಿಗಳ ಮುಂದೆ ಸಾವಿರಾರು ಜನರು ನೆರೆದಿದ್ದು ವಿಶೇಷ ಆಕರ್ಷಣೆಗಳಾದ ಕರಡಿಮೇಳ, ನಂದಿಕೋಲು, ಹುಲಿವೇಷ, ಡೊಳ್ಳು, ಕಂಸಾಳೆ, ವೀರಗಾಸೆ ಮುಂತಾದ ನೃತ್ಯಗಳು ನಡೆಯುತ್ತಿರುತ್ತವೆ. ಅಲ್ಲದೆ ದೇವಾಲಯಗಳ ಪ್ರಾಕಾರದಲ್ಲಿ ವಾರಕ್ಕೊಮ್ಮೆಯಾದರೂ ಪಲ್ಲಕ್ಕಿ ಉತ್ಸವ ಅಥವಾ ಸೇವೆ ನಡೆಸುವುದು ರೂಢಿಯಲ್ಲಿದೆ. ಉದಾಹಣೆಗೆ: ಕೃಷ್ಣವಿಲಾಸ ರಸ್ತೆಯ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದ ಪ್ರಾಕಾರದಲ್ಲಿ ಪ್ರತಿ ಗುರುವಾರ ಪಲ್ಲಕ್ಕಿ ಸೇವೆ ನಡೆಸುತ್ತಾರೆ.

**ಸಿಂಹವಾಹನ** : ಸಿಂಹವಾಹನದ ಮೇಲೆ ಉತ್ಸವಮೂರ್ತಿಯನ್ನು ಕೂರಿಸಿ ಮೆರವಣಿಗೆ ಮಾಡುವುದಕ್ಕಾಗಿ ತಯಾರಿಸಿರುವ ಒಂದು ಸಾಧನವನ್ನು 'ಸಿಂಹವಾಹನ' ಎಂದು ಕರೆಯಲಾಗುತ್ತದೆ. ಮೈಸೂರಿನ ಅಧಿದೇವತೆ ಚಾಮುಂಡೇಶ್ವರಿಯ ಜಾತ್ರೆಯಂದು ರಥೋತ್ಸವದ ದಿನ ಸಂಜೆ ಸಿಂಹವಾಹನದ ಮೇಲೆ ಚಾಮುಂಡೇಶ್ವರಿಯ ಉತ್ಸವ ಮೂರ್ತಿಯನ್ನು ಕೂರಿಸಿ ಮೆರವಣಿಗೆ ಮಾಡಲಾಗುತ್ತದೆ. ಅಂತೆಯೆ ಮೈಸೂರು ನಗರದ ಹಲವಾರು ದೇವಾಲಯಗಳಲ್ಲಿ ಸಿಂಹವಾಹನೋತ್ಸವವು ನಡೆಯುತ್ತದೆ ಒಂಟಿಕೊಪ್ಪಲಿನ ಶ್ರೀ ಲಕ್ಷ್ಮಿವೆಂಕಟೇಶ್ವರ ದೇವಾಲಯದಲ್ಲಿ ವೆಂಕಟೇಶ್ವರಸ್ವಾಮಿಗೆ ಸಿಂಹವಾಹನೋತ್ಸವ ನಡೆಸಲಾಗುತ್ತದೆ. ಬೆಟ್ಟದ ಚಾಮುಂಡೇಶ್ವರಿ ದೇವಾಲಯಕ್ಕೆ ಶ್ರಿ ಮುಮ್ಮಡಿ ಕೃಷ್ಣರಾಜ ಒಡೆಯರು 1848ರಲ್ಲಿ ಸಿಂಹವಾಹನವನ್ನು ಕೊಡುಗೆಯಾಗಿ ನೀಡಿರುತ್ತಾರೆ.

**ಹುಲಿವಾಹನ** : ಹುಲಿವಾಹನದ ಮೇಲೆ ಉತ್ಸವಮೂರ್ತಿಯನ್ನು ಕೂರಿಸಿ ಮೆರವಣಿಗೆ ಮಾಡುವುದಕ್ಕಾಗಿ ತಯಾರಿಸಿರುವ ಸಾಧನವನ್ನು ಹುಲಿವಾಹನ ಎಂದು ಕರೆಯಲಾಗುತ್ತದೆ. ಹುಲಿಯು ಮಹದೇಶ್ವರನ ವಾಹನವಾಗಿದೆ. ಕುಂಬಾರಕೊಪ್ಪಲಿನ ಶ್ರೀ ಮಹದೇಶ್ವರ ದೇವರನ್ನು ದೀಪಾವಳಿ ಹಬ್ಬದ ಅಂಗವಾಗಿ ರಥದ ಮೇಲಿರುವ ಹುಲಿವಾಹನದ ಮೇಲೆ ಪ್ರತಿಷ್ಠಾಪಿಸಿ, ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಇದನ್ನು ಮಹದೇಶ್ವರನ ಜಾತ್ರೆ ಎಂದು ಕರೆಯಲಾಗುತ್ತದೆ.

**ಹನುಮವಾಹನ** : ಹನುಮವಾಹನದ ಮೇಲೆ ಉತ್ಸವಮೂರ್ತಿಯನ್ನು ಕೂರಿಸಿ ಮೆರವಣಿಗೆ ಮಾಡುವುದಕ್ಕಾಗಿ ತಯಾರಿಸಿರುವ ಸಾಧನವನ್ನು ಹನುಮವಾಹನ ಎಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಶ್ರೀ ರಾಮನ ದೇವಾಲಯಗಳಲ್ಲಿ ಈ ವಾಹನ ಕಂಡುಬರುತ್ತದೆ. ಹನುಮಂತ ಶ್ರೀ ರಾಮನ ಭಕ್ತನಾಗಿದ್ದಾನೆ. ರಾಮನವಮಿಯಂದು ಜಯನಗರದಲ್ಲಿರುವ ರಾಮಮಂದಿರದಿಂದ ಶ್ರೀ ರಾಮ, ಸೀತೆ, ಲಕ್ಷ್ಮಣರ ಸಮೇತವಾಗಿರುವ ಉತ್ಸವ ಮೂರ್ತಿಯನ್ನು ಹನುಮವಾಹನದಲ್ಲಿ ಪ್ರತಿಷ್ಠಾಪಿಸಿ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡುತ್ತಾರೆ.

**ಹಂಸವಾಹನ** : ಹಂಸವಾಹನದ ಮೇಲೆ ಉತ್ಸವಮೂರ್ತಿಯನ್ನು ಕೂರಿಸಿ ಮೆರವಣಿಗೆ ಮಾಡುವುದಕ್ಕಾಗಿ ತಯಾರಿಸಿರುವ ಸಾಧನವನ್ನು ಹಂಸವಾಹನ ಎಂದು ಕರೆಯಲಾಗುತ್ತದೆ. ಮೈಸೂರಿನ ಪ್ರಸಿದ್ಧ ಚಾಮುಂಡೇಶ್ವರಿ ಜಾತ್ರೆಯ ದಿನದಂದು ಜಾತ್ರೆ ಮುಗಿದ ಮೇಲೆ ಸಂಜೆಯ ವೇಳೆಯಲ್ಲಿ ಹಂಸವಾಹನದಲ್ಲಿ ದೇವಿಯ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ದೇವಾಲಯದ ಪ್ರಾಕಾರದಲ್ಲಿ ಮೂರು ಸುತ್ತು ಮೆರವಣಿಗೆ ಮಾಡಲಾಗುತ್ತದೆ. ಅಂತೆಯೇ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿರುವ ಶ್ರೀ ದತ್ತ ವೆಂಕಟೇಶ್ವರ ದೇವರಿಗೆ ಅಲ್ಲಿಯೇ ಇರುವ ಕೊಳದಲ್ಲಿ ಹಂಸ ಮಾದರಿಯಲ್ಲಿದ್ದ ತೆಪ್ಪದಲ್ಲಿ ಪ್ರತಿಷ್ಠಾಪಿಸಿ ಉತ್ಸವ ನಡೆಸಲಾಯಿತು.

**ಶನಿಯವಾಹನ ಕಾಗೆ** : ಸಾಮಾನ್ಯವಾಗಿ ಶನಿದೇವರ ವಾಹನವಾಗಿ ಕಾಗೆಯನ್ನು ಬಳಸಲಾಗುತ್ತದೆ. ಚಿಕ್ಕದಾದ ರಥಕ್ಕೆ ಶನಿದೇವರು ಕಾಗೆಯನ್ನು ಹೂಡಿ ರಥ ಚಲಾಯಿಸುವಂತೆ ಚಿತ್ರಿಸಲಾಗಿದೆ. ಈ ವಾಹನದ ಮೇಲೆ ಶನಿದೇವರ ಮೆರವಣಿಗೆ ಮಾಡುವುದರಿಂದ ಇದನ್ನು ಶನಿಯ ವಾಹನವೆಂದೆ ಕರೆಯಲಾಗುತ್ತದೆ. ಸಾಮಾನ್ಯವಾಗಿ ಈ ವಾಹನವು ಎಲ್ಲ ಶನಿದೇವರ ದೇವಾಲಯದಲ್ಲಿ ಇರುತ್ತದೆ. ರಾಜೇಂದ್ರನಗರದ ಶನಿದೇವರ ದೇವಾಲಯದಲ್ಲಿ ಹೊಸದಾದ ಬೆಳ್ಳಿಯ ಲೇಪನದಿಂದ ವಿಜೃಂಭಿಸುತ್ತಿರುವ ವಾಹನವಿರುವುದನ್ನು ಕಾಣಬಹುದು.

ಈ ಮೇಲಿನವುಗಳೇ ಅಲ್ಲದೇ ಗರುಡ, ಶೇಷ ಇನ್ನುಮುಂತಾದ ದೇವರ ವಾಹನಗಳನ್ನು ಕಾಣಬಹುದಾಗಿದೆ. ಇತ್ತೀಚಿನ ದಿನಗಳಲ್ಲಿ ಒಂದೇ ವಾಹನಕ್ಕೆ ಸಿಂಹ, ಹುಲಿ, ಹನುಮ, ಹಂಸ, ಗರಡ, ಶೇಷ ಹೀಗೆ ಮುಂತಾದ ಮೂರ್ತಿಗಳನ್ನು ವಾಹನದ ಮುಂಭಾಗಕ್ಕೆ ಅಳವಡಿಸುವ ತಂತ್ರಗಳನ್ನು ಬಳಸಿಕೊಂಡು ಯಾವ ಸಂದರ್ಭಕ್ಕೆ ಹೇಗೆ ಬೇಕೋ ಹಾಗೆ ಬದಲಾಯಿಸಿಕೊಂಡು ಉತ್ಸವಗಳನ್ನು ನಡೆಸುತ್ತಿರುವುದನ್ನು ಗುರುತಿಸಲಾಗಿದೆ. ಉದಾಹರಣೆಗೆ ಒಂದು ಚಿಕ್ಕ ರಥಕ್ಕೆ ಮುಂದೆ ಸಿಂಹದ ಮೂರ್ತಿಯನ್ನು ಅಳವಡಿಸಿದರೆ ಅದು ಸಿಂಹವಾಹನವಾಗುತ್ತದೆ. ಹನುಮ ಮೂರ್ತಿಯನ್ನು ಅಳವಡಿಸಿದರೆ ಹನುಮವಾಹನವಾಗಿಯೂ ಬಳಕೆಯಾಗುತ್ತದೆ. ಕೆಲವೊಂದು ದೇವಾಲಯಗಳಲ್ಲಿ ಪ್ರತ್ಯೇಕವಾಗಿಯೇ ವಾಹನಗಳಿರುವುದನ್ನು ಕಾಣಬಹುದಾಗಿದೆ.

**ಛತ್ರಿ–ಚಾಮರ** : 'ಛತ್ರಿ–ಚಾಮರ' ಎಂಬ ಜೋಡು ಪದಗಳ ಬಳಕೆ ರೂಢಿಯಲ್ಲಿದೆ. ಮರದಿಂದ ಮಾಡಿದ ಕೊಡೆಯಾಕಾರದ ನೆರಳನ್ನು ನೀಡುವ ವಸ್ತು. ಇದನ್ನು ಛತ್ರಿ ಎಂದೂ ಕೂಡ ಕರೆಯುವರು. ಋಷಿಗಳು ಹಾಗೂ ದೇವರ ಉತ್ಸವಗಳಲ್ಲಿ ಈ ಛತ್ರಿ ಹಿಡಿದು ಸಾಗುವುದುಂಟು. ಪುರಾಣಗಳಲ್ಲಿ ಇದರ ಪ್ರಸ್ತಾಪವಿದೆ. ಮೆರವಣಿಗೆಯಲ್ಲಿ ಇವು ಹೆಚ್ಚಿನ ಶೋಭೆಯನ್ನು ತರುವಂತೆ ಇವನ್ನು ಅಲಂಕಾರಗೊಳಿಸಲಾಗಿರುತ್ತದೆ. ವಿವಿಧ ರೂಪದ ಅಳತೆಯ ಛತ್ರಿ–ಚಾಮರಗಳು ಪಾರಂಪರಿಕ ಧಾರ್ಮಿಕ, ಲೌಕಿಕ ಸಂಪ್ರದಾಯಗಳೆರಡರಲ್ಲಿಯೂ ವಿಶೇಷ ಸ್ಥಾನಪಡೆದುಕೊಂಡಿದೆ. ಚಾಮರದ ತುದಿಯಲ್ಲಿ ಗರಿಗಳು ಅಥವಾ ಕೂದಲುಗಳನ್ನುಳ್ಳ ಉದ್ದವಾದ ಒಂದು ದಂಡವಿರುತ್ತದೆ. ಇದಕ್ಕೆ ಚಿನ್ನದ ಹಿಡಿ, ಹಂಸ, ನವಿಲು, ಬಲಾಕ ಪಕ್ಷಿಗಳ ಗರಿಗಳನ್ನು ಹೊದಿಸಿರುತ್ತಾರೆ. ಆದರೆ ಬೇರೆ ಪಕ್ಷಿಗಳ ಗರಿಗಳನ್ನು ಬೆರೆಸುವುದಿಲ್ಲ. ವೃತ್ತಾಕಾರದ ಚಾಮರಕ್ಕೆ ಅದರ ಹಿಡಿಯಲ್ಲಿ ಮೂರು, ನಾಲ್ಕು, ಐದು, ಏಳು ಅಥವಾ ಎಂಟು ಗಂಟುಗಳಿರಬೇಕೆಂದು 'ಅಗ್ನಿಪುರಾಣ'ದಲ್ಲಿ ತಿಳಿಸಲಾಗಿದೆ. ಚಾಮರ ಚಮರೀಮೃಗದ ಬಾಲದಿಂದ ಮಾಡಿದ ಒಂದು ಬಗೆಯ ಬೀಸಣಿಗೆ. ದೇವಸ್ಥಾನಗಳಲ್ಲಿ ದೇವರಿಗೆ 'ಚಾಮರಸೇವೆ'ಯನ್ನು ನಡೆಸಲಾಗುತ್ತದೆ. ದೇವರ ಉತ್ಸವ ನಡೆಯುವಾಗ ದೊಡ್ಡ ದೊಡ್ಡ ದೇವಾಲಯಗಳಲ್ಲಿ ಈ ಹಿಂದೆ ಆನೆಗಳಿಂದ ಚಾಮರ ಬೀಸುವ ಸಂಪ್ರದಾಯವು ಇತ್ತು. ಪೂಜಾ ವಿಧಿವಿಧಾನಗಳಲ್ಲಿ ಚಾಮರ ಸೇವೆಯೂ ಒಂದಾಗಿದೆ. ಚಾಮುಂಡೇಶ್ವರಿಯ ಬ್ರಹ್ಮರಥೋತ್ಸವದಮದು ಹಾಗೂ ಒಂಟಿಕೊಪ್ಪಲಿನ ಲಕ್ಷ್ಮಿವೆಂಕಟೇಶ್ವರ ದೇವರ ಉತ್ಸವಗಳಲ್ಲಿ ಹೆಚ್ಚಾಗಿ ಇವುಗಳನ್ನು ಬಳಸುತ್ತಾರೆ.

ಒಟ್ಟಾರೆಯಾಗಿ ಮೈಸೂರು ನಗರದ ಪಾರಂಪರಿಕ ದೇವಾಲಯಗಳ ರಚನೆ ಮತ್ತು ಭೌತಿಕ ಸಂಸ್ಕೃತಿಯನ್ನು ಗಮನಿಸಿದಾಗ ಬಹಳ ಹಿಂದಿನಿಂದಲೂ ರಚನಾಕ್ರಮಗಳು ಬದಲಾಗುತ್ತಾ

ಬಂದಿರುವುದನ್ನು ಕಾಣುತ್ತೇವೆ. ಆದರೂ ಕೆಲವೊಂದು ಮೂಲನೆಲೆಯ ರಚನೆಯನ್ನು ಅಷ್ಟು ಸುಲಭವಾಗಿ ಮರೆಮಾಚಲು ಸಾಧ್ಯವಾಗಿಲ್ಲ. ಇದಕ್ಕೆ ಕಾರಣ ರಚನೆಯಲ್ಲಿನ ಜಾನಪದೀಯತೆಯ ಅಂಶಗಳು. ಅಲ್ಲದೆ ದೇವಾಲಯಗಳ ಸ್ವರೂಪ ಅವುಗಳು ರಚನೆಯಾದ ಬಗೆ, ದೇವರ ಮೂರ್ತಿ ಶಿಲ್ಪ, ಭೌತಿಕ ಸಂಸ್ಕೃತಿಯ ಅಂಗವಾಗಿರುವ ದೇವರ ವಾಹನಗಳಾದ ತೇರು, ಪಲ್ಲಕ್ಕಿಗಳು, ಧಾರ್ಮಿಕ ವಾದ್ಯಗಳಾದ ತಮಟೆ, ಕೊಂಬು, ಕಹಳೆ, ಜಾಗಟೆ, ನಗಾರಿ, ಘಂಟೆಗಳು ಸಹ ಒಂದು ದೇವಾಲಯದಲ್ಲಿನ ರಚನೆ ಮತ್ತು ಭೌತಿಕ ಸಂಸ್ಕೃತಿಯ ನೆಲೆಯಲ್ಲಿ ಜಾನಪದೀಯತೆಯ ಅಂಶವಾಗಿ ಗುರುತಿಸಿಕೊಂಡಿರುವುದನ್ನು ಕಾಣಲು ಸಾಧ್ಯವಾಗಿದೆ.

# ಕೊನೆ ಟಿಪ್ಪಣಿಗಳು

1. ನರಸಿಂಹಾಚಾರ್.ಡಿ.ಎಲ್, ಪೀಠಿಕೆಗಳು ಮತ್ತು ಲೇಖನಗಳು, ಪು.ಸಂ–121.
2. ಡಾ.ಎಂ.ಚಿದಾನಂದ ಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.ಸಂ–225.
3. ಡಾ.ಹಾಮಾ.ನಾಯಕ್(ಸಂ), ಕರ್ನಾಟಕ ವಿಷಯ ವಿಶ್ವಕೋಶ, ಪು.ಸಂ–653.
4. ಡಾ.ಚಿದಾನಂದಮೂರ್ತಿ, ಹೊಸತು ಹೊಸತು, ಪು.ಸಂ–346.
5. ಡಾ.ಹಾ.ಮಾ.ನಾಯಕ್(ಸಂ), ಮಾನವಿಕ ಕರ್ನಾಟಕ– ಧರ್ಮ ಒಂದು ವಿವೇಚನೆ, ಸಂಪುಟ–10, ಸಂಚಿಕೆ–3, ಪು.ಸಂ–3.
6. ಎಸ್.ಕೆ.ರಾಮಚಂದ್ರರಾವ್, ಭಾರತೀಯ ದೇವಾಲಯಗಳ ಜಾನಪದ ಮೂಲ, ಪು.ಸಂ–27–29.
7. ಆಸ್ಥಾನ ಮಹಾವಿದ್ವಾನ್ ಸಂಕೀಘಟ್ಟಂ ವೆಂಕಟಾಚಾರ್ಯ,(ಅನು), ಶ್ರೀ ವಿಷ್ಣುಧರ್ಮೋತ್ತರ ಮಹಾಪುರಾಣಂ, ಪು.ಸಂ–541.
8. ಅದೇ, ಪು.ಸಂ–545.
9. ದೇ.ಜವರೇಗೌಡ, ಜಾನಪದ ಮಹಾಸಂಪುಟ, ಪು.ಸಂ–404.
10. ಎಂ.ಕೆ.ಲಿಂಗಯ್ಯ, ಮೈಸೂರು: ಒಂದು ಅಧ್ಯಯನ, ಪು.ಸಂ–49.
11. ಡಾ.ಅರವಿಂದ ಮಾಲಗತ್ತಿ(ಪ್ರ.ಸಂ), ಕನ್ನಡ ವಿಷಯ ವಿಶ್ವಕೋಶ ಜಾನಪದ, ಪು.ಸಂ–616.
12. ಆಚಾರ್ಯ.ಪಿ.ಕೆ, ಎ ಡಿಕ್ಷನರಿ ಆಫ್ ಹಿಂದೂ ಆರ್ಕಿಟೆಕ್ಚರ್, ಪು.ಸಂ–362.
13. ಡಾ. ಚಿ.ಸಿ. ನಿಂಗಣ್ಣ,(ಸಂ), ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ.
14. ಅಗರವಾಲ ಪಿ.ಕೆ, ಮಿಥುನ, ಪು.ಸಂ–4 ಮತ್ತು 10.
15. ಕುಲಕರ್ಣಿ ಆರ್.ಹೆಚ್, ಕರ್ನಾಟಕದ ಆರಂಭಿಕ ಶಿಲ್ಪಕಲೆ, ಬೆಂಗಳೂರು, 2009.
16. ಪ್ರೊ.ಅರವಿಂದ ಮಾಲಗತ್ತಿ(ಪ್ರ.ಸಂ), ಕನ್ನಡ ವಿಷಯ ವಿಶ್ವಕೋಶ–ಜಾನಪದ,
17. ಬಾ.ರಾ. ಗೋಪಾಲ್(ಸಂ), ಎ.ಕ, ಸಂಪುಟ–5, ಮೈಸೂರು–157, ಚಾಮುಂಡಿಬೆಟ್ಟ, ಪು.ಸಂ–285.
18. ವಕ್ತೃ: ಶಶಿಶೇಖರ ದೀಕ್ಷಿತ್, ಪ್ರಧಾನ ಅರ್ಚಕರು ಚಾಮುಂಡೇಶ್ವರಿ ದೇವಸ್ಥಾನ, ಚಾಮುಂಡಿಬೆಟ್ಟ.
19. ಮೈಸೂರು ಮಿತ್ರ, ದಿನಪತ್ರಿಕೆ, ದಿನಾಂಕ:08.02.2016

# ಅಧ್ಯಾಯ–5

## ಪಾರಂಪರಿಕ ದೇವಾಲಯಗಳ ಸಾಮಾಜಿಕ ಸಂಪ್ರದಾಯಗಳು

ಮೈಸೂರು ನಗರದಲ್ಲಿ ಅವಿಭಕ್ತ ಕುಟುಂಬ ವ್ಯವಸ್ಥೆ ಅನೂಚಾನವಾಗಿ ನಡೆದು ಬಂದಿದೆಯಾದರೂ ಇತ್ತೀಚೆಗೆ ಹಲವಾರು ಕಾರಣಗಳಿಂದಾಗಿ ಇಂತಹ ಕುಟುಂಬ ವ್ಯವಸ್ಥೆ ಕಡಿಮೆಯಾಗುತ್ತಿವೆ. ಸಾರಿಗೆ ಸಂಪರ್ಕ, ವಿದ್ಯಾಭ್ಯಾಸ, ವ್ಯಾಪಾರ, ವಾಣಿಜ್ಯ, ಕೈಗಾರಿಕೆಗಳು ಮತ್ತು ಮಾಹಿತಿ ತಂತ್ರಜ್ಞಾನಗಳ ಬೆಳವಣಿಗೆ ಮುಂತಾದವು ನೂತನ ನಾಗರಿಕ ಜೀವನಕ್ಕೆ ಎಡೆಮಾಡಿವೆ. ಬೆಳೆಯುತ್ತಿರುವ ನಗರಗಳಲ್ಲಿ ಹಲವಾರು ಸಾಮಾಜಿಕ ಸಂಪ್ರದಾಗಳಲ್ಲೂ ಬದಲಾವಣೆಗಳಾಗುತ್ತಿವೆ. ಎಲ್ಲಾ ಧರ್ಮಗಳಲ್ಲೂ ಸಾಮಾಜಿಕವಾಗಿ ಹುಟ್ಟಿನಿಂದ ಸಾವಿನವರೆಗೂ ಅನೇಕ ಸಂಪ್ರದಾಯ, ಆಚರಣೆಗಳಿವೆ.

ಮೈಸೂರು ನಗರದಾದ್ಯಂತ ಧಾರ್ಮಿಕ ಹಿನ್ನೆಲೆಯಿಂದ ಹಲವಾರು ಜನಪದ ಸಂಪ್ರದಾಯಾಚರಣೆಗಳು ಇರುವುದನ್ನು ಕಾಣುತ್ತೇವೆ. ನಂಬಿಕೆ, ಸಂಪ್ರದಾಯ, ಆಚರಣೆ, ವಿಧಿ–ನಿಷೇಧಗಳು ಒಂದಕ್ಕೊಂದು ಸಂಬಂಧಗಳನ್ನು ಹೊಂದಿ ದೇವಾಲಯಗಳ ಹಾಗೂ ದೇವಾಲಯ ಸಂಬಂಧಿ ಸಾಮಾಜಿಕ ಸಂಪ್ರದಾಯಗಳನ್ನು ಈ ಕೆಳಕಂಡಂತೆ ಜಾನಪದೀಯ ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

### 5.1 ನಂಬಿಕೆ

ನಂಬಿಕೆ ಜಾನಪದದ ಪ್ರಮುಖ ಪ್ರಕಾರಗಳಲ್ಲಿ ಒಂದಾಗಿದ್ದು, ಜನಪದರು ಹುಟ್ಟಿನಿಂದ ಸಾಯುವವರೆಗೂ ಒಂದಲ್ಲ ಒಂದು ನಂಬಿಕೆ, ಸಂಪ್ರದಾಯ ಆಚರಣೆಗಳಿಗೆ ಅಂಟಿಕೊಂಡೆ ಬಂದಿರುತ್ತಾರೆ. 'ನಂಬಿಕೆ' ಎಂಬುದು ಅಚ್ಚಗನ್ನಡ ಶಬ್ಧ. 'ನಂಬುವಕ್ರಿಯೆ'ಯಾಗಿದೆ. ಯಾವುದೇ ಜಾತಿ ಅಂತಸ್ತಿನ ಭೇದಭಾವಗಳಿಲ್ಲದೆ ಸಮಾಜದ ಸಮಸ್ತರ ಬಾಳನ್ನು ಪ್ರವೇಶಿಸಿ ಅವರ ರಕ್ತದ ಕಣ ಕಣಗಳಲ್ಲಿಯೂ ಸೇರಿರುತ್ತವೆ. ಇವು ಒಬ್ಬನ ಅಥವಾ ಒಂದು ಸಮುದಾಯದ ಸ್ವತ್ತಾಗಿರದೆ ಇಡೀ ಸಮಾಜದ ಸಂಪತ್ತಾಗಿರುತ್ತವೆ. ಸಮಾಜದಿಂದ ಸಮಾಜಕ್ಕೆ ಭಿನ್ನವಾಗಿರುತ್ತವೆ. ಇವುಗಳ ಮೂಲ ಆಶಯ ಒಂದೇ ಆಗಿದ್ದರೂ ಆಚರಿಸುವ ವಿಧಾನಗಳು ಬೇರೆ ಬೇರೆಯಾಗಿರುತ್ತವೆ. ಅವರವರ ಸಂಸ್ಕೃತಿ, ಆಚರಣೆ, ಅರಿವಿಗೆ ತಕ್ಕಂತೆ ನಂಬಿಕೆಗಳ ಸ್ವರೂಪವು ಬದಲಾಗುತ್ತದೆ. ಆಯಾ ಸಂಸ್ಕೃತಿಯ ವೈಶಿಷ್ಟ್ಯವನ್ನು ನಂಬಿಕೆಗಳ ಮೂಲಕ ತಿಳಿಯಬಹುದಾಗಿದೆ.

ನಂಬಿಕೆಗಳು ನಿರಂತರವಾಗಿ ಮಾನವನ ಜೀವನವನ್ನು ರೂಪಿಸುತ್ತಿವೆ. ನಮ್ಮ ಸಂಸ್ಕೃತಿಯ ತಿರುಳೇ ಆಗಿರುವ ನಂಬಿಕೆಗಳು ಜನಪದ ಬದುಕಿನ ಕೆಲಸ, ಆಲೋಚನೆ, ರೂಢಿ, ಜೀವನ ಕ್ರಮ, ಸಂಪ್ರದಾಯ, ಆಚರಣೆ ಹೀಗೆ ಪ್ರತಿಯೊಂದು ಕ್ರಿಯೆಯಲ್ಲಿಯೂ ಮೂಲಭೂತವಾಗಿ ಪ್ರೇರಿತವಾದವುಗಳು. ಇವು ಸಾಮೂಹಿಕವಾಗಿ ಅಂಗೀಕೃತವಾಗಿದ್ದು, ಮನುಷ್ಯನ ವಿಶ್ವಾಸವನ್ನು ಅವಲಂಭಿಸಿರುತ್ತವೆ. ಮಾನವನ ಮನಃಸ್ಥಿತಿ ಎಂತಹುದೆಂದರೆ, ಬದುಕಿನ ಎಲ್ಲಾ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ನಂಬಿಕೆಗಳಲ್ಲಿ ವಿಶ್ವಾಸ ಇಡುತ್ತಾನೆ.

ನಂಬಿಕೆಗಳನ್ನು ಕುರಿತು ವಿದ್ವಾಂಸರು ಈ ಕೆಳಕಂಡಂತೆ ವ್ಯಾಖ್ಯೆಗಳನ್ನು ನೀಡಿರುತ್ತಾರೆ.

**ರಾಮೇಗೌಡ ಹಾಗೂ ವಸಂತಕುಮಾರ.ಎಂ.ಪಿ:** "ನಂಬಿಕೆ ಅಭಯ ಅಥವಾ ನೆಚ್ಚಿಕೆಯ ಒಂದು ಮಾನಸಿಕ ಸ್ಥಿತಿ. ಪರಂಪರಾನುಗತವಾಗಿ ಸ್ವೀಕೃತವಾದ ಒಂದು ಭಾವರೂಪ; ಪುನರಾವರ್ತಿತ ಹಾಗೂ ಸಾಂಪ್ರದಾಯಿಕ ಅಭಿಪ್ರಾಯೋಕ್ತಿ, ವಸ್ತು ಸ್ಥಿತಿಯೊಡನೆ ಅಸಂಬಂಧವೂ ಅವೈಜ್ಞಾನಿಕವೂ ಆದ ಸಂಬಂಧವುಳ್ಳ ಹೇಳಿಕೆ. ಇದರಲ್ಲಿ ಮಾತು ಒಂದು ಭಾಗವಾದರೆ ಕ್ರಿಯೆ ಮತ್ತೊಂದು ಭಾಗ"[1] ಎಂದಿದ್ದಾರೆ.

**ಆರ್.ಎಸ್.ಬಾಗ್ಸ್:** "ನಂಬಿಕೆಗಳನ್ನು ಪುನರಾವೃತವಾಗುವ ಸಾಮೂಹಿಕ ವೀಕ್ಷಣೆಯ ಫಲವಾಗಿ ಮಾಡುವ ಕಾರ್ಯಕಾರಣ ಸಂಬಂಧವುಳ್ಳದ್ದಾಗಿರುವ ಸಂಪ್ರದಾಯಿಕ ಭಾವನೆ"[2] ಎಂದಿದ್ದಾರೆ.

**ಪ್ರೊ.ಡಿ.ಲಿಂಗಯ್ಯ ಮತ್ತು ಡಾ.ಕೆ.ಆರ್.ಸಂಧ್ಯಾರೆಡ್ಡಿ:** "ಸಾಂಪ್ರದಾಯಿಕವಾಗಿ ಒಂದು ತಿಳುವಳಿಕೆಯನ್ನು ನಂಬಿಕೆ ಎನ್ನಬಹುದು"[3] ಎಂದಿದ್ದಾರೆ.

**ಪ್ರೊ.ದೇ.ಜವರೇಗೌಡರು:** ನಂಬಿಕೆಯನ್ನು ಕುರಿತು ದೇಶ ಕಾಲಗಳ ಹಿನ್ನೆಲೆಯಲ್ಲಿ ಪರಂಪರಾಗತವಾದ ಜ್ಞಾನ, ದೀರ್ಘಾನುಭವ, ಕಾಲ್ಪನಿಕ ಆಲೋಚನೆ ಹಾಗೂ ಅತೀಂದ್ರಿಯ ವ್ಯಾಪಾರದ ಫಲವಾಗಿ ಮೂಡಿದ ಶ್ರದ್ಧೆಯೇ ನಂಬಿಕೆ ಎಂದಿದ್ದಾರೆ"[4]

ಈ ಮೇಲಿನ ವ್ಯಾಖ್ಯೆಗಳ ಪ್ರಕಾರ ನಂಬಿಕೆ ಎಂಬುದು ಒಂದು ಮನಃಸ್ಥಿತಿ. ಬದುಕಿನ ಆಕಸ್ಮಿಕವಾಗಿ ಒದಗಿಬರುವ ಘಟನೆ ಅಥವಾ ಸಂಗತಿ ಪದೇ ಪದೇ ಪುನರಾವರ್ತಿತವಾಗಿ ಕಾಲಾನಂತರದಲ್ಲಿ ಅದೇ ನಂಬಿಕೆಯಾಗಿ ರೂಪುಗೊಂಡಿವೆ.

ಉದಾಹರಣೆ: ಪ್ರಯಾಣ ಹೊರಟಾಗ ಎಲ್ಲಿಗೆ? ಎಂದು ಕೇಳಬಾರದು, ಖಾಲಿ ಕೊಡ ನೋಡಿದರೆ, ಬೆಕ್ಕು ಅಡ್ಡ ಬಂದರೆ ಅಶುಭವೆಂದು, ತುಂಬಿದ ಕೊಡ, ನವಿಲು ಎದುರಾದರೆ ಶುಭವೆಂಬ ಈ ನಂಬಿಕೆ ಮೂಲತಃ ಕಾಲ್ಪನಿಕ ಆಲೋಚನೆಯೊಂದು ವೈಯಕ್ತಿಕ ನೆಲೆಯಲ್ಲಿ ಹುಟ್ಟಿಕೊಂಡು ಸಮೂಹದ ಬಾಯಿಗೆ ಬಿದ್ದಾಗ ಸಾಮೂಹಿಕ ಮಾನ್ಯತೆ ಪಡೆದು ಮುಂದೆ ಅದೇ ನಂಬಿಕೆಯಾಗಿ ಪುನರಾವರ್ತಿತವಾಗುತ್ತದೆ.

ಭೂಮಿಯಲ್ಲಿ ಮನುಷ್ಯನ ಅಸ್ತಿತ್ವದೊಂದಿಗೆ ನಂಬಿಕೆಗಳೂ ಉಗಮಗೊಂಡವೆನ್ನಬಹುದು. ನಂಬಿಕೆಗಳ ಉಗಮಕ್ಕೆ ಹಲವು ಕಾರಣಗಳಿವೆ. ಪ್ರಕೃತಿ, ಪ್ರಾಣಿ ಮೊದಲಾದ ವಸ್ತುವಿಷಯಗಳಲ್ಲಿ ಮಾನವ ತಳೆದ ಭಯಭಕ್ತಿ, ಕೃತಜ್ಞತಾ ಭಾವಗಳೇ ಅನೇಕ ನಂಬಿಕೆಗಳ ಹುಟ್ಟಿಗೆ ಕಾರಣವಾಗಿವೆ. ಹಾಗೂ ನಂಬಿಕೆಗಳು ಮಾನವನ ಮಾನಸಿಕ ಪ್ರವೃತ್ತಿಯಾಗಿವೆ. ವ್ಯಕ್ತಿಯ ಭಾವನಾತ್ಮಕ ಮುಖವನ್ನು ನಂಬಿಕೆಗಳು ಸಮರ್ಥವಾಗಿ ಪರಿಚಯಿಸುತ್ತವೆ.

"ಪ್ರಾಕೃತಿಕ ರಹಸ್ಯವನ್ನು ಭೇದಿಸುವಲ್ಲಿ ಆದಿಮಾನವನ ವಿಫಲತೆ, ಹುಟ್ಟು, ಬದುಕು, ಸಾವಿನ ನಿಗೂಢತೆಯನ್ನು ಅರ್ಥೈಸಲಾಗದ ಆತಂಕ, ಜಾತಿ ಮತ್ತು ಧರ್ಮ ತಮ್ಮ ಅಸ್ತಿತ್ವಕ್ಕಾಗಿ ನಡೆಸಿದ ಹೋರಾಟ ಈ ಹಿನ್ನೆಲೆಯಲ್ಲಿ ನಂಬಿಕೆಗಳು ಹುಟ್ಟಿಕೊಳ್ಳುತ್ತವೆ."[5]

ಜನಪದ ನಂಬಿಕೆಗಳ ಉಗಮಕ್ಕೆ ಧಾರ್ಮಿಕ, ಸಾಂಸ್ಕೃತಿಕ ಮತ್ತು ವೈಯಕ್ತಿಕ ನೆಲೆಗಳು ಕಾರಣವಾಗಿವೆ ಎಂದು ವಿದ್ವಾಂಸರು ಗುರುತಿಸಿದ್ದಾರೆ.

ಜನಪದ ನಂಬಿಕೆಗಳು ಜನರನ್ನು ಜಾಗೃತಿಗೊಳಿಸುವ, ಪ್ರೋತ್ಸಹಿಸುವ ಹಾಗೂ ಅವರನ್ನು ನಿಯಂತ್ರಿಸುವ ಅಂಶಗಳನ್ನು ಒಳಗೊಂಡಿವೆ. ಹಲವು ನಂಬಿಕೆಗಳು ಮಾನವನ ಜೀವನದ ಮಾರ್ಗಗಳು ತಪ್ಪದಂತೆ ರಕ್ಷಿಸಿಕೊಂಡು ಬಂದಿವೆ. ಎಲ್ಲಾ ಸಂಪ್ರದಾಯ ಆಚರಣೆಗಳ ಉಳಿವಿಗೆ ಈ ನಂಬಿಕೆಗಳೆ ಕಾರಣ. ಮೂಲ ತಳಹದಿ, ಅನೇಕ ನಂಬಿಕೆಗಳು ಆತ್ಮವಿಶ್ವಾಸವನ್ನು ಮೂಡಿಸಿ, ಚೈತನ್ಯ ನೀಡಬಲ್ಲವು. ಈ ಹಿನ್ನೆಲೆಯಲ್ಲಿ ನಂಬಿಕೆಗಳ ಅಧ್ಯಯನದಿಂದ ಸಮಾಜದ ಮೂಲ ಸಂಸ್ಕೃತಿಯ ಸ್ಪಷ್ಟ ಚಿತ್ರಣ ಬರುತ್ತದೆ.

ನಂಬಿಕೆಗಳು ಮಾನವನ ಬದುಕಿನಲ್ಲಿ ಎಷ್ಟೋಂದು ಪ್ರಮುಖ ಪಾತ್ರವಹಿಸುತ್ತಿದ್ದವು ಮತ್ತು ವಹಿಸಿವೆ ಎಂಬುದಕ್ಕೆ ನಂಬಿಕೆಗಳ ಬಗ್ಗೆ ಹುಟ್ಟಿಕೊಂಡಿರುವ ಹಲವು ನಾಣ್ಣುಡಿಗಳೆ ಸಾಕ್ಷಿ. 'ನಂಬಿಕೆಗೆ ಬೆಟ್ಟವನ್ನಾದರೂ ಕದಲಿಸಬಲ್ಲ ಶಕ್ತಿಯಿದೆ' ಎನ್ನುವ ಮಾತು ನಂಬಿಕೆಯ ಪ್ರಾಬಲ್ಯ ಎಷ್ಟೆಂಬುದನ್ನು ತಿಳಿಸುತ್ತದೆ.

ನೀತಿ ಪ್ರಧಾನ ನಂಬಿಕೆಗಳು ಸಮಾಜದ ಸಮತೋಲನವನ್ನು ಕಾಯ್ದುಕೊಂಡು ಬರುತ್ತವೆ. 'ನಂಬುವುದು ಒಳ್ಳೆಯದು, ಅನುಮಾನ ಒಳ್ಳೆಯದಲ್ಲ', 'ನಂಬಿ ಕೆಟ್ಟವರಿಲ್ಲವೋ ಮನುಜ' ಎಂಬ ದಾಸವಾಣಿಗಳನ್ನು ಕೇಳಿದ್ದೇವೆ. ನಂಬುವ ಪರಿಕಲ್ಪನೆಯಲ್ಲಿ ಮೊದಲು ವ್ಯಕ್ತಿ–ವ್ಯಕ್ತಿ, ವ್ಯಕ್ತಿ–ಪ್ರಕೃತಿ, ವ್ಯಕ್ತಿ–ವಸ್ತು–ಪ್ರಾಣಿ ಇವುಗಳ ನಡುವೆ ಮುಖ್ಯವಾಗಿರಬೇಕಾದದ್ದು ನಂಬಿಕೆ. ಜಾನಪದ ಅಧ್ಯಯನದ ದೃಷ್ಟಿಯಿಂದ ನಂಬಿಕೆಗಳಲ್ಲಿರುವ ಆರೋಗ್ಯಕರ ಸಮಾಜ ಮುಖಿ ಉದ್ದೇಶಗಳನ್ನು ಸೂಕ್ಷ್ಮವಾಗಿ ಅರಿತು ಅನುಸರಿಸಬೇಕೆಂಬುದೇ ಮುಖ್ಯ.

ಮೈಸೂರು ನಗರದ ಪಾರಂಪರಿಕ ದೇವಾಲಯಗಳಿಗೆ ಸಂಬಂಧಿಸಿದಂತ ಕೆಲವೊಂದು ನಂಬಿಕೆಗಳನ್ನು ಈ ಕೆಳಕಂಡಂತೆ ಅಧ್ಯಯನಕ್ಕೆ ಒಳಪಡಿಸಲಾಗಿದೆ.

**ಕುಕ್ಕರಹಳ್ಳಿ ನಡುತಲೆ ಕಲ್ಲಿನ ಪೂಜೆಗೆ ಸಂಬಂಧಿಸಿದ ನಂಬಿಕೆ :** ಕುಕ್ಕರಹಳ್ಳಿಯ ಮಾರಿಗುಡಿಯ ಮುಂದೆ ಎರಡು ವೀರಗಲ್ಲುಗಳ ಮಧ್ಯೆ ಸುಮಾರು ಎರಡು ಅಡಿ ಎತ್ತರವಿರುವ ಕಲ್ಲಿದೆ. ಇದನ್ನೇ ನಡುತಲೆಕಲ್ಲು ಎಂದು ಕರೆಯುವರು. ಇದರ ವಿಶೇಷವೆಂದರೆ ಮಂಡಿನೋವಿಗೆ ತುತ್ತಾದವರು ನಡುತಲೆಕಲ್ಲಿಗೆ ಮಂಡಿಯನ್ನು ತಾಕಿಸಿದರೆ ನೋವು ಕಡಿಮೆಯಾಗುವುದು ಎಂಬ ನಂಬಿಕೆ ಇಲ್ಲಿಯ ಜನರಲ್ಲಿದೆ. ಇದು ಹಿಂದಿನಿಂದಲು ಬೆಳೆದು ಬಂದಿರುವ ಪದ್ಧತಿಯಾಗಿದೆ ಎಂದು ಇದೇ ಊರಿನ 72ವರ್ಷದ ಸಿದ್ದಮ್ಮನವರ ಅಭಿಪ್ರಾಯವಾಗಿದೆ. ಬೆಳಗ್ಗೆ ಅಥವಾ ಸಂಜೆಯ ವೇಳೆಯಲ್ಲಿ ಮಡಿಯಾಗಿ ನಡುತಲೆ ಕಲ್ಲಿಗೆ ಹಣ್ಣುಕಾಯಿ, ಅರಿಶಿನ ಕುಂಕುಮ, ಗಂಧದಕಡ್ಡಿಯಿಂದ ಪೂಜೆಮಾಡಿ ನೋವಿರುವ ಅಥವಾ ಊತ ಬಂದಿರುವ ಮಂಡಿಯನ್ನು ನಡುತಲೆ ಕಲ್ಲಿಗೆ ಮೂರು ಬಾರಿ ತಾಕಿಸಿ, ಕಲ್ಲಿನ ಸುತ್ತ ಹರಡಿರುವ ಮಣ್ಣನ್ನು ನೀರಿನಿಂದ ನೆನೆಸಿ ನೋವಿರುವ ಜಾಗಕ್ಕೆ ಸವರುವುದು ಕಡ್ಡಾಯ. ಹೀಗೆ ಐದುವಾರಗಳು ಚಾಚೂತಪ್ಪದೆ ನಡೆದುಕೊಂಡರೆ ಊತ ಇಳಿದು ನೋವೆಲ್ಲ ಪರಿಹಾರವಾಗುವುದೆಂಬ ನಂಬಿಕೆ ಇದೆ. ಇಲ್ಲಿ ಪೂಜಿಸಲು ಯಾವ ಪೂಜಾರಿಯೂ ಇಲ್ಲ. ನಾವೇ ಪೂಜೆ ಮಾಡಿಕೊಳ್ಳಬೇಕು. ಇಲ್ಲಿ ಯುಗಾದಿ ಹಬ್ಬ ಇನ್ನು ಐದು ದಿನವಿರುವಾಗಲೇ ಮಾರಮ್ಮ ಮತ್ತು ದೊಡ್ಡಮ್ಮ ತಾಯಿಯ ಹಬ್ಬವನ್ನು ವಿಶೇಷವಾಗಿ ತಂಬಿಟ್ಟಿನಾರತಿಯೊಂದಿಗೆ ಆಚರಿಸಲಾಗುತ್ತದೆ.

**ಕರಗ ಕುರಿತು ನಂಬಿಕೆ** : ಇಟ್ಟಿಗೆಗೂಡಿನ ಕರಗದ ಆಚರಣೆಯನ್ನು ಪ್ರಾರಂಭಿಸುವ ದಿನ ದೇವಸ್ಥಾನದ ನಾಲ್ಕು ದಿಕ್ಕುಗಳಿಗೂ ಕಂಕಣವನ್ನು ಕಟ್ಟುತ್ತಾರೆ. ಅಂದರೆ ಕರಗದ ದೇವಸ್ಥಾನ, ನಾಗಮ್ಮ ದೇವಸ್ಥಾನ, ದುರ್ಗಮ್ಮನ ದೇವಸ್ಥಾನ, ಗಣಪತಿ ದೇವಸ್ಥಾನ ಈ ನಾಲ್ಕು ದಿಕ್ಕುಗಳಿಗೂ ಕಂಕಣವನ್ನು ಕಟ್ಟಿ ಯಾವ ದುಷ್ಟಶಕ್ತಿಯು ಒಳಗೆ ಬಾರದಂತೆ, ಆಚರಣೆಗೆ ಯಾವುದೇ ರೀತಿಯ ತೊಂದರೆಯಾಗದಂತೆ ನಾಲ್ಕು ದಿಕ್ಕುಗಳನ್ನು ಬಂಧಿಸುವುದರಿಂದ ಯಾವ ಕೆಡುಕು ಆಗುವುದಿಲ್ಲ ಎಂಬ ನಂಬಿಕೆ ಇದೆ.

ಮೈಸೂರಿನ ಕರಗವನ್ನು ಆಚರಿಸುವಾಗ ಮೊದಲಿಗೆ ಮಡಿವಾಳರ ಮನೆಯಲ್ಲಿಯೇ ಕರಗಕ್ಕೆ ಮೊದಲ ಪೂಜೆಯಾಗಬೇಕು ಎಂಬ ನಂಬಿಕೆಯಿದೆ. ಏಕೆಂದರೆ ಇಲ್ಲಿಯವರು ಹೇಳುವ ಪ್ರಕಾರ ಅಗಸರ ಮನೆಯು ರೇಣುಕಾದೇವಿ ಮತ್ತು ಮಾರಮ್ಮನಿಗೆ ತವರು ಮನೆ ಇದ್ದ ಹಾಗೆ.

ಇದೇ ನಂಬಿಕೆಯ ಹಿನ್ನೆಲೆಯಲ್ಲಿ ಕಥೆಯನ್ನು ಹೇಳುತ್ತಾರೆ. ಈ ಕಥೆಯನ್ನು ಪಾರಂಪರಿಕ ದೇವಾಲಯಗಳ ಕಲೆ ಮತ್ತು ಸಾಹಿತ್ಯ ಎಂಬ ಆಧ್ಯಾಯದಲ್ಲಿ ವಿವರಿಸಲಾಗಿದೆ.

ಮೈಸೂರು ಕರಗದ ಕೊನೆಯದಿನ ಅಂಬಲಿ ಮತ್ತು ಬಲಿ ಪೂಜೆಯ ಅನಂತರ ಬಲಿ ಅನ್ನವನ್ನು ತೆಗೆದುಕೊಂಡು ಹೋದಾಗ ದೇವಸ್ಥಾನದಲ್ಲಿ ಒಂದು 'ಕಾಮಾಕ್ಷಿ' ದೀಪವನ್ನು ಹಚ್ಚಲಾಗುತ್ತದೆ. ಅದಕ್ಕೆ ಐದು ನಿಂಬೆಹಣ್ಣುಗಳನ್ನು ಕಟ್ಟಲಾಗಿರುತ್ತದೆ. ಅದು ಮುನ್ಸೂಚನೆ ನೀಡುವ ದೀಪ ಎಂದು ನಂಬಲಾಗುತ್ತದೆ. ದೀಪ ಅಲುಗಾಡಿದರೆ ಅಪಾಯವಿದೆ ಎಂದು, ದೀಪ ಅಲುಗಾಡದೆ ತಟಸ್ಥವಾಗಿದ್ದರೆ ಯಾವುದೆ ಅಪಾಯವಿಲ್ಲದೆ ಬಲಿ ಅನ್ನವನ್ನು ತೆಗೆದುಕೊಂಡು ಹೋದವರು ಹಿಂದಿರುಗಿ ಬರುತ್ತಾರೆ ಎಂಬ ನಂಬಿಕೆ ಇದೆ. ಇದು ಕರಗದ ನಂಬಿಕೆ ಮತ್ತು ಆಚರಣೆಯಾಗಿಯೂ ಸಹ ಕಂಡುಬರುತ್ತದೆ.

ಮೈಸೂರು ಕರಗದಲ್ಲಿ ಹಿಂದೆ ಇದ್ದ ನಂಬಿಕೆಗಳ ಜೊತೆ ಇಂದು ಹೊಸ ಹೊಸ ನಂಬಿಕೆಗಳು ಹುಟ್ಟಿಕೊಂಡಿವೆ. ಕರಗವನ್ನು ಪೂಜಿಸಿದರೆ ಮದುವೆಯಾಗದೆ ಇರುವ ಹೆಣ್ಣು ಮಕ್ಕಳು ದೇವಿಗೆ ಸೀರೆ ಉಡಿಸುವುದಾಗಿ ಮತ್ತು ದೇವರಿಗೆ ಎರಡು ತಾಳಿಕಟ್ಟಿ ಬಾಗಿನ ಕೊಡುವುದಾಗಿ ಹರಕೆ ಹೊತ್ತರೆ ಮದುವೆಯಾಗುತ್ತದೆ ಎಂಬ ಬಲವಾದ ನಂಬಿಕೆಯಿದೆ. ಅದೇ ರೀತಿ ಮಕ್ಕಳಾಗದ ಹೆಂಗಸರು ದೇವರಿಗೆ ಮಡಿಲು ತುಂಬುವುದಾಗಿ ಹರಸಿಕೊಂಡರೆ ಮಕ್ಕಳಾಗುತ್ತವೆ ಎಂಬ ನಂಬಿಕೆಯಿದೆ.

**ನಲ್ಲಕ ದೇವರ ಹಬ್ಬದ ಕುರಿತ ನಂಬಿಕೆ** : ಮೈಸೂರು ನಗರದ ಜ್ಯೋತಿನಗರದಲ್ಲಿರುವ ಪೌರಕಾರ್ಮಿಕರ ಕಾಲೋನಿಗಳಲ್ಲಿ ಈ ನಲ್ಲಕ ದೇವರ ಹಬ್ಬವನ್ನು ಆಚರಿಸಲಾಗುತ್ತದೆ. ಈ ಹಬ್ಬವನ್ನು ಪ್ರತಿವರ್ಷ ಆಚರಿಸಿಕೊಂಡು ಬರಲಾಗುತ್ತಿದೆ. ಊರಿನ ಮಧ್ಯಭಾಗದಲ್ಲಿ ಒಂದುವರೆ ಅಡಿಯಿಂದ ಎರಡು ಅಡಿ ಆಳದ ಗುಂಡಿಯನ್ನು ತೋಡಿ ಆ ಗುಂಡಿಯ ತುಂಬಾ ನೀರನ್ನು ತುಂಬಿಸಿ ಅದರ ಸುತ್ತಲು ಅರಿಶಿಣ, ಕುಂಕುಮ ಹಚ್ಚಿ ಹೂವನ್ನು ಸುತ್ತಲು ಹಾಕಿ ಪೂಜೆ ಮಾಡುತ್ತಾರೆ. ಅನಂತರ ಒಂದು ಹಂದಿಯನ್ನು ತಂದು ಗುಂಡಿಯಲ್ಲಿರುವ ನೀರಿನಲ್ಲಿ ಅದರ ತಲೆಯನ್ನು ಮುಳುಗಿಸುತ್ತಾರೆ. ಅದರ ಪ್ರಾಣ ಹೋದಮೇಲೆ ಅದರ ತಲೆಯನ್ನು ಚಾಕುವಿನಿಂದ ಕುಯ್ದು ಬಲಿ ಕೊಡುತ್ತಾರೆ. ಇಲ್ಲಿ ವಿಶೇಷವೆಂದರೆ ಬಲಿಯ ಒಂದು ತೊಟ್ಟು ರಕ್ತವು ಭೂಮಿಗೆ ಬೀಳುವಂತಿಲ್ಲ. ಒಂದುವೇಳೆ ಬಿದ್ದರೆ ಊರಿಗೆ ಕೆಡುಕಾಗುತ್ತದೆ ಎಂಬ ವಿಶಿಷ್ಟವಾದ ನಂಬಿಕೆಯನ್ನು ಹೊಂದಿದ್ದಾರೆ. ಮಕ್ಕಳಿಗೆ ಸೀತಾಳೆ, ದಡಾರ, ಜ್ವರ ಬಾರದಿರಲಿ ಎಂದು ನಲ್ಲಕ ದೇವರಿಗೆ ಹರಕೆ ಕಟ್ಟುವ ಮೂಲಕ ಈ ಹಬ್ಬವನ್ನು ಆಚರಿಸುವುದು ಹಿಂದಿನಿಂದಲು ರೂಢಿಸಿಕೊಂಡು ಬಂದಿರುವ

ಪದ್ಧತಿಯಾಗಿದೆ. ಬಲಿ ನೀಡಿದ ಹಂದಿಯ ಮಾಂಸವನ್ನು ಹೊಸ ಮಡಿಕೆಯಲ್ಲಿ ಬೇಯಿಸಿ, ಊರಿನ ಹೊರಗೆ ಸೂರ್ಯ ಮುಳುಗುವ ದಿಕ್ಕಿಗೆ ಏಳು ಉಗಿನಿ ಎಲೆಯ ಮೇಲೆ ಬೇಯಿಸಿದ ಹಂದಿಯ ಮಾಂಸವನ್ನು ಇಟ್ಟು, ಏಳು ಜನ ವಿಧವೆಯರಿಗೆ ಏಳು ಎಲೆಯಲ್ಲಿರಿಸಿದ ಎಡೆಯನ್ನು ನೀಡುತ್ತಾರೆ. ಇವರು ತಿಂದು ಉಳಿದ ಮಾಂಸವನ್ನು ಪ್ರಸಾದವೆಂದು ಊರಿನ ಜನರಿಗೆಲ್ಲಾ ಹಂಚುವುದು ವಾಡಿಕೆ. ಅಲ್ಲದೆ ಪ್ರಸಾದವನ್ನು ಅಲ್ಲಿನ ಸಮುದಾಯದವರಿಗೆ ಮಾತ್ರ ಹಂಚುತ್ತಾರೆ. ಬೇರೆ ಸಮುದಾಯದವರಿಗೆ ಹಂಚುವಂತಿಲ್ಲ. ಬೇರೆ ಸಮುದಾಯದವರು ತಿಂದರೆ ನಮಗೆ ದೋಷವುಂಟಾಗುತ್ತದೆ ಎಂಬ ನಂಬಿಕೆಯನ್ನು ಹೊಂದಿದ್ದಾರೆ. ಪ್ರಾಣಿಬಲಿ ನಿಷೇಧದಿಂದಾಗಿ ಈ ಆಚರಣೆ ನಡೆಯುತ್ತಿಲ್ಲ. ಬದಲಿಗೆ ದೇವಾಲಯದಲ್ಲಿ ಪೂಜೆ ಮಾಡಿಸಿ ಮನೆಯಲ್ಲೆ ಅಡುಗೆ ಮಾಡಿ ಈ ಹಬ್ಬವನ್ನು ಆಚರಿಸುತ್ತಾರೆ.

**ಮುನೇಶ್ವರ ಹಬ್ಬದ ಕುರಿತು ನಂಬಿಕೆ** : ಮೈಸೂರು ನಗರದ ಜ್ಯೋತಿನಗರದಲ್ಲಿರುವ ಪೌರಕಾರ್ಮಿಕ ಕಾಲೋನಿಗಳಲ್ಲಿ ಈ ಹಬ್ಬ ಬಹಳ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಮುನೇಶ್ವರನನ್ನು ಅವಿವಾಹಿತ ಯುವಕರು ಮಾತ್ರ ಪೂಜೆ ಮಾಡುವುದು ಇವರ ಸಂಪ್ರದಾಯವಾಗಿದೆ. ಏಕೆಂದರೆ ವಿವಾಹವಾದವರು ಮೈಲಿಗೆಯಾದವರು ಎಂಬುದು ಇವರಲ್ಲಿ ಇರುವ ನಂಬಿಕೆಯಾಗಿದೆ. ಅವಿವಾಹಿತ ಯುವಕರು ಶನಿವಾರ ಎಲ್ಲರ ಮನೆ ಮನೆಗೆ ಹೋಗಿ ಅಕ್ಕಿ ಸಂಗ್ರಹಿಸಿ ಅನ್ನ ಮಾಡಿ ದೇವಸ್ಥಾನದಲ್ಲಿ ಬೇವಿನ ಎಲೆಯ ಮೇಲೆ ರಾಶಿ ಹಾಕಿ ಅದರ ಸುತ್ತಲೂ ಅರಿಶಿಣ, ಕುಂಕುಮ, ಹೂವು, ಬಾಳೆಹಣ್ಣುಗಳನಿಟ್ಟು ದೀಪ ಹಚ್ಚುತ್ತಾರೆ. ಊರಿನ ಜನರೆಲ್ಲರು ಅಲ್ಲಿಗೆ ಬಂದು ಅರಿಶಿಣ–ಕುಂಕುಮ, ನೀರು, ರಾಗಿಅಂಬ್ಲಿ, ಮಜ್ಜಿಗೆ ತಂದು ಅನ್ನದ ರಾಶಿಯ ಮುಂದೆ ಇಡುತ್ತಾರೆ. ನಂತರ ಐದು ಜನ ವಿಧವೆಯರು ಮುನೇಶ್ವರನಿಗೆ ಪೂಜೆ ಸಲ್ಲಿಸುತ್ತಾರೆ. ಇವರನ್ನೇ ಮಾರಮ್ಮನವರು ಎಂದು ಕರೆಯುತ್ತಾರೆ. ಇವರು ಪೂಜೆ ಸಲ್ಲಿಸಿದ ಮೇಲೆ ಊರಿನ ಜನರು ತಾವು ತಂದಿದ್ದ ರಾಗಿಅಂಬಲಿ ಮತ್ತು ಮಜ್ಜಿಗೆಯನ್ನು ಅನ್ನದ ರಾಶಿಯ ಮೇಲೆ ಹಾಕಿ ಪೂಜೆ ಸಲ್ಲಿಸುತ್ತಾರೆ. ಇದಾದ ನಂತರ ಪೂಜಾರಿ ಅರಿಶಿಣದ ನೀರನ್ನು ತೀರ್ಥವೆಂದು ನೆರೆದಿರುವವರ ಮೇಲೆ ಎರಚುತ್ತಾನೆ. ಅನಂತರ ಮುನೇಶ್ವರನಿಗೆ ಪೂಜೆ ಸಲ್ಲಿಸುತ್ತಾನೆ. ಪೂಜೆಗೆಂದು ಇಟ್ಟಿದ್ದ ರಾಗಿ ಅಂಬಲಿಯನ್ನು ಪ್ರಸಾದವೆಂದು ಎಲ್ಲರಿಗೂ ಹಂಚಲಾಗುತ್ತದೆ. ಅನ್ನದ ರಾಶಿಯ ಕೆಳಗೆ ಹಾಕಿದ್ದ ಬೇವಿನ ಸೊಪ್ಪನ್ನು ನದಿ ಅಥವಾ ಕೆರೆಯಲ್ಲಿ ಬಿಡುತ್ತಾರೆ. ಹೀಗೆ ಮಾಡುವ ಉದ್ದೇಶವೆಂದರೆ ಊರಿನಲ್ಲಿ ಕುಳಿತ ಕೆಟ್ಟ ಮಾರಿಯರನ್ನು ಕರೆದುಕೊಂಡು ಹೋಗಿ ನೀರಿನಲ್ಲಿ ಬಿಡುವುದು ಎಂದರ್ಥ.

ಇದಾದ ನಂತರ ಅಲ್ಲಿನ ತೆಂಗಿನ ತೋಟಕ್ಕೆ ಹೋಗಿ ಚಪ್ಪರ ಹಾಕಿ ಅದರೊಳಗೆ ಏಳು ಕಲ್ಲುಗಳನ್ನು ಒಂದು ಸಾಲಿನಲ್ಲಿ ಇಟ್ಟು, ಅದರ ಎದುರು ಸಾಲಿನಲ್ಲಿ ಎರಡು ಕಲ್ಲುಗಳನ್ನು ಇಡುತ್ತಾರೆ. ಇದರ ಅರ್ಥ ಏಳು ಕಲ್ಲುಗಳು ಏಳು ಜನ ಮಾರಿಯರು, ಎದುರಿನ ಎರಡು ಕಲ್ಲುಗಳಲ್ಲಿ ಒಂದು ವೀರಭದ್ರಸ್ವಾಮಿ ಮತ್ತೊಂದು ಮುನೇಶ್ವರಸ್ವಾಮಿ ಎಂದು ಆ ಕಲ್ಲುಗಳ ಮುಂದೆ ನಿಂಬೆಹಣ್ಣು, ಸೀಗೆಕಾಯಿ, ಅರಿಶಿನಕೊನೆ, ವಿಭೂತಿ ಉಂಡೆ, ಕಪ್ಪು ಬಳೆಯನಿಟ್ಟು ಏಳು ಕಲ್ಲುಗಳಿಗೆ ಏಳು ಸುತ್ತು ದಾರವನ್ನು ಸುತ್ತಿ, ಏಳು ಕುರಿಗಳನ್ನು ಬಲಿಕೊಟ್ಟು ಅಲ್ಲಿಯೇ ಅಡುಗೆ ತಯಾರಿಸುತ್ತಾರೆ. ಇಲ್ಲಿ ಮಾಡಿದ ಅಡುಗೆಗೆ ಉಪ್ಪು ಹಾಕುವುದಿಲ್ಲ. ಏಕೆಂದರೆ ಉಪ್ಪು ಹಾಕಿದರೆ ಊಟ ರುಚಿಯಾಗಿ ಮಾರಮ್ಮಂದಿರು ಊರಿನಿಂದ ಹೊರಗೆ ಹೋಗುವುದಿಲ್ಲ ಎಂಬ ನಂಬಿಕೆಯಿಂದ ಹೀಗೆ ಮಾಡುತ್ತಾರೆ. ಅಡುಗೆಯಾದ ಮೇಲೆ ಅದನ್ನು ದೇವರ ಮುಂದೆ ಎಡೆ ಇಟ್ಟು ಪೂಜೆ ಮಾಡಿ ಅನಂತರ ಬಂದಿದ್ದ ಜನರಿಗೆ ಊಟ ಹಾಕುತ್ತಾರೆ. ಅಂತಿಮವಾಗಿ ಏಳು ಜನ ಮಾರಿಯರಿಗೆ ಸುತ್ತಿದ್ದ ಏಳು ಸುತ್ತಿನ ದಾರವನ್ನು ಕತ್ತರಿಸಿ ಹಿಂತಿರುಗಿ ನೋಡದೆ ಊರಿಗೆ ವಾಪಸಾಗುತ್ತಾರೆ.

**ಕನ್ನೇಗೌಡನ ಕೊಪ್ಪಲಿನ ಮಾರಮ್ಮ ಕುರಿತ ನಂಬಿಕೆ** : ಮೈಸೂರು ನಗರದ ಚಾಮರಾಜಪುರಂನ ಬಜ್ಜಣ್ಣ ರಸ್ತೆಯಲ್ಲಿರುವ ಕನ್ನೇಗೌಡನ ಕೊಪ್ಪಲಿನ ಮಾರಮ್ಮ ದೇವಾಲಯದಲ್ಲಿ ಅಮ್ಮನಿಗೆ ಪ್ರಿಯವಾದ ಬೇವಿನಸೊಪ್ಪು, ಎಳನೀರು ಮತ್ತು ಮೊಸರನ್ನವನ್ನು ನೈವೇದ್ಯಕ್ಕೆ ಬಳಸಲಾಗುತ್ತದೆ. ಮಕ್ಕಳಿಗೆ ದಡಾರ, ಕಾಲರ, ಅಮ್ಮ ಇಂತಹ ಸೂಚನೆಗಳು ಕಂಡುಬಂದಾಗ ಅಮ್ಮನವರಿಗೆ ಮೇಲ್ಕಂಡ ವಸ್ತುಗಳಿಂದ ಅಭಿಷೇಕ ಮಾಡಿಸಿ, ತಾಯಿಯ ಪ್ರಸಾದವೆಂದು ಪಡೆದ ಬೇವಿನ ಸೊಪ್ಪನ್ನು ಮಕ್ಕಳ ಮೈಗೆ ಹಚ್ಚಿ ತಣ್ಣೀರನ್ನು ಬಿಸಿಲಿಗೆ ಇಟ್ಟು ಕಾಯಿಸಿ ಅದರಿಂದ ಮಗುವಿಗೆ ಸ್ನಾನ ಮಾಡಿಸಿದರೆ ಮಗುವು ಗುಣಮುಖವಾಗುತ್ತದೆ ಎಂಬ ನಂಬಿಕೆ ಈಗಲೂ ರೂಢಿಯಲ್ಲಿದೆ. ಅಲ್ಲದೆ ಕಷ್ಟಬಂದಾಗ ಅಮ್ಮನಿಗೆ ಪ್ರಾರ್ಥನೆಯನ್ನು ಮಾಡಿಕೊಂಡರೆ, ದೇವಿಯ ಕೃಪೆಯಿಂದ ಅವರಿಗೆ ಎದುರಾದ ಕಷ್ಟಗಳು ನಿವಾರಣೆಯಾಗುತ್ತದೆ. ಈ ದೇವಾಲಯದ ಮತ್ತೊಂದು ಪ್ರಮುಖ ವೈಶಿಷ್ಟ್ಯತೆ ಎಂದರೆ ಗ್ರಾಮಸ್ಥರು ಬೇರೆಡೆಗೆ ಪ್ರವಾಸಕ್ಕೆ ಹೋಗುವಾಗ ಮೊದಲು ದೇವಿಗೆ ಪೂಜೆ ಸಲ್ಲಿಸಿ, ದರ್ಶನ ಪಡೆದುಕೊಂಡು ಹೋದರೆ ಯಾವುದೇ ರೀತಿಯ ತೊಂದರೆ ಉಂಟಾಗುವುದಿಲ್ಲ ಎಂಬ ನಂಬಿಕೆ ಇಂದಿಗೂ ಇದೆ.

**ಪವಾಡದ ಬಗ್ಗೆ ಇರುವ ನಂಬಿಕೆ :** ಕನ್ನೇಗೌಡನ ಕೊಪ್ಪಲಿನ ಹಳೆಯ ಸಿದ್ದಪ್ಪಾಜಿ ದೇವಾಲಯಕ್ಕೆ ಸಂಬಂಧಿಸಿದಂತೆ ಇರುವ ಪವಾಡ. ಗ್ರಾಮದ ನರಸೇಗೌಡರ ಹೊಲದಲ್ಲಿ ಇಟ್ಟಿಗೆ ಕೂಯಿಸುವ

ಸಲುವಾಗಿ ನಾಲ್ಕು ಜನ ಆಳುಗಳು ಗುಡಿಸಲು ಹಾಕಿಕೊಂಡಿದ್ದರು. ಅವರಲ್ಲಿ ಒಬ್ಬರು ದೇವಾಲಯದ ಗುಡ್ಡಪ್ಪನವರಾಗಿದ್ದರು. ಒಂದು ದಿನ ಮಧ್ಯರಾತ್ರಿ ಒಂದು ಗಂಟೆಯ ಸಮಯದಲ್ಲಿ ಎಮ್ಮೆ ಮೇಲೆ ಕುಳಿತ ಮಾರಿಯೊಬ್ಬಳು ಆ ಹೊಲಕ್ಕೆ ಬರುತ್ತಿದ್ದು, ಆ ಜನರಿಗೆ ತೊಂದರೆ ಕೊಡಲು ಮುಂದಾದಾಗ ಈ ಅವಧೂತರಾದ ಸಿದ್ದಪ್ಪಾಜಿಯವರು ಗುಡ್ಡಪ್ಪನಿಗೆ ವಿಶೇಷವಾದ ಶಕ್ತಿಯನ್ನು ಕೊಟ್ಟು ಮಾರಿಯನ್ನು ಓಡಿಸುವಂತೆ ಮಾಡಿದರು. ಮಾರಿ ಭಯದಿಂದ ಗ್ರಾಮಕ್ಕೆ ನುಗ್ಗಿದಳು. ಅಂದಿನಿಂದ ಗ್ರಾಮದಲ್ಲಿ ಜನರಿಗೆ ರೋಗ ರುಜಿನಗಳು ಬಂದು ಸಾಯುತ್ತಿದ್ದರು. ಇದನ್ನು ನಿವಾರಿಸುವಂತೆ ಜನರು ಅವಧೂತರ ಮೊರೆ ಹೋದಾಗ ಅವರು ಹೀಗೆ ಹೇಳಿದರು. ಅದೇನೆಂದರೆ ನಾಲ್ಕು ನಿಂಬೆಹಣ್ಣು ಮತ್ತು ನಾಲ್ಕು ತೆಂಗಿನಕಾಯಿಯನ್ನು ಊರಿನ ನಾಲ್ಕು ದಿಕ್ಕಿನಲ್ಲಿ ಇಡಬೇಕು ಎಂದರು. ಅಂದಿನ ರಾತ್ರಿ ಗ್ರಾಮದಲ್ಲಿ ಮೂರು ಸುತ್ತು ಬರುವುದಾಗಿಯೂ, ಹಾಗೂ ಆ ಸಂದರ್ಭದಲ್ಲಿ ಗ್ರಾಮದ ಜನರು ಯಾರು ನನ್ನ ಕಣ್ಣಿಗೆ ಬೀಳಬಾರದು ಎಂದು ಹೇಳಿದರು. ಇದಾದನಂತರದ ದಿನಗಳಲ್ಲಿ ರೋಗದಿಂದ ಯಾರಾದರೂ ಸತ್ತರೆ ನನ್ನನ್ನು ಪೂಜಿಸಬೇಡಿ ಎಂದರಂತೆ. ಆಶ್ಚರ್ಯವೆಂದರೆ ಅಂದಿನ ನಾಳೆಯಿಂದ ಗ್ರಾಮದ ಜನರಿಗೆ ಯಾವುದೇ ರೋಗರುಜಿನಗಳಾಗಲಿ ಬಾಧಿಸಲಿಲ್ಲವಂತೆ[6] ಎಂಬುದಾಗಿ ಪ್ರತ್ಯಕ್ಷ ದರ್ಶನ ಪಡೆದ ಸಿದ್ದಯ್ಯ ಎಂಬುವವರು ಅದೇ ಗ್ರಾಮದ ಶಿವಣ್ಣ ಅವರಿಗೆ ಹೇಳಿದ್ದರಂತೆ.

**ನೂರೊಂದು ಗಣಪತಿ ದೇವಾಲಯದ ನಂಬಿಕೆ** : ಮಹಾಲಯ ಅಮಾವಾಸ್ಯೆದಿನ ಈ ದೇವಾಲಯದಲ್ಲಿ ವಿಜೃಂಭಣೆಯಿಂದ ಪೂಜೆ, ಪುನಸ್ಕಾರಗಳು ನಡೆಯುತ್ತದೆ. ವಿಶೇಷವೆಂದರೆ ವಾಹನಗಳ ಪೂಜೆ ಮೈಸೂರು ನಗರದ ಜನರು ಯಾರೇ ವಾಹನವನ್ನು ಹೊಸದಾಗಿ ಕೊಂಡರು ಅವರು ನೂರೊಂದು ಗಣಪತಿ ದೇವಾಲಯಕ್ಕೆ ತಂದು ಪೂಜೆ ಮಾಡಿಸುವುದನ್ನು ಕಾಣುತ್ತೇವೆ. (ಸುಮಾರು ಪ್ರತಿಶತ 90ರಷ್ಟು ಜನರು. ಉಳಿದವರು ಶ್ರೀ ಬೆಟ್ಟದಚಾಮುಂಡಿ, ಶ್ರೀ ಕೋಟೆ ಆಂಜನೇಯ ಹೀಗೆ ಅವರಿಗೆ ಹೆಚ್ಚು ನಂಬಿಕೆ ಇರುವ ದೇವಾಲಯಗಳಿಗೆ ಹೋಗಿ ಪೂಜೆ ಮಾಡಿಸುತ್ತಾರೆ)

ಈ ದೇವಾಲಯದಲ್ಲಿ ಪೂಜೆ ಮಾಡಿಸಿದರೆ ವಾಹನ ಓಡಿಸುವಾಗ ಯಾವುದೇ ಅನಾಹುತ ಅಥವಾ ತೊಂದರೆಗಳು ಉಂಟಾಗುವುದಿಲ್ಲ ಎಂಬ ನಂಬಿಕೆ. ಹೊಸದಾಗಿ ಕೊಂಡು ತಂದಿರುವ ವಾಹನವನ್ನು ದೇವಾಲಯದ ಮುಂದೆ ಸೂರ್ಯಾಭಿಮುಖವಾಗಿ ನಿಲ್ಲಿಸಿ ಅದಕ್ಕೆ ವಿಭೂತಿ, ಅರಿಶಿಣ–ಕುಂಕುಮ ಹಚ್ಚಿ, ಹೂವಿನ ಹಾರವನ್ನು ದೇವರಿಗೆ ಮೊದಲು ಸಮರ್ಪಿಸಿ ಅದನ್ನೇ ತಂದು ವಾಹನಕ್ಕೆ ಹಾಕಲಾಗುತ್ತದೆ. ನಿಂಬೆಹಣ್ಣು ಮತ್ತು ಮೆಣಸಿನಕಾಯಿಯನ್ನು

ಮಂಗಳಾರತಿಯ ಕರ್ಪೂರದಿಂದ ಸ್ವಲ್ಪ ಮಸಿಮಾಡಿ ಅನಂತರ ವಾಹನದ ಮುಂಭಾಗಕ್ಕೆ ಕಟ್ಟಲಾಗುತ್ತದೆ. ಇದರ ಉದ್ದೇಶವೆಂದರೆ ವಾಹನದ ಮೇಲೆ ಯಾವುದೇ ದುಷ್ಟಶಕ್ತಿಗಳ ಹಾಗೂ ದುಷ್ಟರ ಕಣ್ಣು ತಗುಲುವುದಿಲ್ಲ ಎಂಬ ನಂಬಿಕೆ. ಅಲ್ಲದೇ ದೃಷ್ಟಿದಾರ, ಕಪ್ಪುದಾರಗಳನ್ನು ವಾಹನಕ್ಕೆ ಕಟ್ಟಿಸಿಕೊಳ್ಳುವುದು ಇದೆ. ವಾಹನದ ಚಕ್ರಗಳಿಗೆ ನಿಂಬೆಹಣ್ಣನ್ನು ಇಟ್ಟು ವಾಹನದ ಕೀಯನ್ನು ದೇವರ ಮುಂದಿಟ್ಟು ಮಂಗಳಾರತಿಯನ್ನು ಮಾಡಿ ಆ ನಂತರ ವಾಹನಕ್ಕೆ ತೀರ್ಥ ಚಿಮುಕಿಸಿ ಕೀಯನ್ನು ಹಾಕಿ ವಾಹನಕ್ಕೆ ಪೂಜೆ ಸಲ್ಲಿಸಲಾಗುತ್ತದೆ. ವಾಹನವನ್ನು ಮೊದಲು ಬಲಭಾಗಕ್ಕೆ ಚಲಾಯಿಸುವಂತೆ ಸೂಚಿಸುತ್ತಾರೆ ಅಂತೆಯೇ ವಾಹನ ಮಾಲಿಕರು ಅರ್ಚಕರಿಗೆ ವಂದಿಸಿ ಕಾಣಿಕೆ ನೀಡಿ ಖುಷಿಯಿಂದ ವಾಹನಕ್ಕೆ ನಮಸ್ಕರಿಸಿಕೊಂಡು, ತಮ್ಮ ಇಷ್ಟದೇವರನ್ನು ಪ್ರಾರ್ಥಿಸಿಕೊಂಡು ಬರಿಗಾಲಿನಲ್ಲಿ ವಾಹನ ಹತ್ತಿ ಚಾಲನೆ ಮಾಡುತ್ತಾರೆ ಆಗ ಚಕ್ರದ ಕೆಳಗೆ ಇಡಲಾಗಿದ್ದ ನಿಂಬೆಹಣ್ಣು ಹಿಸುಕಿ ಹೋಳಾಗಿ ಹೋಗುತ್ತದೆ ಇದು ಬಲಿಯ ಮತ್ತೊಂದು ರೂಪದಲ್ಲಿ ನಡೆಯುವ ಕ್ರಿಯೆಯೆಂದು ನಂಬಿಕೆ ಇಡಲಾಗಿದೆ.

**ಹೂವು ಕೇಳುವುದು :** ಮನೆಯಲ್ಲಿ ಒಂದರನಂತರ ಒಂದು ಸಂಕಷ್ಟಗಳು ಎದುರಾದಾಗ ಮನೆಯ ಮುಖ್ಯಸ್ಥರು ಅಥವಾ ಹಿರಿಯರು ತಮ್ಮ ಮನೆದೈವ ಇಲ್ಲವೇ ಕುಲದೈವ ಅಥವಾ ಇಷ್ಟದೈವಗಳಲ್ಲಿ ಹೋಗಿ ಕೋರುವ ವಿಧಾನವೇ ಹೂವು ಕೇಳುವುದು ಎಂದು ಕರೆಯಲಾಗುತ್ತದೆ. ಹೂವು ಕೇಳುವುದಕ್ಕಾಗಿಯೇ ಒಂದು ಪ್ರತ್ಯೇಕವಾದ ದಿನವನ್ನು ದೇವಾಲಯದಲ್ಲಿ ನಿಗದಿಮಾಡಿರುತ್ತಾರೆ. ಅಂದು ಮೂಲ ದೇವತಾ ವಿಗ್ರಹಕ್ಕೆ ಹೂವುಗಳಿಂದ ಅಲಂಕರಿಸುತ್ತಾರೆ. ಹೂವು ಕೇಳಲು ಬರುವವರು 'ನಾವು ಹೂವು ಕೇಳುತ್ತಿದ್ದೇವೆ' ಎಂದು ಹೇಳಿ ಕೈ ಮುಗಿದು ಕುಳಿತುಕೊಳ್ಳುತ್ತಾರೆ. ದೇವಾಲಯದ ಅರ್ಚಕರು ದೇವಿಯ ಭುಜ ಕೊರಳ ಮೇಲೆ ಬಿಡಿ ಹೂವುಗಳನ್ನು ಇಡುತ್ತಾರೆ ಕೇಳಿಕೊಂಡದ್ದು ಆಗುವುದಾದರೆ ಬಲಕ್ಕೆ ಇಲ್ಲವಾದರೆ ಎಡಕ್ಕೆ ಹೂವು ಕೊಡು ಎಂದು ಮನೆದೇವರನ್ನು ಬೇಡಿಕೊಳ್ಳುತ್ತಾರೆ. ಆಗ ದೇವರ ಮುಂದೆ ನೂರು, ಐನೂರು, ಸಾವಿರ ರೂಗಳ ಕಾಣಿಕೆಯಿಟ್ಟಿರುತ್ತಾರೆ. ಹೂವು ಕೊಡುವುದು, ಬೀಳುವುದು ನಿಧಾನವಾದರೆ ಅರ್ಚಕ 'ಬೇಗ ಹೂವು ಕೊಡವ್ವ ಹೊತ್ತು ಮಾಡಬೇಡ ನಿನ್ನ ದೃಢದಲ್ಲಿದ್ದದನ್ನು ಬಿಸಾಕು' ಎಂದು ಕೇಳುತ್ತಾರೆ. ಅಲಂಕರಿಸಿದ ಹೂವುಗಳಲ್ಲಿ ಯಾವುದಾದರೊಂದು ಬೀಳುತ್ತದೆ. ಬಲಕ್ಕೆ ಹೂವು ಬಿದ್ದರೆ ಒಳ್ಳೆಯದೆಂದು, ಎಡಕ್ಕೆ ಬಿದ್ದರೆ ಕೆಟ್ಟದ್ದೆಂದು ಭಾವಿಸುತ್ತಾರೆ. ಇಂತಹ ನಂಬಿಕೆಗಳು ಜನಪದರ ಬದುಕಿನಲ್ಲಿ ಹಾಸು ಹೊಕ್ಕಾಗಿವೆ.

**ಚಾಮುಂಡೇಶ್ವರಿ ದೇವಾಲಯ (ಕನ್ನೇಗೌಡನ ಕೊಪ್ಪಲು)ದಲ್ಲಿ ಹೂವು ಕೆಳುವುದು**

ಈ ದೇವಾಲಯದಲ್ಲಿ ಭಕ್ತಾದಿಗಳು ಪೂಜೆ ಸಲ್ಲಿಸುವುದರ ಜೊತೆಗೆ ವಿಶೇಷ ಪದ್ಧತಿಯಾದ ಹೂ ಕೇಳುವ ಪದ್ಧತಿಯನ್ನು ಪ್ರತಿ ಮಂಗಳವಾರ ಮತ್ತು ಶುಕ್ರವಾರದಂದು ಇಷ್ಟಾರ್ಥ ಸಿದ್ಧಿಗಳ ಬಗ್ಗೆ ದೇವಿಯ ಮುಂದೆ ಕುಳಿತು ಮನದ ಕಾರ್ಯ ನೆರವೇರಿಸು ಎಂದು ಧ್ಯಾನ ಮಾಡುತ್ತಾರೆ. ದೇವಿಯ ಬಲಭಾಗದಿಂದ ಹೂ ಬಿದ್ದರೆ ಇಷ್ಟಾರ್ಥ ಸಿದ್ಧಿ ಶುಭವಾಗುತ್ತದೆ ಎಂಬ ನಂಬಿಕೆಯನ್ನು ಇಂದಿಗೂ ರೂಢಿಸಿಕೊಂಡು ಬಂದಿದ್ದಾರೆ. ಇದು ಅವರು ತಮ್ಮನ್ನು ಕಾಯುವ ದೇವಿಯಲ್ಲಿ ತಮ್ಮ ಕೋರಿಕೆಗಳನ್ನು ಮುಂದಿಟ್ಟು ನೆರವೇರಿಸುತ್ತಾಳೋ ಇಲ್ಲವೋ ಎಂಬುದನ್ನು ಮೊದಲೇ ತಿಳಿದುಕೊಳ್ಳುವ ಪರಿಯಾಗಿದೆ.

**ಹೂವಿಗೆ ಸಂಬಂಧಿಸಿದ ನಂಬಿಕೆಗಳು**

- ದೇವರಲ್ಲಿ ಹೂವು ಕೇಳಲು ಹೋದಾಗ ಪೂಜೆ ನಡೆಯುತ್ತಿದ್ದರೆ ಶುಭ.
- ಮೂಸಿ ನೋಡಿದ ಹೂವನ್ನು ದೇವರಿಗೆ ಮುಡಿಸಬಾರದು
- ಕಣಿಗಿಲೆ ಹೂವನ್ನು ದೇವರಿಗೆ ಮುಡಿಸಬಾರದು
- ಏನಾದರೂ ವಿಚಾರ ಮಾತನಾಡುತ್ತಿರುವಾಗ ದೇವರ ಮೂರ್ತಿಯ ಮೇಲಿಂದ ಹೂವು ಬಲಗಡೆಗೆ ಬಿದ್ದರೆ ಅದು ನೆರವೇರುತ್ತದೆ ಎಂಬ ನಂಬಿಕೆ
- ಹೂವನ್ನು ತುಳಿಯಬಾರದು ಹೂವು ದೇವರ ಸಮಾನ
- ಮುಡಿದ ಹೂವನ್ನು ದೇವರಿಗೆ ಹಾಕಬಾರದು
- ತಾಳೇ ಹೂವಿನಲ್ಲಿ ನಾಗದೇವತೆಗಳು ವಾಸಿಸುತ್ತವೆ
- ತಾಳೇ ಹೂವನ್ನು ಶಿವರಾತ್ರಿಯ ದಿನ ಮಾತ್ರ ಮುಡಿಸುತ್ತಾರೆ
- ಮುತ್ತುಗದ ಹೂವನ್ನು ಯಾವ ಪೂಜಾ ಕಾರ್ಯಗಳಿಗೂ ಬಳಸಬಾರದು
- ಈಶ್ವರನ ಪೂಜೆಗೆ ತುಂಬೆ ಹೂವು ತುಂಬಾ ಶ್ರೇಷ್ಠ

ಎಕ್ಕ ಗಣಪತಿಗೆ ಪ್ರಿಯವಾದ ಹೂವು. ಅಲ್ಲದೆ ಎಕ್ಕದ ಹೂವು ಗಣೇಶನಿಗೆ ಪ್ರತಿರೂಪವಾಗಿ ಭಾವಿಸುವುದರಿಂದ ಮಾರಾಟಗಾರರು ತಮ್ಮ ವ್ಯಾಪಾರ ಮಾಡುವ ವಸ್ತುವಿನ ಜೊತೆ ಎಕ್ಕದ ಹೂವನ್ನು ಇಟ್ಟುಕೊಂಡಿರುತ್ತಾರೆ. ಹೂವು ದೇವರ ಪ್ರತಿರೂಪ ಅದನ್ನು ತುಳಿಯಬಾರದು. ಹೂವಿನ ನಾನಾ ರೂಪದಲ್ಲಿ ದೇವರನ್ನು ಕಾಣುವ ಜನಪದರು ಹೂವನ್ನು

ಪೂಜಿಸುತ್ತಾರೆ. ಆಚರಣೆಗಳಲ್ಲೂ ಹೂವು ಪ್ರಧಾನವಾಗಿ ಗುರುತಿಸಿಕೊಂಡಿದೆ. ಸಂಸ್ಕೃತಿಯ ಪ್ರತೀಕವಾಗಿರುವ ಹೂವನ್ನು ತುಳಿಯುವುದು ಶ್ರೇಯಸ್ಸಲ್ಲ, ಸಂಸಕೃತಿಯಲ್ಲ.

ತಾಳೆ ಹೂವಿನ ಹಿಂಡಿನಲ್ಲಿ ನಾಗದೇವತೆಗಳು ವಾಸಿಸುತ್ತವೆ ಎಂಬುದಕ್ಕೆ ಕಥೆ, ಗೀತೆ, ಗಾದೆಗಳೆ ಸಾಕ್ಷಿಯಾಗಿವೆ. ಅಕ್ಕ ಇಲ್ಲವೆ ತಂಗಿಗೆ ಹೂವು ತರಲೋಗಿ ಅಣ್ಣ ಇಲ್ಲವೆ ತಮ್ಮ ಹಾವು ಕಚ್ಚಿಸಿಕೊಂಡು ಮರಣಿಸಿದ ಘಟನೆಗಳು ಈ ನಂಬಿಕೆ ಹುಟ್ಟಲು ಕಾರಣವಾಗಿರಬಹುದು. ನಾಗ ದೇವತೆಗಳಿಗೆ ತಾಳೆ ಹೂವು ಪ್ರಿಯವಾದುದೆಂದು ತಿಳಿಸುವುದರ ಜೊತೆಗೆ ಪರಿಣಿತನಾದವನು, ಸಾಹಸಿಯಾದವನು ಮಾತ್ರ ತಾಳೆಗರಿಯನ್ನು ಕುಯ್ದು ತರಲು ಸಾಧ್ಯ. ಎಲ್ಲರೂ ತಾಳೆ ಹೂವನ್ನು ತರಲಾಗದು ಎಂಬುದನ್ನು ಈ ನಂಬಿಕೆ ತಿಳಿಸುತ್ತದೆ.

ಕಣಿಗಿಲೆ ಹೂವು ಪೂಜೆಗೆ ಶ್ರೇಷ್ಠ. ಎಂಬ ನಂಬಿಕೆ ಕೆಲವು ಕಡೆಯಲ್ಲಿದೆ. ಮಾರಮ್ಮನ ಹೂವು ಎಂದೇ ಕಣಿಗಿಲೆಯ ಮತ್ತೊಂದು ಜಾತಿಯನ್ನು ಕರೆಯುತ್ತಾರೆ. ಅಂತಹ ಹೂವು ಪೂಜೆಗೆ ಶ್ರೇಷ್ಠವಾಗಿದೆ. ಒಮ್ಮೆ ಅರ್ಪಿಸಿದ ಪುಷ್ಪ, ಬಾಡಿದ ಪುಷ್ಪ, ಚೂರು ಚೂರಾದ ಪುಷ್ಪ, ಕ್ರಿಮಿಗಳು ಭಾಗಶಃ ತಿಂದು ಛಿದ್ರವಾಗಿರುವ ಪುಷ್ಪ ಅತಿರಿಕ್ತವಾಗಿರುವ ಪುಷ್ಪ, ಮೈಗೆ ತಗುಲಿದ ಇಲ್ಲವೇ ನೆಲದ ಮೇಲೆಬಿದ್ದ ಪುಷ್ಪ, ಚೋರತನದಿಂದ ತಂದ ಪುಷ್ಪ ಇವುಗಳನ್ನು ಭಗವಂತನ ಪೂಜೆಗೆ ಸರ್ವದ ಬಳಸಬಾರದು. ಸ್ವಕ್ಷೇತ್ರದಲ್ಲಿ ಬೆಳೆಸಿದ ಪುಷ್ಪಗಳು ಉತ್ತಮ, ಕಾಡಿನಲ್ಲಿ ಬೆಳೆದ ಪುಷ್ಪಗಳು ಮಧ್ಯಮ, ಯಾಚಿಸಿ ತಂದ ಇಲ್ಲವೇ ಕ್ರಯಕ್ಕೆ ತಂದ ಪುಷ್ಪಗಳು ಅಧಮ ಮತ್ತು ಕದ್ದು ತಂದ ಪುಷ್ಪಗಳು ಅಧಮಾಧಮ ಎಂದು ತಿಳಿಯತಕ್ಕದ್ದಾಗಿತ್ತು[7]

ಶಾಸನವೊಂದರ ಪ್ರಕಾರ ದೇವರಿಗೆ ಹೂವಿನಿಂದ ಪೂಜೆ ಮಾಡುವ ವಿಧಿಯನ್ನು ಪುಷ್ಪಯಾಗವೆಂದು ಕರೆದುದನ್ನು ಗಮನಿಸಬಹುದು[8] ದೈವತ್ವಕ್ಕೆ ಮಿಗಿಲಾದ ಅರ್ಥವನ್ನು ನೀಡುತ್ತಿದ್ದ ಸಮಯದಲ್ಲಿ 'ಪುಷ್ಪಯಾಗ'ವೆಂಬ ಆಚರಣೆಯು ಜಾರಿಗೆ ಬಂದುದನ್ನು ಇಲ್ಲಿ ಗುರುತಿಸಲು ಸಾಧ್ಯವಾಗಿದೆ.

ದೇವರುಗಳಿಗೆ ಕೆಲವೊಂದು ಹೂವುಗಳು ಪ್ರಿಯವಾದವುಗಳಾಗಿದ್ದು ಅಂತಹ ಹೂವುಗಳನ್ನು ಪೂಜಿಸುವುದರಿಂದ ಒಳಿತಾಗುತ್ತದೆ ಎಂಬ ನಂಬಿಕೆ ಜನಪದರದು. ಈ ಹಿನ್ನೆಲೆಯಲ್ಲಿ ನೋಡುವುದಾದರೆ ಶಿವನಿಗೆ ತುಂಬೆ ಹೂವು, ಗಣಪತಿಗೆ ಅರ್ಕಪುಷ್ಪ ಮತ್ತು ಎಕ್ಕದ ಹೂವು, ಮಾರಮ್ಮನಿಗೆ ದೇವಗಣಿಗಿಲೆ, ಶನಿ ದೇವರಿಗೆ ಶಂಖ ಪುಷ್ಪ ಮತ್ತು ತುಳಸಿಯನ್ನು ಬಳಸುವುದು ಹೀಗೆ ಆಯಾ ದೇವರುಗಳ ಆರಾಧನೆಯ ಹಿನ್ನೆಲೆಯಲ್ಲಿ ಹೂವು ಪ್ರೀತ್ಯಾಧಾರಗಳನ್ನು ಪಡೆದುಕೊಂಡಿದೆ.

ತಾವರೆ ಹೂವು ಎಲ್ಲ ಕಡೆಗಳಲ್ಲಿಯೂ ದೈವೀ ಶಕ್ತಿಯ ಸಂಕೇತ. ಎಲ್ಲಾ ಧರ್ಮಗಳಲ್ಲಿ ಅದಕ್ಕೆ ಪವಿತ್ರ ಸ್ಥಾನವಿದೆ. ದೇವಾನುದೇವತೆಗಳ ವಾಸಸ್ಥಾನವೇ ತಾವರೆ. "ಭಾರತೀಯ ಶಿಲ್ಪದಲ್ಲಿ ಕಮಲವನ್ನು ಸೌಂದರ್ಯ ಮತ್ತು ಮಾಧುರ್ಯದ ಸಂಕೇತವಾಗಿ ಮಾತ್ರ ಪರಿಗಣಿಸದೆ ಮಂಗಳಕರ, ನಿರ್ಲಿಪ್ತತೆ, ಪವಿತ್ರತೆ ಮತ್ತು ಫಲವತ್ತತೆಯ ಸಂಕೇತವಾಗಿ ಸ್ವೀಕರಿಸಲಾಗಿದೆ"[9]

"ಆದಿಮಾನವ ಯಾವ ರೀತಿ ದೈವವನ್ನು ಕಂಡುಕೊಂಡ ಎಂಬ ಮಾರ್ಪಾಡಿನ ಒಂದು ರೂಪವೇ ಇಂದಿನ ಪೂಜಾವಿಧಾನ. ಪ್ರಾಣಿ ಬಲಿಯನ್ನು ಅರ್ಪಿಸಿ ಆದಿಮಾನವ ತೃಪ್ತಿ ಹೊಂದುತ್ತಿದ್ದ. ಕಾಲಕ್ರಮೇಣ ಮಾನವ ಸಂಸ್ಕೃತಿ ವಿಶಾಲ ಅರ್ಥವನ್ನು ಪಡೆದು ಬೃಹತ್ತಾಗಿ ಬೆಳೆಯುವಷ್ಟರಲ್ಲಿ ಪ್ರಾಣಿ ಬಲಿಯನ್ನು ವಿರೋಧಿಸುವ ದಿನಗಳು ಬಂದವು. ಅಂತಹ ಪರಿಸರದಲ್ಲಿ ಹೂವು ಮತ್ತು ಹಣ್ಣುಗಳ ಅರ್ಪಣೆಯೊಂದೇ ಅನಿವಾರ್ಯವಾಯಿತು. ಇದನ್ನು ನರಬಲಿಯ ತೀರ ಸಂಕೀರ್ಣವಾದ ರೂಪ ಎಂದು ಕರೆಯಬಹುದು. ಈ ವಿಧಾನ ಭಾರತದಲ್ಲಿ ಹೆಚ್ಚು ಕಡಿಮೆ ಎಲ್ಲಾ ಮೇಲ್ದರ್ಜೆಯ ದೇವತೆಗಳಿಗೆ ಅನ್ವಯವಾಗುತ್ತದೆ. ಬಲಿಯನ್ನು ತೀವ್ರವಾಗಿ ವಿರೋಧಿಸಿದ ಜೈನ ಮತ್ತು ಬೌದ್ಧ ಧರ್ಮಗಳ ದೇವತೆಗಳು ಈ ಬಗೆಯ ಹೂವು ಹಣ್ಣುಗಳ ಅರ್ಪಣೆಯಲ್ಲೆ ತೃಪ್ತಿಯನ್ನು ಪಡೆದುಕೊಳ್ಳಬೇಕಾಯಿತು"[10]

ದೇವಾಲಯಗಳಲ್ಲಿ ದೇವರಿಗೆ ಅರ್ಪಿಸಿ, ಅಲಂಕರಿಸಿದ ಹೂವುಗಳನ್ನು ಭಕ್ತಾದಿಗಳಿಗೆ ಪ್ರಸಾದವಾಗಿ ನೀಡುವುದು ರೂಢಿ. ಸ್ವೀಕಾರಗೊಂಡ ಹೂವು ಭಕ್ತರ ಮುಡಿಯಲ್ಲಿ ಧನ್ಯತೆಯನ್ನು ಪಡೆಯುತ್ತದೆ. ತಮ್ಮ ಬೇಡಿಕೆಯನ್ನು ಹೂವಿನ ಮೂಲಕ ದೇವರಿಗೆ ನಿವೇದಿಸಿಕೊಳ್ಳುವುದು ಸಾಮಾನ್ಯ. ಆ ಮೂಲಕ ದೇವರು ಕಷ್ಟ ಪರಿಹರಿಸುತ್ತಾನೆ ಎಂದು ಜನಪದರ ನಂಬಿಕೆ. ದೇವಾಲಯಗಳಲ್ಲಿ ದೇವರಿಗೆ ಬಳಸಿ ನೈರ್ಮಲ್ಯಗೊಂಡು ಉಳಿದ ಹೂವುಗಳನ್ನು ಕೆರೆ, ನದಿ, ಹಳ್ಳ, ತೊರೆಗೆ ಬಿಡುವರು, ಇಲ್ಲವೇ ತೆಂಗು ಇಲ್ಲವೆ ಅರಳಿಮರಗಳ ಬುಡಕ್ಕೆ ಹಾಕುವರು ಇದು ಗೊಬ್ಬರವಾಗಿ ಗಿಡಮರಗಳು ಸೊಂಪಾಗಿ ಬೆಳೆಯುವವು. ಅಲ್ಲದೆ ಈ ಗಿಡಮರಗಳನ್ನು ಯಾರು ತುಳಿಯುವುದಿಲ್ಲ ದೈವತ್ವದ ಭಾವದಿಂದ ಕಾಣುತ್ತಾರೆ.

ಇಂದಿಗೂ ನಮ್ಮಲ್ಲಿ ದೇವರಿಗೆ ಹರಕೆ ಕಟ್ಟಿಕೊಂಡು ಕೊಂಡ ಹಾಯುವುದು, ಬಲಿ ಅರ್ಪಿಸುವುದು, ಬಾಯಿಬೀಗ ಚುಚ್ಚಿಸಿಕೊಳ್ಳುವುದು, ಮಕ್ಕಳು, ಯುವಕರನ್ನು ಸಿಡಿಯಾಡಿಸುವುದು, ನಾಗರಕಲ್ಲಿಗೆ ಹಾಲೆರೆಯುವುದು, ಗಂಗಾನದಿ ಅಥವಾ ದೇವಾಲಯಗಳ ಕೊಳದಲ್ಲಿ ಸ್ನಾನ ಮಾಡುವುದು, ತೀರ್ಥವೆಂದು ಮನೆಗೆ ತರುವುದು, ಮನೆಯ ಸೂರಿಗೆ ಬೂದಗುಂಬಳ, ತೆಂಗಿನಕಾಯಿ ಕಟ್ಟುವುದು, ಮಾಟಮಂತ್ರ ಮಾಡಿಸುವುದು, ಪದವಿ ಕೆಲಸಗಳಿಗಾಗಿ ಹಸ್ತರೇಖೆ ನೋಡಿಸುವುದು, ವಾಸ್ತುದೋಷ, ಇತ್ಯಾದಿ ಇನ್ನು ಅನೇಕ ಅನಾರೋಗ್ಯಕರ ನಂಬಿಕೆಗಳಲ್ಲಿ

ಅಂಧಾಭಿಮಾನವುಳ್ಳ ಜನ ಅಪಾರ ಸಂಖ್ಯೆಯಲ್ಲಿ ಸಿಗುತ್ತಾರೆ. ಏಕೆಂದರೆ ಮೂಢನಂಬಿಕೆಗಳು ಸಾಂಕ್ರಾಮಿಕ ರೋಗದಂತೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಬಹಳ ಬೇಗನೆ ಹರಡುತ್ತವೆ. ಹೀಗಾಗಿ ಬಾಳಿಗೆ ನಂಬಿಕೆ ಬೇಕು, ಆದರೆ ಮೂಢನಂಬಿಕೆ ಬೇಡ.

ಒಟ್ಟಿನಲ್ಲಿ ನಂಬಿಕೆಗಳು ಯಾವುದೇ ಕಾರಣಕ್ಕೆ ಹುಟ್ಟಿರಲಿ ಅವು ಮಾನವನ ಅನುಭವ ಜ್ಞಾನದ ಸಂಪನ್ನತೆಯ ದ್ಯೋತಕವಾಗಿದೆ. ಈ ಅನುಭವವನ್ನು ಉಳಿಸಿಕೊಂಡು ಬರಬೇಕೆ? ಬಿಡಬೇಕೆ? ಎಂಬುದು ವೈಯಕ್ತಿಕತೆಗೆ ಸಂಬಂಧಿಸಿದ ವಿಚಾರ. ಆದರೆ ಜಾನಪದ ಅಧ್ಯಯನ ದೃಷ್ಟಿಯಿಂದ ಮಾನವನ ಸಾಂಸ್ಕೃತಿಕ ಬೌದ್ಧಿಕ ವಿಕಾಸದ ಮಜಲುಗಳನ್ನು ಅರಿಯುವ ನಂಬಿಕೆಗಳು ಬೇಕೆಂಬುದು ಸತ್ಯ. ಎಲ್ಲಾ ನಂಬಿಕೆಗಳನ್ನು ವಿಶ್ಲೇಷಣೆಗೆ ಒಳಪಡಿಸಿ ಅವುಗಳ ಮೌಲ್ಯವನ್ನು ನಿರ್ಧರಿಸಬೇಕಾಗುತ್ತದೆ.

## 5.2 ಆಚರಣೆಗಳು

'ಆಚರಣೆ'ಗಳು ಆರಾಧನೆಗೆ ನೆರವಾಗುವಂತವು. ಆರಾಧನೆ ಎನ್ನುವ ಪರಿಕಲ್ಪನೆ ಆಚರಣೆಯನ್ನು ತನ್ನ ಕ್ರಿಯಾ ಸಂದರ್ಭದಲ್ಲಿ ಬಳಸಿಕೊಳ್ಳುವುದರಿಂದಲೇ ಅದು ಹೆಚ್ಚು ಅರ್ಥಗರ್ಭಿತವಾಗುತ್ತದೆ. ಆಚರಣೆಗಳು ಯಾವುದೇ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭಗಳಲ್ಲಿ ವ್ಯಕ್ತಿಯ ವಸ್ತು ವಿಷಯ ಮತ್ತು ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಹೀಗೇ ನಡೆದುಕೊಳ್ಳಬೇಕು ಹಾಗೂ ಆ ಸಂದರ್ಭದಲ್ಲಿ ಹೀಗೆಯೇ ಮಾಡಬೇಕೆಂಬ ವಿಧಿ ನಿಷೇಧಗಳ ಕ್ರಿಯಾತ್ಮಕ ಸ್ವರೂಪದಿಂದ ಕೂಡಿರುವಂತವು.

ಹಬ್ಬಗಳ ಸಂದರ್ಭಗಳಲ್ಲಿ ಆಚರಣೆಗಳು ತನ್ನ ಅಸ್ತಿತ್ವದಲ್ಲಿ ಪೂರ್ಣ ಧಾರ್ಮಿಕ ಸ್ವರೂಪವನ್ನು ಪಡೆದು ಕೊಂಡಿರುತ್ತವೆ. ಜನಪದ ಧರ್ಮದಲ್ಲಿ ದೇವರು ಅಥವಾ ದೇವತೆಗಳಿಗೆ, ಭೂತ ಪ್ರೇತಗಳಿಗೆ ವಿವಿಧ ಪದಾರ್ಥಗಳನ್ನು ಅರ್ಪಿಸಿ ಅದರಿಂದ ಫಲಾಪೇಕ್ಷೆಗಳನ್ನು ಬಯಸುವ ರೂಢಿಯಿದೆ. ಹಾಗೆ ಅರ್ಪಿಸುವ ಪದಾರ್ಥಗಳು ದೈವಗಳಿಗೆ ಅನುಗುಣವಾಗಿ ಭಿನ್ನವಾಗಿರುತ್ತವೆ. ಕೆಲವು ಸಾಮಾನ್ಯವಾಗಿರುತ್ತವೆ. ಆ ಪದಾರ್ಥಗಳು ನೀರಿನಿಂದಾಗಿರಬಹುದು, ಸಸ್ಯದ ಉತ್ಪತ್ತಿಗಳಾಗಿರ ಬಹುದು, ಬಲಿ ನೀಡುವ ಜೀವಿಗಳಲ್ಲಿ ಕುರಿ, ಕೋಳಿ, ಮೇಕೆ, ಕೋಣ, ಹಂದಿ ಮುಂತಾದವುಗಳಾಗಿರಬಹುದು. ಇಂಥ ಹಲವು ಪದ್ಧತಿಗಳ ನಡುವೆ ಆಚರಣೆಗಳು ಧಾರ್ಮಿಕ ಸ್ವರೂಪ ಪಡೆದು ವ್ಯಾಪಕ ಕ್ರಿಯಾಚಟುವಟಿಕೆಯಿಂದ ಕೂಡಿರುತ್ತವೆ.

ದೈವ ಸಂಬಂಧವಾಗಿ ಹಬ್ಬಗಳಲ್ಲಿ ಜರುಗುವ, ಅನುಸರಿಸುವ ಆಚರಣೆಗಳಲ್ಲಿ ಕ್ರಮಬದ್ಧತೆಯಿರುತ್ತದೆ. ನಿಗಧಿತ ದೈವಕ್ಕೆ ಶಿಸ್ತು ಆಚಾರಗಳ ಕ್ರಮವನ್ನು ಚಾಚೂ ತಪ್ಪದೆ

ಅನುಸರಿಸುತ್ತಾರೆ. ಕ್ರಮತಪ್ಪಿದರೆ ದೇವರ ಶಾಪಕ್ಕೆ ಗುರಿಯಾಗುತ್ತೇವೆಂಬ ಭಯದಿಂದ ಯಾವ ಆಚರಣೆಗಳಲ್ಲಿಯೇ ಆಗಲಿ ಮಾಡುವ, ಅನುಸರಿಸುವ ನಿಯಮಗಳು ಬಹಳ ಮಹತ್ವದಿಂದ ಕೂಡಿರುತ್ತವೆ. ಈ ಎಲ್ಲಾ ಆಚರಣಾ ವಿಧಾನಗಳನ್ನು ಹಿಂದಿನ ಪದ್ಧತಿಯಂತೆ ಕ್ರಮತಪ್ಪದೆ ಅನುಭವದ ಮೂಲಕ ಹಿರಿಯರ ಸಮ್ಮುಖದಲ್ಲಿ ನೆರವೇರಿಸುತ್ತಾರೆ. ಈ ನಿಟ್ಟಿನಲ್ಲಿ ಪ್ರತಿಯೊಂದು ಹಬ್ಬದ ದೈವಗಳ ಆರಾಧನೆಯ ಮೂಲ ಉದ್ದೇಶ ಒಂದೇ ಆಗಿದ್ದರೂ, ಆಚರಣಾ ವಿಧಾನ ದೈವಕ್ಕೆ, ಸಮೂದಾಯಕ್ಕೆ ಅನುಗುಣವಾಗಿ ಭಿನ್ನವಾಗಿರುತ್ತವೆ. ಈ ಕಾರಣಕ್ಕಾಗಿ ಆಚರಣೆಗಳು ನಿರ್ದಿಷ್ಟ ಉದ್ದೇಶಗಳನ್ನು ಹೊಂದಿದ್ದು, ಅವುಗಳ ಆಚರಣಾ ಸಂದರ್ಭಗಳಲ್ಲಿ ಮಹತ್ವದ ದಿನಗಳಾಗಿ ಗೌರವಿಸಲ್ಪಡುತ್ತವೆ.

"ಸಂಪ್ರದಾಯ ಅಂಗೀಕರಿಸಿದ ಧಾರ್ಮಿಕ ಮತ್ತು ಮಾಂತ್ರಿಕ ಆಚರಣೆಗಳ ಮೊತ್ತವೇ ಆಚರಣೆ"[11] ಆಚರಣೆಯನ್ನು ವಿವರಿಸುವಾಗ "ಮತ ಧರ್ಮಗಳಿಗೆ ಸಂಬಂಧಿಸಿದಂತೆ ಅಗೋಚರ ದೈವಶಕ್ತಿಗಳ ಪ್ರೀತ್ಯರ್ಥವಾಗಿ ಮಾನವ ನಡೆಸುತ್ತಾಬಂದಿರುವ ಮತಾಚಾರಗಳಿಗೆ, ಕರ್ಮವಿಧಿಗಳಿಗೆ ಈ ಹೆಸರಿದೆ"[12]

**ಸಂಕ್ರಾಂತಿ ಹಬ್ಬದ ಧಾರ್ಮಿಕ ಆಚರಣೆ** : ಹಿಂದೂಗಳ ಪಾಲಿಗೆ ಸಂಕ್ರಾಂತಿ ಸಡಗರದ ಹಬ್ಬ ಕೌಟುಂಬಿಕ ಭ್ರಾಂತಿಗಳನ್ನು ದೂರ ಮಾಡಿ ನವಕ್ರಾಂತಿ ತರುವ ಕಾಲ. ಈ ಕಾರಣಕ್ಕಾಗಿಯೇ ಹಳ್ಳ-ಕೊಳ್ಳಗಳ ಬಳಿ ಹೋಗಿ ಪುಣ್ಯಸ್ನಾನ ಮಾಡಿಬರುವ ಆಚರಣೆ ಇದೆ. ಸೂರ್ಯನ ಹಾಗೆಯೇ ಬದುಕಿನ ಚಲನೆಗಳು ಬದಲಾಗಲಿ ಎನ್ನುವುದು ಹಬ್ಬದ ಸಂದೇಶ. ತಮಿಳುನಾಡಿನಲ್ಲಿ 'ಪೊಂಗಲ್' ಎಂದು, ಕೇರಳದಲ್ಲಿ ಅಯ್ಯಪ್ಪಸ್ವಾಮಿ ಭಕ್ತರು 'ಮಕರಮಿಳಕ್ಕು' ಎಂದೂ, ಪಂಜಾಬ್ ಹರಿಯಾಣ, ಮಹಾರಾಷ್ಟ್ರಗಳಲ್ಲಿ 'ಲೋಹರಿ' ಎಂದೂ ಕರೆಯುತ್ತಾರೆ. ಹೀಗೆ ಸಂಕ್ರಾಂತಿಯ ಧಾರ್ಮಿಕ ಮುಖಗಳೂ ಅನನ್ಯ ಪರಿವರ್ತನೆ ಹೊಂದಿವೆ.

**ಸಂಕ್ರಾಂತಿಯ ಹಬ್ಬದ ಜನಪದ ಪದ್ಧತಿಗಳು** : 'ಎಳ್ಳುಬೆಲ್ಲ ತಿಂದು ಒಳ್ಳೊಳ್ಳೆ ಮಾತಾಡೋಣ' ಎಂದು ಹೇಳಿ ಪರಸ್ಪರ ಎಳ್ಳುಬೆಲ್ಲ ಹಂಚುವುದು ಜನಪದರು ಹಿಂದಿನಿಂದ ಮಾಡಿಕೊಂಡು ಬಂದ ರೂಢಿ. ಹಳ್ಳಿಗಾಡಿನಲ್ಲಿ ಈ ಪದ್ಧತಿ ಇನ್ನಷ್ಟು ಸಾಧ್ಯತೆಗಳನ್ನು ಕಂಡುಕೊಂಡಿದೆ. ಜಗಳವಾಡಿದ ಬಂಧುಗಳು ಮುನಿಸಿಕೊಂಡ ದಂಪತಿ, ಬೇರೆಯಾದ ಸ್ನೇಹಿತರನ್ನು ಮಾತನಾಡಿಸಲು ಇದೊಂದು ಸುಸಂದರ್ಭ. ಎಳ್ಳು ಬೆಲ್ಲ ಕೊಟ್ಟು ಹಳತನ್ನು ಮರೆತುಬಿಡುವ ಸಂಪ್ರದಾಯ ಶ್ರೇಷ್ಠ ಆಚರಣೆಯೇ ಸರಿ. ಮಾಗಿಯ ಕಾಲವಾದ್ದರಿಂದ ಈ ಸಂದರ್ಭದಲ್ಲಿ ಮೈಕೈ ಚಳಿಯಿಂದ ಬಿರುಕು ಬಿಟ್ಟಿರುತ್ತವೆ. ಎಣ್ಣೆಗೆ ಸಂಬಂಧಿಸಿದ ಖಾದ್ಯಗಳನ್ನು ತಿಂದರೆ ಆ ಬಿರುಕು

ಮುಚ್ಚುತ್ತದೆಂಬುದು ವೈಜ್ಞಾನಿಕ ತಿಳುವಳಿಕೆ ಹಾಗಾಗಿ ಎಳ್ಳು ಬೆಲ್ಲದ ಮಿಶ್ರಣವು ಶೀತ–ವಾತದಿಂದ ಉಂಟಾಗುವ ಜಡ್ಡು, ಆಲಸ್ಯಗಳನ್ನು ದೂರಮಾಡುವ ದ್ರವ್ಯ ಎನ್ನುವುದು ನಂಬಿಕೆ. ಈ ಕಾರಣಕ್ಕಾಗಿಯೇ ಹಬ್ಬದಲ್ಲಿ ಎಳ್ಳು–ಬೆಲ್ಲದ ಮಿಶ್ರಣ ಹಂಚುತ್ತಾರೆ ಎನ್ನುವುದು ಇನ್ನೊಂದು ನಂಬಿಕೆ.

**ಒಡಬಾಯಿ ಹರಕೆಯ ಆಚರಣಾಪದ್ಧತಿ** : ಪಡುವಾರಹಳ್ಳಿ ಜೋಡಿಮಾರಮ್ಮ ದೇವಾಲಯದಲ್ಲಿ ಒಡಬಾಯಿ ಆಚರಣೆ ಶನಿವಾರದ ರಾತ್ರಿ ಎರಡು ಗಂಟೆಗೆ ನಡೆಯುತ್ತದೆ. ಒಡಬಾಯಿಯನ್ನು ಪರಿಶಿಷ್ಟ ಜಾತಿಯವರು ಊರಿನ ತುಂಬಾ ಸಾರುವರು. ಸಾರಿದ ಅನಂತರ ಇವರು ಚಿಕ್ಕರಸಿನಾಯಕರ ಮನೆಯ ದೇವರ ಕೋಣೆಯಲ್ಲಿ ಇರುವ ದೇವರ ಒಲೆಯಲ್ಲಿ ಬಲಿ ಅನ್ನ ಬೇಯಿಸಿ ಕುಕ್ಕರಹಳ್ಳಿ ಕೆರೆಯ ಬಳಿಗೆ ಹೋಗುವರು. ಅಲ್ಲಿ ಮಂಟಪದ ಬಳಿ ಇರುವ ಬುಗರಿ ಮರದ ಹತ್ತಿರ ಹಿಮ್ಮುಖವಾಗಿ ನಿಂತು ಇಬ್ಬರು ಪರಿಶಿಷ್ಟ ಜಾತಿಯ ವ್ಯಕ್ತಿಗಳು ಬಲಿ ಅನ್ನವನ್ನು ಉಂಡೆಗಳಾಗಿ ಮಾಡಿ ಹಿಂದಕ್ಕೆ ಎಸೆಯುವರು. ಹಿಂದಿರುಗಿ ನೋಡುವಂತಿಲ್ಲ. ಇದು ಮಾರಮ್ಮ ದೇವರಿಗೆ ಅರ್ಪಿಸಿದ್ದಾಗಿರುತ್ತದೆ. ಒಂದು ವೇಳೆ ಬಲಿ ಅನ್ನ ಕೊಡದಿದ್ದರೆ ಮಾರಮ್ಮ ದೇವರುಗಳು ಊರಿನ ಜನರನ್ನು ರೋಗರುಜಿನಗಳ ಮೂಲಕ ಬಲಿ ತೆಗೆದುಕೊಳ್ಳುತ್ತಾರೆ ಎಂಬುದು ಜನರ ನಂಬಿಕೆ.

ಬಲಿ ಅನ್ನ ಕೊಟ್ಟ ಅನಂತರ ಚಿಕ್ಕರಸಿನಾಯಕರ ಮನೆಗೆ ಹಿಂದಿರುಗಿ ಉಳಿದ ಬಲಿ ಅನ್ನವನ್ನು ತಮ್ಮ ಬಟ್ಟೆಯ ಕಿಸೆಯಲ್ಲಿ ತುಂಬಿಕೊಂಡು ಜೋಡಿಮಾರಮ್ಮ ದೇವರ ಗುಡಿಯ ಬಳಿ ಬರುವರು. ಆ ಸಮಯ ಒಡಬಾಯಿ ಹರಕೆ ಹೊತ್ತವರು ಬಲಿ ಅನ್ನ ತಂದವರ ಮೈಮೇಲೆ ಬಿದ್ದು ಒಂದು ಅಗಳು ಬಿಡದಂತೆ ಬಲಿ ಅನ್ನವನ್ನು ಕಸಿದುಕೊಳ್ಳುತ್ತಾರೆ. ಅನಂತರ ಹರಕೆ ಹೊತ್ತವರನ್ನು ಬಿಟ್ಟು ಉಳಿದವರೆಲ್ಲ ಅವರವರ ಮನೆಗೆ ತೆರಳುತ್ತಾರೆ. ಹರಕೆ ಹೊತ್ತವರು ಬೆತ್ತಲಾಗಿ ತಮ್ಮ ಹರಕೆಯನ್ನು ಕುಣಿಯುವುದರ ಮೂಲಕ ತೀರಿಸುತ್ತಿದ್ದರು ಎಂದು ಹಿರಿಯರು ಹೇಳುತ್ತಾರೆ. ಆದರೆ ಈ ಹರಕೆಯ ಆಚರಣೆ ಇಂದು ಕಂಡುಬರುವುದಿಲ್ಲ.

**ಅಂಬಲಿ ಆಚರಣೆ** : ಮೈಸೂರು ಕರಗದಲ್ಲಿ ಅಂಬಲಿಯು ಕರಗ ಉತ್ಸವದ ಅಂತಿಮ ದಿನದ ಆಚರಣೆ. ಕರಗ ಉತ್ಸವವು ಶನಿವಾರ ರಾತ್ರಿ ಹೊರಟು ಭಾನುವಾರ ಬೆಳಿಗ್ಗೆ ದೇವಸ್ಥಾನಕ್ಕೆ ಬರುತ್ತದೆ. ಪೂಜಾವಿಧಿ ವಿಧಾನಗಳು ನಡೆದ ಅನಂತರದಲ್ಲಿ ಅಂಬಲಿಯನ್ನು ದೇವರಿಗೆ ನೈವೇದ್ಯ ಮಾಡಲಾಗುತ್ತದೆ. ಅಂಬಲಿ ಎಂದರೆ ಮೂರು ದಿನದ ಮುಂಚೆ ನೆನೆಸಿದ ರಾಗಿ ಹಿಟ್ಟಿಗೆ ಅಕ್ಕಿಯ ತರಿಯನ್ನು ಹಾಕಿ ಮೊಸರಿನಿಂದ ಕಲಸಿ ಅದನ್ನು ದೇವರಿಗೆ ಎಡೆ ಮಾಡುತ್ತಾರೆ. ಅನಂತರ

ಓಕುಳಿ ಆಡುತ್ತಾರೆ. ಅಂದರೆ ಅರಿಶಿಣದ ನೀರನ್ನು ಎರಚಾಡುವುದು. ಇದು ದೇವರಿಗೆ ತಂಪು ಎಂಬ ಕಲ್ಪನೆ. ಅನಂತರ ದೇವರಿಗೆ ತಂಬಿಟ್ಟಿನ ಆರತಿ ಮಾಡಲಾಗುತ್ತದೆ. ಊರಿನವರೆಲ್ಲರೂ ತಂಬಿಟ್ಟನ್ನು ತಂದು ದೇವರಿಗೆ ಆರತಿಯನ್ನು ಬೆಳಗಿ ಪೂಜೆ ಮಾಡುತ್ತಾರೆ.

**ಮಡೆ ಹುಯ್ಯುವ ಆಚರಣೆ(ಚಾಮುಂಡಿಬೆಟ್ಟ) :** ಚಾಮುಂಡಿಬೆಟ್ಟದಲ್ಲಿ ಕನ್ನಕನ್ನಾಡಿ ಉತ್ಸವದ ಅನಂತರದಲ್ಲಿ 'ಮಡೆಹುಯ್ಯುವ' ಆಚರಣೆ ನಡೆಯುತ್ತದೆ. ಇದು ಅಡಿಗೆ ಮಾಡುವ ಆಚರಣಾ ಪದ್ಧತಿಯಾಗಿದೆ. ಚಾಮುಂಡಿಬೆಟ್ಟ ಮತ್ತು ಅದರ ಸುತ್ತಮುತ್ತ ಇರುವ ಹಳ್ಳಿಗಳ ಜನರು ನಡೆಸುವ ಆಚರಣೆಯಾಗಿದೆ. ದೇವಾಲಯದ ಹೊರಗಡೆ ಬೆಟ್ಟದ ಕೆಳಗೆ ಮತ್ತು ಅದರ ಸುತ್ತಮುತ್ತ ಪ್ರತ್ಯೇಕವಾಗಿ ಕಲ್ಲುಗುಂಡುಗಳ ಒಲೆಗಳನ್ನು ನಿರ್ಮಿಸಿ ಅದಕ್ಕೆ ಅರಿಶಿಣ ಕುಂಕುಮ ಹಚ್ಚಿ, ಕರ್ಪೂರ ಗಂಧದಕಡ್ಡಿ ಬೆಳಗಿ, ತೆಂಗಿನಕಾಯಿ ಒಡೆದು, ಬಾಳೆಹಣ್ಣಿನ ತುದಿ ಮುರಿದು ಪೂಜೆಸಲ್ಲಿಸಿ ಅಡುಗೆಯನ್ನು ಆರಂಭಿಸುತ್ತಾರೆ. ಇದರಲ್ಲಿ ಮುಖ್ಯವಾಗಿ ಭಾಗಿಗಳಾಗುವ ಹೆಂಗಸರು ಮತ್ತು ಅವರ ಕುಟುಂಬದವರೆಲ್ಲ ಆ ದಿನ ತಮ್ಮ ಮನೆಗಳನ್ನು ಗುಡಿಸಿ ಸಾರಿಸಿ ರಂಗೋಲಿ ಇಟ್ಟು ಇಲ್ಲಿಯೂ ಅದೇ ರೀತಿ ಮಾಡಿ ಅಡುಗೆ ಮಾಡುತ್ತಾರೆ. ಅನ್ನದೊಂದಿಗೆ ಬೇಳೆಯನ್ನು ಬೇಯಿಸಿ ಗುಡಿಗೆ ಹೋಗಿ ಪೂಜೆ ಮಾಡಿಸಿಕೊಂಡು ತಂದ ಅನ್ನಕ್ಕೆ, ದೇವಾಲಯದಿಂದ ತಂದ ತೀರ್ಥವನ್ನು ಹಾಕಿ ದೇವರಿಗೆ ಎಡೆ ಇಡುತ್ತಾರೆ. ಉಳಿದಿದ್ದನ್ನು ಅಲ್ಲಿಗೆ ಬಂದಿರುವವರಿಗೆ ಪ್ರಸಾದವೆಂದು ನೀಡುತ್ತಾರೆ. ಬೆಟ್ಟದಲ್ಲಿ ಮೊದಲು ಪ್ರಾಣಿಬಲಿ ನೀಡಿ ಅಡುಗೆ ಮಾಡಿ ಹಬ್ಬ ಆಚರಿಸುತ್ತಿದ್ದರು. ಆದರೆ ಈಗ ಪ್ರಾಣಿಬಲಿ ನಿಷೇಧವಾಗಿರುವುದರಿಂದ ತಮ್ಮ ತಮ್ಮ ಮನೆಗಳಲ್ಲಿ ದೇವಾಲಯದಿಂದ ತಂದ ತೀರ್ಥವನ್ನು ಕುರಿ ಕೋಳಿಗಳಿಗೆ ಚಿಮುಕಿಸಿ ಬಲಿನೀಡಿ ಮನೆಯಲ್ಲಿಯೇ ಎಡೆ ಇಟ್ಟು ಪ್ರಸಾದವೆಂದು ಸ್ವೀಕರಿಸುತ್ತಾರೆ.

**ಮಡೆ ಹುಯ್ಯುವ ಆಚರಣೆ(ಉತ್ತನಹಳ್ಳಿ) :** ಉತ್ತನಹಳ್ಳಿಯಲ್ಲಿ ಮಡೆಹುಯ್ಯುವ ಕ್ರಿಯಾವಿಧಿಯು ದೇವಿಯ ಜಾತ್ರಾ ವಿಶೇಷಗಳಲ್ಲಿ ಒಂದು. ಈ ಕ್ರಿಯಾವಿಧಿಯನ್ನು ಗ್ರಾಮದವರು ಮಾತ್ರವಲ್ಲದೆ ನೆರೆಯ ಹಳ್ಳಿಗಳಾದ ಹೊಸುಂಡಿ, ಗುಡುಮಾದನಹಳ್ಳಿ, ಹಡಜನ, ಮಾಕನುಂಡಿ, ಚಾಮುಂಡಿ ಬೆಟ್ಟದ ಬ್ರಾಹ್ಮಣೇತರ ಭಕ್ತರು ನೆರವೇರಿಸುತ್ತಾರೆ. ಇದು ಮಧ್ಯಾಹ್ನ 2.30ಕ್ಕೆ ಸರಿಯಾಗಿ ದೇವಾಲಯದ ಹೊರ ಭಾಗದಲ್ಲಿ ಪ್ರಶಸ್ತವಾದ ದಿಣ್ಣೆಯ ಮೇಲೆ ಒಲೆಗಳನ್ನು ಸಾಲು ಸಾಲಾಗಿ ಮೂರು ಕಲ್ಲುಗಳನ್ನು ಇಟ್ಟು ನಿರ್ಮಿಸುತ್ತಾರೆ. ಇದಕ್ಕೆ ಮೊದಲು ಬೆಳಿಗ್ಗೆಯೇ ಇದು 'ನಮ್ಮದು ಒಲೆ' ಎಂದು ಬೂದಿಯನ್ನು ಕೆರೆದು ಗುರುತು ಮಾಡಿ ಹೋಗಿರುತ್ತಾರೆ. ಮಡೆಯ ಪೂರ್ವ ತಯಾರಿಯಾಗಿ ಒಂದು ಪಿಂಡಿ ಸೌದೆ ಕಟ್ಟಿಕೊಂಡು ಒಂದು ಪಾತ್ರೆಯಲ್ಲಿ ನೀರು, ಅಕ್ಕಿಯನ್ನು

ಹಾಕಿ ಸಿದ್ದಗೊಳಿಸಿಕೊಂಡು ಎಲ್ಲರು ಸಾಲಾಗಿ ತಲೆಯಮೇಲೆ ಪಾತ್ರೆಯನ್ನು ಹೊತ್ತು ತಂದು ಮೊದಲೇ ನಿರ್ಮಿಸಿದ ಒಲೆಯ ಮೇಲಿಟ್ಟು ನೈವೇದ್ಯ ತಯಾರಿಸುತ್ತಾರೆ. ತಯಾರಿ ಆದ ನೈವೇದ್ಯಕ್ಕೆ ತೀರ್ಥವನ್ನು ದೇವಸ್ಥಾನದ ಅರ್ಚಕರು ಪ್ರೋಕ್ಷಿಸುತ್ತಾರೆ.

ಈ ಕ್ರಿಯಾವಿಧಿಗೆ ಮಡೆ ಹುಯ್ಯುವುದು ಅಥವಾ ವಿಧಿವಹಿತ ಅಡುಗೆ ಮಾಡುವುದು ಎಂಬ ಹೆಸರು. ಮಡೆ ಸಿದ್ದವಾದ ಬಳಿಕ ಮಹಿಳೆಯರು ಮತ್ತು ಪುರುಷರು ನೈವೇದ್ಯದ ಪಾತ್ರೆಯನ್ನು ತಲೆಯಮೇಲೆ ಹೊತ್ತುಕೊಂಡು ತಮ್ಮ ಮನೆಗಳಿಗೆ ಹಿಂದಿರುಗುತ್ತಾರೆ. ಮನೆಗೆ ತರುತ್ತಿದ್ದಂತೆ ಬಾಗಿಲ ಹೊರಗೆ ನಿಲ್ಲಿಸಿ ಪಾದವನ್ನು ತೊಳೆದು ಮಡೆಯನ್ನು ಒಳಕ್ಕೆ ತೆಗೆದುಕೊಂಡು ಹೋಗುತ್ತಾರೆ. ಮತ್ತೆ ಮನೆಯ ಒಳಗೆ ನೈವೇದ್ಯಕ್ಕೆ ಪೂಜೆಸಲ್ಲಿಸಿ ಮನೆಮಂದಿ ಮತ್ತು ನೆಂಟರಿಷ್ಟರೆಲ್ಲ ಸೇರಿ ಪ್ರಸಾದವೆಂದು ಸ್ವೀಕರಿಸುತ್ತಾರೆ.

### ಬಲಿ ಆಚರಣೆ

ಈ ಹಿಂದೆ ವಿಧಿಗಳನ್ನು ಮೀರಿದ, ನಿಷಿದ್ಧಗಳನ್ನು ಮುರಿದರೆ ದೇವ ದೇವತೆಗಳು ಕೋಪಗೊಂಡು ಊರಿಗೆ ಕೆಡುಂಟು ಮಾಡುತ್ತಾರೆ ಹಾಗೂ ಬೆಳೆಗಳು ನಾಶವಾದರೆ, ಸಾಂಕ್ರಾಮಿಕ ರೋಗಗಳು ಕಾಣಿಸಿಕೊಂಡರೆ ಅದಕ್ಕೆ ದೈವದ ಅತೃಪ್ತಿಯೇ ಕಾರಣ, ಅದಕ್ಕಾಗಿ ಆ ದೈವಗಳನ್ನು ಸಂತೃಪ್ತಿಗೊಳಿಸಲು ಬಲಿ ಅರ್ಪಣೆಯ ಕಾಣಿಕೆ ಕೊಡಬೇಕೆಂಬ ಹಿನ್ನೆಲೆಯಲ್ಲಿ ದೈವಗಳಿಗೆ ಬಲಿಕೊಡುವ ಪದ್ಧತಿ ಆರಾಧನೆಯ ಸಂದರ್ಭದ ಒಂದು ಅಂಗವಾಗಿ ಬೆಳೆದು ಬಂದಿದೆ. ವಿವಿಧ ಬುಡಕಟ್ಟುಗಳಲ್ಲಿ, ಸಮುದಾಯಗಳಲ್ಲಿ ಪಶುಬಲಿ, ನರಬಲಿ, ಪ್ರಾಣಿಬಲಿ, ಕೃಷಿ ಉತ್ಪನ್ನಗಳ ಕಾಣಿಕೆ ಕೊಡುವ ಆಚರಣೆಗಳು ರೂಢಿಗತವಾಗಿ ಬಂದಿವೆ.

ದೇವ–ದೇವತೆಗಳಲ್ಲಿ ಹಲವು ದೈವಗಳು ಬಲಿ ಪ್ರಿಯರಾಗಿದ್ದು, ಮತ್ತೆ ಕೆಲವು ದೈವಗಳು ಸಿಹಿ–ಸಪ್ಪೆ ಊಟ ಬಯಸುತ್ತಾರೆ. ಬಲಿ ಪದ್ಧತಿಯು ಗೂಢವಾದ ಮತ್ತು ಕ್ರೂರವಾದ ಆಚರಣೆಗಳಾಗಿದ್ದು ಪ್ರಾರಂಭದಲ್ಲಿ ನರಬಲಿ ಮತ್ತು ಪಶು ಬಲಿಯಂಥವು ರೂಢಿಯಲ್ಲಿದ್ದವು. ಯಾವುದೇ ದೈವಕ್ಕೆ ಕುರಿ, ಕೋಳಿ, ಆಡು ಇತ್ಯಾದಿಗಳ ಬಲಿಕೊಡುವ ಸಂದರ್ಭದಲ್ಲಿ ಜನಪದರಿಗೆ ಅವು ಕೇವಲ ಕಾಣಿಕೆ, ಅರ್ಪಣೆಗಳೆನಿಸದೆ ಆ ಬಲಿಯು ದೈವವನ್ನು ಸಂತೃಪ್ತಿಗೊಳಿಸುತ್ತದೆಂಬ ಪ್ರಬಲ ನಂಬಿಕೆ ಜೊತೆಗೆ, ಆ ದೇವರೊಂದಿಗೆ ತಾವು ಒಂದಾದೆವು ಎನ್ನುವ ಶ್ರದ್ದೆಯಿರುತ್ತದೆ. ಬಲಿಯಿಂದ ರಕ್ತ ಚೆಲ್ಲಿದಾಗ ಆ ದೇವತೆಗೂ ನಮಗೂ ಒಂದು ಅವಿನಾಭಾವ ರಕ್ತ ಸಂಬಂಧ ಏರ್ಪಡುತ್ತದೆಂಬ ನಿಷ್ಠೆ ಇಲ್ಲಿ ಮುಖ್ಯವಾಗುತ್ತದೆ.

**ನರಬಲಿ :** ಚಾಮುಂಡಿಬಟ್ಟದಲ್ಲಿ ನರಬಲಿ ನಡೆಯುತ್ತಿತ್ತು ಎಂಬುದನ್ನು ಅಬ್ಬೆದುಬಾಯಿ ಎಂಬ ಫ್ರೆಂಚ್ ಸುವಾರ್ತ ಪ್ರಸಾರಕರು ಘಟನೆಯನ್ನು ಈ ರೀತಿಯಾಗಿ ದಾಖಲಿಸಿದ್ದಾರೆ. **"**ಶ್ರೀರಂಗಪಟ್ಟಣಕ್ಕೆ ಅತಿ ದೂರವೇನಲ್ಲದ ಬೆಟ್ಟದ ತಪ್ಪಲಿಗೆ ಸೇರಿದಂತೆ ಮೈಸೂರು ಪಟ್ಟಣವಿದೆ. ಆ ಬೆಟ್ಟದ ಮೇಲೆ ಒಂದು ಸಣ್ಣ ದೇವಾಲಯವಿದೆ. ಅದು ಈಗಲೂ ಇರುವುದನ್ನು ಕಾಣಬಹುದು. ಮೂರ್ತಿ ಪೂಜಕರಾದ ರಾಜರು ರಾಜ್ಯವನ್ನು ಆಳುತ್ತಿದ್ದಾಗ ಅಲ್ಲಿ ಕೊಡುತ್ತಿದ್ದ ನರಬಲಿಯ ದೆಸೆಯಿಂದ ಈ ದೇವಾಲಯ ಎಲ್ಲೆಲ್ಲೂ ಪ್ರಖ್ಯಾತವಾಗಿತ್ತು. ತಾವು ಬಾಲಕರಾಗಿದ್ದಾಗ ಈ ಘೋರ ಪದ್ಧತಿ ಆಚರಣೆಯಲ್ಲಿತ್ತೆಂದು ಮುದುಕರು ನನಗೆ ಹೇಳಿದರು. ಚಾಮುಂಡಿ ಬೆಟ್ಟಕ್ಕೆ ಆದಿಯಲ್ಲಿ ನಿಜವಾದ ಹೆಸರು ಮಹಾಬಲಗಿರಿ ಎಂದು**"**[13]

**ಕೋಣನ ಕುಣಿತ :** ಶಕ್ತಿದೇವತೆಯ ಆರಾಧನ ಸಂಸ್ಕೃತಿಯಲ್ಲಿ ಪ್ರಾಣಿಬಲಿ ಸರ್ವೆಸಾಮಾನ್ಯ. ಕರ್ನಾಟಕದಲ್ಲಿ ಈ ಶಕ್ತಿದೇವತೆಗೆ ಕೋಣವನ್ನು ಬಲಿಕೊಡುವ ಪದ್ಧತಿ ತೀರ ಇತ್ತೀಚಿನವರೆಗೆ ಚಾಲ್ತಿಯಲ್ಲಿತ್ತು. **"**ಜನರಿಗೆ ಕಂಟಕ ಪ್ರಾಯನಾಗಿದ್ದ ಮಹಿಷಾಸುರನನ್ನು ಚಾಮುಂಡಿ ಮರ್ಧಿಸಿದ ಹಿನ್ನೆಲೆಯಲ್ಲಿ ಕುಣಿತ ನಡೆಯುತ್ತದೆ. ಮೊದಲಿಗೆ ದೇವಿಗೆ ಬಲಿಕೊಟ್ಟು ಕೋಣನ ತಲೆಯನ್ನು ಹೊತ್ತು ಭಕ್ತರು ಕುಣಿಯುತ್ತಿದ್ದರು**"**[14] ಮೈಸೂರಿನ ದಕ್ಷಿಣ ಭಾಗ ದಟ್ಟಾರಣ್ಯವಾಗಿದ್ದು, ಅಲ್ಲಿ ಅಪಾರ ಸಂಖ್ಯೆಯ ಕಾಡೆಮ್ಮಗಳಿದ್ದ ಬಗ್ಗೆ ಆಧಾರಗಳಿವೆ. ಇವುಗಳಿಂದಾಗಿಯೇ ಈ ಭಾಗಕ್ಕೆ ಮಹಿಷನಾಡು ಎಂಬ ಹೆಸರು ಬಂದಿತು. ಸರ್ಕಾರದ ಕಠಿಣ ಕಾನೂನುಗಳಿಂದಾಗಿ ಈಗ ಬಲಿ ಸಂಪ್ರದಾಯ ಕಡಿಮೆಯಾಗಿದ್ದರೂ ಅಲ್ಲಲ್ಲಿ ನಡೆದ ಪ್ರಸಂಗಗಳು ವರದಿಯಾಗುತ್ತಿವೆ. ಈಗಲೂ ಅನೇಕ ಶಕ್ತಿದೇವತೆಯ ದೇವಾಲಯಗಳಲ್ಲಿ ಕೋಣವೊಂದನ್ನು ಸಾಕುವ ಪದ್ಧತಿ ನಡೆದುಕೊಂಡೇ ಬರುತ್ತಿದೆ. ಉದಾಹರಣೆಗೆ: ಶಿರಸಿಯ ಮಾರಿಕಾಂಬಾ ದೇವಾಲಯದಲ್ಲಿ ಈಗಲೂ ಕೋಣವನ್ನು ಸಾಕಲಾಗುತ್ತಿದೆ. ಇಲ್ಲಿ ಕೋಣವನ್ನು ಕಡಿಯದೆ ಸಿರಂಜ್ ಮೂಲಕ ಕೋಣದ ಸ್ವಲ್ಪ ರಕ್ತವನ್ನು ತೆಗೆದು ಮಾರಿಕಾಂಬೆಗೆ ಸಿಂಪಡಿಸುವ ಮೂಲಕ ಸಂಪ್ರದಾಯಾಚರಣೆಯನ್ನು ಪಾಲಿಸಲಾಗುತ್ತಿದೆ.

**"**ಹೆನ್ರೀ ವೈಟ್ ಹೆಡ್ ತನ್ನ 'Village of goddesses of Southern India' ಎಂಬ ಕೃತಿಯಲ್ಲಿ ಆಫ್ರಿಕಾದ 'ಮಾಂಬೆಟ್ಟು' ಬುಡಕಟ್ಟಿನಲ್ಲಿರುವ ಆಚರಣೆಯನ್ನು ಉಲ್ಲೇಖಿಸುತ್ತಾ, ಅಲ್ಲಿನ ಕಪ್ಪು ಜನಾಂಗ ರಕ್ತ ಚಿಮ್ಮುವವರೆಗೆ ಶಸ್ತ್ರಾಸ್ತ್ರಗಳಿಂದ ದ್ವೇಷರಹಿತವಾಗಿ ಹೊಡೆದಾಡುತ್ತಾರೆ. ಅವರ ಹೊಡೆದಾಟದಲ್ಲಿ ಒಬ್ಬನಿಗೆ ಗಾಯವಾಗಿ ನೆತ್ತರು ಚಿಮ್ಮಿದಾಗ ಹೊಡೆದಾಡಿದ ಇನ್ನೊಬ್ಬ ವ್ಯಕ್ತಿ ಆ ನೆತ್ತರನ್ನು ನೆಕ್ಕುತ್ತಾನೆ ಇದರಿಂದ ಅವರು ತಮ್ಮ ಸೋದರ ಸಂಬಂಧ ಗಟ್ಟಿಗೊಂಡಿತು ಎಂದು ನಂಬುತ್ತಾರೆ. ತಮ್ಮ ದೇವರಿಗೆ ಬಲಿಕೊಡುವ ಸಂದರ್ಭದಲ್ಲಿ ತಮ್ಮ ಗುಂಪಿನ ಒಬ್ಬ

ಸದಸ್ಯರನ್ನು ನಿಲ್ಲಿಸಿ ಮಚ್ಚು ಕೊಡಲಿ ಅಥವಾ ಕುಡುಗೋಲಿನಿಂದ ಕಡಿದು ರಕ್ತವನ್ನು ಚೆಲ್ಲಿ ದೇವರಿಗೆ ಬಲಿಕೊಡುತ್ತಾರೆ. ಇದರಿಂದಾಗಿ ಈ ಮಾಂಬೆಟ್ಟು ಬುಡಕಟ್ಟು ತಮ್ಮ ಗುಂಪು ಮತ್ತು ದೇವರ ನಡುವೆ ಅತ್ಯಂತ ಗಾಢವಾದ ಸಂಬಂಧ ಉಂಟಾಯಿತು ಎಂದು ನಂಬುತ್ತಾದೆ."[15]

ಇಂತಹ ನರಬಲಿ ಆಚರಣೆಗಳು ಹೆಚ್ಚಾಗಿ ಬುಡಕಟ್ಟು ಸಮೂದಾಯಗಳಲ್ಲಿ ಇರುತ್ತಿತ್ತು. ಆದರೆ ಇಂದು ಕಾನೂನು ರೀತಿ ನರಬಲಿ, ಕೋಣಬಲಿ, ಕಣ್ಮರೆಯಾಗಿವೆ. ಆದರೆ ಕುರಿ, ಕೋಳಿ, ಆಡು, ಹಂದಿ ಬಲಿಕೊಡುವ ಪದ್ಧತಿ ಈಗಲೂ ಅನೇಕ ಕಡೆಗಳಲ್ಲಿದೆ. ಕೆಲವು ಕಡೆ ಉಗ್ರ ಬಲಿ ಬದಲು ದೈವಕ್ಕೆ ಕುಂಬಳಕಾಯಿ, ತೆಂಗಿನಕಾಯಿ ಹೊಡೆದು ಸಾತ್ವಿಕ ವಿಧಾನಗಳನ್ನು ಪರ್ಯಾಯವಾಗಿ ಬಲಿಯ ಅರ್ಥದಲ್ಲಿ ನೀಡುವ ಪದ್ಧತಿ ರೂಢಿಯಲ್ಲಿದೆ.

**ಬಲಿ ಆಚರಣೆ.1** : ಅಶೋಕಪುರಂನ ಮೂರನೇ ಬೀದಿಯಲ್ಲಿರುವ ಕಾಳಮ್ಮನ ಹಬ್ಬದಂದು ರಾತ್ರಿ ಎಂಟುಗಂಟೆಗೆ ಉತ್ಸವ ಹೊರಡುತ್ತದೆ. ಈ ಪದ್ಧತಿಯು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಕಾಳಮ್ಮನ ಉತ್ಸವ ಮೂರ್ತಿಯನ್ನು ಹೊರುವ ಪೂಜಾರಿ ಕೆಂಪು ವಸ್ತ್ರವನ್ನು ತೊಟ್ಟು, ಮೂರ್ತಿಯನ್ನು ಹೊತ್ತು ಬೀದಿಯಲ್ಲಿ ಬಂದು ನಿಲ್ಲುತ್ತಾನೆ. ಅದೇ ಸಂದರ್ಭದಲ್ಲಿ ಕೋಳಿ ಕುರಿಗಳ ಬಲಿನೀಡಲಾಗುತ್ತದೆ. ಅದನ್ನು 'ಧೂಳ್ ಮರಿ' ಎಂದು ಕರೆಯಲಾಗುತ್ತದೆ. ಇದು ಕಾಳಮ್ಮನ ಕುಲದವರು ನೀಡುವ ಮರಿಯಾಗಿರುತ್ತದೆ. ಅನಂತರ ಛತ್ರಿ, ಚಾಮರ ಸಹಿತವಾಗಿ ವಾದ್ಯ ಮೇಳಗಳೊಂದಿಗೆ ಊರಿನ ಸುತ್ತಲೂ ಮೆರವಣಿಗೆ ಸಾಗುತ್ತದೆ. ಕಾಳಮ್ಮನ ಕುಲದವರು ಬೀದಿ ಬೀದಿಯಲ್ಲಿ ನಿಂತು ಉತ್ಸವ ಮೂರ್ತಿಗೆ ಕುರಿ ಕೋಳಿಗಳನ್ನು ಬಲಿಕೊಡುತ್ತಾರೆ. ಬಲಿ ಕೊಡುವುದು ಒಂದು ಹರಕೆಯ ವಿಧಾನವೇ ಆಗಿದೆ. ಅಂದರೆ ಅಂದುಕೊಂಡದ್ದು ಈಡೇರಿದರೆ ಹಬ್ಬದ ದಿನದಂದು ಉತ್ಸವ ಬಂದಾಗ ಕುರಿಯನ್ನೋ, ಕೋಳಿಯನ್ನೋ ಬಲಿಕೊಡುವುದಾಗಿ ಹರಕೆ ಹೊತ್ತಿದ್ದು, ಅದು ಈಡೇರಿದರಿಂದ ಅದರ ಫಲವಾಗಿ ಬಲಿಯನ್ನು ನೀಡುವುದರ ಮೂಲಕ ಹರಕೆ ಒಪ್ಪಿಸುತ್ತಾರೆ. ಬಲಿ ಕೊಟ್ಟ ಕುರಿ ಕೋಳಿಗಳ ತಲೆಗಳನ್ನು ಯಾರು ಉಪಯೋಗಿಸುವುದಿಲ್ಲ. ಅದನ್ನು ಪೂಜಾರಿ ಮನೆಯವರಿಗೆ ಒಪ್ಪಿಸುತ್ತಾರೆ. ಮೆರವಣಿಗೆ ಮಧ್ಯರಾತ್ರಿಯಲ್ಲಿ ಮುಕ್ತಾಯ ವಾಗುತ್ತದೆ. ಪೂಜಾರಿಯ ಮನೆಯವರು ಹಬ್ಬದ ಮಾರನೇ ದಿನ ಆ ತಲೆಗಳಿಂದ ಅಡುಗೆ ಸಿದ್ಧಪಡಿಸಿ ಸಾಮೂಹಿಕವಾಗಿ ಭೋಜನ ಹಾಕುತ್ತಾರೆ. ಇತ್ತೀಚಿನ ದಿನಗಳಲ್ಲಿ ಬಲಿ ನೀಡುವುದು ಗೌರವ ಅಥವಾ ಅವರ ಘನತೆಗೆ ಸೇರಿದ್ದಾದಂತೆ ನಡೆಯುತ್ತಿದೆ. ಯಾವುದೆ ಹರಕೆಗಳು ಇಲ್ಲವಾದರು ಹಬ್ಬದ ದಿನ ತಮ್ಮ ಬಂಧು ಬಳಗವನ್ನೆಲ್ಲ ಕರೆದು ವಿಜೃಂಭಣೆಯಿಂದ ಹಬ್ಬ ಮಾಡಿ ಊಟ ಹಾಕುವುದು ರೂಢಿಯಾಗಿದೆ.

**ಬಲಿ ಆಚರಣೆ.2 :** ಪಡುವಾರಹಳ್ಳಿ ಜೋಡಿಮಾರಮ್ಮ ತಾಯಿಯರಿಗೆ ಬಾಯಿಬೀಗ ಹರಕೆ ತೀರಿಸಿದ ಅನಂತರ ನಾಯಕ ಕುಟುಂಬದವರು ಮಾರಿಗುಡಿಯ ಬಳಿ ಮರಿಯನ್ನು ಬಲಿ ನೀಡುತ್ತಾರೆ. ಇದನ್ನು 'ಧೂಳ್'ಮರಿ ಎಂದು ಕರೆಯುತ್ತಾರೆ. ನಾಯಕ ಕುಟುಂಬದವರು ಪ್ರಾಣಿಬಲಿ ಕೊಟ್ಟನಂತರ ಊರಿನ ಜನರು ಪ್ರಾಣಿಗಳ ಬಲಿಕೊಡಬೇಕು. ಪ್ರಾಣಿ ಬಲಿ ಕೊಡುವುದು ಹರಕೆಯ ಮತ್ತೊಂದು ವಿಧ. ಜನ ತಮಗೆ ಒಳ್ಳೆಯದಾಗಬೇಕೆಂದು ಮಾರಿ ದೇವರಲ್ಲಿ ಹರಕೆ ಕಟ್ಟಿಕೊಳ್ಳುವರು. ಹೀಗೆ ದೇವರ ಗುಡಿಯ ಬಳಿ ಪ್ರಾಣಿ ಬಲಿಕೊಟ್ಟು ಮನೆಗೆ ತಂದು ಅಡುಗೆ ಮಾಡಿ ಪ್ರಸಾದವೆಂದು ನೆಂಟರಿಷ್ಟರು, ಸ್ನೇಹಿತರು, ಹಿತೈಸಿಗಳೆಲ್ಲರೂ ಸೇರಿ ಊಟಮಾಡುವರು.

"ಕಲ್ಲನಾಗರ ಕಂಡರೆ ಹಾಲನೆರೆವರಯ್ಯ
ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯ" –ಬಸವಣ್ಣ
"ದಯೆ ಬೇಕು ಸಕಲಪ್ರಾಣಿಗಳಲ್ಲಿ
ದಯೆಯೆ ಧರ್ಮದ ಮೂಲವಯ್ಯ" ಎಂದು ಹೇಳಿ ಬಲಿ ತಪ್ಪಿಸಿದರು – ಬಸವಣ್ಣ

**ಬಲಿ ಆಚರಣೆ.3** : ಈ ಆಚರಣೆಯು ಸಾಮಾನ್ಯವಾಗಿ ಫೆಬ್ರವರಿ ತಿಂಗಳ ಮಂಗಳವಾರದಂದು ನಡೆಯುತ್ತದೆ. ಅಶೋಕಪುರಂ ಹದಿಮೂರನೆ ಕ್ರಾಸಿನ ದಂಡಿನ ಮಾರಿ ಒಕ್ಕಲಿನವರು ಮಾತ್ರ ಈ ಆಚರಣೆಯಲ್ಲಿ ಭಾಗವಹಿಸುತ್ತಾರೆ. ಊರಿನ ಹಿರಿಯರು ಹೇಳುವಂತೆ ಹಿಂದೆ ಈ ಹಬ್ಬವು ಸರಿ ರಾತ್ರಿಯಲ್ಲಿ ಪ್ರಾರಂಭವಾಗುತ್ತಿದ್ದು, ಹರಕೆಗೆ ಬಿಟ್ಟ ಕೋಣ ದಂಡಿನ ಮಾರಿಯ ಹಬ್ಬ ಸಮೀಪಿಸುತ್ತಿದ್ದಂತೆ ತಾನಾಗಿಯೇ ಬಂದು ಮಾರಿಗುಡಿಯ ಮುಂದೆ ನಿಲ್ಲುತ್ತಿತ್ತಂತೆ. ಪೂಜಾರಿ ಮತ್ತು ದೇವಸ್ಥಾನದ ಹಿರಿಯರು ಗುಡಿಯ ಮುಂದೆ ನಿಂತ ಕೋಣನ ತಲೆಯ ಮೇಲೆ ದೊಡ್ಡದಾದ ಮಣ್ಣಿನ ದೀಪವನ್ನು ಇಟ್ಟು ಹಣೆಗೆ ವಿಭೂತಿ, ಕುಂಕುಮ, ಕೊರಳಿಗೆ ಹೂ–ಹಾರ ಮತ್ತು ಬೇವಿನ ಸೊಪ್ಪನ್ನು ಹಾಕಿ ಕೋಣದ ಹಿಂದೆ ಊರಿನ ಎಲ್ಲರೂ ಪೂಜಾ ಸಾಮಾಗ್ರಿ ಮತ್ತು ಅಡುಗೆ ಮಾಡಲು ಬೇಕಾದ ಸಾಮಾಗ್ರಿಗಳು, ಕುರಿ–ಕೋಳಿಗಳನ್ನು ಮೆರವಣಿಗೆಯೊಂದಿಗೆ ಕೊಂಡೊಯ್ಯುತ್ತಾರೆ. ಊರ ಬಾಗಿಲಿನಲ್ಲಿ ಮತ್ತೊಮ್ಮೆ ಕೋಣನಿಗೆ ಪೂಜೆ ಸಲ್ಲಿಸಲಾಗುತ್ತದೆ. ಅದು ಮೆರವಣಿಗೆಯ ಮೂಲಕ ಬೆಂಗಳೂರು–ಮೈಸೂರು ರಸ್ತೆಯ ರಾಜೇಂದ್ರ ನಗರದ ದಲಿತಕೇರಿಯ ಸಮೀಪದ ಮಾಳದಲ್ಲಿ ಇರುವ ದಂಡಿನ ಮಾರಮ್ಮನ ದೇವಾಲಯದಲ್ಲಿ ಬಂದು ನಿಲ್ಲುತ್ತದೆ. ಇಲ್ಲಿ ಹದಿನೈದು ವರ್ಷಗಳ ಹಿಂದೆ ಯಾವುದೇ ದೇವಾಲಯವಿರಲಿಲ್ಲ. ಸಣ್ಣ ಮಣ್ಣಿನ ಗುಡಿಯಿತ್ತು. ಮುಂದೆ ಮೂರು ಕಲ್ಲುಗಳು ಅದರ ಮುಂದೆ ತ್ರಿಶೂಲವನ್ನು ನೆಟ್ಟಿದ್ದರು. ಅದೇ ದಂಡಿನ

ಮಾರಮ್ಮ. ಈಗಲೂ ಸಹ ಕಲ್ಲುಬಂಡೆಗಳ ಮುಂದೆ ತ್ರಿಶೂಲಗಳಿವೆ. ಆದರೆ ಈಗ ಅಲ್ಲೊಂದು ಆಕರ್ಷಕ ದೇವಾಲಯ ನಿರ್ಮಾಣವಾಗಿದೆ. ಈ ದೇವಾಲಯವನ್ನು ಕಟ್ಟಿಸಿದವರು ಅಶೋಕ ಪುರಂನವರು. ಪೂಜೆಸಲ್ಲಿಸಲು ನೇಮಕವಾಗಿರುವ ಪೂಜಾರಿಯು ಅಶೋಕಪುರಂನ ದಲಿತನೇ. ಹೀಗೆ ಅಶೋಕಪುರಂನಿಂದ ಆರಂಭವಾದುದು ರಾಜೇಂದ್ರ ನಗರದ ದಲಿತಕೇರಿಯ ಮಾರಿ ಗುಡಿಯ ಬಳಿ ಬಲಿ ಆಚರಣೆ ನಡೆಯುತ್ತದೆ.

ಗುಡಿಯ ಮುಂದಿನ ತ್ರಿಶೂಲಗಳಿಗೆ ಭಯ ಭಕ್ತಿಯಿಂದ ಪೂಜೆ ಸಲ್ಲಿಸಿ ಬೆಳಗಾಗುವುದರೊಳಗೆ ಕೋಣವನ್ನು ದಂಡಿನ ಮಾರಿಗೆ ಬಲಿಕೊಡಬೇಕು. ಕೋಣದ ಜೊತೆಯಲ್ಲಿ ಕುರಿ ಕೋಳಿಗಳನ್ನು ಸಹ ಬಲಿಕೊಡುತ್ತಾರೆ. ಬಲಿಯಾದ ಪ್ರಾಣಿಯ ಮಾಂಸವನ್ನು ಮನೆಗೆ ಕೊಂಡೊಯ್ಯುವ ಹಾಗಿಲ್ಲ. ಅಲ್ಲಿಯೇ ಅಡುಗೆ ಮಾಡಿ ಸಾಮೂಹಿಕ ಅನ್ನಸಂತರ್ಪಣೆಯನ್ನು ಮಾಡುತ್ತಾರೆ.

ಇತ್ತೀಚೆಗೆ ಈ ಬಲಿ ಆಚರಣೆಯಲ್ಲಿ ಸ್ವಲ್ಪ ಬದಲಾವಣೆಯಾಗಿ ಕೋಣದ ಬದಲಿಗೆ ಕುರಿ ಕೋಳಿಗಳನ್ನು ಮೆರವಣಿಗೆಯಲ್ಲಿ ಕೊಂಡೊಯ್ದು ಬಲಿಕೊಡುವ ಪದ್ಧತಿಯನ್ನು ರೂಢಿಸಿ ಕೊಂಡಿದ್ದಾರೆ.

**ಬಲಿ ಆಚರಣೆ.4 (ಸಾಲ್ಮರಿ)** : ಉತ್ತನಹಳ್ಳಿಯ ಮಾರಮ್ಮನ ಜಾತ್ರೆಯಂದು ಕುರಿಕೋಳಿಗಳನ್ನು ಬಲಿಕೊಡಲಾಗುತ್ತದೆ. ಮರಿಗಳನ್ನು ಸಾಲಾಗಿ ನಿಲ್ಲಿಸಿ ಬಲಿಕೊಡುತ್ತಿದ್ದರಿಂದ 'ಸಾಲ್ಮರಿಹಬ್ಬ' ಎಂಬ ಹೆಸರಿನಿಂದಲೇ ಪ್ರಸಿದ್ಧಿಯಾಗಿದೆ. ಈ ಹಬ್ಬವು ಪ್ರತಿ ವರ್ಷ ಸೆಪ್ಟಂಬರ್ ತಿಂಗಳಂದು ಆಚರಣೆಗೊಳ್ಳುತ್ತದೆ. ಹಿಂದೆ ಮರಿಗಳನ್ನು ದೇವಸ್ಥಾನದ ಮುಂಭಾಗ ನಿಲ್ಲಿಸಿ ಸಂಜೆ ವೇಳೆ ಪೂಜೆ ಸಲ್ಲಿಸಿ, ತೀರ್ಥ ಹಾಕಿಸಿ ಬಲಿ ಕೊಡುತ್ತಿದ್ದರು. ಆದರೆ ಇಂದು ಸರ್ಕಾರವು 'ದೇವಸ್ಥಾನದ ಹತ್ತಿರ ಯಾವುದೇ ಬಲಿ ಕೊಡುವಂತಿಲ್ಲ' ಎಂದು ನಿಷೇಧಿಸಿದ್ದು, ಕಾನೂನು ಕ್ರಮ ಜರುಗಿಸಿರುವುದರಿಂದ ಕೇವಲ ಪೂಜೆ ಮಾಡಿಸಿ ತೀರ್ಥ ತೆಗೆದುಕೊಂಡು ಬಂದು ಮನೆಯಲ್ಲಿ ಕೋಳಿ ಕುರಿ, ಆಡುಗಳಿಗೆ ಹಾಕಿ ಬಲಿ ನೀಡುತ್ತಾರೆ. ಮತ್ತೆ ಕೆಲವರು ತಾವು ತಂದ ತೀರ್ಥವನ್ನು ಕುರಿ, ಕೋಳಿ, ಆಡು ಮರಿಯೊಂದಿಗೆ ದೇವಸ್ಥಾನದಿಂದ 200ಮೀಟರ್ ದೂರದಲ್ಲಿರುವ 'ಜವನಕಟ್ಟೆ' ಎಂಬ ಸ್ಥಳದಲ್ಲಿ ತೀರ್ಥ ಹಾಕಿ ಹೂ ಮುಡಿಸಿ, ಅರಿಶಿಣ ಕುಂಕುಮ ಹಚ್ಚಿ ಅವುಗಳನ್ನು ಸಾಲಾಗಿ ನಿಲ್ಲಿಸಿ ಬಲಿ ಕೊಡುತ್ತಾರೆ. ಹೀಗೆ ಬಲಿಕೊಟ್ಟ ಮರಿಗಳ ರಕ್ತವನ್ನು ಹಿಡಿದು ಕೊಳ್ಳದೆ ಭೂಮಿಗೆ ಬಿಡಬೇಕು. ಬಲಿಯನ್ನು ಮನೆಗೆ ತಂದು ಅಡುಗೆ ಮಾಡಿ ಮನೆಯಲ್ಲೇ ನೈವೇದ್ಯವಿಟ್ಟು ಪ್ರಸಾದವೆಂದು ಎಲ್ಲರೂ ಸೇವಿಸುತ್ತಾರೆ.

**ಬಲಿ ಆಚರಣೆ.5 :** ಕನ್ನೇಗೌಡನ ಕೊಪ್ಪಲಿನ ಹಳೆಯ ಸಿದ್ದಪ್ಪಾಜಿ ದೇವಾಲಯದಲ್ಲಿ ಹಿಂದಿನಿಂದಲೂ ಸಿದ್ದಪ್ಪಾಜಿ ದಾಳ ಹಾಕಿ ಕುರಿ ಕೋಳಿಗಳನ್ನು ಬಲಿಕೊಡುವ ಪದ್ಧತಿ ಇದೆ. ಹೀಗೆ ಬಲಿಕೊಟ್ಟ ಕುರಿಕೋಳಿಗಳ ಮಾಂಸದಿಂದ ಆಹಾರ ತಯಾರಿಸಿ ಗ್ರಾಮದ ಜನತೆಗೆ ಅನ್ನಸಂತರ್ಪಣೆ ಮಾಡಲಾಗುತ್ತದೆ.

**ತಂಪಿನಾರತಿ** : ಪಡುವಾರಹಳ್ಳಿ ಜೋಡಿಮಾರಮ್ಮ ದೇವಾಲಯದಲ್ಲಿ ಮಾರಮ್ಮ ಹಬ್ಬದ ಮೊದಲ ಭಾನುವಾರದ ನಡುರಾತ್ರಿ ತಂಪು ಆರತಿಯ ಪೂಜೆಯನ್ನು ದೇವರಿಗೆ ಸಲ್ಲಿಸಲಾಗುವುದು. ತಂಪಾರತಿ ಎಂದರೆ ತಂಬಿಟ್ಟಿನ ಆರತಿ ಎಂದರ್ಥ. ಅಕ್ಕಿ ಹಿಟ್ಟಿಗೆ ಬೆಲ್ಲದ ಪಾಕ ಕಡಲೆ ಕಲಸಿ ಮಾಡಿದ ಪದಾರ್ಥ. ಇದು ಮಾರಿದೇವರಿಗೆ ಪ್ರಿಯವಾದುದಾಗಿದೆ. ಈ ತಂಬಿಟ್ಟಿಗೆ ಕಣಗಿಲೆ ಹೂವನ್ನು ಸಣ್ಣ ಹಂಚಿಕಡ್ಡಿಗೆ ಚುಚ್ಚಿ ಅದನ್ನು ತಂಬಿಟ್ಟಿಗೆ ಅಲಂಕರಿಸಿರುತ್ತಾರೆ. ತಂಬಿಟ್ಟಿನೊಂದಿಗೆ ಪೂಜೆ ಸಾಮಾನುಗಳನ್ನು ಇಟ್ಟುಕೊಂಡು ದೇವರಿಗೆ ಆರತಿ ಮಾಡುತ್ತಾರೆ ಪಡುವಾರಹಳ್ಳಿಯ ಹೆಣ್ಣುಮಕ್ಕಳು ರಾತ್ರಿ ಜೋಡಿಮಾರಮ್ಮ ದೇವರ ಮೆರವಣಿಗೆ ಹಿಂದೆ ತಂಪಿನ ಆರತಿಯನ್ನು ಹಿಡಿದು ಊರಿನ ತುಂಬೆಲ್ಲಾ ಮೆರವಣಿಗೆ ಮಾಡಬೇಕು. ಕೊನೆಯಲ್ಲಿ ಮಾರಿಗುಡಿಯ ಬಳಿಗೆ ಬಂದು ಸಾಲಾಗಿ ನಿಂತು ತಂಪು ಆರತಿ ಬೆಳಗಿ, ಪೂಜೆ ಸಲ್ಲಿಸಿ ಮನೆಗೆ ಹಿದಿರುಗುವರು. ಜೋಡಿ ಮಾರಮ್ಮ ದೇವರ ಮೂರ್ತಿಗಳನ್ನು ನಾಯಕ ಸಮುದಾಯದ ಮನೆಯವರು ಹೊತ್ತು ಮೆರವಣಿಗೆಯಲ್ಲಿ ಸಾಗುತ್ತಾರೆ. ಮೆರವಣಿಗೆ ಸಾಗುವಾಗ ನಾಯಕ ಒಕ್ಕಲಿನ ಒಬ್ಬರಿಗೆ ಜೋಡಿಮಾರಮ್ಮ ದೇವರು ಬಂದಿರುತ್ತದೆ. ಅವರು ಕತ್ತಿಯನ್ನು ಹಿಡಿದು ಪೂಜೆಗೊಂಡಿರುತ್ತಾರೆ. ಇವರು ಮೆರವಣಿಗೆಯಲ್ಲಿ ಮುಂದೆ ನಡೆಯುವಾಗ, ದಾರಿಗೆ ಅಡ್ಡವಾಗಿ ಚಿಕ್ಕಚಿಕ್ಕ ಮಕ್ಕಳನ್ನು ಮಲಗಿಸುವರು. ಈ ಮಕ್ಕಳನ್ನು ದೇವರು ಮೈಮೆಲೆ ಬಂದಿರುವ ವ್ಯಕ್ತಿ ದಾಟಿಕೊಂಡು ಹೋದರೆ ಮಕ್ಕಳಿಗೆ ಆಯಸ್ಸು, ಆರೋಗ್ಯ ವೃದ್ಧಿಯಾಗುತ್ತದೆ ಎಂದು ಅಲ್ಲಿನ ಜನರು ನಂಬಿದ್ದಾರೆ.

**ದಂಡಿನ ಮಾರಿಗೆ ತಂಪನೆರೆಯುವುದು**

ಅಶೋಕಪುರಂನ ಹದಿಮೂರನೆ ಕ್ರಾಸಿನಲ್ಲಿರುವ ದಂಡಿನಮಾರಿ ಹಬ್ಬವು ಅಶೋಕ ಪುರಂನಿಂದ ರಾಜೇಂದ್ರನಗರದ ದಲಿತಕೇರಿಯ ಸಮೀಪವಿರುವ ಮಾರಿಗುಡಿಗೆ ಹೋಗಿ ಬಲಿ ಆಚರಣೆಯನ್ನು ಮಾಡಿಕೊಂಡು ಬಂದ ಮೂರುದಿನಕ್ಕೆ ತಂಬಿಟ್ಟಿನ ಮೆರವಣಿಗೆ ನಡೆಸಲಾಗುತ್ತದೆ. ಅಂದು ಸಂಜೆ ಮೆರವಣಿಗೆ ಸುಮಾರು ಎಂಟುಗಂಟೆಗೆ ಪ್ರಾರಂಭವಾಗುತ್ತದೆ. ಈ ಬೀದಿಗೆ ಸಂಬಂಧಿಸಿದವರು ಮಾತ್ರ ಭಾಗವಹಿಸುತ್ತಾರೆ. ತಮಟೆ, ಡೋಲು, ಬ್ಯಾಂಡ್, ವಾಲಗದವರು ಮುಂದೆ ಸಾಗುತ್ತಾರೆ. ಅವರ ಹಿಂದೆ ದೇವಿಯ ವಿಗ್ರಹವನ್ನು ಹೊತ್ತಿರುವ ವ್ಯಕ್ತಿ ಇರುತ್ತಾರೆ.

ಒಂದು ವಿಶೇಷವೆಂದರೆ ದೇವರ ವಿಗ್ರಹವನ್ನು ಹೊತ್ತಿರುವ ವ್ಯಕ್ತಿಯೊಬ್ಬನೇ ಸಂಪೂರ್ಣ ಮೆರವಣಿಗೆ ಮುಗಿಯುವವರೆಗೂ ಹೊರಬೇಕು ಬೇರೆ ಯಾರಿಗೂ ಕೊಡುವಂತಿಲ್ಲ. ಇವನ ಹಿಂದೆ ತಂಬಿಟ್ಟಿನ ತಟ್ಟೆ ಮತ್ತು ಪೂಜಾ ಸಾಮಾಗ್ರಿಗಳೊಂದಿಗೆ ಹೆಂಗಸರು, ಹೆಣ್ಣುಮಕ್ಕಳು ಮೆರವಣಿಗೆಯಲ್ಲಿ ಪ್ರಮುಖ ಬೀದಿಗಳಲ್ಲಿ ಸಾಗಿ ಮಧ್ಯರಾತ್ರಿ ಸುಮಾರು ಹನ್ನೆರಡುಗಂಟೆಗೆ ದೇವಸ್ಥಾನಕ್ಕೆ ಬಂದು ತಲುಪುತ್ತಾರೆ. ತಂಬಿಟ್ಟು ಮತ್ತು ಪೂಜಾ ಸಾಮಾಗ್ರಿಗಳನ್ನು ದೇವಸ್ಥಾನದಲ್ಲಿಟ್ಟು ತಮ್ಮ ತಮ್ಮ ಮನೆಗಳಿಗೆ ತೆರಳುತ್ತಾರೆ. ಪೂಜಾರಿಯು ಇವರ ಪರವಾಗಿ ಪೂಜೆ ಸಲ್ಲಿಸುತ್ತಾನೆ. ಬೆಳಿಗ್ಗೆ ಪುನಃ ದೇವಾಲಯಕ್ಕೆ ಬಂದು ಮಂಗಳಾರತಿ ಸ್ವೀಕರಿಸಿ ಕಾಣಿಕೆ ನೀಡಿ ತಮ್ಮ ತಂಬಿಟ್ಟಿನ ತಟ್ಟೆಗಳನ್ನು ತಗೆದುಕೊಂಡು ಹೋಗಿ ದೇವರ ಪ್ರಸಾದವೆಂದು ಪರಿಚಯಸ್ತರ ಮನೆಗೆ ಹಂಚುತ್ತಾರೆ ಹಾಗೂ ಅವರು ಸ್ವೀಕರಿಸುತ್ತಾರೆ.

**ಕಾಳಮ್ಮನ ತಂಪು**

ಅಶೋಕಪುರಂನ ಮೂರನೇ ಬೀದಿಯಲ್ಲಿರುವ ಕಾಳಮ್ಮನ ದೇವಾಲಯದಲ್ಲಿ ನಡೆಯುವ ಕಾಳಮ್ಮನ ತಂಪಿನ ಹಬ್ಬವು ಈ ಬೀದಿಯವರಿಗೆ ಮಾತ್ರ ಸೀಮಿತವಾಗಿರುತ್ತದೆ. ಮೇಲುಕೋಟೆಯ ಜಾತ್ರೆಯ ನಂತರ ಇಲ್ಲವೇ ಅದಕ್ಕೂ ಮುಂಚಿತವಾಗಿ ಈ ಹಬ್ಬವನ್ನು ಮಾಡಲು ದೇವಸ್ಥಾನದ ಆಡಳಿತಕ್ಕೆ ಸಂಬಂಧಿಸಿದ ಪದಾಧಿಕಾರಿಗಳು ಸಭೆ ಸೇರಿ ದಿನಾಂಕವನ್ನು ನಿಗಧಿ ಪಡಿಸುತ್ತಾರೆ. ನಿಗಧಿಯಾದ ಹಬ್ಬದ ದಿನದಂದು ಶಕ್ತಿ ದೇವತೆಯಾದ ಕಾಳಮ್ಮನ ಗುಡಿ ಬೀದಿಯವರೆಲ್ಲ ಉಪವಾಸವಿದ್ದು ಮಡಿನೀರನ್ನು ತಂದು ತಂಬಿಟ್ಟು ಮಾಡುತ್ತಾರೆ. ಈ ಹಬ್ಬದ ಉತ್ಸವ ರಾತ್ರಿ ವೇಳೆ ನಡೆಯುತ್ತದೆ. ಇಲ್ಲಿಯ ಪೂಜಾರಿಗೆ ಯಾವುದೆ ರೀತಿಯ ಮಂತ್ರಗಳು ಬರುವುದಿಲ್ಲ. ಮೆರವಣಿಗೆ ಸಿದ್ದವಾಗಿರುವುದನ್ನು ತಿಳಿಸಲು ದೇವಸ್ಥಾನದ ಹೊರಗೆ ನಿಂತಿರುವ ವಾಲಗದವರು ಮೂರುಬಾರಿ ಬ್ಯಾಂಡಿನ ಸದ್ದನ್ನು ಮಾಡುತ್ತಾರೆ. ಆಗ ತಾವು ಭಕ್ತಿಯಿಂದ ತಯಾರಿಸಿದ ತಂಬಿಟ್ಟು ಮತ್ತು ಪೂಜಾ ಸಾಮಾಗ್ರಿಗಳ ತಟ್ಟೆಯೊಡನೆ ಗೃಹಿಣಿಯರು, ಹುಡುಗಿಯರು, ಪುಟ್ಟ ಪುಟ್ಟ ಮಕ್ಕಳು ಹೊಸ ಹೊಸ ಬಟ್ಟೆಗಳನ್ನು ಧರಿಸಿ ಅಲಂಕಾರ ಮಾಡಿಕೊಂಡು ಮೆರವಣಿಗೆಯಲ್ಲಿ ಸಾಗಲು ದೇವಾಲಯಕ್ಕೆ ಬರುತ್ತಾರೆ.

ಈ ಹಬ್ಬದಲ್ಲಿ ಎರಡು ಬಗೆಯ ತಂಬಿಟ್ಟುಗಳನ್ನು ಮಾಡುವ ಪದ್ಧತಿಯಿದೆ. ಹುರಕ್ಕಿ ತಂಬಿಟ್ಟು ಇದು ಪೂಜಾರ್ಹವಲ್ಲ. ಮನೆಯಲ್ಲಿ ರುಚಿಗೆ ತಿನ್ನಲು ಮಾಡಿಕೊಳ್ಳುತ್ತಾರೆ. ಹಸಕ್ಕಿ ತಂಬಿಟ್ಟು ಪೂಜಾರ್ಹವಾದುದು. ಅಕ್ಕಿ, ಏಲಕ್ಕಿ, ಒಣಶುಂಟಿ, ಸೂಪ್ಕಾಳುಗಳನ್ನು ಸೇರಿಸಿ ಗಿರಣಿ ಮಾಡಿಸಿ ಅನಂತರ ಆ ಹಿಟ್ಟನ್ನು ಬೆಲ್ಲದ ಹದ ವಾದ ಪಾಕಕ್ಕೆ ಬೆರೆಸಿ ಗೋಪುರಾಕೃತಿಯಾಗಿ

ಮಾಡುತ್ತಾರೆ. ಗೋಪುರಾಕೃತಿಯ ತಂಬಿಟ್ಟಿನ ನಾಲ್ಕುಕಡೆಗೂ ಹುರಿಗಡಲೆಯನ್ನು ಅಂಟಿಸುತ್ತಾರೆ. ಜೊತೆಗೆ ನಾಲ್ಕು ಮೂಲೆಗೂ ಹಂಚಿಕಡ್ಡಿಗೆ ತೂರಿಸಿರುವ ಕಣಿಗಿಲೆ ಹೂವನ್ನು ಸಿಕ್ಕಿಸಿರುತ್ತಾರೆ. ಇನ್ನೊಂದು ಬಗೆಯೆಂದರೆ ಅಕ್ಕಿಗೆ ಏಲಕ್ಕಿ ಯನ್ನು ಸೇರಿಸಿ ರುಬ್ಬಿಕೊಂಡು ಅದನ್ನು ಬೆಲ್ಲದ ಹದವಾದ ಪಾಕಕ್ಕೆ ಹಾಕಿ ಬೆರೆಸಿ, ಅದಕ್ಕೆ ಕೊಬ್ಬರಿ, ಎಳ್ಳು, ಹುರಿಗಡಲೆ, ಕಡಲೆಕಾಯಿಯನ್ನು ಸೇರಿಸಿ ಲಾಡುವಿನಂತೆ ಉಂಡೆಕಟ್ಟಿ ತಯಾರಿಸುತ್ತಾರೆ.

ತಟ್ಟೆಯೊಂದರ ಮಧ್ಯದಲ್ಲಿ ದೀಪವನ್ನು ಹಚ್ಚಿ ಅದರ ಸುತ್ತಲೂ ಬಗೆ ಬಗೆಯಾಗಿ ತಯಾರಿಸಿದ ತಂಬಿಟ್ಟುಗಳನ್ನು ಇಡುತ್ತಾರೆ. ಇದರ ಜೊತೆಗೆ ತೆಂಗಿನಕಾಯಿ, ಬಾಳೆಹಣ್ಣು, ಗಂಧದ ಕಡ್ಡಿ, ಕರ್ಪೂರ, ಅರಿಶಿನ ಕುಂಕುಮ ಇತ್ಯಾದಿ ಪೂಜಾ ಸಾಮಾಗ್ರಿಗಳನ್ನು ತಂದು ದೇವಿಯ ಉತ್ಸವದಲ್ಲಿ ಪಾಲ್ಗೊಂಡು ಪೂಜೆ ಸಲ್ಲಿಸುತ್ತಾರೆ

**ಮಳೆಗಾಗಿ ಪ್ರಾರ್ಥಿಸಿ ದೇವಸ್ಥಾನದಲ್ಲಿ ಸಂತೆ**

"ದಾವಣಗೆರೆ ನಗರದ ದೇವತೆಯಾದ ಶ್ರೀದುರ್ಗಾಂಬಿಕಾ ದೇವಸ್ಥಾನದ ಆವರಣದಲ್ಲಿ ಮಳೆಗಾಗಿ ಸಂತೆ ನಡೆಯಿತು. ಇದೊಂದು ವಿಶಿಷ್ಟ ಆಚರಣೆಯಾಗಿದ್ದು, ಮಳೆ ಕಡಿಮೆಯಾದಾಗ ದೇವಾಲಯದ ಆವರಣದಲ್ಲಿ ಸತತ ಐದು ಭಾನುವಾರ ಸಂತೆ ನಡೆಸಿದರೆ ಮಳೆಯಾಗುತ್ತದೆ ಎಂಬುದು ಇಲ್ಲಿನ ಜನಪದ ನಂಬಿಕೆ. ಹೀಗಾಗಿ ಹತ್ತಾರು ಗ್ರಾಮಗಳಿಂದ ಬಂದವರು ಹಣ್ಣು, ತರಕಾರಿಗಳನ್ನು ಅರ್ಧ ಬೆಲೆಗೆ ಮಾರಾಟ ಮಾಡುವರು"[16]

**ಭಂಗಿಸೇವೆ** : ಈ ಹಿಂದೆ ಅಶೋಕಪುರಂನ ಸಿದ್ದಪ್ಪಾಜಿ ದೇವಾಲಯದಲ್ಲಿ ಭಂಗಿಸೇವೆಯೂ, ಭಂಗಿ ಸೊಪ್ಪಿನಿಂದ ನಡೆಯುತ್ತಿದ್ದು, ಭಂಗಿ ಸೊಪ್ಪಿನ ಸೇವನೆ ಎಂದರೆ ಸಿದ್ದಪ್ಪಾಜಿಯವರಿಗೆ ಮಹಾಪ್ರಾಣವಾಗಿತ್ತು. ಅದು ಇಂದು ಆಚರಣೆಯಲ್ಲಿ ಬದಲಾಗಿದೆ. ಮಾಂಸಹಾರಿ ಊಟವನ್ನೇ ಇಂದು ಭಂಗಿಸೇವೆ ಎಂದು ಕರೆಯಲಾಗುತ್ತಿದೆ. ಸಿದ್ದಪ್ಪಾಜಿ ದೇವರ ಹಬ್ಬದ ಉತ್ಸವವಾದ ಮಾರನೆಯ ದಿನ ಸಿದ್ದಪ್ಪಾಜಿಯವರಿಗೆ ಹರಕೆ ಹೊತ್ತವರು ಮಾಂಸದ ಅಡುಗೆ ಮಾಡಿ ಸಿದ್ದಪ್ಪಾಜಿ ದೇವಾಲಯಕ್ಕೆ ತಂದು ನೈವೇದ್ಯಕ್ಕೆ ಇಡುತ್ತಾರೆ. ಇದನ್ನೇ ಭಂಗಿಸೇವೆ ಎಂದು ಕರೆಯುತ್ತಾರೆ. ನೈವೇದ್ಯಕ್ಕೆ ತಂದದ್ದನ್ನು ಪುನಃ ವಾಪಸ್ ತೆಗೆದುಕೊಂಡು ಹೋಗುವುದಿಲ್ಲ. ಅಲ್ಲಿಯ ಪೂಜಾರಿಯವರು ಮತ್ತು ಆಡಳಿತ ಮಂಡಳಿಯವರು ಸೇರಿ ಅದನ್ನು ತಮಗೆ ಬೇಕಾದವರಿಗಷ್ಟೆ ಕರೆದು ಊಟಕ್ಕೆ ಹಾಕುತ್ತಾರೆ.

**ಕನ್ನೇಗೌಡನ ಕೊಪ್ಪಲಿನ ಹಳೆಯ ಸಿದ್ದಪ್ಪಾಜಿ ದೇವಾಲಯದ ಆಚರಣೆ :** ಕನ್ನೇಗೌಡನ ಕೊಪ್ಪಲಿನ ಹಳೆಯ ಸಿದ್ದಪ್ಪಾಜಿ ದೇವಾಲಯದ ವಿಶೇಷ ಹಬ್ಬವೆಂದರೆ ಮಹಾಶಿವರಾತ್ರಿಯಂದು ದೇವಾಲಯವನ್ನು ಹೂವಿನಿಂದ ಅಲಂಕರಿಸಿ, ವಿಶೇಷ ಪೂಜೆಯನ್ನು ನೆರವೇರಿಸುತ್ತಾರೆ. ಹಿಂದೆ ಹಬ್ಬದದಿನದಂದು ಬೆಂಕಿಯ ಕೊಂಡಹಾಕಿ ಹರಕೆ ಹೊತ್ತ ಗುಡ್ಡಪ್ಪಂದಿರು ಕೊಂಡ ಹಾಯುವ ಮೂಲಕ ಹರಕೆ ತೀರಿಸುತ್ತಿದ್ದರು. ಇದಕ್ಕಾಗಿ ಸುಮಾರು ಮೂರು ತಿಂಗಳಿಂದ ಪಥ್ಯದಲ್ಲಿ ಇರುತ್ತಿದ್ದರು. ಅಂದರೆ ಇವರು ಬೇರೆ ಯಾರ ಮನೆಯಲ್ಲೂ ಆಹಾರ ಸೇವಿಸುವಂತಿರಲಿಲ್ಲ. ಮಡಿ ಮತ್ತು ಕೇವಲ ಸಸ್ಯಾಹಾರ ಭೋಜನವನ್ನು ಸ್ವೀಕರಿಸಿ, ಪೂಜೆ ಪುನಸ್ಕಾರಗಳಲ್ಲಿ ತೊಡಗುತ್ತಿದ್ದರು. ಇದರಲ್ಲಿ ಜನರಿಗೆ ಅಪಾರವಾದ ನಂಬಿಕೆಯಿತ್ತು. ಆದರೆ ಈ ಪದ್ಧತಿ ಇಂದು ಕಣ್ಮರೆಯಾಗಿದೆ.

## ಕರಗ

"ಕರಗ ಎಂದರೆ 'ಕಳಶ' ಮೂರು ಬೇರೆ ಬೇರೆ ಕಳಶಗಳನ್ನು ಸೇರಿಸಿ ಒಂದಾಗಿ ಮಾಡಿ ಅದರಲ್ಲಿ ಶಕ್ತಿಯನ್ನು ಆವಾಹಿಸಿ ಆ ಕಳಶವನ್ನು ಕರಗತ ಮಾಡಿಕೊಂಡು ಶಕ್ತಿ ಕ್ಷೇತ್ರವನ್ನೆಲ್ಲ ಸುತ್ತಿ ಕೊಂಡು ಸೀಮೋಲಂಘನೆ ಮಾಡುವವರೆಗೂ ಮೆರೆಯಿಸುವುದು ಮುಖ್ಯಾಂಶವಾದುದರಿಂದ ಈ ಹೆಸರು ಬಂದಿತು"[17]

## ಚಾಮುಂಡೇಶ್ವರಿ ಕರಗ

ಮೈಸೂರು ನಗರದ ಗಾಂಧೀನಗರದಲ್ಲಿರುವ ಚಾಮುಂಡೇಶ್ವರಿ ದೇವಾಲಯದಲ್ಲಿ ಕರಗ ಮಹೋತ್ಸವವನ್ನು ನೂರಾರು ವರ್ಷಗಳಿಂದ ಪ್ರತಿ ವರ್ಷ ಏಪ್ರಿಲ್ ತಿಂಗಳಿನಲ್ಲಿ ಆಚರಿಸಿಕೊಂಡು ಬಂದಿದ್ದಾರೆ. ಇದು ಸುಮಾರು ಹತ್ತು ದಿನಗಳಕಾಲ ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ಮೊದಲಿಗೆ ಏಪ್ರಿಲ್ ತಿಂಗಳ ಕೊನೆಯ ಮಂಗಳವಾರದಂದು ದಾಳ ಎತ್ತುವ ಕಾರ್ಯಕ್ರಮ ವಿರುತ್ತದೆ. 'ದಾಳ ಎತ್ತುವುದು ಎಂದರೆ ಬಿದಿರು ಕಡ್ಡಿಯ ತುದಿಗೆ ಚಾಮುಂಡೇಶ್ವರಿಯ ಭಾವ ಚಿತ್ರವಿಟ್ಟು ಹೂವಿನಿಂದ ಅಲಂಕರಿಸಿ ಗಾಂಧೀನಗರದ ಬೀದಿ ಬೀದಿಗಳಲ್ಲಿ ಸುತ್ತುವ ಕ್ರಮವಾಗಿದೆ' ದಾಳವನ್ನು ಮದುವೆಯಾಗದ ಗಂಡುಮಕ್ಕಳು ಎತ್ತಬೇಕು. ಇದು ಬಹಳ ಹಿಂದಿನಿಂದಲೂ ನಡೆದು ಬಂದಿರುವ ಪದ್ಧತಿಯಾಗಿದೆ. ಅದೇ ದಿನ ಮಧ್ಯಾಹ್ನದ ವೇಳೆಗೆ ನೂರಾಒಂದು(101) ಕಾಳನ್ನು ಬೇಯಿಸಿ, ಅದರ ಜೊತೆಯಲ್ಲಿ ನೀರು ಮಜ್ಜಿಗೆ, ರಾಗಿ ಅಂಬಲಿ, ಬೇಲದ ಹಣ್ಣಿನ ಮತ್ತು ಬೆಲ್ಲದ ಪಾನಕವನ್ನು ಪ್ರಸಾದದ ರೂಪದಲ್ಲಿ ವಿತರಿಸುತ್ತಾರೆ. ಬುಧವಾರದಂದು ಹಬ್ಬದ ತಯಾರಿಯ ಜೊತೆಗೆ ಚಾಮುಂಡೇಶ್ವರಿಗೆ ಒಡವೆ ವಸ್ತ್ರಗಳನ್ನು ಧರಿಸುವ ಸಂಪ್ರದಾಯವಿದೆ.

ಗುರುವಾರದಂದು ಕರಗಕ್ಕೆ ಬೇಕಾಗಿರುವ ಸಿದ್ಧತೆಗಳೆಲ್ಲವು ವಿಜೃಂಭಣೆಯಿಂದ ಜರಗುತ್ತವೆ. ಶುಕ್ರವಾರ ಚಾಮುಂಡೇಶ್ವರಿ ತಾಯಿಯ ಮೆರವಣಿಗೆ ಕಾರಂಜಿ ಕೆರೆಯ ಹತ್ತಿರ ಪ್ರಾರಂಭವಾಗುತ್ತದೆ. ಕಾರಂಜಿ ಕೆರೆಯಲ್ಲಿ ದೇವಿಯನ್ನು ಸಿಂಗರಿಸಿ ದುರ್ಗಾಪರಮೇಶ್ವರಿ ದೇವಸ್ಥಾನದ ಹತ್ತಿರ ಬರುತ್ತಾರೆ. ಅಲ್ಲಿ ಕರಗದವರು ಮತ್ತು ಮುಖಂಡರುಗಳು ಒಟ್ಟಿಗೆ ಸೇರಿ ತಾಯಿಗೆ ಹೋಮ ನೆರವೇರಿಸುತ್ತಾರೆ.

ದೇವಿಯ ಉತ್ಸವವು ನಜರ್‌ಬಾದ್‌ನಿಂದ ಹೂವಿನ ಪಲ್ಲಕ್ಕಿಯ ರಥದಲ್ಲಿ ದೇವಿಯನ್ನು ಇರಿಸಿ ತಮಟೆಯ ಸದ್ದಿನೊಂದಿಗೆ ಕರಗವು ಮುಂದೆ ಸಾಗಿದಂತೆ ಅದರ ಹಿಂದೆ ರಥದಲ್ಲಿ ದೇವಿಯ ಉತ್ಸವವು ಸಾಗುತ್ತದೆ. ಕಾಳಿಕಾಂಬ ದೇವಾಲಯದ ಹತ್ತಿರ ಬರುವಷ್ಟರಲ್ಲಿ ಮೊದಲ ಪೂಜೆ ಸಲ್ಲುತ್ತದೆ. ಉತ್ಸವವು ಫೌಂಟೇನ್ ವೃತ್ತದ ಬಳಿ ಬಂದಾಗ ದೇವಿಗೆ ಮರಿ ಬಲಿ ನೀಡುವ ಸಂಪ್ರದಾಯವಿದೆ. ಅಲ್ಲಿಂದ ಉತ್ಸವ ಮುಂದುವರೆದು ಇಡೀ ಗಾಂಧಿನಗರವನ್ನೇ ಮೆರವಣಿಗೆಯ ಮೂಲಕ ಸುತ್ತಿ, ಮಧ್ಯರಾತ್ರಿ ಸುಮಾರು ಎರಡು ಗಂಟೆಯ ನಂತರ ದೇವಸ್ಥಾನವನ್ನು ತಲುಪುತ್ತದೆ.

ದೇವಾಲಯದ ಹತ್ತಿರ ಬರುವಷ್ಟರಲ್ಲಿ ಪ್ರತಿಮನೆಯವರು ತಂಬಿಟ್ಟಿನ ಆರತಿಯನ್ನು ತರುವರು. ತಂಬಿಟ್ಟಿಗೆ ವೀಳ್ಯದ ಎಲೆ, ಮಲ್ಲಿಗೆ ಮೊಗ್ಗುಗಳು ಹಾಗೂ ಪುರಿಯನ್ನು ಅಂಟಿಸಿ ಅಲಂಕರಿಸಿ ಜೊತೆಗೆ ಹೂವು, ಹಣ್ಣು ಕಾಯಿಯೊಂದಿಗೆ ಪೂಜೆಗೆ ಕೊಡುತ್ತಾರೆ. ಪೂಜೆ ಪುನಸ್ಕಾರಗಳು ಮುಗಿಯುವ ವೇಳೆಗೆ ಸುಮಾರು ಬೆಳಗಿನ ಜಾವ ಐದಾರು ಗಂಟೆಯಾಗುತ್ತದೆ. ವಿಶೇಷವೆಂದರೆ ಉತ್ಸವದ ಮೆರವಣಿಗೆಯ ಉದ್ದಕ್ಕು ತಮಟೆಯ ಸದ್ದಿಗೆ ಗಂಡಸರು, ಹೆಂಗಸರು, ಮಕ್ಕಳು ಎನ್ನದೆ ಎಲ್ಲರೂ ಕುಣಿತ ಪ್ರದರ್ಶಿಸುವುದನ್ನು ಕಾಣಬಹುದು.

ತಮಟೆ ಬಾರಿಸುವವರನ್ನು ಗೌರವಿಸುವುದು ಈ ಉತ್ಸವದ ಇನ್ನೊಂದು ವಿಶೇಷವಾಗಿದೆ. ತಂಬಿಟ್ಟಿನ ಆರತಿ ಮುಗಿದ ಮೇಲೆ ರಾತ್ರಿಯಿಡಿ ತಮಟೆ ಬಾರಿಸಿದವರಿಗೆ ಬೆಳಗಿನ ಜಾವದಲ್ಲಿ ಮಂಗಳಾರತಿ ಮಾಡಿ, ಹೂವು, ಹಣ್ಣು, ಕಾಣಿಕೆ ಕೊಟ್ಟು ಸತ್ಕರಿಸುತ್ತಾರೆ. ಶನಿವಾರದಂದು ಅನ್ನದಾನ ಕಾರ್ಯಕ್ರಮ, ಭಾನುವಾರದಂದು ವಿವಿಧ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ.

ಕರಗಕ್ಕೆ ಸೋಮವಾರದಂದು ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ಮಂಗಳವಾರದಂದು ಕರಗವನ್ನು ವಿಸರ್ಜಿಸುವರು. ಕರಗವನ್ನು ಹೊರುವ ಮಕ್ಕಳಿಂದ ತಂದಂತಹ ಕರಗವನ್ನು ಹತ್ತಿ,

ಆಲ ಮತ್ತು ಬೇವಿನ ಮರ ಮೂರು ಒಟ್ಟಿಗೆ ಇರುವ ಜಾಗದಲ್ಲಿ ಬಿಡುವುದು ಸಂಪ್ರದಾಯ ವಾಗಿದೆ. ಇದೇ ಸಂದರ್ಭದಲ್ಲಿ ಅಲ್ಲಿಗೆ ಬಂದವರಿಗೆ ಪುಳಿಯೊಗರೆ ಮತ್ತು ಮೊಸರನ್ನವನ್ನು ಪ್ರಸಾದದ ರೂಪದಲ್ಲಿ ವಿತರಿಸಲಾಗುತ್ತದೆ. ಹೀಗೆ ಗಾಂಧಿನಗರದಾದ್ಯಂತ ಚಾಮುಂಡೇಶ್ವರಿ ಕರಗ ಆಚರಣಾ ಮಹೋತ್ಸವವು ವೈಭವ ಮತ್ತು ಭಯ ಭಕ್ತಿಯಿಂದ ನೆರವೇರುತ್ತದೆ.

ಒಟ್ಟಾರೆಯಾಗಿ ಮೈಸೂರು ನಗರದಲ್ಲಿ ಗ್ರಾಮೀಣರ ಸೊಗಡಿನ ಕುರುಹಾಗಿ ವಿವಿಧ ಹಬ್ಬಗಳು ಆಚರಣೆಗೊಳ್ಳುವುದು ಸಾಂಸ್ಕೃತಿಕ ಸಿರಿವಂತಿಕೆಗೆ ಸಾಕ್ಷಿಯಾಗಿದೆ.

**ಮೈಸೂರು ಕರಗ**

ಮೈಸೂರಿನಲ್ಲಿ ನಡೆಯುವ ಕರಗ ಉತ್ಸವ ಎರಡನೆಯ ದಸರಾ, ಮಿನಿ ದಸರಾ ಎಂದೇ ಪ್ರಸಿದ್ಧಿಯನ್ನು ಪಡೆದಿದೆ. ಮೈಸೂರು ಕರಗವು ತನ್ನದೇ ಆದ ವಿಶೇಷತೆಯನ್ನು ಹೊಂದಿದೆ. ಪ್ರದೇಶದಿಂದ ಪ್ರದೇಶಕ್ಕೆ ಆಚರಣೆಗಳು ಭಿನ್ನವಾಗಿರುವಂತೆ ಇಲ್ಲಿಯ ಕರಗವು ಕೂಡ ಭಿನ್ನ ಆಚರಣೆ ಹೊಂದಿದೆ. ಮೈಸೂರು ಕರಗವು ಸುಮಾರು 95 ವರ್ಷದ ಇತಿಹಾಸವನ್ನು ಹೊಂದಿದೆ. ಈ ಬಾರಿ ನಡೆದ ಕರಗವು 95ನೇ ವರ್ಷದ ಆಚರಣೆಯಾಗಿದೆ. ಇದಕ್ಕೂ ಹಿಂದಿನಿಂದಲೂ ಕರಗದ ಆಚರಣೆ ಇತ್ತು ಎಂದು ಸ್ಥಳಿಯರು ಹೇಳುತ್ತಾರೆ. ಆದರೇ ದಾಖಲಾಗಿರುವುದು 95 ವರ್ಷದಿಂದ ಮಾತ್ರ.

ಮೈಸೂರು ಕರಗದ ಉತ್ಸವವು ವರ್ಷಕ್ಕೊಮ್ಮೆ ವೈಭವದಿಂದ ನಡೆಯುತ್ತದೆ. ಇಲ್ಲಿ ನಡೆಯುವ ಪ್ರತಿಯೊಂದು ಆಚರಣೆಯು ಅರ್ಥಪೂರ್ಣವಾಗಿದೆ. ಪ್ರತಿವರ್ಷ ಯುಗಾದಿ ಅಮಾವಾಸ್ಯೆಯ ಅನಂತರ ಈ ಕರಗವನ್ನು ಆಚರಿಸಲಾಗುತ್ತದೆ. ಕರಗವನ್ನು ಊರಿನಲ್ಲಿ ಸಂಭವಿಸಿದ ಸಾಂಕ್ರಾಮಿಕ ರೋಗವನ್ನು ಹೋಗಲಾಡಿಸುವ ಉದ್ದೇಶದಿಂದ ಆಚರಿಸಲು ಪ್ರಾಂಭಿಸಿದರು. ಕರಗದ ಆಚರಣೆಯಿಂದ ಊರಿನಲ್ಲಿ ಶಾಂತಿನೆಲೆಸಿತು. ಅನಂತರದಲ್ಲಿ ಪ್ರತಿವರ್ಷ ಕರಗವನ್ನು ಆಚರಿಸಲು ನಿರ್ಧರಿಸಿಕೊಂಡರು. ಮೊದಲಿಗೆ ಬೀದಿಯಲ್ಲಿ ಕರಗದ ಆಚರಣೆಯನ್ನು ಪ್ರಾರಂಭಿಸಿದರು. ಆಗ ಜಯ ಚಾಮರಾಜೇಂದ್ರ ಒಡೆಯರ್ ಅವರು ಕರಗದ ಆಚರಣೆಯ ವಿಷಯವನ್ನು ಮನಗಂಡು ದೇವಸ್ಥಾನ ಕಟ್ಟಲು ಬೇಕಾದ ಸ್ಥಳವನ್ನು ನೀಡಲು ಮುಂದಾದರು. ಆಗ ಸಾಹುಕಾರ್ ಚೆನ್ನಯ್ಯನವರು ಮೂಡಾ ಕಛೇರಿಯಲ್ಲಿದ್ದರು. ಲಿಂಗಣ್ಣನವರು ಚೇರ್ಮನ್ ಆಗಿದ್ದರು. ಕರಗದ ದೇವಸ್ಥಾನಕ್ಕಾಗಿ 100*200ಅಡಿ ಅಳತೆಯ ಜಾಗವನ್ನು ನೀಡಿದರು. ರಾಜರು ಮಾರಮ್ಮನ ದೇವಸ್ಥಾನವನ್ನು ಕಟ್ಟಲು ಹಣ ಸಹಾಯ ಮಾಡಲು ಸಿದ್ಧರಾದರು. ಆದರೇ

ಅಲ್ಲಿಯ ಜನರು ರಾಜರಿಂದ ಹಣ ಪಡೆಯದೆ ಭಿಕ್ಷೆಯನ್ನು ಬೇಡಿ ಹಣ ಸಂಗ್ರಹಿಸಿ 1924ರಲ್ಲಿ ಮೊದಲಿಗೆ ಗುಡಿಸಲಿನಲ್ಲಿ ಕರಗ ಆಚರಣೆಯನ್ನು ಪ್ರಾರಂಭಿಸಿದರು. ಅನಂತರ 1957ರಲ್ಲಿ ಶಂಕುಸ್ಥಾಪನೆ ಮಾಡಿ ಸಣ್ಣದಾಗಿ ದೇವಸ್ಥಾನವನ್ನು ಕಟ್ಟಿದರು.

ಇಟ್ಟಿಗೆ ಗೂಡಿನ ಕರಗ ಮೈಸೂರು ಕರಗ ಎಂದೇ ಪ್ರಸಿದ್ಧಿಯಾಗಿದೆ. ಒಂದು ತಿಂಗಳ ಮುಂಚೆ ವಿಭೂತಿಯನ್ನು ಅಗಸರ ಮನೆಯಲ್ಲಿ ಇಟ್ಟು ಪೂಜೆ ಮಾಡುತ್ತಾರೆ. ಇದು ಮೊದಲನೆಯ ಪೂಜೆಯಾಗಿದ್ದು, ಕರಗದ ಆಚರಣೆಗೆ ನಾಂದಿಯಾಗಿದೆ. ಕರಗಕ್ಕೆ ಒಂದು ವಾರ ಮುಂಚಿತವಾಗಿ ಮುಹೂರ್ತ ಕಂಬವನ್ನು ನೆಡಲಾಗುತ್ತದೆ. ನಮ್ಮ ಸಂಸ್ಕೃತಿಯ ಪ್ರಕಾರ ಯಾವುದೇ ಒಂದು ಧಾರ್ಮಿಕ ಶುಭಕಾರ್ಯ ಮಾಡಬೇಕಾದರೂ ಮೊದಲು ಮುಹೂರ್ತ ಕಂಬವನ್ನು ನೆಡುವುದು ವಾಡಿಕೆಯಾಗಿದೆ. ಕಾಲ, ಸಮಯ, ದಿನವನ್ನು ನೋಡಿ ಯಾವುದೇ ತೊಂದರೆಗಳು ಎದುರಾಗದಿರಲಿ, ಎಲ್ಲಾ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯಲೆಂದು ಈ ಮುಹೂರ್ತ ಕಂಬವನ್ನು ನೆಡುತ್ತಾರೆ. ಮುಹೂರ್ತ ಕಂಬವನ್ನು ನೆಟ್ಟು ಪೂಜೆ ಮಾಡಿದ ಅನಂತರ ಚಪ್ಪರ ಹಾಕಲಾಗುತ್ತದೆ. ಆಚರಣೆಯ ಪ್ರತೀಕವಾಗಿ ಅಂದೇ ಧ್ವಜಾರೋಹಣವನ್ನು ಮಾಡುತ್ತಾರೆ. ಮುಹೂರ್ತ ಕಂಬಕ್ಕೆ ಕಂಕಣವನ್ನು ಕಟ್ಟಿ ಹಳದಿ ಬಟ್ಟೆಯ ಮೇಲೆ ಸಿಂಹ, ತ್ರಿಶೂಲ, ಡಮರುಗ ಇರುವ ಧ್ವಜವನ್ನು ಸಿದ್ಧಗೊಳಿಸಿ ಮುಂಜಾನೆ ಆರುಗಂಟೆಗೆ ಧ್ವಜಾರೋಹಣ ಮಾಡಲಾಗುತ್ತದೆ.

ಮೊದಲಿಗೆ ಮಣ್ಣಿನ ಮಡಿಕೆಯನ್ನು ತಗೆದುಕೊಂಡು ಚಾಮುಂಡಿಬೆಟ್ಟದ ಪಾದದಲ್ಲಿ ಇರುವ ಬಾವಿಯಿಂದ ನೀರನ್ನು ತಂದು ಅದಕ್ಕೆ ನಿಂಬೆಹಣ್ಣು, ವೀಳ್ಯದೆಲೆ, ಅಡಿಕೆ, ಬಿಚ್ಚಳಕರಿ, ಮಣಿ, ಅರಿಶಿಣದಕೊಂಬು, ಬೆಳ್ಳಿನಾಣ್ಯ, ಲಾವಂಚಬೇರು, ಹರಕೆ ಹೊತ್ತವರು ಕೊಡುವ ನಿಂಬೆ ಹಣ್ಣುಗಳು (ಸುಮಾರು 150–200) ಮತ್ತು ಚಾಮುಂಡಿ ಬೆಟ್ಟದಿಂದ ತಂದ ದೇವಿಯ ತೀರ್ಥ, ಕಾಯಿ ಇವುಗಳನ್ನು ಮಡಿಕೆಯ ಒಳಗೆ ಹಾಕಲಾಗುತ್ತದೆ. ಇದರ ಮೇಲೆ ಬೇವಿನ ಸೊಪ್ಪನ್ನು ಒಂದು ಅಂದಾಜಿನ ಎತ್ತರಕ್ಕೆ ಬಿದಿರಿನ ಕಡ್ಡಿಯ ಸಹಾಯದಿಂದ ಕಟ್ಟಲಾಗುತ್ತದೆ. ಅನಂತರ ಅದರ ಮೇಲೆ ಮಲ್ಲಿಗೆ ಹೂವನ್ನು ಸುತ್ತಿ ಅಲಂಕಾರ ಮಾಡಲಾಗುತ್ತದೆ.

ಇಟ್ಟಿಗೆ ಗೂಡಿನಲ್ಲಿ ಮೂರು ಕರಗವನ್ನು ತರುತ್ತಾರೆ. ಮಾರಮ್ಮನ ಕರಗ, ರೇಣುಕಾ ದೇವಿ ಕರಗ ಮತ್ತು ಚಾಮುಂಡೇಶ್ವರಿ ಕರಗ. ಮೊದಲಿಗೆ ಮಾರಮ್ಮನ ಕರಗವನ್ನು ತಂದು ಅದನ್ನು ಮಾರಮ್ಮನ ದೇವಸ್ಥಾನದಲ್ಲಿಯೇ ಇಡುತ್ತಾರೆ. ಏಕೆಂದರೆ ಕರಗದ ಆಚರಣೆಯ ಉತ್ಸವಕ್ಕೆ

ಯಾವುದೇ ರೀತಿಯ ತೊಂದರೆಗಳು ಆಗದಂತೆ ಕಾಯುತ್ತಾಳೆ ಎಂಬ ನಂಬಿಕೆಯಿದೆ. ಇನ್ನುಳಿದೆರಡು ಕರಗಗಳು ಮೆರವಣಿಗೆಯಲ್ಲಿ ಭಾಗವಹಿಸುತ್ತವೆ.

ಕರಗದ ಆಚರಣೆಯಲ್ಲಿ ಕೆಲವೊಂದು ನಿಯಮಗಳಿವೆ. ಕರಗವನ್ನು ಹೊರುವವರು ಮನೆಯಲ್ಲಿ ಊಟ ಮಾಡಬಾರದು. ಕರಗವನ್ನು ತರುವವರೆಗೂ ಉಪವಾಸವಿರಬೇಕು. ಕರಗ ಬಂದ ಮೇಲೆ ದೇವರಿಗೆ ನೈವೇದ್ಯ ಆದ ಅನಂತರ ಸಿಹಿ ಪೊಂಗಲ್ ಮಾಡಿ ಎಡೆ ಮಾಡುತ್ತಾರೆ ಅದೇ ಪ್ರಸಾದವನ್ನು ಸ್ವೀಕರಿಸಬೇಕು. ಕರಗ ಪ್ರಾರಂಭವಾದಾಗ ಮನೆಯಿಂದ ಹೊರಗೆ ಬಂದರೆ ಕರಗ ಮುಗಿಯುವವರೆಗೂ ಅವರು ಮನೆಗೆ ಹೋಗುವಂತಿಲ್ಲ. ದೇವಸ್ಥಾನದಲ್ಲೇ ವಾಸ್ತವ್ಯ ಹೂಡಬೇಕು. ಇಲ್ಲಿ ಇರುವವರೆಗೆ ಅವರು ಎಲ್ಲಾ ಕೆಟ್ಟ ಚಟಗಳನ್ನು ಬಿಟ್ಟು ಶುದ್ಧವಾಗಿರಬೇಕು ಎಂಬ ನಿಯಮಗಳಿವೆ.

ಕರಗದ ದಿನ ಅಂದರೆ ಬುಧವಾರ ಬೆಳಿಗ್ಗೆ ದೇವರ ಬೆಳ್ಳಿ ವಿಗ್ರಹ ಮತ್ತು ಕರಗಕ್ಕೆ ತೊಡಿಸುವ ಮುಖವಾಡಗಳಿಗೆ ಅಭಿಷೇಕವನ್ನು ಮಾಡಲಾಗುತ್ತದೆ. ಅನಂತರ ದೇವಸ್ಥಾನದ ನಾಲ್ಕು ದಿಕ್ಕುಗಳಿಗೂ ಕಂಕಣವನ್ನು ಕಟ್ಟಿ ದುಷ್ಟಶಕ್ತಿಗಳಿಗೆ ಬಂಧನ ಮಾಡುತ್ತಾರೆ. ಅಂದೇ ಕರಗ ಹೊರುವವರಿಗೂ ಕಂಕಣವನ್ನು ಕಟ್ಟುತ್ತಾರೆ. ಅಂದಿನಿಂದ ಅವರು ದೇವಸ್ಥಾನದಲ್ಲೇ ಉಳಿಯ ಬೇಕಾಗುತ್ತದೆ. ಅನಂತರ ದೇವಸ್ಥಾನದಿಂದ ಬೆಟ್ಟದ ಪಾದಕ್ಕೆ ಮೆರವಣಿಗೆಯಲ್ಲಿ ತೆರಳಿ ಶಕ್ತಿ ದೇವತೆ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿ ಅಮ್ಮನವರ ಕರಗವನ್ನು ಇಟ್ಟಿಗೆ ಗೂಡಿನ ದೇವಾಲಯಕ್ಕೆ ತರಲಾಗುತ್ತದೆ. ಅನಂತರ ಕೋಟೆ ಮಾರಮ್ಮನವರ ದೇವಸ್ಥಾನಕ್ಕೆ ತೆರಳಿ ಶಕ್ತಿ ಕರಗ ಮತ್ತು ಮಾರಮ್ಮ ಕರಗವನ್ನು ಸಿಂಗರಿಸಿ ಮೆರವಣಿಗೆಯಲ್ಲಿ ತಂದು ವಾಡಿಕೆಯಂತೆ ಪ್ರಥಮ ಪೂಜೆಯನ್ನು ಮಡಿವಾಳರ ಮನೆಯಲ್ಲಿ ಸಾಂಬ್ರಾಣಿ ಹೊಗೆ, ಹೂವಿನ ಹಾರ ಹಾಕುವುದರೊಂದಿಗೆ ಸಲ್ಲಿಸಿ, ಅನಂತರದಲ್ಲಿ ಅಲ್ಲಿಂದ ಮಡಿಹಾಸಿ ಕರಗವನ್ನು ದೇವಸ್ಥಾನಕ್ಕೆ ತರಲಾಗುತ್ತದೆ.

ಕರಗ ಹೊರುವವರು ಎಷ್ಟೇ ಜನ ಇದ್ದರೂ ಎಲ್ಲರಿಗೂ ಕರಗವನ್ನು ಕಟ್ಟಲಾಗುತ್ತದೆ. ಅಂದಿನಿಂದ ಅವರು ಮಾರಮ್ಮನ ಪ್ರತಿರೂಪ ಎಂಬ ಭಾವನೆ ಜನರಲ್ಲಿ ಮೂಡುತ್ತದೆ. ಕರಗ ಹೊರುವವರು ಮೈಗೆಲ್ಲಾ ಅರಿಶಿಣವನ್ನು ಹಚ್ಚಿ ಕೊಂಡಿರುತ್ತಾರೆ. ಹಣೆ ಮತ್ತು ಮೈಮೇಲೆ ವಿಭೂತಿಯನ್ನು ಬಳಿದುಕೊಂಡಿರುತ್ತಾರೆ. ಅರಿಶಿಣದ ಕಚ್ಚೆಯನ್ನು ಕಟ್ಟಿ ಸೊಂಟಕ್ಕೆ ಕೆಂಪು ಬಟ್ಟೆಯನ್ನು ಸುತ್ತಿಕೊಂಡಿರುತ್ತಾರೆ. ಕಾಲಿಗೆ ಕಾಲುಂಗುರ, ಕಾಲು ಚೈನುಗಳನ್ನು ಧರಿಸಿ ಸ್ತ್ರೀ ರೂಪಾಧಾರಿಗಳಾಗಿರುತ್ತಾರೆ.

ಕರಗವನ್ನು ಯಾವುದೇ ಜಾತಿ ಭೇದವಿಲ್ಲದೆ ಮನೆ ಮನೆಗಳಲ್ಲಿ ಇಳಿಸಿ ಪೂಜೆ ಮಾಡಲಾಗುತ್ತದೆ. ಪೂಜೆ ಮಾಡಿ ಅನಂತರ ದೇವರಿಗೆ ಬಾಗಿನವನ್ನು ಕೊಡುತ್ತಾರೆ ಮತ್ತು ಮಡಿಲು ತುಂಬುವರು. ಕರಗವನ್ನು ಸಾಮಾನ್ಯವಾಗಿ ಮಲ್ಲಿಗೆ ಹೂವಿನಿಂದ ಮಾತ್ರ ಅಲಂಕರಿಸುತ್ತಾರೆ. ಒಂದು ಕರಗಕ್ಕೆ ಸುಮಾರು 120–125 ಮಾರು ಹೂವನ್ನು ಹಾಕಿರುತ್ತಾರೆ. ಕರಗವನ್ನು ಮಲ್ಲಿಗೆ ಹೂವಿನಿಂದ ಸಿಂಗರಿಸಿ ರೇಷ್ಮೆ ಸೀರೆ ಉಡಿಸಿ, ಬಂಗಾರದ ಮುಖವಾಡವನ್ನು ಧರಿಸಿ, ಮೊಗ್ಗಿನ ಜಡೆಯನ್ನು ಹಾಕಿ ಸಿಂಗರಿಸುತ್ತಾರೆ. ಮೊದಲ ಮೂರು ದಿನ ದೇವರಿಗೆ ಎರಡು ಕೈಗಳನ್ನು ಮಾತ್ರ ಹಾಕಲಾಗಿರುತ್ತದೆ.

ಕರಗ ಪ್ರಾರಂಭವಾದ ದಿನದಿಂದ ಶನಿವಾರದವರೆಗೂ ಕರಗವು ಇಟ್ಟಿಗೆಗೂಡಿನ ಎಲ್ಲಾ ಬೀದಿಗಳಲ್ಲೂ ಸಂಚರಿಸಿ ಪೂಜೆ ಸ್ವೀಕರಿಸಲಾಗುತ್ತದೆ. ಊರಿನ ಭಕ್ತಾದಿಗಳು ಕರಗವನ್ನು ತಮ್ಮ ಮನೆಯಲ್ಲಿ ಇಳಿಸಿ ದೇವಿಗೆ ಹಾಲು, ಮಜ್ಜಿಗೆ, ಪಾನಕ, ಕೋಸಂಬರಿ ಹೀಗೆ ವಿವಿಧ ಪ್ರಸಾದಗಳನ್ನು ನೈವೇದ್ಯಮಾಡಿ ತಂಪು ನೀಡುತ್ತಾರೆ. ಯಾವುದೇ ಭೇದ ಭಾವವಿಲ್ಲದೆ ಕರಗವು ಹರಕೆ ಇರುವ ಎಲ್ಲರ ಮನೆಯಲ್ಲೂ ಪೂಜೆಯನ್ನು ಸ್ವೀಕರಿಸುತ್ತದೆ.

ಮೈಸೂರು ಕರಗದ ಪ್ರಮುಖ ಉತ್ಸವ ಪ್ರಾರಂಭವಾಗುವುದು ಶನಿವಾರ. ಕರಗದ ಉತ್ಸವವು ಆಕರ್ಷಕ ಮೆರವಣಿಗೆಯಾಗಿದ್ದು, ರಾತ್ರಿ ಎಂಟು ಗಂಟೆಗೆ ಪ್ರಾರಂಭವಾಗಿ ಬೆಳಗ್ಗೆ ಎಂಟು ಗಂಟೆಗೆ ಮತ್ತೆ ದೇವಸ್ಥಾನಕ್ಕೆ ಹಿಂದಿರುಗುತ್ತದೆ. ರಾತ್ರಿ ಎಂಟು ಗಂಟೆಗೆ ಶಕ್ತಿ ಕರಗವು ಮಲ್ಲಿಗೆಯ ಮಂಟಪದಲ್ಲಿ ಜಗಮಗಿಸುವ ದೀಪಾಲಂಕಾರಗಳೊಂದಿಗೆ ಕರಗದ ಮೆರವಣಿಗೆ ಹೊರಡುತ್ತದೆ. ಈ ಉತ್ಸವವು ಅರಮನೆ ಕಛೇರಿ ನೂರಡಿ ರಸ್ತೆ, ಮಿಷನ್ ಆಸ್ಪತ್ರೆ, ಕಬೀರ್ ರಸ್ತೆ, ಕಾಳಮ್ಮನ ಗುಡಿ ರಸ್ತೆ, ಇರ್ವಿನ್ ರಸ್ತೆ, ಕುರುಬಗೇರಿ, ಕುಂಬಾರಗೇರಿ ಅಶೋಕರಸ್ತೆ, ನಜರ್‌ಬಾದ್ ರಸ್ತೆಗಳಲ್ಲಿ ರಾತ್ರಿಪೂರಾ ಮೆರವಣಿಗೆ ನಡೆಯುತ್ತದೆ.

ಉತ್ಸವದಲ್ಲಿ ಮೊದಲಿಗೆ ತೆರೆದ ವಾಹನದಲ್ಲಿ ಹರಿಕಥೆ ಹೇಳುವವರು ಸಾಗುತ್ತಾರೆ. ಅನಂತರ ಚಾಮುಂಡೇಶ್ವರಿ ವಿಗ್ರಹವನ್ನು ಕುಕ್ಕೆಯಲ್ಲಿಟ್ಟು, ಅದನ್ನು ಹೊತ್ತುಕೊಂಡವರು ಮೆರವಣಿಗೆಯಲ್ಲಿ ಸಾಗುತ್ತಾರೆ. ಮಧ್ಯದಲ್ಲಿ ಜನಪದ ಕಲಾವಿದರು, ನವೀನ ಪಂಬೈ, ಸಿಲಂಬು, ನಾದಸ್ವರ ಮುಂತಾದ ಸಂಗೀತ ವಾದ್ಯಗಳು ತೆರಳುತ್ತವೆ. ವಾದ್ಯದ ಶಬ್ದಕ್ಕೆ ಜನರು ಕುಣಿಯುತ್ತ ಮೆರವಣಿಗೆಯೊಂದಿಗೆ ಸಾಗುತ್ತಾರೆ. ಅನಂತರ ಹರಕೆ ಹೊತ್ತವರು ಮೈಯಲ್ಲಿ ನಿಂಬೆಹಣ್ಣನ್ನು ದಾರದಿಂದ ಪೋಣಿಸಿಕೊಂಡು ಕುತ್ತಿಗೆ ಮತ್ತು ಮೈಗೆಲ್ಲಾ ಹಾರದಂತೆ ಹಾಕಿಕೊಂಡಿರುತ್ತಾರೆ.

ಇದರ ಜೊತೆಯಲ್ಲಿ ಕರಗದ ಉತ್ಸವ ಮತ್ತು ಕೊನೆಯಲ್ಲಿ ಚಾಮುಂಡೇಶ್ವರಿ ಉತ್ಸವದ ಮೂರ್ತಿಯು ಮೆರವಣಿಗೆಯಲ್ಲಿ ಸಾಗುತ್ತದೆ.

ಮೆರವಣಿಗೆಯ ದಿನ ಹೂವಿನಿಂದ ಸಿಂಗರಿಸಿದ ಕರಗದ ತುದಿಗೆ ನಿಂಬೆಹಣ್ಣು, ರಜತ ಛತ್ರಿ ಧರಿಸಿರುತ್ತಾರೆ. ಮೊದಲ ಮೂರು ದಿನಗಳಲ್ಲಿ ಎರಡು ಕೈಗಳನ್ನು ಮಾತ್ರ ಹಾಕಿ ಮೆರವಣಿಗೆ ಮಾಡುತ್ತಿದ್ದರು ಅಂದು ನಾಲ್ಕು ಕೈಗಳನ್ನು ಹಾಕುತ್ತಾರೆ. ಚಾಮುಂಡೇಶ್ವರಿ ಕರಗಕ್ಕೆ ಶಂಖ, ಚಕ್ರ, ತ್ರಿಶೂಲವನ್ನು ಸಂಹಾರ ಮಾಡುತ್ತಿರುವ ಭಂಗಿಯಲ್ಲಿ ಹಾಕುತ್ತಾರೆ. ಮಾರಮ್ಮನ ಕರಗಕ್ಕೆ ಪಾನ್ ಬಟ್ಟಲು, ತ್ರಿಶೂಲ, ಡಮರುಗ, ಕತ್ತಿ ಹಾಕಿ ಅಲಂಕರಿಸುತ್ತಾರೆ. ಉತ್ಸವದ ಮುಂಭಾಗದಲ್ಲಿ ಮತ್ತು ಹಿಂಭಾಗದಲ್ಲಿ ಶಕ್ತಿದೇವತೆಯಾದ ಚಾಮುಂಡೇಶ್ವರಿಯ ಮೂರ್ತಿಯನ್ನು ಕಾಣಬಹುದು. ಅದು ಕರಗದ ಉತ್ಸವಕ್ಕೆ ಯಾವುದೇ ತೊಂದರೆಯು ಆಗದಂತೆ ಚಾಮುಂಡೇಶ್ವರಿಯು ಕಾಯುತ್ತಾಳೆ ಎಂಬ ನಂಬಿಕೆಯಿಂದ ಈ ಉತ್ಸವವು ಜರುಗುತ್ತದೆ. ಕೊನೆಯದಾಗಿ ಭಾನುವಾರ ಕರಗವನ್ನು ಶ್ರೀರಂಗಪಟ್ಟಣದ ಪಶ್ಚಿಮ ವಾಹಿನಿ ಕಾವೇರಿ ನದಿಯ ಪ್ರದೇಶದಲ್ಲಿ ಬಿಡುವ ಸಂಪ್ರದಾಯ ನಿರಂತರವಾಗಿ ನಡೆದುಕೊಂಡು ಬಂದಿದೆ.

**ವಿಶೇಷ :** ಕರಗವನ್ನು ತರುವಾಗ ಕರಗದಮ್ಮ ಮತ್ತು ಮಾರಮ್ಮಳನ್ನು ಹೊಗಳುತ್ತಾರೆ. ಚೆಂದುಳ್ಳಿ ಚೆಲುವೆ, ನೀಸುಂದರಿ ಎಂದು ಹೊಗಳುವ ಮೂಲಕ ಕರೆತರುತ್ತಾರೆ. ಕಾವೇರಿ ನದಿಯಲ್ಲಿ ವಿಸರ್ಜಿಸಲು ಹೋಗುವಾಗ ಗುಡ್‌ಶೆಟ್ಟಿ ನೀ ಅಂತವಳು, ಬಚ್ಚಾಲಿ, ನೀ ಇಂತವಳು ಬೇವರ್ಸಿ, ಬಿಕ್ನಾಸಿ ಎಂದು ಬೈಯುವ ಪರಿಪಾಠವಿದೆ. ಅಮ್ಮಂದಿರು ನಗುನಗುತ ಸಂತೋಷದಿಂದ ತೆರಳಲಿ ಅಥವಾ ಇಲ್ಲಿನ ಸುಖಕ್ಕೆ ಜೋತು ಬೀಳದೆ ಸುಖವನ್ನು ಮರೆತು ಸಿಟ್ಟಿನಿಂದಾದರೂ ಹೊರಟು ಹೋಗಲಿ ಎನ್ನುವ ಅಭಿಪ್ರಾಯವಿರಬೇಕು.

ಕರಗ ಹೊರುವವರ "ನಾಲಿಗೆ ಸುಟ್ಟು ಪಂಚಗವ್ಯದಲ್ಲಿ ಶುದ್ಧಮಾಡಿ, ಕುತ್ತಿಗೆಗೆ ಚಿನ್ನದ ತಗಡಿನ ದಾರ ಹಾಕುತ್ತಾರೆ. ಆತ ಅವಿವಾಹಿತನಾಗಿದ್ದರೆ ಕಳ್ಳಿಗಿಡ ಇಲ್ಲವೇ ಹುತ್ತದೊಂದಿಗೆ ವಿವಾಹ ನೆರವೇರಿಸಿ ದೀಕ್ಷೆ ಕೊಡಲಾಗುತ್ತದೆ. ವಿವಾಹಿತನಾಗಿದ್ದರೆ ಆತನ ಹೆಂಡತಿಯ ತಾಳಿಯನ್ನು ಬಿಚ್ಚಿಸಿ ಕರಗ ಮುಗಿದ ಮೇಲೆ ಮತ್ತೆ ಶಾಸ್ತ್ರೋಕ್ತವಾಗಿ ಕಟ್ಟಿಸಲಾಗುತ್ತದೆ"[18] ಕರಗದ ಮೆರವಣಿಗೆ ಮುಗಿಯುವವರೆಗೂ ಎಲ್ಲಿಯೂ ಕರಗವನ್ನು ಬೀಳಿಸುವಹಾಗಿಲ್ಲಾ. ಬೀಳಿಸಿದಲ್ಲಿ ಕರಗದ ಜೊತೆಯಲ್ಲೇ ಇರುವ ವೀರಕುಮಾರರು ಕರಗ ಬೀಳಿಸಿದವನ ತಲೆಯನ್ನು ಕತ್ತರಿಸುತ್ತಾರೆ. ಅದ್ದರಿಂದ ಮೇಲೆ ಹೇಳಿರುವಂತೆ ಕರಗ ಹೊರುವವನ ಹೆಂಡತಿಯ ತಾಳಿಯನ್ನು ತೆಗೆಸಿರುತ್ತಾರೆ. ಆ ಕಾರಣದಿಂದಲೇ ಕರಗ ಹೊರುವವರು ಕರಗವನ್ನು ಬೀಳಿಸಿದಲ್ಲಿ ಅವರ ತಲೆಕತ್ತರಿಸುತ್ತಾರೆ

ಎಂಬ ನಂಬಿಕೆ ಇದೆ. ಆದ್ದರಿಂದ ಮುಂಚಿತವಾಗಿಯೇ ಕರಗ ಹೊರುವವನ ಹೆಂಡತಿಯನ್ನು ವಿಧವೆಯ ರೀತಿಯಲ್ಲಿ ಇರಿಸಿರುತ್ತಾರೆ. ಇದೊಂದು ಅಮಾನವೀಯ ಪದ್ಧತಿಯಾಗಿದೆ. ತನ್ನ ಗಂಡ ಸುರಕ್ಷಿತವಾಗಿ ಹಿಂದಿರುಗಲೆಂದು ಕರಗ ಹೊರುವ ಗುಡ್ಡನ ಹೆಂಡತಿ ಮನೆಯಲ್ಲಿ ಪೂಜೆ ಪುನಸ್ಕಾರಗಳನ್ನು ಮಾಡುತ್ತಾ ಗಂಡನ ಸುರಕ್ಷಿತ ಆಗಮನವನ್ನು ನಿರೀಕ್ಷಿಸುತ್ತಿರುತ್ತಾಳೆ.

## 5.3 ವಿಧಿ ನಿಷೇಧಗಳು

ಭಯ ಮತ್ತು ಭಾವನಾ ಮೂಲದ ನಂಬಿಕೆಯೊಂದನ್ನು ಕಟ್ಟುನಿಟ್ಟಾಗಿ ಜಾರಿ ಗೊಳಿಸುವಂತಹುದು. ಇದನ್ನು ಮಾಡಬಾರದು, ಇದು ಕೆಡುಕು ಎನ್ನುವ ಸಾಮಾಜಿಕ, ಧಾರ್ಮಿಕ ಪ್ರತಿಬಂಧಕ, ಸಾಮಾನ್ಯವಾಗಿ ಬುಡಕಟ್ಟುಗಳಿಗೆ ಮತ್ತು ರೈತ ಸಮಾಜಗಳಿಗೆ ಸೇರಿದ ಜನರಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಈ ಬಗೆಯ ಸಮಾಜಗಳಲ್ಲಿ ವ್ಯಕ್ತಿಗಳಿಗಿಂತ ಮಾನವ ಗುಂಪುಗಳಿಗೆ ಪ್ರಾಧಾನ್ಯತೆ ಹೆಚ್ಚಿರುವುದೇ ಇಂತಹ ನಿರ್ಬಂಧಗಳಿಗೆ ಮೂಲ ಕಾರಣ. ನಿಷಿದ್ಧತೆ ಗೊಳಗಾದ ವಸ್ತುವಿಗೆ ಅಥವಾ ಕಾರ್ಯಕ್ಕೆ ಅದರದೇ ಆದ ಶಕ್ತಿಯಿದೆ ಎಂದು ಈ ಜನರು ಭಾವಿಸುತ್ತಾರೆ. ಮನಃಶಾಸ್ತ್ರಜ್ಞರ ಅಭಿಪ್ರಾಯದಂತೆ ಇದರಲ್ಲಿ ಅಡಕವಾಗಿರುವುದೆಂದು ಭಾವಿಸುವ ಶಕ್ತಿಗೆ ಮಾನವ ಹೆದರುತ್ತಾನೆ. ಇಲ್ಲಿ ಮಾಡಬಾರದು ಎಂಬ ಕಾರ್ಯಗಳ ಸರಮಾಲೆಯೇ ನಿಷೇಧವೆನಿಸಿ ಕೊಳ್ಳುತ್ತದೆ. ಇಂತಹ ಕಾರ್ಯಗಳನ್ನು ಮಾಡುವುದರಿಂದ ಅನಾಹುತವಾಗುವುದೆಂಬ ಭಯ ಅವರನ್ನು ನಿಯಂತ್ರಿಸುತ್ತದೆ ಹಾಗೂ ನಂಬಿಕೆಗೆ ಒಳಗಾಗುವಂತೆ ಮಾಡುತ್ತದೆ.

**ಸಿಗ್ಮಂಡ್ ಫ್ರಾಯ್ಡ್ ಅವರ ಅಭಿಪ್ರಾಯದಂತೆ :** ನಿಷೇಧಗಳು ಕುಲದೇವತಾ ಚಿಹ್ನೆಗಳಿಗೆ ಸಂಬಂಧಿಸಿದೆ. ಅವರ ಪ್ರಕಾರ ಸುಪ್ತ ಮನಸ್ಸಿನಲ್ಲಿರುವ ವಿರೋಧಾತ್ಮಕ ಚಿಂತನೆ ಮತ್ತು ರೋಗಗ್ರಸ್ತ ಮನಸ್ಸು ಇಂತಹ ನಂಬಿಕೆಗಳಿಗೆ ಕಾರಣಗಳಾಗಿವೆ. ಮಾಡಬೇಕು ಮತ್ತು ಮಾಡಬಾರದು ಎಂಬ ವಿಚಾರಗಳು ಒಟ್ಟಿಗೆ ಮನಸ್ಸಿನಲ್ಲಿದ್ದು ಅದು ವೈಚಾರಿಕ ಘರ್ಷಣೆಗೆ ಕಾರಣವಾಗುತ್ತದೆ ಇಂತಹ ಮನಃಸ್ಥಿತಿಯೇ ನಿಷೇಧಗಳಿಗೆ ದಾರಿ ಮಾಡುತ್ತದೆ.

**ಪ್ರಸಿದ್ಧ ಮಾನವಶಾಸ್ತ್ರಜ್ಞರಾದ ರ‍್ಯಾಡ್‌ಕ್ಲಿಪ್ ಬ್ರೌನರ ಅಭಿಪ್ರಾಯದಂತೆ :** ಕುಲಚಿಹ್ನೆಗಳ ಮತ್ತು ನಿಷೇಧಗಳ ಮೂಲಕ ಸಮಾಜದಲ್ಲಿ ಸುವ್ಯವಸ್ಥೆಯನ್ನು ಕಾಪಾಡಬಹುದು. ಕೆಲವು ಮೌಲ್ಯಗಳನ್ನು ಕಾಯ್ದುಕೊಳ್ಳಲು ಈ ನಂಬಿಕೆಗಳು ಸಹಾಯಕವಾಗುತ್ತವೆ. ಸಮಾಜದ ಐಕ್ಯತೆಗೆ ಇಂತಹ ಸಂಕೇತಗಳು ಅವಶ್ಯಕವಾಗಿವೆ. ಕೆಲವೊಂದು ವಿಧಿ–ನಿಷೇಧಗಳನ್ನು ಈ ಕೆಳಕಂಡಂತೆ ವಿಶ್ಲೇಷಿಸಲಾಗಿದೆ.

**ಹರಕೆ ಹೊತ್ತವರೇ ಹರಕೆ ನೆರವೇರಿಸಬೇಕು :** ಸಾಮಾನ್ಯವಾಗಿ ಹರಕೆ ಹೊತ್ತವರೇ ಹರಕೆಯನ್ನು ನೆರವೇರಿಸುವ ಪದ್ಧತಿ ಎಲ್ಲಾ ಕಡೆಗಳಲ್ಲೂ ಕಂಡುಬರುತ್ತದೆ. ಆದರೆ ಕೆಲವು ಸಂದರ್ಭಗಳಲ್ಲಿ ಹರಕೆ ಹೊತ್ತವರು ದೈಹಿಕ ಇಲ್ಲವೇ ಮಾನಸಿಕ ಅನಾರೋಗ್ಯದಿಂದ ಬಳಲಿ ಹರಕೆ ನೆರವೇರಿಸಲು ಆಗದ ಪಕ್ಷದಲ್ಲಿ, ಅವರ ಪರವಾಗಿ ಇತರರು ಆ ಹರಕೆಯನ್ನು ತೀರಿಸಬಹುದು. ಅದಕ್ಕೆ ತಪ್ಪು ಕಾಣಿಕೆಯನ್ನು ಕಟ್ಟಿ ಆ ಹರಕೆಯನ್ನು ಸಲ್ಲಿಸಲಾಗುತ್ತದೆ. ಆದರೆ ಸಿಡಿ ಮತ್ತು ಬಾಯಿಬೀಗದ ಆಚರಣೆಯಲ್ಲಿ ಹರಕೆ ಹೊತ್ತವರೆ ಹರಕೆಯನ್ನು ನೆರವೇರಿಸಬೇಕು ಎಂಬ ಪದ್ಧತಿ ಇದೆ.

**ಹೊನ್ನೆಮರ ಕಡಿಯಬಾರದು :** "ದೇವರ ವಿಗ್ರಹವನ್ನು ಮಾಡಲು ಕೆಲವು ಸ್ಥಳಗಳಲ್ಲಿ ಹೊನ್ನೆಮರವನ್ನು ಉಪಯೋಗಿಸುತ್ತಾರೆ. ದೇವತೆಯನ್ನು ಈ ಮರದಲ್ಲಿ ಮಾಡುವುದರಿಂದ ಅದನ್ನು ಕಡಿಯಬಾರದು ಹಾಗೂ ಉರಿಸಬಾರದೆಂಬ ನಂಬಿಕೆ"[19] ಹೊನ್ನೆ, ಸಂಪಿಗೆ, ಆಲ, ಬನ್ನಿ, ಬೇವು, ತೆಂಗು, ಅರಳಿಮರಗಳು ಜನಪದರ ದೃಷ್ಟಿಯಲ್ಲಿ ಅತ್ಯಂತ ಪವಿತ್ರವಾದ ಮರಗಳೆನಿಸಿಕೊಂಡಿವೆ. ಇವುಗಳಲ್ಲಿ ದೇವರ ವಾಸಸ್ಥಾನವಿರುತ್ತದೆ ಎಂದು ನಂಬುವ ಇವರು ಅದನ್ನು ಕಡಿದು ಪಾಪಕಟ್ಟಿಕೊಳ್ಳುವ ಕೆಲಸಕ್ಕೆ ಕೈಹಾಕುವುದಿಲ್ಲ ಹಾಗೂ ಉರುವಲಾಗಿಯೂ ಉಪಯೋಗಿಸುವುದಿಲ್ಲ.

**ತೀರ್ಥ ಸ್ವೀಕರಿಸಿ ಕೈಯಿಂದ ತಲೆ ಸವರಿಕೊಳ್ಳ ಬೇಕು :** ತೀರ್ಥ ಪರಿಶುದ್ಧ ಹಾಗೂ ಪ್ರಾಯಶ್ಚಿತ್ತದ ಸೂಚಕವಾಗಿದೆ. "ಜನಪದರ ಅರ್ಥದಲ್ಲಿ ತೀರ್ಥ ಎಂದರೆ ಯಾವುದೇ ಪೂಜೆಯ ಸಂದರ್ಭದಲ್ಲಿ ಬಳಕೆಯಾಗುವ ನೀರು, ತೆಂಗಿನ ನೀರು, ಯಾರು ಮುಟ್ಟುವ ಮುನ್ನ ಭಾವಿ ಅಥವಾ ನದಿಯಿಂದ ಸಂಗ್ರಹಿಸಿದ ನೀರು ಇವು ತೀರ್ಥದ ಪ್ರಮುಖ ರೂಪಗಳು, ಈ ತೀರ್ಥ ಅತ್ಯಂತ ಪವಿತ್ರವಾದುದು. ಇದು ದೇವರ ಅನುಗ್ರಹದ ಪ್ರತೀಕ. ತೀರ್ಥವೂ ದೈವಶಕ್ತಿಯಿಂದ ಕೂಡಿದೆ. ಇದರ ಸೇವನೆಯಿಂದ ಪಾಪ ಪರಿಹಾರವಾಗಬಲ್ಲದು. ತೀರ್ಥವನ್ನು ತಲೆಯಮೇಲೆ ಸವರಿಕೊಳ್ಳುವುದು ಇಲ್ಲವೇ ತೀರ್ಥಸ್ನಾನ ಮಾಡುವುದರಿಂದ ಕೇಡುಗಳು ನಿವಾರಣೆಯಾಗುತ್ತದೆ. ಎಂಬ ನಂಬಿಕೆ ಇದೆ. ರೋಗ ರುಜಿನಗಳಿಂದ ಮನುಷ್ಯ ಮುಕ್ತನಾಗಿ, ಪರಿಶುದ್ಧಗೊಳ್ಳುತ್ತಾನೆ, ದೈವಶಕ್ತಿಯನ್ನು ಪಡೆಯುತ್ತಾನೆ ಎಂಬುದು ಜನಪದರ ಜೀವನ ತತ್ವವಾಗಿದೆ"[20] ತೀರ್ಥವನ್ನು ಮುಖಕ್ಕೆ ಎರಚಿಸಿಕೊಳ್ಳುವುದು, ಮನೆಗೆ ಕೊಂಡೊಯ್ದು ಮನೆಗೆಲ್ಲ ಪ್ರೋಕ್ಷಣೆ ಮಾಡುತ್ತಾರೆ. ಇಂದಿಗೂ ಕಾಶಿ–ರಾಮೇಶ್ವರಗಳಲ್ಲಿ, ಗಂಗೆ, ಕಾವೇರಿ ನದಿಗಳಲ್ಲಿ ಭಕ್ತರು ಸ್ನಾನ ಮಾಡುವುದನ್ನು ಕಾಣುತ್ತೇವೆ.

**ಒಂದೇ ಏಟಿಗೆ ಬಲಿ ನೀಡಬೇಕು ಮತ್ತು ಬಲಿ ನೀಡಿದ ನಂತರ ಬಾಯಿಗೆ ನೀರು ಬಿಡಬೇಕು :** ದೇವರಿಗೆ ನೀಡುವ ಬಲಿಯನ್ನು ಒಂದೇ ಏಟಿಗೆ ನೀಡಬೇಕೆಂಬ ನಂಬಿಕೆ ಜನಪದರಲ್ಲಿದೆ. ಕುರಿ, ಕೋಳಿ ಮುಂತಾದ ಪ್ರಾಣಿಗಳನ್ನು ಬಲಿ ನೀಡುವಾಗ ಅದನ್ನು ಪೂಜಿಸಿ 'ಬಲಿ' ನೀಡಲಾಗುತ್ತದೆ. ಬಲಿ ನೀಡುವುದರಿಂದ ದೇವರನ್ನು ತೃಪ್ತಿಗೊಳಿಸಿದರೆ ದೇವರು ಒಲಿದು ಹಾಗೂ ಮಳೆ, ಬೆಳೆಯನ್ನು ನೀಡುತ್ತಾನೆ ಎಂಬುದು ಜನಪದರ ಅಭಿಪ್ರಾಯ. ನೀರು, ನೆಲ, ದೇವರು ಮುನಿದಾಗ ಪ್ರಕೋಪಗಳು ಉಂಟಾಗುತ್ತವೆ. ಅದನ್ನು ಶಾಂತವಾಗಿರಿಸಲು ಮತ್ತು ತಮ್ಮ ಪಾಪ ಪ್ರಾಯಶ್ಚಿತ ವಾಗಲು ದೇವರಿಗೆ ನೀಡುವ ಪ್ರಾಣಿಬಲಿ ಅತ್ಯಂತ ಪವಿತ್ರವೆಂದು ಭಾವಿಸುತ್ತಾರೆ. ಬಲಿ ನೀಡುವಾಗ ಯಾವುದೇ ಪ್ರಾಣಿಯಾದರೂ ಅದು ಬಾಯಿ ಬಿಡುತ್ತದೆ. ಅದರ ಬಾಯಿಗೆ ನೀರು ಬಿಡಬೇಕು ಎಂಬುದು ಅವರ ನಂಬಿಕೆ. ಕಾರಣ ಸಾಯುವಾಗ ಬಾಯಿಗೆ ನೀರು ಬಿಟ್ರೆ ಪುಣ್ಯ ಪ್ರಾಪ್ತಿಯಾಗುತ್ತದೆಂದು ನಂಬಿಕೆಯಿದೆ.

**ಗಣೇಶ ಚತುರ್ಥಿಯಂದು ಇಪ್ಪತ್ತೊಂದು ಮನೆಯಲ್ಲಿ ಗಣೇಶನನ್ನು ನೋಡಿ ನಮಸ್ಕರಿಸಬೇಕು:**

ವಿಘ್ನ ನಿವಾರಕ ವಿನಾಯಕನ ಹಬ್ಬ ಗಣೇಶ ಚತುರ್ಥಿ ಮಣ್ಣಿನಲ್ಲಿ ನಿರ್ಮಿಸಿದ ಗಣಪತಿಯನ್ನು ಅಲಂಕೃತ ಮಂಟಪದಲ್ಲಿ ಪ್ರತಿಷ್ಠಾಪಿಸಿ ಪೂಜಿಸುತ್ತಾರೆ. ಸಾಮೂಹಿಕವಾಗಿಯೂ ಈ ಹಬ್ಬವನ್ನು ಆಚರಿಸಲಾಗುತ್ತದೆ. ಈ ಹಬ್ಬದಂದು ಮೋದಕ ವಿಶೇಷ ಭಕ್ಷ್ಯ. ಭಾದ್ರಪದ ಶುಕ್ಲ ಚತುರ್ಥಿದಿನ ಈ ಹಬ್ಬ ಬರುತ್ತದೆ. ಆ ದಿನ ಚಂದ್ರನನ್ನು ನೋಡಬಾರದೆಂಬ ನಂಬಿಕೆಯಿದೆ. ಹಾಗೇನಾದರು ಅಕಸ್ಮಾತಾಗಿ ನೋಡಿದರೆ ದೋಷ ಪರಿಹಾರಕ್ಕಾಗಿ ಇಪ್ಪತ್ತೊಂದು ಮನೆ ಗಳಿಗಾದರು ಹೋಗಿ ಗಣೇಶನನ್ನು ನೋಡಿ ನಮಸ್ಕರಿಸಿ ಬರಬೇಕೆಂದು ವಿಧಿ. ಅಲ್ಲದೆ ಎಳ್ಳು ಬೆಲ್ಲದಿಂದ ಮಾಡಿರುವ ಮಿಶ್ರಣದ ಉಂಡೆಯನ್ನು ತಿಂದರೆ ದೋಷ ಪರಿಹಾರವಾಗುತ್ತದೆ ಎಂಬ ನಂಬಿಕೆ ಇದೆ.

ಕೆಲವೊಂದು ವಿಧಿ–ನಿಷೇಧಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಲಾಗಿದೆ.

- ತೀರ್ಥವನ್ನು ಕಾಲಿನಿಂದ ತುಳಿಯಬಾರದು.
- ತೀರ್ಥವನ್ನು ಸ್ವೀಕರಿಸಿದ ಮೇಲೆ ಸ್ವಲ್ಪ ಕುಡಿದು ಕೈಯಿಂದ ತಲೆಗೆ ಸವರಿಕೊಳ್ಳಬೇಕು ಮತ್ತು ತೀರ್ಥದ ರುಚಿ ನೋಡಬಾರದು.
- ತೀರ್ಥ ಮೈಮೇಲೆ ಹಾಕಿಕೊಂಡರೆ ಸೂತಕ ಕಳೆಯುತ್ತದೆ.
- ಕೊಂಡ ಹಾಯುವಾಗ ಕೆಂಡದ ಮೇಲೆ ಒಂದು ತೊಟ್ಟಾದರೂ ತೀರ್ಥ ಹಾಕಬೇಕು.

- ದೇವಸ್ಥಾನಕ್ಕೆ ಹೋದಾಗ ಆಲಯದಲ್ಲಿ ಸ್ವಲ್ಪ ಹೊತ್ತು ಕುಳಿತು ಹೊರಡಬೇಕು.
- ದೇವಸ್ಥಾನದಿಂದ ಬಂದಾಗ ಮನೆಯೊಳಕ್ಕೆ ಕೈಕಾಲು ತೊಳೆದು ಹೋಗಬಾರದು.
- ಅರಳಿಸೌದೆಯನ್ನು ಮನೆಯ ಒಳಗೆ ಇಡಬಾರದು ಅದು ವಿಷ್ಣುವಿನ ಪ್ರತಿರೂಪ
- ಮಂಗಳವಾರ, ಶುಕ್ರವಾರ, ವೀಳ್ಯೆದೆಲೆ, ನಿಂಬೆಹಣ್ಣು, ತುಳಸಿಯನ್ನು ಕುಯ್ಯಬಾರದು
- ಫಲಬಿಡುವ ತೆಂಗಿನಮರ ಕಡಿಯಬಾರದು.
- ಆಲದಮರದ ಕೆಳಗೆ ಕುಳಿತು ಸುಳ್ಳು ಹೇಳಬಾರದು ಅದರಲ್ಲಿ ಶ್ರೀಕೃಷ್ಣನಿರುತ್ತಾನೆ
- ಬನ್ನಿ, ಪತ್ರೆಗಿಡಗಳನ್ನು ಕಡಿಯಬಾರದು ಮತ್ತು ಅವುಗಳ ಸೌದೆ ಸುಡಬಾರದು
- ಮುತ್ತುಗದ ಹೂವನ್ನು ಪೂಜಾ ಕಾರ್ಯಗಳಿಗೆ ಬಳಸಬಾರದು
- ಹಬ್ಬದಲ್ಲಿ ಮನೆಗೆ ಮೂರು ತೋರಣ ಕಟ್ಟಬಾರದು
- ನಾಗರ ಹಾವನ್ನು ಕೊಲ್ಲಬಾರದು: ಕಂಡರೆ ಕೈಮುಗಿಯಬೇಕು.
- ಹಿಂದೂಗಳು ಗೋವನ್ನು ಕೊಲ್ಲಬಾರದು: ತಿನ್ನಬಾರದು
- ನಾಯಿ ನಾರಾಯಣ ಒದೆಯಬಾರದು, ಬರಲಲ್ಲಿ ಒಡೆಯಬಾರದು.
- ಋತುಮತಿ–ಸೂತಕ–ಮುಟ್ಟಾದವರು 'ಸ್ತ್ರೀಯರಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ಸೂತಕದ ಹೆಣ್ಣು ಪೂಜೆಗೆ ಅರ್ಹವಾಗುವುದಿಲ್ಲ. ಹೊರಗಡೆಯಾದ ಆ ಮೂರುದಿನಗಳು, ಋತುಮತಿಯಾದ ಸೂತಕ ಕಳೆಯುವವರೆಗಿನ ದಿನಗಳು ದೇವಾಲಯಗಳಿಗೆ ಭೇಟಿ ನೀಡುವಂತಿಲ್ಲ.

## 5.4 ಹಬ್ಬ, ಜಾತ್ರೆಗಳು ಮತ್ತು ಉತ್ಸವಗಳು

### ಹಬ್ಬಗಳು

ಹಬ್ಬಗಳು ನಮ್ಮ ಪರಂಪರೆ, ಸಂಸ್ಕೃತಿಯ ಪ್ರಸಾರ ಮಾಧ್ಯಮಗಳು. 'ಹಬ್ಬ' ಎಂದರೆ ಸಂಭ್ರಮ–ಸಡಗರಗಳಿಂದ ಕೂಡಿ ಆಚರಿಸುವ ಉತ್ಸವ. ನೆಂಟರಿಷ್ಟರು, ಬಂಧು–ಬಳಗವೆಲ್ಲ ವರ್ಷಕೊಮ್ಮೆ ಒಟ್ಟಾಗಿ ಸೇರಿಕೊಂಡು ವಿಶೇಷ ಪೂಜೆ, ಪುನಸ್ಕಾರ, ಊಟ, ತಿಂಡಿ, ಆಟ, ವಿನೋದ, ಕುಣಿತ, ಮೆರೆತ, ನಾಟಕ, ಹಾಡು, ಗಾದೆ, ಒಗಟು ಮೊದಲಾದವುಗಳೊಂದಿಗೆ ಸಂತೋಷಿಸಿ ಸಂಭ್ರಮಿಸುವ ಆನಂದದ ಕ್ಷಣಗಳ ಸಂದರ್ಭವೆನ್ನಬಹುದು. ಹಬ್ಬಗಳೆಂದರೇನು?

ಎಂಬುದಕ್ಕೆ ಹಲವು ವಿದ್ವಾಂಸರು ತಮ್ಮ ಅಭಿಪ್ರಾಯಗಳನ್ನು ನೀಡಿದ್ದಾರೆ. "ಸಮಾಜದ ಒಳಿತಿಗಾಗಿ, ಸಾಮಾಜಿಕ ಹೊಂದಾಣಿಕೆಗಾಗಿ ವಿಶೇಷ ದಿನಗಳಲ್ಲಿ ಜನರು ಸಂಭ್ರಮೋತ್ಸಾಹಗಳಿಂದ ನಡೆಸುವ ಸಂಪ್ರದಾಯ ಆಚರಣೆಗಳೇ ಹಬ್ಬಗಳೆನ್ನಬಹುದು"[21]

"ಮನುಷ್ಯ ತನ್ನ ಕೃತಜ್ಞತಾ ಭಾವವನ್ನು ವ್ಯಕ್ತಪಡಿಸಲು ಆಚರಿಸುವ ಆಚರಣೆಗಳು ಹಾಗೂ ಪ್ರಕೃತಿಯ ವಿಕೋಪದಿಂದ ತಪ್ಪಿಸಿಕೊಳ್ಳಲು ಆಚರಿಸುವ ವಿಧಿ-ವಿಧಾನಗಳು ಹಬ್ಬಗಳ ಸ್ವರೂಪವನ್ನು ಪಡೆದಿವೆ."[22] "ಇಂದಿನ ಎಷ್ಟೋ ಶಿಷ್ಟ, ನಾಗರಿಕ ಹಬ್ಬದಾಚರಣೆಗಳು ಹಿಂದೆ ಪ್ರಕೃತಿಯನ್ನು(ಪ್ರಕೃತಿ ದೈವಗಳನ್ನು) ಬೇರೆ ಬೇರೆ ಋತುಗಳಲ್ಲಿ ಅವು ಆಚರಣೆಗಳ ಮೂಲಕ ಒಲಿಸಿಕೊಂಡು ಅದು (ಪ್ರಕೃತಿ)ಮನುಷ್ಯನ ಇಚ್ಛೆಗೆ ಬಾಗುವಂತೆ ಮಾಡಿದ ಪ್ರಾಚೀನ ಮಾನವರ ಪ್ರಯತ್ನಗಳನ್ನು ಗುರುತಿಸಲು ಸಾಧ್ಯ"[23] ಒಂದೊಂದು ಹಬ್ಬಕ್ಕೂ ಒಂದೊಂದು ಹಿನ್ನೆಲೆಯಿದೆ, ಒಂದೊಂದು ಉದ್ದೇಶವಿದೆ.

"ಹಬ್ಬ ಎನ್ನುವ ಶಬ್ಧ ಸಂಸ್ಕೃತದ 'ಪರ್ವನ್' ಪದದ ತದ್ಭವ ರೂಪವಾಗಿದೆ 'ಪರ್ವ' ಎಂದರೆ ಒಂದು ಇನ್ನೊಂದರ ಜೊತೆ ಸಂಧಿಸುವುದೆಂದರ್ಥ. ಚಂದ್ರ-ಸೂರ್ಯರ ಗತಿಗಳು ಬದಲಾಗುವುದೇ ಪರ್ವ. ನಮ್ಮ ಹಿಂದಿನವರ ಬಹುತೇಕ ಎಲ್ಲಾ ಆಚರಣೆಗಳು ಫಲೋತ್ಪತ್ತಿ ಸಂಬಂಧಿಯಾಗಿದ್ದು, ಅವು ಋತುಗಳ ಗತಿಯನ್ನು ಸೂರ್ಯ, ಚಂದ್ರರ ಚಲನೆಯನ್ನು ಅವಲಂಬಿಸಿದ್ದವು ಈ ಆಚರಣೆಗಳೇ ಮುಂದೆ ಹಬ್ಬಗಳಾದವು"[24]

ಹೀಗಾಗಿ ನಿರ್ದಿಷ್ಟ ಕಾಲಾವಧಿಯಲ್ಲಿ ಕೈಗೊಳ್ಳುವ ಆಚರಣೆಗಳ ರೂಢಿ ಸಂಪ್ರದಾಯ ಉತ್ಸವಗಳೇ ಹಬ್ಬಗಳು. ಯಾವುದೇ ಹಬ್ಬಗಳಿಗೆ ನಂಬಿಕೆಗಳೇ ಪ್ರೇರಕ, ಪೋಷಕ, ಅಸ್ತಿತ್ವ ಪಡೆದಿರುವುದು ಆಚರಣೆಗಳ ಮೂಲಕ. ನಂಬಿಕೆ ಹಾಗೂ ಸಂಪ್ರದಾಯಗಳ ಕ್ರಿಯಾರೂಪಗಳೇ ಹಬ್ಬಗಳು. ಎಲ್ಲರನ್ನು ಒಂದು ಗೂಡಿಸುವ, ಬಾಂಧವ್ಯ ಬೆಸೆಯುವ, ಬಾಂಧವ್ಯದ ಭಾವನೆಗಳನ್ನು ಉದ್ದೀಪಿಸುವ ಕೆಲಸವನ್ನು ಹಬ್ಬದಾಚರಣೆಗಳು ಮಾಡುತ್ತವೆ.

ಹಬ್ಬಗಳ ಆಚರಣೆ ಕೌಟುಂಬಿಕ ನೆಲೆಯಲ್ಲಿ ಆಚರಿಸಲ್ಪಟ್ಟಂತೆ ದೇವಸ್ಥಾನಗಳಂತಹ ಸಾಮಾಜಿಕ ನೆಲೆಯಲ್ಲಿಯೂ ಆಚರಿಸಲ್ಪಡುತ್ತಿದ್ದವು. "ಹಾಗೆ ನೋಡಿದರೆ ಭಾರತೀಯರ ಮನೆಗಳಲ್ಲಿ ಆಚರಿಸುವ ಹಬ್ಬಗಳು ದೇವಸ್ಥಾನಗಳಲ್ಲಿ ಆಚರಿಸುವ ಹಬ್ಬಗಳು ಎಂಬ ಭೇದವೇ ಇಲ್ಲವೆನ್ನಬಹುದು"[25]

**ಸಂಕ್ರಾಂತಿ :** "ಸೌರವ್ಯೂಹದಲ್ಲಿ ಭೂಮಿ ಎಂಬ ಒಂದು ಗೋಳ ಎಷ್ಟು ಕ್ಷುದ್ರವಾದುದೆಂದು ಜ್ಯೋತಿಷಿ ಶಾಸ್ತ್ರಜ್ಞರು ಭಾವಿಸಿದ್ದರೂ ಭೂಗೋಳದಲ್ಲಿ ಜೀವನ ವ್ಯವಹಾರವನ್ನು ನಡೆಸಬೇಕಾಗಿರುವ ಪ್ರಾಣಿಗಳಿಗೆ ಮನುಷ್ಯರಿಗೆ, ಶಾಖ, ಬೆಳಕನ್ನು ಕೊಡುವ ಸೂರ್ಯನು ಉಪಾಸ್ಯ ದೇವನಾಗಿರುವುದರಲ್ಲಿ ಆಶ್ಚರ್ಯವಿಲ್ಲ. ಬಹಳ ಪುರಾತನ ಕಾಲದಿಂದಲೂ ಸೂರ್ಯ–ಚಂದ್ರರ ಪೂಜೆ ಎಲ್ಲ ಸಂಸ್ಕೃತಿಗಳಲ್ಲೂ ಕಂಡು ಬಂದು ಅದರ ಆಧಾರದ ಮೇಲೆ ತತ್ವ, ವಿಜ್ಞಾನ ಶಾಸ್ತ್ರಗಳ ಬೆಳವಣಿಗೆಯಾಗಿದೆ. ಕೇವಲ ಭೌತಿಕ ವ್ಯವಹಾರದಲ್ಲೇ ಅಲ್ಲದೆ ಆಧ್ಯಾತ್ಮಿಕ ಭಾವಗಳಲ್ಲೂ ಸೂರ್ಯ ಚಂದ್ರರು ಪ್ರತೀಕಗಳೆಂದು ಗಣಿಸಿದೆ. ದೇಶ ಮತ್ತು ಕಾಲ ಸಂಘಟನೆಯಲ್ಲಿ ಸಿಕ್ಕಿರುವ ಮಾನವನು ಸೂರ್ಯದೇವತೆಯನ್ನು ಆಶ್ರಯಿಸಲೇಬೇಕಾಗಿದೆ"[26]

ಸಂಕ್ರಾಂತಿಯಂದು ಪವಿತ್ರ ನದಿಗಳಲ್ಲಿ ಮಿಂದು ಮಡಿಯುಟ್ಟು ತಮ್ಮ ಇಷ್ಟದೇವರ ಪೂಜಿಸಿ, ಪೊಂಗಲ್ ಹಾಗೂ ಹಲವಾರು ಬಗೆಯ ಸಿಹಿತಿಂಡಿಗಳನ್ನು ಮಾಡುವರು. ಅವರೆಕಾಯಿ, ಸಿಹಿಗೆಣಸು, ಕಡಲೆಕಾಯಿಗಳನ್ನು ಬೇಯಿಸಿ ತಿನ್ನುವುದುಂಟು. ನಗರ ಪ್ರದೇಶಗಳಲ್ಲಿ ಎಳ್ಳು, ಬೆಲ್ಲ, ಕೊಬ್ಬರಿ ಮುಂತಾದವುಗಳನ್ನು ಮಿಶ್ರಣ ಮಾಡಿ ಮನೆ ಮನೆಗೆ ಹಂಚುವ ಮೂಲಕ ಪರಸ್ಪರ ಸಿಹಿ ವಿನಿಮಯ ಮಾಡಿಕೊಳ್ಳುವ ರೂಢಿ ಇದೆ. ನೂರಾರು ಭಕ್ತರು ಮಲೆಮಾದೇಶ್ವರ ಬೆಟ್ಟ ಹಾಗೂ ಶಬರಿಮಲೆ ಅಯ್ಯಪ್ಪನ ದರ್ಶನಕ್ಕಾಗಿ ಹೋಗುವರು.

ಮೈಸೂರು ನಗರದ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಅಯ್ಯಪ್ಪಸ್ವಾಮಿ ದೇಗುಲದಲ್ಲಿ ಮಕರ ಸಂಕ್ರಾಂತಿಯ ಪ್ರಯುಕ್ತ ಲಕ್ಷದೀಪೋತ್ಸವ ನಡೆಯಿತು. ಸಾವಿರಾರು ಅಯ್ಯಪ್ಪ ಭಕ್ತರು, ಪುರುಷರು ಮಹಿಳಾದಿಯರಾಗಿ ಬಂದು ಎಣ್ಣೆ ಹಾಕಿ , ಹಣತೆಗಳನ್ನು ಹಚ್ಚುವ ಮೂಲಕ ಭಕ್ತಿಭಾವ ಮೆರೆದರು.

**ಯುಗಾದಿ :** ಭಾರತೀಯ ಸಂಸ್ಕೃತಿಯಲ್ಲಿ ಹಬ್ಬಗಳಿಗೆ ಪ್ರಮುಖ ಸ್ಥಾನ, ಯುಗಾದಿ ವರ್ಷದ ಮೊದಲ ಹಬ್ಬ. ವಸಂತ ಋತುವಿನ ಆರಂಭದೊಂದಿಗೆ ಬರುತ್ತದೆ. ಎಲ್ಲಡೆ ಹೊಸ ಚಿಗುರು ಹೂವುಗಳಿಂದ ಕಂಗೊಳಿಸುತ್ತದೆ. ಬೇವು, ಮಾವು, ಮಲ್ಲಿಗೆ ಹೂಬಿಟ್ಟು ಹಬ್ಬಕ್ಕೆ ಶುಭಕೋರುತ್ತದೆ. ಈ ಹಬ್ಬದ ವಿಶೇಷ ಬೇವು–ಬೆಲ್ಲ. ಬೇವಿನ ಹೂವು ಚಿಗುರಿನ ಜೊತೆ ಬೆಲ್ಲವನ್ನು ಬೆರೆಸಿ ತಿನ್ನುವುದು ರೂಢಿ ಇದರಿಂದ ಸಿಹಿ–ಕಹಿ ಸಮ್ಮಿಶ್ರಭಾವ ಮೂಡುತ್ತದೆ. ಚಿಕಿತ್ಸಕ ಗುಣಧರ್ಮವನ್ನು ಹೊಂದಿರುವ 'ಬೇವು ಅಧರಕ್ಕೆ ಕಹಿ ಉದರಕ್ಕೆ ಸಿಹಿ'ಯನ್ನು ನೀಡುತ್ತದೆ. ಇದರಿಂದ ಜನಪದರ ವೈಜ್ಞಾನಿಕ ಮನೋಭಾವ ಎಂತಹದು ಎಂಬುದರ ಅರಿವಾಗುತ್ತದೆ.

ಯುಗಾದಿ ಎಂದರೆ ಯುಗದ ಆದಿ, ಯುಗದ ಪ್ರಾರಂಭ, 'ಯುಗಸ್ಯ ಆಧಿಃ' ಯುಗ ಎಂದರೆ ಕಾಲವಿಶೇಷ. ಇಡೀ ಪ್ರಕೃತಿಯಲ್ಲಿನ ಗಿಡಮರಗಳು ಚಿಗುರಿ ತುಂಬಾ ಮುದ ಉಂಟು ಮಾಡುವ ಕಾಲದಲ್ಲಿ ಪ್ರಪ್ರಥಮವಾಗಿ ಯುಗಾದಿ ಹಬ್ಬ ಬರುತ್ತದೆ. ಹಳೆಯ ವರ್ಷವು ಮುಕ್ತಾಯವಾಗುತ್ತಿದ್ದಂತೆ ಹೊಸ ವರ್ಷದ ಆಗಮನವಾಗುತ್ತದೆ. ಈ ಕಾಲದಲ್ಲಿ ಹೊಸ ಹಬ್ಬವಾಗಿ ಯುಗಾದಿಯ ಬರುವಿನ ಸಂಭ್ರಮ, ಪಂಚಾಂಗರೀತ್ಯ ಹೊಸ ವರ್ಷದ ಸಂತಸದ ದಿನವಾಗಿ ಬಂದು ಇತರ ಹಬ್ಬಗಳಂತೆ ಯಾಂತ್ರಿಕ ಆಚರಣೆಯಾಗದೆ ಬದುಕಿನ ಹಲವು ಬದಲಾವಣೆ ಗಳಿಗೂ ನಾಂದಿಯಾಗುತ್ತದೆ. ಹಿಂದಿನ ವರ್ಷದ ಕಹಿ ಅನುಭವಗಳನ್ನು ಮರೆತು, ಸಿಹಿ ಸಂತಸದ ಕ್ಷಣಗಳನ್ನು ನೆನೆಸಿಕೊಳ್ಳುತ್ತಾ, ಭವಿಷ್ಯದ ಸುಖಕ್ಕಾಗಿ ಯುಗಾದಿಯನ್ನು ಆಚರಿಸುತ್ತೇವೆ.

ಮೈಸೂರು ನಗರದಲ್ಲಿರುವ ಪ್ರತಿಯೊಂದು ದೇವಾಲಯದಲ್ಲಿಯೂ ಯುಗಾದಿಯನ್ನು ಆಚರಿಸುತ್ತಾರೆ. ಏಕೆಂದರೆ ಜನಪದರ ಪ್ರಕಾರ ಹಾಗೂ ಪಂಚಾಂಗ ರೀತಿಯಲ್ಲಿ ಹೊಸ ವರ್ಷ ಆರಂಭವಾಗುವುದೇ ಅಂದು. ಆದುದರಿಂದ ದೇವಾಲಯಗಳಲ್ಲಿ ಅಂದು ಗೋಮೂತ್ರದಿಂದ ದೇವಾಲಯವನ್ನು ಶುದ್ಧೀಕರಿಸಿ, ಮಾವು ಮತ್ತು ಬೇವುಗಳ ಮಿಶ್ರಣದ ತಳಿರು ತೋರಣಗಳು, ಹೂವಿನ ಹಾರಗಳು ಹಾಗೂ ಬಾಳೆ ಕಂದುಗಳನ್ನು ಕಟ್ಟಿ ದೇವಾಲಯಗಳನ್ನು ಸಿಂಗರಿಸಿರುತ್ತಾರೆ. ಕೆಲವೊಂದು ದೇವಾಲಯಗಳಲ್ಲಿ ಅಂದು ಗೋವನ್ನು ಒಳ ಪ್ರವೇಶಿಸಿ ಅದಕ್ಕೆ ಪೂಜೆಸಲ್ಲಿಸಿ ಬಾಳೆಹಣ್ಣು, ಕಾಯಿ, ಬೆಲ್ಲ ಕೊಟ್ಟು ಸತ್ಕರಿಸಿ ಕಳುಹಿಸುತ್ತಾರೆ.

**ಮಹಾಶಿವರಾತ್ರಿ ಹಬ್ಬ :** ಮೈಸೂರು ನಗರದ ಸರಸ್ವತಿಪುರಂ, ಕೆ.ಜಿ.ಕೊಪ್ಪಲಿನ ಕಾಂತರಾಜ ಅರಸ್ ಮುಖ್ಯ ರಸ್ತೆ ಯಲ್ಲಿರುವ ಚಂದ್ರಮೌಳೇಶ್ವರ ದೇವಾಲಯದಲ್ಲಿ ಮಹಾಶಿವರಾತ್ರಿ ಹಬ್ಬದಂದು ಈ ದೇವಾಲಯದಲ್ಲಿರುವ ಹುಲಿಮೇಲೆ ಕುಳಿತ ಮಹಾದೇಶ್ವರಸ್ವಾಮಿ ಮೂರ್ತಿಯನ್ನು ವಿಶೇಷವಾಗಿ ಅಲಂಕಾರದೊಂದಿಗೆ ಗ್ರಾಮದ ಪ್ರತಿಯೊಂದು ಬೀದಿಯಲ್ಲೂ ಮೆರವಣಿಗೆ ಮಾಡಲಾಗುತ್ತದೆ. ಭಕ್ತಾದಿಗಳು ತಮ್ಮ ಮನೆಯ ಮುಂದೆಯೇ ಈ ಮೂರ್ತಿಗೆ ಪೂಜೆ ಸಲ್ಲಿಸುತ್ತಾರೆ. ಅಂದು ದೇವಾಲಯವನ್ನು ಹೂವಿನಿಂದ ಅದ್ಭುತವಾಗಿ ಅಲಂಕರಿಸಿರುತ್ತಾರೆ. ಇದನ್ನು ನೋಡಲು ಸಾವಿರಾರು ಭಕ್ತಾದಿಗಳು ಸುಮಾರು ಒಂದುವರೆ ಕಿಲೋಮೀಟರ್ ದೂರದವರೆಗೂ ಸಾಲಾಗಿ ನಿಂತು ಸ್ವಾಮಿಯ ದರ್ಶನ ಪಡೆಯುತ್ತಾರೆ. ಅಂದಿನಿಂದ ಒಂದು ವಾರದವರೆಗೂ ದೇವಾಲಯದ ಆವರಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಾದ ಸಾಮಾಜಿಕ, ಪೌರಾಣಿಕ ನಾಟಕಗಳು, ಜನಪದ ಸಂಗೀತ ಕಾರ್ಯಕ್ರಮ ಹೀಗೆ ಮುಂತಾದ ಮನರಂಜನನೆ ಕಾರ್ಯಕ್ರಮಗಳು ನಡೆಯುತ್ತವೆ.

ಶಿವರಾತ್ರಿಯಂದು ದೇವಾಲಯಗಳಲ್ಲಿ ಸಹಸ್ರ ಬಿಲ್ವಾರ್ಚನೆ ನಡೆಯುತ್ತದೆ. ಇಡಿ ರಾತ್ರಿ ಜಾಗರಣೆಯಿದ್ದು ಶಿವಧ್ಯಾನ ಮಾಡುತ್ತಾರೆ. ಮಾರನೆಯದಿನ ಶಿವಮೂರ್ತಿಯನ್ನು ಹೂವಿನ ಪಲ್ಲಕ್ಕಿಯಲ್ಲಿ ಮೆರವಣಿಗೆ ಮಾಡುತ್ತಾರೆ.

**"**ಎಲ್ಲ ಹಬ್ಬಗಳ ಉದ್ದೇಶ ನಮ್ಮ ಶ್ರೀಮಂತ ಸಂಸ್ಕೃತಿಯ ಪುನರಾವಲೋಕ. ಅದನ್ನು ಅರಿಯುತ್ತಲೇ ಜೀವನ ಸಾಗಿಸುವ ಮೂಲಕ ಒತ್ತಡದ ಜಗತ್ತಿನಲ್ಲಿ ಸಮಯವೇ ಇಲ್ಲ ಎಂಬುದನ್ನು ತೊಡೆದು ಹಾಕಬಹುದು. ಶಿವನು ಬಯಸಿದ್ದನ್ನು, ಕೇಳಿದ್ದನ್ನು ಕೊಡುತ್ತಾನೆ ಎಂಬುದು ಸತ್ಯವೇ ಆದರೇ, ಅವನು ಪ್ರಸನ್ನನಾಗಲು ಮಾನಸಿಕವಾಗಿ ಉಪವಾಸ, ಜಾಗರಣೆ ಮಾಡಬೇಕು**"**[27]

ನಗರದ ಅರಮನೆ ಆವರಣದಲ್ಲಿರುವ ತ್ರಿನೇಶ್ವರ ದೇವಸ್ಥಾನದಲ್ಲಿ ಶಿವರಾತ್ರಿಯ ಪ್ರಯುಕ್ತ ಶಿವಲಿಂಗಕ್ಕೆ ಚಿನ್ನದ ಕೊಳಗ ತೊಡಿಸಿ ವಿಶೇಷ ಪೂಜೆ ನಡೆಯಿತು. ಬೆಳಿಗ್ಗೆಯಿಂದಲೇ ದೇವಾಲ ಯಗಳಿಗೆ ಜನರು ಭೇಟಿ ನೀಡಿ ಉದ್ದನೆಯ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಬೆಳಿಗ್ಗೆ ಹತ್ತರಿಂದ ರಾತ್ರಿ ಹನ್ನೆರಡು ಗಂಟೆಯವರೆಗೆ ಐದು ಸಂದರ್ಭಗಳಲ್ಲಿ ಅಭಿಷೇಕ ನಡೆಯಿತು. ದೇವಸ್ಥಾನದಲ್ಲಿ ಪುನರ್ ಪ್ರತಿಷ್ಠಾಪನೆಗೊಂಡಿರುವ 33ಅಡಿ ಎತ್ತರದ ದೀಪ ಸ್ತಂಭಕ್ಕೆ ಶಿವರಾತ್ರಿ ವಿಶೇಷ ಪೂಜೆ ನಡೆಯಿತು. ಈ ಸಂದರ್ಭದಲ್ಲಿ ಜನರಿಗೆ ಅರಮನೆಯ ಎಲ್ಲಾ ದ್ವಾರಗಳ ಮೂಲಕ ಪ್ರವೇಶಾವಕಾಶ ಕಲ್ಪಿಸಲಾಗಿತ್ತು. ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಅವರು ದೇವಾಲಯಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದರು.

ಪ್ರತಿ ವರ್ಷ ಶಿವಲಿಂಗಕ್ಕೆ ಶಿವರಾತ್ರಿ ಹಬ್ಬದ ದಿನದಂದು ಚಿನ್ನದ ಕೊಳಗ ತೊಡಿಸಿ ವಿಶೇಷ ಪೂಜೆ ಸಲ್ಲಿಸುವ ಸಂಪ್ರದಾಯವನ್ನು ಪಾಲಿಸಲಾಗುತ್ತಿದೆ. ಕೊಳಗದಿಂದ ಕಂಗೊಳಿಸುವ ಶಿವಲಿಂಗದ ದರ್ಶನ ಮಾಡಿದರೆ ಒಳಿತಾಗುತ್ತದೆ ಎಂಬ ನಂಬಿಕೆಯಿದೆ. ಚಂದ್ರಮೌಳೇಶ್ವರ ದೇವಾಲಯ ವಿ.ವಿ.ಮೊಹಲ್ಲಾದಲ್ಲಿ ಮಹಾಶಿವರಾತ್ರಿಯ ಪ್ರಯುಕ್ತ ಬೆಳಗಿನ ಜಾವದಿಂದಲೇ ಏಕಾದಶಾವರ ರುದ್ರಾಭಿಷೇಕ, ಕ್ಷೀರಾಭೀಷೇಕ, ಶಾಲ್ಯಾನ್ನ ಅಭಿಷೇಕ, ಬಿಲ್ವಾರ್ಚನೆ, ಪಂಚತೀರ್ಥಗಳ ಅಭೀಷೇಕ, ಪಂಚಾಮೃತಾಭೀಷೇಕ, ಅರಿಶಿಣ–ಕುಂಕುಮಾರ್ಚನೆ, ಪುಷ್ಪಾಭೀಷೇಕ ಮುಂತಾದ ಅಭೀಷೇಕಗಳು ಮತ್ತು ಪೂಜಾಕೈಂಕರ್ಯಗಳು ನಡೆದವು.

ಸೈಕಲ್ ಪ್ಯೂರ್ ಅಗರಬತ್ತಿ ಸಂಸ್ಥೆ ಶಿವರಾತ್ರಿಯ ಹಿನ್ನೆಲೆಯಲ್ಲಿ ರಾಜ್ಯದ ವಿವಿಧೆಡ ಇರುವ 108 ದೇವಾಲಯಗಳಿಗೆ ಆರು ಅಡಿ ಎತ್ತರದ ಅಖಂಡ ಜ್ಯೋತಿ ನೀಡಿದ್ದು ಮೈಸೂರಿನ ವಿ.ವಿ.ಮೊಹಲ್ಲಾದಲ್ಲಿರುವ ಶ್ರೀಚಂದ್ರಮೌಳೇಶ್ವರಸ್ವಾಮಿ ದೇವಾಲಯಕ್ಕು ಅಖಂಡ ಜ್ಯೋತಿಯನ್ನು ನೀಡಿದ್ದು, ಅಂದು ಜ್ಯೋತಿಯನ್ನು ದೇವಾಲಯದ ಟ್ರಸ್ಟಿ ಕೆ.ವಿ.ಮೂರ್ತಿ ಅವರು ಬೆಳಗಿಸಿದರು.

ಯೋಗನರಸಿಂಹಸ್ವಾಮಿ ದೇವಾಲಯ ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗನರಸಿಂಹಸ್ವಾಮಿ ದೇವಾಲಯದಲ್ಲಿ ಯೋಗನರಸಿಂಹಸ್ವಾಮಿಯನ್ನು ಶಿವನಂತೆ ಅಲಂಕಾರ ಮಾಡಲಾಗಿತ್ತು. ಬಂದ ಭಕ್ತರಿಗೆ ಪ್ರಸಾದ ವಿನಿಯೋಗ ಕಾರ್ಯಕ್ರಮವು ನಡೆಯುತ್ತಿತ್ತು.

ಗುರುಕುಲ ಹಾಗೂ ಕಾಮ–ಕಾಮೇಶ್ವರಿ ದೇವಾಲಯ ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ಗುರುಕುಲ ಆವರಣದಲ್ಲಿ 108 ಶಿವಲಿಂಗದ ದರ್ಶನ ಪಡೆಯಲು ಭಕ್ತರು ಮುಗಿಬಿದ್ದರು. ಪ್ರತಿವರ್ಷ ಶಿವರಾತ್ರಿ ಹಬ್ಬದ ದಿನದಂದು ಗುರುಕುಲದಲ್ಲಿ ಜಾತ್ರೋಪಾದಿಯಲ್ಲಿ ಭಕ್ತರ ದಂಡು ಆಗಮಿಸಿ ಶಿವಲಿಂಗಗಳಿಗೆ ಬಿಲ್ವಪತ್ರೆಯನ್ನು ಸಮರ್ಪಿಸುವುದು ವಾಡಿಕೆ. ಗುರುಕುಲದಲ್ಲಿ ಶಿವಲಿಂಗದ ದರ್ಶನ ಪಡೆದ ಭಕ್ತರು ಸಮೀಪದಲ್ಲಿಯೇ ಇರುವ ಕಾಮ–ಕಾಮೇಶ್ವರಿ ದೇವಾಲಯಕ್ಕೆ ತೆರಳಿ ದರ್ಶನ ಮಾಡಿ, ಪ್ರಸಾದ ಪಡೆದು ಭಕ್ತಿ ಮೆರೆದರು ರಾಮಾನುಜ ರಸ್ತೆಯ ಎರಡು ಬದಿಯಲ್ಲಿಯೂ ಸಾಲುಗಟ್ಟಿ ನಿಂತಿದ್ದ ಭಕ್ತರನ್ನು ನೋಡಿದರೆ ನಂಬಿಕೆ ಮತ್ತು ಆಚರಣೆಗಳ ಮಹತ್ವವನ್ನು ಅರಿಯಬಹುದಾಗಿದೆ.

ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಶಿವರಾತ್ರಿ ಪ್ರಯುಕ್ತ ವಿಶೇಷ ಪೂಜಾ ಕಾರ್ಯ ಕ್ರಮಗಳು ನಡೆದವು. ಆಶ್ರಮದ ಆವರಣದಲ್ಲಿರುವ ಸಚ್ಚಿದಾನಂದೇಶ್ವರ ಲಿಂಗಕ್ಕೆ 11ಬಾರಿ ರುದ್ರಾಭಿಷೇಕ ಮತ್ತು ನಾನಾ ಅಲಂಕಾರಗಳನ್ನು ಮಾಡಲಾಗಿತ್ತು. ಮಹಾಶಿವರಾತ್ರಿ ಪ್ರಯುಕ್ತ ದಿನಾಂಕ:14.02.2018ರಂದು ಮೈಸೂರಿನ ವಿವಿಧ ದೇವಸ್ಥಾನಗಳಿಗೆ ಮಾಜಿ ಸಚಿವರಾದ ಎಸ್.ಎ.ರಾಮದಾಸ್ ಅವರು ಭೇಟಿ ನೀಡಿ ದೇವರ ಅಭಿಷೇಕಕ್ಕೆ ಗಂಗಾಜಲ ನೀಡಿ, ಭಕ್ತರಿಗೆ ಶಿವಾಷ್ಟೋತ್ತರ ಶತನಾಮಾವಳಿ ಹೊತ್ತಿಗೆ ವಿತರಿಸಿದರು.

ಒಟ್ಟಾರೆಯಾಗಿ ಮೈಸೂರು ನಗರದಲ್ಲಿರುವ ದೇವಾಲಯಗಳಲ್ಲಿ ಮಹಾಶಿವರಾತ್ರಿಯ ಪ್ರಯುಕ್ತ ವಿವಿಧ ದೇವಾಲಯಗಳಲ್ಲಿ ವಿಜೃಂಭಣೆಯಿಂದ ರುದ್ರಾಭಿಷೇಕ, ಕ್ಷೀರಾಭಿಷೇಕ, ಬಿಲ್ವ ಪತ್ರಾರ್ಚನೆ, ಪಂಚತೀರ್ಥ ಅಭಿಷೇಕ, ಪಂಚಾಮೃತಾಭಿಷೇಕ, ಗಂಗಾಜಲಾಭಿಷೇಕ, ಪುಷ್ಪಾರ್ಚನೆ, ಅರಿಶಿಣ–ಕುಂಕುಮಾರ್ಚನೆ ಮತ್ತು ಮುಂತಾದ ವಿಶಿಷ್ಟ ಅಭಿಷೇಕಾರ್ಚನೆಗಳು ನಡೆದು, ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ಭಕ್ತರು ಅಂದು ಬಿಲ್ವಪತ್ರೆ ಮತ್ತು ತುಂಬೇ ಹೂವುಗಳನ್ನು ಶಿವನಿಗೆ ಅರ್ಪಿಸುತ್ತಿದ್ದುದು ಕಂಡುಬಂತು. ಅಂದು ಬೆಳಿಗ್ಗೆಯಿಂದಲೆ ಕಲಾತಂಡಗಳು ಹಾಡು, ನೃತ್ಯಗಳನ್ನು ಒಳಗೊಂಡಂತೆ ಭಜನೆಯಂತಹ ಸಾಂಸ್ಕೃತಿಕ ಮತ್ತು ಜಾನಪದ ಕಾರ್ಯಕ್ರಮಗಳು ನಡೆಸಿಕೊಡುತ್ತಿದ್ದರು. ಅಭಿವೃದ್ಧಿಮಂಡಳಿಗಳು ಮತ್ತು ಕೆಲವು ದೇವಾಲಯಗಳಲ್ಲಿ ಮುಜರಾಯಿ ಇಲಾಖೆಯೇ ಹಲವಾರು ಕಾರ್ಯಕ್ರಮಗಳನ್ನು ಏರ್ಪಡಿಸಿರುವುದು ಕಂಡುಬಂತು. ಭಕ್ತರು ಶಿವರಾತ್ರಿಯ ದಿನ ಉಪಾವಾಸವಿದ್ದು, ರಾತ್ರಿ ಇಡಿ ಜಾಗರಣೆ ಮಾಡುವ ವ್ರತಾಚರಣೆಗಳು

ಪ್ರಮುಖ ಪಾತ್ರವಹಿಸುವುದನ್ನು ಇಲ್ಲಿ ಕಾಣಬಹುದು. ಜಾಗರಣೆ ಮುಗಿದ ಅನಂತರ ಬೆಳಗ್ಗೆ ಪುನಃ ಸ್ನಾನ ಮಡಿ ಮಾಡಿ ದೇವಾಲಯಕ್ಕೆ ಹೋಗಿ ಪೂಜೆ ಮಾಡಿಸಿಕೊಂಡು ಮನೆಗೆ ತೆರಳುತ್ತಾರೆ ಅಲ್ಲದೇ ಅಂದು ಸಂಜೆ ಚಂದ್ರನನ್ನು ನೋಡುವವರೆಗೂ ಮಲಗುವುದಿಲ್ಲ. ಚಂದ್ರನನ್ನು ನೋಡಿದಮೇಲೆ ಊಟಮಾಡಿ ಶಿವನನ್ನು ನೆನೆದು ಒಳ್ಳೆಯದು ಮಾಡಪ್ಪ ಎಂದು ಬೇಡಿಕೊಂಡು ಮಲಗುತ್ತಾರೆ. ಇದು ಜನಪದರ ಸಂಪ್ರದಾಯಚರಣೆಗಳಲ್ಲಿ ಒಂದಾಗಿದೆ. ಇದು ಅವರವರ ನಂಬಿಕೆಗೆ ಬಿಟ್ಟದ್ದಾಗಿದೆ.

**ದೀಪಾವಳಿ :** ದೀಪಾವಳಿ ಎಲ್ಲಾ ಹಿಂದೂಗಳು ಆಚರಿಸುವ ಹಬ್ಬವಾಗಿದ್ದು, ಇದು ಬೆಳಕಿನ ಹಬ್ಬ. ದೀಪಾವಳಿಯನ್ನು ದೀವಳಿಗೆ, ದೀವಳ್ಗೆ, ಪಟಾಕಿ ಹಬ್ಬ, ದನಗಳ ಹಬ್ಬವೆಂತಲೂ ಕರೆಯುತ್ತಾರೆ. ಕತ್ತಲೆ ಅಳಿಸಿ ಬೆಳಕು ನೀಡುವ ಜ್ಯೋತಿಗೆ ಮಹತ್ತರ ಸ್ಥಾನವಿದೆ. ಅಜ್ಞಾನದ ಅಂಧಕಾರವನ್ನು ತೊಲಗಿಸಿ ಸುಜ್ಞಾನದ ದೀವಿಗೆಯನ್ನು ಬೆಳಗಿಸುವುದೆಂಬ ಭಾವನೆ ಜನರಲ್ಲಿದೆ.

ದೀಪಾವಳಿ ಹಬ್ಬದ ಆಚರಣೆಯ ಹಿನ್ನಲೆಯಲ್ಲಿ ಕೆಲವು ಐತಿಹ್ಯಗಳಿವೆ "ಬಹಳ ಹಿಂದೆ ಹೈಮ ಎಂಬ ಮಹಾರಾಜನಿಗೆ ಒಬ್ಬ ಮಗನಿದ್ದು ಮದುವೆಯಾದ ನಾಲ್ಕನೆಯದಿನವೇ ಅವನು ಹಾವು ಕಡಿತದಿಂದ ಸತ್ತು ಹೋದ. ಅವನ ಹೆಂಡತಿ ತನ್ನ ಪತಿಯ ಅಕಾಲ ಮರಣದಿಂದ ಕಡುನೊಂದು ಗೋಳಿಟ್ಟಳು. ಅವಳು ಯೋಗ್ಯಳು, ಸಭ್ಯಳು ಆಗಿದ್ದಳು. ಅವಳ ಪತಿಯ ಆತ್ಮವನ್ನು ತೆಗೆದುಕೊಂಡು ಹೋಗಲು ಬಂದಿದ್ದ ಯಮದೂತರು ಆಕೆಯ ದುಃಖವನ್ನು ನೋಡಲಾರದೆ ಮನಕರಗಿ ಹಿಂತಿರುಗಿ ಯಮಧರ್ಮನಿಗೆ ನಿವೇದಿಸದರು. ವಿಷಯ ತಿಳಿದ ಯಮಧರ್ಮ ಕನಿಕರಪಟ್ಟು 'ದೀವಳಿಗೆ ಹಬ್ಬದೊಳಗೆ ಧನತ್ರಯೋಧಶಿಯಿಂದ ಐದು ದಿನಗಳವರೆಗೆ ಯಾರ ಮನೆಯಲ್ಲಿ ಸಾಲು ದೀಪಗಳು ಬೆಳಗುವವೋ ಅಂಥವರಿಗೆ ಅಪಮೃತ್ಯುವಿಲ್ಲ ಎಂಬುದಾಗಿ ಹೇಳಿದ ನಿಮಿತ್ತ ಸಾಲುದೀಪಗಳನ್ನು ಹಚ್ಚಿ ಮನೆಗಳ ಮುಂದೆ ಇಡುವ ಆಚರಣೆ ರೂಢಿಯಲ್ಲಿದೆಯೆಂಬ ನಂಬಿಕೆಯಿದೆ"[28]

ಮೊದಲ ದಿನ ನರಕಚತುರ್ದಶಿ ಅಪಮೃತ್ಯುವಿನ ನಿವಾರಣಾರ್ಥವಾಗಿ ಜರುಗುವ ಹಬ್ಬ. ಅಂದು ನರಕಾಸುರನವಧೆಯಾದ ದಿನ. ಮಾರನೆಯದಿನ ಬಲಿಪಾಡ್ಯಮಿ ಬಲೀಂದ್ರ ಪೂಜೆ ಬಲಿಚಕ್ರವರ್ತಿಯ ನೆನಪಿಗಾಗಿ ಹಿಟ್ಟಿನ ಇಲ್ಲವೇ ಸಗಣಿಯ ಮೂರ್ತಿಮಾಡಿ ಪೂಜಿಸುವುದು ರೂಢಿಯಲ್ಲಿದೆ. ಮುಖ್ಯವಾಗಿ ಶಿವದೇವಾಲಯಗಳಲ್ಲಿ ಮೊದಲ ಕಾರ್ತಿಕ ಸೋಮವಾರದಿಂದ ಕಡೆಕಾರ್ತಿಕ ಸೋಮವಾರದವರೆಗೆ ವಿಶೇಷ ಪೂಜೆ ಹೋಮಗಳಿರುತ್ತವೆ. ಒಂದು ತಿಗಳವರೆಗೂ ನಡೆಯುತ್ತದೆ. ಕಡೆ ಕಾರ್ತಿಕೆಗೆ ವಿಜೃಂಭಣೆಯಿಂದ ಪೂಜೆ ನೆರವೇರಿಸುತ್ತಾರೆ.

ದೀಪಾವಳಿ ಮತ್ತೊಂದು ನಿಟ್ಟಿನಲ್ಲಿ ಕೃಷಿ ಸಂಪ್ರದಾಯದ ಪ್ರಮುಖ ಹಬ್ಬವೂ ಆಗಿದೆ. ಈ ಹಬ್ಬದಲ್ಲಿ ಗೋಪೂಜೆ ವಿಶೇಷವಾಗಿ ನಡೆಯುತ್ತದೆ. ದನಕರುಗಳ ಮೈತೊಳೆದು ಹೂವಿನಿಂದ ಶೃಂಗರಿಸಿ ಅವುಗಳಿಗೆ ಬಣ್ಣ ಬಣ್ಣದ ಗೌನು ಹೊದಿಸಿ ಬಸವೇಶ್ವರ ದೇವಸ್ಥಾನಕ್ಕೆ ದನಗಳನ್ನು ಕರೆತಂದು ದೇವಾಲಯದ ಸುತ್ತ ಮೂರು ಪ್ರದಕ್ಷಿಣೆ ಹಾಕಿಸಿ ಅವುಗಳಿಗೆ ತೀರ್ಥ ಹಾಕಿಸಿಕೊಂಡು ಅಲ್ಲಿ ಹಾಕಿರುವ ಬೆಂಕಿಯ ಕಿಚ್ಚನ್ನು ಹಾಯಿಸಿಕೊಂಡು ಹೋಗುತ್ತಾರೆ. ಇಲ್ಲಿ 'ದೀವಳ್ಗೇಲಿ ದನಗಳನ್ನು ಕೆದಕಬ್ಯಾಡ ಸುಗ್ಗಿಲಿ ಜನಗಳ್ನ ಕೆಣಕಬ್ಯಾಡ' ಎಂಬ ಗಾದೆಯನ್ನು ನೆನಪಿಸಿಕೊಳ್ಳ ಬಹುದು. ದೀಪಾವಳಿಯಂದು ಕುಂಬಾರಕೊಪ್ಪಲಿನ ಮಹದೇಶ್ವರ ಜಾತ್ರೆ ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ಇದನ್ನು ಜಾತ್ರೆಗಳು ಎಂಬ ಅಧ್ಯಾಯದಲ್ಲಿ ವಿವರಿಸಲಾಗಿದೆ.

ದೀಪಾವಳಿಯ ಹಿಂದಿನ ರಾತ್ರಿ ಹತ್ತುಗಂಟೆಗೆ ತೊಣಚಿಕೊಪ್ಪಲಿನ ಮಹದೇಶ್ವರ ದೇವಾಲಯದ ಮುಂದೆ ಬೆಂಕಿಯ ಕೊಂಡವನ್ನು ಹಾಕಲಾಗುತ್ತದೆ. ಭಕ್ತರು ಅಂದು ಉಪವಾಸವಿದ್ದು, ಮಧ್ಯರಾತ್ರಿಯಲ್ಲಿ ಕೊಂಡವನ್ನು ಹಾಯುತ್ತಾರೆ. ಈ ಪದ್ಧತಿಯು ಬಹಳ ಹಿಂದಿನಿಂದ ನಡೆದುಕೊಂಡು ಬಂದಿರುವುದಾಗಿ ಸ್ಥಳಿಯರು ಹೇಳಿದ್ದಾರೆ. ಕೊಂಡ ಹಾಯ್ದು ಮಹದೇಶ್ವರನ ದರ್ಶನ ಪಡೆದು ಮನೆಗೆ ತೆರಳುತ್ತಾರೆ. ಈ ಮಾದರಿಯಲ್ಲಿ ದೀಪಾವಳಿಯ ಹಿಂದಿನಿಂದ ಮೈಸೂರು ನಗರದಲ್ಲಿ ಹಲವಾರು ದೇವಾಲಯಗಳಲ್ಲಿ ಕೊಂಡ ಹಾಕುವ ಪದ್ಧತಿ ಅನೂಚಾನವಾಗಿ ನಡೆದು ಬರುತ್ತಿದೆ.

**ಶ್ರೀ ರಾಮನವಮಿ** : ತ್ರೇತಾಯುಗದಲ್ಲಿ ಶ್ರೀ ರಾಮಚಂದ್ರನು ಅವತಾರವೆತ್ತಿದ ವಿಶಿಷ್ಟ ನವಮಿಯಿದು. ಮಹಾವಿಷ್ಣು ರಾಕ್ಷಸರು ಹಾಗೂ ದುಷ್ಟರ ಸಂಹಾರ ಮಾಡಲು ಒಂಬತ್ತನೇ ಅವತಾರ ಶ್ರೀ ರಾಮನಾಗಿ ಜನಿಸಿದ ಮತ್ತು ಇಡೀ ಪ್ರಪಂಚಕ್ಕೆ ಶಾಂತಿಯನ್ನು, ತುಷ್ಟಿ, ಪುಷ್ಟಿಯನ್ನು ಉಂಟುಮಾಡಿದ. ಶ್ರೀ ರಾಮನವಮಿ ಹಬ್ಬದ ಆಚರಣೆಯನ್ನು ಚೈತ್ರಮಾಸದಲ್ಲಿ ಒಂದು ಮುಖ್ಯವಾದ ಹಬ್ಬವಾಗಿ ಆಚರಿಸಲಾಗುತ್ತದೆ. ಮೈಸೂರು ನಗರದಲ್ಲಿರುವ ಎಲ್ಲಾ ರಾಮಮಂದಿರಗಳಲ್ಲಿ ಅಂದು ಬಹಳ ವಿಜೃಂಭಣೆಯಿಂದ, ಶ್ರದ್ಧಾಭಕ್ತಿಯಿಂದ ಆಚರಣೆ ನಡೆಯುತ್ತದೆ. ಶ್ರೀರಾಮ, ಲಕ್ಷ್ಮಣ, ಸೀತಾ, ಆಂಜನೇಯ ಸಮೇತರಾಗಿರುವ ಉತ್ಸವ ಮೂರ್ತಿಗೆ ಪೂಜೆಸಲ್ಲಿಸಲಾಗುತ್ತದೆ. ಅಲ್ಲದೆ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಗುತ್ತದೆ. ಮುಖ್ಯವಾಗಿ ತುಳಸಿಯನ್ನು ಅರ್ಪಿಸಲಾಗುತ್ತದೆ. ದೇವಾಲಯಗಳಲ್ಲಿ ರಾಮಾಯಣ, ಹರಿಕಥೆ ಗಳನ್ನು ಮಾಡಲಾಗುತ್ತದೆ. ಅಭಿಷೇಕ, ವಾದ್ಯೋತ್ಸವ, ಮಂಗಳೋತ್ಸವವು ನಡೆಯುತ್ತವೆ. ಮೈಸೂರು ನಗರದ ಕೆ.ಜಿ.ಕೊಪ್ಪಲು, ತೊಣಚಿಕೊಪ್ಪಲು, ಕುಂಬಾರಕೊಪ್ಪಲು, ಆಲನಹಳ್ಳಿ,

ರಾಜೇಂದ್ರನಗರ, ಒಂಟಿಕೊಪ್ಪಲ್, ಬೋಗಾದಿ, ಹಿನಕಲ್ ಮುಂತಾದ ಎಲ್ಲಾ ರಾಮಮಂದಿರ ಗಳಲ್ಲಿ ಅಂದು ವಿಶೇಷವಾಗಿ ಬೆಲ್ಲದ ಪಾನಕ, ನೀರುಮಜ್ಜಿಗೆ, ಕೋಸಂಬರಿ, ಮೊಸರನ್ನ, ಸಿಹಿ ಪೊಂಗಲ್, ಬಿಸಿಬೇಳೆಬಾತ್, ಕೇಸರಿಬಾತ್ ಮುಂತಾದವುಗಳನ್ನು ವಿತರಿಸಲಾಗುತ್ತದೆ. ಕೆಲವು ಕಡೆಗಳಲ್ಲಿ ಅನ್ನಸಂತರ್ಪಣೆಯನ್ನು ಏರ್ಪಡಿಸುತ್ತಾರೆ. ಅಲ್ಲದೆ ಭಕ್ತರು, ಭಕ್ತಮಂಡಳಿಗಳು ಅಂದು ಅವರವರ ಏರಿಯಾಗಳಲ್ಲಿ ಶ್ರೀರಾಮನ ಪೋಟೊ ಇಟ್ಟು ಪೂಜಿಸಿ ಆ ದಾರಿಯಲ್ಲಿ ಓಡಾಡು ವವರಿಗೆ ಕರೆದು ಮಜ್ಜಿಗೆ, ಪಾನಕ, ಕೋಸಂಬರಿ, ಮೊಸರನ್ನಗಳನ್ನು ಪ್ರಸಾದವಾಗಿ ವಿತರಿಸುತ್ತಾರೆ. ಕೆಲವು ಕಡೆಗಳಲ್ಲಿ ಅಂದು ಸಂಜೆ ಪೌರಾಣಿಕ ನಾಟಕವನ್ನು ಮಾಡುವುದಿದೆ.

ಶ್ರೀ ರಾಮನವಮಿಯಂದು ಜಯನಗರದ ಬಹಳ ಪ್ರಾಚೀನವಾದ ರಾಮಮಂದಿರದಲ್ಲಿ ಶ್ರೀ ರಾಮ,ಸೀತೆ, ಲಕ್ಷ್ಮಣ ಆಂಜನೇಯ ಸಮೇತರಾದ ವಿಗ್ರಹವನ್ನು ಹನುಮ ವಾಹನದಲ್ಲಿ ಪ್ರತಿಷ್ಠಾಪಿಸಿ ಊರಿನ ಪ್ರಮುಖ ಬೀಧಿಗಳಲ್ಲಿ ಮೆರವಣಿಗೆಯನ್ನು ಮಾಡಲಾಗುತ್ತದೆ. ಬೆಳಗ್ಗೆ ದೇವಾಲಯದಲ್ಲಿ ಕೋಸಂಬರಿ, ಮಜ್ಜಿಗೆ, ಪಾನಕ ವಿತರಿಸಲಾಗುತ್ತದೆ. ಮಧ್ಯಾಹ್ನದ ವೇಳೆಗೆ ಅನ್ನಸಂತರ್ಪಣೆ ನಡೆಸುತ್ತಾರೆ.

**ಹನುಮ ಜಯಂತಿ** : ಹನುಮ ಜಯಂತಿಯಂದು ಮೈಸೂರು ನಗರದೆಲ್ಲೆಡೆ ಇರುವ ಆಂಜನೇಯಸ್ವಾಮಿ ದೇವಸ್ಥಾನಗಳಲ್ಲಿ ವಿಶೇಷ ಪೂಜೆ, ಪ್ರಸಾದ ವಿನಿಯೋಗದಂತಹ ಧಾರ್ಮಿಕ ಕಾರ್ಯಕ್ರಮಗಳು ಅತ್ಯಂತ ಸಂಭ್ರಮ, ಸಡಗರದಿಂದ ಜರುಗುತ್ತವೆ. ಇರ್ವಿನ್ ರಸ್ತೆಯಲ್ಲಿರುವ ಪಂಚಮುಖಿ ಆಂಜನೇಯಸ್ವಾಮಿ ದೇವಾಲಯದ ಹದಿನೆಂಟನೆ ವರ್ಷದ ಹನುಮ ಜಯಂತಿ ಮಹೋತ್ಸವದ ಅಂಗವಾಗಿ ಆಂಜನೇಯ ಮೂರ್ತಿಯನ್ನು ವಿಶೇಷವಾಗಿ ಅಲಂಕಾರ ಮಾಡಿ, ಪಂಚಾಮೃತ ಅಭಿಷೇಕದೊಂದಿಗೆ ವಿಶೇಷ ಪೂಜಾಕಾರ್ಯ ಗಳನ್ನು ನೆರವೇರಿಸಿದರು.

ಕುವೆಂಪುನಗರ ಗಂಗೋತ್ರಿ ಬಡಾವಣೆಯ ಶ್ರೀ ಮಾರುತಿ ದೇವಾಲಯ ಟ್ರಸ್ಟ್ ನಗರದ ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಸ್ಥಾನದಿಂದ ಆಂಜನೇಯ ಮೂರ್ತಿಯ ಮೆರವಣಿಗೆಯನ್ನು ಆರಂಭಿಸಿ ಅಶೋಕ ರಸ್ತೆ, ಇರ್ವಿನ್ ರಸ್ತೆ, ನ್ಯೂ ಸಯ್ಯಾಜಿರಾವ್ ರಸ್ತೆ, ಡಿ.ದೇವರಾಜು ಅರಸು ರಸ್ತೆ, ಚಾಮರಾಜ ಜೋಡಿ ರಸ್ತೆ, ಕನ್ನೇಗೌಡನ ಕೊಪ್ಪಲು ಮಾರ್ಗವಾಗಿ ಗಂಗೋತ್ರಿ ಬಡಾವಣೆಯ ಮಾರುತಿ ದೇವಾಲಯದಲ್ಲಿ ಅಂತ್ಯಗೊಂಡಿತು.

ಅರಮನೆ ಕೋಟೆ ಆಂಜನೇಯ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಹೊರಟ ಮೆರವಣಿಗೆಯ ಮುಂಭಾಗದಲ್ಲಿ ನಂದಿಕಂಬ, ಬೀಸು ಕಂಸಾಳೆ, ವೀರಗಾಸೆ, ಡೊಳ್ಳುಕುಣಿತ,

ಕೀಲುಕುದುರೆ, ಮರಗಾಲು, ಪೂಜಾಕುಣಿತ, ಗಾರುಡಿಗೊಂಬೆಯ ಮೇಳ, ತಮಟೆ, ನಗಾರಿ, ಕೋಲಾಟ ಮೆರವಣಿಗೆಯ ಉದ್ದಕ್ಕೂ ಜನರನ್ನು ಆಕರ್ಷಿಸಿ ಭಕ್ತಿಭಾವ ಮೆರೆದವು. ಅಲ್ಲದೆ ರಾಮ, ಲಕ್ಷ್ಮಣ, ಹನುಮ ವೇಷಾಧಾರಿಗಳು, ಹುಲಿವೇಷ ಮೊದಲಾದ ಕಲಾತಂಡಗಳು ಮೆರವಣಿಗೆಗೆ ಮೆರಗು ತರುವುದರೊಂದಿಗೆ ಜನಪದ ಹಾಗೂ ಧಾರ್ಮಿಕ ಕುಣಿತಗಳ ಸೊಗಡನ್ನು ಪ್ರದರ್ಶಿಸಿ ಸಾಂಸ್ಕೃತಿಕ ನಗರಿಗೆ ಮೆರಗು ನೀಡಿದವು.

ಆಂಜನೇಯ ಮೂರ್ತಿಗೆ ವೀಳ್ಯದ ಎಲೆಯ ಹಾರ, ಮಲ್ಲಿಗೆ, ತುಳಸಿ ಹಾರಗಳಿಂದ ಅಲಂಕರಿಸಲಾಗುತ್ತದೆ. ಆಂಜನೇಯ ಭಕ್ತರು ಸ್ವಾಮಿಗೆ ಭಕ್ತಿಭಾವದಿಂದ ನಮಿಸುತ್ತಾರೆ. ಅಂದು ನಗರದಾದ್ಯಂತ ಮಜ್ಜಿಗೆ, ಪಾನಕ, ಸಜ್ಜಿಗೆ, ಪುಳಿಯೊಗರೆ, ಅವಲಕ್ಕಿ ಮುಂತಾದ ಪ್ರಸಾದಗಳನ್ನು ಹಂಚುತ್ತಿರುತ್ತಾರೆ. ಈ ದೇವಾಲಯಗಳೇ ಅಲ್ಲದೆ ಸಿ.ಎಫ್.ಟಿ.ಆರ್.ಐ ಸಮೀಪದ ಆಂಜನೇಯಸ್ವಾಮಿ ದೇವಸ್ಥಾನ, ವಿನೋಬಾ ರಸ್ತೆಯಲ್ಲಿರುವ ಆಂಜನೇಯ ದೇವಸ್ಥಾನ, ಗೋಕುಲಂನ ಆಂಜನೇಯ ದೇವಾಲಯ, ವಾಣಿವಿಲಾಸ ರಸ್ತೆಯ ವಿ.ವಿ.ಮಾರ್ಕೆಟ್ ಬಳಿಗಳಲ್ಲಿ ಹನುಮ ಜಯಂತಿಯ ಅಂಗವಾಗಿ ಅನ್ನಸಂತರ್ಪಣೆ ನಡೆಸುವರು.

**ಸಂಕಷ್ಟಹರ ಚತುರ್ಥಿ :** ಮೈಸೂರು ನಗರ, ಕನ್ನೇಗೌಡನ ಕೊಪ್ಪಲು, ಸರಸ್ವತಿಪುರಂ ಎಂಟನೆ ಮುಖ್ಯರಸ್ತೆಯಲ್ಲಿ 'ಇಷ್ಟಾರ್ಥ ಸಿದ್ಧಿ ಸಂಕಷ್ಟಹರ ಗಣಪತಿ ದೇವಾಲಯ'ದಲ್ಲಿ ವಿಶೇಷವಾಗಿ 'ಸಂಕಷ್ಟಹರ ಚತುರ್ಥಿದಿನದಂದು ಬಾಲಗಣಪತಿಗೆ ಬೆಣ್ಣೆ ಅಲಂಕಾರ ಮಾಡಿ ಪೂಜೆ ಮಾಡಲಾಗುತ್ತದೆ. ಪ್ರತಿ ಗಣೇಶ ಚತುರ್ಥಿ ಹಬ್ಬದಂದು ಗ್ರಾಮದ ಗೃಹಿಣಿಯರು ಈ ದೇವಾಲಯಕ್ಕೆ ಭೇಟಿ ನೀಡಿ ಬಾಗಿನವನ್ನು ಅರ್ಪಿಸಿ ಗೌರಿ ದಾರವನ್ನು ಕಟ್ಟಿಸಿಕೊಳ್ಳುತ್ತಾರೆ. ಇದೊಂದು ಜನಪದರ ವಿಶೇಷ ಆಚರಣೆಯೇ ಸರಿ.

**ಇಷ್ಟಾರ್ಥಸಿದ್ಧಿ** : ಮುಖ್ಯವಾಗಿ ವಿವಾಹ, ವಿದ್ಯೆ ಮತ್ತು ಸಂತಾನ ಭಾಗ್ಯಕ್ಕೆ ಬೇಡಿಕೊಂಡರೆ ಇಷ್ಟಾರ್ಥಗಳು ಈಡೇರುತ್ತವೆ ಎಂದು ಹಿಂದಿನಿಂದಲೂ ನಂಬಿಕೊಂಡು ಬಂದಿದ್ದಾರೆ. ಆದುದರಿಂದ ಈ ದೇವಾಲಯ ಇಂದಿಗೂ ಪ್ರಸಿದ್ಧಿಯನ್ನ ಪಡೆದುಕೊಂಡಿದೆ.

ಇತ್ತೀಚೆಗೆ ಈ ದೇವಾಲಯವನ್ನು ರಸ್ತೆ ಅಭಿವೃದ್ಧಿಪಡಿಸುವ ಉದ್ದೇಶದಿಂದ ನೆಲಸಮ ಮಾಡಲು ನ್ಯಾಯಾಲಯ ಆದೇಶ ಹೊರಡಿಸಿತ್ತು. ಆದರೆ ಗ್ರಮಸ್ಥರು ಇದನ್ನು ವಿರೋಧಿಸಿದಾಗ, ಈ ದೇವಾಲಯವು ಅತ್ಯಂತ ಪುರಾತನವಾದದ್ದು ಎಂದು ಪರಿಗಣಿಸಿ, ದೇವಾಲಯದ ಕಾರ್ಯಕ್ಕೆ ತೊಂದರೆ ಮಾಡದಂತೆ ಅನುಮತಿ ನೀಡಿದರು.

**ಕಾರ್ತಿಕ ಮಾಸ** : ಸಾಮಾನ್ಯವಾಗಿ ಡಿಸೆಂಬರ್‌ನಲ್ಲಿ ಬರುವ ಕಾರ್ತಿಕ ಮಾಸ ಪೂಜೆಯನ್ನು ಮೈಸೂರು ನಗರದ ಎಲ್ಲಾ ದೇವಾಲಯಗಳಲ್ಲಿ ವಿಶೇಷವಾಗಿ ಆಚರಿಸಲಾಗುತ್ತದೆ. ಆದರೆ ಶೈವ ಸಂಪ್ರದಾಯದ ದೇವಾಲಯಗಳಲ್ಲಿ ಈ ಕಾರ್ತಿಕ ಮಾಸದ ಪೂಜೆಗೆ ಬಹಳ ಒತ್ತುಕೊಡುತ್ತಾರೆ. ಕಾರ್ತಿಕ ಮಾಸವು ಒಮ್ಮೆ ನಾಲ್ಕುವಾರಗಳು, ಮತ್ತೊಮ್ಮೆ ಅಧಿಕ ಮಾಸದಲ್ಲಿ ಐದು ವಾರಗಳು ಬರುತ್ತವೆ. ಸೋಮವಾರದಂದು ಮಾತ್ರ ಈ ಪೂಜೆಯನ್ನು ಸಲ್ಲಿಸಲಾಗುತ್ತದೆ.

ಮೈಸೂರು ನಗರದ ಜನರು ಕಾರ್ತಿಕ ಮಾಸದಲ್ಲಿ ಶಿವನ ದೇವಾಲಯಗಳಿಗೆ ಭೇಟಿ ನೀಡಿ ಎಣ್ಣೆ ದೀಪಗಳನ್ನು ಬೆಳಗುವುದು ಹಿಂದಿನಿಂದಲೂ ರೂಢಿಸಿಕೊಂಡು ಬಂದಿರುವ ಪದ್ಧತಿಯಾಗಿದೆ. ಹಲವರು ಮೊದಲೇ ಹರಕೆಯನ್ನು ಹೊರುತ್ತಾರೆ. ಈ ಬಾರಿ ಬರುವ ಕಾರ್ತಿಕೆಯಲ್ಲಿ ಎಲ್ಲಾ ಸೋಮವಾರಗಳಂದು ಬಂದು ದೀಪ ಹಚ್ಚುತ್ತೇನೆ, ಪೂಜೆ ಸಲ್ಲಿಸುತ್ತೇನೆ ಎಂದು. ಹಾಗೆ ನಡೆದು ಕೊಳ್ಳುತ್ತಾರೆ. ಈ ಒಂದು ತಿಂಗಳು ಮಾಂಸಾಹಾರವನ್ನು ತ್ಯಜಿಸಿ ಸಸ್ಯಹಾರಿಗಾಳಾಗಿ ಕಟ್ಟುನಿಟ್ಟಿನಿಂದ, ಭಕ್ತಿಭಾವದಿಂದ ನಡೆದುಕೊಳ್ಳುತ್ತಾರೆ.

ಮೈಸೂರಿನ ಲಷ್ಕರ್ ಮೊಹಲ್ಲದಲ್ಲಿರುವ ಶ್ರೀ ಮಲೆಮಹದೇಶ್ವರಸ್ವಾಮಿ ದೇವಸ್ಥಾನದ ಟ್ರಸ್ಟ್‌ವತಿಯಿಂದ 41ನೇ ವರ್ಷದ ಕಾರ್ತಿಕ ಮಾಸದ ಪೂಜಾ ಮಹೋತ್ಸವವನ್ನು ಏರ್ಪಡಿಸಿದ್ದರು. ಬೆಳಿಗ್ಗೆ ವಿಶೇಷ ಪೂಜೆಗಳು ಹಾಗೂ ಪ್ರಸಾದವನ್ನು ವಿನಿಯೊಗಿಸುವರು. ಅಂದು ಸಂಜೆ ಏಳುಗಂಟೆಗೆ ಶ್ರೀಮಲೆ ಮಹದೇಶ್ವರಸ್ವಾಮಿಯನ್ನು ಪಾರ್ವತಿ ಪರಮೇಶ್ವರ ಸಮೇತ ಹುಲಿವಾಹನದಲ್ಲಿ ಪ್ರತಿಷ್ಠಾಪಿಸಿ ಮಹದೇಶ್ವರಸ್ವಾಮಿಗೆ ಸುವರ್ಣ ಕೊಳಗವನ್ನು ತೊಡಿಸಿ ಲಷ್ಕರ್ ಮೊಹಲ್ಲಾದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಗುತ್ತದೆ. ಭಕ್ತರು ಬಿಲ್ವಪತ್ರೆ, ತುಂಬೆ ಹೂವು ತಂದು ದೇವರಿಗೆ ಅರ್ಪಿಸಿ ಪೂಜೆ ಸಲ್ಲಿಸುತ್ತಾರೆ. ಇಲ್ಲಿ ಮುಖ್ಯವಾಗಿ ಹಣೆಗೆ ವಿಭೂತಿಯನ್ನು ಹಚ್ಚಿಕೊಳ್ಳುವುದು ವಿಶೇಷವಾಗಿದೆ. ಮೆರವಣಿಗೆಯ ಉದ್ದಕ್ಕೂ ಪ್ರಸಾದ ವಿನಿಯೋಗಿಸಲಾಗುತ್ತದೆ. ಶೈವಾರಾಧಕರ ಮನೆಗಳ ಮುಂದೆ ಎಣ್ಣೆ ದೀಪಗಳನ್ನು ಹಚ್ಚಿಡಲಾಗುತ್ತದೆ.

ಮಹದೇಶ್ವರ ದೇವಾಲಯ ಕುಂಬಾರಕೊಪ್ಪಲಿನ, ತಿಪ್ಪಾಜಿ ಕೊಳದಲ್ಲಿ ಲಕ್ಷ ದೀಪೋತ್ಸವವನ್ನು ಕಾರ್ತಿಕ ಮಾಸದ ಕಡೆ ಕಾರ್ತಿಕ ಸೋಮವಾರದಂದು ಏರ್ಪಡಿಸಲಾಗಿತ್ತು. ಕುಂಬಾರ ಕೊಪ್ಪಲೇ ಅಲ್ಲದೇ ಅಕ್ಕಪಕ್ಕದ ಬಡಾವಣೆಯವರು ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪೂಜೆಯಲ್ಲಿ ಪಾಲ್ಗೊಂಡು ದೀಪಗಳನ್ನು ಹಚ್ಚಿ ತಮ್ಮ ಭಕ್ತಿಯನ್ನೆರೆದರು. ಇನ್ನು ಉಳಿದ ಅಂಶಗಳನ್ನು ಮಹದೇಶ್ವರ ಜಾತ್ರೆ ಎಂಬ ಶೀರ್ಷಿಕೆಯ ಅಧ್ಯಾಯ ಐದರಲ್ಲಿ ವಿವರಿಸಲಾಗಿದೆ.

ಅಲ್ಲದೆ ಹಿನಕಲ್ಲಿನ ನನ್ನೇಶ್ವರ ದೇವರ ಕಲ್ಯಾಣಿಯಲ್ಲಿ ಕಾರ್ತಿಕ ಮಾಸದ ಅಂಗವಾಗಿ ನಡೆದ ದೀಪೋತ್ಸವದ ವಿವರವನ್ನು ದೀಪೋತ್ಸವದಲ್ಲಿ ವಿವರಿಸಲಾಗಿದೆ.

ಈ ಮೇಲಿನ ದೇವಾಲಯಗಳೆ ಅಲ್ಲದೆ ಅರಮನೆಯ ತ್ರಿನೇಶ್ವರ, ಆಲನಹಳ್ಳಿಯ ಮಹದೇಶ್ವರ, ಉದಯಗಿರಿಯ ಮಹದೇಶ್ವರ ಮುಂತಾದ ದೇವಾಲಯಗಳಲ್ಲಿಯೂ ದೀಪ ಬೆಳಗಿಸಿ ವಿಜೃಂಭಣೆಯಿಂದ ಪೂಜೆ ಸಲ್ಲಿಸಿ ಪ್ರಸಾದ ವಿನಿಯೊಗಿಸುತ್ತಿದ್ದದ್ದು ಕಂಡುಬಂತು.

**ಆಷಾಢ ಮಾಸ :** ಚಂದ್ರಮಾನ ಮಾಸಗಳಾದ ಚೈತ್ರ, ವೈಶಾಖ, ಜ್ಯೇಷ್ಠ, ಆಷಾಢ, ಶ್ರಾವಣವೇ ಮೊದಲಾದ ಹನ್ನೆರಡು ಮಾಸಗಳಿಗೂ ಅವುಗಳದೇ ಆದ ವಿಶೇಷತೆಯುಂಟು. ಪ್ರಸ್ತುತ ಆಷಾಢ ಮಾಸದಲ್ಲಿ ಮನೆಗೆ ಪಾಯ ಹಾಕಿಸುವ, ಹೆಣ್ಣು ನೋಡಲು ಹೋಗುವ, ವಿವಾಹ, ಗೃಹ ಪ್ರವೇಶ, ಹೊಸದಾಗಿ ಉದ್ದಿಮೆಗಳನ್ನು ಪ್ರಾರಂಭಿಸುವಂಥ ವ್ಯವಹಾರಗಳು ತಾತ್ಕಾಲಿಕವಾಗಿ ಸ್ಥಗಿತಗೊಳ್ಳುತ್ತವೆ. ಆರ್ಥಿಕ ವಲಯದಲ್ಲಿ ಸ್ವಲ್ಪಮಟ್ಟಿಗೆ ಇಳಿಮುಖ ಕಂಡುಬರುತ್ತದೆ. 'ಆಷಾಢ ಮುಗಿಯಲಿ ಮಾತನಾಡೋಣ' ಎಂಬ ವ್ಯಾವಹಾರಿಕ ಮಾತುಗಳು ಸಾರ್ವಜನಿಕರಲ್ಲಿ ಕೇಳಿ ಬರುತ್ತದೆ. ಇಷ್ಟಾದರೂ ಮುಸಲ್ಮಾನರು, ಕ್ರೈಸ್ತರು, ಅಯ್ಯಂಗಾರರು, ಗೊಲ್ಲರು, ಬ್ರಾಹ್ಮಣರು ಆಷಾಢ ಮಾಸದಲ್ಲೂ ಮದುವೆ ಮುಂಜಿಗಳನ್ನು ಮಾಡುವುದುಂಟು.

ಪ್ರಾದೇಶಿಕವಾಗಿ ಉತ್ತರ ಕರ್ನಾಟಕದವರು ಈ ಮಾಸದಲ್ಲಿ ಬರುವ ಹುಣ್ಣಿಮೆಯನ್ನು 'ಕಡಲೇಗಡುಬ ಹುಣ್ಣಿಮೆ' ಎಂದು ಕರೆಯುವರು ಅಲ್ಲದೆ ಆಷಾಢದ ತಿಂಗಳ ಪ್ರತಿ ಮಂಗಳ ವಾರದಂದು 'ಗುಳ್ಳವ್ವನ ಪೂಜೆ' ಮಾಡುವರು. ಅಂತೆಯೇ ಈ ಮಾಸದ ಅಮಾವಾಸ್ಯೆಯನ್ನು ದೀವಸಿ ಅಮಾಸೆ, ಭೀಮನ ಅಮವಾಸ್ಯೆ ಎಂದು ಕರೆಯುವರು. ಆ ದಿನ ಸ್ತ್ರೀಯರು ಕೈಗೆ ಅರಿಶಿಣದ ದಾರವನ್ನು ಕಟ್ಟಿಕೊಳ್ಳುವ ಪದ್ಧತಿ ರೂಢಿಯಲ್ಲಿದೆ. ಅಂದು ಭೀಮೇಶ್ವರವ್ರತ ಅಥವಾ ಪತಿ ಸಂಜೀವಿನಿ ಎಂಬ ವ್ರತವನ್ನು ಎಲ್ಲಾ ಮದುವೆಯಾಗಿರುವ ಹೆಣ್ಣು ಮಕ್ಕಳು ಮಾಡುವುದುಂಟು. ಇದನ್ನು ಕೆಲವೆಡೆ ಭೀಮೇಶ್ವರ ವ್ರತ, ಗಂಡನ ಪೂಜೆ ಹಬ್ಬ ಎಂದೂ ಕರೆಯುತ್ತಾರೆ. ಭೀಮನನ್ನು ಸ್ಮರಿಸಿ ದ್ರೌಪದಿ ಈ ವ್ರತವನ್ನು ಮಾಡಿದಳೆಂಬ ಪ್ರತೀತಿ ಇದೆ.

ಈ ಮಾಸದಲ್ಲಿ ಕೆಲವು ದೇವಾಲಯಗಳಲ್ಲಿ ದೇವರಿಗೆ ಡೋಲೋತ್ಸವ ನಡೆಯುತ್ತದಲ್ಲದೆ ಪ್ರತಿ ಶುಕ್ರವಾರ ದೇವರಿಗೆ ವಿಶೇಷ ಪೂಜೆಗಳು ನಡೆಯುತ್ತವೆ. ಕೆಲವು ಕಡೆ ಗ್ರಾಮದೇವತೆಯಾದ ಮಾರಮ್ಮ ಮೊದಲಾದ ದೇವತೆಗಳನ್ನು ಹಟ್ಟಿ ಮಾರಮ್ಮ ಎಂಬ ಹೆಸರಿನಿಂದ ವಿಶೇಷ ಆರತಿ ಮತ್ತು ಮಾಂಸಹಾರವನ್ನು ಮಾಡಿ ದೇವಿಗೆ ಅರ್ಪಿಸಿ ಸೇವಿಸುವರು.

ಪೂರ್ವಾಷಾಢ ಇಲ್ಲವೇ ಉತ್ತರಾಷಾಢ ನಕ್ಷತ್ರಗಳು ಈ ಮಾಸದ ಹುಣ್ಣಿಮೆಯೊಂದಿಗೆ ಕೂಡುವುದರಿಂದ ಈ ಮಾಸಕ್ಕೆ ಆಷಾಢಮಾಸ ಎಂದು ಹೆಸರು ಬಂದಿದೆ. ಆಷಾಢವು ಮಿಥುನ ರಾಶಿಯಲ್ಲಿ ಸೂರ್ಯನಿರುವಾಗ ಪ್ರಾರಂಭವಾಗಿ ಅವನು ಕರ್ಕಾಟಕ ರಾಶಿಯಲ್ಲಿರುವಾಗ ಮುಗಿಯುತ್ತದೆ. ಕೆಲವೊಮ್ಮೆ ಸೂರ್ಯನು ಮಿಥುನ ರಾಶಿಯಲ್ಲಿರುವಾಗಲೇ ಬರುವ ಅಧಿಕ ಮಾಸಕ್ಕೆ ಅಧಿಕಾಷಾಢಮಾಸ ಎಂದು ಕರೆಯುವುದು ರೂಢಿಯಲ್ಲಿದೆ.

ಆಷಾಢ ಗಾಳಿಕಾಲ ಆಸ್ಯಾಡದ ಮಳೆಗಾಳಿ ಬೀಸಿ ಬೀಸಿ ಹೊಡಿದಾಗ, ಹೇಸಿ ನನ್ನ ಜೀವ ಹೆಣ್ಣಾಗಿ ಆದ್ರೂ ಹುಟ್ಟ ಬಾರದಿತ್ತೇ? ಎಂಬುದು ಗ್ರಾಮೀಣರ ಅನುಭವದ ಮಾತು. ಈ ತಂಗಾಳಿಯಲ್ಲಿ ರೈತ, ದಿನವೆಲ್ಲಾ ಹೊಲದಲ್ಲಿ ಪ್ರಯಾಸದಿಂದ ದುಡಿಯುತ್ತಿರುವಾಗ ಹೆಂಗಸರು ಬೆಚ್ಚಗೆ ಮನೆಯಲ್ಲಿದ್ದು ಕಾಲ ಕಳೆಯುತ್ತಿರುತ್ತಾರೆ. ಅದನ್ನು ಬಲ್ಲ ರೈತರು ಇಂಥ ಮಾತುಗಳನ್ನಾಡಿರುವುದರಲ್ಲಿ ಅಚ್ಚರಿಯೇನಿಲ್ಲ.

ಮೈಸೂರು ನಗರದಲ್ಲಿ ಆಷಾಢ ಮಾಸ ಬಹಳ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಆಷಾಢ ಮಾಸ ಎಂದರೆ ಶಕ್ತಿದೇವತೆಯ ಆರಾಧನೆಗಳ ವಾರ ಎಂದಾಗಿದೆ. ಆಷಾಢದ ಮೂರನೆ ವಾರದಂದು ಚಾಮುಂಡೇಶ್ವರಿಯ ವರ್ಧಂತಿ ಉತ್ಸವ ಜರುಗುತ್ತದೆ. ಉಳಿದವಾರಗಳಾದ, ಮಂಗಳವಾರ ಹಾಗೂ ಶುಕ್ರವಾರಗಳಂದು ನಗರದ ಎಲ್ಲಾ ಶಕ್ತಿದೇವತೆಗಳ ದೇವಾಲಯಗಳಲ್ಲಿ ವಿಶೇಷ ಪೂಜೆ ಪುನಸ್ಕಾರಗಳು ಜರುಗುತ್ತವೆ.

ವಿಶೇಷವಾಗಿ ಬೆಟ್ಟದ ಚಾಮುಂಡೇಶ್ವರಿಯ ದರ್ಶನ ಪಡೆಯಲು ಮಧ್ಯರಾತ್ರಿಯಿಂದಲೇ ಜನ ತಯಾರಾಗುತ್ತಾರೆ. ಮುಂಜಾನೆಯೆ ದರ್ಶನ ಪಡೆದು ಬರುತ್ತಾರೆ. ಮಹಿಳೆಯರ ಸಂಖ್ಯೆಯೇ ಅಧಿಕವಾಗಿರುತ್ತದೆ. ಹರಕೆ ಹೊತ್ತವರು ಮೆಟ್ಟಿಲುಗಳನ್ನು ಹತ್ತಿ ದರ್ಶನ ಪಡೆಯುತ್ತಾರೆ. ಮೆಟ್ಟಿಲುಗಳಿಗೆ ಕುಂಕುಮ ಇಡುವುದು, ಕರ್ಪೂರ ಹಚ್ಚುವುದು, ತೆಂಗಿನಕಾಯಿ ಒಡೆಯುವುದು, ಮೆಟ್ಟಿಲು ನಮಸ್ಕಾರ ಹೀಗೆ ಹಲವಾರು ರೀತಿಯಲ್ಲಿ ಭಕ್ತಿ ಮೆರೆಯುತ್ತಾರೆ. ವರ್ಧಂತಿ ಉತ್ಸವದಲ್ಲಿ ಉಳಿದ ವಿವರವನ್ನು ವಿವರಿಸಲಾಗಿದೆ.

**ಶ್ರಾವಣ ಮಾಸ :** ಆಷಾಢ ಮಾಸ ಮುಗಿದು ಶ್ರಾವಣ ಆರಂಭವಾದಾಗ ಮೋಡ ಕರಗಿ ಮಳೆಯಾಗಿ ನೆಲ ಉತ್ತು ಬಿತ್ತದ್ದು ಬೇಳೆಗಳು ಇಣುಕುತ್ತಿರುತ್ತವೆ. ಎತ್ತ ನೋಡಿದರೂ ಹಸಿರು ಹಾಸಿ ಮನ ಮುದಗೊಳ್ಳುತ್ತಿದೆ. ತಂಪಾದಗಾಳಿ, ಹಕ್ಕಿಗಳ ಚಿಲಿಪಿಲಿ ಹಾಡು, ಬಣ್ಣದ ಹೂವುಗಳ ಕಂಪು, ಅಡೆ ತಡೆಯ ಆಷಾಢದಲ್ಲಿ ಮುಂದೂಡಿದ ಶುಭ ಕಾರ್ಯಗಳಿಗೆ ಮತ್ತೆ ಚಾಲನೆ ಸಿಕ್ಕು ಹಸಿರು ಚಪ್ಪರಗಳಲ್ಲಿ ಮಂಗಳವಾದ್ಯಗಳು ಮೊಳಗಿ ನವ ವಧು–ವರರು ಕೈಕೈ ಹಿಡಿದು

ಓಡಾಡುತ್ತಿದ್ದಾರೆ. ಈ ಸುಸಂದರ್ಭ ಶ್ರಾವಣ ಮಾಸ ಹರಿ–ಹರರಿಗೂ ಪ್ರಿಯವಾದ ತಿಂಗಳಾದ್ದರಿಂದ ದೇವಾಲಯಗಳಲ್ಲಿ ಪೂಜೆ ಪುನಸ್ಕಾರಗಳೊಂದಿಗೆ ಗಂಟೆಯ ನಾದ ಅನುರಣನಗೊಂಡು ಭಕ್ತಿ ಭಾವದ ಹೊಳೆ ಹರಿಯುತ್ತಿದೆ.

ಶ್ರಾವಣ ಮಾಸ ಬಂತೆಂದರೆ ಹಬ್ಬ ಹರಿದಿನಗಳು ಹೆಚ್ಚು. ಶ್ರಾವಣ ಶುಕ್ಲ ಪಂಚಮಿಯಂದು 'ನಾಗರಪಂಚಮಿ' ಹಬ್ಬ ಆಚರಿಸುತ್ತಾರೆ. ಸರ್ಪಪೂಜೆ ದ್ರಾವಿಡರಲ್ಲಿ ಬಹಳ ಹಿಂದಿನಿಂದಲೂ ಆಚರಣೆಯಲ್ಲಿದೆ. ಮುಖ್ಯವಾಗಿ ಇದು ಹೆಣ್ಣುಮಕ್ಕಳ ಹಬ್ಬ. ಕೆಲವೆಡೆ ಮನೆಯ ಅಂಗಳದಲ್ಲಿ ನಾಗಮೂರ್ತಿ ಬರೆದರೆ, ಕರ್ನಾಟಕದ ಕೆಲವು ಭಾಗಗಳಲ್ಲಿ ಮಣ್ಣಿನ ಮೂರ್ತಿ ತಯಾರಿಸಿ ಹಾಲೆರೆಯುತ್ತಾರೆ. ನಾಗಪೂಜೆಯಿಂದ ಸಂತಾನವಿಲ್ಲದ ದಂಪತಿಗೆ ಸಂತಾನ ಪ್ರಾಪ್ತಿಯಾಗುತ್ತದೆಂದು ಜನಪದರ ನಂಬಿಕೆ.

ನಾಗರ ಪಂಚಮಿ ನಾಡಿಗೆ ದೊಡ್ಡದು
ನಾಗ ನಾರಿಯರು ಕೂಡೋಣ ಗೆಳೆತವ್ವ
ನಾಗಪ್ಪನಿಗೆ ಹಾಲ ಹುಯ್ಯೋಣ॥

ಶಿವ–ಸರ್ಪಭೂಷಣ, ವಿಷ್ಣು–ಶೇಷಶಯನನಾದರೆ, ಗಣಪತಿಯ ಒಡಲಿಗೆ ಕಟ್ಟಾಗಿ ಹಾವು ಬಳಸಲ್ಪಟ್ಟಿದೆ. ಇಂಥ ಹಾವು ರೈತನ ಮಿತ್ರ. ಹೊಲದಲ್ಲಿ ಹರಿದಾಡುತ್ತಾ ಇಲಿ, ಕಪ್ಪೆ, ಹುಳು ಹುಪ್ಪಟೆಗಳನ್ನು ತಿನ್ನುತ್ತಾ, ಬೆಳೆಯನ್ನು ರಕ್ಷಿಸುವುದರಿಂದ 'ಕ್ಷೇತ್ರಪಾಲಕ' ಎಂದು ರೈತರು ಹಾವನ್ನು ಭಯ ಭಕ್ತಿಯಿಂದ ಪೂಜಿಸುತ್ತಾರೆ. ಪೌರ್ಣಿಮೆಯ ದಿನ ಇಲ್ಲವೇ ಅದರ ಹಿಂದಿನ ಶುಕ್ರವಾರ 'ವರಮಹಾಲಕ್ಷ್ಮೀವ್ರತ' ಬರುತ್ತದೆ. ಇದನ್ನು ಮಹಿಳೆಯರು ಬಹಳ ಸಡಗರದಿಂದ ಆಚರಿಸುತ್ತಾರೆ.

ಶ್ರಾವಣ ಮಾಸದಲ್ಲಿ ಬರುವ ಶನಿವಾರ, ಸೋಮವಾರಗಳಂದು ದೇವರಿಗೆ ವಿಶೇಷ ಪೂಜೆ ನಡೆಯುತ್ತದೆ. ವೆಂಕಟರಮಣಸ್ವಾಮಿ, ಲಕ್ಷ್ಮೀನರಸಿಂಹಸ್ವಾಮಿ, ಶ್ರೀರಾಮ, ಆಂಜನೇಯ ಮೊದಲಾದ ದೇವರುಗಳ ಭಕ್ತರಿಗೆ ಶನಿವಾರ ಪ್ರಶಸ್ತವಾದರೇ, ಶಿವಭಕ್ತರಿಗೆ ಸೋಮವಾರ ಪ್ರಶಸ್ತವಾದ ದಿನ. ಶನಿವಾರದಂದು ದೇವರ ಪೂಜೆ ಮಾಡಿ ಹಣೆಗೆ ನಾಮ ಧರಿಸಿ, ಕನಿಷ್ಠ ಮೂರು ಮನೆಗಳಿಗಾದರೂ ಹೋಗಿ ಭಿಕ್ಷೆ ಬೇಡಿ, ಶ್ರೀಮನ್ನಾರಾಯಣ ಗೋವಿಂದ... ಮೊದಲಾಗಿ ಆಯಾ ದೇವರ ಹೆಸರಿನೊಂದಿಗೆ 'ಪಾದಕ್ಕೆ' ಗೋವಿಂದಾ ಎಂದು ಹೇಳಿ ಭಿಕ್ಷೆ ಪಡೆಯುತ್ತಾರೆ. ಇದರಲ್ಲಡಗಿರುವ ತತ್ವದ ಮರ್ಮ 'ಸಮಾಜದಲ್ಲಿರುವವರೆಲ್ಲರೂ ಸಮಾನರು' ಎಂಬುದಾಗಿದೆ.

ಶ್ರಾವಣ ಶನಿವಾರದಂದು ಮನೆ ಮನೆಗೂ ದಾಸಯ್ಯ ಹೋಗಿ ಜಾಗಟೆ ಬಾರಿಸಿ ಶಂಖನಾದ ಮಾಡಿದಾಗ, ಭವನಾಶಿಗೆ ಭಿಕ್ಷೆ ನೀಡುವರು. ಭಿಕ್ಷೆ ಬೇಡುವುದೆಂದರೆ ನಮ್ಮೊಳಗಿನ ಅಹಂಕಾರವನ್ನು ಮೆಟ್ಟಿ ನಿಲ್ಲುವುದು. ಈ ದೃಶ್ಯಗಳು ಗ್ರಾಮ ಮತ್ತು ನಗರ ಗಳಲ್ಲಿ ಇಂದಿಗೂ

ಕಂಡುಬರುತ್ತವೆ. ಜನರಲ್ಲಿ ದೈವದ ಬಗೆಗಿರುವ ನಂಬಿಕೆ, ಶ್ರದ್ಧೆ, ಭಯಭಕ್ತಿಗಳು ಈ ಆಚರಣೆಗಳಲ್ಲಿ ಕಾಣಬಹುದಾಗಿದೆ ಅದರಲ್ಲಿಯೂ ಕಡೇ ಶ್ರಾವಣ ಶನಿವಾರಕ್ಕೆ ಹೆಚ್ಚಿನ ಪ್ರಾಧಾನ್ಯತೆ ಇದೆ. ಅಂದು ಸಿಹಿ ಅಡುಗೆ ಮಾಡಿ ದೇವರಿಗೆ ಎಡೆಹಾಕಿ ಹಬ್ಬದ ಆಚರಣೆ ಮಾಡುತ್ತಾರೆ. ಶಿವಭಕ್ತರು ಹಣೆಗೆ ವಿಭೂತಿ ಧರಿಸಿ, ಶ್ರಾವಣ ಸೋಮವಾರದಂದು ಈಶ್ವರ, ಶಿವ, ನೀಲಕಂಠ, ಮಾದೇಶ್ವರ, ಮಹೇಶ್ವರ ಮುಂತಾದ ದೇವಸ್ಥಾನಗಳಿಗೆ ಹೋಗಿ ವಿಶೇಷ ಪೂಜೆ ಸಲ್ಲಿಸುವರು.

ಶ್ರಾವಣ ಮಾಸವು ಧ್ಯಾನ, ಜಪ, ಯೋಗ ಸಾಧನೆಗೆ ಬಹು ಪ್ರಾಶಸ್ತ್ಯವಾದ ಮಾಸ. ಈ ಮಾಸದಲ್ಲಿ ಮೂವತ್ತು ದಿನವೂ ನಿತ್ಯ ತಪ್ಪದೆ ಯಾರು ಸ್ನಾನವಂದನಾದಿಗಳಿಂದ ಶಿವ ಪೂಜೆ ಮಾಡುತ್ತಾರೆಯೋ ಅವರು ಪಾಪಗಳಿಂದ ಪರಾಭವವಾಗಿ ಅವರಿಗೆ ಇಹದಲ್ಲಿ ಸುಖವೂ, ಪರದಲ್ಲಿ ಉತ್ತಮ ಸದ್ಗತಿಯೂ ಪ್ರಾಪ್ತವಾಗುತ್ತದೆಂದು 'ಸ್ಕಂದ ಪುರಾಣ'ದಲ್ಲಿ ನಿರೂಪಿಸಲಾಗಿದೆ.

ಮೈಸೂರು ನಗರದ ಕೆ.ಆರ್.ಆಸ್ಪತ್ರೆ ರಸ್ತೆಯ ಶ್ರೀ ಶನೇಶ್ವರಸ್ವಾಮಿ ಭಕ್ತಮಂಡಳಿ ವತಿಯಿಂದ, ಕಡೇ ಶ್ರಾವಣ ಶನಿವಾರದಂದು ಸ್ವಾಮಿಯ 44ನೇ ವರ್ಷದ ಪೂಜಾ ಮಹೋತ್ಸವದ ಅಂಗವಾಗಿ ವಿಶೇಷ ಪೂಜಾ ಕೈಂಕರ್ಯವನ್ನು ಏರ್ಪಡಿಸಲಾಗಿತ್ತು. ಮುಂಜಾನೆಯಿಂದ ವಿಶೇಷ ಪೂಜೆಗಳು ನೆರವೇರಿಸುತ್ತಿದ್ದರು. ಭಕ್ತರು ತಾವು ತಂದಿದ್ದ ಹರಳು ಎಣ್ಣೆ ಮತ್ತು ಎಳ್ಳುಬತ್ತಿಗಳನ್ನು ಹಾಕಿ ನಮ್ಮ ಕಷ್ಟಕಾರ್ಪಣ್ಯಗಳನ್ನು ನಿವಾರಿಸು ಎಂದು ಕೇಳಿಕೊಂಡು ದೀಪ ಹಚ್ಚುತ್ತಿದ್ದದ್ದು ವಿಶೇಷವಾಗಿತ್ತು. ಭಕ್ತರು ಸಾಗರೋಪಾದಿಯಾಗಿ ಸೇರಿ ಜಾತ್ರೆ ಮಹೋತ್ಸವದಂತೆ ಕಾಣುತ್ತಿತ್ತು. ಕೆಲವರು ಶನೇಶ್ವರಸ್ವಾಮಿಗೆ ತುಳಸಿ ಹಾರವನ್ನು ಹಾಕಿ ಪೂಜೆ ಸಲ್ಲಿಸುತ್ತಿದ್ದರು. ದೇವಾಲಯದ ಹೊರ ಹಾಗೂ ಒಳ ಆವರಣಗಳನ್ನು ವಿವಿಧ ಹೂಗಳಿಂದ ಅಲಂಕರಿಸಲಾಗಿರುತ್ತದೆ. ಕೆಲವರು ತಾವೇ ಪ್ರಸಾದ ತಯಾರಿಸಿಕೊಂಡು ತಂದು ಅಲ್ಲಿ ದರ್ಶನ ಪಡೆದು ಹೊರ ಬರುತ್ತಿದ್ದ ಭಕ್ತರಿಗೆ ಹಂಚುತ್ತಿರುತ್ತಾರೆ. ಮೊಸರನ್ನ, ಪುಳಿಯೊಗರೆ, ಅವಲಕ್ಕಿ, ಬಾಳೆಹಣ್ಣಿನ ರಸಾಯನ, ಎಳ್ಳಿನಿಂದ ಮಾಡಿದ ಸಿಹಿ ಉಂಡೆ, ಪಾಯಸ ಮುಂತಾದ ಪ್ರಸಾದಗಳನ್ನು ನೀಡುವರು. ಅಂದೇ ರಾತ್ರಿ 10.30ಕ್ಕೆ ದೇವಾಲಯದ ಎದುರು 'ಶ್ರೀ ಶನಿಪ್ರಭಾವ' ಅಥವಾ 'ರಾಜಾ ವಿಕ್ರಮ' ನಾಟಕ ಪ್ರದರ್ಶನ ನಡೆಯುತ್ತದೆ. ಮಾರನೆಯ ದಿನ ದೇವಾಲಯದ ಎದುರು ಹಸಿರು ಚಪ್ಪರದ ಕೆಳಗೆ ಅನ್ನಸಂತರ್ಪಣೆಯನ್ನು ಏರ್ಪಡಿಸಲಾಗುತ್ತದೆ.

**ನಾಗರ ಪಂಚಮಿ** : ಹಬ್ಬಗಳನ್ನು ಹೊತ್ತು ತರುವ ನಾಗರ ಪಂಚಮಿಯನ್ನು ಮೈಸೂರು ನಗರದ ದೇವಾಲಯಗಳಲ್ಲಿ ಭಕ್ತಿ ಹಾಗೂ ಸಂಭ್ರಮದಿಂದ ಆಚರಿಸಲಾಗುತ್ತದೆ. ನಗರದೆಲ್ಲೆಡೆ ದೇವಸ್ಥಾನದ ಆವರಣದಲ್ಲಿರುವ ನಾಗರಕಲ್ಲಿಗೆ ಭಕ್ತರು ಹಾಲೆರೆದು ಹರಕೆ ತೀರಿಸುವರು. ಆಷಾಢದ ಅನಂತರ

ಶ್ರಾವಣ ಮಾಸ ಆರಂಭವಾಗುತ್ತಿದ್ದಂತೆ ಒಂದರ ನಂತರ ಒಂದರಂತೆ ಹಬ್ಬಗಳು ಸಾಲಾಗಿ ಬರುತ್ತವೆ. ಅದರಲ್ಲಿ ಮೊದಲಿಗೆ 'ನಾಗರ ಪಂಚಮಿ' ಮೊದಲ ಹಬ್ಬದ ಪೂಜೆಯಾಗಿದೆ. ಇದು ಶುಭ ಸೂಚಕವಾಗಿದೆ ಎಂಬುದು ಜನಸಾಮಾನ್ಯರ ನಂಬಿಕೆಯಾಗಿದೆ. ಹಳೆಯ ಶಾಪ ವಿಮೋಚನೆ ಯಾಗಲೆಂದು ದಂಪತಿಗಳು ಹುತ್ತ ಹಾಗೂ ನಾಗರ ಕಲ್ಲಿಗೆ ಹಾಲೆರೆದು ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವುದು ಸಂಪ್ರದಾಯವಾಗಿದೆ.

ಧನ್ವಂತ್ರಿ ರಸ್ತೆಯಲ್ಲಿರುವ ಅಮೃತೇಶ್ವರ ದೇವಸ್ಥಾನಕ್ಕೆ ಭಕ್ತರು ಬೇಟಿ ನೀಡಿ ಪೂಜೆ ಸಲ್ಲಿಸುತ್ತಿದ್ದದು ಕಂಡುಬಂತು. ದೇವಸ್ಥಾನದ ಆವರಣದಲ್ಲಿರುವ ನಾಗರ ವಿಗ್ರಹಗಳಿಗೆ ಹಾಲೆರೆದು ಪೂಜೆ ಸಲ್ಲಿಸಿ ಕೈ ಮುಗಿಯುತ್ತಿದ್ದದ್ದು ಸಾಮಾನ್ಯವಾಗಿತ್ತು. ಅಂತೆಯೇ ವಿಶ್ವೇಶ್ವರಯ್ಯನಗರದ ಸುಬ್ರಹ್ಮಣ್ಯೇಶ್ವರ ದೇವಸ್ಥಾನ, ಕೆ.ಇ.ಬಿ.ಸರ್ಕಲ್ ಚಂದ್ರಮೌಳೇಶ್ವರ, ಬಂದಂತಮ್ಮ ದೇವಾಲಯದ ಪಕ್ಕದ ನಾಗರಕಲ್ಲು, ತೊಣಚಿಕೊಪ್ಪಲಿನ ನಾಗಲಿಂಗೇಶ್ವರ ದೇವಾಲಯ ಮುಂತಾದ ಕಡೆಗಳಲ್ಲಿ ನಾಗರಪಂಚಮಿಯ ಪೂಜಾ ಕೈಂಕರ್ಯಗಳು ನಡೆಯುತ್ತಿದ್ದವು.

**ವೈಕುಂಠ ಏಕಾದಶಿ :** ಪುಷ್ಯಮಾಸದಲ್ಲಿ ಬರುವ ಏಕಾದಶಿ ಉಪವಾಸ ವ್ರತವು ವಿಷ್ಣು ದೇವಾಲಯಗಳಲ್ಲಿನ ಪೂಜೆಗೆ ಪ್ರಶಸ್ತವಾದ ಕಾಲ. ಅಂದು ವೈಷ್ಣವ ದೇವಾಲಯಗಳಲ್ಲಿ ಸಾವಿರಾರು ಭಕ್ತರು ನೆರೆಯುತ್ತಾರೆ. ಸಾಮಾನ್ಯವಾಗಿ ವರ್ಷವೆಲ್ಲ ಮುಚ್ಚಿರುವ ದೇವಸ್ಥಾನಗಳ ವೈಕುಂಠ ದ್ವಾರವು ಆ ದಿನ ತೆರೆಯಲ್ಪಡುತ್ತದೆ. ಆ ದ್ವಾರದ ಮೂಲಕ ಬಂದು ದೇವರ ದರ್ಶನ ಮಾಡುವವರಿಗೆ ವಿಷ್ಣುಧಾಮವಾದ ವೈಕುಂಠವು ಪ್ರಾಪ್ತಿಯಾಗುವುದೆಂಬ ನಂಬಿಕೆಯಿದೆ. ವ್ರತಭ್ರಷ್ಟನಾಗಿದ್ದ ರುಕ್ಮಾಂಗದನನ್ನು ವಿಷ್ಣುವು ಉದ್ಧರಿಸಿ ಅಂದು ವೈಕುಂಠಕ್ಕೆ ಕರೆದೊಯ್ದ ದಿನ. ಆದ್ದರಿಂದ ಅಂದು 'ವೈಕುಂಠ ಏಕಾದಶಿ' ಆಯಿತು. ಶ್ರೀಕೃಷ್ಣ ಭಗವದ್ಗೀತೆಯನ್ನು ಬೋಧಿಸಿದ್ದು ವೈಕುಂಠ ಏಕಾದಶಿ ದಿನವೇ. ಆ ದಿನ ಗೀತಾ ಜಯಂತಿಯನ್ನು ಆಚರಿಸಲಾಗುತ್ತದೆ.

ವೈಕುಂಠ ಏಕಾದಶಿಯಂದು ಮೈಸೂರು ನಗರದಲ್ಲಿನ ಹಲವು ದೇವಾಲಯಗಳಲ್ಲಿ ಭಕ್ತರು ಶ್ರೀ ವೆಂಕಟೇಶ್ವರಸ್ವಾಮಿಯ ದರ್ಶನ ಪಡೆದು ಪುನೀತರಾಗುತ್ತಾರೆ. ಧನುರ್ಮಾಸದಲ್ಲಿ ಬರುವ ವೈಕುಂಠ ಏಕಾದಶಿ ದಿನ ಸ್ವರ್ಗದ ಬಾಗಿಲು ತೆರೆಯಲಿದೆ ಎಂಬ ಪ್ರತೀತಿ ಬಹಳ ಹಿಂದಿನಿಂದಲು ಇದೆ. ಆದುದರಿಂದ ಈ ದಿನ ಶ್ರೀ ವೆಂಕಟೇಶ್ವರನ ದರ್ಶನ ಮಾಡಿದರೆ ಮೋಕ್ಷ ಪ್ರಾಪ್ತಿಯಾಗಲಿದೆ ಎಂಬ ನಂಬಿಕೆ ಜನಸಮುದಾಯದಲ್ಲಿದೆ.

ಮೈಸೂರು ನಗರದ ಪಾರಂಪರಿಕ ದೇವಾಲಯಗಳಲ್ಲಿ ಒಂದಾದ ಒಂಟಿಕೊಪ್ಪಲಿನ ಶ್ರೀ ವೆಂಕಟೇಶ್ವರ ದೇವಾಲಯದಲ್ಲಿ ವೈಕುಂಠ ಏಕಾದಶಿಯ ದಿನ ಮುಂಜಾನೆ ನಾಲ್ಕು ಗಂಟೆ ಯಿಂದಲೇ ಧನುರ್ಮಾಸದ ವಿಶೇಷ ಪೂಜೆ ನೆರವೇರಿಸುತ್ತಾರೆ. ಅಲ್ಲದೆ ವಿಶೇಷ ಅಲಂಕಾರ ಮಾಡುವುದರೊಂದಿಗೆ, ವಜ್ರಾಂಗಿ ಆಭರಣವನ್ನು ಹಾಕಲಾಗುತ್ತದೆ. ಹಲವು ಬಗೆಯ ಅಭಿಷೇಕ ಗಳನ್ನು ನೆರವೇರಿಸುತ್ತಾರೆ. ಭಕ್ತರು ಒಳ ಪ್ರವೇಶಿಸಲು ಸ್ವರ್ಗದ ಬಾಗಿಲನ್ನು ನಿರ್ಮಿಸಲಾಗುತ್ತದೆ. ದೇವಾಲಯದ ಪ್ರಾಕಾರದಲ್ಲಿ ಮೊದಲಿಗೆ ಶ್ರೀ ವೆಂಕಟೇಶ್ವರನನ್ನು ಹಲವು ಬಗೆಯ ವಾಹನಗಳಲ್ಲಿ ಪ್ರತಿಷ್ಠಾಪಿಸಿ ಉತ್ಸವ ನೆರವೇರಿಸಲಾಗುತ್ತದೆ. ಉದಾಹರಣೆಗೆ: ಶೇಷವಾಹನೋತ್ಸವ, ಉಯ್ಯಾಲೋತ್ಸವಗಳು ನಡೆದ ನಂತರ ಮಹಾಮಂಗಳಾರತಿ ಮಾಡಿ ಭಕ್ತರಿಗೆ ಸ್ವರ್ಗದ ಬಾಗಿಲಿನ ಮೂಲಕ ಒಳ ಪ್ರವೇಶಿಸಿ ದರ್ಶನ ಪಡೆಯಲು ಅನುವು ಮಾಡಿಕೊಡಲಾಗುತ್ತದೆ. ರಾತ್ರಿ ಸುಮಾರು ಹನ್ನೆರಡು ಗಂಟೆಯವರೆಗೂ ಭಕ್ತರು ದರ್ಶನ ಪಡೆಯುತ್ತಾರೆ. ಅಂದು ಪ್ರಸಾದವಾಗಿ ಕೇಸರಿಬಾತ್, ಪೊಂಗಲ್, ಉಪ್ಪಿಟ್ಟು, ಹೆಸರುಕಾಳು, ಕಡಲೆಕಾಳು ಉಸುಲಿಯನ್ನು ವಿತರಿಸಲಾಗುತ್ತದೆ. ಭಕ್ತರು ಶ್ರೀ ವೆಂಕಟೇಶ್ವರಸ್ವಾಮಿಗೆ ತುಳಸಿಯ ಹಾರವನ್ನು ತಂದು ಸಮರ್ಪಿಸಿ ಅರ್ಚನೆಯನ್ನು ಮಾಡಿಸುತ್ತಿದ್ದು ಹೆಚ್ಚಾಗಿ ಕಂಡುಬರುತ್ತದೆ. ಗೋವಿಂದ..ಗೋವಿಂದ... ಎಂದು ಕೂಗುತ್ತ ದೇವರ ದರ್ಶನ ಮಾಡುತ್ತಿರುತ್ತಾರೆ. ಆಗಾಗ ಶಂಖ, ಜಾಗಟೆಯ ಸದ್ದು ಮಂಗಳಾರತಿಯ ಸಮಯದಲ್ಲಿ ಕೇಳಿಸುತ್ತಿರುತ್ತದೆ.

ಮೈಸೂರಿನ ನಂಜನಗೂಡು ರಸ್ತೆಯಲ್ಲಿರುವ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀದತ್ತ ವೆಂಕಟೇಶ್ವರಸ್ವಾಮಿ ದೇವಸ್ಥಾನದಲ್ಲಿ ವೈಕುಂಠ ಏಕಾದಶಿ ಪ್ರಯುಕ್ತ ವಿಶೇಷ ಪೂಜಾ ಧಾರ್ಮಿಕ ವಿಧಿ–ವಿಧಾನಗಳು ನಡೆಯುತ್ತವೆ. ದೇವಸ್ಥಾನದ ಉತ್ತರ ದ್ವಾರದಲ್ಲಿ ಸ್ವರ್ಗದ ಬಾಗಿಲನ್ನು ನಿರ್ಮಿಸಿ ಅದರ ಮೂಲಕ ಭಕ್ತಾದಿಗಳಿಗೆ ಒಳ ಪ್ರವೇಶಿಸಲು ಅನುವು ಮಾಡಿಕೊಡಲಾಗುತ್ತದೆ. ಅಲ್ಲಿಂದ ಸಾಗಿ ದರ್ಶನ ಪಡೆದು ಪುನಿತರಾದ ಭಕ್ತಾದಿಗಳಿಗೆ ಪುಳಿಯೊಗರೆ ವಿತರಿಸಲಾಗುತ್ತದೆ.

ಈ ಮೇಲಿನ ದೇವಾಲಯಗಳೆ ಅಲ್ಲದೆ ವಿಜಯನಗರದ ಯೋಗನರಸಿಂಹಸ್ವಾಮಿ, ಜಯನಗರದ ಶ್ರೀ ವೆಂಕಟೇಶ್ವರಸ್ವಾಮಿ ದೇವಾಲಯಗಳಲ್ಲಿಯೂ ಇದೇ ಮಾದರಿಯಲ್ಲಿ ಪೂಜಾ ಕೈಂಕರ್ಯಗಳು ನೆರವೇರುತ್ತದೆ.

**ರಥಸಪ್ತಮಿ ಹಬ್ಬ ಆಚರಣೆ** : ಭಾರತೀಯ ಕಾಲಮಾನದನ್ವಯ ಸೂರ್ಯನು ಪಥ ಬದಲಿಸುವ ಸಮಯವಾಗಿದೆ. ಇದನ್ನು ರಥಸಪ್ತಮಿ ಎಂದು ಕರೆಯಲಾಗುತ್ತದೆ. ಇದೇ ದಿನ ಸೂರ್ಯ ತನ್ನ ಏಳು ಚಕ್ರಗಳ ರಥಕ್ಕೆ ಏಳು ಕುದುರೆಗಳನ್ನು ಹೂಡಿ ರಥವನ್ನೇರಿ ಉತ್ತರಾಯಣದತ್ತ ಸಾಗುತ್ತಾನೆ ಎಂಬ ನಂಬಿಕೆಯಿದೆ. ಅಲ್ಲದೆ ದಿನದಿಂದ ದಿನಕ್ಕೆ ಸೂರ್ಯ ತನ್ನ ಪ್ರಖರತೆಯನ್ನು ಇಮ್ಮಡಿಗೊಳಿಸಿ ಕೊಳ್ಳುತ್ತಾನೆ ಎಂಬ ಆಸ್ತಿಕವಲಯದ ವಾದಕ್ಕೆ ಕಾಕತಾಳೀಯವೆಂಬಂತೆ ಅಂದಿನ ದಿನದಿಂದ ಉಷ್ಣತೆಯ ಪ್ರಮಾಣ ಅಧಿಕವಾಗುತ್ತಾ ಸಾಗುತ್ತದೆ. ಪರಿಣಾಮವಾಗಿ ಬೇಸಿಗೆ ಕಾಲ ಪ್ರಾರಂಭವಾಗುತ್ತದೆ ಎಂಬ ವೈಜ್ಞಾನಿಕ, ನೈಸರ್ಗಿಕ ವಾದವನ್ನು ಕಾಣಬಹುದು.

ರಥಸಪ್ತಮಿಯ ದಿನ ಚೈತನ್ಯವಾದ ನವರಶ್ಮಿಗಳು ಹೊರಹೊಮ್ಮುವುದರಿಂದ ಆ ರಶ್ಮಿಯು ದೇವಾಲಯಗಳಲ್ಲಿರುವ ದೇವರಿಗೂ ಸ್ಪರ್ಶಿಸಲಿ ಎನ್ನುವ ಭಾವವಿದೆ. ಈ ದಿನದಂದು ಸರ್ವದೇವತೆಗಳ ದರ್ಶನ ಭಾಗ್ಯವು ಏಕ ಕಾಲದಲ್ಲಿ ಪ್ರಾಪ್ತವಾಗಲಿ ಎಂಬ ಧ್ಯೇಯವಿದೆ. ಈ ಹಿನ್ನೆಲೆಯಲ್ಲಿ ಮೈಸೂರು ನಗರದ ಹಲವಾರು ದೇವಾಲಯಗಳಲ್ಲಿ ಪೂಜೆ ಪುನಸ್ಕಾರಗಳು ನಡೆಯುತ್ತವೆ. ಅಂತೆಯೇ ಅಂಬಾವಿಲಾಸ ಅರಮನೆಯ ಆವರಣದಲ್ಲಿ ಗಾಯಿತ್ರಿ ದೇವಿ, ಭುವನೇಶ್ವರಿ ದೇವಿ, ತ್ರಿಣೇಶ್ವರ, ಲಕ್ಷ್ಮಿನಾರಾಯಣಸ್ವಾಮಿ, ಕೋಟೆ ವೆಂಕಟರಮಣಸ್ವಾಮಿ, ಶ್ವೇತ ವರಾಹಸ್ವಾಮಿ, ಪ್ರಸನ್ನ ಕೃಷ್ಣಸ್ವಾಮಿ, ಲಕ್ಷ್ಮಿದೇವಿ ದೇವಾಲಯಗಳ ಉತ್ಸವ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗುತ್ತದೆ. ಎಂಟು ಮೂರ್ತಿಗಳಿಗೆ ಸೂರ್ಯಮಂಡಲ ಮತ್ತು ನಾಗಮಂಡಲಗಳಿಂದ ಅಲಂಕರಿಸಿ ಪೂಜಿಸಲಾಗುತ್ತದೆ. ಈ ದಿನದ ವೈಶಿಷ್ಟ್ಯವನ್ನು ಅರಿತಿದ್ದ ಮಹಾರಾಜರು ಜನ ಸಾಮಾನ್ಯರಿಗೆ ಈ ಆಚರಣೆಯನ್ನು ತಲುಪಿಸಲು ಪ್ರಯತ್ನಿಸಿದರು. ಈ ಹಿನ್ನೆಲೆಯಲ್ಲಿ ಅಸ್ತಿತ್ವಕ್ಕೆ ಬಂದ ಈ ಆಚರಣೆ ಇಂದಿಗೂ ಅನೂಚಾನವಾಗಿ ನಡೆದು ಬರುತ್ತಿದೆ.

**ಬನ್ನಿಹಬ್ಬ :** 'ವಿಜಯದಶಮಿ'ಯನ್ನು 'ಬನ್ನಿಹಬ್ಬ' ಅಥವಾ 'ಬನ್ನಿಮುಡಿ'ಯುವುದು ಎಂದು ಕರೆದು ಆಚರಣೆ ಮಾಡುವ ಪದ್ಧತಿ ಕರ್ನಾಟಕದಲ್ಲಿದೆ. ನವರಾತ್ರಿಯ ಕಾಲದಲ್ಲಿ ಪ್ರಕೃತಿ ಸಿರಿ ಸಂಪತ್ತಿನಿಂದ ಕೂಡಿರುತ್ತದೆ. ಭೂಮಿ ಉಲ್ಲಾಸಗೊಳ್ಳುವ ಕಾಲವದು.

ನವರಾತ್ರಿಯ ನವಧಾತ್ರಿಯ
ಈ ಶ್ಯಾಮಲ ವನಧಿಯಲಿ
ಹಸಿರಾದುದು ಕವಿಯಾತ್ಮಂ
ರಸಪಾನ ಸ್ನಾನದಲಿ

ಎಂದು ಕುವೆಂಪುರವರು ನವರಾತ್ರಿಯ ಕಾಲದ ಪ್ರಕೃತಿ ಸಿರಿಯನ್ನು ಕುರಿತು ಮನತುಂಬಿ ಹಾಡಿದ್ದಾರೆ. ಎಲ್ಲೆಲ್ಲಿಯೂ ಅಚ್ಚ ಹಸಿರಿನಿಂದ ಕಂಗೊಳಿಸುವ ನವರಾತ್ರಿಯ ತಿಂಗಳು ರೈತನ ಬಾಳಿಗೆ ಸಂಭ್ರಮವನ್ನು ಉಂಟುಮಾಡುತ್ತದೆ. ಕನ್ನಡಿಗರು 'ನಾಡಹಬ್ಬ'ವೆಂದು ಹೆಮ್ಮೆಯಿಂದ ಆಚರಿಸುವ ಉತ್ಸವ. ನವರಾತ್ರಿ ಉತ್ಸವ ಹಾಗೂ ಹತ್ತನೆಯ ದಿವಸದ ವಿಜಯದಶಮಿಯೂ ಸೇರಿ ದಸರಾ ಹಬ್ಬವನ್ನು ಆಚರಿಸುತ್ತಾರೆ. ಜಗನ್ಮಾತೆಯಾದ ಆದಿಶಕ್ತಿಯ ಉಪಾಸನೆ ನವರಾತ್ರಿಯಲ್ಲಿ ನಡೆಯುತ್ತದೆ. ನವ ಎಂದರೆ ಒಂಬತ್ತು. ಒಂಬತ್ತು ಎಂಬ ಸಂಖ್ಯೆಗೆ ಜನಪದರಲ್ಲಿ ವಿಶೇಷ ಸ್ಥಾನವಿದೆ. ಒಂಬತ್ತುದಿನಗಳು ನಡೆದು ಕೊನೆಗೆ ಸಮಾರೋಪವಾಗಿ, ಹತ್ತನೆದಿನ 'ಬನ್ನಿಯ ಪೂಜೆ' ನಡೆಯುತ್ತದೆ. ಬನ್ನಿಮರವು ಸಾಮಾನ್ಯವಾದುದಲ್ಲ. ಬನ್ನಿಯನ್ನು 'ಬನ್ನಿ ಮಹಾಕಾಳಿ', 'ಲಕ್ಷ್ಮಿ' ಎಂದು ಕರೆಯುವರು.

**ಬಂದಂತಮ್ಮ ಕಾಳಮ್ಮನ ಹಬ್ಬ :** ಆಷಾಢ ಮಾಸದ ಉಪವಾಸ ಹಬ್ಬದ ಪ್ರಯುಕ್ತ ನಡೆಯುವ ಈ ಹಬ್ಬವು ಅತ್ಯಂತ ವಿಶೇಷವಾಗಿದ್ದು, ಜಾತ್ರೋಪಾದಿಯ ರೂಪದಲ್ಲಿ ನಡೆಯುತ್ತದೆ. ಪ್ರತಿ ವರ್ಷ ಜುಲೈ ತಿಂಗಳಿನ ಆಷಾಢ ಮಾಸದ ಉಪವಾಸ ಹಬ್ಬದ ಪ್ರಯುಕ್ತ ದೇವಿಯ ಮೂರ್ತಿಯನ್ನು ಜೇಡಿಮಣ್ಣಿನಿಂದ ನಿರ್ಮಿಸಿ ಹಸಿರು ಚಪ್ಪರ, ತಳಿರು ತೋರಣಗಳಿಂದ ಸಿಂಗರಿಸಿ, ಭಕ್ತಿಯಿಂದ ಪೂಜಿಸಿ ಮೊದಲನೆಯ ದಿನದಂದು ಕೆ.ಜಿ.ಕೊಪ್ಪಲಿನ ಗ್ರಾಮಸ್ಥರು ಪ್ರತಿ ಮನೆಯಿಂದ ಸಿಹಿ ಊಟವನ್ನು ತಯಾರಿಸಿ ದೇವಿಗೆ ಅರ್ಪಿಸುತ್ತಾರೆ. ಮರುದಿನ ಅಮ್ಮನವರಿಗೆ ಕುರಿ, ಕೋಳಿಗಳನ್ನು ಬಲಿಕೊಡಲಾಗುತ್ತದೆ. ಹೀಗೆ ಬಲಿಕೊಟ್ಟ ಪ್ರಾಣಿಗಳ ಮಾಂಸದಿಂದ ಗ್ರಾಮದ ಗೃಹಿಣಿಯರು ದೇವಾಲಯದ ಆವರಣದಲ್ಲೇ ದೇವಿಗೆ ಪ್ರಿಯವಾದ ಮಾಂಸದ ಆಹಾರವನ್ನು ತಯಾರಿಸಿ ಅರ್ಪಿಸುತ್ತಾರೆ. ಹೀಗೆ ಅರ್ಪಿಸಿದ ಪ್ರಸಾದವನ್ನು ಯಾರು ಸಹ ತೆಗೆದುಕೊಳ್ಳುವಂತಿಲ್ಲ. ಅಮ್ಮನವರಿಗೆ ಪೂಜೆಸಲ್ಲಿಸಿದ ಅನಂತರ ದೂರದಲ್ಲಿ ಒಂದು ಹಳ್ಳವನ್ನು ತೆಗೆದು, ಪ್ರಸಾದವನ್ನು ಅಮ್ಮನವರ ಮುಂದೆ ಇಟ್ಟು ಪೂಜೆ ಮಾಡಿ ತಮ್ಮ ಮನೆಗೆ ತೆರಳುತ್ತಾರೆ. ಅಮ್ಮನವರ ಮುಂದೆ ಇರಿಸಿದ ಪ್ರಸಾದವನ್ನು ಅಲ್ಲೆ ನೆರೆದಿರುವ ಸಂಘದ ಯುವಕರು ಹಳ್ಳದಲ್ಲಿ ಹಾಕಿ ಪೂಜೆಸಲ್ಲಿಸಿ ಮಣ್ಣಿನಿಂದ ಮುಚ್ಚುತ್ತಾರೆ. ಗೃಹಿಣಿಯರು ತಾವು ಮಾಡಿದ ಅಡುಗೆಯನ್ನು ದೇವಿಗೆ ಅರ್ಪಿಸಿ ಉಳಿದ ಅಡುಗೆಯನ್ನು ಮನೆಗೆ ತಂದು ಎಲ್ಲರೂ ದೇವಿಯ ಪ್ರಸಾದವೆಂದು ಸ್ವೀಕರಿಸುತ್ತಾರೆ.

ಹಬ್ಬದ ದಿನದಂದು ಅಂದರೆ ಅಂದು ಸಂಜೆ ದೇವಿಗೆ ವಿಶೇಷ ಅಲಂಕಾರವನ್ನು ಮಾಡಲಾಗುತ್ತದೆ. ಅದನ್ನು ಕಣ್ತುಂಬಿಕೊಂಡು ದೇವಿಯ ದರ್ಶನಪಡೆಯಲು ಭಕ್ತಾದಿಗಳು

ಸಾವಿರಾರು ಸಂಖ್ಯೆಯಲ್ಲಿ ಬರುತ್ತಾರೆ. ಪ್ರತಿವರ್ಷ ಆಗಸ್ಟ್ ತಿಂಗಳಿನಲ್ಲಿ ದೇವಿಗೆ ಕುಂಭಾಭಿಷೇಕವನ್ನು ಮಾಡಿ ಅನ್ನ ಸಂತರ್ಪಣೆಯನ್ನು ಏರ್ಪಡಿಸುತ್ತಾರೆ.

**ಚಾಮುಂಡೇಶ್ವರಿ ಅಮ್ಮನವರ ಹಬ್ಬ (ಕನ್ನೇಗೌಡನ ಕೊಪ್ಪಲು) :** ಪ್ರತೀವರ್ಷ ಜನವರಿ ತಿಂಗಳ ರಥಸಪ್ತಮಿದಿನ(ಮಾಘ ಶುದ್ಧ ಸಪ್ತಮಿ) ಚಾಮುಂಡೇಶ್ವರಿ ಅಮ್ಮನವರಿಗೆ ಕುಂಭಾಭಿಷೇಕ ಮತ್ತು ವಿಶೇಷ ಪೂಜೆಯನ್ನು ಒಳಗೊಂಡಂತೆ ಕನ್ನೇಗೌಡನ ಕೊಪ್ಪಲಿನ ಎಲ್ಲಾ ಜನತೆಗೂ ಅನ್ನಸಂತರ್ಪಣೆಯನ್ನು ಏರ್ಪಡಿಸುತ್ತಾರೆ. ಭಕ್ತಾದಿಗಳು ಹಣಕಾಸು, ಧವಸ ದಾನ್ಯಗಳ ರೂಪದಲ್ಲಿ ತಮ್ಮ ಹರಕೆಯನ್ನು ತೀರಿಸುತ್ತಾರೆ. ಈ ರೂಪದಲ್ಲಿ ಸಂಗ್ರಹವಾದ ಮತ್ತು ಕೆಲವು ಭಕ್ತರು ತಾವೇ ಒಳಿತಿಗಾಗಿ ತಾಯಿ ಆಶೀರ್ವದಿಸಿದ್ದಾಳೆಂದು ಅನ್ನಸಂತರ್ಪಣೆಗೆ ಸಹಾಯ ಹಸ್ತ ನೀಡುತ್ತಾರೆ. ಅಲ್ಲದೆ ತಾವೇ ಮುಂದೆ ನಿಂತು ಇದನ್ನು ನಡೆಸಿಕೊಡುತ್ತಾರೆ. ಇದು ಹಿಂದೆ ಜನಪದರೆಲ್ಲರೂ ಒಂದುಗೂಡಿ ಆಚರಿಸುತ್ತಿದ್ದರಿಂದ, ಕೆಲವು ಆಚರಣೆಗಳನ್ನು ಹಾಗೂ ತಮ್ಮನ್ನು ದುಷ್ಟ ಶಕ್ತಿಗಳಿಂದ ಕಾಪಾಡುತ್ತಿದ್ದ ತಾಯಿಯ ಬಗ್ಗೆ ನಂಬಿಕೆಯಿಂದ ನಡೆದು ಕೊಂಡಿರುವುದು ಇಲ್ಲಿ ಮರುಕಳಿಸಿ, ಪರಂಪರೆಯಿಂದ ಪರಂಪರೆಗೆ ಇದು ಸಾಗಿ ಬಂದಿರುವುದನ್ನು ತಿಳಿಸುತ್ತದೆ.

**ಜೋಡಿಮಾರಮ್ಮ ಹಬ್ಬ :** 'ಜೋಡಿಮಾರಮ್ಮ ಪಡುವಾರಹಳ್ಳಿ' ಜೋಡಿಮಾರಮ್ಮ ದೇವರ ಹಬ್ಬದ ಮೊದಲ ಹಂತ ದೇವರನ್ನು ತರುವುದಾಗಿದೆ. ಮೊದಲ ಶುಕ್ರವಾರದ ರಾತ್ರಿ ಹನ್ನೆರಡು ಗಂಟೆಗೆ ದೇವರನ್ನು ತರಲಾಗುವುದು. ಮಾರಿಗುಡಿಯಲ್ಲಿರುವ ನಂದಿ ಮರದ ದೇವರ ಮೂರ್ತಿಯನ್ನು ಅಲ್ಲಿಂದ ತೆಗೆಯುವಂತಿಲ್ಲ. ಆದ್ದರಿಂದ ಚಿಕ್ಕರಸಿನಾಯಕರ ಮನೆಯಲ್ಲಿರುವ ಜೋಡಿಮಾರಮ್ಮ ದೇವರ ಮೂಲ ಆವಾಸ ಸ್ಥಾನವಾದ ದೇವರ ಕೋಣೆಯಲ್ಲಿ ಬಿದಿರು ಬುಟ್ಟಿಯಲ್ಲಿ ಇಟ್ಟಿರುವ ಕೊಳಗವನ್ನು ಪೂಜಿಸಿ ಬಸವನಗುಡಿಗೆ ತರಲಾಗುತ್ತದೆ. ಕೊಳಗ ಎಂದರೆ ಜೋಡಿಮಾರಮ್ಮ ದೇವರ ವಿಗ್ರಹಗಳು. ಬಸವನಗುಡಿಯಿಂದ ದೇವರನ್ನು ನಾಯಕ ಒಕ್ಕಲಿನವರು ಹೊತ್ತುಕೊಂಡು ಊರಿನ ತುಂಬಾ ಮೆರವಣಿಗೆ ಮಾಡಿ ಜೋಡಿಮಾರಮ್ಮನವರ ದೇವಸ್ಥಾನದಲ್ಲಿ ಪಟ್ಟಕ್ಕೆ ಕೂರಿಸುವರು. ಪಟ್ಟಕ್ಕೆ ಕೂರಿಸುವುದೆಂದರೆ ಹಬ್ಬ ನಡೆಯುವ ಒಂಬತ್ತು ದಿನದವರೆಗೂ ಪೂಜೆಗೆ ವಿಗ್ರಹಗಳನ್ನು ಕೂರಿಸುವುದಾಗಿದೆ. ಹಬ್ಬ ಶುರುವಾಗುವುದು ಜೋಡಿಮಾರಮ್ಮ ದೇವರು ಪಟ್ಟಕ್ಕೆ ಕೂತಾಗಲೇ.

ಜೋಡಿ ಮಾರಮ್ಮ ದೇವರ ಕೊಳಗವಲ್ಲದೆ ಪರಿಶಿಷ್ಟಜಾತಿಯ ಸಮುದಾಯದ ಮಾರಮ್ಮ ದೇವರಾದ 'ಹೆಬ್ಬಾರಿ'ಯನ್ನು ಈ ಸಮಯದಲ್ಲಿ ಪೂಜಿಸಲಾಗುತ್ತದೆ. ಮಾರಿಹಬ್ಬದ ಸಮಯದಲ್ಲಿ

ಜೋಡಿಮಾರಮ್ಮ ದೇವರ ಮೂರ್ತಿಗಳ ಜೊತೆಗೆ ಹೆಬ್ಬಾರಿ ದೇವರ ಮೂರ್ತಿಯನ್ನು ಪಟ್ಟಕ್ಕೇರಿಸುವುದು ಸಂಪ್ರದಾಯವಾಗಿ ನಡೆದುಕೊಂಡು ಬರುತ್ತಿದೆ.

**ಬಿಸು ಪರ್ಬ(ವಿಶು ಹಬ್ಬ) :** ಹೂಟಗಳ್ಳಿಯ ಕೆ.ಎಚ್.ಬಿ ಕಾಲೋನಿಯ ಮಹಾಗಣಪತಿ ದೇವಸ್ಥಾನದ ಪ್ರಾಂಗಣದಲ್ಲಿ ಮೈಸೂರಿನ ಸಂಸ್ಕೃತಿಯ ಜತೆಗೆ ತುಳುನಾಡಿನ ಸಂಸ್ಕೃತಿ ಮೇಳೈಸುತ್ತದೆ. ಕರಾವಳಿಯ ಸಾಂಸ್ಕೃತಿಕ ಆಚರಣೆಗಳು, ಧರಿಸಿದ್ದ ದಿರಿಸುಗಳು, ಆಡುತ್ತಿದ್ದ ಆಟಗಳು, ಆಚಾರ ವಿಚಾರಗಳು ಸೊಗಸಾಗಿ, ಅಲ್ಲಿ ಕಿರು ತುಳುನಾಡೇ ಅನಾವರಣಗೊಳ್ಳುತ್ತದೆ.

'ಬಿಸು ಪರ್ಬ' ತುಳುವರ ಹೊಸ ವರ್ಷದ ಆಚರಣೆಯಾಗಿದೆ. ಇದು ವೈಶಿಷ್ಟ್ಯಪೂರ್ಣ ಆಚರಣೆಗಳಲ್ಲಿ ಒಂದಾಗಿದೆ. ತುಳುವರಿಗೆ ಸೌರಮಾನ ಯುಗಾದಿಯಿಂದ ಚಂದ್ರನ ಚಲನೆಯನ್ನು ಅನುಸರಿಸಿ ಫಾಲ್ಗುಣ ಕಳೆದು ಚೈತ್ರಮಾಸದ ಪ್ರಥಮದಿನ ಹೊಸವರ್ಷ ಪ್ರಾರಂಭವಾಗುತ್ತದೆ. ಇದು ಚಂದ್ರಮಾನ ಯುಗಾದಿ. ಹಾಗೆಯೇ ಸೂರ್ಯನ ಚಲನೆಯನ್ನು ಹೊಂದಿಕೊಂಡು ಮೀನಮಾಸದ ಪ್ರಥಮದಿನ ಹೊಸವರ್ಷ ಆರಂಭವಾಗುತ್ತದೆ. ತುಳುವರ ಮಟ್ಟಿಗೆ ಇದುವೇ 'ಬಿಸು ಪರ್ಬ' ಈ ಕಾರಣದಿಂದ ವಿಶು ಹಬ್ಬ 'ತೌಳವಯುಗಾದಿ' ಎಂದೇ ಹೆಸರುಗಳಿಸಿದೆ. ವಿಶು ಹೊಸ ವರುಷದ ಆರಂಭ, ಸಮೃದ್ಧಿ ಸಂಕಲ್ಪದ ದಿನ. ಯಾವುದೇ ಕಾರ್ಯದ ಆರಂಭಕ್ಕೆ, ಕೃಷಿಕಾರ್ಯದಲ್ಲಿ ತೊಡಗಿಸಿ ಕೊಳ್ಳಲು ಈ ದಿನ ಶುಭದಿನ. ವರ್ಷವಿಡಿ ಸುಖ, ಸಮೃದ್ಧಿ ನೆಲೆಸಲಿ ಎಂಬ ಆಶಯದೊಂದಿಗೆ ಐಶ್ವರ್ಯದ ಸಂಕೇತವಾಗಿ ತುಳುನಾಡ ಜನರು ಮತ್ತು ಕೇರಳಿಯರು 'ವಿಶು ಹಬ್ಬ'ವನ್ನು ಆಚರಿಸುತ್ತಾರೆ.

ವರ್ಷದ ಆರಂಭದಲ್ಲಿ ಮೊದಲ ನೋಟಕ್ಕೆ ಆರಾಧ್ಯ ದೈವವನ್ನು ನೋಡುವ ಕ್ರಮವನ್ನು 'ಕಣಿ' ಕಾಣುವುದು ಎನ್ನಲಾಗುತ್ತದೆ. 'ಕಣಿ' ಎಂದರೆ ಶ್ರೇಯಸ್ಸು, ಶಕುನ, ಭವಿಷ್ಯ ಎಂಬ ಅರ್ಥಗಳೂ ಇವೆ. ಊರಿನ ದೇವಸ್ಥಾನ, ಗುತ್ತಿನ ಮನೆ, ತರವಾಡುಗಳಲ್ಲಿ ಕಣಿ ಇಡುವ ಸಂಪ್ರದಾಯ ನಡೆಯುತ್ತದೆ. ಹೊಸವರ್ಷದ ದಿನ ಬೆಳಗ್ಗಿನ ಜಾವ ಮಡಿಯುಟ್ಟು ಮಹಾಗಣಪತಿ ದೇವಸ್ಥಾನದ ಪ್ರಾಂಗಣದಲ್ಲಿ ಕಣಿ ಇಡುವುದು ಪದ್ಧತಿ. 'ಬಿಸು ಕಣಿ' ಹೊಸ ವರ್ಷದ ಸಂಭ್ರಮದ ಒಂದು ವಿಶಿಷ್ಟ ಅಭಿವ್ಯಕ್ತಿ. ದೇವಾಲಯವನ್ನು ಶುಚಿಗೊಳಿಸಿ, ಎಲ್ಲ ಬಗೆಯ ತರಕಾರಿ ಮತ್ತು ಫಲ ವಸ್ತುಗಳನ್ನು ಜೋಡಿಸಿ ಎಲೆ, ಅಡಿಕೆ, ಅಕ್ಕಿ, ತೆಂಗಿನ ಕಾಯಿ, ಕಳಶ ಕನ್ನಡಿ ಇಟ್ಟು ಹೊಸ ವಸ್ತ್ರ–ನಗ ನಾಣ್ಯಗಳೊಂದಿಗೆ ದೇವರಿಗೆ ಅಭಿಮುಖವಾಗಿ ಶ್ರೀಗಂಧ, ದೀಪ ಹಚ್ಚಿಡುವ ವ್ಯವಸ್ಥೆಗೆ 'ಕಣಿ' ಎಂದು ಹೆಸರು.

ಹೆಸರುಕಾಳು ಮತ್ತು ಹಸಿ ಗೇರು ಬೀಜದ ಪಲ್ಯ, ಹೆಸರು ಬೇಳೆಯ ಪಾಯಸ, ಮೂಡೆ, ಕೊಟ್ಟಿಗೆ, ಕಡುಬು ಮೊದಲಾದ ಖಾದ್ಯಗಳನ್ನು ಸವಿಯುವುದು ವಿಶು ಹಬ್ಬದ ಸಂಭ್ರಮ.

ದೇವಾಲಯದ ಎದುರು ಅಂದು ಕಣಿ ಆಚರಣೆಯ ಜೊತೆಯಲ್ಲಿಯೇ ತುಳುನಾಡಿನ ಜನಪದ ಕ್ರೀಡೆಗಳಾದ ಕೋಳಿ ಅಂಕ, ತೆಂಗಿನಕಾಯಿ ಕುಟ್ಟುವುದು, ಲಗೋರಿ, ತಪ್ಪಂಗಾಯಿ ಮೊದಲಾದ ಕ್ರೀಡೆಗಳು ನಡೆಯುತ್ತವೆ.

ಒಟ್ಟಾರೆಯಾಗಿ ಈ ಹಬ್ಬದ ವಿಶೇಷತೆಯೆಂದರೆ ಕಣಿ ಆಚರಣೆಯ ಮಹತ್ವ ಮತ್ತು ಜನಪದ ಕ್ರೀಡೆಗಳನ್ನು ಜೀವಂತವಾಗಿಸುವ ಪ್ರಯತ್ನವಾಗಿದೆ.

## ಜಾತ್ರೆಗಳು

**"**ಸಮಾಜದ ಒಳಿತಿಗಾಗಿ, ಸಾಮಾಜಿಕ ಹೊಂದಾಣಿಕೆಗಾಗಿ, ವಿಶೇಷ ದಿನಗಳಲ್ಲಿ ಜನರು ಸಂಭ್ರಮೋತ್ಸಾಹಗಳಿಂದ ನಡೆಸುವ ಸಂಪ್ರದಾಯಾಚರಣೆಗಳೇ ಹಬ್ಬ ಮತ್ತು ಜಾತ್ರೆಗಳು**"**[29] ಜಾತ್ರೆಯಲ್ಲಿ ದೈವ ಹಾಗೂ ಧರ್ಮ ಸಂಬಂಧಿ ಆಚರಣೆಗಳು ಮುಖ್ಯ. ಈ ದೈವ ಸಂಬಂಧವಾದ ಆಚರಣೆಗಳು ಧಾರ್ಮಿಕವಾಗಿ ಅನುಷ್ಠಾನಗೊಳ್ಳಬೇಕು. ಇದರಿಂದ ಸಾಮಾಜಿಕ, ರಾಜಕೀಯ ಬಾಂಧವ್ಯಗಳು ಉತ್ತಮಗೊಳ್ಳುತ್ತವೆ. ಅನೇಕ ಮಂದಿ ಒಟ್ಟಿಗೆ ಒಂದೆಡೆ ಕಲೆತು ವಿಚಾರ ವಿನಿಮಯ ನಡೆಸಲು ಸುಖ, ದುಃಖಗಳನ್ನು ಹಂಚಿಕೊಳ್ಳಲು ಈ ಜಾತ್ರೆ ಒಂದು ಸಾಧನ. ಹೀಗೆ ಸೇರುವುದರಿಂದ ಅನ್ಯರ ಧರ್ಮ ಹಾಗೂ ಆಚರಣೆಗಳ ಅರಿವು ಇತರರಿಗೂ ಆಗುವುದಲ್ಲದೆ, ಎರಡು ಮತದವರ ನಡುವೆ ಬಾಂದವ್ಯ ಏರ್ಪಡಲು ಸಕಾರಣವೂ ಆಗುತ್ತದೆ. ಅಲ್ಲದೆ ಸಾಂಘಿಕವಾಗಿ ನಡೆಸುವ ಹಬ್ಬ ಆಚರಣೆಗಳು ಗ್ರಾಮ, ನಗರ, ಊರುಗಳಿಗೆ ವಿಶಿಷ್ಟವಾದ್ದರಿಂದ ಅವುಗಳಿಗೆ ಸ್ಥಳೀಯ ಮಹತ್ವವಿದೆ.

### ಜಾತ್ರೆಗಳ ಪ್ರಾಮುಖ್ಯತೆ

ಜಾತ್ರೆಗಳು ಇದ್ದಕ್ಕಿದ್ದ ಹಾಗೆ ಆಕಸ್ಮಿಕವಾಗಿ ಸೃಷ್ಟಿಯಾದವುಗಳಲ್ಲ. ಜಾನಪದರು ಹಿಂದಿನಿಂದಲೂ ಆಚರಿಸಿಕೊಂಡು ಬಂದಿರುವ ಪರಂಪರಾನುಗತ ಧಾರ್ಮಿಕ, ಸಾಮಾಜಿಕ, ಭಾವನೆಗಳ ಸಂಕೇತಗಳಾಗಿವೆ. ಮಳೆಬಾರದೆ ಕ್ಷಾಮ ಉಂಟಾದಾಗ, ಜನರು ನೀರು ಆಹಾರವಿಲ್ಲದೆ ಬಳಲಿದಾಗ, ಬೆಳೆಗಳು ರೋಗದಿಂದ ನಾಶವಾದಾಗ, ದನಕರುಗಳೆಲ್ಲ ರೋಗದಿಂದ ಸಾವನ್ನಪ್ಪುವಾಗ ಜನರೆಲ್ಲ ತಮ್ಮ ಗ್ರಾಮದೈವಗಳ ಮೊರೆಹೋಗಿ ಹರಕೆ ಹೊತ್ತುಕೊಳ್ಳುತ್ತಾರೆ. ಆ ಮುಖಾಂತರ ಊರಿಗೆ ಕ್ಷೇಮವಾಗಿ ನೆಮ್ಮದಿ ಸಿಗಬೇಕೆಂದು, ಎಲ್ಲರಿಗೂ ಒಳಿತಾಗಬೇಕೆಂಬ ಕಾರಣಕ್ಕಾಗಿ ಜನಪದರು ಇಂದಿಗೂ ಹಬ್ಬ, ಜಾತ್ರೆ, ದೈವಾರಾಧನೆಗಳನ್ನು ಕ್ಷೇಮ ಮತ್ತು ಅಭ್ಯುದಯದ ಸಂಕೇತವಾಗಿ ಆಚರಿಸಿಕೊಂಡು ಬರುತ್ತಿರುವುದು ಪ್ರಾಚೀನ ಪರಂಪರೆಯ ದ್ಯೋತಕವಾಗಿದೆ.

ಜಾತ್ರೆಗಳು ಸಾಮಾಜಿಕ, ವ್ಯವಹಾರಿಕ, ಕಲಾತ್ಮಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಜೀವಸತ್ವಗಳಾಗಿವೆ. ಜನರ ಅದಮ್ಯ, ಭಾವನೆಗಳ ವ್ಯಕ್ತಭಾವ ಮುಖಗಳನ್ನು ಜಾತ್ರೆಗಳಲ್ಲಿ ಕಾಣಬಹುದಾಗಿದೆ. ಹೀಗಾಗಿ ಜಾತ್ರೆಗಳು ಕೇವಲ ದನಗಳ ವ್ಯಾಪಾರ, ಜನಗಳ ಕೊಂಡು ಕೊಳ್ಳುವ ತಾಣಗಳಾಗಿರದೆ ಧಾರ್ಮಿಕ ಮತ್ತು ಸಾಂಸ್ಕೃತಿಕ ಭಾವನೆಗಳ ಸಂಗಮವಾಗಿವೆ.

"ಜಾತ್ರೆಗಳ ಮೂಲ ಉದ್ದೇಶ ಸಮಷ್ಟಿಯ ಹಿತ, ವೈವಿಧ್ಯತೆಯಲ್ಲಿ ಏಕತೆ ಸೃಷ್ಟಿಸುವುದು, ಚತುರ್ವಿದ ಪುರುಷಾರ್ಥದೆಡೆಗೆ ಸಾಮಾಜಿಕ ಮನಸ್ಸು ಅಭಿಮುಖವಾಗುವಂತೆ ಮಾಡುವ ಹವಣಿಕೆ ಜಾತ್ರೆಯಲ್ಲಿ ಹುದುಗಿದೆ. ಅನಾದಿ ಕಾಲದಿಂದಲೂ ಮಾನವನ ಲೌಕಿಕ ಹಾಗೂ ಧಾರ್ಮಿಕ ಬದುಕಿನಲ್ಲಿ ಒಂದು ಬಗೆಯ ಸಾಮರಸ್ಯವಿದೆ. ಈ ಸಾಮರಸ್ಯವನ್ನು ಜಾತ್ರೆಯಲ್ಲಿ ಕಾಣಬಹುದು. ಜಾತ್ರೆಯಲ್ಲಿ ಭಿನ್ನಗುಣ, ಸ್ವಭಾವ, ಅಭಿರುಚಿ, ಅಂತಸ್ತು, ವಯೋಮಾನಗಳ ಜನರೆಲ್ಲ ಒಂದೆಡೆ ಕಲೆಯಲು ಅವಕಾಶ ಕಲ್ಪಿಸಿ ಅವರವರ ಇಚ್ಛೆಯನ್ನು ತಣಿಸುವ ಹವಣಿಕೆಯಿಂದ ನಿರ್ಮಿಸಿದ ರಸರಂಗವಾಗಿದೆ."[30]

"ಜಾತ್ರೆಗಳು ರಸೋತ್ಕರ್ಷೆಯ ಸೆಲೆಗಳಾಗಿ, ನವಚೈತನ್ಯದ ಚಿಲುಮೆಗಳಾಗಿ, ಭಾವೈಕ್ಯದ ಸ್ಫೂರ್ತಿ ಮಾಧ್ಯಮಗಳಾಗಿ, ನೂತನ ವಿಚಾರಾನುಭವಗಳ ಜೀವಂತ ಖನಿಗಳಾಗಿ, ಅನೇಕ ಸಾಮಾಜಿಕ ಅವಶ್ಯಕತೆಗಳನ್ನು ಪೂರೈಸುತ್ತವೆ. ಕ್ರಿಯಾಶೀಲ ಸಾಮರ್ಥ್ಯಗಳಿವೆ, ಅವರ ಸಂಘಟನೆ ಚಾತುರ್ಯಕ್ಕೆ ವಿನೋದ ಪ್ರಮಾದಗಳನ್ನೊದಗಿಸುವ ಅವರ ಕಲಾವಂತಿಕೆಗೆ ಸಾಕ್ಷಿಯಾಗುತ್ತವೆ. ಮನುಷ್ಯ ಸಹಜವಾಗಿಯೇ ಉತ್ಸವ ಪ್ರಿಯ, ಉತ್ಸವಾಂತ್ಯದಲ್ಲಿ ಅವನ ಮನಸ್ಸು ಶಮೆ ದಮೆ–ಶಾಂತಿಗಳಿಂದ ಪ್ರಮುಲ್ಲಿತವಾಗುತ್ತದೆ. ದೈವದ ಬಗೆಗಿನ ಹಲವು ನಂಬಿಕೆ ಆಚರಣೆಗಳು ಮೌಢ್ಯ ಜನ್ಯವೆಂದು ವಿಚಾರವಂತರು ಜಂಕಿಸಿ, ಜಟಕರಿಸಬಹುದಾದರೂ ಅವುಗಳಿಂದೊದಗಬಹುದಾದ ಮಾನಸಿಕವೂ ಸಾಮಾಜಿಕವೂ ಆದ ಪ್ರಯೋಜನಗಳನ್ನು ಸುಲಭವಾಗಿ ತಿರಸ್ಕರಿಸಲಾಗದು. ಜಾತ್ರೆಗಳಲ್ಲಿ ದೊರೆಯುವ ಉತ್ಸವೋತ್ಕರ್ಷವಾಗಲಿ, ಅಲೌಕಿಕಾನುಭವವಾಗಲಿ, ಸರಳರೂ, ಮುಗ್ಧರೂ ಆದ ಗ್ರಾಮೀಣರಿಗೆ ಬೇರೆಡೆಯಾಗಿ ಸಿಗುವುದಿಲ್ಲ."[31]

**ಮೈಸೂರು ನಗರದಲ್ಲಿ ನಡೆಯುವ ಕೆಲವು ಜಾತ್ರೆಗಳು** : ಚಾಮುಂಡೇಶ್ವರಿ ಜಾತ್ರೆ, ಅರಮನೆ ಮಾರಮ್ಮನ ಜಾತ್ರೆ, ತೊಣಚಿ ಕೊಪ್ಪಲಿನ ಬಿಸಿಲು ಮಾರಮ್ಮನ ಜಾತ್ರೆ, ಕುಂಬಾರ ಕೊಪ್ಪಲಿನ ಮಹದೇಶ್ವರ ಜಾತ್ರೆ, ಇಟ್ಟಿಗೆಗೂಡಿನ ರೇಣುಕಾದೇವಿ ಕರಗ ಮಹೋತ್ಸವ ಜಾತ್ರೆ, ಕ್ಯಾತಮಾರನಹಳ್ಳಿ ಹುಲಿಯಮ್ಮನ ಜಾತ್ರೆ, ಉತ್ತನಹಳ್ಳಿ ಮಾರಮ್ಮನ ಜಾತ್ರೆ, ಹಿನಕಲ್ಲಿನ ಮಾರಮ್ಮನ ಜಾತ್ರೆ.

**ಚಾಮುಂಡೇಶ್ವರಿಯ ಜಾತ್ರೆ :** ಮೈಸೂರು ಅಧಿದೇವತೆ ಚಾಮುಂಡೇಶ್ವರಿ ತಾಯಿಗೆ ವಾರ್ಷಿಕವಾಗಿ ಒಮ್ಮೆ ದೊಡ್ಡ ರಥೋತ್ಸವವು ದಸರ ಮಹೋತ್ಸವ ಮುಗಿದ ಅನಂತರ ಬರುವ ಹುಣ್ಣಿಮೆಯಂದು ಜರಗುತ್ತದೆ. ಇದನ್ನು ಚಾಮುಂಡಮ್ಮನ ಜಾತ್ರೆ ಎಂದು ಜನಪದರು ಕರೆಯುವುದುಂಟು. "ರಥೋತ್ಸವದ ದಿನ ರಥಕ್ಕೆ ದೇವರ ಆರೋಹಣ ಆಗುವ ಮೊದಲು ತೇರಡಿ ಉತ್ಸವ ಆಗುವ ಸಂದರ್ಭದಲ್ಲಿ ಉತ್ಸವ ಮೂರ್ತಿಯನ್ನು ದೇವಸ್ಥಾನದಿಂದ ಹೊರಗೆ ಬೀಜಂಗ್ಯೆಯಿಸಿ, ದೇವಸ್ಥಾನದ ಎದುರು ಬದಿಯಲ್ಲಿದ್ದ ಪುಟ್ಟ ಅರಮನೆ ರಾಜ ಮಹಿಳೆಯರು, ಅರಸು ಮಹಿಳೆಯರು ಉತ್ಸವವನ್ನು ವೀಕ್ಷಿಸಲು ಇಲ್ಲಿ ಘೋಷಾದಲ್ಲಿ ನೆರೆದಿರುತ್ತಿದ್ದರು"[32] ತೇರಡಿ ಉತ್ಸವ ಎಂದರೆ ರಥಕ್ಕೆ ದೇವರನ್ನು ಆರೋಹಣ ಮಾಡುವ ಮೊದಲು ಉತ್ಸವ ಮೂರ್ತಿಯನ್ನು ದೇವಾಲಯದ ಎದುರಿಗಿರುವ ಮಂಟಪಕ್ಕೆ ತಂದು ಅಲ್ಲಿ ಪೂಜೆ ಪುನಸ್ಕಾರಗಳನ್ನು ಮಾಡಿ ಅನಂತರ ದೇವಾಲಯದ ಸುತ್ತ ಪ್ರದಕ್ಷಿಣೆಯನ್ನು ಹಾಕಿಸಲಾಗುತ್ತದೆ. ಈ ಹಿಂದೆ ಮಹಾರಾಜರು ಉತ್ಸವದ ಪ್ರದಕ್ಷಿಣೆಯ ಮುಂದೆ ಪಾದಾಚಾರಿಗಳಾಗಿ ದೇವಾಲಯದ ಸುತ್ತ ದೇವರ ಜೊತೆಯಲ್ಲಿ ಪ್ರದಕ್ಷಿಣೆ ಬರುತ್ತಿದ್ದರಂತೆ. ಆದರೆ ಈಗ ಈ ಪದ್ಧತಿ ಕಣ್ಮರೆಯಾಗಿದ್ದು, ಉತ್ಸವಕ್ಕೆ ಪೂಜೆ ಸಲ್ಲಿಸುವಾಗ ಮಹಾರಾಜರು ಜೊತೆಗಿರುತ್ತಾರೆ ಪ್ರದಕ್ಷಿಣೆಯಲ್ಲಿ ಭಾಗವಹಿಸುವುದಿಲ್ಲ.

ಉತ್ಸವದ ಪ್ರದಕ್ಷಿಣೆಯಾದಮೇಲೆ ವಿಧಿವತ್ತಾಗಿ ಪುನಃ ಪೂಜೆಯನ್ನು ನೆರವೇರಿಸಿ ತೇರಿನ ಮೇಲೆ ಆರೋಹಣ ಮಾಡಲಾಗುತ್ತದೆ. ಉತ್ಸವದ ಸಂದರ್ಭದಲ್ಲಿ ಹಾಗೂ ತೇರಿನ ಮೇಲೆ ಆರೋಹಣ ಮಾಡುವಾಗ ದೇವಿಗೆ ಜೈಕಾರದ ಸುರಿಮಳೆಯಾಗುತ್ತದೆ. ತೇರಿನ ಮೇಲೆ ವಜ್ರ–ವೈಢೂರ್ಯಗಳಿಂದಾಗಿರುವ ಆಭರಣಗಳ ಭೂಷಿತೆಯಾದ ಚಾಮುಂಡಿತಾಯಿಯನ್ನು ನೋಡಿದರೆ ಎಂತವರಿಗೂ ಭಕ್ತಿಯ ಪರಕಾಷ್ಠೆ ಮನದೊಳಗೆ ಮೂಡುತ್ತದೆ. ರಾಜರು ಭಕ್ತಿಯಿಂದ ತೇರಿನ ಹಗ್ಗವನ್ನು ಹಿಡಿದು ಸಾರ್ವಜನಿಕರೊಡನೆ ಸ್ವಲ್ಪ ದೂರ ಎಳೆಯುತ್ತಾರೆ. ಈ ಸಂದರ್ಭದಲ್ಲಿ ತೇರನ್ನು ಎಳೆದು ದೇವಿಗೆ ಸೇವೆಸಲ್ಲಿಸುವುದರಲ್ಲಿ ನಿರತರಾಗುವ ಸಾವಿರಾರು ಮಂದಿ ಭಕ್ತಾದಿಗಳ ಉತ್ಸಾಹಕ್ಕೆ ಮಿತಿಯಿರುವುದಿಲ್ಲ. ತೇರನ್ನು ಎಳೆಯುವಲ್ಲಿ ಮುಂಚೂಣಿಯಲ್ಲಿ ಮೈಸೂರು ನಗರದ ಕೇತಮ್ಮನಹಳ್ಳಿ ಜನರು ಪಾಲ್ಗೊಳ್ಳುವುದು ಹಿಂದಿನಿಂದಲು ಬಂದಿರುವ ಪದ್ಧತಿಯಾಗಿದೆ. ಅಲ್ಲದೇ ಪ್ರತಿವರ್ಷವು ಇವರು ಉತ್ಸವದಲ್ಲಿ ಹಾಗೂ ಹರಕೆಯ ಕಾಯಿಯನ್ನು ಒಡೆಯುವಲ್ಲಿ ತಾವೆ ಮುಂಚೂಣಿಯಲ್ಲಿದ್ದು ಈಡುಗಾಯಿಯನ್ನು ಒಡೆಯುತ್ತಾರೆ. ಒಡೆದ ಚೂರುಗಳನ್ನು ಸಂಗ್ರಹಿಸಿ ತೆಗೆದುಕೊಂಡು ಹೋಗುತ್ತಾರೆ.

ತೇರೋತ್ಸವ ಮುಂದೆ ಮುಂದೆ ಸಾಗಿದಂತೆ ಅರ್ಚಕರು ತೇರಿನಮೇಲೆ ನಿಂತುಕೊಂಡು ಭಕ್ತರಿಂದ ಪೂಜಾ ವಸ್ತುಗಳನ್ನು ತೆಗೆದುಕೊಂಡು ದೇವಿಗೆ ಪೂಜೆ ಸಲ್ಲಿಸಿ ಹಿಂದಿರುಗಿಸುವುದು ವಾಡಿಕೆ. ಇದಕ್ಕೆ ಭಕ್ತರು ಸ್ವಯಂಪ್ರೇರಿತರಾಗಿ ಅರ್ಚಕರಿಗೆ ಕಾಣಿಕೆ ನೀಡುತ್ತಾರೆ. ಸಂತಾನ ಫಲಬೇಕೆಂದೋ, ಜನಜಾನುವಾರುಗಳಿಗೆ ರೋಗರುಜಿನಗಳು ಬಾರದಿರಲೆಂದೋ, ಅಥವಾ ಅವರ ಮನಸ್ಸಿನ ಇಚ್ಚೆಗಳು ಈಡೇರಲೆಂದೋ ಹರಕೆ ಹೊತ್ತು ಬೆಟ್ಟದ ಪಾದದ ಹತ್ತಿರ ನಮಸ್ಕಾರ ಮಾಡಿ ಬೆಟ್ಟದ ಸಹಸ್ರ ಮೆಟ್ಟಿಲುಗಳನ್ನು ಹತ್ತಿ ರಥೋತ್ಸವವನ್ನು ನೋಡಿ ಪೂಜೆಸಲ್ಲಿಸಿ ತಮ್ಮ ಹರಕೆಯನ್ನು ತೀರಿಸುವ ದೃಶ್ಯ ಸರ್ವೇ ಸಾಮಾನ್ಯವಾದುದು. ಈ ಸಂದರ್ಭದಲ್ಲಿ ಧೂಪ ಹಾಕುವುದಕ್ಕಾಗಿಯೆ ಕೆಲವು ಕಾರ್ಯಕರ್ತರಿರುತ್ತಾರೆ. ಇವರನ್ನು 'ಧೂಪದವರು' ಎಂದೇ ಕರೆಯಲಾಗುತ್ತದೆ. ಮಣ್ಣಿನಿಂದ ಮಾಡಿರುವ ಕುಡಿಕೆಯನ್ನು ಹೊಂದಿರುವ ಇವರಲ್ಲಿ ಸಾಮಾನ್ಯವಾಗಿ ಹೆಂಗಸರ ಸಂಖ್ಯೆಯೇ ಹೆಚ್ಚು. ಧೂಪದವರಿಂದ ಸಾಂಬ್ರಾಣಿ ಪುಡಿಯನ್ನು ಪಡೆದು ಕುಡಿಕೆಯಲ್ಲಿರುವ ಬೆಂಕಿಗೆ ಹಾಕಿ ಅದರಿಂದ ಬರುವ ಧೂಪವನ್ನು ತಾಯಿಗೆ ಬೆಳಗಿ ಮನಸ್ಸಿನಲ್ಲಿ ಇಷ್ಟಾರ್ಥಗಳನ್ನು ಪ್ರಾರ್ಥಿಸಿಕೊಂಡು ಕೈಮುಗಿಯುತ್ತಾರೆ. ಇದಕ್ಕಾಗಿ ಧೂಪದವರಿಗೆ ಕಾಣಿಕೆಯನ್ನು ನೀಡುತ್ತಾರೆ.

ತೇರೋತ್ಸವ ನಡೆಯುವಾಗ ಮದುವೆಯಾದ ಹೊಸ ಜೋಡಿಗಳು ಹಣ್ಣು ಜವನವನ್ನು ತೇರಿಗೆ ವಂದಿಸಿ ಎಸೆಯುವುದಿದೆ. ಇದರಿಂದ ನವದಂಪತಿಗಳಿಗೆ ಮಕ್ಕಳ ಫಲ ಪ್ರಾಪ್ತಿ ಯಾಗುತ್ತದೆಂಬ ನಂಬಿಕೆ ಹಿಂದಿನಿಂದಲೂ ರೂಢಿಯಲ್ಲಿದೆ. ತೇರಿನ ಉತ್ಸವವು ದೇವಾಲಯವನ್ನು ಪ್ರದಕ್ಷಿಣೆ ಹಾಕಿದ ಅನಂತರ ದೇವಾಲಯದ ಬಲಭಾಗದಲ್ಲಿ ತೇರನ್ನು ನಿಲ್ಲಿಸಲಾಗುತ್ತದೆ. ಆಗ ಅಲ್ಲಿ ನೆರದಿರುವ ಜನರು ಪೂಜೆ ಮಾಡಿಸಿಕೊಂಡು ತೆರಳುತ್ತಾರೆ. ಸಂಜೆಯವೇಳೆಗೆ ಉತ್ಸವ ಮೂರ್ತಿಗೆ ಪೂಜೆಸಲ್ಲಿಸಿ ದೇವಾಲಯದ ಒಳಗೆ ತೆಗೆದುಕೊಂಡು ಹೋಗಲಾಗುತ್ತದೆ. ಆಧುನಿಕತೆಯ ಸಂದರ್ಭದಲ್ಲಿಯೂ ದೇವರ ಮೇಲಿನ ನಂಬಿಕೆ, ಆಚರಣೆಗಳಿಗೆ ಸಾಕ್ಷಿಯಾಗಿ ಇಂದಿಗೂ ಸಾವಿರಾರು ಜನರು ರಥೋತ್ಸವದಲ್ಲಿ ಭಾಗಿಯಾಗುವುದು ಜನಪದೀಯತೆಯನ್ನು ಬಿಂಬಿಸುತ್ತದೆ.

**ಕ್ಯಾತಮಾರನಹಳ್ಳಿಯ ಹುಲಿಯಮ್ಮ ಜಾತ್ರೆ :** ಸಂಪ್ರದಾಯಬದ್ಧ ಆಚರಣೆಯಲ್ಲಿ ಮೈಸೂರು ನಗರದ ಕ್ಯಾತಮಾರನಹಳ್ಳಿ ಜನರು ಇನ್ನೂ ತಮ್ಮ ಗ್ರಾಮೀಣ ಸೊಗಡನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ. ಪ್ರತಿ ಎರಡು ವರ್ಷಕ್ಕೊಮ್ಮೆ ಗ್ರಾಮದೇವತೆ 'ಹುಲಿಯಮ್ಮ'ನ ಹಬ್ಬವನ್ನು ಬಹಳ ವಿಜೃಂಭಣೆಯಿಂದ ಆಚರಿಸುವುದರ ಮೂಲಕ ಹುಲಿಯಮ್ಮ ಜಾತ್ರೆ ಮೈಸೂರು ಸುತ್ತಮುತ್ತಲಿನ

ಹತ್ತಾರು ಹಳ್ಳಿಗಳಲ್ಲಿ ಮನೆಮಾತಾಗಿದೆ. ಈ ಜಾತ್ರೆಯು ಹತ್ತುದಿನಗಳ ಕಾಲ ನಡೆಯಲಿದ್ದು, ಪ್ರತಿದಿನವೂ ಗ್ರಾಮೀಣ ಸೊಗಡನ್ನು ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ನಂಬಿಕೆ ಸಂಪ್ರದಾಯಾ ಚರಣೆಗಳಿಂದ ಕೂಡಿರುತ್ತದೆ. ಹುಲಿಯಮ್ಮ ದೇವಾಲಯವೇ ಪ್ರಮುಖವಾಗಿ ಅಕ್ಕಪಕ್ಕದಲ್ಲಿಯೇ ಮಹದೇಶ್ವರ, ಗಣಪತಿ, ಸಿದ್ದಪ್ಪಾಜಿ, ಚಾಮುಂಡಮ್ಮ, ಚಿಕ್ಕಮ್ಮ, ಭೈರವೇಶ್ವರ, ವೆಂಕಟರಮಣಸ್ವಾಮಿ ಹಾಗೂ ಯತ್ತಪ್ಪ(ಹುಲಿಯಮ್ಮನ ಮಗ) ಎಂಬ ಒಂಬತ್ತು ದೇವಾಲಯಗಳಿದ್ದು, ಅದರ ಮಧ್ಯ ಭಾಗದಲ್ಲಿ ದೊಡ್ಡ ಮೈದಾನವಿದೆ. ಇಲ್ಲಿ ಸಾವಿರಾರು ಭಕ್ತರು ಒಮ್ಮೆಯೇ ನೆರೆಯಬಹುದಾದಷ್ಟು ಸ್ಥಳಾವಕಾಶವಿದ್ದು, ಎಲ್ಲಾ ಕಾರ್ಯಕ್ರಮಗಳಿಗೂ ಅದು ಉತ್ತಮ ವೇದಿಕೆಯಾಗಿದೆ.

"ನಮ್ಮ ತಾತಾ, ಮುತ್ತಾತರ ಕಾಲದಲ್ಲಿ ಹಬ್ಬವು ಕೇವಲ ನಮ್ಮ ಗ್ರಾಮಕ್ಕೆ ಮಾತ್ರ ಸೀಮಿತವಾಗಿತ್ತು. ಆಗ ನಮ್ಮ ನಾಯಕ ಸಮುದಾಯ ಹಾಗೂ ದಲಿತರು ಸೇರಿ ಹಬ್ಬ ಆಚರಿಸುತ್ತಿದ್ದರು. ಆದರೀಗ ಮೈಸೂರು ಬೆಳೆದಂತೆ ನಮ್ಮ ಕ್ಯಾತಮಾರನಹಳ್ಳಿ ಗ್ರಾಮವು ನಗರ ವ್ಯಾಪ್ತಿಗೆ ಸೇರಿತಾದರೂ ಸಹ ನಮ್ಮ ಗ್ರಾಮದಲ್ಲಿ ಎರಡು ವರ್ಷಕ್ಕೊಮ್ಮೆ ಸರ್ವಧರ್ಮದವರ ಸಂಪೂರ್ಣ ಸಹಕಾರದೊಂದಿಗೆ ಬಹಳ ವಿಜೃಂಭಣೆಯಿಂದ ಹುಲಿಯಮ್ಮ ಜಾತ್ರೆಯನ್ನು ಯಶಸ್ವಿಯಾಗಿ ಆಚರಿಸುತ್ತಾ ಬರುತ್ತಿರುವುದು ಹೆಮ್ಮೆಯ ಸಂಗತಿ"[33]

**ಹಿನ್ನೆಲೆ :** ಹುಲಿಯಮ್ಮ ಇಲ್ಲಿನ ಜನರ ಆರಾಧ್ಯದೈವ. ಮೈಸೂರು ನಗರ ಬೆಳೆಯುವುದಕ್ಕೆ ಮುಂಚೆ ಕ್ಯಾತಮಾರನಹಳ್ಳಿ ಒಂದು ಗ್ರಾಮವಾಗಿತ್ತು. ನೂರಾರು ವರ್ಷಗಳ ಹಿಂದೆ ಗ್ರಾಮಕ್ಕೆ ಬರಗಾಲ ಉಂಟಾದಾಗ ಧವಸ ಧಾನ್ಯ ಹಾಗೂ ದನಗಳನ್ನು ತರಲು ದನಗಳ ಜಾತ್ರೆ ನಡೆಯುತ್ತಿದ್ದ ಹುಲಿಯೂರು ದುರ್ಗಕ್ಕೆ ತಮಟೆ, ವಾದ್ಯ ಸಮೇತ ಕುಣಿಯುತ್ತಾ ಹೋಗುತ್ತಾರೆ. ಅಲ್ಲಿ ನಡೆಯುವ ಜಾತ್ರೆಯಲ್ಲಿ ತಾವೂ ಸಹ ತಮ್ಮ ವಾದ್ಯದೊಂದಿಗೆ ಅಲ್ಲಿನ ಪ್ರಮುಖ ದೇವತೆ ಹುಲಿಯಮ್ಮ ದೇವಿಯ ಬಳಿ ಕುಣಿಯುತ್ತಾರೆ. ತಮ್ಮ ಕೆಲಸದ ನಂತರ ಹುಲಿಯೂರು ದುರ್ಗದಿಂದ ವಾಪಾಸ್ ಬರುವಾಗ ಇವರ ಕುಣಿತ ಹಾಗೂ ದೈವಭಕ್ತಿಗೆ ಮನಸೋತ ಅಲ್ಲಿನ ಹುಲಿಯಮ್ಮ ಇವರನ್ನೇ ಹಿಂಬಾಲಿಸಿ ಬಂದು ಕ್ಯಾತಮಾರನಹಳ್ಳಿ ಗ್ರಾಮದಲ್ಲಿ ನೆಲೆಸಿದಳೆಂಬ ಪ್ರತೀತಿ ಇದೆ. ಆನಂತರ ದೇವಿಯು ಒಬ್ಬ ಮಹಿಳೆಯ ಮೈಮೇಲೆ ಬಂದು ತನಗೊಂದು ದೇವಾಲಯ ಕಟ್ಟಿಸಿ ಪೂಜಿಸಲು ಆಜ್ಞಾಪಿಸಿದಳೆಂದೂ, ಅದರಂತೆ ಪೂಜೆ ಪುನಸ್ಕಾರಗಳು ನಡೆಯುತ್ತಾ ಬಂದಿರುವುದಾಗಿ ಇಲ್ಲಿನ ಹಿರಿಯರು ಹೇಳುತ್ತಾರೆ.

ಎರಡು ವರ್ಷಗಳಿಗೊಮ್ಮೆ ನಡೆಯುವ ಹುಲಿಯಮ್ಮ ಜಾತ್ರೆ ಸಾಮಾನ್ಯವಾಗಿ ಮಾರ್ಚ್ ತಿಂಗಳಲ್ಲಿ ನಡೆಯುತ್ತದೆ. ಹತ್ತುದಿನಗಳು ನಡೆಯುವ ಜಾತ್ರೆಯು ಬಹಳಷ್ಟು ವಿಶೇಷತೆಗಳೊಂದಿಗೆ ಕೂಡಿರುತ್ತದೆ.

**ಮೊದಲನೆಯ ದಿನ :** ಮಾರ್ಚ್ ತಿಂಗಳ ಯಾವುದಾದರೊಂದು ಸೋಮವಾರದಂದು ಚಾಲನೆಗೊಳ್ಳುತ್ತದೆ. ಸೋಮವಾರ ಮರ ಕಡಿದು ತರುವ ಕಾರ್ಯ; ಅರವತ್ತರಿಂದ ಎಪ್ಪತ್ತು ಅಡಿ ಎತ್ತರದ ಅಡಿಕೆ ಮರವನ್ನು ಹುಲಿಯಮ್ಮ ದೇವಾಲಯದ ಮುಂದೆ ನಿಲ್ಲಿಸುವುದು ವಾಡಿಕೆ. ಅದು ಭಕ್ತರ ಆಕರ್ಷಣೀಯ ಕೇಂದ್ರಬಿಂದು. ಇಲ್ಲಿಂದಲೇ ಹಬ್ಬದ ಆರಂಭ. ಅಂದು ನಾಯಕ ಹಾಗೂ ದಲಿತ ಸಮೂದಾಯದವರೆಲ್ಲಾ ಸೇರಿ ಮೈಸೂರು ನಗರದ ರಾಮಾನುಜ ರಸ್ತೆಯಲ್ಲಿರುವ ಎಲೆ ತೋಟಕ್ಕೆ ವಾದ್ಯ ಸಮೇತರಾಗಿ ಹೋಗಿ, ತೋಟದಲ್ಲಿನ ಎತ್ತರವಾದ ಮರಕ್ಕೆ ಪೂಜೆಸಲ್ಲಿಸುತ್ತಾರೆ. ಯಾವ ಮರ ದೇವಿಯ ಸ್ವರೂಪದಿಂದ ವಾಲುತ್ತದೆಯೋ ಅಂತಹ ಮರವನ್ನು ಗುರುತಿಸಿ, ಆ ಮರ ಕೆಳಗೆ ಬೀಳದಂತೆ ಕಡಿದು ಎಲ್ಲರೂ ಹೊತ್ತುಕೊಂಡು ಕುಣಿಯುತ್ತಾ, ಹಾಡುತ್ತಾ, ಮೆರವಣಿಗೆಯಲ್ಲಿ ದೇವಾಲಯಕ್ಕೆ ತಂದು ಸಾಂಪ್ರದಾಯಿಕವಾಗಿ ಪೂಜೆ ಸಲ್ಲಿಸಿ ಮಲಗಿಸುತ್ತಾರೆ.

**ಎರಡನೆ ದಿನ :** ಮಂಗಳವಾರ ಗ್ರಾಮದ ಪ್ರತಿಯೊಂದು ಮನೆಯ ಮಹಿಳೆಯರು ಶುದ್ಧರಾಗಿ(ಮಡಿಯಾಗಿ) ತಂಬಿಟ್ಟು ಮಾಡಿ ಹುಲಿಯಮ್ಮಳಿಗೆ ತಂಪು ಕೊಡುವ ಸಲುವಾಗಿ ಅಂದರೆ ಹಬ್ಬದ ಆರಂಭದಲ್ಲಿ ದೇವಿಯನ್ನು ಸಂತುಷ್ಟಗೊಳಿಸಿ ಹತ್ತುದಿನಗಳ ಸಂಪ್ರದಾಯಾ ಚರಣೆಗಳು ಸುಸೂತ್ರವಾಗಿ ನೆರವೇರಲಿ ಹಾಗೂ ಮನೆಯವರಿಗೆ ಯಾವುದೇ ತೊಂದರೆ ಯಾಗದಿರಲೆಂದು, ಮನೆಮಕ್ಕಳೆಲ್ಲಾ ಆರೋಗ್ಯದಿಂದಿರಲೆಂದು ತಂಪು ಕೊಡುವುದು ವಾಡಿಕೆ ಯಾಗಿದೆ. ಹೀಗೆ ತಂಬಿಟ್ಟಿನ ತಂಪಿನ ಆರತಿಯನ್ನು ತಂದು ಆರತಿ ಎತ್ತಿ ಪೂಜೆಸಲ್ಲಿಸಿ ಹೋಗುತ್ತಾರೆ.

**ಮೂರನೆ ದಿನ :** ಬುಧವಾರ ಮರಿಸೊಳ್ಳು ಆರತಿ ಪೂಜೆ ಮಾಡಲಾಗುತ್ತದೆ. ಮರಿಸೊಳ್ಳು 'ಮರಿ' ಎಂದರೆ ಚಿಕ್ಕ, ಪುಟ್ಟ ಮಕ್ಕಳು, 'ಸೊಳ್ಳು' ಎಂದರೆ ದೀಪ ಎಂದು. ಅಂದರೆ ಗ್ರಾಮದ ಪ್ರತಿ ಮನೆಯ ಪುಟ್ಟ ಹೆಣ್ಣುಮಕ್ಕಳು ಸ್ನಾನ ಮಡಿ ಮಾಡಿ ಹೊಸ ಹೊಸ ಉಡುಗೆ ತೊಡುಗೆ ತೊಟ್ಟು, ಒಂದು ತಟ್ಟೆಯಲ್ಲಿ ಅಕ್ಕಿಯನ್ನು ಹಾಕಿ ಅದರ ಮೇಲೆ ಬೆಲ್ಲವನ್ನಿಟ್ಟು ಅದರ ಕುಳಿಯಲ್ಲಿ ಎಣ್ಣೆಹಾಕಿ ಬತ್ತಿ ಇಟ್ಟು ದೀಪ ಹಚ್ಚಿ ತಲೆಯಮೇಲೆ ಹೊತ್ತು ಪ್ರಮುಖ ಬೀದಿಗಳಲ್ಲಿ ಸಾಲು ಸಾಲಾಗಿ ಮೆರವಣಿಗೆಯ ಮೂಲಕ ದೇವಾಲಯಕ್ಕೆ ಬರುತ್ತಾರೆ. ದೇವರಿಗೆ ಬೆಲ್ಲದಾರತಿಯನ್ನು ಎತ್ತಿ ಅನಂತರ ಬತ್ತಿಯ ದೀಪವನ್ನು ತೆಗೆದು ಅಲ್ಲಿಯ ಕುಂಡಕ್ಕೆ ಹಾಕಿ ಬೆಲ್ಲವನ್ನು ಮುರಿದು ಅಲ್ಲಿ ಮೈದಾನದಲ್ಲಿ ನೆರೆದಿರುವ ಸಾವಿರಾರು ಭಕ್ತರ ಕಡೆಗೆ ದೇವಾಲಯದ ಬಾಗಿಲಿನಿಂದ

ಎಸೆಯುತ್ತಾರೆ. ಯಾರಿಗೆ ಆ ಬೆಲ್ಲದ ಚೂರು ಸಿಗುತ್ತದೆಯೋ ಅವರು ಅದನ್ನು ಪ್ರಸಾದ ಸಿಕ್ಕಿತೆಂದು ತಮ್ಮ ಮನೆಗಳಿಗೆ ತೆಗೆದುಕೊಂಡು ಹೋಗಿ ತಿನ್ನುತ್ತಾರೆ.

**ನಾಲ್ಕನೆ ದಿನ :** ಗುರುವಾರ ಹಬ್ಬದ ಮೊದಲದಿನ ತಂದಿದ್ದ ಅಡಿಕೆ ಮರಕ್ಕೆ (ಈ ಮರವನ್ನು ಸಂಪ್ರದಾಯದಂತೆ ನಿಶಾನಿ ಮರ ಎಂತಲೇ ಕರೆಯುತ್ತಾರೆ) ವಿಶೇಷ ಪೂಜೆ ಸಲ್ಲಿಸಿ ಸುಣ್ಣ ಬಣ್ಣ ಬಳಿದು ದೇವಾಲಯದ ಮುಂಭಾಗದಲ್ಲಿ ಅಂದು ಮಧ್ಯಾಹ್ನದ ವೇಳೆಗೆ ನೆಟ್ಟಗೆ ನಿಲ್ಲಿಸುತ್ತಾರೆ. ಅದೇ ದಿನ ಸಾಯಂಕಾಲ ಹುಲಿಯಮ್ಮ ದೇವಿಗೆ ಕರಕಲು ಹಾಕುವ ಸಂಪ್ರದಾಯವಿದೆ.

**ಐದನೆ ದಿನ :** ಶುಕ್ರವಾರ ದೇವಾಲಯದ ಮುಂದೆ ತಮಟೆ ವಾದ್ಯದೊಂದಿಗೆ ಕುಣಿತ ಪ್ರಾರಂಭವಾಗುತ್ತದೆ. ರಾತ್ರಿ ಎಂಟು ಗಂಟೆಯಿಂದ ಒಂಬತ್ತು ಗಂಟೆಯವರೆಗೆ ಮಕ್ಕಳು ಕೋಲಾಟ ದೊಂದಿಗೆ ಕುಣಿಯುತ್ತಾರೆ. ಒಂಬತ್ತು ಗಂಟೆಯಿಂದ ರಾತ್ರಿ ಸುಮಾರು ಹನ್ನೆರಡು ಗಂಟೆಯವರೆಗೆ ದೊಡ್ಡವರು ಕೋಲಾಟದೊಂದಿಗೆ ವಿವಿಧ ವೇಷಭೂಷಣ ಧರಿಸಿ ಕುಣಿಯುತ್ತಾರೆ. **ಆರನೆಯದಿನವೂ ಸಹ** ಅದೇ ಕುಣಿತದ ಕಾರ್ಯಕ್ರಮಗಳು ನಡೆಯುತ್ತವೆ.

**ಏಳನೆ ದಿನ :** ಭಾನುವಾರ ಹುಲಿಯಮ್ಮನಿಗೆ ವಿಶೇಷವಾಗಿ ಬಾಳೆಕಂಬದಿಂದ ಅಲಂಕಾರ ಮಾಡುತ್ತಾರೆ. ಇದು ರಾತ್ರಿ ಸುಮಾರು ಹನ್ನೆರಡು ಗಂಟೆಯಿಂದ ಬೆಳಗಿನ ಜಾವ ಆರು ಗಂಟೆಯವರೆಗೂ ನಡೆಯುತ್ತಿರುತ್ತದೆ. ಇದನ್ನು ನೋಡುಗರು ಬಹಳ ಸಂಖ್ಯೆಯಲ್ಲಿ ಸೇರಿ ದೇವಿಯ ಅಲಂಕಾರನ್ನು ಕಣ್ತುಂಬಿಕೊಳ್ಳುತ್ತಾರೆ.

**ಎಂಟನೆ ದಿನ :** ಸೋಮವಾರ ಹುಲಿಯಮ್ಮ ಜಾತ್ರೆಯ ಪ್ರಮುಖ ದಿನವಾಗಿದ್ದು, ಅಂದು ಬೆಳಿಗ್ಗೆ ಹತ್ತು ಗಂಟೆಗೆ ಗ್ರಾಮದ ಗಂಡಸರೆಲ್ಲರೂ (ಯುವಕರಾದಿಯಾಗಿ) ವಾದ್ಯಮೇಳದಲ್ಲಿ ಕುಣಿಯುತ್ತಾ, ಹುಲಿಯಮ್ಮ ದೇವಿಯ ಸಂಬಂಧವಿರುವ ಕುರುಬಾರಹಳ್ಳಿ ದೇವಾಲಯಕ್ಕೆ ಹೋಗಿ ಪೂಜೆ ಸಲ್ಲಿಸುತ್ತಾರೆ. ಅಲ್ಲಿ ಹೋಗಿದ್ದವರಿಗೆಲ್ಲ ಮಜ್ಜಿಗೆ, ಪಾನಕ ವಿತರಿಸಲಾಗುತ್ತದೆ. ಮಧ್ಯಾಹ್ನ ಮೂರು ಗಂಟೆಗೆ ಅಲ್ಲಿಂದ ವಾಪಾಸ್ ಬಂದ ಅನಂತರ ಕ್ಯಾತಮಾರನಹಳ್ಳಿಗೆ ಸುಮಾರು ಒಂದು ಕಿಲೋಮೀಟರ್ ಅಂತರದಲ್ಲಿರುವ ಕುಲದ ತೋಟಕ್ಕೆ ಎಲ್ಲರೂ ತೆರಳುತ್ತಾರೆ. ಅಲ್ಲಿ ಬ್ರಾಹ್ಮಣ, ಅರಸು, ವೀರಶೈವ ಸೇರಿದಂತೆ ಇತರ ಸಮೂದಾಯದ ಮುಖಂಡರೂ ಸೇರುತ್ತಾರೆ.

'ಕುಲದ ತೋಟ' ಎಂದರೆ ಅದು ಹುಲಿಯಮ್ಮ ದೇವಿಯ ಆಸ್ತಿಯಾಗಿದ್ದು, ಜಾತ್ರೆಯ ಆಕರ್ಷಣೆಯ ನೋಟ ಇಲ್ಲಿಂದ ಪ್ರಾರಂಭವಾಗುತ್ತದೆ. ವಿವಿಧ ವೇಷಗಳನ್ನು ಧರಿಸಿಕೊಂಡ ಭಕ್ತಾದಿಗಳು ವಾದ್ಯ ಮೇಳಗಳೊಂದಿಗೆ ಕುಣಿಯುತ್ತಾ ದೇವಾಲಯಕ್ಕೆ ಮೆರವಣಿಗೆ ಬರುತ್ತಾರೆ. ಈ ಜಾತ್ರೆಯನ್ನು 'ಮಿನಿ ದಸರಾ' ಎಂದೇ ಕರೆಯಬಹುದು. ಏಕೆಂದರೆ ದಸರೆಯಂತೆಯೆ ಇಲ್ಲಿ

ವೇಷಭೂಷಣಗಳು ಕಂಗೊಳಿಸುತ್ತಿರುತ್ತವೆ ಮತ್ತು ಜನಜಂಗುಳಿಯೂ ಹಾಗೆ ತುಂಬಿರುತ್ತದೆ. ಈ ದಿನ ಬಂದಿರುವ ನೆಂಟರಿಷ್ಟರಿಗೆ ಮಾಂಸದೂಟ ಬಡಿಸುವುದೇ ಈ ಹಬ್ಬದ ವಿಶೇಷವಾಗಿದೆ.

**ಒಂಬತ್ತನೆದಿನ :** ಮಂಗಳವಾರ ಬೆಳಿಗ್ಗೆ ಹತ್ತು ಗಂಟೆಯಿಂದ ಎರಡು ಗಂಟೆಯವರೆವಿಗು ಹುಲಿವೇಷದಲ್ಲಿ ಕೆಲವರು ತಮ್ಮ ಹರಕೆ ತೀರಿಸುತ್ತಾರೆ. ಹುಲಿಯಮ್ಮ ದೇವಿ ಆದುದರಿಂದ ಹುಲಿವೇಷಧರಿಸಿ ಹರಕೆ ತೀರಿಸಲು ವಾದ್ಯದೊಂದಿಗೆ ಕುಣಿಯುತ್ತ ಮೆರವಣಿಗೆ ಬರುವುದು ವಾಡಿಕೆ. ಮಧ್ಯಾಹ್ನ ಎರಡು ಗಂಟೆಯಿಂದ ಸಂಜೆ ಐದು ಗಂಟೆವರೆಗೆ ಕುಸ್ತಿಪಂದ್ಯಾವಳಿ ನಡೆಯುತ್ತದೆ. ಇದೇ ದಿನ ಸಾಯಂಕಾಲ ಆರು ಗಂಟೆಯಿಂದ ರಾತ್ರಿ ಹನ್ನೊಂದು ಗಂಟೆಯ ವರೆಗೆ ತಂಬಿಟ್ಟಿನ ಆರತಿ ಮಾಡುವುದು ಸಂಪ್ರದಾಯವಾಗಿದೆ.

**ಹತ್ತನೆ ದಿನ :** ಬುಧವಾರ ಹಬ್ಬದ ಕೊನೆಯ ದಿನವಾಗಿದ್ದು, ಅಂದು ಬೆಳಗ್ಗೆ ಹತ್ತು ಗಂಟೆಗೆ ಕುಲದ ತೋಟಕ್ಕೆ ಗ್ರಾಮದಿಂದ ಮೆರವಣಿಗೆ ಹೋಗುತ್ತಾರೆ. ಅಲ್ಲಿಂದ ಕವಲುಗಡ್ಡಿ ಹಾಗೂ ಒನಕೆ ಪ್ರದರ್ಶನವಿರುತ್ತದೆ. ಅಲ್ಲದೇ ಕೆಲವು ಭಕ್ತರು ತಮ್ಮ ಇಷ್ಟಾರ್ಥ ನೆರವೇರಲು ಬಾಯಿಬೀಗ ಹಾಕಿಸಿಕೊಂಡು ಹುಲಿಯಮ್ಮ ದೇವಿಗೆ ಹರಕೆ ತೀರಿಸುತ್ತಾರೆ. ಇವರಿಗೆ ಮಹದೇಶ್ವರನ ಗುಡ್ಡಪ್ಪನವರು ಬಾಯಿಬೀಗ ಚುಚ್ಚುತ್ತಾರೆ. ಪೂಜೆ ಪುನಸ್ಕಾರಗಳು, ನಂಬಿಕೆ ಸಂಪ್ರದಾಯಾ ಚರಣೆಗಳೆಲ್ಲವು ಅಲ್ಲಿಗೆ ಮುಕ್ತಾಯವಾಗುತ್ತದೆ. ಅಂದು ಸಂಜೆ ಇಡೀರಾತ್ರಿ ಪೌರಾಣಿಕ ನಾಟಕ ಪ್ರದರ್ಶನ ನಡೆಯುತ್ತದೆ ಅದು ಮುಗಿದಮೇಲೆ ಹಬ್ಬಕ್ಕೆ ತೆರೆಬೀಳುತ್ತದೆ.

**ಮಾರಮ್ಮನ ಜಾತ್ರೆ (ಕೆ.ಜಿ.ಕೊಪ್ಪಲು) :** ಸುಮಾರು 300–400ವರ್ಷಗಳ ಹಿಂದಿನಿಂದಲೂ ಪ್ರತಿ ವರ್ಷ ಫೆಬ್ರವರಿ ತಿಂಗಳಲ್ಲಿ ಬರುವ ಮಾರಮ್ಮನ ಜಾತ್ರಾ ಮಹೋತ್ಸವವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಮಾರಮ್ಮನ ಗುಡ್ಡಪ್ಪನವರ ಮಗನಾದ ರಮೇಶ್‌ರವರು ಈ ದೇವಸ್ಥಾನದಲ್ಲಿ ಪೂಜೆ ಮಾಡಿಕೊಂಡು ಬರುತ್ತಿದ್ದಾರೆ. ಮಾರಮ್ಮನ ಹಬ್ಬದಂದು ಪ್ರತಿಮನೆಯಲ್ಲೂ ವಿಶೇಷವಾಗಿ ಅಕ್ಕಿಹಿಟ್ಟು ಮತ್ತು ಬೆಲ್ಲದಿಂದ ತಂಬಿಟ್ಟನ್ನು ತಯಾರಿಸಿ ದೇವಿಗೆ ತಂಬಿಟ್ಟಿನ ಆರತಿಯ ಪೂಜೆಯನ್ನು ಸಲ್ಲಿಸಲಾಗುತ್ತದೆ.

ಅಂದು ಕೆ.ಜಿ.ಕೊಪ್ಪಲಿನ ಪ್ರಮುಖ ಬೀದಿಗಳಲ್ಲಿ ಮಾರಮ್ಮನವರ ಮೆರವಣಿಗೆ ಹಾಗೂ ಅಮ್ಮನವರ ಒಕ್ಕಲಿನ ಸೊಸೆಯಂದಿರು, ಅಮ್ಮನವರ ಕೊಳಗ ಮತ್ತು ಮಡೆಯನ್ನು ಹೊತ್ತುಕೊಂಡು ಮೆರವಣಿಗೆಯಲ್ಲಿ ಬರುತ್ತಾರೆ. ಹೀಗೆ ಬರುವಾಗ ಅವರಿಗೆ ದಾರಿಯುದ್ದಕ್ಕೂ ಮಡಿ ಬಟ್ಟೆಗಳನ್ನು ಹಾಸಿ ನಡೆಮಡಿ ಮೇಲೆ ನಡೆಸಿಕೊಂಡು ಬರುತ್ತಾರೆ. ಏಕೆಂದರೆ ದೇವಿಗೆ ಯಾವುದೇ ರೀತಿಯ ಮೈಲಿಗೆ ಉಂಟಾಗಬಾರದೆಂದು ಹೀಗೆ ಮಾಡಲಾಗುತ್ತದೆ. ಇವರೊಂದಿಗೆ

ಅಮ್ಮನವರಿಗೆ ಹರಕೆ ಹೊತ್ತವರು ಬಾಯಿಬೀಗವನ್ನು ಹಾಕಿಸಿಕೊಂಡು ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತಾರೆ. ಇವರು ಬೀದಿಯಲ್ಲಿ ಮನೆಮುಂದೆ ಬಂದಾಗ ಪ್ರತಿ ಮನೆಯವರು ಇವರಿಗೆ ವಂದಿಸಿ, ಪೂಜೆಸಲ್ಲಿಸುತ್ತಾರೆ. ಮೆರವಣಿಗೆ ಮುಗಿದಮೇಲೆ ದೇವಿಯನ್ನು ವಿಶೇಷವಾಗಿ ಅಲಂಕರಿಸಿ ದೇವಸ್ಥಾನದಲ್ಲಿ ಇರಿಸಲಾಗುತ್ತದೆ. ಜನರು ಇಲ್ಲಿಗೆ ಬಂದು ಪೂಜೆ ಸಲ್ಲಿಸುತ್ತಾರೆ.

**ಕೋಟೆ ಮಾರಮ್ಮ ಜಾತ್ರೆ :** ಕೋಟೆ ಮಾರಮ್ಮ ದೇವಸ್ಥಾನಕ್ಕೆ ಎರಡು ಶತಮಾನಗಳ ಇತಿಹಾಸವಿದ್ದು ಅರಮನೆಯ ಒಳಾವರಣದಲ್ಲಿದ್ದ ದೇವಸ್ಥಾನದಲ್ಲಿ ಕೋಳಿ–ಕುರಿ ಬಲಿ ನೀಡುತ್ತಿದ್ದರಿಂದ ಅನಂತರ ಹೊರಾವರಣಕ್ಕೆ ಸ್ಥಳಾಂತರಿಸಲಾಗಿತ್ತು. ಈಗಲೂ ಇಲ್ಲಿ ಮಂಗಳವಾರ, ಶುಕ್ರವಾರದ ಜೊತೆಗೆ ಹಬ್ಬಹರಿದಿನಗಳಲ್ಲಿ ಬಲಿ ನೀಡಲಾಗುತ್ತದೆ. ಮುಜರಾಯಿ ಇಲಾಖೆಯ ಸುಪರ್ದಿಯಲ್ಲಿದ್ದರೂ ದೇವಸ್ಥಾನದ ಉಸ್ತುವಾರಿ ನೋಡಿಕೊಳ್ಳುವುದು ಸುಣ್ಣದಕೇರಿ ಕುಟುಂಬಗಳು. ತೋಪಿನ ಸಿದ್ಧನಾಯಕ, ಈರೋಡೆ ಸಿದ್ಧನಾಯಕ, ತೋಪಿನ ಮಂಚನಾಯಕ...ಹೀಗೆ ಎಂಟು ಕುಟುಂಬಗಳು ವರ್ಷಕ್ಕೆ ಒಂದಾವರ್ತಿಯಂತೆ ದೇವಸ್ಥಾನದ ಉಸ್ತುವಾರಿ ನೋಡಿಕೊಳ್ಳುತ್ತಾರೆ.

ಈಗಿನ ಅಶೋಕಪುರಂನ ಪೂರ್ವಿಕರು ಲಕ್ಷ್ಮೀಪುರಂಗೆ ಸ್ಥಳಾಂತರಗೊಳ್ಳುವುದಕ್ಕೂ ಮೊದಲು ಈ ಭಾಗದಲ್ಲೇ ವಾಸವಾಗಿದ್ದರಂತೆ. ಅಶೋಕಪುರಂನ ಹೆಣ್ಣುಮಕ್ಕಳಿಗೆ ಇದೊಂದು ದೊಡ್ಡಹಬ್ಬ. ಪ್ರತಿವರ್ಷ ಅಶೋಕಪುರಂನ ಸಾವಿರಾರು ಹೆಂಗಸರು, ಮಕ್ಕಳು ವಾದ್ಯ–ತಮಟೆ ಮುಂತಾದ ವಾದ್ಯಮೇಳಗಳ ಸಮೇತ ತಂಬಿಟ್ಟಿನ ಆರತಿಯನ್ನು ತಲೆ ಮೇಲೆ ಹೊತ್ತು ಸಾಲಾಗಿ ಬಂದು ಪೂಜೆ ಮಾಡುವ ದೃಶ್ಯ ಮನಮೋಹಕವಾಗಿರುತ್ತದೆ. ಎಲ್ಲಾ ಮಾರಿಹಬ್ಬಗಳು ಮುಗಿದ ನಂತರ ಈ ಕೋಟೆ ಮಾರಮ್ಮನ ಹಬ್ಬವಾಗುತ್ತದೆ.

ಹಿಂದೆ ಈ ಪ್ರದೇಶದಲ್ಲಿ ಸಿಡಿ ಆಡಲಾಗುತ್ತಿತ್ತು. ಆದರೆ ಇಂದು ಈ ಆಚರಣೆ ಇರುವುದಿಲ್ಲ. ಅಲ್ಲದೆ ಸುಣ್ಣದ ಕೇರಿ, ಅಶೋಕಪುರಂ, ರಾಜೇಂದ್ರನಗರ, ವೀರನಗೆರೆ ಮುಂತಾದ ಕಡೆಗಳಿಂದ ಇಲ್ಲಿಗೆ ಜನರು ಕಾಲ್ನಡಿಗೆಯಲ್ಲಿ ಬಂದು ಪೂಜೆ ಸಲ್ಲಿಸಿ, ತಂಪನ್ನು ನೀಡುತ್ತಿದ್ದರು. ಜಾತ್ರೆಯ ಸಿಡಿ, ಬಲಿ ಆಚರಣೆಗಳಂತಹ ಕಾರ್ಯಗಳಲ್ಲಿ ಕುರಿ, ಕೋಳಿಗಳನ್ನು ತಂದು ಬಲಿ ನೀಡಿ ತಮ್ಮ ಮನೆಗಳಿಗೆ ತೆಗೆದುಕೊಂಡು ಹೋಗುತ್ತಿದ್ದರು. ಅಲ್ಲದೇ ಊರಿನಲ್ಲಿ ವರಿ ಎತ್ತಿ ಅದರಿಂದ ಸಂಗ್ರಹವಾದ ಹಣದಿಂದ ಮರಿಗಳನ್ನು ತಂದು ಬಲಿ ನೀಡಿ ಅ ಮರಿಯ ಮಾಂಸವನ್ನು ಸಮನಾಗಿ ಹಂಚಿಕೊಂಡು ಎತ್ತಿನ ಗಾಡಿಗಳಲ್ಲಿ ತಗೆದುಕೊಂಡು ಹೋಗುತ್ತಿದ್ದರು. ಇಂದು ಈ ಆಚರಣೆಗಳೇನು ಕಂಡು ಬರುತ್ತಿಲ್ಲ.

“ಅರಮನೆ ಪಕ್ಕದ ಕೋಟೆ ಮಾರಮ್ಮ ದೇವಸ್ಥಾನದ ಮೇಲೆ ಅರಳಿಮರ ಉರುಳಿ ಬಿದ್ದು, ಇಬ್ಬರು ಸಾವನ್ನಪ್ಪಿರುವುದು ಅಪಶಕುನದ ಸಂಕೇತ. ಅರಮನೆ ಧಾರ್ಮಿಕ ಪರಂಪರೆಗೆ ಚ್ಯುತಿಯಾಗುತ್ತಿರುವುದರಿಂದ ಈ ದುರ್ಘಟನೆ ನಡೆದಿದೆ. ಮರವೇನೂ ಶಿಥಿಲಾವಾಗಿರಲಿಲ್ಲ, ಆದರೂ ದಸರಾ ಆರಂಭಕ್ಕೆ ಮುನ್ನವೇ ಬಿದ್ದಿರುವುದು, ಪ್ರತಿಯೊಬ್ಬರು ಗಂಭೀರವಾಗಿ ಚಿಂತಿಸಬೇಕಾಗಿದೆ. ರಾಜನ ಮರಣ, ರಾಣಿಯ ಕಣ್ಣೀರು ಈ ದುರ್ಘಟನೆಯ ಪ್ರತಿರೂಪ ಎಂದೇ ಭಾವಿಸಬಹುದು. ಇನ್ನಾದರು ಅರಮನೆ ಪರಂಪರೆಗೆ ಚ್ಯುತಿಬಾರದ ಹಾಗೆ ನಡೆದುಕೊಳ್ಳುವುದು ಅಗತ್ಯ”[34]

“ಇದು ಸ್ವಯಂಕೃತ ಅಪರಾಧದ ಲಕ್ಷಣ. ಧಾರ್ಮಿಕ ಹಿನ್ನೆಲೆಬಿಟ್ಟು ದಸರಾ ಆಚರಿಸಲು ಹೊರಟರೆ ಏನಾಗುತ್ತದೆ ಎಂಬುದಕ್ಕೆ ಮೈಸೂರಿನ ಮಾರಮ್ಮ ದೇವಸ್ಥಾನ ಅವಘಡ ಘಟನೆ ಸಾಕ್ಷಿ. ದಸರಾ ವಿಶ್ವವಿಖ್ಯಾತವಾಗಿರುವುದು ರಾಜ ಮನೆತನ, ಸಂಸ್ಕೃತಿ, ಧಾರ್ಮಿಕ ಹಿನ್ನೆಲೆಯಿಂದ. ಅದಕ್ಕೆ ಧಕ್ಕೆಯಾದರೆ ದೇವರ ಮುನಿಸನ್ನು ಈ ರೀತಿ ಕಾಣಬಹುದಾಗಿದೆ. ಈ ಘಟನೆ ನಿಜಕ್ಕೂ ನೋವುಂಟುಮಾಡಿದೆ. ಅರಮನೆಗೆ ಅದರದ್ದೇ ಆದ ಸಾಂಸ್ಕೃತಿಕ ನೆಲೆಗಟ್ಟಿದೆ. ಹಾಗಾಗಿ ದಸರೆಯನ್ನು ಧಾರ್ಮಿಕ ಪರಂಪರೆಯಲ್ಲಿ ಆಚರಿಸಬೇಕೇ ಹೊರತು, ಆಡಳಿತಶಾಹಿಯಿಂದಲ್ಲ. ಈ ಬಗ್ಗೆ ನಮ್ಮನ್ನಾಳುವ ಜನನಾಯಕರು ಇನ್ನಾದರೂ ಅರಿಯಬೇಕಿದೆ.[35]

**ಬಿಸಿಲು ಮಾರಮ್ಮ ಜಾತ್ರೆ :** ನಗರದ ತೊಣಚಿಕೊಪ್ಪಲಿನಲ್ಲಿರುವ ಇತಿಹಾಸ ಪ್ರಸಿದ್ಧ ಗ್ರಾಮದೇವತೆ ಬಿಸಿಲು ಮಾರಮ್ಮ ದೇವಿಯ ಮೂಲ ಸನ್ನಿಧಿಯಲ್ಲಿ ವಾರ್ಷಿಕ ಜಾತ್ರಾ ಮಹೋತ್ಸವದಂದು ಬೆಳಗ್ಗೆ 8ರಿಂದ ರಾತ್ರಿ 8ರವರೆಗೆ ಹಲವಾರು ಪೂಜಾ ವಿಧಿವಿಧಾನಗಳನ್ನು ನಡೆಸಲಾಗುತ್ತದೆ. ಅನಂತರ ರಾತ್ರಿ 8.30ರಿಂದ 11.30ರವರೆಗೆ ಮೆರವಣಿಗೆ ನಡೆಸಲಾಯಿತು. ರಾತ್ರಿ 9.30ಕ್ಕೆ ದೇವಸ್ಥಾನದಿಂದ ಹೂವಿನ ಪಲ್ಲಕ್ಕಿಯಲ್ಲಿ ದೇವಿಯನ್ನು ಅಲಂಕೃತಗೊಳಿಸಿ ಮೆರವಣಿಗೆಯಲ್ಲಿ ಸಾಗಿ ಬೆಳಗಿನ ಜಾವ 4ಕ್ಕೆ ಅಂತ್ಯಗೊಂಡಿತು. ಈ ಜಾತ್ರೆಯು ಪ್ರತಿವರ್ಷ ಮಹಾಶಿವರಾತ್ರಿಯ ಹಿಂದಿನ ಸೋಮವಾರದಂದು ನಡೆಸುವುದು ಹಿಂದಿನಿಂದ ನಡೆದುಕೊಂಡು ಬಂದಿರುವ ಸಂಪ್ರದಾಯವಾಗಿದೆ.

ತೊಣಚಿಕೊಪ್ಪಲು ಗ್ರಾಮದ ಮೂಲದೇವರು ಹುಚ್ಚಮ್ಮತಾಯಿ ದೇವಸ್ಥಾನದಿಂದ ತಂಪು ಆರತಿ(ತಂಬಿಟ್ಟು) ಹೊತ್ತು ಮೆರವಣಿಗೆ ಹೊರಡುತ್ತದೆ. ಅಲ್ಲಿಂದ ಭಕ್ತರು ರಾಜ ಬೀದಿಯಲ್ಲಿ ಮೆರವಣಿಗೆಯಲ್ಲಿ ಸಾಗಿ ಬಿಸಿಲು ಮಾರಮ್ಮ ದೇವಸ್ಥಾನಕ್ಕೆ ಬರುತ್ತಾರೆ. ಅನಂತರ ಹಿರಿಮಾತೆ

ಎಂಬ ವಿಶೇಷ ಪೂಜೆ, ಹೊಂಬಾಳೆ ಪೂಜೆ ಮುಗಿದ ನಂತರ ಅಲಂಕೃತಗೊಂಡು ಮಾರಮ್ಮ ದೇವತೆಯನ್ನು ಸಾರ್ವಜನಿಕರ ದರ್ಶನಕ್ಕೆ ಬಿಡಲಾಗುತ್ತದೆ.

ಬಿಸಿಲು ಮಾರಮ್ಮ ಹೆಸರೇ ಹೇಳುವಂತೆ ಈ ದೇವಿಯ ಗರ್ಭಗುಡಿಯ ಮೇಲೆ ಛಾವಣಿ ಇಲ್ಲ ನಾಲ್ಕುಗೋಡೆಗಳ ಮಧ್ಯೆ ನೆಲೆಸಿರುವ ಮಾರಮ್ಮ ಗುಡಿ ಮೇಲ್ಛಾವಣಿ ತೆರೆದಿದೆ. ಗರ್ಭಗುಡಿಯೊಳಗೆ ಬೇವಿನ ಮರ ಹಾಗೂ ಅರಳಿ ವೃಕ್ಷಗಳು ಇವೆ. ಬಿಸಿಲು, ಮಳೆ, ಗಾಳಿ ಯಾವುದೇ ಸಂದರ್ಭದಲ್ಲೂ ಸೂರನ್ನು ಮುಚ್ಚುವುದಿಲ್ಲ. ಉದ್ಭವ ಮೂರ್ತಿ ಇರುವುದು ಇಲ್ಲಿನ ವಿಶೇಷ. ಈ ದೇವಸ್ಥಾನಕ್ಕೆ ಸುಮಾರು 400ವರ್ಷಗಳ ಇತಿಹಾಸವಿದ್ದು, ಪ್ರಾರಂಭದಲ್ಲಿ ಗುಡಿಯಾಗಿ, ದೇವಸ್ಥಾನವಾಗಿ ಅನಂತರ ರಾಜಗೋಪುರ ನಿರ್ಮಿಸಿಕೊಂಡು ಶ್ರೀ ಬಿಸಿಲು ಮಾರಮ್ಮ ದೇವತೆ ಈ ಸ್ಥಳದಲ್ಲಿ ನೆಲೆಸಿದ್ದಾಳೆ. ಹಿಂದೆ ಮೈಸೂರಿನ ಮಹಾರಾಜರು, ಮಹಾರಾಣಿಯರು ಇಲ್ಲಿನ ಜಾತ್ರೆಗೆ ಬರುತ್ತಿದ್ದರೆಂದು ಹೇಳುತ್ತಾರೆ. ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುತ್ತಿರುವ ದೇವತೆಗೆ ಭಕ್ತರು ಪ್ರತಿನಿತ್ಯ ಪೂಜೆ ಸಲ್ಲಿಸುತ್ತಾರೆ.

**ಇತಿಹಾಸ :** ಈ ಪುಣ್ಯಸ್ಥಳ ಮೊದಲು ಕೃಷಿ ಭೂಮಿಯಾಗಿದ್ದು, ಕೃಷಿ ಕಾರ್ಯಮಾಡುವಾಗ ಭೂಮಿಯಲ್ಲಿ ನೇಗಿಲು ಮುರಿಯುತ್ತದೆ. ಅನಂತರ ಆಸ್ಥಳದಲ್ಲಿ ಉದ್ಭವ ಮೂರ್ತಿ ಸಿಗುತ್ತದೆ. ಊರಿನ ಯಜಮಾನರಿಗೆ ಕನಸಿನಲ್ಲಿ ದೇವಿ ಹೇಳಿದನಂತರ ಆ ಸ್ಥಳದಲ್ಲಿ ಸಣ್ಣಗುಡಿ ನಿರ್ಮಿಸಲಾಗಿತ್ತು. ಎಂದು ಹೇಳಲಾಗುತ್ತದೆ. ಮಾರಮ್ಮನ ಆಜ್ಞೆಯಂತೆ ದೇವಿಯ ಗರ್ಭಗುಡಿಗೆ ಮೇಲ್ಛಾವಣಿ ಇಲ್ಲದೆ ಗುಡಿ ನಿರ್ಮಿಸಲಾಗಿದೆ. ಈ ದೇವಸ್ಥಾನದಲ್ಲಿ ಮಂಗಳವಾರ, ಶುಕ್ರವಾರ ವಿಶೇಷಪೂಜೆ ನಡೆಯುತ್ತದೆ.

**ಮಹದೇಶ್ವರ ಜಾತ್ರೆ (ಕುಂಬಾರ ಕೊಪ್ಪಲು) :** ಮೈಸೂರು ನಗರದ ಕುಂಬಾರಕೊಪ್ಪಲಿನಲ್ಲಿ ದೀಪಾವಳಿ ಹಬ್ಬದ ಅಂಗವಾಗಿ ಇತಿಹಾಸ ಪ್ರಸಿದ್ಧವಾದ ಮಹದೇಶ್ವರ ಜಾತ್ರೆಯನ್ನು ಪ್ರತಿವರ್ಷವು ತಪ್ಪದೆ ನಡೆಸಲಾಗುತ್ತದೆ. ಅಂದು ಮಹದೇಶ್ವರ ರಥೋತ್ಸವವು ವೈಭವಯುತವಾಗಿ ನಡೆಯಿತು. ಜಾತ್ರೆಯ ಮೊದಲ ದಿನವಾದ ಬುದವಾರ (07.11.2018) ಮಹದೇಶ್ವರ ದೇವರಿಗೆ ಎಣ್ಣೆ ಮಜ್ಜನವನ್ನು ಮಾಡಿಸಲಾಯಿತು. ಎರಡನೆದಿನ ಕೆ.ಆರ್.ಎಸ್ ರಸ್ತೆಯಲ್ಲಿರುವ ತಿಪ್ಪಾಜಿ ಕೊಳಕ್ಕೆ ದೇವರ ಮೂರ್ತಿಯನ್ನು ತಗೆದುಕೊಂಡು ಹೋಗಿ ಶುಚಿಗೊಳಿಸಿ, ಅಲ್ಲಿ ವಿಶೇಷ ಪೂಜೆಯನ್ನು ಸಲ್ಲಿಸಲಾಯಿತು. ಅನಂತರ ಆಕರ್ಷಕವಾಗಿ ಅಲಂಕೃತಗೊಂಡಿದ್ದ ರಥದ ಮೇಲಿನ ಹುಲಿವಾಹನದಲ್ಲಿ ದೇವರ ಮೂರ್ತಿ ಯನ್ನು ಪ್ರತಿಷ್ಠಾಪಿಸಿ, ದೇವಾಲಯಕ್ಕೆ ತಂದು ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು.

ಅಂದು ಮಧ್ಯರಾತ್ರಿ ಎರಡು ಗಂಟೆಗೆ ಅದೇ ರಥದಲ್ಲಿ ದೇವರನ್ನು ಪ್ರತಿಷ್ಠಾಪಿಸಿ ಕುಂಬಾರ ಕೊಪ್ಪಲಿನ ಪ್ರಮುಖ ಬೀದಿಗಳಲ್ಲಿ ರಥೋತ್ಸವವು ಸಾಗಿತು. ದೇವರ ಮೆರವಣಿಗೆಯಲ್ಲಿ ಸುಮಾರು 800ಕ್ಕೂ ಹೆಚ್ಚು ಮಂದಿ ಬಾಯಿಗೆ ಬೀಗ ಹಾಕಿಸಿಕೊಂಡು ಸಾಗುವುದರೊಂದಿಗೆ ಹರಕೆ ತೀರಿಸಿದರು. ಇದನ್ನು ಗಮನಿಸಿದಾಗ ದೇವರ ಮೇಲಿನ ನಂಬಿಕೆ ಮತ್ತು ಆಚರಣೆಗಳು ಇನ್ನು ಪ್ರಭಲವಾಗುತ್ತಿರುವುದನ್ನು ಕಾಣಬಹುದಾಗಿದೆ. ರಥೋತ್ಸವದ ಮುಂದೆ ಜನಪದ ಕಲಾ ತಂಡಗಳಾದ ವೀರಗಾಸೆ, ಕಂಸಾಳೆ, ಪೂಜಾಕುಣಿತ, ಗಾರುಡಿಗೊಂಬೆ, ತಮಟೆ ವಾದನ ಮುಂತಾದ ಕಲೆಗಳ ಪ್ರದರ್ಶನಗಳು ಸಾಗಿದವು. ಇವು ಎಲ್ಲರನ್ನು ಭಕ್ತಿ ಭಾವದಿಂದ ಒಂದೆಡೆ ಸೆಳೆಯುವ ಸಾಧನವಾಗಿ ಹಾಗು ಭಾವನಾತ್ಮಕವಾಗಿ ಭಕ್ತಪರವಶವಾಗುವಂತೆ ಮಾಡಿದವು. ಪ್ರತಿ ಮನೆಯವರು ದೇವರನ್ನು ಸ್ವಾಗತಿಸಿ ಹಣ್ಣು ಕಾಯಿ ನೀಡಿ ಪೂಜೆ ಮಾಡಿಸಿದರು. ಕೆಲವರು ತಮ್ಮ ಮನೆಮುಂದೆ ಬಂದಾಗ ಈಡುಗಾಯಿ ಒಡೆದರು. ಮನೆಯಮುಂದೆ ಬಣ್ಣ ಬಣ್ಣದ ರಂಗೋಲಿಯನ್ನು ಹಾಕಿ ರಥೋತ್ಸವವನ್ನು ಸ್ವಾಗತಿಸಿದರು. ಅಲ್ಲದೆ ಪ್ರತಿಮನೆಯ ಮುಂದೆಯು ಹಣತೆಯನ್ನು ಹಚ್ಚಿ ಬೆಳಕನ್ನು ಚೆಲ್ಲಿದ್ದರು. ವಿದ್ಯುತ್ ದೀಪಗಳಿಂದ ಊರೆಲ್ಲ ಅಲಂಕೃತಗೊಂಡಿತ್ತು. ಉತ್ಸವವು ಎಲ್ಲಾ ಪ್ರಮುಖ ಬೀದಿಗಳಲ್ಲಿ ಸಾಗಿ ಬೆಳಗ್ಗೆ ಸುಮಾರು 10ಗಂಟೆಗೆ ದೇವಸ್ಥಾನಕ್ಕೆ ಮರಳಿತು. ದೇವಾಲಯದ ಮುಂದೆ 11ಗಂಟೆಗೆ ಕೊಂಡ ಹಾಯುವ ವ್ಯವಸ್ಥೆ ಮಾಡಲಾಗಿತ್ತು. ಹರಕೆ ಹೊತ್ತವರು ಕೊಂಡವನ್ನು ಹಾಯ್ದು ಹರಕೆ ತೀರಿಸುವರು. ಸಾಮಾನ್ಯವಾಗಿ ಮಧ್ಯಾಹ್ನ 12ಗಂಟೆಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗತ್ತದೆ. ಸಾವಿರಾರು ಭಕ್ತರು ಇದರಲ್ಲಿ ಭಾಗವಹಿಸಿ ಪ್ರಸಾದ ಸ್ವೀಕರಿಸಿ ಪುನೀತರಾಗುತ್ತಾರೆ. ಈ ಜಾತ್ರೆಗೆ ಕುಂಬಾರಕೊಪ್ಪಲಿನ ಜನರು ಮಾತ್ರವಲ್ಲದೆ ವಿವಿಧೆಡೆಯಿಂದ ಸಾವಿರಾರು ಭಕ್ತರು ಆಗಮಿಸುತ್ತಾರೆ. ಜಾತ್ರಾ ಮಹೋತ್ಸವದ ಅಂಗವಾಗಿ ರಾಜ್ಯ ಮಟ್ಟದ ಕುಸ್ತಿ, ಕಬ್ಬಡಿ ಪಂದ್ಯಾವಳಿಗಳನ್ನು ಆಯೋಜಿಸಲಾಗುತ್ತದೆ.

## ಉತ್ಸವಗಳು

**ಚಾಮುಂಡೇಶ್ವರಿ ತೆಪ್ಪೋತ್ಸವ :** ಜಾನಪದ ಸೊಗಡಿರುವ ಸಾಂಸ್ಕೃತಿಕ ಉತ್ಸವಗಳಲ್ಲಿ ದೇವಿಯ ತೆಪ್ಪೋತ್ಸವವು ಒಂದಾಗಿದೆ. ಚಾಮುಂಡೇಶ್ವರಿಯ ರಥೋತ್ಸವ ಮುಗಿದ ಎರಡು ದಿನಗಳಾದ ಮೇಲೆ ದೇವಾಲಯದಿಂದ ಅಲ್ಲೇ ಸ್ವಲ್ಪ ಕೆಳಗಿರುವ ದೇವಿಕೆರೆಯಲ್ಲಿಯೇ ಅಮ್ಮನವರ ತೆಪ್ಪೋತ್ಸವವು ಜರುಗುವುದು. ಇದೇ ಸಂದರ್ಭದಲ್ಲಿ ಸಾವಿರಾರು ದೀಪಗಳನ್ನು ಹಚ್ಚಿ ಅಲಂಕರಿಸ ಲಾಗಿರುವುದರಿಂದ, ಈ ದೇವಿಕೆರೆಯನ್ನು 'ಸಾವಿರ ದೀಪಗಳ ಸರೋವರ' ಎಂದು ಕರೆಯ ಲಾಗುತ್ತದೆ. ಸಾಮಾನ್ಯವಾಗಿ ಈ ತೆಪ್ಪೋತ್ಸವವು ಸಂಜೆಯ ವೇಳೆಯಲ್ಲಿ ಜರುಗುವುದರಿಂದ

ಕೆರೆಯ ಸುತ್ತಲು ಜಗಮಗಿಸುವ ವಿದ್ಯುದೀಪಗಳಿಂದ ಅಲಂಕರಿಸಲಾಗಿರುತ್ತದೆ. ಸುಮಾರು ಹತ್ತು ಅಡಿ ಉದ್ದಗಲವಿರುವ ತೆಪ್ಪವನ್ನು ನಿರ್ಮಿಸಿ ಅದನ್ನು ಹೂವು ಮತ್ತು ವಿದ್ಯುದೀಪಗಳಿಂದ ಅಲಂಕರಿಸಿ ಮಧ್ಯಭಾಗದಲ್ಲಿ ದೇವಿಯನ್ನು ಇರಿಸಲು ಐದು ಅಡಿ ಎತ್ತರದ ಪೀಠವನ್ನು ನಿರ್ಮಿಸಲಾಗಿರುತ್ತದೆ. ಐದು ಅಡಿ ಪೀಠದ ಮೇಲೆ ದೇವಿಯನ್ನು ಇರಿಸುವುದರಿಂದ ದರ್ಶನ ಪಡೆಯಲು ಬಂದಿರುವ ಎಲ್ಲರಿಗೂ ದೇವಿಯ ಮೂರ್ತಿ ಚೆನ್ನಾಗಿ ಕಾಣಿಸುತ್ತದೆ. "ಈ ಹಿಂದೆ ದೇವಿಕೆರೆಗೆ ಕಾವೇರಿ ನೀರನ್ನು ಕೊಳಾಯಿಗಳ ಮೂಲಕ ತುಂಬಿ ಚಾಮುಂಡೇಶ್ವರಿ ತೆಪ್ಪೋತ್ಸವ ತಡೆಯಿಲ್ಲದೆ ನಡೆಯಲು ಅನುಕೂಲ ಮಾಡಿಕೊಡುತ್ತಿದ್ದರಂತೆ"[36] ದೇವಿಕೆರೆಯ ಉತ್ತರದ ಅಡ್ಡಗೋಡೆಯ ಕೆಳಗೆ ಅರ್ಧಚಂದ್ರಾಕೃತಿಯಲ್ಲಿರುವ ಮೆಟ್ಟಿಲುಗಳ ಜಾಗವನ್ನು ಮಹಿಳೆಯರಿಗಾಗಿ ಕಾಯ್ದಿರಿಸಲಾಗಿರುತ್ತದೆ. ಕೊಳದ ಪಶ್ಚಿಮದಲ್ಲಿರುವ ವೇದಿಕೆಯಲ್ಲಿ ರಾಜಮನೆತನದವರಿಗೆ ಆಸನಗಳು ಮೀಸಲಾಗಿರುತ್ತವೆ. ಮಹಾರಾಜರು ಈ ವೇದಿಕೆಗೆ ಆಗಮಿಸುತಿದ್ದಂತೆ ಒಮ್ಮೆಲೆ ದೇವಿಕೆರೆಯ ಸುತ್ತಲು ಅಳವಡಿಸಿರುವ ವಿದ್ಯುದೀಪಗಳು ಜಗಮಗಿಸುತ್ತವೆ. ಅರಮನೆಯ ವಾದ್ಯವೃಂದದವರು ರಾಜರಿಗಾಗಿ, ಅವರ ಪರಿವಾರದವರಿಗಾಗಿ ಸ್ವಾಗತ ಗೀತೆಯನ್ನು ನುಡಿಸುತ್ತಾರೆ.

ತೆಪ್ಪದ ನಡುವೆ ಸಾಲಂಕೃತ ಮಂಟಪದಲ್ಲಿ ರಾಶಿ ಹೂಗಳು ಮತ್ತು ವಜ್ರ, ವೈಢೂರ್ಯಗಳ ಆಭರಣಗಳಿಂದ ಅಲಂಕರಿಸಲ್ಪಟ್ಟ ಚಾಮುಂಡೇಶ್ವರಿ ತಾಯಿಗೆ ಪ್ರಥಮ ಮಂಗಳಾರತಿ ಮಾಡಿ, ಮಹಾರಾಜರಿಗೆ ಮಂಗಳಾರತಿ ನೀಡಿದ ಮೇಲೆ ತೆಪ್ಪ ನೀರಿನಲ್ಲಿ ಮಂದಗತಿಯಲ್ಲಿ ಚಲಿಸಲಾರಂಭಿಸುತ್ತದೆ. ನೆರೆದವರು ಅದನ್ನು ಕಣ್ತುಂಬಿಕೊಂಡು ಮನದ ಬೇಡಿಕೆಗಳನ್ನು ಹರಕೆಯ ರೂಪದಲ್ಲಿ ಕಟ್ಟಿಕೊಳ್ಳುವುದಿದೆ. ತೆಪ್ಪವು ಮೂರು ಬಾರಿ ಕೆರೆಯ ಸುತ್ತಲು ಪ್ರದಕ್ಷಿಣೆ ಬರುತ್ತದೆ. ಅಂತಿಮವಾಗಿ ಪ್ರದಕ್ಷಿಣೆ ಮುಗಿದಮೇಲೆ ಮತ್ತೊಮ್ಮೆ ದೇವಿಗೆ ಮಂಗಳಾರತಿಯೊಂದಿಗೆ ಪೂಜೆಸಲ್ಲಿಸಲಾಗುತ್ತದೆ. ಅನತಿ ದೂರದಲ್ಲಿ ಕುಳಿತಿರುವ ಅರಮನೆಯ ಆಸ್ಥಾನ ಸಂಗೀತ ವಿದ್ವಾಂಸರು ದೇವಿಸ್ತುತಿಯ ಗಾಯನ ಸೇವೆ ಸಲ್ಲಿಸುತ್ತಾರೆ. ಸುಮಾರು ನಾಲ್ಕು ಸಾವಿರ ಜನರು ಆಸನರಾಗಿರುತ್ತಾರೆ. ದೇವಿಯ ಸಮ್ಮುಖದಲ್ಲಿ ಭಕ್ತಿಶ್ರದ್ಧೆಯ ಪುನೀತ ಭಾವನೆ; ಸಮರ್ಪಣೆಯ ಅನುಭವದೊಂದಿಗೆ ನೀರವ ಗಂಭೀರತೆಯ ಸರಳ ತೆಪ್ಪೋತ್ಸವ ಅಮರ ಹಂಸಗೀತೆಯ ಸುಂದರ ಮುಕ್ತಾಯವನ್ನು ಸಂಕೇತಿಸುತ್ತದೆ.

ಹರಕೆ ಹೊತ್ತವರು ತೆಪ್ಪೋತ್ಸವ ನೋಡಲು ಬರುತ್ತಾರೆ. ತೆಪ್ಪೋತ್ಸವ ನೋಡಲು ಬರುತ್ತೇನೆ ಎಂದು ಹರಕೆ ಕಟ್ಟಿಕೊಳ್ಳುವುದೇ ಇಲ್ಲಿಯ ಸಾಮಾನ್ಯ ಹರಕೆಗಳಲ್ಲಿ ಒಂದಾಗಿದೆ.

**ಶ್ರೀ ದತ್ತವೆಂಕಟೇಶ್ವರಸ್ವಾಮಿ ತೆಪ್ಪೋತ್ಸವ :** ಶ್ರೀಗಣಪತಿ ಸಚ್ಚಿದಾನಂದ ಆಶ್ರಮದಲ್ಲಿರುವ ಸಪ್ತರ್ಷಿ ಸರೋವರ ಕೊಳದಲ್ಲಿ ಶ್ರೀ ದತ್ತ ವೆಂಕಟೇಶ್ವರಸ್ವಾಮಿ ತೆಪ್ಪೋತ್ಸವವು ಭಕ್ತಾದಿಗಳ ಸಮ್ಮುಖದಲ್ಲಿ ಸಂಜೆ ವಿಜೃಂಭಣೆಯಿಂದ ನೆರವೇರುತ್ತದೆ. ಸಂಜೆ 6.30ರ ವೇಳೆಗೆ ದೇವಸ್ಥಾನದಿಂದ ಹೊರಟ ಶ್ರೀ ದತ್ತ ವೆಂಕಟೇಶ್ವರಸ್ವಾಮಿ ಪಲ್ಲಕ್ಕಿ ಉತ್ಸವ 6.45ರ ವೇಳೆಗೆ ಸಪ್ತರ್ಷಿ ಸರೋವರ ಕೊಳದ ಅಂಗಳಕ್ಕೆ ತರಲಾಗುತ್ತದೆ. ನಂತರ ಶ್ರೀ ದತ್ತ ವೇಂಕಟೇಶ್ವರಸ್ವಾಮಿಗೆ ಪೂಜೆ ಮತ್ತು ಮಹಾಮಂಗಳಾರತಿ ಮಾಡಲಾಗುವುದು. 7ಗಂಟೆಗೆ ಹೂವು, ತುಳಸಿ, ತಳಿರು, ತೋರಣ ಮತ್ತು ವಿದ್ಯುತ್ ದೀಪಗಳಿಂದ ಅಲಂಕೃತಗೊಂಡಿದ್ದ ಹಂಸದ ಮಾದರಿಯಲ್ಲಿದ್ದ ತೆಪ್ಪದಲ್ಲಿ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗುತ್ತದೆ. ಅನಂತರ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು ಶ್ರೀ ದತ್ತ ವೆಂಕಟೇಶ್ವರಸ್ವಾಮಿಗೆ ಪೂಜೆ ಸಲ್ಲಿಸಿ, ಸಪ್ತರ್ಷಿ ಸರೋವರ ಕೊಳವನ್ನು 10ಸುತ್ತು ಪ್ರದಕ್ಷಿಣೆ ಹಾಕಿಸಿ, ಇದೇ ವೇಳೆಯಲ್ಲಿ ಕ್ಷೇತ್ರದ ವಿಶಿಷ್ಟತೆ ಮತ್ತು ಮಹಿಮೆಗಳ ಕುರಿತು ವಿವರಿಸುವರು.

ಪ್ರದಕ್ಷಿಣೆ ಹಾಕಿದ ಅನಂತರ ಶ್ರೀ ವೆಂಕಟೇಶ್ವರಸ್ವಾಮಿಗೆ ಪೂಜೆ ಸಲ್ಲಿಸಿ, ತೆಪ್ಪದಿಂದ ತಂದು ವಾದ್ಯ ಮೇಳದೊಂದಿಗೆ ಪಲ್ಲಕ್ಕಿಯಲ್ಲಿ ಕೂರಿಸಿ, ಉತ್ಸವದ ಮೆರವಣಿಗೆಯ ಮೂಲಕ ದೇವಸ್ಥಾನಕ್ಕೆ ತಂದು ಪೂಜೆಸಲ್ಲಿಸಲಾಗುತ್ತದೆ. ಈ ಸಂದರ್ಭಕ್ಕೆ ದೇಶ–ವಿದೇಶಗಳಿಂದ ಬಂದಿದ್ದ ಸಾವಿರಾರು ಭಕ್ತರು ಇದಕ್ಕೆ ಸಾಕ್ಷಿಯಾಗುತ್ತಾರೆ.

## ವರ್ಧಂತಿ ಉತ್ಸವ

ಚಾಮುಂಡಿಬೆಟ್ಟದಲ್ಲಿ 'ಕನ್ಯಾ ಕನ್ನಡಿ' ಉತ್ಸವದ ಮಹತ್ವ ಅರಿತ ಮೈಸೂರು ಸಂಸ್ಥಾನದ ಯದುವಂಶದ ರಾಜ ಮನೆತನ ತಮ್ಮ ಕುಲದೇವಿಯೂ ಆಗಿರುವ ಚಾಮುಂಡೇಶ್ವರಿ ದೇವಿಯ ಪಂಚಲೋಹದ ಉತ್ಸವ ಮೂರ್ತಿಯನ್ನು ಕೊಡುಗೆಯಾಗಿ ನೀಡಿದ್ದಾರೆ. ಸರಿಸುಮಾರು 200 ವರ್ಷಗಳ ಹಿಂದೆ ನೀಡಿದ ಉತ್ಸವ ಮೂರ್ತಿಯನ್ನು 'ಆಷಾಢ ಮಾಸ'ದಲ್ಲಿನ ಕೃಷ್ಣಪಕ್ಷದ, ರೇವತಿ ನಕ್ಷತ್ರದ ದಿನದಂದು ದೇವಾಲಯದಲ್ಲಿ ಪ್ರತಿಷ್ಠಾಪಿಸಲಾಗಿದೆ. ಅಂದಿನಿಂದ ಪ್ರತಿವರ್ಷ ಉತ್ಸವ ಮೂರ್ತಿ ಪ್ರತಿಷ್ಠಾಪಿಸಿದ ದಿನವನ್ನು 'ವರ್ಧಂತಿ ಮಹೋತ್ಸವ' ಎಂದು ಕರೆದು ಮೆರವಣಿಗೆ ನಡೆಸುವ ಸಂಪ್ರದಾಯಕ್ಕೆ ನಾಂದಿಯಾಡಲಾಗಿದೆ.

ನಾಡದೇವಿ, ಆದಿಶಕ್ತಿ, ಮಹಿಷಾಸುರ ಮರ್ಧಿನಿ ಹೀಗೆ ವಿವಿಧ ಹೆಸರುಗಳಿಂದ ಕರೆಸಿಕೊಳ್ಳುವ ಶಕ್ತಿದೇವಿ 'ಚಾಮುಂಡೇಶ್ವರಿ'ಗೂ ಜನ್ಮದಿನವಿದೆ. ಅದನ್ನು ವರ್ಧಂತಿ ಮಹೋತ್ಸವವಾಗಿ ಪ್ರತಿ ವರ್ಷ ಆಚರಿಸ್ಪಡುತ್ತದೆ. ಬೆಟ್ಟದ ಚಾಮುಂಡೇಶ್ವರಿ ವರ್ಧಂತ್ಯುತ್ಸವದ ದಿನ

ಸಿಂಹ ಪೀಠದಲ್ಲಿ ವಿವಿಧ ಆಭರಣಗಳಿಂದ ಅಲಂಕೃತವಾಗಿರುವ ಶಕ್ತಿದೇವಿಯ ದರ್ಶನಕ್ಕೆ ವಿಶೇಷ ಮಹತ್ವ ಹಾಗೂ ಭಕ್ತಿಯ ಇತಿಹಾಸವೇ ಇದೆ. ವರ್ಧಂತಿ ಮಹೋತ್ಸವದ ದಿನದಂದು ಯದುವಂಶದ ರಾಜಮನೆತನದವರ ಹೆಸರಿನಲ್ಲಿ ನಾಡದೇವಿಗೆ ಮೊದಲ ಪೂಜೆ ನಡೆಯಲಿದೆ. ಪ್ರತಿ ವರ್ಷ ರಾಜಮನೆತನದ ಪ್ರಮುಖರು ಬೆಟ್ಟಕ್ಕೆ ಆಗಮಿಸಿ ಪೂಜೆ ಸಲ್ಲಿಸುವ ವಾಡಿಕೆ ಮುಂದುವರೆದಿದೆ.

ಅಂದು ಬೆಳಗ್ಗೆ 10.30ಕ್ಕೆ ಚಿನ್ನದ ಪಲ್ಲಕ್ಕಿಯಲ್ಲಿ ಅಮ್ಮನವರ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ದೇವಾಲಯದ ಸುತ್ತಲೂ ಸಕಲ ಬಿರುದು ಬಾವಲಿಗಳೊಂದಿಗೆ ಮೆರವಣಿಗೆ ಮಾಡಲಾಗುತ್ತದೆ. ಮೆರವಣಿಗೆ ಮುಗಿದ ಬಳಿಕ ಅಲ್ಲಿಯೇ ನಿರ್ಮಿಸಿದ್ದ ರುದ್ರಾಕ್ಷಿ ಮಂಟಪದಲ್ಲಿ ದೇವಿಯ ಉತ್ಸವ ಮೂರ್ತಿಯನ್ನು ಕೂರಿಸಿ ಮಂಟಪೋತ್ಸವ ನೆರವೇರಿಸಲಾಗುವುದು. ಅಲ್ಲದೆ ಸಂಜೆ ಪ್ರಾಕಾರದಲ್ಲಿ ಹಲವು ಬಗೆಯ ವಾಹನೋತ್ಸವಗಳನ್ನು ನೆರವೇರಿಸುವುದರೊಂದಿಗೆ ರಾತ್ರಿಯ ವೇಳೆಗೆ ವರ್ಧಂತಿ ಉತ್ಸವಕ್ಕೆ ತೆರೆಬೀಳುತ್ತದೆ.

ವರ್ಧಂತಿ ಉತ್ಸವದ ದಿನ ಚಾಮುಂಡಿಬೆಟ್ಟಕ್ಕೆ ಭಕ್ತ ಸಾಗರವೇ ಹರಿದು ಬರುತ್ತದೆ. ಕೆಲವು ಭಕ್ತರು ದೇವಾಲಯದ ಹೊರ ಭಾಗದಿಂದಲೇ ಕೈಮುಗಿದು ಭಕ್ತಿಯಿಂದ ಬೇಡಿಕೊಳ್ಳುತ್ತಿರುತ್ತಾರೆ. ಅನೇಕ ಭಕ್ತರು ತಾಯಿ ಚಾಮುಂಡೇಶ್ವರಿ ಹೆಸರಿನಲ್ಲಿ ಬೆಟ್ಟಕ್ಕೆ ಬರುವ ಭಕ್ತರಿಗೆ ನಾನಾ ರೀತಿಯ ತಿಂಡಿ ತಿನಿಸುಗಳನ್ನು ಪ್ರಸಾದದ ರೂಪದಲ್ಲಿ ವಿತರಿಸುತ್ತಿರುವುದು ಕಂಡುಬರುತ್ತದೆ. ಅಲ್ಲದೆ ಹರಕೆ ಹೊತ್ತ ಭಕ್ತರು ಮೆಟ್ಟಿಲುಗಳ ಮೂಲಕ ಬೆಟ್ಟ ಹತ್ತಿ ದೇವಿಯ ದರ್ಶನ ಪಡೆಯುತ್ತಾರೆ. ಇದೇ ಸಂದರ್ಭದಲ್ಲಿ ಬೆಟ್ಟ ಹತ್ತುವವರಿಗೆ, ಭಕ್ತರು ದೇವಿಯ ಹೆಸರಲ್ಲಿ ಪಾನಕ, ಮಜ್ಜಿಗೆ ವಿತರಿಸುತ್ತಿರುತ್ತಾರೆ.

ಮೈಸೂರು ನಗರ ಸೇರಿದಂತೆ ರಾಜ್ಯದ ವಿವಿಧೆಡೆ ವರ್ಧಂತ್ಯುತ್ಸವವನ್ನು ಆಚರಿಸಲಾಗುತ್ತದೆ. ಕೆ.ಜಿ.ಕೊಪ್ಪಲಿನ ಬಂದಂತಮ್ಮ ದೇವಾಲಯ, ಚಾಮರಾಜಪುರಂನ ಚಾಮುಂಡೇಶ್ವರಿ ದೇವಾಲಯ, ಅಗ್ರಹಾರದ ಚಾಮುಂಡೇಶ್ವರಿ ದೇವಾಲಯ, ಹೆಬ್ಬಾಳಿನ ಚಾಮುಂಡೇಶ್ವರಿ ದೇವಾಲಯ ಹೀಗೆ ಇನ್ನು ಹಲವಾರು ನಗರದ ದೇವಾಲಯಗಳಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ಜರುಗುತ್ತವೆ. ಇದರ ಜೊತೆಗೆ ನಗರದ ವಿವಿಧ ಬಡಾವಣೆಗಳಲ್ಲಿ ಆಟೋ ಚಾಲಕರ ಸಂಘಗಳು, ಯುವ ಸಂಘಗಳು ಸಹ ವರ್ಧಂತಿಯ ವಿಶೇಷ ಪೂಜೆಸಲ್ಲಿಸಿ ಸಾರ್ವಜನಿಕರಿಗೆ ಪ್ರಸಾದ ವಿನಿಯೋಗಿಸುತ್ತಾರೆ.

**ಚಾಮುಂಡೇಶ್ವರಿ ಅಮ್ಮನವರ ವರ್ಧಂತಿ ಉತ್ಸವ (ಕನ್ನೇಗೌಡನ ಕೊಪ್ಪಲು)** : ಆಷಾಢ ಮಾಸದ ಮೂರನೇ ಮಂಗಳವಾರ ಜುಲೈತಿಂಗಳಲ್ಲಿ ಬರುವ ಅಮ್ಮನವರ ಜನ್ಮದಿನವನ್ನು (ವರ್ಧಂತಿ ಉತ್ಸವ) ಗ್ರಾಮದೇವತೆಯಾದ ಚಾಮುಂಡೇಶ್ವರಿ ಹಬ್ಬವಾಗಿ ಬಹಳ ವಿಜೃಂಭಣೆಯಿಂದ ಆಚರಣೆ ಮಾಡಿಕೊಂಡು ಬರುತ್ತಿದ್ದಾರೆ. ಪ್ರತಿ ಆಷಾಢ ಶುಕ್ರವಾರದಂದು ದೇವಾಲಯವನ್ನು ಅತ್ಯಂತ ಸುಂದರವಾಗಿ ಮತ್ತು ವಿಭಿನ್ನವಾಗಿ ತರಾವರಿ ಹೂವಿನಿಂದ ಅಲಂಕರಿಸಿ, ಹಬ್ಬದ ದಿನದಂದು ದೇವಿಯ ಉತ್ಸವ ಮೂರ್ತಿಯನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮಂಗಳ ವಾದ್ಯಗಳೊಡನೆ ಮೆರವಣಿಗೆ ಮಾಡಿಕೊಂಡು ಬರುತ್ತಿದ್ದಾರೆ. ಅದೇ ದಿನ ಸಂಜೆ ಉತ್ಸವ ಮುಗಿದ ಮೇಲೆ ಗ್ರಾಮದ ಗೃಹಿಣಿಯರು ವಿಶೇಷವಾದ ಸಾಲು ತಟ್ಟೆಯ ಪೂಜೆಯನ್ನು ಏಕಕಾಲದಲ್ಲಿ ನಡೆಸಿಕೊಂಡು ಬರುತ್ತಿದ್ದಾರೆ.

**ಸುಬ್ರಹ್ಮಣ್ಯಸ್ವಾಮಿ ರಥೋತ್ಸವ** : ಮೈಸೂರು ನಗರದ ಸುಬ್ಬರಾಯನ ಕೆರೆಯ ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಾಲಯದಲ್ಲಿ ಶ್ರೀ ಸುಬ್ರಹ್ಮಣ್ಯಸ್ವಾಮಿಯವರ ರಥೋತ್ಸವವು ಸುಬ್ರಹ್ಮಣ್ಯಷಷ್ಠಿಯಂದು ಅಲ್ಲಿನ ಪ್ರಮುಖ ಬೀದಿಗಳಲ್ಲಿ ನಡೆಯುತ್ತದೆ. ಮರದ ಚಿಕ್ಕದಾದ ರಥದಲ್ಲಿ ಸುಬ್ರಹ್ಮಣ್ಯಸ್ವಾಮಿಯ ಉತ್ಸವ ಮೂರ್ತಿಯನ್ನು ಕೂರಿಸಿ, ವಿವಿಧ ಹೂಗಳಿಂದ ಅಲಂಕರಿಸಲಾಗುತ್ತದೆ. ದೇವಾಲಯದಲ್ಲಿ ಬೆಳಗಿನಿಂದಲೇ ವಿವಿಧ ಧಾರ್ಮಿಕ ಪೂಜಾ ವಿಧಾನಗಳು, ಮಹಾಮಂಗಳಾರತಿ ನೆರವೇರಿಸುವರು. ರಥದ ಮುಂದೆ ಈಡುಗಾಯಿ ಒಡೆದ ನಂತರ, ರಥೋತ್ಸವಕ್ಕೆ ಚಾಲನೆ ದೊರೆಯುತ್ತದೆ. ರಥೋತ್ಸವದ ಮುಂದೆ ವೀರಗಾಸೆ, ಚಂಡೆವಾದ್ಯ ಮುಂತಾದ ಕಲಾತಂಡಗಳ ಕಲಾ ಪ್ರದರ್ಶನ ಉತ್ಸವದ ಕಳೆಯನ್ನು ಇನ್ನಷ್ಟು ಇಮ್ಮಡಿಗೊಳಿಸುತ್ತವೆ. ಉತ್ಸವದ ಉದ್ದಕ್ಕೂ ದೇವರ ಪ್ರಸಾದವಾಗಿ ಬಾಳೆಹಣ್ಣಿನ ರಸಾಯನ ಮತ್ತು ಮೊಸರನ್ನವನ್ನು ವಿತರಿಸಲಾಗುತ್ತದೆ. ಭಕ್ತರು ತಮ್ಮ ಮನೆಯ ಮುಂದೆ ಉತ್ಸವವು ಬಂದಾಗ ಹಣ್ಣುಕಾಯಿ ನೀಡಿ ಪೂಜೆ ಮಾಡಿಸಿ, ಮಂಗಳಾರತಿಯನ್ನು ತೆಗೆದುಕೊಳ್ಳುತ್ತಾರೆ. ಮಧ್ಯಾಹ್ನದ ವೇಳೆಗೆ ಉತ್ಸವವು ದೇವಾಲಯಕ್ಕೆ ಮರಳುತ್ತದೆ. ಅಲ್ಲಿ ದೇವರಿಗೆ ಪೂಜೆಯನ್ನು ಸಲ್ಲಿಸಿ ಭಕ್ತರ ದರ್ಶನಕ್ಕೆ ಅವಕಾಶಮಾಡಿ ಕೊಡಲಾಗುತ್ತದೆ. ಅನಂತರ ಮಧ್ಯಾಹ್ನ ಸಾವಿರಾರು ಭಕ್ತರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗುತ್ತದೆ. ಅಂದು ಹಲವಾರು ದೇವಾಲಯಗಳಲ್ಲಿ ವಿಶೇಷ ಪೂಜೆ ಪುನಸ್ಕಾರಗಳು ನೆರವೇರುತ್ತವೆ. ಅಲ್ಲದೆ ನಾಗರಕಲ್ಲಿಗೆ ಹಾಗೂ ಹುತ್ತಗಳಿಗೆ ಭಕ್ತರು ತನಿಯೆರೆಯುತ್ತಿರುವ ದೃಶ್ಯ ಸರ್ವೇಸಾಮಾನ್ಯವಾಗಿರುತ್ತದೆ.

**ಕಾಳಮ್ಮನ ಉತ್ಸವ :** ಅಶೋಕಪುರಂನ ಮೂರನೇ ಬೀದಿಯಲ್ಲಿರುವ ಕಾಳಮ್ಮನ ಉತ್ಸವದ ಹಬ್ಬ ನಿಗದಿಯಾದ ದಿನದಂದು, ಮಂಗಳವಾರ ರಾತ್ರಿವೇಳೆಯಲ್ಲಿ ನಡೆಯುತ್ತದೆ. ಪೂಜಾರಿ ಚಿಕ್ಕಯ್ಯನ ಮನೆಯವರು ಕಾಳಮ್ಮನ ಉತ್ಸವ ಮೂರ್ತಿಯ ಪ್ರಧಾನ ಪೂಜಾರಿಗಳು. ಹಬ್ಬದ ದಿನದಂದು ಪೂಜಾರಿಯು ಮಡಿಯಾಗಿ ದೇವಸ್ಥಾನದ ಗರ್ಭಗುಡಿಯನ್ನೆಲ್ಲಾ ಸ್ವಚ್ಚಗೊಳಿಸಿ, ದೇವಾಲಯದ ವಿಗ್ರಹಗಳಿಗೆ ಅರಿಶಿನ–ಕುಂಕುಮ ಹಚ್ಚಿ, ರೇಷ್ಮೆ ಜರಿಬಟ್ಟೆ ಮತ್ತು ಹೂವಿನಿಂದ ಅಲಂಕರಿಸುತ್ತಾನೆ. ಅನಂತರ ವಿಗ್ರಹಗಳಿಗೆ ಪೂಜೆಸಲ್ಲಿಸಿ ಮೆರವಣಿಗೆ ಹೊರಡುವಂತೆ ಸೂಚಿಸುತ್ತಾನೆ. ಉತ್ಸವ ಮೂರ್ತಿಯನ್ನು ಹೊರುವುದು ಮತ್ತು ದೇವರ ಗರ್ಭಗುಡಿಯ ಪೂರ್ಣ ಉಸಾಬರಿ ಈತನದೇ ಆಗಿರುತ್ತದೆ. ಹಬ್ಬದ ದಿನ ಉಪವಾಸವಿದ್ದು, ರಾತ್ರಿ ಉತ್ಸವ ಮುಗಿದಮೇಲೆ ಈತ ಊಟ ಮಾಡುವುದು. ಅದು ಸಸ್ಯಾಹಾರಮಾತ್ರ ಅಥವಾ ಫಲಾಹಾರ ಮಾತ್ರವಾಗಿರುತ್ತದೆ. ಪೂಜಾರಿಯಂತೆಯೇ ಅವರಿಗೆ ಇಬ್ಬರು ಸಹಾಯಕರಿರುತ್ತಾರೆ. ಇವರೂ ನೀತಿ ನಿಯಮಗಳಿಗೆ ಬದ್ಧರಾಗಿರುತ್ತಾರೆ. ಈ ಉತ್ಸವದ ಮೆರವಣಿಗೆಯು ಕಾಳಮ್ಮ ದೇವಾಲಯದ ಬೀದಿಗೆ ಮಾತ್ರ ಸೀಮಿತವಾಗಿರುತ್ತದೆ. ಉತ್ಸವ ಹೊರಟಾಗ ಮುಂದೆ ವಾದ್ಯ, ಕಂಸಾಳೆ, ಡೊಳ್ಳುಕುಣಿತ ಪ್ರದರ್ಶನದೊಂದಿಗೆ ಸಾಗುತ್ತದೆ. ಪ್ರತಿ ಮನೆಯವರು ಕಾಳಮ್ಮತಾಯಿಗೆ ಮನೆಯಮುಂದೆ ಬಂದಾಗ ಪೂಜೆಸಲ್ಲಿಸುತ್ತಾರೆ. ಈ ಉತ್ಸವದಲ್ಲಿ ತಂಬಿಟ್ಟಿನ ಆರತಿ, ಕಂದಲು ಸೇವೆಯ ಮೆರವಣಿಗೆಯು ಇರುತ್ತದೆ. ಕಾಳಮ್ಮನ ದೇವಾಲಯಕ್ಕೆ ಮೆರವಣಿಗೆ ವಾಪಾಸ್ ಬಂದಮೇಲೆ ಉತ್ಸವವು ಕೊನೆಗೊಳ್ಳುತ್ತದೆ.

**ಮೆರವಣಿಗೆ :** ಕನ್ನೇಗೌಡನ ಕೊಪ್ಪಲಿನ ಹಳೆಯ ಸಿದ್ದಪ್ಪಾಜಿ ದೇವಾಲಯದಲ್ಲಿ ದಾಳ ಹಾಕಿದರೆ, ಗ್ರಾಮದ ಗ್ರಾಮದೇವತೆಯಾದ ಚಾಮುಂಡೇಶ್ವರಿ ಹಬ್ಬ ನಡೆಯುತ್ತದೆ. ಈ ಪದ್ಧತಿ ಈಗಲೂ ಇದೆ. ದಾಳ ಹಾಕುವ ದಿನದಂದು ದೇವಾಲಯದ ಗರ್ಭಗುಡಿಯಲ್ಲಿರುವ ಕಂಡಾಯವನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ ವಿಶೇಷವಾದ ಪೂಜೆಯನ್ನು ಸಲ್ಲಿಸಲಾಗುತ್ತದೆ.

**ಸಿದ್ದಪ್ಪಾಜಿ ಕಂಡಾಯೋತ್ಸವ** : ಅಶೋಕಪುರಂನ ಎರಡನೆ ಮುಖ್ಯರಸ್ತೆಯ ಎಂಟನೆಯ ಬೀದಿಯಲ್ಲಿ ಸಿದ್ದಪ್ಪಾಜಿ ದೇವಾಲಯವಿದ್ದು, ಹಬ್ಬದಂದು ಕಂಡಾಯ ತರುವುದು ಪಾರಂಪರಿಕವಾಗಿ ಬೆಳೆದು ಬಂದಿರುವ ಸಂಪ್ರದಾಯವಾಗಿದೆ. ಸುಮಾರು ಎರಡೂವರೆ ಅಡಿ ಅಥವಾ ಮೂರು ಅಡಿ ಎತ್ತರವಿರುವ ಹಿತ್ತಾಳೆಯ ವೃತ್ತಾಕಾರದ ಕಂಬದ ಮೇಲ್ಭಾಗದಲ್ಲಿ ನಂದಿಯ ಪ್ರತಿಮೆ ಇದ್ದು, ನಂದಿಯ ಕೆಳಭಾಗದಲ್ಲಿ ತೆಳುವಾದ ಹಿತ್ತಾಳೆಯ ಚೌಕಾಕಾರದ ನಾಲ್ಕು

ಮೂಲೆಗಳಲ್ಲಿ ಸಣ್ಣ ಸಣ್ಣ ಗಂಟೆ ಗಳನ್ನು ಅಳವಡಿಸಿರುತ್ತಾರೆ. ಇದನ್ನು 'ಕಂಡಾಯ' ಎಂದು ಕರೆದು, ಅದನ್ನು ಸಿದ್ದಪ್ಪಾಜಿ ದೇವರ ಸಂಕೇತವೆಂದು ಭಾವಿಸಿ, ದೇವಸ್ಥಾನದ ದೇವರ ಕೋಣೆಯಲ್ಲಿ ಗದ್ದುಗೆಯ ಮೇಲೆ ಇಟ್ಟು ಪೂಜಿಸುತ್ತಾರೆ.

ಹಬ್ಬದ ದಿನದಂದು ಸಿದ್ದಪ್ಪಾಜಿ ಗುಡ್ಡರು ಹೋಮದ ಕಾರ್ಯವಾದ ಮೇಲೆ ಕಂಡಾಯವನ್ನು ಎಡಗೈಯಲ್ಲಿ ಹೆಗಲಿಗೆ ಆಸರೆಯಾಗಿ ಹಿಡಿದುಕೊಂಡು ಬಲಗೈಯಲ್ಲಿ ವಿಭೂತಿ ಉಂಡೆ ಹಿಡಿದಿರುತ್ತಾರೆ. ಈ ಕಂಡಾಯಕ್ಕೆ ವಿಭೂತಿ, ಅರಿಶಿನ ಕುಂಕುಮ, ಹೂವಿನಿಂದ ಅಲಂಕರಿಸಿದ್ದು, ಇದನ್ನು ಹೊತ್ತುಕೊಂಡು ಊರಿನ ಎರಡು ಪ್ರಮುಖ ಬೀದಿಗಳಲ್ಲಿ ವಾದ್ಯ ಮೇಳದವರೊಡನೆ ಮೆರವಣಿಗೆಯಲ್ಲಿ ಸಾಗುತ್ತಾರೆ. ಸಾಮಾನ್ಯವಾಗಿ ಸೋಮವಾರ ಮತ್ತು ಶುಕ್ರವಾರಗಳಂದು ಈ ಹಬ್ಬ ನಡೆಯುತ್ತದೆ. ಮೆರವಣಿಗೆಯು ಸ್ವಸ್ಥಾನಕ್ಕೆ ಬಂದು ಮುಕ್ತಾಯವಾದ ಮೇಲೆ ದೇವರ ಕಂಡಾಯವನ್ನು ತಗೆದುಕೊಂಡು ಹೋಗಿ ಗದ್ದುಗೆಯ ಮೇಲಿರಿಸುತ್ತಾರೆ. ಸಿದ್ದಪ್ಪಾಜಿ ಗುಡ್ಡರು ತಮ್ಮ ದೇವರವಾರವೆಂದು ಪರಿಗಣಿಸಿರುವ ಸೋಮವಾರದಂದು ಸ್ನಾನ ಮಡಿ ಮಾಡಿ ದೇವಸ್ಥಾನಕ್ಕೆ ಬಂದು ದೇವರಿಗೆ ಪೂಜೆ ಸಲ್ಲಿಸಿ ಭಿಕ್ಷಾಟನೆ ಮಾಡಬೇಕಾಗಿರುತ್ತದೆ.

**ಶ್ರೀ ನನ್ನೇಶ್ವರಸ್ವಾಮಿ ಕಲ್ಯಾಣಿ ದೀಪೋತ್ಸವ** : ಕಡೇ ಕಾರ್ತಿಕ ಮಾಸದ ಅಂಗವಾಗಿ ಶ್ರೀನನ್ನೇಶ್ವರಸ್ವಾಮಿ ದೇವರ ಕಲ್ಯಾಣಿ ದೀಪೋತ್ಸವ ಸೋಮವಾರ ವಿಜೃಂಭಣೆಯಿಂದ ನೆರವೇತ್ತದೆ. ಕಲ್ಯಾಣಿಯ ಸುತ್ತಲೂ ಟೇಬಲ್‌ಗಳನ್ನಿಟ್ಟು ಅದರ ಮೇಲೆ ಸಾಲಾಗಿ ಜೋಡಿಸಲಾಗಿದ್ದ ಹಣತೆಗಳನ್ನು ಮಕ್ಕಳು, ಮಹಿಳೆಯರು, ಯುವಕ-ಯುವತಿಯರು ಬೆಳಗಿಸಿ, ಹಬ್ಬದ ರೀತಿ ಆಚರಿಸುವರು. ಹಿನಕಲ್, ಹೂಟಗಳ್ಳಿ, ಕೂರ್ಗಳ್ಳಿ, ವಿಜಯನಗರ, ಮಂಚೇಗೌಡನಕೊಪ್ಪಲು, ಬೋಗಾದಿ ಸುತ್ತಮುತ್ತಲಿನ ಬಡಾವಣೆಗಳಿಂದ ಆಗಮಿಸಿ ಸಾವಿರಾರು ಭಕ್ತರು, ದೀಪಗಳಿಗೆ ತಮ್ಮೊಡನೆ ತಂದಿದ್ದ ಎಣ್ಣೆ, ಬತ್ತಿಗಳನ್ನು ಹಾಕಿ ಬೆಳಗಿಸಿ ಭಕ್ತಿಯ ಪರಾಕಾಷ್ಠೆ ಮೆರೆಯುತ್ತಾರೆ. ಅನಂತರ ದೀಪೋತ್ಸವದಲ್ಲಿ ಭಾಗವಹಿಸಿದ್ದ ಭಕ್ತಾದಿಗಳಿಗೆ ಕಲ್ಯಾಣಿ(ಕೊಳ)ಯ ಮತ್ತು ಹಿನಕಲ್ ಗ್ರಾಮದ ಅಭಿವೃದ್ಧಿ ಸಮಿತಿ(ರಿ) ಇವರು ಪ್ರಸಾದ ವಿತರಿಸುವರು.

**ಶಯನೋತ್ಸವ** : ಮೈಸೂರು ನಗರದ ಒಂಟಿಕೊಪ್ಪಲಿನ ಶ್ರೀ ವೆಂಕಟೇಶ್ವರಸ್ವಾಮಿಗೆ ದೇವಾಲಯದ ಗರ್ಭಗುಡಿಯಲ್ಲಿ ದೇವರಿಗೆ ಮಂಟಪಕಟ್ಟಿ ತೆಳು ಬಟ್ಟೆಯಿಂದ ಮಂಟಪಕ್ಕೆ ಪರದೆ ಮಾಡಿ ಹೂಗಳಿಂದ ಮಂಟಪವನ್ನು ಅಲಂಕರಿಸಿ, ಹಾಸಿಗೆ ಹಾಸಿ, ದಿಂಬನ್ನು ಇಟ್ಟು ದೇವರ ವಿಗ್ರಹಗಳನ್ನು ಅದರ ಮೇಲೆ ಕೂಡಿಸಿ ಹೂವು ಹಣ್ಣುಗಳನ್ನು ಇಟ್ಟು, ದೇವಾಲಯದ ಬಾಗಿಲನ್ನು ಮುಚ್ಚುತ್ತಾರೆ. ಇದು ದೇವರನ್ನು ಮಲಗಿಸುವ ಒಂದು ಪೂಜಾ ವಿಧಾನವಾಗಿದೆ. ಹೀಗೆ

ಶಯನೋತ್ಸವವನ್ನು ನೆರವೇರಿಸಲಾಗುತ್ತದೆ. ಮರುದಿನ ದೇವಾಲಯದ ಬಾಗಿಲು ತೆರೆದು, ಗೋವನ್ನು ತಂದು ದೇವಾಲಯದ ಒಳಗೆ ಬಿಟ್ಟು ಮೊದಲು ದೇವರಿಗೆ ಗೋವಿನ ಮುಖ ದರ್ಶನವಾದ ಮೇಲೆ ಮಹಾಮಂಗಳಾರತಿ ಮಾಡಿ ಅನಂತರ ಭಕ್ತರ ದರ್ಶನಕ್ಕೆ ಅನುವು ಮಾಡಿಕೊಡುತ್ತಾರೆ. ಮೈಸೂರಿನಲ್ಲಿ ಇದೊಂದು ವಿಶಿಷ್ಟ ಪೂಜಾ ವಿಧಾನವಾಗಿದೆ.

## 5.5 ಹರಕೆ ಪದ್ಧತಿ

ಹರಕೆ ಪದ್ಧತಿ ಜಗತ್ತಿನಾದ್ಯಂತ ಹಿಂದಿನಿಂದಲೂ ರೂಢಿಯಲ್ಲಿರುವ ಜನಪದ ಆಚರಣೆಗಳಲ್ಲಿ ಒಂದು. ತಾವು ನಂಬಿದ ಇಲ್ಲವೆ ತಮ್ಮ ಮನೆ ದೇವರುಗಳಲ್ಲಿ ಭಯ ಭಕ್ತಿಯಿಂದ ತಮ್ಮ ಇಷ್ಟಾರ್ಥವನ್ನು ನೆರವೇರಿಸುವಂತೆ ಕಾಣಿಕೆಗಳನ್ನು ನೀಡಲು ಮನಸಾರೆ ಒಪ್ಪಿಕೊಂಡು ದೇವರೊಂದಿಗೆ ಮಾಡಿಕೊಳ್ಳುವ ಒಡಂಬಡಿಕೆಯನ್ನು ಹರಕೆ ಎನ್ನಬಹುದು. ಹರಕೆಗಳನ್ನು ಪಡೆಯುವ ದೈವಗಳೆಲ್ಲ ಒಂದಲ್ಲ ಒಂದು ರೀತಿಯಲ್ಲಿ ಮಾನವ ಸೃಷ್ಟಿಯಾದವೆ. ಬದುಕಿನಲ್ಲಿ ಭವಿಷ್ಯದ ಹಲವಾರು ಭರವಸೆ, ಕನಸುಗಳನ್ನು ಕಟ್ಟಿಕೊಂಡು ಸಾಗುವ ಮನುಷ್ಯನು ತನಗೆ ಆಗಾಗ್ಗೆ ಒದಗುವ ಕಷ್ಟಕಾರ್ಪಣ್ಯಗಳಿಂದ ನಲುಗಿ ಹೋಗುವುದು; ಅದರ ನಿವಾರಣೆಗಾಗಿ ದೈವಗಳ ಮೊರೆ ಹೋಗುವುದು ಹಿಂದಿನಿಂದಲೂ ನಡೆದು ಬಂದಿದೆ. ಆದರೆ ಜನಪದರ ವಿಶೇಷ ಗುಣವೆಂದರೆ ಅವರು 'ತಮಗೆ ಬಂದಿರುವ ಕಷ್ಟಗಳನ್ನು ನಿವಾರಣೆ ಮಾಡು, ಅದರ ಬದಲಿಗೆ ನಾವು ನಿನಗೆ ಸಲ್ಲಿಸಬಹುದಾದ ಸೇವೆ ಹಾಗೂ ಕಾಣಿಕೆಗಳನ್ನು ಒಪ್ಪಿಸುತ್ತೇವೆ' ಎಂಬ ರೀತಿಯಲ್ಲಿ ಮಾಡಿಕೊಳ್ಳುವ ಒಂದು ಮಾನಸಿಕ ಒಪ್ಪಂದ ರೂಢಿಯಲ್ಲಿದೆ. ಈ ಒಪ್ಪಂದವನ್ನೇ 'ಹರಕೆ' ಎಂದು ಕರೆಯಬಹುದು. 'ಹರಕೆ' ಎಂಬ ಶಬ್ಧಕ್ಕೆ ಸಂಕ್ಷಿಪ್ತ ಕನ್ನಡ ನಿಘಂಟಿನಲ್ಲಿ "ಆಶೀರ್ವಾದ, ದೇವರಿಗೆ ಮಾಡುವ ಸೇವೆ, ನಿರ್ಧಾರ, ಸಂಕಲ್ಪ, ಮುಡಿಪು, ಮೀಸಲುಕಟ್ಟು, ಮುಡಿವುಗಳಿಗೆ ಮೀಸಲಿರಿಸು ಹಾಗೂ ದೇವರ ಸೇವೆಯ ಬಗೆಗೆ ಮಾಡಿಕೊಂಡ ಸಂಕಲ್ಪವನ್ನು ಪೂರೈಸು"[37] ಎಂಬ ವಿವಿಧಾರ್ಥಗಳಿವೆ.

ಮನುಷ್ಯ ದೇವರೊಂದಿಗೆ ಮಾಡಿಕೊಳ್ಳುವ ಒಪ್ಪಂದದ ಹರಕೆಗಳಿಗೆ ಯಾರು ಸಾಕ್ಷಿ ಇರುವುದಿಲ್ಲ. ಅವರ ಮನಸೇ ಸಾಕ್ಷಿ. ಆದರೂ ತಮ್ಮ ಹರಕೆಗಳನ್ನು ಆದಷ್ಟು ಶೀಘ್ರವಾಗಿ ಅರ್ಪಿಸಲು ಅವರ ಮನಸ್ಸು ಸದಾ ಮಿಡಿಯುತ್ತಿರುತ್ತದೆ. ನಾನಾ ಕಾರಣಗಳಿಗಾಗಿ ಹರಕೆ ಸಲ್ಲಿಸಲು ಆಗದೆ ವರ್ಷಾನುಗಟ್ಟಲೆ ಬಾಕಿ ಉಳಿದು ಏನಾದರೂ ಕಷ್ಟಗಳು ಆಗಾಗ್ಗೆ ಒದಗುತ್ತಿದ್ದರೆ ಹರಕೆ ಸಲ್ಲಿಸದೆ ದೇವರು ಮುನಿಸಿಕೊಂಡಿದ್ದಾನೆಂದೇ ಭಾವಿಸಿ ಭಯಕ್ಕೆ ಒಳಗಾಗಿ ತಕ್ಷಣವೇ ಹರಕೆ

ಒಪ್ಪಿಸಲು ಮುಂದಾಗುತ್ತಾರೆ. ಹೀಗೆ ದೈವಗಳಿಗೆ ಸಲ್ಲಿಸುವ ಹರಕೆಗಳಿಂದ ಅವರ ಮಾನಸಿಕ ಒತ್ತಡ ಕಡಿಮೆಯಾಗಿ ಒಂದು ರೀತಿಯ ಶಾಂತಿ ನೆಮ್ಮದಿಯನ್ನು ಪಡೆಯುತ್ತಾರೆ. ಇದರಿಂದ ಆತಂಕ, ಸಮಸ್ಯೆಗಳು, ಮನೋವ್ಯಾಕುಲಗಳು ತಕ್ಷಣದ ಪರಿಹಾರವನ್ನು ಕಾಣುತ್ತವೆ. ಹೀಗಾಗಿ ಹರಕೆಗಳು ಮಾನಸಿಕ ಚಿಕಿತ್ಸಕಗಳಾಗಿ ಕೆಲಸ ಮಾಡುತ್ತವೆನ್ನಬಹುದಾಗಿದೆ. 'ಸಂಕಟ ಬಂದಾಗ ವೆಂಕಟರಮಣ' ಎಂಬ ಗಾದೆ ಮಾತಿನಂತೆ ಜನರು ಸಂಕಷ್ಟಗಳು ಒದಗಿದಾಗ ಹಾಗೂ ಯಾವುದಾದರೂ ಒಳ್ಳೆಯ ಕೆಲಸಕ್ಕೆ ತೊಡಗುವಾಗ ಮೊದಲು ತಮ್ಮ ಮನೆ ಅಥವಾ ಕುಲದೈವಕ್ಕೆ ಮೊರೆ ಹೋಗಿ ಪೂಜೆಸಲ್ಲಿಸಿ ಇಂತಿಷ್ಟು ಹರಕೆಯಾಗಿ ಹಣ, ಕಾಣಿಕೆ, ವಸ್ತು, ಇಲ್ಲವೆ ವಿಶೇಷ ಆಚರಣೆಗಳನ್ನು ಸಲ್ಲಿಸುವುದಾಗಿ ಹರಕೆಯನ್ನು ಹೊರುತ್ತಾರೆ.

ಒಂದೊಂದು ದೈವಕ್ಕೆ ಒಂದೊಂದು ರೀತಿಯ ಹರಕೆ ಪದ್ಧತಿಗಳಿರುತ್ತವೆ. ಜನರು ತಮ್ಮ ತಮ್ಮ ಮನೋಧರ್ಮ ಹಾಗೂ ಅನುಕೂಲಕ್ಕೆ ತಕ್ಕಂತೆ ವಿವಿಧ ರೀತಿಯ ಹರಕೆಗಳನ್ನು ಕಟ್ಟಿಕೊಳ್ಳುತ್ತಾರೆ. ಉಳ್ಳವರು ಹಣ, ವಸ್ತು, ಒಡವೆ ಮುಂತಾದ ಕಾಣಿಕೆಗಳನ್ನು ನೀಡಿದರೆ ಸಾಮಾನ್ಯರು ತಮ್ಮ ದೇಹವನ್ನೇ ದೇವರ ಹೆಸರಿನಲ್ಲಿ ದುಡಿಸಿಕೊಂಡು ಆ ಮೂಲಕ ತಮ್ಮ ಕೃತಜ್ಞತೆಯನ್ನು ಸಲ್ಲಿಸಬಯಸುತ್ತಾರೆ. ಬಸವಣ್ಣನವರ 'ಉಳ್ಳವರು ಶಿವಾಲಯವ ಮಾಡುವರು, ನಾನೇನು ಮಾಡಲಿ ಬಡವನಯ್ಯ' ಎಂಬ ವಚನವನ್ನು ಗಮನಿಸಿದರೆ ತಿಳಿಯುತ್ತದೆ. ಅಲ್ಲದೆ ಕೆಲವು ದೈವಗಳಿಗೆ ಇದೇ ರೀತಿ ಇಂತಿಂತಹ ಹರಕೆ ಸೇವೆಗಳನ್ನು ಸಲ್ಲಿಸಬೇಕು, ಇಂಥ ಕಷ್ಟ ಕಾಯಿಲೆಗಳಿಗೆ ಸಂಬಂಧಿಸಿದ ದೇವರಿಗೆ ಇಂಥದ್ದೇ ಹರಕೆ ಮಾಡಿಕೊಳ್ಳಬೇಕೆಂಬ ಪದ್ಧತಿ ಚಾಚೂ ತಪ್ಪದೆ ನಡೆದುಕೊಂಡು ಬಂದಿದೆ. ದೇವಾಲಯಗಳಿಗೆ ಧವಸದಾನ್ಯ ನೀಡುವುದು, ಆಭರಣ ಮಾಡಿಸುವುದು, ವಸ್ತ್ರಾದಿಗಳನ್ನು ಕೊಡುಗೆ ನೀಡುವುದು, ಅನ್ನಸಂತರ್ಪಣೆ ಏರ್ಪಡಿಸುವುದು, ಗುಡಿ–ಗೋಪುರಗಳನ್ನು ಕಟ್ಟಿಸುವುದು, ರಥ–ಪಲ್ಲಕ್ಕಿಗಳನ್ನು ಮಾಡಿಸುವುದು ಇತ್ಯಾದಿ ಸೇವಾ ಕಾರ್ಯಗಳನ್ನು ಮಾಡುತ್ತಾರೆ.

ಹರಕೆಗಳಲ್ಲಿ ವೈವಿಧ್ಯತೆಯಿದ್ದು ಅವರವರ ಇಚ್ಚೆ ಮತ್ತು ಸಾಮರ್ಥ್ಯಕ್ಕೆ ಅನುಗುಣವಾಗಿರುತ್ತವೆ. ಕೆಲವು ಹರಕೆಗಳು ಕಠಿಣರೂಪದವಾಗಿದ್ದು, ನಿರ್ಧಿಷ್ಟ ಉದ್ದೇಶಗಳನ್ನು ಒಳಗೊಂಡಿರುತ್ತವೆ. ಮತ್ತೆ ಕೆಲವು ಹರಕೆಗಳು ಸಾಮಾನ್ಯ ರೂಪದಲ್ಲಿದ್ದು ವಿಶೇಷವಾದ ಉದ್ದೇಶವೇನೂ ಇರುವುದಿಲ್ಲ. ತಮಗೆ ಒದಗಿ ಬಂದ ಕಷ್ಟಗಳು ಪರಿಹಾರವಾಗಬೇಕೆಂದು ತಾವು ನಂಬಿರುವ ದೈವಗಳಿಗೆ ಪ್ರತಿಯಾಗಿ ಮಾಡಿಕೊಳ್ಳುವ ಒಪ್ಪಂದವಾಗಿರುತ್ತವೆ.

"ಪುರಾತನ ಕಾಲದಲ್ಲಿ ಬೆಲೆಬಾಳುವ ವಿಗ್ರಹಗಳನ್ನು, ಬಟ್ಟೆಗಳನ್ನು, ಪಾತ್ರೆ ಪದಾರ್ಥಗಳನ್ನು ನೀಡುತ್ತಿದ್ದು, ಆ ವಸ್ತುಗಳ ಮೇಲೆ ಇಷ್ಟದೇವತೆಗಳ ಹೆಸರನ್ನು ಕೆತ್ತಲಾಗುತ್ತಿತ್ತು.

ದೇವರ ಆಶೀರ್ವಾದವನ್ನು ಬೇಡುವಂತೆ ಪ್ರಾರ್ಥನಾ ಪದ್ಯಗಳನ್ನು ಶಿಲೆಗಳ ಮೇಲೆ ಕೆತ್ತಿಸುತ್ತಿದ್ದರೆಂದು ಡಬ್ಲ್ಯೂ.ಎಚ್.ಡಿ.ರೋಸ್ 'ಗ್ರೀಕ್ ಓಟೀವ್ ಆಫರಿಂಗ್ಸ್' ಕೃತಿಯಲ್ಲಿ ದಾಖಲಿಸಿದ್ದಾನೆ. ಎಂ.ಎಂ.ಹ್ಯೂಬರ್ಟ್ ಮತ್ತು ಮೌಸ್ ಎಂಬುವವರು 'ಹರಕೆ' ಹಾಗೂ 'ಅರ್ಪಣೆ' ಎಂಬುದು ಧಾರ್ಮಿಕ ನಡವಳಿಕೆ ಎಂದು ವಿವರಿಸಿದ್ದಾರೆ"[38]

ಒಳ್ಳೆಯದಾಗಲೆಂಬ ನಂಬಿಕೆಯಿಂದ ದೇವರಲ್ಲಿ ಬೇಡಿಕೊಳ್ಳುವ ವಿಧಾನವಾದ ಹರಕೆ ಪ್ರಕೃತಿಯ ಅಂತರ ಶಕ್ತಿಯನ್ನು ಒಲಿಸಿಕೊಳ್ಳಲು ಅಥವಾ ಸಂಪ್ರೀತಗೊಳಿಸಲು ಜನಪದರು ನಡೆಸುತ್ತ ಬಂದ ಹಲವು ಬಗೆಯ ಆಚರಣೆಗಳಲ್ಲಿ ಒಂದು. ಜನರು ತಮ್ಮ ಮಾತಿಗೆ ಪ್ರಮಾಣವೆಂಬ ಅರ್ಥದಲ್ಲಿ ಶುಭ್ರವಾದ ಒಂದು ತುಂಡು ಬಿಳಿ ಬಟ್ಟೆಯನ್ನು ಒದ್ದೆಮಾಡಿ ಅದಕ್ಕೆ ಅರಿಶಿಣ ಹಚ್ಚಿ ಅದರಲ್ಲಿ ನಾಣ್ಯವನ್ನು ಕಟ್ಟಿ (ಒಂದು ಅಥವಾ ಮೂರು ಪಾವಲಿ) ಅದನ್ನು ದೇವರ ಮುಂದಿಟ್ಟು ತಮ್ಮ ತಪ್ಪುಗಳನ್ನು ಹೇಳಿಕೊಂಡು, ಬೇಡಿಕೆಗಳನ್ನಿಟ್ಟು ದೇವರಲ್ಲಿ ಪ್ರಾರ್ಥಿಸಿ ಮನೆಯ ಮುಂದಿನ ಸೂರುಗಳಿಗೆ ಕಟ್ಟುವುದು, ಅಥವಾ ದೇವರ ಮುಂದೆ ಒಂದು ಲೋಟವನ್ನಿಟ್ಟು ಅದರಲ್ಲಿ ಇಡುವುದು ರೂಢಿ ಇದನ್ನು 'ಹೊನ್ನೆಸ್ಸು' ಹೊನ್ನೆಸ್ರು ಮಾಡಿಕಟ್ಟುವುದು, 'ಮುಡಿಪು ಕಟ್ಟುವುದು' ಎನ್ನುತ್ತಾರೆ. ಹರಕೆ ಕಟ್ಟಿಕೊಂಡ ವ್ಯಕ್ತಿ ಕಷ್ಟಗಳು ನಿವಾರಣೆಯಾದಾಗ ತಾನು ಹರಕೆ ಹೊತ್ತ ದೇವರ ಹಬ್ಬದ ದಿನ ಇಲ್ಲವೆ ವಿಶೇಷ ಪೂಜಾದಿನಗಳಂದು ತೀರಿಸುವುದು ವಾಡಿಕೆ. ಕೆಲವರು ಬಿಳಿ ಬಟ್ಟೆಗೆ ಅರಿಶಿಣ ಸವರಿ, ಅದರಲ್ಲಿ ಐದು ಹಣವನ್ನು ಹಾಕಿ ಗಂಟುಕಟ್ಟಿ ದೇವರ ಮುಂದಿಟ್ಟು ಐದು ದಿನ, ಒಂಬತ್ತು ದಿನ, ಹನ್ನೊಂದು ದಿನ ಶ್ರದ್ಧೆಯಿಂದ ಪೂಜೆಸಲ್ಲಿಸುತ್ತಾರೆ.

"ಹರಕೆಯ ವಿಧಾನ ಮೊದಲು ನರಬಲಿ ರೂಪದಲ್ಲಿದ್ದುದಾಗಿ ಪುರಾಣಗಳಿಂದ ತಿಳಿದು ಬರುತ್ತದೆ. ದೇವರಿಗೆ ಹರಕೆಯನ್ನು ಹೊತ್ತುಕೊಳ್ಳುವಾಗ ಮಕ್ಕಳ ಫಲ ಇಲ್ಲದವರು ಮೊದಲು ಹುಟ್ಟಿದ ಮಗುವನ್ನು ನಿನಗೆ ಅರ್ಪಿಸುತ್ತೇವೆಂಬ ಹರಕೆಯನ್ನು ಕಟ್ಟಿಕೊಳ್ಳುತ್ತಿದ್ದರು. ದೇವರಿಗೆ ಹೊತ್ತ ಹರಕೆಯ ಪ್ರಸಾದದಿಂದ ಹುಟ್ಟಿದವರೆಂದು ಭಾವಿಸಿದ ಮಕ್ಕಳ ಪೈಕಿ ಒಬ್ಬರನ್ನು ಅಥವಾ ಅನೇಕರನ್ನು ದೇವರಿಗೆ ಬಲಿ ಅರ್ಪಿಸುವ ಸಂಪ್ರದಾಯವಿತ್ತು. ರಾಜ ಹರಿಶ್ಚಂದ್ರ ಇಂಥ ಹರಕೆ ಹೊತ್ತಿದ್ದ ಸಂಗತಿ, ಪುರಾಣಗಳಿಂದ ತಿಳಿದು ಬರುತ್ತದೆ. ಕೊಲ್ಲಾಪುರದ ಲಕ್ಷ್ಮೀದೇವಿಗೆ ನರಬಲಿಯೇ ಆಗಬೇಕೆಂಬ ನಂಬಿಕೆ ಈಗಲೂ ಉಳಿದಿದೆ. ನರಬಲಿಯ ಆಚರಣೆಯ ಬಗ್ಗೆ ಸಾರ್ವತ್ರಿಕ ವಿರೋಧಗಳು ವ್ಯಕ್ತವಾದ ಕಾರಣ ಪರ್ಯಾಯವಾಗಿ ಪ್ರಾಣಿ ಬಲಿಯ ಹರಕೆ ಸೇವೆ ಆಚರಣೆಗೆ ಬಂದಿದೆ"[39]

ಕೋಣ, ಕುರಿ, ಆಡು, ಕೋಳಿಗಳನ್ನು ದೇವರ ಹೆಸರಿನಲ್ಲಿ ಹರಕೆಯಾಗಿ ಬಿಡುವುದು ನಂತರ ಅವುಗಳನ್ನು ದೇವರಿಗೆ ಬಲಿಯಾಗಿ ಅರ್ಪಿಸುವಾಗ ಬಂಧು–ಬಳಗದವರೊಡನೆ ಹೋಗಿ ಬಲಿನೀಡಿ ಬಂಧು–ಬಳಗಕ್ಕೆಲ್ಲ ಊಟ ಹಾಕಿಸುವುದರ ಮೂಲಕ ಹರಕೆಯನ್ನು ತೀರಿಸುವರು. ಹರಕೆಯನ್ನು ಒಪ್ಪಿಸುವ ದಿನ ಅನೇಕ ವಿಧಿ ವಿಧಾನಗಳನ್ನು ಅನುಸರಿಸುವರು ಒಂದೊಂದು ದೇವರಿಗೂ ಹರಕೆ ಒಪ್ಪಿಸುವ ವಿಧಾನದಲ್ಲಿ ಭಿನ್ನ ಆಚರಣೆಗಳಿರುತ್ತವೆ. ಬಸವಣ್ಣನವರು ತಮ್ಮ ವಚನವೊಂದರಲ್ಲಿ 'ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ ತಂದ ತಳಿರ ಮೇಯಿತ್ತು' ಎಂದು ಹರಕೆಯ ಬಗ್ಗೆ ಪ್ರಸ್ತಾಪಿಸಿದ್ದಾರೆ.

ಹರಕೆಯಲ್ಲಿ 'ವೈಯಕ್ತಿಕ ಹರಕೆ', 'ಕೌಟುಂಬಿಕ ಹರಕೆ', 'ಊರ ಹರಕೆ' ಎಂಬ ಹಲವಾರು ವಿಧಗಳಿವೆ ವೈಯಕ್ತಿಕ ಹರಕೆ ವ್ಯಕ್ತಿಗತವಾದ ಕುಂದು ಕೊರತೆಯಿಂದ ಕಟ್ಟಿಕೊಂಡಿದ್ದು, ಕೌಟುಂಬಿಕ ಹರಕೆ ಕುಟುಂಬ ಶಾಂತಿ–ಸುಖ ಶ್ರೇಯಸ್ಸಿಗಾಗಿ ಮನೆಯ ಹಿರಿಯ ಅಥವಾ ಯಜಮಾನ ಕಟ್ಟಿಕೊಳ್ಳುವುದು, ಊರ ಹರಕೆ ಊರಿಗೆ ಕೇಡಾದಾಗ ಮಾರಕ ರೋಗಗಳಿಗೆ ತುತ್ತಾದಾಗ, ಮಳೆ ಬಾರದಿದ್ದರೆ ಗ್ರಾಮದೇವತೆಗಳಿಗೆ ಹಬ್ಬ ಮಾಡುತ್ತೇವೆಂದು, ಬಲಿನೀಡುತ್ತೇವೆಂದು ಊರೊಟ್ಟಿನಿಂದ ಗಣ್ಯವ್ಯಕ್ತಿಗಳು, ಊರ ಯಜಮಾನರು ಮಾಡಿಕೊಳ್ಳುವ ಹರಕೆಯಾಗಿದೆ. ಕೆಲವೊಂದು ಹರಕೆಗಳ ಬಗ್ಗೆ ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

**ಉರುಳು ಸೇವೆಯ ಹರಕೆ :** ಹರಕೆ ಹೊತ್ತ ಭಕ್ತರು ದೇವಾಲಯದ ಬಳಿಯ ಕೊಳ, ನದಿ, ಬಾವಿಯಲ್ಲಿ ತಣ್ಣೀರಿನಿಂದ ಮಿಂದು ಒದ್ದೆ ಬಟ್ಟೆಯಲ್ಲಿಯೇ ದೇವಸ್ಥಾನದ ಸುತ್ತಲೂ ಉರುಳುತ್ತಾ ಸಲ್ಲಿಸುವ ಆಚರಣಾತ್ಮಕ ಸೇವೆ ಇದಾಗಿದೆ. 'ಉರುಳು' ಎಂದರೆ ದುಂಡಾದ ವಸ್ತು ನೆಲದಲ್ಲಿ ಚಲಿಸುವಂತೆ ಚಲಿಸಿ ಉರುಳುವುದಾಗಿದ್ದು, ಈ ಆಚರಣೆಯಲ್ಲಿ ಗಂಡಸರು, ಹೆಂಗಸರು, ಮಕ್ಕಳು ಎಲ್ಲರೂ ಭಾಗಿಯಾಗುತ್ತಾರೆ. ನೀರಿನಲ್ಲಿ ಮಿಂದೆದ್ದು ಒದ್ದೆ ಬಟ್ಟೆಯಲ್ಲಿಯೇ ಬಂದು ಗುಡಿಯ ಮುಂದೆ ದೀರ್ಘದಂಡ ನಮಸ್ಕಾರ ಮಾಡಿ ಅದೇ ಭಂಗಿಯಲ್ಲಿ ಎಡದಿಂದ ಬಲಕ್ಕೆ ಉರುಳುತ್ತಾ ಗುಡಿಯನ್ನು ಬಲದಿಂದ ಎಡಕ್ಕೆ ಮೂರು ಬಾರಿ ಪ್ರದಕ್ಷಿಣೆ ಹಾಕುತ್ತಾರೆ. ಇದನ್ನು 'ದಿಂಡಳ್ಳು ಸೇವೆ'(ದಿಂಡುರುಳು ಸೇವೆ) ಎಂದು ಕರೆಯುತ್ತಾರೆ. ಹಬ್ಬ, ಜಾತ್ರೆ, ವಾರದ ದಿನಗಳಲ್ಲಿ ಈ ಸೇವೆ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತದೆ.

**ಹೆಜ್ಜೆ ನಮಸ್ಕಾರದ ಹರಕೆ** : ವೈಯಕ್ತಿಕ, ಕೌಟುಂಬಿಕ, ಇಲ್ಲವೇ ಸಾಮೂಹಿಕ ಕಾರಣಕ್ಕೆ ಸಂಕಲ್ಪ ಮಾಡಿಕೊಂಡು ನೆರವೇರಿಸುವ ಆಚರಣೆ ಹೆಜ್ಜೆ ನಮಸ್ಕಾರ. ರೋಗ ರುಜಿನ, ಕಷ್ಟ ಕಾರ್ಪಣ್ಯಗಳ

ಕಾರಣಕ್ಕಾಗಿ ಅಥವಾ ಮನದ ಯಾವುದೇ ಕೊರಿಕೆಯನ್ನು ಈಡೇರಿಸುವ ಸಲುವಾಗಿ ನೆರವೇರಿಸುವ ಆಚರಣೆಯೇ 'ಹೆಜ್ಜೆ ನಮಸ್ಕಾರ' ದೇವಾಲಯದ ಪ್ರಾಂಗಣದ ಅಥವಾ ಗರ್ಭಗುಡಿಯ ಸುತ್ತಲೂ ನಡೆಯುತ್ತಾ ಪ್ರತಿ ಹೆಜ್ಜೆ ಇಟ್ಟಾಗಲೂ ಬಗ್ಗಿ ನಮಸ್ಕರಿಸುತ್ತಾ ಮೂರು ಅಥವಾ ಒಂಬತ್ತು ಸುತ್ತು ಬರುವ ಮೂಲಕ ಹೆಜ್ಜೆ ನಮಸ್ಕಾರ ಸಲ್ಲಿಸುತ್ತಾರೆ. ಹೀಗೆ ಹೆಜ್ಜೆ ಹೆಜ್ಜೆಗೂ ನಮಸ್ಕರಿಸುತ್ತಾ ಸಾಗುವ ಹೆಜ್ಜೆ ನಮಸ್ಕಾರವನ್ನು ದೇವರು ಬೆಟ್ಟದಮೇಲಿದ್ದು ಅಲ್ಲಿಗೆ ಹೋಗಲು ಮೆಟ್ಟಿಲುಗಳಿದ್ದರೆ ಉದಾಹರಣೆಗೆ ಚಾಮುಂಡಿಬೆಟ್ಟ ಮೆಟ್ಟಿಲು ಮೆಟ್ಟಿಲಿಗೂ ನಮಸ್ಕರಿಸುವ ಹರಕೆಯನ್ನು ಹೊತ್ತವರು ಮೆಟ್ಟಿಲು ಮೆಟ್ಟಿಲಿಗೂ ನಮಸ್ಕರಿಸಿ ಹರಕೆ ತೀರಿಸುತ್ತಾರೆ.

**ವಸ್ತ್ರ** : ತಾವು ಹರಕೆ ಕಟ್ಟಿಕೊಂಡ ಕೆಲಸವು ಈಡೇರಿದರೆ ವಸ್ತ್ರವನ್ನು ಕೊಡಿಸುವುದಾಗಿ ಹರಸಿಕೊಂಡು ದೇವರಿಗೆ ವಸ್ತ್ರಗಳನ್ನು ಅರ್ಪಿಸುವ ಮೂಲಕ ಹರಕೆ ತೀರಿಸುತ್ತಾರೆ. ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಹರಕೆಗಳನ್ನು ಕಟ್ಟಿಕೊಳ್ಳುವುದಿದೆ. ಉದಾಹರಣೆಗೆ: ರೇಷ್ಮೆ ಸೀರೆ, ರೇಷ್ಮೆ ಪಂಚೆ ಕೊಡಿಸುವುದಾಗಿ ಅಲ್ಲದೆ ಅದರ ಮೌಲ್ಯವನ್ನು ಮೊದಲೇ ನಿರ್ಧರಿಸಲಾಗಿರುತ್ತದೆ. 500, 1000, 2000, 5000, 10000 ಹೀಗೆ ಅವರ ಸಾಮರ್ಥ್ಯಕ್ಕೆ ತಕ್ಕಂತೆ ವಸ್ತ್ರಗಳನ್ನು ಕೊಡಿಸುವ ಹರಕೆ ಹೊರುತ್ತಾರೆ. ಉದಾಹರಣೆಗೆ: ಚಾಮುಂಡೇಶ್ವರಿ ದೇವಾಲಯದಲ್ಲಿ ವಾರ್ಷಿಕವಾಗಿ ಹರಕೆಯ ವಸ್ತ್ರಗಳಿಂದಲೇ ಸುಮಾರು ಒಂದು ಕೋಟಿಗೂ ಹೆಚ್ಚಿನ ಆದಾಯ ಬರುತ್ತದೆ. ಇದರಿಂದ ಭಕ್ತರು ಹರಕೆಯ ರೂಪದಲ್ಲಿ ವಸ್ತ್ರಗಳನ್ನು ಕೊಡುತ್ತಿರುವುದು ಅವರ ಬೇಡಿಕೆಯ ಫಲಶೃತಿಯನ್ನು, ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ.

**ಆಭರಣಗಳು** : ಮನದ ಆಸೆಗಳು ಈಡೇರಿದರೆ ಆಭರಣಗಳನ್ನು, ಮುಖವಾಡಗಳನ್ನು, ಮೂಗುತಿ, ಸರ, ಬಳೆ, ಕಿರೀಟ ಮುಂತಾದ ಮಾದರಿಗಳನ್ನು ಮಾಡಿಸಿಕೊಡುವುದಾಗಿ ಹರಕೆ ಹೊತ್ತು, ಅದು ಈಡೇರಿದಾಗ ಅವುಗಳನ್ನು ಮಾಡಿಸಿಕೊಟ್ಟು ಹರಕೆ ತೀರಿಸುತ್ತಾರೆ. ಇದು ಸಾಮಾನ್ಯವಾಗಿ ಆರ್ಥಿಕವಾಗಿ ಸದೃಢರಾದವರು ಮಾಡಿಕೊಳ್ಳುವ ಹರಕೆಯ ವಿಧಾನಗಳಲ್ಲಿ ಒಂದಾಗಿದೆ. ಚಿನ್ನ, ಬೆಳ್ಳಿ, ಹಿತ್ತಾಳೆ, ಕಂಚು, ಮುತ್ತು ರತ್ನಗಳ ಆಭರಣಗಳನ್ನು ಮಾಡಿಸುತ್ತಾರೆ. ಬೆಳ್ಳಿಯ ತಟ್ಟೆ, ಲೋಟ, ಘಂಟೆ ಮುಂತಾದ ಪೂಜಾ ಪರಿಕರಗಳನ್ನು ಕೊಡುವುದಾಗಿಯೂ ಹರಕೆ ಹೊರುತ್ತಾರೆ. ಉದಾಹರಣೆಗೆ: ಒಂಟಿಕೊಪ್ಪಲಿನ ಶ್ರೀ ವೆಂಕಟೇಶ್ವರಸ್ವಾಮಿಗೆ ಬೃಹದಾಕಾರದ ಘಂಟೆಯನ್ನು ಮೈಸೂರಿನ ಪ್ರತಿಷ್ಠಿತ ಕಂಪನಿಯೊಂದು ಮಾಡಿಸಿಕೊಟ್ಟಿದೆ.

**ದವಸಧಾನ್ಯಗಳು** : ಕೃಷಿಕರು ಮಾಡಿಕೊಳ್ಳುವ ಹರಕೆಯ ವಿಧಾನದಲ್ಲಿ ಇದು ಪ್ರಮುಖವಾದುದಾಗಿದೆ. ಈ ಹಿಂದೆ ಕೃಷಿಕರು ದವಸಧಾನ್ಯಗಳನ್ನು ಯಥೇಚ್ಚವಾಗಿ

ಬೆಳೆಯುತ್ತಿದ್ದರು. ಅಲ್ಲದೆ ಅದನ್ನು ದಾನ ಮಾಡುವುದರಲ್ಲಿಯು ಸಂತೋಷ ಪಡುತ್ತಿದ್ದರು. ಇನ್ನೊಬ್ಬರಿಗೆ ಸಹಾಯ ಮಾಡಿದರೆ ದೇವರು ನಮಗೆ ಕಷ್ಟಗಳು ಬಂದಾಗ ಯಾವುದಾದರೂ ಮೂಲದಲ್ಲಿ ಸಹಾಯಕ್ಕೆ ಬರುತ್ತಾನೆ ಎಂದು ನಂಬಿದ್ದರು. ಕೆಲವು ಸಂದರ್ಭಗಳಲ್ಲಿ ಕಷ್ಟಗಳು ಒದಗಿದಾಗ ಅಥವಾ ಬೇರೆ ಏನಾದರೂ ಬೇಡಿಕೆಗಳು ಇದ್ದಾಗ ಕುಲ ದೈವಕ್ಕೆ, ಊರ ದೇವರಿಗೆ, ಇಷ್ಟ ದೇವರಿಗೆ ಅಕ್ಕಿ, ರಾಗಿ, ಬೇಳೆ ಮುಂತಾದ ಧವಸ ಧಾನ್ಯಗಳನ್ನು ನೀಡುವುದಾಗಿ ಹರಕೆ ಹೊರುತ್ತಿದ್ದರು. ಅದರಂತೆ ನಡೆದುಕೊಳ್ಳುತ್ತಿದ್ದರು. ಅದು ಇಂದು ಕೂಡ ನಡೆಯುತ್ತಿದೆ. ನಗರದ ಚಾಮುಂಡೇಶ್ವರಿ ದೇವಾಲಯದ ಅನ್ನದಾಸೋಹಕ್ಕೆ ಈ ರೀತಿಯ ಹರಕೆಯಿಂದ ಅಪಾರ ಪ್ರಮಾಣದ ಧವಸಧಾನ್ಯ ಬರುತ್ತಿದೆ.

**ಒಡಬಾಯಿ ಹರಕೆ** : ಪಡುವಾರಹಳ್ಳಿ ಜೋಡಿಮಾರಮ್ಮ ದೇವಾಲಯದಲ್ಲಿ ಹರಕೆಯ ವಿಧದಲ್ಲಿ ಒಡಬಾಯಿ ಹರಕೆಯು ಒಂದು. ಒಡಬಾಯಿ ಹರಕೆ ಎಂದರೆ ವಯಸ್ಸಾದ ವಿಧವೆಯರು ದೇವಸ್ಥಾನದ ಬಳಿ ನಡುರಾತ್ರಿಯಲ್ಲಿ ಬೆತ್ತಲೆ ಕುಣಿಯುವುದು. ಊರಿಗೆ ಒಳ್ಳೆಯದಾಗಬೇಕಾದರೆ ಮಾರಿ ದೇವರು ಶಾಂತವಾಗಬೇಕಾದರೆ ಈ ಕುಣಿತ ನಡೆಯಬೇಕು ಎಂದು ಜನರ ನಂಬಿಕೆ. ಒಡಬಾಯಿ ಹರಕೆ ಸಲ್ಲಿಸುವ ಸಮಯದಲ್ಲಿ ಯಾರು ನೋಡುವಂತಿಲ್ಲ. ಒಂದುವೇಳೆ ಅದನ್ನು ಊರಿನ ಗಂಡಸರು, ಮಕ್ಕಳು, ಊರಿನವರು ನೋಡಿದರೆ ರಕ್ತಕಾರಿ ಸಾಯುವರೆಂದು ನಂಬಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಈ ಹರಕೆ ನಡೆಯುತ್ತಿಲ್ಲವೆಂದು ಅಲ್ಲಿಯ ಜನರು ಹೇಳುತ್ತಾರೆ. ಅಲ್ಲದೆ ಈ ರೀತಿಯ ಹರಕೆಯು ಒಂದು ಅಮಾನವೀಯತೆಯಿಂದ ಕೂಡಿರುವುದಾಗಿದೆ. ಇಂದು ಇಂತಹ ಹರಕೆಗಳಿಗೆ ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಒಂದುವೇಳೆ ಅದನ್ನು ಮೀರಿ ನಡೆದುಕೊಂಡರೆ ಕಾನೂನು ಶಿಕ್ಷೆಗೆ ಗುರಿಪಡಿಸಲಾಗುತ್ತದೆ. ಆದುದರಿಂದಾಗಿ ಇಂದು ಈ ರೀತಿಯ ಹರಕೆಯ ಆಚರಣೆಗಳು ನಡೆಯಲು ಅವಕಾಶವಿಲ್ಲ.

**ಬಾಯಿಬೀಗ :** ದೇವತಾಚರಣೆಯಲ್ಲಿ ಒಂದಾದ ಬಾಯಿಬೀಗವನ್ನು ಹರಸಿಕೊಂಡವರು ತಾಮ್ರದ ತಂತಿಯಿಂದ ಇಲ್ಲವೇ ಬೆಳ್ಳಿಯ ಸೂಜಿಯಾಕಾರದ ತಂತಿಗಳಿಂದ ಎರಡೂ ಕಡೆಯ ಕಟಬಾಯಿಯನ್ನು ಸೇರಿಸಿ ಕೆನ್ನೆಯನ್ನು ತೂತು ಮಾಡಿಕೊಂಡು ಬಾಯಿಬೀಗ ಹಾಕಿಸಿಕೊಳ್ಳುತ್ತಾರೆ. ಹೀಗೆ ಆಚರಿಸುವುದನ್ನೇ 'ಬಾಯಿಬೀಗ' ಎನ್ನಲಾಗುತ್ತದೆ. ಸ್ತ್ರೀಪುರುಷರಾದಿಯಾಗಿ ಬಾಯಿಬೀಗ ಹಾಕಿಕೊಳ್ಳುವುದನ್ನು ಕಾಣಬಹುದು. ಯಾವುದೇ ಜಾತಿಯ ನಿರ್ಬಂಧವಿಲ್ಲದೆ ಎಲ್ಲಾ

ಜಾತಿಯವರು ಈ ಹರಕೆಯನ್ನು ಆಚರಿಸುತ್ತಾರೆ. ಆದರೆ ನಿರ್ದಿಷ್ಟ ಕುಟುಂಬದವರೇ ಈ ಬಾಯಿಬೀಗವನ್ನು ಹಾಕಿ ತೆಗೆಯುವುದನ್ನು ಎಲ್ಲಾ ಕಡೆಗಳಲ್ಲಿ ರೂಢಿಸಿಕೊಂಡಿದ್ದಾರೆ.

ಸಾಮಾನ್ಯವಾಗಿ ಪುರೋಹಿತರೇ ಬಾಯಿಬೀಗ ಹಾಕಿ ತೆಗೆಯುವ ರೂಢಿ ಇದೆ. ಇದನ್ನು ಬಹಳ ಸ್ಥಳಗಳಲ್ಲಿ ಕಾಣಬಹುದು. ಮದುವೆ, ಮಕ್ಕಳು, ಕೆಲಸ, ಅನಾರೋಗ್ಯ ಮುಂತಾದ ಕಾರಣಗಳಿಗಾಗಿ ಬಾಯಿಬೀಗ ಹರಕೆಯನ್ನು ಮಾಡಿಕೊಳ್ಳಲಾಗುತ್ತದೆ. ಬಾಯಿಗೆ ಬೀಗ ಹಾಕಿದ ಸಂದರ್ಭದಲ್ಲಿ ಜಿನುಗುವ ರಕ್ತಕ್ಕೆ ದೇವರ 'ಭಂಡಾರ'ವನ್ನು ಹಚ್ಚುತ್ತಾರೆ. ಈ ಭಂಡಾರ ಅರಿಶಿಣ, ಕುಂಕುಮ ಮತ್ತು ವಿಭೂತಿಗಳಿಂದ ಕೂಡಿರುತ್ತದೆ. ಇದು ರೋಗ ನಿರೋಧಕವಾಗಿ ಕೆಲಸ ಮಾಡುತ್ತದೆ. **"**ಕೆಲವು ಜನಪದ ತಜ್ಞರು ಈ ಆಚರಣೆಯ ಹಿನ್ನೆಲೆಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವುದರ ಸಾಕೇಂತಿಕ ರೂಪ ಇದಾಗಿದೆ ಎಂದು ವರ್ಣಿಸುತ್ತಾರೆ**"**[40]

ಪಡುವಾರಹಳ್ಳಿ ಜೋಡಿಮಾರಮ್ಮ ದೇವರಿಗೆ ಕಟ್ಟಿಕೊಂಡ ಹರಕೆಯ ಒಂದು ವಿಧವೇ 'ಬಾಯಿಬೀಗ' ಸೋಮವಾರದ ದಿನ ಅಂದರೆ ಮಾರಿಹಬ್ಬದ ಸಮಯದ ನಾಲ್ಕನೆಯ ದಿನ ಈ ಹರಕೆಯನ್ನು ದೇವರಿಗೆ ಸಲ್ಲಿಸಲಾಗುವುದು. ಜನರು ತಮಗೆ ಒದಗಿರುವ ಕಷ್ಟಕಾರ್ಪಣ್ಯ ನಿವಾರಣೆ ಯಾಗಲಿ ಎಂದು ಜೋಡಿಮಾರಮ್ಮ ದೇವರಲ್ಲಿ ಹರಕೆ ಕಟ್ಟಿಕೊಳ್ಳುತ್ತಾರೆ. ಬಾಯಿಬೀಗವನ್ನು ಇಂತಿಷ್ಟು ವರ್ಷಗಳು ಚುಚ್ಚಿಸಿಕೊಳ್ಳುತ್ತೇವೆ ಎಂದು ಹರಕೆ ಕಟ್ಟಿಕೊಂಡು, ಪ್ರತಿ ವರುಷ ಮಾರಿ ಹಬ್ಬದ ಸಮಯದಲ್ಲಿ ಬಾಯಿಬೀಗ ಹರಕೆ ಪೂರೈಸುವರು. ಚಿಕ್ಕ ಮಕ್ಕಳಿಂದ ವಯಸ್ಸಾದ ವರವರೆಗೂ ಈ ಹರಕೆ ಹೊತ್ತುಕೊಳ್ಳುತ್ತಾರೆ. ಚಿಕ್ಕಮಕ್ಕಳಿಗೆ ಬಾಯಿಬೀಗವನ್ನು ಬಾಯಿಗೆ ಚುಚ್ಚುವ ಬದಲಾಗಿ ತಂತಿಯನ್ನು ಅವರ ಬಟ್ಟೆಗೆ ಚುಚ್ಚುವರು. ಬಾಯಿಬೀಗ ಹರಕೆ ಪ್ರಾರಂಭವಾಗುವ ಮೊದಲು ನಾಯಕ ಸಮುದಾಯದವರು ಕತ್ತಿ ಹಿಡಿದು ಕುಕ್ಕರಹಳ್ಳಿ ಕೆರೆಗೆ ಹೋಗಿ ಅಲ್ಲಿ ಬುಗರಿ ಮರಕ್ಕೆ ಎರಡು ಬದಿಯಿಂದ ಏಣಿಯನ್ನು ಹಾಕಿ ತಾಮೊದಲು ನೀಮೊದಲು ಎಂಬಂತೆ ಪಡುವಾರಹಳ್ಳಿ ಮತ್ತು ವೀರನಗೆರೆಯ ನಾಯಕ ಕುಟುಂಬದವರು ಹತ್ತುತ್ತಾರೆ. ಅವರು ಹಿಂದಿರುಗಿ ಚಿಕ್ಕರಸಿನಾಯಕರ ಮನೆಯಲ್ಲಿರುವ ದೇವರ ಒಲೆಗಳಲ್ಲಿ 'ಮಡೆ' ಅನ್ನವನ್ನು ಬೇಯಿಸಿ ದೇವರಿಗೆ ಅರ್ಪಿಸಿ ಅನಂತರ ಬಾಯಿಬೀಗ ಚುಚ್ಚಲು ಪ್ರಾರಂಭಿಸುತ್ತಾರೆ.

ಅಶೋಕಪುರಂನ ಮೂರನೇ ಬೀದಿಯಲ್ಲಿರುವ ಕಾಳಮ್ಮ ದೇವರಿಗೆ ಬಾಯಿಬೀಗ ಹಾಕಿ ಕೊಳ್ಳುವುದಾಗಿ ಹರಕೆ ಹೊತ್ತವರು ಹಬ್ಬದ ಇಡೀದಿನ ಉಪವಾಸ ಮಾಡಿ, ಮಡಿಯಿಂದಿರುತ್ತಾರೆ. ಸಂಜೆವೇಳೆಗೆ ದೇವಸ್ಥಾನಕ್ಕೆ ಬಂದು ದೇವರ ವಿಗ್ರಹದ ಮುಂದೆ ಕೈಮುಗಿದು ನಿಂತು ಬಾಯಿಗೆ ಬೀಗ ಹಾಕುವ ಮೊದಲು ಸಲ್ಲಿಸಬೇಕಾದ ಪೂಜೆಯನ್ನು ಸಲ್ಲಿಸಿ ಬಾಯಿಬೀಗ ಹಾಕಿಕೊಳ್ಳಬೇಕು.

ಹೀಗೆ ಬಾಯಿಬೀಗ ಹಾಕಿಸಿಕೊಳ್ಳುವವರ ಕೆನ್ನೆಗೆ ಅರಿಶಿನ ಹಚ್ಚಿ ಬಾಯಿಬೀಗವನ್ನು ಎರಡೂ ಕೆನ್ನೆಗೂ ಚುಚ್ಚುತ್ತಾರೆ. ಹಾಗೆ ಚುಚ್ಚುವಾಗ ಸ್ವಲ್ಪವೂ ರಕ್ತಬರುವುದಿಲ್ಲ ಹಾಗೂ ನೋವು ಆಗುವುದಿಲ್ಲ. ಮೆರವಣಿಗೆ ಮುಗಿಯುವವರೆಗೂ ಬಾಯಿಬೀಗವನ್ನು ತೆಗೆಯುವುದಿಲ್ಲ. ಇದನ್ನು ಇಲ್ಲಿನ ಹೆಂಗಸರು, ಗಂಡಸರು ಮತ್ತು ಮಕ್ಕಳು ಯಾರು ಹರಕೆ ಹೊತ್ತಿರುತ್ತಾರೊ ಅವರು ಹಾಕಿಸಿಕೊಳ್ಳುತ್ತಾರೆ. ಇವರೂ ಸಹ ಮೆರವಣಿಗೆಯ ಸಾಲಿನಲ್ಲಿ ಸೇರಿಕೊಂಡು ಮೆರವಣಿಗೆ ಮುಗಿಯುವವರೆಗೂ ಜೊತೆಯಲ್ಲಿರುತ್ತಾರೆ. ಮೆರವಣಿಗೆ ಮುಗಿದಮೇಲೆ ದೇವಾಲಯಕ್ಕೆ ಬಂದು ಕೈಮುಗಿದು ಪೂಜೆಸಲ್ಲಿಸಿ ಬಾಯಿಬೀಗ ತೆಗೆಸಿಕೊಂಡು ಮನೆಗೆ ತೆರಳುತ್ತಾರೆ.

**ಕಳಸ ಹೊರುವುದು ಮತ್ತು ಬಾಯಿಬೀಗ ಹರಕೆ** : ಕನ್ನೇಗೌಡನ ಕೊಪ್ಪಲಿನ ಶ್ರೀ ಚಾಮುಂಡೇಶ್ವರಿ ದೇವಾಲಯದಲ್ಲಿ ಚಾಮುಂಡೇಶ್ವರಿ ವರ್ಧಂತಿ ಉತ್ಸವವು ಮುಗಿದ ಮೇಲೆ ಸಾಲು ತಟ್ಟೆಯ ಜೊತೆಯಲ್ಲಿ ಅದೇ ದಿನ ಹರಕೆ ಹೊತ್ತವರು ಕೆಲವರು ದೇವಿಯ ಕಳಸವನ್ನು ಹೊತ್ತು ಮತ್ತೆ ಕೆಲವರು ಬಾಯಿಬೀಗ ಹಾಕಿಸಿಕೊಳ್ಳುತ್ತಾರೆ. ಇವರನ್ನು ಗ್ರಾಮದ ಪ್ರತಿಯೊಂದು ಬೀದಿಯಲ್ಲೂ ಮೆರವಣಿಗೆ ಮಾಡುತ್ತಾರೆ. ಇವರು ಬೀದಿಯ ಪ್ರತಿಯೊಂದು ಮನೆಯ ಮುಂದೆ ಬಂದಾಗ, ಜನರು ಅವರಿಗೆ ದೇವರ ಪ್ರತಿರೂಪವೆಂದೇ ವಂದಿಸುತ್ತಾರೆ.

**ಕಂದಲು ಸೇವೆ** : ಅಶೋಕಪುರಂನ ಮೂರನೇ ಬೀದಿಯಲ್ಲಿರುವ ಕಾಳಮ್ಮ ತಾಯಿಗೆ ಕಂದಲು ಸೇವೆ ಹರಕೆ ಮಾಡಿಕೊಳ್ಳುತ್ತಾರೆ. ಮಣ್ಣಿನ ಒಂದುವರೆ ಅಡಿ ಎತ್ತರ ಒಂದು ಅಡಿ ಅಗಲದ ಪುಟ್ಟ ಮಡಿಕೆಗೆ ನೀರನ್ನು ತುಂಬಿ ಅದರ ಒಳಗೆ ಅಡಕೆಯ ಹೊಂಬಾಳೆಯನ್ನು ಪೂಜುತ್ತಾರೆ. ಇದನ್ನೆ ಕಂದಲು ಎನ್ನುತ್ತಾರೆ. ಜನರು ತಮಗೆ ಕಷ್ಟಗಳು ಬಂದಾಗ ಅದನ್ನು ಪರಿಹರಿಸಿದರೆ ಕಂದಲಿನ ಸೇವೆ ಮಾಡುತ್ತೇನೆಂದು ಹರಕೆ ಮಾಡಿಕೊಂಡಿರುತ್ತಾರೆ. ಹರಕೆ ಮಾಡಿಕೊಂಡವರು ಹಬ್ಬದ ದಿನ ಕಂದಲನ್ನು ಹೊತ್ತುಕೊಂಡು ಮೆರವಣಿಗೆಯಲ್ಲಿ ಭಾಗವಹಿಸುತ್ತಾರೆ.

**ಬಲಿ ಹರಕೆ** : ಕನ್ನೇಗೌಡನ ಕೊಪ್ಪಲಿನ ಚಾಮುಂಡೇಶ್ವರಿ ಅಮ್ಮನವರಿಗೆ ಕುರಿ ಕೋಳಿಗಳನ್ನು ಬಲಿ ನೀಡುವುದಾಗಿ ಹರಕೆ ಹೊತ್ತವರು ಚಾಮುಂಡೇಶ್ವರಿ ಹಬ್ಬದಂದು ಬಲಿ ನೀಡುತ್ತಾರೆ. ಈ ಹಿಂದೆ ದೇವಾಲಯದ ಎದುರು ಈ ಬಲಿ ಹರಕೆಯನ್ನು ತೀರಿಸುತ್ತಿದ್ದರು. ಅದರೆ ಈಗ ಬಲಿ ನಿಷೇಧ ಕಾನೂನಿನಿಂದಾಗಿ ದೇವಾಲಯದ ಎದುರು ಬಲಿ ನೀಡುವುದು ನಿಂತಿದೆ. ಚಾಮುಂಡೇಶ್ವರಿಯ ತೀರ್ಥವನ್ನು ಮನೆಗೆ ತಗೆದುಕೊಂಡುಹೋಗಿ ಹರಕೆಯ ಕುರಿಕೋಳಿಗಳಿಗೆ ಹಾಕಿ ಮನೆ ಮುಂದೆಯೇ ಬಲಿ ಅರ್ಪಿಸುತ್ತಾರೆ. ಬಂಧುಬಳಗವನ್ನೆಲ್ಲ ಹಬ್ಬಕ್ಕೆ ಆಹ್ವಾನಿಸಿ ಹಬ್ಬ ಆಚರಿಸುತ್ತಾರೆ. ಇದು ಅವರು ಮಾಡಿಕೊಂಡಿರುವ ಹರಕೆಗಳಿಗೆ ಸಂಬಂಧಿಸಿದ್ದಾಗಿದ್ದು, ಅವರವರ

ಶಕ್ತಿಗನುಸಾರ ನಡೆದುಕೊಳ್ಳುತ್ತಾರೆ. ಮತ್ತೆ ಕೆಲವರು ಪ್ರತಿವರ್ಷ ಆಚರಿಸುವ ರೂಢಿ ಸಂಪ್ರದಾಯದಂತೆ ನಡೆಸಿಕೊಂಡು ಬರುವುದೇ ವಾಡಿಕೆಯಾಗಿದೆ.

**ನಿಂಬೆಹಣ್ಣಿನ ದೀಪದಾರತಿ :** ನಿಂಬೆಹಣ್ಣಿನ ದೀಪದಾರತಿ ಮಾಡುವ ಆಚರಣೆ ವಿಶೇಷತೆಯಿಂದ ಕೂಡಿದ್ದು, ಮನದಲ್ಲಿನ ಬಯಕೆಗಳನ್ನು ಈಡೇರಿಸಲು ದೇವರಲ್ಲಿ ಹರಕೆ ಹೊತ್ತು ನಲವತ್ತೆಂಟು, ಇಪ್ಪತ್ನಾಲ್ಕು ಇಲ್ಲವೇ ಹನ್ನೆರಡುವಾರಗಳು ನಿಂಬೆಹಣ್ಣಿನ ದೀಪದಾರತಿ ನೆರವೇರಿಸಲಾಗುತ್ತಾದೆ. ಮೈಸೂರು ನಗರದ ಪಾರಂಪರಿಕ ದೇವಾಲಯಗಳಲ್ಲಿ ಸಾಮಾನ್ಯವಾಗಿ ಸ್ತ್ರೀದೇವತೆಗಳಾದ ಕಾಳಮ್ಮ, ಚಾಮುಂಡೇಶ್ವರಿ, ಶಿವನಸಮುದ್ರದಮ್ಮ, ಬಿಸಿಲುಮಾರಮ್ಮ, ನಿಂಬುಜಾದೇವಿ, ಬನಶಂಕರಿ, ದುರ್ಗೆ, ಭೈರವಿ ಮುಂತಾದ ದೇವತೆಗಳಿಗೆ ಈ ಆರತಿ ನಡೆಸಲಾಗುತ್ತದೆ. ಪ್ರತಿ ಮಂಗಳವಾರ ಮತ್ತು ಶುಕ್ರ ವಾರಗಳಂದು ಸಂಕಲ್ಪತಾಳಿ ಹರಕೆ ಹೊತ್ತು ಸ್ತ್ರೀಯರು ಶುಚಿಯಾಗಿ ದೇವಾಲಯಕ್ಕೆ ಹೋಗುತ್ತಾರೆ. ಈ ಮೊದಲೆ ನಿರ್ಧರಿಸಿದ ಸಂಖ್ಯೆಯಲ್ಲಿ ನಿಂಬೆಹಣ್ಣುಗಳನ್ನು ಕೊಂಡೊಯ್ದು, ನಿಂಬೆಹಣ್ಣನ್ನು ಎರಡು ಹೋಳಾಗಿ ಮಾಡಿ, ಒಳ ತಿರುಳನ್ನು ತೆಗೆದು ಅನಂತರ ಸಿಪ್ಪೆಯ ಭಾಗವು ಒಳಬರುವಂತೆ ಅದನ್ನು ಮಡಚಿ ಅದರಲ್ಲಿ ಎಣ್ಣೆಯನ್ನು ಹಾಕಿ ಬತ್ತಿಗಳನ್ನು ಇಟ್ಟು ದೀಪ ಹಚ್ಚಲಾಗುತ್ತದೆ. ಹರಕೆಹೊತ್ತಷ್ಟು ವಾರಗಳು ಹೀಗೆ ಮಾಡುವುದರಿಂದ ತಮ್ಮ ಮನೋಭೀಲಾಷೆ ಈಡೇರುವುದೆಂಬ ನಂಬಿಕೆ ಭಕ್ತರಲ್ಲಿದೆ. ಎಣ್ಣೆ ಅಲ್ಲದೆ ತುಪ್ಪದಿಂದಲು ಈ ರೀತಿಯಾಗಿ ದೀಪ ಹಚ್ಚಿ ಹರಕೆ ತೀರಿಸುತ್ತಾರೆ. ಮೊದಲನೆ ವಾರ ಒಂದು ದೀಪ ಎರಡನೆ ವಾರ ಎರಡು ದೀಪ ಹೀಗೆ ಕೋನೆಯವಾರ ಮುಗಿಯುವವರೆಗೂ ದೀಪಗಳ ಸಂಖ್ಯೆಯು ಹೆಚ್ಚುತ್ತಲೇ ಇರುತ್ತದೆ. ಈ ಹರಕೆ ಆಷಾಢ ಶುಕ್ರವಾರಗಳಂದು ಶಕ್ತಿ ದೇವತೆಗಳ ದೇವಾಲಯಗಳಾದ ಶಿವನಸಮುದ್ರದಮ್ಮ ಕುವೆಂಪುನಗರ, ಚಾಮುಂಡೇಶ್ವರಿ ದೇವಾಲಯ ಕೆ.ಜಿ.ಕೊಪ್ಪಲು, ನಿಂಬುಜಾದೇವಿ ದೇವಾಲಯ ನಜರ್‌ಬಾದ್ ಹಾಗೂ ಮೈಸೂರು ನಗರದ ಎಲ್ಲಾ ಶಕ್ತಿ ದೇವತೆಗಳ ದೇವಾಲಯಗಳಲ್ಲಿ ಈ ಪದ್ಧತಿಯನ್ನು ಕಾಣಬಹುದಾಗಿದೆ.

**ಈಡುಗಾಯಿ :** ಈಡುಗಾಯಿಯ ಹೆಸರಿನಲ್ಲಿ ಸಲ್ಲಿಸಲ್ಪಡುವ ಸೇವೆ ಈಡುಗಾಯಿ ಸೇವೆ. ಹರಕೆ ಹೊತ್ತವರು ನೆರವೇರಿಸುವ ವಿಶಿಷ್ಟ ಆಚರಣೆ ಇದಾಗಿದೆ. ಸಾಮಾನ್ಯವಾಗಿ ಮಕ್ಕಳಾಗದವರು, ಮದುವೆಯಾಗದವರು, ಕಷ್ಟಕಾರ್ಪಣ್ಯಗಳಿಗೆ ತುತ್ತಾದವರು ಮತ್ತು ಅನಾರೋಗ್ಯ ಮುಂತಾದ ಕಾರಣಗಳಿಂದ ಈ ಹರಕೆಯನ್ನು ಮಾಡಿಕೊಳ್ಳುತ್ತಾರೆ. ನಿರ್ದಿಷ್ಟ ಸ್ಥಳದಲ್ಲಿ ಈಡುಗಾಯಿ ಹೊಡೆಯುವುದು, ಒಂದೊಂದೇ ಮೆಟ್ಟಿಲಿಗೆ ಇಲ್ಲವೆ ಹನ್ನೆರಡು ಮಟ್ಟಿಲಿಗೆ ಕಾಯಿಯನ್ನು

ಒಡೆಯುವುದು, ದೇವರ ಮುಂದೆ ಅಥವಾ ದೇವರ ಉತ್ಸವದ ಮುಂದೆ ಈಡುಗಾಯಿ ಒಡೆದು ಹರಕೆ ತೀರಿಸುತ್ತಾರೆ. ಒಂದು, ಹನ್ನೊಂದು, ನೂರೊಂದು, ಮುನ್ನೂರೊಂದು ಐನೂರೊಂದು ಹೀಗೆ ಅವರ ಸಾಮರ್ಥ್ಯಕ್ಕೆ ತಕ್ಕಂತೆ ಹರಕೆ ಕಟ್ಟಿಕೊಳ್ಳುವುದು ರೂಢಿಯಲ್ಲಿದೆ. ಬೆಟ್ಟದ ಚಾಮುಂಡೇಶ್ವರಿ ದೇವಾಲಯದಲ್ಲಿ ಈ ಹರಕೆಯನ್ನು ಹೆಚ್ಚಾಗಿ ಕಾಣಬಹುದು. ಬೆಟ್ಟ ಹತ್ತುವಾಗ ಮೆಟ್ಟಿಲಿಗೆ ಅಥವಾ ದೇವಾಲಯದ ಮುಂದೆ ಈಡುಗಾಯಿ ಒಡೆಯಲು ನಿಗಧಿಪಡಿಸಿರುವ ಸ್ಥಳದಲ್ಲಿ ಪ್ರತಿನಿತ್ಯ ಈ ಹರಕೆ ತೀರಿಸುವವರನ್ನು ಕಾಣಬಹುದಾಗಿದೆ.

**ಮುಡಿಕೊಡುವುದು** : "ದೇವರಿಗೆ ಮುಡಿ ಇಲ್ಲವೇ ತಲೆಗೂದಲನ್ನು ಒಪ್ಪಿಸುವುದು ಅನೇಕ ಶತಮಾನಗಳಿಂದ ರೂಢಿಯಲ್ಲಿದೆ. ಇದಕ್ಕೆ ಜನ್ನನ ಒಂದು ಕಾವ್ಯದ ಉಲ್ಲೇಖವನ್ನು ಡಾ.ಕಲಬುರ್ಗಿ ಈ ರೀತಿಯಾಗಿ ನೀಡಿರುತ್ತಾರೆ.

ತರುಣಿಯರ ಕುರುಳ್ ನೀತಿಪಲ್
ಬೆರಲಂ ಕೊಳಲುರದ ಮೇಲೆ ಪೆಸರಕ್ಕರಮಂ
ಬರೆಯಲ್ಕಿಲ್ಲದ ಸಮಯಂ
ನೆರೆಯಲ್ಕಿಲ್ಲೆನಿಪ ಸೊಬಗಿನಭಿನವಮದನಂ

ದೇವರಿಗೆ ತಲೆಗೂದಲನ್ನು ಅರ್ಪಿಸುವ, ಬೆರಳನ್ನು ಕತ್ತರಿಸಿ ಕೊಡುವ, ಎದೆಯ ಮೇಲೆ ದೇವರ ಹೆಸರು ಬರೆಯಿಸಿಕೊಳ್ಳುವ ಜಾನಪದ ಧಾರ್ಮಿಕ ಆಚರಣೆಗಳಾಗಿರುವ ಇವು ಭಕ್ತನ ಸಮರ್ಪಣಾ ಭಾವವನ್ನು ಪ್ರತಿನಿಧಿಸುತ್ತದೆ ಎಂಬುದನ್ನು ನೆನಪಿಸಿಕೊಂಡಲ್ಲಿ ಈ ಪದ್ಯದ ಅರ್ಥ ಪ್ರಿಯ-ಪ್ರೇಯಸಿ ವಲಯದಿಂದ ದೇವ-ಭಕ್ತನೆಂಬ ಬಗೆಯಲ್ಲಿ ಇನ್ನೊಂದು ವಿಸ್ತಾರ ಪಡೆಯುತ್ತದೆ.

ದೇವರಿಗೆ ಕೂದಲನ್ನು ಅರ್ಪಿಸುವ ಕ್ರಿಯೆ ತಿರುಪತಿ, ಧರ್ಮಸ್ಥಳ, ನಂಜನಗೂಡು, ಚಾಮುಂಡಿಬೆಟ್ಟದ ದೇವಿಕೆರೆಯ ಬಳಿ ಮುಂತಾದ ಕ್ಷೇತ್ರಗಳಲ್ಲಿ ಇಂದಿಗೂ ನಡೆಯುತ್ತದೆ. ವ್ಯಕ್ತಿಯನ್ನು ಹಿಡಿದುಕೊಂಡ ಭೂತ, ಮಂತ್ರವಾದಿಯ ಶಿಕ್ಷೆಗೆ ಮಣಿದು ತಾನು ಬಿಟ್ಟು ಹೋಗುವುದರ ಸೂಚನೆಯಾಗಿ ಮಂತ್ರವಾದಿಗೆ ತನ್ನ ತಲೆಗೂದಲನ್ನು ಕಿತ್ತು ಕೊಡುವುದನ್ನು ಹಳ್ಳಿಗಳಲ್ಲಿ ಇಂದಿಗೂ ಕಾಣಬಹುದು. ಹೀಗಾಗಿ ಕೂದಲು ಕೊಡುವುದಕ್ಕೆ ಸಮರ್ಪಣೆ ಇಲ್ಲವೆ ಶರಣಾಗತಿಯ ಅರ್ಥ ಇದೆಯೆಂದು ಸ್ಪಷ್ಟವಾಗುತ್ತದೆ.[41] ಮೈಸೂರು ನಗರದಲ್ಲಿರುವ ದೇವಾಲಯಗಳಲ್ಲಿ ಮುಡಿಕೊಡುವ ಪದ್ಧತಿ ವಿರಳ. ಚಾಮುಂಡಿಬೆಟ್ಟದ ದೇವಿಕೆರೆಯ ಬಳಿ ಬಿಟ್ಟರೆ

ಬೇರೆ ಎಲ್ಲಿಯೂ ಕಂಡುಬರುವುದಿಲ್ಲ. ಆದರೆ ಹರಕೆ ಹೊತ್ತವರು ಹೊರಗೆ ಮುಡಿಕೊಡಿಸಿಕೊಂಡು ದೇವಾಲಯಕ್ಕೆ ಬಂದು ಪೂಜೆ ಸಲ್ಲಿಸುವುದು ವಾಡಿಕೆಯಾಗಿದೆ. ನಂಜನಗೂಡು, ಧರ್ಮಸ್ಥಳಗಳಂತೆ ಇಲ್ಲಿ ಮುಡಿಕೊಡುವುದು ಕಂಡುಬರುವುದಿಲ್ಲ.

**ಕೊಂಡ ಹಾಯುವುದು** : ದೇವರಿಗೆ ಹರಕೆ ಹೊತ್ತವರು ಗೊತ್ತಾದ ದಿನ ನಿಗಿನಿಗಿ ಉರಿಯುತ್ತಿರುವ ಕೆಂಡದ ಮೇಲೆ ಬರಿಗಾಲಿನಲ್ಲಿ ನಡೆದು ಹೋಗುವ ಒಂದು ಜನಪದ ಸಂಪ್ರದಾಯ. ಇದನ್ನು ಕೊಂಡ ಹಾಯುವುದು ಎಂದೂ ಕರೆಯುತ್ತಾರೆ. ಕರ್ನಾಟಕದ ಅನೇಕ ಭಾಗಗಳಲ್ಲಿ ಈ ಸಂಪ್ರದಾಯ ಇಂದಿಗೂ ಉಳಿದು ಬಂದಿದೆ. ಸಾಮಾನ್ಯವಾಗಿ ಹಬ್ಬ, ಜಾತ್ರೆಗಳಂದು ದೇವರ ಗುಡಿಗಳ ಎದುರು ಇಂಥ ಕೊಂಡಗಳನ್ನು ಹಾಕಲಾಗುತ್ತದೆ. ಕೊಂಡ ಹಾಯಬೇಕಾಗಿರುವ ಹಿಂದಿನ ದಿನ ಭಕ್ತರು ಮಡಿಯಿಂದ ಉಪವಾಸವಿದ್ದು ಭಯಭಕ್ತಿಯಿಂದ ಕೊಂಡಹಾಯುತ್ತಾರೆ. ಜನರು ನೆಲದ ಮೇಲೆ ನಡೆದಷ್ಟೇ ಸಲೀಸಾಗಿ ಕೆಂಡದ ಮೇಲೆ ಹಾದು ಬರುತ್ತಾರೆ. ಕೆಂಡ ತಮ್ಮ ಕಾಲನ್ನು ಸುಡದಿರಲು ದೇವರಲ್ಲಿ ತಮಗಿರುವ ನಂಬಿಕೆಯೇ ಕಾರಣವೆಂದು ಜನಪದರು ಹೇಳುತ್ತಾರೆ. ಕೊಂಡಗಳನ್ನು ಹಗಲುಕೊಂಡ ಇರುಳುಕೊಂಡ ಎಂದು ವಿಂಗಡಿಸುವುದು ವಾಡಿಕೆ.

ಕೆಂಡದ ಮೇಲೆ ನಡೆಯುವುದು ಒಂದು ಧಾರ್ಮಿಕ ಆಚರಣೆ. ಜನ ತಮಗೆ ಏನಾದರೂ ತೊಂದರೆ, ಕಾಯಿಲೆ ಬಂದಾಗ ಅದು ಪರಿಹಾರವಾದರೆ ದೇವರ ಜಾತ್ರೆಯಲ್ಲಿ ಕೊಂಡ ಹಾಯುವುದಾಗಿ ಹರಕೆ ಮಾಡಿಕೊಳ್ಳುತ್ತಾರೆ. ಈ ಹರಕೆ ತೀರಿಸುವ ಉದ್ದೇಶದಿಂದ ಕೊಂಡ ಹಾಯುತ್ತಾರೆ. ಕೊಂಡ ಹಾಯುವ ಜನ ತುಂಬ ಕಟ್ಟುನಿಟ್ಟಾಗಿರಬೇಕು. ಮೈಲಿಗೆ ಮಾಡಿ ಕೊಳ್ಳಬಾರದು, ಉಪವಾಸವಿರಬೇಕು, ಎಲ್ಲಕ್ಕಿಂತ ಮಿಗಿಲಾಗಿ ದೇವರಲ್ಲಿ ನಂಬಿಕೆ ಇಡಬೇಕು. ವಿಜ್ಞಾನ ಇದನ್ನು ನಂಬದಿದ್ದರೂ ಕೆಂಡದ ಮೇಲೆ ನಡೆಯಲು ಮನಃಸ್ಥೈರ್ಯ ಬಹಳ ಅಗತ್ಯ ಎಂದು ಹೇಳುತ್ತದೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಜನ ಬೆಂಕಿಗೆ ಕೊಟ್ಟಿರುವ ಮಹತ್ವ. ಅಗ್ನಿದೇವನಿಗೆ ಶರಣಾಗುವ ಪ್ರಕ್ರಿಯೆ. ದೇವರ ಹೆಸರಿನಲ್ಲಿ ಅಗ್ನಿದೇವನನ್ನು ಒಲಿಸಿಕೊಂಡರೆ, ತಮ್ಮ ಬದುಕು ಪರಿಶುದ್ಧವಾಗುತ್ತದೆಂಬ ನಂಬಿಕೆ ಜನಪದರದು. ಪಂಚಭೂತಗಳಲ್ಲಿ ಅಗ್ನಿ ಶ್ರೇಷ್ಠ ಎಂಬ ಭಾವನೆ ಇಲ್ಲಿ ವ್ಯಕ್ತಗೊಳ್ಳುತ್ತದೆ. ಬೆಂಕಿಯನ್ನು ಹಾಯುವುದರ ಮೂಲಕ ವ್ಯಕ್ತಿತ್ವ ಶುದ್ಧವಾಗುತ್ತದೆ. ಕಾಯಿಲೆ ಕಸಾಲೆಗಳು ದೂರವಾಗುತ್ತವೆ. ಮಳೆಬೆಳೆಗಳು ವೃದ್ಧಿಯಾಗುತ್ತವೆ. ನಿಸರ್ಗದಿಂದ

ಉಂಟಾಗಬಹುದಾದ ಹಾನಿ ತಪ್ಪುತ್ತದೆ ಎಂಬ ನಂಬಿಕೆ ಪ್ರಬಲವಾಗಿದೆ. ಸೀತೆಯ ಅಗ್ನಿ ಪ್ರವೇಶ ಪ್ರಸಂಗವನ್ನು ಈ ಸಂಪ್ರದಾಯ ನೆನಪಿಸುತ್ತದೆ.

ಒಟ್ಟಿನಲ್ಲಿ ದೇವರ ಸಾಕ್ಷಿಯಲ್ಲಿ ತಾವು ಪರಿಶುದ್ಧರೆಂಬುದನ್ನು ದೈವದ್ರೋಹ ಅಥವಾ ಜನದ್ರೋಹ ಮಾಡಿಲ್ಲವೆಂಬುದನ್ನು ರುಜುವಾತು ಪಡಿಸಿಕೊಳ್ಳಲು ಜನಪದರು ಬೆಳಸಿ, ಉಳಿಸಿಕೊಂಡು ಬಂದಿರುವ ಪದ್ಧತಿ ಇದೆಂದು ಹೇಳಬಹುದಾಗಿದೆ.

ಅಶೋಕಪುರಂನ ಹತ್ತನೆಯ ಬೀದಿಯಲ್ಲಿರುವ ನಂಜುಂಡೇಶ್ವರ ದೇವಸ್ಥಾನದ ಮುಂದೆ ಕೊಂಡ ಹಾಕಲಾಗುತ್ತದೆ. ಇದು ನಂಜನಗೂಡಿನಲ್ಲಿ ದೊಡ್ಡ ತೇರು ಜರುಗುವ ದಿನದಂದು ನಂಜುಡೇಶ್ವರನ ಒಕ್ಕಲಿಗೆ ಸೇರಿದವರು ಮಾತ್ರ ಆಚರಿಸುತ್ತಾರೆ. ದೇವಸ್ಥಾನದ ಮುಂಭಾಗದಲ್ಲಿ ಎಂಟು ಅಡಿ ಉದ್ದ, ನಾಲ್ಕು ಅಡಿ ಅಗಲ ಮತ್ತು ಮೂರು ಅಡಿ ಆಳದ ಹಳ್ಳವನ್ನು ತೋಡುತ್ತಾರೆ. ಹಳ್ಳಕ್ಕೆ ಎರಡೂ ಕಡೆಯಲ್ಲೂ ಮೆಟ್ಟಿಲುಗಳನ್ನು ನಿರ್ಮಿಸಲಾಗಿರುತ್ತದೆ. ದೇವರ ಉತ್ಸವ ಮೆರವಣಿಗೆ ಹೊರಡುವುದಕ್ಕೆ ಮುಂಚೆ ಹಳ್ಳಕ್ಕೆ ಒಂದುಗಾಡಿ ಸೌದೆಯನ್ನು ತುಂಬಿ ದೇವರಿಗೆ ಪೂಜೆಯನ್ನು ಮಾಡಿ ಬೆಂಕಿಯನ್ನು ಹಾಕುತ್ತಾರೆ. ಉತ್ಸವವು ದೇವಸ್ಥಾನಕ್ಕೆ ಮರಳಿ ಮುಕ್ತಾಯಗೊಂಡಾಗ ಸೌದೆಗಳೆಲ್ಲಾ ಉರಿದು ಕೆಂಡವಾಗಿರುತ್ತವೆ. ಉತ್ಸವವು ಕೊನೆಗೊಂಡಾಗ ದೇವರ ಮೂರ್ತಿಯನ್ನು ದೇವಾಲಯದ ಒಳಗೆ ತೆಗೆದುಕೊಂಡು ಹೋಗಿ ಇಡಲಾಗುತ್ತದೆ. ದೇವರಿಗೆ ಪೂಜೆ ಸಲ್ಲಿಸಿ ದೇವರಗುಡ್ಡರು ಕೊಂಡವನ್ನು ತುಳಿಯಲು ತಯಾರಾಗುತ್ತಾರೆ. ದೇವರಗುಡ್ಡರು ದೇವಸ್ಥಾನದಿಂದ ಕೊಂಡಕ್ಕೆ ಎರಡುಬಾರಿ ಮಂಗಳಾರತಿಯನ್ನು ಮಾಡುತ್ತಿದ್ದಂತೆಯೇ ಅವರ ಮೈಮೇಲೆ ದೇವರ ಮಹಿಮೆ ಬರುತ್ತದೆ. ಆ ಸಮಯದಲ್ಲಿ ಯಾರು ಅವರನ್ನು ಮುಟ್ಟುವಂತಿಲ್ಲ. ಏಕೆಂದರೆ ಮುಟ್ಟಿದರೆ ಮಹಿಮೆ ಹೊರಟು ಹೋಗುತ್ತದೆ ಎಂಬುದು ಅಲ್ಲಿಯ ನಂಬಿಕೆಯಾಗಿದೆ. ಮಹಿಮೆ ಬಂದ ಮೇಲೆ ಆರ್ಭಟಿಸುತ್ತಾ ಕೊಂಡದೊಳಗೆ ಇಳಿದು ಮೂರುಬಾರಿ ಈ ಕಡೆಯಿಂದ ಆ ಕಡೆಗೆ, ಆ ಕಡೆಯಿಂದ ಈ ಕಡೆಗೆ ಬಂದು ಅನಂತರ ಕೊನೆಯಲ್ಲಿ ಕೈತುಂಬ ಕೆಂಡವನ್ನು ತೆಗೆದುಕೊಂಡು ನಿಂತಿರುವ ಜನರ ಮೇಲೆ ಎರಚುತ್ತಾನೆ. ಆದರೆ ಇದರಿಂದ ಯಾರಿಗೂ ಅಪಾಯವಾಗುವುದಿಲ್ಲ. ಹಾಗೇನಾದರು ಆದರೆ ಏನೋ ತಪ್ಪು ಮಾಡಿರಬೇಕು ಆದ್ದರಿಂದ ದೇವರು ನಮಗೆ ಶಿಕ್ಷೆಕೊಟ್ಟಿದ್ದಾನೆ ಎಂದು ಭಾವಿಸುತ್ತಾರೆ.

ಹರಕೆ ಹೊತ್ತವರು ದೇವರಿಗೆ ನಮಸ್ಕರಿಸಿ ಕೊಂಡವನ್ನು ಹಾಯುತ್ತಾರೆ. ಇದಕ್ಕೆಂದು ಬೆಳಿಗ್ಗೆಯಿಂದ ಉಪವಾಸವಿದ್ದು ಕಾಯುತ್ತಿರುತ್ತಾರೆ. ಕೊಂಡಹಾಯ್ದು ಅನಂತರ ದೇವಾಲಯದಲ್ಲಿ ಪೂಜೆಸಲ್ಲಿಸಿ ಹರಕೆ ತೀರಿಸಿದ್ದೇನೆ ಎಂದು ದೇವರಲ್ಲಿ ಅರಿಕೆ ಮಾಡಿಕೊಂಡು ಮನೆಗೆ ತೆರಳುತ್ತಾರೆ.

ಇದೇ ರೀತಿಯಲ್ಲಿ ಮೈಸೂರು ನಗರದ ಸಿದ್ದಪ್ಪಾಜಿ ದೇವಾಲಯ ಅಗ್ರಹಾರ, ಮಹದೇಶ್ವರ ದೇವಾಲಯ ಉದಯಗಿರಿ, ಮಹದೇಶ್ವರ ದೇವಾಲಯ ಜೆ.ಪಿ.ನಗರ, ಸಿದ್ದಪ್ಪಾಜಿ ದೇವಾಲಯ ಅಶೋಕಪುರಂ ಮುಂತಾದ ದೇವಾಲಯಗಳಲ್ಲಿಯೂ ಕೊಂಡಹಾಯುವ ಹರಕೆಯ ಪದ್ಧತಿಯನ್ನು ಕಾಣಬಹುದಾಗಿದೆ.

**ಇತರ ಹರಕೆಗಳು**

- 'ನಾಗರು' ಆದರೆ ಅದು ವಾಸಿಯಾಗಲು ನಾಗರಕಲ್ಲು ಮಾಡಿಸುವುದಾಗಿ, ಬೆಳ್ಳಿಯ ನಾಗರು ಮಾಡಿಸಿ ದೇವರಿಗೆ ಅರ್ಪಿಸುವುದಾಗಿ ಹರಕೆ ಮಾಡಿಕೊಳ್ಳುತ್ತಾರೆ.
- ಮಕ್ಕಳಿಗೆ ಅಮ್ಮ(ಸಿಡುಬು) ಆದಾಗ ಪರಿಹಾರವಾದರೆ ಬೇವಿನುಡಿಗೆ ಉಡಿಸುವುದಾಗಿ, ಮಗುವಿನ ತೂಕ ಬೆಲ್ಲ ಕೊಡುವೆನೆಂದು ಹರಸಿ ಕೊಳ್ಳುವರು.
- ಮನೆಯವರಿಗೆ ಮೇಲಿಂದ ಮೇಲೆ ತೊಂದರೆಯಾದರೆ ಒಳ್ಳೆಯದಾಗಲು ಕೊಂಡಕ್ಕೆ ಸೌದೆ ಹಾಕುವುದಾಗಿ ಮಾರಮ್ಮನಿಗೆ ಹರಕೆ ಕಟ್ಟಿಕೊಳ್ಳುವರು.
- ಹಲವಾರು ವರ್ಷಗಳಿಂದ ಮಕ್ಕಳಾಗದವರು ಮಕ್ಕಳಾದರೆ ತನ್ನ ಇಷ್ಟ ದೇವರಿಗೆ ಯಾತ್ರೆ ಬರುವೆನೆಂದು ಹರಸಿಕೊಳ್ಳುವರು. ಅಲ್ಲದೆ ಗಂಡು ಮಗುವಿಲ್ಲದವರು ಗಂಡು ಮಗುವಾದರೆ ಆ ದೇವರ ಹೆಸರನ್ನು ಮಗುವಿಗೆ ಇಡುವೆನೆಂದು ಹಾಗೂ ಯಾತ್ರೆ ಬಂದು ಮಗುವಿನ ಮುಡಿಕೊಡುವೆನೆಂದು ಹರಕೆ ಮಾಡಿಕೊಳ್ಳುತ್ತಾರೆ.
- ಚಾಮುಂಡಿಬೆಟ್ಟವನ್ನು ಮೆಟ್ಟಿಲುಗಳ ಮೂಲಕ ಬರಿಗಾಲಿನಿಂದ ಹತ್ತುವುದು, ಪ್ರತಿಮೆಟ್ಟಿಲಿಗೂ ನಮಸ್ಕರಿಸುವುದು, ಅರಿಶಿಣಕುಂಕುಮ ಹಚ್ಚುವುದು, ಕರ್ಪೂರ ಹಚ್ಚುವುದು, ಹೆಜ್ಜೆ ನಮಸ್ಕಾರ ಮಾಡುವುದಾಗಿ ಹರಕೆ ಹೊರುತ್ತಾರೆ

ಹಿಂದಿನಿಂದಲೂ ಮುಂದುವರಿದುಕೊಂಡು ಬಂದಿರುವ ಹರಕೆ ಮತ್ತು ಸೇವೆಗಳಿಗೆ ಇಂದಿನ ವೈಜ್ಞಾನಿಕ ಯುಗದಲ್ಲಿಯೂ ಸಮಾಜದ ಎಲ್ಲಾ ಸಮೂದಾಯಗಳಲ್ಲಿಯೂ ಅದರದ್ದೇ ಆದ ವಿಶಿಷ್ಟ ಮಹತ್ವವಿದೆ. ಪ್ರತಿಯೊಬ್ಬ ಮಾನವನಿಗೂ ಒಂದಲ್ಲ ಎರಡಲ್ಲ ಹತ್ತಾರು ಆಸೆ ಆಕಾಂಕ್ಷೆಗಳನ್ನು ತನ್ನ ಬದುಕಿನುದ್ದಕ್ಕೂ ಈಡೇರಿಸಿಕೊಳ್ಳುವ ಸಲುವಾಗಿ ತನ್ನನ್ನು ಮೀರಿದ ಅಗೋಚರ ಶಕ್ತಿಗಳ ಮೊರೆ ಹೋಗುತ್ತಾನೆ.

ಹರಕೆ, ಸೇವೆ ನಂಬಿಕೆಗಳಿಗೆ ವಿದ್ಯಾವಂತ ಅವಿದ್ಯವಂತರೆಂಬ ಬೇಧವಿಲ್ಲ ಅವರವರ ಬುದ್ಧಿಶಕ್ತಿ, ವೀಕ್ಷಣಾ ಸಾಮರ್ಥ್ಯ ಮತ್ತು ಮನೋಧರ್ಮಗಳಿಗೆ ಅನುಸಾರವಾಗಿ ಆಶಯಗಳು ಬದಲಾದರೂ ಆಚರಣೆಗಳು ಮುಂದುವರೆಯುತ್ತಲೇ ಇವೆ. ಹೀಗಾಗಿ ಸಂಪ್ರದಾಯ, ಆಚರಣೆ

ಮತ್ತು ನಂಬಿಕೆಗಳ ಸಫಲತೆ, ವಿಫಲತೆಗಳು ನಮಗೆ ಮುಖ್ಯವಲ್ಲ. ಅವುಗಳಿಂದ ಸಾಧ್ಯವಾಗುವ ಭಾವೈಕ್ಯತೆ ಹಾಗೂ ಮಾನವ ಸಂಬಂಧಗಳ ಗಟ್ಟಿಗೊಳಿಸುವಿಕೆ ಬಹಳ ಮಹತ್ವದ್ದಾಗಿವೆ. ಈ ರೀತಿಯ ಸೇವಾಹರಕೆಯ, ಆಚರಣೆಗಳ ಉದ್ದೇಶವೇನೇ ಇದ್ದರೂ, ಅವುಗಳ ಸಾಂಸ್ಕೃತಿಕ ಪ್ರಯೋಜನವನ್ನು ಸಾಮಾಜಿಕ ಸಾರ್ಥಕತೆಯನ್ನಾಗಲಿ ಅಲ್ಲಗಳೆಯುವಂತಿಲ್ಲ.

## 5.6 ದೇವಾಲಯಗಳಲ್ಲಿನ ಮರಗಿಡಗಳಿಗೆ ಸಂಬಂಧಿಸಿದ ನಂಬಿಕೆ ಮತ್ತು ಆಚರಣೆಗಳು

ಮೊದಲು ಆರಾಧನೆ ಆರಂಭವಾದುದು ವೃಕ್ಷಾರಾಧನೆಯಿಂದ. ಅನೇಕ ವೃಕ್ಷಗಳೂ ದೈವದ ನೆಲೆಗಳಾಗಿದ್ದು, ನಮ್ಮ ಬಹುತೇಕ ಜನಪದ ದೈವಗಳು ರೂಪುಗೊಂಡಿದ್ದು ವೃಕ್ಷಗಳಲ್ಲಿ. ಅದಕ್ಕೆ ಸಂಬಂಧಿಸಿದಂತೆ ಅನೇಕ ಕಥೆಗಳನ್ನು ಜನಪದರು ಹೇಳುತ್ತಾರೆ. ಪುರಾತನ ಕಾಲದಿಂದಲು ಹಬ್ಬ ಹರಿದಿನಗಳಲ್ಲಿ ತಳಿರು, ತೋರಣ, ಚಪ್ಪರ, ಮಾವು, ಬೇವು, ಆಲ, ಹಲಸು, ತೆಂಗು, ಬಾಳೆ ಇತ್ಯಾದಿ ಅನೇಕ ಗಿಡಮರಗಳಿಗೆ ಪ್ರಾಶಸ್ತ್ಯ ನೀಡುತ್ತಾ ಬರುತ್ತಿರುವುದನ್ನು ಕಾಣಬಹುದಾಗಿದೆ. ಎಲ್ಲಾ ಮತಧರ್ಮಗಳು ಪ್ರಕೃತಿಯಲ್ಲಿ ಪಾವಿತ್ರ್ಯತೆಯನ್ನು ಕಾಣುತ್ತಾ ಒಂದೊಂದು ಮರವನ್ನು ತಮ್ಮ ಮತದ ಚಿಹ್ನೆಯಾಗಿ ರೂಪಿಸಿಕೊಂಡವು. ಹಿಂದೂ ಧರ್ಮವು ಅಶ್ವಥ ವೃಕ್ಷಕ್ಕೆ ಧಾರ್ಮಿಕ ಆಚರಣೆಯಲ್ಲಿ ಮೊದಲ ಆದ್ಯತೆ ನೀಡಿತು. ಕ್ರೈಸ್ತರು ಕ್ರಿಸ್‌ಮಸ್‌ಮರ(ಫಿರ್ ಜಾತಿಯ ಮರ) ಮರವನ್ನು ಪವಿತ್ರವೆಂದು ನಂಬುತ್ತಾರೆ. ಬೌದ್ಧರು ಬೋಧಿವೃಕ್ಷವನ್ನು ಪೂಜಿಸುತ್ತಾರೆ.

"ದೇವಾಲಯಗಳ ಕಲ್ಪನೆ ಮೂಡುವತನಕ ಮರಗಳೇ ದೇವಾಲಯಗಳಾಗಿದ್ದವು. ಅನಂತರ ಮರಗಳ ಕೆಳಗಿನ ಒಂದು ಮೊರಡುಗಲ್ಲೇ ದೇವರ ಸಂಕೇತವಾಯಿತು. ಒಂದೊಂದು ವನದೇವತೆ ಸ್ವತಂತ್ರ ದೇವತೆಯಾಗಿ ಬಹದೇವತೋಪಾಸನೆ ಪ್ರಾರಂಭವಾಯಿತು. ಇಂದಿಗೂ ಕೂಡ ಅನೇಕ ಜನಪದ ದೇವರುಗಳು ಕಾಡಿನ ಮಧ್ಯದ ಹಾಗೂ ಮರದ ತೋಪುಗಳ ಮಧ್ಯದಲ್ಲೇ ಇರುವುದನ್ನು ಕಾಣುತ್ತೇವೆ."[42]

ವೃಕ್ಷ ಪ್ರಯೋಜನವನ್ನು ತನ್ನ ಮತ್ತು ಸಸ್ಯ ಲೋಕದ ನಂಟನ್ನು ಮಾನವ ಪೂರ್ವ ಕಾಲದಲ್ಲಿಯೇ ಮನವರಿಕೆ ಮಾಡಿಕೊಂಡಿದ್ದನು. ತನ್ನ ಉಳಿವಿಗೆ ತನ್ನ ಪ್ರಾಣ ರಕ್ಷಣೆಗೆ ಸಸ್ಯವೇ ಆಧಾರವೆಂಬುದನ್ನು ಅರಿತಿದ್ದರಿಂದಲೇ ವೃಕ್ಷಾರಾಧನೆ ಅವನ ಮೊತ್ತಮೊದಲ ಧಾರ್ಮಿಕ ಆಚರಣೆಯಾಗುತ್ತದೆ. ಇಂದು ಜಗತ್ತಿನ ಎಲ್ಲಾ ಕಡೆಗಳಲ್ಲಿಯೂ ಇರುವ ವೃಕ್ಷಾರಾಧನೆ ಮಾನವನ ವೃಕ್ಷ ಪ್ರೇಮಕ್ಕೆ ಸಂಕೇತವಾಗಿದೆ.

**ಬನ್ನಿಮರ** : ಸಣ್ಣ ಸಣ್ಣ ಎಲೆಗಳ ಹಾಗೂ ಮುಳ್ಳುಗಳಿಂದ ಕೂಡಿರುವ ಈ ಮರವನ್ನು 'ಶಮಿ ವೃಕ್ಷ' ಎನ್ನುವರು. ಬನ್ನಿಮರಕ್ಕೆ ಕರ್ನಾಟಕದಾದ್ಯಂತ ವಿಶೇಷ ಮಹತ್ವವಿದ್ದು ವಿವಿಧ ರೀತಿಯಲ್ಲಿ

ಆಚರಿಸಲ್ಪಡುತ್ತದೆ. ದಸರಾ ಸಂದರ್ಭದಲ್ಲಿ ವಿಶೇಷ ಗೌರವ ಭಕ್ತಿಗಳಿಂದ ಪೂಜಿಸಲ್ಪಡುವ ಬನ್ನಿ ಶುಭದ ಸಂಕೇತವಾಗಿದೆ. ಕೆಲವು ಪ್ರದೇಶಗಳಲ್ಲಿ ಪ್ರತಿದಿನವೂ ಬನ್ನಿಮರಕ್ಕೆ ಪೂಜೆ ಸಲ್ಲಿಸುವುದನ್ನು ಕಾಣಬಹುದು.

ಪಾಂಡವರು ಅಜ್ಞಾತವಾಸಕ್ಕೆ ಹೋಗುವಾಗ ಕಾಡಿನಲ್ಲಿರುವ ಬನ್ನಿಮರದಲ್ಲಿ ತಮ್ಮ ಪೌರುಷದ ಸಂಕೇತಗಳಾದ ಶಸ್ತ್ರಾಸ್ತ್ರಗಳನ್ನು ಶವದರೂಪದಲ್ಲಿ ಕಟ್ಟಿ ಇಟ್ಟು ಹೋಗುತ್ತಾರೆ. ಅಜ್ಞಾತವಾಸ ಮುಗಿದ ಮೇಲೆ ಬನ್ನಿಮರವನ್ನು ಪೂಜಿಸಿ ಶಸ್ತ್ರಾಸ್ತ್ರಗಳನ್ನು ಬಿಡಿಸಿಕೊಂಡ ದಿನವನ್ನು ಪವಿತ್ರ ದಿನವೆಂದು ಹೇಳುತ್ತಾರೆ. ಶ್ರೀರಾಮಚಂದ್ರನು ಶಮೀವೃಕ್ಷವನ್ನು ಪೂಜಿಸಿ, ರಾವಣನೊಂದಿಗೆ ಯುದ್ದಕ್ಕೆ ಹೋದನೆಂದು ಹಾಗೂ ವಿರಾಟನ ಗೋಗ್ರಹಣದ ಸಂದರ್ಭದಲ್ಲಿ ಅರ್ಜುನನೂ ಶಮೀ ದೇವಿಯನ್ನು ಆರಾಧಿಸಿದನೆಂಬ ಉಲ್ಲೇಖಗಳು ಜನಪದ ಮಹಾಕಾವ್ಯಗಳಲ್ಲಿ ಕಂಡುಬರುತ್ತದೆ.

ಪೌರಾಣಿಕ ಹಾಗೂ ಧಾರ್ಮಿಕ ಹಿನ್ನೆಲೆಯಲ್ಲಿ ಮಹತ್ವದ ಸ್ಥಾನಪಡೆದ ಬನ್ನಿಮರವನ್ನು ವಿಜಯದ ಸಂಕೇತವಾಗಿ ಸಂಬಂಧಗಳನ್ನು ಬೆಸೆಯುವ ಸಾಧನವಾಗಿ ಆಚರಿಸುತ್ತಾರೆ. ಬನ್ನಿಮರವನ್ನು ಕಡಿಯುವುದಿಲ್ಲ ಅಲ್ಲದೆ ಶ್ರೀ ರಾಮನಿಗೆ ಪಟ್ಟಾಭಿಷೇಕ ನಡೆದ ಪವಿತ್ರದಿನ, ಪಾಂಡವರು ಅಜ್ಞಾತವಾಸ ಮುಗಿಸಿದ ಶುಭದಿನವೆಂದು ವಿಜಯದಶಮಿ ದಿನ ಬನ್ನಿಮರಕ್ಕೆ ವಿಶೇಷ ಪೂಜೆಗೌರವಗಳು ಸಲ್ಲುತ್ತವೆ. ಅರಮನೆಯ ಕೋಟೆಯ ಒಳಗಿರುವ ಭುವನೇಶ್ವರಿ ದೇವಾಲಯದಲ್ಲಿ ಶಮಿವೃಕ್ಷವಿದ್ದು ದಸರೆಯಂದು ಈ ಮರಕ್ಕೆ ಪೂಜೆ ಸಲ್ಲಿಸಲಾಗುತ್ತದೆ ಇದು ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಪದ್ಧತಿಯಾಗಿದೆ. ಸುಬ್ರಹ್ಮಣ್ಯೇಶ್ವರ ದೇವಾಲಯ, ಬನ್ನಿಮರದಮ್ಮ ಕುಂಬಾರ ಕೊಪ್ಪಲಿನಲ್ಲಿ ಬನ್ನಿಮರವಿರುವುದು, ವಿಶೇಷ ದಿನಗಳಲ್ಲಿ ಪೂಜೆ ಗೊಳ್ಳುವುದನ್ನು ಕಾಣುತ್ತೇವೆ. ಅಂತೆಯೇ ಬನ್ನಿಮಂಟಪದ ಬಳಿ ಇರುವ ಬನ್ನಿಮರಕ್ಕೆ ಪೂಜೆ ಸಲ್ಲಿಸುವ ಮೂಲಕವೆ ದಸರೆಗೆ ತೆರೆಬೀಳುವುದು.

**ಅರಳಿಮರ :** ಅಶ್ವತ್ಥವೃಕ್ಷ, ಬೋಧಿವೃಕ್ಷ ಎಂದೆಲ್ಲ ಹೆಸರಾಗಿರುವ ಅರಳಿಮರ ಪೌರಾಣಿಕ ಹಿನ್ನೆಲೆಯಲ್ಲಿ ವೇದಕಾಲದಿಂದಲೂ ಮಾನ್ಯತೆ ಪಡೆದ ಮರ. "ಪಿಪ್ಪಲ್ ಎಂಬ ಹೆಸರೂ ಈ ಮರಕ್ಕಿದೆ. ಹಿಮಾಲಯ ತಪ್ಪಲು ಇದರ ತೌರೂರಾದರೂ ಬೌದ್ಧರು ಮತಪ್ರಚಾರಕ್ಕೆ ತೆರಳಿದಾಗ ದಕ್ಷಿಣ ಭಾರತಕ್ಕೆ ಈ ಮರ ಬಂತು ಎನ್ನಲಾಗಿದೆ. ಕಾಡಿನಲ್ಲಿ ಅಪರೂಪದ ಈ ಮರ ಎಲ್ಲ ಹಳ್ಳಿಗಳಲ್ಲಿ ಕಂಡುಬಂದು, ಊರ ಮರವಾಗಿ ಉಳಿದು ಬಂದಿದೆ. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ 'ಅಶ್ವತ್ಥ ಸರ್ವವೃಕ್ಷಾಣಾಂ' ಎಂದೂ, ತ್ರಿಮೂರ್ತಿಗಳು ಈ ಮರದಲ್ಲಿದ್ದಾರೆಂದೂ, ಪ್ರತೀ ಮಂಗಳ

ವಾರ ಲಕ್ಷ್ಮಿ ಮರದ ಬಳಿ ಬರುತ್ತಾಳೆಂದೂ, ಅಮವಾಸ್ಯೆ ಬಂದ ಸೋಮವಾರ ಅಶ್ವತ್ಥಮರದ ಪ್ರದಕ್ಷಿಣೆ ಅತೀ ಶ್ರೇಷ್ಠವೆಂಬುದು ನಂಬಿಕೆ"[43]

"ಕರ್ನಾಟಕದಲ್ಲಿ ಚಾಲ್ತಿಯಿರುವ ಒಂದು ಕತೆಯ ಪ್ರಕಾರ ಅರಳಿಮರ ದುಷ್ಟಶಕ್ತಿಯ ಏಳು ಸುಂದರ ಪುತ್ರಿಯರನ್ನು ಪ್ರತಿನಿಧಿಸುತ್ತದೆ. ಒಂದು ದಿನ ಅವರು ಹತ್ತಿರದ ನದಿಗೆ ಸ್ನಾನಕ್ಕೆಂದು ಹೋಗುವಾಗ ಕೃಷ್ಣ ಅವರಲ್ಲಿ ಪ್ರೇಮಾಸಕ್ತನಾದನು. ತನ್ನನ್ನು ಮದುವೆಯಾಗುವಂತೆ ಅವರನ್ನು ಕೇಳಿದನು ಅವರು ನಿರಾಕರಿಸಿದರು, ಆಗ ಕೃಷ್ಣ ಅವರನ್ನು ಹಿಡಿದುಕೊಳ್ಳಲು ಮುಂದಾಗುವನು ಆ ಸೋದರಿಯರು ಕೂಡಲೆ ಅರಳಿಮರವಾಗಿ ರೂಪಾಂತರ ಹೊಂದುವರು, ಅವರನ್ನು ಆಲಂಗಿಸಿ ಕೊಂಡಿದ್ದ ಕೃಷ್ಣ ಒಡನೆಯೇ ಬೇವಿನ ಮರವಾದನು. ಅಂದಿನಿಂದ ಬೇವು ಅರಳಿಮರಗಳಿಗೆ ಮದುವೆ ಮಾಡಿ ಪೂಜಿಸುವ ಪದ್ಧತಿ ಬಂದಿದೆಯೆಂದು"[44] ಜನಪದರು ಹೇಳುತ್ತಾರೆ.

ಅರಳಿ ಮತ್ತು ಬೇವಿನಗಿಡಗಳನ್ನು ಜನಪದ ದೈವಗಳಾಗಿ ಜನಗಳು ಸ್ವೀಕರಿಸಿದ್ದಾರೆ. ಇವೆರಡೂ ಗಿಡಗಳು ಒಂದೇಕಡೆ ಇದ್ದು, ಗಂಡ–ಹೆಂಡತಿ ಎಂದೇ ಭಾವಿಸಿದ್ದಾರೆ. ಸಾಮಾನ್ಯವಾಗಿ ಅರಳಿ ಹಾಗೂ ಬೇವುಗಳನ್ನು ಒಟ್ಟಾಗಿ ಬೆಳೆಸಿ, ಸುತ್ತ ಕಟ್ಟೆಕಟ್ಟಿ, ಅವುಗಳ ಕೆಳಗೆ ನಾಗರ ಕಲ್ಲುಗಳನ್ನು ಪ್ರತಿಷ್ಠಾಪಿಸಿರುವುದನ್ನು ಕಾಣುತ್ತೇವೆ. ಮದುವೆಯಾಗಿ ಅನೇಕ ವರ್ಷಗಳಾಗಿದ್ದರೂ ದಂಪತಿಗಳಿಗೆ ಮಕ್ಕಳಾಗದಿದ್ದಾಗ ಈ ಎರಡೂ ಮರಗಳು ಕೂಡಿಕೊಂಡಿರುವ ಸ್ಥಳದಲ್ಲಿ ಪೂಜೆ ಸಲ್ಲಿಸುವುದು ಸಾಮಾನ್ಯ. ಬೆಳಗಿನ ಜಾವ ಎದ್ದು ಸ್ನಾನ ಮಾಡಿ ಮರದ ಹತ್ತಿರ ಬಂದು ಅರಿಶಿಣ, ಕುಂಕುಮವನ್ನು ಹಾಕಿ ತೆಂಗಿನ ಕಾಯಿ ಒಡೆದು ಗಂಧದಕಡ್ಡಿ ಹಚ್ಚಿ, ಕರ್ಪೂರ ಬೆಳಗುವರು. ಅನಂತರ ಒಂಭತ್ತು ಸುತ್ತು ಬಂದು ಅಡ್ಡಬಿದ್ದು ನಮಸ್ಕರಿಸುವರು. ಹೀಗೆ 3, 6, 9, 12 ಇಲ್ಲವೇ ಒಂದು ತಿಂಗಳಲ್ಲಿ 3ವಾರ ಮಾಡಿದರೆ ಅವರು ಪ್ರಾರ್ಥಿಸಿದಂತೆ ಫಲಸಿದ್ಧಿಯಾಗುವುದೆಂದು ಜನಪದರಲ್ಲಿ ನಂಬಿಕೆಯಿದೆ. 'ಅರಳಿಮರ ಸುತ್ತಂದು ಹೊಟ್ಟೆ ಮುಟ್ಟಿ ನೋಡ್ಕೊಂಡ್ಳು', 'ಅಲಲಾ ಅನ್ನೋ ಅರಳಿಮರ ನಂಬೌದು ಮಳ್ಳಿಹಂಗಿರೋ ಕಳ್ಳಿನ ನಂಬಾರ್ದು' ಎಂಬ ಗಾದೆಗಳು ಚಾಲ್ತಿಯಲ್ಲಿವೆ. ಬಿಸಿಲು ಮಾರಮ್ಮ, ಶಂಕರನಾರಾಯಣ ದೇವಾಲಯ ಚಾಮುಂಡಿಪುರಂ ಮುಂತಾದ ದೇವಾಲಯಗಳಲ್ಲಿ ಅರಳಿ ಮರವಿರುವುದನ್ನು ಕಾಣಬಹುದಾಗಿದೆ. ಅಲ್ಲದೆ ಅರಳಿ ಮತ್ತು ಬೇವಿನ ಮರಗಳೆರಡೂ ಇರುವ ಜಾಗದಲ್ಲಿ ನಾಗರಕಲ್ಲನ್ನು ಪ್ರತಿಷ್ಠಾಪಿಸಿ ಪೂಜಿಸುತ್ತಿರುವುದನ್ನು ಕಾಣಬಹುದಾಗಿದೆ. ತೋಣಚಿಕೊಪ್ಪಲಿನ ನಾಗಲಿಂಗೇಶ್ವರ ಮತ್ತು ಬಂದಂತಮ್ಮ ಕಾಳಮ್ಮ ದೇವಾಲಯದ ಆವರಣದಲ್ಲಿ ಈ ಮರಗಳ ಕೆಳಗೆ ನಾಗರ ಕಲ್ಲುಗಳಿರುವುದು ಕಂಡುಬಂದಿದೆ.

**ಬೇವಿನ ಮರ :** ಅರಳಿಮರದ ಜೊತೆಗೆ ಅಶ್ವತ್ಥಕಟ್ಟೆಯ ಮೇಲೆ ಬೇವು ಪೂಜೆಗೊಳ್ಳುತ್ತದೆ. ಬೇವು ಶಕ್ತಿಯ ಅವತಾರವೆಂದು ಜನಪದರು ನಂಬಿದ್ದಾರೆ. ಎಲ್ಲಮ್ಮನ ಭಕ್ತರಿಗೆ ಇದು ಪವಿತ್ರ ಮರ. ತಂಬಿಟ್ಟಿನಾರತಿ, ಮಡೆಯಲ್ಲಿ ಪ್ರಮುಖವಾಗಿ ಬೇವಿನ ಸೊಪ್ಪನ್ನು ಪೂಜೆಯ ಪರಿಕರವಾಗಿ ಬಳಸುತ್ತಾರೆ. ದೇವಾಲಯದ ಬಾಗಿಲಿಗೆ ಬೇವಿನೆಲೆಯನ್ನು ಮಾವಿನ ಎಲೆಯೊಂದಿಗೆ ತೋರಣ ಕಟ್ಟುತ್ತಾರೆ. ಅಲ್ಲದೆ ಕಲಶ ಪೂಜಾದಿಗಳಲ್ಲಿಯೂ ಸಹ ಬೇವಿನೆಲೆಯನ್ನು ಬಳಸುತ್ತಾರೆ. ಗೋರ ಅಥವಾ ದಡಾರದ ದೇವತೆ ಎನ್ನುತ್ತಾರೆ. ದಡಾರಕ್ಕೆ 'ಸೀತಾಳಸಿಡುಬು' ಎನ್ನುವರು. ಆ ದೇವತೆ ಸದಾ ಬೇವಿನ ಮರದಲ್ಲಿ ವಾಸಿಸುತ್ತಾಳಂತೆ. ಮಕ್ಕಳಿಗೆ ಸಿಡುಬು ಅಥವಾ ನಾಗರು ಬಂದಾಗ ಬೇವಿನ ಸೊಪ್ಪು ಅರೆದು ಮೈಗೆ ಹಚ್ಚುತ್ತಾರೆ ಹಾಗೆ ಗದ್ದಮ್ಮ(ಗದಕಟ್ಟು) ಕೆನ್ನೆಸೇರಿ ಗದ್ದ ಊದಿ ಕೊಂಡು ನೋವು ಕಾಣಿಸಿಕೊಂಡವರಿಗೆ ಮಂತ್ರ ಮಾಡಲು ಬಳಸುತ್ತಾರೆ. ಸೀತಾಳ ಸಿಡುಬು (ಅಮ್ಮ)ಆದಾಗ ಬೇವಿನ ಸೊಪ್ಪು ಮತ್ತು ಬಿಂದಿಗೆ ನೀರು ತೆಗೆದುಕೊಂಡು ಹೋಗಿ ಮಾರಮ್ಮನಿಗೆ ಪೂಜೆ ಮಾಡಿ ಮಗುವಿಗೆ ಬೇವಿನ ಸೊಪ್ಪನ್ನು ಮಿಶ್ರಮಾಡಿದ ನೀರಿನಿಂದ ಸ್ನಾನ ಮಾಡಿಸಿ ಮಲಗುವ ಸ್ಥಳದಲ್ಲೂ ಬೇವಿನ ಸೊಪ್ಪನ್ನು ಇಡುತ್ತಾರೆ. ಇಂದಿಗೂ ಇಂತಹ ಆಚರಣೆಗಳು ರೂಢಿಯಲ್ಲಿವೆ. ದೇವರ ಉತ್ಸವಗಳಲ್ಲಿ, ಗ್ರಾಮದೇವತೆ ಹಬ್ಬಗಳಲ್ಲಿ ಸಿಡಿಯಾಡುವವರು ಬೇವಿನ ಸೊಪ್ಪನ್ನು ಕಟ್ಟಿಕೊಳ್ಳುತ್ತಾರೆ.

ಯುಗಾದಿ ಹಬ್ಬದಂದು ನೀರಿಗೆ ಬೇವಿನ ಎಲೆಗಳನ್ನು ಹಾಕಿಕೊಂಡು ಸ್ನಾನ ಮಾಡಿ, ಬೇವಿನ ಚಿಗುರು ಹೂವನ್ನು ತಂದು ಬೇವಿನೊಂದಿಗೆ ಬೆಲ್ಲ ಮಿಶ್ರಣ ಮಾಡಿ ತಿನ್ನುವುದು ಪುರಾತನ ಕಾಲದಿಂದ ನಡೆದುಬಂದ ಸಂಪ್ರದಾಯ. ಬಾಳಲ್ಲಿ ಬೇವು ಬೆಲ್ಲಗಳ ಮಿಶ್ರಣ ಎರಡನ್ನು ಒಂದೇ ಮನೋಧರ್ಮದಿಂದ ಸ್ವೀಕರಿಸುವ ಕಲ್ಪನೆಯೇ ಈ ಆಚರಣೆಯ ಉದ್ದೇಶ. ಹಲವುಕಡೆ ಇದನ್ನು ಶಕ್ತಿಯ ಆರಾಧನೆಯ ದಿನವನ್ನಾಗಿ ಆಚರಿಸುವುದರಿಂದ ಬೇವಿಗೆ ವಿಶೇಷ ಪ್ರಾಧಾನ್ಯತೆ ಇದೆ. ದಟ್ಟಗಳ್ಳಿಯ ಘಂಟೆ ಬಸಪ್ಪ ದೇವಾಲಯದಲ್ಲಿ ಜೋಡಿಬೇವಿನಮರವಿದೆ. ಇದರ ಕೆಳಗೆ ಚಿಕ್ಕಗುಡಿಯಲ್ಲಿ ಘಂಟೆ ಬಸಪ್ಪನನ್ನು ಪ್ರತಿಷ್ಠಾಪಿಸಲಾಗಿದೆ. ಇದರ ವಿಶೇಷವೆಂದರೆ ಇದರ ಜೊತೆಯಲ್ಲಿ ಅರಳಿ ಮರವಿರುವುದಿಲ್ಲ.

**ಆಲದಮರ** : ಆಲದ ಮರವಿಲ್ಲದ ಊರುಗಳೇ ಇಲ್ಲ. ಅರಳಿಮರದಂತೆಯೇ ಪವಿತ್ರವಾದ ವೃಕ್ಷವಾಗಿದ್ದು, ಇದನ್ನು 'ವಟವೃಕ್ಷ' ಎಂದು ಕರೆಯುವರು. ಇದು ಅಮರವಾದ ಮರವಾಗಿದ್ದು, ಶ್ರೀ ಕೃಷ್ಣ ವಟಪತ್ರಶಾಯಿಯೆಂದು ಪುರಾಣ ಹೇಳುತ್ತದೆ. ಜಲಪ್ರಳಯ ಸಮಯದಲ್ಲಿ ಇಡೀ ಭೂಮಂಡಲವೇ ನೀರಿನಲ್ಲಿ ಮುಳುಗಿ ಹೋದಾಗ ಈ ವೃಕ್ಷಮಾತ್ರ ನಿಂತಿತ್ತಂತೆ. ಶಿಶು

ರೂಪಿಯಾದ ಶ್ರೀ ಕೃಷ್ಣ ಅದರ ಮೇಲೆ ನಿರಾತಂಕವಾಗಿ ಮಲಗಿ ಕೊಂಡಿದ್ದನೆಂದು ಪುರಾಣದಲ್ಲಿ ತಿಳಿಸಲಾಗಿದೆ.

ಜನಪದರ ಕಲ್ಪನೆಯ ಪ್ರಕಾರ ಏಳುಜನ ಅಮ್ಮಂದಿರಲ್ಲಿ 'ಆಲದ ಮರದಮ್ಮ' ಮೊದಲನೆಯವಳು ಹಾಗಾಗಿ ಅನೇಕ ಗ್ರಾಮ ಮತ್ತು ನಗರಗಳಲ್ಲಿ ಆಲದ ಮರವನ್ನು ದೇವತೆಯೆಂದು ಪೂಜಿಸುವ, ಹಬ್ಬ ಆಚರಿಸುವ ಪದ್ಧತಿಯಿದೆ. ಹಾಗೆ ಆಲದ ಮರವನ್ನು ಪುರುಷ ಸಂಕೇತವೆಂದು ಭಾವಿಸಿ ಕೆಲವುಕಡೆ 'ಮುನಿಯಪ್ಪ' ಎಂದು ಪೂಜಿಸುವ ಸಂಪ್ರದಾಯವಿದೆ. ಆಲದ ಮರವನ್ನು ಪರಂಪರೆಯ ಗೊಡ್ಡು ಸಂಪ್ರದಾಯಕ್ಕೆ ಸಂಕೇತಿಸಿ 'ಅಪ್ಪ ಹಾಕಿದ ಆಲದ ಮರ' ಎಂಬ ಗಾದೆ ಮಾತು ಇಂದಿಗೂ ಬಳಕೆಯಲ್ಲಿದೆ.

"ಪುರಾಣ ಆಲವನ್ನು ಗಂಡೆಂದು ಹೇಳಿದರೆ ತುಳಸಿಯನ್ನು ಹೆಣ್ಣೆಂದು ಹೇಳುತ್ತದೆ. ಪಾರ್ವತಿ–ಪರಮೇಶ್ವರರು ಕ್ರೀಡಾಸಕ್ತರಾಗಿದ್ದಾಗ ದೇವತೆಗಳ ಸೂಚನೆಯಂತೆ, ಅಗ್ನಿ ಅವರ ಕ್ರೀಡೆಗೆ ಭಂಗವನ್ನುಂಟುಮಾಡಿದ. ಪಾರ್ವತಿ ಸಿಟ್ಟಾಗಿ ದೇವತೆಗಳಿಗೆ ಮರವಾಗುವಂತೆ ಶಾಪವಿತ್ತಳು. ಆಗ ವಿಷ್ಣು ಅಶ್ವಥ ವೃಕ್ಷವಾದ"[45] ಎಂದು ಹೇಳಲಾಗುತ್ತದೆ. ಮೈಸೂರು ನಗರದ ದೇವಾಲಯಗಳಲ್ಲಿ ಆಲದ ಮರ ಕಂಡುಬರುವುದು ವಿರಳವಾಗಿದೆ.

**ಮಾವಿನ ಮರ :** ಲಕ್ಷ್ಮೀ, ವಿಷ್ಣು, ಕಾರ್ತಿಕ ಮುಂತಾದವರು ವಾಸಿಸುವ ಪವಿತ್ರ ಮರ. ಫಲ್ಗುಣ ಮಾಸದಲ್ಲಿ ಇದಕ್ಕೆ ವಿಶೇಷವಾದ ಪೂಜೆ. ಮರದ ಸೊಪ್ಪು ತಳಿರು ತೋರಣಕ್ಕೆ, ಕಳಶ ಆರತಿ ಮುಂತಾದ ಶುಭ ಸಂದರ್ಭಗಳಲ್ಲಿ ಬಳಕೆಯಾಗುತ್ತದೆ. ಮಾವಿನ ಮರವನ್ನು ವೃಕ್ಷಗಳ ರಾಜ ಎಂದೇ ಕರೆಯಲಾಗಿದೆ. ಯಾವುದೇ ಹಬ್ಬಗಳು ಬಂದರು ಅದರಲ್ಲಿ ಮಾವಿನ ತೋರಣ ವಿಲ್ಲದಿದ್ದರೆ ಅದು ಹಬ್ಬದ ವಾತಾವರಣವೆ ಅಲ್ಲ ಅನ್ನಿಸುತ್ತದೆ.

**ತೆಂಗಿನ ಮರ :** ಕಲ್ಪವೃಕ್ಷವೆಂದು ಹೆಸರಾಗಿರುವ, ಸಕಲ ದೇವತೆಗಳಿಗೂ ಪ್ರಿಯವಾದದ್ದು ನಾರಿಕೇಳ ಅಥವಾ ತೆಂಗು. ಎಲ್ಲ ಶುಭಕಾರ್ಯಗಳಿಗೂ ಅದು ಮೊದಲು ಬೇಕು. ದೇವಾಲಯಗಳಲ್ಲಿ ಪೂಜೆ, ಹರಕೆ ಸಲ್ಲಿಸಲು ಬೇಕೇಬೇಕು. ಹರಕೆ ಹೊತ್ತವರು 101, 301, 501, 1001 ಹೀಗೆ ಹರಕೆ ಕಟ್ಟಿಕೊಂಡಂತೆ ತೆಂಗಿನ ಕಾಯಿ ಒಡೆಯುವುದು ರೂಢಿಯಲ್ಲಿದೆ. ಕಳಶದ ಪೂಜೆಗಂತು ಕಾಯಿ ಅವಶ್ಯಕವಾಗಿದೆ. ಹೀಗಾಗಿ ತೆಂಗಿನ ಮರವು ಕರ್ನಾಟಕದಾದ್ಯಂತ ಪೂಜನೀಯ ಸ್ಥಾನ ಪಡೆದುಕೊಂಡಿದೆ. ಇದರ ಪ್ರತಿಯೊಂದು ಭಾಗವೂ ಉಪಯುಕ್ತವಾದುದೇ ಆಗಿದೆ.

ಕೆಲವು ದೇವರುಗಳ ಜಾತ್ರೆಯಲ್ಲಿ ಭಕ್ತರು ತಲೆಯಮೇಲೆ ತೆಂಗಿನಕಾಯಿ ಒಡೆಸಿಕೊಂಡು ಹರಕೆ ಸಲ್ಲಿಸುವುದಿದೆ. ದೇವರ ಜಾತ್ರೆ ಪೂಜಾ ಕಾರ್ಯಗಳಲ್ಲಿ ಈಡುಗಾಯಿ ಸರ್ವೇಸಾಮಾನ್ಯ. ಪ್ರತಿಯೊಂದು ದೇವಾಲಯಗಳಲ್ಲಿಯೂ ತೆಂಗಿನಕಾಯಿ ಒಡೆಯುವ ಮೂಲಕವೇ ದೇವರಿಗೆ

ಅರ್ಚನೆಯಾಗುತ್ತದೆ. ಚಪ್ಪರಕ್ಕೆ ತೆಂಗಿನಗರಿಯೇ ಶ್ರೇಷ್ಠವಾದುದು. ತೆಂಗಿನಕಾಯಿಗೆ ಮೂರು ಕಣ್ಣುಗಳಿರುವುದರಿಂದ ಮುಕ್ಕಣ್ಣನೆಂದು ಪೂಜಿಸುವರು. ತೆಂಗು ಶಿವಫಲ. ಲಕ್ಷ್ಮೀಯೆಂದು, ಸಮೃದ್ಧಿಯ ಫಲವೆಂದು ಪೂಜನೀಯ ಭಾವದಿಂದ ಬಳಸುತ್ತಾರೆ. ಕರಗದಲ್ಲಿ ದೃಷ್ಟಿತೆಗೆದು ನಿವಾಳಿಸಿ ಒಡೆಯುವುದಿದೆ. ಅರಮನೆಯ ಕೋಟೆ ಆಂಜನೇಯ, ಬೆಟ್ಟದ ಚಾಮುಂಡೇಶ್ವರಿ, ಅಗ್ರಹಾರದ ನೂರೊಂದು ಗಣಪತಿ ದೇವಾಲಯದಲ್ಲಿ ವಾಹನಗಳ ಪೂಜೆಗೆ ಮತ್ತು ವಹನಕ್ಕೆ ನಿವಾಳಿಸಿ, ವಾಹನದ ಮುಂದೆ ಈಡುಗಾಯಿ ಹೊಡೆಯುತ್ತಾರೆ.

**ಬಾಳೆಗಿಡ :** ಬಾಳೆಗಿಡ ಜನಪದರ ಬದುಕಿನ ಹಲವು ಕಾರ್ಯಗಳಲ್ಲಿ ಉಪಯೋಗಕ್ಕೆ ಬರುತ್ತದೆ. ಬಾಳೆಯ ಉತ್ಪನ್ನಗಳಾದ ಬಾಳೆದಿಂಡು, ಬಾಳೆಎಲೆ, ಬಾಳೆಕಾಯಿ, ಬಾಳೆಹಣ್ಣು, ಬಾಳೆಹೂ, ಬಾಳೆಗೊನೆ ಮೊದಲಾದವು ಶುಭ ಸಮಾರಂಭಗಳಲ್ಲಿ, ಕೃಷಿ ಹಾಗೂ ಧಾರ್ಮಿಕವಾದ ಅನೇಕ ಚಟುವಟಿಕೆಗಳಲ್ಲಿ ಬಳಕೆಯಾಗುತ್ತ ಬಂದಿದೆ. ಹಬ್ಬ ಹರಿದಿನಗಳಲ್ಲಿ ದೇವರಿಗೆ ನೈವೇದ್ಯ ಇಡಲು ಬಾಳೆಎಲೆಯನ್ನು ಹಾಸಬೇಕು. ದಾಸಪ್ಪ, ಜೋಗಪ್ಪ ಉಪವಾಸ ಇದ್ದವರು ಬಾಳೆಎಲೆಯಲ್ಲಿ **'**ಒಪ್ಪತ್ತು**'** ಬಿಡುತ್ತಾರೆ. ಹಬ್ಬಹರಿದಿನಗಳಲ್ಲಿ ದೇವಾಲಯಗಳ ಮುಂದೆ ಚಪ್ಪರದೊಂದಿಗೆ ಬಾಳೆಯಿಂದ ರಚಿಸಿದ ತಳಿರುತೋರಣಗಳೇ ಶುಭ ಕಾರ್ಯದ ಕಲ್ಪನೆಯನ್ನು ತಂದು ಕೊಡುತ್ತವೆ. ದೇವಾಲಯಗಳಲ್ಲಿ ಬಾಳೆಹಣ್ಣಿನ ರಸಾಯನ ದೇವರ ಪ್ರಸಾದವಾಗಿ ಪ್ರಸಿದ್ಧಿ ಪಡೆದಿದೆ. ಜಾತ್ರೆಗಳಲ್ಲಿ ರಥೋತ್ಸವ ನಡೆಯುವಾಗ ಭಕ್ತರು, ಹೊಸದಾಗಿ ಮದುವೆಯಾದವರು ಬಾಳೆಹಣ್ಣು, ಧವನ ಎಸೆಯುವುದು ಹಿಂದಿನಿಂದಲೂ ರೂಢಿಸಿಕೊಂಡು ಬಂದಿರುವ ಪದ್ಧತಿ. ಉದಾಹರಣೆಗೆ: ಚಾಮುಂಡೇಶ್ವರಿ ಮತ್ತು ಶ್ರೀಕಂಠೇಶ್ವರ ರಥೋತ್ಸವಗಳಲ್ಲಿ ಇದನ್ನು ಕಾಣಬಹುದಾಗಿದೆ.

## ಪತ್ರೆಗಳು

**ಗರಿಕೆ : "**ಗರಿಕೆ ಗಣೇಶನಿಗೆ ಬಹುಪ್ರಿಯವಾದ ವಸ್ತು ಪ್ರತಿಯೊಂದು ಮಂಗಳ ಕಾರ್ಯದಲ್ಲಿ ಬಳಸುವ ಸಂಪ್ರದಾಯವಿದೆ. ಮಕ್ಕಳ ಹುಟ್ಟು ಹಬ್ಬದಲ್ಲಿ ಗರಿಕೆ ಹಾಗೂ ಮಂತ್ರಾಕ್ಷತೆಯನ್ನು ಹಣೆಗೆ ಅಂಟಿಸುವ ಸಂಪ್ರದಾಯವಿದೆ**"**[46]

ಗರಿಕೆ ಕೌಟುಂಬಿಕ ಜೀವನದ ಒಂದು ಪ್ರತೀಕ. ಸಿದ್ಧಿ ಹಾಗೂ ಸಾಧನೆಗಳಿಗೆ ಅಲ್ಪ ತನದಲ್ಲಿಯೇ ಮಹತ್ತನ್ನು ತೋರಿಸುವಂತಹ ಸಾಂಕೇತಿಕವೆಂದು ಹೇಳಬಹುದು. ಚೌತಿಯಂದು ಗಣೇಶನಿಗೆ ವಿಶೇಷವಾಗಿ 21 ಗರಿಕೆಯನ್ನು ಹಾಕಿ ಪೂಜಿಸಿದರೆ ಬೇಡಿದ ವರವನ್ನು ಕೊಡುವನೆಂದು ಪ್ರತೀತಿ. ಗರಿಕೆಯನ್ನು ಗಣೇಶನ ಪ್ರತಿರೂಪವೆಂದು ಕೃಷಿ ಆಚರಣೆಗಳಲ್ಲಿ ಸಗಣಿ ಉಂಡೆಗೆ ಗರಿಕೆಯನಿಟ್ಟು ಪೂಜಿಸುವುದಿದೆ.

**ತುಳಸಿ :** ಭಾರತೀಯರು ಮನೆ ಮನಗಳಲ್ಲಿ ಪೂಜಿಸಲ್ಪಡುವ ತುಳಸಿಗೆ ಪ್ರತ್ಯೇಕ ಸ್ಥಾನವನ್ನು ಕೊಟ್ಟಿದ್ದಾರೆ. ಪೂಜೆಗೂ ತುಳಸಿಯನ್ನು ಬಳಸುತ್ತಾರೆ. ಶ್ರೀ ಕೃಷ್ಣನನ್ನು ಮೊದಲ್ಗೊಂಡು ವೆಂಕಟೇಶ, ಆಂಜನೇಯ, ಗಣೇಶ, ಶನಿದೇವ, ಶ್ರೀರಾಮಾದಿಯಾಗಿ ಎಲ್ಲಾ ದೇವಾಲಯಗಳಲ್ಲೂ ತುಳಸಿಯ ಮಾಲೆಯನ್ನು ದೇವರಿಗೆ ಹಾಕುವುದು ರೂಢಿ. ಪೂಜೆಗೆಂದೇ ತುಳಸಿಯನ್ನು ಪ್ರತ್ಯೇಕವಾಗಿ ಬೆಳೆಸುತ್ತಾರೆ.

**"**ತುಲಸಿಕಾನನಂ ಚೈವಗೃಹೇಯಸ್ಯಾವತಿಷ್ಠತಿ ತದಗೃಹಂ ತೀರ್ಥಭೂತಂ ಹೀ ನಾಯಾಂಚಿ ಮಮಕಿಂಕರಃ**"**[47]

ಯಾರ ಮನೆಯಲ್ಲಿ ತುಳಸಿಯ ವನ ಇದೆಯೋ ಅಂತಹ ಮನೆಗಳು ತೀರ್ಥಕ್ಷೇತ್ರಗಳಿಗೆ ಸಮಾನವಾದವು. ಅಂತಹ ಮನೆಗಳಿಗೆ ಯಮಕಿಂಕರರು ಬರುವುದಕ್ಕೆ ಭಯ ಪಡುತ್ತಾರೆ. ಪ್ರವಾಸಕ್ಕೆ ಹೊರಟ ಹಿಂದೂಗಳು ತುಳಸಿಯ ವನವನ್ನು ಪ್ರದಕ್ಷಿಣೆ ಹಾಕಿಕೊಂಡು ಹೋಗುವ ಸಂಪ್ರದಾಯವಿದೆ. ತುಳಸಿ ನಾನಾ ಉಪಯೋಗಗಳಿಂದ ಬಳಕೆಯಾಗುವುದರಿಂದ ಅದನ್ನು ಪೂಜ್ಯ ಭಾವನೆಯಿಂದ ನೋಡುತ್ತಾರೆ.

**"**ತುಳಸಿಯನ್ನು ಎಲ್ಲಿ ಪೂಜಿಸುತ್ತಾರೋ ಅಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ, ಶ್ರೀಲಕ್ಷ್ಮೀ, ಸರಸ್ವತಿ, ಮಂಗಳಗೌರಿ, ಸಪ್ತ ಋಷಿಗಳು, ಸಪ್ತಕನ್ಯೆಯರೂ, ಅಷ್ಟದಿಕ್ಪಾಲಕರು, ಸರ್ವ ಜೀವನದಿಗಳು, ಅಷ್ಟ ದಶಪುರಾಣಗಳು, ಕಾಮಧೇನು, ಕಲ್ಪವೃಕ್ಷಾಧಿಗಳು ಇರುತ್ತಾರೆಂಬ ನಂಬಿಕೆ ಇದೆ. ಪುರಾತನ ಗ್ರಂಥಗಳ ಪ್ರಕಾರ ತುಳಸಿಯ ಒಂದು ದಳವು ಶ್ರೀಮನ್ ನಾರಾಯಣನ ತೂಕಕ್ಕೆ ಸಮವಾಗಿದೆಯೆಂದು ಹೇಳಲಾಗುತ್ತದೆಂದು ದೇವಾಲಯದ ಅರ್ಚಕರು ಹೇಳುತ್ತಾರೆ**"**[48] ತುಳಸಿಯನ್ನು ಒಂಟಿಕೊಪ್ಪಲಿನ ಶ್ರೀ ವೆಂಕಟೇಶ್ವರ, ಇಟ್ಟಿಗೆಗೂಡಿನ ಶ್ರೀ ಸತ್ಯನಾರಾಯಣ, ರಾಜೇಂದ್ರನಗರದ ಶ್ರೀ ಶನೇಶ್ವರಸ್ವಾಮಿ, ವಿಜಯನಗರದ ಯೋಗನರಸಿಂಹಸ್ವಾಮಿ ಮುಂತಾದ ದೇವಾಲಯಗಳಲ್ಲಿ ಪೂಜೆಗೆ ಹೆಚ್ಚಾಗಿ ಬಳಸುತ್ತಾರೆ.

**ಬಿಲ್ವಪತ್ರೆ :** ಭಾರತೀಯರಿಗೆ ಹೆಚ್ಚು ಪ್ರಿಯವಾದ ವೃಕ್ಷ. ಇದರ ಮೂರು ಎಲೆಗಳಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರು ಇರುವರೆಂಬ ನಂಬಿಕೆಯಿದೆ. ಈ ವೃಕ್ಷ ಶಿವನಿಗೆ ಪ್ರಿಯವಾದುದು. ಸಾವಿರ ಪುಷ್ಪಕ್ಕೆ ಒಂದು ಬಿಲ್ವಪತ್ರೆ ಸಮ ಎಂದು ಹೇಳಲಾಗುತ್ತದೆ. ಒಂದೇ ಒಂದು ಬಿಲ್ವಪತ್ರೆಯನ್ನು ಹಾಕಿ ಶಿವನನ್ನು ಪೂಜಿಸಿದರೆ ಸಾಕು ಬೇಡಿದವರವನ್ನು ನೀಡುವನೆಂದು ನಂಬುತ್ತಾರೆ. ಶಿವರಾತ್ರಿಯ ದಿನ ಬಿಲ್ವಪತ್ರೆಯಿಂದಲೇ ಶಿವನನ್ನು ಪೂಜಿಸುತ್ತಾರೆ. ಇವುಗಳಲ್ಲದೆ, ಬೃಹತಿ, ದತ್ತೂರ, ಬದರೀ, ಅಪಮಾರ್ಗ, ಚೂತ, ಕರವೀರ, ವಿಷ್ಣುಕಾಂತ, ದಾಡಿಮ, ದೇವದಾರು, ಮರುವಕ, ಸಿಂಧೂರವಾರ, ಜಾತಿಶಮಿ ಅಶ್ವತ್ಥ, ಅರ್ಜುನ ಎಂಬ ಪತ್ರೆಗಳನ್ನು ದೇವತಾರ್ಚನೆಗಳಲ್ಲಿ

ಬಳಸುತ್ತಾರೆ. ಗಣೇಶನಿಗೆ, ಲಕ್ಷ್ಮಿ, ಶಿವನ ಅಷ್ಟೋತ್ತರಗಳನ್ನು ಹೇಳುವಾಗ 21 ಪತ್ರೆಗಳನ್ನು ಅರ್ಚನೆ ಮಾಡುತ್ತಾರೆ. ಮೈಸೂರು ನಗರದ ದೇವಾಲಯಗಳಲ್ಲಿ ಬಿಲ್ವಪತ್ರೆಯ ಮರವನ್ನು ಸಾಮಾನ್ಯವಾಗಿ ಎಲ್ಲಾ ದೇವಾಲಯಗಳಲ್ಲಿಯು ಕಾಣಬಹುದಾಗಿದೆ. ಕೋಟೆಯ ತ್ರಿನಯನೇಶ್ವರ, ಹಳೇಬಂಡಿಕೇರಿಯ ಮಹದೇಶ್ವರ, ಸರಸ್ವತಿಪುರಂನ ಚಂದ್ರಮೌಳೇಶ್ವರ ದೇವಾಲಯಗಳಲ್ಲಿ ಬಿಲ್ವಮರವನ್ನು ಕಾಣಬಹುದು. ಅಲ್ಲದೇ ಶಿವರಾತ್ರಿಯಂದು ಎಲ್ಲಾ ಶಿವಾಲಯಗಳಲ್ಲಿ ಬಿಲ್ವಪತ್ರೆಯನ್ನು ಹೆಚ್ಚಾಗಿ ಬಳಸುವುದನ್ನು ಕಾಣುತ್ತೇವೆ.

**ಎಕ್ಕ :** ಎಕ್ಕ ಪವಿತ್ರವಾದುದೆಂದು ಜನಪದರಲ್ಲಿ ನಂಬಿಕೆಯಿದೆ. ಎಕ್ಕದ ಬಗೆಗೆ ಪುರಾಣ ಕತೆಗಳಿವೆ. ಪಾರ್ವತಿಯು ಶಂಕರನೇ ತನಗೆ ಪತಿಯಾಗಬೇಕೆಂದು ಬಯಸಿ ಹನ್ನೆರಡು ವರ್ಷ ತಪಸ್ಸು ಮಾಡಿ ಪತಿಯಾಗಿ ಶಿವನ್ನು ಪಡೆದ ಮೇಲೆ ಎಕ್ಕೆದ ಎಲೆಯ ವಾಸನೆ ನೋಡಿ ವ್ರತವನ್ನು ಕೊನೆಗೊಳಿಸಿದಳಂತೆ ಆದ್ದರಿಂದ ಅವಿವಾಹಿತರು 'ಹರತಾಲಿಕಾ ಪೂಜಾ' ಎಂಬ ಹೆಸರಿನಿಂದ ಪಾರ್ವತಿ ಪೂಜೆ ಮಾಡಿ ಒಳ್ಳೆಯ ಪತಿಯನ್ನು ಕರುಣಿಸು ಎಂದು ಪ್ರಾರ್ಥಿಸಿಕೊಳ್ಳುತ್ತಾರೆ.

ಎಕ್ಕ ಗಿಡದ ಬೇರಿನಲ್ಲಿ ಪ್ರತಿಬಿಂಬದಂತೆ ಉದ್ಭವವಾದ ರೂಪವನ್ನು ಗಣೇಶನ ಪ್ರತಿರೂಪವೆಂದು ಪೂಜಿಸುತ್ತಾರೆ. ಪ್ರತಿ ಶನಿವಾರ ಆಂಜನೇಯನಿಗೆ ಎಕ್ಕದ ಎಲೆಗಳ ಮಾಲೆಯನ್ನು ಮಾಡಿ ಹಾಕಿ ಪೂಜಿಸುತ್ತಾರೆ. ಈ ಎಕ್ಕ ಎಲೆ ಸೂರ್ಯನ ಪ್ರತಿನಿಧಿ ಎಂದು, ಫಾಲ್ಗುಣ ಸಪ್ತಮಿಯದಿನ 'ಅರ್ಕಪುಟ ಸಪ್ತಮಿ' ಎಂಬ ವ್ರತ ಆಚರಿಸುವ ಸಂಪ್ರದಾಯವಿದೆ. ಹಲಗೆಯ ಮೇಲೆ ಸೂರ್ಯರಥವನ್ನು ಬರೆದು ರಥಸಪ್ತಮಿಯ ದಿವಸ ಎಕ್ಕದ ಪೂಜೆ ಮಾಡುವುದು ಶ್ರೇಷ್ಠವಾದುದಾಗಿದೆ. ಅಲ್ಲದೆ ಬಿಳಿಯ ಎಕ್ಕದ ಹೂವು ಗಣೇಶನಿಗೆ ಪ್ರಿಯವಾದುದೆಂದು 21 ಹೂಗಳಿಂದ ಹಾರ ತಯಾರಿಸಿ ಹಾಕಲಾಗುತ್ತದೆ. ಇದರಿಂದ ಇಷ್ಟಾರ್ಥ ಸಿದ್ಧಿಯಾಗುತ್ತದೆಂದು ಜನಪದರು ನಂಬಿದ್ದಾರೆ.

**ಧವನ/ಜವನ :** ಪರಿಮಳ ಬೀರುವ ಸಸ್ಯವಾಗಿದ್ದು ಒಣಗಿದರೂ ಪರಿಮಳ ಮಾಸುವುದಿಲ್ಲ. ದವನದ ಕೃಷಿ ಶತಮಾನಗಳಷ್ಟು ಹಳೆಯದಾಗಿದ್ದು 'ಧವನದ ಹುಣ್ಣಿಮೆ' ಎಂದು ವರುಷದ ಹುಣ್ಣಿಮೆಗಳಲ್ಲಿ ಒಂದನ್ನು ಕರೆಯಲಾಗಿರುವುದೇ ಇದಕ್ಕೆ ಸಾಕ್ಷಿ. ವರ್ಷ ಪೂರ್ತಿ ಬೆಳೆಯಬಹುದಾದ ಧವನ ವಸಂತಗ್ರೀಸ್ಮದಲ್ಲಿ ಹೆಚ್ಚಿನ ಪರಿಮಳವನ್ನು ಸೂಸುತ್ತದೆ. ಮಲ್ಲಿಗೆಯೊಂದಿಗೆ ಧವನವನ್ನು ಸೇರಿಸಿ ಮಾಲೆಕಟ್ಟಿ ಮಾರುತ್ತಾರೆ. ದೇವಾಲಯಗಳಲ್ಲಿ, ಜಾತ್ರೆಗಳಲ್ಲಿ ತೇರಿಗೆ 'ಹಣ್ಣು-ಧವನ' ಎಸೆಯುವುದು ರೂಢಿಯಲ್ಲಿದೆ. 'ಜಾತ್ರೆಗೆ ಹೋದವರು ಧವನ ಮುಡಿಯದೆ ವಾಪಾಸ್ ಬರುವುದಿಲ್ಲ' ಎಂಬ ಗಾದೆ ಇದೆ.

**ಮರುಗ :** ತೇರು, ಜಾತ್ರೆ, ಉತ್ಸವ, ಪಲ್ಲಕ್ಕಿಗಳಲ್ಲಿ ಮರುಗ ಇತರ ಹೂವುಗಳೊಂದಿಗೆ ಮೇಳೈಸುತ್ತದೆ. ಪೂಜೆ ಅರ್ಚನೆಯಲ್ಲಿಯೂ ಬಳಕೆಯಾಗುತ್ತದೆ.

**ಮಂಚಿಪತ್ರೆ :** ಮಂಚಿಪತ್ರೆಯು ಸೇವಂತಿಗೆ ಎಲೆಯನ್ನು ಹೋಲುತ್ತದೆ. ದೇವರ ಅರ್ಚನೆಯಲ್ಲಿ ಬಳಕೆಯಾಗುತ್ತದೆ. ಎಲೆಗಳನ್ನು ಮಲ್ಲಿಗೆ, ಜಾಜಿ, ಕಾಕಡಗಳೊಂದಿಗೆ ಮಿಶ್ರಮಾಡಿಕಟ್ಟುತ್ತಾರೆ. ಬೆಳೆದ ಚಿಗುರು ಪತ್ರೆಯನ್ನು ಕುಡಿಸಹಿತ ಕಿತ್ತು ದೇವರ ವಿಗ್ರಹಗಳಿಗೆ ಹೂವಿನಿಂದ ಅಲಂಕರಿಸುತ್ತಾರೆ.

**ಕಾಮಕಸ್ತೂರಿ :** ಸುಗಂಧ ಭರಿತವಾದ ಈ ಪತ್ರೆಯನ್ನು ಹೂವಿನೊಂದಿಗೆ ಮಿಶ್ರಮಾಲೆಕಟ್ಟುತ್ತಾರೆ. ಹೂವಿನ ತೆನೆಯನ್ನು ಎಲೆಯಸಮೇತ ಕಿತ್ತು ತಂದು ದೇವರ ಅರ್ಚನೆ ಹಾಗೂ ದೇವರ ವಿಗ್ರಹಗಳಿಗೆ ಅಲಂಕರಿಸುತ್ತಾರೆ.

**ವೀಳೆದೆಲೆ :** ವೀಳೆದೆಲೆಯ ಪ್ರಾಚೀನತೆಯ ಬಗ್ಗೆ ಹಾಗೂ ಉಗಮದ ಬಗ್ಗೆ ಐತಿಹ್ಯಗಳಿವೆ **"**ಸುಮಾರು ಎರಡು ಸಾವಿರ ವರ್ಷಗಳಿಂದ ಈ ಎಲೆ ಬಳ್ಳಿ ನಮ್ಮ ಜನ ಜೀವನದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಉಳಿಸಿಕೊಂಡು ಬಂದಿದೆ. ಸ್ಕಂದ ಪುರಾಣದಲ್ಲಿ ದೇವದಾನವರು ಸಮುದ್ರ ಮಂಥನವನ್ನು ಮಾಡಿ ಅಮೃತವನ್ನು ಪಡೆದರು. ಆದರೆ ಅದರ ಹಂಚಿಕೆಯಲ್ಲಿ ಮಾತ್ರ ವಿವಾದ ಹುಟ್ಟಿಕೊಂಡಿತು. ಆಗ ವಿಷ್ಣು ಮೋಹಿನಿಯ ರೂಪವನ್ನು ತಾಳಿ ಅಮೃತದ ಬಹುಪಾಲು ದೇವತೆಗಳಿಗೆ ಸಲ್ಲುವಂತೆ ಮಾಡಿದ ಹೀಗೆ ಅಮೃತವನ್ನು ಹಂಚುವಾಗ ಅದರ ಕೆಲವು ಹನಿಗಳು ಭೂಮಿಯ ಮೇಲೆ ಬಿದ್ದವು. ಮುಂದೆ ಆ ಹನಿಗಳೇ ಎಲೆ ಬಳ್ಳಿಗಳಾದವು. ಈ ಎಲೆಗಳ ಸೇವನೆಯಿಂದ ದೇವಗಣದಲ್ಲಿ ಪ್ರಮತ್ತತೆಯು ಬೆಳೆಯಲಾರಂಬಿಸಿತು. ಇದನ್ನರಿತ ವಿಷ್ಣುವು ಧನ್ವಂತರಿಯನ್ನು ಕರೆಸಿ ಇದರ ಕಾರಣವನ್ನು ಹುಡುಕುವಂತೆ ಆಜ್ಞೆಮಾಡಿದನು. ಆಗ ಧನ್ವಂತರಿಯು ಅಮೃತದಿಂದ ಉದ್ಭವಿಸಿದ ವೀಳ್ಯದೆಲೆಯಲ್ಲಿ ಅದ್ಭುತವಾದ ಶಕ್ತಿಯಿದೆ ಎಂಬುದನ್ನು ಕಂಡುಹಿಡಿದು ವಿಷ್ಣುವಿಗೆ ವರದಿಯನ್ನು ಮಾಡಿದ. ಮುಂದೆ ಶ್ರೀವಿಷ್ಣು ತನ್ನ ಆತ್ಮೀಯರಿಗೆಲ್ಲ ಈ ಬಳ್ಳಿಯನ್ನು ಬಳುವಳಿಯಾಗಿ ಕೊಡತೊಡಗಿದನು. ಇದರಿಂದಾಗಿ ದೇವ ಲೋಕದಲ್ಲೆಲ್ಲಾ ಈ ಬಳ್ಳಿಯು ತುಂಬಿಕೊಂಡಿತು ಎಂದು ವರ್ಣಿಸಲಾಗಿದೆ**"**[49]

ಹಿಂದೆ ದೇವಾಲಯ, ರಾಜಗೃಹಗಳಿಗೂ ಅಡಕೆ ಹಾಗೂ ವೀಳ್ಯದೆಲೆಯ ತೋಟಗಳನ್ನು ಮೀಸಲಾಗಿಟ್ಟಿದ್ದರು. ಜನಪದರು ಹುಟ್ಟಿನಿಂದ ಸಾವಿನವರೆಗಿನ ಆಚರಣೆಗಳಲ್ಲಿ ವೀಳ್ಯವನ್ನು ಅಗತ್ಯ ಹಾಗೂ ಅನಿವಾರ್ಯವಾಗಿ ಬಳಸುತ್ತಾ ಬಂದಿದ್ದಾರೆ. ಮುತ್ತೈದೆಯರಿಗೆ ಅಡಕೆಯನ್ನು ತಾಂಬೂಲಕ್ಕಿಡುವುದು ಸಂಪ್ರದಾಯ. ಹೀಗೆ ಸಾಕಷ್ಟು ಆಚರಣೆ–ನಂಬಿಕೆಗಳ ಹಿನ್ನೆಲೆಯಲ್ಲಿ ವೀಳ್ಯದೆಲೆಯು ಪೂಜನೀಯ ಸ್ಥಾನವನ್ನು ಪಡೆದುಕೊಂಡಿದೆ. ಅಲ್ಲದೆ ಕಳಸದಲ್ಲಿ

ವೀಳ್ಯೆದೆಲೆಯನ್ನು ಇಡುವುದು ಹಿಂದಿನಿಂದಲೂ ರೂಢಿಯಲ್ಲಿದೆ. ಪೂಜೆಗೂ ವೀಳ್ಯದೆಲೆ ಅಡಿಕೆಯನ್ನು ಇಡುವುದು ವಾಡಿಕೆಯಾಗಿದೆ. ಅಂತೆಯೇ ಹರಕೆ ಕಟ್ಟಿಕೊಂಡವರು ವೀಳ್ಯದೆಲೆಯ ಹಾರವನ್ನು ದೇವರಿಗೆ ಅರ್ಪಿಸುವುದಿದೆ. ಉದಾಹರಣೆಗೆ: ಕೋಟೆ ಆಂಜನೇಯ, ಮಾರುತಿದೇವಾಲಯ ಗಂಗೋತ್ರಿ ಬಡಾವಣೆ, ಆಂಜನೇಯ ಕುವೆಂಪುನಗರ ಮುಂತಾದ ದೇವಾಲಯಗಳಲ್ಲಿ ಈ ಹರಕೆ ಪದ್ಧತಿಯನ್ನು ಕಾಣಬಹುದಾಗಿದೆ.

**ಉತ್ರಾಣಿ :** ಉತ್ರಾಣಿ ಬಟ್ಟೆಗಳಿಗೆ ಅಂಟಿಕೊಳ್ಳುವಂಥ ಮುಳ್ಳಿನ ಬೀಜವುಳ್ಳ ಸಸ್ಯ. ಇದರ ಹೂವನ್ನು ಕಣಪೂಜೆ, ರಾಶಿಪೂಜೆ, ಮೆದೆಪೂಜೆ ಮತ್ತು ದೀಪಾವಳಿ ಹಬ್ಬದಲ್ಲಿ ಹಣತೆಯ ಕೆಳಗಿಡುವ ಸಗಣಿಗೆ ಸಿಕ್ಕಿಸಲು ಬಳಸುತ್ತಾರೆ. ಶಿವರಾತ್ರಿಯಂದು ಶಿವಪೂಜೆಗೆ ಉತ್ರಾಣಿಯ ಕಡ್ಡಿಯಿಂದಲೇ ದೀಪ ಬೆಳಗುತ್ತಾರೆ. ಕೆಲವು ಕಡೆ ಬಲಿಪಾಡ್ಯಮಿಯಂದು ಇದನ್ನು ಪೂಜಿಸುತ್ತಾರೆ. ಬಲಿ ತಾನು ಸಾಯುವ ಪೂರ್ವದಲ್ಲಿ ವರ್ಷಕ್ಕೊಂದು ದಿನ ತನ್ನ ಪೂಜೆ ಸಲ್ಲಿಸುವಂತೆ ಕೇಳಿದನಂತೆ ಅದಕ್ಕಾಗಿ ಉತ್ರಾಣಿಯ ರೂಪದಲ್ಲಿ ಒಂದು ದಿನ ಅವನಿಗೆ ಪೂಜೆ ಸಲ್ಲುತ್ತದೆ.

## 5.7 ದೇವಾಲಯಗಳಲ್ಲಿ ಪ್ರಾಣಿಸಂಬಂಧಿ ನಂಬಿಕೆ ಮತ್ತು ಆಚರಣೆಗಳು

ಮನುಷ್ಯ ಮತ್ತು ಪ್ರಾಣಿಗಳ ಒಡನಾಟ ಇಂದು ನಿನ್ನೆಯದಲ್ಲ ಪ್ರಾಚೀನ ಕಾಲದಿಂದಲೂ ಮನುಷ್ಯನಿಗೂ ಪ್ರಾಣಿಗಳಿಗೂ ಒಂದು ಅವಿನಾಭಾವ ಸಂಬಂಧ ಬೆಳೆದುಕೊಂಡು ಬಂದಿದೆ. ಪ್ರಾಣಿಗಳ ಸಹವಾಸದಲ್ಲಿ ಮಾನವ ತನ್ನ ಬದುಕನ್ನು ನಡೆಸುತ್ತಲೇ ಅವುಗಳ ಬಗೆಗೆ ನಾನಾ ರೀತಿಯ ಭಾವನೆಗಳನ್ನು, ಕಲ್ಪನೆಗಳನ್ನು, ನಂಬಿಕೆಗಳನ್ನು, ಆಚರಣೆಗಳನ್ನು ರೂಢಿಸಿಕೊಂಡು ಬಂದಿದ್ದಾನೆ. ಆದಿಮಾನವನ ಬದುಕು ಗುಹೆ–ಪೊಟರೆಗಳಲ್ಲಿ ನಡೆಯುತ್ತಿದ್ದಾಗ ಪ್ರಾಣಿಗಳ ಸಖ್ಯ ಅನಿವಾರ್ಯವಾಯಿತು. ಪ್ರಾಣಿಗಳ ಬಗ್ಗೆ ಮನುಷ್ಯನಲ್ಲಿರುವ ನಂಬಿಕೆ, ಆಚಾರ, ವಿಚಾರ, ಸಂಪ್ರದಾಯ, ಕಲ್ಪನೆ ಮೊದಲಾದವನ್ನು ಕುರಿತ ಅಧ್ಯಯನ ಪ್ರಾಣಿ ಜಾನಪದವಾಗಿದೆ. ಜಾನಪದದ ಉಗಮ ಇತಿಹಾಸ ಪೂರ್ವಕಾಲಗಳಷ್ಟು ಹಿಂದಿನದೆಂದು ಜಾನಪದ ವಿದ್ವಾಂಸ ಅಲೆಗ್ಸಾಂಡರ್ ಕ್ರಾಫೆ ತಿಳಿಸುತ್ತಾನೆ. ಈ ಬಗ್ಗೆ ಹೇಳುತ್ತ "ತನ್ನ ಹಿರಿಯನೊಬ್ಬನ ಸಮಾಧಿಯಿಂದ ಹಾವೊಂದು ಹೊರಬರುತ್ತಿರುವುದನ್ನು ಕಂಡವನೊಬ್ಬ ಆ ಹಾವು ತನ್ನ ಹಿರಿಯನೆಂದು ನಂಬಿ ಗೌರವಿಸುತ್ತಾನೆ, ಪೂಜಿಸುತ್ತಾನೆ ಪರಿಣಾಮವಾಗಿ ಹಾವು ತಮ್ಮ ಪೂರ್ವಜರ ಮರು ಹುಟ್ಟು ಎಂಬ ನಂಬಿಕೆ ಪ್ರಚಲಿತವಾಗುತ್ತದೆಂದು ಉದಾಹರಿಸುತ್ತ ಕ್ರಾಫೆ ಎಷ್ಟೋಸಲ ಪ್ರಾಣಿ ಸಂಬಂಧವಾದ ನಂಬಿಕೆಗಳು ಅಸಂಬದ್ಧ ತರ್ಕದ ಮೇಲೆಯೂ ಸೃಷ್ಟಿಯಾಗಬಹುದೆಂಬ ನಿಲುವಿಗೆ ಬರುತ್ತಾನೆ"[50]

ಪ್ರಾಣಿ, ಪಕ್ಷಿ, ಜಲಚರಗಳು ಉಪಕಾರಿನೆಲೆಯಲ್ಲಿಯೋ ಅಪಾಯಕಾರಿ ನೆಲೆಯ ಭಯದಿಂದಲೋ ಪೂಜನೀಯವಾಗಿರುವುದನ್ನು ಗಮನಿಸಬಹುದು. ಹಸು, ಎತ್ತು, ಎಮ್ಮೆ, ನಾಯಿ ಮುಂತಾದವುಗಳು ಉಪಕಾರಿ ನೆಲೆಯಿಂದ ಪೂಜನೀಯವಾಗಿವೆ. ಹಸುವನ್ನು ದಿನವೂ ಪೂಜಿಸುವುದಲ್ಲದೇ ವಿಶೇಷವಾಗಿ ದೀಪಾವಳಿ, ಸಂಕ್ರಾಂತಿ, ಕಾರುಣ್ಣಿಮೆ ಇತ್ಯಾದಿ ಹಬ್ಬಗಳಲ್ಲಿ ಪೂಜಿಸಲಾಗುತ್ತಿದೆ. ಅನೇಕ ಐತಿಹ್ಯ, ಪುರಾಣ, ಕಥೆ ಹಾಗೂ ಗಾದೆ ನಂಬಿಕೆಗಳು ಸೃಷ್ಟಿಯಾಗಿ ಸದಾಕಾಲ ಹಸುವನ್ನು ಭಕ್ತಿಯ ನೆಲೆಯಲ್ಲಿಯೇ ಕಾಣುವಂತೆ ಮಾಡಿದೆ. ಹುಲಿ, ಸಿಂಹ, ಆನೆ ಹಾಗೂ ಇತರೆ ಆಕ್ರಮಣಕಾರಿ ಪ್ರಾಣಿಗಳ ಬಗೆಗೂ ಐತಿಹ್ಯ, ಪುರಾಣ, ಕಥೆ, ಗಾದೆಗಳಿದ್ದು ಅವುಗಳ ಆಕ್ರಮಣಕಾರಿ ಗುಣಸ್ವಭಾವಗಳನ್ನು ಮರೆಯಿಸುವ ಉದ್ದೇಶದಿಂದ ಅವುಗಳನ್ನು ಪೂಜನೀಯವಾಗಿಸಿ, ಅವುಗಳನ್ನು ಮಣಿಸಲು ದೈವಗಳ ವಾಹನಗಳನ್ನಾಗಿಸಲಾಗಿದೆ. ಹೆಣ್ಣು ದೈವಗಳ ವಾಹನ ಸಿಂಹ, ಮಹದೇಶ್ವರನ ವಾಹನ ಹುಲಿ, ಕಾಗೆ ಶನಿದೇವರ ವಾಹನ, ಶಿವನಿಗೆ ನಂದಿ, ಗಣಪತಿಗೆ ಇಲಿ, ಷಣ್ಮುಖನಿಗೆ ನವಿಲು, ಬ್ರಹ್ಮನಿಗೆ ಹಂಸ, ಕೃಷ್ಣನಿಗೆ ಗರುಡ, ಹೀಗೆ ದೇವತಾವಾಹನಗಳಾಗಿ ಮುಂದೆ ಪ್ರಾಣಿಗಳು ಆರಾಧನೆಗೊಳ್ಳುತ್ತ ದೈವಗಳಾಗಿ ನಿಂತದ್ದು ವಿಶೇಷವಾಗಿದೆ. ಎತ್ತು ಬಸವಣ್ಣನಾಗಿ, ನಂದೀಶ್ವರ ನಂದಿ, ಹಸು ಗೋಮಾತೆ, ಕಾಗೆ ಶನಿದೇವ, ಕೋತಿ ಹನುಮಂತರಾಯ, ನಾಯಿ ನಾರಾಯಣಸ್ವಾಮಿ, ಹಂದಿ ವರಹಸ್ವಾಮಿ(ವಿಷ್ಣು), ಮೀನು ಮತ್ಸ್ಯಾವತಾರ(ವಿಷ್ಣು), ಹಾವು ನಾಗಪ್ಪ, ಆಮೆ ಕೂರ್ಮಾವತಾರದ ವಿಷ್ಣು ಈ ರೀತಿಯ ಭಾವನೆಗಳು ಪ್ರಾಣಿಗಳಿಗೆ ದೈವತ್ವವನ್ನಷ್ಟೇ ಅಲ್ಲದೆ ಅವುಗಳಿಗೆ ಪೌರಾಣಿಕತೆಯನ್ನು ಒದಗಿಸಿವೆ. ಇವುಗಳು ಜನಪದರಿಗಿರುವ ನಿಸರ್ಗ ನಿಯಮದ ಜ್ಞಾನಕ್ಕೆ ಸಾಕ್ಷಿಯಾಗಿವೆ.

ಹೀಗೆ ಅನೇಕ ಪ್ರಾಣಿಗಳು ಮಾನವನಿಗೆ ದೈವಸ್ವರೂಪಿಯಾಗಿದ್ದು ತಮ್ಮ ಅಭಿವೃದ್ಧಿ ಹಾಗೂ ಸಂಪನ್ಮೂಲಗಳನ್ನು ಹೆಚ್ಚಿಸುವ ಆಕಳು, ಎತ್ತು, ನಾಯಿ, ಹಂದಿ, ಕೋತಿ ಮುಂತಾದ ಪ್ರಾಣಿಗಳನ್ನು ಮತ್ತು ತಮ್ಮ ಬದುಕಿಗೆ ಅಪಾಯಕಾರಿಯಾಗಬಹುದಾದ ಹುಲಿ, ಆನೆ, ಹಾವು ಮುಂತಾದ ಪ್ರಾಣಿಗಳನ್ನು ಜನಪದರು ದೈವತ್ವದ ನೆಲೆಯಲ್ಲಿ ಪೂಜಿಸುವುದನ್ನು ಇಂದೂ ನೋಡಬಹುದಾಗಿದೆ.

ಧಾರ್ಮಿಕ ಆಚರಣೆಗಳಲ್ಲಿ ದೈವ ಸಂಪ್ರೀತಿಗಾಗಿ ಪ್ರಾಣಿಬಲಿ ಕೊಡುವ ಸಂಪ್ರದಾಯ ಆಚರಣೆಗಳು ಜಗತ್ತಿನಾದ್ಯಂತ ಕಂಡುಬರುತ್ತವೆ. ಬಲಿ ನೀಡಲು ವಿವಿಧ ಪ್ರಾಣಿ, ಪಕ್ಷಿ, ಕ್ರಿಮಿ–ಕೀಟಗಳಲ್ಲದೆ, ಮನುಷ್ಯರನ್ನು ಬಳಸುತ್ತಿದ್ದುದರ ಬಗೆಗೆ ಅನೇಕ ಪುರಾಣ, ಐತಿಹ್ಯಗಳು ಸಿಗುತ್ತವೆ. ಶಿಷ್ಟ ವರ್ಗದ ದೇವರುಗಳ ಕಲ್ಪನೆ ಬರುವ ಮುನ್ನ ಗ್ರಾಮದೇವತೆಗಳ ಪ್ರಾಬಲ್ಯವಿದ್ದು, ದೇವರ ಹೆಸರಿನಲ್ಲಿ ಹರಕೆ ಹೊತ್ತುಕೊಂಡು ಕುರಿ, ಕೋಳಿ, ಆಡು, ಟಗರು, ಹೋತಗಳನ್ನು ವರ್ಷಗಟ್ಟಲೆ

ದೇವರ ಹೆಸರಿನಲ್ಲಿ 'ದಕ್ಕು' ಬಿಡುತ್ತಿದ್ದರು. ಗ್ರಾಮದೇವತೆಯ ಹಬ್ಬದ ಸಂದರ್ಭ ಅಥವಾ ಹರಕೆಯ ದಿನ ಬಂದಾಗ ಆ ಹರಕೆಗಳನ್ನು ಒಪ್ಪಿಸುತ್ತಿದ್ದರು. ದೇವರನ್ನು ತೃಪ್ತಿಪಡಿಸಲು ಮತ್ತು ದುಷ್ಟಶಕ್ತಿಯಿಂದ ಪಾರಾಗಲು ಬಲಿ ಅರ್ಪಿಸುವ ಪದ್ಧತಿ ರೂಢಿಗೆ ಬಂದಿದೆ. ಈ ಹಿನ್ನೆಲೆಯಲ್ಲಿ ಅನೇಕ ಗ್ರಾಮದೇವತೆ ಹಬ್ಬಗಳಲ್ಲಿ ಬಲಿ ಪ್ರಾಣಿಗಳನ್ನು ಪೂಜಿಸಿ ಮೆರವಣಿಗೆ ಮಾಡಿಸಿ ದೇವರಿಗೆ ಅರ್ಪಣೆ ಮಾಡುವ ಆಚರಣೆ ಇಂದಿಗೂ ಬಹುತೇಕವಾಗಿ ಕಾಣಬಹುದಾಗಿದೆ.

**ಕತ್ತೆ** : 'ಯೋಗರಾಣಿ'ಯೆಂಬ ಗೌರವಕ್ಕೆ ಪಾತ್ರವಾಗಿರುವ ಕತ್ತೆ ಇತರ ಪ್ರಾಣಿಗಳಂತೆ ಪೂಜನೀಯವಾದುದು. ಕತ್ತೆ ಮಡಿವಾಳರ ಬಲು ಪ್ರೀತಿಯ ಪ್ರಾಣಿ. ಮಳೆ ತರಿಸಲು ಕತ್ತೆಗಳನ್ನು ಪೂಜೆ ಮಾಡುವ ಪದ್ಧತಿ ಕೆಲವು ಪ್ರದೇಶಗಳಲ್ಲಿದೆ. ಏಸುವನ್ನು ಹೊತ್ತುದರಿಂದ ಕತ್ತೆ ಪವಿತ್ರ ಪ್ರಾಣಿಯೆಂದು ಕೆಲವರ ಭಾವನೆಯಾಗಿದೆ. 'ಕಾರ್ಯವಾಸಿ ಕತ್ತೆಕಾಲುಕಟ್ಟು' ಎಂಬ ಮಾತು ಜನಜನಿತವಾಗಿದೆ. ಮೈಸೂರಿನ ಕುಕ್ಕರಹಳ್ಳಿಯ ಬಳಿ ಮಡಿವಾಳ ಮಾಚಯ್ಯನವರ ದೇವಾಲಯವಿದೆ. ಇದರ ಬಳಿಯಲ್ಲಿರುವ ನೀರಿನಲ್ಲಿ ಮಡಿವಾಳರು ಬಟ್ಟೆಯನ್ನು ಶುಚಿಗೊಳಿಸುವ ಕಾಯಕವನ್ನು ಮಾಡುತ್ತಾರೆ. ವರ್ಷದಲ್ಲಿ ಒಮ್ಮೆ ಮಡಿವಾಳ ಮಾಚಿದೇವರ ಮೆರವಣಿಗೆಯನ್ನು ಮಾಡಲಾಗುತ್ತದೆ. ಅಂದು ಯೋಗರಾಣಿ, ಕಾಯಕ ಜೀವಿಯಾದ ಕತ್ತೆಯನ್ನು ಪೂಜಿಸುವ ಪದ್ಧತಿ ರೂಢಿಯಲ್ಲಿದೆ. ಕತ್ತೆಯು ಮಡಿವಾಳರು ಹೊರಿಸುವ ಬಟ್ಟೆಯ ಗಂಟನ್ನು ಹೊತ್ತು ಒಡೆಯನಿಗೆ ಕಾಯಕ ನಿಷ್ಠೆಯನ್ನು ತೋರಿಸುವುದರಿಂದ, ಅದು ದೇವರ ರೂಪವಾಗಿ ಪೂಜೆಗೊಳ್ಳುತ್ತದೆ.

**ಕೋತಿ** : ಮಾನವನೊಂದಿಗೆ ಆತ್ಮೀಯ ಒಡನಾಟ ಹೊಂದಿರುವ ಪ್ರಾಣಿ ಇದಾಗಿದೆ. ಕಪಿಶ್ರೇಷ್ಠನೂ, ರಾಮಭಕ್ತನು, ಆದ ಹನುಮಂತನ ಸ್ವಾಮಿನಿಷ್ಠೆ, ಸಾಹಸ, ಸೇವಾಗುಣ ಇತ್ಯಾದಿ ಸದ್ಗುಣಗಳನ್ನು ಆಧರಿಸಿ ಕೋತಿಯನ್ನು ಹನುಮಂತ ದೇವರೆಂದೇ ಪೂಜಿಸಲಾಗುತ್ತದೆ. ಮೈಸೂರು ನಗರದಲ್ಲಿ ಹಲವಾರು ಹನುಮಂತನ ದೇವಾಲಯಗಳಿವೆ ಅದನ್ನು ಆಂಜನೇಯ ದೇವಾಲಯ, ಮಾರುತಿ ದೇವಾಲಯ ಮತ್ತು ಹನುಮದೇವಾಲಯ ಎಂದೂ ಕರೆಯಲಾಗುತ್ತದೆ. ಕೋಟೆಯ ಆಂಜನೇಯ ದೇವಾಲಯ, ಗಂಗೋತ್ರಿ ಬಡಾವಣೆಯ ಮಾರುತಿ ದೇವಾಲಯ, ಪಂಚಮುಖಿ ಆಂಜನೇಯ ದೇವಾಲಯ ಮುಂತಾದವುಗಳು ಪ್ರಮುಖವಾಗಿವೆ.

ಹನುಮಂತನಲ್ಲಿರುವ ನಿಷ್ಠೆ ಭಕ್ತಿಯಾಗಿ ಜನಪದರು ಅವನ ಸಂತತಿ ಕಪಿಗಳನ್ನ ಸಾಕ್ಷಾತ್ ಆಂಜನೇಯನ ಅವತಾರವೆಂದು ಭಾವಿಸಿ ಅವನ್ನು ಕೊಲ್ಲುವುದು ಪಾಪವೆಂದು ಬಗೆದು ಅವುಗಳಿಂದ ಎಂಥ ಹಿಂಸೆ, ಚೇಷ್ಟೆಗಳಾದರೂ ಅವನ್ನು ಕೊಲ್ಲುವುದಿಲ್ಲ. ಒಂದೊಮ್ಮೆ ಕೊಂದರೆ ಕೊಂದವರ ಕೈಕಾಲು ಹೆಳವಾಗುತ್ತವೆಂಬ ನಂಬಿಕೆಯಿದೆ. ಕೋತಿ ಸತ್ತಾಗ ವಿಶೇಷವಾಗಿ ಸಂಸ್ಕಾರ ಮಾಡಿ ಗುಡಿಕಟ್ಟಿ ಪೂಜಿಸುವ ಪದ್ಧತಿಯಿದೆ.

**ಹುಲಿ** : ಕೆಲವು ಕಡೆ ಹುಲಿ ಆರಾಧನೆಯಿದ್ದು, ಅನೇಕ ದೇವಾಲಯಗಳಲ್ಲಿ ಹುಲಿ ಪ್ರತಿಮೆಗಳನ್ನು ಕಾಣಬಹುದು. **"**ಕರಾವಳಿಯಲ್ಲಿ ಕೆಲವು ಹಿಂದುಳಿದ ಹಾಗೂ ಬುಡಕಟ್ಟು ಜನಾಂಗದವರು ಕಲ್ಲಿನಲ್ಲಿ ಕೆತ್ತಿದ್ದು ಕಲಾತ್ಮಕವಾದ ಹುಲಿಯ ವಿಗ್ರಹವನ್ನು ಪೂಜಿಸಿ ವರ್ಷಕ್ಕೊಮ್ಮೆ ಹುಲಿಯ ಹಬ್ಬವನ್ನಾಚರಿಸುತ್ತಾರೆ**"**[51] ಆದರೆ ಹುಲಿದೇವರ ವಿಗ್ರಹಗಳಿಗೆ ಪ್ರತ್ಯೇಕ ಗುಡಿಗಳಿರುವುದು ವಿರಳ. ಹುಲಿಯು ಮಹದೇಶ್ವರನ ವಾಹನವಾಗಿದೆ. ಮೈಸೂರು ನಗರದ ಮಹದೇಶ್ವರ ದೇವಾಲಯ ಗಳಲ್ಲಿರುವ ದೇವರ ಮೂರ್ತಿಗಳನ್ನು ಸಾಮಾನ್ಯವಾಗಿ ಹುಲಿಯಮೇಲೆ ಆಸೀನವಾಗಿರುವುದನ್ನು ಕಾಣುತ್ತೇವೆ. ಅಂತೆಯೇ ಹುಲಿವಾಹನಗಳನ್ನು ದೇವರ ಉತ್ಸವ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಮೆರವಣಿಗೆ ಮಾಡುವುದು ವಾಡಿಕೆ. ಉದಾಹರಣೆಗೆ: ಮಹದೇಶ್ವರ ದೇವಾಲಯ ಕುಂಬಾರ ಕೊಪ್ಪಲು, ಕೆ.ಜಿ.ಕೊಪ್ಪಲಿನ ಮಹದೇಶ್ವರ, ರಾಜೇಂದ್ರನಗರದ ಮಹದೇಶ್ವರ, ವೀರನಗೆರೆಯ ಮಹದೇಶ್ವರ ದೇವಾಲಯಗಳಲ್ಲಿ ಮತ್ತು ಮುಂತಾದ ದೇವಾಲಯಗಳಲ್ಲಿ ಇದನ್ನು ಕಾಣ ಬಹುದಾಗಿದೆ.

**ಹಸು ಮತ್ತು ಎತ್ತು (ಬಸವ)** : ಹಿಂದೂಗಳು ಗೋಮಾತೆಯಲ್ಲಿ ಮೂವತ್ಮೂರುಕೋಟಿ ದೇವತೆಗಳನ್ನು ಕಂಡುಕೊಂಡು ಅವನ್ನು ಆರಾಧಿಸುತ್ತಾ ಪೂಜನೀಯ ಸ್ಥಾನದಲ್ಲಿರಿಸಿದ್ದಾರೆ. ಗೋಪೂಜೆಯಿಂದ ಸರ್ವಸಂಕಟ ಪರಿಹಾರವನ್ನು ಕಂಡು ಕೊಂಡ ಜನಪದರು ಗೋವನ್ನು ದೈವರೂಪಿಯಾಗಿ ಕಂಡಿದ್ದಾರೆ. ದೈವ ಸ್ವರೂಪಿಯಾದ ಹಸುವಿನ ಬಗ್ಗೆ ಪುರಾಣದ ಐತಿಹ್ಯವಿದೆ.

**"**ಅಮೃತವನ್ನು ಪಡೆಯಲು ದೇವದಾನವರು ಸಮುದ್ರ ಮಂಥನ ಮಾಡಿದಾಗ ಅವರಿಗೆ ಅಮೃತದ ಜೊತೆಗೆ ಅನೇಕ ದೈವಸ್ವರೂಪಿ ವಸ್ತುಗಳು ದೊರೆತವು. ಅವುಗಳ ಪೈಕಿ ಬಯಸಿದ್ದೆಲ್ಲವನ್ನು ಕರುಣಿಸುವ **'**ಕಾಮಧೇನು**'** ಎಂಬ ಹಸುವು ಒಂದು. ಅದರ ಬಣ್ಣ ಹಾಲಿನಂತೆ ಬೆಳ್ಳಗಿತ್ತೆಂದು ಅದಕ್ಕೆ ಸುಂದರ ಹೆಂಗಸಿನ ಮುಖವೂ, ಹಸುವಿನ ಶರೀರವೂ ಇತ್ತೆಂದು ವರ್ಣಿಸಲಾಗಿದೆ. ಸಮುದ್ರ ಮಂಥನ ಕಾಲದಲ್ಲಿ ತಮ್ಮ ಪೌರೋಹಿತ್ಯ ವಹಿಸಿದ್ದ ವಶಿಷ್ಠರಿಗೆ ದೇವತೆಯರು ಕಾಮಧೇನುವನ್ನು ದಕ್ಷಿಣೆಯಾಗಿ ಕೊಟ್ಟರು. ವಿಷ್ಣುವು ಪರಶುರಾಮನ ಅವತಾರಿಯಾಗಿದ್ದಾಗ ಕಾಮಧೇನುವು ಜಮದಗ್ನಿಯ ಹತ್ತಿರ ಇತ್ತು. ಕೆಲಕಾಲ ಕಳೆದಂತೆ ಬ್ರಹ್ಮನಿಂದ ಅಜೇಯತ್ವದ ವರ ಪಡೆದಿದ್ದ ತಾರಕನೆಂಬ ರಾಕ್ಷಸ ಮಾನವರಿಗೆ ಮತ್ತು ದೇವತೆಗಳಿಗೆ ಕಿರುಕುಳ ಕೊಡಲಾರಂಭಿಸಿದನು. ಅವನು ಆಗ ಕಾಮಧೇನುವನ್ನು ವಶಪಡಿಸಿಕೊಂಡಿದ್ದ. ತಾರಕನು ನಾಶಹೊಂದಿದ ಮೇಲೆ ವಿಷ್ಣುವು ಕೃಷ್ಣಾವತಾರಿಯಾಗಿದ್ದಾಗ ಕಾಮಧೇನು ಇಂದ್ರನ ಬಳಿ ಇತ್ತು. ತರುವಾಯ ಅದು ಸಪ್ತರ್ಷಿಗಳ ರಕ್ಷಣೆಯಲ್ಲಿತ್ತು. ಕಾಮಧೇನುವಿನ ಮಗಳಾದ ನಂದಿನಿಯೇ ದೇವತೆಗಳಿಂದ ದಕ್ಷಿಣೆಯ ರೂಪದಲ್ಲಿ ವಶಿಷ್ಠರಿಗೆ ಕೊಡಲ್ಪಟ್ಟಿತು. ಅಲ್ಲಿಂದ

ಜಮದಗ್ನಿಯ ಬಳಿಗೆ ಹೋಗಿ ನಂತರ ತಾರಕ ಮತ್ತು ಇಂದ್ರರನ್ನು ಸೇರಿ ಕೊನೆಗೆ ತನ್ನ ತಾಯಿಯ ಬಳಿಗೆ ಹಾಗೂ ಸಪ್ತರ್ಷಿಗಳ ವಶಕ್ಕೆ ಬಂದಿತೆಂದು ಅಭಿಪ್ರಾಯ ಪಡಲಾಗಿದೆ."[52]

**ದೈವಸ್ವರೂಪಿಯಾಗಿ ಬಸವ** : ದುಡಿಮೆಗೆ ಉಸಿರಾಗಿದ್ದ ರಾಸುಗಳು ಪೂಜನೀಯ ದೃಷ್ಟಿಯಿಂದ ಕಾಣುವ ಪರಿಪಾಠ ಇಂದಿಗೂ ಇದೆ. ಗೋವುಗಳು ಓಡಾಡುವ ಅಥವಾ ಇರುವ ಜಾಗದಲ್ಲಿ ಯಾವುದೇ ದೇಗುಲವನ್ನು ಕಟ್ಟಬಹುದೆಂದು; ಸಂಜೆ ಗೋಧೂಳಿ ಸಮಯ ಎಂದರೆ ಅದೊಂದು ಪವಿತ್ರವಾದ ಸಮಯ ಅಥವಾ ಹೊತ್ತು ಎಂಬ ನಂಬಿಕೆಯಿದೆ. ಆ ಕಾರಣದಿಂದ ಮಾರಮ್ಮ, ಪಟ್ಟಲದಮ್ಮ ಗುಡಿಗಳಂತೆ ಬಸವನ ದೇವಾಲಯಗಳು ಹುಟ್ಟಿಕೊಂಡು ಆರಾಧನೆಗೊಳ್ಳುತ್ತಿವೆ. ಉದಾಹರಣೆಗೆ: ಜೋಡಿಬಸವೇಶ್ವರ ದೇವಾಲಯ ಕುವೆಮಪುನಗರ, ಮಂಟಪದ ಬಸವ ಬೋಗಾದಿ, ಬಸವನಗುಡಿ ಲೋಕನಾಯಕನಗರ ಮುಂತಾದ ಕಡೆಗಳಲ್ಲಿ ಬಸವನ ದೇವಾಲಯ ಗಳನ್ನು ಕಾಣಬಹುದಾಗಿದೆ.

**ನಾಗಾರಾಧನೆ** : ಮಾನವ ಪ್ರಕೃತಿಯ ಮೇಲಿನ ಭಯ ಮತ್ತು ಪ್ರಕೃತಿಯ ಶಕ್ತಿಗಳನ್ನು ಒಲಿಸಿಕೊಳ್ಳಲು ಪ್ರಕೃತಿ ಆರಾಧನೆಯ ಜೊತೆಗೆ ಪ್ರಾಣಿ ಪೂಜೆಯನ್ನು ಮಾಡಿಕೊಂಡು ಬಂದವನು. ಅಂತಹ ಪ್ರಾಣಿಗಳಲ್ಲಿ ಮೊದಲಾಗಿ ನಾಗರನನ್ನು ಆರಾಧಿಸುತ್ತಿರುವುದಕ್ಕೆ ಸಾಕಷ್ಟು ಸಾಕ್ಷಿಗಳು ಸಿಗುತ್ತವೆ. ಮಾನವ ಜನಾಂಗದಲ್ಲಿ ಆದಿಯಿಂದಲೂ ನಾಗಪೂಜೆ ಅಥವಾ ನಾಗಾರಾಧನೆ ನಡೆದು ಬರುತ್ತಿದೆ.

ಪ್ರಮುಖ ಅಪಾಯಕಾರಿ ಪ್ರಾಣಿಗಳಲ್ಲಿ ಒಂದಾಗಿರುವ ಹಾವನ್ನು ಅದರ ಬಗೆಗೆ ಇರುವ ಭಯದ ಕಾರಣದಿಂದಾಗಿ ಆರಾಧನಾ ಪ್ರಾಣಿಯಾಗಿದೆ. ಶಿವನ ಕೊರಳಿಗೆ ಹಾರವಾಗಿ, ವಿಷ್ಣುವಿಗೆ ಶಯ್ಯೆಯಾಗಿ ಸಾವಿರ ಹೆಡೆಗಳುಳ್ಳ ಆದಿಶೇಷನಾಗಿ, ಭೂಮಿಯನ್ನು ಹೊತ್ತಿದೆ ಎಂಬ ಕಾರಣಕ್ಕೆ ಇದರ ಬಗ್ಗೆ ಗೌರವವಿದೆ. ನಾಗರ ಪೂಜೆ ಪ್ರಪಂಚದ ಹಲವಾರು ಕಡೆಗಳಲ್ಲಿ ಇಂದಿಗೂ ಆಚರಣೆಯಲ್ಲಿದೆ.

ನಾಗರನನ್ನು ಪೂಜಿಸುವ ಪದ್ಧತಿ ಭಾರತೀಯರಲ್ಲಿ ರೂಢಿಗತವಾಗಿರುವಂತೆ ಕರ್ನಾಟಕದಲ್ಲಿಯೂ ಸಾರ್ವತ್ರಿಕವಾಗಿ ಆಚರಿಸುತ್ತಾರೆ. ಅದೇ ರೀತಿ ನಾಗರ ಪೂಜೆ ಮೈಸೂರು ನಗರದಲ್ಲಿಯೂ ವಿಶೇಷವಾಗಿದ್ದು, ಎಲ್ಲಿಯೇ ನೋಡಿದರು ಅರಳಿ ಮರದ ಕೆಳಗೆ ಅಥವಾ ಬೇವಿನಮರದ ಕೆಳಗೆ ಸರ್ವೇಸಾಮಾನ್ಯವಾಗಿ ನಾಗರಕಟ್ಟೆಗಳಿರುತ್ತವೆ. ದೇವಾಲಯಗಳಲ್ಲಂತೂ ಸರ್ಪಶಿಲೆಗಳು ಇದ್ದೇ ಇರುತ್ತವೆ. ನಾಗರಪಂಚಮಿ ಮತ್ತು ಗಣೇಶನ ಹಬ್ಬಗಳಲ್ಲಿ ಸರ್ಪ ದೇವತೆಯನ್ನು ವಿಶೇಷವಾಗಿ ಪೂಜಿಸಿ ತನಿ ಎರೆಯುತ್ತಾರೆ. ಹಾವನ್ನು ಹುತ್ತವನ್ನು ಪೂಜಿಸುತ್ತಾರೆ.

ಜನಪದ ಕತೆ, ಪುರಾಣಗಳಲ್ಲಿ ಗೌಪ್ಯನಿಧಿಯ ರಕ್ಷಕ, ಕಾವಲುಗಾರ, ಅಮೂಲ್ಯ ರತ್ನವನ್ನು ಉತ್ಪಾದಿಸಿ, ದೇಶದ ಸಂಪತ್ತನ್ನು ಹೆಚ್ಚಿಸುವಂಥದ್ದು. ಅದರ ಹೆಡೆ ಅತ್ಯಂತ ವಿಷವುಳ್ಳದ್ದು, ದ್ವೇಷಸಾಧಕ ಎಂದು ವರ್ಣಿತವಾಗಿದ್ದು, ಇಂಥ ನಾಗಾರಾಧನೆಯಿಂದ ಗೋವು, ಧನ, ಧಾನ್ಯ, ಆಯುಷ್ಯ, ಸಂತಾನ ಭಾಗ್ಯ ಲಭಿಸುವುದೆಂದು ನಂಬಿದ್ದಾರೆ.

**ನಾಗರ ಪ್ರತಿಷ್ಠೆ ಮಾಡಿಸುವುದು** : ಸಾಮಾನ್ಯವಾಗಿ ಮಕ್ಕಳಿಲ್ಲದ ದಂಪತಿಗಳು, ಸಂಸಾರದಲ್ಲಿ ನಿರಂತರ ಕಷ್ಟ ಕಾರ್ಪಣ್ಯಗಳಿಗೆ ಈಡಾದವರು, ಕನಸಿನಲ್ಲಿ ಆಗಾಗ್ಗೆ ನಾಗರಹಾವು ಕಾಣಿಸಿಕೊಳ್ಳುವವರು ನಾಗರ ದೋಷಕ್ಕೆ ಗುರಿಯಾಗುತ್ತಾರೆಂಬ ನಂಬಿಕೆಯಿದೆ. ಹಾಗೆ ನಾಗದೋಷ ಇರುವವರು ಹೆಂಗಸರು ಬಂಜೆಯರಾಗುತ್ತಾರೆ ಅಥವಾ ಅವರಲ್ಲಿ ಹುಟ್ಟಿದ ಮಕ್ಕಳು ಅಕಾಲ ಮರಣಕ್ಕೆ ಈಡಾಗುತ್ತಾರೆ ಎಂಬ ಭಯದಿಂದ, ಪರಿಹಾರಗಳಿಗಾಗಿ ಅರಳಿ ಮತ್ತು ಬೇವಿನ ಮರಗಳು ಜೋಡಿಯಾಗಿರುವ ಜಗಲಿ ಕಟ್ಟೆಯ ಮೇಲೆ ನಾಗರಕಲ್ಲನ್ನು ಪ್ರತಿಷ್ಠಾಪಿಸುತ್ತಾರೆ. ತಾಯ್ತನದ ಹಂಬಲವನ್ನು ಈ ನಂಬಿಕೆಯಲ್ಲಿ ಕಾಣಬಹುದು. ಈ ನಾಗರ ಕಲ್ಲುಗಳಿಗೆ ನಾಗರಪಂಚಮಿ, ಗೌರಿಗಣೇಶ ಹಾಗೂ ಇತರೆ ಹಬ್ಬಗಳಲ್ಲಿ ತನಿ ಎರೆದು ಪೂಜಿಸುತ್ತಾರೆ.

**ನಾಗರಪಂಚಮಿ** : ದೇಶದ ಎಲ್ಲಾ ಭಾಗಗಳಲ್ಲೂ ಎಲ್ಲಾ ಮತ-ಪಂಥಗಳಲ್ಲೂ ಈ ಹಬ್ಬದ ಆಚರಣೆಯಿದ್ದು, ಸಾಮಾನ್ಯವಾಗಿ ಶ್ರಾವಣ ಮಾಸದ ಶುಕ್ಲಪಕ್ಷದ ಪಂಚಮಿ ತಿಥಿಯಲ್ಲಿ ಈ ಹಬ್ಬವನ್ನು ಆಚರಿಸುತ್ತಾರೆ. ಇದಕ್ಕೆ ಮೂಲಕಾರಣ ಪುರಾಣದ ಚೌಕಟ್ಟು ಇರುವುದು. ಶ್ರೀವಿಷ್ಣು ಶೇಷಶಯನಿ, ಶಿವ ಸರ್ಪಭೂಷಣ, ಗಣಪತಿಯ ಹೊಟ್ಟೆಯ ನಡುಪಟ್ಟಿ ನಾಗದೇವ ಹಾಗೆ ಮಹಾಭಾರತದ ಚಿತ್ರಾಂಗದೆ, ಉಲೂಪಿಯರು ನಾಗ ಕುಲಕ್ಕೆ ಸೇರಿದವರು, ಹೀಗೆ ಇನ್ನೂ ಅನೇಕ ಪುರಾಣದ ಹಿನ್ನೆಲೆಗಳಿವೆ.

ಜನಪದ ಕಥೆಯೊಂದು ನಾಗರ ಪಂಚಮಿ ಆಚರಣೆಯ ಬಗ್ಗೆ ಹೀಗೆ ಹೇಳುತ್ತದೆ "ಒಕ್ಕಲಿಗನೊಬ್ಬ ಗುಂಟೆ ಹೊಡೆಯುತ್ತಿದ್ದಾಗ ಅದರ ಕುಳಕ್ಕೆ ಸಿಕ್ಕ ಹಾವಿನ ಮರಿಗಳೆಲ್ಲ ಸತ್ತು ಹೋದುದರಿಂದ ತಾಯಿ ಹಾವು ರೊಚ್ಚಿಗೆದ್ದು ಅಂದಿನ ರಾತ್ರಿ ಆ ಒಕ್ಕಲಿಗನ ಮನೆ ಮಂದಿಯನ್ನೆಲ್ಲ ಕಚ್ಚಿ ಕೊಂದುಹಾಕಿತು. ಆದರೂ ಅದರ ರೋಷ ಶಮನವಾಗದೆ ದೂರದ ಅತ್ತೆ ಮನೆಯಲ್ಲಿ ಇದ್ದ ಆ ಒಕ್ಕಲಿಗನ ಮಗಳನ್ನು ಕೊಲ್ಲಲು ಅತ್ತ ಹೊರಟಿತು. ಅದೇ ಹೊತ್ತಿಗೆ ಅತ್ತೆ ಮನೆಯಲ್ಲಿದ್ದ ಆ ಮಗಳು ಮಣ್ಣಿನ ಹಾವು ಮಾಡಿ ಹಾಲೆರೆಯುತ್ತಿದ್ದುದನ್ನು ಕಂಡ ನಾಗರ ರೊಚ್ಚು ತಕ್ಕಮಟ್ಟಿಗೆ ಕಡಿಮೆಯಾಯಿತು. ಅದು ತಾನು ಒಕ್ಕಲಿಗನ ಮನೆಯಲ್ಲಿ ಮಾಡಿದ ಕೇಡನ್ನು ಹೇಳಿತು. ಆಕೆ ಗೋಳಾಡಿ ಅತ್ತು ಕರೆದು ತನ್ನ ತವರಿನವರನ್ನೆಲ್ಲ ಬದುಕಿಸೆಂದು ಬೇಡಿಕೊಂಡಳು. ಆ ಹಾವಿಗೆ ಕರುಣೆಬಂದು ಒಕ್ಕಲಿಗನ ಮನೆಯ ಎಲ್ಲರ ವಿಷವನ್ನು ಮರಳಿ ಹೀರಿ

ಬದುಕಿಸಿದ್ದರಿಂದ ಅವರೆಲ್ಲ ನಾಗರನನ್ನು ಪೂಜಿಸುತ್ತ ಬಂದರೆಂಬ ಕಥೆಯಿದೆ. ಅಂದು ಶ್ರಾವಣ ಶುದ್ಧ ಚೌತಿಯಾದ್ದರಿಂದ ಅಂದಿನ ದಿನವನ್ನು ನಾಗಚೌತಿ, ಎಂಬ ಹೆಸರಿನಿಂದ ಕರೆಯುತ್ತ ಬಂದುದೇ ನಾಗ ಪೂಜೆಗೆ ಕಾರಣವೆನಿಸಿತು"[53]

**ಸುಬ್ರಹ್ಮಣ್ಯ ಷಷ್ಠಿ** : ಸುಬ್ರಹ್ಮಣ್ಯ ಷಷ್ಠಿಯಲ್ಲಿ ಭಕ್ತರು ವಿಶೇಷವಾಗಿ ಮಹಿಳೆಯರು, ಹೆಣ್ಣು ಮಕ್ಕಳು, ಬೆಳಗ್ಗೆಯಿಂದಲೇ ಹುತ್ತಕ್ಕೆ ಹಾಲುತುಪ್ಪದ ನೈವೇದ್ಯದೊಂದಿಗೆ ಪೂಜೆ ಸಲ್ಲಿಸುತ್ತಾರೆ. ಷಷ್ಠಿ ಅಂಗವಾಗಿ ದೇವಾಲಯಗಳಲ್ಲಿ ಬೃಹತ್ ಜಾತ್ರಾ ಮಹೋತ್ಸವ ನಡೆಯುತ್ತದೆ. ಹೋಮ, ಅಭಿಷೇಕ, ಕಳಶಸ್ಥಾಪನೆ, ವಿಶೇಷ ಅಲಂಕಾರ, ಮಹಾಮಂಗಳಾರತಿ, ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ನಡೆಯುತ್ತದೆ.

ಷಷ್ಠಿ ಹಬ್ಬದಂದು ಎಲ್ಲೆಡೆ ಹುತ್ತಕ್ಕೆ ಹಾಲು ಎರೆಯುವ ಪದ್ಧತಿಯಿರುವುದು ಸರ್ವೇಸಾಮಾನ್ಯ. ಆದರೇ "ಚಾಮರಾಜನಗರ ಜಿಲ್ಲೆಯ ಕೆಲವು ಗ್ರಾಮಗಳಲ್ಲಿ ಹುತ್ತಕ್ಕೆ ಕೋಳಿಯ ರಕ್ತವನ್ನು ಎರೆಯಲಾಗುತ್ತದೆ. ಹುತ್ತಕ್ಕೆ ಪೂಜೆಸಲ್ಲಿಸಿ ಅನಂತರ ಕೋಳಿಯ ಕತ್ತನ್ನು ಹುತ್ತದೊಳಕ್ಕೆ ಹಿಡಿದು ಕತ್ತರಿಸಿ ಭಕ್ತಿ ಸಮರ್ಪಿಸಿದ ವಿಚಿತ್ರ ಸಂಪ್ರದಾಯ ಚಾಮರಾಜನಗರ ತಾಲೂಕಿನ ಉತ್ತವಳ್ಳಿ, ಮಲ್ಲಯ್ಯನಪುರ, ಗ್ರಾಮಗಳಲ್ಲಿ ಆಚರಣೆಯಲ್ಲಿದೆ. ಸಾಮಾನ್ಯವಾಗಿ ಹಾವುಗಳು ಕೋಳಿಮರಿಯನ್ನು ನುಂಗುತ್ತವೆ. ಈ ಹಿನ್ನೆಲೆಯಲ್ಲಿ ನಾಗಪ್ಪನಿಗೆ ಷಷ್ಠಿ ಹಬ್ಬದಂದು ಅದರ ರಕ್ತವನ್ನೇ ಕುಡಿಸಿದರೆ ಇಷ್ಟಾರ್ಥ ಪ್ರಾಪ್ತಿಯಾಗುತ್ತದೆಂಬುದು ಇಲ್ಲಿನವರ ನಂಬಿಕೆ ಕೆಲವೇ ಮಂದಿ ಭಕ್ತರು ಈ ರೀತಿ ಕೋಳಿ ಬಲಿಕೊಡುತ್ತಾರೆ"[54]

**ಶಕುನಗಳು** : ಶಕುನ ಒಳ್ಳೆಯದು ಕೆಟ್ಟದ್ದರ ಸೂಚಕ. ಮನುಷ್ಯ ಆರಂಭದಿಂದಲೂ ನಂಬಿಕೆಗಳನ್ನೇ ಆಧರಿಸಿ ಬದುಕನ್ನು ನಡೆಸುತ್ತ ಬಂದವನು. ಅನುಭವದ ಮೇಲೆ ತನ್ನ ಸುತ್ತ ಮುತ್ತಲಿನ ಆಗು, ಹೋಗುಗಳನ್ನು ಗಮನಿಸುತ್ತ ಭವಿಷ್ಯದ ಕೆಲವೊಂದು ಸೂಚನೆಗಳನ್ನು ಕಂಡುಕೊಂಡವನು ಹಾಗಾಗಿ ಪ್ರಾಣಿ, ಪಕ್ಷಿ, ಅಲ್ಲದೆ ಕೆಲವೊಂದು ವಸ್ತುಗಳನ್ನು ಕೆಟ್ಟದ್ದು, ಒಳಿತರ ಸೂಚಕ ಎಂದು ನಂಬುತ್ತ ಬಂದಿದ್ದಾನೆ. ಕಾಲಾನಂತರದಲ್ಲಿ ಅದೊಂದು ಶಾಸ್ತ್ರವಾಗಿ ಬೆಳೆಯುವಷ್ಟು ಬೃಹದಾಕಾರವಾಗಿ ಬೆಳೆದು ಬಂದಿದೆ. ಸುಳಿವು, ಸೂಚನೆ, ನಿಮಿತ್ತಗಳ ಮೂಲಕ ಮುಂದಿನ ಆಗುಹೋಗುಗಳನ್ನು ತಿಳಿಸುವ ಶಾಸ್ತ್ರವೆನಿಸಿದೆ. ಇಲ್ಲಿ ನಂಬಿಕೆಯೇ ಮುಖ್ಯ. ಇದರಲ್ಲಿ ನಿಜವೆಷ್ಟು ಸುಳ್ಳೆಷ್ಟು ಎನ್ನುವುದಕ್ಕಿಂತ ನಂಬಿದವರಿಗೆ ಉಂಟು. ಇಲ್ಲದವರಿಗೆ ಇಲ್ಲ ಎಂದು ಹೇಳುವ ಅನುಭಾವಿಗಳೂ ಉಂಟು.

ಹಲ್ಲಿ ಬಿದ್ದ ದೋಷ ಪರಿಹಾರಕ್ಕೆ ದೇವರಿಗೆ ತುಪ್ಪದ ದೀಪ ಹಚ್ಚಿ ಕೈ ಮುಗಿಯುವರು. ಇಲ್ಲದಿದ್ದರೆ ಕಂಚಿಯ ಕಾಮಾಕ್ಷಿ ದೇವಾಲಯದ ಚಿನ್ನದ ಹಲ್ಲಿ ದರ್ಶನ ಮಾಡಿದವರೊಡನೆ ಮಾತನಾಡಿಸಿದರೆ ದೋಷ ಪರಿಹಾರವಾಗುವುದು ಎಂದು ಹೇಳುತ್ತಾರೆ.

ಕಾಗೆ ತಲೆಯ ಮೇಲೆ ಹಾರಿದರೆ ಅನಿಷ್ಟವೆಂದೂ, ದೋಷಪರಿಹಾರಕ್ಕಾಗಿ ಸ್ನಾನ ಮಾಡಿ ಶನಿದೇವನಿಗೆ ಎಳ್ಳುಬತ್ತಿ ಹಚ್ಚಿ ಪೂಜೆ ಮಾಡುತ್ತಾರೆ. ಕಾಗೆ ಪಕ್ಷಿಕುಲಕ್ಕೆ ಸೇರಿದ್ದು, ಮಾನವ ಅವನ ಆಚಾರ, ವಿಚಾರ, ನಡವಳಿಕೆಗಳಿಗೆ ಸಂಬಂಧಿಸಿದಂತೆ ನಂಬಿಕೆ, ಅಪನಂಬಿಕೆಗಳನ್ನು ಸೃಷ್ಟಿಸಿ ಕೊಂಡಿದ್ದಾನೆ. ಅದರಂತೆ ಕಾಗೆ ನಂಬಿಕೆ ಅಪನಂಬಿಕೆಗಳ ಸಂಕೇತವಾಗಿದೆ. ಕಾಗೆ ಶನಿದೇವರ ವಾಹನ. ಹಾಗಾಗಿಯೇ ಜನಪದರಲ್ಲಿ ಕಾಗೆಯ ಬಗೆಗೆ ಇರುವ ನಂಬಿಕೆಗಳು ಹಲವು. ಕಾಗೆ ಶನಿದೇವರ ವಾಹನವಾದ್ದರಿಂದ ರಥಕ್ಕೆ ಕಾಗೆಯನ್ನು ಹೂಡಲಾಗಿದೆಯೆಂದು ಹೇಳಲಾಗುತ್ತದೆ. ಕಾಗೆ ತಲೆಯ ಮೇಲೆ ಹಾರಿ ಹೋದರೆ, ತಲೆಗೆ ತಾಕಿದರೆ ಕೆಟ್ಟದ್ದಾಗುತ್ತದೆ ಎಂದು ಭಯ ಪಡುತ್ತಾರೆ. ಕಾಗೆ ಮನೆಯ ಮೇಲೆ ಹೆಚ್ಚು ಹೊತ್ತು ಕುಳಿತು ಅರಚುತ್ತಿದ್ದರೆ ಮನೆಗೆ ನೆಂಟರು ಬರುತ್ತಾರೆ ಎಂಬ ನಂಬಿಕೆಯಿದೆ. ಪರಿಹಾರಾರ್ಥವಾಗಿ ಸ್ನಾನ ಮಡಿ ಮಾಡಿ ಶನಿದೇವರ ದೇವಾಲಯಕ್ಕೆ ಹೋಗಿ ಅರಳೆಣ್ಣೆ ದೀಪ ಹಚ್ಚಿ ಮನ್ನಿಸೆಂದು ಕೇಳಿಕೊಂಡು ಪೂಜೆ ಸಲ್ಲಿಸಲಾಗುತ್ತದೆ.

## 5.8 ಇತರೆ ವಿಚಾರಗಳು

**ವ್ರತ** : ವ್ರತ ಎಂದರೆ ನಿಶ್ಚಿತವಾದ ಧಾರ್ಮಿಕ ನಿಯಮಾಚರಣೆಗಳಿಂದ ಕೂಡಿದ್ದು ಶಾರೀರಕ ಹಾಗೂ ಮಾನಸಿಕವಾದ ನಿಗ್ರಹಗಳ ಆಚರಣೆಯ ವಿಧಿಗಳಿಂದ ಯುಕ್ತವಾಗಿರುವ ಧಾರ್ಮಿಕ ಕಾರ್ಯಗಳಾಗಿರುತ್ತವೆ. ವ್ರತದಲ್ಲಿ ಪ್ರಾರ್ಥನೆ ಮತ್ತು ಉಪವಾಸ ಎಂಬ ಎರಡು ಮುಖ್ಯವಾದ ಆಚರಣಾ ವಿಧಾನಗಳು ಸೇರಿರುತ್ತವೆ. ವ್ರತವನ್ನು ನಿಶ್ಚಿತವಾದ ಫಲದ ದೃಷ್ಟಿಯಿಂದಲೂ, ಫಲಾಪೇಕ್ಷೆಯಿಲ್ಲದೆ ಭಗವಂತನ ಪ್ರೀತ್ಯರ್ಥವಾದುದು ಎಂಬ ದೃಷ್ಟಿಯಿಂದಲೂ ಆಚರಿಸುತ್ತಾರೆ.

'ಧಾರ್ಮಿಕ ಸಂಕಲ್ಪ' ಎಂಬ ಅರ್ಥವುಳ್ಳ 'ವ್ರತ' ಶಬ್ದವು ಹಿಂದೂ ಧರ್ಮದ ಮತ್ತು ಧಾರ್ಮಿಕ ಕರ್ಮಾಚರಣೆಗೆ ಸಂಬಂಧಪಟ್ಟ ಸಾಹಿತ್ಯದಲ್ಲಿ ವ್ಯಾಪಕವಾಗಿ ಬಳಕೆಯಲ್ಲಿದೆ. 'ವ್ರತಾಚರಣೆ' ಶ್ರೇಷ್ಠವಾದದ್ದನ್ನು ಆಯ್ದುಕೊಳ್ಳುವುದು, ವರಿಸುವುದು ಎಂಬ ಅರ್ಥದ ಧಾತುವಿನಿಂದ ನಿಷ್ಪನ್ನವಾದ 'ವ್ರತ' ಶಬ್ದವು ನಿಯತಕಾಲದ ಅವಧಿಯಲ್ಲಿ, ಸ್ವಯಂಪ್ರೇರಣೆಯಿಂದ ಆಚರಿಸುತ್ತಾ, ಸಂಬಂಧಪಟ್ಟ ದೇವತೆಯನ್ನು ಭಕ್ತಿಶ್ರದ್ಧೆಗಳಿಂದ ಉಪಾಸಿಸುವ ದೃಢಸಂಕಲ್ಪ ಎಂಬ

ಅರ್ಥವುಳ್ಳದ್ದು. ಹಿಂದೂ ಧಾರ್ಮಿಕ ಪಂಚಾಂಗಗಳ ರೀತ್ಯಾ ನಿಗದಿತವಾದ ಪುಣ್ಯತಿಥಿಯಂದು ಇಂತಹ ಧಾರ್ಮಿಕ ಕಾರ್ಯವನ್ನು ಸ್ವ-ಇಚ್ಛೆಯಿಂದ ಮತ್ತು ಸಂಕಲ್ಪ ಸಹಿತವಾಗಿ ಮಾಡಬೇಕು.

'ವ್ರತ' ಶಬ್ದದೊಡನೆ ಕೆಲವು ವೇಳೆ ಅದಕ್ಕೆ ಸಮಾನ ಅರ್ಥವುಳ್ಳದ್ದಾಗಿ ಬಳಸುವ 'ಉತ್ಸವ' ಶಬ್ದದ ಅರ್ಥ 'ಮೇಲೆ ಏರುವುದು' ಎಂದಾದರೂ ಬಳಕೆಯಲ್ಲಿರುವ ಅರ್ಥ 'ಆಚರಿಸುವವರನ್ನು ಸಹಜವಾಗಿಯೇ ಮುದಗೊಳಿಸುವ, ರಂಜಿಸುವ ಹಬ್ಬ ಎಂದು ವ್ರತವು ಉಪವಾಸ, ಜಾಗರಣೆ ಮುಂತಾದ ಬಿಗಿ ನಿಯಮಗಳಿಂದ ಕೂಡಿದ್ದರೆ ಉತ್ಸವವು ಅಂಥ ನಿಯಮಗಳಿಂದ ಮುಕ್ತ ವಾಗಿದ್ದು, ಆನಂದವನ್ನೀಯುತ್ತದೆ. ಆದರೂ ವ್ರತ-ಉತ್ಸವಗಳು ಪರಸ್ಪರ ನಿಕಟ ಸಂಬಂಧವುಳ್ಳವು. ಸಾಮಾನ್ಯವಾಗಿ ಬಹುತೇಕ ವ್ರತಗಳು ಉತ್ಸವಗಳು ಪರ್ಯಾವಸಾನವಾಗುತ್ತವೆ.

ಹಿಂದೂ ಹಬ್ಬಗಳಲ್ಲಿ ಅತ್ಯಂತ ಹೆಚ್ಚು ಪಾಲು ವ್ರತಗಳಾಗಿ ಪ್ರಾರಂಭವಾಗಿ ಉತ್ಸವಗಳಾಗಿ ಮುಕ್ತಾಯವಾಗುತ್ತವೆ. ಸಾಂಪ್ರದಾಯಿಕವಾಗಿ ಮೂಡಿಬಂದಿರುವ ಪುರಾಣಗಳ ಮತ್ತು ಅವುಗಳಿಗೆ ಸಂಬಂಧಪಟ್ಟ ಇತರೆ ಗ್ರಂಥಗಳ ಆಧಾರದಿಂದ ವ್ರತಗಳನ್ನು ವರ್ಗೀಕರಿಸಬಹುದು. ಉಪವಾಸ ಮುಂತಾದ ದೈಹಿಕ ನಿರ್ಬಂಧಗಳನ್ನು ಒಳಗೊಂಡ ವ್ರತಗಳು 'ಕಾಯಕ ವ್ರತ'ಗಳು ಸತ್ಯವಚನ, ಧರ್ಮಗ್ರಂಥಗಳ ಪಾರಾಯಣ ಮುಂತಾದ ಮಾತಿನ ನಿಯಂತ್ರಣಗಳನ್ನು ಒಳಗೊಂಡ ವ್ರತಗಳು 'ವಾಚಿಕವ್ರತಗಳು' ಜಪ-ಧ್ಯಾನಾದಿಗಳ ಮೂಲಕ ರಾಗ-ದ್ವೇಷ ಮುಂತಾದ ಮನೋದೌರ್ಬಲ್ಯಗಳ ನಿಯಂತ್ರಣಗಳನ್ನೊಳಗೊಂಡ ವ್ರತಗಳು 'ಮಾನಸ ವ್ರತಗಳು, ಆದರೆ ಈ ಮೂರು ಬಗೆಯ ವ್ರತಗಳಲ್ಲೂ ದೈಹಿಕ, ವಾಚಿಕ, ಮಾನಸಿಕ ನಿಯಂತ್ರಣಗಳಿದ್ದೇ ಇರುತ್ತದೆ.

ಎರಡನೇ ಬಗೆಯ ವರ್ಗೀಕರಣವನ್ನು ವ್ರತಕ್ಕೆ ನಿಗದಿಯಾದ ಕಾಲದ ಆಧಾರದ ಮೇಲೆ ಮಾಡಬಹುದು. ಒಂದು ದಿನ ಮಾತ್ರ ನಡೆಯುವ ವ್ರತವನ್ನು 'ದಿನವ್ರತ'ವೆಂದೂ ಒಂದು ವಾರ ನಡೆಯುವುದನ್ನು 'ವಾರವ್ರತ'ವೆಂದೂ, ಒಂದು ಪಕ್ಷದ ಕಾಲ ನಡೆಯುವುದನ್ನು 'ಪಕ್ಷವ್ರತ'ವೆಂದು, ಒಂದು ತಿಥಿ (ಚಂದ್ರಮಾನ ಪಂಚಾಂಗದ ಒಂದು ದಿನ) ಅಥವಾ ಒಂದು ನಕ್ಷತ್ರದ ಅವಧಿಯಲ್ಲಿ ನಡೆಯಬೇಕಾದದ್ದನ್ನು 'ತಿಥಿವ್ರತ', 'ನಕ್ಷತ್ರ ವ್ರತ' ಎಂದೂ ವಿಂಗಡಿಸಬಹುದು. ಇಂದು ಆಚರಣೆಯಲ್ಲಿರುವ ವ್ರತಗಳಲ್ಲಿ ಹೆಚ್ಚಿನವು ಚಂದ್ರಮಾನ ರೀತ್ಯಾ ನಿಗದಿತವಾದ ತಿಥಿವ್ರತಗಳು.

ಆಯಾ ವ್ರತಗಳಲ್ಲಿ ಆರಾಧಿಸಬೇಕಾದ ದೇವ-ದೇವಿಯರನ್ನು ಅನುಸರಿಸಿ ಮೂರನೆಯ ಬಗೆಯ ವರ್ಗೀಕರಣವನ್ನು ಮಾಡಬಹುದು. ಸ್ವರ್ಣಗೌರಿ ವ್ರತ, ಸಿದ್ಧಿವಿನಾಯಕ ವ್ರತ, ಸತ್ಯನಾರಾಯಣ ವ್ರತ, ಹೀಗೆ ಮುಂತಾದ ರೀತಿಯವು. ನಾಲ್ಕನೆಯ ಬಗೆಯ ವರ್ಗೀಕರಣವು

ವ್ರತವನ್ನು ಯಾರಿಗೆ ವಿಧಿಸಿದೆ ಎಂಬುದನ್ನು ಅನುಸರಿಸಿದೆ. ಯಾವುದೇ ವ್ರತ ಸ್ತ್ರೀಯರಿಗೆ ಮಾತ್ರ ಸೀಮಿತವಾದಾಗ ಅದು 'ಸ್ತ್ರೀವ್ರತ', ಕ್ಷತ್ರಿಯರಿಗೆ ಆದಾಗ ಅದು 'ಕ್ಷತ್ರಿಯ ವ್ರತ' ಹೀಗೆ ಮುಂತಾದ ರೀತಿಯವು.

**ಪರ(ಪರ್ವ) :** ಈ ವ್ರತವನ್ನು ವ್ಯಕ್ತಿಯ ಸ್ವತಃ ಅಥವಾ ಅನೇಕರ ಒಡನೆ ಸೇರಿಕೊಂಡು ನಡೆಸುತ್ತಾನೆ. ಅಂತೂ ವ್ರತ ಎಂಬುದು ವ್ಯಕ್ತಿ ಪ್ರಧಾನವಾದುದು. 'ಪರ' ಎಂದರೆ ಪ್ರಕೃತಿಯಲ್ಲಿ ಒದಗಿ ಬರುವ ವಿಶೇಷ ಮಾಸಗಳು ಎಂಬ ನಿಶ್ಚಿತವಾದ ಕಾಲಮಾನವನ್ನು ಅನುಸರಿಸಿ ಮಾಡುವ ವೈಯಕ್ತಿಕ ಹಾಗೂ ಸಾಮೂಹಿಕ ಹಬ್ಬ, ಉತ್ಸವಗಳಾಗಿರುತ್ತವೆ. ಈ ಪರ್ವಗಳ ಸಂದರ್ಭದಲ್ಲಿ ಪುಣ್ಯಕ್ಷೇತ್ರ, ನದಿತೀರಗಳು, ದೇವರು ನೆಲೆಸಿರುವ ಬೆಟ್ಟಗಳು, ವಿಶೇಷವಾದ ಸ್ಥಳಗಳು, ಹೊಲ–ಗದ್ದೆ, ತೋಟಗಳಲ್ಲಿ ಜನರು ಸೇರಿ ಸ್ನಾನ, ದಾನ, ಪೂಜೆ, ದೇವರ ದರ್ಶನ, ಬಲಿ ಇತ್ಯಾದಿ ಅನೇಕ ರೀತಿಯ ಕಾರ್ಯಗಳನ್ನು ಮಾಡುವುದೇ ಪರದ ಆಚರಣೆಯಾಗಿರುತ್ತದೆ. ಈ ರೀತಿಯ ಪರಕಾಲದಲ್ಲಿ ಜನರು ಸೇರಿ ಸಾಮೂಹಿಕ ರಂಗದಲ್ಲಿ ದೇವತಾರಾಧನೆ, ದಾನಸೇವಾದಿಗಳನ್ನು ಆಚರಿಸುವ ಅವಕಾಶವನ್ನೆ ಪರೋತ್ಸವ ಎಂದು ಕರೆಯಲಾಗುತ್ತದೆ. ವ್ರತವು ಸೂಕ್ಷ್ಮ ಪ್ರಕಾರದ ದೇವತಾರಾಧನೆಯಾದರೆ, ಪರವು ದೀರ್ಘ ಪ್ರಕಾರದ ದೊಡ್ಡ ಪ್ರಮಾಣದಲ್ಲಿ ಮಾಡುವ ದೇವತಾರಾಧನೆಯಾಗಿರುತ್ತದೆ.

ಮೈಸೂರು ನಗರದ ದೇವಾಲಯಗಳಲ್ಲಿ ಬಲಿ ಆಚರಣೆಯನ್ನು ನಿಷೇಧಿಸಿರುವುದರಿಂದ ಪರ ಮಾಡುವ ಪದ್ಧತಿಯು ಅಲ್ಪ ಪ್ರಮಾಣದಲ್ಲಿ ಕಡಿಮೆಯಾಗಿದೆ. ಈ ಮೊದಲು ಚಾಮುಂಡಿ ಬೆಟ್ಟ, ಉತ್ತನಹಳ್ಳಿ ಮುಂತಾದ ಕಡೆಗಳಲ್ಲಿ ಪರ ಮಾಡಲು ಹೆಚ್ಚು ಜನರು ಸೇರುತ್ತಿದ್ದರು. ಇಂದು ಇಂತಹ ಪದ್ದತಿಗಳಲ್ಲಿ ಆಧುನಿಕತೆಯಿಂದಾಗಿ ಬದಲಾವಣೆಗಳನ್ನು ಕಂಡುಕೊಂಡಿವೆ. ಬಲಿ ನಿಷೇಧದಿಂದಾಗಿ ಹರಕೆ ಹೊತ್ತವರು, ದೇವರ ಹೆಸರಿನಲ್ಲಿ ಬಲಿ ಬಿಟ್ಟವರು ದೇವಾಲಯಕ್ಕೆ ಹೋಗಿ ಪೂಜೆ ಸಲ್ಲಿಸಿ ಅಲ್ಲಿಂದ ತೀರ್ಥ ತಂದು ಬಲಿ ಪ್ರಾಣಿಗೆ ಚಿಮುಕಿಸಿ ಅವರಿಗೆ ಅನುಕೂಲವಾದ ಜಾಗದಲ್ಲಿ ಪರಮಾಡುತ್ತಾರೆ. ಉದಾಹರಣೆಗೆ: ಚಾಮುಂಡಿ ಬೆಟ್ಟದ ತಪ್ಪಲು, ಉತ್ತನಹಳ್ಳಿ ದೇವಾಲಯದ ತಪ್ಪಲು, ಸಿದ್ಧಾರ್ಥನಗರದ ತೋಟಗಳಲ್ಲಿ, ಕುಂಬಾರಕೊಪ್ಪಲಿನ ತೋಟಗಳಲ್ಲಿ, ಅಕ್ಕಪಕ್ಕದ ತೋಟಗಳಲ್ಲಿ ಮುಂತಾದ ಕಡೆಗಳಲ್ಲಿ ನಡೆಯುತ್ತಿದೆ. ಆಧುನಿಕತೆಗೆ ಒಳಗಾಗಿದ್ದರೂ ಈ ಕಾರ್ಯದಲ್ಲಿ ಬಂಧು ಬಾಂದವರು, ಸ್ನೇಹಿತರು, ಹಿತೈಸಿಗಳು ಹೀಗೆ ಜನ ಸಮುದಾಯವೇ ಸೇರುವುದರಿಂದ ಅದನ್ನು ಜನಪದರ ಪದ್ಧತಿ ಎಂತಲೇ ಗುರುತಿಸಬಹುದಾಗಿದೆ. ಸ್ನೇಹ, ಸಹಕಾರ ಹಾಗೂ ದೇವರ ಮೇಲಿನ ನಂಬಿಕೆಯಿಂದಲೇ ಈ ಪರ ಆಚರಣೆಯು

ಜರುಗುವುದಾಗಿದೆ. ಅಂತೆಯೇ ಸಸ್ಯಹಾರಿಗಳಲ್ಲಿಯೂ ಇದೇ ಪದ್ಧತಿಯೂ ರೂಢಿಯಲ್ಲಿರುವುದು ಕಂಡುಬರುತ್ತದೆ.

**ಹಣ್ಣುಕಾಯಿ ಮಾಡಿಸುವುದು** : ಒಂದೇ ಬಗೆಯಲ್ಲಿ ಯಾವ ಭೇದವೂ ಇಲ್ಲದೆ ಎಲ್ಲಾ ದೇವತೆಗಳಿಗೂ ಸಲ್ಲುವ ಆಚರಣೆಯೇ ಹಣ್ಣುಕಾಯಿ ಮಾಡಿಸುವ ಆಚರಣೆ. ಹೆಸರೇ ಸೂಚಿಸುವಂತೆ ದೇವರಿಗೆ ಹಣ್ಣುಕಾಯಿಗಳನ್ನು ನೈವೇದ್ಯ ಮಾಡುವ ಈ ಆಚರಣೆ ಯಾವ ಜಾತಿ ಮತದ ತೊಡಕಿಲ್ಲದೆ ನೆರವೇರುತ್ತದೆ. ದೇವಾಲಯಗಳಿಗೆ ಭೇಟಿನೀಡಿದವರೆಲ್ಲರೂ ಸಾಮಾನ್ಯವಾಗಿ ಹಣ್ಣುಕಾಯಿ ಮಾಡಿಸುವುದು ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಆಚರಣಾ ಪದ್ಧತಿಯಾಗಿದೆ. ಒಂಟಿಕಾಯಿ, ಜೋಡಿಕಾಯಿ, ಜೋಡಿ ತಟ್ಟೆ ಪೂಜೆ ಹೀಗೆ ಅವರ ಮನಸ್ಸಿಗೆ ಸಮಾಧಾನ ತರುವ ರೀತಿಯಲ್ಲಿ ಹಾಗೂ ಶಕ್ತ್ಯಾನುಸಾರ ಹಣ್ಣುಕಾಯಿ ಮಾಡಿಸುತ್ತಾರೆ. ಹಣ್ಣುಕಾಯಿ ಮಾಡಿಸಿ, ದೇವಾಲಯದ ಆವರಣದಲ್ಲಿ ಸ್ವಲ್ಪಹೊತ್ತು ಕುಳಿತು ಹಣ್ಣುಕಾಯಿಯನ್ನು ಪ್ರಸಾದವೆಂದು ಸ್ವೀಕರಿಸಿ ಅನಂತರ ಹೊರಡುವುದು ವಾಡಿಕೆ.

**ಪ್ರಸಾದ** : ದೇವಾಲಯದಲ್ಲಿ ಪ್ರಸಾದ ಎಂಬುದುನ್ನು ಎರಡು ರೀತಿಯಲ್ಲಿ ಅರ್ಥೈಸಲಾಗಿದೆ. ಒಂದು ದೇವಸ್ಥಾನದಲ್ಲಿ ದೇವರ ಹೆಸರಿನಲ್ಲಿ ಕೊಡುವ ಲಾಡು, ತೀರ್ಥ, ಹೂಗಳು, ಕಲ್ಲುಸಕ್ಕರೆ, ಪಂಚಕಜ್ಜಾಯ ಮುಂತಾದವುಗಳನ್ನು ಪ್ರಸಾದವೆಂದು ಕರೆಯಲಾಗುತ್ತದೆ. ಮತ್ತೊಂದು ಬಗೆ ಎಂದರೆ ಬರುವ ಭಕ್ತರಿಗೆ ಮಧ್ಯಾಹ್ನದ ವೇಳೆ ಊಟದ ವ್ಯವಸ್ಥೆಯನ್ನು ಮಾಡಲಾಗಿರುವುದನ್ನು ಪ್ರಸಾದವೆಂದೇ ಕರೆಯಲಾಗುತ್ತದೆ. ತಿನ್ನುವ ಊಟವು ದೇವರಿಗೆ ಅರ್ಪಿತವಾಗಿರಬೇಕೆಂಬ ಶರಣರ ನುಡಿಯಿಂದ ಇದನ್ನು ಪ್ರಸಾದವೆಂದು ಭಾವಿಸಲಾಗುತ್ತದೆ. ಕೆಲವೊಂದು ಸಂದರ್ಭದಲ್ಲಿ ಅಂದರೆ ವರ್ಧಂತಿ ಉತ್ಸವ, ವಿಶೇಷ ದಿನ, ದೇವಾಲಯಗಳಲ್ಲಿ ಪುಳಿಯೊಗರೆ, ಬಾತ್, ಮೊಸರನ್ನ, ಪೊಂಗಲ್, ಕೆಸರೀಬಾತ್, ಮುಂತಾದವುಗಳನ್ನು ನೀಡುತ್ತಾರೆ. ಇವನ್ನು ದೇವರ ಪ್ರಸಾದವೆಂತಲೆ ಕರೆಯುತ್ತಾರೆ. ಉದಾಹರಣೆಗೆ: ರಾಮನವಮಿಯ ದಿನ, ಚಾಮುಂಡೇಶ್ವರಿ ವರ್ಧಂತಿ ಉತ್ಸವದ ದಿನ, ಹನುಮ ಜಯಂತಿಯ ದಿನ ಮುಂತಾದ ದಿನಗಳಲ್ಲಿ ಮೈಸೂರು ನಗರದಲ್ಲಿ ಭಕ್ತ ಮಂಡಳಿಗಳು, ಸಂಘ ಸಂಸ್ಥೆಗಳು ಬೀದಿ ಬೀದಿಗಳಲ್ಲಿಯೂ ಪ್ರಸಾದವನ್ನು ವಿನಿಯೋಗಿಸುತ್ತಾರೆ.

ಮತ್ತೊಂದು ಬಗೆ ಎಂದರೆ ಭಕ್ತರು ದೇವಾಲಯಗಳಿಗೆ ಭೇಟಿ ನೀಡಿ ಅಲ್ಲಿ ಪ್ರಸಾದವಾಗಿ ಲಾಡು, ತೀರ್ಥ, ಕಲ್ಲುಸಕ್ಕರೆ, ಪಂಚಕಜ್ಜಾಯ ಮುಂತಾದವುಗಳನ್ನು ಕರೀದಿಸಿ ತಂದು ಮನೆಯಲ್ಲಿ ಪೂಜೆ ಮಾಡಿ ಅಕ್ಕಪಕ್ಕದ ಮನೆಯವರೆಲ್ಲರಿಗೂ ದೇವರ ಪ್ರಸಾದವೆಂದು ಹಂಚಿ ತಾವು ಸ್ವೀಕರಿಸುತ್ತಾರೆ. ಇದರಿಂದ ನಂಬಿಕೆ ಮತ್ತು ಭಕ್ತಿಯ ಪಾಲು ನೆರೆಹೊರೆಯವರಿಗೂ ಸಿಗಲಿ

ಎಂಬುದಾಗಿಯು, ಪ್ರಸಾದ ಹಂಚಿದ ಪುಣ್ಯವು ತಮಗೂ ಸಿಗುತ್ತದೆ ಎಂಬ ನಂಬಿಕೆಯ ಭಾವವಿದೆ. ಇದು ಅವರ ಸಹಕಾರ ಮತ್ತು ಸೌಹಾರ್ದತೆಯ ಮನೋಭಾವಕ್ಕೂ ಸಾಕ್ಷಿಯಾಗುತ್ತದೆ.

**ದಾಸೋಹ** : ದೇವಸ್ಥಾನಕ್ಕೆ ಬರುವ ಭಕ್ತಾದಿಗಳಿಗೆ ಅನುಕೂಲವಾಗಲೆಂದು ಪ್ರಸಾದನಿಲಯ ಸ್ಥಾಪಿಸಲಾಗಿದೆ. ಹಲವು ವರ್ಷಗಳಿಂದ ಪ್ರಸಾದ ವ್ಯವಸ್ಥೆ ಮಾಡಲಾಗಿದೆ. ಪ್ರತಿದಿನ ಸಾವಿರಾರು ಭಕ್ತರು ಇಲ್ಲಿ ಪ್ರಸಾದ ಸೇವಿಸುತ್ತಾರೆ. ಎಂತಹ ವ್ಯಕ್ತಿಗಳೇ ಬಂದರೂ ಇಲ್ಲ ಪ್ರಸಾದ ತೆಗೆದುಕೊಳ್ಳುತ್ತಾರೆ. ಇದು 'ದೇವರ ಪ್ರಸಾದ' ಎಂಬ ಶ್ರದ್ಧಾಭಕ್ತಿ ಭಕ್ತರಲ್ಲಿದೆ. ಆದ್ದರಿಂದ ಕಾದು ನಿಂತಾದರು ಸರಿ ಪ್ರಸಾದ ಸೇವಿಸುತ್ತಾರೆ.

ಮೈಸೂರು ನಗರದಲ್ಲಿ ಈ ಹಿಂದೆ ಬೆಟ್ಟದ ಚಾಮುಂಡೇಶ್ವರಿ ದೇವಾಲಯದಲ್ಲಿ ಮಾತ್ರ ಮಧ್ಯಾಹ್ನದ ಅನ್ನದಾಸೋಹ ಪ್ರಕ್ರಿಯೆ ಇತ್ತು. ಈಗ ಅದನ್ನು ವಿಸ್ತರಿಸಿ ಭಕ್ತರಿಗೆ ಬೆಳಗಿನ ತಿಂಡಿ ಹಾಗೂ ರಾತ್ರಿಯ ಊಟದ ವ್ಯವಸ್ಥೆಯನ್ನ ಮಾಡಲಾಗಿದೆ. ಈಗ ಉತ್ತನಹಳ್ಳಿ ದೇವಾಲಯದಲ್ಲೂ ಮಧ್ಯಾಹ್ನ ಮಾತ್ರ ಊಟದ ವ್ಯವಸ್ಥೆಯನ್ನು ಮಾಡಿರುವುದರಿಂದ ನಗರದ ಎರಡು ಕಡೆಗಳಲ್ಲಿ ಮಾತ್ರ ದೇವಾಲಯಗಳಲ್ಲಿ ಅನ್ನದಾಸೋಹ ಪ್ರಕ್ರಿಯೆ ಪ್ರತಿನಿತ್ಯ ಜರುಗುತ್ತಿರುವುದನ್ನು ಕಾಣುತ್ತೇವೆ.

ಅನ್ನದಾಸೋಹಕ್ಕೆ ದಾನ, ದೇಣಿಗೆ, ಹರಕೆಯ ದವಸದಾನ್ಯಗಳು ಹಾಗೂ ಭಕ್ತರು ನೀಡುವ ಹಣಕಾಸಿನ ನೆರವು ಮತ್ತು ಸರ್ಕಾರದ ಸಹಾಯದನದಿಂದ ಅನ್ನದಾಸೋಹ ಪ್ರಕ್ರಿಯೆ ನಡೆಯುತ್ತದೆ. 'ಅನ್ನಂ ಮಹಾಪ್ರಾಣಂ' ಎಂಬ ಗಾದೆಯು ಅನ್ನದಾನಕ್ಕಿಂತ ಶ್ರೇಷ್ಠವಾದ ದಾನ ಮತ್ತೊಂದಿಲ್ಲ ಎಂಬುದನ್ನು ತಿಳಿಸುತ್ತದೆ. ಕೆಲವು ಭಕ್ತರು ಒಂದು ಹೊತ್ತಿನ, ಒಂದು ದಿನದ ಅನ್ನದಾಸೋಹದ ಜವಾಬ್ದಾರಿಯನ್ನು ಹರಕೆ ಸಲ್ಲಿಸುವ ವಿಧದಲ್ಲಿ ವಹಿಸಿಕೊಂಡು ದಾಸೋಹ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಾರೆ. ಅನ್ನದಾಸೋಹದಲ್ಲಿ ನಡೆಯುವ ಅನ್ನಸಂತರ್ಪಣೆಯನ್ನು ಭಕ್ತರು ಪ್ರಸಾದವೆಂದು ಭಕ್ತಿಯಿಂದ ಸ್ವೀಕರಿಸುತ್ತಾರೆ.

**ಅಭಿಷೇಕ** : ದೇವರುಗಳಿಗೆ ಸಾಮಾನ್ಯವಾಗಿ ನಡೆಸುವ ಆಚರಣೆಯಲ್ಲಿ ಅಭಿಷೇಕವು ಒಂದಾಗಿದೆ. ಹಾಲು ಮೊಸರು, ತುಪ್ಪ, ಜೇನುತುಪ್ಪ, ಸಕ್ಕರೆ ಹೀಗೆ ಐದು ಪರಿಕರಗಳಿಂದ ನಡೆಸುವ ಅಭಿಷೇಕ ಪಂಚಾಮೃತ ಅಭಿಷೇಕ. ಸಾಮಾನ್ಯವಾಗಿ ಆಯಾ ದೇವರುಗಳಿಗೆ ಪ್ರಿಯವಾದ ವಸ್ತುವಿನಿಂದ ಅಭಿಷೇಕ ಮಾಡಲಾಗುತ್ತದೆ, ಅವುಗಳಲ್ಲಿ ಪ್ರಮುಖವಾಗಿ ಮಕ್ಕಳಾಗದ ದಂಪತಿಗಳು ನಾಗದೇವತೆಗೆ ಹಾಲಿನ ಅಭಿಷೇಕ ನಡೆಸಿದರೆ, ಅರಿಶಿಣ ಕುಂಕುಮ ಶೋಭಿತೆ ಶ್ರೀಲಕ್ಷ್ಮಿಗೆ ಹರಕೆ ಹೊತ್ತ ಭಕ್ತರು ಸೌಭಾಗ್ಯಕ್ಕಾಗಿ ಹಾಲು ಅಥವಾ ಮೊಸರಿನಲ್ಲಿ ಅಭೀಷೇಕ ನಡೆಸುತ್ತಾರೆ.

ಅಯ್ಯಪ್ಪನಿಗೆ ಚಂದನದಲ್ಲಿ, ಶಿವ ಮತ್ತು ಸುಬ್ರಹ್ಮಣ್ಯನಿಗೆ ವಿಭೂತಿಯಿಂದ ಅಭಿಷೇಕ ನಡೆಸಲಾಗುತ್ತದೆ. ಏಕಾದಶಿಯ ದಿನದಂದು ಹನುಮಂತನಿಗೆ ಮುಂಜಾನೆ ನೀರಿನಲ್ಲಿ ಅಭಿಷೇಕ ಮಾಡಿ, ತುಳಸಿಯ ಹಾರ ಹಾಕಲಾಗುತ್ತದೆ. ವಿಶೇಷವಾಗಿ ಶಿವನಿಗೆ ಗಂಧೋದಕದಿಂದ ಅಭಿಷೇಕ ನಿತ್ಯಸಲ್ಲಿಸಲಾಗುತ್ತದೆ. ಲಿಂಗದ ಮೇಲೆ ಕಟ್ಟಲ್ಪಡುವ ಕುಂಬದಿಂದ ಅಭಿಷೇಕ ಪ್ರಿಯನಾದ ಶಿವನಿಗೆ ಸದಾಭಿಷೇಕ ಸಲ್ಲುತ್ತದೆ. ಸಾಮಾನ್ಯವಾಗಿ ವಿಷ್ಣುವಿಗೆ ಅಷ್ಟಮಿ ಹಾಗೂ ಪೌರ್ಣಮಿದಿನಗಳಲ್ಲಿ ಅಭಿಷೇಕ ಮಾಡಲಾಗುತ್ತದೆ. ನೀರು, ಹಾಲು, ತುಪ್ಪ, ಮೊಸರು, ಜೇನುತುಪ್ಪಗಳನ್ನು ಒಳಗೊಂಡಂತೆ ಸಕ್ಕರೆ, ಎಣ್ಣೆ, ಎಳನೀರು, ನಿಂಬೆರಸ, ಬಾಳೆಹಣ್ಣು, ತೆಂಗಿನ ಹಾಲು, ಚಂದನ, ಅರಿಶಿಣ, ಪನ್ನಿರು, ಪತ್ರೆನೀರು, ಮೋಸಂಬಿರಸ ಮುಂತಾದವುಗಳನ್ನು ಪೂರ್ಣಾಭಿಷೇಕದಲ್ಲಿ ಬಳಸಲಾಗುತ್ತದೆ. ಮಾರಮ್ಮ ಹಾಗೂ ದೊಡ್ಡಮ್ಮ ಮುಂತಾದ ಗ್ರಾಮದೇವತೆಗಳಿಗೆ ತಂಪು ನೀಡಲು ಎಳನೀರು, ಹಾಲು, ಮೊಸರುಗಳನ್ನು ಬಳಸುತ್ತಾರೆ. ಶನಿಮಹಾತ್ಮನಿಗೆ ಎಳ್ಳೆಣ್ಣೆ ಮತ್ತು ಅರಳೆಣ್ಣೆಯನ್ನು, ಕಾಳಿಗೆ ವಿಭೂತಿಯನ್ನು ಕೆಲವು ವಿಶೇಷ ಸಂದರ್ಭಗಳಲ್ಲಿ ಹೂವು, ಸಿಂಧೂರ, ಕೇಸರಿ, ಪಚ್ಚಕರ್ಪೂರ ಮುಂತಾದ ವಸ್ತುಗಳನ್ನು ಬಳಸಲಾಗುತ್ತದೆ.

**ತಾಯಿತ ಮತ್ತು ಯಂತ್ರ** : ಭದ್ರತೆಯ ಸಮೃದ್ಧತೆಯ ಸಂಕೇತವಾಗಿ ಹಾಗೂ ಭಯ ಬೆಚ್ಚುಗಳಿಂದ ರಕ್ಷಣೆ ಪಡೆಯುವ ಸಲುವಾಗಿ ಬಳಸುವ ತಾಮ್ರದ ವಸ್ತು. ತಾಮ್ರದ ತಗಡಿನಲ್ಲಿ ಬಗೆಬಗೆಯ ಆಕಾರದ ರೇಖಾ ಚಿತ್ರಗಳನ್ನೂ ಜೊತೆಗೆ ಮಂತ್ರಾಕ್ಷರಗಳನ್ನು ದಬ್ಬಳದಿಂದ ಬರೆದು ಅದನ್ನು ಸುರುಳಿಸುತ್ತಿ ಲೋಹದ ಕೊಳವೆಯಲ್ಲಿ ಸೇರಿಸಲಾಗುತ್ತದೆ. ಇದಕ್ಕೆ ತಾಯಿತ ಎಂದು ಹೆಸರು. ದಾರದ ಸಹಾಯದಿಂದ ಅದನ್ನು ತೋಳಿಗೋ, ಕೊರಳಿಗೋ ಅಥವಾ ಸೊಂಟಕ್ಕೋ ಕಟ್ಟಿಕೊಳ್ಳುವುದುಂಟು. ಹೀಗೆ ಮಾಡಿದರೆ ದುಷ್ಟಶಕ್ತಿಗಳಿಂದ ಪಾರಾಗಬಹುದೆಂಬ ನಂಬಿಕೆ ಇರುವುದರಿಂದ ಇದು ಬಳಕೆಯಲ್ಲಿದೆ. ತಾಯಿತದ ಒಳಗೆ ಹುಲಿಯ ಮೀಸೆಯ ಕೂದಲನ್ನು ಸೇರಿಸಿ ಅದನ್ನು ಮೈಮೇಲೆ ಧರಿಸಿದರೆ ಧೈರ್ಯ ಬರುತ್ತದೆ. ಹೆದರಿಕೆ ದೂರವಾಗುತ್ತದೆ ಎಂಬ ನಂಬಿಕೆಯೂ ಜನಪದರಲ್ಲಿದೆ. ಲೋಹದ ಕೊಳವೆಯನ್ನು ಬಳಸದೆ ಆ ತಾಮ್ರದ ತಗಡಿನ ಸುರುಳಿಯನ್ನು ಕೇವಲ ಸಪ್ಪೆದಾರದಲ್ಲಿ ಅಥವಾ ಹಸಿನೂಲಿನಿಂದ ಬಂಧಿಸಿ ಕಟ್ಟಿಕೊಂಡರೆ ಅದನ್ನು ಯಂತ್ರ ಎನ್ನುತ್ತಾರೆ. ಹೀಗೆಯೇ ಕೇವಲ ಕಾಗದದ ಚೂರಿನ ಮೇಲೆ ರೇಖಾಚಿತ್ರಗಳನ್ನು, ಮಂತ್ರಾಕ್ಷರಗಳನ್ನು ಬರೆದು ಚಚೌಕಾಕಾರದ ಹಸಿರು ಬಟ್ಟೆಯಲ್ಲಿ ಮಡಚಿ ಸಪ್ಪೆದಾರದಲ್ಲಿ ಅಥವಾ ಕಪ್ಪುದಾರದಲ್ಲಿ ಬಂಧಿಸಿ ಮಕ್ಕಳ ಕೊರಳಿಗೆ ಕಟ್ಟುವ ಒಂದು ಸಂಪ್ರದಾಯವು ಮುಸಲ್ಮಾನರಲ್ಲಿ ರೂಢಿಯಲ್ಲಿದೆ. ಇದನ್ನು ಚೀಟು ಎಂದು ಕರೆಯುತ್ತಾರೆ. ತಮ್ಮ ಮೈಮೇಲೆ ಧರಿಸುವುದರಿಂದ

ಸದ್ಯ ಬಂದಿರುವ ಅಥವಾ ಮುಂದೆ ಬರಬಹುದಾದ ತೊಂದರೆಗಳು, ಕೆಡಕುಗಳನ್ನು ದೂರವಿಡಬಹುದು ಎಂಬ ನಂಬಿಕೆ ಇದೆ.

ಮೈಸೂರು ನಗರದ ಅರಮನೆ ಕೋಟೆ ಆಂಜನೇಯ ದೇವಾಲಯದಲ್ಲಿ ಪುರೋಹಿತರು ನೀಡುವ ತಾಯಿತ ಬಹಳ ಪ್ರಸಿದ್ಧತೆಯನ್ನು ಪಡೆದುಕೊಂಡಿದೆ. ಏಕೆಂದರೆ ಈ ದೇವಾಲಯವು ಮೈಸೂರು ನಗರದ ಕೇಂದ್ರಭಾಗದಲ್ಲಿದ್ದು ಪಾರಂಪರಿಕವಾಗಿ ಪೂಜೆಗೊಳ್ಳುತ್ತಿರುವ ಈ ದೇವಾಲಯಕ್ಕೆ ಪ್ರತಿದಿನ ಸಾವಿರಾರು ಭಕ್ತರು ಭೇಟಿನೀಡಿ ಪೂಜೆಸಲ್ಲಿಸುತ್ತಾರೆ. ವಿಶೇಷವೆಂದರೆ ಈ ದೇವಾಲಯಕ್ಕೆ ಯಾವುದೇ ಜಾತಿ, ಧರ್ಮ ಎನ್ನದೇ ಎಲ್ಲ ಧರ್ಮದವರು ಭೇಟಿನೀಡಿ ಇಲ್ಲಿ ಸಿಗುವ ತಾಯಿತವನ್ನು ಕಟ್ಟಿಸಿಕೊಳ್ಳುವುದು ಕಂಡುಬರುತ್ತದೆ. ಹಿಂದುಗಳಂತೆ ಮುಸಲ್ಮಾನರು ಸಹ ತಮ್ಮ ಮಕ್ಕಳಿಗೆ ಈ ದೇವಾಲಯದ ತಾಯಿತವನ್ನು ಕಟ್ಟಿಸಿಕೊಳ್ಳುತ್ತಾರೆ.

ಅಂತೆಯೇ ಮೈಸೂರು ನಗರದ ತೊಣಚಿಕೊಪ್ಪಲಿನಲ್ಲಿರುವ ಬಿಸಿಲು ಮಾರಮ್ಮ ದೇವಾಲಯದಲ್ಲಿ, ಬಿಸಿಲು ಮಾರಮ್ಮ ಜಾತ್ರಾ ಮಹೋತ್ಸವಕ್ಕೆ ತಾಯಿತ ಮಾರಾಟ ಮಾಡುವವರು ಬರುತ್ತಾರೆ. ಇದರ ವಿಶೇಷವೆಂದರೆ ತಾಯಿತವನ್ನು ತಾಮ್ರದ ಹಾಳೆಯಿಂದಾಗಲಿ ಅಥವಾ ಕಾಗದದ ಚೂರುಗಳಿಂದಾಗಲಿ ತಯಾರಿಸುವುದಿಲ್ಲ. ಬದಲಾಗಿ ಒಂಬತ್ತು ವಸ್ತುಗಳ ಪುಡಿಗಳನ್ನು ಲೋಹದ ಕೊಳವೆಯಲ್ಲಿ ತುಂಬಿರುತ್ತಾರೆ. ಆ ವಸ್ತುಗಳನ್ನು 'ಸರಕು' ಎಂದು ಕರೆಯುತ್ತಾರೆ ಎಂದು ಅಲ್ಲಿಯ ವ್ಯಾಪಾರಸ್ಥರಾದ ನಟರಾಜ್‌ರವರು ವಿವರಿಸುತ್ತಾರೆ. ಅಲ್ಲದೆ ಈ ಜಾತ್ರೆ ಮುಗಿದ ಮೇಲೆ ಬೇರೆ ಕಡೆ ಹೋಗುತ್ತಾರೆ. ಬೇರೆ ಸಮಯದಲ್ಲಿ ಈ ದೇವಾಲಯದಲ್ಲಿ ತಾಯಿತ ದೊರೆಯುವುದಿಲ್ಲ. ಇದೇ ಮಾದರಿಯಲ್ಲಿ ಮೈಸೂರು ನಗರದ ಇನ್ನು ಹಲವಾರು ದೇವಾಲಯಗಳಲ್ಲಿ ತಾಯಿತ ಕಟ್ಟಿಸಿಕೊಳ್ಳುವ ಪದ್ಧತಿಯನ್ನು ಕಾಣಬಹುದಾಗಿದೆ.

**ಆಣೆ–ಪ್ರಮಾಣಗಳು** : ಆಣೆ–ಪ್ರಮಾಣಗಳಿಗೂ ನೀತಿ ಸತ್ಯ ಧರ್ಮಗಳಿಗೂ ನಿಕಟ ನಂಟಿದೆ. ಇವುಗಳನ್ನು ಶುಲ್ಕ ವಿಧಿವತ್ತಾಗಿ ನಡೆಸಿಕೊಂಡು ಬರಬೇಕು ಎಂಬ ಹಿನ್ನೆಲೆಯಲ್ಲಿಯೇ ಆಣೆ–ಪ್ರಮಾಣಗಳೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ. ಗ್ರಾಮಗಳು ಯಾವುದಾದರೂ ವ್ಯಾಜ್ಯಕ್ಕಿಳಿದರೆ ತಪ್ಪು ಮಾಡಿದವನನ್ನು ದೇವಸ್ಥಾನಕ್ಕೆ ಕರೆತಂದು, ಕರ್ಪೂರ ಹಚ್ಚಿ ತಪ್ಪು ಮಾಡಿಲ್ಲ ಅಂತ ಹೇಳಿಬಿಡು  ನಾವು ಬಿಟ್ಟು ಬಿಡುತ್ತೇವೆ ಎಂದು ಪ್ರಮಾಣ ಮಾಡಿಸುತ್ತಾರೆ. ದೇವರ ಪೋಟೋ, ಕ್ಷುದ್ರ ದೇವತೆಗಳು, ಮನೆದೇವರುಗಳ ಮೇಲೆ ಆಣೆ ಇಟ್ಟು ಪ್ರಮಾಣ ಮಾಡುವುದುಂಟು. ಉತ್ತನಹಳ್ಳಿಯ ಲಕ್ಷ್ಮಿಗುಡಿಯಲ್ಲಿ ಅದೇ ಗ್ರಾಮದ ನ್ಯಾಯಪಂಚಾಯಿತಿ ನಡೆಯುತ್ತದೆ. ಅಲ್ಲಿ ಈ ಆಣೆ ಪ್ರಮಾಣಗಳು ಮಾಡುವುದನ್ನು ಇಂದಿಗೂ ಕಾಣಬಹುದಾಗಿದೆ. ಇಂದು ರಾಜಕೀಯ ಪಕ್ಷಗಳ ಮುಖಂಡರು ಪ್ರತಿನಿತ್ಯ ಮಾದ್ಯಮಗಳ ಮುಂದೆ ಧರ್ಮಸ್ಥಳದ ಶ್ರೀ

ಮಂಜುನಾಥನ ಮುಂದೆ ಆಣೆ ಪ್ರಮಾಣ ಮಾಡಲು ಆಹ್ವಾನಿಸುತ್ತಿರುತ್ತಲೆ ಇರುತ್ತಾರೆ. ಇದು ಅವರು ಆಣೆ ಪ್ರಮಾಣದ ಮೇಲೆ ಇಟ್ಟಿರುವ ನಂಬಿಕೆಯಾಗಿದೆ. ಇಂದು ಈ ರೀತಿಯ ಆಣೆ ಪ್ರಮಾಣಗಳಲ್ಲಿ ಜನರಿಗೆ ನಂಬಿಕೆ ಇಲ್ಲವಾಗುತ್ತಿದೆ.

**ತಪ್ಪುಕಾಣಿಕೆ** : ವ್ಯಕ್ತಿ, ಕುಟುಂಬ ಅಥವಾ ಗುಂಪು ಮಾಡಿದ ತಪ್ಪಿಗಾಗಿ ಅನುಸರಿಸುವ ಪ್ರಾಯಶ್ಚಿತವಾಗಿ ನೀಡುವ ಕಾಣಿಕೆಯೇ ತಪ್ಪುಕಾಣಿಕೆ. ಈ ಬಗ್ಗೆ ಇರುವ ನಂಬಿಕೆಗಳು ಕರ್ನಾಟಕದಲ್ಲಿ ಮಾತ್ರವಲ್ಲದೆ ಜಗತ್ತಿನಾದ್ಯಂತ ಪ್ರಾಚೀನ ಕಾಲದಿಂದಲೂ ಹಬ್ಬಿಕೊಂಡು ಬಂದಿರುತ್ತವೆ. ಒಂದೊಂದು ಜನಾಂಗದವರಲ್ಲಿಯೂ ಅವರವರದೇ ಆದ ಭಾಷೆಯಲ್ಲಿ ತಪ್ಪುಕಾಣಿಕೆ ವಿಶ್ಲೇಷಣೆ ಮಾಡಲಾಗಿದೆ. ಕರ್ನಾಟಕದಲ್ಲಿ ಜನಪದರು ಕನ್ನಡದಲ್ಲಿ ತಪ್ಪುಕಾಣಿಕೆಯನ್ನು ಬಳಸಿಕೊಂಡು ಬಂದಿರುತ್ತಾರೆ. ಸಾಮಾನ್ಯವಾಗಿ ಮನುಷ್ಯ ಒಂದಲ್ಲ ಒಂದು ತಪ್ಪುಗಳನ್ನು ತನ್ನ ದಿನನಿತ್ಯದ ಬದುಕಿನಲ್ಲಿ ಎಸಗುತ್ತಲೇ ಮುನ್ನಡೆಯುತ್ತಿರುತ್ತಾನೆ. ತಪ್ಪು ಮಾಡದೇ ಇರುವಂತಹ ಮನುಷ್ಯನೇ ಈ ಧರೆಯ ಮೇಲೆ ಇಲ್ಲ. ಸುರರಿಂದ ಹಿಡಿದು ಹುಲು ಮಾನವನವರೆಗೆ ತಪ್ಪುಗಳ ಸುಳಿಗಳು ಸುತ್ತಿಕೊಳ್ಳುತ್ತಿರುತ್ತವೆ. ಆದರೆ ಸಮಾಜದ ಮಿತಿಯೊಳಗೆ ಬದುಕುವ ಮನುಷ್ಯ ಕೆಲವು ಕಟ್ಟು ಪಾಡುಗಳಿಗೆ ಬದ್ಧನಾಗಿರಬೇಕಾಗುತ್ತದೆ.

ಜನಪದರಲ್ಲಿ ಬೇರೆ ಬೇರೆ ರೀತಿಯಾಗಿ ತಪ್ಪುಕಾಣಿಕೆ ಕಟ್ಟಿಕೊಳ್ಳುವ ಪದ್ಧತಿಯು ಅಸ್ಥಿತ್ವದಲ್ಲಿದೆ. ಆಸ್ತಿಕರು ದೇವರಲ್ಲಿ ದೃಢವಾದ ನಂಬಿಕೆ ಇಟ್ಟಿರುತ್ತಾರೆ. ಯಾವುದೇ ಕಷ್ಟ ಸುಖಗಳಿಗೂ ದೈವವೆ ಕಾರಣ ಎಂದು ನಂಬಿರುವರು. ಇದರ ಪರಿಹಾರವಾಗಿ ನಾಲ್ಕಾಣೆ ಪಾವಲಿಯನ್ನು ಅರಿಶಿಣ ಬಟ್ಟೆಗೆ ಕಟ್ಟಿಕೊಂಡು ಅದನ್ನೇ ಅರಳಿಮರದ ಕೊಂಬೆಗೆ ಕಟ್ಟಿ ಕ್ಷಮಿಸು ದೇವರೆ ಎಂದು ಬೇಡಿಕೊಂಳ್ಳುವರು. ಕೆಲವರು ದೇವರ ಹುಂಡಿಗೆ ಇಂತಿಷ್ಟು ಕಾಣಿಕೆಯೆಂದು ಹಣವನ್ನು ಹಾಕಿ ಪಾಪ ಪರಿಹಾರ ಮಾಡೆಂದು ದೇವರಲ್ಲಿ ಪ್ರಾರ್ಥಿಸುವರು.

ಒಟ್ಟಾರೆಯಾಗಿ ಮೈಸೂರು ನಗರದಾದ್ಯಂತ ಧಾರ್ಮಿಕ ಹಿನ್ನೆಲೆಯಿಂದ ಜನಪದರ ಹಲವಾರು ಸಾಮಾಜಿಕ ಸಂಪ್ರದಾಯಗಳನ್ನು ಪಾರಂಪರಿಕ ದೇವಾಲಯಗಳಲ್ಲಿ ಪ್ರತಿನಿತ್ಯ ಒಂದಲ್ಲಾ ಒಂದು ವಿಶಿಷ್ಟತೆಗಳನ್ನು ಒಳಗೊಂಡಿರುವುದನ್ನು ಕಾಣುತ್ತೇವೆ. ಇದಕ್ಕೆ ಮುಖ್ಯವಾಗಿ ಪಾರಂಪರಿಕವಾಗಿ ಬೆಳೆದು ಬಂದಿರುವ ನಂಬಿಕೆಯೇ ಮೂಲ ಕಾರಣವಾಗಿದೆ. ಅದರಿಂದಾಗಿ ಸಂಪ್ರದಾಗಳೆಲ್ಲವು ಹುಟ್ಟಿಕೊಂಡು, ಅವುಗಳೇ ಆಚರಣೆಯ ರೂಪವನ್ನು ಪಡೆದುಕೊಂಡಿವೆ. ಇಂದು ವಿಜೃಂಭಣೆಯಿಂದ ಹೊರಹೊಮ್ಮಿರುವುದನ್ನು ಕಾಣುತ್ತೇವೆ. ಹಬ್ಬ–ಜಾತ್ರೆ, ಉತ್ಸವ, ನಂಬಿಕೆ, ಆಚರಣೆಗಳು, ವಿಧಿ–ನಿಷೇಧಗಳು ಸಾಮಾಜಿಕವಾಗಿರುವ ಸಂಪ್ರದಾಯಗಳ ಬದ್ರ

ಬುನಾದಿಯಾಗಿ ಜನಸಮುದಾಯದ ಒಳಿತಿಗಾಗಿ, ಸೌಹಾರ್ದತೆಗಾಗಿ ಇರುವುದೆಂಬುದನ್ನು ದೃಢಪಡಿಸಿ, ಸಾಂಸ್ಕೃತಿಕವಾಗಿ ವೈವಿಧ್ಯಮಯವಾದ ಮೆರುಗನ್ನು ನೀಡಿ ಉತ್ತಮ ಸಮಾಜದ ನಿರ್ಮಾಣಕ್ಕೆ ಸಹಕಾರಿಯಾಗುವುದಲ್ಲದೆ, ಜಾನಪದೀಯ ಅಂಶಗಳು ಹಿಂದಿನಿಂದ ಬೆಳೆದು ಬಂದಿರುವುದರ ಕುರುಹಾಗಿ ಆಚರಣೆಗೊಳ್ಳುತ್ತಿವೆ.

# ಕೊನೆ ಟಿಪ್ಪಣಿಗಳು

1. ರಾಗೌ ಮತ್ತು ಎಂ.ಸಿ.ವಸಂತಕುಮಾರ್, ಜನಪದ ನಂಬಿಕೆಗಳು, ಪು.ಸಂ–8.
2. ಎ.ವಿ.ನಾವಾಡ, ಜನಪದ ಸಾಹಿತ್ಯದರ್ಶನ, ಪು.ಸಂ–16.
3. ಪ್ರೊ.ಡಿ.ಲಿಂಗಯ್ಯ, ಡಾ.ಕೆ.ಆರ್.ಸಂಧ್ಯಾರೆಡ್ಡಿ, ಜಾನಪದ; ಸ್ವರೂಪ ಮತ್ತು ಸಾಹಿತ್ಯ, ಪು.ಸಂ–26.
4. ಡಾ.ದೇ.ಜವರೇಗೌಡ, ಜಾನಪದ ಅಧ್ಯಯನ, ಪು.ಸಂ–293.
5. ಎ.ವಿ.ನಾವಾಡ, ಜಾನಪದ ಸಾಹಿತ್ಯ ದರ್ಶನ, ಪು.ಸಂ–17
6. ವಕ್ತೃ; ಶಿವಣ್ಣ, ವ್ಯವಸಾಯ, 60ವರ್ಷ, ಕನ್ನೇಗೌಡನ ಕೊಪ್ಪಲು.
7. ಸನಾತನ ಧರ್ಮಗ್ರಂಥ.
8. ಸ್ವಾಮಿ.ಬಿ.ಜಿ.ಎಲ್, ಶಾಸನಗಳಲ್ಲಿ ಗಿಡಮರಗಳು, ಪು.ಸಂ–33.
9. ಭಾರತಿಯ ಕಲೆಗಳಲ್ಲಿ ಸಂಕೇತಗಳು, ಪು.ಸಂ–203.
10. ನರಬಲಿ ಒಂದು ಸಾಂಸ್ಕೃತಿಕ ಅಧ್ಯಯನ, ಪು.ಸಂ–49.
11. ಡಾ.ಸಿದ್ಧಲಿಂಗಯ್ಯ, ಗ್ರಾಮದೇವತೆಗಳು, ಪು.ಸಂ–71.
12. ಅದೇ, ಪು.ಸಂ–71.
13. ಕರ್ನಾಟಕ ಪರಂಪರೆ, ಸಂ–1, ಪು.ಸಂ–629.
14. ಡಾ.ಅರವಿಂದ ಮಾಲಗತ್ತಿ(ಪ್ರ.ಸಂ), ಕನ್ನಡ ವಿಷಯ ವಿಶ್ವಕೋಶ–ಜಾನಪದ, ಪು.ಸಂ–391.
15. ದೇವೇಂದ್ರ ಕುಮಾರ ಹಕಾರಿ, ಜಾನಪದ ಸಾಹಿತ್ಯ ದರ್ಶನ10, ಪು.ಸಂ–26–27.
16. ವಿಜಯ ಕರ್ನಾಟಕ, ದಿನಾಂಕ:09.07.2018, ಮೈಸುರು, ಪು.ಸಂ–4.
17. ಡಾ.ಎಸ್.ಶ್ರೀಕಂಠಶಾಸ್ತ್ರೀ, ಸಂಶೋಧನ ಲೇಖನಗಳು, ಪು.ಸಂ–1975.
18. ಬೋರಲಿಂಗಯ್ಯ.ಹಿ.ಚಿ, ಕರ್ನಾಟಕ ಜನಪದ ಕಲೆಗಳ ಕೋಶ, ಪು.ಸಂ–140.
19. ಡಾ.ಸಿದ್ಧಲಿಂಗಯ್ಯ, ಗ್ರಾಮದೇವತೆಗಳು, ಪು.ಸಂ–219.
20. ಡಾ.ಎಂ.ಬಿ.ನೇಗಿನಹಾಳ, ಜಾನಪದ ಸಾಹಿತ್ಯ ದರ್ಶನ–23 ಜನಪದ ನಂಬಿಕೆಗಳು, ಪು.ಸಂ–65.
21. ಅಂಬಳಿಕೆ ಹಿರಿಯಣ್ಣ, ಜಾನಪದ ವೀಕ್ಷಣೆ, ಪು.ಸಂ–20.
22. ಡಾ.ವಿಜಯಶ್ರೀ ಸಬರದ, ಜಾನಪದ ಮತ್ತು ಮಹಿಳೆ, ಪು.ಸಂ–20.

23. ಡಾ.ಎಂ.ಚಿದಾನಂದಮೂರ್ತಿ, ಜನ–ಜನಪದ–ಜಾನಪದ, ಪು.ಸಂ–205.

24. ಚಿದಾನಂದಮೂರ್ತಿ, ಜಾನಪದ ಸಾಹಿತ್ಯ ದರ್ಶನ, ಭಾಗ–10, ಪು.ಸಂ–56.

25. ಎಂ.ಚಿದಾನಂದಮೂರ್ತಿ, ಕರ್ನಾಟಕ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.ಸಂ–192.

26. ಡಾ.ಎಸ್.ಶ್ರೀಕಂಠಶಾಸ್ತ್ರೀ, ಸಂಶೋಧನ ಲೇಖನಗಳು, ಪು.ಸಂ–296

27. ರಾಜಯೋಗಿನಿ.ಬಿ.ಕೆ.ಲಕ್ಷ್ಮೀಜಿ, ಮುಖ್ಯ ಸಂಚಾಲಕರು, ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿವಿ, ಮೈಸೂರು ಉಪವಲಯ.

28. ಎನ್.ಎನ್.ಚಿಕ್ಕಮಾದು, ಹುಣಸೂರು ತಾಲ್ಲೂಕಿನ ನಂಬಿಕೆಗಳು ಮತ್ತು ಸಂಪ್ರದಾಯಗಳು: ಒಂದು ಸಾಂಸ್ಕೃತಿಕ ಅಧ್ಯಯನ, ಪು.ಸಂ–145,146.

29. ಡಾ.ಎಚ್.ತಿಪ್ಪೇರುದ್ರಸ್ವಾಮಿ(ಸಂ), ಮಲೆನಾಡ ಜಾನಪದ, ಪು.ಸಂ–130.

30. ಎನ್.ಆರ್.ನಾಯಕ, ಕರ್ನಾಟಕ ಜಾತ್ರೆಗಳು, ಪು.ಸಂ–162.

31. ದೇ.ಜವರೇಗೌಡ, ಜಾನಪದ ಮಹಾಸಂಪುಟ, ಪು.529.

32. ಪ್ರೊ.ಪಿ.ವಿ.ನಂಜರಾಜ ಅರಸು, ಮೈಸೂರು ನೂರಿನ್ನೂರು ವರ್ಷಗಳ ಹಿಂದೆ, ಪು.ಸಂ–135.

33. ವಕ್ತೃ: ಹಾಲಿನ ನಾರಾಯಣ(ಲೋಲಪ್ಪ), ಕ್ಯಾತಮಾರನಹಳ್ಳಿ ಗ್ರಾಮದ ಮುಖಂಡರು.

34. ಡಾ.ಶೆಲ್ವಪಿಳ್ಳೈ ಅಯ್ಯಂಗಾರ್, ಧಾರ್ಮಿಕ ಚಿಂತಕರು, ಮೈಸೂರು ಮಿತ್ರ ದಿನಪತ್ರಿಕೆ, ದಿನಾಂಕ–17.09.2014.

35. ನಾಗರಾಜ ನಕ್ಷತ್ರಿ, ಆಧ್ಯಾತ್ಮಿಕ ಚಿಂತಕ, ಮೈಸೂರು ಮಿತ್ರ ದಿನಪತ್ರಿಕೆ, ದಿನಾಂಕ:17.09.2014.

36. ಕೆ.ಎಸ್.ರಂಗಪ್ಪ (ಪ್ರ.ಸಂ), ಮೈಸೂರು ದರ್ಶನ, ಭಾಗ–1, ಪು.ಸಂ–62.

37. ಜಿ.ವೆಂಕಟಸುಬ್ಬಯ್ಯ, ಸಂಕ್ಷಿಪ್ತ ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಪು.ಸಂ–918.

38. ಡಾ.ಅರವಿಂದ ಮಾಲಗತ್ತಿ(ಪ್ರ.ಸಂ), ಕನ್ನಡ ವಿಷಯ ವಿಶ್ವಕೋಶ –ಜಾನಪದ, ಪು.ಸಂ–1216.

39. ಗೊ.ರು.ಚನ್ನಬಸಪ್ಪ(ಸಂ), ಗ್ರಾಮಜ್ಯೋತಿ, ಪು.ಸಂ–264.

40. ಮಹಾದೇವ ಶಂಕನಪುರ, ಮಾರಿಹಬ್ಬಗಳು, ಪು.ಸಂ–136.

41. ಡಾ.ಎಂ.ಎಂ.ಕಲಬುರ್ಗಿ, ಜಾನಪದ ಮಾರ್ಗ, ಪು.ಸಂ–59.

42. ದೇ.ಜವರೇಗೌಡ, ಜಾನಪದ ಮಹಾಸಂಪುಟ, ಪು.ಸಂ–404.

43. ಡಾ.ಅರವಿಂದ ಮಾಲಗತ್ತಿ(ಪ್ರ.ಸಂ), ಕನ್ನಡ ವಿಷಯ ವಿಶ್ವಕೋಶ–ಜಾನಪದ, ಪು.ಸಂ–381.
44. ದೇ.ಜವರೇಗೌಡ, ಜಾನಪದ ಮಹಾಸಂಪುಟ, ಪು.ಸಂ–374.
45. ಬೆನಗಲ್ ರಾಮರಾವ್ ಮತ್ತು ಪಾನ್ಯಂ ಸುಂದರಶಾಸ್ತ್ರಿ, ಪುರಾಣನಾಮ ಚೂಡಾಮಣಿ, ಪು.ಸಂ–316.
**46**. ಸತ್ಯವತಿ ಆಧ್ಯ, ಪೂಜಾ ವೃಕ್ಷಗಳು, ಪು.ಸಂ–45.
47. ಅದೇ, ಪು.ಸಂ–22.
48. ಪತ್ರಿಕೆ ವಿಜಯಕರ್ನಾಟಕ, ಬೋಧಿವೃಕ್ಷ, ದಿನಾಂಕ:02.01.2016, ಪು.ಸಮ–8.
49. ಸತ್ಯವತಿ ಆಧ್ಯ, ಪೂಜಾ ವೃಕ್ಷಗಳು, ಪು.ಸಂ–9.
50. ಕ್ಯಾತನಹಳ್ಳಿ ರಾಮಣ್ಣ, ಜಾನಪದ ವಿಹಾರ, ಪು.ಸಂ–83,84.
51. ಡಾ.ಅರವಿಂದ ಮಾಲಗತ್ತಿ(ಪ್ರ.ಸಂ), ಕನ್ನಡ ವಿಷಯ ವಿಶ್ವಕೋಶ–ಜಾನಪದ, ಪು.ಸಂ–846.
52. ಕ್ಯಾತನಹಳ್ಳಿ ರಾಮಣ್ಣ, ಜಾನಪದ ವಿಹಾರ, ಪು.ಸಂ–83,85.
53. ಚನ್ನಣ್ಣವಾಲಿಕಾರ, ಜಾನಪದ ಸಾಹಿತ್ಯ ದರ್ಶನ–10. ಪು.ಸಂ–92.
54. ವಿಜಯ ಕರ್ನಾಟಕ, ದಿನಪತ್ರಿಕೆ, ದಿನಾಂಕ:18.12.2015, ಪು.ಸಂ–4.

# ಅಧ್ಯಾಯ–6

## ಪಾರಂಪರಿಕ ದೇವಾಲಯಗಳ ಆಡಳಿತ ಮತ್ತು ಆರ್ಥಿಕತೆ

ಯಾವುದೇ ಒಂದು ನಿರ್ದಿಷ್ಟ ಪ್ರದೇಶದ ಜೀವನ ಕ್ರಮವನ್ನು ಅರಿಯಬೇಕಾದರೆ ಅಲ್ಲಿನ ಆಡಳಿತ ವೈಖರಿ ಮತ್ತು ಆರ್ಥಿಕ ವ್ಯವಸ್ಥೆ ಬಹಳ ಮುಖ್ಯವಾದುದಾಗುತ್ತದೆ. ಒಂದು ಸಾಮ್ರಾಜ್ಯದ ಯಶಸ್ಸಿಗೆ ಸುಭದ್ರ ಆಡಳಿತ ಕಾರಣವಾಗಬಲ್ಲದು. ಅಂತೆಯೇ ಇಂದಿನ ಸರ್ಕಾರದ ಆಡಳಿತ ಉತ್ತಮವಾಗಿದ್ದರೆ ಅದರಿಂದ ಸಮಾಜದ ಕಲ್ಯಾಣವಾಗುತ್ತದೆ. ಹೀಗೆ ಒಂದು ನಿರ್ದಿಷ್ಟ ಪ್ರದೇಶದಲ್ಲಿರುವ ಪಾರಂಪರಿಕ ದೇವಾಲಯಗಳಿಗೆ ಸಂಬಂಧಿಸಿದಂತೆ ಆಡಳಿತ ಮತ್ತು ಆರ್ಥಿಕತೆಯು, ದೇವಾಲಯಗಳ ಸಾಮಾಜಿಕ ಹಾಗೂ ಸಾಂಪ್ರದಾಯಿಕವಾಗಿ ಅಭಿವೃದ್ಧಿಯನ್ನು ಹೊಂದಲು ಪ್ರಮುಖ ಪಾತ್ರವಹಿಸುತ್ತವೆ. ಮೈಸೂರು ನಗರದಲ್ಲಿರುವ ಪಾರಂಪರಿಕ ದೇವಾಲಯಗಳೂ ಕೂಡ ತನ್ನದೇ ಆದ ಆಡಳಿತ ಹಾಗೂ ಆರ್ಥಿಕತೆಯನ್ನು ಹೊಂದಿರುವುದನ್ನು ಕಾಣುತ್ತೇವೆ. ಆಡಳಿತಕ್ಕೆ ಸಂಬಂಧಿಸಿದಂತೆ ಅರಸರು, ಸರ್ಕಾರ, ಸಂಘ ಸಂಸ್ಥೆಗಳು ಹಾಗೂ ಆರ್ಥಿಕತೆಗೆ ಸಂಬಂಧಿಸಿದಂತೆ ದನ ಸಹಾಯ, ದೇಣಿಗೆ, ಹರಕೆ, ಕಾಣಿಕೆ ವಿಲೇವಾರಿಗಳು ಹೀಗೆ ಹತ್ತು ಹಲವಾರು ಅಂಶಗಳು ಈ ನೆಲೆಯಲ್ಲಿ ಕಂಡುಬರುತ್ತವೆ. ಇವೆಲ್ಲವುಗಳನ್ನು ಈ ಕೆಳಗಿನಂತೆ ಅಧ್ಯಯನಕ್ಕೆ ಒಳಪಡಿಸಲಾಗಿದೆ.

### 6.1 ಮುಜರಾಯಿ ಇಲಾಖೆ

**ಮುಜರಾಯಿ ಇಲಾಖೆ** : 1831ರಲ್ಲಿ ಬ್ರಿಟಿಷ್ ಸರ್ಕಾರ ಮೈಸೂರು ರಾಜ್ಯದ ಆಡಳಿತ ಸೂತ್ರವನ್ನು ತನ್ನ ಕೈಗೆ ತೆಗೆದುಕೊಂಡ ಮೇಲೆ, ಅಲ್ಲಿಯ ಮುಜರಾಯಿ ಸಂಸ್ಥೆಗಳು ಮತ್ತು ಸಿಬ್ಬಂದಿಗಳನ್ನು ಕಮಿಷನರ್‌ಗೆ ವರ್ಗಾಯಿಸಲಾಯಿತು. ಅನಂತರ ಅವರ ಆಡಳಿತ ಸಂಸ್ಥೆಗಳನ್ನು ಮೈಸೂರು ಮುಜರಾಯಿ ಸಂಸ್ಥೆಗಳು ಎಂದು ಕರೆಯಲಾಯಿತು. ಆದರೆ ಪ್ರಸನ್ನ ಕೃಷ್ಣಸ್ವಾಮಿ, ವರಹಾಸ್ವಾಮಿ, ಲಕ್ಷ್ಮಿನಾರಾಯಣಸ್ವಾಮಿ, ತಿರುನಾರಾಯಣಸ್ವಾಮಿ ಮತ್ತು ಚಾಮುಂಡೇಶ್ವರಿ ದೇವಸ್ಥಾನಗಳು ಅರಮನೆಯ ಆಡಳಿತಕ್ಕೆ ವರ್ಗಾಯಿಸಲಾಯಿತು. ಉಳಿದ ಸಂಸ್ಥೆಗಳಲ್ಲಿ ಕೆಲವು ಅರಮನೆ ಮತ್ತು ಉಳಿದ ಕೆಲವು ರಾಜ್ಯ ಸರ್ಕಾರದ ಉಸ್ತುವಾರಿಗೂ ಒಳಪಟ್ಟವು. ಆದರೆ ಆಡಳಿತ ವರ್ಗವನ್ನು ಬದಲಿಸದೆ ಹಾಗೇ ಉಳಿಸಿಕೊಳ್ಳಲಾಯಿತು. ಆದರೆ ಅರಮನೆ ಕಂಟ್ರೋಲರ್ ಆಡಳಿತ ಅವ್ಯವಸ್ಥೆಯಿಂದಾಗಿ ಸರ್ಕಾರ ಈ ಎಲ್ಲ ಸಂಸ್ಥೆಗಳ ಆಡಳಿತದ ಮೇಲೆ ತನ್ನ ಹಿಡಿತವನ್ನು ಸ್ಥಾಪಿಸಿತು.[1]

**ಅರಮನೆಯ ಬೊಕ್ಕಸ** : 1864ರಲ್ಲಿ ಅರಮನೆಯ ಖಜಾನೆಯ ವ್ಯವಹಾರಗಳನ್ನು ಸಾಮಾನ್ಯ ಕಛೇರಿಯೊಂದಿಗೆ ವಿಲೀನಗೊಳಿಸಲಾಯಿತು. 1898ರಲ್ಲಿ ಅದನ್ನು ಶಿರಸ್ತೇದಾರನ ಅಧೀನ ಕ್ಕೊಳಪಡಿಸಲಾಯಿತು. ಮತ್ತು ಬೊಕ್ಕಸದ ಅಧಿಕಾರಿಯನ್ನು **'ಖಜಾಂಚಿ'** (ಟ್ರೇಸರರ್) ಎಂದು ಕರೆಯಲಾಯಿತು. 1905ರಿಂದೀಚೆಗೆ ಬೊಕ್ಕಸವನ್ನು ಆಚರಣೆಗಳಾದ ಯುಗಾದಿ, ದಸರಾ, ದೀಪಾವಳಿ, ಗೌರಿ ಮುಂತಾದ ಹಬ್ಬಗಳು, ವರ್ಧಂತಿಗಳು ಸಮಾರಂಭಗಳು ಮುಂತಾದ ಸಂದರ್ಭಗಳಲ್ಲಿ ಹೊಸ ಬಟ್ಟೆಗಳನ್ನು ಒದಗಿಸುವುದು ಇದೇ ಇಲಾಖೆಗೆ ಸೇರಿತ್ತು. ಅರಮನೆಯ ದೇವಾಲಯಗಳ ಬೆಲೆಬಾಳುವ ವಸ್ತುಗಳನ್ನು ಕೂಡ ಈ ಇಲಾಖೆಯೇ ನೋಡಿಕೊಳ್ಳುತ್ತಿತ್ತು.[2]

**ಚಾಮುಂಡಿ ತೊಟ್ಟಿ :** ಇದನ್ನು ಪೂರ್ವದಲ್ಲಿ 'ನಾಮತೀರ್ಥನ ತೊಟ್ಟಿ' ಎಂದು ಕರೆಯಲಾಗುತ್ತಿತ್ತು. ಇದು ಅರಮನೆಗೆ ಸಂಬಂಧಿಸಿದ ಧಾರ್ಮಿಕ ಸಿಬ್ಬಂದಿಗಳನ್ನೊಳಗೊಂಡಿತ್ತು. ಇವರಲ್ಲಿ ಹಲವು ಬಗೆ. ಅರಮನೆಯ ವಿವಿಧ ದೇವರನ್ನು ಪೂಜಿಸುವವರು, ದೇವತಾ ಪೂಜೆಯಲ್ಲಿ ಮಹಾರಾಜರಿಗೆ ಸಹಾಯ ಮಾಡುವವರು. ಅರಮನೆಯ ಪೂಜಾರಿಗಳು, ಜೋಯಿಸರು, ಋತ್ವಿಕರು ಮುಂತಾದವರು ಸೇರಿದಂತೆ ವಿವಿಧ ವಿದ್ವಾಂಸರುಗಳು ಇರುತ್ತಿದ್ದರು. 1868ರಲ್ಲಿ ತೊಂಬತ್ತಾರು ಮಂದಿ ವಿವಿಧ ಧಾರ್ಮಿಕ ಸಿಬ್ಬಂದಿ, 100 ಮಂದಿ ಪಂಡಿತರು, ಹನ್ನೆರಡು ಮಂದಿ ಗೌರವಾನ್ವಿತ ಧಾರ್ಮಿಕ ವ್ಯಕ್ತಿಗಳು ಇದ್ದರು. ಈ ಇಲಾಖೆಯು ಅರಮನೆಯಲ್ಲಿ ನಡೆಯುವ ಉಪಕರ್ಮ, ವರ್ಧಂತಿ ಉತ್ಸವ, ವಿವಾಹಗಳು, ದಸರಾ ಮುಂತಾದ ವಿಶೇಷ ಧಾರ್ಮಿಕ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿತ್ತು. ಕೆಲವು ಧಾರ್ಮಿಕ ಸಮಾರಂಭಗಳು ಮತ್ತು ಹಬ್ಬಹರಿದಿನಗಳ ಸಂದರ್ಭದಲ್ಲಿ ಈ ಇಲಾಖೆ ಅನ್ನ ಸಂತರ್ಪಣೆಯನ್ನು ನಡೆಸುತ್ತಿತ್ತು. ಅನೇಕ ಮಠಗಳು ಇಲ್ಲಿತ್ತು ಮತ್ತು ದೇವಾಸ್ಥಾನಗಳಿಂದ ಬರುತ್ತಿದ್ದ ಪ್ರಸಾದವನ್ನು ಈ ಇಲಾಖೆ ಅರ್ಪಿಸುತ್ತಿತ್ತು.[3]

ಈ ಮೇಲಿನ ಮುಜರಾಯಿ, ಅರಮನೆ ಬೊಕ್ಕಸ ಮತ್ತು ಚಾಮುಂಡಿ ತೊಟ್ಟಿ ಇವುಗಳು ಇಂದಿನ ಧಾರ್ಮಿಕದತ್ತಿ ಹಾಗೂ ಮುಜರಾಯಿ ಇಲಾಖೆ ಮಾಡುತ್ತಿರುವ ಕೆಲಸಗಳನ್ನು ಮಾಡುತ್ತಿದ್ದವು. ಅಂದು ಅರಸರ ಆಡಳಿತ ಇದ್ದುದರಿಂದಾಗಿ ಅರಮನೆ ದೇವಾಲಯಗಳು ಮತ್ತು ಕುಲದೇವತೆ ಚಾಮುಂಡೇಶ್ವರಿ ದೇವಾಲಯವನ್ನು ಮಾತ್ರ ಒಳಗೊಂಡಿತ್ತು. ಆದರೆ ಇಂದು ಮುಜರಾಯಿ ಇಲಾಖೆಯು ಮೈಸೂರು ನಗರದ ಹಲವಾರು ದೇವಾಲಯಗಳನ್ನು ತನ್ನ ಆಡಳಿತಕ್ಕೆ ಒಳಪಡಿಸಿಕೊಂಡಿದೆ. ಅಲ್ಲದೆ ಮುಜರಾಯಿ ಇಲಾಖೆಯು ಕರ್ನಾಟಕ ಸರ್ಕಾರದ ಆಡಳಿತದ ಒಂದು ಶಾಖೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ಸರ್ಕಾರದಿಂದ ದೇವಾಲಯಗಳಿಗೆ

ಅನುದಾನ ದೊರೆಯುತ್ತಿದೆ. ಅರಸರ ಆಡಳಿತಾವಧಿಯಲ್ಲಿ ಅರಮನೆಯ ಬೊಕ್ಕಸದಿಂದ ಅನುದಾನ ಬಿಡುಗಡೆಯಾಗುತ್ತಿತ್ತು. ಇಂದಿನ ಮುಜರಾಯಿ ಇಲಾಖೆ ಧಾರ್ಮಿಕ ಕೆಲಸಕಾರ್ಯಗಳ ನಿರ್ವಹಣೆಗಾಗಿ, ದೇವಾಲಯಗಳ ಅಭಿವೃದ್ಧಿ ಮತ್ತು ಸಂರಕ್ಷಣೆಗಾಗಿ ಯೋಜನೆಗಳನ್ನು ರೂಪಿಸುವ ಹಾಗೂ ಕಾರ್ಯರೂಪಕ್ಕೆ ತರುವ ಸಂಸ್ಥೆಯಾಗಿ ಕೆಲಸ ನಿರ್ವಹಿಸುತ್ತಿದೆ. ಮುಜರಾಯಿ ಇಲಾಖೆಯ ಕೆಲವೊಂದು ಕಾರ್ಯಗಳು ಈ ಕೆಳಕಂಡಂತಿವೆ

**ದೇವಾಲಯದ ಹಣಕಾಸು ವ್ಯವಸ್ಥೆ ನೋಡಿಕೊಳ್ಳುವುದು** : ಮೈಸೂರು ನಗರದ ಮುಜರಾಯಿ ಇಲಾಖೆಗೆ ಒಳಪಡುವ ದೇವಾಲಯಗಳ ಹಣಕಾಸು ವ್ಯವಸ್ಥೆಯನ್ನು ಈ ಇಲಾಖೆ ನೋಡಿಕೊಳ್ಳುತ್ತದೆ. ದೇವಾಲಯದ ಜೀರ್ಣೋದ್ಧಾರಕ್ಕೆ ಮತ್ತು ಸಂರಕ್ಷಣೆಗೆ ಸರ್ಕಾರದಿಂದ ಹಣಬಿಡುಗಡೆ ಮಾಡುವುದು, ಸುಣ್ಣ-ಬಣ್ಣ ಹೊಡೆಸುವುದು ಹಾಗೂ ದೇವಾಲಯಗಳಿಗೆ ಬಂದಂತಹ ಕಾಣಿಕೆ, ಹರಕೆ ರೂಪದ ವಸ್ತುಗಳು, ದೇಣಿಗೆ, ತೆರಿಗೆ, ಶುಲ್ಕ, ವ್ಯಾಪಾರ-ವಾಣಿಜ್ಯ ಮುಂತಾದ ಮುಲಗಳಿಂದ ಬರುವ ಆದಾಯದ ಮೇಲ್ವಿಚಾರಣೆ ಮಾಡುವುದು, ಇದರ ಕಾರ್ಯವಾಗಿದೆ.

**ಹರಕೆ ಮತ್ತು ಕಾಣಿಕೆಗಳ ವಿಲೇವಾರಿ :** ಭಕ್ತರು ಮಾಡಿಕೊಂಡಿರುವ ಹರಕೆಯಿಂದ ಬಂದ ವಸ್ತುಗಳಾದ ವಸ್ತ್ರಗಳನ್ನು ಹರಾಜು ಹಾಕಿ ಅದರಿಂದ ಬಂದ ಆದಾಯವನ್ನು ಸರ್ಕಾರಕ್ಕೆ ಸಲ್ಲಿಸುತ್ತದೆ. ಉದಾಹರಣೆಗೆ : ಚಾಮುಂಡೇಶ್ವರಿ ದೇವಾಲಯಕ್ಕೆ ಪ್ರತಿದಿನ ಸುಮಾರು ನೂರಾರು ರೇಷ್ಮೆ ಸೀರೆಗಳು, ರೇಷ್ಮೆ ಪಂಚೆ, ಶಲ್ಯಗಳು, ಆಭರಣಗಳು ಮುಂತಾದವುಗಳು ಹರಕೆಯ ರೂಪದಲ್ಲಿ ಬರುತ್ತವೆ. ಅವುಗಳನ್ನು ದೇವಿಗೆ ಅರ್ಪಿಸಿ (ತೊಡಿಸಿ) ಅನಂತರ ಪ್ರತಿ ಮಂಗಳವಾರ ಹಾಗೂ ಶುಕ್ರವಾರಗಳಂದು ಹರಾಜು ಮಾಡಲಾಗುತ್ತದೆ. ಈ ಹರಾಜಿನಲ್ಲಿ ಭಕ್ತರು ಭಾಗವಹಿಸಿ ದೇವಿಯ ಆಶೀರ್ವಾದವೆಂದು ಭಾವಿಸಿ ಇಷ್ಟವಾದ ಮತ್ತು ಅವರ ಶಕ್ತಿಗನುಸಾರವಾಗಿ ಹರಾಜಿನಲ್ಲಿ ಭಾಗವಹಿಸಿ ಕೊಂಡುಕೊಳ್ಳುತ್ತಾರೆ. 2018ನೇ ಸಾಲಿನಲ್ಲಿ ಸೀರೆಗಳ ಹರಾಜಿನಲ್ಲಿ ಬಂದ ಆದಾಯ ಒಂದು ಕೋಟಿ ಎಂಬ ಮಾಹಿತಿಯನ್ನು ಚಾಮುಂಡೇಶ್ವರಿ ದೇವಾಲಯದ ಆಡಳಿತ ಮಂಡಳಿ ತಿಳಿಸಿದೆ. ಅಂತೆಯೆ ಭಕ್ತರು ದೇವರಿಗೆ ಸಮರ್ಪಿಸಿದ ಹಣಕಾಸಿನ ಕಾಣಿಕೆಯನ್ನು ಲೆಕ್ಕಾಚಾರ ಹಾಕಿಸಿ ಬಂದಿರುವ ಆದಾಯವನ್ನು ಸರ್ಕಾರಕ್ಕೆ ತಲುಪಿಸುವುದು ಮುಜರಾಯಿ ಇಲಾಖೆಯ ಜವಾಬ್ದಾರಿಗಳಲ್ಲಿ ಪ್ರಮುಖವಾದುದಾಗಿದೆ.

**ಪೂಜಾರಿಗಳ ನೇಮಕ :** ಮೈಸೂರು ನಗರದ ಮುಜರಾಯಿ ಇಲಾಖೆಗೆ ಒಳಪಟ್ಟಿರುವ ದೇವಾಲಯಗಳಿಗೆ ಪೂಜಾರಿಗಳ ನೇಮಕವನ್ನು ಮಾಡುವ ಜವಾಬ್ದಾರಿಯನ್ನು ಹೊಂದಿದ್ದು,

ಸಮಾನತೆಯನ್ನು ತರುವ ಉದ್ದೇಶದಿಂದ ಕಾನೂನನ್ನು ತಂದು ನೇಮಕ ಮಾಡಿಕೊಳ್ಳಲಾಗುತ್ತಿದೆ. ಅಲ್ಲದೆ ಅವರಿಗೆ ಸಂಬಳವನ್ನು ಇಲಾಖೆಯೆ ನೀಡುತ್ತಿದೆ. ದೇವಾಲಯದ ಆಡಳಿತಕ್ಕೆ ಸಂಬಂಧಿಸಿದ ನೌಕರರನ್ನು ನೇಮಕ ಮಾಡಿಕೊಳ್ಳುವ ಜವಾಬ್ದಾರಿಯನ್ನು ಈ ಇಲಾಖೆಯೆ ಹೊಂದಿದೆ.

**ಮೂಲ ಸೌಲಭ್ಯಗಳ ವ್ಯವಸ್ಥೆ ಮಾಡುವುದು :** ದೇವಾಲಯಗಳಿಗೆ ಮತ್ತು ಭಕ್ತರಿಗೆ ಬೇಕಾಗಿರುವ ಮೂಲಭೂತ ಸೌಕರ್ಯಗಳ ವ್ಯವಸ್ಥೆಯನ್ನು ಮುಜರಾಯಿ ಇಲಾಖೆಯೇ ಮಾಡ ಬೇಕಾಗಿರುವುದರಿಂದ ಕುಡಿಯುವ ನೀರು, ನೆರಳಿನ ವ್ಯವಸ್ಥೆ, ಶೌಚಾಲಯ, ಪಾದರಕ್ಷೆಗಳ ಸ್ಟ್ಯಾಂಡ್ ಮುಂತಾದ ಮೂಲ ಸೌಲಭ್ಯಗಳಿಗೆ ಟೆಂಡರ್ ಕರೆದು ವ್ಯವಸ್ಥೆ ಮಾಡಿಕೊಡುತ್ತದೆ.

**ವ್ಯಾಪಾರ ವಹಿವಾಟು :** ದೇವಾಲಯಗಳಲ್ಲಿ ಪ್ರಸಾದ ಮಾರಾಟ ಕೇಂದ್ರವನ್ನು ತೆರೆದು ತೀರ್ಥ ಪ್ರಸಾದ, ಲಾಡು, ಕಲ್ಲುಸಕ್ಕರೆ, ಪಂಚಕಜ್ಜಾಯ ಮುಂತಾದ ವಸ್ತುಗಳನ್ನು ಮಾರಾಟ ಮಾಡುವ ವ್ಯವಸ್ಥೆಯನ್ನು ಮಾಡುವುದು ಮತ್ತು ದೇವಾಲಯದ ಸುತ್ತ ಅಥವಾ ಅಕ್ಕ ಪಕ್ಕದಲ್ಲಿ, ದೇವಾಲಯಕ್ಕೆ ಸೇರಿದ ಕಟ್ಟಡಗಳಲ್ಲಿ ಪೂಜಾ ಸಾಮಾಗ್ರಿಗಳು, ಆಟಿಕೆಗಳು, ಹೋಟೆಲ್ ಮುಂತಾದ ವ್ಯಾಪಾರವಹಿವಾಟಿಗೆ ಸಂಬಂಧಿಸಿದಂತೆ ಇರುವ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಟ್ಟು ಅದಕ್ಕೆ ಪ್ರತಿಯಾಗಿ ಶುಲ್ಕ ವಸೂಲಿ ಮಾಡುವುದು ಕೂಡ ಇವರದೆ ಹೊಣೆಗಾರಿಕೆ ಆಗಿರುತ್ತದೆ.

**ಪಾರಂಪರಿಕತೆಯನ್ನು ಸಂರಕ್ಷಿಸುವುದು :** ಹಿಂದಿನಿಂದಲೂ ಬಂದಿರುವ ಕೆಲವೊಂದು ಪಾರಂಪರಿಕ ನಂಬಿಕೆ ಆಚರಣೆಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಉದ್ದೇಶದಿಂದ ಮತ್ತು ಜೀರ್ಣೋದ್ಧಾರದೊಂದಿಗೆ ಹಳೆತನವನ್ನು ಉಳಿಸುವ ಪ್ರಯತ್ನವನ್ನೂ ಮಾಡುತ್ತದೆ. ಇದರ ಜೊತೆಗೆ ದೇವಾಲಯದ ಸ್ವಚ್ಚತೆಯನ್ನು ಕಾಪಾಡುವ ಗುರಿಯನ್ನು ಹೊಂದಿದೆ.

**ಆಭರಣಗಳ ಸಂರಕ್ಷಣೆ :** ದೇವಾಲಯಗಳಲ್ಲಿ ದೇವರ ಮೂರ್ತಿಗೆ ತೊಡಿಸುವ ಕೆಲವೊಂದು ಆಭರಣಗಳನ್ನು ತನ್ನ ವಶದಲ್ಲಿಯೇ ಇರಿಸಿಕೊಂಡಿದ್ದು ದೇವರ ಉತ್ಸವ, ಹಬ್ಬ ಹರಿದಿನಗಳಂತಹ ಪ್ರಮುಖ ದಿನಗಳಲ್ಲಿ ಮಾತ್ರ ದೇವರಿಗೆ ತೊಡಿಸಲು ಆಭರಣಗಳನ್ನು ತಂದು ಕೊಟ್ಟು, ಅನಂತರ ಪುನಃ ತನ್ನ ವಶಕ್ಕೆ ಪಡೆದು ಜೋಪಾನವಾಗಿ ಸಂರಕ್ಷಿಸುವ ಹೊಣೆಯನ್ನು ಮುಜರಾಯಿ ಇಲಾಖೆ ನಿರ್ವಹಿಸುತ್ತದೆ.

**ದಾಖಲೆಗಳ ನಿರ್ವಹಣೆ :** ದೇವಾಲಯದಲ್ಲಿ ನಡೆಯುವ ಪ್ರತಿಯೊಂದು ಕೆಲಸ ಕಾರ್ಯಗಳ ದಾಖಲಾತಿಯನ್ನು ನಿರ್ವಹಣೆ ಮಾಡುವ ಜವಾಬ್ದಾರಿಯನ್ನು ಮುಜರಾಯಿ ಇಲಾಖೆ

ನಿರ್ವಹಿಸುತ್ತದೆ. ಇದರಿಂದಾಗಿ ಅಂದಾಜು ಆಯವ್ಯಯ ತಯಾರಿಸಲು, ಸರ್ಕಾರದಿಂದ ಅನುದಾನ ಪಡೆಯಲು, ಇಂದಿನ ಆಚರಣಾ ಪದ್ಧತಿಗಳ ದಾಖಲಾತಿಯಿಂದಾಗಿ ಮುಂದಿನ ಪೀಳಿಗೆಗೆ ಅದರ ಅರಿವು ಮೂಡಿಸಲು ಅಥವಾ ಸಾಕ್ಷಿಗಳಾಗಿ ದಾಖಲಾತಿಗಳು ಸಹಾಯ ಮಾಡುತ್ತವೆ. ಇಂದಿನ ಘಟನೆಗಳು ನಾಳಿನ ಇತಿಹಾಸವಾಗಿ ಉಳಿದುಕೊಳ್ಳುತ್ತವೆ ಅದಕ್ಕೆ ಈ ದಾಖಲಾತಿ ಪ್ರಮುಖ ಆಕರವಾಗುತ್ತದೆ.

ಒಟ್ಟಾರೆಯಾಗಿ ಮುಜರಾಯಿ ಇಲಾಖೆಯು ಮೈಸೂರು ನಗರದ ದೇವಾಲಯಗಳ ಪಾರಂಪರಿಕತೆಯನ್ನು ಉಳಿಸುವಲ್ಲಿ ಮತ್ತು ಸಂರಕ್ಷಿಸುವಲ್ಲಿ ಪ್ರಮುಖ ಪಾತ್ರವಹಿಸುವುದಲ್ಲದೆ, ಜೀರ್ಣೋದ್ಧಾರ, ಹಣಕಾಸು ವ್ಯವಸ್ಥೆ, ಅನ್ನದಾಸೋಹ, ಹಬ್ಬ-ಹರಿದಿನಗಳು, ಉತ್ಸವಗಳು ಮುಂತಾದ ಸಂದರ್ಭಗಳಲ್ಲಿ ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತದೆ.

**ಮುಜರಾಯಿ ಇಲಾಖೆಗೆ ಒಳಪಟ್ಟಿರುವ ಮೈಸೂರು ನಗರದ ದೇವಾಲಯಗಳು**

| **ದೇವಾಲಯದ ಹೆಸರು** | **ದೇವಾಲಯದ ಸ್ಥಳ** |
|---|---|
| ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ | ಹಳೇಬಂಡಿಕೇರಿ, ಕೆ.ಅರ್.ಮೊಹಲ್ಲಾ |
| ಶ್ರೀ ಮಹದೇಶ್ವರಸ್ವಾಮಿ | ಅಶೋಕರಸ್ತೆ, ಮೈಸೂರು |
| ಶ್ರೀ ಪಂಚಮುಖಿ ಆಂಜನೇಯಸ್ವಾಮಿ | ಇರ್ವಿನ್ ರಸ್ತೆ |
| ಶ್ರೀ ಆಂಜನೇಯಸ್ವಾಮಿ | ಮಾನಂದವಾಡಿ ರಸ್ತೆ |
| ಶ್ರೀ ಶಂಕರನಾರಾಣ | ಚಾಮುಂಡಿಪುರಂ |
| ಶ್ರೀ ಚಮನಪಟ್ಟಿ ಬಸವೇಶ್ವರ | ರಾಮಾನುಜ ರಸ್ತೆ |
| ಶ್ರೀ ಕೋದಂಡರಾಮದೇವರು | ದೊಡ್ಡಕೆರೆ, ಮೈಸೂರು |
| ಶ್ರೀ ವೆಂಕಟರಮಣ | ಕೃಷ್ಣವಿಲಾಸ ರಸ್ತೆ |
| ಶ್ರೀ ವಿದ್ಯಾಗಣಪತಿ | ಸಂಸ್ಕೃತ ಪಾಠಶಾಲೆ, ಮೈಸೂರು |
| ಶ್ರೀ ಶಿವಲಿಗೇಶ್ವರ | ಕಾಮಾಟಗೇರಿ ಮೈಸೂರು |
| ಶ್ರೀ ಚಿದಂಭೇಶ್ವರ | ಮೈಸೂರು |
| ಶ್ರೀ ಹಿರಿದೇವತೆ | ಮೈಸೂರು |
| ಶ್ರೀ ಕೊದಂಡರಾಮ | ನಜರ್‌ಬಾದ್ |
| ಶ್ರೀ ಭೈರವೇಶ್ವರ | ಹಿನಕಲ್ |

| | |
|---|---|
| ಶ್ರೀ ಕೆಲ್ಲಮ್ಮ | ಹಿನಕಲ್ |
| ಶ್ರೀ ಮಾರಮ್ಮ | ಸಾತಗಳ್ಳಿ |
| ಶ್ರೀ ಮಾರಮ್ಮ | ಹೆಬ್ಬಾಳು |
| ಶ್ರೀ ಮಾರಮ್ಮ | ಹೂಟಗಳ್ಳಿ |
| ಶ್ರೀ ಸಂಕಷ್ಟಹರ ಆಂಜನೇಯ | ಕೆಸರೆ |
| ಶ್ರೀ ಮಾರಮ್ಮ | ಬೋಗಾದಿ |
| ಶ್ರೀ ಆಂಜನೇಯ | ಈರನಗೆರೆ |
| ಶ್ರೀ ಬಸವೇಶ್ವರ | ಬಂಡಿಪಾಳ್ಯ |
| ಶ್ರೀ ಬಸವೇಶ್ವರ | ಸಾತಗಳ್ಳಿ |
| ಶ್ರೀ ಬಸವೇಶ್ವರ | ಪಡುವಾರಹಳ್ಳಿ |
| ಶ್ರೀ ನಾಗೇಶ್ವರ | ಬೋಗಾದಿ |
| ಶ್ರೀ ಅಮೃತೇಶ್ವರ | ಬೆಳವಾಡಿ |
| ಶ್ರೀ ಮಾರಮ್ಮ | ದಟ್ಟಗಳ್ಳಿ |
| ಶ್ರೀ ಬಸವೇಶ್ವರ | ದಟ್ಟಗಳ್ಳಿ |
| ಶ್ರೀ ಸೋಮೇಶ್ವರ | ಹೆಬ್ಬಾಳು |
| ಶ್ರೀ ಹುಲಿಯಮ್ಮ | ಕ್ಯಾತಮಾರನಹಳ್ಳಿ |
| ಶ್ರೀ ಬಸವೇಶ್ವರ | ಕೆಸರೆ |
| ಶ್ರೀ ಮಾರಮ್ಮ | ಹಿನಕಲ್ |
| ಶ್ರೀ ಮಾರಮ್ಮ | ಆಲನಹಳ್ಳಿ |
| ಶ್ರೀ ಮಾರಮ್ಮ | ಕೆಸರೆ |
| ಶ್ರೀ ನನ್ನೇಶ್ವರ | ಹಿನಕಲ್ |
| ಶ್ರೀ ಮಾರಮ್ಮ | ಈರನಗೆರೆ |
| ಶ್ರೀ ಬಸವೇಶ್ವರ | ಆಲನಹಳ್ಳಿ |
| ಶ್ರೀ ಮಹಾಲಿಂಗೇಶ್ವರ | ಮೇಟಗಳ್ಳಿ |
| ಶ್ರೀ ಮಾರಮ್ಮ | ಲಿಂಗಾಂಬುದಿ |
| ಶ್ರೀ ಮಾರಮ್ಮ | ನಾಚನಹಳ್ಳಿ |

| | |
|---|---|
| ಶ್ರೀ ಮಾರಮ್ಮ | ಮೇಟಗಳ್ಳಿ |
| ಶ್ರೀ ವೆಂಕಟೇಶ್ವರ | ಕೆಸರೆ |
| ಶ್ರೀ ಮಹಾಲಿಂಗೇಶ್ವರ | ಲಿಂಗಾಂಬುದಿ |
| ಶ್ರೀ ಬಸವೇಶ್ವರ | ಲಲಿತಾದ್ರಿಪುರ |
| ಶ್ರೀ ಹಿರಿಯಮ್ಮ | ಬೋಗಾದಿ |
| ಶ್ರೀ ಲಕ್ಷ್ಮೀಕಾಂತೇಶ್ವರ | ಹೆಬ್ಬಾಳು |
| ಶ್ರೀ ಸಿದ್ದಪ್ಪಾಜಿ | ಮೇಟಗಳ್ಳಿ |
| ಶ್ರೀ ಬಿಸಲು ಮಾರಮ್ಮ | ತೊಣಚಿಕೊಪ್ಪಲು |
| ಶ್ರೀ ಮುದ್ದುಕೃಷ್ಣ | ಆಲನಹಳ್ಳಿ |
| ಶ್ರೀ ಬೆಟ್ಟದ ಭೈರವ | ಚಾಮುಂಡಿಬೆಟ್ಟ |
| ಶ್ರೀ ವೆಂಕಟರಮಣ | ಮೆಟಗಳ್ಳಿ |
| ಶ್ರೀ ಪ್ರಸನ್ನ ಮಹದೇಶ್ವರ | ಉತ್ತನಹಳ್ಳಿ |
| ಶ್ರೀ ಸೋಮೇಶ್ವರ | ಇನಾಂ ಉತ್ತನಹಳ್ಳಿ |
| ಶ್ರೀ ಮಾರಮ್ಮ | ಇನಾಂ ಉತ್ತನಹಳ್ಳಿ |
| ಶ್ರೀ ಮಾರಮ್ಮ | ಬೆಳವಾಡಿ |
| ಶ್ರೀ ಬಸವೇಶ್ವರ | ಬೆಳವಾಡಿ |
| ಶ್ರೀ ದೇವಮ್ಮ | ಬೆಳವಾಡಿ |
| ಶ್ರೀ ಭೈರವೇಶ್ವರ | ಬೆಳವಾಡಿ |

ಈ ಮೇಲಿನ ದೇವಾಲಯಗಳಲ್ಲದೆ ಮೈಸೂರು ತಾಲೂಕಿಗೆ ಸಂಬಂಧಿಸಿದಂತೆ ಮುಜರಾಯಿ ಇಲಾಖೆಯವರು ನೀಡಿರುವ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

**ಮುಜರಾಯಿ ಇಲಾಖಾ ವ್ಯಾಪ್ತಿಯ ದೇವಾಲಯಗಳಲ್ಲಿ ವಿವಾಹಗಳಿಗೆ ನಿರ್ಬಂಧ**

ದೇವಾಲಯಗಳು ಧಾರ್ಮಿಕ ಕೆಲಸಗಳೊಂದಿಗೆ ಕೆಲವೊಂದು ದೇವಾಲಯಗಳಲ್ಲಿ ಸಾಮಾಜಿಕ ಕಾರ್ಯಗಳು ನಡೆಯುತ್ತಿದ್ದವು. ಅಂತೆಯೇ ವಿವಾಹ ನಡೆಸುವುದು ಒಂದು ಕಾರ್ಯವಾಗಿತ್ತು. ಆದರೆ ಅಪ್ರಾಪ್ತರು, ಪೋಷಕರ ವಿರೋಧದ ನಡುವೆ ಪ್ರೇಮಿಗಳು

ದೇವಾಲಯಗಳಲ್ಲಿ ವಿವಾಹವಾಗುವುದರೊಂದಿಗೆ ವಿವಾದಗಳು ಸೃಷ್ಟಿಯಾಗುತ್ತಿದ್ದು, ಇಂತಹ ಪ್ರಕರಣಗಳು ಪೋಲಿಸ್‌ಠಾಣೆ ಹಾಗೂ ನ್ಯಾಯಲಯದ ಕಟಕಟೆ ಏರುವ ಸಂಖ್ಯೆ ಹೆಚ್ಚಳವಾಗಿದೆ. ದೇವಸ್ಥಾನಗಳ ಅರ್ಚಕರನ್ನು ಸಾಕ್ಷ್ಯನುಡಿಯಲು ಬಲವಂತ ಮಾಡುವುದರಿಂದ ಹೊಸ ಸಮಸ್ಯೆ ಸೃಷ್ಟಿಯಾಗಿದೆ. ಈ ಎಲ್ಲಾ ತಲೆ ನೋವಿಗೆ ತೆರೆ ಎಳೆಯುವ ಸಲುವಾಗಿ ಇನ್ನುಮುಂದೆ ಮುಜರಾಯಿ ಇಲಾಖೆ ವ್ಯಾಪ್ತಿಗೆ ಬರುವ ದೇವಾಲಯಗಳಲ್ಲಿ ವಿವಾಹಗಳು ನಡೆಯದಂತೆ ನಿರ್ಬಂಧಿಸಿ ಮುಜರಾಯಿ ಇಲಾಖೆ ಕೇಂದ್ರಸ್ಥಾನಿಕ ಜಯಪ್ರಕಾಶ್ ಆದೇಶ ಹೊರಡಿಸಿದ್ದಾರೆ. ಆದರೆ ಮುಜರಾಯಿ ಇಲಾಖೆ ವ್ಯಾಪ್ತಿಗೆ ಬರುವ ಕಲ್ಯಾಣ ಮಂಟಪಗಳಲ್ಲಿ ಅಲ್ಲಿನ ನಿಯಮಾವಳಿ ಪ್ರಕಾರ ವಿವಾಹ ನಡೆಸಬಹುದಾಗಿದೆ ಎಂದು ತಿಳಿಸಿದ್ದಾರೆ.

## 6.2 ದೇವಾಲಯಗಳ ಆಡಳಿತ ಮಂಡಳಿ ಅಥವಾ ಟ್ರಸ್ಟ್‌ಗಳ ಪಾತ್ರ

**"ಸಹಕಾರ ಸಂಘ ಯಾವುದೇ ಚಟುವಟಿಕೆ ಕೈಗೊಳ್ಳುವಲ್ಲಿ ಅಲ್ಲಿ ಪರಸ್ಪರ ತಿಳುವಳಿಕೆ, ನೆರವು, ಆರ್ಥಿಕ ಚಿಂತನೆ, ಸ್ವಸಹಾಯ, ವ್ಯಕ್ತಿ ಗೌರವ ಮತ್ತು ಸಮಾನತೆ, ಸ್ವಾತಂತ್ರ್ಯ, ಬಂಧುತ್ವ ಕಾಣುತ್ತೇವೆ. ಅಂದರೆ ಪರಸ್ಪರ ಸಹಕಾರದಿಂದ ಆರ್ಥಿಕ ಪ್ರಗತಿ ಸಾಧಿಸುವುದು"[4]**

ಮುಜರಾಯಿ ಇಲಾಖೆಗೆ ಒಳಪಡುವ ಹಾಗೂ ಒಳಪಡದ ದೇವಾಲಯಗಳೆರಡರಲ್ಲೂ ಆಡಳಿತ ಮಂಡಳಿ ಅಥವಾ ಟ್ರಸ್ಟ್‌ಗಳನ್ನು ಕಾಣಬಹುದು. ಈ ಆಡಳಿತ ಮಂಡಳಿಯು ದೇವಾಲಯದ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ರೂಪಿಸಿಕೊಂಡು ಕಾರ್ಯರೂಪಕ್ಕೆ ತರುತ್ತವೆ. ಸಂಘಗಳು ಸರ್ಕಾರದಿಂದ ನೋಂದಣಿಯಾಗಿರುವ ಮತ್ತು ನೋಂದಣಿಯಾಗದಿರುವ ಸಂಘಗಳನ್ನು ಕಾಣಬಹುದು. ನೋಂದಣಿಯಾಗಿರುವ ಸಂಘಕ್ಕೆ ಸರ್ಕಾರದಿಂದ ಅನುದಾನ ದೊರೆಯುತ್ತದೆ. ಇವರು ಲೆಕ್ಕಪತ್ರಗಳನ್ನು ನಿರ್ವಹಿಸಬೇಕಾಗಿರುತ್ತದೆ. ಆದರೆ ನೋಂದಣಿಯಾಗದ ಸಂಘಗಳಿಗೆ ಸರ್ಕಾರದಿಂದ ಯಾವುದೇ ಹಣಕಾಸಿನ ಸಹಾಯ ದೊರೆಯುವುದಿಲ್ಲ. ಆದರೂ ಇವರು ಸಂಘಗಳನ್ನು ಕಟ್ಟಿಕೊಂಡು ತಾವೇ ಸ್ವಂತ ಹಣವನ್ನು ಹಾಕಿಕೊಂಡು ತಮ್ಮ ಪ್ರದೇಶದಲ್ಲಿ ಪ್ರಸಿದ್ಧವಾಗಿರುವ ದೇವಾಲಯಗಳ ಆಡಳಿತವನ್ನು ನೋಡಿಕೊಳ್ಳುವುದರ ಜೊತೆಗೆ, ದೇವಾಲಯದ ಅಭಿವೃದ್ಧಿ, ಜೀರ್ಣೋದ್ಧಾರ, ಹಬ್ಬ-ಹರಿದಿನಗಳು, ದೇವರ ಉತ್ಸವಗಳು, ಪ್ರಸಾದ ವಿತರಣೆ, ಅನ್ನಸಂತರ್ಪಣೆ, ದೇವಾಲಯದ ರಕ್ಷಣಾ ಕಾರ್ಯವನ್ನು ಮಾಡುತ್ತಾರೆ.

ಉದಾಹರಣೆಗೆ ಕೆಲವೊಂದು ಸಂಘಗಳ ಹೆಸರನ್ನು ಈ ಕೆಳಕಂಡಂತೆ ನೀಡಲಾಗಿದೆ.

ಪಡುವಾರಹಳ್ಳಿ(ವಿನಾಯಕ ನಗರ) ಗ್ರಾಮಾಭ್ಯದಯ ಟ್ರಸ್ಟ್, ಶನೇಶ್ವರಸ್ವಾಮಿ ಭಕ್ತ ಮಂಡಳಿ ರಾಜೇಂದ್ರನಗರ, ಶ್ರೀ ಮಹಾಲಕ್ಷ್ಮಿ ಕೊಲ್ಲಾಪುರದಮ್ಮ ದೇವಾಲಯ ಅಭಿವೃದ್ಧಿ ಸಮಿತಿ ಹಳೇಬಂಡಿಕೇರಿ ಕ್ಷೇತ್ರಯ್ಯ ರಸ್ತೆ, ಬೆಟ್ಟಹತ್ತುವ ಬಳಗ ಚಾಮುಂಡಿಪುರಂ, ಶ್ರೀ ಸಿದ್ದಪ್ಪಾಜಿ ನೀಲಗಾರರ ಸಂಘ ಅಶೋಕಪುರಂ, ಶ್ರೀ ಬಂದಂತಮ್ಮ ಮತ್ತು ಶ್ರೀ ಕಾಳಮ್ಮ ಸೇವಾಸಮಿತಿ ಕನ್ನೇಗೌಡನ ಕೊಪ್ಪಲು, ಶ್ರೀ ಬೀರೇಶ್ವರಸ್ವಾಮಿ ಟ್ರಸ್ಟ್(ರಿ) ತೊಣಚಿಕೊಪ್ಪಲು, ಶ್ರೀ ಚಾಮುಂಡೇಶ್ವರಿ ಸೇವಾಸಮಿತಿ ಹೆಬ್ಬಾಳು, ಶ್ರೀ ಮಲೆಮಹದೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ ಲಷ್ಕರ್ ಮೊಹಲ್ಲಾ, ಶ್ರೀ ನನ್ನೇಶ್ವರಸ್ವಾಮಿ ಕಲ್ಯಾಣಿ(ಕೊಳ)ಯ ಮತ್ತು ಹಿನಕಲ್ ಗ್ರಾಮದ ಅಭಿವೃದ್ಧಿ ಸಮಿತಿ(ರಿ) ಹಿನಕಲ್, ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ ಚಾಮುಂಡಿ ಬೆಟ್ಟ, ಶ್ರೀ ಸಿದ್ದಪ್ಪಾಜಿ ದೇವಾಲಯ ಅಭಿವೃದ್ಧಿ ಸಮಿತಿ ಆಲನಹಳ್ಳಿ ಹೀಗೆ ಇನ್ನು ನೂರಾರು ದೇವಾಲಯ ಸಮಿತಿಗಳನ್ನು ಮೈಸೂರು ನಗರದಲ್ಲಿ ಕಾಣಬಹುದು. ಮೈಸೂರು ನಗರದಲ್ಲಿರುವ ಪ್ರತಿಯೊಂದು ದೇವಾಲಯವು ಒಂದಲ್ಲ ಒಂದು ಅಭಿವೃದ್ಧಿ ಸಮಿತಿಯನ್ನು ಹೊಂದಿದೆ.

ಸಂಘ ಅಥವಾ ಸಮಿತಿಗಳು ಅಧ್ಯಕ್ಷರು, ಗೌರವಾಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿ, ಪತ್ರಿಕಾ ಕಾರ್ಯದರ್ಶಿ, ಕಾನೂನು ಸಲಹೆಗಾರರು, ಸಂಚಾಲಕರು, ಸದಸ್ಯರುಗಳು ಹೀಗೆ ಇನ್ನು ಹಲವಾರು ಹುದ್ದೆಗಳನ್ನು ಹೊಂದಿರುವುದನ್ನು ಕಾಣಬಹುದಾಗಿದೆ. ಈ ಮಂಡಳಿಗಳು ತಾವು ನಿರ್ವಹಿಸುವ ಕಾರ್ಯಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಲಾಗಿದೆ.

**ಹಣಕಾಸಿನ ವ್ಯವಹಾರ ನೋಡಿಕೊಳ್ಳುವುದು** : ತಾವೆ ಸ್ವತಃ ಹಣವನ್ನು ನೀಡಿ ದೇವಾಲಯದ ಅಭಿವೃದ್ಧಿಗೆ ಸಹಾಯಮಾಡುವುದಲ್ಲದೆ ದೇವಾಲಯಕ್ಕೆ ಸಂಬಂಧಿಸಿದ ಹಾಣಕಾಸಿನ ಲೆಕ್ಕಾಚಾರಗಳನ್ನೆಲ್ಲ ನೋಡಿಳ್ಳುತ್ತವೆ.

**ದೇವಾಲಯದ ಅಭಿವೃದ್ಧಿ ಹಾಗೂ ಜೀರ್ಣೋದ್ಧಾರ ಮಾಡುವುದು** : ದೇವಾಲಯವೇನಾದರು ಸುಸ್ಥಿತಿಯಲ್ಲಿಲ್ಲವಾದರೆ ಅದನ್ನು ಉಳಿಸುವ ಉದ್ದೇಶದಿಂದ ಹಲವಾರು ಯೋಜನೆಗಳನ್ನು ರೂಪಿಸಿಕೊಂಡು ಜೀರ್ಣೋದ್ಧಾರ ಮಾಡಿಸುವ ಕೆಲಸವನ್ನು ಮಾಡುತ್ತಾರೆ.

**ದೇವಾಲಯಗಳಲ್ಲಿ ಭಕ್ತರಿಗೆ ಮೂಲ ಸೌಲಭ್ಯಗಳನ್ನು ಒದಗಿಸುವುದು** : ದೇವಾಲಯಗಳಿಗೆ ಬರುವ ಭಕ್ತರಿಗೆ ತೊಂದರೆಯಾಗದಂತೆ ಮೂಲ ಸೌಲಭ್ಯಗಳ ವ್ಯವಸ್ಥೆಯನ್ನು ಮಾಡುತ್ತಾರೆ

ಉದಾಹರಣೆಗೆ : ದೇವಾಲಯದ ಒಳಗೆ ಪ್ರವೇಶಿಸಲು ಸಾಲಿನ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ದೇವಾಲಯದ ಆವರಣದಲ್ಲಿ ನೆರಳಿನ ವ್ಯವಸ್ಥೆ ಮುಂತಾದ ಕಾರ್ಯಗಳು.

**ದೇಣಿಗೆ ಸಂಗ್ರಹ ಮಾಡುವುದು** : ದೇವಾಲಯದ ಅಭಿವೃದ್ಧಿಯ ಕೆಲಸಗಳಿಗಾಗಿ, ಉತ್ತಮ ಸೌಲಭ್ಯಗಳನ್ನು ಒದಗಿಸಲು ಹಾಗೂ ವಿಜೃಂಭಣೆಯಿಂದ ಹಬ್ಬಹರಿದಿನ, ಜಾತ್ರೆ ಮತ್ತು ಉತ್ಸವಗಳನ್ನು ಆಚರಿಸಲು ಹಣಕಾಸಿನ ಅವಶ್ಯಕತೆ ಇರುವುದರಿಂದ ದೇಣಿಗೆಯನ್ನು ಸಂಗ್ರಹಿಸುತ್ತಾರೆ. **"**ದೇಣಿಗೆಗೆ ಸಂಬಂಧಿಸಿದಂತೆ ಮೈಸೂರು ನಗರದ ಶ್ರೀ ಪ್ರಸನ್ನ ಆಂಜನೇಯ ದೇವಸ್ಥಾನಕ್ಕೆ ಅಲ್ಲಿಯೇ ಭಿಕ್ಷೆ ಬೇಡಿಕೊಂಡಿದ್ದ ಎಂ.ವಿ.ಸೀತಾ ಎಂಬ ವೃದ್ಧೆ ಎರಡು ಲಕ್ಷ ರೂಪಾಯಿಯನ್ನು ದೇವಾಲಯದ ಜೀರ್ಣೋದ್ಧಾರ ಕಾರ್ಯಕ್ಕೆಂದು ನೀಡಿರುತ್ತಾರೆ**"**[5] ಇದನ್ನು ಗಮನಿಸಿದಾಗ ದೇವರ ಮೇಲಿನ ನಂಬಿಕೆ ಇನ್ನು ಗಟ್ಟಿಗೊಳ್ಳುತ್ತದೆ. ಅಲ್ಲದೆ ಮೇಲು ಕೀಳು ಎಂಬುದಿಲ್ಲದೆ ದಾನ ಧರ್ಮಗಳನ್ನು ಮಾಡುವಲ್ಲಿ ಎಲ್ಲರೂ ಭಾಗಿಯಾಗುತ್ತಿರುವುದಕ್ಕೆ ಇವರು ಸಾಕ್ಷಿಯಾಗಿದ್ದಾರೆ.

**ಪೂಜಾರಿಗಳ ನೇಮಕ** : ಮುಜರಾಯಿ ಇಲಾಖೆಗೆ ಒಳಪಡದ ದೇವಾಲಯಗಳಲ್ಲಿ ಪೂಜಾರಿಗಳನ್ನು ನೇಮಕ ಮಾಡುವ ಜವಬ್ದಾರಿ ಟ್ರಸ್ಟ್‌ಗಳ ಮೇಲಿರುತ್ತದೆ. ಇವರು ಅಲ್ಲಿ ಮೊದಲಿನಿಂದಲೂ ಪೂಜಾರಿಕೆ ಮಾಡಿಕೊಂಡಿರುವವರನ್ನೆ ನೇಮಕ ಮಾಡಬಹುದು ಅಥವಾ ಒಂದು ವರ್ಷಕ್ಕೆ, ಎರಡು ವರ್ಷಕ್ಕೆ, ಐದು ವರ್ಷಕ್ಕೆಂದು ಬೇರೆಯವರನ್ನು ನೇಮಕ ಮಾಡಬಹುದು. ಇಲ್ಲವಾದಲ್ಲಿ ಕೆಲವುಕಡೆಗಳಲ್ಲಿ ಆ ದೇವರಿನ ಒಕ್ಕಲಿನವರನ್ನೇ ಅಥವಾ ಒಂದು ಸಮುದಾಯದವರನ್ನೇ ನೇಮಕ ಮಾಡಬೇಕಾಗುತ್ತದೆ. ಅಂತಿಮವಾಗಿ ಟ್ರಸ್ಟಿನ ಸದಸ್ಯರೆಲ್ಲರೂ ಒಮ್ಮತದಿಂದ ನೇಮಕಕ್ಕೆ ಸಹಕರಿಸುತ್ತಾರೆ. ಇವರಿಗೆ ಸಂಭಾವನೆಯು ಟ್ರಸ್ಟಿನಿಂದಲೆ ಸಂದಾಯವಾಗುತ್ತದೆ.

**ಖರ್ಚು ವೆಚ್ಚಗಳ ಲೆಕ್ಕ ಇಡುವುದು** : ದೇವಾಲಯದ ಅಭಿವೃದ್ಧಿಗಾಗಿ ಸಂಘಟನೆಯನ್ನು ಮಾಡಿಕೊಂಡ ಮೇಲೆ ಕಾಣಿಕೆ, ಹರಕೆಯ ವಸ್ತುಗಳು ಮತ್ತು ಹಣಕಾಸು, ದಾನ, ದೇಣಿಗೆಯಿಂದ ಬಂದ ಹಣದಿಂದ ಹಬ್ಬ ಜಾತ್ರೆಗಳನ್ನು ನಡೆಸಿ, ದೇವಾಲಯದ ಜೀರ್ಣೋದ್ಧಾರ ಕಾರ್ಯವನ್ನು ಮಾಡಿಸುವ ಜವಾಬ್ದಾರಿ ಇರುವುದರಿಂದ ಇಲ್ಲಿ ನಂಬಿಕೆಗೆ ಹೆಚ್ಚು ಒತ್ತನ್ನು ನೀಡಿ ಹಾಗೂ ಸಂಘಟನೆ ಮಾಡಿಕೊಂಡಿರುವುದರಿಂದ ಪ್ರತಿಯೊಂದು ಖರ್ಚು–ವೆಚ್ಚಗಳ ಲೆಕ್ಕವನ್ನು ಸರಿಯಾಗಿ ಇಟ್ಟುಕೊಂಡರೆ ಮಾತ್ರ ಸಂಘವು ಸರಿದಾರಿಯಲ್ಲಿ ನಡೆಯುತ್ತದೆ ಇಲ್ಲವಾದಲ್ಲಿ ಅದು

ಅಭಿವೃದ್ಧಿಯನ್ನು ಕಾಣಲು ಸಾಧ್ಯವಾಗುವುದಿಲ್ಲ. ಆದುದರಿಂದ ಯಾವುದೇ ಸಂಘಗಳಾದರು ಖರ್ಚು–ವೆಚ್ಚಗಳ ಲೆಕ್ಕವನ್ನಿಡಲೇ ಬೇಕು.

ಈ ಮೇಲಿನದೆ ಅಲ್ಲದೆ ಇನ್ನು ಮುಂತಾದ ಕಾರ್ಯಗಳಾದ ಪೂಜಾ ಸೇವೆಗಳ ಧರ ನಿಗದಿ ಮಾಡುವುದು, ಹಬ್ಬ–ಹರಿದಿನ, ಉತ್ಸವಗಳ ಮೇಲ್ವಿಚಾರಣೆ, ಪಾರಂಪರಿಕವಾಗಿ ಆಚರಿಸಿಕೊಂಡು ಬಂದಿರುವ ಪದ್ಧತಿಯನ್ನು ಉಳಿಸುವುದು, ಪ್ರಸಾದ ಮತ್ತು ಅನ್ನಸಂತರ್ಪಣೆಯ ಜವಾಬ್ಧಾರಿ, ತೆರಿಗೆ ಸಂಗ್ರಹಿಸುವುದು ಹೀಗೆ ಇನ್ನು ಹಲವಾರು ಕಾರ್ಯಗಳನ್ನು ಟ್ರಸ್ಟ್‌ಗಳು ನಡೆಸಿಕೊಂಡು ಹೋಗುತ್ತವೆ.

## 6.3 ಪೂಜಾರಿಗಳ ಪಾತ್ರ

**"**'ತಮ್ಮಡಿ' 'ತಂಬಡಿ' ಎಂಬುದು 'ತಂಬಿ+ಅಡಿ' ಎಂಬ ಎರಡು ಪದಗಳು ಸೇರಿ ಆಗಿದೆ. ದೇವರ ದಾಸ ಎಂದು ಇದರ ಅರ್ಥ**"**[6] ಮೈಸೂರು ಸುತ್ತ ಮುತ್ತಲ ದೇವಾಲಯಗಳಲ್ಲಿ, ವಿಶೇಷವಾಗಿ ಮಾರಿ ಗುಡಿಗಳಲ್ಲಿ ದೇವರನ್ನು ಪೂಜಿಸುವ ಯಾವುದೇ ಸಮುದಾಯದ ವ್ಯಕ್ತಿಗಳನ್ನು ತಮ್ಮಡಿಗಳೆಂದೇ ಕರೆಯಲಾಗುತ್ತದೆ.

**"**ತಮ್ಮಡಿಗಳನ್ನು ಕುರಿತು 'The Thammadis are saivas and consider it sacred to serve in temples dedicated to siva. They perform siva pooja but donot recite gaayatri' ಎಂಬ ಉಲ್ಲೇಖವಿದೆ. ತಮ್ಮಡಿಗಳು ಶಿವಾರ್ಚಕರೆನ್ನುವುದು ಇದರಿಂದ ಸ್ಪಷ್ಟವಾಗುತ್ತದೆ**"**[7] ಎನ್ನಬಹುದಾದರೂ ಇವರು ಕೇವಲ ಶಿವಾರ್ಚಕರೇ ಆಗುವುದಿಲ್ಲ ಎನ್ನುವುದನ್ನು ಸೂಕ್ಷ್ಮವಾಗಿ ಗಮನಿಸಿದಾಗ ತಿಳಿಯುತ್ತದೆ. ಪದಕೋಶ ಅರ್ಥದಲ್ಲಿ ತಮ್ಮಡಿ ಎಂದರೆ 'ಗುರು, ಆಚಾರ್ಯ, ಅರ್ಚಕ, ಪೂಜಾರಿ, ಒಡೆಯ, ಯಜಮಾನ, ಋಷಿ, ಮುನಿ' ಎಂಬರ್ಥವಿದೆ[8] ಯಾವ ವೇದಗಳ ನಂಟಿಲ್ಲದೆ ಪ್ರಕೃತಿ ನೆಲೆಯಲ್ಲಿ ಜನಪದ ನಂಬಿಕೆಯಿಂದ ಪೂಜೆ ಮಾಡುವ ವ್ಯಕ್ತಿಗಳನ್ನು ಈ ವಲಯದಲ್ಲಿ ತಮ್ಮಡಿಗಳೆಂದು ಕರೆಯಲಾಗುತ್ತದೆ.

ಪೂಜಾರಿಗಳು ದೇವಾಲಯಗಳ ಆಡಳಿತದಲ್ಲಿ ತಮ್ಮದೇ ಆದ ಪಾತ್ರ ನಿರ್ವಹಿಸುತ್ತಾರೆ. ದೇವಾಲಯ ಎಂದ ಮೇಲೆ ಅದಕ್ಕೆ ಪೂಜಾರಿಗಳು ಇರುವುದು ಸರ್ವೇಸಾಮಾನ್ಯ. ಏಕೆಂದರೆ ದಿನನಿತ್ಯ ದೇವರಿಗೆ ಪೂಜೆ ಪುನಸ್ಕಾರಗಳನ್ನು ನೆರವೇರಿಸ ಬೇಕಾಗಿರುವುದರಿಂದ ಇವರ ಪಾತ್ರ ಬಹುಮುಖ್ಯವಾಗಿರುತ್ತದೆ. ಸಮಯಕ್ಕೆ ಸರಿಯಾಗಿ ಬಂದು ದೇವಾಲಯದ ಬಾಗಿಲು ತೆರೆದು, ದೇವರ ಮೂರ್ತಿಗಳನ್ನು ಶುಚಿಗೊಳಿಸಿ, ಅಲಂಕಾರ ಮಾಡಿ ಪೂಜೆ ನೆರವೇರಿಸುತ್ತಾರೆ.

ದೇವರನ್ನೇ ನಂಬಿಬರುವ ಭಕ್ತರಿಗೆ ಮಂಗಳಾರತಿ ನೀಡಿ, ತೀರ್ಥ ಕೊಟ್ಟು ಭಕ್ತ ಮತ್ತು ದೇವರ ನಡುವಿನ ಮಧ್ಯವರ್ತಿಯಾಗಿ ಕೆಲಸ ನಿರ್ವಹಿಸುತ್ತಾರೆ. ಭಕ್ತ ಮತ್ತು ದೇವರ ನಡುವೆ ಯಾರೊಬ್ಬ ಮಧ್ಯವರ್ತಿಗಳೂ ಇರಬಾರದೆಂದು ವೀರಶೈವಧರ್ಮ ಹೇಳುತ್ತದೆ. ಆದರೆ ತಮ್ಮಡಿಗಳು ಮತ್ತು ಅರ್ಚಕರು, ಪುರೋಹಿತರು, ಪೂಜಾರಿಗಳು ಭಕ್ತ ಮತ್ತು ದೇವರ ನಡುವಿನ ಮಧ್ಯವರ್ತಿಗಳಂತೆ ಕಾರ್ಯ ನಿರ್ವಹಿಸುತ್ತಾರೆ.

ಕೆಲವೊಂದು ನಂಬಿಕೆ ಮತ್ತು ಆಚರಣೆಗಳಿಗೆ ಸಂಬಂಧಿಸಿದಂತೆ ಅವರು ದೇವಾಲಯದ ಆಡಳಿತ ಮಂಡಳಿಯೊಂದಿಗೆ ಚರ್ಚಿಸಿ ಪೂಜಾಕಾರ್ಯಗಳು ಹೇಗೆ ನಡೆಯಬೇಕು ಎಂಬುದನ್ನು ತಿಳಿಸುತ್ತಾರೆ. ತಾವು ಮಾಡುವ ಕೆಲಸಕ್ಕೆ ಮುಜರಾಯಿ ಇಲಾಖೆಯಿಂದ ಅಥವಾ ಆಡಳಿತ ಮಂಡಳಿಯಿಂದ ವೇತನವನ್ನು ಪಡೆಯುತ್ತಾರೆ. ಮತ್ತು ಭಕ್ತರು ಮಂಗಳಾರತಿ ತಟ್ಟೆಗೆ ಹಾಕಿದ ಕಾಣಿಕೆಯನ್ನು ತಮಗೆ ನೀಡಿರುವುದೆಂದು ಅವರೆ ಬಳಸಿಕೊಳ್ಳುತ್ತಾರೆ.

ಕೆಲವು ದೇವಾಲಯಗಳು ವಂಶಪರಂಪರೆಯಿಂದ ನಡೆಸಿಕೊಂಡು ಬರುತ್ತಿರುವ ದೇವಾಲಯಗಳ ಅಭಿವೃದ್ಧಿ ಮತ್ತು ಸಂರಕ್ಷಣೆಯ ಕೆಲಸ ಅಲ್ಲಿ ವಂಶಪರಂಪರೆಯಿಂದ ಪೂಜೆ ಸಲ್ಲಿಸಿಕೊಂಡು ಬರುತ್ತಿರುವ ಪೂಜಾರಿಗೆ ಅಥವಾ ಆ ಒಕ್ಕಲಿನವರದೆ ಆಗಿರುತ್ತದೆ. ಅಲ್ಲದೇ ಆ ದೇವಾಲಯದಿಂದ ಬರುವ ಆದಾಯದಿಂದಲೇ ಅವರು ಜೀವನ ನಿರ್ವಹಣೆ ಮಾಡಬೇಕಾದ ಅನಿವಾರ್ಯತೆಯು ಇರುತ್ತದೆ. ಉದಾಹರಣೆಗೆ: ಮೈಸೂರು ನಗರದ ಪಡುವಾರಹಳ್ಳಿಯ ಜೋಡಿಮಾರಮ್ಮ ದೇವಾಲಯ, ಕುಂಬಾರ ಕೊಪ್ಪಲಿನ ಶ್ರೀ ಬನ್ನಿಮರದಮ್ಮ ದೇವಾಲಯಗಳು.

ಪೂಜಾರಿಗಳು ಭಕ್ತರು ಮತ್ತು ದೇವರುಗಳ ನಡುವಿನ ಮಧ್ಯವರ್ತಿಯಾಗಿರುವುದಲ್ಲದೆ ಭಕ್ತರು ತಮ್ಮ ಕಷ್ಟಗಳನ್ನು ಹೇಳಿಕೊಂಡಾಗ ಅವರಿಗೆ ಕೆಲವೊಂದು ಪರಿಹಾರೋಪಾಯಗಳನ್ನು ತಿಳಿಸಿ, ಹರಕೆ ಕಟ್ಟಿಕೊಳ್ಳಲು, ವಿಶೇಷ ಪೂಜೆ ಮಾಡಿಸಲು ಹೇಳುವುದು, ಮನೆದೇವರಿಗೆ ಯಾತ್ರೆ ಹೋಗಿ ಬರುವಂತೆ ಸೂಚಿಸುವುದು, ದವಸ ಧಾನ್ಯ, ವಸ್ತ್ರಗಳನ್ನು ದಾನ ಮಾಡುವಂತೆ ತಿಳಿಸುವುದು ಹೀಗೆ ಹಲವಾರು ಕಷ್ಟಗಳಿಗೆ ಪರಿಹಾರ ಕ್ರಮಗಳನ್ನು ಸೂಚಿಸಿ ಭಕ್ತರಿಗೆ ಮಾನಸಿಕವಾಗಿ ಧೈರ್ಯವನ್ನು ತುಂಬುವ ಕೆಲಸವನ್ನು ನಿರ್ವಹಿಸುತ್ತಾರೆ.

## 6.4 ದೇವಾಲಯಗಳ ಆರ್ಥಿಕತೆ

ಆರ್ಥಿಕತೆಯು ಒಂದು ದೇಶದ ಅಭಿವೃದ್ಧಿಯನ್ನು ನಿರ್ಧರಿಸುವಲ್ಲಿ ಬಹಳ ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತದೆ. ಅಲ್ಲದೆ ವಸ್ತುಗಳ ಖರೀದಿಗಾಗಲಿ, ಕಟ್ಟಡ ನಿರ್ಮಾಣ ವ್ಯವಸ್ಥೆಗಾಗಲಿ, ವೇತನ ನೀಡಲಾಗಲಿ ಪ್ರತಿಯೊಂದಕ್ಕೂ ಆರ್ಥಿಕ ಬೆಂಬಲ ಬೇಕೆ ಬೇಕು. ಅಂತೆಯೇ ಮೈಸೂರು ನಗರದ ದೇವಾಲಯಗಳ ನಿರ್ಮಾಣ, ಅಭಿವೃದ್ಧಿ, ನಿರ್ವಹಣೆ ಮುಂತಾದ ಸೌಲಭ್ಯಗಳನ್ನು ಒದಗಿಸಲು ಹಣಕಾಸಿನ ಪಾತ್ರ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ.

ಈ ಹಿಂದೆ ಅರಸೊತ್ತಿಗೆಯಲ್ಲಿ ಅದರ ನಿರ್ವಹಣೆಗೆಂದೆ ಮುಜರಾಯಿ, ಅರಮನೆಯ ಬೊಕ್ಕಸ ಮತ್ತು ಚಾಮುಂಡಿ ತೊಟ್ಟಿ ಎಂಬ ಇಲಾಖೆಗಳು ದೇವಾಲಯ ಹಾಗೂ ಧಾರ್ಮಿಕ ಕೆಲಸಗಳ ಎಲ್ಲಾ ಜವಾಬ್ದಾರಿಗಳನ್ನು ನೋಡಿಕೊಳ್ಳುತ್ತಿದ್ದವು. ದೇವಾಲಯಗಳ ನಿರ್ವಹಣೆಗೆ ಬೇಕಾದ ಹಣಕಾಸಿನ ಅನುದಾನವನ್ನು ಬಿಡುಗಡೆ ಮಾಡುತ್ತಿದ್ದವು. ಅಲ್ಲದೆ ಸಾಮ್ರಾಜ್ಯದ ಒಳಿತಿಗಾಗಿ ಹಾಗೂ ತಮ್ಮ ಪ್ರತಿಷ್ಠೆಗಾಗಿ ರಾಜಮಹಾರಾಜರು, ರಾಣಿಯರು, ದಿವಾನರು, ಅಧಿಕಾರಿಗಳು, ಸಾಮಾನ್ಯ ಜನರು, ಸ್ತ್ರೀಯರು, ದೇವದಾಸಿ ಸೂಳೆಯರು ದೇವಾಲಯಗಳನ್ನು ಕಟ್ಟಿಸಿ ಅದರ ಅಭಿವೃದ್ಧಿಗಾಗಿ ದಾನ–ದತ್ತಿಗಳನ್ನು ನೀಡಿರುವುದನ್ನು ಕಾಣಬಹುದಾಗಿದೆ.

ಮೈಸೂರಿನ ಚಾಮುಂಡಿಬೆಟ್ಟದ ಮೇಲಿರುವ ಶಾಸನವು ಕ್ರಿ.ಶ.1211ರ ಕಾಲದೆನ್ನಲಾಗಿದೆ. ಇದು ಕೊಂಠಿಯ ಮಲ್ಲಿಕಾರ್ಜುನ, ಕುದೂರು ಮಲ್ಲಿಕಾರ್ಜುನ, ಸಿಂದಗಟ್ಟದ ಕಲಿದೇವ ಮತ್ತು ಚಾಮುಂಡಿಬೆಟ್ಟದ ಮರ್ಬ್ಬಳೇಶ್ವರ ದೇವರ ಪಾದಗಳಿಗೆ ಬಿಟ್ಟ ದಾನದ ವಿವರ ದಾಖಲಾಗಿದೆ”[9]

ಮುಮ್ಮಡಿಯವರ ಆಡಳಿತಾವಧಿಗೆ ಸಂಬಂಧಿಸಿದ ಶಾಸನವು ಕ್ರಿ.ಶ.1810ರ ಕಾಲ ಘಟ್ಟದ್ದಾಗಿದೆ. ಅರಮನೆಯ ಕೋಟೆಯ ಶ್ವೇತವರಹಾಸ್ವಾಮಿ ದೇವಾಲಯದಲ್ಲಿರುವ ಬೆಳ್ಳಿಪೀಠ ಮತ್ತು ಪ್ರಭಾವಳಿಯನ್ನು ದಾನವಾಗಿ ಕೊಟ್ಟಿರುವ ಉಲ್ಲೇಖವಿದೆ.”[10] ಮುಮ್ಮಡಿಯವರ ಮಂತ್ರಿಯಾದ ಬಕ್ಷಿನರಸಪ್ಪನವರು ಪುರಭವನದ ಹಿಂಭಾಗದಲ್ಲಿ ನಿರ್ಮಿಸಿರುವ ಸುಬ್ರಹ್ಮಣ್ಯೇಶ್ವರ ದೇವಾಲಯದ ಗೋಡೆಗೆ ಸೇರಿಸಿರುವ ಕ್ರಿ.ಶ.1859ರ ಶಾಸನದಲ್ಲಿ ಬಕ್ಷಿನರಸಪ್ಪನವರು ಕಲ್ಯಾಣಿಯನ್ನದೆ ಆದಿತ್ಯ, ಅಂಬಿಕಾ, ವಿಷ್ಣು, ಗಣನಾಥ, ಮಹೇಶ್ವರ, ದಕ್ಷಿಣಾಮೂರ್ತಿ, ಚಂಡಿಕೇಶ್ವರ ಮುಂತಾದ ವಿಗ್ರಹಗಳನ್ನು ಸ್ಥಾಪಿಸಿ ದತ್ತಿ ಬಿಟ್ಟಿರುವ ವಿವರಗಳು ದಾಖಲಾಗಿವೆ.”[11]

ಇಂದು ದೇವಾಲಯಗಳ ಆರ್ಥಿಕತೆಗೆ ಸಂಬಂಧಿಸಿದಂತೆ ಮುಜರಾಯಿ ಇಲಾಖೆ ಮತ್ತು ದೇವಾಲಯಗಳ ಭಕ್ತ ಮಂಡಳಿ ಅಥವಾ ಆಡಳಿತ ಮಂಡಳಿಗಳು ದೇವಾಲಯದ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುವ ಮಂಡಳಿಗಳಾಗಿ ಸ್ಥಾಪನೆಯಾಗಿವೆ. ದೇವಾಲಯಗಳಿಗೆ ಸಂಬಂಧಿಸಿದ ಆರ್ಥಿಕ ವಹಿವಾಟಿನ ಮೂಲಾಂಶಗಳನ್ನು ಈ ಕೆಳಕಂಡಂತೆ ಗುರುತಿಸಲಾಗಿದೆ.

**ಸರ್ಕಾರದ ಸಹಾಯ ಧನ** : ಮೈಸೂರು ನಗರದಲ್ಲಿರುವ ಹಲವಾರು ದೇವಾಲಯಗಳು ಮುಜರಾಯಿ ಇಲಾಖೆಯ ಆಡಳಿತಕ್ಕೆ ಒಳಪಟ್ಟಿರುವುದರಿಂದಾಗಿ ಅವುಗಳಿಗೆ ಸರ್ಕಾರದಿಂದ ಪ್ರತಿ ವರ್ಷ ಸಹಾಯಧನವನ್ನು ನೀಡಲಾಗುತ್ತದೆ. ಈ ಸಹಾಯಧನವನ್ನು ದೇವಾಲಯಗಳು ಇರುವ ಸ್ಥಳ, ಭಕ್ತರ ಸಂಖ್ಯೆ, ದೇವಾಲಯದ ಪ್ರಾಚೀನತೆ, ದೇವಾಲಯದ ವಿಸ್ತೀರ್ಣ ಮುಂತಾದ ವಿಷಯಗಳನ್ನು ಗಮನಿಸಿ ಎ, ಬಿ, ಸಿ ಎಂದು ಗುಂಪುಗಳಾಗಿ ವಿಂಗಡಿಸಿ ಹಣಕಾಸನ್ನು ಬಿಡುಗಡೆ ಮಾಡಲಾಗುತ್ತದೆ. ಎ ಗುಂಪಿನ ದೇವಾಲಯಗಳಿಗೆ ಬಿ ಗುಂಪಿನ ದೇವಾಲಯಗಳಿಗಿಂತ ಸ್ವಲ್ಪ ಹೆಚ್ಚಿನ ಹಣಕಾಸನ್ನು ಬಿಡುಗಡೆ ಮಾಡುತ್ತವೆ. ಅಂತೆಯೆ ಸಿ ಗುಂಪಿನ ದೇವಾಲಯಗಳಿಗಿಂತ ಬಿ ಗುಂಪಿನ ದೇವಾಲಯಗಳಿಗೆ ಸ್ವಲ್ಪ ಹೆಚ್ಚಿನ ಹಣಕಾಸನ್ನು ಒದಗಿಸುತ್ತದೆ. ಉದಾಹರಣೆಗೆ: ಬೆಟ್ಟದ ಚಾಮುಂಡೇಶ್ವರಿ ದೇವಾಲಯ ಎ ಗುಂಪಿಗೆ ಸೇರಿದರೆ, ಒಂಟಿಕೊಪ್ಪಲಿನ ಶ್ರಿ ವೆಂಕಟೇಶ್ವರ ದೇವಾಲಯ ಬಿ ಗುಂಪಿಗೆ ಸೇರುತ್ತದೆ. ಉಳಿದಂತೆ ಚಿಕ್ಕ ದೇವಾಲಯಗಳು ಸಿ ಗುಂಪಿಗೆ ಸೇರುತ್ತವೆ. ಸರ್ಕಾರ ನೀಡುವ ಸಹಾಯಧನದಿಂದ ದೇವಾಲಯಕ್ಕೆ ಸಂಬಂಧಿಸಿದಂತ ಎಲ್ಲಾ ಕಾರ್ಯಗಳಿಗೂ ಬಳಸಿಕೊಳ್ಳಬೇಕಾಗುತ್ತದೆ. ಕೆಲವೊಂದು ವಿಶೇಷ ಸಂದರ್ಭಗಳಲ್ಲಿ ವಿಶೇಷವಾಗಿ ಧನ ಸಹಾಯ ಮಾಡುವುದು ಇದೆ ಅದೆಂದರೆ ಜಾತ್ರೆ ಮತ್ತು ಉತ್ಸವಗಳ ಸಂದರ್ಭದಲ್ಲಿ. ಅಲ್ಲದೆ ದೇವಾಲಯಗಳು ಮುಜರಾಯಿ ಇಲಾಖೆಗೆ ಸೇರದೆ ಇರುವಂತಹ ದೇವಾಲಯಗಳಿಗೂ ಧನ ಸಹಾಯ ಮಾಡುತ್ತದೆ. ಅದೆಂದರೆ ದೇವಾಲಯದ ಜೀರ್ಣೋದ್ಧರಕ್ಕಾಗಿ ಒಮ್ಮೆ ಮಾತ್ರವಾಗಿರುತ್ತದೆ.

**ಭಕ್ತ ಮಂಡಳಿಗಳ ಸಹಕಾರ** : ಸರ್ಕಾರದ ಪರವಾಗಿ ದೇವಾಲಯದ ಜವಾಬ್ದಾರಿಯನ್ನು ಮುಜರಾಯಿ ಇಲಾಖೆ ನೋಡಿಕೊಂಡರು ಸಹ ಪ್ರತಿಯೊಂದು ದೇವಾಲಯಗಳು ತನ್ನದೇ ಆದ ಒಂದು ಭಕ್ತ ಮಂಡಳಿ ಅಥವಾ ಆಡಳಿತ ಮಂಡಳಿಗಳನ್ನು ಹೊಂದಿರುವುದನ್ನು ಕಾಣ ಬಹುದಾಗಿದೆ. ದೇವಾಲಯದ ಅಭಿವೃದ್ಧಿಗಾಗಿ ಭಕ್ತರು ತಾವೇ ಒಂದು ಮಂಡಳಿಯನ್ನು ಸ್ಥಾಪಿಸಿಕೊಂಡು ಸಹಕರಿಸುತ್ತಾರೆ. ಅಲ್ಲದೆ ತಾವೆ ಮಂಡಳಿಗೆ ಹಣಕಾಸನ್ನು ನೀಡಿ ಅದರಿಂದ ದೇವಾಲಯದ ನಿರ್ಮಾಣ, ಜೀರ್ಣೋದ್ಧಾರ, ಅನ್ನಸಂತರ್ಪಣೆ, ಜಾತ್ರೆ, ಉತ್ಸವಗಳು

ಸಾಂಗವಾಗಿ ನಡೆಯುವಂತೆ ನೋಡಿಕೊಳ್ಳುತ್ತಾರೆ. ಇಲ್ಲಿ ಮುಜರಾಯಿ ಇಲಾಖೆಯು ಕೊಡುವ ಸಹಾಯಧನ ಒಂದರಿಂದಲೇ ದೇವಾಲಯದ ಎಲ್ಲಾ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಆದುದರಿಂದ ಭಕ್ತ ಮಂಡಳಿಗಳು ಮತ್ತು ಮುಜರಾಯಿ ಇಲಾಖೆಗಳೆರಡು ಒಂದುಗೂಡಿ ದೇವಾಲಯದ ಆರ್ಥಿಕತೆಯನ್ನು ಉತ್ತಮ ಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ.

**ಪ್ರವಾಸೋದ್ಯಮ ಇಲಾಖೆಯ ಪಾತ್ರ** : ಮೈಸೂರು ನಗರದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರವಾಸೋದ್ಯಮ ಇಲಾಖೆಯ ಪಾತ್ರ ಬಹಳ ಮುಖ್ಯವಾದುದು. ಅಂತೆಯೇ ದೇವಾಲಯಗಳ ಅಭಿವೃದ್ಧಿಗೂ ತನ್ನದೇ ಆದ ಕೊಡುಗೆಯನ್ನು ನೀಡುತ್ತಿದೆ. ಮೈಸೂರು ನಗರದ ಕೆಲವೊಂದು ದೇವಾಲಯಗಳ ಸ್ಥಳಗಳನ್ನು ಪ್ರವಾಸೋದ್ಯಮ ಕೇಂದ್ರವಾಗಿ ಅಭಿವೃದ್ಧಿ ಪಡಿಸಿರುವುದರಿಂದ ಆ ದೇವಾಲಯಗಳ ಆರ್ಥಿಕ ಪ್ರಗತಿಯಲ್ಲಿ ಪಾತ್ರವಹಿಸಿರುವುದನ್ನು ಕಾಣಬಹುದಾಗಿದೆ.

ಪ್ರವಾಸೋದ್ಯಮ ಇಲಾಖೆಯಿಂದ ಕೆಲವೊಂದು ದೇವಾಲಯಗಳಿಗೆ ಬಸ್, ಟ್ಯಾಕ್ಸಿ, ಹೋಟೆಲ್, ರೂಟ್ ಗೈಡ್, ರೂಟ್ ಮ್ಯಾಪ್, ವಾಣಿಜ್ಯ–ವ್ಯಾಪಾರ ವ್ಯವಸ್ಥೆ ಇತ್ಯಾದಿಗಳನ್ನು ಮಾಡಿರುವುದರಿಂದಾಗಿ ಹಾಗೂ ಆಧುನಿಕ ತಂತ್ರಜ್ಞಾನದ ಮೂಲಕ ಅಲ್ಲಿ ದೊರೆಯುವ ವ್ಯವಸ್ಥೆಗಳ ಮಾಹಿತಿ ನೀಡಿರುವುದರಿಂದ ಭಕ್ತರಿಗೆ ಹಾಗೂ ಪ್ರವಾಸಿಗರಿಗೆ ಉಚಿತವಾಗಿ ಉತ್ತಮ ಮಾಹಿತಿ ದೊರೆಯುತ್ತದೆ. ಆದುದರಿಂದ ಈ ಮೇಲಿನೆಲ್ಲಾ ಮಾಹಿತಿಗಳನ್ನು ತಿಳಿದುಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬರುತ್ತಾರೆ. ಇದರಿಂದ ದೇವಾಲಯಕ್ಕೆ ಹರಕೆ, ಕಾಣಿಕೆ, ವ್ಯಾಪಾರ ವಹಿವಾಟು, ಶೇವಾ ಶುಲ್ಕ ಮುಂತಾದ ವಿಧಾನಗಳ ಮೂಲಕ ದೇವಾಲಯದ ಆರ್ಥಿಕತೆಗೆ ಸಹಾಯವಾಗುತ್ತದೆ. ಉದಾಹರಣೆಗೆ: ಚಾಮುಂಡೇಶ್ವರಿ ದೇವಾಲಯ ಚಾಮುಂಡಿ ಬೆಟ್ಟ, ಉತ್ತನಹಳ್ಳಿ ದೇವಾಲಯ, ಅರಮನೆ ದೇವಾಲಯಗಳು, ಒಂಟಿಕೊಪ್ಪಲಿನ ಲಕ್ಷ್ಮಿವೆಂಕಟೇಶ್ವರ ದೇವಾಲಯ ಮುಂತಾದ ದೇವಾಲಯಗಳು. ಈ ದೇವಾಲಯಗಳಿಗೆ ಬರುವಲ್ಲಿ ಕರುನಾಡಿನ ಜನರು, ರಾಜ್ಯ, ರಾಷ್ಟ್ರಗಳ ಜನರೇ ಅಲ್ಲದೆ ಪಾಶ್ಚಾತ್ಯರು ದಿನೇದಿನೇ ಅಧಿಕ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಇದಕ್ಕೆ ಕಾರಣ ಪ್ರವಾಸೋದ್ಯಮ ಇಲಾಖೆಯಿಂದ ಮಾಡಿರುವ ಯೋಜನೆಗಳು. ಇದರಿಂದಾಗಿ ಹೊರಗಿನವರಿಗೂ ಇಲ್ಲಿಯ ದೇವಾಲಯಗಳ ಇತಿಹಾಸ, ನಂಬಿಕೆ, ಆಚರಣೆ, ಜಾತ್ರೆ, ಉತ್ಸವ, ಹಬ್ಬಗಳ ಬಗೆಗೂ ಗೈಡ್‌ಗಳಿಂದ ಮಾಹಿತಿ ರವಾನೆಯಾಗಿ ಸಂಸ್ಕೃತಿಯ ಪಸರಿಸುವಿಕೆಗೆ ಸಾಕ್ಷಿಯಾಗಿದೆ. ಉದಾಹರಣೆಗೆ: ಪಾಶ್ಚಿಮಾತ್ಯರು ಇಲ್ಲಿಗೆ ಬಂದು ಕುಂಕುಮ ಧರಿಸುವುದು, ಹೂವು ಮುಡಿಯುವುದು, ದೇವಾಲಯಗಳಲ್ಲಿ ಪೂಜೆ–ಪುನಸ್ಕಾರಗಳಲ್ಲಿ

ತೊಡಗುವುದು, ಹಿಂದೂ ಸಂಪ್ರದಾಯದಂತೆ ಮದುವೆಯಾಗುತ್ತಿರುವುದು ಮುಂತಾದ ವಿಷಯಗಳನ್ನು ಕಾಣಬಹುದಾಗಿದೆ. ಇದರಿಂದ ದೇವಾಲಯಗಳ ಆರ್ಥಿಕತೆಯಲ್ಲಿ ಪ್ರವಾಸೋದ್ಯಮದ ಪಾತ್ರವು ಬಹಳ ಪ್ರಮುಖವಾದುದಾಗಿದೆ.

**ಭಕ್ತರ ಪಾತ್ರ :** ಯಾವುದೇ ದೇವಾಲಯದಲ್ಲಿ ಪ್ರಮುಖವಾದ ಪಾತ್ರವಹಿಸುವವರು ಎಂದರೇ ಭಕ್ತರು. ಭಕ್ತರು ಇಲ್ಲದಿದ್ದರೆ ದೇವಾಲಯಗಳು ಮುಚ್ಚಿ ಹೋಗುತ್ತವೆ. ದೇವಾಲಯಗಳ ಉಳಿವಿನಲ್ಲಿ ಭಕ್ತರದೇ ಪ್ರಮುಖ ಪಾತ್ರವಾಗಿದೆ. ಭಕ್ತರು ತಾವು ನಂಬಿರುವ ಮತ್ತು ತಾವು ನಡೆದುಕೊಳ್ಳುವ ದೇವರ ದೇವಾಲಯಗಳಿಗೆ ಹೆಚ್ಚಾಗಿ ಭೇಟಿನೀಡುತ್ತಾರೆ. ತಮ್ಮ ಕೋರಿಕೆಗಳನ್ನು ದೇವರಲ್ಲಿ ನಿವೇದಿಸಿಕೊಳ್ಳುತ್ತಾರೆ. ಹರಕೆ ಕಟ್ಟಿಕೊಳ್ಳುತ್ತಾರೆ, ಕಷ್ಟಕಾಲದಲ್ಲಿ ಕಾಪಾಡುತ್ತಾನೆ ಎಂದು ನಂಬಿದ್ದಾರೆ. ಅಲ್ಲದೆ ಒಳ್ಳೆಯದಾಗಲಿ ಎಂದು ಪ್ರತಿದಿನ ನೆನೆಯುವುದು ಪೂಜಿಸುವುದು ವಾಡಿಕೆಯಾಗಿದೆ.

ಹೀಗೆ ಭಕ್ತರ ಸಂಖ್ಯೆ ಹೆಚ್ಚಾದಂತೆ ಹಾಗೂ ನಂಬಿಕೆಗಳು ಬಲವಾದಂತೆ ದೇವಾಲಯದ ಪ್ರಸಿದ್ಧಿ ಮತ್ತು ಅಭಿವೃದ್ಧಿಯು ಉಂಟಾಗುತ್ತದೆ. ತಾವು ನಂಬಿರುವ ದೇವರಿಗೆ ದಾನ, ದೇಣಿಗೆ, ಹರಕೆ ಇತ್ಯಾದಿಗಳ ಮೂಲಕ ಸೇವೆಯನ್ನು ಸಲ್ಲಿಸುತ್ತಾರೆ. ಇದರಿಂದ ದೇವಾಲಯದ ಆರ್ಥಿಕತೆ ಉತ್ತಮಗೊಳ್ಳುತ್ತದೆ. ಅಲ್ಲದೆ ಭಕ್ತರು ತಮಗೆ ಒಳ್ಳೆಯದಾದರೆ ಅದನ್ನು ತಮ್ಮ ಅಕ್ಕಪಕ್ಕದವರು ಕಷ್ಟದಲ್ಲಿದ್ದಾಗ ದೇವಾಲಯಕ್ಕೆ ಹೋದರೆ ಒಳ್ಳೆಯದಾಗುತ್ತದೆ ನಾವು ಹೋಗಿದ್ದೆವು ಎಂದು ತಿಳಿಸುತ್ತಾರೆ. ಇದರಿಂದ ಭಕ್ತರ ಸಂಖ್ಯೆಯಲ್ಲಿ ಬೆಳವಣಿಗೆಯಾಗುತ್ತದೆ. ನಂಬಿಕೆ, ಆಚರಣೆ, ರೂಢಿ ಸಂಪ್ರದಾಯಗಳಲ್ಲಿಯೂ ಬದಲಾವಣೆಗಳು ಆಗಲಾರಂಭಿಸುತ್ತದೆ. ಏನೇ ಆದರು ಅವುಗಳೆಲ್ಲವು ನಂಬಿಕೆಯ ಮೇಲೆ ನಿಂತಿರುತ್ತದೆ ಎಂಬುದನ್ನು ಮರೆಯುವಂತಿಲ್ಲ.

ಭಕ್ತರು ಎಷ್ಟು ಅಭಿವೃದ್ಧಿ ಹೊಂದುತ್ತಾರೋ, ಅವರು ನಡೆದುಕೊಳ್ಳುವ ದೇವಾಲಯಗಳ ಅಭಿವೃದ್ಧಿಗೂ ಅವರು ನೀಡುವ ದಾನ, ದೇಣಿಗೆ, ಹರಕೆಗಳ ರೂಪದಲ್ಲಿ ಹೆಚ್ಚು ಸಹಾಯವನ್ನು ಮಾಡುತ್ತಾರೆ. ಇದರಿಂದ ದೇವಾಲಯದ ಆರ್ಥಿಕತೆಯಲ್ಲಿ ಭಕ್ತರ ಪಾತ್ರವು ಮುಖ್ಯವಾಗಿರುತ್ತದೆ.

**ಕಾಣಿಕೆಗಳು** : ಮೈಸೂರು ನಗರದಲ್ಲಿನ ದೇವಾಲಯಗಳಿಗೆ ಭಕ್ತರ ಕೊರತೆಯೇನು ಇಲ್ಲ. ಬೆಳಿಗ್ಗೆ ಮತ್ತು ಸಂಜೆಯ ವೇಳೆಯಲ್ಲಿ ದೇವಾಲಯಗಳಿಗೆ ಹೋಗುವವರ ಸಂಖ್ಯೆ ಹೆಚ್ಚಿರುತ್ತದೆ. ಅಲ್ಲದೆ ಹಬ್ಬ–ಹರಿದಿನಗಳು ಜಾತ್ರೆ, ಉತ್ಸವ ಮುಂತಾದ ದಿನಗಳಂದು ದೇವಾಲಯಗಳಲ್ಲಿ ಜನರು ತುಂಬಿ ತುಳುಕುತ್ತಿರುತ್ತಾರೆ. ಭಕ್ತರು ದೇವಾಲಯಕ್ಕೆ ಭೇಟಿ ನೀಡಿ ಪೂಜೆ ಪುನಸ್ಕಾರಗಳನ್ನು ಸಲ್ಲಿಸಿ

ದೇವರಲ್ಲಿ ಬೇಕಾದುದನ್ನು ಬೇಡಿಕೊಂಡು ದೇವಾಲಯದಲ್ಲಿರುವ ಕಾಣಿಕೆ ಹುಂಡಿಗೆ ಅಥವಾ ಮಂಗಳಾರತಿ ತಟ್ಟೆಗೆ ಕೈಲಾದ ಕಾಣಿಕೆಯನ್ನು ಹಾಕುತ್ತಾರೆ. ಇದೂ ಕೂಡ ದೇವಾಲಯದ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಬೆಟ್ಟದ ಚಾಮುಂಡೇಶ್ವರಿ ದೇವಾಲಯದಲ್ಲಿ ಜಾತ್ರೆಯ ಸಂದರ್ಭ ಮತ್ತು ಆಷಾಢ ಮಾಸಗಳಲ್ಲಿ ಸುಮಾರು ಒಂದು ಕೋಟಿಗೂ ಅಧಿಕ ಕಾಣಿಕೆ ಸಂಗ್ರಹವಾಗುತ್ತದೆ ಎಂದು ದೇವಾಲಯದ ಆಡಳಿತ ಮಂಡಳಿಯವರು ತಿಳಿಸಿದ್ದಾರೆ. ಅಂತೆಯೆ ಕೆ.ಇ.ಬಿ ಸರ್ಕಲ್‌ನಲ್ಲಿರುವ ಶ್ರೀ ಚಂದ್ರಮೌಳೇಶ್ವರ ದೇವಾಲಯದಲ್ಲಿ ದೀಪಾವಳಿಯ ಸಂದರ್ಭದಲ್ಲಿ ಸುಮಾರು ಐದಾರು ಲಕ್ಷ ಕಾಣಿಕೆ ಬರುತ್ತದೆ ಎಂದು ತಿಳಿಸಿದ್ದಾರೆ. ರಾಜೇಂದ್ರ ನಗರದ ಸಿದ್ದಪ್ಪಾಜಿ ದೇವಾಲಯದಲ್ಲಿ ಸಿದ್ದಪ್ಪಾಜಿ ದಾಳ, ಕಂಡಾಯೋತ್ಸವ, ಕೊಂಡೋತ್ಸವಗಳ ಸಂದರ್ಭದಲ್ಲಿ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಹಣ ಕಾಣಿಕೆಯ ರೂಪದಲ್ಲಿ ಬರುತ್ತದೆ ಎಂದು ಆಡಳಿತ ಮಂಡಳಿಯವರು ತಿಳಿಸಿರುತ್ತಾರೆ. ಹೀಗೆ ಬಂದ ಕಾಣಿಕೆಯ ಹಣವನ್ನು ಲೆಕ್ಕಾಚಾರ ಮಾಡಿ ಅನಂತರ ದೇವಾಲಯದ ಅಭಿವೃದ್ಧಿಗೆ ಬಳಸಿಕೊಳ್ಳಲಾಗುತ್ತದೆ. ಮುಜರಾಯಿ ಇಲಾಖೆಗೆ ಸೇರಿದ ದೇವಾಲಯಗಳಲ್ಲಿ ಅದನ್ನು ದೇವಾಲಯದ ಆದಾಯವಾಗಿ ಸರ್ಕಾರ ಪಡೆಯುತ್ತದೆ.

**ಹರಕೆಯ ವಸ್ತುಗಳು** : ಮೈಸೂರು ನಗರ ತನ್ನ ಸಂಸ್ಕೃತಿಯಿಂದ ವಿಶ್ವಪ್ರಸಿದ್ಧಿಯನ್ನು ಪಡೆದಿದ್ದರು, ಪಾರಂಪರಿಕತೆಗೆ ಹೆಚ್ಚು ಒತ್ತನ್ನು ಕೊಡುತ್ತಿರುವುದನ್ನು ಕಾಣಬಹುದು. ಅರಮನೆಗಳ ನಗರ, ದೇವಾಲಯಗಳ ನಗರವಾಗಿರುವ ಮೈಸೂರು ನಂಬಿಕೆ, ಆಚರಣೆಗಳಿಗೂ ಅಷ್ಟೇ ಮಹತ್ವವನ್ನು ನೀಡುವ ನಗರವಾಗಿದೆ. ಹೀಗೆ ಮಾನವ ತನ್ನ ನಂಬಿಕೆ ಮತ್ತು ಆಚರಣೆಗಳ ಭಾಗವಾಗಿ ದೇವರಲ್ಲಿ ಅಪಾರವಾದ ನಂಬಿಕೆಯನ್ನು ಹೊಂದಿದ್ದು, ತನ್ನ ಕಷ್ಟಕಾರ್ಪಣ್ಯಗಳಿಗೆ ದೇವರು ಜೊತೆಯಲ್ಲಿರುತ್ತಾನೆ, ಸಮಸ್ಯೆಗಳನ್ನು ಪರಿಹರಿಸುತ್ತಾನೆ ಎಂದೆಲ್ಲ ನಂಬಿ ಇದಕ್ಕೆ ಪರ್ಯಾಯವಾಗಿ ದೇವರಿಗೆ ಏನನ್ನಾದರು ನೀಡಬೇಕು ಎಂಬುದರ ಫಲವೇ ಈ ಹರಕೆಯ ವಿಧಾನವಾಗಿದೆ. ಹರಕೆಯಿಂದ ಬಂದಂತಹ ವಸ್ತುಗಳು ಸಹ ಆ ದೇವಾಲಯದ ಆರ್ಥಿಕತೆಯಲ್ಲಿ ಬಹಳ ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತವೆ. ಹಣಕಾಸು, ವಸ್ತ್ರ, ಆಭರಣ, ದವಸಧಾನ್ಯಗಳು ಮುಂತಾದ ರೂಪದಲ್ಲಿ ಹರಕೆಯನ್ನು ಕಟ್ಟಿಕೊಂಡು ದೇವಾಲಯಕ್ಕೆ ನೀಡುವ ಪದ್ಧತಿ ಹಿಂದಿನಿಂದಲು ನಡೆದುಕೊಂಡು ಬಂದಿದೆ. ಉದಾಹರಣೆಗೆ: ಉತ್ತನಹಳ್ಳಿ ಮಾರಮ್ಮ ದೇವಾಲಯದಲ್ಲಿನ ದೇವಿಗೆ ಹರಕೆಯ ರೂಪದಲ್ಲಿ ಬಂದ ಸೀರೆಗಳನ್ನು ಮಾರಾಟ ಮಾಡಲಾಗಿ ಸುಮಾರು ಒಂದು ವರ್ಷದಲ್ಲಿ ನಾಲ್ಕರಿಂದ ಐದುಲಕ್ಷ ರೂಪಾಯಿ ಆದಾಯ ಬುರುತ್ತಿದೆ ಎಂದು ತಿಳಿಸಿರುತ್ತಾರೆ. "ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯದಲ್ಲಿ 2018ನೇ ಸಾಲಿಗೆ

ಸಂಬಂಧಿಸಿದಂತೆ ಹರಕೆಯಾಗಿ ಬಂದ ಸೀರೆಯ ಹರಾಜಿನಲ್ಲಿ ಸುಮಾರು ಒಂದು ಕೋಟಿಗೂ ಮಿಗಿಲಾದ ಆದಾಯವಾಗಿದೆ."[12] ಎಂದು ಆಡಳಿತ ಮಂಡಳಿ ತಿಳಿಸಿದೆ.

**ಪೂಜಾ ಸೇವಾ ಶುಲ್ಕ** : ಮೈಸೂರು ನಗರದ ದೇವಾಲಯಗಳಲ್ಲಿ ಸಾಮಾನ್ಯವಾದ ಪೂಜೆಗೆ ಎಲ್ಲಿಯೂ ಶುಲ್ಕ ಪಡೆಯುವುದಿಲ್ಲ. ಆದರೆ ವಿಶೇಷ ಪೂಜೆ ಪುನಸ್ಕಾರಗಳಿಗೆ, ಅಭಿಷೇಕ, ಅರ್ಚನೆ ಮುಂತಾದ ಪೂಜೆಗಳಿಗೆ ಇಂತಿಷ್ಟು ಎಂದು ದರವನ್ನು ನಿಗದಿಪಡಿಸಲಾಗಿರುತ್ತದೆ. ಉದಾಹರಣೆಗೆ: ದಟ್ಟಗಳ್ಳಿಯ ಮಹಾಲಕ್ಷ್ಮಿ ದೇವಾಲಯದಲ್ಲಿ ಕುಂಕುಮಾರ್ಚನೆಗೆ ಹತ್ತು ರೂಪಾಯಿಗಳನ್ನು ನಿಗದಿ ಮಾಡಲಾಗಿದೆ. ಹೀಗೆ ಪೂಜೆ ಮತ್ತು ಇತರೆ ಶುಲ್ಕಗಳ ಸಂಗ್ರಹದಿಂದ ಆ ದೇವಾಲಯದ ಆರ್ಥಿಕತೆಗೆ ಸಹಾಯವಾಗುತ್ತದೆ.

**ದೇಣಿಗೆ ಮತ್ತು ದಾನ** : ಮೈಸೂರು ನಗರದ ದೇವಾಲಯಗಳಿಗೆ ಈ ಹಿಂದೆ ತಿಳಿಸಿರುವಂತೆ ರಾಜ ಮಹಾರಾಜರು, ರಾಣಿಯರು, ದಿವಾನರು, ಮಾಂಡಲಿಕರು, ಸ್ತ್ರೀಯರು ಹೀಗೆ ಹಲವಾರು ಜನರು ದೇಣಿಗೆ ಮತ್ತು ದಾನವನ್ನು ನೀಡಿರುವುದನ್ನು ದೇವಾಲಯಗಳ ಪಾರಂಪರಿಕ ಇತಿಹಾಸ ಎಂಬ ಎರಡನೆ ಅಧ್ಯಾಯದ ಶಾಸನಗಳ ವಿವರಣೆಯಲ್ಲಿ ತಿಳಿಸಲಾಗಿದೆ. ಇಂದೂ ಕೂಡ ಮೈಸೂರು ನಗರದ ದೇವಾಲಯಗಳಿಗೆ ಅದರ ಅಭಿವೃದ್ಧಿಗಾಗಿ, ಜಾತ್ರೆ, ಉತ್ಸವಗಳಿಗಾಗಿ, ಅನ್ನಸಂತರ್ಪಣೆ, ಅನ್ನದಾಸೋಹ ಮುಂತಾದ ಕಾರ್ಯಗಳಿಗಾಗಿ ದೇಣಿಗೆ ಮತ್ತು ದಾನಗಳನ್ನು ನೀಡುತ್ತಿರುವುದನ್ನು ಕಾಣಬಹುದಾಗಿದೆ. ಇದು ದೇವಾಲಯದ ಆರ್ಥಿಕತೆಗೆ ಬೆನ್ನೆಲುಬಾಗಿ ನಿಲ್ಲುತ್ತದೆ ಎಂದರೆ ತಪ್ಪಾಗಲಾರದು. ಉದಾಹರಣೆಗೆ: ಸಾಮಾನ್ಯರಲ್ಲಿ ಸಾಮಾನ್ಯರಾದ "ಎಂ.ವಿ.ಸೀತಾ ಎಂಬ ಒಬ್ಬ ವೃದ್ಧ ಭಿಕ್ಷುಕಿ ಮೈಸೂರು ನಗರದ ಪ್ರಸನ್ನ ಆಂಜನೇಯ ದೇವಾಲಯದ ಅಭಿವೃದ್ಧಿಗಾಗಿ ತಾನು ಭಿಕ್ಷೆ ಬೇಡಿದ ಹಣದಲ್ಲಿ ಎರಡುಲಕ್ಷ ರೂಪಾಯಿಯನ್ನು ದೇಣಿಗೆಯಾಗಿ ನೀಡಿರುವುದನ್ನು ಉಲ್ಲೇಖಿಸುವುದು ಇಲ್ಲಿ ಸಮಂಜಸವೆನಿಸಿದೆ"[13]

**ವಾಣಿಜ್ಯ ವ್ಯಾಪಾರ** : ಮೈಸೂರು ನಗರದ ಕೆಲವೊಂದು ದೇವಾಲಯಗಳಲ್ಲಿ ಈ ವಾಣಿಜ್ಯ ವ್ಯಾಪರವು ನಡೆಯುತ್ತದೆ. ದೇವಾಲಯಗಳಲ್ಲಿ ತೀರ್ಥಪ್ರಸಾದ, ಹರಕೆಯಿಂದ ಬಂದ ವಸ್ತ್ರಗಳು, ಪೂಜಾ ಸಾಮಾಗ್ರಿಗಳು ಮುಂತಾದವುಗಳ ಮಾರಾಟ ಕೇಂದ್ರವನ್ನು ತೆರೆದಿದ್ದು ಅದರಿಂದ ಕೂಡ ದೇವಾಲಯಕ್ಕೆ ಆದಾಯ ಬರುತ್ತದೆ. ಇದು ಕೂಡ ದೇವಾಲಯದ ಆರ್ಥಿಕತೆಗೆ ಸಂಬಂಧಿಸಿದ ಒಂದು ಅಂಗವಾಗಿದೆ. ಉದಾಹರಣೆಗೆ: ಒಂಟಿಕೊಪ್ಪಲಿನ ಶ್ರೀ ವೆಂಕಟೇಶ್ವರ ದೇವಾಲಯ, ಬೆಟ್ಟದ ಚಾಮುಂಡೇಶ್ವರಿ ದೇವಾಲಯ ಮುಂತಾದ ದೇವಾಲಯಗಳಲ್ಲಿ ಲಾಡು, ಕಲ್ಲುಸಕ್ಕರೆ, ಪಂಚಕಜ್ಜಾಯ, ಮತ್ತು ವಸ್ತ್ರಗಳು ಮುಂತಾದವುಗಳ ಮಾರಾಟ ಮಾಡುತ್ತಾರೆ.

**ಭೌತಿಕ ಆಸ್ತಿ** : ಮೈಸೂರು ನಗರದಲ್ಲಿರುವ ಹಲವಾರು ದೇವಾಲಯಗಳಲ್ಲಿ ದೇವಾಲಯಕ್ಕೆ ಸಂಬಂಧಿಸಿದ ಆಸ್ತಿ ಇದ್ದು ಅದನ್ನು ಬಾಡಿಗೆ ನೀಡಿರುತ್ತಾರೆ. ಇದರಿಂದಲು ದೇವಾಲಯಕ್ಕೆ ಆದಾಯ ಬರುತ್ತದೆ. ಪೂಜಾ ಸಾಮಾಗ್ರಿ, ವಸ್ತ್ರ, ಆಟಿಕೆ, ತೀರ್ಥಪ್ರಸಾದ, ಹೋಟೆಲ್, ಪಾದರಕ್ಷೆ ಬಿಡುವ ಸ್ಥಳ, ವಾಹನಗಳ ನಿಲುಗಡೆಯ ಸ್ಥಳ ಮುಂತಾದ ಉದ್ದೇಶಗಳಿಗಾಗಿ ದೇವಾಲಯಕ್ಕೆ ಸೇರಿದ ಆಸ್ತಿಯನ್ನು ಬಾಡಿಗೆಗೆ ನೀಡುವುದರಿಂದ ಭೌತಿಕ ಆಸ್ತಿಯು ಕೂಡ ಆದಾಯದ ಮೂಲವಾಗಿ ಪರಿಗಣಿತವಾಗಿದ್ದು ಹೆಚ್ಚಿನ ಆದಾಯವನ್ನು ತಂದುಕೊಡುತ್ತದೆ.

## ದೇವಾಲಯ–ನ್ಯಾಯಾಲಯ

ದೇವಾಲಯಗಳು ಬಹಳ ಹಿಂದಿನಿಂದಲೂ ತುಂಬಾ ಸಂಕೀರ್ಣವಾದ ಕಾರ್ಯಗಳನ್ನು ನಿರ್ವಹಿಸುತ್ತಿದ್ದವು. ಆ ಕಾರ್ಯಗಳಲ್ಲಿ 'ದಿವ್ಯ'ವೂ ಒಂದಾಗಿತ್ತು. ಅಪರಾದ ನಿರ್ಧಾರಕ್ಕೆ ಮಾನುಷವಾದ ಯಾವುದೇ ಸಾಕ್ಷಿಗಳಿಲ್ಲದಾಗ ದೈವವನ್ನು ಆಶ್ರಯಿಸುತ್ತಿದ್ದರು. ಆದ್ದರಿಂದ ಅದನ್ನು 'ದಿವ್ಯ'ವೆಂದು ಕರೆಯುತ್ತಿದ್ದರು.

**ಲಕ್ಷ್ಮಿಗುಡಿ :** ಉತ್ತನಹಳ್ಳಿಯ ಲಕ್ಷ್ಮಿಗುಡಿಯು ನ್ಯಾಯ ತೀರ್ಮಾನದ ಸ್ಥಳವಾಗಿದೆ. ಜಂಜಡ ಒತ್ತಡಗಳ ನಡುವೆ ಬದುಕುವ ಮಾನವ ಸಂಘರ್ಷಗಳನ್ನು ಎದುರಿಸುತಲಿದ್ದು, ಪ್ರಾಚೀನ ಕಾಲದಿಂದಲು ಹೋರಾಟ, ಒಡೆದಾಟಗಳ ಮೂಲಕ ಬದುಕು ಕಟ್ಟಿಕೊಳ್ಳುತ್ತಾ ಬಂದಿದ್ದಾನೆ. ಹೀಗೆ ಹೋರಾಟದ ಬದುಕು ಸಾಗಿಸುವಾಗ ವಿವಾದ, ಕಲಹ ಜಗಳಗಳು ತಲೆದೋರುತ್ತವೆ. ಇಂತಹ ಜಗಳ, ಕದನ, ವಿವಾದಗಳು ನಿರಂತರವಾಗಿ ನಡೆಯುತ್ತಾ ಹೋದರೆ ಮಾನವನ ಅಳಿವಿಗೆ ಕಾರಣವಾಗುತ್ತದೆ. ಆದ್ದರಿಂದ ಜನಪದರು ಪರಿಹಾರೋಪಾಯ ಮಾರ್ಗವಾಗಿ ಶಾಂತಿ, ಸಂಧಾನ, ಒಪ್ಪಂದಗಳನ್ನು ಏರ್ಪಡಿಸಿ ನ್ಯಾಯತೀರ್ಮಾನಕ್ಕೆ ಮುಂದಾಗಿ ಲಕ್ಷ್ಮಿಗುಡಿಯನ್ನು 'ಪಂಚಾಯಿತಿ ಕಟ್ಟೆ'ಯನ್ನಾಗಿ ನಿರ್ಮಿಸಿಕೊಂಡಿದ್ದರು. ಏಕೆಂದರೆ ದೇವರ ಸನ್ನಿಧಿಯಲ್ಲಿ ಸುಳ್ಳಾಡುವುದಿಲ್ಲವೆಂದು ನಂಬಿದ್ದರು. ನ್ಯಾಯ ತೀರ್ಮಾನದ ಹಿಂದಿನ ರಾತ್ರಿ ಮುಖಂಡರು ನೇಮಿಸಿರುವ ವ್ಯಕ್ತಿ ಮನೆಮನೆಗೆ ಬಂದು ನಾಳೆ ನ್ಯಾಯ ತೀರ್ಮಾನ ಇದೆ ಮನೆಗೊಬ್ಬರಂತೆ ಲಕ್ಷ್ಮಿಗುಡಿಗೆ ಬರಬೇಕೆಂದು ತಿಳಿಸುತ್ತಾನೆ. ನ್ಯಾಯ ತೀರ್ಮಾನದ ದಿನ ಹಿರಿಯ ಗೌಡರು, ಪಟೇಲರು, ಮುಖಂಡರು ವಾದ ವಿವಾದಗಳ ಮಾಹಿತಿಯನ್ನು ಸಂಬಂಧಪಟ್ಟವರಿಂದ ಪಡೆದು ನ್ಯಾಯ ತೀರ್ಮಾನ ಮಾಡುತ್ತಾರೆ. ಅನ್ಯಾಯಕ್ಕೊಳಗಾದವರಿಗೆ ನ್ಯಾಯ ಒದಗಿಸಿ ತಪ್ಪಿತಸ್ಥರಿಂದ ತಪ್ಪುಕಾಣಿಕೆಯನ್ನು ಕಟ್ಟಿಸಿಕೊಳ್ಳುತ್ತಾರೆ. ಇಂದು ಜನಸಾಮಾನ್ಯರ ರಕ್ಷಣೆಗೆಂದು ಅರಕ್ಷಕಠಾಣೆ,

ಕೋರ್ಟು, ಕಛೇರಿಗಳು ಸ್ಥಾಪಿತವಾಗಿರುವುದರಿಂದ ಹಿಂದಿನ ನ್ಯಾಯ ಪಂಚಾಯಿತಿಗಳು ಇಂದು ಕಣ್ಮರೆಯಾಗುತ್ತಿವೆ.

ಒಟ್ಟಾರೆಯಾಗಿ ಮೈಸೂರು ನಗರದ ಪಾರಂಪರಿಕ ದೇವಾಲಯಗಳಲ್ಲಿನ ಉತ್ತಮ ಆಡಳಿತ ವ್ಯವಸ್ಥೆ ಮತ್ತು ಆರ್ಥಿಕತೆಯಿಂದಾಗಿ ದೇವಾಲಯಗಳಲ್ಲಿನ ಸಾಮಾಜಿಕ ಸಂಪ್ರದಾಯ ಆಚರಣೆಗಳು, ನಂಬಿಕೆಗಳು ಹಾಗೂ ಹಬ್ಬ ಜಾತ್ರೆ ಉತ್ಸವಗಳಂತಹ ಸಾಮಾಜಿಕ ಸಂಬಂಧಗಳನ್ನು ಬೆಸೆಯುವ, ಸೌಹಾರ್ಧತೆಯನ್ನು ಕಾಪಾಡುವಲ್ಲಿ ಹಿಂದಿನಿಂದಲೂ ಅರಸು ಮನೆತನಗಳು, ಸರ್ಕಾರ, ಆಡಳಿತ ಮಂಡಳಿಗಳು, ಪೂಜಾರಿಗಳು, ಭಕ್ತರು ಹೀಗೆ ಹಲವರ ಸಹಕಾರದಿಂದಾಗಿ ದೇವಾಲಯಗಳ ರಕ್ಷಣೆ ಹಾಗೂ ಅಭಿವೃದ್ಧಿ ಸಾಧ್ಯವಾಗಿದೆ. ಆಧುನಿಕ ತಂತ್ರಜ್ಞಾನ ನಾಗಾ ಲೋಟದಿಂದ ಸಾಗುತ್ತಿದ್ದರೂ ಮೈಸೂರು ನಗರದ ದೇವಾಲಯಗಳಿಗೆ ಭಕ್ತರ ಸಂಖ್ಯೆಗೆ ಕೊರತೆ ಕಂಡುಬರದಿರುವುದನ್ನು ಗಮನಿಸಿದಾಗ ದೇವಾಲಯಗಳ ಮೇಲಿನ ನಂಬಿಕೆ ಎಷ್ಟು ಮಹತ್ವವನ್ನು ಪಡೆದುಕೊಂಡಿದೆ ಎಂಬುದನ್ನು ಅರಿಯಬಹುದಾಗಿದೆ. ಅಲ್ಲದೆ ಭಕ್ತರ ಸಂಖ್ಯೆ ಹೆಚ್ಚುತ್ತಿರುವುದು ದೇವಾಲಯಗಳ ಆರ್ಥಿಕತೆಯ ಮೇಲೆ ಉತ್ತಮ ಪರಿಣಾಮ ಬೀರಿರುವುದನ್ನು ಗುರುತಿಸಲಾಗಿದೆ.

## ಕೊನೆ ಟಿಪ್ಪಣಿಗಳು

1. ಡಾ.ಎಂ.ಪಿ.ಮಂಜಪ್ಪಶೆಟ್ಟಿ ಮಸಗಲಿ, ಮೈಸೂರು ಅರಮನೆ, ಪು.ಸಂ–169.
2. ಅದೇ, ಪು.ಸಂ–178.
3. ಅದೇ, ಪು.ಸಂ–170.
4. ಎಚ್.ಜಯದೇವ್, ಸಹಕಾರ ಪರಿಚಯ, ಪು.ಸಂ–1.
5. ಮೈಸೂರು ಮಿತ್ರ, ದಿನ ಪತ್ರಿಕೆ, ದಿನಾಂಕ:04.06.2018.
6. ಲೀಲಾ ಅಪ್ಪಾಜಿ, ಬಿಳಿಗಿರಿರಂಗನಬೆಟ್ಟ; ಒಂದು ಸಾಂಸ್ಕೃತಿಕ ಅಧ್ಯಯನ(ಅಪ್ರಕಟಿತ), ಪು.ಸಂ–275.
7. ಅದೇ, ಪು.ಸಂ–275.
8. ಸಂಕ್ಷಿಪ್ತ ಕನ್ನಡ ನಿಘಂಟು, ಪು.ಸಂ–517.
9. ಬಾ.ರಾ.ಗೋಪಾಲ್(ಸಂ), ಎ.ಕ, ಸಂಪುಟ–5, ಮೈಸೂರು–139, ಪು.ಸಂ–277.
10. ಅದೇ, ಮೈಸೂರು–69, ಪು.ಸಂ–192.
11. ಅದೇ, ಮೈಸೂರು–16, ಪು.ಸಂ–157.
12. ಮೈಸೂರು ಮಿತ್ರ, ದಿನಪತ್ರಿಕೆ, ದಿನಾಂಕ:25.10.2018.
13. ಮೈಸೂರು ಮಿತ್ರ, ದಿನಪತ್ರಿಕೆ, ದಿನಾಂಕ:04.06.2018.

# ಅಧ್ಯಾಯ–7

## ದೇವಾಲಯಗಳ ವರ್ಣ–ವರ್ಗಗಳ ಸಂಬಂಧ ಹಾಗೂ ಭಕ್ತ ಪರಂಪರೆ

ಮಾನವ ತನ್ನ ರಕ್ಷಣೆಗಾಗಿ ಒಂದು ಕಡೆ ನೆಲೆ ನಿಂತು, ಕುಟುಂಬ, ಸಮುದಾಯ, ಸಮಾಜ ಹೀಗೆ ಒಂದು ಸುವ್ಯವಸ್ಥಿತ ಬದುಕನ್ನು ರೂಪಿಸಿಕೊಂಡನೋ ಅಂದಿನಿಂದಲೇ ವರ್ಣ–ವರ್ಗಗಳ ವ್ಯವಸ್ಥೆಯ ಅಸ್ಥಿತ್ವವನ್ನು ಕಾಣಬಹುದಾಗಿದೆ. ಅಗೋಚರ ಶಕ್ತಿಗಳಿಗೆ ಹೆದರಿ ಭಯ, ಭಕ್ತಿ, ನಂಬಿಕೆಗಳನ್ನು ಹುಟ್ಟು ಹಾಕಿದನೋ ಅಂದಿನಿಂದಲೇ ಗುಡಿಗೋಪುರಗಳ ಉದಯಕ್ಕೂ ಆರಾಧನೆಗೂ ನಾಂದಿಯಾಯಿತು. ಅಂದಿನಿಂದಲೇ ಗುಡಿಗೋಪುರಗಳಲ್ಲಿಯೂ ವರ್ಣ–ವರ್ಗಗಳ ಸಂಬಂಧ ಹಾಗೂ ಭಕ್ತ ಪರಂಪರೆಯನ್ನು ಕಾಣಬಹುದಾಗಿದೆ. ಆದುದರಿಂದ ವರ್ಣ–ವರ್ಗಗಳು, ಜಾತಿ ಸಮುದಾಯಗಳು ಪೂಜಿಸುವ ದೇವರುಗಳು ಹಾಗೂ ದೇವಾಲಯಗಳ ಭಕ್ತ ಪರಂಪರೆಗಳನ್ನು ಈ ಕೆಳಕಂಡಂತೆ ಅಧ್ಯಯನಕ್ಕೆ ಒಳಪಡಿಸಲಾಗಿದೆ.

### 7.1 ವರ್ಣವ್ಯವಸ್ಥೆ

ಮಾನವ ಒಂದುಕಡೆ ಸುಸ್ಥಿರವಾಗಿ ನೆಲೆನಿಂತು ವ್ಯವಸ್ಥಿತವಾದ ಬದುಕನ್ನು ಆರಂಭಿಸಿದ ದಿನದಿಂದಲೇ ವರ್ಣವ್ಯವಸ್ಥೆ ನಿರ್ಮಿತವಾಯಿತೆಂದು ಮನುಸ್ಮೃತಿ ಮುಂತಾದ ಪುರಾಣಗಳಲ್ಲಿ ಕಾಣಬಹುದಾಗಿದೆ. ಧರ್ಮ ಮತ್ತು ಸಮಾಜ ಬೆರೆತಿರುವ ವ್ಯವಸ್ಥೆಯಲ್ಲಿ ಧರ್ಮ ಮತ್ತು ಸಮಾಜವನ್ನು ಪ್ರತ್ಯೇಕಿಸಿ ನೋಡುವುದು ಅಸಾಧ್ಯದ ಮಾತಾಗಿದೆ. ಆದುದರಿಂದ ಈ ವ್ಯವಸ್ಥಿತ ಸಾಮಾಜಿಕ ಪರಿಸರದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣಗಳು ಅವರ ವೃತ್ತಿಗನುಸಾರವಾಗಿ ನಿರ್ಧರಿಸಲಾಗುತ್ತಿತ್ತು.

ಬ್ರಾಹ್ಮಣರು ದೇವಾಲಯಗಳಲ್ಲಿ ಧಾರ್ಮಿಕ ವಿಧಿ ವಿಧಾನಗಳಾದ ದೇವರ ಪೂಜೆ, ಪುನಸ್ಕಾರ, ಯಜ್ಞಾ ಯಾಗಾದಿ ಹಾಗೂ ವಿದ್ಯಾದಾನ ಮಾಡುವಲ್ಲಿ ಅವರ ಪಾತ್ರ ಹಿರಿದಾದು ದಾಗಿತ್ತು. ರಾಜ್ಯದ ಆಡಳಿತ ಮತ್ತು ರಕ್ಷಣೆ ಮಾಡುವುದು ಕ್ಷತ್ರಿಯರ ಕರ್ತವ್ಯವಾಗಿತ್ತು. ವೈಶ್ಯರು ವ್ಯಾಪಾರ–ವ್ಯವಹಾರಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದರ ಮುಖೇನ ಅರ್ಥವ್ಯವಸ್ಥೆಯಲ್ಲಿ ನಿರ್ಣಾಯಕ ಪಾತ್ರವಹಿಸುತ್ತಿದ್ದರು. ಶೂದ್ರ ವರ್ಗದವರು ತಮ್ಮ ವೃತ್ತಿಗಳನ್ನು ಮಾಡುವುದರ ಜೊತೆಗೆ ಇತರ ಮೇಲ್ವರ್ಗದವರ ಸೇವೆ ಮಾಡುತ್ತಿದ್ದರು. ಈ ನಾಲ್ಕು ವರ್ಗಗಳ ಅನಂತರದವರನ್ನು ಪಂಚಮರೆಂದು ಗುರುತಿಸಲಾಗಿರುವ ಕೊನೆಯ ವರ್ಣಿಯರು ಇವರು

ಸಮಾಜದಲ್ಲಿ ಅತಿ ತಳಮಟ್ಟದ ಸೇವಕರಾಗಿ ಹೊಲೆಯ, ಬೋವಿ, ಮಾದಿಗ, ತಳವಾರ ಮುಂತಾದ ಜಾತಿಯ ಸೂಚಕಗಳಿಂದ ಗುರುತಿಸಲಾಗುತ್ತಿತ್ತು. ಇವರನ್ನು ಅಸ್ಪೃಶ್ಯರೆಂದು ಕರೆಯುತ್ತಿದ್ದರು.

**ಬ್ರಾಹ್ಮಣರು** : ಮೈಸೂರು ನಗರದಲ್ಲಿ ಬ್ರಾಹ್ಮಣರು ಉನ್ನತ ಸ್ಥಾನದಲ್ಲಿದ್ದು ಬಹಳ ಹಿಂದಿನಿಂದ ರಾಜಮಹಾರಾಜರುಗಳಿಂದ ಹಲವು ಅನುಕೂಲತೆಯನ್ನು ಪಡೆಯುವ ಹಕ್ಕುಳ್ಳವರಾಗಿದ್ದರು. ಈ ಹಿಂದೆ ಮಹಾರಾಜ ಮಹಾರಾಣಿಯರು ಬ್ರಾಹ್ಮಣರಿಗೆ ಅಗ್ರಹಾರಗಳನ್ನು ಸ್ಥಾಪಿಸಿ ಅವರ ಜೀವನೋಪಾಯಕ್ಕೆ ಅನುವು ಮಾಡಿಕೊಟ್ಟಿದ್ದರು. ಅಲ್ಲಿ ಸುಸಜ್ಜಿತವಾದ ಮನೆಗಳನ್ನು ನಿರ್ಮಿಸಿ ಅಗತ್ಯವಾದ ವಸ್ತುಗಳನ್ನು ಅವರಿಗೆ ದಾನ ರೂಪದಲ್ಲಿ ಕೊಡುವ ಪದ್ಧತಿಯಿತ್ತು. ಅಗ್ರಹಾರಗಳನ್ನು ಅನೇಕ ವೃತ್ತಿಗಳಿಗನುಗುಣವಾಗಿ ವಿಂಗಡಿಸುವ ವ್ಯವಸ್ಥೆ ಇದ್ದುದಕ್ಕೆ ಹಲವಾರು ಶಾಸನಗಳು ಸಾಕ್ಷಿಯಾಗಿವೆ. ವಿದ್ಯಾಪಾರಂಗತರಾಗಿದ್ದ ಬ್ರಾಹ್ಮಣರು ರಾಜನಿಗೆ ಹತ್ತಿರವಾಗಿ ಅಧಿಕಾರಿ ಮತ್ತು ಗಾವುಂಡರ ಕೃಪೆಗೆ ಪಾತ್ರರಾಗುತ್ತಿದ್ದರು. ತನ್ಮೂಲಕ ಅರಸರು ನೀಡುವ ದಾನ ದತ್ತಿಗಳಿಗೆ ಪ್ರತಿಗ್ರಹಿಯಾಗಿರುತ್ತಿದ್ದರು.

ಚಾಮುಂಡಿಬೆಟ್ಟದಲ್ಲಿರುವ 10ನೇ ಶತಮಾನದ ಶಾಸನವೊಂದು **"**ಬ್ರಾಹ್ಮಣನಾದ ಬೂವಯ್ಯನಿಗೆ ಕಲ್ಲನಿರಿಸಿದ ಧರ್ಮಂಗೆಯ್ದವರು ಪೆರಿಯಮ್ಮ ಪೊಕ್ಕಿಯಮ್ಮ, ಪೊಲಯಬೆ**"**[1] ಎಂದು ಹೆಸರಿಸಲಾಗಿದೆ. ದಾನ ಪಡೆದ ಬ್ರಾಹ್ಮಣನಾದ ಬೂವಯ್ಯ ಮತ್ತು ದಾನ ನೀಡಿದ ಪೆರಿಯಮ್ಮ, ಪೊಕ್ಕಿಯಮ್ಮ, ಪೊಲಯಬೆ ಯಾರೆಂದು ತಿಳಿದು ಬರುವುದಿಲ್ಲ. ಪೆರಿಯ ಎಂದರೆ ಹಿರಿಯ ಎಂದರ್ಥವಾದ್ದರಿಂದ ಪೆರಿಯಮ್ಮ ಎಂದರೆ ರಾಜರ ಹಿರಿಯ ಹೆಂಡತಿ ಅಥವಾ ಹಿರಿಯ ಮಗಳಿರಬಹುದಾಗಿದೆ.

**"**ಮೈಸೂರು ಅರಮನೆಯ ಪ್ರಸನ್ನ ನಂಜುಂಡೇಶ್ವರ ದೇವಾಲಯದ ಬಾಗಿಲಿನ ಬಲ ಭಾಗದಲ್ಲಿರುವ ಕಲ್ಲಿನ ಶಾಸನ ಕ್ರಿ.ಶ.1821ರಲ್ಲಿ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರ ಪಟ್ಟಮಹಿಷಿಯಾದ ಲಕ್ಷ್ಮೀವಿಲಾಸದ ದೇವಾಜಮ್ಮಣ್ಣಿಯು ಮೈಸೂರು ಕೋಟೆಯ ಪಶ್ಚಿಮ ಭಾಗದಲ್ಲಿ ದೇವಾಂಬಾ ಅಗ್ರಹಾರವನ್ನು ನಿರ್ಮಿಸಿ, ಇಪ್ಪತ್ತೆರಡು ವಿತ್ತಿಗಳಾಗಿ ವಿಭಾಗಿಸಿ, ಒಂದು ವಿತ್ತಿಯನ್ನು ದೇವರಿಗೆ ಮತ್ತು ಇನ್ನುಳಿದ ಇಪ್ಪತ್ತೊಂದು ವಿತ್ತಿಗಳನ್ನು ಬ್ರಾಹ್ಮಣರಿಗೆ ಸರ್ವಮಾನ್ಯವಾಗಿ ಹಂಚಿಕೆ ಮಾಡಿರುವ ವಿವರವನ್ನು ಉಲ್ಲೇಖಿಸಲಾಗಿದೆ**"**[2]

ಹೀಗೆ ರಾಜ ಮಹಾರಾಜರೇ ಅಲ್ಲದೆ ರಾಣಿ ಮಹಾರಾಣಿಯರು ಬ್ರಾಹ್ಮಣರಿಗೆ ನೀಡುವ ಬ್ರಹ್ಮಾದಾಯ ಮತ್ತು ದೇವಾದಾಯಗಳನ್ನು ಕೊಟ್ಟಿರುವ ವಿವರಗಳು ಶಾಸನಗಳಲ್ಲಿ ಉಲ್ಲೇಖಗೊಂಡಿರುವುದರಿಂದ ಹಿಂದೆ ಬ್ರಾಹ್ಮಣರ ಸ್ಥಿತಿಗತಿಗಳು ಹಾಗೂ ಅವರ ಸ್ಥಾನಮಾನಗಳ ಬಗ್ಗೆ ಅರಿಯಲು ಸಹಾಯಕವಾಗಿದೆ. ಅಲ್ಲದೆ ಅಂದು ಬ್ರಾಹ್ಮಣರು ಆಡಳಿತದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದು, ಮಂತ್ರಿ ಮತ್ತು ಸೇನಾಪತಿಗಳಾಗಿಯೂ ಕರ್ತವ್ಯ ನಿರ್ವಹಿಸುತ್ತಿದ್ದರು. ಯಾಗ–ಯಜ್ಞಗಳನ್ನು ಮಾಡುವ ಮೂಲಕ ದೇಶದ, ರಾಜ್ಯದ ಒಳಿತಿಗಾಗಿ ದೇವರನ್ನು ಪ್ರಾರ್ಥಿಸುತ್ತಿದ್ದರು. ಆ ಮೂಲಕ ಹಲವು ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು.

ಆದರೆ ಇಂದು ಬ್ರಾಹ್ಮಣರು ಪುರೋಹಿತ್ಯವೊಂದನ್ನೆ ತಮ್ಮ ವೃತ್ತಿಯಾಗಿಸಿಕೊಳ್ಳದೆ, ಸಮಾಜದ ಹಲವಾರು ವೃತ್ತಿಗಳಲ್ಲಿ ತೊಡಗಿಸಿ ಕೊಂಡು ಜೀವನ ನಡೆಸುತ್ತಿದ್ದಾರೆ. ಸಮಾಜದಲ್ಲಿನ ಎಲ್ಲಾ ವರ್ಗಗಳ ಜನರು ವಿದ್ಯಾವಂತರಾದಂತೆ ಅವರ ಸ್ಥಾನಮಾನಗಳಲ್ಲಿನ ಬದಲಾವಣೆಗಳು ಬ್ರಾಹ್ಮಣರಿಗೂ ಇತರ ವರ್ಗದವರಿಗೂ ಯಾವುದೇ ವ್ಯತ್ಯಾಸವಿಲ್ಲ ಎಂಬಂತೆ ಸಮಾನತೆಯ ಸಂದೇಶ ಸಾರುತ್ತಿದೆ. ಇದಕ್ಕೆಲ್ಲ ಸಂವಿಧಾನಾತ್ಮಕ ಹಕ್ಕು ಮತ್ತು ಕರ್ತವ್ಯಗಳು ಎಲ್ಲರಲ್ಲೂ ಸಮಾನತೆಯನ್ನು ತರುವಲ್ಲಿ ಕಟಿಬದ್ಧವಾಗಿವೆ.

**ಕ್ಷತ್ರಿಯರು** : ಆಡಳಿತದಲ್ಲಿ ಪ್ರಜಾ ಪರಿಪಾಲನೆ ಮಾಡುತ್ತ ಸಾಮ್ರಾಜ್ಯ ಸಂರಕ್ಷಣೆಯ ಜವಾಬ್ಧಾರಿಯನ್ನೊತ್ತವರು ಕ್ಷತ್ರಿಯರು. ಉನ್ನತ ಹುದ್ದೆಗಳನ್ನು ಅಲಂಕರಿಸಿ, ಉತ್ತಮ ಸ್ಥಾನಮಾನಗಳನ್ನು ಹೊಂದಿದ್ದರು. ರಾಜನಾಗಿ ಅಥವಾ ಉತ್ತರಾಧಿಕಾರಿಯಾಗಿ, ರಾಜ್ಯಪಾಲರಾಗಿ, ಅಧಿಕಾರಗಳನ್ನು ಪಡೆದು ಅನುಭವಿಸುತ್ತಿದ್ದರು. ಸಾಮಂತರಾಗಿ, ಮಾಂಡಳಿಕರಾಗಿ, ಸೇನಾಧಿಪತಿಯಾಗಿ, ಮಂತ್ರಿಯಾಗಿ, ಸಂಧಿವಿಗ್ರಹಿ, ಬಾಹತ್ತರ ನಿಯೋಗಾಧಿಪತಿ ಸುಂಕದ ಅಧಿಕಾರಿ, ದಂಡನಾಯಕ, ಮಹಾಪ್ರಧಾನ ಇತ್ಯಾದಿ ಪ್ರಮುಖ ಹುದ್ದೆಗಳು ದೊರಕುವ ಅವಕಾಶವಿತ್ತು. ಕೆಲವು ಸಂದರ್ಭಗಳಲ್ಲಿ ಕ್ಷತ್ರಿಯರು ಸಹ ಬ್ರಾಹ್ಮಣರಾಗಿ ಬದಲಾಗುವ ವರ್ಣಾಂತರ ವ್ಯವಸ್ಥೆಯನ್ನು ಇತಿಹಾಸದಲ್ಲಿ ಕಾಣಬಹುದು. ಕೌಶಿಕ ಮಹಾರಾಜ ರಾಜನಾಗಿದ್ದು ಕಾಲಕ್ರಮೇಣ ವಿಶ್ವಮಿತ್ರ ಎಂಬ ಬ್ರಹ್ಮರ್ಷಿಯಾಗಿ ಮಾರ್ಪಾಡಾದ ಸನ್ನಿವೇಶವನ್ನು ಉದಾಹರಿಸಬಹುದಾಗಿದೆ.

“ಆದಿ ವರಾಹ ಲಾಂಛನ ಚಾಳುಕ್ಯಾರ್ಜುನನೆಂದು ಬಿರುದಾಂಕಿತನಾದ ಮಹಾಸಾಮಂತ ನರಸಿಂಗಯ್ಯನು ನರಸಿಂಗೇಶ್ವರ ದೇವಾಲಯವನ್ನು ಕಟ್ಟಿಸಿ ಅದರ ಅಭ್ಯಂತರ ಸಿದ್ಧಿಗಾಗಿ

ಮಣಲೆವಾಡಿ ಗ್ರಾಮವನ್ನು ದತ್ತಿ ಬಿಟ್ಟ ವಿಷಯವನ್ನು ಕ್ರಿ.ಶ.8ನೇ ಶತಮಾನದ ಕುಕ್ಕರಹಳ್ಳಿ ಶಾಸನವು ದಾಖಲಿಸಿದೆ"[3]

**ವೈಶ್ಯರು** : ಸಮಾಜದಲ್ಲಿ ಮೂರನೆಸ್ಥಾನ, ಬ್ರಾಹ್ಮಣರ ಅನಂತರದ ಸ್ಥಾನಮಾನಗಳು ವೈಶ್ಯರದಾಗಿತ್ತು. ವ್ಯಾಪಾರ ವ್ಯವಹಾರಗಳಲ್ಲಿ ತೊಡಗಿದ್ದು, ಉನ್ನತ ಅವಕಾಶಗಳನ್ನು ಪಡೆದುಕೊಂಡಿದ್ದರು. ಶೆಟ್ಟಿಗಳು, ವಣಿಜರು ಮತ್ತು ವರ್ತಕ ಶ್ರೇಷ್ಠಿಗಳು ಹೀಗೆ ನಾನಾ ಹೆಸರುಗಳಿಂದ ಕರೆಯುವ ವ್ಯವಸ್ಥೆ ರೂಢಿಯಲ್ಲಿತ್ತು. ಸಮಾಜದ ಆರ್ಥಿಕತೆಯ ಏರುಪೇರಿನಲ್ಲಿ ಇವರ ಪಾತ್ರ ಬಹಳ ಪ್ರಮುಖವಾಗಿದ್ದಿತ್ತು. ಅರಸರು ವೈಶ್ಯರಿಗೆ ಗ್ರಾಮ, ಉಪಗ್ರಾಮಗಳನ್ನು ಉಂಬಳಿಯಾಗಿ ಕೊಡುತ್ತಿದ್ದರು.

ನಗರ ಪ್ರದೇಶಗಳಲ್ಲಿ ವಾಣಿಜ್ಯ ವ್ಯಾಪಾರಗಳನ್ನು ನಡೆಸುತ್ತಿದ್ದರಲ್ಲದೆ, ಸಂತೆಗಳನ್ನು ಏರ್ಪಡಿಸುವುದರ ಮೂಲಕ ರೈತರಿಗೆ ನೆರವಾಗುತ್ತಿದ್ದರು. ಇದರಿಂದ ರಾಜ್ಯದ ಆದಾಯ ಹೆಚ್ಚುತ್ತಿತ್ತು. ಶ್ರೀಮಂತ ವೈಶ್ಯರು ಬ್ರಾಹ್ಮಣರಿಗೆ ದೇವಾಲಯಗಳಲ್ಲಿ ದಾನ ನೀಡುತ್ತಿದ್ದರು. ಇದರಿಂದ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದುದರಿಂದ ರಾಜನಿಗೆ ಪರೋಕ್ಷವಾಗಿ ಬೆಂಬಲ ದೊರೆಕುತ್ತಿತ್ತು. ಆರ್ಥಿಕವಾಗಿ ಸಬಲರಾದ ಕಾರಣ ರಾಜನಿಗೆ ಸಂಕಷ್ಟ ಎದುರಾದಾಗ ಸಹಾಯಕರಾಗಿ ನಿಲ್ಲುತ್ತಿದ್ದ ಉದಾಹರಣೆಗಳು ಇತಿಹಾಸದಲ್ಲಿ ಸಿಗುತ್ತವೆ. ಕೆರೆಗಳನ್ನು ಕಟ್ಟಿಸಿರುವುದು, ದೇವಾಲಯಗಳಿಗೆ ದಾನದತ್ತಿ ನೀಡಿರುವುದು ಮುಂತಾದ ಸಮಾಜ ಮುಖಿ ಕೆಲಸಗಳನ್ನು ಮಾಡಿರುವುದು ಹಲವಾರು ಶಾಸನಗಳಿಂದ ತಿಳಿಯ ಬಹುದಾಗಿದೆ.

"ಕ್ರಿ.ಶ.1667ರ ಒಂದು ಶಾಸನದಲ್ಲಿ ಮೈಸೂರಿನ ಅರಸರಾದ ದೇವರಾಜ ಒಡೆಯರ ಆಳ್ವಿಕೆಯ ಕಾಲದಲ್ಲಿ ಅಮೂಲ್ಯ ಹರಳುಗಳ ವರ್ತಕನಾದ ಗುಜರಾತಿನ ಧನ್ನೋಜಿ, ಕನ್ನಂಬಾಡಿ ಸ್ಥಳದ ಹೊಸಕೋಟೆ ಗ್ರಾಮವನ್ನು ಧನ್ನೋಜಿ-ರಾಮಭಾಯಮ್ಮನಪುರ ಎಂಬ ಅಗ್ರಹಾರವಾಗಿ ಮಾರ್ಪಡಿಸಿ ಅನೇಕ ಗೋತ್ರಗಳ ಬ್ರಾಹ್ಮಣರಿಗೆ ನೀಡಿದ ವಿವರವನ್ನು ಹೊಂದಿದೆ"[4]

**ಶೂದ್ರರು** : ವರ್ಣಾಶ್ರಮ ವ್ಯವಸ್ಥೆಯ ಕಟ್ಟಕಡೆಯ ವರ್ಗವೇ ಶೂದ್ರರು, ಇವರು ಸಮಾಜದಲ್ಲಿ ವಿವಿಧ ವೃತ್ತಿಗಳನ್ನವಲಂಭಿಸಿ ದುಡಿಯುತ್ತಿದ್ದರಲ್ಲದೆ ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರ ಸೇವೆಯನ್ನು ಮಾಡುತ್ತಿದ್ದರು. ಪ್ರಮುಖವಾಗಿ ಇವರು ಕೃಷಿ ಚಟುವಟಿಕೆಯನ್ನು ನಡೆಸುತ್ತಿದ್ದರೆಂದು ತಿಳಿಯುತ್ತದೆ. ತಮಗಿಷ್ಟವಾದ ವೃತ್ತಿಯು ಪಾರಂಪರಿಕವಾಗಿ ಬಂದಿದ್ದು, ಅದನ್ನೆ ತಮ್ಮ ಕುಲ ಕಸುಬುಗಳೆಂದು ಭಾವಿಸಿ, ವಿವಿಧ ವರ್ಗದ ಜನರು ಕುಂಬಾರಿಕೆ, ಕಮ್ಮಾರಿಕೆ, ಬಡಗಿ, ಅಕ್ಕಸಾಲಿಗ,

ಅಗಸ, ನಾವಿದ ಅಥವಾ ಕ್ಷೌರಿಕ, ಗಾಣಿಗರು, ಓಜರು, ಮೇದರು, ಕುರುಬ, ಕೊರಮ ಹೀಗೆ ಅವರವರ ವೃತ್ತಿಗನುಸಾರವಾದ ಜಾತಿ ವ್ಯವಸ್ಥೆ ತಲೆ ಎತ್ತಿದೆ. ಆದಾಗಿಯು ಅವರು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾದ ವೃತ್ತಿಯನ್ನು ನಡೆಸುತ್ತಿದ್ದುದು ಕಂಡುಬಂದಿದೆ.

ಶ್ರೀ ಲಕ್ಷ್ಮೀರಮಣ ಸ್ವಾಮಿಯವರ ಸನ್ನಿಧಿಯಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಆಳ್ವಿಕೆ ಸಂದರ್ಭ ಅವರ ಪಾದ ಸೇವಕಳು, ದಾನಿಯೂ ಆದ ಹೊಸೂರು ಸುಬ್ಬಮ್ಮಯ್ಯಳು ಅಮ್ಮನವರ ಗುಡಿಯ ಉಯ್ಯಾಲೆ ಉತ್ಸವದ ಕರೀಮರದ ಮಂಚವನ್ನು ಅರ್ಪಿಸಿರುವರು ಎಂದು ಉಲ್ಲೇಖಿಸಲಾಗಿದೆ"[5] ರಾಜರು, ಅಧಿಕಾರಿಗಳು ಅಲ್ಲದೇ ಸೇವಕರು, ದಾನಿಗಳು ಸಹ ಸಮಾಜೋಪಯೋಗಿ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ನಿದರ್ಶನಗಳು ಅಪಾರ ಪ್ರಮಾಣದಲ್ಲಿ ಸಿಗುತ್ತವೆ.

**ದೇವಿಪಾದ** : "ಚಾಮುಂಡೇಶ್ವರಿ ದೇವಾಲಯದ ಧ್ವಜಸ್ತಂಭದ ಹತ್ತಿರವಿರುವುದೇ ದೇವಿಯ ಪಾದದಗುಡಿ. ಅದನ್ನು ಹಾದು ಹೋಗುವ ಮಾರ್ಗದಲ್ಲಿರುವ ಇದಕ್ಕೆ ಭಕ್ತಾದಿಗಳು ನಮಸ್ಕರಿಸಿಯೇ ಮುಂದುವರೆಯುತ್ತಾರೆ. ಚಾಮುಂಡಿ ಬೆಟ್ಟಕ್ಕೆ ಬರುವ ಭಕ್ತಾದಿಗಳ ಸಂಖ್ಯೆ ಹೆಚ್ಚಾದಾಗ ಪುರೋಹಿತರು ದೇವಿಯ ಪಾದದ ಬಳಿ ಹಾಗೂ ಧ್ವಜಸ್ತಂಭದ ಬಳಿಯೇ ಕಾದಿದ್ದು ತೆಂಗಿನಕಾಯನ್ನು ಒಡೆದು ಬಾಳೆಹಣ್ಣಿನ ನೈವೇದ್ಯವನ್ನು ಸಮರ್ಪಿಸುವುದು, ಊದುಬತ್ತಿಯನ್ನು ಹಚ್ಚುವುದು, ಕರ್ಪೂರದಾರತಿಯನ್ನು ಬೆಳಗುವುದು ಇತ್ಯಾದಿ ಪೂಜಾ ಕಾರ್ಯಗಳನ್ನು ನೆರವೇರಿಸುವುದುಂಟು. ಅಸ್ಪೃಶ್ಯರಿಗೆ ದೇವಾಲಯದ ಪ್ರವೇಶವೇ ಇರದಿದ್ದ ಕಾಲದಲ್ಲಿ ಮಹಾದ್ವಾರದ ಹೊರಗಡೆಯೇ ನಿಂತು ಶಿವಾರ್ಚಕರಿಂದ ಪೂಜಾ ಕಾರ್ಯಗಳನ್ನು ನೆರವೇರಿಸಿ ಕೊಳ್ಳುತ್ತಿದ್ದಿರಬೇಕು"[6]

**ದೇವಾಲಯಕ್ಕೆ ದಲಿತರ ಪ್ರವೇಶ** : "1933ರ ಜೂನ್ ತಿಂಗಳಿನಲ್ಲಿ ನಡೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಮುಜರಾಯಿ ಇಲಾಖೆಯು ದೇವಾಲಯಗಳಿಗೆ ದಲಿತರ ಪ್ರವೇಶದ ಬಗ್ಗೆ ಒಂದು ಮಸೂದೆಯನ್ನು ಮಂಡಿಸಿತು. ಇದಕ್ಕೆ ಕಾರಣ ನೆರೆಯ ಕೇರಳ ರಾಜ್ಯದ ಪ್ರಮುಖ ಜನಪರ ಸಂಸ್ಥಾನವಾಗಿದ್ದ ತಿರುವಾಂಕೂರು ಸಂಸ್ಥಾನದಲ್ಲಿ ದಲಿತರು ದೇವಾಲಯ ಪ್ರವೇಶ ಮಾಡುವ ಮಸೂದೆಯು ಜಾರಿಗೆ ಬಂದಿತು. ಇದು ಮೈಸೂರು ಸಂಸ್ಥಾನದವರಿಗೆ ಒಂದು ಹೊಸ ಚೈತನ್ಯವನ್ನು ತಂದುಕೊಟ್ಟಿದೆ"[7] ಈ ಕಾರಣದಿಂದ ಕೆ.ಟಿ.ಭಾಷ್ಯಂ, ಟಿ.ಟಿ.ಶರ್ಮಾ, ವೆಂಕಟಪತ್ತಯ್ಯ, ಪಿ.ಆರ್.ರಾಮಯ್ಯನವರ ನೇತೃತ್ವದಲ್ಲಿ ಹರಿಜನರಿಗೆ ಬೆಂಗಳೂರಿನ ಬಸವನಗುಡಿ ದೇವಾಲಯಕ್ಕೆ ಪ್ರವೇಶಾವಕಾಶವನ್ನು ಕಲ್ಪಿಸಲಾಯಿತು"[8] ಹೀಗೆ ದೇವಾಲಯ ಪ್ರವೇಶ ಚಳುವಳಿಯಲ್ಲಿ

ದಲಿತರಾದ ಟಿ.ಎ.ದಾಸಪ್ಪ, ಚನ್ನಿಗರಾಮಯ್ಯ, ಸಿ.ಟಿ.ಹನುಮಂತಯ್ಯ ಮುಂತಾದವರು ಭಾಗವಹಿಸುವುದರ ಮೂಲಕ ಗೋಪಾಲಸ್ವಾಮಿ ಅಯ್ಯರ್‌ರವರ ಪ್ರಭಾವದಿಂದ ಸಂಸ್ಥಾನದ ಹಲವಾರು ಚಳುವಳಿಗಳಲ್ಲಿ ಭಾಗವಹಿಸಿರುವುದು ತಿಳಿಯಬಹುದು"[9]

ಇಂದು ಮೈಸೂರು ನಗರದ ದೇವಾಲಯಗಳಲ್ಲಿ ಯಾವುದೇ ಸಮುದಾಯದವರು, ಯಾವುವದೇ ಜಾತಿಯವರಾಗಲಿ ಒಳ ಪ್ರವೇಶಿಸುವುದಕ್ಕೆ ನಿರ್ಬಂಧವಿಲ್ಲ. ಹಾಗೇನಾದರೂ ನಿರ್ಬಂಧ ಹೇರಿದಲ್ಲಿ ಕಾನೂನಿನ ಶಿಕ್ಷೆಗೆ ಗುರಿಪಡಿಸಲಾಗುತ್ತದೆ.

## 7.2 ಜಾತಿ ಹಾಗೂ ಸಮುದಾಯಗಳು ಪೂಜಿಸುವ ದೇವರು

ಮೈಸೂರು ನಗರದಲ್ಲಿ ಹಲವಾರು ಜಾತಿಸಮುದಾಯಗಳಿವೆ. ಮೈಸೂರು ನಗರವು ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎಂದು ಪ್ರಶಂಸಿತವಾಗಿದೆ. ದೇಶದ ಪ್ರಮುಖ ಪ್ರವಾಸಿ ಕೇಂದ್ರವೂ ಆಗಿರುವ ಮೈಸೂರು ನಗರವು ಸಹಜವಾಗಿಯೇ ದೇಶ–ವಿದೇಶದ ಆಸಕ್ತರನ್ನು ಆಕರ್ಷಿಸಿದೆ. ಉದ್ಯೋಗವೇ ಮೊದಲಾದ ಕಾರಣಗಳಿಗಾಗಿ ವಿಭಿನ್ನ ಭಾಷೆ, ಧರ್ಮ, ಸಂಸ್ಕೃತಿಯ ಜನರು ಇಲ್ಲಿ ಬಂದು ನೆಲೆನಿಂತಿರುವುದೂ ಉಂಟು. ಹೀಗಾಗಿ ಮೈಸೂರು ನಗರದಲ್ಲಿ ಬಹು ಸಂಸ್ಕೃತಿ, ಸಮುದಾಯಗಳನ್ನು ಕಾಣಬಹುದಾಗಿದ್ದು, ಹಲವಾರು ದೇವರುಗಳನ್ನು ಪೂಜಿಸಿ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುವುದನ್ನು ನೋಡಲು ಸಿಗುತ್ತದೆ.

**ಅಗಸ :** ಬಟ್ಟೆ ಮಡಿ ಮಾಡುವುದು ಇವರ ಕುಲ ಕಸುಬು. ಮದುವೆ ಹಾಗೂ ದೇವರ ಜಾತ್ರೋತ್ಸವಗಳಲ್ಲಿ ನಡೆಮಡಿ ಹಾಸುವುದು, ಪಂಜು ಹಿಡಿಯುವುದು, ಗ್ರಾಮದೇವತೆಗಳಿಗೆ ದೀವಟಿಗೆ ಸೇವೆ ಸಲ್ಲಿಸುವುದು ಮುಂತಾದ ಕಾರ್ಯಗಳನ್ನು ಮಾಡುವುದು ಇವರ ಸಾಂಪ್ರದಾಯಿಕ ಕಾರ್ಯಗಳೆನಿಸಿವೆ. ಮಡಿವಾಳ ಮಾಚಯ್ಯ ಅಥವಾ ಮಾಚೀದೇವ ಇವರ ಕುಲದೇವರು ಜೊತೆಗೆ ಮನೆ ದೇವರು. ಇವರು ಗ್ರಾಮದೇವರು, ಇಷ್ಟದೇವರುಗಳೆಂದು ಅನೇಕ ದೇವರುಗಳನ್ನು ಪೂಜಿಸುವರು. ಗೌರಿಗಣೇಶ ಹಬ್ಬದಲ್ಲಿ ಭೂಮಿ ಪೂಜೆಯನ್ನು ದಸರಾ ಹಬ್ಬದಲ್ಲಿ ಆಯುಧ ಪೂಜೆಯಂದು ತಮ್ಮ ವೃತ್ತಿಯ ಆಯುಧಗಳನ್ನು ಉಬ್ಬೆಯನ್ನು ಪೂಜಿಸುವರು. ಮಡಿವಾಳರಲ್ಲಿ ಶಿವಭಕ್ತರೂ, ಲಿಂಗಧಾರಿಗಳೂ, ನಾರಾಯಣ, ವೆಂಕಟೇಶ್ವರನ ಭಕ್ತರಾದ ನಾಮಧಾರಿಗಳೂ ಉಂಟು. ಧಾರ್ಮಿಕ ಆಚರಣೆಗಳನ್ನು ಕೆಲವರು ಪುರೋಹಿತರ ಮಾರ್ಗದರ್ಶನದಲ್ಲಿ ನೆರವೇರಿಸಿದರೆ, ಕೆಲವರು ತಮ್ಮ ಕುಲದ ಸ್ವಾಮಿಗಳ ಸಮ್ಮುಖದಲ್ಲಿ ನಡೆಸುವರು.

**ಅರಸು :** ಮೈಸೂರು ನಗರದಲ್ಲಿ ಸಾಕಷ್ಟು ಸಂಖ್ಯೆಯಲ್ಲಿರುವ ಅರಸು ಜಾತಿಯವರು ಕ್ಷತ್ರಿಯ ಕುಲದ ರಾಜಪಿಂಡೆ ಶಾಖೆಗೆ ಸೇರಿದವರಾಗಿದ್ದು, ಮೈಸೂರು ಒಡೆಯರ್ ರಾಜಮನೆತನವೂ ಇದೇ ಮೂಲದ್ದಾಗಿದೆ. ಇವರು ಹಬ್ಬ–ಹರಿದಿನಗಳನ್ನು ಧಾರ್ಮಿಕ ಶ್ರದ್ಧೆಯಿಂದ ಆಚರಿಸುವ ಇವರಿಗೆ ದಸರೆ ದೊಡ್ಡ ಹಬ್ಬವಾಗಿದ್ದು, ಆ ಸಂದರ್ಭದಲ್ಲಿ ಕಾಳಿ, ಲಕ್ಷ್ಮಿ ಹಾಗೂ ಮೂಗೂರು ತಿಬ್ಬಾದೇವಿಯರ ಜಾತ್ರೆಗಳಿಗೆ ವಿಶೇಷ ಮಹತ್ವ ನೀಡುವ ಇವರು ಮಂಟೇಸ್ವಾಮಿ ಶಿಷ್ಯರಾದ ರಾಚಪ್ಪಾಜಿ, ಸಿದ್ದಪ್ಪಾಜಿ ಗದ್ದುಗೆಗಳಿಗೂ ನಡೆದುಕೊಳ್ಳುತ್ತಾರೆ. ಬೊಪ್ಪೇಗೌಡನಪುರದಲ್ಲಿರುವ ಮಂಟೇಸ್ವಾಮಿ ಮಠವು ಅರಸು ಜನಾಂಗದವರ ಸುಪರ್ದಿಯಲ್ಲಿದೆ.

**ಈಡಿಗ :** ಈಚಲು, ತೆಂಗು ಹಾಗೂ ಬಗನಿ ಮರಗಳಿಂದ ಹೆಂಡ ಅಥವಾ ಸೇಂದಿ ಇಳಿಸುವುದು ಇವರ ಕುಲಕಸುಬು. ಇತ್ತೀಚೆಗೆ ವ್ಯವಸಾಯ, ವ್ಯಾಪಾರ ಮುಂತಾದ ವೃತ್ತಿಗಳನ್ನು ಅವಲಂಬಿಸಿದ್ದಾರೆ. ಇವರು ಹರಿ ಹಾಗೂ ಹರನ ಭಕ್ತರು. ಎಲ್ಲಮ್ಮ ಅಥವಾ ಸುರಭಾಂಡೇಶ್ವರಿ ಹಾಗೂ ಕಾಟಮೇಶ್ವರ ಇವರ ಮನೆದೇವರುಗಳು. ವರ್ಷಕ್ಕೊಂದು ಬಾರಿ ಕುಲಸ್ಥರೆಲ್ಲರೂ ಸೇರಿ ಎಲ್ಲಮ್ಮನ ಪೂಜೆಯನ್ನು ಭಕ್ತಿ ಭಾವದಿಂದ ಮಾಡುತ್ತಾರೆ.

**ಉಪ್ಪಾರ :** ಭಗೀರಥ ವಂಶದವರು, ಸಾಗರವಂಶದವರು, ಮೇಲುಸಕ್ಕರೆಯವರು, ಉಪ್ಪಾಲಿಗಶೆಟ್ಟರು ಎಂದೆಲ್ಲ ಕರೆದುಕೊಳ್ಳುವ ಇವರ ಕುಲಕಸುಬು ಉಪ್ಪನ್ನು ತಯಾರಿಸುವುದಾಗಿತ್ತು. ಪ್ರಸ್ತುತ ಕೂಲಿ ಕೆಲಸ, ಹೂಕಟ್ಟುವುದು, ವ್ಯವಸಾಯ ಹಾಗೂ ಕೈಗಾರಿಕಾ ಕಾರ್ಮಿಕರಾಗಿ ತೊಡಗಿಸಿಕೊಂಡಿದ್ದಾರೆ. ಇವರು ಶ್ರಾವಣದಿಂದ ಯುಗಾದಿವರೆಗಿನ ಎಲ್ಲಾ ಹಿಂದೂ ಹಬ್ಬಗಳನ್ನು ಆಚರಿಸುವರಾದರೂ ಶೈವ ಸಂಬಂಧಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುವರು. ಭಗೀರಥನನ್ನು ತಮ್ಮ ಕುಲದ ಆರಾಧ್ಯ ವ್ಯಕ್ತಿಯೆಂದು ಪರಿಗಣಿಸಿದ್ದಾರೆ.

**ಒಕ್ಕಲಿಗ :** ಸಾಂಪ್ರದಾಯಿಕವಾಗಿ ವ್ಯವಸಾಯ ಮಾಡುತ್ತಿದ್ದವರನ್ನು ಒಕ್ಕಲು ಮಕ್ಕಳು ಎಂದು ಗುರುತಿಸಲಾಗುತ್ತದೆ. ಈ ಹಿಂದೆ ಗ್ರಾಮದ ಮುಖಂಡತ್ವ ಇವರದೇ ಆಗಿರುತ್ತಿದ್ದುದರಿಂದ ಗೌಡ ಎಂಬ ಹೆಸರು ಇವರಿಗಿದೆ. ಇತ್ತೀಚಿನ ದಿನಗಳಲ್ಲಿ ವ್ಯವಸಾಯದ ಜೊತೆಗೆ ವ್ಯಾಪಾರ, ನೌಕರಿ ಮುಂತಾದ ಉದ್ಯೋಗಗಳಲ್ಲೂ ತೊಡಗಿಸಿಕೊಂಡಿದ್ದಾರೆ. ಇವರು ಸೋಮವಾರದವರು, ಶನಿವಾರದವರು ಎಂದು ತಾವು ಪೂಜಿಸುವ ದೇವರ ಹಿನ್ನೆಲೆಯಲ್ಲಿಯೂ ಗುರುತಿಸಲ್ಪಡುತ್ತಾರೆ. ಸೋಮವಾರದವರು ನಂಜುಂಡೇಶ್ವರ, ಮಾದೇಶ್ವರ, ಮುಡುಕುತೊರೆ ಮಲ್ಲಿಕಾರ್ಜುನ, ಆದಿಚುಂಚನಗಿರಿ ಭೈರವ, ಗಂಗಾಧರ ಮೊದಲಾದ ಶೈವ ಪರಂಪರೆಯ ಒಕ್ಕಲಾದರೆ, ಶನಿವಾರದವರು ತಿರುಪತಿ ವೆಂಕಟರಮಣ, ಮೇಲುಕೋಟೆ ಚಲುವನಾರಾಯಣ,

ಬಿಳಿಗಿರಿರಂಗನಾಥ ಮುಂತಾದ ವಿಷ್ಣುವಿನಂಶದ ಒಕ್ಕಲಾಗಿರುತ್ತಾರೆ. ಜೊತೆಗೆ ಸ್ಥಳಿಯ ಗ್ರಾಮದೇವತೆಗಳಿಗೂ ನಡೆದು ಕೊಳ್ಳುತ್ತಾರೆ.

**ಕುರುಬ :** ಕುರಿಸಾಕಿ ಅವುಗಳ ಉಣ್ಣೆಯಿಂದ ಕಂಬಳಿ ನೇಯುವುದು ಇವರ ಮೂಲ ಕಸುಬಾದರೂ ಇತ್ತೀಚೆಗೆ ವ್ಯವಸಾಯ, ವ್ಯಾಪಾರ, ನೌಕರಿ, ಕಾರ್ಮಿಕರಾಗಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರಲ್ಲಿ ನೂರಹನ್ನೊಂದು ಕುಲಗಳಿವೆ. ಇವರ ಕುಲದೇವರು ಬೀರೇಶ್ವರ ಅಥವಾ ಬೀರಪ್ಪ. ಕಡಬಡಯ್ಯ ಕುಣಿತ ಇವರ ಜಾತಿಯವರಿಗೆ ಮೀಸಲಾದ ಧಾರ್ಮಿಕ ಕುಣಿತ. ಲಿಂಗಧೀರರು ಹಾಗೂ ನಂದಿಧ್ವಜ ಕುಣಿತವೂ ಇವರಲ್ಲಿದೆ. ಮಾದೇಶ್ವರ, ಮಂಟೇಸ್ವಾಮಿಗಳಿಗೆ ಗುಡ್ಡರನ್ನು ಬಿಡುವಂತೆ ತಮ್ಮ ಕುಲದೇವರಾದ ಬೀರೇಶ್ವರನಿಗೂ ಗುಡ್ಡರನ್ನು ಬಿಡುತ್ತಾರೆ. ಮೈಲಾರಲಿಂಗನಿಗೆ ತಮ್ಮನ್ನು ಅರ್ಪಿಸಿಕೊಂಡವರನ್ನು ಗೊರವರೆಂದು ಹೇಳುವರು. ದಾಸಕುಲದವರು ತಿಮ್ಮಪ್ಪನಿಗೆ ದಾಸರನ್ನು ಬಿಡುತ್ತಾರೆ. ಇವರು ಯುಗಾದಿಯಿಂದ ಶಿವರಾತ್ರಿಯವರೆಗಿನ ಎಲ್ಲಾ ಹಬ್ಬಗಳನ್ನು ಆಚರಿಸುವರು.

**ಕೊರಮರು :** ಇವರನ್ನು ಕೊರಮ, ಕೊರವ, ಕೊರಚ, ಕೊರಮಶೆಟ್ಟಿ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಮೂಲತಃ ಅಲೆಮಾರಿ ಬುಡಕಟ್ಟಿನವರಾಗಿದ್ದ ಇವರು ಕ್ರಮೇಣ ಅಲ್ಲಲ್ಲಿ ಒಂದೆಡೆ ಸ್ಥಿರವಾಗಿ ನೆಲೆಸಿದ್ದಾರೆ. ಬಿದಿರಿನ ಕೈಗಾರಿಕೆಯಲ್ಲಿ ಕೆಲಸ ಮಾಡುವುದು ಕೊರಮರ ಪ್ರಧಾನ ಕಸುಬು. ಇದನ್ನು ಪೂಜ್ಯಭಾವನೆಯಿಂದ ಗೌರವಿಸುತ್ತಾರೆ. ಧಾರ್ಮಿಕ ಕಾರ್ಯಗಳನ್ನು ಅವರ ಕುಲದ ಹಿರಿಯರಾಗಲೀ ಬ್ರಾಹ್ಮಣ ಪುರೋಹಿತರಾಗಲೀ ನಡೆಸಿಕೊಡುವರು. ವೆಂಕಟ ರಮಣ, ಮುನೇಶ್ವರ, ಮಾರಮ್ಮ, ಚಾಮುಂಡಮ್ಮ ಮುಂತಾದ ದೇವರುಗಳನ್ನು ಪೂಜಿಸುವರು.

**ಕ್ಷೌರಿಕ :** ಮೈಸೂರು ನಗರದಲ್ಲಿ ಇವರನ್ನು ಆರ್ಯನಯನ ಕ್ಷತ್ರಿಯ, ಅಂಗಾರಕ, ಹಜಾಮ, ಹಡಪದವರು, ನಾಯಿಂದ, ಮೇಳಗಾರ, ಭಜಂತ್ರಿ, ನಾವಿದ, ಕೆಲಸಿ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಕ್ಷೌರಿಕ ವೃತ್ತಿ ಇವರ ಸಾಂಪ್ರದಾಯಿಕ ಉದ್ಯೋಗ. ಇವರು ಮಂಗಳ ಕಾರ್ಯಗಳಿಗೆ ಮಂಗಳವಾದ್ಯ ನುಡಿಸುವುದೂ ಉಂಟು. ಶಿವ ಹಾಗೂ ವಿಷ್ಣುವನ್ನು ಪೂಜಿಸುವುದರ ಜೊತೆಗೆ ಮಹದೇಶ್ವರ, ಸಿದ್ದಪ್ಪಾಜಿ, ನಂಜುಂಡೇಶ್ವರ ಮುಂತಾದ ದೇವರುಗಳನ್ನು ಪೂಜಿಸುವರು.

**ಗಾಣಿಗ :** ಗಾಣದ ಮೂಲಕ ಎಣ್ಣೆತೆಗೆಯುವ ವೃತ್ತಿಯನ್ನು ಪಾರಂಪರಿಕವಾಗಿ ಅವಲಂಬಿಸಿ ದವರನ್ನು ಗಾಣಿಗರೆಂದು ಕರೆಯಲಾಗುತ್ತದೆ. ಮಹದೇಶ್ವರ, ನಂಜುಂಡೇಶ್ವರ, ಭೈರವ,

ಮಲ್ಲಿಕಾರ್ಜುನ, ವೆಂಕಟರಮಣ ಹಾಗೂ ಅನೇಕ ಗ್ರಾಮ ದೇವತೆಗಳನ್ನು ಗಾಣಿಗರು ಆರಾಧಿಸುತ್ತಾರೆ.

**ಜಾಡಮಾಲಿ :** ಇವರನ್ನು ಆದಿದ್ರಾವಿಡ, ಜಲಗಾರ, ಪೌರಕಾರ್ಮಿಕ ಮುಂತಾದ ಹೆಸರುಗಳಿಂದ ಗುರುತಿಸಲಾಗುತ್ತದೆ. ಇವರಲ್ಲಿ ಕೆಲವರು ಪೌರಕಾರ್ಮಿಕರಾಗಿ ನಗರಪಾಲಿಕೆಯಿಂದ ನೌಕರಿ ಪಡೆದುಕೊಂಡಿದ್ದಾರೆ. ಕೆಲವರು ಚಮ್ಮಾರರಾಗಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಆದಿಶಕ್ತಿ ಮಹಾಕಾಳಮ್ಮ ಇವರ ಕುಲದೇವತೆ. ಶ್ರೀರಂಗಂ ರಂಗನಾಥ, ಪೆರ್ಮಾಳು ಗೋಪಾಲಕೃಷ್ಣ, ಆದಿ ಚಿಕ್ಕಾಲಮ್ಮ, ಬಣ್ಣಾರಿ ಅಮ್ಮ ಮೊದಲಾದ ದೈವಗಳನ್ನು ಪೂಜಿಸುತ್ತಾರೆ. ಸಂಕ್ರಾಂತಿ ಅಥವಾ ಪೊಂಗಲ್ ಹಬ್ಬವನ್ನು ಶ್ರದ್ಧಾಭಕ್ತಿಯಿಂದ ಆಚರಿಸುತ್ತಾರೆ.

**ದರ್ಜಿ :** ಸಾಳೆ, ಶಿಂಪಿ ನಾಮದೇವ್, ಸಿಂಪಿಗ, ಚಿಪ್ಪಿಗ ಭಾವಸಾರ್ ಕ್ಷತ್ರಿಯ ಮುಂತಾದ ಹೆಸರುಗಳಿಂದ ಕರೆಸಿಕೊಳ್ಳುವ ಇವರು ಮರಾಠ ಮೂಲದವರು. ಸಾಮಾನ್ಯವಾಗಿ ಬಟ್ಟೆ ಹೊಲೆಯುವ ಮತ್ತು ಜವಳಿ ಅಂಗಡಿಗಳನ್ನು ಇಟ್ಟುಕೊಳ್ಳುವುದು ಪ್ರಧಾನವಾದ ವೃತ್ತಿಯಾಗಿದೆ. ಇವರು ವಿಷ್ಣು ಹಾಗೂ ಶಿವ ಇಬ್ಬರನ್ನು ಸಮಾನವಾಗಿ ನೋಡುವುದರ ಜೊತೆಗೆ ಕುಲದೇವತೆ ಪಂಡರಾಪುರದ ವಿಠೋಬ ಹಾಗೂ ಇಂಗುಳಾದೇವಿ, ಪಾಂಡುರಂಗ, ಖಂಡೋಬ, ರುಕ್ಮಿಣಿ, ಭವಾನಿ, ಎಲ್ಲಮ್ಮ, ಪಟ್ಟಲದಮ್ಮ ಮುಂತಾದ ದೇವರುಗಳನ್ನು ಪೂಜಿಸುತ್ತಾರೆ. ಆಷಾಢ ಹಾಗೂ ಕಾರ್ತಿಕ ಶುದ್ಧ ಏಕಾದಶಿಗಳಂದು ಪಂಡರಾಪುರ ಯಾತ್ರೆಗೆ ಹೋಗುವುದಕ್ಕೆ ಪ್ರಾಮುಖ್ಯತೆ ನೀಡುತ್ತಾರೆ. ಸಂತ ನಾಮದೇವ, ತುಕಾರಾಮರನ್ನು ಭಕ್ತಿಯಿಂದ ನೆನೆಯುತ್ತಾರೆ. ಹಬ್ಬ–ಜಾತ್ರೆಗಳ ಸಂದರ್ಭಗಳಲ್ಲಿ ಹೋಮ ಹವನ ಇತ್ಯಾದಿಗಳನ್ನು ನಡೆಸುವರು. ಪ್ರಥಮ ಏಕಾದಶಿ ಹಾಗೂ ನವರಾತ್ರಿ ಇವರ ಪ್ರಮುಖ ಹಬ್ಬಗಳಾಗಿದ್ದು ನವರಾತ್ರಿ ಹಬ್ಬವನ್ನು ವಿಶಿಷ್ಟವಾಗಿ ಆಚರಿಸುತ್ತಾರೆ.

**ಬಣಜಿಗ :** ವ್ಯಾಪಾರ ವಾಣಿಜ್ಯ ಇವರ ಮೂಲಕಸುಬು. ಇತ್ತೀಚೆಗೆ ವ್ಯವಸಾಯ, ನೌಕರಿ ಮೊದಲಾದ ಕ್ಷೇತ್ರಗಳಲ್ಲೂ ತೊಡಗಿಸಿಕೊಂಡಿದ್ದಾರೆ. ದಾಸ ಬಣಜಿಗರು ಪೂರ್ವದಲ್ಲಿ ಜೈನ ಕ್ಷತ್ರಿಯರಾಗಿದ್ದು, ಅನಂತರದಲ್ಲಿ ರಾಮಾನುಜಚಾರ್ಯರ ಪ್ರಭಾವದಿಂದ ವೈಷ್ಣವ ಮತಾವಲಂಬಿ ಗಳಾದರೆಂದು ಅಭಿಪ್ರಾಯವಿದೆ. ತೆಲಗು ಬಣಜಿಗರು ಶೈವ ಅಥವಾ ವೈಷ್ಣವರಾಗಿದ್ದು, ಬ್ರಾಹ್ಮಣ ಪುರೋಹಿತರ ಮಾರ್ಗದರ್ಶನದಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸುವರು.

**ಬೆಸ್ತ :** ಇವರನ್ನು ತೊರೆಯರು, ಗಂಗಾ ಮತಸ್ಥರು, ಪರಿವಾರದವರು, ನಾಯಕರು ಮೊದಲಾದ ಹೆಸರುಗಳಿಂದ ಕರೆಯುವರು. ವ್ಯವಸಾಯ, ಬೇಟೆ, ಮೀನು ಶಿಕಾರಿ ಮುಂತಾದ ವೃತ್ತಿಗಳನ್ನು

ಇವರು ಮಾಡುತ್ತಾರೆ. ಬಹುತೇಕ ಜನ ಕೂಲಿ ಮಾಡಿಯೇ ಜೀವನ ಸಾಗಿಸುತ್ತಾರೆ. ಇವರಲ್ಲಿ ಗುಡ್ಡಯ್ಯ, ದಾಸಯ್ಯ ಪರಂಪರೆ ವ್ಯಾಪಕವಾಗಿದ್ದು, ಇವರ ನೇತೃತ್ವದಲ್ಲಿಯೇ ಧಾರ್ಮಿಕ ಕಾರ್ಯಗಳು ನಡೆಯುತ್ತವೆ. ಗೌರಿಹಬ್ಬ ಅಥವಾ ಮಹಾಲಯ ಅಮಾವಾಸ್ಯೆಯಂದು ಪೂರ್ವಿಕರಿಗೆ ಎಡೆ ಇಟ್ಟು ಅವರನ್ನು ಸ್ಮರಿಸಿಕೊಳ್ಳುತ್ತಾರೆ. ವರ್ಷಕ್ಕೊಂದು ಸಲ ಗೌರಿ ಹಬ್ಬದ ದಿನ ಹೊಳೆಗೆ ಹೋಗಿ ಗಂಗೆ ಪೂಜೆ ಮಾಡುವರು.

**ಬ್ರಾಹ್ಮಣ :** ಬ್ರಾಹ್ಮಣ ಪದವು ಬ್ರಹ್ಮಜ್ಞಾನದಿಂದ ಉತ್ಪತ್ತಿಯಾಗಿದೆ ಎಂದು ಹೇಳಲಾಗುವ ಇವರಲ್ಲಿ ಶಂಕರಾಚಾರ್ಯರ ಅನುಯಾಯಿಗಳಾದ ಸ್ಮಾರ್ತರರು, ರಾಮಾನುಜಚಾರ್ಯರ ಅನುಯಾಯಿ ಗಳಾದ ಶ್ರೀವೈಷ್ಣವರು, ಮಧ್ವಾಚಾರ್ಯರ ಅನುಯಾಯಿಗಳಾದ ಮಾಧ್ವರು ಎಂಬ ಒಳಪಂಗಡ ಗಳೂ ಹಲವು ಉಪಪಂಗಡಗಳು ಇವೆ. ಸ್ಮಾರ್ತರರು ಶಿವನನ್ನೂ, ವೈಷ್ಣವರು ಹಾಗೂ ಶ್ರೀವೈಷ್ಣವರು ವಿಷ್ಣುವನ್ನು ಆರಾಧಿಸುವರು. ಸ್ಮಾರ್ತರರಿಗೆ ಯುಗಾದಿ, ಗೌರಿಗಣಪತಿ, ಶಿವರಾತ್ರಿ ಇವು ಮುಖ್ಯವಾದ ಹಬ್ಬಗಳು. ಶಂಕರ ಜಂಯಂತಿಯನ್ನು ವಿಶೇಷವಾಗಿ ಆಚರಿಸುವರು. ಮಾಧ್ವರಿಗೆ ಎಲ್ಲಾ ಹಿಂದೂ ಹಬ್ಬಗಳೊಡನೆ ಮಾಧ್ವನವಮಿ, ರಾಘವೇಂದ್ರಸ್ವಾಮಿ ಆರಾಧನೆ ಮುಖ್ಯವಾದುವು. ಅಯ್ಯಂಗಾರರು ಗೋಕುಲಾಷ್ಟಮಿ, ಕಾರ್ತಿಕ ಹಬ್ಬ, ಖನು ಹಬ್ಬಗಳನ್ನು ಆಚರಿಸುತ್ತಾರೆ. ಇವರು ಎಲ್ಲಾ ಆಚರಣೆಗಳನ್ನು ವೈದಿಕ ಸಂಪ್ರದಾಯದಂತೆ ನಡೆಸುತ್ತಾರೆ.

**ಮಾದಿಗ :** ಆದಿಜಾಂಬವರು, ಎಡಗೈನವರು, ಪದ್ಮಜಾತಿಯವರು, ಮಾತಂಗರು, ಬೇಗಾರರು, ಪಂಚಮರು, ಚಮ್ಮಾರರು ಮೊದಲಾದ ಹೆಸರುಗಳಿಂದ ಇವರನ್ನು ಗುರುತಿಸಲಾಗುತ್ತದೆ. ಮಾತಂಗಿ ಇವರ ಕುಲದೇವತೆಯಾಗಿದ್ದು, ಗುಡ್ಡಯ್ಯ, ದಾಸಯ್ಯರನ್ನು ಬಿಡುವ ಪರಂಪರೆ ಇವರಲ್ಲಿ ವ್ಯಾಪಕವಾಗಿದೆ. ಶರಣ ಹರಳಯ್ಯ ಜಾಂಬವಂತ ಮುನಿಯವರನ್ನು ತಮ್ಮ ಕುಲದ ಮೂಲ ಪುರಷರೆನ್ನುವ ಅಭಿಮಾನವಿದೆ. ಇವರು ಮಾದೇಶ್ವರನನ್ನು ತಮ್ಮ ಜಾತಿಯವನೇ ಎನ್ನುವುದುಂಟು.

**ಮಾರ್ವಾಡಿ :** ರಾಜಸ್ಥಾನ ಹಾಗೂ ಗುಜರಾತಿನಿಂದ ಇಲ್ಲಿಗೆ ವಲಸೆ ಬಂದು ಗಿರವಿ ಅಂಗಡಿ, ಚಿನ್ನ-ಬೆಳ್ಳಿ, ಬಟ್ಟೆ, ದಿನಬಳಕೆಯ ಹಾಗೂ ಇತರೆ ವಸ್ತುಗಳ ವ್ಯಾಪಾರವನ್ನು ಮಾಡುತ್ತಾರೆ. ಇವರು ಮಹಾವೀರ ಜಯಂತಿ ಮತ್ತಿತರ ಜೈನಧರ್ಮ ಸಂಬಂಧಿ ಹಬ್ಬ ವ್ರತಗಳನ್ನು ಆಚರಿಸುವರು. ದೀಪಾವಳಿ ಹಬ್ಬವನ್ನು ಅದ್ದೂರಿಯಿಂದ ಆಚರಿಸುವರು.

**ಮೇದ :** ಗೌರಿಗ, ಗೌರಿಮಕ್ಕಳು, ಗೌರಿಮೇದರು ಎಂದೆಲ್ಲಾ ಕರೆಸಿಕೊಳ್ಳುವ ಇವರ ಮುಖ್ಯ ವೃತ್ತಿ ಬಿದಿರಿನಿಂದ ನಿತ್ಯೋಪಯೋಗಿ ಸಾಧನ ಸಲಕರಣೆಗಳನ್ನು ತಯಾರಿಸುವುದು. ಶಿವಶರಣ ಮೇದರ ಕ್ಯಾತಯ್ಯನನ್ನು ತಮ್ಮ ಕುಲದ ಮೂಲ ಪುರುಷನೆಂದೂ, ಅವನ ಕಾರಣದಿಂದ ತಾವೂ ವೀರಶೈವರಾಗಿದ್ದೇವೆಂದೂ ಪ್ರತಿಪಾದಿಸುವರು. ಗುಡ್ಡಯ್ಯ ಹಾಗೂ ದಾಸಯ್ಯ ಬಿಡುವ ಪರಂಪರೆ ಇವರಲ್ಲಿಯೂ ಇದೆ. ಗುಡ್ಡರು ಮಾದೇಶ್ವರನಿಗಿಂತ ಸಿದ್ದಪ್ಪಾಜಿ, ರಾಚಪ್ಪಾಜಿಯವರಿಗೇ ಹೆಚ್ಚಾಗಿ ನಡೆದುಕೊಳ್ಳುತ್ತಾರೆ. ಗೌರಿ ಕುಲದವರಿಗೆ ಗೌರಿಹಬ್ಬ ಮುಖ್ಯವಾದದ್ದು. ಉಳಿದೆಲ್ಲಾ ಹಬ್ಬಗಳನ್ನು ಇತರರ ಹಾಗೆ ಆಚರಿಸುವರು. ತಮ್ಮ ಕುಲದೇವತೆಯಾದ ಮಲ್ಲಮ್ಮನನ್ನು ಸಂಕ್ರಾಂತಿಯದಿನ ವಿಶೇಷವಾಗಿ ಪೂಜಿಸುವರು.

**ಮೊದಲಿಯರ್ :** ಮೊದಲಿಯರ್ ಎಂಬ ಪದ ಮೊದಲ ಅಂದರೆ ಜೇಷ್ಠ ಅಥವಾ ಮೊದಲು ಎಂಬ ಪದದಿಂದ ಬಂದಿದೆಯೆಂದು ಭಾವಿಸಲಾಗಿದೆ. ವ್ಯಾಪಾರ, ಕಟ್ಟಡಗಳನ್ನು ಕಟ್ಟುವ ಗುತ್ತಿಗೆದಾರ, ದಳ್ಳಾಳಿ, ನೌಕರಿ ಮುಂತಾದ ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇವರು ಶೈವ ಹಾಗೂ ವೈಷ್ಣವ ಅನುಯಾಯಿಗಳಾಗಿರುವರು ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣ ಪುರೋಹಿತರ ಮಾರ್ಗದರ್ಶನದಲ್ಲಿ ನಡೆಸುವರು.

**ಯಾದವ :** ಗೊಲ್ಲ, ಕೃಷ್ಣಗೊಲ್ಲ ಎಂದು ಕರೆಯಲ್ಪಡುವ ಇವರು ಒಂದು ಕಾಲದಲ್ಲಿ ಅಲೆಮಾರಿಗಳಾಗಿದ್ದು, ಪಶುಸಂಗೋಪನೆಯಲ್ಲಿ ನಿರತರಾಗಿದ್ದವರು. ಕೃಷ್ಣ, ಮಾರಮ್ಮ, ಎಲ್ಲಮ್ಮ, ಗಂಗಮ್ಮ, ಮುಂತಾದ ದೇವಾನು ದೇವತೆಗಳನ್ನು ಆರಾಧಿಸುತ್ತಾರೆ. ಸಂಕ್ರಾಂತಿ ಹಬ್ಬದಂದು ಕಾಟಮರಾಯನನ್ನು ಪೂಜಿಸುವ ಇವರಲ್ಲಿ ದೇವರಿಗೆ ದಾಸಯ್ಯಗಳನ್ನು ಬಿಡುವ ಸಂಪ್ರದಾಯವಿದೆ.

**ಲಿಂಗಾಯಿತ :** ಶಿವಾಚಾರದವರು, ಲಿಂಗವಂತರು, ಲಿಂಗಧಾರಿಗಳು, ವೀರಶೈವರು ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಚಿಕ್ಕಮಗಳೂರು ಜಿಲ್ಲೆಯ ಬಾಳೆ ಹೊನ್ನೂರು, ಬಳ್ಳಾರಿಯ ಉಜ್ಜನಿ, ಉತ್ತರ ಪ್ರದೇಶದ ಕೇದಾರ ಹಾಗೂ ಕಾಶಿ ಆಂಧ್ರ ಪ್ರದೇಶದ ಶ್ರೀಶೈಲ ಇವರ ಪಂಚ ಪೀಠಗಳಾಗಿವೆ. ಅಷ್ಟಾವರಣ, ಪಂಚಾಚಾರ ಹಾಗೂ ಷಟ್‌ಸ್ಥಲಗಳೂ ಇವರ ಆಚರಣೆಯ ಪ್ರಮುಖ ಧಾರ್ಮಿಕ ಲಕ್ಷಣಗಳಾಗಿದ್ದು ಅವು ಇವರ ಧಾರ್ಮಿಕ ವಿಶೇಷತೆಯನ್ನು ಬಿಂಬಿಸುತ್ತವೆ. ಇವರು ಏಕ ದೇವೋಪಾಸಕರಾಗಿ ಇಷ್ಟಲಿಂಗಧಾರಿಗಳಾಗಿದ್ದು, ಪರಿಶುದ್ಧರೆಂದು ಪರಿಗಣಿಸ ಲಾಗುತ್ತದೆ.

**ವಿಶ್ವಕರ್ಮ** : ಚಿನ್ನ, ಕಂಚು, ಕಬ್ಬಿಣ, ಕಲ್ಲು, ಮರ ಈ ಐದು ರೀತಿಯ ಸಾಮಾಗ್ರಿಗಳನ್ನು ಬಳಸಿಕೊಂಡು ಕೆಲಸ ಮಾಡುವ ಅಕ್ಕಸಾಲಿಗರು, ಕಂಚುಗಾರ, ಕಮ್ಮಾರ, ಬಡಗಿ, ಶಿಲ್ಪಿ ಈ ಐದು ಕಸುಬುಗಳನ್ನು ಕೈಗೊಂಡವರನ್ನು ಅಕ್ಕಸಾಲಿಗರು, ಆಚಾರರು, ಪಾಂಚಾಳರೆಂದೂ ಕರೆಯುವರು. ಪಾಂಚಾಳರು ಅಥವಾ ವಿಶ್ವಕರ್ಮರು ಎಂಬ ನಾಮಾಂಕಿತಗಳಿಂದಲೂ ಕರೆಯುವರು. ವಿಶ್ವಬ್ರಹ್ಮ ಇವರ ಪ್ರಧಾನ ಆರಾಧ್ಯ ದೇವರು ಹಾಗೂ ಕಾಳಿಕಾದೇವಿ ಇವರ ಕುಲದೇವತೆ. ಇವರ ಆಚಾರ ವಿಚಾರಗಳಲ್ಲಿ, ವೈದಿಕ ಸಂಪ್ರದಾಯದ ಪ್ರಭಾವ ಕಂಡುಬರುತ್ತದೆ. ಇವರು ಸಿದ್ದಪ್ಪಾಜಿ ಪ್ರಭಾವಕ್ಕೆ ಒಳಗಾಗಿ ಕಪ್ಪಡಿ, ಚಿಕ್ಕೆಲ್ಲೂರು, ಬೊಪ್ಪೇಗೌಡನಪುರ ಮುಂತಾದ ಕ್ಷೇತ್ರಗಳಿಗೆ ನಡೆದುಕೊಳ್ಳುತ್ತಾರೆ.

**ವೈಶ್ಯ** : ಶೆಟ್ಟಿ, ಕೋಮಟಿ, ಶ್ರೇಷ್ಠಿ, ಗುಪ್ತ, ಆರ್ಯವೈಶ್ಯ ಮೊದಲಾದ ಹೆಸರುಗಳಿಂದ ಕರೆಯಲಾಗುವ ಇವರ ಮೂಲ ಕಸುಬು ವ್ಯಾಪಾರ–ವಾಣಿಜ್ಯಗಳಾಗಿದ್ದು, ಇತ್ತೀಚೆಗೆ ಇವರು ಬೇರೆ ಬೇರೆ ಕ್ಷೇತ್ರಗಳಲ್ಲೂ ತೊಡಗಿಸಿಕೊಂಡಿದ್ದಾರೆ. ಕನ್ನಿಕಾಪರಮೇಶ್ವರಿ ಇವರ ಕುಲದೇವತೆ. ಬಿಳಿಗಿರಿ ರಂಗನಾಥ, ನಂಜುಂಡೇಶ್ವರ, ಚಲುವನಾರಾಯಣಸ್ವಾಮಿ, ವೆಂಕಟೇಶ್ವರ ಮುಂತಾದವು ಇವರ ಮನೆದೇವರುಗಳಾಗಿವೆ. ವಾಸವಿ ಜಯಂತಿ ಇವರಿಗೆ ಪ್ರಮುಖವಾದ ಹಬ್ಬ. ಇವರ ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣ ಪುರೋಹಿತರು ನೆರವೇರಿಸುವರು.

**ಹೊಲೆಯ** : ಆದಿಕರ್ನಾಟಕರು, ಹರಿಜನರು, ಬಲಗೈನವರು, ದಲಿತರು, ಪಂಚಮರು, ಅಂತ್ಯಜರು ಮೊದಲಾದ ಹೆಸರುಗಳಿಂದ ಕರೆಯಲಾಗುತ್ತದೆ. ಯಜಮಾನ ಹಾಗೂ ಕುಲಸ್ಥರ ಸಮ್ಮುಖದಲ್ಲಿ ಧಾರ್ಮಿಕ ಕಾರ್ಯಗಳು ನೆರವೇರುತ್ತವೆ. ಮಾದೇಶ್ವರನ ಗುಡ್ಡರು, ವೆಂಕಟರಮಣ ಅಥವಾ ಚೆಲುವರಾಯನ ದಾಸರು ಇವರಲ್ಲಿ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಯುಗಾದಿಯಿಂದ ಶಿವರಾತ್ರಿಯವರೆಗಿನ ಎಲ್ಲಾ ಹಿಂದೂ ಹಬ್ಬಗಳನ್ನು ಆಚರಿಸುತ್ತಾರೆ.

## 7.3 ದಲಿತರ ಸ್ಥಿತಿಗತಿ

ವೇದಗಳ ಕಾಲದಲ್ಲಿ ದಲಿತರನ್ನು ಪಂಚಮರೆಂದು ಕರೆಯುವ ವ್ಯವಸ್ಥೆ ರೂಢಿಯಲ್ಲಿತ್ತು. ಪುರಾಣಗಳಿಂದ ತಿಳಿಯುವುದೇನೆಂದರೆ ದಲಿತರನ್ನು ಚಂಡಾಲರೆಂದು ಕರೆದಿರುವುದು ಕಂಡು ಬರುತ್ತದೆ. ಆದರೆ ಕ್ರಿ.ಶ.19ನೇ ಶತಮಾನದ ವೇಳೆಗೆ ಅಸ್ಪೃಶ್ಯರೆಂದು ಕರೆಯಲಾಗುತ್ತಿತ್ತು. ಮೊದಲಿಗೆ ಸಮಾಜದಲ್ಲಿ ಉನ್ನತ ಸ್ಥಿತಿಯಲ್ಲಿದ್ದು ಪ್ರಾಚೀನ ಸಮಾಜದಲ್ಲಿ ಗಣ್ಯರೆನಿಸಿ ಬಾಳಿದ ವಿವರಗಳಿವೆ. ಕಾಲಕಳೆದಂತೆ ಅವರನ್ನು ಸಮಾಜದಲ್ಲಿ ನಿಕೃಷ್ಟವಾಗಿ ಕಾಣುತ್ತಿದ್ದುದು ತಿಳಿಯುತ್ತದೆ. ರಾಜ ಮಹಾರಾಜರ ಕಾಲದಲ್ಲಿ ಸ್ವಂತ ಭೂಮಿಯನ್ನು ಹೊಂದಿದ್ದು, ಸ್ವತಂತ್ರ ಬದುಕನ್ನು

ಕಟ್ಟಿಕೊಂಡಿದ್ದರು. ಅಲ್ಲದೆ ತೆರಿಗೆ ಮತ್ತು ಸುಂಕವನ್ನು ಕಟ್ಟುತ್ತಿದ್ದರೆಂಬ ಅಂಶ ಶಾಸನಗಳಿಂದ ಬೆಳಕಿಗೆ ಬಂದಿದೆ. ಗೌರವಯುತವಾದ ಜೀವನ ನಡೆಸುತ್ತಿದ್ದ ದಲಿತರು ಕಾಲಕ್ರಮೇಣ ಸಮಾಜದಲ್ಲಿ ನಿಕೃಷ್ಟರಾಗಿ ಅಸ್ಪೃಶ್ಯರೆನಿಸಿಕೊಂಡು ಶೋಷಣೆಗೆ ಒಳಗಾಗಿರುವ ವಿವರಗಳು ಶಾಸನಗಳಲ್ಲಿ ಉಲ್ಲೇಖಿತವಾಗಿವೆ.

ಕ್ರಿ.ಶ.11ನೇ ಶತಮಾನದ ಶಾಸನ ಮೈಸೂರಿನ ಬೋಗಾದಿಯ ಬೋಗೇಶ್ವರ ದೇವಾಲಯದ ಜಗಲಿಯ ಮೇಲಿರುವ ಶಾಸನದಲ್ಲಿ ನಾಗವಾಡಿಯ ಬೂವಾಚಾರಿಯ ಮಗನಿಗೆ ಗೊಗ್ಗಿಯಚಾರಿ ಎಂದು ಪಟ್ಟವನ್ನು ಕಟ್ಟುವ ಸಂದರ್ಭದಲ್ಲಿ ತರುವಾಳ ಚೀಯಳಯ್ಯ, ಪಂಚಳ ಚಾವುಂಡಯ್ಯ, ನಾವಿದ ಬಸವ, ಅಗಸರ ಭೀಮ, ಪೊಲೆಯರ ಗೊಗ್ಗಿ ಇವರುಗಳು ಸಾಕ್ಷಿಗಳೆನಿಸಿದ್ದರು"[10] ಸಾಕ್ಷಿ ಹೇಳುವ ಅಥವಾ ಸಾಕ್ಷಿಗಳಾಗಿ ಪರಿಗಣಿಸಿದ್ದರೆಂದರೆ ಅವರ ಸ್ಥಿತಿಗತಿ ಉತ್ತಮವಾಗಿತ್ತು ಎಂಬುದು ಇದರಿಂದ ತಿಳಿಯಬಹುದಾಗಿದೆ. ಇಂದೂ ಕೂಡ ಉತ್ತಮ ಸ್ಥಿತಿಯಲ್ಲಿರುವುದನ್ನು ಗುರುತಿಸಲಾಗಿದೆ. ಅದಕ್ಕೆ ಕಾನೂನಿ ರಕ್ಷಣೆ ಹಾಗೂ ಸರ್ಕಾರದ ಹಲವಾರು ಯೋಜನೆಗಳು, ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ವಿದ್ಯಾಭ್ಯಾಸ ಕಾರಣವಾಗಿದೆ. ಇದರಿಂದ ತಾವು ಎಲ್ಲಾ ಕೆಲಸಕಾರ್ಯಗಳಲ್ಲಿ ತೊಡಗಿರುವುದೇ ಸಾಕ್ಷಿಯಾಗಿದೆ.

## 7.4 ಸ್ತ್ರೀಯರ ಸ್ಥಾನಮಾನ

ಸ್ತ್ರೀಯರು ವೇದ ಕಾಲದಲ್ಲಿ ಉನ್ನತ ಸ್ಥಾನಮಾನವನ್ನು ಹೊಂದಿದ್ದು, ಗಾರ್ಗಿ ಮತ್ತು ಮೈತ್ರೇಯಿಯರೆಂಬ ಸ್ತ್ರೀಯರು ವಿದ್ಯಾವಾಚಕಸ್ಪತಿಗಳಾಗಿದ್ದರು. ಪ್ರಾಚೀನ ಕಾಲದಿಂದಲೂ ಭಾರತದಂತಹ ಸಂಪ್ರದಾಯ ಬದ್ದ ರಾಷ್ಟ್ರದಲ್ಲಿ ಸ್ತ್ರೀಯನ್ನು ಮಾತೃತ್ವದ ಸ್ಥಾನವನ್ನಿತ್ತು ಗೌರವ ಭಾವನೆಯಿಂದ ಕಾಣುತ್ತಿದ್ದರು. ಬರಬರುತ್ತಾ ಸ್ತ್ರೀಯರ ಸ್ಥಿತಿಗತಿ ನಿಕೃಷ್ಟ ಸ್ಥಿತಿಯನ್ನು ತಲುಪಿತು. ಸ್ತ್ರೀಯರನ್ನು ಭೋಗದ ವಸ್ತುವಾಗಿ ಬಳಸಿಕೊಂಡರು. ಕಾಲಕ್ರಮೇಣ ಯುದ್ಧಗಳು ಸಂಭವಿಸಿದಾಗ ಬೆಲೆ ಬಾಳುವ ವಸ್ತುಗಳಂತೆ ಸ್ತ್ರೀಯರನ್ನು ಅಪಹರಿಸುವ ತಂತ್ರಕ್ಕೆ ಮೊರೆ ಹೋದರು. ಅನಂತರ ಇತ್ತೀಚೆಗೆ ಸ್ತ್ರೀಯರಿಗೆ ಪುರುಷರ ಸಮಾನ ಸ್ಥಾನಮಾನಗಳು ಸಂವಿಧಾನಾತ್ಮಕವಾಗಿ ನೀಡಲಾಗಿದೆ.

ಹಲವಾರು ರಾಜವಂಶಗಳಲ್ಲಿ ಸ್ತ್ರೀಯರು ಆಡಳಿತ ನಡೆಸಿದ ವಿವರಗಳು ಶಾಸನಗಳಲ್ಲಿ, ಗ್ರಂಥಗಳಲ್ಲಿ, ಹಸ್ತಪ್ರತಿಗಳಲ್ಲಿ ಉಲ್ಲೇಖಗೊಂಡಿವೆ. ಅಲ್ಲದೆ ಇತಿಹಾಸ ಅಧ್ಯಯನದಿಂದ ತಿಳಿಯ ಬಹುದಾಗಿದೆ. ಸ್ತ್ರೀಯರು ಆಡಳಿತದಲ್ಲಿ ನೇರ ಭಾಗಿಯಾಗಿದ್ದು, ರಾಜನಿಗೆ ಪರೋಕ್ಷವಾಗಿ ನೆರವಾಗುವಂತಹ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಸಾಮಾಜಿಕ ಮತ್ತು ಧಾರ್ಮಿಕ

ಕಾರ್ಯ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಮೂಲಕ ಸಮಾಜ ಮುಖಿಯಾದ ಹೊಣೆಗಾರಿಕೆಯನ್ನು ನಿರ್ವಹಿಸುತ್ತಿದ್ದರು.

ಈ ಹಿಂದೆ ಶೂದ್ರ ವರ್ಗದ ಹಾಗೂ ವೈಶ್ಯ ಧರ್ಮದ ಹೆಣ್ಣು ಮಕ್ಕಳು ಶಿಕ್ಷಿತರಾಗಿದ್ದರೆಂಬುದಕ್ಕೆ ಯಾವುದೇ ಶಾಸನಾಧಾರಗಳಿಲ್ಲ. ಇವರ ಪಾಲಿಗೆ ಶಿಕ್ಷಣವೆಂಬುದು ಕೈಗೆಟುಕದ ಗಗನ ಕುಸುಮವಾಗಿತ್ತು. ಇದೇ ಸಂದರ್ಭದಲ್ಲಿ ಎಲ್ಲರಿಗೂ ಶಿಕ್ಷಣ ದೊರಕಿಸುವ ನಿಟ್ಟಿನಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಕ್ರಿ.ಶ.1833ರಲ್ಲಿ 'ರಾಜಾ ಫ್ರೀಸ್ಕೂಲ್' ಅನ್ನು ಆರಂಭಿಸಿದರು. ಅದು ಮುಂದೆ ಮಹಾರಾಜರ ಪಾಠಶಾಲೆ ಎಂದೇ ಹೆಸರುವಾಸಿಯಾಯಿತು.[11] ಆದರೆ ಈ ಸೌಲಭ್ಯವನ್ನು ಹೆಚ್ಚಿನ ಮಟ್ಟಿಗೆ ಸ್ತ್ರೀಯರು ಬಳಸಿಕೊಳ್ಳಲಿಲ್ಲ. ಕ್ರಿ.ಶ.1881ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಜಗನ್ಮೋಹನ ಅರಮನೆಯ ಅಂಗಳದಲ್ಲಿ ಪ್ರಪ್ರಥಮವಾಗಿ ಮಹಿಳಾಶಾಲೆಯನ್ನು ಪ್ರಾರಂಭಿಸಿದರು. ಅದೇ ಮುಂದೆ ಮಹಾರಾಣಿ ಕಾಲೇಜಾಗಿ ಬೆಳೆಯಿತು. ಇದು ನಾಲ್ವಡಿಯವರ ದೂರದೃಷ್ಟಿಯ ಪ್ರತೀಕವಾಗಿದೆ.

ಧಾರ್ಮಿಕ ನಂಬಿಕೆಗಳನ್ನು ಆಚಾರ–ವಿಚಾರಗಳನ್ನು ಸಂಪ್ರದಾಯವಾಗಿ ಎಂದಿನಂತೆಯೇ ಮುಂದುವರೆಸಿಕೊಂಡು ಬಂದ ಮೈಸೂರು ಒಡೆಯರು ಸ್ತ್ರೀಯರ ವಿಚಾರದಲ್ಲಿ ಹೆಚ್ಚು ಉದಾರವಾಗಿ ನಡೆದುಕೊಂಡು ಬಂದಿದ್ದಾರೆ. ಇವರ ಕಾಲದ ಸಮಾಜದಲ್ಲಿ ಸ್ತ್ರೀಯರಿಗೆ ಅಪಾರ ಗೌರವವಿದ್ದಿತು. ಮೈಸೂರಿನ ರಾಣಿಯರು ಧರ್ಮನಿಷ್ಠೆಗೂ, ದಾನಧರ್ಮಾಧಿಗಳಿಗೂ ಹೆಸರಾಗಿದ್ದರು. ಮಠ, ದೇಗುಲಗಳಲ್ಲಿಯೂ ನಿತ್ಯ ಪೂಜೆಯ ಕಾಲದಲ್ಲೂ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಶೇಷ ಸಮಾರಂಭಗಳಲ್ಲೂ ರಾಣಿಯರು ವಿಶೇಷವಾಗಿ ಆಹ್ವಾನಿತರಾಗಿರುತ್ತಿದ್ದರು. ಇದೇ ಸಂದರ್ಭದಲ್ಲಿ ಅವರು ಅನೇಕ ದಾನದತ್ತಿಗಳನ್ನು ನೀಡಿ, ಅಗ್ರಹಾರ ಮತ್ತು ದೇವಸ್ಥಾನಗಳನ್ನು ಕಟ್ಟಿಸುತ್ತಿದ್ದರು. ಹಾಗೂ ಧಾರ್ಮಿಕ ಕಾರ್ಯಗಳಿಗಾಗಿ ಭೂಮಿಗಳನ್ನು ದಾನವಾಗಿ ನೀಡುತ್ತಿದ್ದರು.

ಕ್ರಿ.ಶ.1828ರ ಶಾಸನದಲ್ಲಿ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರ ಧರ್ಮಪತ್ನಿಯಾದ ಕೃಷ್ಣವಿಲಾಸ ಅರಮನೆಯ ಮಹಾರಾಣಿಯಾದ ಲಿಂಗಾಜಮ್ಮಣ್ಣಿಯು ಮಹಾಲಿಂಗೇಶ್ವರ ದೇವಾಲಯವನ್ನು ಕಟ್ಟಿಸಿ, ಅದರ ದಕ್ಷಿಣಭಾಗದಲ್ಲಿ ಲಿಂಗಾಂಬುದಿಯೆಂಬ ಕೆರೆಯನ್ನು ನಿರ್ಮಿಸಿರುವುದಾಗಿ ಉಲ್ಲೇಖವಿದೆ"[12] ಈ ಕೆರೆಯು ಇಂದಿಗೂ ಮೈಸೂರಿನ ಲಿಂಗಾಂಬುದಿ ಪಾಳ್ಯ ಗ್ರಾಮದಲ್ಲಿ ಕಾಣಬಹುದಾಗಿದೆ.

ಇಂದು ಸ್ತ್ರೀಯರು ಪುರುಷರಿಗೆ ಸಮಾನವಾದ ಸ್ಥಾನಮಾನಗಳನ್ನು ಹೊಂದಿದ್ದಾರೆ. ಅದರಂತೆ ದೇವಾಲಯಗಳಿಗೆ ದೇಣಿಗೆಯ ರೂಪದಲ್ಲಿ, ಹರಕೆಗಳ ರೂಪದಲ್ಲಿ ಆರ್ಥಿಕ

ಸಹಾಯವನ್ನು ನೀಡುತ್ತಿದ್ದಾರೆ. ಅಲ್ಲದೆ ಮೈಸೂರು ನಗರದ ದೇವಾಲಯಗಳು ಹೊಂದಿರುವ ಭಕ್ತ ಪರಂಪರೆಯಲ್ಲಿ ಸ್ತ್ರೀಯರೇ ಮೊದಲನೆಯ ಸ್ಥಾನದಲ್ಲಿದ್ದಾರೆ.

ಮೈಸೂರು ನಗರದಲ್ಲಿರುವ ವಿದ್ಯಾಕೇಂದ್ರಗಳಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಸ್ತ್ರೀಯರು ಶಿಕ್ಷಣ ಪಡೆಯುತ್ತಿದ್ದಾರೆ. ಅಲ್ಲದೇ ಸಮಾನತೆಯೊಂದಿಗೆ ಸಮಾಜದಲ್ಲಿ ಉನ್ನತ ಸ್ಥಾನ ಮಾನಗಳನ್ನು ಪಡೆದುಕೊಂಡಿದ್ದಾರೆ. ಶಾಲಾಕಾಲೇಜುಗಳಲ್ಲಿ ಶಿಕ್ಷಕಿ, ಉಪನ್ಯಾಸಕಿ, ಡಾಕ್ಟರ್, ಇಂಜಿನಿಯರ್, ಡ್ರೈವರ್, ತಹಸಿಲ್ದಾರ್, ಸಚಿವರು, ಮುಂತಾಗಿ ಎಲ್ಲಾ ವಿಭಾಗದಲ್ಲಿಯೂ ಪುರಷರಿಗೆ ಸಮಾನವಾದ ಸ್ಥಾನಮಾನಗಳನ್ನು ಹೊಂದಿದ್ದಾರೆ. ಈ ಹಿಂದೆ ಮೈಸೂರು ಜಿಲ್ಲಾಧಿಕಾರಿಯಾಗಿ ಒಂದು ಜಿಲ್ಲೆಯ ಸಮಸ್ತ ಆಡಳಿತವನ್ನು ತನ್ನ ಕೈಯಲ್ಲಿ ಇಟ್ಟುಕೊಂಡು ಆಡಳಿತ ನಡೆಸಿದ ಶ್ರೀಮತಿ ಶಿಖಾರವರು ಇದಕ್ಕೆ ಉತ್ತಮ ನಿದರ್ಶನವಾಗಿದ್ದಾರೆ.

ಮೈಸೂರು ನಗರದ ಪಾರಂಪರಿಕ ದೇವಾಲಯಗಳ ಭಕ್ತ ಪರಂಪರೆಯನ್ನು ಗಮನಿಸಿದಾಗ ಸ್ತ್ರೀಯರೇ ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇದರಿಂದ ತಿಳಿಯುವುದೇನೆಂದರೆ ನಂಬಿಕೆ, ಸಂಪ್ರದಾಯ, ಆಚರಣೆಗಳನ್ನು ಇಂದಿಗೂ ಜೀವಂತವಾಗಿರಿಸಿರುವವರು ಸ್ತ್ರೀಯರೆ ಎಂದರೆ ತಪ್ಪಾಗಲಾರದು. ಸಮಾಜಿಕ ಜೀವನದೊಂದಿಗೆ ಬೆಸೆದುಕೊಂಡಿರುವ ಈ ಮಾದರಿಯ ಜಾನಪದೀಯ ಅಂಶಗಳನ್ನು ಉಳಿಸಿ ಬೆಳಸಿಕೊಂಡು ಬರುವಲ್ಲಿ ಸ್ತ್ರೀಯರು ಮಹತ್ತರವಾದ ಪಾತ್ರ ವಹಿಸಿದ್ದಾರೆ.

**ದೇವದಾ**ಸಿ : ದೇವದಾಸಿಯರು ಮೈಸೂರು ನಗರದ ಪ್ರಾಚೀನ ದೇವಾಲಯಗಳಲ್ಲಿ ದೇವರಿಗೆ ಪ್ರಿಯವಾದ ನೃತ್ಯಸೇವೆಯನ್ನು ಮಾಡುವ ಮೂಲಕ ನೃತ್ಯಗಾರ್ತಿಯರಾಗಿ ಗುರುತಿಸಿಕೊಂಡಿದ್ದರು. ಕಾಲಕ್ರಮೇಣದಲ್ಲಿ ಇದೊಂದು ವೃತ್ತಿಯೆಂದು ಪರಿಗಣಿಸಿ ಅವರಿಗೆ 'ಸೂಳೆದೆರೆ' ಎಂಬ ಸುಂಕವನ್ನು ವಿಧಿಸುವ ಪರಿಪಾಠ ಬೆಳೆದು ಬಂದಿರುವುದು ತಿಳಿಯುತ್ತದೆ. ಪ್ರಾಚೀನ ಕಾಲದಲ್ಲಿ ಇವರನ್ನು ಸಮಾಜದಲ್ಲಿ ಗೌರವ ಭಾವದಿಂದ ನಡೆಸಿಕೊಳ್ಳುತ್ತಿದ್ದರು ಎಂಬುದು ಇವರು ದೇವಾಲಯಗಳಿಗೆ ಕೊಟ್ಟಿರುವ ಕಾಣಿಕೆ, ದಾನ ದತ್ತಿಗಳು ಸ್ಪಷ್ಟಪಡಿಸುತ್ತದೆ. ಇಂತಹ ಪದ್ಧತಿಯು ಉಚ್ಚ ವರ್ಗದವರಲ್ಲಿಲ್ಲದೆ ಶೂದ್ರ ವರ್ಗದವರಲ್ಲಿ ಮಾತ್ರ ಇತ್ತೆಂಬುದು ಶಾಸನಗಳಿಂದ ತಿಳಿದು ಬರುತ್ತದೆ. ಇದನ್ನು ಅವರು ಅಂದು ಕಳಂಕ ಅಥವಾ ಕೆಟ್ಟದ್ದು ಎಂದು ಭಾವಿಸದೆ ಒಂದು ವೃತ್ತಿಯೆಂದು ಪರಿಭಾವಿಸಿದ್ದರು. ಆದುದರಿಂದ ತಮ್ಮನ್ನು ಇವರು ಪಾತ್ರದವರೆಂದು ಕರೆದುಕೊಂಡಿದ್ದಾರೆ. **"**ಈ ದೇವದಾಸಿಯ ಕುರಿತು ಕ್ರ.ಶ.1627ರ ಶಾಸನ ಚಾಮುಂಡಿಬೆಟ್ಟದ ಮಹಾಬಲೇಶ್ವರ ದೇವರ ಪಾತ್ರದವಳಾಗಿದ್ದ ಸೂಳೆ ಮಾಯಾದೇವಿಯ ಮಗಳು 'ನಾಗಸಂಭು' ಮಹಾಬಲೇಶ್ವರ ದೇವಾಲಯದ ಮಂಟಪದ ಕಂಬವೊಂದನ್ನು ಕಡೆಸಿದ್ದಳೆಂದು ತಿಳಿಸುತ್ತದೆ**"**[13]

ಇಂದು ಮೈಸೂರು ನಗರದ ಯಾವುದೇ ದೇವಾಲಯಗಳಲ್ಲಿಯೂ ಹಾಗೂ ಸಮಾಜದಲ್ಲಿಯೂ ಎಲ್ಲಿಯು ದೇವದಾಸಿ ಪದ್ಧತಿ ಆಚರಣೆಯಲ್ಲಿ ಇಲ್ಲ. ಸ್ತ್ರೀಯರು ಸುಶಿಕ್ಷಿತರಾಗಿ ಉನ್ನತ ಸ್ಥಾನ ಮಾನಗಳನ್ನು ಹೊಂದಿ ಮೂಢನಂಬಿಕೆಯಂತಹ ಮೌಢ್ಯಾಚರಣೆಗಳಿಂದ ಹೊರಬರುತ್ತಿದ್ದಾರೆ. ಅಲ್ಲದೆ ಸರಕಾರವು ದೇವದಾಸಿ ಪದ್ಧತಿಯ ಆಚರಣೆಯನ್ನು ನಿಷೇಧಿಸಿ ಕಾನೂನು ಹೊರಡಿಸಿದೆ.

ಪ್ರಥಮ ಬಾರಿಗೆ ಮೈಸೂರಿನ ಅರಸೊತ್ತಿಗೆಯ ಆಡಳಿತದಲ್ಲಿ 1892ರಲ್ಲಿ ಬಸವಿ ಬಿಡುವ ಪದ್ಧತಿ ನಿಷೇಧ ಆಜ್ಞೆಯನ್ನು ಜಾರಿಮಾಡಲಾಯಿತು. ಅಂತೆಯೆ 1909ರಲ್ಲಿ ದೇವದಾಸಿ ಪದ್ಧತಿ ನಿಷೇಧ ಆಜ್ಞೆನ್ನು ಜಾರಿಗೊಳಿಸಲಾಯಿತು.

**ಶಬರಿಮಲೆ ಮಹಿಳೆಯರ ಪ್ರವೇಶಕ್ಕೆ ಸುಪ್ರೀಂ ಗ್ರೀನ್ ಸಿಗ್ನಲ್**

ವಿಶ್ವಪ್ರಸಿದ್ಧ ಶಬರಿಮಲೆ ದೇವಸ್ಥಾನದ ಪ್ರವೇಶಕ್ಕೆ ಮಹಿಳೆಯರಿಗೆ ನಿರ್ಬಂಧ ಹೇರುವಂತಿಲ್ಲ ಎಂಬ ಮಹತ್ವದ ಆದೇಶವನ್ನು ಸುಪ್ರಿಂಕೋರ್ಟ್ ಹೊರಡಿಸಿದೆ. ಯಾವಾಗ ದೇವಾಲಯ ಪ್ರವೇಶ ಆರಂಭವಾಗುತ್ತದೆಯೋ ಆಗ ಎಲ್ಲ ವಯಸ್ಸಿನ ಮಹಿಳೆಯರು ಕೂಡ ಮುಕ್ತವಾಗಿ ಪ್ರವೇಶ ಮಾಡಬಹುದು ಎಂದು ಸುಪ್ರಿಂಕೋರ್ಟ್ ಆದೇಶಿಸಿದೆ. ದೇಶದಲ್ಲಿರುವ ಯಾವುದೇ ದೇವಾಲಯಗಳು ಖಾಸಗಿ ಆಸ್ತಿಯಲ್ಲ. ದೇವಾಲಯಗಳು ಸಾರ್ವಜನಿಕರಿಗೆ ಸೇರಿದೆ ಎಂದು ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರ ನೇತೃತ್ವದ ಪಂಚಪೀಠ ಆದೇಶ ಹೊರಡಿಸಿದೆ. ಶಬರಿಮಲೆಗೆ ವಯಸ್ಕ ಮಹಿಳೆಯರ ಪ್ರವೇಶವನ್ನು ನ್ಯಾಯಲಯದ ಆಡಳಿತ ಮಂಡಳಿ ನಿರಾಕರಿಸಿತ್ತು. ಮಹಿಳಾ ಸಮಾನತೆಗಾಗಿ ಹಲವರು ನ್ಯಾಯಾಲಯದ ಮೆಟ್ಟಿಲನ್ನು ಏರಿದ್ದರು. ಆದರೆ ಸಂಸ್ಕೃತಿ ಮತ್ತು ಪರಂಪರೆಯ ಕಾರಣಗಳನ್ನು ನೀಡಿ ಆಡಳಿತ ಮಂಡಳಿ ನುಣುಚಿಕೊಂಡಿತ್ತು. ಸುಪ್ರೀಂಕೋರ್ಟ್‌ನ ಈ ಮಹತ್ವದ ತೀರ್ಪು ದೇಶದ ಇತರೆ ದೇವಸ್ಥಾನಗಳಿಗೂ ಅನ್ವಯವಾಗಲಿದೆ”[14]

## 7.5 ದೇವಾಲಯಗಳ ಭಕ್ತ ಪರಂಪರೆ

ಮಾನವ ದೇವರನ್ನು ಆರಾಧಿಸಲು ಆರಂಭಿಸಿದಾಗಿನಿಂದಲೂ ಒಂದಲ್ಲಾ ಒಂದು ದೇವರಿಗೆ ನಡೆದುಕೊಳ್ಳುತ್ತಾ ಬಂದಿರುವುದನ್ನು ಕಾಣುತ್ತೇವೆ. ಇಷ್ಟದೇವರು, ಕುಲದೇವರು, ಒಕ್ಕಲು ಪರಂಪರೆ ಹೀಗೆ ತಮಗೆ ಸಂಬಂಧಿಸಿದಂತ ದೇವರುಗಳಿಗೆ ನಡೆದುಕೊಳ್ಳುತ್ತಿರವವರನ್ನು ಆ

ದೇವರುಗಳ ಭಕ್ತ ಪರಂಪರೆಯ ಸಾಲಿನಲ್ಲಿ ನೋಡಬಹುದು. ಅಂತೆಯೇ ಮೈಸೂರು ನಗರದ ದೇವಾಲಯಗಳಲ್ಲಿರುವ ಭಕ್ತ ಪರಂಪರೆಯನ್ನು ಈ ಕೆಳಕಂಡಂತೆ ಗುರುತಿಸಲಾಗಿದೆ.

**ಪ್ರಭುತ್ವ ಪರಂಪರೆ** : ಮೈಸೂರು ನಗರ ಸಾಂಸ್ಕೃತಿಕವಾಗಿ ಸಿರಿವಂತಿಕೆಯನ್ನು ಹೊಂದಿರುವ ಪ್ರದೇಶವಾಗಿದೆ. ಸಾಮಾಜಿಕ, ಧಾರ್ಮಿಕ, ಜಾನಪದೀಯವಾಗಿ ವಿಶಿಷ್ಟವಾದ ಅಂಶಗಳನ್ನು ಮೈಗೂಡಿಸಿ ಕೊಳ್ಳುವುದರೊಂದಿಗೆ, ಹಬ್ಬ, ನಂಬಿಕೆ, ಸಂಪ್ರದಾಯಾಚರಣೆ, ಕಲೆ ಮತ್ತು ಸಂಸ್ಕೃತಿಗಳು ಇತರೆಡೆಗಳಿಗಿಂತ ಭಿನ್ನವಾಗಿವೆ. ಅದಕ್ಕೆ ಕಾರಣ ಈ ಪ್ರದೇಶವನ್ನಾಳಿದ ರಾಜವಂಶಗಳ ಕೊಡುಗೆ ಎಂದರೆ ತಪ್ಪಾಗಲಾರದು. ಮೈಸೂರನ್ನು ಕೇಂದ್ರವನ್ನಾಗಿಸಿ ಪ್ರಜಾ ಭಾವನೆಗಳನ್ನು ಅರ್ಥೈಸಿ ಕೊಂಡು ತನ್ನ ನಿಯಂತ್ರಣದ ಪರಿಧಿಯಲ್ಲಿ ಹಲವಾರು ಮಹತ್ತರ ಯೋಜನೆಗಳನ್ನು ಕಟ್ಟಿ ಕೊಟ್ಟಿದ್ದಾರೆ. ಅಷ್ಟೆ ಅಲ್ಲದೆ ಮೈಸೂರು ನಗರದ ಕೋಟೆ ಕೊತ್ತಲಗಳಂತೆಯೇ, ಧಾರ್ಮಿಕವಾಗಿ ಭಕ್ತಿಭಾವದಿಂದ ನಮಿಸುವ ಹಲವಾರು ದೇವಾಲಯಗಳ ಸ್ಥಾಪನೆಗೆ ಮಹತ್ತರ ಪಾತ್ರವಹಿಸಿರುವ ವಿವಿಧ ರಾಜವಂಶಗಳ ಕೊಡುಗೆಯು ಅಪಾರವಾಗಿದೆ.

ಒಂದು ಸಾಮ್ರಾಜ್ಯದ ಪರಿಧಿಯಲ್ಲಿರುವ ಪ್ರಜೆಗಳನ್ನು ತನ್ನ ಆಳ್ವಿಕೆಗೆ ಒಳಪಡಿಸಿಕೊಂಡು ರಾಜ್ಯಭಾರ ಮಾಡುತ್ತಿದ್ದವರನ್ನು ಪ್ರಭುಗಳೆಂದು, ರಾಜ ಮಹಾರಾಜರೆಂದು ಕರೆಯಲಾಗುತ್ತದೆ. ಅಂತೆಯೇ ಮೈಸೂರು ನಗರವನ್ನು ಹಲವಾರು ಸಾಮ್ರಾಜ್ಯಗಳು ಆಡಳಿತ ನಡೆಸಿವೆ. ಇದೇ ಸಂದರ್ಭದಲ್ಲಿ ಮೈಸೂರು ನಗರದಲ್ಲಿರುವ ದೇವಾಲಯಗಳಿಗೆ ಅವರು ನೀಡಿರುವ ಕೊಡುಗೆ ಯನ್ನು ಗಮನಿಸಬಹುದಾಗಿದೆ. ಅಲ್ಲದೆ ಅವರು ಭಕ್ತಿಯಿಂದ ನಡೆದುಕೊಂಡು ಬಂದಿರುವ ದೇವರುಗಳ ಬಗ್ಗೆಯು ತಿಳಿಯಬಹುದು.

ಹಳೇ ಬೋಗಾದಿಯ ಭೋಗೇಶ್ವರ ದೇವಾಲಯದ ದಕ್ಷಿಣದ ಮೂಲೆಯಲ್ಲಿ ನಿಲ್ಲಿಸಿರುವ ಶಾಸನದಲ್ಲಿ ಮಾರಸಿಂಗವರ್ಮ ಮತ್ತು ಆಕಾಲವರ್ಷರ ಹೆಸರುಗಳಿವೆ ಈ ಶಾಸನವನ್ನು ಹತ್ತನೆ ಶತಮಾನದೆಂದು ಹೇಳಲಾಗುತ್ತದೆ. ಹಾಗಾಗಿ ಗಂಗರು ಮೈಸೂರಿನ ಉದ್ದಗಲಕ್ಕೂ ವ್ಯಾಪಿಸಿ ಕೊಂಡಂತೆ ಆಡಳಿತ ನಡೆಸುತ್ತಿದ್ದರು ಎಂಬುದಕ್ಕೆ ಈ ಶಾಸನಗಳು ನಿದರ್ಶನಗಳಾಗಿವೆ[14] ಭೋಗೇಶ್ವರ ದೇವಾಲಯದ ರಚನೆಯಲ್ಲಿ ಗಂಗರ ಮತ್ತು ಚೋಳರ ಕಾಲದ ಮಾದರಿಗಳು ಇರುವುದರಿಂದ ಗಂಗರು ಭೋಗೇಶ್ವರನ ಆರಾಧಕರಾಗಿದ್ದಿರಬಹುದೆಂದು ಊಹಿಸಬಹುದಾಗಿದೆ. ಆದುದರಿಂದ ಈ ದೇವಾಲಯವನ್ನು ಗಂಗರೇ ಕಟ್ಟಿಸಿರಬಹುದು. ಅನಂತರ ಬಂದ ಚೋಳರು ಅದರ ರಚನೆಯನ್ನು ಅಲ್ಪ ಬದಲಾವಣೆ ಗೊಳಿಸಿರಬಹುದಾಗಿದೆ.

ಚಾಮುಂಡಿಬೆಟ್ಟದ ಮಹಾಬಲೇಶ್ವರ ದೇವಾಲಯವು ಚಾಮುಂಡೇಶ್ವರಿ ದೇವಾಲಯದ ದಕ್ಷಿಣ ಭಾಗದಲ್ಲಿದೆ. ಈ ಮೊದಲು ಚಾಮುಂಡಿ ಬೆಟ್ಟವನ್ನು ಮಹಾಬಲಾದ್ರಿ, ಮಹಾಬಲಾಚಲ ಎಂಬ ಹೆಸರಿನಿಂದಲೇ ಕರೆಯಲಾಗುತ್ತಿತ್ತು. ಸಿ.ಹಯವದನರಾವ್ ಅವರು ಈ ದೇವಾಲಯವು ಗಂಗರ ಕಾಲಕ್ಕೆ ಸೇರಿದ ದೇವಾಲಯವಾಗಿದೆ, ಇದರ ಕಾಲ ಸುಮಾರು ಕ್ರಿ.ಶ.950 ಎಂದು ಗುರುತಿಸಿದ್ದಾರೆ. ಇದರಿಂದ ತಿಳಿಯುವುದೇನೆಂದರೆ ಗಂಗರು ಶಿವನ ಆರಾಧಕರಾಗಿದ್ದರೆಂದು ಕಾಣುತ್ತದೆ.

ಗಂಗರ ನಂತರ ಕ್ರಿ.ಶ.1627ರಲ್ಲಿ ಹೊಯ್ಸಳರ ವಿಷ್ಣುವರ್ಧನ ವೀರಬಲ್ಲಾಳನು ದೇವಾಲಯದ ಜೀರ್ಣೋದ್ಧಾರ ಮಾಡಿಸಿ ಸುರಳಿ ಕಂಭಗಳನ್ನು ಕಡೆಸಿರುವ ವಿವರಗಳಿವೆ. ಅಂತೆಯೇ ಒರಟಾದ ಚಪ್ಪಡಿ ಕಲ್ಲುಗಳನ್ನು ಉಪಯೋಗಿಸಿ ಮಂಟಪವನ್ನೊಳಗೊಂಡ ಪ್ರಾಕಾರವನ್ನು ನಿರ್ಮಿಸಿದರು. ಇದರಿಂದ ಹೊಯ್ಸಳರು ಧರ್ಮ ಸಹಿಷ್ಣುಗಾಳಾಗಿದ್ದರು ಎಂದು ತಿಳಿಯುತ್ತದೆ.

ಕಳಲೆಯ ಅರಸ ವೀರರಾಜ ಒಡೆಯರ ಪುತ್ರ ನಂಜರಾಜ ಒಡೆಯನು ಮೈಸೂರಿನ ದಳವಾಯಿ ದೊಡ್ಡಯ್ಯನವರ ಮೊಮ್ಮಗನಾಗಿದ್ದು, ಇವನು ರಚಿಸಿದ 1753ರ ಅವಧಿಯ ಶಾಸನದಲ್ಲಿ ತ್ರಿನಯನೇಶ್ವರ ದೇವಾಲಯದ ಗೋಪುರವನ್ನು ನಿರ್ಮಿಸಿದನೆಂದು ತಿಳಿದು ಬರುತ್ತದೆ.[16] ಇದನ್ನು ಗಮನಿಸಿದಾಗ ಕಳಲೆಯ ಅರಸ ನಂಜರಾಜ ಒಡೆಯನು ಶಿವ ಭಕ್ತನಾಗಿದ್ದು, ತ್ರಿನಯನೇಶ್ವರನಿಗೆ ನಡೆದುಕೊಳ್ಳುತ್ತಿದ್ದರೆಂದು ಕಾಣುತ್ತದೆ.

ಮೈಸೂರು ಅರಸರಿಗೆ ಸಂಬಂಧಿಸಿದಂತೆ ಹಲವಾರು ರಾಜ ಮಹಾರಾಜರು, ಮಹಾರಾಣಿಯರು, ದಿವಾನರು ಮೈಸೂರು ಸಾಮ್ರಾಜ್ಯದ ಆಡಳಿತವನ್ನು ನಡೆಸಿದ್ದಾರೆ. ಯದು ವಂಶದ ಸ್ಥಾಪಕ ಯದುರಾಯರಿಂದ ಇಂದಿನ ಯದುವೀರ್ ಕೃಷ್ಣರಾಜ ಒಡೆಯರ್‌ವರೆಗೂ ಮೈಸೂರು ನಗರದ ಹಲವಾರು ಪಾರಂಪರಿಕ ದೇವಾಲಯಗಳಿಗೆ ಅಪಾರವಾದ ಕೊಡುಗೆಯನ್ನು ನೀಡಿ ಅಲ್ಲಿನ ದೇವರುಗಳಿಗೆ ನಡೆದುಕೊಂಡು ಬರುತ್ತಿರುವುದನ್ನು ಕಾಣಬಹುದಾಗಿದೆ.

ಚಾಮುಂಡೇಶ್ವರಿಯ ಪ್ರೀತ್ಯಾರ್ಥವಾಗಿ ಮುಮ್ಮಡಿ ಕೃಷ್ಣರಾಜ ಒಡೆಯರ ಪತ್ನಿ ಕೃಷ್ಣವಿಲಾಸದ ಸನ್ನಿಧಾನದ ಲಿಂಗಾಜಮ್ಮಣ್ಣಿಯು ಚಾಮುಂಡೇಶ್ವರಿ ದೇವಾಲಯದ ಸುಖನಾಸಿ ಬಾಗಿಲಿಗೆ ಹಿತ್ತಾಳೆ ಚೌಕಟ್ಟು, ನವರಂಗದ ಕದವನ್ನು ಗುಬ್ಬೀಕದ ಸಹಿತವಾಗಿ ಮಾಡಿಸಿ ಕೊಟ್ಟಿದ್ದಾರೆ.[17]

ಕ್ರಿ.ಶ.1857ರ ಶಾಸನದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಕುಲದೇವತೆ ಚಾಮುಂಡೇಶ್ವರಿಗೆ ಪದಕವನ್ನು ಹೊಂದಿರುವ ನಕ್ಷತ್ರ ಮಾಲಿಕೆಯನ್ನು, ಬೆಳ್ಳಿಯ ಉತ್ಸವ ಮೂರ್ತಿ, ಬಾಗಿಲುವಾಡ, ಬೆಳ್ಳಿಯ ಬಟ್ಟಲು, ಬೆಳ್ಳಿ ತಟ್ಟೆ, ಅಡ್ಡಣಿಗೆ ಮತ್ತು ಚಿನ್ನದ ವಸ್ತುಗಳನ್ನು ಮಾಡಿಸಿ ಧಾರೆಯೆರೆದು ಕೊಟ್ಟಿದ್ದಾರೆ ಎಂದು ತಿಳಿದುಬರುತ್ತದೆ.[18]

ಈ ಮೇಲಿನ ಅಂಶಗಳೇ ಅಲ್ಲದೆ ಮೈಸೂರು ಕೋಟೆಯಲ್ಲಿರುವ ದೇವರುಗಳಿಗೂ ರಾಜ ಮನೆತನಕ್ಕು ನಿಕಟವಾದ ಸಂಬಂಧವಿದೆ. ಉಳಿದಂತೆ ಮೈಸೂರು ಅರಸರು ತಾವು ನಡೆದು ಕೊಳ್ಳುತ್ತಿದ್ದ ದೇವರು ಮತ್ತು ದೇವಾಲಯಗಳಿಗೆ ನೀಡಿರುವ ಕೊಡುಗೆಗಳನ್ನು 'ದೇವಾಲಯಗಳ ಪರಂಪರೆ–ಇತಿಹಾಸ' ಎಂಬ ಎರಡನೆಯ ಅಧ್ಯಾಯದ ಶಾಸನಗಳ ಅಧ್ಯಯನದಲ್ಲಿ ವಿವರಿಸಲಾಗಿದೆ.

ಮೈಸೂರಿನ ಅಧಿದೇವತೆ ಚಾಮುಂಡೇಶ್ವರಿಯು ಯದುವಂಶ ಸಂಜಾತ ಯದು ರಾಯರಿಗೆ ಕನಸಿನಲ್ಲಿ ಕಾಣಿಸಿಕೊಂಡು 'ಮೈಸೂರಿನಲ್ಲಿ ತೃಣಬಿಂದು ಋಷಿಯಿಂದ ಆರಾಧಿತನಾದ ಈಶ್ವರನ ಆಲಯದ ಹಿಂಭಾಗದ ಕೋಡಿಭೈರವ ದೇವಾಲಯಕ್ಕೆ ಹೋಗಿ ಅಲ್ಲಿ ನಿನ್ನನ್ನು ಕಾಣುವ ಜಂಗಮರು ಹೇಳಿದಂತೆ ಮಾಡು' ಎಂದು ಹೇಳುತ್ತಾಳೆ. ಅವರು ಅದರಂತೆ ನಡೆದುಕೊಳ್ಳುತ್ತಾರೆ. ಈ ಹಿನ್ನೆಲೆಯಲ್ಲಿಯೇ ಚಾಮುಂಡೇಶ್ವರಿ ಮೈಸೂರು ಅರಸರ ಕುಲದೇವತೆ, ನಾಡಿನ ಅಧಿದೇವತೆಯಾಗಿ ವಿಜೃಂಭಿಸಲು ಕಾರಣವಾಗಿದೆ. ಯದುವಂಶದ ಉಗಮ, ಬೆಳವಣಿಗೆ ಮತ್ತು ವಿಕಾಸಕ್ಕೆ ಅವರು ಮೊದಲು ತಂಗಿದ್ದ ಕೋಡಿಭೈರವೇಶ್ವರ ದೇವಾಲಯವು ಮಹತ್ವವನ್ನು ಪಡೆದುಕೊಂಡಿದೆ.

ಮೈಸೂರಿನ ಅರಸರು ಚಾಮುಂಡೇಶ್ವರಿಯ ಪರಮಭಕ್ತರಾಗಿದ್ದು, ಇಂದಿನವರೆಗೂ ಭಕ್ತಿಯಿಂದ ನಡೆದುಕೊಳ್ಳುತ್ತಾ ಬರುತ್ತಿದ್ದಾರೆ. ಚಾಮುಂಡೇಶ್ವರಿಯ ಜಾತ್ರೆಯಲ್ಲಿ ತೇರನ್ನು ಎಳೆಯುತ್ತಾರೆ, ಹಬ್ಬ ಮತ್ತು ವರ್ಧಂತಿ ಉತ್ಸವ, ಆಷಾಢ, ಶ್ರಾವಣಗಳಲ್ಲಿ ದೇವಾಲಯಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸುತ್ತಾರೆ. ತೆಪ್ಪೋತ್ಸವ ಹಾಗೂ ಇನ್ನುಳಿದ ಸಂದರ್ಭಗಳಲ್ಲಿ ಮತ್ತು ನವರಾತ್ರಿ, ದಸರಾ ಉತ್ಸವಗಳಲ್ಲಿ ನೇರವಾಗಿ ಭಾಗಿಯಾಗುತ್ತಾರೆ. ಇದರಿಂದ ಚಾಮುಂಡೇಶ್ವರಿ ಮತ್ತು ರಾಜ ಮನೆತನಕ್ಕೆ ಇರುವ ಸಂಬಂಧಗಳು ತಿಳಿಯುತ್ತದೆ. ಅಲ್ಲದೆ ಕೆಲವೊಂದು ನೀತಿ ನಿಯಮಗಳು ರಾಜ ಮನೆತನದವರು ಇಲ್ಲದೆ ನಡೆಸುವುದಿಲ್ಲ. ಉದಾಹರಣೆಗೆ: ದಸರಾ ಉತ್ಸವದ ಮೆರವಣಿಗೆ ಅರಮನೆಯ ಆವರಣದಿಂದಲೆ ಸಾಗುವುದು ಅದಕ್ಕೂ ಮೊದಲು ಬೆಟ್ಟದ ಚಾಮುಂಡೇಶ್ವರಿಯ ಉತ್ಸವಮೂರ್ತಿಯನ್ನು ತಂದು ಆನೆಯ ಮೇಲೆ ಅಂಬಾರಿಯನ್ನು ಕಟ್ಟಿ ಉತ್ಸವಮೂರ್ತಿಯನ್ನು

ಕೂರಿಸಿ ಅದಕ್ಕೆ ಮೊದಲ ಪೂಜೆ ರಾಜ ಮನೆತನದಿಂದಲೆ ನಡೆದುಕೊಂಡು ಬರುತ್ತಿದೆ. ಹೀಗೆ ನೇರವಾಗಿ ಎಲ್ಲ ಧಾರ್ಮಿಕ ಕಾರ್ಯಗಳಲ್ಲಿ ಬಾಗಿಯಾಗಿ ಚಾಮುಂಡೇಶ್ವರಿಯ ಕೃಪೆಗೆ ಪಾತ್ರರಾಗುತ್ತಿದ್ದಾರೆ. ಚಾಮುಂಡೇಶ್ವರಿಯ ಭಕ್ತ ಪರಂಪರೆಯಲ್ಲಿ ಮೈಸೂರಿನ ಪ್ರಭುತ್ವ ಪರಂಪರೆಯು ಒಂದಾಗಿ ನಡೆದುಕೊಳ್ಳುತ್ತಿರುವುದು ಬಹಳ ಪ್ರಮುಖವಾದ ಅಂಶವಾಗಿದೆ.

**ಒಕ್ಕಲು ಪರಂಪರೆ** : ಒಂದು ಮನೆ, ಕುಟುಂಬ, ಒಂದು ಧಾರ್ಮಿಕ ಪಂಥಕ್ಕೆ, ದೇವರಿಗೆ ಮುಡಿಪಾದ ಕುಟುಂಬ ಅಥವಾ ವ್ಯಕ್ತಿ ಎಂಬ ವಿಶಿಷ್ಟ ಅರ್ಥವೂ ಇದಕ್ಕಿದೆ. ಪ್ರಸ್ತುತ ಧಾರ್ಮಿಕ ದೃಷ್ಟಿಯಿಂದ ಒಕ್ಕಲನ್ನು ಅವಲೋಕಿಸಲಾಗಿದೆ. ಪ್ರತಿ ವ್ಯಕ್ತಿ ಅಥವಾ ಕುಟುಂಬ ಯಾವ ದೇವರಿಗೆ ನಡೆದುಕೊಳ್ಳುತ್ತಾರೋ ಅದು ಆ ದೇವರ ಒಕ್ಕಲು. ಇದರಲ್ಲಿ ವ್ಯಾಪಕಾರ್ಥವೂ ಇದೆ. ಸೀಮಿತಾರ್ಥವೂ ಇದೆ. ವ್ಯಾಪಕಾರ್ಥದಲ್ಲಿ ಶಿವಾಚಾರ, ವೈಷ್ಣವ, ಭೈರವ, ನಾಮಧಾರಿ ಒಕ್ಕಲು ಇತ್ಯಾದಿಗಳು ಬರುತ್ತವೆ.

ಮಹಾದೇಶ್ವರನ ಒಕ್ಕಲಿನಲ್ಲಿ ದೇವರ ಗುಡ್ಡರು ಪ್ರಮುಖರು. ಇವರು ಮಾದೇಶ್ವರನ ಪರಮ ಭಕ್ತರು. ದೇವರ ಗುಡ್ಡ ಮಾದೇಶ್ವರನ ಶಿಸುಮಗ. ಮಾದೇಶ್ವರನಿಗೆ ಗುಡ್ಡನನ್ನು ಅಂದರೆ ಶಿಷ್ಯನನ್ನು ಮೀಸಲು ಬಿಡುವ ಸಂಪ್ರದಾಯ ಇವರಲ್ಲಿದೆ. ಇಂತಹ ಸಂಪ್ರದಾಯವನ್ನು ಆಚರಿಸುವ ಕುಟುಂಬಗಳನ್ನು ಮಾದೇಶ್ವರನ ಒಕ್ಕಲೆಂದೇ ಕರೆಯಲಾಗುತ್ತಿದೆ. ಭೈರವ ಪಂಥಕ್ಕೆ ಸೇರಿದ ಗುಡ್ಡರನ್ನು ಜೋಗಪ್ಪಗಳೆಂದು ಕರೆಯುತ್ತಾರೆ. ಕಷ್ಟಕಾರ್ಪಣ್ಯಗಳು ಒದಗಿದಾಗ ಹರಕೆ ಹೊತ್ತು, ಮಗನನ್ನು ಜೋಗಿ ಬಿಡುವ ಸಂಪ್ರದಾಯವೂ ಉಂಟು.

ಮಂಟೇಸ್ವಾಮಿ, ಸಿದ್ದಪ್ಪಾಜಿ, ರಾಚಪ್ಪಾಜಿ ಈ ದೈವಗಳಿಗೆ ನಡೆದುಕೊಳ್ಳುವವರನ್ನು ನೀಲಗಾರರೆಂದು, ಮಂಟೇಸ್ವಾಮಿ ಒಕ್ಕಲಿನವರೆಂದು, ಮಂಟೇದವರೆಂದು ಕರೆಯಲಾಗುತ್ತದೆ. ಕರ್ನಾಟಕದ ಜನಪದ ಸಂಪ್ರದಾಯದಲ್ಲಿ ವೈಷ್ಣವ ಪಂಥಕ್ಕೆ ಸೇರಿದ ಧಾರ್ಮಿಕ ವ್ಯಕ್ತಿಯನ್ನು ದಾಸಯ್ಯ ಎಂದು ಕರೆಯಲಾಗುತ್ತದೆ.

ಅಂತೆಯೇ ನಂಜುಂಡೇಶ್ವರನ ಒಕ್ಕಲು, ಪಾರ್ವತಿ ಒಕ್ಕಲು, ಚಿಕ್ಕಮ್ಮ ತಾಯಿ ಒಕ್ಕಲು, ಮಾರಮ್ಮನ ಒಕ್ಕಲು, ಕಾಳಮ್ಮನ ಒಕ್ಕಲು, ತಿರುಪತಿ ತಿಮ್ಮಪ್ಪನ ಒಕ್ಕಲು, ವೆಂಕಟರಮಣಸ್ವಾಮಿ ಒಕ್ಕಲು ಇನ್ನು ಮುಂತಾದ ದೇವರ ಒಕ್ಕಲುಗಳನ್ನು ಮೈಸೂರು ನಗರದಲ್ಲಿ ಕಾಣಬಹುದಾಗಿದೆ.

**ದಾಸಯ್ಯ :** ದಾಸಯ್ಯ ಕರ್ನಾಟಕದ ಜನಪದ ಸಂಪ್ರದಾಯದಲ್ಲಿ ವೈಷ್ಣವ ಪಂಥಕ್ಕೆ ಸೇರಿದ ಧಾರ್ಮಿಕ ವ್ಯಕ್ತಿ. ಸಾಮಾನ್ಯವಾಗಿ ಶುಭಾಶುಭ ಸಂದರ್ಭಗಳಲ್ಲಿ ಜೋಯಿಸರಂತೆ ಕೆಲಸ

ನಿರ್ವಹಿಸುವ ವೃತ್ತಿಯನ್ನು ಕೈಗೊಂಡವರು. ಇವರ ಉಡುಗೆ-ತೊಡುಗೆ, ಬಳಸುವ ಪರಿಕರಗಳು ವೈಶಿಷ್ಟ್ಯವಾಗಿವೆ. ತಲೆಗೆ ಹಳದಿ ರುಮಾಲು ಹಾಗೂ ನೂಲಿನ ದಂಡೀಸರ, ಮೈಗೆ ನಿಲುವಂಗಿ, ಕೊರಳಿಗೆ ತುಳಸಿಹಾರ ಹಾಗೂ ಹನುಮಂತನ ವಿಗ್ರಹವಿರುವ ದೊಡ್ಡ ಕಂಚಿನ ಪದಕ, ಬಲಗೈಯಲ್ಲಿ ಜಾಗಟೆ, ಎಡಗೈಯಲ್ಲಿ ಶಂಖ, ಹಣೆಯ ಮೇಲೆ ಮೂರು ನಾಮ, ಬಗಲಿಗೆ ಬವನಾಸಿ(ಭಿಕ್ಷೆಪಾತ್ರೆ) ಇವುಗಳನ್ನು ಉಪಯೋಗಿಸುವುದು ಕಂಡುಬರುತ್ತದೆ. ದಾಸಯ್ಯನಾಗ ಬೇಕಾದರೆ ಗುರುವಿನಿಂದ ವಿಧಿವತ್ತಾಗಿ ದೀಕ್ಷೆ ಪಡೆಯಬೇಕು. ಜೊತೆಗೆ ಅಷ್ಟಾಕ್ಷರೀ ಮಂತ್ರವನ್ನೂ, ರಾಮಗದ್ಯ, ನರಸಿಂಹಗದ್ಯ, ವಿಷ್ಣು ಪಾರಮ್ಯ ಮುಂತಾದ ಸ್ತೋತ್ರ ಪಾಠಗಳ ಉಪದೇಶವನ್ನು ಗುರುವಿನಿಂದ ಪಡೆಯಬೇಕು. ಹೀಗೆ ದೀಕ್ಷೆವಹಿಸಿ ಅನ್ನದಾನ ಮಾಡಿದಮೇಲೆ ಆತ ದಾಸಯ್ಯ ನಾಗುತ್ತಾನೆ. ವಿಶೇಷವಾಗಿ ಪರಿಶಿಷ್ಟ ಜಾತಿಗಳಲ್ಲಿ ದಾಸಯ್ಯಗಳು ಈಗಲೂ ಹಲವಾರು ಕಡೆಗಳಲ್ಲಿ ಕ್ರಿಯಾಶೀಲರಾಗಿದ್ದಾರೆ. ಮುಖ್ಯ ಹಬ್ಬಗಳಲ್ಲಿ, ಮದುವೆ, ಹುಟ್ಟು-ಸಾವುಗಳಲ್ಲಿ ದಾಸಯ್ಯ ಶಂಖ ಜಾಗಟೆ ಹಿಡಿದು ಕಾಣಿಸಿ ಕೊಳ್ಳುತ್ತಾನೆ. ಶ್ರಾವಣ ಶನಿವಾರಗಳು ಹಾಗೂ ಸುಗ್ಗಿ ದಾಸಯ್ಯನಿಗೆ ಹೆಚ್ಚು ವರಮಾನ ತಂದುಕೊಡುವ ಕಾಲಗಳು. ಇತ್ತೀಚೆಗೆ ದಾಸಯ್ಯಗಳು ಕಡಿಮೆಯಾಗುತ್ತಿದ್ದು, ಇದರ ಪ್ರಭಾವವು ಕುಂಠಿತಗೊಂಡಿದೆ.

**ದೇವರಗುಡ್ಡರು :** ದೇವರಗುಡ್ಡರು ಜನಪದ ಧಾರ್ಮಿಕ ವೃತ್ತಿಗಾಯಕರು. ಮೈಸೂರು ಜಿಲ್ಲೆಯ ದಕ್ಷಿಣ ಭಾಗದಲ್ಲಿ ಇವರು ವಿಶೇಷವಾಗಿ ಕಾಣಿಸಿಕೊಳ್ಳುತ್ತಾರೆ. ಕೊಳ್ಳೇಗಾಲ ತಾಲೂಕಿನಲ್ಲಿರುವ ಏಳುಮಲೆ ಮಾದೇಶ್ವರನ ಪರಮಭಕ್ತರಾದ ಇವರನ್ನು 'ದೇವರಗುಡ್ಡರು', ಸಿರಿಯ ದೇವರಗುಡ್ಡರು ಮುಂತಾಗಿ ಕರೆಯುವುದು ರೂಢಿಯಲ್ಲಿದೆ. ಇವರು ಬಳಸುವ ಕಂಚಿನ ತಾಳಗಳಿಗೆ 'ಕಂಸಾಳೆ' ಎಂದು ಹೆಸರಿರುವುದರಿಂದ ಇವರನ್ನು ಕಂಸಾಳೆಯವರು, ಕೈಸಾಳೆಯವರು, ಕೈತಾಳದವರು ಎಂದು ಕರೆಯಲಾಗುತ್ತದೆ. ಕಂಸಾಳೆಯನ್ನು ಹಿಡಿಯುವುದಕ್ಕೆ ಬೇಕಿರುವ ಅರ್ಹತೆ ಎಂದರೆ ದೇವರಗುಡ್ಡನಾಗುವುದು. ಮಲೆಯ ಮಾದೇಶ್ವರ ಕಂಚಿನ ತಾಳಗಳನ್ನು ನುಡಿಸುತ್ತ ಭಿಕ್ಷೆ ಮಾಡುತ್ತಿದ್ದರಿಂದ ದೇವರಗುಡ್ಡರಿಗೆ ಕಂಸಾಳೆಗಳು ಮಾದೇಶ್ವರನ ಬಿರುದುಗಳು. ಆದ್ದರಿಂದ ಇವರಿಗೆ ಕಂಸಾಳೆ ಪವಿತ್ರ ಹಾಗೂ ಪೂಜನೀಯ. ಈ ಕಾರಣದಿಂದಲೇ ಇವರು ಕಂಚಿನ ತಣಿಗೆಯಲ್ಲಿ ಊಟಮಾಡುವುದಿಲ್ಲ. ಅಲ್ಲದೆ ಕಥೆ ಮಾಡುವಾಗ ಅಥವಾ ಭಿಕ್ಷಕ್ಕೆ ಹೋಗುವಾಗ ಚಪ್ಪಲಿಗಳನ್ನು ಹಾಕಿಕೊಳ್ಳುವುದಿಲ್ಲ. ದೇವರಗುಡ್ಡರ ವಿಶಿಷ್ಟವಾದ ಉಡುಗೆ ತೊಡುಗೆಗಳೆಂದರೆ ಕಂಕುಳಲ್ಲಿ ಬೆಳ್ಳಿ ಕಟ್ಟಿನ ನಾಗಬೆತ್ತ, ಭುಜದಲ್ಲಿ ನಾಕುಪಾದದ ಜೋಳಿಗೆ, ಬೆನ್ನಿಗೆ ಹಸುಬೆ ಚೀಲ, ಕೈಯಲ್ಲಿ ಕಂಸಾಳೆ, ಹಣೆಗೆ ಮೂರು ಕಟ್ಟಿನ ವಿಭೂತಿ, ಕಣ್ಣಿನ ರಪ್ಪೆ, ಕಿವಿ, ಕುತ್ತಿಗೆಗಳಿಗೂ ವಿಭೂತಿಯ ಅಲಂಕಾರ, ಕುತ್ತಿಗೆಯಲ್ಲಿ ರುದ್ರಾಕ್ಷಿಸರ, ಇಲ್ಲವೇ ಒಂದೇ ಒಂದು ಅಡ್ಡಡ್ಡವಾಗಿ

ಪೋಣಿಸಿರುವ ರುದ್ರಾಕ್ಷಿ ಗುರುಮಣಿ. ದೇವರಗುಡ್ಡರು ಹರಿಜನರು, ಉಪ್ಪಲಿಗಶೆಟ್ಟರು, ಕುರುಬರು, ಕುಂಬಾರರು, ಅಗಸರು, ಪರಿವಾರದವರು, ಒಕ್ಕಲಿಗರು ಮುಂತಾದ ವರ್ಗದವರಲ್ಲಿ ಕಾಣಸಿಗುತ್ತಾರೆ. ಗುಡ್ಡರು ಮಾಡುವ ಹಬ್ಬಗಳಲ್ಲಿ ದೀಪಾವಳಿ ಹಾಗೂ ಶಿವರಾತ್ರಿಗಳು ಪ್ರಮುಖವಾದವುಗಳು. ಕಂಸಾಳೆ ಸಂಪ್ರದಾಯದ ಗಣ್ಯ ಕಲಾವಿದರ ನೆಲವೀಡು ಮೈಸೂರು. ಭಾರತದಾದ್ಯಂತ ಸಂಚರಿಸಿ, ತಮ್ಮ ಅಪೂರ್ವ ಕಲೆಗೆ ರಾಜ್ಯಪ್ರಶಸ್ತಿಯನ್ನು ಗಳಿಸಿದ ಕಂಸಾಳೆ ಮಹದೇವಯ್ಯ ಮೈಸೂರಿನವರು. ಜಲಪುರಿಯ ಹನುಮಂತಯ್ಯ, ಕುಕ್ಕರಹಳ್ಳಿಯ ಮರಿಯಯ್ಯ, ಪಡುವಾರಹಳ್ಳಿಯ ಮಾದಯ್ಯ ಇವರೆಲ್ಲ ಒಳ್ಳೆಯ ಕಂಸಾಳೆ ಕಲಾವಿದರು.

**ನೀಲಗಾರರು** : ನೀಲಗಾರರು ದಕ್ಷಿಣ ಕರ್ನಾಟಕದ ದಕ್ಷಿಣ ಭಾಗದಲ್ಲಿ ಪ್ರಮುಖವಾಗಿ ಕಂಡುಬರುವ ಧಾರ್ಮಿಕ ವೃತ್ತಿಗಾಯಕರು. ಮಂಟೇಸ್ವಾಮಿಯ ಶಿಷ್ಯರಾದ ಚಿಕ್ಕೆಲ್ಲೂರು ಸಿದ್ದಪ್ಪಾಜಿ, ಕಪ್ಪಡಿ ರಾಚಪ್ಪಾಜಿ ಮತ್ತು ಮಳವಳ್ಳಿ ಹಾಗೂ ಬೊಪ್ಪೇಗೌಡನಪುರದ ಅರಸುಮನೆತನದ ಸ್ವಾಮಿಗಳ ಮಹಿಮೆಯ ಪ್ರಸಾರಕ್ಕೆ ಮೀಸಲಾದ ವಿಶಿಷ್ಟ ಭಕ್ತರು. ಇವರನ್ನು ಲೀಲೆಗಾರರು ಎಂದೂ ಕರೆಯಲಾಗುತ್ತದೆ. ತಮ್ಮನ್ನು ಇವರು ಮಂಟೇದವರು, ಮಂಟೇಸ್ವಾಮಿಗಳು ಎಂದು ಕರೆದುಕೊಳ್ಳುತ್ತಾರೆ. ಇವರ ವೇಷಭೂಷಣಗಳು ವಿಶಿಷ್ಟವಾದುವು. ತಲೆಯಲ್ಲಿ ಕೆಂಪು ರುಮಾಲು, ಮೈಮೇಲೆ ಕರಿಯ ಮೇಲಂಗಿ, ಮಂಡಿಯಿಂದ ತುಸು ಕೆಳಗೆ ಚಾಚಿರುವ ಕಚ್ಚೆಯ ಪಂಚೆ, ಕೈಯಲ್ಲಿ ಅಷ್ಟೇನೂ ಉದ್ದವಲ್ಲದ ನಾಗರ ಹೆಡೆ ಅಥವಾ ಸಿಂಹಮುಖದ ಕರಿಯ ತಂಬೂರಿ, ಜೊತೆಗೆ ಚಿಟಗಿ ಅಥವಾ ಹೆಬ್ಬೆರಳಿನಲ್ಲಿ ಎರಡು ಗಗ್ಗರಗಳು, ಹಣೆಯಲ್ಲಿ ಭಸ್ಮ ಜೊತೆಗೆ ಕುಂಕುಮದ ತಿಲಕ, ಕೊರಳಲ್ಲಿ ಮೂರು ರುದ್ರಾಕ್ಷಿ ಧರಿಸಿರುತ್ತಾರೆ.

ಧರೆಗೆ ದೊಡ್ಡವರು, ಮಂಟೇದ ಒಡೆಯ, ಹಲಗೂರು ಪವಾಡ ಇವು ಇವರು ಹಾಡುವ ಮುಖ್ಯ ಧಾರ್ಮಿಕ ಕಥೆಗಳು. ಈ ಕಥೆಗಳ ಜೊತೆಗೆ ಅನೇಕ ಲೌಕಿಕ ಕಥೆಗಳನ್ನು ಹಾಡುತ್ತಾರೆ. ಅವುಗಳಲ್ಲಿ ಚಲುವ ಚೆನ್ನಿಗರಾಮ, ಮೈದಾಳು ರಾಮಣ್ಣ, ನಂಜಯ್ಯ ಚಾಮುಂಡಿ, ಪಿರಿಯಾಪಟ್ಟಣದ ಲಾವಣಿ, ಅರ್ಜುನಜೋಗಿ ಹಾಡು, ಗಜಪತಿ ರಾಜ, ಬಂಜೆಹೊನ್ನಮ್ಮ, ಚೆಲುವರಾಯ, ಬಾಲನಾಗಮ್ಮ ಮುಖ್ಯವಾದವುಗಳು.

ಧಾರ್ಮಿಕ ಕಥೆಗಳನ್ನು ಹಾಡುವಾಗ ಸಿದ್ಧಯ್ಯ ಶಿವನೇ ಬನ್ನಿ ಪರಂಜ್ಯೋತಿ ನೀವೆ ಬನ್ನಿ; ಮಂಟೇದಲಿಂಗಯ್ಯ ನೀವೆ ಬನ್ನಿ; ಎಂದು ಸೊಲ್ಲುಸೊಲ್ಲಿಗೂ ಗುರು ಸಿದ್ದಪ್ಪಾಜಿಯವರನ್ನು ನೆನೆಯುತ್ತ ತಂಬೂರಿಯನ್ನು ನುಡಿಸುತ್ತ ಕಥೆಯನ್ನು ಮುಖ್ಯ ಕಥೆಗಾರ ಹಾಡಿದರೆ ಹಿಮ್ಮೇಳದವರು ಚಿಟಗಿ, ಏಕತಾರಿಗಳನ್ನು ನುಡಿಸುತ್ತಾರೆ. ಈ ಸಂಪ್ರದಾಯದ ಅನೇಕ ಕಲಾವಿದರು ಮೈಸೂರು ನಗರದಲ್ಲಿ ವಾಸಮಾಡಿಕೊಂಡಿದ್ದರು. ಅಶೋಕಪುರಂ, ಜಲಗೇರಿ,

ಕುಂಬಾರಗೇರಿ ಮುಂತಾದ ಕಡೆಗಳಲ್ಲಿ ಇವರನ್ನು ಕಾಣಬಹದು. ಸುಪ್ರಸಿದ್ಧ ಕಲಾವಿದರಾದ ದೊಡ್ಡರಾಚಯ್ಯ, ಮಳವಳ್ಳಿ ರಾಚಯ್ಯ, ಗುರುಬಸವಯ್ಯ ಮುಂತಾದವರು ಮೈಸೂರು ನಗರದ ನಿವಾಸಿಗಳೆ ಆಗಿದ್ದಾರೆ.

**ಗದ್ದಿಗೆ ಮೂರ್ತಿ** : ಚಾಮುಂಡಿಬೆಟ್ಟದ ಶಿವಾರ್ಚಕರೊಬ್ಬರ ಪ್ರಕಾರ ಮೈಸೂರು ರಾಜ್ಯಕ್ಕೆ ಸೇರಿದ ಕೆಲವು ಗ್ರಾಮೀಣ ಕುಟುಂಬಗಳು ಗದ್ದಿಗೆ ದೇವತೆಯ ಆಶ್ರಯದಾತರಾಗಿದ್ದವು. ಶಿವಾರ್ಚಕರು ಗದ್ದಿಗೆ ಅಮ್ಮನ ಮೂರ್ತಿಯನ್ನು ಎಲ್ಲೆಲ್ಲಿ ತೆಗೆದುಕೊಂಡು ಹೋಗುತ್ತಿದ್ದರೋ ಅಲ್ಲೆಲ್ಲ ಇವರ ಭಕ್ತಾದಿಗಳು, ಒಕ್ಕಲುಗಳು ಇದ್ದಾರೆ. ಕೆಲವು ಶಿವಾರ್ಚಕರು ಲೋಹದ ವಿಗ್ರಹಗಳ ಚಾಮುಂಡೇಶ್ವರಿ ಮತ್ತು ಉತ್ನಳ್ಳಿ ಅಮ್ಮನ ಪ್ರತಿ ಮೂರ್ತಿಗಳನ್ನು ಹೊಂದಿದ್ದು ಆಚರಣೆಗಳನ್ನು ನಡೆಸುತ್ತಾರೆ ಅಲ್ಲದೆ ಅವರು ಲಿಂಗ, ವೀರಭದ್ರ, ನಂದಿ ಮತ್ತು ಕುದುರೆಗಳ ಮೂರ್ತಿಗಳನ್ನು ಹೊಂದಿದ್ದಾರೆ. ಈ ವಿಗ್ರಹಗಳನ್ನು ಶಿವಾರ್ಚಕ ಪುರೋಹಿತರು ಬಿದಿರು ಬುಟ್ಟಿಯಲ್ಲಿಟ್ಟುಕೊಂಡು ಕೊಂಡೊಯ್ಯುವುದು ವಾಡಿಕೆ. ಆಧುನಿಕ ವಾಹನಗಳನ್ನು ಹತ್ತದೆ ಎತ್ತಿನ ಬಂಡಿಯಲ್ಲಿ ತೆಗೆದುಕೊಂಡು ಹೋಗುವುದು ರೂಢಿಯಲ್ಲಿತ್ತು. ಆಧುನಿಕ ವಾಹನಗಳನ್ನು ಹತ್ತಿದರೆ ಅದರ ಪಾವಿತ್ರ್ಯಕ್ಕೆ ಧಕ್ಕೆಯಾಗುತ್ತದೆಂಬ ನಂಬಿಕೆ ಅವರಲ್ಲಿದ್ದಿರಬೇಕು. ಗದ್ದಿಗೆ ಮೂರ್ತಿಯನ್ನು ಭಕ್ತಾದಿಗಳ ಬಳಿಗೆ, ಒಕ್ಕುಗಳ ಬಳಿಗೆ ತೆಗೆದುಕೊಂಡು ಹೋಗುವುದು ಶಿವಾರ್ಚಕರ ಸಂಪ್ರದಾಯವಾಗಿದ್ದರೂ ಇತ್ತೀಚೆಗೆ ಅದನ್ನು ಕೊಂಡೊಯ್ಯುವ ಕಾರ್ಯ ನಿಂತು ಹೋಗಿದೆ ಎಂದು ತಿಳಿದು ಬರುತ್ತದೆ. ಕನ್ನ ಕನ್ನಾಡಿಯನ್ನು ಪೂಜಿಸುವ ಪುರೋಹಿತರ ಪ್ರಕಾರ ಚಾಮುಂಡಿ ಬೆಟ್ಟದ ಐದು ಶಿವಾರ್ಚಕ ಕುಟುಂಬಗಳು ಗದ್ದಿಗೆ ಮೂರ್ತಿಯನ್ನು ಹೊಂದಿವೆಯಂತೆ. ಅಂಥ ಕುಟುಂಬಗಳಲ್ಲಿ ಮಾತ್ರ ಗದ್ದಿಗೆ ಮೂರ್ತಿಯನ್ನು ಭಕ್ತಾದಿಗಳ ಊರುಗಳಿಗೆ ತೆಗೆದುಕೊಂಡು ಹೋಗುವ ಸಂಪ್ರದಾಯ ವಿದೆಯಂತೆ. ಶಿವಾರ್ಚಕರ ರೀತಿಯಲ್ಲಿ ಗದ್ದಿಗೆ ದೇವರನ್ನು ಊರೂರುಗಳಿಗೆ ತೆಗೆದುಕೊಂಡು ಹೋಗುವ ಪದ್ಧತಿಯನ್ನು ವೈದಿಕ ಪುರೋಹಿತರು ಅನುಸರಿಸಲಿಲ್ಲ. ವೈದಿಕರು ಚಾಮುಂಡಿ ಬೆಟ್ಟದ ದೇವಾಲಯದಲ್ಲಿ ಅದುವರೆಗೆ ರೂಢಿಯಲ್ಲಿದ್ದ ಕೆಲವು ಜನಪದ ಆಚರಣೆಗಳನ್ನು ನಿಷೇಧಿಸಿದರು.

ಜನಪದ ಸಂಸ್ಕೃತಿ ಮೂಲಭೂತವಾಗಿ ಧಾರ್ಮಿಕ ಬೇರುಗಳನ್ನೇ ಆಧರಿಸಿರುವುದರಿಂದ ಇಂತವರೇ ದೇವರ ಒಕ್ಕಲು ಎಂದು ಗುರುತಿಸುವುದು ತುಂಬಾ ಸಂಕೀರ್ಣ ಕೆಲಸ. ಯಾವುದೇ ಒಕ್ಕಲಿನವರಾಗಲಿ ಎಷ್ಟೇ ದೂರ ಹೋಗಿ ನೆಲೆಸಿದರೂ ಈ ಒಕ್ಕಲುಗಳು ವರ್ಷಕೊಮ್ಮೆ ಬಂದು ತಮ್ಮ ಕುಲದೇವತೆಗಳನ್ನೂ, ಗ್ರಾಮ ದೇವತೆಗಳನ್ನೂ, ನಾಡ ದೇವತೆಗಳನ್ನೂ ಪೂಜಿಸಿ

ಹೋಗುವುದುಂಟು. ಒಂದಲ್ಲ ಒಂದು ರೀತಿಯಲ್ಲಿ ಇವರೆಲ್ಲ ಆ ದೇವರ ಪರಿಧಿಗೆ ಸೇರಿದ ಒಕ್ಕಲು ಎನಿಸುತ್ತಾರೆ.

**ಪೂಜಾರಿ/ಅರ್ಚಕ/ತಮ್ಮಡಿ** : ದೇವಾಲಯವಿದ್ದಲ್ಲಿ ಪೂಜಾರಿಯೂ ಇರಲೇಬೇಕು. ಏಕೆಂದರೆ ದೇವಾಲಯಗಳಲ್ಲಿ ನಿತ್ಯವೂ ದೇವರಿಗೆ ಪೂಜೆ ಸಲ್ಲಿಸುವ ಮೂಲಕ ಆ ದೇವಸ್ಥಾನಕ್ಕೆ ಒಂದು ಜೀವಂತಿಕೆಯನ್ನು ತಂದು ಕೊಡುವ ಪ್ರಮುಖ ವ್ಯಕ್ತಿಯಾಗಿರುತ್ತಾನೆ. ಈತ ದೇವರು ಹಾಗೂ ಜನತೆಯ ನಡುವೆ ಮಧ್ಯವರ್ತಿಯಾಗಿ ಕೆಲಸ ನಿರ್ವಹಿಸುತ್ತಾನೆ. ಹಾಗಾಗಿ ಜನರು ಈತನನ್ನು ದೇವರ ಪ್ರತಿನಿಧಿ ಎಂಬುದಾಗಿ ಭಾವಿಸಿ, ಇವನು ಹೇಳುವ ಮಾತುಗಳಿಗೆ ಮಾನ್ಯತೆ ನೀಡುತ್ತಾರೆ. ಜೊತೆಗೆ ದೇವರಿಗೆ ಕೊಡುವ ಭಕ್ತಿ ಗೌರವವನ್ನು ಈತನಿಗೂ ಕೊಡುತ್ತಾರೆ.

ಮೈಸೂರು ನಗರದ ದೇವಾಲಯಗಳಲ್ಲಿ ಕಂಡುಬರುವವರನ್ನು ಅರ್ಚಕ, ಪುರೋಹಿತ, ಪೂಜಾರಿ, ತಮ್ಮಡಿ, ದೇವರಗುಡ್ಡರು, ಸ್ವಾಮಿಯವರು, ಒಕ್ಕಲಿನವರು ಮುಂತಾದ ಹೆಸರುಗಳಿಂದ ಗುರುತಿಸುತ್ತಾರೆ. ಅರ್ಚಕರು, ಪುರೋಹಿತರು, ಪೂಜಾರಿಗಳು ಎಂದು ಗುರುತಿಸಿ ಕೊಳ್ಳುವವರು ಸಾಮಾನ್ಯವಾಗಿ ಶಿಷ್ಟರೀತಿಯ ಮಂತ್ರ ಪಠಣಗಳ ಬಗ್ಗೆ ಅರಿವಿದ್ದು ಮಂತ್ರ, ಅರ್ಚನೆಗಳ ಮೂಲಕ ದೇವರನ್ನು ಪೂಜಿಸುತ್ತಾರೆ. ಆದರೆ ದೇವರಗುಡ್ಡರು, ಸ್ವಾಮಿಯವರು, ಒಕ್ಕಲಿನವರು ಮುಂತಾದ ಬಗೆಯಲ್ಲಿ ಗುರುತಿಸಿ ಕೊಂಡಿರುವವರಿಗೆ ಯಾವುದೇ ರೀತಿಯ ಮಂತ್ರಗಳು ಬರುವುದಿಲ್ಲ. ಅನೇಕ ವೇಳೆ ತಮ್ಮ ವೇಷಭೂಷಣಗಳಿಂದ, ಭಾಷೆಯಿಂದ, ಆಚಾರ–ವಿಚಾರಗಳಿಂದ, ಇತರರಿಂದ ಇವರು ಬೇರೆಯೇ ಆಗಿ ಕಾಣುತ್ತಾರೆ.

ಅರ್ಚಕರು, ಪೂಜಾರಿಗಳು ಮತ್ತು ಪುರೋಹಿತರು ನಗರದ ಪ್ರಮುಖ ದೊಡ್ಡ ದೊಡ್ಡ ಪ್ರಸಿದ್ಧವಾದ ದೇವಾಲಯಗಳಲ್ಲಿ ಕಂಡುಬಂದರೆ, ದೇವರಗುಡ್ಡರು, ತಮ್ಮಡಿಗಳು, ಸ್ವಾಮಿಯವರು, ಒಕ್ಕಲಿನವರು ನಗರದಲ್ಲಿ ಇನ್ನು ಪ್ರಮುಖ ಗ್ರಾಮಗಳಂತೆ ಇರುವ ಪ್ರದೇಶಗಳ ಚಿಕ್ಕಪುಟ್ಟ ಗುಡಿಗಳು, ದೇವಸ್ಥಾನಗಳಲ್ಲಿ ಪೂಜಾಕಾರ್ಯಗಳನ್ನು ನೆರವೇರಿಸುತ್ತಾರೆ. ಉದಾಹರಣೆಗೆ: ಕಾಳಿಗುಡಿ, ಮಾರಮ್ಮನಗುಡಿ, ಮಾದೇಶ್ವರ ದೇವಾಲಯ, ಸಿದ್ದಪ್ಪಾಜಿ ಮತ್ತು ಮಂಟೇಸ್ವಾಮಿ ದೇವಾಲಯಗಳು. ಕಾಯಿಲೆ ಬಂತೆಂದರೆ ಊರದೇವತೆಗೆ ಪೂಜೆ ಸಲ್ಲಿಸುವುದು ಅಥವಾ ಪೂಜಾರಿಯಿಂದ ಮಂತ್ರಹಾಕಿಸಿ ಕೊಳ್ಳುವುದು, ಯಂತ್ರಕಟ್ಟಿಸಿಕೊಳ್ಳುವುದು ರೂಢಿಯಲ್ಲಿದೆ.

ಇವರಲ್ಲಿ ಮತ್ತೊಂದು ವರ್ಗ ಪುರೋಹಿತ ಜೋತಿಷ್ಯಗಾರರು. ಇವರು ಪಂಚಾಂಗ ನೋಡುವುದು, ಶುಭ–ಅಶುಭಗಳನ್ನು ತಿಳಿಸುವುದು, ಮುಂತಾದ ಕೆಲಸಗಳನ್ನು ಪೌರೋಹಿತ್ಯದ ಜೊತೆಯಲ್ಲಿ ಮಾಡುತ್ತಾರೆ. ಜನಪದ ಸಮಾಜದಲ್ಲಿ ಮಡಿ ಮತ್ತು ಮೈಲಿಗೆಗೆ, ಮುಹೂರ್ತಕ್ಕೆ,

ವಿಧಿ ಕಾರ್ಯಗಳಿಗೆ ಹೆಚ್ಚಿನ ಆದ್ಯತೆ ಇದೆಯಾದ್ದರಿಂದ ಈ ಪುರೋಹಿತರಿಗೂ ಹೆಚ್ಚಿನ ಬೇಡಿಕೆಯಿದೆ.

ಒಟ್ಟಾರೆಯಾಗಿ ಮೈಸೂರು ನಗರದ ಪಾರಂಪರಿಕ ದೇವಾಲಯಗಳಲ್ಲಿ ಹಿಂದಿನಿಂದಲೂ ವರ್ಗ–ವರ್ಣಗಳ ಸಂಘರ್ಷಗಳು ನಡೆಯುತ್ತಲೇ ಇದ್ದರೂ, ಎಲ್ಲಾ ವರ್ಗಗಳ ಜನಸಮುದಾಯದವರು ಸಾಮಾಜಿಕ ಮತ್ತು ಧಾರ್ಮಿಕ ಕೆಲಸಕಾರ್ಯಗಳಲ್ಲಿ ಸಮಾನವಾಗಿ ಭಾಗಿಯಾಗಿರುವುದು ಕಂಡುಬರುತ್ತದೆ. ಅಲ್ಲದೇ ಪ್ರಜಾ ಪಾಲಕರಾದ ರಾಜ ಮನೆತನದವರು ಎಲ್ಲಾ ವರ್ಗದವರನ್ನು ಸಮಾನವಾಗಿ ಕಂಡಿದ್ದಾರೆ. ಸ್ವತಂತ್ರವಾಗಿ ಅವರವರ ಇಷ್ಟ ದೈವಗಳಿಗೆ, ಕುಲದೈವಗಳಿಗೆ, ನಡೆದುಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದಾರೆ. ಪ್ರಭುತ್ವ ಪರಂಪರೆ, ಒಕ್ಕಲು ಪರಂಪರೆ, ಪೂಜಾರಿಗಳು ಪರಂಪರೆಯಿಂದ ಪರಂಪರೆಗೆ ತಮ್ಮ ಕುಲದೈವ ಹಾಗೂ ಇಷ್ಟದೈವಗಳಿಗೆ ನಡೆದುಕೊಂಡಿದ್ದಾರೆ. ಸ್ವತಃ ರಾಜ ಮಹಾರಾಜರೇ ತಮ್ಮ ಕುಲದೈವ ಚಾಮುಂಡೇಶ್ವರಿಗೆ ನಡೆದುಕೊಳ್ಳುತ್ತಿದ್ದಾರೆ. ದೇವಾಲಯಗಳ ಸಾಮಾಜಿಕ ಸಂಪ್ರದಾಯಗಳು ನೆರವೇರಲು ಸಹಕರಿಸಿದ್ದಾರೆ. ಇಂದು ಯಾವುದೇ ಕಟ್ಟು ಪಾಡುಗಳಿಲ್ಲದೆ ಎಲ್ಲರೂ ಸಮಾನವಾಗಿ ಭಾಗವಹಿಸುತ್ತಿರುವುದೇ ಸಾಕ್ಷಿಯಾಗಿದೆ.

## ಕೊನೆ ಟಿಪ್ಪಣಿಗಳು

1. ಬಾ.ರಾ.ಗೋಪಾಲ್, ಎ.ಕ, ಸಂಪಟ–5, ಮೈಸೂರು–141, ಚಾಮುಂಡಿಬೆಟ್ಟ, ಪು.ಸಂ–278.
2. ಅದೇ, ಮೈಸೂರು–1, ಪು.ಸಂ–144.
3. ಅದೇ, ಮೈಸೂರು–223, ಕುಕ್ಕರಹಳ್ಳಿ, ಪು.ಸಂ–321.
4. ಅದೇ, ಮೈಸೂರು–104, ಪು.ಸಂ–239.
5. ಅದೇ, ಮೈಸೂರು–83, ಪು.ಸಂ–197.
6. ಪ್ರೊ.ರಂಗಪ್ಪ.ಕೆ.ಎಸ್,(ಪ್ರ.ಸಂ), ಮೈಸೂರು ದರ್ಶನ, ಸಂಪುಟ–1, ಪು.ಸಂ–54.
7. ಡಾ.ಚಿನ್ನಸ್ವಾಮಿ ಸೋಸಲೆ, ನಾಲ್ವಾಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ–2013.
8. ಸೂರ್ಯನಾಥ್ ಕಾಮತ್(ಸಂ), ಸ್ವಾತಂತ್ರ್ಯಸಂಗ್ರಾಮದ ಸ್ಮೃತಿಗಳು, ಸಂಪುಟ–3, ಮೈಸೂರು–1977.
9. ನಾಗರತ್ನಮ್ಮ, ತುಮಕೂರು ಜಿಲ್ಲೆ ಸ್ವಾತಂತ್ರ್ಯ ಚಳುವಳಿಯಲ್ಲಿ, ದೇಶಿಪುಸ್ತಕ, ಬೆಂಗಳೂರು, 2009.
10. ಬಾ.ರಾ.ಗೋಪಾಲ್, ಎ.ಕ, ಸಂಪುಟ–5, ಮೈಸೂರು–221, ಹಳೆಬೋಗಾದಿ, ಪು.ಸಂ–320.
11. ಎಂ.ಕೆ.ಲಿಂಗಯ್ಯ, ಮೈಸೂರು ಒಂದು ಅಧ್ಯಯನ, ಪು.ಸಂ–93.
12. ಬಾ.ರಾ.ಗೋಪಾಲ್, ಎ.ಕ, ಸಂಪುಟ–5, ಮೈಸೂರು–205, ಲಿಂಗಾಂಬುದಿ, ಪು.ಸಂ–309.
13. ಅದೇ, ಮೈಸೂರು–137, ಚಾಮುಂಡಿಬೆಟ್ಟ, ಪು.ಸಂ–277.
14. ರಾಜ್ಯಧರ್ಮ, ದಿನಾಂಕ, 19.07.2018, ಪು.ಸಂ–1,2
15. ಬಾ.ರಾ.ಗೋಪಾಲ್(ಸಂ), ಎ.ಕ, ಸಂಪುಟ–5, ಮೈಸೂರು–221, ಹಳೆಬೋಗಾದಿ, ಪು.ಸಂ–320.
16. ಅದೇ, ಮೈಸೂರು–85, ಪು.ಸಂ–197.
17. ಅದೇ, ಮೈಸೂರು–152, ಚಾಮುಂಡಿಬೆಟ್ಟ, ಪು.ಸಂ–283.
18. ಅದೇ, ಮೈಸೂರು–157, ಚಾಮುಂಡಿಬೆಟ್ಟ, ಪು.ಸಂ–285.

# ಅಧ್ಯಾಯ–8

## ಪಾರಂಪರಿಕ ದೇವಾಲಯಗಳ ಕಲೆ ಮತ್ತು ಸಾಹಿತ್ಯ

ಮೈಸೂರು ಕಲೆ, ಸಾಹಿತ್ಯ, ಸಂಸ್ಕೃತಿಗೆ ಹೆಸರಾದ ನಾಡು. ಸಂಪದ್ಭರಿತವಾದ ಜನಪದ ಕಲೆಗಳು ಇಲ್ಲಿ ಸ್ಥಾನವನ್ನು ಪಡೆದಿವೆ. ಕಣ್ಮನಗಳನ್ನು ತಣಿಸುವ ತಮ್ಮ ಅಂದಗಾರಿಕೆಯಿಂದ, ಸಾಂಸ್ಕೃತಿಕ ಸಂಪತ್ತಿನಿಂದ, ಸಾಹಿತ್ಯದ ಸೊಬಗಿನಿಂದ ಅವು ತಮ್ಮದೇ ಆದ ವೈಶಿಷ್ಟ್ಯ, ವೈವಿಧ್ಯಗಳನ್ನು ಪಡೆದುಕೊಂಡಿವೆ. ಕಲೆ ಮತ್ತು ಸಾಹಿತ್ಯಗಳು ಕೇವಲ ಮನರಂಜನೆಯ ಸಾಧನಗಳಷ್ಟೆ ಅಲ್ಲ. ಅವು ಜನರನ್ನು ತಿದ್ದಿ, ತೀಡಿ, ಎಚ್ಚರಿಸುವ ಜ್ಞಾನ ತುಂಬುವ ವಿಶ್ವವಿದ್ಯಾನಿಲಯಗಳೂ ಹೌದು. ಧಾರ್ಮಿಕ ಎಚ್ಚರಗಳ ಜೊತೆಗೆ ಮಾನವೀಯತೆಯ ಮೌಲ್ಯವನ್ನು ಎತ್ತಿ ಹಿಡಿಯುವ ಕೆಲಸವನ್ನು ಸರಾಗವಾಗಿ ಮಾಡುತ್ತವೆ. ಅಂತೆಯೇ ಮೈಸೂರು ನಗರದ ಪಾರಂಪರಿಕ ದೇವಾಲಯಗಳಲ್ಲಿಯೂ ಅದಕ್ಕೆ ಸಂಬಂಧಿಸಿದಂತೆ ಕಲೆ ಮತ್ತು ಸಾಹಿತ್ಯವಿರುವುದನ್ನು ಕಾಣ ಬಹುದಾಗಿದೆ. ಅವುಗಳನ್ನು ಈ ಕೆಳಕಂಡಂತೆ ಅಧ್ಯಯನಕ್ಕೆ ಒಳಪಡಿಸಲಾಗಿದೆ.

### 8.1 ಜನಪದ ಕಲೆ

ಮೊದಲಿಗೆ ಆರಾಧನೆಯ ಅಂಗವಾಗಿ ಧಾರ್ಮಿಕ ಪ್ರಸಾರಕ್ಕಾಗಿ ಹುಟ್ಟಿಕೊಂಡ ಕಲೆಗಳು ಕ್ರಮೇಣ ವೃತ್ತಿಪರತೆಗೆ ಹಾದಿ ಮಾಡಿಕೊಟ್ಟವು; ಮನರಂಜನೆಯ ಕಲೆಗಳಾಗಿ ರೂಪುಗೊಂಡವು ಇಂದಿಗೂ ಜನಪದ ಕಲೆಗಳಲ್ಲಿ ಜನಪದರ ಧಾರ್ಮಿಕ ಬದ್ಧತೆ ಅಡಗಿದೆ; ಮನರಂಜನೆ ಎದ್ದು ಕಾಣುತ್ತದೆ. ಪ್ರೇಕ್ಷಕರು ಮತ್ತು ಕಲಾವಿದರೀರ್ವರೂ ಕಲೆಗಳ ಪ್ರದರ್ಶನದಲ್ಲಿ ಒಟ್ಟಾಗಿ ಸಮಾಧಾನ ಸಂತೃಪ್ತಿಗಳನ್ನು ಕಾಣುವ ಮೂಲಕ ಮಾನಸಿಕ ಉನ್ನತಿಯನ್ನು ಸಾಧಿಸುತ್ತಾರೆ. ಫಲವಾಗಿ ಕಲೆಗಳು ಜಾತಿ ಮತಗಳ, ಮೇಲು ಕೀಳುಗಳ ಅಂತರವನ್ನು ನಿವಾರಿಸುತ್ತವೆ. ವರ್ಗ–ವರ್ಣ ಸಾಮರಸ್ಯ ಗಳನ್ನು ಕಲಿಸುತ್ತವೆ. ಕೋಮು ಸೌಹಾರ್ದತೆಯನ್ನು ಬೆಳೆಸುತ್ತವೆ.

ತೀರಾ ಸರಳವು, ನೇರವು, ಆಕರ್ಷಣೀಯವೂ ಆದ ಗುಣಗಳನ್ನು ಹೊಂದಿರುವ ಜನಪದ ಕಲೆಗಳು ಮಕ್ಕಳಿಂದ ಹಿಡಿದು ಮುದುಕರವರೆಗೆ ಎಲ್ಲರಿಗೂ ಮುದ ನೀಡುತ್ತವೆ. ಸಮೂದಾಯಗಳ ಸಾಂಸ್ಕೃತಿಕ ವಾಹಕಗಳಾದ ಕಲೆಗಳು ತಲೆಮಾರುಗಳ ಸಾಧನೆಯ ಸಾಕ್ಷ್ಯಗಳಾಗಿ ಉಳಿದು ಬಂದಿವೆ

“ಕಲೆಯು ಆಂತರಂಗಿಕವಾದ ಭಾವಗಳನ್ನು ಬಾಹ್ಯಪ್ರಪಂಚದಲ್ಲಿ ಪ್ರಸಾರಮಾಡಿ, ಅಮೂರ್ತವಾದುದಕ್ಕೆ ಮೂರ್ತಿರೂಪವನ್ನು ಕೊಡಲು ಯತ್ನಿಸುವುದು. ಆದುದರಿಂದ

ಕಲಾವಿದನು ಬಾಹ್ಯ ಪ್ರಪಂಚದ ವಿಷಯವಾಗಿ ಒಂದು ನಿಶ್ಚಿತತೆ ಹೊಂದಿರಬೇಕಾದುದು ಅತ್ಯವಶ್ಯಕ. ಇಂತಹ ತತ್ವ ನಿಶ್ಚಿಯವಿಲ್ಲದಿದ್ದರೆ ರಸಪುಷ್ಟವಾದ ಕಲೆಯು ಎಂದಿಗೂ ಹುಟ್ಟಲಾರದು. ಪ್ರಪಂಚದಲ್ಲಿ ಕಲಾ ರೂಪಗಳು ದೇಶ, ಕಾಲ, ಭಿನ್ನ ಪ್ರಕೃತಿಗಳನ್ನನುಸರಿಸಿ ಅನೇಕ ವಿಧಗಳಾಗಿರುವವು"[1]

**ಧಾರ್ಮಿಕ ಜನಪದ ಕುಣಿತಗಳು**

ದೈವಾರಾಧನೆಯ ಅಂಗವಾಗಿ ಧಾರ್ಮಿಕ ಆಚರಣೆಗಳೊಂದಿಗೆ ಹುಟ್ಟಿಕೊಂಡ ಕುಣಿತಗಳೇ ಧಾರ್ಮಿಕ ಕುಣಿತಗಳು. ಮನುಷ್ಯನ ತೀವ್ರವಾದ ಅನಿಸಿಕೆಗಳಿಗೆ ತಾತ್ವಿಕ ಹಿನ್ನೆಲೆ ಸಿಕ್ಕಾಗ ಹುಟ್ಟುವ ಈ ಕುಣಿತಗಳು ಆರಾಧನಾ ಕಲೆಗಳು. ದೇವರು, ಭಯ, ಭಕ್ತಿ, ಆಚರಣೆ ಈ ಕುಣಿತಗಳ ಮೂಲವಸ್ತು. ದೈವ ಸಂತೃಪ್ತಿ ಕುಣಿತಗಳ ಪ್ರದರ್ಶನದ ಹಿಂದಿನ ಪ್ರಧಾನ ಉದ್ದೇಶವಾಗಿದ್ದು, ವ್ಯಕ್ತಿ ತನ್ನ ಹಾಗೂ ಜಗತ್ತಿನ ಕ್ಷೇಮಾಭ್ಯುದಯಕ್ಕಾಗಿ ಅರ್ಪಣಾ ಮನೋಭಾವದಿಂದ ಅಗೋಚರ ದೈವಗಳನ್ನು ಪ್ರಾರ್ಥಿಸುತ್ತಾನೆ, ಆರಾಧಿಸುತ್ತಾನೆ. ಧಾರ್ಮಿಕ ಕುಣಿತಗಳು ತಮ್ಮದೆ ಆದ ನಿರ್ದಿಷ್ಟ ಕಟ್ಟು ಪಾಡುಗಳು, ಧಾರ್ಮಿಕ ವಿಧಿ ನಿಷೇಧಗಳನ್ನು ಹೊಂದಿರುತ್ತವೆ. ಪೂಜಾಕುಣಿತ, ಕರಗದಕುಣಿತ, ನಂದೀಧ್ವಜಕುಣಿತ, ಬೀಸುಕಂಸಾಳೆ, ವೀರಗಾಸೆ, ನಾಗನೃತ್ಯ, ಬೂತದ ಕೋಲ ಮುಂತಾದವುಗಳೆಲ್ಲವೂ ಧಾರ್ಮಿಕ ಆಚರಣೆಯ ಸಂದರ್ಭದಲ್ಲಿ ಹುಟ್ಟಿಕೊಂಡ ಆರಾಧನಾ ಕಲೆಗಳು.

ಪ್ರದರ್ಶಕತೆಯೇ ಜನಪದ ಕಲೆಗಳ ಜೀವಾಳ "ವಿವಿಧ ವಾದ್ಯಮೇಳದ ಒಡಲಿಂದ ಚಿಮ್ಮುವ ವಿಭಿನ್ನ ಲಯ, ಲಯದ ಗತ್ತಿಗೆ ಅನುಗುಣವಾಗಿ ಹೊಮ್ಮುವ ನಾದಶರೀರಿಯಾದ ಹಾಡು, ಕಣ್ಣಿಗೆ ಬಣ್ಣ ತುಂಬುವ ಚಿತ್ತಾಕರ್ಷಕ ವೇಷಭೂಷಣ ಧರಿಸಿ ನಾದಲಯಗಳ ನಿರ್ದಿಷ್ಟಗತ್ತಿನಲ್ಲಿ ಮೂಡುವ ಕುಣಿತ, ಇವೆಲ್ಲ ಎರಕಗೊಂಡು ಆಯಾ ಜನಪದ ವೃಂದದ ಆರಾಧನೆ, ಉತ್ಸಾಹ ಇತ್ಯಾದಿ ಗುರಿಗಳನ್ನು ಅನಾವರಣ ಗೊಳಿಸುವ ಕ್ರಿಯೆಯ ಆಚರಣೆ; ಹೀಗೆ ಶ್ರವ್ಯ–ದೃಶ್ಯ ಸಂಗತಿಗಳ ಕಲಾತ್ಮಕ ಸಂಯೋಜನೆ, ಜನಪದ ಕಲೆಗಳ ಸ್ವರೂಪ ನಿರ್ಮಿತಿಗೆ, ಸತ್ವ ಸೃಷ್ಟಿಗೆ ಬೆನ್ನೆಲುಬಾಗಿವೆ"[2]

ಜಾನಪದ ಕುಣಿತಗಳು ಧಾರ್ಮಿಕ ಕುಣಿತಗಳೊಂದಿಗೆ ಸಂಬಂಧ ಹೊಂದಿದ್ದು ಬದುಕಿನ ಎಲ್ಲಾರಂಗಗಳಲ್ಲಿಯೂ ಇವು ಕಂಡುಬರುತ್ತವೆ. ಧಾರ್ಮಿಕ ಚಟುವಟಿಕೆಗಳಲ್ಲಿಯೂ ಹಾಡು, ಕುಣಿತ ಜೊತೆಜೊತೆಯಲ್ಲಿಯೇ ವರ್ಣರಂಜಿತವಾಗಿ ಗೋಚರಿಸುತ್ತವೆ. ಧರ್ಮಕ್ಕೂ ಜನಪದ ಕುಣಿತಗಳಿಗೂ ಇರುವ ಸಂಬಂಧ ಅತ್ಯಂತ ನಿಕಟವಾದದ್ದು. ಬಹುತೇಕವಾಗಿ ಜನಪದ ನೃತ್ಯಗಳು ಹುಟ್ಟಿಕೊಂಡದ್ದೇ ಧಾರ್ಮಿಕವಾದ ಹಿನ್ನೆಲೆಯಲ್ಲಿಯೆ. ದೇವರ ಮೇಲಿನ ನಂಬಿಕೆಯಿಂದ ಅದರ

ಮೇಲಿನ ಆರಾಧನೆಯ ಭಾವದಿಂದಲೋ, ದೇವರಿಗೆ ಕೃತಜ್ಞತೆ ಸಲ್ಲಿಸುವ ಕಾರಣದಿಂದಲೋ, ಭಯ ಭಕ್ತಿಯ ಆವೇಶದಿಂದಲೋ ಜನಪದ ಕುಣಿತಗಳು ಜನ್ಮ ತಳೆದಿರುವುದನ್ನು ಕಾಣುತ್ತೇವೆ.

ಮೈಸೂರು ನಗರವು ಇವುಗಳಿಂದ ಹೊರತಾಗಿಲ್ಲ. ಇಲ್ಲಿ ಹಲವಾರು ಬಗೆಯ ಕುಣಿತಗಳನ್ನು ಕಾಣಬಹುದಾಗಿದೆ. ಅದರಲ್ಲಿ ಮುಖ್ಯವಾಗಿ ಜನಪದ ಕುಣಿತಗಳು ಹಾಗೂ ಧಾರ್ಮಿಕ ಕುಣಿತಗಳು ಹೆಚ್ಚಾಗಿ ಆಕರ್ಷಿತವಾಗಿ ಗೋಚರಿಸುತ್ತವೆ. ಆದರೆ ಇವುಗಳೆಲ್ಲ ಇಲ್ಲಿಗೆ ಸೀಮಿತವಾದವುಗಳೇನೂ ಅಲ್ಲ. ದೇವರು, ಧರ್ಮ, ಸಂಸ್ಕೃತಿಗಳು ಹೇಗೆ ಸರ್ವವ್ಯಾಪಿ ಯಾದವುಗಳೋ ಅಂತೆಯೆ ಕುಣಿತಗಳೂ ಸರ್ವವ್ಯಾಪಿಯಾದವುಗಳು. ಕಲೆಗಳ ಮೂಲವೇ ಧರ್ಮ ಎಂಬ ಮಾತನ್ನು ಇಲ್ಲಿ ನೆನೆಯ ಬೇಕಾಗುತ್ತದೆ. ಜನಪದರು ಧರ್ಮವನ್ನೇ ನಂಬಿ ಅದರ ಹಿನ್ನೆಲೆಯಲ್ಲಿಯೆ ಹಲವಾರು ಬಗೆಯ ಆಚರಣೆಗಳನ್ನು ಮಾಡುತ್ತಾ ಬಂದವರು. ಇದರಿಂದ ಧರ್ಮಕ್ಕೂ ಕಲೆಗಳಿಗೂ ಇರುವ ಸಂಬಂಧವನ್ನು ಗುರುತಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ಕೆಲವು ಧಾರ್ಮಿಕ ಕುಣಿತಗಳನ್ನು ಇಲ್ಲಿ ಹೆಸರಿಸಬಹುದಾಗಿದೆ. ನಂದಿಕುಣಿತ, ಪೂಜಾಕುಣಿತ, ಬೀಸುಕಂಸಾಳೆ, ವೀರಗಾಸೆಕುಣಿತ, ಡೊಳ್ಳುಕುಣಿತ, ಪಟಾಕುಣಿತ, ಗೊರವರಕುಣಿತ, ಸೋಮನಕುಣಿತ ಮುಂತಾದವುಗಳು. ಇವುಗಳು ಕೆಲವೊಂದು ಕೆಲವು ಪ್ರದೇಶಗಳಿಗೆ ಸೀಮಿತ ಗೊಂಡವುಗಳಾದರೂ, ಅವುಗಳ ಜನಪ್ರಿಯತೆ ಹಾಗೂ ಕಲಾತ್ಮಕತೆಯಿಂದಾಗಿ ಎಲ್ಲಾ ಭಾಗ ಗಳಲ್ಲಿಯೂ ಒಂದಲ್ಲ ಒಂದು ರೀತಿಯಲ್ಲಿ ಕಾಣಸಿಗುವುದು ಒಂದು ವಿಶೇಷವಾಗಿದೆ.

**ಕಂಸಾಳೆ :** ಮಲೆಯ ಮಾದೇಶ್ವರನ ಭಕ್ತರಾದ ದೇವರಗುಡ್ಡರು ಎಂಬ ಧಾರ್ಮಿಕ ವೃತ್ತಿಗಾಯಕರು ಬಳಸುವ ಕಂಚಿನ ತಾಳಗಳು. ಇದೊಂದು ಶೈವ ಧರ್ಮದವರ ಧಾರ್ಮಿಕ ಜನಪದ ವಾದ್ಯ. ಕಾಂಸ್ಯತಾಲ ಎಂಬುದರ ತದ್ಭವ ರೂಪವೆ ಕಂಸಾಳೆ. ದೇವರಗುಡ್ಡರು ಇದನ್ನು **'ಬಿರುದು'** ಎಂದೂ ಕರೆಯುತ್ತಾರೆ. ಸಾಧಾರಣ ಬಟ್ಟು ತಾಳಗಳಿಗಿಂತ ಕಂಸಾಳೆ ಗಾತ್ರದಲ್ಲಿ ದೊಡ್ಡದು, ಆಕೃತಿಯಲ್ಲಿ ವಿಶಿಷ್ಟವಾದುದು. ಅಂಗೈ ಅಗಲದ ಚಕ್ರಾಕಾರವಾದ ಬಟ್ಟಲು, ಚಿಕ್ಕ ಜಾಗಟೆ ಯಂತಿರುವ ಮಟ್ಟಸವಾದ ಮೇಲುತಾಳ, ಮೇಲುತಾಳಕ್ಕೆ ಸೇರಿದಂತೆ ಹಿಡಿದುಕೊಳ್ಳಲು ಮಾಡಿಕೊಂಡ ಗೊಂಡೆಯ ಕಲಾತ್ಮಕ ಹುರಿ ಇವು ಕಂಸಾಳೆಯ ಮುಖ್ಯ ಭಾಗಗಳು. ಬಟ್ಟಲನ್ನು ಮೇಲು ಮುಖವಾಗಿ ಎಡ ಅಂಗೈ ಮೇಲೆ ಇರಿಸಿಕೊಂಡು ಬಲಗೈಯಲ್ಲಿ ಹಿಡಿದ ಮೇಲು ತಾಳವನ್ನು ಅದರ ಮೇಲೆ ಕುಟ್ಟುವುದರಿಂದ ಕಣಿಕಣಿ ಎಂಬ ಮಧುರನಾದ ಉಂಟಾಗುತ್ತದೆ. ಈ ನಾದದ ಹಿನ್ನೆಲೆಯಲ್ಲಿ ಗುಡ್ಡರು ಹಾಡುತ್ತಾರೆ. ಕೆಲವೊಮ್ಮೆ ಕೆಲವು ಗುಡ್ಡರು ಕಂಚಿನ ತಾಳಗಳಿಗೆ

ಬದಲಾಗಿ ಹಿತ್ತಾಳೆಯ ತಾಳಗಳನ್ನು ಬಳಸುವುದುಂಟು. ವೃತ್ತಿಗಾಯಕರು ಬಳಸುವ ವಾದ್ಯಗಳಲ್ಲೆಲ್ಲ ಭಿಕ್ಷಾಪಾತ್ರೆಯಾಗಿಯೂ ಬಳಸಲ್ಪಡುವ ಏಕಮಾತ್ರ ಸಾಧನ ಕಂಸಾಳೆ.

ಹಬ್ಬ ಆಚರಣೆಗಳಲ್ಲಿ ಮೇಳವನ್ನು ನಡೆಸಲೂ ಬೀಸುಕಂಸಾಳೆಯ ನೃತ್ಯದಲ್ಲಿ ಹಾಡಲು ಕುಣಿಯಲು ಕಂಸಾಳೆಯನ್ನು ಬಳಸುತ್ತಾರೆ. ಗುಡ್ಡರು ಹಾಡುವ ಗೀತೆಗಳು ತಾಳದ ಗತ್ತಿಗೆ ತಕ್ಕಂತೆ ವಿವಿಧ ಮಟ್ಟುಗಳಲ್ಲಿರುತ್ತವೆ.

**ಉದಾಹರಣೆಗೆ :** ಕೂಗೊ ಕೂಗೊ ಮಾದೇವನ

ಕುಗಯ್ಯ ದುಂಡು ಮಾದೇವನ

ಕೂಗಿದರೆ ಕುಣಿಯುತ್ತ ಬರುವನು ಮಾದೇವ

ಕೂಗಯ್ಯ ಮುದ್ದು ಮಾದೇವನ

ಕಂಸಾಳೆಯ ಗತ್ತಿಗೆ ತಕ್ಕಂತೆಯೇ ತಾಳಕ್ಕೆ ಅನುಗುಣವಾಗಿಯೇ ಕಥೆಯನ್ನು ಪದ್ಯ, ನಡುನಡುವೆ ವಿಶೇಷವಾಗಿ ವಚನದಲ್ಲಿ ನಿರೂಪಿಸಲಾಗುತ್ತದೆ. ವಚನವನ್ನು ಪ್ರಧಾನ ಗಾಯಕ ನಿರೂಪಿಸುತ್ತಿರುವಾಗ ಅದರ ಪ್ರತಿ ಸಾಲಿನ ಅಂತ್ಯದಲ್ಲಿ ಸೊಲ್ಲಿನವರು ಹೌದು, ಹೌದೌದು, ಶಿವಶಿವಾ, ಮಾದೇವ, ಹುಂ ಮುಂತಾಗಿ ದನಿ ಕೊಡುತ್ತಿದ್ದು, ಇದು ಕಥಾವಾಹಿನಿ ನಿರರ್ಗಳವಾಗಿ ಹರಿಯಲು ಪೋಷಕವಾಗಿರುತ್ತದೆ.

ಬೀಸು ಕಂಸಾಳೆ ದೇವರಗುಡ್ಡರ ವಿಶಿಷ್ಟವಾದ ನೃತ್ಯ, ಕರ್ನಾಟಕದ ಜನಪದ ನೃತ್ಯಗಳಲ್ಲಿ ಅತ್ಯಪೂರ್ವವಾದುದು. ನೃತ್ಯದಲ್ಲಿ ಇಬ್ಬರಿಂದ ಎಂಟು ಮಂದಿಯವರೆಗೂ ಪಾಲ್ಗೊಳ್ಳಬಹುದು. ಇದರಲ್ಲಿ ತಾರ್‌ಬಟ್ಲು, ತಟ್‌ಬಟ್ಲು ಮುಂತಾದ ಬೇರೆ ಬೇರೆ ಬಗೆಯ ನೃತ್ಯಗಳಿವೆ. ಒಬ್ಬರ ಕಂಸಾಳೆಗೆ ಇನ್ನೊಬ್ಬರು ಕಂಸಾಳೆಯನ್ನು ಕುಟ್ಟುತ್ತ ಕುಣಿಯುವ ವೈಖರಿ ಆಕರ್ಷಕವಾಗಿರುತ್ತದೆ. ಕಂಸಾಳೆಯನ್ನು ಬಳಸುವ ಕಲಾವಿದರು ಮೈಸೂರು, ಮಂಡ್ಯ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ವಿಶೇಷವಾಗಿದ್ದಾರೆ. ಮೈಸೂರು ನಗರದಲ್ಲಿ ನಡೆಯುವ ಪ್ರತಿಯೊಂದು ಧಾರ್ಮಿಕ ಕಾರ್ಯಗಳಾದ ಜಾತ್ರೆ, ಉತ್ಸವಗಳಲ್ಲಿ ಕಂಸಾಳೆ ನೃತ್ಯಗಳನ್ನು ಕಾಣಬಹುದು ಉದಾಹರಣೆಗೆ: ಮಾದೇಶ್ವರ ಜಾತ್ರೆ, ಚಾಮುಂಡೇಶ್ವರಿ ಜಾತ್ರೆ, ದಸರಾ ಮುಂತಾದ ಸಂದರ್ಭಗಳಲ್ಲಿ ಕಂಸಾಳೆನೃತ್ಯ ಮುಂಚೂಣಿ ಯಲ್ಲಿರುತ್ತದೆ. ಕಂಸಾಳೆ ಸಂಪ್ರದಾಯದ ಗಣ್ಯ ಕಲಾವಿದರ ನೆಲವೀಡು ಮೈಸೂರು. ಭಾರತದಾದ್ಯಂತ ಸಂಚರಿಸಿ, ತಮ್ಮ ಅಪೂರ್ವ ಕಲೆಗೆ ರಾಜ್ಯಪ್ರಶಸ್ತಿಯನ್ನು ಗಳಿಸಿದ ಕಂಸಾಳೆ ಮಹದೇವಯ್ಯ ಮೈಸೂರಿನವರು. ಜಲಪುರಿಯ ಹನುಮಂತಯ್ಯ, ಕುಕ್ಕರಹಳ್ಳಿಯ ಮರಿಯಯ್ಯ, ಪಡುವಾರಹಳ್ಳಿಯ ಮಾದಯ್ಯ ಇವರೆಲ್ಲ ಒಳ್ಳೆಯ ಕಂಸಾಳೆ ಕಲಾವಿದರು.

**ನಂದಿಕೋಲು ಅಥವಾ ನಂದಿಧ್ವಜ ಕುಣಿತ** : ಶೈವ ಧರ್ಮಕ್ಕೂ ನಂದಿಕೋಲು ಕುಣಿತಕ್ಕು ಹತ್ತಿರದ ನಂಟಿದ್ದು ಎಲ್ಲಾ ಕಡೆಯಲ್ಲಿ ಈ ಕುಣಿತವನ್ನು ಕಾಣಬಹುದಾಗಿದೆ. ಪ್ರತಿಯೊಂದು ದೊಡ್ಡ ದೊಡ್ಡ ದೇವಾಲಯಗಳಲ್ಲಿ ನಂದಿಧ್ವಜ ಇದ್ದೇ ಇರುತ್ತದೆ. ಪ್ರತಿಷ್ಠೆಯ ಪ್ರತೀಕವಾಗಿ ಅದರ ಎತ್ತರ ಗಾತ್ರ ಮತ್ತು ಅದನ್ನು ಅಲಂಕರಿಸುವ ಬಗೆಯನ್ನು ದೇವಾಲಯವು ಹೊಂದಿದೆ. ಆ ದೇವಾಲಯದ ದೇವರ ಉತ್ಸವ ಸಂದರ್ಭದಲ್ಲಿ ಮುಂಚುಣಿಯಲ್ಲಿ ಕಾಣಿಸಿಕೊಳ್ಳುವುದೇ ನಂದಿಕೋಲು. ಅದಕ್ಕೆ ಮೊದಲ ಪೂಜೆ ಸಲ್ಲಿಸಿದ ನಂತರವೇ ಉತ್ಸವ ಮುಂದೆ ಸಾಗುವ ಪ್ರತೀತಿ ಇದೆ. ಇದು ಶೈವ ಸಂಪ್ರದಾಯದ ಗಂಡುಕಲೆ ಎಂದು ಐತಿಹ್ಯವಿದೆ. ಇದೊಂದು ವಿಜಯೋತ್ಸವದ ಸಂಕೇತ ವಾಗಿದ್ದು, ವೀರಭದ್ರನೇ ಇದಕ್ಕೆ ಕಾರಣೀಭೂತ ಪುರುಷನೆಂಬ ನಂಬಿಕೆಯೂ ಇದೆ.

ನಂದಿಧ್ವಜ ಅತ್ಯಂತ ಆಕರ್ಷಕ ಹಾಗೂ ವೈಭವದ ಅಲಂಕಾರಿಕ ವಸ್ತುಗಳಿಂದ ಅಲಂಕೃತಗೊಂಡಿರುತ್ತದೆ. ಹದಿನೈದರಿಂದ ಇಪ್ಪತ್ತು ಅಡಿ ಎತ್ತರದ ದಪ್ಪ ಬಿದಿರಿನ ಬೊಂಬು ಅಥವಾ ಬಿದಿರಿನಗಳುವಿನ ಮೇಲೆ ಹಿತ್ತಾಳೆಯ ಪೀಠವನ್ನು ಜೋಡಿಸಿ ಅದರಲ್ಲಿ ನಂದಿಯ ವಿಗ್ರಹವನ್ನು ಕೂರಿಸಿರುತ್ತಾರೆ. ಉಳಿದ ಭಾಗವನ್ನು ಗಗ್ಗರ ಹಾಗೂ ಬಳೆಗಳಿಂದ ಜೋಡಿಸಿ ಅಲಂಕರಿಸಿರುತ್ತಾರೆ. ಮೇಲ್ಭಾಗದಲ್ಲಿ ಛತ್ರಿಯಾಕಾರದ ಜಾಲರಿ, ಜೊತೆಗೆ ಅದನ್ನು ಹೊತ್ತು ಕುಣಿಯುವಾಗ ಅತ್ತಿತ್ತ ವಾಲದಂತೆ ಮೇಲೆ ಕಟ್ಟಿ ಇಳಿಬಿಟ್ಟ ಹಗ್ಗವನ್ನು ಮೂರು ಜನರು ಹಿಡಿದಿರುತ್ತಾರೆ. ಭಾರದ ನಂದಿಧ್ವಜವನ್ನು ಒಬ್ಬ ಎತ್ತಿ ಕುಣಿಯುವುದು ಕಷ್ಟದ ಕೆಲಸ. ತಮಟೆಯ ಸದ್ದಿಗೆ ಹೆಜ್ಜೆ ಹಾಕುತ್ತ ಕುಣಿಯುವ ವ್ಯಕ್ತಿ ತುಂಬಾ ಬಲಾಢ್ಯನೂ ಹಾಗೂ ಅನುಭವಿಯೂ ಆಗಿರಲೇಬೇಕು.

ದಸರಾ ಮೆರವಣಿಗೆಯಲ್ಲಿ ನಂದೀಧ್ವಜ ಪೂಜೆಯ ಬಳಿಕವೇ ಅಂಬಾರಿಯು ಬನ್ನಿ ಮಂಟಪದ ಕಡೆಗೆ ಪ್ರಯಾಣ ಬೆಳೆಸುವುದು. ಉಳಿದ ಸಂದರ್ಭಗಳಲ್ಲಿ ಧಾರ್ಮಿಕ ಆಚರಣೆಯ ಕುಣಿತವಾಗಿ ಇದು ಇದ್ದೇ ಇರುವುದಲ್ಲದೆ ಮೈಸೂರು ನಗರದ ಸ್ಥಳೀಯ ಕಲೆಯಾಗಿ ಇದು ಸ್ಥಾನ ಪಡೆದುಕೊಂಡಿದೆ.

**ಪೂಜಾ ಕುಣಿತ** : ಇದೊಂದು ಶಕ್ತಿ ದೇವತೆಯ ಕುಣಿತವಾಗಿದ್ದು, ಶಕ್ತಿ ದೇವತೆಯ ಉತ್ಸವಮೂರ್ತಿಯನ್ನು ಇಲ್ಲವೆ ಏಳು/ಒಂಬತ್ತು ಕಳಸ, ಒಡವೆ, ವಸ್ತ್ರ, ಕಂಚು ಇಲ್ಲವೆ ಬೆಳ್ಳಿಯ ದೇವತೆಯ ಮುಖವಾಡವನ್ನು ಬಿದಿರಿನ ತಳಿಗೆಗೆ ಕಟ್ಟಿ ಪೂಜೆಯನ್ನು ಸಿದ್ಧಪಡಿಸಿ ಹೊತ್ತು ಕುಣಿಯುವುದೇ **'ಪೂಜಾ ಕುಣಿತ' 'ಪೂಜೆ'** ಎಂದರೆ **'ಹೂವಿನ ಸೇವೆ'** ಎಂದಾಗುವುದರಿಂದ

ಮಲ್ಲಿಗೆ, ಮರಲೆ, ಕಾಕಡ, ಸೇವಂತಿಗೆ ಮತ್ತು ಕನಕಾಂಬರವನ್ನು ಹೆಚ್ಚಾಗಿ ಬಳಸುತ್ತಾರೆ. ಬಿದಿರಿನ ತಳಿಗೆ ತಲೆಯ ಮೇಲೆ ಹೊರಲು ಅನುಕೂಲ ವಾಗುವಂತೆ ಅಗಲವಾದ ತಳದ ಹಿತ್ತಾಳೆಯ ಗಿಂಡಿಗೆ ಕೂರಿಸುತ್ತಾರೆ. ಮಾರಮ್ಮ, ಚೌಡಮ್ಮ, ಪಟ್ಟಲದಮ್ಮ, ಮಂಚಮ್ಮ ಹೀಗೆ ಅನೇಕ ದೇವರ ಹೆಸರಿನ ಪೂಜೆಗಳಿವೆ. ಹಬ್ಬ–ಜಾತ್ರೆಗಳಲ್ಲಿ ಈ ಪೂಜೆಗಳನ್ನು ಹೊತ್ತು ಕುಣಿಯುತ್ತಾರೆ. ತಮಟೆ, ಹರೆ, ದೋಣುಗಳ ವಾದ್ಯಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಾರೆ.

**ವೀರಭದ್ರನ ಕುಣಿತ** : ಶೈವ ಸಂಪ್ರದಾಯಕ್ಕೆ ಸೇರಿದ ಧಾರ್ಮಿಕ ನೃತ್ಯಗಳಲ್ಲಿ ಅತ್ಯಂತ ಪ್ರಮುಖವಾದುದು ವೀರಭದ್ರನ ಕುಣಿತ. ಇವನ ಹೆಸರೇ ಸೂಚಿಸುವಂತೆ ಧೈರ್ಯ ಮತ್ತು ಸಾಹಸಕ್ಕೆ ಹೆಸರುವಾಸಿಯಾದವನು. ಶಿವನ ಸಿಟ್ಟಿನ ಕಾರಣದಿಂದ ಹುಟ್ಟಿದವನಾಗಿದ್ದು, ವಸ್ತು ಸಹ ರೌದ್ರರೂಪಧಾರಿ. ತ್ರಿಶೂಲ, ಕತ್ತಿ, ಬಿಲ್ಲು–ಬಾಣ ಇವನ ಆಯುಧಗಳು. ಇವನು ಶಿವನ ದುಷ್ಟ ಸಂಹಾರ ಕಾರ್ಯದಲ್ಲಿ ದಂಡನಾಯಕನ ಪಾತ್ರ ವಹಿಸುತ್ತಾನೆ. ವೀರಭದ್ರನ ಕುಣಿತಕ್ಕೆ ಮತ್ತು ಆತನ ಅವತಾರ ಸೃಷ್ಟಿಗೆ ಸಂಬಂಧಿಸಿದಂತೆ ಶಿವಪುರಾಣದಲ್ಲಿ ಧಾರ್ಮಿಕ ಕಥಾ ಪರಂಪರೆಯೇ ಬೆಳೆದು ಬಂದಿರುವುದನ್ನು ಕಾಣಬಹುದಾಗಿದೆ.

ವೀರಭದ್ರನ ಕುಣಿತ ವಂಶಪಾರಂಪರ್ಯವಾಗಿ ನಡೆದುಕೊಂಡು ಬರತ್ತಿದೆ. ವೀರಭದ್ರ ಶಿವನ ಉರಿಗಣ್ಣಿನಿಂದ ಹುಟ್ಟಿದ್ದರಿಂದ ಅವನ ನೃತ್ಯದ ವೈಖರಿಯೂ ಸಹಾ ಹಾಗೆಯೇ ಇರುತ್ತದೆ. ಅಂತೆಯೇ ಅವನ ವೇಷ ಭೂಷಣಗಳು ಪ್ರೇಕ್ಷಕರ ಆಕರ್ಷಣೀಯವಾಗಿ ಭೀಕರತೆಯ ಸಂಕೇತವನ್ನು ಬಿಂಬಿಸುತ್ತವೆ. ಕೆಂಪು ಪಂಚೆ, ಕೆಂಪು ಜುಬ್ಬ, ಎದೆಯ ಮೇಲೆ ನೇತಾಡುವ ರುದ್ರನ ಪ್ರತಿಮೆ, ಹರಡಿದ ಚಾಮರಿ ಮೃಗದ ಜಾರಿಯ ಕೂದಲು, ಕೋರೆ ಮೀಸೆ, ಕೊರಳಲ್ಲಿ ರುದ್ರಾಕ್ಷಿ, ಕಿವಿಗಳಿಗೆ ರುದ್ರಾಕ್ಷಿ ಸೇರಿಸಿದ ಕುಂಡಲಗಳು, ಹಣೆಯಲ್ಲಿ ವಿಭೂತಿ, ಭುಜದ ಎರಡೂ ಕಡೆಗಳಲ್ಲಿ ನಾಗಾಭರಣ, ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಬಾಕು, ಹಿಡಿದಿದ್ದು, "ಸೊಂಟದ ಮಧ್ಯದಲ್ಲಿ ಕೀರ್ತಿಮುಖ, ಎರಡೂ ಪಕ್ಕೆಗಳಿಗೆ ರುಂಡ ಮಾಲೆ, ದಕ್ಷಬ್ರಹ್ಮನ ಶಿರಸ್ಸು, ಸರಪಳಿ, ಹೊಕ್ಕಳಗಂಟೆ, ಮಂಡಿಗಳಿಗೆ ಐದೈದು ಜಂಗುಗಳು"[3] ಕಾಲಿಗೆ ಗೆಜ್ಜೆ, ಮೊಳಕಾಲಿಗೆ ಹಿತ್ತಾಳೆಯ ಗಗ್ಗರ, ಕಾಲ್ಬಂಧಿಗಳನ್ನು ಧರಿಸಿದ ವೀರಭದ್ರನ ಅಲಂಕಾರವೇ ಕಣ್ಣು ಕೋರೈಸುತ್ತದೆ.

ವೀರಭದ್ರ ಕರಡೆ ಮತ್ತು ಚಮ್ಮಾಳೆಯ ಸದ್ದಿಗೆ ವೀರಾವೇಶದಿಂದ ನರ್ತಿಸುತ್ತಿರುವಾಗ ಹಿಮ್ಮೇಳದ ತಮಟೆ ಅಥವಾ ಕರಡೆ ವಾದ್ಯದ ಸದ್ದು ಜೋರಾದಂತೆ ವೀರಭದ್ರನ ರೌದ್ರತೆ ತಾಂಡವವಾಡುತ್ತಾ ಸಾಗುವುದು ಕಾಣುತ್ತದೆ. ಕೆಲವೊಮ್ಮೆ ವೀರಭದ್ರನ ವೇಷಧಾರಿ ಕೆಲವು ಸಣ್ಣಪುಟ್ಟ ಪವಾಡಗಳನ್ನು ಮಾಡಿ ತೋರಿಸುತ್ತಾನೆ. ನೀರು ತುಂಬಿದ ಚೊಂಬನ್ನು ನೀರು

ತುಳುಕದಂತೆ ಎತ್ತಿ ತೋರಿಸುವುದು, ಕರ್ಪೂರವನ್ನು ಅಂಗೈಯಲ್ಲೋ, ಚಾಚಿದ ನಾಲಿಗೆಯ ಮೇಲೋ ಇಟ್ಟು ಉರಿಸುವುದು, ನುಂಗುವುದು ಮತ್ತು ಮೇಲೆ ಎಸೆದ ತೆಂಗಿನ ಕಾಯಿಯನ್ನು ಖಡ್ಗದಿಂದ ಒಂದೇ ಏಟಿಗೆ ಒಡೆಯುವುದು ಇತ್ಯಾದಿ. ವಂಶಪಾರಂಪರ್ಯವಾಗಿರುವ ಕುಣಿತದ ವೇಷಧಾರಿಯು ಮಡಿಮೈಲಿಗೆಗಳಿಗೆ ಅಂಜಿ ನಡೆಯುತ್ತಾನೆ. ನೃತ್ಯ ಮುಗಿಯುವವರೆಗೂ ಉಪವಾಸವಿರುತ್ತಾನೆ. ವೀರಭದ್ರನನ್ನು ಬರಮಾಡಿಕೊಳ್ಳುವಾಗ ಅವನ ಆವೇಶಕ್ಕೆ ತಕ್ಕಂತೆ ತೆಂಗಿನಕಾಯಿಯ ಇಳಿ ತೆಗೆದು, ದೃಷ್ಟಿ ನಿವಾಳಿಸಿ ಒಡೆಯುತ್ತಿರುತ್ತಾರೆ. ದಕ್ಷಿಣ ಕರ್ನಾಟಕ ಭಾಗದಲ್ಲಿ ಅರಸು ಒಕ್ಕಲು ಹಾಲುಮತದವರು ವೀರಭದ್ರನನ್ನು ಬರಮಾಡಿಕೊಳ್ಳುವುದನ್ನು ಕಾಣಬಹುದು.

ವೀರಭದ್ರನ ಕುಣಿತ ಒಂದುಹೆಜ್ಜೆಯಿಂದ ನಾಲ್ಕು ಹೆಜ್ಜೆಯವರೆಗೂ ಏಕಕಾಲದಲ್ಲಿ ನಡೆಯುತ್ತದೆ. ಅರ್ಧಮಂಡಲದ ಭಂಗಿಯಲ್ಲಿ ಕುಳಿತು ನೆಲವನ್ನು ಕಾಲಿನ ಪಾದದಿಂದ ತಟ್ಟುವುದು, ಒಂದು ಕಾಲನ್ನು ಮೇಲೆತ್ತಿ ತಿರುಗುತ್ತಾ ವರ್ತುಲಾಕಾರದಲ್ಲಿ ಸುತ್ತುವುದು, ಮೂರು ಹೆಜ್ಜೆಯವರೆಗೆ ಮುಂದೆ ಸಾಗಿ ಮೊದಲು ಬಲಗಾಲನ್ನು ನೆಲದ ಮೇಲೆ ತಟ್ಟಿ ಹಿಮ್ಮಡಿಯನ್ನೆತ್ತಿ ಬೆರಳುಗಳ ಮೇಲೆ ನಿಂತು ನರ್ತಿಸುವಂತೆ, ಎಡಗಾಲನ್ನು ಅದೇರೀತಿ ಮಾಡಿ ನರ್ತಿಸುವುದು ಇವು ಮೂರು ರೀತಿಯ ನೃತ್ಯದ ವಿನ್ಯಾಸಗಳನ್ನು ಕಾಣಬಹುದಾಗಿದೆ.

ವೀರಭದ್ರನ ಕುಣಿತ ಮೊದಲು ದೇವಾಲಯ ಪರಿಸರಕ್ಕಷ್ಟೇ ಸೀಮಿತವಾಗಿತ್ತಾದರೂ, ಈಗ ಶೈವ ಸಂಪ್ರದಾಯದ ಭಕ್ತರ ಮದುವೆ–ಮುಂಜಿ ಮತ್ತು ಇತರೆ ಧಾರ್ಮಿಕ ಚಟುವಟಿಕೆಗಳ ಸಂದರ್ಭದಲ್ಲಿ ಈ ಕುಣಿತವನ್ನು ಕಾಣಬಹುದಾಗಿದೆ. ಜಾತ್ರೆ ಉತ್ಸವಗಳಲ್ಲಂತೂ ಈ ಕುಣಿತ ಇದ್ದೇ ಇರುತ್ತದೆ.

**ವೀರಗಾಸೆ ಕುಣಿತ:**

**ವೀರಗಾಸೆ ಹುಟ್ಟು** : ದಕ್ಷಬ್ರಹ್ಮನ ಮಗಳು ದಾಕ್ಷಾಯಿಣಿ ಅವನ ಇಷ್ಟಕ್ಕೆ ವಿರುದ್ಧವಾಗಿ ಈಶ್ವರನನ್ನು ಮದುವೆಯಾಗುತ್ತಾಳೆ. ಹೀಗಾಗಿ ದಕ್ಷಬ್ರಹ್ಮ ತಾನು ಮಾಡುವ ಯಜ್ಞಕ್ಕೆ ಮಗಳನ್ನು ಆಹ್ವಾನಿಸುವುದಿಲ್ಲ. ಆದರೂ ವಿಷಯ ತಿಳಿದ ದಾಕ್ಷಾಯಿಣಿ ತಂದೆಯ ಯಜ್ಞದಲ್ಲಿ ಪಾಲ್ಗೊಳ್ಳಲು ತೆರಳುತ್ತಾಳೆ. ಅಲ್ಲಿ ದಕ್ಷಬ್ರಹ್ಮ ಈಶ್ವರನನ್ನು ನಿಂದಿಸುತ್ತಾನೆ. ಪತಿ ನಿಂಧನೆಗೆ ನೊಂದ ದಾಕ್ಷಾಯಿಣಿ ಯಜ್ಞಕುಂಡಕ್ಕೆ ಹಾರಿ ಪ್ರಾಣ ತ್ಯಾಗ ಮಾಡುತ್ತಾಳೆ. ಈ ವಿಷಯ ತಿಳಿದ ಈಶ್ವರ ರೌದ್ರಾವತಾರ ತಾಳುತ್ತಾನೆ. ತನ್ನ ಹಣೆಯಲ್ಲಿ ಮೂಡುವ ಬೆವರನ್ನು ತೆಗೆದು ಒಗೆಯುತ್ತಾನೆ. ಆ ಬೆವರಿನಲ್ಲಿ

ಹುಟ್ಟುವವನೇ ವೀರಭದ್ರ. ಈತ ವೀರಾವೇಷದಿಂದ ಗಣಗಳ ಜೊತೆ ನುಗ್ಗಿ ಯಜ್ಞವನ್ನು ಹಾಳು ಮಾಡಿ, ದಕ್ಷಬ್ರಹ್ಮನ ತಲೆಯನ್ನು ಕತ್ತರಿಸಿ ಯಜ್ಞಕುಂಡಕ್ಕೆ ಹಾಕುತ್ತಾನೆ. ಹೀಗೆ ವೀರಗಾಸೆ ನೃತ್ಯ ಹುಟ್ಟಿಕೊಂಡಿತು ಎನ್ನುವ ಪ್ರತೀತಿ ಇದೆ.

ವೀರಭದ್ರನ ಕುಣಿತ ಏಕ ವ್ಯಕ್ತಿಯದಾದರೆ ವೀರಗಾಸೆ ಕುಣಿತವು ಸಾಮೂಹಿಕವಾದುದು. ವೀರಗಾಸೆಯಲ್ಲಿ ಇಬ್ಬರಿಂದ ಸುಮಾರು ನಲವತ್ತು ಜನರವರೆಗೂ ಕುಣಿಯುತ್ತಾರೆ. ಕಾರಣವೆಂದರೆ ವೀರಭದ್ರನ ಕಥಾ ಪರಂಪರೆ. ದಕ್ಷನನ್ನು ಸದೆಬಡಿಯಲು ಶಿವನ ಉರಿಗಣ್ಣಿಂದ ವೀರಭದ್ರನ ಜೊತೆಯಲ್ಲಿ ನೂರೊಂದು ಆಯೂಧಗಳೂ ಹುಟ್ಟಿ ವೀರಭದ್ರ ಅವುಗಳಿಂದ ದಕ್ಷಬ್ರಹ್ಮನ ಯಜ್ಞಶಾಲೆಯನ್ನು ಧ್ವಂಸ ಮಾಡಿದ ಸಂದರ್ಭದ ವೀರಾವೇಶದ ಪ್ರತಿರೂಪವೇ ವೀರಗಾಸೆ ಕುಣಿತವಾಗಿದೆ. "ಕೆಲವು ಪುರಾಣಗಳಲ್ಲಿ ಆಯುಧಗಳಿಗೆ ಪರ್ಯಾಯವಾಗಿ ಶಿವ ಬೀಸಿ ಒಗೆದ ಒಂದೊಂದು ಬೆವರ ಹನಿಗೆ ಒಬ್ಬೊಬ್ಬ ಯೋಧ, ವೀರ ಹುಟ್ಟಿಕೊಂಡನೆಂದೂ, ಅವರೆಲ್ಲಾ ಸೇರಿ ದಕ್ಷಯಜ್ಞವನ್ನು ಧ್ವಂಸಮಾಡಿದರೆಂದು ಹೇಳಿದೆ"[4] ಆ ವೀರರ ನೆನಪನ್ನು ಈ ವೀರಗಾಸೆ ಕುಣಿತ ಸೂಚಿಸುತ್ತದೆ.

ಆಚರಣಾತ್ಮಕವಾಗಿ ಬೆಳೆದ ಈ ಕುಣಿತವು ಕೆಲವು ನಿಷ್ಠೆ ನಿಯಮಗಳನ್ನು ಅಳವಡಿಸಿ ಕೊಂಡಿದೆ. ಇವರ ವೇಷಭೂಷಣಗಳು ಯುದ್ಧಕ್ಕೆ ಹೊರಡುವ ಸೈನಿಕರಂತೆ ಕಂಡುಬರುತ್ತದೆ. ತಲೆಗೆ ಹಸಿರು ಅಥವಾ ನೀಲಿ ಬಣ್ಣದ ಪೇಟ, ಹಣೆಗೆ ವೀಭೂತಿ, ಕೊರಳಿಗೆ ನಾಗಾಭರಣ ಮತ್ತು ರುದ್ರಾಕ್ಷಿಹಾರ, ಕಿವಿಗೆ ಹತ್ತಕಡುಕ, ಎದೆಯ ಮೇಲೆ ವೀರಭದ್ರನ ಹಲಗೆ, ಕಾವಿಯ ಕಾಸೆ ಅಂಗಿ, ಬಿಳಿಯ ಪಂಚೆಯ ಕಾಸೆ ತೊಟ್ಟು, ಸೊಂಟಕ್ಕೆ ದಕ್ಷನ ಶಿರ, ಕೈಯಲ್ಲಿ ಕತ್ತಿ, ಕಾಲಿಗೆ ಕಡಗ ಮತ್ತು ಗೆಜ್ಜೆ ತೊಟ್ಟಿರುತ್ತಾರೆ, ಎದೆಯ ಮೇಲೆ ಲಿಂಗವನ್ನು ಧರಿಸಿರುತ್ತಾರೆ. ಇವರು ವೀರಗಚ್ಚೆಯನ್ನು ಹಾಕಿ ಕುಣಿಯುವುದರಿಂದ ಅದೇ ವೀರಗಾಸೆಯಾಗಿದೆ. ಈ ಕುಣಿತಕ್ಕೆ ಸಮಾಳ, ಮುಖವೀಣೆ, ಕರಡೆ, ಕಂಚಿನ ತಾಳಗಳೇ ಮುಖ್ಯವಾದ್ಯಗಳು.

ವೀರಗಾಸೆ ಕುಣಿಯುವವರು ವಾದ್ಯಗಳ ಗತ್ತಿನ ನಾದಕ್ಕೆ ಯುದ್ಧ ಮಾಡಲು ಹೋಗುವವರಂತೆ ಕತ್ತಿಯನ್ನು ಹಿಡಿದು ಹೂಂಕರಿಸುತ್ತಾ ಮುಂದಕ್ಕೆ ಹೋಗುತ್ತಾರೆ. ವೀರಾವೇಶದಿಂದ ಕುಣಿಯುತ್ತಾರೆ. ಒಂದು ಹಂತದಲ್ಲಿ ತಟಕ್ಕನೆ ನಿಲ್ಲುತ್ತಾರೆ. ಆಗ ವಾದ್ಯಗಳ ಶಬ್ದವು ನಿಲ್ಲುತ್ತದೆ. ವೀರಭದ್ರನ ಒಡಪುಗಳನ್ನು ಹೇಳುತ್ತಾರೆ. 'ಆಹಾ! ರುದ್ರ, ಆಹಾ! ದೇವಾ, ಬಾರಯ್ಯ ಬಾರೋ ನಮ್ಮ ಕುಲ ವೀರಭದ್ರ' ಎಂದು ಉದ್ಗಾರ ಹೊರಡಿಸುತ್ತಾ ವೀರಭದ್ರನ ಜನನ ವರ್ಣನೆಯನ್ನು ಆರಂಭಿಸುತ್ತಾರೆ. "ವೀರಭದ್ರ ದೇವರು ಹುಟ್ಟಿದ ರೂಪವೆಂತೊಡೆ,

ಹುಟ್ಟಿದಾಗಲೇ ಹೂವಿನ ಗಾಸೆ, ಮಂಜುಳಗಾಸೆ, ಬ್ರಹ್ಮಗಾಸೆ, ವಿಷ್ಣುಗಾಸೆ, ರುದ್ರಗಾಸೆ, ಮೆಟ್ಟಿದ ಹೊನ್ನಾವಿಗೆ, ಸಾವಿರ ಶಿರ, ಮೂರು ಸಾವಿರ ನಯನ, ಎರಡು ಸಾವಿರ ಭುಜ, ಕೆಕ್ಕರಿಸಿದ ಕಣ್ಣು, ಮಂಜು ಮಂಡಿ, ಇಂತಪ್ಪ ಶ್ರೀವೀರಭದ್ರ ದೇವರು ಹೋಮ ಕುಂಡದ ಬಳಿಗೆ ಹೇಗೆ ಬರುತ್ತಾರೆಂದರೆ"[5] ಉತ್ಸವಗಳಲ್ಲಿ ವೀರಗಾಸೆಗೆ ಮೊದಲಸ್ಥಾನ. ವೀರಗಾಸೆಯವರು ಹೊಸ ಮನೆಗೆ ನುಗ್ಗಿದರೆ ಅಲ್ಲಿರುವ ದುಷ್ಟಶಕ್ತಿಗಳು ಹೆದರಿ ಓಡಿ ಹೋಗುತ್ತವೆ ಎನ್ನುವ ನಂಬಿಕೆ ಇಂದಿಗೂ ಇದೆ.

ಈ ತರಹದ ವಿವರಣೆಗಳು ದಕ್ಷಬ್ರಹ್ಮನ ತಲೆ ತಗೆಯುವ ವರೆಗೂ ನಡೆಯುತ್ತಿರುತ್ತದೆ. ಒಟ್ಟಿನಲ್ಲಿ ಶೈವ ಮೂಲದ ಈ ಕುಣಿತ ವೀರ ರಸವನ್ನು ಪ್ರತಿನಿಧಿಸುವಂಥ ಧಾರ್ಮಿಕ ಕುಣಿತವಾಗಿದೆ.

**ಪಟ ಕುಣಿತ** : ನಂದಿಧ್ವಜ ಶೈವ ಸಂಪ್ರದಾಯದ್ದಾದರೆ, ಪಟಾ ಕುಣಿತವು ವೈಷ್ಣವ ಸಂಪ್ರದಾಯಕ್ಕೆ ಸೇರಿದ ಕಲೆ. ಮಂಡ್ಯ, ಮೈಸೂರು, ತುಮಕೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಕಂಡು ಬರುವ ಪಟಾ ಕುಣಿತವು ರಂಗದ ಕುಣಿತವನ್ನು ಹೋಲುತ್ತದೆ. ಬಣ್ಣಬಣ್ಣದ ಸುತ್ತಿದ ಸುಮಾರು ಹದಿನೈದು–ಇಪ್ಪತ್ತು ಅಡಿ ಉದ್ದದ ಬಿದಿರಿನ ಜವಳಿಗಳೇ ಪಟಗಳು. ಪಟಾ ಕುಣಿತದ ಕಲಾವಿದರು ಬಿಳಿಯ ಕಾಸೆ ಪಂಚೆ, ನಿಲುವಂಗಿ, ರುಮಾಲು, ಸೊಂಟಕ್ಕೆ ಅಡ್ಡಲಾಗಿ ಬಿಗಿದ ಬಣ್ಣದ ವಸ್ತ್ರ, ಹಣೆಯಲ್ಲಿ ನಾಮ, ಕೊರಳಿಗೆ ಮಣಿಹಾರ ಧರಿಸಿ ಎಡಗೈಯಲ್ಲಿ ಬಿಳಿಯ ಸಣ್ಣ ಚೌಕವೊಂದನ್ನು ಹಿಡಿದು ಪಟಗಳನ್ನು ಕುಣಿಸುತ್ತಾರೆ. ಹಬ್ಬ, ಜಾತ್ರೆ, ಉತ್ಸವಗಳಲ್ಲಿ ಕುಣಿಯುವ ದೃಶ್ಯವಂತೂ ಮನಮೋಹಕವಾಗಿರುತ್ತದೆ.

**ಕೀಲು ಕುದುರೆ** : ಕೀಲು ಕುದುರೆ ಒಂದು ಬಗೆಯ ಜನಪದ ನೃತ್ಯ ಸಾಧನ. ಎಲ್ಲ ದ್ರಾವಿಡ ಭಾಷಾ ಪ್ರದೇಶಗಳಲ್ಲೂ ಕೀಲು ಕುದುರೆಯ ಕುಣಿತ ಹಿಂದಿನಿಂದಲು ಜನಪ್ರಿಯವಾಗಿದೆ. ಜನಪದ ಕಥೆಗಳಲ್ಲಿ ಸಾಮಾನ್ಯವಾಗಿ ಬರುವ ಕೀಲು ಕುದುರೆಯ ಸನ್ನಿವೇಶವನ್ನು ಕಾಣಬಹುದು. ಜನಪದ ಕಲಾರಂಗದಲ್ಲಿ ಕೀಲು ಕುದುರೆಯನ್ನು ನೃತ್ಯಕ್ಕೆ ಅಳವಡಿಸಿಕೊಳ್ಳಲಾಗಿದೆ. ಕೀಲುಗಳಿಂದ ಜೋಡಿಸಲ್ಪಟ್ಟ ಈ ಕುದುರೆಯ ರಚನೆಯೂ ಒಂದು ಅಪೂರ್ವ ಜನಪದ ಕಲೆ. ಶಿಲ್ಪ ಮತ್ತು ಚಿತ್ರಗಳ ಸಾಮರಸ್ಯವನ್ನು ಇಲ್ಲಿ ಕಾಣಬಹುದು. ಕೀಲು ಕುದುರೆಯ ಹೊಟ್ಟೆಯ ಭಾಗವನ್ನು, ಕಾಲುಗಳನ್ನು ಬಿಟ್ಟು ಉಳಿದ ದೇಹಭಾಗವನ್ನು ಅಂದರೆ ಎದೆ ಮತ್ತು ಹಿಂಭಾಗವನ್ನು ಕುದುರೆಯ ಆಕಾರದಂತೆ ಬಿದುರಿನ ತೆಳುವಾದ ದಬ್ಬೆಗಳಿಂದ ಹೆಣೆದು ರಚಿಸಿಕೊಳ್ಳುತ್ತಾರೆ. ಇದು ಮೇದಾರರ ಕುಲಕಸುಬಿನ ಕಲೆಗೆ ಸಾಕ್ಷಿಯಾಗಿದೆ. ತಲೆ ಮತ್ತು ಕತ್ತನ್ನು ಮಾತ್ರ ಆಯಾ ಪ್ರದೇಶದ ಗ್ರಾಮ

ಕಲಾವಿದರು ರಚಿಸಿಕೊಡುತ್ತಾರೆ. ಅಕ್ಕಸಾಲಿಗ ಇಲ್ಲವೆ ಚಿತ್ರಗಾರ ಕುದುರೆಯ ತಲೆಯ ಭಾಗವನ್ನು ರೂಪಿಸಿಕೊಡುತ್ತಾನೆ.

ಕೀಲು ಕುದುರೆಯನ್ನು ನಡೆಸುವ ವ್ಯಕ್ತಿ ರಾಜನಂತೆ ವೇಷಭೂಷಣಗಳನ್ನು ಧರಿಸಿಕೊಂಡು ತನ್ನ ಎರಡು ಕಾಲುಗಳಿಗೂ ಒಂದೊಂದು ಪುಟ್ಟನೆಯ ಮರಗಾಲುಗಳನ್ನು ಕಟ್ಟಿಕೊಂಡಿರುತ್ತಾನೆ. ಸಾಮಾನ್ಯವಾಗಿ ಇವು ಎರಡು ಅಡಿ ಉದ್ದವೂ ಹಗುರವೂ ಆದ ಮರದ ರಚನೆ. ಸವಾರ ಕುದುರೆಯ ಹೊಟ್ಟೆಯಲ್ಲಿರುವ ರಂಧ್ರದಿಂದ ತೂರಿ ನಿಲ್ಲುತ್ತಾನೆ. ಕುದುರೆಗೆ ಹೊದಿಸುವ ಗೌನು ಬಣ್ಣಬಣ್ಣದ್ದಾಗಿದ್ದು ಅದರ ದೇಹವನ್ನು ಸವಾರನ ಮರಗಾಲುಗಳನ್ನು ಮುಚ್ಚುವಷ್ಟು ಉದ್ದವಾಗಿರುತ್ತದೆ. ಸವಾರ ನೃತ್ಯ ಮಾಡುವಾಗ ಕುದುರೆ ಲಗಾಮುಗಳನ್ನು ಕೈಲಿ ಹಿಡಿದುಕೊಂಡು ಅದರ ತಲೆ ಬಾಲಗಳನ್ನು ಹಿಂದು ಮುಂದು ಮಾಡಿ ಸಹಜ ಭಂಗಿಯಲ್ಲಿ ನೃತ್ಯ ಮಾಡುತ್ತಾನೆ. ನೃತ್ಯದಲ್ಲಿ ಸಾಮಾನ್ಯವಾಗಿ ರಾಜ ರಾಣಿಯರಿಗೆಂದು ಎರಡು ಕುದುರೆಗಳಿರುತ್ತವೆ. ವಾದ್ಯ ಮೇಳದೊಂದಿಗೆ ನಡೆಯುವ ಕೀಲು ಕುದುರೆ ನೃತ್ಯ ಬಹು ಆಕರ್ಷಕವಾಗಿ ಕಂಡುಬರುತ್ತದೆ.

ಕೀಲು ಕುದುರೆಯ ನೃತ್ಯ ಕರ್ನಾಟಕ, ಆಂಧ್ರ, ತಮಿಳುನಾಡು ಮತ್ತು ಕೇರಳ ಮುಂತಾದ ನೆರೆಯ ಪ್ರಾಂತ್ಯಗಳಲ್ಲಿ ಉಳಿದುಬಂದಿದೆ. ದೇವರ ಉತ್ಸವಗಳಲ್ಲಿ, ಮೆರವಣಿಗೆಗಳಲ್ಲಿ ಅಥವಾ ವಿಶೇಷ ಉತ್ಸವಗಳಲ್ಲಿ ಈ ನೃತ್ಯದವರನ್ನು ಕರೆಸುವುದು ರೂಢಿಯಲ್ಲಿದೆ.

**ಗಾರುಡಿಗೊಂಬೆ ಕುಣಿತ** : ಬಿದಿರು ತಡಿಕೆಯ ಆಕೃತಿಯಲ್ಲಿ ಮಾಡಿದ ಎರಡು ಮೂರು ಆಳೆತ್ತರದ ಗೊಂಬೆಯೇ ಗಾರುಡಿಗೊಂಬೆಯಾಗಿದೆ. ವೈಷ್ಣವ ಸಂಪ್ರದಾಯಕ್ಕೆ ಸೇರಿದ ಧರ್ಮಾಚರಣೆಯಲ್ಲಿ ಗಾರುಡಿ ಗೊಂಬೆಗಳನ್ನು ಮಾಡಿ ಕುಣಿಯುವ ಸಂಪ್ರದಾಯವಿದೆ. ಸಿದ್ಧಗೊಳಿಸಿದ ಬಿದಿರು ತಡಿಕೆಯ ಆಕೃತಿಯ ಮೇಲೆ ಮರದ ತಲೆಯನ್ನು ಜೋಡಿಸಿ ಕೂರಿಸಿ, ಮರದ ಕೈ ಮತ್ತು ಪುಂಗಿಯನ್ನು ಅದಕ್ಕೆ ಅಳವಡಿಸಿ, ಮೈಮೇಲೆ ವಸ್ತ್ರವನ್ನು ಜೋಡಿಸಿ ಗಾರುಡಿಗನ ಆಕೃತಿಯನ್ನು ಸಿದ್ಧಪಡಿಸಿಕೊಳ್ಳಲಾಗುತ್ತದೆ. ಅದನ್ನು ಕುಣಿಸುವ ವ್ಯಕ್ತಿ ಈ ಆಕೃತಿಯನ್ನು ಧರಿಸಿ ನೃತ್ಯಮಾಡುವ ರೀತಿ ನೋಡುವವರಿಗೆ ಬೆರಗನ್ನು ಮೂಡಿಸುತ್ತದೆ. ದೇವರ ಉತ್ಸವ, ಮೆರವಣಿಗೆ, ಜಾತ್ರೆ ಮುಂತಾದ ಸಂದರ್ಭಗಳಲ್ಲಿ ಗಾರುಡಿಗೊಂಬೆ ಕುಣಿತ ಹೆಚ್ಚು ಆಕರ್ಷಕವಾಗಿರುತ್ತದೆ. ಉಳಿದೆಲ್ಲ ಕಲಾತಂಡಗಳೊಂದಿಗೆ ಪ್ರದರ್ಶಿತಗೊಳ್ಳುವ ಈ ಕಲೆ ತನ್ನ ಎತ್ತರ, ಗಾತ್ರ ಹಾಗೂ ಆಕರ್ಷಕ ಮುಖವರ್ಣಿಕೆಯಿಂದ ಎಲ್ಲರನ್ನು ರಂಜಿಸುತ್ತದೆ.

**ಕೋಲಾಟ** : ಕರ್ನಾಟಕದ ಜನಪದ ನೃತ್ಯಗಳಲ್ಲಿ ಕೋಲಾಟ ಅತ್ಯಂತ ಜನಪ್ರಿಯವಾದುದು. ನಾಡಿನ ಎಲ್ಲಕಡೆಗಳಲ್ಲೂ ಕಾಣಬರುವ ಏಕ ಮಾತ್ರ ಕಲೆಯಿದು. ಕೋಲಾಟ ಜನಪದ

ಮನರಂಜನೆ ಕಲೆಗಳಲ್ಲೊಂದು. ಕೋಲುಗಳ ಮೂಲಕ ಆಟ ಸಾಗುವುದರಿಂದ ಇದಕ್ಕೆ ಕೋಲಾಟವೆಂಬ ಹೆಸರು ಬಂದಿದೆ. ಸಂಗೀತ ಮತ್ತು ನೃತ್ಯಗಳ ಸಮ್ಮಿಲನವಾಗಿರುವ ಈ ಆಟ ಗ್ರಾಮ ಜೀವನದ ಒಂದು ವಿಶೇಷ ಮನರಂಜನ ಸಾಧನ. ಹೆಚ್ಚಾಗಿ ಸುಗ್ಗಿಯ ಕಾಲದಲ್ಲಿ, ಹಬ್ಬಹರಿದಿನಗಳಲ್ಲಿ, ಉತ್ಸವ, ಮೆರವಣಿಗೆಗಳಲ್ಲಿ ಪ್ರಚಾರದಲ್ಲಿದೆ.

ಕೋಲಾಟದಲ್ಲಿ ಸುಮಾರು ಎಂಟರಿಂದ ಇಪ್ಪತ್ನಾಲ್ಕು ಜನಗಳವರೆಗೆ ಕೋಲು ಹುಯ್ಯುವ ಕಲಾವಿದರಿರುತ್ತಾರೆ. ಹುಡುಗರಂತೆ ದೊಡ್ಡವರು ಭಾಗವಹಿಸುತ್ತಾರೆ. ಅಲ್ಲಿ ಕೋಲುಗಳದ್ದೇ ಮುಖ್ಯಪಾತ್ರ. ಇವುಗಳನ್ನು ಸಾಮಾನ್ಯವಾಗಿ ನೀರಂಜಿ, ಬೈನೆ, ಸೀಬೆ, ಕಾರೆ ಮುಂತಾದ ಮರಗಿಡಗಳಿಂದ ಮಾಡಲಾಗಿರುತ್ತದೆ. ಆಟದಲ್ಲಿ ಗೆಜ್ಜೆ, ತಾಳ ಮತ್ತು ದಮ್ಮಡಿಗಳನ್ನು ಬಳಸಲಾಗುತ್ತದೆ. ಕಲಾವಿದರು ತಮ್ಮ ಕಾಲುಗಳಿಗೆ ಗೆಜ್ಜೆ ಕಟ್ಟಿಕೊಳ್ಳುವುದು ಸಾಮಾನ್ಯಾವಗಿರುತ್ತದೆ. ಇದರಿಂದ ಅವರ ಕುಣಿತಕ್ಕೆ ಆವೇಶ, ಹುಮ್ಮಸ್ಸು ಬರುತ್ತದೆ. ಪಡುವಾರಹಳ್ಳಿಯ ಜೋಡಿಮಾರಮ್ಮನ ಜಾತ್ರೆಯಲ್ಲಿ ಈ ಕೋಲಾಟ ಪ್ರದರ್ಶನಗೊಳ್ಳುತ್ತಿದ್ದು, ಇಂದಿಗೂ ಕೋಲಾಟದ ಕಲೆಯನ್ನು ಉಳಿಸಿಕೊಂಡಿರುವುದನ್ನು ಗುರುತಿಸಲಾಗಿದೆ.

**ದೊಣ್ಣೆವರಸೆ** : ಪಡುವಾರಹಳ್ಳಿ ಜೋಡಿಮಾರಮ್ಮ ದೇವಾಲಯದ ಆವರಣದಲ್ಲಿ ಮಾರಮ್ಮನ ಹಬ್ಬದ ದಿನಗಳಲ್ಲಿ ದೊಣ್ಣೆವರಸೆ ಆಟವನ್ನು ಆಡುವರು. ಎಲ್ಲರೂ ಒಂದೇರೀತಿಯ ವಸ್ತ್ರವನ್ನು ಧರಿಸಿ ದೊಣ್ಣೆವರಸೆಯನ್ನು ಪ್ರದರ್ಶಿಸುತ್ತಾರೆ. ಇದೊಂದು ತಮ್ಮನ್ನು ತಾವು ರಕ್ಷಣೆ ಮಾಡಿಕೊಳ್ಳುವ ತಂತ್ರಗಾರಿಕೆಯ ಪ್ರದರ್ಶನಾತ್ಮಕ ಕಲೆಯಾಗಿದೆ. ಈ ಕಲೆಯು ಸುಮಾರು ನೂರಾರು ವರ್ಷಗಳಿಂದ ಪ್ರದರ್ಶನಗೊಳ್ಳುತ್ತಿದೆ ಎಂದು ಸ್ಥಳಿಯರಾದ ರಾಮಕೃಷ್ಣರವರು ನೆನಪಿಸಿಕೊಳ್ಳುತ್ತಾರೆ.

## ಚಿತ್ರಕಲೆ

**ರಂಗೋಲಿ** : ರಂಗೋಲಿಯು ದೇವಾಲಯ ಮತ್ತು ಮನೆಗಳ ಮುಂದೆ ಹಾಗೂ ಒಳಗೆ ಅಲಂಕಾರಕ್ಕೆ ಸಂಬಂಧಿಸಿದ ಒಂದು ಜನಪದ ಕಲೆ. ಸ್ತ್ರೀಯರ ಕಲಾನೈಪುಣ್ಯ ಕಲ್ಪನಾಶಕ್ತಿಯ ಪ್ರತೀಕ. ಶುಭ ಕಾರ್ಯಗಳ ಸಂಕೇತವಾಗಿಯೂ ಪ್ರಚಲಿತವಾಗಿದೆ. ಹೆಣ್ಣುಮಕ್ಕಳು ಬೆಳಗ್ಗೆ ಎದ್ದೊಡನೆ ಹೊಸ್ತಿಲು ತೊಳೆದು, ಅಂಗಳ ಸಾರಿಸಿ, ರಂಗೋಲಿಯನ್ನು ಹಾಕಿ, ಹೊಸ್ತಿಲು ಪೂಜೆ ಮಾಡಿ ದಿನಗೆಲಸ ಪ್ರಾರಂಭಿಸುವುದು ಸಂಪ್ರದಾಯ. ಹಿರಣ್ಯಕಶ್ಯಪುವನ್ನು ನರಸಿಂಹ ಹೊಸ್ತಿಲ ಮೇಲೆ ಹಾಕಿ ಕೊಂದ ಕಥೆಯನ್ನು ಆಧರಿಸಿ 'ದುಷ್ಟ ಶಿಕ್ಷೆ ಶಿಷ್ಟ ಪರಿಪಾಲನೆ'(ರಕ್ಷೆ) ಮಾಡುವ ದೇವರ ಬಗೆಗಿನ ಭಕ್ತಿಯಿಂದಾಗಿ ಹೊಸ್ತಿಲು ಪೂಜೆ ಮಾಡುವ ಸಂಪ್ರದಾಯವನ್ನು ಜನಪದರು

ರೂಢಿಸಿಕೊಂಡಿರುವುದು ಕಂಡುಬರುತ್ತದೆ. ರಂಗೋಲಿಯನ್ನು ಕೇವಲ ಚಂದ ಕಾಣಿಸುವುದಕ್ಕೆ ಮಾತ್ರ ಹಾಕುವುದಿಲ್ಲ. ಇದರ ಹಿಂದೆ ತಾಂತ್ರಿಕ ಹಿನ್ನೆಲೆಯ ವಿಧಿಕ್ರಿಯೆಗಳೂ, ಐತಿಹಾಸಿಕ ಪೌರಾಣಿಕ ಹಿನ್ನೆಲೆಯ ಕಥಾನಕಗಳೂ ಸಂಗಮಗೊಂಡಿವೆ.

ರಂಗೋಲಿ ಎಂಬುದು ಸಾಮಾನ್ಯವಾಗಿ ಮನೆಯ ಮುಂದೆ ಬಿಡಿಸುವ ಕಲೆಯೇ, ದೇವರ ಜಗಲಿ, ವ್ರತಾಚರಣೆ, ಯಂತ್ರ, ಮಂತ್ರ–ಮಾಟದಲ್ಲಿ, ಮದುವೆ, ಮುಂಜಿ, ಹಬ್ಬ–ಹರಿದಿನ, ಜಾತ್ರೆಗಳಲ್ಲಿ, ಯಜ್ಞ ಮುಂತಾದ ಶುಭ–ಅಶುಭ ಕಾರ್ಯಗಳಲ್ಲಿ ರಂಗೋಲಿ ಹಾಕುತ್ತಾರೆ. ಹೀಗೆ ರಂಗೋಲಿಯು ಸೀಮಿತ ಅರ್ಥದಲ್ಲಿ ನಿಲ್ಲದೆ, ವಿಶಾಲ ಅರ್ಥವನ್ನು ಹೊಂದಿರುವುದು ಗೊತ್ತಾಗುತ್ತದೆ. ಆದುದರಿಂದ ರಂಗೋಲಿಯನ್ನು ಧಾರ್ಮಿಕ, ತಾಂತ್ರಿಕ ಹಿನ್ನೆಲೆಯ ಅಲಂಕಾರಿಕ ಕಲೆಯೆಂದು ಹೇಳಬಹುದಾಗಿದೆ. ಮೈಸೂರು ನಗರದ ಎಲ್ಲಾ ದೇವಾಲಯಗಳ ಮುಂದೆ ಭಕ್ತರು ರಂಗೋಲಿ ಹಾಕುವುದನ್ನು ಹಿಂದಿನಿಂದಲೂ ರೂಢಿಸಿಕೊಂಡು ಬಂದಿದ್ದಾರೆ. ಇತ್ತೀಚೆಗೆ ಬಣ್ಣಬಣ್ಣದ ರಂಗೋಲಿ ಪುಡಿ ಮಾರುಕಟ್ಟೆಗೆ ಲಗ್ಗೆ ಇಟ್ಟಿರುವುದರಿಂದ, ದೇವಾಲಯಗಳ ಮುಂದೆ ವರ್ಣರಂಜಿತವಾದ ರಂಗೋಲಿಯ ಚಿತ್ರಕಲೆಯನ್ನು ಕಾಣುತ್ತೇವೆ.

## 8.2 ಜನಪದ ಸಾಹಿತ್ಯ

ಜನಪದ ಸಾಹಿತ್ಯ ಒಂದು ವಾಚಿಕ ಕಲೆಯಾಗಿದ್ದು, ಪರಂಪರೆಯಿಂದ ಪರಂಪರೆಗೆ ಮೌಖಿಕವಾಗಿ ಸಾಗಿ ಬಂದಿದೆ. ದೇವಾಲಯಗಳಿಗೆ ಸಂಬಂಧಿಸಿದಂತೆ ಹುಟ್ಟಿಕೊಂಡಿರುವ ಸಾಹಿತ್ಯವನ್ನು ಜನಪದ ಸಾಹಿತ್ಯದ ಪ್ರಕಾರಗಳಾದ ಗೀತೆ, ಗಾದೆ, ಒಗಟು, ಬೈಗುಳ, ನುಡಿಗಟ್ಟು ಮುಂತಾದವುಗಳನ್ನು ಈ ಕೆಳಕಂಡಂತೆ ಅಧ್ಯಯನಕ್ಕೆ ಒಳಪಡಿಸಲಾಗಿದೆ.

### ಗಾದೆಗಳು

ಜಾನಪದ ಸಾಹಿತ್ಯದ ಒಂದು ಪ್ರಮುಖವಾದ ಪ್ರಕಾರ ಗಾದೆಗಳು. ಇದೊಂದು ಕಲಾತ್ಮಕ ಅಭಿವ್ಯಕ್ತಿ, ಸರಳ, ಸಂಕ್ಷಿಪ್ತ, ಧ್ವನಿಪೂರ್ಣ ತೀಕ್ಷ್ಣ, ಪ್ರಾಸಬದ್ಧ ಮತ್ತು ತೂಕಬದ್ಧ ಗಾದೆಗಳು ತಲೆ ತಲಾಂತರದಿಂದ ಬಂದ ಜೀವನಾನುಭವದ ಪ್ರತಿಬಿಂಬಗಳು. ಬದುಕಿನ ಮೌಲ್ಯಗಳನ್ನೇ ತುಂಬಿಕೊಂಡ ಗಾದೆಗಳಿಗೆ ಪ್ರಪಂಚದ ಎಲ್ಲಾ ವಸ್ತು ವಿಶೇಷಗಳೂ ವಸ್ತುವಾಗುತ್ತವೆ. ಬೀಜದಲ್ಲಿ ವೃಕ್ಷ ಅಡಗಿದಂತೆ ಅರ್ಥಭಾರದಿಂದ ತುಳುಕುವ ಗಾದೆಗಳು ಆಯಾ ರಾಷ್ಟ್ರದ ಅಮೂಲ್ಯ ಸಂಪತ್ತಾಗುತ್ತವೆ. ಸಾಮಾನ್ಯವಾಗಿ ಗಾದೆಗಳು ಬಹಳ ಸಂಗ್ರಹವಾಗಿರುವುದರಿಂದ ಒಂದೊಂದು ಮಾತಿನ ಸಾರ್ಥಕತೆಯೂ ಆಗುವಂತೆ ಅವುಗಳ ಪ್ರಯೋಗವಿರುತ್ತದೆ. ಜನಜೀವನದಲ್ಲಿ ಗಾದೆಗಳು

ಹಾಸುಹೊಕ್ಕಾಗಿ ಸೇರಿಕೊಂಡಿರುವುದನ್ನು ಹೆಜ್ಜೆ ಹೆಜ್ಜೆಗೂ ಕಾಣುತ್ತೇವೆ. ಯಾವುದೇ ವಿಷಯ ಮಾತನಾಡುವಾಗ 'ಅದೇನೋ ಗಾದೆ ಹೇಳಿದಂತೆ' ಎನ್ನುತ್ತಲೇ ಇರುತ್ತೇವೆ.

ಜನಜೀವನದ ಹಲವು ಹಂತಗಳಲ್ಲಿ ಅವರವರ ಕಸುಬಿಗೆ, ಸಂಸ್ಕಾರಕ್ಕೆ, ಸಂಗ ಸಂಬಂಧಗಳಿಗೆ, ಶ್ರದ್ಧೆ ಸಾಧನೆಗಳಿಗನುಗುಣವಾಗಿ ಗಾದೆಗಳು ಬೆಳೆಯುತ್ತವೆ. ಗಾದೆಗಳಿಂದ ಹೊರತಾದ ವಿಷಯಗಳೇ ಇಲ್ಲವೆನ್ನಬಹುದು. ಅಂತೆಯೇ ನಮಗೆ ಇಂದಿಗೂ ಅಗೋಚರ ವಾಗಿಯೇ ಉಳಿದಿರುವ ದೇವರನ್ನೂ ಕೂಡ ಗಾದೆಗಳು ಅರಗಿಸಿಕೊಂಡಿವೆ. ಕೆಲವೇ ಪದಗಳಲ್ಲಿ ದೇವರ ಮಹಿಮೆಯನ್ನು ಸಾರುವ ಹಲವು ಗಾದೆಗಳಿವೆ. ದೈವೀ ಪರಿಕಲ್ಪನೆಯನ್ನು ಬಳಸಿಕೊಂಡು ಸಾಮಾಜಿಕ ಆಚರಣೆಗಳನ್ನು, ನಡವಳಿಕೆಗಳನ್ನು ವಿಡಂಬಿಸುವ ಗಾದೆ ಮಾತುಗಳಿವೆ. ಸಮಾಜವನ್ನು ತಿದ್ದುವ ಸಲುವಾಗಿ ನೀತಿಮಾತುಗಳನ್ನು ಹೇಳುವಾಗ ಅದನ್ನು ಮತ್ತಷ್ಟು ಪರಿಣಾಮಕಾರಿಯಾಗಿಸಲು ದೈವತ್ವದ ಕಲ್ಪನೆಯನ್ನು ಜನಪದರು ಬಳಸಿಕೊಂಡಿದ್ದಾರೆ. ಅಲ್ಲದೆ ಜನರಿಗೆ ವಾಸ್ತವ ಜಗತ್ತಿನ ಸ್ಥಿತಿಯನ್ನು ಅರ್ಥಮಾಡಿಸುವ ಸಂದರ್ಭದಲ್ಲೂ ಕೂಡ ದೈವತ್ವದ ಪರಿಕಲ್ಪನೆಯು ನೆರವಾಗಿದೆ. ಹೀಗಾಗಿ ದೇವರಿಗೆ ಸಂಬಂಧಿಸಿದ, ದೇವಾಲಯಗಳಿಗೆ ಸಂಬಂಧಿಸಿದ ಹಲವು ಗಾದೆಗಳು ನಮಗೆ ದೊರಕುತ್ತವೆ. ಅವು ಆಯಾ ಸ್ಥಳ, ಸಂದರ್ಭಗಳಿಗೆ ತಕ್ಕಂತೆ ವಿಶೇಷವಾಗಿ ಹುಟ್ಟಿಕೊಂಡಿರುವುದರಿಂದ ಗಾದೆಗಳು ಖಚಿತವಾಗಿ ಇದೇ ಅರ್ಥವನ್ನು ನೀಡುತ್ತವೆ ಎಂದು ಹೇಳುವುದು ಕಷ್ಟಸಾಧ್ಯ. ಆದಾಗ್ಯೂ ದೇವರು, ದೇವಾಲಯಗಳಿಗೆ ಸಂಬಂಧಿಸಿದ ಗಾದೆಗಳು ಯಾವ ಯಾವ ಸ್ವರೂಪಗಳಲ್ಲಿ ಅಡಕವಾಗಿವೆ ಎಂಬುದನ್ನು ಕೆಲವು ಗಾದೆಗಳಲ್ಲಿ ವಿಶ್ಲೇಷಣೆ ಮಾಡಲಾಗಿದೆ.

- ಈ ಮೋರೆ ಹೊತ್ತದ್ದು ದೇವರ ಮಾಡೀತೇ?
- ಈ ಮೋರೆ ಹೊತ್ತವ ದೇವರ ಮಾಡಿ ದೇವರಿಗೆ ಧೂಪ ತೋರ್‍ಯಾನ!
- ಈ ಮುಸಡಿ ಹೊತ್ತ ಬಡ್ಡಿ ದ್ಯಾವ್ರ ಮಾಡ್ಯಾಳೆ?

ಈ ಮೂರು ಗಾದೆಗಳೂ ಒಂದೇ ಅರ್ಥವನ್ನು ನೀಡುತ್ತವೆ. ಇಲ್ಲಿ ಆಡಿಕೊಳ್ಳುವಿಕೆ ಪ್ರಧಾನ ಉದ್ದೇಶವಾಗಿದೆ. ಯಾವುದೇ ಕೆಲಸವನ್ನು ಮಾಡಬೇಕಾದರೂ ಅದರದ್ದೇ ಆದ ನಿರ್ದಿಷ್ಟ ಕ್ರಮವಿರುತ್ತದೆ. ಅದನ್ನು ಅನುಸರಿಸಿದರೆ ಮಾತ್ರ ಕೆಲಸ ಯಶಸ್ವಿಯಾಗುತ್ತದೆ. ಅದಕ್ಕೆ ನಿಷ್ಠೆಯೂ ಅತ್ಯಗತ್ಯ. ಯಾರು ಕ್ರಮಬದ್ಧವಾಗಿ, ಶ್ರದ್ದೆಯಿಂದ ಕಾರ್ಯ ನಿರ್ವಹಿಸುವುದಿಲ್ಲವೋ ಅವರನ್ನು ಟೀಕಿಸುವಾಗ ಈ ಗಾದೆಗಳು ಬಳಕೆಯಾಗುತ್ತವೆ. ಜಿಪುಣತನವನ್ನು ಪರಿಹಾಸ್ಯ ಮಾಡುವಾಗಲೂ ಕೂಡ ಈ ಮಾತುಗಳು ಕೇಳಿಬರುತ್ತವೆ.

- ತಾ ಕಾಣದ ದೇವರು ಪೂಜಾರಿಗೆ ವರ ಕೊಟ್ಟೀತೆ?
- ಕೊಲ್ಲೋ ದೇವರಿಗಿಂತ ಕಾಯೋ ದೆವ್ವ ಮೇಲು.

ಜನರು ಮತ್ತು ದೇವರ ನಡುವೆ ಇರುವ ಆಪ್ತ ಸಂಬಂಧವನ್ನು ಈ ಗಾದೆಗಳು ಹೇಳುತ್ತಿವೆ. ನಿರಾಶೆಯ ಕಾರಣದಿಂದ ಹುಟ್ಟಿಕೊಂಡಿರುವ ವ್ಯಂಗ್ಯ ಭಾವ ಇವುಗಳಲ್ಲಿದೆ. ಅಗತ್ಯ ಸಂದರ್ಭಗಳಲ್ಲಿ ಆಪ್ತರಿಂದ ನೆರವು ದೊರಕದಿರುವುದು ಇಂತಹ ಗಾದೆಗಳ ಹುಟ್ಟಿಗೆ ಕಾರಣವಾಗಿರಬಹುದು. ಸಂಕಟಬಂದಾಗ ಯಾರು ನೆರವಾಗುತ್ತಾರೋ ಅವರೇ ನಮಗೆ ಆಪ್ತರಾಗಿ ಕಾಣುತ್ತಾರೆ. ಅದು ದೇವರಾದರೂ ಸರಿ, ದೆವ್ವವಾದರೂ ಸರಿ, ನೆರವಿಗೆ ಬಾರದವರನ್ನು ಟೀಕಿಸುವುದು ಸಹಜ. ಬಹತೇಕ ದೇವರುಗಳು, ಅದರಲ್ಲೂ ಗ್ರಾಮದೇವತೆಗಳು ಬಲಿಯನ್ನು ಆಶಿಸುವುದನ್ನು ಆಚರಣೆಗಳಲ್ಲಿ ಕಾಣಬಹುದು. ಕೆಲವು ಪ್ರದೇಶಗಳಲ್ಲಿ ಭೂತರಾಯ ಇನ್ನಿತರ ಹೆಸರುಗಳಿಂದ ಭೂತರಾಧನೆಯೂ ಅಸ್ತಿತ್ವದಲ್ಲಿದೆ. ಅಂತಹ ಪ್ರದೇಶಗಳಲ್ಲಿ ದೆವ್ವವೂ ಕೂಡ ಜನರನ್ನು ಕಾಯುತ್ತವೆ ಎಂಬ ನಂಬಿಕೆ ಇದೆ. ಆದ್ದರಿಂದಲೇ ಬಲಿ ತೆಗೆದುಕೊಳ್ಳುವ ದೇವರಿಗಿಂತ ದೆವ್ವವೇ ಮೇಲು ಎಂಬ ಮಾತು ಹುಟ್ಟಿರಬಹುದು. ಭಕ್ತರು ದೇವರನ್ನು ಪೂಜಿಸುವುದೇ ನಮ್ಮನ್ನು ರಕ್ಷಿಸುತ್ತಾನೆಂಬ ಕಾರಣದಿಂದ. ರಕ್ಷಿಸುತ್ತರೆಂದು ನಂಬಿದವರೇ ಕೈಬಿಟ್ಟಾಗ ನಿರಾಶೆ ಉಂಟಾಗಿ ಇಂತಹ ಅಲೋಚನೆ ಬಂದಿರಬಹುದು.

- ಇದ್ದಮತಿ ಹಾರಿತೋ ಸಿದ್ಧಿಗಣೇಶ.

ಈ ಗಾದೆ ವಿವೇಕವನ್ನು ಎಚ್ಚರಿಸುವ ಸಂದರ್ಭದಲ್ಲಿ ದೂಷಣೆಯ ರೂಪದಲ್ಲಿ ಬಂದಿರಬಹುದು. ಪುರಾಣ ಕಥೆಗಳನ್ನು ನೋಡಿದಾಗ "ದೇವರುಗಳಲ್ಲೂ ಕೂಡ ಶ್ರೇಣೀಕರಣ ಇದ್ದು ಜವಾಬ್ದಾರಿಯ ವಿಭಜನೆ ಆಗಿದೆ"[6] ವಿದ್ಯೆಗೆ ಸರಸ್ವತಿ, ಹಣಕ್ಕೆ ಲಕ್ಷ್ಮೀ, ಗ್ರಾಮಗಳ ಯೋಗ ಕ್ಷೇಮಕ್ಕೆ ಗ್ರಾಮದೇವತೆಗಳು ಹೀಗೆ ಒಂದೊಂದು ದೇವರಿಗೂ ಒಂದೊಂದು ಕೆಲಸವನ್ನು ವಹಿಸಲಾಗಿದೆ. ಗಣಪತಿಯನ್ನು ಪೂಜಿಸುವುದು ಬುದ್ಧಿಯ ಸಿದ್ಧಿಗಾಗಿ. ಆದ್ದರಿಂದ ಬುದ್ಧಿ ಗೇಡಿಗಳನ್ನು ವಿಡಂಬಿಸುವಾಗ ಗಣಪತಿಯನ್ನು ನೆನೆದಿರುವುದು ಔಚಿತ್ಯವೆನಿಸುತ್ತದೆ.

- ದೇವರು ವರ ಕೊಟ್ರು ಪೂಜಾರಿ ವರ ಕೊಡ.

ಇಂತಹ ಗಾದೆಗಳು ಬ್ರಾಹ್ಮಣ ವರ್ಗವನ್ನೇ ಗುರಿಯಾಗಿಸಿಕೊಂಡಿವೆ ಇವು ನಮ್ಮಲ್ಲಿ ಇಂದೆ ಇದ್ದ ಶ್ರೇಣಿ ವ್ಯವಸ್ಥೆ, ವರ್ಗ ಸಂಘರ್ಷದ ಎಳೆಯನ್ನು ತೆರೆದಿಡುತ್ತವೆ. ದೇವರ ಹೆಸರು ಹೇಳಿಕೊಂಡು ಬಾಹ್ಮಣ ವರ್ಗ ಇತರ ವರ್ಗದ ಜನರನ್ನು ಶೋಷಿಸುತ್ತಿತ್ತು. ತನ್ನ ಲಾಭಕ್ಕೆ ತಕ್ಕಂತೆ

ಶಾಸ್ತ್ರ, ಸಂಪ್ರದಾಯಗಳನ್ನು ರೂಪಿಸಿ ಸ್ವಪ್ರಯೋಜನ ಪಡೆದುಕೊಳ್ಳುತ್ತಿತ್ತು. ದೇವರು ಮತ್ತು ಸಾಮಾನ್ಯರ ನಡುವೆ ಪೂಜಾರಿ ಮಧ್ಯವರ್ತಿಯೆಂದು ಗುರುತಿಸಲ್ಪಟ್ಟಿದ್ದ. ಪೂಜಾರಿಯ ನೆರವಿಲ್ಲದೆ ನಮ್ಮ ಬೇಡಿಕೆಗಳು ದೇವರನ್ನು ತಲುಪುವುದಿಲ್ಲ ಎಂಬ ಭಾವನೆ ಜನರಲ್ಲಿತ್ತು. ಇದು ಪೂಜಾರಿಗಳು ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳಲು ದಾರಿ ಮಾಡಿಕೊಟ್ಟಿತು. ಇಂದಿಗೂ ಕೂಡ ಪೂಜಾ ವಿಧಿಗಳನ್ನು ಬ್ರಾಹ್ಮಣರ ಕೈಯಲ್ಲೇ ಮಾಡಿಸಬೇಕು. ಅವರು ಕೇಳಿದ ವಸ್ತುಗಳನ್ನು ದಕ್ಷಿಣೆಯಾಗಿ ನೀಡಬೇಕು, ಅವರು ಹೇಳಿದಂತೆ ನಡೆದುಕೊಳ್ಳಬೇಕು ಎಂಬ ನಂಬಿಕೆ ಹಲವರಲ್ಲಿದೆ. ಜನರ ಈ ಮೌಢ್ಯತೆಯನ್ನೇ ಬಳಸಿಕೊಂಡು ಬ್ರಾಹ್ಮಣ ವರ್ಗ ತಮ್ಮ ಹಿತಾಸಕ್ತಿಗಳನ್ನು ಸಾಧಿಸಿಕೊಳ್ಳುತ್ತದೆ. ದೇವರ ಹೆಸರು ಹೇಳಿಕೊಂಡು ಹೆಚ್ಚು ಲಾಭ ಪಡೆಯುವುದು ಬ್ರಾಹ್ಮಣ ವರ್ಗವೇ. ಇತ್ತೀಚಿನ ದಿನಗಳಲ್ಲಿ ಮಠಗಳೂ ಕೂಡ ಈ ಹಾದಿ ಹಿಡಿದಿವೆ. ಇವನ್ನೆಲ್ಲಾ ಅರ್ಥೈಸಿಕೊಂಡು ಬೌದ್ಧಿಕವಾಗಿ ಮುಂದುವರಿದ ಜನರಿಂದ ಗಾದೆಗಳ ಬಳಕೆಯಾಗಿರಬಹುದು. ಒಂದು ಕಾಲಕ್ಕೆ ವಾಸ್ತವವನ್ನು ಸಾರುತ್ತಿದ್ದ ಈ ಗಾದೆಗಳು ಇಂದು ವ್ಯಂಗ್ಯದ ಧಾಟಿಯಲ್ಲಿ ಬಳಕೆಯಾಗುತ್ತಿವೆ.

- ಕದ್ದ ರೊಟ್ಟಿ ಬೇರೆ, ದೇವರ ಪ್ರಸಾದ ಬೇರೆ.

ಈ ಗಾದೆಯು ದುರಾಸೆಯನ್ನು ಟೀಕಿಸುತ್ತದೆ. ಇಲ್ಲಿನ ವಿಶೇಷತೆಯೆಂದರೆ ದುರಾಸೆಯಿಂದ ಧನ, ದ್ರವ್ಯಗಳನ್ನು ಸಂಗ್ರಹಿಸಿಟ್ಟರೆ ಅದು ನಮ್ಮ ಪಾಲಿಗೆ ಉಳಿಯುವುದಿಲ್ಲ. ಲೋಭಿ ಗಳಿಸಿದ್ದು ಪರರಿಗೆ. ಆದ್ದರಿಂದ ಸ್ವಾರ್ಥವನ್ನು ಬಿಡಬೇಕು ಎಂಬುದನ್ನು ತಿಳಿಸುವುದೇ ಈ ಗಾದೆಯ ಉದ್ದೇಶವಾಗಿದೆ. ಅದೂ ಬೇಕು, ಇದೂ ಬೇಕು, ಸಿಕ್ಕದ್ದೆಲ್ಲಾ ಬೇಕು ಎಂದು ಕಬಳಿಸುವ ನಮ್ಮ ರಾಜಕಾರಣಿಗಳಿಗೆ ಇದು ಹೆಚ್ಚು ಅನ್ವಯವಾಗುವಂತಿದೆ.

ಹೀಗೆ ಅನ್ಯಮಾರ್ಗದಲ್ಲಿ ಸಂಪಾದಿಸಿದ ಆಸ್ತಿಯೇ ಆಗಲಿ, ಬೇರಾವುದೇ ವಸ್ತುವಾಗಲಿ ಹೆಚ್ಚು ಕಾಲ ಉಳಿಯುವುದಿಲ್ಲ. ಅದು ಹೇಗಾದರೂ ಸರಿಯೇ ಪರರ ಪಾಲಾಗುತ್ತದೆ.

- ಮಾಯ ಮಾಡುವವರಿಗೆ ಮಾರಮ್ಮ ಬಲ್ಲಳು
- ಕ್ಷಾಮ ದೇವತೆ ಬಂದು ಊರ ದೇವತೆಯನ್ನು ಅಟ್ಟಿದಳು

ಬೇರೆಯವರಿಗೆ ಕೇಡುಮಾಡಿದರೆ ಅದರ ಫಲವನ್ನು ಮುಂದೆ ನಾವೂ ಅನುಭವಿಸ ಬೇಕಾಗುತ್ತದೆ. ಕೆಟ್ಟತನವನ್ನು ದೇವರು ಎಂದಿಗೂ ಸಹಿಸುವುದಿಲ್ಲ. ತಮ್ಮ ಕಾಲವೆಂದು ಮನಬಂದಂತೆ ಮೆರೆದಾಡಿದರೆ ಅವರಿಗೆ ಬುದ್ಧಿ ಕಲಿಸಲು ಮತ್ತೊಬ್ಬರು ಬಂದೇಬರುತ್ತಾರೆ. ಮಾಟ–ಮಂತ್ರಗಳನ್ನು ಬಲ್ಲ ಮಾಂತ್ರಿಕರು ತಮ್ಮ ಶಕ್ತಿಯಿರುವಾಗ ಮೆರೆದಾಡಿದರೆ ಅದನ್ನು

ನಿಯಂತ್ರಿಸುವುದನ್ನು ಮಾರಮ್ಮ ಬಲ್ಲಳು. ದೇವತೆಯಾದವಳು ದುಷ್ಟರ ಉಪಟಳವನ್ನು ತಡೆಯದೇ ಇರಲಾರಳು. ಗ್ರಾಮ ದೇವತೆ ಇರುವುದು ಊರನ್ನು ಕಾಯುವುದಕ್ಕಾಗಿ. ಆದರೆ ಊರ ದೇವತೆಯೇ ಊರಿನ ಜನರನ್ನು ಕಾಡಲು ಪ್ರಾರಂಭಿಸಿದರೆ ಜನ ಯಾರಲ್ಲಿ ತಮ್ಮ ಕಷ್ಟ ಹೇಳಿಕೊಂಡಾರು? ಆಗ ಅವರು ಮತ್ತೊಬ್ಬ ದೇವತೆಯನ್ನು ಸೃಷ್ಟಿಸಿಕೊಂಡು ಅದರ ಮೊರೆ ಹೋಗುತ್ತಾರೆ. ಊರಿನಲ್ಲಿ ಕಾಣಿಸಿಕೊಂಡ ಕಾಲರ, ಪ್ಲೇಗ್‌ನಂತಹ ರೋಗಗಳೇ, ಕ್ಷಾಮದಂತಹ ಪರಿಸ್ಥಿತಿಗಳೇ ದೇವರಾಗಿ ಮಾರ್ಪಾಡಾಗುತ್ತವೆ. ಜನ ತಮ್ಮನ್ನ ಕಾಯದ ಊರ ದೇವತೆಯನ್ನು ಪೂಜಿಸುವ ಬದಲು ತಮಗೆದುರಾದ ಕಷ್ಟಗಳನ್ನೇ ದೇವರಾಗಿ ಭಾವಿಸಿ ಪೂಜಿಸುತ್ತಾರೆ. ಆದ್ದರಿಂದಲೇ ಪ್ಲೇಗಮ್ಮ, ಕ್ಷಾಮದೇವತೆಯಂತಹ ದೇವರುಗಳು ಹುಟ್ಟಿಕೊಂಡಿರುವುದು. ಒಟ್ಟಿನಲ್ಲಿ ಸಾಧ್ಯವಾದರೆ ಒಳ್ಳೆಯದನ್ನು ಬಯಸಬೇಕು ಹೊರತು ಕಾಡಬಾರದು ಎಂದು ಉಪದೇಶಿಸುವ ಗಾದೆಗಳಿವು.

- ಆವನು ಮೆಚ್ಚಿದರೆ ದೇವರು ಮೆಚ್ಚುವನು

ಈ ಮಾತು ಒಳಿತು ಕೆಡಕುಗಳ ಜಿಜ್ಞಾಸೆಯನ್ನು ನಮ್ಮಲ್ಲಿ ಮೂಡಿಸುತ್ತದೆ. ದೇವರು ಹೇಗಿದ್ದಾನೇ? ಎಲ್ಲಿದ್ದಾನೇ? ಅವನನ್ನು ಒಲಿಸಿಕೊಳ್ಳುವುದು ಹೇಗೆ? ಯಾವುದೂ ನಮಗೆ ತಿಳಿದಿಲ್ಲ. ಎಲ್ಲರೂ ಅವರವರ ಕಲ್ಪನೆಗೆ ತಕ್ಕಂತೆ ಉತ್ತರ ಕಂಡುಕೊಂಡಿದ್ದಾರೆ. ದೇವರನ್ನು ಮೆಚ್ಚಿಸಲು ಪೂಜೆ–ಪುನಸ್ಕಾರಗಳನ್ನು ಮಾಡುವುದು, ಹಬ್ಬ–ಹರಿದಿನಗಳನ್ನು ಆಚರಿಸುವುದು, ಹಲವು ನಿಯಮ–ವ್ರತಗಳನ್ನು ಪಾಲಿಸುವುದೂ ನಡೆದಿದೆ. ಇವೆಲ್ಲವನ್ನು ಮಾಡಿ ಹಸಿವೆಂದು ಬಂದವರಿಗೆ ಅನ್ನ ನೀಡದೆ ಹೊರದೂಡಿದರೆ ಯಾವ ಪೂಜೆ ಮಾಡಿ ಏನು ಫಲ?

ದೇವರನ್ನು ಕಣ್ಣಾರೆ ಕಂಡವರು ಯಾರೂ ಇಲ್ಲಾ. ಎಲ್ಲರೂ ತಮಗೆ ಇಷ್ಟವಾದ ರೂಪದಲ್ಲಿ ದೇವರನ್ನು ಕಲ್ಪಿಸಿಕೊಳ್ಳುತ್ತಾರೆ. ಕಲ್ಲು, ಮರ, ಪ್ರಾಣಿ–ಪಕ್ಷಿಗಳಲ್ಲಿ ದೇವರನ್ನು ಹುಡುಕುತ್ತಾರೆ. ಆದ್ದರಿಂದಲೇ ಕವಿ ಜಿ.ಎಸ್.ಶಿವರುದ್ರಪ್ಪ ಅವರು 'ಎಲ್ಲೋ ಹುಡುಕಿದೆ ಇಲ್ಲದ ದೇವರ ಕಲ್ಲು–ಮಣ್ಣಿನ ಗುಡಿಯೊಳಗೆ, ಇಲ್ಲೇ ಇರುವ ಪ್ರೀತಿ ಸ್ನೇಹಗಳ ಗುರುತಿಸದಾದೆನು ನಮ್ಮೊಳಗೆ' ಎಂದು ಹೇಳಿದ್ದಾರೆ. ದೇವರು ಸರ್ವಶಕ್ತ, ಸರ್ವವ್ಯಾಪಿ ಎಂದ ಮೇಲೆ ಎಲ್ಲ ವಸ್ತುಗಳೂ, ಎಲ್ಲಾ ಜೀವಿಗಳಲ್ಲೂ ದೇವರಿದ್ದಾನೆ, ಅದನ್ನರಿತು ಎಲ್ಲರೊಂದಿಗೆ ಪ್ರೀತಿ–ಸ್ನೇಹದಿಂದ ಬೆರೆಯಬೇಕೇ ಹೊರತು ದೇವರು ಗುಡಿಯಲ್ಲಿದ್ದಾನೆ, ಮಸೀದಿಯಲ್ಲಿದ್ದಾನೆ, ಚರ್ಚಿನಲ್ಲಿದ್ದಾನೆ ಎಂದು ಹುಡುಕಿ ಹೊರಡುವುದಲ್ಲ. ಕುವೆಂಪು ಅವರು "ಗುಡಿ ಚರ್ಚು ಮಸೀದಿಗಳ ಬಿಟ್ಟು ಹೊರಬನ್ನಿ"[7] ಎಂದಿದ್ದಾರೆ. ನಾವಿದ್ದಲ್ಲಿಯೇ, ನಮ್ಮಲ್ಲಿಯೇ, ನಮ್ಮಕೆಲಸದಲ್ಲಿಯೇ ದೇವರಿದ್ದಾನೆ.

ನಮ್ಮ ಕೆಲಸವನ್ನು ಸರಿಯಾಗಿ ಮಾಡಿದರೆ ದೇವರು ಮೆಚ್ಚುತ್ತಾನೆಯೇ ಹೊರತು ದೇವಾಲಯಗಳಲ್ಲಿ ಕಾಲಹರಣ ಮಾಡಿ, ಕಾಣಿಕೆಗಳನ್ನು ಅರ್ಪಿಸಿದರೆ ಅಲ್ಲ.

- ಅಟ್ಟರೂ ಶಿವ ಕೊಟ್ಟಲ್ದೆ ಇಲ್ಲ.
- ಮಾವ ಕೊಟ್ಟದ್ದು ಮನೆತನಕ, ದೇವರು ಕೊಟ್ಟದ್ದು ಕೊನೆತನಕ.

ಮನುಷ್ಯ ಎಷ್ಟೇ ಪ್ರಯತ್ನ ಪಟ್ಟರೂ, ಏನೇ ಹರಸಾಹಸ ಮಾಡಿದರೂ ದೇವರು ಅದನ್ನು ನಮಗೆ ಕರುಣಿಸಿದರೆ ಮಾತ್ರ ನಮ್ಮ ಬಳಿ ಉಳಿಯುತ್ತದೆ. ಇಲ್ಲವಾದರೆ ನಮ್ಮ ಪ್ರಯತ್ನವನ್ನು ಮೀರಿ ಕೈಜಾರಿ ಹೋಗುತ್ತದೆ. ಆದ್ದರಿಂದ ದೇವರನ್ನು ಒಲಿಸಿಕೊಳ್ಳಬೇಕು. ಅವನ ದಯೆಯಿದ್ದರೆ ಮಾತ್ರ ಎಲ್ಲಾ ಜೀವಿಗಳು ನೆಮ್ಮದಿಯ ಜೀವನ ನಡೆಸಲು ಸಾಧ್ಯ. ಹೀಗೆ ಆಸ್ತಿಕರಿಂದ ಸೃಷ್ಟಿಯಾಗಿರಬಹುದಾದ ಈ ಗಾದೆಗಳು ಕೇಳಿದವರಲ್ಲಿಯೂ ದೈವಭಕ್ತಿ ಮೂಡುವಂತೆ ಪ್ರೇರೇಪಿಸುತ್ತವೆ. ಲೌಕಿಕ ಪ್ರಪಂಚದಿಂದ ನಮಗೆ ದೊರೆತದ್ದು ಎಂದಿಗೂ ಶಾಶ್ವತವಾಗಿ ಉಳಿಯುವುದಿಲ್ಲ. ಆದರೆ ಭಗವಂತನ ಕರುಣೆಯಿಂದ ದೊರೆತದ್ದು ನಮ್ಮಲ್ಲಿಯೇ ಉಳಿಯುತ್ತದೆ. ಇವು ಆಧ್ಯಾತ್ಮಿಕ ಚಿಂತನೆಯಿಂದ ಹುಟ್ಟಿದ ಗಾದೆಗಳಾಗಿದ್ದು **'ಮನೆ'** ಎಂಬುದು ಲೌಕಿಕತೆಯನ್ನು ಸೂಚಿಸಿದರೆ **'ಕೊನೆ'** ಎಂಬುದು ಮುಕ್ತಿಯನ್ನು ಸಂಕೇತಿಸುತ್ತದೆ. ಒಟ್ಟಿನಲ್ಲಿ ಇವು ಆಸ್ತಿಕ ಪ್ರಜ್ಞೆಯನ್ನು ಮೂಡಿಸುತ್ತವೆ.

- ಪುರಾಣ ತಿಳಿಯದಿದ್ದರೆ ನಾರಾಯಣ ಎನಲಿಕ್ಕೇನು?
- ಮಹಾಲಕ್ಷ್ಮಿ ಒಲಿದರೆ ದಾರಿದ್ರ್ಯವಿಲ್ಲ, ಸರಸ್ವತಿ ಒಲಿದವರಿಗೆ ಹೆಡ್ಡತನವಿಲ್ಲ.

ಈ ಗಾದೆಗಳಲ್ಲಿ ನಮ್ಮ ಪುರಾಣ ಕಥೆಗಳ ಪ್ರಭಾವವಿರಬಹುದು. ಪುರಾಣಗಳಲ್ಲಿ ಒಬ್ಬೊಬ್ಬ ದೇವರಿಗೆ ಒಂದೊಂದು ಕೆಲಸದ ವಿಂಗಡಣೆಯಾಗಿದೆಯೆಂದು ಮೊದಲೇ ಪ್ರಸ್ತಾಪಿಸಿದ್ದೇನೆ. ಒಬ್ಬೊಬ್ಬ ದೇವರನ್ನು ಒಂದೊಂದು ಕಾರಣಗಳಿಗೆ ಪೂಜಿಸುವ ಪದ್ಧತಿಯಿದೆ. ಹಣದ ಅವಶ್ಯಕತೆಯಿದ್ದವರು ಲಕ್ಷ್ಮಿ, ಕುಬೇರರನ್ನು, ವಿದ್ಯೆಯ ಬೇಡಿಕೆಯಿದ್ದವರು ಸರಸ್ವತಿಯನ್ನು, ಗಣಪತಿಯನ್ನು ಪೂಜಿಸುವುದನ್ನು ನೋಡಿದ್ದೇವೆ. ಮಹಾಲಕ್ಷ್ಮಿ ಒಲಿದರೆ ಅಲ್ಲಿ ಹಣದ ಕೊರತೆಯೇ ಇರುವುದಿಲ್ಲ. ಸರಸ್ವತಿ ಒಲಿದವರು ಬುದ್ಧಿವಂತರಾಗುತ್ತಾರೆ ಎಂಬ ನಂಬಿಕೆಯಿದೆ. ಆ ನಂಬಿಕೆಯನ್ನು ಪುಷ್ಟಿಗೊಳಿಸುವ ಹಲವು ಕಥೆಗಳೂ ಇವೆ.

ಒಂದು ಕಾಲದಲ್ಲಿ ಪುರಾಣ, ವೇದಗಳನ್ನು ತಿಳಿದ ಬ್ರಾಹ್ಮಣರು ಮಾತ್ರ ದೇವರನ್ನು ಪೂಜಿಸಬೇಕೆಂಬ ನಿಯಮವಿತ್ತು. ಕೆಳವರ್ಗದವರು ದೇವರ ಹೆಸರು ಹೇಳಿದರೆ ಅಪಾಯ. ದೇವರು ಕೋಪಗೊಳ್ಳುತ್ತಾನೆ, ಶಾಪ ಕೊಡುತ್ತಾನೆ ಎಂಬ ಭೀತಿ ಇತ್ತು. ಆದರೇ ಕ್ರಮೇಣ ಕೆಳ

ವರ್ಗದವರಿಗೆ ಪ್ರತ್ಯೇಕ ದೇವರು ಸೃಷ್ಟಿಯಾದವು. ಬುದ್ಧಿ ವಿಸ್ತಾರವಾದಂತೆಲ್ಲಾ ದೇವರು ಯಾರಿಗೂ ಕೆಡಕು ಮಾಡುವುದಿಲ್ಲ, ದೇವರನ್ನು ಯಾರು ನೆನೆದರೂ ಅವರಿಗೆ ಒಲಿಯುತ್ತಾನೆ ಎಂಬ ಭಾವನೆ ಬೆಳೆಯಿತು. ಇದು ವರ್ಗ ತಾರತಮ್ಯವನ್ನು ವಿರೋಧಿಸಿದ ಧ್ವನಿಯಂತೆ ಕಾಣುತ್ತದೆ.

- ದೇವರು ಕೊಟ್ಟ ಜೋಳಿಗೆಯಾದರೂ ಮೂರು ಮನೆ ಭಿಕ್ಷೆ ಬೇಡಬೇಕು.
- ಧೈರ್ಯವಿದ್ದರೆ ದೈವ ಸಹಾಯ

ಮನುಷ್ಯ ನೆಮ್ಮದಿಯಾಗಿ ಜೀವಿಸಲು ಬೇಕಾದ ಎಲ್ಲಾ ಸಾಧನಗಳೂ ನಮ್ಮ ಸುತ್ತ ಮುತ್ತಲಲ್ಲೆ ಇದೆ. ಆದರೆ ಅವುಗಳನ್ನು ಸರಿಯಾಗಿ ಬಳಸಿಕೊಳ್ಳುವುದು, ಬಿಡುವುದು ನಮ್ಮ ಸಾಮರ್ಥ್ಯಕ್ಕೆ ಬಿಟ್ಟದ್ದು. ದೇವರು ಜೋಳಿಗೆ ಕೊಟ್ಟಿದ್ದಾನೆಂದ ಮಾತ್ರಕ್ಕೆ ಎಲ್ಲವನ್ನು ದೇವರೆ ನಮ್ಮ ಮುಂದೆ ತಂದಿಡುತ್ತಾನೆಂದು ನಂಬಿಕೊಂಡರೆ ಅದು ದುರಾಸೆಯಾಗುತ್ತದೆ. 'ಹುಟ್ಟಿಸಿದ ದೇವರು ಹುಲ್ಲು ಮೇಯಿಸದೆಯೇ ಇರುತ್ತಾನೆಯೇ' ಎಂದು ಕೈಕಟ್ಟಿ ಕುಳಿತರೆ ತಿನ್ನುವ ಅನ್ನಕ್ಕೂ ಗತಿಯಿಲ್ಲದಂತಾಗುತ್ತದೆ. ಬದಲಿಗೆ ದೇವರ ಕೊಡುಗೆಯೊಂದಿಗೆ ನಮ್ಮ ಪ್ರಯತ್ನವೂ ಸೇರಿದರೆ ಎಲ್ಲವೂ ಸಾಧ್ಯವಾಗುತ್ತದೆ. ಜೀವನದಲ್ಲಿ ಹಿಮ್ಮೆಟ್ಟುವ ಸಂದರ್ಭಗಳಲ್ಲಿ ಧೃತಿಗೆಡದೆ ಧೈರ್ಯದಿಂದ ಮುಂದುವರೆದರೆ ಮಾತ್ರ ದೇವರು ಸಹಾಯ ಮಾಡಬಲ್ಲ. ಇಲ್ಲವಾದರೆ ಯಾರು ನಮ್ಮ ಸಹಾಯಕ್ಕೆ ಬರಲಾರರು ದೇವರೂ ಕೂಡ ಬರುವುದಿಲ್ಲ. ಪ್ರಯತ್ನಕ್ಕೆ ತಕ್ಕ ಪ್ರತಿಫಲ ದೊರೆಯುತ್ತದೆ ಎಂಬುದನ್ನು ಈ ಗಾದೆಗಳು ತಿಳಿಸುತ್ತವೆ.

ಕೆಲವೊಂದು ಗಾದೆಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಲಾಗಿದೆ.

- ಆಸ್ತಿಕನ ದಾನ, ನಾಸ್ತಿಕನ ಭಿಕ್ಷೆ
- ಈಶ್ವರಂಗಿಂತ ಗಡಬಡೇಶ್ವರ ದೊಡ್ಡವನೋ?
- ಊರಕ್ಕಿ ಊರ ಬೇಳೆ ಉಂಡು ಹೋಗೆ ಮಾರವ್ವ
- ಎನಗೂ ಹರಿನಾಮ, ಮಾಧವನಿಗೂ ಹರಿನಾಮ ಎನದು ಕಿರಿದೇನು? ಮಾಧವನದು ಹಿರಿದೇನು?
- ಎಲ್ಲಾ ದೇವರ ಜಗುಲಿಯಾದರೆ ನಿಲ್ಲೋದಕ್ಕೆ ಸ್ಥಳವೆಲ್ಲಿ?
- ಕಣ್ಣು ಕೊಂಡು ಹೋದ ದೈವ ಮತಿ ಕೊಟ್ಟಿತು.
- ಕಾಳು ಭೈರವ ಬಂದರೆ ಕನಕಾಭಿಷೇಕ ಮಾಡಿಸಬೇಕೋ?

- ಕೆಟ್ಟು ಮುನಿದವರೆಲ್ಲ ಹುಚ್ಚುರಾಯನ ಗುಡಿ ಸೇರಿದರು.
- ಕೋಟೆಯ ದೇವರಿಗೆ ಓಟೆಯ ದೀಪ.
- ಗೋಪಾಲ ಬುಟ್ಟಿಯಲ್ಲಿ ಶನೀಶ್ವರ ಹೊಕ್ಕ ಹಾಗೆ.
- ಜಗದೀಶ್ವರನ ದಯೆ ಇದ್ದರೆ ಜಗತ್ತೆಲ್ಲಾ ನನ್ನದು.
- ಜಡೇ ದೇವರಿಗೆ ನೆಲೆ ಇಲ್ಲ, ಬೋಳೇ ದೇವರಿಗೆ ನೆಲೆಯುಂಟೇ?
- ತರಗು ಲಡ್ಡಿಗೆ ಗಣಪತಿಯೇ ಶ್ರೇಷ್ಠ.
- ತಾಳೆ ಹೂವು ಶಿವನಿಗೆ ಆಗದು ಸಂಪಿಗೆ ಹೂವು ಸಾಲಿಗ್ರಾಮಕ್ಕೆ ಆಗದು.
- ತಿರುಮಲ ದೇವರಿಗೆ ಹೋಗಿ ಮಲಮೂತ್ರ ಬಯಸಿಕೊಂಡ.
- ತಿವಿದುಕೊಂಡರೆ ಬಂದಿತೇ ತಿಮ್ಮಪ್ಪನ ದಯೆ.
- ದಿಕ್ಕಿಲ್ಲದ ಮನುಷ್ಯನಿಗೆ ದೇವರೇಗತಿ.
- ದಿನದಿನ ಶನಿ ಕಾಡಿದರೆ ಬಾಳೋದು ಯಾವಾಗ?
- ಪರಮಾತ್ಮನನ್ನು ತಿಳಿಯದಿದ್ದರೆ ಪರಮಾನ್ನ ತಿನ್ನಲಿಕ್ಕೆ ಕಡಿಮೆಯೇ?
- ಮಾರಮ್ಮ ಅರಿಯದ ಕೋಣವೇ?
- ಮಾರಿಕಣ್ಣು ಹೋತನ ಮೇಲೆ.
- ಹನುಮನ ಮುಂದೆ ಹಾರೋ ಗುಬ್ಬಿಯೇ?
- ಹಲವು ದೇವರ ನಂಬಿ ಹಾರುವ ಕೆಟ್ಟ, ಹಾರುವನನ್ನು ನಂಬಿ ಹಲವರು ಕೆಟ್ಟರು.
- ದೇವಗತಿಯೊಳೇಂ ಸುಖವುಂಟೇ?
- ದೇವರ ನಿಲುಕೆ ಹತ್ತುವುದೆ ಕರ?
- ದೇವರ್ಗವಧೇಯರೆನಿಪ್ಪ ಜನಕೆ ಜೀವನ ಮುಂಟೇ?
- ದೈವ ಘಟನೆಯಿಂದಾಗುದುದೇಂ?
- ದೇವರು ಕೊಟ್ಟದ್ದು ನುಂಗಣಿ, ಮನುಷ್ಯ ಕೊಟ್ಟದ್ದು ಹಂಗಣಿ.
- ಇಲಿಗೆ ಹೊಡೆದ ಬಾಣ ಗಣಪತಿಗೆ ತಲುಪಿತು.
- ಊದುವ ಶಂಖ ಊದಿಬಿಡು ಮಾಧವರಾಯನ ಪೂಜೆ ಯಾವಾಗಲಾದರೂ ಆಗಲಿ.

- ಒಳಗಿನ ಬೇಗೆ ಶಿವ ಬಲ್ಲ.
- ಕಂಡದ್ದು ಬಿಡದು ಮುಂಡೇ ದೈವ.
- ಕುಂಟನಿಗೊಬ್ಬ ಶಿವ, ಕುರುಡನಿಗೊಬ್ಬ ಶಿವ.
- ಧರ್ಮಸ್ಥಳ ಮಂಜುನಾಥ ಮಾತುಬಿಡ, ತಿರುಪತಿ ವೆಂಕಟರಮಣ ಕಾಸುಬಿಡ.
- ಮನೆ ದೇವರಿಗೆ ಮೂಟೆಕಟ್ಟಿ ಹೊರಗಿನ ದೇವರ ಜಾತ್ರೆಗೆ ಹೋದರು.
- ಹೋದ ಬದುಕಿಗೆ ಹನ್ನೆರಡು ದೇವರಿಗೆಹರಕೆ.
- ಹಬ್ಬದೂಟ ಚೆಂದ; ಜಾತ್ರೆ ನೋಟ ಚಂದ.
- ಜನಮರುಳೋ ಜಾತ್ರೆ ಮರುಳೋ.
- ತುಂಬಿದ ಜಾತ್ರೇಲಿ ತುಂಡಂಗಿಯವನ ಕಂಡ.
- ಕೀಳ್ಗೆಟ್ಟ ಸಂಕ್ರಾಂತಿ ಊರಿಗೊಂದಿನ.
- ಗಂಡಸರಿಗೇಕೆ ಗೌರಿದುಖಃ ಹೆಂಗಸರಿಗೇಕೆ ಸಂಕ್ರಾಂತಿ ದುಖಃ.
- ಊರಿಗೊಂದು ಜಾತ್ರೆ; ಮೈಲಿಗೊಂದು ಯಾತ್ರೆ.
- ಹೋಳಿಗೆಯಿಲ್ಲದೆ ಹಬ್ಬವಿಲ್ಲ; ರಥವಿಲ್ಲದ ಜಾತ್ರೆಯಿಲ್ಲ.
- ದಿಕ್ಕಿಲ್ಲದವರಿಗೆ ದೇವರೇಗತಿ.
- ಲಿಂಗಕ್ಕೆ ಹೊಲೆಯಿಲ್ಲ; ಗಂಗೆಗೆ ಮಡಿಯಿಲ್ಲ.
- ಲಾಲಿಸಿದರೆ ಮಕ್ಕಳು; ಪೂಜಿಸಿದರೆ ದೇವರು.
- ಉಂಡದ್ದೇ ಉಗಾದಿ; ಮಿಂದದ್ದೇ ದೀಪಾವಳಿ.
- ಅನ್ನೇಕಾರರಿಗೆ ಹನ್ನೆರಡು ದೇವರು.
- ಅನ್ನೇಕಾರಂಗೆ ಹನ್ನೆರಡು ಜನ ಮಕ್ಕ.
- ಈ ಮೋರೆ ಹೊತ್ತುದು ದೇವರ ಮಾಡದೆ
  ಹಣ್ಣು ಕಾಯಿ ಪರ್ಸಾದ ಮನೆಗೆ ತಂದಾದೆ.
- ಉಳೋ ಹಗ್ಗಕ್ಕೆ ಕೊರಡಿಗೆ
  ಶಿವ ದಾರಕ್ಕೆ ಕರಡಿಗೆ.

- ಎದ್ದು ಬಿದ್ದು ಸಿದ್ದೇದ್ಯಾವರ ಪೂಜೆ.
- ಎಂಥೆಂಥ ದೇವರಿಗೋ ಅಂತರಾಟವಾಗಿರುವಾಗ
  ಕಾಲ್ಮುರುಕ ದೇವರಿಗೆ ಕೈಲಾಸವೇ?
- ಎಲ್ಲಾದೇವರ ಮುಂದೆ ನೋಡು ಅಲ್ಲಾಲನಾಥನ ಹಿಂದೆ ನೋಡು.
- ಕೊಂಕಿನ ದೇವರಿಗೆ ಕೊಡತಿ ಮದ್ದು.
- ಕೊಲ್ಲುವ ದೇವರಿಗಿಂತಲೂ ರಕ್ಷಿಸುವ ದೆವ್ವವೇ ಮೇಲು.
- ಗಣೇಶನ ಮಾಡು ಅಂದ್ರೆ ಗಣೇಶನ ಅಪ್ಪ ಮಾಡ್ತಿನಿ ಅಂದ್ನಂತೆ.
- ಗಂಡ ಹೆಂಡ್ತೀರ ದೇವರು ಮಾಡಾನೆ ಅಂದ್ರೆ
  ಭಂಡಾಟನೂ ದೇವರು ಮಾಡಾನೆಯೇ.
- ಚಮ್ಮಾರ ದೇವರಿಗೆ ಚಪ್ಪಲಿ ಪೂಜೆ.*
  (* ಮಾದಿಗ ದೇವರಿಗೆ ಎಕ್ಕಡದ ಪೂಜೆ)
- ಜನ ಮೆಚ್ಚಿಸೋಕೆ ಜನಮೇಜಯರಾಯನ ಕೈಲೂ ಆಗಿಲ್ಲ.*
  (* ದೇವರನಾದರು ಮೆಚ್ಚಿಸಬಹುದು ಜನ ಮೆಚ್ಚಿಸಲು ಸಾಧ್ಯವಿಲ್ಲ)
- ತಪ್ಪೊ ನೆಪ್ಪೊ ಒಪ್ಪಿಕೊಳ್ಳೊ ತಿಮ್ಮಪ್ಪ.
- ತಿಮ್ಮಪ್ಪನ ಹರಿಸೇವೆ ಮಾಡಿ ತಮ್ಮತಮ್ಮವರಿಗೆ ಇಕ್ಕಿದಹಾಗೆ.
- ತೇರಾದ ಮೇಲೆ ಜಾತ್ರೆಗೆ ಹೋಗಬಾರ್ದು
  ಧಾರೆಯಾದ ಮೇಲೆ ಮದುವೆಗೆ ಹೋಗಬಾರ್ದು.
- ದಾವರ ಹತ್ತಿದಾಗ ದೇವರ ಧ್ಯಾನ.
- ದೀಪ ಇಲ್ಲ ಧೂಪ ಇಲ್ಲ ಬಂದೆ ನಿನ್ನ ಗುಡಿಗೆ
  ಅರಾಪಿಲ್ಲ ಸರಾಪಿಲ್ಲ ಹೋಗು ನಿನ್ನ ಮನೆಗೆ.
- ದೆಯ್ಯ ತಿಂದು ದೇವರಿಗೆ ಕೈಮುಗಿದಂಗೆ.
- ದೇವರು ಕೊಡುವ ಕಾಲಕ್ಕೆ ತಲೆ ಮೇಲೆ ಹೊಡೆದು ಕೊಡ್ತಾನೆ.
- ದೇವರ ಮಗನಾದರೂ ಮಾಡಿದ್ದೇ ಉಣಬೇಕು.
- ದೇವರ ಮಾಡಿ ಕೆಟ್ಟೋರಿಲ್ಲ ದೆಯ್ಯ ಮಾಡಿ ಬದುಕಿದೋರಿಲ್ಲ.

- ನರಸಿಂಹಸ್ವಾಮಿ ಪರ್ಸಾದ ಒಸಿ ಉಣ್ಣೊ ನಿನ್ನ ನರಸೇದ.
- ನಾವೊಬ್ಬರ್ನ ಕೆಡ್ಸಿಲಅಂದ್ರೆ ನಮ್ಮನ್ನ ದೇವ್ರು ಕೆಡಿಸ್ತಾನೆ.
- ನೆತ್ತಿ ಮೇಲಿರುವ ನಾರಾಯಣ, ಹೊತ್ತಿರುವ ಭೂಮಿತಾಯಿ.
- ನೆನ್ನೆ ಆಯ್ತು ಕೊಂಡ, ಇವೊತ್ತೇಕೆ ಬಂದೆಕುಂಡ.
- ಪಾಪಿಲ್ಲದ ಮನೆ ದೇವರಿಲ್ಲದ ಗುಡಿ ಎರಡೂ ಒಂದೇ.
- ಪ್ರದಕ್ಷಿಣೆ ಹಾಕಿದರೆ ಪ್ರಯೋಜನವಿಲ್ಲ<br>ದಕ್ಷಿಣೆ ಹಾಕಿದರೇ ತೀರ್ಥ ಸಿಗೋದು.
- ಬಡವನ ಬದುಕ್ನೊ ನನ್ನಗಡಗುಲ್ಲು ಮಾರಮ್ಮ.
- ಬಸವನ ಪರಿಷೆಗೆ ಹೋಗಬೇಡ,<br>ಭಕ್ತನ ಮದುವೆಗೆ ಹೋಗಬೇಡ.
- ಬೆಟ್ಟದಗಾತ್ರ ದೇವರಿಗೆ ಇಟ್ಟಿಗೆ ಗಾತ್ರದ ಧೂಪ.
- ಮಣ್ಣುತಿನ್ನೋ ಮಾರಮ್ಮನಿಗೆ ತಂಬಿಟ್ಟೆಷ್ಟು.
- ಮಹಾಲಕ್ಷ್ಮಿ ಮನೆಗೆ ಬರೋವಾಗ ಮನೆಬಾಗಿಲು ತೆಗಿ,<br>ಹಿತ್ತಲ ಬಾಗಿಲು ಮುಚ್ಚು.
- ಮಲ್ಲಯ್ಯಸ್ವಾಮಿ ಮಟಗರೀತಾನೆ ನೆಲ್ಲೆ ಬಾಡಿಗೆ ಎಸರೆತ್ತು.
- ಮಿಂಡನ ಕಣ್ಣು ಮೇಲ್ಮೇಲೆ ಈಶ್ವರ್ರಾಯನ ಕಣ್ಣು ದೇಶದ್ಮೇಲೆ.
- ಮಾರಾಯನ ಮನೆಯಲ್ಲಿ ಮಾರಿಹಬ್ಬವಾದ್ರೆ<br>ನನ್ನ ಮಗೀನ ಹೊಟ್ಟೆ ನಗಾರಿಕಾಯಾಯ್ತು.
- ಮಾವ ಕೊಟ್ಟದ್ದು ಮನೆತನಕ, ದೇವರು ಕೊಟ್ಟದ್ದು ಕೊನೆತನಕ.
- ಮೂಢಭಕ್ತಿ ಪರಮಶ್ರೇಷ್ಠ ಅಂದ್ಕೊಳೊದು ಮೂರ್ಖತನ.
- ಮೆಣಸಿನ ದೇವ್ರರ್ಗೆ ಹುಣಸೆ ಸಾಕ್ಷಿ.
- ರಾಮರ ಜಾತ್ರೇಲಿ ಸೋಮಾರಿ ಮೊಕದೋಳ್ನ ಕಾಣ್ರ.
- ಯಾರ್ದೊ ದುಡ್ಡು ಎಲ್ಲಮ್ನ ಜಾತ್ರೆ.
- ಯಾರೂ ಹೆರದ್ದ ಹೆತ್ಲು ಮಾರಮ್ನ ಮರದ ಬುಗಡಿಯಾ.

- ವಕ್ರದೃಷ್ಟಿಗೆಲ್ಲ ಶನಿಶ್ವರನೇ ಗುರು.* (*ಅನಿಷ್ಟಕ್ಕೆಲ್ಲ ಶನೇಶ್ವರನೇ ಕಾರಣ).
- ಶಿವರಾತ್ರಿ ಹೊತ್ತಿಗೆ ಶಿವಶಿವ ಅಂತ ಅಂದ್ನಂತೆ.
- ಶಿವರಾತ್ರಿ ಬಿಸಿಲಲ್ಲಿ ನಡೆದವ ಕೆಟ್ಟ, ಇಬ್ಬರು ಹೆಂಡಿರ ತಂದವ ಕೆಟ್ಟ.
- ಶಾಸ್ತ್ರ ಸುಳ್ಳಲ್ಲ, ಸೂಸ್ತ್ರ ಕೊಂಕಲ್ಲ.
- ಶಾಸ್ತ್ರಕ್ಕೆ ಐದು ಇಳ್ಳೇದೆಲೆ ಊಟಕ್ಕೆ ಮೂರು ಇಸ್ತ್ರೀ ಎಲೆ.
- ಸತ್ತರೆ ಸಮಾಧಿ, ಇದ್ದರೆ ಪರ್ಸಾದ.
- ಸಗ್ಗದಲ್ಲೂ ಸೈದಾನವೆ, ನಿನ್ನಲ್ಲಿಯೂ ದಾನ ಧರ್ಮವೇ?
- ಸಂಕ್ರಾಂತಿ ಹಬ್ಬೆ ಸಂತ್ರುಷ್ಟಿ ಊಟ.
- ಸಾಂಬ್ರಾಣಿಯಂತಹ ಸಣ್ಣಕುಡ್ಲು ತಕ್ಕೊಂಡು ದೇವರಾಣೆ ನಿನ್ನ ಮೂಗು ಕುಯ್ತೀನಿ.
- ಸೀತೆ ಮಕ್ಕಳಿಗೆ ಶಿವನೇ ಕಾವಲು*. (* ಕಂಡೋನ ಮಕ್ಕಳಿಗೆ ಶಿವನೇ ಕಾವಲು).
- ಸಿಡಿ ಬೆಡಗಿ ಶ್ಯಾವಗೆ ಮಾಡಿದರೆ ಗುಡಿಗೆ ಹೋಗೋವೊತ್ಗೆ ಹಳಸ್ಕೊತ್ತು.
- ಸುಳ್ಳು ದೇವರಿಗೆ ಕಳ್ಳ ಪೂಜಾರಿ.
- ಸುಳ್ಳೇ ನಮ್ಮನೆದೇವ್ರು ಅಂದ್ನಂತೆ.
- ಸೂಳೆ ಸುಂಗಾರ ಆಗುವ ಹೊತ್ತಿಗೆ ತೇರು ಹರಿದು ತಾಣ ಸೇರಿತಂತೆ.
- ಹಗೆಯೋನ್ಗೆ ಮದ್ದರೆಯುತ್ತಿದ್ದೋನ್ಗೆ ಭಗವಂತ ಮದ್ದರೆಯುತ್ತಿದ್ದ.
- ಹಳ್ಳಿಗ್ಹೋದವನ ಮನಸ್ಸು ದೇವ್ರೇ ಬಲ್ಲ.
- ಹಾರುವಯ್ಯನಿಗೆ ಹರಕೆ ಕಟ್ಟಿದಕ್ಕೆ ಹಳೇ ಪರಕೇಲಿ ಹೊಡ್ದಹಾಗೆ.
- ಹಿರೀ ಮನಷ್ಯಾಗೋದ ಊರ ಮುಂದಲ ಕರಿ ಕಲ್ಲಾಗಿವೊ.
- ಹುಚ್ಚೂರ ಉರಮಾರಿ ಊರುಕೇರಿ ಒಂದಾಯ್ತು.
- ಹೇಸಿಗೆ ತಿನ್ನೋ ದೇವರಿಗೆ ಹೆಂಡ ಕುಡಿಯೋ ಪೂಜಾರಿ.
- ಹಂದಿ ಚೆಂದಕ್ಕೆ ನಂದೀನ ಜರೀತಂತೆ.
- ಹಂದಿಯಾಗಿ ನೂರು ವರ್ಷ ಬಾಳೋದಕ್ಕಿಂತ
  ನಂದಿಯಾಗಿ ಮೂರು ವರ್ಷ ಬಾಳೋದು ಲೇಸು.

- ಹಂದಿ ಬಲ್ಲುದೆ ಗಂಧ ಪರಸಾದವ.

ಒಟ್ಟಾರೆಯಾಗಿ ಗಾದೆಗಳು ಎಲ್ಲಾ ನೆಲೆಯಿಂದಲೂ ಮನುಷ್ಯನನ್ನು ತಿದ್ದುವ ನೀತಿ ಬೋಧಗಳಾಗಿವೆ. ನಮಗೆ ತಿಳಿಯದೇ ಇರುವಂಥದ್ದನ್ನೇನನ್ನೂ ಗಾದೆಗಳು ಹೇಳುವುದಿಲ್ಲ. ಅಂತೆಯೇ ಸಾಧಿಸಲಸಾಧ್ಯವಾದಂಥ ಉನ್ನತ ನೈತಿಕ ಆದರ್ಶವನ್ನೇನೂ ನಮ್ಮ ಮುಂದಿಡು ವುದಿಲ್ಲ. ಈ ಜಗತ್ತಿನಲ್ಲಿ ನಾವು ಸಹಜವಾಗಿಯೇ ಅನುಭವಿಸಿದ ದಿನನಿತ್ಯದ ಅನುಭವಗಳ ಕ್ರೂಢೀಕರಣ ಅವುಗಳಲ್ಲಿದೆ.

ದೇವರು, ದೇವಾಲಯಗಳಿಗೆ ಸಂಬಂಧಿಸಿದ ಗಾದೆಗಳಲ್ಲಿ ವಿಡಂಬನೆಯಿರಲಿ, ತಿರಸ್ಕಾರವಿರಲಿ, ಕುಚೋದ್ಯವಿರಲಿ ಅಥವಾ ದೇವರ ಬಗ್ಗೆ ಭಕ್ತಿ–ಭಾವ ಪ್ರಕಟವಾಗಿರಲಿ ಅವೆಲ್ಲದರ ಹಿಂದಿರುವ ಉದ್ದೇಶ ಮಾತ್ರ ಮನುಷ್ಯನನ್ನು ಸರಿದಾರಿಗೆ ತರುವುದಾಗಿದೆ. ಗಾದೆಗಳಲ್ಲಿ ಸಂದರ್ಭಕ್ಕೆ ತಕ್ಕಂತೆ ಭಾಷೆ ಬಳಕೆಯಾಗಿರುವುದನ್ನು ಕಾಣಬಹುದು. ಭಾಷೆಯ ಶೈಲಿ ಸಾಂದರ್ಭಿಕವಾಗಿ ಹೊಂದಾಣಿಕೆಯಾಗದಿದ್ದರೆ ಅವು ಹೆಚ್ಚು ಜನ ಮನ್ನಣೆಗಳಿಸಲಾರವು. ಜೊತೆಗೆ ತಾವು ಹೇಳಬೇಕಾದ್ದನ್ನು ಸಮರ್ಥವಾಗಿ ಅರ್ಥಮಾಡಿಸಲಾರವು.

ದೇವರು ಮತ್ತು ದೇವಾಲಯಗಳಿಗೆ ಸಂಬಂಧಿಸಿದ ಗಾದೆಗಳನ್ನು ವಿಶ್ಲೇಷಿಸಿ, ಪರಾಮರ್ಶಿಸಿದ ಮೇಲೂ ದೇವರ ಬಗ್ಗೆ ಅನೇಕ ಗೊಂದಲಗಳು ಹಾಗೆಯೇ ಉಳಿದುಕೊಳ್ಳುತ್ತವೆ. ಅದೇನೇ ಇದ್ದರೂ ಎಲ್ಲವನ್ನೂ ವಿವೇಚಿಸಿ ದೇವರನ್ನು ಹೇಗೆ ಕಂಡುಕೊಳ್ಳಬೇಕು ಎಂಬುದು ಅವರವರ ಭಾವನೆಗಳಿಗೆ, ನಂಬಿಕೆಗಳಿಗೆ ಸೇರಿದ್ದಾಗಿದೆ.

**ಒಗಟುಗಳು**

ಒಗಟು ಜನಪದ ಸಾಹಿತ್ಯದ ಶ್ರೀಮಂತ ಪ್ರಕಾರಗಳಲ್ಲಿ ಒಂದು. ಇದು ಚಿಂತನ ಮತ್ತು ಚಾತುರ್ಯ ಪ್ರಧಾನವಾದುದಾಗಿ ಜನಪದ ಸಾಹಿತ್ಯದ ಪ್ರಕಾರಗಳೊಂದಿಗೆ ಹತ್ತಿರದ ಗಂಟು ನಂಟುಗಳಿವೆ. ಒಗಟು ತನ್ನ ನಿಗೂಢತೆಯನ್ನು ಕಳೆದುಕೊಂಡು ಗಾದೆಯಾಗಬಹುದು, ಗೀತೆಯ ರೂಪದ ಒಗಟಾಗಬಹುದು. ಜೇಮ್ಸ್.ಎ.ಕೆಲ್ಲೊ, ಚಾರ್ಲಸ್ ಫ್ರಾನ್ಸಿಸ್ ಪಾಟರ್, ಪ್ರೊ.ಹಾ.ಮಾ.ನಾಯಕ ಮುಂತಾದ ಪ್ರಸಿದ್ಧ ಜಾನಪದ ತಜ್ಞರು ಒಗಟು ಅತ್ಯಂತ ಪ್ರಾಚೀನತಮವಾದುದೆಂದು ಅಭಿಪ್ರಾಯಿಸಿದರೂ, ಅಲೆಕ್ಸಾಂಡರ್ ಎಚ್.ಕ್ರಾಪ್ಪೆ ಮುಂತಾದವರು ಅದು ಜನಪದ ಸಾಹಿತ್ಯದ ಕೊನೆಯ ಫಲವೆಂದು ಭಾವಿಸುತ್ತಾರೆ[8]

ಮಾನವ ಬುದ್ಧಿ ಶಕ್ತಿಗೆ ಪ್ರಕಾಶತೆಯನ್ನು ತರಲು ಸಾಣೆ ಹಿಡಿಯುವ ಒಗಟುಗಳನ್ನು ಕನ್ನಡದಲ್ಲಿ ಒಂಟು, ಒಡಪು, ಒಗಟು, ಒಡಗತೆ, ಒಡಚೋಕತೆ ಮುಂತಾದ ಹೆಸರುಗಳಿಂದ

ಕರೆಯುತ್ತಾರೆ. ‘ಒಗಟು’ ಅಥವಾ ‘ಒಗಟಿಗೆ’ ‘ಒಗೆ’ ಧಾತು ಮೂಲವಿರಬಹುದು. ಅಂದರೆ ‘ಸವಾಲು ಹಾಕು’, ಸವಾಲು ‘ಎಸೆ’ ಎಂಬರ್ಥವಿದೆ. ಅಂತೆಯೇ ‘ಒಡಪು’ ಶಬ್ಧಕ್ಕೆ ‘ಒಡೆ’ ಎಂಬ ಧಾತು ಮೂಲವಿರಬಹುದು. ಅಂದರೆ ‘ಬಿಡಿಸಬೇಕಾದ್ದು’, ‘ಒಡಚುವುದು’, ಒಡಿಯುವುದು ಎಂದರ್ಥವಿದೆ. ಇದರ ಇಂಗ್ಲೀಷ್ ರೂಪ **‘Riddle’**ಇದಕ್ಕೆ **‘Raedan’** ಎಂಬ ಆಂಗ್ಲೋ–ಸ್ಯಾಕ್ಸನ್ ಧಾತು ಮೂಲ. ಇದಕ್ಕೆ ಅರ್ಥೈಸು, ವ್ಯಾಖ್ಯಾನಿಸು ಎಂಬ ಅರ್ಥಗಳಿವೆ.

ಒಗಟುಗಳು ಅನಕ್ಷರಸ್ಥರ ಸಮೂಹದ ಸಮಷ್ಟಿ ಸೃಷ್ಟಿ. ಮನರಂಜನೆಗಾಗಿ, ವಿನೋದಕ್ಕಾಗಿ ಹುಟ್ಟಿಕೊಂಡಿದ್ದರೂ, ಕೆಲವೊಮ್ಮೆ ಪ್ರತಿಷ್ಠೆಯ ಕಣವಾಗಿಯೂ ಗಂಭೀರ ಪಾತ್ರವಹಿಸಿರು ವುದುಂಟು. ಮಕ್ಕಳಿಂದ ಆಬಾಲವೃದ್ಧರವರೆವಿಗೂ ಪ್ರಿಯವಾದುದಾಗಿದ್ದು ಕೆಲವು ಸಂದರ್ಭಗಳಲ್ಲಿ ವೈಯಕ್ತಿಕವಾದ ಹಾಗೂ ಪವಿತ್ರ ಧಾರ್ಮಿಕ ಸಂಗತಿಗಳನ್ನು ರಹಸ್ಯವಾಗಿ ಉದ್ದೇಶಿತ ವ್ಯಕ್ತಿಗೆ ತಲುಪಿಸ ಬೇಕಾದಾಗ ಸಂಕೇತ ಭಾಷೆಯಂತೆಯೂ ಒಗಟು ಕಾರ್ಯನಿರ್ವಹಿಸಿದೆ.

ಒಗಟು ಹುಟ್ಟಲು ಇಂತಹದೇ ಕಾರಣ ಎಂದು ಸೂಕ್ತವಾಗಿ ಹೇಳಲು ಸಾಧ್ಯವಿಲ್ಲ. ಅಂತೆಯೆ ಇಂತಹ ವಿಷಯದ ಮೇಲೆ ಮಾತ್ರ ಒಗಟು ಹುಟ್ಟುತ್ತದೆ ಎಂದು ಹೇಳಲಾಗದು ಒಗಟಿಗೆ ವಿಷಯದ ಪರಿಮಿತಿಯಿಲ್ಲ. ಇಲ್ಲಿ ಧಾರ್ಮಿಕ ವಿಚಾರಗಳಾದ ದೇವರು, ದೇವಾಲಯ ಗಳಿಗೆ ಸಂಬಂಧಿಸಿದಂತಹ ಒಗಟುಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ.

- ಇನ್ನಷ್ಟು ಹೂವು ಈಶ್ವರನ ಹೂವು
  ವರ್ಷವೆಲ್ಲಾ ಕುಯ್ದರೂ ಆಗೋದಿಲ್ಲ ಪಾವು – ರಾಗಿ ಹೂವು
- ಹುಟ್ಟೋದು ಕೆಸರಾದ್ರೂ
  ಸೇರೋದು ಗರ್ಭಗುಡಿ – ತಾವರೆ ಹೂವು
- ಬಸವಣ್ಣ ದೇವರ ಗುಡೀಮ್ಯಾಲೆ
  ಬಸರಿ ಮರ ಹುಟ್ಟಿ
  ಎಸಳೆಂಬತ್ತು
  ಕುಸುರಿ ಮುವತ್ತು
  ಅದರ ಹೆಸರೇಳಿದವರಿಗೆ
  ಮೊಸರು ಅನ್ನ – ಚೆಂಡು ಹೂವು
- ಅಂತರದಲ್ಲಿ ಅವು ನಾಲ್ಕು
  ಸ್ವಂತ ಇಟ್ಟವು ನಾಲ್ಕು

ಕಿವಿ ಆರು, ಕೊಂಬೆರಡು, ಬಾಲ ಒಂದು. – ಪಾರ್ವತಿಪರಮೇಶ್ವರ ನಂದಿಯ ಮೇಲೆ.

- ಅಯ್ಯಯ್ಯೋ ಜೋಗಿ ಮೈಯೆಲ್ಲಾ ಬೂದಿ
  ಕೈಯಲ್ಲಿ ಕಠಾರಿ ತಲೆಮೇಲೆ ರುದ್ರಾಕ್ಷಿ – ಹರಳು ಗಿಡ.
- ಅರೆಪಾವು ಅಕ್ಕಿ ಹಾಕಿ
  ಗಿರಿ ಮ್ಯಾಲೆ ಪರ ಮಾಡಿ
  ಒಂದೂರ ಅಕ್ಕನಿಗೆ ಬಂದು ಬಂದು ಇಕ್ಕಿ
  ಹೋದೂರ ಅಕ್ಕನಿಗೆ ನೋಡಿ ನೋಡಿ ಇಕ್ಕಿ
  ಈಗ ಬರೋದಾಸಯ್ಯ ಆಗ್ಲೆ ಬಂದಿದ್ರೆ
  ನಿನಗೂ ಒಂದುತುತ್ತು ಇಕ್ಕೀವೆ. – ಸುಣ್ಣ.
- ಅಂಗೈ ಅಗಲ ದೇವಸ್ಥಾನ ಚೋಟುದ್ದ ಆಳು. – ಲಾಟೀನು–ಬತ್ತಿ.
- ಅಂಕು ಡೊಂಕಿನ ಮರ
  ಬಾರ ಬಿರಿಸಿದ ಮರ
  ಬಂದ ದೇವತೆ ಕಡಿಯಲಾರದ ಮರ. – ಗಾಳಿ.
- ಅಪ್ಪುಡೆ
  ಚಿಪ್ಪುಡೆ
  ಬೋಳಿಮಗ
  ದೇವರ ತಲೆ ಮೇಲೆ
  ಉಚ್ಚೆ ಹೊಯ್ತಾನೆ. – ನಾಯಿ.
- ಅರೆಕಲ್ಲಿನ ಮೇಲೆ
  ಮರ ಮೂಡಿದುದ ಕಂಡೆ
  ಮರದ ಮೇಲೆರಡು
  ಕರಗಳನು ಕಂಡೆ
  ಅದು ಮುಂದೆ ಶಿವನ ಮುಖದಲ್ಲಿ
  ಮೆರೆವುದ ಕಂಡೆ – ಸಾಣೆಕಲ್ಲು, ಗಂಧದ ಕೊರಡು.
- ಆತನೆ ಈತನೆ ಸೀತಂಗಿ ರಾಯನೆ

ರಾಮನ ಕೊರಳಲ್ಲಿರುವ ದೊಡ್ಡಗುಂಡು ಮಾವಲೆ ಸರ
ಅದರ ಹೆಸರು ಹೇಳಿದವನಿಗೆ ಹಳ್ಳಿ ಹರಕೆ ಗುಳ್ಳಿ ಗುರಕೆ
ಸಾಲಿಗ್ರಾಮದ ಸಾವುಕಾರಿಕೆ. – ಕರಿಮಣಿ.

- ಇದೇನೊ ಜೋಗಿ ಮೈಯೆಲ್ಲಾ ಬೂದಿ
  ಕೈಚಾಚಿ ತಲೆಮ್ಯಾಲೆ ರುದ್ರಾಕ್ಷಿ – ಔಡಲಗಿಡ.
- ಇನ್ನೂರು ಮುನ್ನೂರು ಗರಿ
  ಶಿವಜಾಣರು ಬರುತ್ತಾರೆ ಕೈಬಿಸಿ ಕರಿ. – ಕಣ್ಣುರೆಪ್ಪೆ.
- ಈಟೆಗುಡಿ, ಗುಡಿತುಂಬ ತಡಿ. – ಬಾಯಿ–ನಾಲಿಗೆ.
- ಈಟೆಗುಡಿ, ಗುಡಿತುಂಬ ಚಕ್ಕಿ. – ಬಾಯಿ–ಹಲ್ಲು.
- ಊರೂರ ತಿರ್‍ಕಂಡು
  ದೇವರ ಮುಂದೆ ಉಚ್ಚೆ ಹೊಯ್ಯುತ್ತೆ. – ತೆಂಗಿನಕಾಯಿ.
- ಒಂದು ಗೋಪುರ
  ಅದರೊಳಗೆ ಮೂರು ಸುತ್ತುಗಳು
  ಹೊರಗಿನ ಸುತ್ತು ಪಚ್ಚೆಯದು
  ನಡುವಿನ ಸುತ್ತು ಬೆಳ್ಳಿಯದು
  ಕೊನೆಯ ಸುತ್ತು ಚಿನ್ನದ್ದು
  ಅದರ ತುಂಬಾ ಶಿವಲಿಂಗಗಳು. – ಹಲಸಿನ ಹಣ್ಣು: ಹೊರಮೈ
  ಒಳಮೈ, ತೋಳೆ, ಬೀಜ
- ಒಬ್ಬರಾಗಿ ಗುಡಿಯೊಳಗೆ ಹೋಗ್ತಾರೆ
  ಇಬ್ಬರಾಗಿ ಹೊರಗೆ ಬರ್ತಾರೆ. – ತೆಂಗಿನಕಾಯಿ.
- ಒಂದುರಾತ್ರಿ ಶಿವರಾತ್ರಿ
  ಬಿಟ್ಟು ನೋಡು ಒಂದುರಾತ್ರಿ. –ರಾಗಿಕಲ್ಲಲ್ಲಿ ರಾಗಿಬೀಸುವುದು.
- ಒಂದು ಕೊಳ
  ಕೊಳದಲ್ಲೊಂದು ಮಂಟಪ
  ಮಂಟಪದಲ್ಲೊಬ್ಬ ಮನುಷ್ಯ

ಕೊಳದ ಸುತ್ತಲೂ ಮರ

ಹೂವು ಕಾಯಿ ಬಿಡುವುದಿಲ್ಲ. – ಕಣ್ಣು.

- ಎಣ್ಣೆಲ್ಲ ಬತ್ತಿಲ್ಲ ಕಡ್ಡಿಗೀಚಿ ಹಚ್ಚೋದು ಮೊದಲಿಲ್ಲ

  ಲೋಕಾನೆಲ್ಲ ಬೆಳಗುವೆ ನಾನಾರು? – ವಿದ್ಯುದ್ದೀಪ.

- ಕರಿಯ ಗುಡಿ ಬಿಳಿಯ ದೇವರು

  ಬೊಕ್ಕ ಪೂಜಾರಿಯವರು ಹೊಕ್ಕು ಪೂಜೆ ಮಾಡುತ್ತಾರೆ. – ಮಡಕೆ, ಅನ್ನ, ಸೌಟು.

- ಕಲ್ಲಾಗಿ ಹುಟ್ಟಿ ಕಲ್ಲಾಗಿ ಬೆಳೆದು

  ಎಲ್ಲದೇವರಿಗೂ ಸಲ್ಲತಕ್ಕದ್ದು. – ಸುಣ್ಣ.

- ಕೃಷ್ಣದೇವರಿಗೆ ಹಿಂದಕ್ಕೂ ಬಾಲ ಮುಂದಕ್ಕೂ ಬಾಲ. – ಆನೆ.

- ಕೆಂಡಗಣ್ಣಿನ ಪ್ರಭುಲಿಂಗದೇವರಂತೆ

  ಮೈ ತೊಳೆದು ಮಡಿಯುಟ್ಟು

  ಮರಳಲ್ಲಿ ಕುಳಿತವರಂತೆ

  ತೊಗಲಪುರದವರು ಬಂದು ಕರೆದೊಯ್ದರಂತೆ

  ಈ ನರರ ಬಾದೆಯ ತಾಳಲಾರದೆ

  ಕಲ್ಲು ಬಂಡೆಯೊಳಗೆ ಹೋದರಂತೆ. – ನಾಲಗೆ.

- ಕೆಂಪನಿಂಗ ಶೆಟ್ಟಿ ತಪಸಿಗೆ ಕೂತು ಮೂರು ತಿಂಗಳಾಯ್ತು!

  ಗುದ್ಲಿ ಮಹಾಂತದೇವರು ಎಸದ್ರು;

  ಹಂಪಾಪುರದವರು ಬಂದು ಮೀಸೆ ತೊಳೆದು

  ಸುಬ್ರಾಯರಂಗಡಿಯಿಂದ ಊಟಕ್ಬಂತು. – ಈರುಳ್ಳಿ.

- ಕೆಂಪನ್ನಕ್ಕೆ ಕೆಂಚೀರಕ್ಕ

  ಅಂಪಜಾತ್ರೆಗೆ ಬರ್ತೀಯನಕ್ಕ

  ಅಂಪಜಾತ್ರೆಗೆ ಏನೇನು ಮಾತು

  ಹಲಗೆ ಜಾತ್ರೆಗೆ ಹಾಜರು – ಮೆಣಸಿನಕಾಯಿ.

- ಕೆಂಡಗಣ್ಣಿನಂತಹ

  ಲಿಂಗಾ ದೇವರಂತೆ

  ನೆಲಮಾಳಿಗೆಯೊಳಗೆ

ಮೂರು ತಿಂಗಳು ಇದ್ದರಂತೆ
ಗುದ್ದಲಿ ಗುರುಶಾಂತಪ್ನೋರು
ಬಂದು ಅಬ್ಬರಿಸಿದಾಗ
'ಹರ' 'ಹರ' ನರ ಮುಟ್ಟಿತೆಂದು
ಎಚ್ಚರಿಸಿದರು. – ಈರುಳ್ಳಿ.

- ಕೊರಳಲ್ಲಿ ರುದ್ರಾಕ್ಷಿ
ಮೈಯೆಲ್ಲಾ ಬೂದಿ
ಕೈಯಲ್ಲಿ ತ್ರಿಶೂಲ
ಶಿವ ತಾನಲ್ಲ. – ಔಡಲಕಾಯಿ.

- ಗುಡಿಯಾಗೆ ಗುಡಿಗುಡಿಸು
ಬಣಿವ್ಯಾಗೆ ಬಡಬಡಿಸು
ಕೆರೆಯಾಗೆ ಕೆಕ್ಕರಿಸು. –ಗಂಟೆ, ನೆರೆಕೋಲು, ಕಪ್ಪೆ.

- ಚಕ್ರವುಂಟು ಗಾಡಿಯಲ್ಲ;
ಗಂಟೆಯುಂಟು ದೇವಾಲಯವಲ್ಲ;
ದೀಪವುಂಟು ಸೂರ್ಯನಲ್ಲ;
ಸವಾರಿ ಮಾಡಬಹುದು ಕುದುರೆಯಲ್ಲ. – ಸೈಕಲ್.

- ಚಿನ್ನದ ಗುಡೀಲಿ ಬೆಳ್ಳಿ ಲಿಂಗ. – ಹಲಸಿನ ತೋಳೆ, ಬೀಜ.

- ಚೋಟುದ್ದದ ಗಣಮರ ಅಂಗೈ ಇಂಬ ದೇವಸ್ಥಾನ. – ಹಣತೆ.

- ತಲೆಯಲ್ಲಿ ಗಂಗೆ ಹೊತ್ತವನ
ಮಾಳಿಗೆಯ ಮನೆಯ ಹೊಕ್ಕವನ
ಕಾಳಸರ್ಪನ ಹೆಡೆಯ ತುಳಿದವನ ಹೆಸರೇನು? – ಗೆದ್ದಲು ಹುಳು.

- ತೇರು ಓಡುತ್ತೆ
ಹೂವು ಬೀಳುತ್ತೆ. –ರಾಗಿಕಲ್ಲು, ಹಸೀಟು.

- ತೂತಿಲ್ಲದ ಒಡವೆ ದೇವರಿಗೂ ಬೇಕು, ದಿಂಡರಿಗೂ ಬೇಕು. – ಕುಂಕುಮ.

- ದೇವರು ಒಳಗೆ ಗಂಧ ಹೊರಗೆ. – ಏಡಿ–ಕುಣಿಮಣ್ಣು.

- ದೆವ್ವನಂಥ ಮುಂಡೆ
  ದೇವರ ಮ್ಯಾಲೆ ಉಚ್ಚೆ ಹುಯ್ಯುತ್ತಾಳೆ. – ತೆಂಗಿನಕಾಯಿ.
- ನಮ್ಮನ್ಯಾಗ್ ಒಂದು ನೊಣ ಮುಟ್ಟದ್ ದೇವ್ರೈತಿ. – ಬೆಂಕಿ.
- ನಮ್ಮನ್ಯಾಗೆ ಒಂದು ನೆಲ ನೆಕ್ಕ ದೇವ್ರೈತಪ್ಪ. – ಕಸಪೊರಕೆ.
- ನಾನು ಎಂದುತಲೆಎತ್ತಿ ಬೆಳೆದೆ
  ನೀನು ಎಂದುತಲೆಬಾಗಿ ಬೆಳೆದೆ
  ಶಿವನಿಗೆ ಅರ್ಪಿತವಾದೆ. –ಸಜ್ಜೆತೆನೆ–ಭತ್ತದತೆನೆ.
- ನಿಮ್ಮತ್ತೆ ಮನೆಗೆ ಹೋದ್ರೆ
  ಚಂದರಗಾವಿ ಹಾಲು ಕಾಯ್ಸಿ
  ಶಿವ ಕೊಟ್ಟ ಕಣ್ಣಿಟ್ಟು
  ದೇವರು ಕೊಟ್ಟ ತೌಟಿಗೆ ಮಡಗಿ
  ಮುರಿದೆ ಮೂರ್ಥಣ್ಣಿಕ್ಕಿದ್ರು. – ಮೆಣಸಿನಕಾಯಿ, ಹುಳ್ಳಿಸಾರು.
- ನೆಲ ಮಾಳಿಗೇಲಿ ಕೂತವ್ನೆ ಗುರುಸಿದ್ಧಯ್ಯ. – ತಿಗಣೆ.
- ಪುಟ್ಟ ಪುಟ್ಟ ದೇವಸ್ಥಾನ
  ಬಗ್ಗಿ ಬಗ್ಗಿ ನಮಸ್ಕಾರ. –ಒಲೆ ಊದುವುದು.
- ಪೊಣರ್ ವೆಂಕಟಯ್ಯ ಉಬ್ಬೆ ಕೃಷ್ಣಯ್ಯ
  ಕೆಂಪಿನ ಬನಾತ್ಲ ಗುರುಲಿಂಗ ದೇವರು. –ಮಿಡತೆ, ಕೂರೆ, ತಿಗಣೆ
- ಬರಿ ಗುಡಿಯಮ್ಮನಿಗೆ ಬಗ್ಗಿಕೊಂಡು ಸಲಾಮು. –ಒಲೆ ಊದುವುದು.
- ಬೆಟ್ಟದ ಮೇಲಿರೊ ದೇವೇಂದ್ರಾಯನಿಗೆ ಎಪ್ಪತ್ತೇಳು ಕಿರೀಟ. – ಪಾಪಾಸುಗಳ್ಳಿ.
- ಬೆಳಗ್ಗೆ ಏಳ್ತದೆ
  ದೇವರ ಪೂಜೆ ಮಾಡ್ತದೆ. – ನವಿಲು.
- ಮಲ್ಲಿಗೆ ಮೊಗ್ಗಿನ ಬೇಲಿವಳಗೆ ಮಾದೇವ ಮಲಗ್ಯವನೆ. – ನಾಲಿಗೆ.
- ಮಡಿವಾಳ ಮಾಚಯ್ಯ. – ಕೂರೆ.
- ಮಾಯದ ಕುದುರೆ
  ವಾಸನೆ ನೋಡಬಹುದು ಕಣ್ಣಿಂದ ಕಾಣಬಹುದು

ಹಿಡಿಯಲು ಮಾತ್ರ ಜಗದೀಶ್ವರನಿಂದಲೂ ಸಾಧ್ಯವಿಲ್ಲ
ಈ ಕುದುರೆ ಯಾವುದು? – ಹೊಗೆ.

- ಮೂರು ಕಣ್ಣುಂಟು, ಶಿವನಲ್ಲ;
  ಜುಟ್ಟುಂಟು, ಬ್ರಾಹ್ಮಣನಲ್ಲ;
  ನೀರುಂಟು, ಬಾವಿಯಲ್ಲ. – ತೆಂಗಿನ ಕಾಯಿ.
- ಮೂರು ದೇವರಿಗೆ ಆರುಕಣ್ಣು
  ಮೂರು ಮುಕ್ಕಣ್ಣೇಶ್ವರ ಕಣ್ಣು
  ಯಾವ ದೇವರಿಗೂ ಸಲ್ಲುವ ಹಣ್ಣು. – ತೆಂಗಿನ ಕಾಯಿ.
- ಮೂರು ಕಣ್ಣುಳ್ಳ ಒಂದು ವಸ್ತು
  ಊರೆಲ್ಲ ಸುತ್ತಿ
  ದೇವರ ಮುಂದೆ ಬಂದು
  ತಲೆ ಕೆಚ್ಕೊಳ್ತದೆ. – ತೆಂಗಿನ ಕಾಯಿ.
- ಮೂರು ಕಣ್ಣಿನ ಆಕಾರ
  ಮೇಲೆ ಜುಟ್ಟಿನ ಸಿಂಗಾರ
  ಒಳಗೆ ನೀರಿನ ಆಧಾರ
  ಎಲ್ಲ ದೇವರ ಜತೆಗಾರ
  ಅದ ಬಡಿದರೂ ಬಲುಧೀರ. – ತೆಂಗಿನ ಕಾಯಿ.
- ಮೈಸೂರು ಉರಿಕಾತಿ ಮಂಚಕಾರ ಮುದ್ದಣ್ಣ ಮುಟ್ಯಾಡಿ
  ಪಾಲಿನವರು ತಿಕ ತೊಳೆದ ನೀರ
  ನಮ್ಮ ಮನೆ ದೇವರಿಗೆ ಎಡೆ ಮಾಡ್ತೀವಿ. – ಒಳಕಲ್ಲು ತೊಳೆದ ನೀರು.
- ಮೈಯೆಲ್ಲಾ ವಿಭೂತಿ
  ಕೊರ್ಳಾಗೆ ರುದ್ರಾಕ್ಷಿ. – ಔಡಲ ಕಾಯಿ.
- ಮೈಯೆಲ್ಲ ಬೂದಿ
  ಕಂಕುಳಲ್ಲಿ ಕಾಮಾಕ್ಷಿ
  ತಲೆ ಮೇಲೆ ರುದಾಕ್ಷಿ. – ಹರಳು ಗಿಡ.
- ರಥ ಓಡುತ್ತೆ

ಕುಂಕುಮ ಚಲ್ಲುತ್ತೆ. – ಬೀಸುವ ಕಲ್ಲು.

- ರುಬ್ಬು ದೋಣಿ ಹಬ್ಬಕ್ಕೆ ಬಂದು
  ದೇವರ ಕೋಣೆಗೆ ತೆವೀತಾ ಹೋಗಿ ಉಚ್ಚೆ ಹೂದ್ಲು. – ತೆಂಗಿನ ಕಾಯಿ.
- ಶರಧಿಯೆ ಎನಗೆ ಮಾತೆ
  ಸುಧಾಕರನೆ ನನಗೆ ಹಿರಿಯಣ್ಣ
  ಲಕ್ಷ್ಮಿಯೆ ನನಗೆ ಸಹೋದರಿ
  ಹರಿಯೆ ನನಗೆ ಭಾವ
  ಈ ನಾಲ್ವರಿದ್ದು ತಿರುಕನ ಕೈಗೆ
  ಸಿಕ್ಕಿ ಬಳಲುವಂತಾಯ್ತು. – ಶಂಖ.
- ಶಿವರಾತ್ರೀಲಿ ಹೋಗೋಣ ಅಂದ್ರೆ ಸೀರೆಯಿಲ್ಲ
  ಉಗಾದೀಲಿ ಮಕ್ಕಳು ಬಿಡೊಲ್ಲ.
  ಶಿವರಾತ್ರೀಲಿ ಬೋಳು; ಯುಗಾದಿಲಿ ಕಾಯಿ – ಅಮಟೆಮರ
- ಶಿವರಾತ್ರಿ ಕಳೀತು
  ಶಿವಾ ಶಿವಾಅಂತ ಹೋಯ್ತು. – ಚಳಿ.
- ಶಿವರಾತ್ರಿ ಹೊತ್ತಿಗೆ
  ಶಿವಲಿಂಗ. – ಮಾವಿನಕಾಯಿ.
- ಸೀಮ್ಗೆಲ್ಲ ಶಿವ ಶಿವ ಅಂತ ಬಂತು. – ಶಿವರಾತ್ರಿ.
- ಸುಬ್ರಗಟ್ಟಿ ನಿಮ್ಮ ಹಬ್ಬಕ್ಕೆ ಬಂದು
  ನಿನ್ನ ದೇವರ ತಲೆ ಮೇಲೆ ಉಚ್ಚೆ ಹುಯ್ತು. – ತೆಂಗಿನ ಕಾಯಿ.
- ಹರ್‌ಕಟ್ಟು ದೇವಸ್ಥಾನಕ್ಕೆ ಹದಿನಾರು ಬಾಗಿಲು. – ದರಗನ ಜಲ್ಲೆ.
- ಹುಗ್ಗಿ ದೇವಸ್ಥಾನಕ್ಕೆ ಬಗ್ಗಿ ಬಗ್ಗಿ ಸಲಾಮು. – ಒಲೆ ಉದುವುದು.
- ಹಂಗ್ಯಾಕೆ ಹೋಗ್ತಿ ಅಡ್ಡ ನೀನ್ ದಡ್ಡ
  ಅಲ್ಲಿ ಐತೆಕಂಚಿನ ಗುಡ್ಡ
  ಬ್ರಹ್ಮ ವಿಷ್ಣು ಈಶ್ವರಯಾರು
  ಹತ್ತಲಾರದೆ ಹೋದ್ರು ಆಗುಡ್ಡ. – ಸಂಸಾರ ಕುರಿತು.

- ಹೊತ್ತು ಮಾರುವುದಲ್ಲ ತಕ್ಕಡೀಲಿ ತೂಗುವುದಲ್ಲ
  ಅದಿಲ್ಲದೆ ನಮ್ಮನೆಗೆ ದೇವರು ಬರೋದಿಲ್ಲ. – ಸಗಣಿ.
- ಹೊದಿಕೆ ಹೊದಿಸಿದರೆ ಹೊದಿದ ದೇವರು
  ನಾಮ ಹಚ್ಚಿದರೆ ನಿಲ್ಲದ ದೇವರು. – ಬೆಂಕಿ, ನೀರು.

## ನುಡಿಗಟ್ಟು

"ಸಾಮಾನ್ಯವಾಗಿ ನುಡಿಗಟ್ಟುಗಳಿಲ್ಲದ ಭಾಷೆಯಿಲ್ಲ; ನುಡಿಗಟ್ಟುಗಳನ್ನು ಬಳಸದ ಜನರಿಲ್ಲ"[9]

ನುಡಿಗಟ್ಟು ನುಡಿ+ಕಟ್ಟು ನುಡಿಗಟ್ಟಾಗಿದೆ. ನುಡಿ ಎಂದರೆ ಮಾತು ಹೇಳು ಎಂಬರ್ಥ ವಿದ್ದು, ಕಟ್ಟು ಎಂಬುದಕ್ಕೆ ಹೊರೆಯನ್ನು ಕಟ್ಟುವ ಹಗ್ಗ ಎಂಬ ಅರ್ಥವಿದ್ದು, ಅಂದರೆ ಆಡುವ ನುಡಿ, ಮಾತು, ಹೇಳುವ ನುಡಿ, ಮಾತು ಸಡಿಲವಾಗದಂತೆ ಬಿಗಿಯಾಗಿ ಕಟ್ಟಿರುವ ಕಟ್ಟು(ಹಗ್ಗ) ಎಂದು ಅರ್ಥವಾಗುತ್ತದೆ.

ಪಡೆನುಡಿ ಪಡೆ+ನುಡಿ=ಪಡೆನುಡಿ ಪಡೆ ಎನ್ನುವುದಕ್ಕೆ ಸೈನ್ಯ, ಸಮೂಹ ಎನ್ನುವ ಅರ್ಥವಿರುವುದರಿಂದ ಪಡೆನುಡಿ ಎಂದರೆ ಸಾಮೂಹಿಕವಾದ ಸಂವಹನ ಎಂದು ಅರ್ಥ ವಾಗುತ್ತದೆ. ಸಮಸ್ತರ ಜೀವನಾನುಭವದಿಂದ ಮೂಡಿ ಬಂದಿರುವುದಾಗಿದ್ದು ರೂಢಿಯ, ವಾಡಿಕೆಯ ಮಾತು ಎಂಬರ್ಥವು ಬರುತ್ತದೆ. 'ಪಡೆನುಡಿಗಳು ಅಥವಾ ನುಡಿಗಟ್ಟುಗಳು ಹತ್ತು ಸಮಸ್ತರ ಜೀವನಾನುಭವದ ಮೂಸೆಯಲ್ಲಿ ಮೂಡಿ ಬಂದ ಬಂಗಾರದ ತುಣುಕುಗಳು' ನುಡಿಗಟ್ಟುಗಳಿಗೆ ಪಡೆನುಡಿಗಳು ಎಂಬ ಪರ್ಯಾಯನಾಮ ಇರುವುದರಿಂದ ಇವುಗಳ ಜನಕರು ನಾಡಿನ ಹತ್ತು ಸಮಸ್ತರು ಎಂದು ಹೇಳಬಹುದು. ನುಡಿಗಟ್ಟುಗಳು ಹೆಚ್ಚಿನದಾಗಿ ಗ್ರಾಮೀಣ ರಿಂದಲೇ ಹುಟ್ಟಿಕೊಂಡಿದ್ದಾಗಿದ್ದು ನಾಗರೀಕತೆ ಬೆಳೆದಂತೆ ಹೊಸಹೊಸ ರೂಪವನ್ನು ತಾಳುತ್ತಾ ಸಾಗಿದೆ ನುಡಿಗಟ್ಟುಗಳು ಸಮಾಜದ, ಸಂಸ್ಕೃತಿಯ ಸಹಸ್ರಮುಖಗಳ ವಿಶ್ವರೂಪದ ದರ್ಶನ ಮಾಡಿಸುತ್ತದೆ.

ಇಲ್ಲಿ ಧಾರ್ಮಿಕ ವಿಚಾರಗಳಾದ ದೇವರು, ದೇವಾಲಯಗಳಿಗೆ ಸಂಬಂಧಿಸಿದಂತಹ ನುಡಿಗಟುಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ.

(**ನು**=ನುಡಿಗಟ್ಟು, **ಪ್ರ**=ಪ್ರಯೋಗ, **ಗಾ**=ಗಾದೆ,)

- **ನು**: ಕೊಂಚ ದೇವರಾಗು.

ಸ್ವಲ್ಪ ಸುಮ್ಮನಿರು, ಬಾಯಿ ಬಿಡದೆ ಮೌನದಿಂದಿರು. ದೇವರು ಕಲ್ಲಿನದ್ದೋ, ಲೋಹದ್ದೋ ವಿಗ್ರಹರೂಪದಲ್ಲಿ ಇರುತ್ತದೆ. ಅದಕ್ಕೆ ಮಾತನಾಡುವ ಶಕ್ತಿ ಇರುವುದಿಲ್ಲ. ಸುಮ್ಮನೆ ಇರುತ್ತದೆ. ಆ ಹಿನ್ನೆಲೆ ಈ ನುಡಿಗಟ್ಟಿಗೆ ಮೂಲ.

**ಪ್ರ:** ನ್ಯಾಯ ತೀರ್ಮಾನ ಮಾಡುವಾಗ ಯಾರು ಏನೇ ಮಾತನಾಡಿದರು ನೀನು ಕೊಂಚ ದೇವರಾಗು.

- **ನು:** ಗುಡಿಗುಂಡಾರ ಹಾಳಾಗು.

  ಮನೆಮಠ ನಾಶವಾಗು, ಅಂಗಡಿ ಮುಂಗಟ್ಟುಗಳು ನಾಶವಾಗು

  **ಪ್ರ:** ಕೆಟ್ಟವರಿಂದ ಗುಡಿಗುಂಡಾರ ಹಾಳಾಗ್ತವೇ ವಿನಹ ಉದ್ಧಾರ ಆಗಲ್ಲ.

- **ನು:** ದೇಗುಲದಿಂದ ಬರು.

  ದೂರದಿಂದ ಬರು, ಯಾತ್ರೆ ಇಂದ ಬರು (ದೇಗುಲ<ದೇವಕುಲ=ದೇವಸ್ಥಾನ, ಸ್ವರ್ಗ)

  **ಪ್ರ:** ದೂರದ ಊರಿನ ದೇವಾಲಯಕ್ಕೆ ಹೋದವನು ಆ ದೇಗುಲದಿಂದ ಬರಬೇಕಾದರೆ ಸಾಕಷ್ಟು ಸಮಯವಾಗುತ್ತದೆ.

- **ನು:** ತೇರಾಗು.

  ರಥೋತ್ಸವ ಜರುಗು (ತೇರು–ರಥ)

  **ಗಾ:** ತೇರಾದ ಮೇಲೆ ಜಾತ್ರೆಗೆ ಹೋಗಬಾರ್ದು

  ಧಾರೆಯಾದ ಮೇಲೆ ಮದುವೆಗೆ ಹೋಗಬಾರ್ದು.

- **ನು:** ದೇವರಾಗು.

  ಮಾತಾಡದಿರು, ಮೌನದಿಂದ ಕುಳಿತಿರು.

  **ಪ್ರ:** ಎಲ್ಲರೂ ಕೊಂಚ ದೇವರಾಗಿ, ಗೌಡರೊಬ್ಬರು ಮಾತಾಡಲಿ.

- **ನು:** ದೇವರು ಕಣ್ಣು ಬಿಡು.

  ಅನುಗ್ರಹಿಸು, ಕೃಪೆ ತೋರು.

  **ಪ್ರ:** ದೇವರು ಕಣ್ಣು ಬಿಟ್ಟ ಕಾಯಿಲೆ ವಾಸಿಯಾಯಿತು, ಎಲ್ಲ ಸರಿ ಹೋಯ್ತು.

- **ನು:** ದೇವರು ಕೊಟ್ಟದ್ದನ್ನು ತಿನ್ನು.

  ಏನಿದೆಯೋ ಅದನ್ನು ತಿನ್ನು, ಕೈಗೆಟುಕದನ್ನು ಬಯಸದಿರು.

  **ಪ್ರ:** ದೇವರು ಕೊಟ್ಟದ್ದನ್ನು ತಿಂದು, ನೆಮ್ಮದಿಯಿಂದ ಬದುಕೋದನ್ನ ಕಲಿ.

- **ನು:** ದೇವರು ಬಂದಂತಾಗು.

ಅನುಗ್ರಹವಾಗು, ಕಷ್ಟ ಪರಿಹಾರವಾಗು.

**ಪ್ರ:** ನೀವು ಬಂದದ್ದು ದೇವರು ಬಂದಂತಾಯ್ತು ಬದುಕಿಕೊಂಡೆ.

- **ನು:** ದೇವರೇ ಶಿವನೇ ಎನ್ನು.

ಸಂಕಟದಿಂದ ನರಳು, ಅಯ್ಯೋ ದೇವರೆ ಅನ್ನು

**ಪ್ರ:** ನಾನೇ ದೇವರೇ ಶಿವನೇ ಅನ್ನುವಾಗ, ಇನ್ನೊಬ್ಬರಿಗೆ ಹೇಗೆ ಸಹಾಯ ಮಾಡಲಿ?

- **ನು:** ದೇವಿ ಹಾಕು.

ತೋಡಿ ಹಾಕು, ಬಾಚಿ ಹಾಕು. (ದೇವು=ತೋಡು, ಬಾಚು) ಎತ್ತುಡಿ (ಎತ್ತುವ ಬಲೆ)ಯಲ್ಲಿ ನೀರಿನಲ್ಲಿರುವ ಮೀನನ್ನು ಬಾಚಿಕೊಳ್ಳುವುದಕ್ಕೆ ದೇವು ಎನ್ನುತ್ತಾರೆ. ಹಾಗೆಯೇ ಎಸರಿನಲ್ಲಿ(ಸಾಂಬಾರು)ರುವ ಕಾಯಿಪಲ್ಲೆ, ಕಾಳು ಅಥವಾ ಮಾಂಸದ ತುಂಡುಗಳನ್ನು ಸೌಟಿನಲ್ಲಿ ದೋಚಿಕೊಳ್ಳುವುದಕ್ಕೆ ದೇವು ಎನ್ನುತ್ತಾರೆ. ಈ ನುಡಿಗಟ್ಟಿಗೆ ಅದು ಮೂಲ.

**ಪ್ರ:** ಮುಂದುಣ್ಣೋರ್ಗೆಲ್ಲ ಹಿಂಗೆ ದೇವಿ ದೇವಿ ಹಾಕಿಬಿಟ್ರೆ, ಹಿಂದುಣ್ಣೋರ ಗತಿ ಏನು?

- **ನು:** ದಿಂಡುರುಳು ಸೇವೆ ಮಾಡು.

ನೆಲದಲ್ಲಿ ಉರುಳಾಡಿ ಬೇಡು, ಅಂಗಲಾಚು.

**ಪ್ರ:** ಎಷ್ಟೇ ದಿಂಡುರುಳು ಸೇವೆ ಮಾಡಿದರು ಬೇಡಿದ ವರ ಮಾತ್ರ ಕೊಡ್ಲಿಲ್ಲ.

- **ನು:** ದೆಂಗಿ ದೇವರು ಮಾಡು.

ನುಂಗಿ ನೀರು ಕುಡಿ, ತಿಂದು ತೇಗು. (ದೆಂಗು–ಸಂಭೋಗಿಸು; ದೇವರು ಮಾಡು=ಹಬ್ಬ ಮಾಡು, ಹಬ್ಬದ ಸಡಗರದಲ್ಲಿ ಮುಳುಗು)

**ಪ್ರ:** ಕೆರೆಯ ಪಕ್ಕದ ಆಸ್ತೀನೆಲ್ಲ ದೆಂಗಿ ದೇವರು ಮಾಡಿಬಿಟ್ಟರು.

- **ನು:** ನಡೆಮಡಿ ಮೇಲೆ ಹೋಗು.

ವಿಶೇಷ ಸೌಲಭ್ಯದೊಡನೆ ಸಾಗು, ಮಡಿಯಲ್ಲಿ ಅಡಿ ಇಡು. (ದೇವರ ಉತ್ಸವಗಳು ಆಗುವಾಗ, ಮಡೆಗಡಿಗೆ ಹೊರುವ ಪೂಜಾರಿ, ಕೊಂಡ ಹಾಯಲು ಬಾಯಿಬೀಗ ಚುಚ್ಚಿಸಿಕೊಂಡವರು ಹಾದು ಹೋಗಲು ಅಗಸರು ಮಡಿ ಬಟ್ಟೆಯನ್ನು ಹಾಸುತ್ತಾ ಹೋಗುತ್ತಾರೆ ಅದಕ್ಕೆ ನಡೆಮಡಿ ಎಂದು ಹೆಸರು. ನಡೆಮಡಿಯನ್ನು ಹಾಸದಿದ್ದರೆ ಅವರು ಬರಿ ನೆಲದ ಮೇಲೆ ಕಾಲಿಡುವುದಿಲ್ಲ). ಆ ಆಚರಣೆಯ ಮೂಲದ್ದು ಈ ನುಡಿಗಟ್ಟು.

**ಪ್ರ:** ಅಮ್ಮನೋರು ನಡೆಮಡಿ ಮೇಲೆ ಹೋಗಬೇಕೇನೋ, ಎಲ್ಲರ ಜೊತೆ ಹೋಗದೆ?

- **ನು:** ಪಟ್ಲದಮ್ಮನ ಜಾತ್ರೆಗೆ ಪಟಾಲಮ್ಮೇ ಸೇರು.
  ಗ್ರಾಮದೇವತೆ ಹಬ್ಬಕ್ಕೆ ಅಧಿಕ ಜನ ಸೇರು. (ಪಟ್ಲದಮ್ಮ<ಪಟ್ಟಣದ+ಅಮ್ಮ=ಗ್ರಾಮದೇವತೆ)
  **ಪ್ರ:** ಪಟ್ಲದಮ್ಮನ ಜಾತ್ರೆಗೆ ನಮ್ಮ ವಂಶದ ಪಟಾಲಮ್ಮೇ ಬಂದು ಜಮಾಯಿಸಿದೆ.
- **ನು:** ಪೂಜೆ ಮಾಡು.
  ಅವಮಾನ ಮಾಡು, ತಕ್ಕ ಶಾಸ್ತಿ ಮಾಡು.
  **ಪ್ರ:** ಕಳ್ಳನಿಗೆ ಇವತ್ತು ಸರಿಯಾಗಿ ಪೂಜೆ ಮಾಡಿ ಬಂದಿದ್ದೀನಿ.
- **ನು:** ಮಣೇವು ಹಾಕು.
  ದೇವರ ಸೇವೆ ಮಾಡು. (ಮಣೇವು<ಮಣಿಹ=ನಮಸ್ಕಾರ)
  (ಸಾಮಾನ್ಯವಾಗಿ ವಿಷ್ಣು ಭಕ್ತರಾದ 'ದಾಸಯ್ಯಗಳು' ಶಿವಭಕ್ತರಾದ 'ಗೊರವಯ್ಯಗಳು' ಹಾಸಿದ ಬಟ್ಟೆಯ ಮೇಲೆ ಜನರು ತಂದು ಸುರಿದಿರುವ ಬಾಳೇ ಹಣ್ಣು, ಹಲಸಿನ ತೋಳೆ ಬೆಲ್ಲದಿಂದೊಡಗೂಡಿದ ರಸಾಯನವನ್ನು ಕೈಯಲ್ಲಿ ಮುಟ್ಟದೆ ಬಾಯಿ ಹಾಕಿ ಗಬಗಬನೆ ತಿನ್ನುತ್ತಾರೆ. ಮೈದುಂಬಿದವರಂತೆ ದೇವರಿಗೆ ಪರಾಕು ಹೇಳುತ್ತಾ ಮಂಡಿಯೂರಿ, ದೇವರ ಪ್ರಸಾದವಾದ ಆ ರಸಾಯನವನ್ನು ತಿನ್ನುವುದಕ್ಕೆ ಮಣೇವು ಹಾಕುವುದು ಎನ್ನುತ್ತಾರೆ).
  **ಪ್ರ:** ಮಣೇವು ಹಾಕಿದಾಗ ರಾಶಿ ರಸಾಯನವನ್ನು ದಾಸಯ್ಯಗಳು ಬರಿದು ಮಾಡ್ತಾರಲ್ಲ ಅವರ ಹೊಟ್ಟೇಲಿ ಏನ್ ದೆವ್ವ ಕುಂತೈತ?
- **ನು:** ಮುಡಿಪಿಡು
  ದೇವರ ಹೇಸರಲ್ಲಿ ಕಾದಿರಿಸು. (ಮುಡುಪು=ಮೀಸಲು)
  **ಪ್ರ:** ದೇವರಿಗೆ ಮುಡುಪಿಟ್ಟದ್ದನ್ನೆಲ್ಲ, ಆ ದೇವಸ್ಥಾನಕ್ಕೆ ಕೊಡಬೇಕು.

## ಬೈಗುಳ

**"**ಯಾವುದೇ ವಸ್ತು/ಸಂಗತಿ/ವ್ಯಕ್ತಿಯನ್ನು ತೆಗಳುವುದಕ್ಕಾಗಿ/ನೋಯಿಸುವುದಕ್ಕಾಗಿ/ಕೇಡು ತಟ್ಟಲೆಂದು ಶಪಿಸುವುದಕ್ಕಾಗಿ ಆಡುವ ನುಡಿಯನ್ನು ಬೈಗುಳವೆಂದು ಕರೆಯುತ್ತಾರೆ**"**[10]

'ಬಯ್' ಎಂಬ ಪದಕ್ಕೆ ತೆಗಳು, ಮೂದಲಿಸು, ಕೆಟ್ಟ ಮಾತನ್ನಾಡು, ಒರಟಾಗಿ ಹೇಳು ಎಂದು, 'ಗಳ್' ಎಂಬ ಪದಕ್ಕೆ 'ಈ ಬಗೆಯಲ್ಲಿರುವುದು' ಎಂಬ ಅರ್ಥವುಳ್ಳ ಪದ ಸೇರಿ 'ಬಯ್ಗುಳ್' ಎಂಬ ಪದ ರೂಪುಗೊಂಡಿದೆ. ಬಯ್ಗುಳ, ಬಯ್ಗಳು, ಬಯಿಗೂಳ, ಬಯ್ಗುಳು,

ಬಯಿಗುಳ್, ಬೈಗುಳ ಮತ್ತು ಬೈಯ್ಗುಳ ಎಂಬ ರೂಪಗಳು ಜನಪದರ ಉಚ್ಚಾರಣೆಯಲ್ಲಿ ಬಳಕೆಯಲ್ಲಿದೆ.

"ಬೈಗುಳ ಪದಕ್ಕೆ ಕಿಟ್ಟೆಲ್ ಕೋಶದಲ್ಲಿ ಶಾಪ, ಆಕ್ರೋಶ, ಆಕ್ಷೇಪ, ಕ್ಷಾರಣೆ, ಸೋತ್ಪ್ರಸ, ಸೋಪಹಾಸ ಇತ್ಯಾದಿ ಅರ್ಥಗಳನ್ನು ಕೊಟ್ಟಿದೆ."[11]

ಮಾನವನಿಗೆ ಕೋಪಬಂದಾಗ ಅದಕ್ಕೆ ಕಾರಣರಾದವರನ್ನು ದೂಷಿಸಲು, ನಿಂದಿಸಲು, ಆಕ್ರೋಶ ವ್ಯಕ್ತಪಡಿಸಲು ಬಳಸುವ ಶಬ್ದಗಳೇ ಬೈಗುಳಗಳಾಗಿವೆ. ಇವು ಜನಪದರ ಬದುಕಿನ ಅವಿಭಾಜ್ಯ ಅಂಗವಾಗಿ ಬೆಳೆದು ಬಂದಿವೆ. ಬೈಗುಳಗಳ ವ್ಯಾಪ್ತಿ ಗುರುತಿಸುವುದು ಕಷ್ಟಸಾಧ್ಯ. ಜೀವನದ ನಾನಾ ಸಂದರ್ಭಗಳಲ್ಲಿ, ಸನ್ನಿವೇಶಗಳಲ್ಲಿ ಗಂಡು ಹೆಣ್ಣೆಂಬ ಭೇದವಿಲ್ಲದೆ ಬದುಕಿನುದ್ದಕ್ಕೂ ಹಾಸುಹೊಕ್ಕಾಗಿ ಬೆರೆತು ಹೋಗಿದೆ. ಬೈಗುಳ ಕೂಡ ಒಂದು ಕಲೆ. ಸಹಜವಾಗಿ ಬೈಗುಳ ಗಂಡಸರಿಗಿಂತ ಹೆಂಗಸರಲ್ಲಿ ಹೆಚ್ಚು ಕಂಡು ಬರುತ್ತದೆ. ಹೆಂಗಸರ ಆಂತರ್ಯದ ದುಮ್ಮಾನಗಳ ಅನಾವರಣವು ಇಲ್ಲಿ ಆಗುತ್ತದೆ. ಬೈಗುಳ ವಿಶ್ವವ್ಯಾಪಿಯಲ್ಲಿ ಬರುವಂತಹುದು.

ಬೈಗುಳಕ್ಕೆ ಇಂತಹದೆ ವಸ್ತು ವಿಷಯವಿಲ್ಲ. ಅಂತೆಯೇ ದೇವರು, ದೇವಾಲಯ, ಗುಡಿಗಳು, ಪೂಜಾರಿ, ಭಕ್ತರು, ಪೂಜಾ ಸಾಮಾಗ್ರಿಗಳನ್ನು ಬಳಸಿಕೊಂಡು ಬೈಗುಳಗಳು ಹುಟ್ಟಿಕೊಂಡಿರುವುದು ಕಂಡುಬಂದಿದೆ. ಕೆಲವುನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

**ಉರ್ಮಾರಿ :** *'ಬಹಳ ಸಿಟ್ಟು ಸಿಡುಕಿನ ನಡೆನುಡಿಗಳಿಂದ ಎಲ್ಲರನ್ನು ಗೋಳು ಹುಯ್ದುಕೊಳ್ಳುವ ಹೆಂಗಸು'*

ಹಳ್ಳಿಗರು ಮಾರಿ ದೇವತೆಯನ್ನು ಒಲಿದರೆ ಕಾಪಾಡುವ, ಮುನಿದರೆ ಕೊಲ್ಲುವ ಹಾಗೂ ಬಹಳ ಕೋಪದಿಂದ ಕೂಡಿರುವ ತಾಯಿ ಎಂದು ನಂಬಿದ್ದಾರೆ. 'ಉರ್ಮಾರಿ'ಎಂಬ ಪದದಲ್ಲಿ 'ಉರಿಯುವ+ಮಾರಿ' ಎಂಬ ಎರಡು ಪದಗಳಿವೆ. ಗ್ರಾಮೀಣರ ಸಂಪ್ರದಾಯಾಚರಣೆಗಳಲ್ಲಿ ಹೆಚ್ಚುಕಡಿಮೆಯಾದರೆ ಅಥವಾ ಮುಟ್ಟು ತಟ್ಟು ಉಂಟಾದಲ್ಲಿ ಉರಿಮಾರಿಯು ಜನಗಳಿಗೆ ಕಾಲರ, ಪ್ಲೇಗ್, ದಡಾರ, ಸಿಡುಬು ರೋಗಗಳನ್ನು ಹರಡಿ ಒಟ್ಟಿಗೆ ಎಲ್ಲರನ್ನು ಬಲಿ ತೆಗೆದು ಕೊಳ್ಳುತ್ತಾಳೆ ಎಂಬ ಭಯ ಜನಮಾನಸದಲ್ಲಿದೆ. ಮಾರಿ ದೇವತೆಯ ವ್ಯಕ್ತಿತ್ವವನ್ನು ಒಂದು ರೂಪಕವನ್ನಾಗಿ ಮಾಡಿಕೊಂಡು ಈ ಬೈಗುಳವನ್ನು ಹುಟ್ಟುಹಾಕಿದ್ದಾರೆ.

ಊರಿನ+ಮಾರಿ=ಉರ್ಮಾರಿ. ಊರನ್ನು ಕಾಪಾಡುವ, ಸಂರಕ್ಷಿಸುವ ದೇವಿ. ಆ ದೇವರಲ್ಲೂ ಜನಪದರು ಅಂತರವನ್ನು ಕಾಯ್ದು ಕೊಂಡು ಬಂದಿರುವುದು ಮನವರಿಕೆಯಾಗುತ್ತದೆ. 'ಹಾದಿಲಿ ಹೋಗೋ ಮಾರಿನ ಊರೊಳಗೆ ಕರದಂತೆ' ಎಂಬ ಗಾದೆ ಇದನ್ನು ಸ್ಪಷ್ಟ ಪಡಿಸುತ್ತದೆ.

**ಬಸವಿ :** *'ಸಮಾಜದಲ್ಲಿ ಯಾರನ್ನು ಲೆಕ್ಕಿಸದೆ, ಯಾರ ಅಂಕೆಗೂ ಒಳಪಡದೆ ಸೊಕ್ಕಿನಿಂದ ತನ್ನ ಮನ ಬಂದಂತೆ ನಡೆದುಕೊಳ್ಳುವ ಹೆಂಗಸು'.*

ಗ್ರಾಮೀಣ ಜನ ಸಮುದಾಯದಲ್ಲಿ ಗಂಡು ಕರುವಿನ ಬುಜದಲ್ಲಿ ಸ್ವಲ್ಪ ವಿಶೇಷವಾಗಿ ಉಬ್ಬಿದಂತೆ ಕಂಡುಬರುವಂತಹ ಕರುವನ್ನು 'ಬಸವನನ್ನು ಬಿಡುವ' ಆಚರಣೆಯಿದೆ. ಕರುವಿಗೆ ಮೂಗುದಾರ ಹಾಕದೆ ದೇವರ ಹೆಸರಿನಲ್ಲಿ ಬೀದಿಯಲ್ಲಿ ಬಿಡುತ್ತಿದ್ದರು. ಇಂತಹ ದನವನ್ನು ಬಸವನೆಂದು ಕರೆಯುತ್ತಾರೆ. ಇದು ಈಶ್ವರನಿಗೆ ವಾಹನವೆಂಬ ನಂಬಿಕೆ ಜನಪದರ ಜನ ಮನದಲ್ಲಿದೆ. ಗ್ರಾಮದ ಹೊಲಗದ್ದೆ, ತೋಟಗಳಲ್ಲಿ ಹಾಗೂ ಬೀದಿ ಬೀದಿಯಲ್ಲಿ ಅಡ್ಡಾಡಿ ಮೇವು ಸಿಕ್ಕಲ್ಲೆಲ್ಲಾ ಬಾಯಾಡಿಸಿ ಗಟ್ಟಿಮುಟ್ಟಾಗಿ ಬೆಳೆಯುವ ಬಸವನನ್ನೇ ರೂಪಕವನ್ನಾಗಿ ಮಾಡಿ 'ಬಸವ' ಎಂಬ ಪದಕ್ಕೆ 'ಇ' ಎಂಬ ಸ್ವರವನ್ನು ಸೇರಿಸಿ 'ಬಸವಿ' ಎಂಬ ಪದವನ್ನು ರೂಪಿಸಿಕೊಂಡು ಹೆಣ್ಣನ್ನು ನಿಂದಿಸುವುದಕ್ಕಾಗಿ ಬಳಸುತ್ತಾರೆ ಇದೇ ರೀತಿಯಲ್ಲಿ 'ಊರ್ ಬಸವಿ' ಎಂದು ಆರೋಪಿಸಿ ಬಯ್ಯುವ ಬೈಗುಳಗಳು ಬಳಕೆಯಲ್ಲಿವೆ.

'ಬಸವಿ' ಎಂದರೆ ಸ್ವತಂತ್ರ ಬಯಸುವ ಹೆಣ್ಣು. ಸಮಾಜದ ನಿಯಮ, ನಿರ್ಬಂಧಗಳನ್ನು ಉಲ್ಲಂಘಿಸುವ ಹೆಣ್ಣಾಗಿ ಈಕೆ ಪ್ರತಿಬಿಂಬಿಸಲ್ಪಟ್ಟಿದ್ದಾಳೆ. ಅದಕ್ಕೆ ಹಲವಾರು ಕಾರಣಗಳಿರುವುದನ್ನು ಯಾರು ಅಲ್ಲಗಳೆಯುವಂತಿಲ್ಲ.

ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಮೇಲು-ಕೀಳು ಎಂಬ ಜಾತಿ ಮೆಟ್ಟಿಲುಗಳಿಂದ ಕೂಡಿರುವ ಜನ ಸಮುದಾಯದಲ್ಲಿ ಕೆಳಜಾತಿ ಹಾಗೂ ಬಡತನದಿಂದ ಜೀವನ ಸಾಗಿಸುತ್ತಿದ್ದ ಜನರು ತಮಗೆ ಕಾಡುತ್ತಿರುವ ಸಾವು ನೋವುಗಳಿಂದ, ರೋಗರುಜಿನಗಳಿಂದ ಪಾರಾಗಲು ದೇವರ ಹೆಸರಿನಲ್ಲಿ ಹರಕೆಯನ್ನು ಕಟ್ಟಿಕೊಂಡು, ಮೈನೆರೆಯದ ಚಿಕ್ಕವಯಸ್ಸಿನ ತಮ್ಮ ಹೆಣ್ಣು ಮಕ್ಕಳನ್ನು ದೇವಾಲಯದ ಊಳಿಗಕ್ಕಾಗಿ ಮೀಸಲು ಬಿಡುತ್ತಿದ್ದರು. ಇದನ್ನು 'ಬಸವಿ' ಬಿಡುವುದು ಎಂದು ಕರೆಯುತ್ತಿದ್ದರು. ಇದು ಒಂದು ಆಚರಣೆಯು ಆಗಿತ್ತು. ಅಲ್ಲದೆ ಹೀಗೆ ಬಸವಿಯಾದವರನ್ನು ಉಳ್ಳವರು ಹಾಗೂ ಮೇಲು ಜಾತಿಯವರು ತಮ್ಮ ಕಾಮದ ತೀಟೆ ತೀರಿಸಿಕೊಳ್ಳಲು ಬಳಸಿಕೊಳ್ಳುತ್ತಿದ್ದರು. ಇದು ಸಮಾಜದಲ್ಲಿನ ಒಂದು ಹೀನಾಯ

ಆಚರಣೆಯಾಗಿದ್ದು, ಇಂದು ಕಾನೂನಿನಲ್ಲಿ ಅದಕ್ಕೆ ಅವಕಾಶ ನೀಡುತ್ತಿಲ್ಲದಿರುವುದು ಹಾಗೂ ಜನರು ಸುಶಿಕ್ಷಿತರಾಗುತ್ತಿರುವುದರಿಂದ ಇಂತಹ ಆಚರಣೆಗಳು ಇಂದು ಕಡಿಮೆಯಾಗಿವೆ. 'ಬಸವಿ' ಆಚರಣೆ ಮೂಢನಂಬಿಕೆಯಿಂದ ಕೂಡಿದೆ. ಮೇಲ್ವರ್ಗದ ಯಾವ ಹೆಣ್ಣುಗಳು 'ಬಸವಿ'ಯರಾದ ನಿದರ್ಶನವಿಲ್ಲ.

**ಬೇವ್ನಟ್ಟಿ ಕಾಳಿ :** '*ತನ್ನ ಬಳಿ ಬೇಡಿ ಬಂದವರಿಗೆ ಒಂದು ಹಿಡಿ ದಿನಸಿಯನ್ನಾಗಲಿ ಇಲ್ಲವೇ ಒಂದು ತುತ್ತು ಅನ್ನವನ್ನಾಗಲಿ ಹಾಕದ ಹಾಗೂ ಯಾರೊಬ್ಬರ ಸಂಕಟಕ್ಕೂ ಮರುಗದ ಮತ್ತು ನೆರವಾಗದ ಜಿಪುಣತನದ ಹೆಂಗಸು'.*

"ಮಲೆಯ ಮಾದೇಶ್ವರ ಜನಪದ ಮಹಾಕಾವ್ಯದಲ್ಲಿ ಬೇವಿನಹಟ್ಟಿ ಕಾಳಮ್ಮನ ಪಾತ್ರ ಬರುತ್ತದೆ. ಕಡುಬಡತನದ ಬವಣೆಯಲ್ಲಿ ತೊಳಲುತ್ತಿದ್ದ ಕಾಳಮ್ಮನಿಗೆ ಏಳು ಮಲೆಯ ದೇವನಾದ ಮಾದಪ್ಪನು ಕರುಣೆ ತೋರಿಸಿದ್ದರಿಂದ ಸಿರಿವಂತಳಾಗುತ್ತಾಳೆ. ದಿನೇ ದಿನೇ ಸಂಪತ್ತು ಕೂಡಿಬಂದಂತೆಲ್ಲಾ ಅಹಂಕಾರದೊಡನೆ ಜೀನತನ(ಜಿಪುಣತನ)ವೂ ಹೆಚ್ಚಾಗುತ್ತದೆ. ಅವಳ ಸೊಕ್ಕನ್ನು ಅಡಗಿಸಲೆಂದು ಮಾದಪ್ಪನು ಜಂಗಮ ರೂಪವನ್ನು ತಳೆದು ಬೇವ್ನಟ್ಟಿ ಕಾಳಮ್ಮನ ಬಳಿಗೆ ಬಂದು, ತನ್ನ ಎಣ್ಣೆ ಮಜ್ಜನಕ್ಕೆಂದು ಎಳ್ಳನ್ನು ಬೇಡುತ್ತಾನೆ. ಆಗ ಬೇವ್ನಟ್ಟಿ ಕಾಳಮ್ಮಳು "ನೋಡಯ್ಯ ಪರದೇಸಿ ಜಂಗಮ... ನನ್ನ ಮುನ್ನೂರು ಮೂವತ್ತು ಖಂಡ್ಗ ಎಳ್ಳಿನ ರಾಸಿಯೆಲ್ಲಾ ಇಲ್ಲಿ ಬೂದಿರಾಸಿಯಾಗೋದ್ರು ಸರಿಯೇ... ನಾನು ದಾನ ಕೊಡುವಂತ ಮಗಳಲ್ಲ... ದಾನಕ್ಕೆ ಕೈ ಬರೋದಿಲ್ಲ". ಎಂದು ನಿರಾಕರಿಸುತ್ತಾಳೆ. ಜಂಗಮರೂಪಿಯಾದ ಮಾದಪ್ಪನ ಯಾವೊಂದು ಬೇಡಿಕೆಗೂ ಬಗ್ಗದೆ, ಬೆದರಿಕೆಗೂ ಜಗ್ಗದೆ, ಕಟ್ಟಕಡೆಯಲ್ಲಿ ಅವನ ಕೋಪಕ್ಕೆ ಗುರಿಯಾಗಿ ಸಿರಿಸಂಪತ್ತೆಲ್ಲವನ್ನೂ ಕಳೆದುಕೊಂಡು ಅಳಿಯುತ್ತಾಳೆ. ಬೇವ್ನಟ್ಟಿ ಕಾಳಮ್ಮನ ನಡೆನುಡಿಗಳು ಜನಪದರ ಬಾಯಲ್ಲಿ ಹರಿದಾಡಿ, "ಹಠಮಾರಿತನ ಮತ್ತು ಜಿಪುಣತನಕ್ಕೆ" ಆಕೆಯ ಆಳ್ತನವು ಒಂದು ರೂಪಕವಾಗಿ ಬಳಕೆಗೆ ಬಂದಿದೆ"[12] ಹೆಣ್ಣಿನ ಅತಿಯಾಸೆ ಮತ್ತು ಬೇಜವಾಬ್ದಾರಿ ನಡವಳಿಕೆಯ ಹೆಣ್ಣಾಗಿ ಈಕೆ ಕಂಡುಬರುತ್ತಾಳೆ. ಶ್ರಮಸಂಸ್ಕೃತಿಯಿಂದ ಬಂದ ಸಂಪತ್ತು ಬೇಗನೆ ನಾಶವಾಗುವುದಿಲ್ಲ. ಶ್ರಮವಿಲ್ಲದೆ ಅನಾಯಾಸವಾಗಿ ಗಳಿಸಿದ ಸಂಪತ್ತು ಬಹುಕಾಲ ಉಳಿಯುವುದಿಲ್ಲವೆಂಬ ಆಶಯವು ಇಲ್ಲಿ ಧ್ವನಿತವಾಗಿದೆ. ಹೆಣ್ಣು ಕೆಲವು ನಿರ್ಬಂಧಗಳಿಗೆ ಒಳಪಟ್ಟಿರಬೇಕು. ಅದಿಲ್ಲದೆ ಹೋದರೆ, ಮನಸ್ಸಿಗೆ ಬಂದಂತೆ ನಡೆದು ಕೊಂಡರೆ ಆಗುವ ಅನಾಹುತಗಳಿಗೆಲ್ಲ ಆಕೆಯೇ ಜವಾಬ್ದಾರಿಯುತಳಾಗುತ್ತಾಳೆ.

**ನಿನ್ ಐಸಿರಿ ಮ್ಯಾಲೆ ಅಮ್ಮ ಕುತ್ಕೊಳ :** *'ಶ್ರೀಮಂತಿಕೆ ಹೋಗಿ, ಬಡತನ ಬರುವಂತಾಗಲೆಂದು ಹಾಕುವ ಶಾಪ'*

ಆಸ್ತಿಪಾಸ್ತಿ, ಸಂಪತ್ತು, ಹಣಕಾಸು ಎಂಬ ಅರ್ಥದ **'ಐಶ್ವರ್ಯ'** ಎಂಬ ಸಂಸ್ಕೃತ ಪದವು ಕನ್ನಡದ ಆಡುಭಾಷೆಯಲ್ಲಿ **'ಅಯ್ಸಿರಿ', 'ಐಸಿರಿ'** ಎಂಬ ರೂಪದಲ್ಲಿ ಉಚ್ಚಾರಣೆಗೊಂಡು ಬಳಕೆಯಲ್ಲಿದೆ. **'ಅಮ್ಮ ಕುತ್ಕೊಳ'** ಎಂಬ ಪದ ಕರುನಾಡ ಜನಸಮುದಾಯದ ಊರದೇವತೆ ಮಾರಮ್ಮನ ಕೋಪಕ್ಕೆ ತುತ್ತಾದ ವ್ಯಕ್ತಿಯು, ಅವಳ ಕೆಟ್ಟ ನೋಟಕ್ಕೆ ಗುರಿಯಾಗಿ ಸಿರಿವಂತಿಕೆಯು ಹಾಳಗಲಿ ಎಂಬ ರೂಪಕದಲ್ಲಿ ಬಳಸಿಕೊಳ್ಳಲಾಗಿದೆ. ಲಕ್ಷ್ಮೀ ಚಂಚಲೆ. ಅವಳು ಒಂದೇ ಕಡೆ ಎಂದೂ ನಿಲ್ಲುವುದಿಲ್ಲ. ಹಾಗಾಗಿ ಸಿರಿತನ ಬಂದಾಗ ಹಿಗ್ಗದೆ, ಬಡತನ ಬಂದಾಗ ಕುಗ್ಗದೆ ಸಮಚಿತ್ತದಿಂದಿರ ಬೇಕು. ಅದಿಲ್ಲದೆ ಹೋದಾಗ ನಮ್ಮ ಜೀವನವು ಮಾರಮ್ಮನ ಬದುಕಿನಂತೆ ಛಿದ್ರ ಛಿದ್ರವಾಗುತ್ತದೆ ಎಂಬ ಒಳ್ಳೆ ಆಶಯ ಇಲ್ಲಿದೆ. ಇಲ್ಲಿ ಐಸಿರಿ ಎಂದರೆ ಮನಸ್ಸಿನದು ಮತ್ತು ಮನುಷ್ಯತ್ವದ್ದು ಎರಡೂ ಆಗುತ್ತದೆ. ಮಾರಮ್ಮ ಇಲ್ಲಿ ನೆಪಮಾತ್ರ. ಪ್ರತಿಯೊಂದು ಸಂಪತ್ತಿಗೂ ಒಬ್ಬೊಬ್ಬ ಸಮರ್ಥ ಯಜಮಾನರಿರಬೇಕು ಇಲ್ಲವಾದರೆ ಅದನ್ನು ಬಹುಕಾಲ ಉಳಿಸಿ ಕೊಳ್ಳಲಾಗುವುದಿಲ್ಲ.

## ಐತಿಹ್ಯ

ಐತಿಹ್ಯ ನಿರ್ದಿಷ್ಟ ಸ್ಥಳವೊಂದಕ್ಕೆ ಸಂಬಂಧಪಟ್ಟದ್ದಾಗಿದ್ದು, ಪ್ರಾಚೀನವಾಗಿ ಬೆಳೆದು ವಾಸ್ತವಿಕವಾಗಿರುವ ಘಟನೆಯ ಆಧಾರದ ಮೇಲೆ ಕಾಲ್ಪನಿಕವಾದ ಅಂಶಗಳನ್ನು ಒಳಗೊಂಡು ಬೆಳೆದು ನಿಂತಿರುವ, ಪರಂಪರಾಗತವಾಗಿ ಜನಪದ ನಂಬಿಕೊಂಡು ಬಂದ ಒಂದು ವಿಶೇಷ ಸಂಗತಿ[13] ಗದ್ಯಾತ್ಮಕ ರೂಪದ ಐತಿಹ್ಯಗಳು ಸ್ವರೂಪದಲ್ಲಿ ತುಂಬ ಚಿಕ್ಕವಾಗಿದ್ದು ಒಂದು ಅಥವಾ ಎರಡು ಆಶಯಗಳ ವ್ಯಾಪ್ತಿಯನ್ನಷ್ಟೇ ಒಳಗೊಂಡಿರುತ್ತವೆ. ತಾವು ಹುಟ್ಟಿದ ಪರಿಸರಕ್ಕೆ ಅಂಟಿಕೊಂಡಿದ್ದು, ವ್ಯಕ್ತಿ, ಸ್ಥಳ ಅಥವಾ ಘಟನೆಯೊಂದರ ವಿವರಣೆ ನೀಡುವ ಕಥೆಗಳ ರೂಪದ್ದಾಗಿರತ್ತವೆ. ಸ್ಥಳೀಯ ಐತಿಹ್ಯಗಳಲ್ಲಿ ಸ್ಥಳದೇವತೆ, ಬಲಿ, ಕೌಟುಂಬಿಕ, ಐತಿಹಾಸಿಕ, ಕೆರೆ, ಬಾವಿ, ಕೊಳ, ನಿಸರ್ಗದ ವೈಶಿಷ್ಟ್ಯತೆ, ಊರಿನ ಹೆಸರು ಮುಂತಾದ ಬಗೆಗಳನ್ನು ಕಾಣುತ್ತೇವೆ. ಐತಿಹ್ಯಗಳು ಬಹಳವಾಗಿ ಪವಾಡಸದೃಶ್ಯವಾದ ಅದ್ಭುತ ಅಂಶಗಳನ್ನೇ ವಿವರಿಸಿದರೂ ವಾಸ್ತವಿಕ ಅಂಶದ ತಿರುಳು ಅಲ್ಲಿ ಇದ್ದೇ ಇರುತ್ತದೆ. ಕೆಲವು ಐತಿಹ್ಯಗಳು ಚಿರಂತನವಾಗಿ ಉಳಿದುಕೊಳ್ಳ ಬಹುದು, ಮತ್ತೆಕೆಲವು ಆಧರಿಸಿರುವ ವಸ್ತು ವಿಷಯಗಳು ಕಣ್ಮರೆಯಾಗುವವರೆಗೂ ಉಳಿದು

ಕೊಳ್ಳುತ್ತವಷ್ಟೇ. ಈ ಐತಿಹ್ಯಗಳು ಎಷ್ಟರಮಟ್ಟಿಗೆ ಸತ್ಯ ಎಂದಾಗಲಿ, ಘಟನೆಗಳು ನಡೆದಿರುವ ಕಾಲ ಘಟ್ಟವನ್ನಾಗಲಿ ತೀರ್ಮಾನಿಸುವುದು ಬಹಳ ಕಷ್ಟದ ವಿಷಯವಾಗಿದೆ.

ಕನ್ನಡದಲ್ಲಿ 'ಐತಿಹ್ಯ'ವೆಂಬ ಪದಕ್ಕೆ ಇಂಗ್ಲಿಷ್‌ನ 'Legend' ಎಂಬ ಪದ ಸಂವಾದಿಯಾಗಿ ಬಳಸಲ್ಪಡುತ್ತಿದೆ. 'Legend'ಪದವು ಇಂಗ್ಲೀಷಿಗೆ ಲ್ಯಾಟಿನ್ನಿನ ಕೊಡುಗೆ. ಈಗ ಐತಿಹ್ಯ ಶಬ್ದವು ಸ್ಥಳ/ಘಟನೆ/ವ್ಯಕ್ತಿಗಳ ಬಗ್ಗೆ ಪಾರಂಪರಿಕವಾಗಿ ನಂಬಿರುವ ಸತ್ಯಾಂಶದ ನಿರೂಪಣೆಗಳಿಗೆ ಸಂಬಂಧಿಸಿದಂತೆ ಪ್ರಚಲಿತದಲ್ಲಿದೆ.

**ದೇವಾಲಯ ಸಂಬಂಧಿ ಐತಿಹ್ಯಗಳು**

ಮೈಸೂರು ನಗರದ ದೇವಾಲಯಗಳಿಗೆ ಸಂಬಂಧಿಸಿದಂತೆ ಇರುವ ಕೆಲವು ಐತಿಹ್ಯಗಳನ್ನು ಇಲ್ಲಿ ಪರಿಶೀಲಿಸಲಾಗಿದೆ.

ಮೈಸೂರು ಅರಮನೆಯ ಸಮೀಪ ಪೂರ್ವಕ್ಕಿರುವ ದೊಡ್ಡಕೆರೆ ಅಥವಾ ದೇವರಾಜಸಾಗರದ ಕೋಡಿಯ ಬಳಿ ಕೋಡಿ ಭೈರವೇಶ್ವರ ದೇವಾಲಯವಿದ್ದು, ಕೋಡಿಯ ಬಳಿ ಇರುವುದರಿಂದಾಗಿ ಈ ದೇವಾಲಯಕ್ಕೆ ಕೋಡಿಭೈರವೇಶ್ವರ ಎಂಬ ಹೆಸರು ಪ್ರಚಲಿತವಾಗಿದೆ. ಮೈಸೂರು ಅರಸು ಮನೆತನಕ್ಕೆ ನಿಕಟವಾದ ಸಂಬಂಧವನ್ನು ಹೊಂದಿರುವ ಈ ದೇವಾಲಯಕ್ಕೆ ಐತಿಹಾಸಿಕ ಹಿರಿಮೆಯೊಂದಿಗೆ ಧಾರ್ಮಿಕ ಮಹತ್ವ ಕೂಡ ಇದೆ. ಈ ದೇವಾಲಯ ಪ್ರಾಚೀನವಾದ ದೇವಾಲಯವಾಗಿದೆ. ಈ ದೇವಾಲಯಕ್ಕೆ ಸಂಬಂಧಿಸಿದ ಒಂದು ಐತಿಹ್ಯದ ಪ್ರಕಾರ ಯದುವಂಶದ ಅರಸರ ಮೂಲ ಪುರುಷರಾದ ಯದುರಾಯ ಮತ್ತು ಕೃಷ್ಣರಾಯರು ಇದೇ ದೇಗುಲದ ಪ್ರಾಂಗಣದಲ್ಲಿ ಒಂದು ರಾತ್ರಿಯನ್ನು ಕಳೆದು, ಮೈಸೂರು ಒಡೆಯರ ಮೂಲಪುರುಷರ ಮೊದಲನೆಯ ತಂಗುದಾಣವಾಗಿ ಈ ದೇವಾಲಯ ಮಹತ್ವವನ್ನು ಪಡೆದುಕೊಂಡಿದೆ[14]

ಮುಮ್ಮಡಿ ಕೃಷ್ಣರಾಜ ಒಡೆಯರು 1809ರಲ್ಲಿ ಅರಮನೆಯ ಕೋಟೆಯ ದಕ್ಷಿಣದ ವರಾಹದ್ವಾರದ ಬಳಿ ಇರುವ ಶ್ವೇತವರಹಾಸ್ವಾಮಿ ದೇವಾಲಯವನ್ನು ಕಟ್ಟಿಸಿದರು. ವರಹಾಸ್ವಾಮಿ ವಿಗ್ರಹವು ಶಂಖದ ಬಿಳುಪಿನಿಂದ ಕೂಡಿದ್ದರಿಂದ ಶ್ವೇತವರಹಾಸ್ವಾಮಿ ಎಂಬ ಹೆಸರು ಬಂದಿದೆ. ಈ ದೇವಾಲಯದ ಸ್ಥಾಪನೆಗೊಂದು ಕಥೆಯಿದೆ. "ಒಂದು ದಿನ ರಾತ್ರಿ ಚಿಕ್ಕದೇವರಾಜ ಒಡೆಯರ ಸ್ವಪ್ನದಲ್ಲಿ ವರಹಾಸ್ವಾಮಿ ಕಾಣಿಸಿಕೊಂಡು ತಾನು ತಮಿಳುನಾಡಿನ ಶ್ರೀಮುಷ್ಣಾದಲ್ಲಿ ಇರುವುದಾಗಿಯೂ ತನ್ನನ್ನು ಕರೆದು ತರುವಂತೆಯೂ ಆದೇಶಿಸಿದ. ಆಗ ಚಿಕ್ಕದೇವರಾಜ ಒಡೆಯರು ಶ್ರೀ ಮುಷ್ಣಾಕ್ಕೆ ಹೋಗಿ ಪಂದ್ಯವೊಂದರಲ್ಲಿ ಅಲ್ಲಿಯ ಜಟ್ಟಿಯನ್ನು ಗೆದ್ದು ವರಹಾಮೂರ್ತಿಯನ್ನು ತಂದು ಶ್ರೀರಂಗಪಟ್ಟಣದಲ್ಲಿ ಪ್ರತಿಷ್ಠಾಪಿಸಿ ಅಲ್ಲೊಂದು ದೇವಾಲಯ

ನಿರ್ಮಿಸಿದ್ದಾರೆ"[15] ಟಿಪ್ಪುವಿನ ಆಡಳಿತ ಕಾಲದಲ್ಲಿ ಆ ದೇವಾಲಯ ನಾಶವಾಗಿದ್ದರಿಂದ ಆ ದೇವರ ಮೂರ್ತಿಯನ್ನು ಆದಿರಂಗಸ್ವಾಮಿಯ ದೇವಾಲಯಕ್ಕೆ ತಂದು ರಕ್ಷಿಸಲಾಯಿತು. ಟಿಪ್ಪುವಿನ ಕಾಲಾನಂತರ ದಿವಾನ್ ಪೂರ್ಣಯ್ಯನವರು ಮುಮ್ಮಡಿ ಕೃಷ್ಣರಾಜರ ಅಣತಿಯಂತೆ ಅರಮನೆಯ ಕೋಟೆಯೊಳಗೆ ದೇವಾಲಯವನ್ನು ಕಟ್ಟಿಸಿ ರಕ್ಷಿಸಲಾಗಿದ್ದ ವರಹಾಮೂರ್ತಿಯನ್ನು ತಂದು ಪ್ರತಿಷ್ಠಾಪಿಸಿದರು.

ಮೈಸೂರು ಅರಮನೆಯ ಪಶ್ಚಿಮದ್ವಾರದ ಬಳಿ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯವಿದ್ದು, ಮೈಸೂರು ರಾಜ್ಯ ಒಡೆಯರ ಕೈತಪ್ಪಿ ಹೋಗಿದ್ದಾಗ, ರಾಜಮಾತೆ ಲಕ್ಷ್ಮಮ್ಮಣಿಯವರ ಕನಸಿನಲ್ಲಿ ವೆಂಕಟರಮಣನು ಕಾಣಿಸಿಕೊಂಡು "ಬಲಮುರಿಯಲ್ಲಿರುವ ನನ್ನ ವಿಗ್ರಹವನ್ನು ಕೊಂಡೊಯ್ದು ಮೈಸೂರು ಕೋಟೆಯಲ್ಲಿ ಪ್ರತಿಷ್ಠಾಪಿಸು, ನಿನ್ನ ವಂಶಕ್ಕೆ ಮತ್ತೆ ರಾಜ್ಯ ದೊರೆಯುತ್ತದೆ"[16] ಎಂದು ಹೇಳಿದನೆಂದೂ, ಅದರಂತೆ ನಡೆದು ಕೊಳ್ಳಲಾಗಿ ರಾಜ್ಯ ಪನಃ ದೊರೆಯಿತೆಂದು ಈ ದೇವಾಲಯದ ಬಗ್ಗೆ ಇರುವ ಐತಿಹ್ಯ ತಿಳಿಸುತ್ತದೆ

ಮೈಸೂರು ಅರಮನೆಯ ಜಯರಾಮ-ಬಲರಾಮ ಕೋಟೆ ಬಾಗಿಲುಗಳ ನಡುವೆ ಒಂದು ಆಂಜನೇಯ ದೇವಾಲಯವಿದೆ. ಇಲ್ಲಿನ ಆಂಜನೇಯ ವಿಗ್ರಹ ಬೆಳಗೊಳದಲ್ಲಿ ದೊರೆಯಿತೆಂದು ಒಂದು ಐತಿಹ್ಯ ಹೇಳಿದರೆ, ಕಾರಂಜಿಕೆರೆ ಸಮೀಪ ದೊರೆಯಿತೆಂದು ಮತ್ತೊಂದು ಐತಿಹ್ಯ ಹೇಳುತ್ತದೆ. ಇನ್ನೊಂದು ಐತಿಹ್ಯದ ಪ್ರಕಾರ 1915ರಲ್ಲಿ ಕೋಟೆಯನ್ನು ವಿಸ್ತರಿಸಲು ತಯಾರಿನಡೆಸಿದ್ದಾಗ ಈ ಮೂರ್ತಿಯನ್ನು ಸ್ಥಳಾಂತರಿಸ ಹೊರಟಿದ್ದು, ಆಗ ರಾಜಮಾತೆಗೆ ಹನುಮಂತನು ಕನಸಿನಲ್ಲಿ ಕಾಣಿಸಿಕೊಂಡು ಅದನ್ನು ಸ್ಥಳಾಂತರಿಸಬಾರದಾಗಿ ಹೇಳಿದನಂತೆ. ಅದರಂತೆ ನಡೆದುಕೊಂಡು ಅದನ್ನು ಸ್ಥಳಾಂತರಿಸದೆ ಅಲ್ಲಿಯೇ ದೇವಾಲಯವನ್ನು ನಿರ್ಮಿಸಿ ಒಂದೇ ದ್ವಾರದ ಬದಲು ಅದರ ಎಡಬಲಗಳಲ್ಲಿ ಜಯರಾಮ ಮತ್ತು ಬಲರಾಮ ದ್ವಾರಗಳನ್ನು ನಿರ್ಮಿಸಿದರು.[17]

"ಮೈಸೂರಿನ ಚಾಮುಂಡಿಬೆಟ್ಟದ ಮೇಲೆ ಉತ್ತರ ಭಾಗದಲ್ಲಿರುವ ಒಂದು ಬಂಡೆಗೆ 'ಕೋಣನ ಬಂಡೆ', 'ಕೋಣನ ಕೊಟ್ಟಿಗೆ', 'ಕೋಣನ ಅರೆ' ಎಂದು ಕರೆಯುತ್ತಾರೆ. ಇದಕ್ಕೆ ಕಾರಣವೆಂದರೆ ಮಹಿಷಾಸುರ ಈ ಬಂಡೆಗೆ ತನ್ನ ಕೋಣವನ್ನು ಕಟ್ಟುತ್ತಿದ್ದನಂತೆ. ಈ ಬಂಡೆಯ ಮೇಲಿರುವ ಹೆಜ್ಜೆ ಗುರುತುಗಳನ್ನು ಆ ಕೋಣನ ಹೆಜ್ಜೆ ಗುರುತುಗಳೆಂದು ಜನ ಗುರುತಿಸುತ್ತಾರೆ"[18]

ಮೈಸೂರಿನ ಸಮೀಪದಲ್ಲೇ ವೀರನಗೆರೆ ಎಂಬೊಂದು ಸ್ಥಳವಿದೆ. ಈ ಸ್ಥಳಕ್ಕೆ ಈ ಹೆಸರು ಹೇಗೆ ಬಂದಿತೆಂದು ಹೇಳುವ ಒಂದು ಕಥೆ ಹೀಗಿದೆ. "ಮೈಸೂರು ದೊರೆಗೂ ಪಿರಿಯಾಪಟ್ಟಣದ

ವೀರರಾಜನಿಗೂ ಕಾಳಗವಾದಾಗ ಈ ಪ್ರದೇಶದ ಸೇನಾಧಿಕಾರಿಗಳು ತುಂಬ ಶೌರ್ಯದಿಂದ ಹೋರಾಡಿ ಮೈಸೂರು ಅರಸರಿಗೆ ಗೆಲುವು ತಂದು ಕೊಟ್ಟರು. ಮೈಸೂರು ದೊರೆ ತನ್ನ ಪರವಾಗಿ ಮಡಿದ ವೀರರ ನೆನಪಿಗಾಗಿ ಯುದ್ಧನಡೆದ ಸ್ಥಳದಲ್ಲಿ ಅನೇಕ ವೀರಗಲ್ಲುಗಳನ್ನು ನೆಡಸಿದನಂತೆ. ಅನಂತರ ಈ ವೀರಗಲ್ಲುಗಳಲ್ಲಿ ಕೆಲವನ್ನು ಆ ಮೃತ ಸೈನಿಕರ ಬಂಧುಗಳ ಆಶಯದಂತೆ ಅವರವರ ಗ್ರಾಮಗಳಿಗೆ ಸ್ಥಳಾಂತರಿಸಿದರಂತೆ. ಹೆಚ್ಚಿನವು ಇಲ್ಲೇ ಉಳಿದುಕೊಂಡ್ಡದ್ದರಿಂದ ಈ ಸ್ಥಳಕ್ಕೆ ವೀರನಗೆರೆ ಎಂದು ಹೆಸರಾಯಿತಂತೆ"[19]

ಮೈಸೂರು ನಗರದಲ್ಲೇ 'ಕುಂಬಾರ ಕೊಪ್ಪಲು' ಎಂಬ ಬಡಾವಣೆ ಇದೆ ಇದಕ್ಕೆ ಸಂಬಂಧಿಸಿದಂತೆ ಒಂದು ಐತಿಹ್ಯವಿದೆ.

"ಬಹಳ ಹಿಂದೆ ಇಲ್ಲಿ ಜನವಸತಿ ಇರಲಿಲ್ಲ. ಆಗೊಮ್ಮೆ ಕಾಲರಾ ಪಿಡುಗು ಕಾಣಿಸಿಕೊಂಡಾಗ ಜನ ತಾವಿದ್ದ ಸ್ಥಳ ಬಿಟ್ಟು ಬೇರೆ ಕಡೆಗೆ ತಮ್ಮ ವಸತಿ ಬದಲಾಯಿಸಿದರು. ಒಕ್ಕಲಿಗ ಅಣ್ಣತಮ್ಮಂದಿರಾದ ಬೋರಲಿಂಗೇಗೌಡ ಮಂಚೇಗೌಡ ಎಂಬುವರು ಪ್ರತ್ಯೇಕ ಸ್ಥಳಗಳಲ್ಲಿ ತಮ್ಮ ವಸತಿಯನ್ನು ನಿರ್ಮಿಸಿಕೊಂಡರು. ಅವಕ್ಕೆ ಕ್ರಮವಾಗಿ 'ಮಂಚೇಗೌಡನ ಕೊಪ್ಪಲು' ಹಾಗೂ 'ಬೋರಲಿಂಗೇಗೌಡನ ಕೊಪ್ಪಲು' ಎಂದೇ ಹೆಸರಾದವು. (ಕೊಪ್ಪಲು ಎಂದರೆ ವಸತಿ ಪ್ರದೇಶ) ಮಂಚೇಗೌಡನ ಕೊಪ್ಪಲಿಗೆ ಅದೇ ಹೆಸರು ಈಗಲೂ ಇದೆ. ಆದರೆ 'ಬೋರಲಿಂಗೇಗೌಡನ ಕೊಪ್ಪಲಿ'ನಲ್ಲಿ ಬೆಳವಣಿಗೆ ಇಳಿಮುಖವಾಗುತ್ತಿತ್ತು. ಇದನ್ನು ಗಮನಿಸಿದ ದಾಸಯ್ಯನೊಬ್ಬ ಈ ಪ್ರದೇಶದ ಹೆಸರನ್ನು 'ಕುಂಬಾರ ಕೊಪ್ಪಲು' ಎಂದು ಬದಲಾಯಿಸಿ, ಆಗ ಬೆಳವಣಿಗೆ ಚನ್ನಾಗಿ ಆಗುತ್ತದೆ ಎಂದರಂತೆ. ಅದರಂತೆ ಹೆಸರು ಬದಲಾಯಿಸಿದಾಗ ಈ ಗ್ರಾಮದ ಬೆಳವಣಿಗೆ ಚೆನ್ನಾಗಿ ಆಯಿತಂತೆ. ಇದು ಈ ಕುರಿತಾದ ಒಂದು ಐತಿಹ್ಯ.

ಇನ್ನೊಂದು ಐತಿಹ್ಯ:- ಈ ಪ್ರದೇಶದಲ್ಲಿ ಒಳ್ಳೆಯ ಕುಂಬಾರರಿದ್ದರು. ಅವರು ತಯಾರಿಸಿದ ವಸ್ತುಗಳು ಮೈಸೂರು ಸಂಸ್ಥಾನದಲ್ಲೇ ಪ್ರಸಿದ್ಧಿ ಹೊಂದಿದ್ದವು. ಯಾರಾದರೂ 'ಮಡಿಕೆ ಎಲ್ಲಿಯದು? ಎಂದರೆ 'ಬೋರಲಿಂಗೇಗೌಡರ ಕೊಪ್ಪಲಿನ ಕುಂಬಾರರದು ಎಂದು ಜನ ಹೇಳುತ್ತಿದ್ದರು. ಹೀಗೆ ಈ ಸ್ಥಳ ಕುಂಬಾರಿಕೆಗೆ ಪ್ರಸಿದ್ಧವಾದ್ದರಿಂದ ಅದೇ ಹೆಸರು ಕ್ರಮೇಣ ಈ ಸ್ಥಳಕ್ಕೆ ಅಂಟಿಕೊಂಡಿದೆ"[20]

ಮೈಸೂರು ಚಾಮುಂಡೇಶ್ವರಿಯನ್ನು ಕುರಿತ ಐತಿಹ್ಯದ ಪಾಠಾಂತರ ಹೀಗಿದೆ.

**ಚಾಮುಂಡೇಶ್ವರಿ** : "ಪೂರ್ವದಲ್ಲಿ ಮಹಿಷನೆಂಬ ರಾಕ್ಷಸ ದೇವ ದೇವತೆಗಳನ್ನು ಬಲು ಪೀಡಿಸುತ್ತಿದ್ದ. ಅವನ ಹಾವಳಿಯಿಂದ ಪಾರಾಗಲು ಬ್ರಹ್ಮಾದಿ ದೇವತೆಗಳು ಶಿವ ಮತ್ತು ವಿಷ್ಣುವಿನ ಮೊರೆ ಹೋದರು. ಮಹಿಷಾಸುರನ ಕಥೆ ಕೇಳಿಸಿಕೊಂಡ ಅವರಿಗೆ ತುಂಬ ಕೋಪಬಂತು. ಆ

ಕೋಪಾಗ್ನಿಯಿಂದ ಕಾತ್ಯಾಯಿನಿ ಎಂಬ ಶಕ್ತಿದೇವತೆ ಹುಟ್ಟಿದಳು. ಮಹಿಷಾಸುರನೊಂದಿಗೆ ಯುದ್ಧ ಮಾಡುವುದಕ್ಕಾಗಿ ಅವಳಿಗೆ ಶಿವನಾದಿಯಾಗಿ ಎಲ್ಲಾ ದೇವತೆಗಳೂ ತಮ್ಮ ಸಕಲಾಯುಧಗಳನ್ನು ನೀಡಿದರು. ಈ ದೇವತೆ ಅಸ್ತ್ರ ಸಮೇತ ಬಂದು ವಿಂಧ್ಯ ಪರ್ವತದಲ್ಲಿ ನೆಲೆಸಿದಳು. ಆಗ ಅವಳನ್ನು ಸಂಹರಿಸುವುದಕ್ಕೆಂದು ಮಹಿಷಾಸುರನು ಚಂಡ, ಮುಂಡರೆಂಬ ತನ್ನಿಬ್ಬರು ದಂಡನಾಯಕರನ್ನು ಕಳಿಸಿದ. ದೇವಿ ಅವರನ್ನು ಕೊಂದಳು ಇದರಿಂದಾಗಿ ಅವಳು ಚಾಮುಂಡಿ ಆದಳು. ಅನಂತರ ಅವಳು ಮಹಿಷಾಸುರನನ್ನು ಕೊಂದು 'ಮಹಿಷಾಸುರ ಮರ್ಧಿನಿ'ಯಾದಳು. ಇವಳು ಮೈಸೂರು ನಗರದೇವತೆ, ಜನಪದ ಗ್ರಾಮದೇವತೆ, ಅರಸು ಮನೆತನದ ಕುಲದೇವತೆಯಾದಳು"[21]

ಚಾಮುಂಡೇಶ್ವರಿ ಕುರಿತ ಇನ್ನೊಂದು ಐತಿಹ್ಯ : ಪಾಂಡವಪುರ ರೈಲ್ವೆ ನಿಲ್ದಾಣದಿಂದ ಸುಮಾರೂ ಐದು ಕಿಲೋಮೀಟರ್ ದೂರದಲ್ಲಿ 'ಉಕ್ಕಡ' ಅಥವಾ 'ಆರತಿ ಉಕ್ಕಡ' ಎಂಬ ಧಾರ್ಮಿಕ ಕ್ಷೇತ್ರವಿದೆ. ಇಲ್ಲಿ ಒಂದು ಮಾರಮ್ಮನ ಗುಡಿಯಿದ್ದು, ಸ್ವಲ್ಪ ಅಂತರದಲ್ಲಿಯೇ ಚಾಮುಂಡಮ್ಮನ ಗುಡಿಯು ಗದ್ದೆಯ ನಡುವಿದ್ದು ಪಾಳುಬಿದ್ದಿದೆ. ಮಾರಮ್ಮ ಚಾಮುಂಡಮ್ಮ ಇಬ್ಬರು ಅಕ್ಕತಂಗಿಯರು. ಚಾಮುಂಡಿ ಹಿರಿಯವಳು, ಮಾರಮ್ಮ ಕಿರಿಯವಳಾಗಿದ್ದು ಅಕ್ಕನನ್ನು ಕಂಡರೆ ಅಪಾರ ಪ್ರೀತಿ. ನನಗೆ ಪೂಜೆಸಲ್ಲಿಸಲು ಬರುವವರು ಮೊದಲು ಅಕ್ಕನಿಗೆ ಪೂಜೆಸಲ್ಲಿಸಿ ಅನಂತರ ತನ್ನ ಬಳಿಗೆ ಬರಬೇಕೆಂಬುದು ಮಾರಮ್ಮನ ಅಪೇಕ್ಷೆಯಾಗಿತ್ತು. ಆದರೆ ಮಾರಮ್ಮನ ಬಗ್ಗೆ ಭಕ್ತಿ ಹೆಚ್ಚು ಇದ್ದಂತ ಜನರು ಮಾರಮ್ಮನ ಅಪೇಕ್ಷೆಯನ್ನು ದಿಕ್ಕರಿಸಿ ಚಾಮುಂಡಿಯನ್ನು ಗುಡಿಯಲ್ಲಿ ಕೂಡಿಹಾಕಿ ಕದವನ್ನು ಭದ್ರಮಾಡಿದರು. ನನ್ನ ಅಕ್ಕನಿಗೆ ಮೊದಲ ಪೂಜೆ ಸಲ್ಲಿಸಲಿಲ್ಲವಲ್ಲ ಎಂದು ಕದವನ್ನು ಮಾರಮ್ಮನೆ ದಡಾರನೆ ಒದ್ದು ಬಿಸಾಡಿದಳಂತೆ. ಆಗಿನಿಂದ ಗುಡಿಗೆ ಬಾಗಿಲೇ ಇರಲಿಲ್ಲವಂತೆ. ಆದರೆ ಇತ್ತೀಚೆಗೆ ಬಾಗಿಲು ಮಾಡಿಸಿ ಹಾಕಲಾಗಿದೆ. ತಾನು ಇಲ್ಲೆ ಇದ್ದರೆ ತಂಗಿಯ ಮನಸ್ಸಿಗೆ ನೆಮ್ಮದಿ ಸಿಕ್ಕುವುದಿಲ್ಲವೆಂದು ಮನನೊಂದು ಚಾಮುಂಡಮ್ಮ ಅಲ್ಲಿಂದ ಕಣ್ಣಿಗೆ ಕಾಣುತ್ತಿದ್ದ ಬೆಟ್ಟವೊಂದಕ್ಕೆ ಜಿಗಿದು ಹೋದಳು. ಅದು ಚಾಮುಂಡಿಬೆಟ್ಟ ಎಂದು ಪ್ರಸಿದ್ಧಿಗೆ ಬಂದಿದೆ. "ಈ ಮಾರಮ್ಮನ ಗುಡಿಗೂ ಕಡತನಾಳಿಗೂ ನಡುವೆ ಸಿಕ್ಕುವ ಭಾರಿ ಬಂಡೆಯೊಂದರ ಮೇಲೆ ಚಾಮುಂಡಮ್ಮ ಜಿಗಿದ ಸ್ಥಳದಲ್ಲೇ ಅವಳದ್ದೇ ಎಂದು ಹೇಳಲಾಗುವ ಎರಡು ಪಾದಗಳ ಗುರುತನ್ನು ಇಂದಿಗೂ ಕಾಣಬಹುದು"[22]

**ಉತ್ನಾಳಮ್ಮ** : 'ಮಹಿಷ ಮಂಡಲ' ಎಂಬ ರಾಜ್ಯದಲ್ಲಿ ಮಹಿಷಾಸುರನೆಂಬ ರಾಕ್ಷಸ ನೆಲೆಸಿದ್ದನು. ಮಹಿಷಾಸುರ ಒಬ್ಬ ದುಷ್ಟ ರಾಕ್ಷಸನಾಗಿದ್ದು, ಈತನು ಮಾನವ, ದಾನವ, ಋಷಿ ಮುನಿಗಳಿಗೆ

ಕಂಟಕಪ್ರಾಯನಾಗಿ ಋಷಿಗಳು ಯಜ್ಞ ಕಾರ್ಯಗಳಲ್ಲಿ ನಿರತರಾಗಿದ್ದಾಗ ವಿಘ್ನಪಡಿಸುತ್ತಿದ್ದನು. ಈತನನ್ನು ಕಂಡು ಭಯಭೀತರಾದ ದೇವಾನುದೇವತೆಗಳು ಚಿಂತಾಜನಕ ಸ್ಥಿತಿಯಲ್ಲಿದ್ದಾಗ, ಇನ್ನೂ ಸಾಮಾನ್ಯ ಮಾನವರ ಗತಿ ಹೇಳತೀರದು. ಮೂಲ ದ್ರಾವಿಡನಾಗಿದ್ದ ಈತನ ಅಟ್ಟಹಾಸಕ್ಕೆ ಪಾರಮ್ಯವೇ ಇರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಆತಂಕಗೊಂಡ ಋಷಿವರ್ಯರು ಇವನನ್ನು ಸಂಹಾರ ಮಾಡಲು ದೇವತೆಗಳ ಮೊರೆ ಹೊಕ್ಕಿ ದೇವತೆಗಳಲ್ಲಿಯೇ 'ತ್ರಿಮೂರ್ತಿ'ಗಳೆಂದು ಕರೆಯಲ್ಪಡುವ ಬ್ರಹ್ಮ, ವಿಷ್ಣು, ಮಹೇಶ್ವರರಲ್ಲಿ ತಮ್ಮ ದುಗುಡವನ್ನು ತೋಡಿಕೊಂಡರು. ಶಿವನ ಅರ್ಧಾಂಗಿಯಾದ ಪಾರ್ವತಿಯು ಭೂಲೋಕದ ಕಲ್ಯಾಣಕ್ಕಾಗಿ ತಾನು ಕಂಕಣಬದ್ಧಳಾಗಿದ್ದೇನೆ, ಮಹಿಷಾಸುರನನ್ನು ಸಂಹಾರ ಮಾಡುತ್ತೇನೆಂದು ಪಣ ತೊಡಲು, ದೇವಾನುದೇವತೆಗಳೆಲ್ಲಾ ಪಾರ್ವತಿಯ ಧೈರ್ಯ, ಸಾಹಸವನ್ನು ಮೆಚ್ಚಿ 'ಚಾಮುಂಡಿ' ಎಂಬ ಅಂಕಿತವನ್ನಿಟ್ಟು ತಮ್ಮ ಶಕ್ತಿಯನ್ನು ಧಾರೆಯೆರೆದು ಪ್ರಮುಖ ಆಯುಧಗಳನ್ನು ನೀಡಿ ಭೂಲೋಕಕ್ಕೆ ಕಳುಹಿಸುತ್ತಾರೆ.

ಹೀಗೆ ನೀಡಿದ ಸಾಮೂಹಿಕ ಶಕ್ತಿಯ ಪ್ರತೀಕವಾಗಿ ತಾಯಿ ಚಾಮುಂಡಿ ಅವತಾರವೆತ್ತಿದಳು. ಅಸಮಾನ್ಯ ಶಕ್ತಿಯನ್ನು ಪಡೆದು ಮಹಾಕಾಳಿಯಂತೆ ಚಾಮುಂಡಿ ದುಷ್ಟ ರಾಕ್ಷಸನನ್ನು ಸಂಹಾರ ಮಾಡಲು ಕೋಪಾಗ್ನಿಯನ್ನು ಮೊಗದಲ್ಲಿ ಬೀರುತ್ತಾ ನಿಂತಿರಲು ಅಷ್ಟು ಸುಲಭವಾಗಿ ಮಹಿಷಾಸುರನನ್ನು ಸಂಹಾರ ಮಾಡಲು ಸಾಧ್ಯವಿಲ್ಲದಂತಾಗುತ್ತದೆ. ಏಕೆಂದರೆ ಮಹಿಷಾಸುರನ ಒಂದು ಹನಿ ರಕ್ತ ಭೂಮಿಗೆ ಬಿದ್ದರೂ ಆ ಒಂದು ಹನಿ ರಕ್ತದಿಂದ ಸಾವಿರಾರು ರಾಕ್ಷಸರು ಉದ್ಭವಿಸುತ್ತಾರೆ ಎಂಬ ಚಿಂತೆ ತಾಯಿಯನ್ನು ಕಾಡಿತು. ಕೊನೆಗೂ ದುಷ್ಟ ರಾಕ್ಷಸನನ್ನು ಸಂಹರಿಸಲು ಮುಂದಾದಾಗ ಪ್ರತಿ ರಕ್ತದ ಕಣ ಕಣದಿಂದಲು ಸಾವಿರಾರು ರಾಕ್ಷಸರು ಜನ್ಮ ಪಡೆಯುತ್ತಿರುತ್ತಾರೆ. ಇದರಿಂದ ಆಯಾಸಗೊಂಡ ತಾಯಿ ತನ್ನ ಮುಖದಿಂದ ಬರುತ್ತಿದ್ದ ಬೆವರನ್ನು ತೆಗೆದು ಬಿಸಾಡಲು ಬೆವರಿನಿಂದಲೇ ಮಾತೆ ಉತ್ತನಹಳ್ಳಿ ಉರಿಕಾತಿ ಅವತರಿಸುತ್ತಾಳೆ. ಆಶ್ಚರ್ಯಗೊಂಡ ತಾಯಿ ಚಾಮುಂಡಿಯು ನೀನು ಯಾರು? ಎಂದು ಕೇಳಲು 'ನಾನು ನಿನ್ನ ಸಹೋದರಿ ಜ್ವಾಲಾಮುಖಿ ತ್ರಿಪುರ ಸುಂದರಿ' ಎಂದು ಹೇಳಿ ನಿನಗೆ ಒದಗಿರುವ ದುಗುಡವನ್ನು ಪರಿಹರಿಸಲು ಉದ್ಭವಿಸಿದ್ದೇನೆ. ಮಹಿಷಾಸುರನನ್ನು ಕೊಲ್ಲು. ನಾನು ರಾಕ್ಷಸನ ರಕ್ತ ನೆಲಕ್ಕೆ ಬೀಳದಂತೆ ನನ್ನ ಕೆನ್ನಾಲಿಗೆಯನ್ನು ಭೂಮಿಯ ಮೇಲೆ ಚಾಚುತ್ತೇನೆ ಎಂದು ಹೇಳುತ್ತಾಳೆ. ಸಹೋದರಿಯ ಅಣತಿಯಂತೆ ಜಗನ್ಮಾತೆ ಮಹಿಷಾಸುರನನ್ನು ಉರಿಕಾತಿಯ ನಾಲಿಗೆಯ ಮೇಲೆ ನಿಂತು ಯುದ್ಧಮಾಡಿ ಕೊಲ್ಲುತ್ತಾಳೆ. ಜ್ವಾಲಾಮುಖಿ ದೇವಿಯು ರಾಕ್ಷಸನ ರಕ್ತವನ್ನು ಕುಡಿದು ತೇಗುತ್ತಾಳೆ. ಹೀಗೆ ತನಗೆ ಸಹಾಯ ಮಾಡಿದ ಸಹೋದರಿಯನ್ನು ಚಾಮುಂಡಿ ಕೊಂಡಾಡುತ್ತಾಳೆ. ತಂಗಿ ಉರಿಕಾತಿ ಮಾಡಿದ ಉಪಕಾರಕ್ಕೆ ಪ್ರತಿಯಾಗಿ ಅವಳನ್ನು ಬೆಟ್ಟದ ಬಳಿಯಿರುವ

ಉತ್ತನಹಳ್ಳಿಯ ಪುಟ್ಟ ಗುಡ್ಡದಲ್ಲಿ ನೆಲಸುವಂತೆ ಹೇಳುತ್ತಾಳೆ. ಜೊತೆಗೆ ಪ್ರತಿವರುಷವೂ ಹಬ್ಬ ಹುಣ್ಣಿಮೆ, ತೆಪ್ಪ ತಿರುನಾಳು, ಜಾತ್ರೆ ಉತ್ಸವಗಳಿಗೆ, ಮಡೆ ತಂಬಿಟ್ಟಿನ ಆರತಿಯನ್ನು ಕಳಿಸಿಕೊಡುವುದಾಗಿ ಹೇಳಿ ತಂಗಿಯನ್ನು ಉತ್ತನಹಳ್ಳಿಗೆ ಬೀಳ್ಕೊಡುತ್ತಾಳೆ.

**ಆಧಿಶಕ್ತಿ ಬನ್ನಿಮರದಮ್ಮ** : ಆಧಿಶಕ್ತಿ ಬನ್ನಿಮರದಮ್ಮ ದೇವಾಲಯವು ಮೊದಲು ಹೆಬ್ಬಾಳು ಗ್ರಾಮದಲ್ಲಿದ್ದ ನಾರಾಯಣಸ್ವಾಮಿ ದೇವಾಲಯದಲ್ಲಿತ್ತು. ನಾಯಕ ಸಮುದಾಯದವರು ಮತ್ತು ಅರಸು ಸಮುದಾಯದವರ ನಡುವೆ ಆದ ಕಲಹದಲ್ಲಿ ಆ ದೇವಾಲಯ ಸಂಪೂರ್ಣ ನಾಶವಾಯಿತು. ಕೆಲವು ನಾಯಕ ಸಮುದಾಯದವರು ಈಗಿನ ಕುಂಬಾರಕೊಪ್ಪಲಿಗೆ ಬಂದು ನೆಲೆಸಿದರು. ಅದೇ ಸಂದರ್ಭದಲ್ಲಿ ಕುಂಬಾರಕೊಪ್ಪಲಿನ ಒಂದು ಬನ್ನಿಮರದಲ್ಲಿ ಹಾಲಿನ ಗುಡ್ಡೆಯು ನಿರ್ಮಾಣವಾಗಿ ಅದರಿಂದ ನಿರಂತರವಾಗಿ ಹಾಲು ಸೋರುವುದಕ್ಕೆ ಪ್ರಾರಂಭ ವಾಯಿತು. ಕೆಲವೊಮ್ಮೆ ರಕ್ತವೂ ಸಹ ಸೋರಿಕೆಯಾಗುತ್ತಿತ್ತಂತೆ. ಈ ವಿಚಿತ್ರ ಘಟನೆಗಳಿಂದ ಹೆದರಿದ ಜನರು ಅಲ್ಲಿದ್ದ ಹಿರಿಯ ಪುರೋಹಿತರ ಮೊರೆ ಹೋಗಲಾಗಿ, ಅವರು ಇಲ್ಲಿ ಒಂದು ಆಧಿಶಕ್ತಿ ನೆಲೆಯಾಗಿದೆ ಎಂದು ತಿಳಿಸಿದರು. ನಾಯಕ ಸಮುದಾಯದವರು ಹೆಬ್ಬಾಳಿನ ಗ್ರಾಮದಿಂದ ಬಂದಿರುವುದರಿಂದ ಅಲ್ಲಿದ್ದ ದೇವಿಯು ಇಲ್ಲಿಗೆ ಬಂದು ನೆಲೆಯಾಗಿದ್ದಾಳೆ ಎಂದು ನಂಬಿ ಆದೇವಿಯು ಬನ್ನಿಮರದಲ್ಲಿ ನೆಲೆಸಿರುವುದರಿಂದ ಆಧಿಶಕ್ತಿ ಬನ್ನಿಮರದಮ್ಮ ಎಂದೇ ದೇವಿಯನ್ನು ಪೂಜಿಸ ತೊಡಗಿದರು.[23]

**ಜೋಡಿಮಾರಮ್ಮ ಪಡುವಾರಹಳ್ಳಿ** : ಜೋಡಿಮಾರಮ್ಮ ದೇವರು ಹೆಣ್ಣು ದೇವತೆಯಾಗಿದ್ದು, ನಾಯಕ ಸಮುದಾಯದ ಹಿರಿಯ ಹೆಂಗಸೊಬ್ಬರ ಮೈಮೇಲೆ ಆಹ್ವಾನಗೊಂಡು ತಾವು ಕೊಡಗಿನ ಮೂಲದಿಂದ ಬಂದುದಾಗಿಯೂ, ಪಡುವಾರಹಳ್ಳಿಯಲ್ಲಿ ನೆಲೆಸುವುದಾಗಿಯೂ, ತಮ್ಮನ್ನು ಪಡುವಾರಹಳ್ಳಿ ಮಾರಿ ಮತ್ತು ಕುಕ್ಕರಹಳ್ಳಿ ಮಾರಿ ಎಂದು ಕರೆಯಬೇಕಾಗಿಯೂ ಹೇಳಿದ್ದಾರೆ. ಹಾಗೆಯೇ ಕೊಡಗಿನಿಂದ ತೆಂಗು, ನಿಂಬೆ, ಆಲ, ಹೊನ್ನೆ ಸಸಿಗಳನ್ನು ತಂದು ತಮ್ಮ ನೆಲೆಯಲ್ಲಿ ಬೆಳಸಬೇಕೆಂದು ಹೇಳಿದ್ದಾಗಿ, ಕೊಡಗಿನಿಂದ ಈ ಸಸಿಗಳನ್ನು ತರಿಸಿ ನೆಡಸಲಾಗಿದೆ. ಇಂದಿಗೂ ಈ ಸಸಿಗಳು ಬೃಹತ್ ಮರಗಳಾಗಿ ಬೆಳೆದು ನಿಂತಿರುವುದನ್ನು ಜೋಡಿ ಮಾರಮ್ಮನ ದೇವಸ್ಥಾನದ ಆವರಣದಲ್ಲಿ ಕಾಣಬಹುದು.

ಮತ್ತೊಂದು ಐತಿಹ್ಯ ನಾಯಕ ಸಮುದಾಯದ ಒಂದು ಕುಟುಂಬದಲ್ಲಿ ಸುಮಾರು ವರ್ಷಗಳ ಹಿಂದೆ ದೇವಸ್ಥಾನದ ಪಶ್ಚಿಮಕ್ಕೆ ಸೇರಿದಂತೆ ಮನೆ ಕಟ್ಟಲು ಪಾಯ ತೆಗೆದಾಗ ಅಲ್ಲಿ ಎರಡು ಹುತ್ತಗಳು ಕಂಡು ಬಂದವು. ಅವುಗಳನ್ನು ಹಾಳು ಮಾಡದೆ ಅದರ ಮೇಲೆ ಮನೆ

ನಿರ್ಮಿಸಲಾಗಿ ಹುತ್ತಗಳಿಗೆ ನೇರವಾಗಿ ಕಟ್ಟಿದ ಕೋಣೆಯಲ್ಲಿ ಜೋಡಿಮಾರಮ್ಮರ ಮೂಲಶಕ್ತಿ ನೆಲೆಸಿದೆ ಎಂಬುದಾಗಿ ಹೇಳುತ್ತಾರೆ. ಈ ಕೋಣೆಯ ತಳದಲ್ಲಿ ಇರುವ ಹುತ್ತಗಳಲ್ಲಿ ಜೋಡಿ ಮಾರಮ್ಮ ದೇವರ ಆವಾಸ ಕಂಡುಕೊಂಡಿದ್ದೇವೆ ಎಂದು ನಾಯಕ ಕುಟುಂಬದ ಹೆಂಗಸರ ಮೈಮೇಲೆ ಬಂದು ಹೇಳಿದ್ದಾಗಿ ನಾಯಕ ಕುಟುಂಬದವರು ತಿಳಿಸಿದ್ದಾರೆ. ಈ ಕೋಣೆಯಲ್ಲಿ ಎರಡು ಒಲೆಗಳನ್ನು ಕಟ್ಟಲಾಗಿದ್ದು, ಮಾರಿಹಬ್ಬದಲ್ಲಿ ದೇವರಿಗೆ ಅರ್ಪಿಸುವ ಮಡೆ ಅನ್ನ ಮತ್ತು ಬಲಿ ಅನ್ನವನ್ನು ಈ ಒಲೆಗಳಲ್ಲಿ ಬೇಯಿಸಲಾಗುವುದು. ಈ ದೇವರ ಕೋಣೆಯಲ್ಲಿ ಜೋಡಿ ಮಾರಮ್ಮ ದೇವರ ಮೂರ್ತಿಗಳನ್ನು ಬಿದಿರಿನ ಪುಟ್ಟಿಯಲ್ಲಿಟ್ಟು ಪೂಜೆ ನೀಡಲಾಗುತ್ತಿದೆ. ಜೋಡಿ ಮಾರಮ್ಮ ದೇವರು ನೆಲೆಸಿರುವುದು ಈ ಕೋಣೆಯಲ್ಲಿರುವ ಹುತ್ತಗಳಲ್ಲಿ ಎಂದು ನಂಬಲಾಗಿದೆ.

ಮತ್ತೊಂದು ಐತಿಹ್ಯ ಪಡುವಾರಹಳ್ಳಿಯ ನಾಯಕ ಸಮುದಾಯದ ಕುಟುಂಬವೊಂದರಲ್ಲಿ ಎಂಟೊಂಬತ್ತು ದಶಕಗಳ ಹಿಂದೆ ಒಂದೇ ಒಂದು ಹೆಣ್ಣು ಮಗಳು ಇದ್ದಳು. ಆಕೆಯನ್ನು ವೀರನಗೆರೆಗೆ ಮದುವೆ ಮಾಡಿಕೊಡಲಾಗಿತ್ತು. ಪಡುವಾರಹಳ್ಳಿಯಲ್ಲಿ ನಡೆಯುವ ಮಾರಿಹಬ್ಬದ ಸಮಯಕ್ಕೆ ಆಕೆ ದೇವರನ್ನು ಹೊರಲು ಬರಬೇಕಿತ್ತು. ಆದರೆ ಆಕೆಯ ಪತಿ ಆಕೆಯನ್ನು ಪಡುವಾರಹಳ್ಳಿಗೆ ಹೋಗದಂತೆ ತಡೆದು ಮನೆಯೊಳಗೆ ಬಂಧಿಸಿಟ್ಟು ತಾನು ಮನೆಯ ಹೊರ ಜಗುಲಿಯ ಮೇಲೆ ಮಲಗಿಬಿಟ್ಟನು. ಹನ್ನೆರಡು ದಿನದ ಬಾಣಂತಿಯಾದ ಆ ಹೆಣ್ಣು ಮಗಳು ದೇವರ ಕಾರ್ಯಕ್ಕೆ ಹೋಗಲು ಆಗುತ್ತಿಲ್ಲವಲ್ಲವೆಂದು ಕೊರಗುತ್ತಿದ್ದ ಸಮಯದಲ್ಲಿ ಆಕೆಯ ಮನೆಯ ಬಾಗಿಲು ತಾನಾಗೆ ತೆರೆದುಕೊಂಡಿತು. ಆಕೆ ಮಗುವನ್ನು ಬಿಟ್ಟು ನಡುರಾತ್ರಿಯಲ್ಲಿ ಒಂಟಿಯಾಗಿ ಪಡುವಾರಹಳ್ಳಿಗೆ ನಡೆದುಕೊಂಡು ಬಂದು ಜೋಡಿಮಾರಮ್ಮ ದೇವರ ಮೂರ್ತಿಯನ್ನು ಹೊತ್ತು ಮೆರವಣಿಗೆಯಲ್ಲಿ ಭಾಗವಹಿಸಿದಳು. ಅನಂತರ ಹಿದಿರುಗಿ ತನ್ನ ವೀರನಗೆರೆ ಮನೆಗೆ ಬಂದು ಮಗುವಿನ ಬಳಿ ಮಲಗಿದಳು. ಆದ್ದರಿಂದ ಈ ಪವಾಡದ ಹಿನ್ನೆಲೆಯಲ್ಲಿ ವೀರನಗೆರೆಯ ನಾಯಕ ಸಮುದಾಯದವರು, ಪಡುವಾರಹಳ್ಳಿಯಲ್ಲಿ ನಡೆಯುವ ಜೋಡಿಮಾರಮ್ಮ ದೇವರ ಹಬ್ಬದಲ್ಲಿ ಭಾಗವಹಿಸಬೇಕು ಮತ್ತು ದೇವರನ್ನು ಹೊರಬೇಕು ಎಂದು ಹಿಂದಿನಿಂದಲೂ ರೂಢಿಸಿಕೊಂಡು ಬರಲಾಗಿದೆ. ಈ ಹಿನ್ನೆಲೆಯಲ್ಲಿ ಪಡುವಾರಹಳ್ಳಿ ಮತ್ತು ವೀರನಗೆರೆ ಎರಡೂ ಗ್ರಾಮಗಳು ಜೋಡಿ ಮಾರಮ್ಮನ ಹಬ್ಬದಲ್ಲಿ ಭಾಗವಹಿಸಬೇಕು.

**ಉತ್ತನಹಳ್ಳಿ ಕಾರ್ಗಳಮ್ಮ** : ಉತ್ತನಹಳ್ಳಿ ಕಾರ್ಗಳಮ್ಮನ ಬಗೆಗಿನ ಐತಿಹ್ಯ. ಒಮ್ಮೆ ಕಾರುಗಳ್ಳಿಯ ಮಾರನಾಯಕನ ಮಂತ್ರಿಯ ಮಗ ಮತ್ತು ಸೇನಾಪತಿ ಬೇಟೆಯಾಡಲು ಈ ಊರಿಗೆ ಬಂದರಂತೆ. ಹೀಗೆ ಬಂದ ಮಂತ್ರಿಯ ಮಗ ಮತ್ತು ಸೇನಾಪತಿಯ ತಲೆಯನ್ನು ಕತ್ತರಿಸಿ ದೇವಸ್ಥಾನದ ಮುಂಭಾಗದಲ್ಲಿದ್ದ ಕುಕ್ಕೆಯಿಂದ ಮುಚ್ಚಿದ್ದರಂತೆ. ಕಾಡಿಗೆ ಹೋದ ಮಕ್ಕಳು

ಹಿಂದಿರುಗಿ ಬರಲ್ಲಿಲ್ಲವೆಂದು ತಿಳಿದ ರಾಜ ಪರಿವಾರದವರು ಅವರನ್ನು ಹುಡುಕಿಕೊಂಡು ಈ ದೇವಸ್ಥಾನದ ಬಳಿ ಬಂದರು. ಅಲ್ಲಿದ್ದ ಕುಕ್ಕೆಯನ್ನು ನೋಡಿ ಕುಕ್ಕೆಯಲ್ಲಿ ಏನಿದೆ ಎಂದು ಊರಿನವರನ್ನು ಪ್ರಶ್ನಿಸಿದಾಗ ಅಲ್ಲಿನ ಜನರು ಈ ದೇವತೆಯನ್ನು ಪ್ರಾರ್ಥಿಸಿ ನಿನ್ನ ಸತ್ಯದಿಂದ ನಮ್ಮಗಳ ಜೀವವನ್ನು ಉಳಿಸು ಎಂದು ಭಯದಿಂದ ಕೇಳಿಕೊಂಡರಂತೆ. ಆಗ ಕುಕ್ಕೆಯನ್ನು ತಗೆದು ನೋಡಿದಾಗ ಅಲ್ಲಿದ್ದ ಮಂತ್ರಿ ಮಗನ ತಲೆ ಮತ್ತು ಸೇನಾಪತಿಯ ತಲೆ ಟಗರಿನ ತಲೆಯಾಗಿದ್ದವಂತೆ ಎಂದು ಹಿರಿಯರು ಹೇಳುತ್ತಾರೆ. ಇತ್ತೀಚಿನವರೆಗೂ ಆ ಟಗರಿನ ತಲೆಗಳು ಇಲ್ಲೆ ಇದ್ದವಂತೆ. ಒಮ್ಮೆ ದೇವಸ್ಥಾನದಲ್ಲಿ ಕಳ್ಳತನವಾಗಿ ಎಲ್ಲವನ್ನು ದೋಚಿಕೊಂಡು ಹೋಗಿದ್ದಾರೆಂದು ಹೇಳುತ್ತಾರೆ.

**ಐತಿಹಾಸಿಕತೆ**

**ಲಕ್ಷ್ಮೀರಮಣಸ್ವಾಮಿ** : ಅರಮನೆಯ ಕೋಟೆಯಲ್ಲಿರುವ ಲಕ್ಷ್ಮೀ ವೆಂಕಟರಮಸ್ವಾಮಿ ದೇವಾಲಯ ಬಹಳ ಮುಖ್ಯವಾದ ಐತಿಹಾಸಿಕ ದೇವಾಲಯವಾಗಿದೆ. ರಾಜ ಒಡೆಯರ ದೂರದ ಸಂಬಂಧಿ ವೀರರಾಜಯ್ಯ. ಆತ ಕಾರುಗಹಳ್ಳಿ, ತಾಂಡ್ಯಗಳ ಪಾಳೇಗಾರ. ನಂಜನಗೂಡಿನ ಶ್ರೀಕಂಠೇಶ್ವರ ಸ್ವಾಮಿಯ ರಥೋತ್ಸವಕ್ಕೆ ಸೇವೆ ಸಲ್ಲಿಸಲು ರಾಜ ಒಡೆಯರು ಆತನ ಊರಿನ ಮೂಲಕ ಪ್ರಯಾಣಿಸಲು ಹೊರಟರು ವೀರರಾಜಯ್ಯ ಅಹಂಕರಿಸಿ ರಾಜ ಒಡೆಯರು ಹೋಗಲು ಅಡ್ಡಿಪಡಿಸಿದ. ಒಡೆಯರು ತಮ್ಮ ಸೈನ್ಯ ಬಲದಿಂದ ಅವನನ್ನು ಸೋಲಿಸಿ ಅಡ್ಡಿಯನ್ನು ನಿವಾರಿಸಿ ಕೊಂಡು ಸಾಗಿದರು. ಈ ಅವಮಾನದಿಂದ ಕುದಿಯುತ್ತಿದ್ದ ವೀರರಾಜಯ್ಯ ಕಪಟೋಪಾಯ ಮಾಡಿದ. ರಾಜ ಒಡೆಯರು ಲಕ್ಷ್ಮೀರಮಣಸ್ವಾಮಿ ದೇವಾಲಯಕ್ಕೆ ಪ್ರತಿನಿತ್ಯ ಬರುತ್ತಿದ್ದರು. ದೇವಾಲಯದ ಅರ್ಚಕ ಶ್ರೀನಿವಾಸಯ್ಯನಿಗೆ ವೀರರಾಜಯ್ಯ ಹಣದ ಆಸೆ ತೋರಿಸಿ 'ತೀರ್ಥದಲ್ಲಿ ವಿಷಮಿಶ್ರಣ ಮಾಡಿ ರಾಜ ಒಡೆಯರಿಗೆ ಕೊಡು' ಎಂದು ಒತ್ತಾಯಿಸಿದ. ಸ್ವಾಮಿ ದ್ರೋಹಿ ಶ್ರೀನಿವಾಸಯ್ಯ ಒಪ್ಪಿ ಎಂದಿನಂತೆ ರಾಜ ಒಡೆಯರು ದೇವಾಲಯಕ್ಕೆ ಬಂದಾಗ ವಿಷಮಿಶ್ರಿತ ತೀರ್ಥನೀಡಿದ. ಬಳಿಕ ಭಯಬೀತನಾಗಿ ನಡುಗುತ್ತ ನಿಂತಿರುವುದನ್ನು ಕಂಡು ಬೆದರಿದ, ಕಾರಣ ಕೇಳಿದಾಗ ನಡೆದ ವಿಚಾರವನ್ನೆಲ್ಲಾ ರಾಜ ಒಡೆಯರಿಗೆ ಒಪ್ಪಿಸಿದ. ಆಗ ರಾಜ ಒಡೆಯರು ಅರ್ಚಕನನ್ನು 'ನೀನು ವಿಷವೆಂದು ಕೊಟ್ಟೆಯೋ, ಲಕ್ಷ್ಮೀರಮಣಸ್ವಾಮಿ ತೀರ್ಥವೆಂದು ಕೊಟ್ಟೆಯೋ' ಎಂದು ಪ್ರಶ್ನಿಸಿದಕ್ಕೆ, 'ಲಕ್ಷ್ಮೀರಮಣಸ್ವಾಮಿ ತೀರ್ಥವೆಂದು ಕೊಟ್ಟೆ' ಎಂದು ನುಡಿದ. ಈಶ್ವರನ ಆರಾಧಕರೂ, ಪರಮೇಶ್ವರಾಂಶ ಸಂಜಾತರೂ ಆದ ರಾಜ ಒಡೆಯರು ಭಕ್ತಿಯಿಂದ ತೀರ್ಥ ಪ್ರಾಶನ ಮಾಡಿದರು. ತೀರ್ಥಂಶ ಅಮೃತವಾಗಿ ಹೊಟ್ಟೆಸೇರಿತು. ವಿಷಾಂಶ ಅಂಗೈಯಲ್ಲಿ

ಕಪ್ಪಾಗಿ ನಿಂತಿತು. ವೀರರಾಜಯ್ಯನ ಕಿವಿ, ಮೂಗು ಕತ್ತರಿಸಿದರು. ಅರ್ಚಕನನ್ನು ಕನ್ನಂಬಾಡಿ ಗೋಪಾಲ ಕೃಷ್ಣಸ್ವಾಮಿ ದೇವಸ್ಥಾನಕ್ಕೆ ವರ್ಗಮಾಡಿದರು.

**ಶ್ವೇತವರಹಾಸ್ವಾಮಿ** : ತಂಜಾವೂರಿನ ಏಕೋಜಿಯ ಮಗ ಶಹಜಿ ಒಬ್ಬ ಗರ್ವಿಷ್ಠ ರಾಜನಾಗಿ ಅಹಂಕಾರದಿಂದ ಮೆರೆಯುತ್ತಿದ್ದ ಮೈಸೂರು ಸೀಮೆಯಲ್ಲಿ ಮೇಲುಕೋಟೆಯೊಂದೇ ವಿಷ್ಣು ಕ್ಷೇತ್ರ. ನಮ್ಮಲ್ಲಿ ಅನೇಕ ಶೈವ ಕ್ಷೇತ್ರಗಳೊಂದಿಗೆ ಶ್ರೀರಂಗ, ಶ್ರೀಮುಷ್ಣ, ಕುಂಭಕೋಣದಂತಹ ಹಲವು ವಿಷ್ಣು ಕ್ಷೇತ್ರಗಳಿವೆ. ನಮ್ಮ ಸೀಮೆಗೆ ಬೇರಾವಾ ಸೀಮೆಯು ಸಮಾನವಿಲ್ಲ ಎಂದು ಸಭೆಯಲ್ಲಿ ಅಹಂಕಾರದಿಂದ ನುಡಿದ ಸುದ್ದಿ ಕೇಳಿದ ಚಿಕ್ಕದೇವರಾಜರು ಕೋಪಗೊಂಡು ಸಪ್ತಕಲ್ಪಗಳಲ್ಲಿ ಈಗ ಶ್ವೇತವರಾಹಕಲ್ಪ ಶ್ರೀಮುಷ್ಣದಲ್ಲಿರುವುದೂ ಅದೇ, ಅದನ್ನೇ ತಂದು ಆ ರಾಜನ ಸೊಕ್ಕಿಳಿಸಿ ಎಂದು ಅಪಾರ ದ್ರವ್ಯವಿತ್ತು ಬುದ್ಧಿವಂತ ಜನರನ್ನು ಅಲ್ಲಿಗೆ ಕಳುಹಿಸಿದರು. ಆ ಜನರು ಶ್ರೀಮುಷ್ಣಕ್ಕೆ ಹೋಗಿ ಅರ್ಚಕರನ್ನು ದ್ರವ್ಯದಲ್ಲಿ ಮುಳುಗಿಸಿ ಯಾರಿಗೂ ತಿಳಿಯದಂತೆ ಶ್ವೇತವರಹಾಸ್ವಾಮಿಯನ್ನೇ ಇಲ್ಲಿಗೆ ತಂದರು.

**ಕಾಮೇಶ್ವರ–ಕಾಮೇಶ್ವರಿ** : ಮಹಾರಾಜ ಜಯಚಾಮರಾಜ ಒಡೆಯರ್ ನೇಪಾಳದ ಪಶುಪತಿನಾಥ ದೇವಾಲಯಕ್ಕೆ ಯಾತ್ರೆ ಹೋದ ಸಂದರ್ಭದಲ್ಲಿ ಕಾಮೇಶ್ವರ–ಕಾಮೇಶ್ವರಿ ಮೂರ್ತಿನೋಡಿ ಪುಳಕಿತಗೊಂಡರು. ಭಕ್ತರ ಇಷ್ಟ ಕಾಮ್ಯಾರ್ಥಗಳನ್ನು ಪೂರೈಸುವ ಹಾಗೂ ಶ್ರೀಚಕ್ರದ ಮಧ್ಯಬಿಂದು ಆಗಿರುವ ಆ ಮೂರ್ತಿಯ ಬಳಿ ಮಹಾರಾಜರು ಪುತ್ರ ಸಂತಾನಕ್ಕಾಗಿ ಮೊರೆ ಇಟ್ಟರು. ಅನಂತರ ಅಂತಹದೇ ದೇವಾಲಯವನ್ನು ಮೈಸೂರಿನಲ್ಲೂ ಕಟ್ಟಿಸಲು ತೀರ್ಮಾನಿಸಿದರು. ಅರಮನೆಯ ಶಿಲ್ಪಿ ಸಿದ್ಧಲಿಂಗಸ್ವಾಮಿಗಳನ್ನು ನೇಪಾಳಕ್ಕೆ ಕರೆದೊಯ್ದು ಪ್ರತಿಮಾ ಶಾಸ್ತ್ರಕ್ಕನುಗುಣವಾಗಿ ಅಂತಹದೇ ದೇವಾಲಯ ನಿರ್ಮಿಸಲು ತಿಳಿಸಿದರು. 1942ರಲ್ಲಿ ದೇವಾಲಯ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಲಾಯಿತು. ಹನ್ನೊಂದು ವರ್ಷಗಳಕಾಲ ನಿರಂತರವಾಗಿ ಮೂರ್ತಿಗಳ ಕೆತ್ತನೆ, ಕಟ್ಟಡದ ನಿರ್ಮಾಣ ಕಾರ್ಯಗಳು ನೂರಾರು ಶಿಲ್ಪಿಗಳಿಂದ–ಸ್ಥಪತಿಗಳಿಂದ ನಡೆಯಿತು. ಅಂತಿಮವಾಗಿ 1954ರಲ್ಲಿ ದೇವಾಲಯ ಪೂರ್ಣಗೊಂಡು ಉದ್ಘಾಟಿಸಲಾಯಿತು.[24]

**ನಿಂಬುಜಾದೇವಿ** : ಈ ದೇವಾಲಯದ ಅರ್ಚಕರು ಹೇಳುವ ಪ್ರಕಾರ ಸದಾನಂದ ಸುಬ್ಬಜಟ್ಟಪ್ಪನವರು ಮಹಾಸಾಧುವಾಗಿದ್ದರು. ಅವರು ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ತಮ್ಮ ಶಿಷ್ಯರೊಂದಿಗೆ ನೆಲೆಸಿದ್ದರು. ಅದೇ ಸಮಯದಲ್ಲಿ ಮಹಾರಾಜರು(ಯಾವ ಮಹಾರಾಜರೆಂದು ನಿರ್ದಿಷ್ಟವಾಗಿ ತಿಳಿದು ಬಂದಿಲ್ಲ) ಬೆಳಗಿನ ಜಾವ ವಾಯು ವಿಹಾರಕ್ಕೆಂದು ಹೋಗುತ್ತಿದ್ದ ಸಂದರ್ಭದಲ್ಲಿ ಹುಲಿಯೊಂದು ಅವರ ಮೇಲೆ ಎರಗಿದಾಗ, ಅಲ್ಲೇ ಇದ್ದ ಸದಾನಂದ

ಸುಬ್ಬಜಟ್ಟಪ್ಪನವರು ಹುಲಿಯನ್ನು ಓಡಿಸಿ ಮಹಾರಾಜರನ್ನು ರಕ್ಷಿಸಿದರು. ಇದರಿಂದ ಸಂತೋಷ ಗೊಂಡ ರಾಜರು ಪ್ರತಿಫಲವಾಗಿ ನಿನಗೇನುಬೇಕು ಕೇಳು ಎಂದು ಹೇಳಿದಾಗ, ಸದಾನಂದರು ನನಗಾಗಿ ಏನೂ ಬೇಡ ನಮ್ಮ ಜಟ್ಟಿ ಸಮುದಾಯದವರಿಗೆ ಒಂದು ಗರಡಿ ಮನೆ ಸ್ಥಾಪಿಸಿಕೊಳ್ಳಲು ಅನುಮತಿ ನೀಡಬೇಕು ಎಂದು ಕೇಳಿಕೊಂಡರು. ಇದಕ್ಕೆ ಒಪ್ಪಿದ ಮಹಾರಾಜರು ಗರಡಿ ಮನೆ ಸ್ಥಾಪನೆಗೆ ಅನುಕೂಲವಾಗುವಂತೆ ಸ್ಥಳ ಮತ್ತು ಹಣದ ಸಹಾಯ ಮಾಡಿದರು. ಆಗ ಗರಡಿ ಮನೆಯಿದ್ದ ಸ್ಥಳದಲ್ಲೇ ಇಂದು ನಿಂಬುಜಾದೇವಿ ದೇವಾಲಯ ನಿರ್ಮಾಣವಾಗಿರುವುದು.[25]

## ಜನಪದ ಕಥೆಗಳು

ಚಾಮುಂಡಿಯು ಬೆಟ್ಟದಲ್ಲಿ ನೆಲೆಸಿದ ಬಗ್ಗೆ ಜನಪದರಲ್ಲಿ ಸೊಗಸಾದ ರೋಚಕ ಕಥೆಯಿದೆ. ಉಜ್ಜಯಿನಿ ದೇಶದ ದೊರೆ ಬಿಜ್ಜಳರಾಯನಿಗೆ ಏಳು ಜನ ಹೆಣ್ಣುಮಕ್ಕಳು. ಅವರಲ್ಲಿ ಹಿರಿಯವಳು ಉರಿಮಸಣಿ. ಇವಳನ್ನು ಪಿರಿಯಾಪಟ್ಟಣದಮ್ಮ ಎಂದು ಕರೆಯುತ್ತಾರೆ. ಕಿರಿಯವಳು ಚಾಮುಂಡಿ. ಈ ಏಳು ಜನ ಸಹೋದರಿಯರು ಯಾವ್ಯಾವುದೋ ಕಾರಣಗಳಿಂದ ಪರಸ್ಪರ ಜಗಳವಾಡಿಕೊಂಡು ಮನೆಯನ್ನು ತ್ಯಜಿಸಿ ಉತ್ತರದಿಂದ ದಕ್ಷಿಣದ ಕಡೆಗೆ ವಲಸೆ ಬಂದು ಒಬ್ಬೊಬ್ಬರು ಒಂದೊಂದು ಬೇರೆ ಸ್ಥಳಗಳಲ್ಲಿ ನೆಲೆಗೊಂಡರು. ಆದರೆ ಚಾಮುಂಡಿ ಮಾತ್ರ ತಾನು ನೆಲೆಸುವುದೆಲ್ಲಿ ಎಂದು ನಿರ್ಧರಿಸಲಾರದೆ ಅಡ್ಡಾಡುತ್ತಿದ್ದಳು. ಹೀಗೆ ಅಡ್ಡಾಡುತ್ತಿರುವಾಗ ಒಂದು ದಿನ ಒಂದು ಸುಂದರ ತಾಣ ಕಣ್ಣಿಗೆಬಿತ್ತು. ಅದುವೇ ಸಂಪದ್ಭರಿತ ಮಹಿಷಮಂಡಲ. ಇದೇ ತನಗೆ ಸರಿಯಾದ ಸ್ಥಳ ಎಂದು ಚಾಮುಂಡಿ ನಿರ್ಧರಿಸಿ ನೆಲೆನಿಲ್ಲುವ ಹೊತ್ತಿಗೆ ಮಹಿಷ ಮಂಡಲವನ್ನಾಳುತ್ತಿದ್ದ ರಾಕ್ಷಸ ರಾಜ ಮಹಿಷಾಸುರನ ಕಾವಲು ಭಟರು ಅವಳನ್ನು ತಡೆದು ಪ್ರಶ್ನಿಸುತ್ತಾರೆ. ಅವಳ ಉರಿಗಣ್ಣ ಹೊಡೆತಕ್ಕೆ ಸಿಕ್ಕಿ ತತ್ತರಿಸುತ್ತಾರೆ ನಡುಗುತ್ತಾ ಓಡಿ ಹೋಗಿ ತಮ್ಮ ಒಡೆಯನಿಗೆ ದೂರು ಕೊಡುತ್ತಾರೆ. ಮಹಿಷಾಸುರ ಅಪಾರ ದೈತ್ಯಶಕ್ತಿಯ ದುರುಳ. ಬ್ರಹ್ಮನನ್ನು ಕುರಿತು ತಪಸು ಮಾಡಿ ತನ್ನ ದೇಹದಿಂದ ಒಂದು ತೊಟ್ಟು ರಕ್ತ ನೆಲಕ್ಕೆ ಬಿದ್ದರೆ ಅದರಿಂದ ತನ್ನಷ್ಟೇ ಶಕ್ತರಾದ ಕೋಟಿ ರಾಕ್ಷಸರು ಹುಟ್ಟುವ ರಕ್ತಬೀಜಾಸುರ ವರವನ್ನು ಪಡೆದುಕೊಂಡಿದ್ದ.

ಕಾವಲು ಭಟರ ದೂರನ್ನು ಕೇಳಿದವನೇ ತಕ್ಷಣ ಹೊರಟು ಚಾಮುಂಡಿ ಇದ್ದಲ್ಲಿಗೆ ಬಂದು ನೋಡಿದ ಆಹಾ! ಎಂಥಾ ಅದ್ಭುತ ಸುರಸುಂದರೆ ಈ ಚಾಮುಂಡಿ! ಎಂದುಕೊಂಡ. ಅರೆಕ್ಷಣದಲ್ಲೇ ಮೋಹವುಕ್ಕಿತು. ಅವಳನ್ನು ಹಿಡಿಯಲು ಧಾವಿಸಿದ. ಚಾಮುಂಡಿ ಅವನ ದುರ್ನಡತೆಯನ್ನು ಧಿಕ್ಕರಿಸಿದಳು. ತನ್ನನ್ನು ಧಿಕ್ಕರಿಸುವದೇ? ಅದೂ ಓರ್ವ ಹೆಣ್ಣು! ಎಂದು

ರೋಷಾವೇಶದಿಂದ ಮಹಿಷ ಅವಳ ಮೇಲೆ ಕಾಳಗಕ್ಕೆ ಬಿದ್ದ. ಹೆದರುವ ಹೆಣ್ಣಲ್ಲ ಚಾಮುಂಡಿ. ಹೆದರಿ ನಡಗುವ ಪುಕ್ಕಲ ಬಾಲೆಯೂ ಅಲ್ಲ. ಅವಳ ಶಕ್ತಿ ಸಾಮರ್ಥ್ಯಕ್ಕೂ ಇತಿಮಿತಿಯಿರಲಿಲ್ಲ. ಅವನ ಸವಾಲನ್ನು ಕೆಚ್ಚೆದೆಯಿಂದ ಸ್ವೀಕರಿಸಿದಳು. ಎಷ್ಟು ಸೆಣೆಸಿದರು ಮಹಿಷ ಸಾಯುತ್ತಿಲ್ಲ. ಕಾರಣ ಅವನ ಮೈಯಿಂದ ಒಂದು ತೊಟ್ಟು ರಕ್ತ ಬಿದ್ದುದೇ ತಡ, ಬ್ರಹ್ಮನ ವರಬಲದಿಂದ ಕೋಟಿ ಕೋಟಿ ರಾಕ್ಷಸರು ಹುಟ್ಟಿಕೊಳ್ಳುತ್ತಿದ್ದರು. ಚಾಮುಂಡಿ ಅವರೆಲ್ಲರೊಡನೆಯೂ ಸೆಣಸಿ ಕೊಲ್ಲ ಬೇಕಾಗಿತ್ತು. ಹೀಗಾಗಿ ಸೆಣಸಿ ಸೆಣಸಿ, ರಕ್ಕಸರನ್ನು ಕಡಿದು ಕಡಿದು, ಆಯುಧಗಳನ್ನು ಬೀಸಿ ಬೀಸಿ ಅವಳ ತೋಳುಗಳು ಸೋತು ಹೋದವು. ಆದರೂ ಹಿಡಿದ ಛಲವನ್ನು ಬಿಡುವಂತಿಲ್ಲವಲ್ಲ. ರಂಗೇರಿತು ರೋಷಾವೇಶ, ಮಹಿಷಾಸುರ ಏರಿದ್ದ ಕೋಣದ ಕುತ್ತಿಗೆಯನ್ನು ಕಚಕ್ಕನೆ ಕಡಿದು ನಿರಾಯುಧನನ್ನಾಗಿ ಮಾಡಿದಳು. ಚಾಮುಂಡಿಯ ಹೊಡೆತವನ್ನು ತಾಳಲಾರದೆ ಮಹಿಷಾಸುರ ಕೋಣದ ದೇಹದೊಳಗೆ ಅಡಗಿಕೊಂಡ. ಚಾಮುಂಡಿಯು ಅವನನ್ನು ಹುಡುಕಿ ಹುಡುಕಿ ದಣಿದಳು. ಅವಳ ಹಣೆಯ ಮೇಲೆ ಬೆವರಿನ ಹನಿಗಳು ಸಾಲಿಟ್ಟವು. ತೋರುಬೆರಳನ್ನು ಹಣೆಗೆ ಒತ್ತಿ ಬೆವರನ್ನು ನೆಲಕ್ಕೆ ಒದರಿದಳು. ತಟಕ್ಕನೆ ಬೆವರು ಬಿದ್ದ ಸ್ಥಳದಲ್ಲಿ 'ಘಲ ಘಲ ಸದ್ದು! ಕಾಕು ಹಾಕುತ್ತ ಗುಡುಗುಡನೆ ಹೆಣ್ಣಿನ ಆಕೃತಿಯೊಂದು ಮೇಲೆದ್ದಿತು!

ಚಾಮುಂಡಿಗೆ ಆಶ್ಚರ್ಯವೋ ಆಶ್ಚರ್ಯ. ಮೂಕಳಾಗಿ ನೋಡುತ್ತಾಳೆ. ಬೆವರಿಂದ ಉತ್ಪತ್ತಿಯಾದ ಆ ಹೆಣ್ಣಾಕೃತಿ ಹೇಳುತ್ತದೆ. ಅಕ್ಕ ನೀನು ಮಾತ್ರ ಹೆದ್ರುಬ್ಯಾಡ, ನಾನು ನಿನ್ನ ಬೆವುರ್ನಲ್ಲಿ ಹುಟ್ಟಿದ್ದೀನಿ, ನನ್ನನ್ನು ಉರಿಮಾರಿ ಅನ್ನು ಉರಿಕಾತಿ ಅನ್ನು, ನಿನ್ನ ಕಷ್ಟಕ್ಕೆ ಆಗಕ್ಕೆ ಬಂದಿರುವಂತ ನಾನು ನಿನ್ನ ತಂಗಿ ಅಕ್ಕಯ್ಯ. ಅಕ್ಕಯ್ಯ ಯಾತುಕ್ಕೆ ಚಿಂತೆಯನ್ನು ಮಾಡ್ತಿದ್ದೀ? ನನ್ನ ಉರಿನಾಲಗೆಯನ್ನು ಭೂಮಿ ಮೇಲೆ ಹಾಸ್ತಿದ್ದೀನಿ ಮೈಷಾಸುರನ ರಕ್ತ ಒಂದು ತೊಟ್ಟು ನೆಲಕ್ಕೆ ಬೀಳದಂಗೆ ನೋಡ್ಕೊತೀನಿ ನಾಲಿಗೆ ಮ್ಯಾಲೆ ನಿಂತು ಕಾಳಗ ಮಾಡಕ್ಕಯ್ಯ.

ಉರಿಕಾತಿ ಮಾತಿನಿಂದ ಚಾಮುಂಡಿ ಉತ್ತೇಜಿತಳಾಗಿ ಮಹಿಷಾಸುರನನ್ನು ಎದುರಿಸಲು ಮತ್ತೆ ಸಿದ್ಧವಾಗುತ್ತಾಳೆ. ಆದರೆ ಅ ರಕ್ಕಸನೆಲ್ಲೂ ಕಾಣುತ್ತಿಲ್ಲ. ಹುಡುಕಿ ತಡಕಿ, ಕೊನೆಗೆ ಕೋಣವನ್ನು ದಿಟ್ಟಿಸಿ ನೋಡುತ್ತಾಳೆ. ಚಾಮುಂಡಿಯ ದಿಟ್ಟ ತೀಕ್ಷ್ಣತೆಗೆ ಕೋಣ ಎರಡು ಹೋಳಾಗಿ ಸೀಳುತ್ತದೆ. ಒಳಗೆ ಅಡಗಿದ್ದ ಮಹಿಷ ವಿಧಿಯಿಲ್ಲದೆ ಹೊರಗೆ ಬರುತ್ತಾನೆ. ಚಾಮುಂಡಿಯು ಉರಿಕಾತಿಯ ನಾಲಿಗೆಯ ಮೇಲೆ ನಿಂತು ಮಹಿಷನನ್ನು ಎದುರಿಸುತ್ತಾಳೆ. ಉರಿಕಾತಿಯು ನಾಲಿಗೆಯನ್ನು ನೆಲದ ಮೇಲೆಲ್ಲಾ ಹಾಸಿದ್ದರಿಂದ ಮಹಿಷನ ರಕ್ತ ನೆಲಕ್ಕೆ ಬೀಳುವುದಿಲ್ಲ. ಹೀಗಾಗಿ ಕೋಟಿ ರಾಕ್ಷಸರು ಹುಟ್ಟಲೂ ಇಲ್ಲ.

ಚಾಮುಂಡಿ ಮಹಿಷನ ಜುಟ್ಟನ್ನೇ ಹಿಡಿದುಕೊಂಡು ಅವ್ನ ಹುಟ್ಟನ್ನೇ ಕೆಡಿಸಿದಳಂತೆ!

ಹೀಗೆ ಚಾಮುಂಡೇಶ್ವರಿಯು ಉರಿಕಾತಿಯ ನೆರವಿನಿಂದ ಮಹಿಷಾಸುರನನ್ನು ವಧೆಗೈಯುತ್ತಾಳೆ. ತಂಗಿ ಉರಿಕಾತಿ ಮಾಡಿದ ಉಪಕಾರಕ್ಕೆ ಪ್ರತಿಯಾಗಿ ಅವಳನ್ನು ಬೆಟ್ಟದ ಬಳಿಯಿರುವ ಉತ್ತನಹಳ್ಳಿಯ ಪುಟ್ಟ ಗುಡ್ಡದಲ್ಲಿ ನೆಲಸುವಂತೆ ಹೇಳುತ್ತಾಳೆ. ಜೊತೆಗೆ ಪ್ರತಿ ವರುಷವೂ ಹಬ್ಬ ಹುಣ್ಣಿಮೆ, ತೆಪ್ಪ ತಿರುನಾಳು, ಜಾತ್ರೆ ಉತ್ಸವಗಳಿಗೆ, ಅವಳಿಗೆ ಮಡೆ ತಂಬಿಟ್ಟಿನ ಆರತಿಯನ್ನು ಕಳಿಸಿಕೊಡುವುದಾಗಿ ಹೇಳಿ ತಂಗಿಯನ್ನು ಉತ್ತನಹಳ್ಳಿಗೆ ಬೀಳ್ಕೊಡುತ್ತಾಳೆ. ಉರಿಕಾತಿಯನ್ನು ಜ್ವಾಲಮಾಲಿನಿ ಎಂದೂ ಕರೆಯಲಾಗುತ್ತದೆ.

ಜನಪದ ಸಾಹಿತ್ಯದ ಪ್ರಕಾರ ಚಾಮುಂಡಿ ಬೆಟ್ಟದಲ್ಲಿ ನೆಲೆಸಿದ್ದು ಹೀಗೆ. 'ದೇವತೆಯಾಗಿ ಪರಿವರ್ತನೆಹೊಂದಿದ ಐತಿಹಾಸಿಕ ಮಹಿಳೆ ಈ ಚಾಮುಂಡಿ' ಎನ್ನುತ್ತಾರೆ ಡಾ.ಪಿ.ಕೆ.ರಾಜಶೇಖರ್ ಅವರು

**ದಂತ ಕಥೆ** : ಪಾಳುಗೋಡೆ ಮಂಚಮ್ಮನ ದೇವಸ್ಥಾನವು ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿರುವ ಬನ್ನಿಮಂಟಪದ ಹತ್ತಿರ ಬಪ್ಪನಹಳ್ಳಿ ಕೆರೆ ಎಂದು ಕರೆಯುವ ಜಾಗದಲ್ಲಿದೆ. ಇದಕ್ಕೆ ಸಂಬಂಧಿಸಿದಂತೆ ಅಶೋಕಪುರಂನ ಹನ್ನೆರಡನೆ ಬೀದಿಯಲ್ಲಿರುವ ಜನರೆಲ್ಲರು ಹಬ್ಬವನ್ನು ಆಚರಿಸುತ್ತಾರೆ. **"**ಮಂಚಮ್ಮ ತನ್ನ ತಾಯಿಯ ಮನೆಯಲ್ಲಿ ಸುಖವಾಗಿದ್ದಳು. ಅವಳಿಗೆ ಯಾವುದೇ ತೊಂದರೆಯಾಗಲಿ ಅಥವಾ ಕೊರತೆಯಾಗಲಿ ಇರಲಿಲ್ಲ. ಆಕೆಗೆ ಮದುವೆಯಾಗಿರಲಿಲ್ಲ. ಹೀಗಿರುವಾಗ ಒಂದು ದಿನ ಏಕೋ ಏನೋ ಜೀವನದ ಬಗೆಗೆ ಬೇಸರವಾಗಿ ತಾಯಿಯ ಅಪ್ಪಣೆ ಪಡೆದು ಸಕಲ ಸೌಭಾಗ್ಯಗಳನ್ನು ತೊರೆದು ಪಾಳುಗೋಡೆಯ ಪಕ್ಕದಲ್ಲಿ ಬಂದು ನೆಲೆಸಿದಳಂತೆ. ಹೀಗೆ ಹೋಗುವುದಕ್ಕೆ ಮೊದಲು ತನ್ನ ತಾಯಿಯನ್ನು ಕುರಿತು ಎಲ್ಲರೂ ನನ್ನನ್ನು ಪೂಜಿಸುವಂತೆ ಮಾಡೆಂದು ಕೇಳಿಕೊಂಡಳಂತೆ. ಆಕೆಯ ಮಾತಿಗೆ ತಾಯಿ ಒಪ್ಪಿ, ಆಕೆಯ ಮಾತಿನಂತೆ ನಡೆದು ಕೊಳ್ಳುವುದಾಗಿ ವಚನ ಕೊಟ್ಟಳಂತೆ. ಹೀಗಾಗಿ ಜನರು ಈಕೆಯನ್ನು ಪೂಜಿಸಲಾರಂಭಿಸಿದರು**"**[26]

**ಗಣೇಶನ ಜನನದ ಬಗೆಗಿನ ದಂತಕಥೆ** : ಒಮ್ಮೆ ಪಾರ್ವತಿಯು ಸ್ನಾನಮಾಡಲು ಇಚ್ಛಿಸುತ್ತಾಳೆ. ಅವಳು ಸ್ನಾನದ ಮನೆಗೆ ಹೋದಾಗ ಯಾರಾದರೂ ಒಳನುಗ್ಗಿದರೆ ಗತಿಯೇನೆಂದು ಒಳನುಗ್ಗದಂತೆ, ತನ್ನ ಮೈತಿಕ್ಕಿನಿಂದ ಉಂಟಾದ ಮಣ್ಣಿನ ಕೊಳೆಯಿಂದ ಬಾಲಕನ ಮೂರ್ತಿ ಮಾಡಿ ಅದಕ್ಕೆ ಜೀವತುಂಬಿ ಕಾವಲು ನಿಲ್ಲಿಸಿದಳು. ಯಾರನ್ನು ಒಳಗೆ ಬಿಡಕೂಡದೆಂದು ಆ ಹುಡುಗನಿಗೆ ಕಟ್ಟಪ್ಪಣೆ ಮಾಡಿ ಸ್ನಾನಗೃಹಕ್ಕೆ ಹೋದಳು. ಇತ್ತ ದೇಶ ಸಂಚಾರಕ್ಕೆ ಹೋದ ಶಿವ

ಮರಳಿ ಮನೆಗೆ ಬಂದ. ಹುಡುಗ ಒಳಬಿಡದೆ ತಡೆದ. ಸಿಟ್ಟಿಗೆದ್ದ ಶಿವ ಆ ಹುಡುಗನ ತಲೆಯನ್ನೇ ಕತ್ತರಿಸಿದ. ತನ್ನ ಮಗನಿಗಾದ ಸ್ಥಿತಿಗೆ ಪಾರ್ವತಿ ಸಂಕಟಪಟ್ಟಳು. ಅತ್ತಳು, ಕರೆದಳೂ, ಶಿವನಿಗೆ ಕರುಣೆ ಬಂದು ಅವಳನ್ನು ಸಮಾಧಾನ ಪಡಿಸಲು ಹುಡುಗನ ತಲೆ ಬರಿಸುವುದಾಗಿ ಭರವಸೆ ಕೊಡುತ್ತಾನೆ. ಉತ್ತರ ದಿಕ್ಕಿಗೆ ತಲೆಮಾಡಿ ಮಲಗಿದವರ ತಲೆ ಕತ್ತರಿಸಿ ತನ್ನಿ ಎಂದು ತನ್ನ ಸೇವಕರಿಗೆ ಶಿವ ಆಜ್ಞಾಪಿಸುತ್ತಾನೆ. ಉತ್ತರ ದಿಕ್ಕಿಗೆ ಮಲಗಿದ್ದ ಜನಗಳಾರೂ ಸಿಕ್ಕದೆ, ಮಲಗಿದ್ದ ಆನೆಯ ತಲೆಯನ್ನೇ ಕಡಿದು ತಂದು ಸೇವಕರು ಶಿವನಿಗೆ ಒಪ್ಪಿಸಿದರು. ಶಿವ ಹುಡುಗನ ಮುಂಡಕ್ಕೆ ಆನೆಯ ರುಂಡವನ್ನು ಕಸಿಮಾಡಿ, ಜೀವತುಂಬಿದ. ಆನೆಯ ತಲೆಯನ್ನು ಧರಿಸಿದ ಆ ಹುಡುಗನೇ ಗಜವದನನಾದ.

ಗಣೇಶ ಚೌತಿಯಂದು ಗಣೇಶನನ್ನು ನೋಡದೆ ಚಂದ್ರನನ್ನು ನೋಡವ ಹಾಗಿಲ್ಲ. ಹಾಗೇನಾದರು ನೋಡಿದರೆ ಅಪವಾದ ತಪ್ಪಿದ್ದಲ್ಲ ಎಂದು ಜನರು ಇಂದಿಗೂ ನಂಬಿಕೆಯನ್ನಿಟ್ಟಿದ್ದಾರೆ.

**ಮೈಸೂರು ಕರಗಕ್ಕೆ ಸಂಬಂಧಿಸಿದ ಕಥೆ** : ಮೈಸೂರು ಕರಗವನ್ನು ಆಚರಿಸುವಾಗ ಮೊದಲಿಗೆ ಮಡಿವಾಳರ ಮನೆಯಲ್ಲಿಯೇ ಕರಗಕ್ಕೆ ಮೊದಲ ಪೂಜೆಯಾಗಬೇಕು ಎಂಬ ಹಿನ್ನೆಲೆಗೆ ಸಂಬಂಧಿಸಿದ ಕಥೆ: ಒಮ್ಮೆ ನೀರಿಗೆಂದು ಹೋದ ರೇಣುಕಾದೇವಿ ತಡವಾಗಿ ಆಶ್ರಮಕ್ಕೆ ಬಂದಾಗ ಅನುಮಾನದಿಂದ ಕೋಪಗೊಂಡ ಜಮದಗ್ನಿಯು ತನ್ನ ಮಕ್ಕಳಿಗೆ ರೇಣುಕಾದೇವಿಯ ತಲೆಯನ್ನು ಕತ್ತರಿಸುವಂತೆ ಆಜ್ಞಾಪಿಸುತ್ತಾನೆ. ಪರಶುರಾಮನು ತಂದೆಯ ಆದೇಶದಂತೆ ತಾಯಿಯ ತಲೆಯನ್ನು ಕತ್ತರಿಸಲು ಹೋದಾಗ ರೇಣುಕಾದೇವಿ ಮಡಿವಾಳರ ಮನೆಯಲ್ಲಿ ಅಡಗಿಕೊಳ್ಳುತ್ತಾಳೆ. ಆಶ್ರಯ ನೀಡಿದ ಮಡಿವಾಳರ ಮನೆಯು ರೇಣುಕಾದೇವಿಗೆ ತವರು ಮನೆಯೆಂದು ಅಲ್ಲಿಯೇ ಅವಳಿಗೆ ಮೊದಲ ಪೂಜೆಯನ್ನು ಸಲ್ಲಿಸಲಾಗುತ್ತದೆ.

ಇನ್ನೊಂದು ಕಥೆಯ ಪ್ರಕಾರ ಪರುಶರಾಮನು ತಂದೆಯ ಆದೇಶಕ್ಕೆ ಅನುಗುಣವಾಗಿ ತಾಯಿಯ ತಲೆಯನ್ನು ಕತ್ತರಿಸುತ್ತಾನೆ. ಜಮದಗ್ನಿಯು ತನ್ನ ಆಜ್ಞೆಯನ್ನು ಪಾಲಿಸಿದ ಮಗನಿಗೆ ಏನು ವರಬೇಕೆಂದು ಕೇಳಿದಾಗ ಪರಶುರಾಮನು ಮತ್ತೆ ತನ್ನ ತಾಯಿಗೆ ಜೀವಧಾನ ಮಾಡಬೇಕೆಂದು ಕೇಳಿಕೊಳ್ಳುತ್ತಾನೆ. ಅದೇ ಸಂದರ್ಭದಲ್ಲಿ ಮಡಿವಾಳನೊಬ್ಬ ತನ್ನ ಹೆಂಡತಿಯ ಮೇಲಿನ ಅನುಮಾನದಿಂದ ಆಕೆಯ ತಲೆಯನ್ನು ಕತ್ತರಿಸಿರುತ್ತಾನೆ. ಜಮದಗ್ನಿಯು ಮಗನಿಗೆ ಕೊಟ್ಟ ಮಾತಿಗೆ ಅನುಗುಣವಾಗಿ ಕತ್ತರಿಸಿದ ತಲೆಯು ಬಂದು ಸೇರಲಿ ಎಂದು ಹೇಳಿದಾಗ ರೇಣುಕಾದೇವಿಯ ತಲೆಗೆ ಮಡಿವಾಳನ ಹೆಂಡತಿಯ ದೇಹವು ಸೇರಿಕೊಳ್ಳುತ್ತದೆ. ಈ ಕಥೆಯ

ಹಿನ್ನೆಲೆಯ ನಂಬಿಕೆಯಿಂದಾಗಿ ಮೊದಲಿಗೆ ಮಡಿವಾಳರ ಮನೆಯಿಂದ ಪೂಜೆಗೊಂಡು ಕರಗವು ಮುಂದುವರೆಯುವುದು ಎಂದು ಸ್ಥಳಿಯರ ನಂಬಿಕೆಯಾಗಿದೆ.

ಮೈಸೂರು ಕರಗ ಆಚರಣೆಯಲ್ಲಿ ಅಂಬಲಿಸೇವೆಗೆ ಸಂಬಂಧಿಸಿದಂತೆ ಒಂದು ಕಥೆಯಿದೆ. ರೇಣುಕಾದೇವಿಗೆ ಏಳು ಜನ ಅಣ್ಣ ತಮ್ಮಂದಿರು ಆದ್ದರಿಂದ ದುಷ್ಟಶಕ್ತಿಗಳಿಗೆ ಈ ಏಳು ಜನರ ಕೈಯಲ್ಲಿ ಬಲಿ ಅನ್ನವನ್ನು ಹಾಕಿಸಿ ಎಂದು ಹೇಳಿದರಂತೆ ಆದ್ದರಿಂದ ಸಿದ್ಧಪಡಿಸಿದ ಅನ್ನದ ಮಡಿಕೆಯನ್ನು ತೆಗೆದು ಕೊಂಡು ಏಳು ಜನರು ಹೋಗುತ್ತಾರೆ. ಮುಂದೆ ತಮಟೆಸದ್ದು ಮಾಡುತ್ತ ದುಷ್ಟಶಕ್ತಿಯನ್ನು ಆಹ್ವಾನಿಸುತ್ತ ಒಬ್ಬರು ಮುಂದೆ ಹೋಗುತ್ತಾರೆ. ಅನಂತರ ಒಬ್ಬ ಕತ್ತಿಯನ್ನು, ಒಬ್ಬ ಚಾವಟಿಯನ್ನು, ಬೆತ್ತ, ತ್ರಿಶೂಲ, ಮಣ್ಣಿನ ಮಡಿಕೆಯನ್ನು ಹಿಡಿದವರು ಮತ್ತು ಪಂಜಿನ ದೀಪವನ್ನು ಹಿಡಿದು ಇಬ್ಬರು ಹೋಗುತ್ತಾರೆ. ಮಡಿಕೆಯಲ್ಲಿರುವ ಅನ್ನವನ್ನು ದಾರಿಯ ಮೂಲೆ ಮೂಲೆಗಳ ಮೇಲೆ ಎರಚುತ್ತಾ ಹೋಗುತ್ತಾರೆ. ಮೇಲೆ ಎರಚಿದ ಅನ್ನದ ಅಗಳು ಕೆಳಗೆ ಬೀಳುವುದಿಲ್ಲ. ಅದನ್ನು ದುಷ್ಟಶಕ್ತಿಗಳು ಸೇವಿಸುತ್ತವೆ ಎಂಬ ನಂಬಿಕೆಯಿದೆ.

## ಪುರಾಣ

ಪುರಾಣಗಳು ನಂಬಿಕೆಯ ಫಲ, ನಂಬಿಕೆಗಳು ಅನುಭವದ ಪರಿಣಾಮ ಎಂಬ ಹೇಳಿಕೆಯನ್ನು ಗಮನಿಸಿದರೆ ಗ್ರಾಮದವತೆಗಳ ಮೂಲಕ ಜನಪದರು ಲೋಕವನ್ನು ವಿವರಿಸುವ ಪ್ರಯತ್ನ ಮಾಡಿರುವುದಕ್ಕೆ ಪುರಾವೆಗಳು ಸಿಗುತ್ತವೆ. ಪ್ರಚಲಿತವಾಗಿದ್ದ ಸಾಮಾಜಿಕ ಸಂಸ್ಥೆಗಳನ್ನು ಉಳಿಸಿಕೊಳ್ಳಲು ಪ್ರಾಚೀನ ಆಚರಣೆಗಳನ್ನು ಗಟ್ಟಿಗೊಳಿಸಲು ಈ ಪುರಾಣಗಳು ಸಾಧನಗಳಾಗಿ ಕಾರ್ಯನಿರ್ವಹಿಸಿವೆ.

ಪುರಾಣಗಳು ಹಿಂದೆ ನಡೆದವು ಎನ್ನಲಾದ, ದೇವಾನುದೇವತೆಗಳ ಚಟುವಟಿಕೆಗಳನ್ನು ವಿವರಿಸುತ್ತವೆ. ಎಂಬ ಮಾತು ಉತ್ಪ್ರೇಕ್ಷೆಯಲ್ಲ. ಆದ್ದರಿಂದ ಜನಸಮುದಾಯದ ಚರಿತ್ರೆಯನ್ನು ಹುಡುಕಲು ಪುರಾಣ ಕಥೆಗಳು ಶಕ್ತಸಾಧನಗಳಾಗಿವೆ. ಜನಪದ ಪುರಾಣಗಳು ಕಟ್ಟು ಕಥೆಯಲ್ಲ. ಅವು ಬಹುಸಂಖ್ಯಾತ ಜನತೆಯ ಬದುಕಿಗೆ ಹಿಡಿದ ಕನ್ನಡಿ. "ಪುರಾಣ ಅನಾಗರಿಕ ಜನರಲ್ಲಿ ಕೇವಲ ಹೇಳಿದ ಕಥೆಯಲ್ಲ ಅತ್ಯಂತ ಕ್ರಿಯಾಶಾಲಿಯಾದ ಸಾಂಸ್ಕೃತಿಕ ಶಕ್ತಿ ಎಂಬ ಮಲಿನೊಸ್ಕಿಯ ಮಾತನ್ನು ಜನಪದ ಪುರಾಣಗಳಿಗೆ ಖಚಿತವಾಗಿ ಅನ್ವಯ ಮಾಡಬಹುದು"[27]

ಪದ್ಧತಿಗಳು, ಪ್ರಮುಖ ಸಿದ್ಧಾಂತಗಳು, ಧರ್ಮಗಳು ಆ ಬಗೆಯ ಮೂಲ ಪರಿಕಲ್ಪನೆಯ ಹುಟ್ಟಿನ ಐತಿಹಾಸಿಕ ಸಂಗತಿಗಳನ್ನು ಹೇಳುವ ಕಥೆಯೇ ಪುರಾಣ. ಪುರಾಣದ ಪ್ರಧಾನ ಸಂಗತಿಗಳು ದೇವತೆಗಳ ಸುತ್ತ ಹೆಣೆಯಲ್ಪಟ್ಟಿವೆ. "ಆದಿಮಾನವನ ನಿಸರ್ಗನಿಯಮವನ್ನು ವಿವರಿಸಲು ಮಾಡಿದ ಪ್ರಯತ್ನವೇ ಪುರಾಣ. ಸೂರ್ಯ, ಜಗತ್ತು, ಆಕಾಶ ಮತ್ತು ಮರಣೋತ್ತರ ಜೀವನವೇ ಪುರಾಣಗಳ ಉಗಮದ ಮೂಲ ಪ್ರೇರಣೆಗಳು. ಪುರಾಣ ಕಥೆಗಳಲ್ಲಿ ಮನುಷ್ಯನ ಸಾಮರ್ಥ್ಯವನ್ನು ಮೀರಿದ ಚಟುವಟಿಕೆಗಳನ್ನು ಕಾಣುತ್ತೇವೆ"[28] ನಿಜಜೀವನದಲ್ಲಿ ಮಾಡಲಾಗದ್ದನ್ನು ಮನುಷ್ಯ ಪುರಾಣದಲ್ಲಿ ಸಾಧಿಸಿ ತೋರಿಸುತ್ತಾನೆ. ಅವನ ಹಗಲು ಗನಸುಗಳು ಪುರಾಣದಲ್ಲಿ ನಿಜರೂಪವನ್ನು ತಳೆಯುತ್ತದೆ.

**ತುಳಸಿ ಕಥೆ :** ಸಮುದ್ರಮಂಥನ ಸಮಯದಲ್ಲಿ ಅಮೃತ ಕಲಶ ಉದ್ಭವಿಸಿತೆಂದು, ಅದನ್ನು ಕೈಯಲ್ಲಿ ವಿಷ್ಣು ಹಿಡಿದಾಗ, ಆ ಸ್ವಾಮಿಯ ಕಣ್ಣಿನಿಂದ ಇಳಿದ ಆನಂದಭಾಷ್ಪ ಕಲಶದಲ್ಲಿ ಸೇರಿ, ಅನಂತರ ನೆಲಕ್ಕೆ ಬಿದ್ದು ಗಿಡವಾಗಿ ಹುಟ್ಟಿತೆಂದು, ಅದೇ ಶ್ರೀ ತುಳಸಿ ಗಿಡವೆಂದು ಹೇಳುತ್ತಾರೆ.

**ಪದ್ಮಪುರಾಣದಲ್ಲಿ :** ತುಳಸಿ ಎಂಬ ಹೆಸರೇ ಅತ್ಯಂತ ಶ್ರೇಷ್ಠದಾಯಕವಾಗಿದೆ. ಪರಮಾತ್ಮನಿಗೆ ಅರ್ಪಿಸುವ ಅನೇಕ ಶ್ರೇಷ್ಠ ಕರ್ಮಗಳಲ್ಲಿ ತುಳಸಿ ಪೂಜೆಯೂ ಮುಖ್ಯವಾದುದು. ಧರ್ಮಧ್ವಜನ ಪುತ್ರಿ ತುಳಸಿ. ಆಕೆ ತನಗೆ ಭಗವಂತನೇ ಪತಿಯಾಗಬೇಕೆಂದು ತಪಸ್ಸು ಮಾಡಿದಳು. ಮೊದಲು ಶಂಖಚೂಡ ಎಂಬ ರಾಕ್ಷಸನಿಗೆ ಪತ್ನಿಯಾದಳು. ಅನಂತರ ಭಗವಂತನು ಆತನನ್ನು ಸಂಹರಿಸಿದರಿಂದ ಭಗವಂತನಿಗೆ ಪತ್ನಿಯಾದಳು ಎಂದು ಪದ್ಮಪುರಾಣದ ಕಥೆ ಹೇಳುತ್ತದೆ.

ಭಗವಂತನನ್ನು ವರಿಸಿದ ತುಳಸಿ ತನ್ನ ದೇಹವನ್ನು ತ್ಯಜಿಸಿ ವೈಕುಂಠಕ್ಕೆ ತೆರಳುವಳು. ಆಕೆ ತ್ಯಜಿಸಿದ ದೇಹ ಗಂಡಕೀ ನದಿಯಾಗಿಯೂ, ಅವಳ ಕೇಶರಾಶಿ ತುಳಸಿ ಹೆಸರಿನ ಗಿಡವಾಗಿಯೂ ಪರಮ ಪವಿತ್ರವಾಯಿತು. ಗಂಡಕೀ ನದಿತೀರದಲ್ಲಿ ಭಗವಂತನು ಶಿಲಾರೂಪದಲ್ಲಿ ಕಾಣಿಸಿ ಕೊಂಡನು. ಈ ಶಿಲೆಗಳೆ 'ಸಾಲಿಗ್ರಾಮ' ಎನಿಸಿರುವುದು.

ತುಳಸಿಗಿಡದ ಬುಡದಲ್ಲಿ ಸಕಲ ದೇವತೆಗಳು ಆವಾಸ ಸ್ಥಾನವಿರುವುದು. ತುಳಸಿ ಮಾಲೆ ಭಗವಂತನಿಗೆ ಅತ್ಯಂತ ಪ್ರಿಯವಾದುದು. ತುಳಸಿ ಇಲ್ಲದೆ ವಿಷ್ಣು ಪೂಜೆ ಅಪೂರ್ಣವೆಂದೇ ಹೇಳುತ್ತಾರೆ.[29] ಪುರಂದರ ದಾಸರ ಹಾಡು: 'ಎಲ್ಲಾ ಸಾಧನವಿದ್ದು ತುಳಸಿ ಇಲ್ಲದ ಪೂಜೆ ಒಲ್ಲನೋಹರಿ ಕೊಳ್ಳನೋ' ಎಂದು ತುಳಸಿಯ ಮಹತ್ವವನ್ನು ಸಾರಿದ್ದಾರೆ.

**ಬನ್ನಿಮಂಟಪ** : "ನವರಾತ್ರಿ ಆಚರಣೆಯ ಸಂದರ್ಭದಲ್ಲಿ ಬನ್ನಿ ಅಥವಾ ಶಮಿ ವೃಕ್ಷಕ್ಕೆ ವಿಶೇಷ ಪೂಜೆ ಸಲ್ಲುತ್ತದೆ. ಕನ್ನಡದಲ್ಲಿ ಬನ್ನಿಮರ ಎಂಬುದು ಸಂಸ್ಕೃತದಲ್ಲಿ ಶಮಿವೃಕ್ಷವಾಗಿದೆ. ವಿಜಯದಶಮಿಯಂದು ಈ ಮರಕ್ಕೆ ಪ್ರಧಾನ್ಯತೆ ಹೆಚ್ಚಿದೆ. ಕಾರಣ ಗೋಗ್ರಹಣ ಸಂದರ್ಭದಲ್ಲಿ ಅರ್ಜುನನಿಗೆ ದೊರೆತ ವಿಜಯಕ್ಕೆ ಬನ್ನಿಮರದ ಕೃಪೆಯೇ ಕಾರಣ. ಅರ್ಜುನ ಬನ್ನಿಮರದ ಮೇಲಿರಿಸಿದ್ದ ಬಿಲ್ಲು ಬಾಣಗಳಿಂದ ಯುದ್ಧ ಮಾಡಿದ್ದರಿಂದ ವಿಜಯ ಪ್ರಾಪ್ತವಾಯಿತು. ತ್ರೇತಾಯುಗದಲ್ಲಿ ಸೂರ್ಯವಂಶದ ರಾಜರು ನವರಾತ್ರಿಯ ಕಾಲದಲ್ಲಿ ತಮ್ಮ ಬಂಧು ಮಿತ್ರರಿಗೆ ಬಂಗಾರವನ್ನೇ ಹಂಚುತ್ತಿದ್ದರು. ಅದೇ ವಂಶದ ರಘುಮಹಾರಾಜನಿಗೆ ಬನ್ನಿಮರದ ಕೃಪೆಯಿಂದ ರಾಶಿ ರಾಶಿ ಬಂಗಾರ ದೊರೆಯುತ್ತಿತ್ತು. ಈ ಕಾರಣಗಳಿಂದ ಬನ್ನಿಮರವು ಚಿನ್ನಕ್ಕೆ ಸಮ ಎಂದು ಪೂಜಿಸುತ್ತಿದ್ದರು. ಅರ್ಜುನನ ಜಯ, ರಾಮನ ಜಯ ಇಂತಹ ಸಂದರ್ಭಗಳು ಘಟಿಸಿರುವುದೂ ವಿಜಯದಶಮಿಯ ದಿನದಂದು. ಈ ವಿಧದ ಪೌರಾಣಿಕ ಹಿನ್ನೆಲೆಯೂ ಬನ್ನಿಮರಕ್ಕಿದೆ. ಈ ಹೆಸರಿನಿಂದಲೇ ಬನ್ನಿಮಂಟಪ ಎಂಬ ಬಡಾವಣೆ ರೂಪುತಳೆದಿದೆ. ಇಂದಿಗೂ ಮೈಸೂರು ಅರಮನೆಯ ದಸರಾ ಮೆರವಣಿಗೆ ಮುಕ್ತಾಯವಾಗುವುದು ಬನ್ನಿಮಂಟಪದ ಬಾಲವನದಲ್ಲಿ ಬನ್ನಿ ಪೂಜೆಯೊಂದಿಗೆ ಎಂಬುದು ಗಮನಾರ್ಹ"[30]

**ಹೆಬ್ಬಾಳು** : ಈ ಪ್ರದೇಶವು ಭೃಗು ಮಹರ್ಷಿಗಳ ತಪೋಭೂಮಿಯಾಗಿ ತಮ್ಮ ಧ್ಯಾನ ತಪಸ್ಸು, ನಿಷ್ಠೆಯಿಂದ ನಾರಾಯಣನ ಕೃಪೆಗೆ ಪಾತ್ರರಾದರು. ಆ ವೇಳೆಗೆ ಇವರಿಗೆ ಜನಿಸಿದ ಮಗಳಿಗೆ 'ಭಾರ್ಗವಿ' ಎಂದು ಹೆಸರಿಟ್ಟರು. ಆದರೆ ಪ್ರಿತಿಯಿಂದ ಮಗಳನ್ನು 'ಲಕ್ಷ್ಮಿದೇವಿ' ಎಂದು ಕರೆಯುತ್ತಿದ್ದರು. ಮಗಳು ಪ್ರೌಢಾವಸ್ಥೆಗೆ ಬಂದ ಮೇಲೆ ತಮ್ಮ ತಂದೆಯ ಬಳಿ ನಾರಾಯಣನನ್ನೇ ಮದುವೆಯಾಗುವುದಾಗಿ ಅರಿಕೆಯಿತ್ತಳು. ಇದನ್ನು ಕೇಳಿದ ನೊಂದಂತಹ ಭೃಗು ಮಹರ್ಷಿಗಳು ಪರಮಾತ್ಮನೆಲ್ಲಿ ನಾವೆಲ್ಲಿ ಎಂದು ಚಿಂತೆಗೀಡಾಗಿದ್ದಾಗ, ನಾರದ ಮುನಿಗಳು ಪ್ರತ್ಯಕ್ಷವಾಗಿ ನಿಮ್ಮ ಮಗಳು ಲಕ್ಷ್ಮಿಗೆ ಕಲ್ಯಾಣಪ್ರಾಪ್ತವಾಗುತ್ತದೆ ಎಂದು ಹೇಳುತ್ತಾರೆ. ಅಲ್ಲದೇ ನಾನು ದೇವಾದಿ ದೇವತೆಗಳಿಗೆ, ಕಿನ್ನರ ಕಿಂಪುರುಷರಿಗೆ, ಗಂಧರ್ವರಿಗೆ ಹೇಳಿ ಆಹ್ವಾನಿಸಿರುವೆನು ನೀವು ನಿಶ್ಚಿತೆಯಿಂದಿರಿ ಎಂದು ಹೇಳಿ ಹರಸಿ ಹೋದರು. ಅದೇ ಸಂತೋಷದಲ್ಲಿ ಭೃಗು ಮಹರ್ಷಿಗಳು ರೋಮಾಂಚನಗೊಂಡು ಹೇ.. ಬಾಲೆ.. ಲಕ್ಷ್ಮಿಕಾಂತಂಭಜೆ ಎಂದು ಗಟ್ಟಿಯಾಗಿ ಕೂಗಿದರು. ಅದು ಕಾಡಲ್ಲಿದ್ದ ಖಗ, ಮೃಗ, ಪಕ್ಷಿಗಳೆಲ್ಲರ ಕಲರವದೊಂದಿಗೆ ಸಪ್ತ ಸಾರಿ ಪ್ರತಿಧ್ವನಿಸಿತು. ಹೀಗೆ ಭೃಗು ಮುನಿಗಳು ತಮ್ಮ ಮಗಳನ್ನು ಹೇ ಬಾಲೇ ಎಂದು ಕರೆದದ್ದು ಹೇಬಾಲೆ> ಹೆಬ್ಬಾಲೆ> ಹೇಬಾಳೆ> ಹೆಬ್ಬಾಳೆ> ಹೆಬ್ಬಾಳ> ಹೆಬ್ಬಾಳು ಆಗಿ ಬದಲಾಯಿತೆಂದು ರಂಗಸ್ವಾಮಿಯವರು ಹೇಳುತ್ತಾರೆ.

**ಮಹಾಶಿವರಾತ್ರಿ ಆಚರಣೆಗೆ ಬರಲು ಇರುವ ಪುರಾಣ ಕಥೆ** : ಸೃಷ್ಟಿಕರ್ತನಾದ ಬ್ರಹ್ಮ ಮತ್ತು ರಕ್ಷಕನಾದ ವಿಷ್ಣು ಪರಸ್ಪರ ಹಿರಿಮೆಯ ಬಗ್ಗೆ ಒಮ್ಮೆ ವಾದ–ವಿವಾದದಲ್ಲಿ ತೊಡಗಿದ್ದರು. ಅವರಿಬ್ಬರ ನಡುವೆ ಉಜ್ವಲ ಲಿಂಗವೊಂದು ಕಾಣಿಸಿಕೊಂಡು ಅವರೀರ್ವರಲ್ಲಿ ಯಾರು ಆ ಲಿಂಗದ ತುತ್ತ ತುದಿಯನ್ನು ಮುಟ್ಟುವರೋ ಅವರನ್ನು ಹಿರಿಯರೆಂದು ಪರಿಗಣಿಸಲಾಗುವುದೆಂದು ಅಶರೀರವಾಣಿ ನುಡಿಯಿತು. ಆಯಿತೆಂದು ಇಬ್ಬರೂ ಪ್ರಯತ್ನಿಸಿ ವಿಫಲರಾದ್ದರಿಂದ ಆ ಉಜ್ವಲ ಜ್ಯೋತಿಯು ಸ್ತಂಭದಂತೆ ಕಾಣಿಸಿಕೊಂಡಿದ್ದ ಲಿಂಗರೂಪದ ಶಿವನ ಹಿರಿಮೆಯನ್ನು ಅವರು ಒಪ್ಪಿಕೊಂಡರು. ಅಂದಿನಿಂದ ಶಿವರಾತ್ರಿ ಆಚರಣೆ ಪ್ರಾರಂಭವಾಯಿತು ಎಂಬ ಕಥೆಯಿದೆ.

ಶಿವರಾತ್ರಿ ಹಬ್ಬವನ್ನು ಕುರಿತು ಮತ್ತೊಂದು ಪುರಾಣ ಕತೆ ಇಂತಿದೆ. ಒಮ್ಮೆ ಶಿವಭಕ್ತೆ ಪ್ರತಿದಿನ ಶಿವನನ್ನು ಪೂಜಿಸುತ್ತಾ 'ನನ್ನ ಪಾದ ನಿನ್ನ ತಲೆಯ ಮೇಲೆ' ಎಂದು ತಪ್ಪಾಗಿ ಮಾರ್ಧನಿಸುತ್ತಿದ್ದಳು ಅವಳ ಭಕ್ತಿಗೆ ಮೆಚ್ಚಿದ ಶಿವ ಅವಳ ಅಂತ್ಯಕಾಲದಲ್ಲಿ ಪ್ರತ್ಯಕ್ಷವಾಗಿ ತುಂಬೆ ಹೂವನ್ನು ಸೃಷ್ಟಿಸಿ ತನ್ನ ತಲೆಯ ಮೇಲೆ ಧರಿಸಿಕೊಂಡನಂತೆ ಆದುದರಿಂದ ತುಂಬೆ ಹೂವು ಮಾನವನ ಪಾದದಂತಿರುವುದು ಈ ದಂತ ಕತೆಗೆ ಪೂರಕವಾಗಿದೆ. ಕಾರ್ತಿಕ ಮಾಸದ ಸೋಮವಾರದಂದು ತುಂಬೆ ಹೂವಿನಿಂದ ಶಿವನನ್ನು ಪೂಜಿಸಿದರೆ ಬೇಡಿದ ವರವನ್ನು ಕರುಣಿಸುವನೆಂದು ಜನಪದರು ನಂಬುತ್ತಾರೆ.

**ಯುಗಾದಿಯ ಪುರಾಣದ ಹಿನ್ನೆಲೆ** : ಬ್ರಹ್ಮನು ಪರಿಪೂರ್ಣವಾದ ಸೃಷ್ಟಿಕಾರ್ಯವನ್ನು ಮುಗಿಸಿದ್ದು ಯುಗಾದಿಯ ದಿನ. ಶ್ರೀರಾಮಚಂದ್ರನು ಚೈತ್ರಶುದ್ಧ ಪಾಡ್ಯಮಿಯಂದೇ ವಿಜಯೋತ್ಸವ ಆಚರಿಸಿದ. ಉಜ್ಜಯಿನಿಯ ವಿಕ್ರಮಾದಿತ್ಯ ನಮ್ಮ ಶಾಲಿವಾಹನನನ್ನು ಪರಾಭವಗೊಳಿಸಿ ತನ್ನ ಶಕವನ್ನು ಸ್ಥಾಪಿಸಿದ್ದು ಈ ದಿನವೆ. ರಾವಣಾಸುರನನ್ನು ಹಾಗೂ ಅವನ ಅಸುರೀಶಕ್ತಿಯನ್ನು ದಮನ ಮಾಡಿದ್ದು ಯುಗಾದಿ ಶುಭದಿನದಂದು ಶ್ರೀರಾಮಚಂದ್ರ ಪಟ್ಟಾಭಿಷಕ್ತನಾಗುತ್ತಾನೆ.

## ಪುರಾಣಗಳಲ್ಲಿ ವೃಕ್ಷಗಳು

ಪುರಾಣಗಳಲ್ಲಿ ವೃಕ್ಷಗಳ ಬಗೆಗೆ ಅನೇಕ ವಿಷಯಗಳು ವರ್ಣಿತವಾಗಿದೆ. ಸ್ಕಂದ ಮಹಾಪುರಾಣದಲ್ಲಿ ವೃಕ್ಷಗಳನ್ನು ಬೆಳೆಸುವ ಕುರಿತಾಗಿ ಪ್ರಶಂಸೆ ಹೀಗೆ ಬಂದಿದೆ.

ಯಾವುದೇ ವೃಕ್ಷವನ್ನು ನೆಟ್ಟು ಶ್ರದ್ಧೆಯಿಂದ ಬೆಳೆಸಿ ಪ್ರತಿನಿತ್ಯ ಅದಕ್ಕೆ ಬೇಕಾಗುವಷ್ಟು ನೀರನ್ನು ಉಣ್ಣಿಸುವವನು ಪುಣ್ಯಬಾಗಿಯಾಗುತ್ತಾನೆ. ಎಲ್ಲಾ ವೃಕ್ಷಗಳಲ್ಲಿ ದೇವತಾ ಸಾನಿಧ್ಯವಿರುತ್ತದೆ. ವೃಕ್ಷಗಳಲ್ಲಿ ಇರುವ ದೇವತೆಗಳ ಪಾಲಿಗೆ ವೃಕ್ಷಕ್ಕೆ ಮಾನವನು ಹಾಕುವ ನೀರು

ಅಮೃತ ಪ್ರಾಯವಾಗುತ್ತದೆ. ವೃಕ್ಷಗಳಿಗೆ ನೀರು ಹಾಕುವುದರಿಂದ ದೇವತೆಗಳಿಗೆ ಅಮೃತ ನೀಡಿದಷ್ಟು ಸಂತೋಷವಾಗುತ್ತದೆ. ಇದರಿಂದ ಮನುಷ್ಯನಿಗೆ ಒಳ್ಳೆಯ ಪುಣ್ಯಾಭಿವೃದ್ಧಿ ಉಂಟಾಗುತ್ತದೆ. ಚಾತುರ್ಮಾಸ್ಯ ಕಾಲದಲ್ಲಿ ವೃಕ್ಷಗಳು ಮಾನವನು ಹಾಕಿದ ನೀರನ್ನು ಉಂಡು ಅವನಿಗೆ ಸಮೃದ್ಧಿಯನ್ನು ಉಂಟುಮಾಡುತ್ತವೆ.

ಬ್ರಹ್ಮದೇವನು ವಟ ವೃಕ್ಷವನ್ನು ಆಶ್ರಯಿಸಿರುತ್ತಾನೆ. ವಟವೃಕ್ಷದ ಪೋಷಣೆಯಿಂದ ಬ್ರಹ್ಮನು ತೃಪ್ತನಾಗುತ್ತಾನೆ, ಸಾವಿತ್ರಿದೇವಿಯು ಎಳ್ಳಿನ ಗಿಡದಲ್ಲಿರುತ್ತಾಳೆ. ಇಂದ್ರನು ಗೋಧಿ ದಾನ್ಯದಲ್ಲಿ ಇರುತ್ತಾನೆ. ಎಲ್ಲಾ ವೃಕ್ಷಗಳಲ್ಲೂ ಗರಿಕೆಯಂಥ ಚಿಕ್ಕ ಸಸ್ಯಗಳಲ್ಲಿ ದೇವತೆಗಳ ಅಂಶವಿರುತ್ತದೆ. ದೇವತೆಗಳು ವೃಕ್ಷಗಳನ್ನು ಆಶ್ರಯಿಸಿಕೊಂಡು ಇರುವರು ಯಾವ ಕಾರಣದಿಂದಲೂ ವೃಕ್ಷಗಳನ್ನು ಉಪೇಕ್ಷಿಸುವುದು, ಕಡಿಯುವುದು ಪಾಪಜನಕವಾದ ಕಾರ್ಯವೆನಿಸುತ್ತದೆ.

ಮಾವಿನ ವೃಕ್ಷದಲ್ಲಿ ಪ್ರಜಾಪತಿ, ಪುನ್ನಾಗ ವೃಕ್ಷದಲ್ಲಿ ಯಕ್ಷರು, ನಾಗ ವೃಕ್ಷದಲ್ಲಿ ನಾಗ, ಕಂತೋಲ ವೃಕ್ಷದಲ್ಲಿ ಸಿದ್ದರು, ಹಲಸಿನ ವೃಕ್ಷದಲ್ಲಿ ಗುಯಕರು, ಮೆಣಸಿನ ಗಿಡದಲ್ಲಿ ಕಿನ್ನರರು, ರಕ್ತಾಂಜನ ವೃಕ್ಷದಲ್ಲಿ ಅಗ್ನಿಯು, ಖರ್ಜುರೀ ವೃಕ್ಷದಲ್ಲಿ ವರುಣ ದೇವತೆ, ಪೊಗ ವೃಕ್ಷದಲ್ಲಿ ಹನುಮ, ಅಶೋಕ ವೃಕ್ಷದಲ್ಲಿ ಕುಬೇರ, ಬದರೀ ವೃಕ್ಷದಲ್ಲಿ ರುದ್ರನು, ಮಹಾತಾಲ ವೃಕ್ಷದಲ್ಲಿ ಸಪ್ತರ್ಷಿಗಳು, ಜಂಬೂ ವೃಕ್ಷದಲ್ಲಿ ಮೇಘಾಭಿಮಾನಿ ದೇವತೆಗಳ ಅಂಶವಿರುವುದು ಈ ಎಲ್ಲ ವೃಕ್ಷಗಳನ್ನು ಬೆಳಸಿ ಸರಿಯಾಗಿ ಪೋಷಿಸಿದವನಿಗೆ ಅನಂತಪುಣ್ಯ ಪ್ರಾಪ್ತಿಯಾಗುತ್ತದೆ.

**“**ಪದ್ಮಪುರಾಣದಲ್ಲಿ ವೃಕ್ಷಗಳನ್ನು ಬೆಳೆಸುವ ಬಗೆಗೆ ಹೀಗೆ ತಿಳಿಸಿದ್ದಾರೆ. ನದಿ, ಹಳ್ಳ, ಕೆರೆ, ಕಾಲುವೆ ಮುಂತಾದವುಗಳ ದಡದಲ್ಲಿ ವೃಕ್ಷಗಳನ್ನು ಬೆಳೆಸಿದರೆ ಬರುವ ಫಲ ಇಂತಿಷ್ಟು ಎಂದು ಹೇಳಲು ಸಾಧ್ಯವಿಲ್ಲ. ಜಲಾಶಯದ ಹತ್ತಿರ ಅರಳಿಮರ, ಆಲದ ಮರ ಹಾಗೂ ನೆರಳುಕೊಡುವ ಮರಗಳನ್ನು ಬೆಳೆಸಿದರೆ ನೂರು ಯಜ್ಞಗಳನ್ನು ಮಾಡಿದಕ್ಕಿಂತ ಅಧಿಕ ಪುಣ್ಯ ಬರುತ್ತದೆ. ಹಕ್ಕಿಗಳು, ಮಾನವರು, ವೃಕ್ಷಗಳ ಹಣ್ಣುಗಳನ್ನು ತಿಂದು ಗಿಡದ ನೆರಳಿನಲ್ಲಿ ವಿಶ್ರಮಿಸಿ ಆನಂದ ಪಡುತ್ತಾರೆ. ಕಾರಣ ಇಂಥ ವೃಕ್ಷಗಳನ್ನು ನೆಟ್ಟು ನೀರು ಹಾಕಿ ಬೆಳೆಸಿದರೆ ಅಕ್ಷಯಫಲ(ಸ್ವರ್ಗ)ವು ಲಭಿಸುತ್ತದೆ. ವೃಕ್ಷಗಳ ತೋಪುಗಳನ್ನು ನಿರ್ಮಿಸುವುದರಿಂದ ಇಹದಲ್ಲಿ ಶುಭವನ್ನು ಹೊಂದಿ ಮುಂದೆ ಸ್ವರ್ಗವನ್ನು ಅನುಭವಿಸುತ್ತಾರೆ.**”**[31]

ಏವಂ ವೃಕ್ಷ: ಮಹಾಸತ್ವಾ:

ಸರ್ವೇ ದೇವರೂಪಿಣ:

ತದರ್ಚಾ ಪಿತೃವತ್ ಕಾರ್ಯಾ

ಶುಶ್ರೂಷಾ ಜಲ ಪಿಂಡಕಂ

ದೊಡ್ಡ ದೊಡ್ಡ ವೃಕ್ಷಗಳೆಂದರೆ ದೇವರೇ ಇದ್ದಂತೆ ಪಿತೃಗಳನ್ನು ಪೂಜಿಸುವಂತೆ ಆ ವೃಕ್ಷಗಳನ್ನು ಪೂಜಿಸಬೇಕು. ಅವುಗಳ ಸೇವೆ, ನೀರು, ಗೊಬ್ಬರ ಕೊಡಬೇಕು. ಇದರಿಂದ ಅಶ್ವಮೇಧಯಾಗದ ಫಲ ಬರುತ್ತದೆ. ಇದರಂತೆ ನೆಲ್ಲಿ, ಹುಣಸೆ, ಬೇವು, ಮಾವು ಮುಂತಾದ ವೃಕ್ಷಗಳನ್ನು ಬೆಳೆಸಬೇಕು. ಹೀಗೆ ಪುರಾಣಗಳಲ್ಲಿ ವೃಕ್ಷಗಳ ಮಹಾಫಲಗಳ ಬಗ್ಗೆ ವಿವರಿಸಿದ್ದಾರೆ. ಮರಗಳಿಗೆ ಸಂಬಂಧಿಸಿದಂತೆ ಅಧ್ಯಾಯ ಐದರಲ್ಲಿ ವಿವರಿಸಲಾಗಿದೆ.

## ಜನಪದ ಗೀತೆಗಳು

"ಅನಕ್ಷರಸ್ಥ ಜನಸಮೂಹದ ನಡುವೆ ವಾಕ್‌ಸಂಪ್ರದಾಯದ ಮೂಲಕ ಹರಿದು ಬಂದಿರುವ ಒಂದು ಗುಂಪಿನ ಕಾವ್ಯ ಮತ್ತು ಸಂಗೀತಗಳ ಸಮಾವೇಶದಿಂದಾದುದೆ ಜನಪದ ಗೀತೆಗಳು"[32]

ಜನಪದ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲಿ ಗೀತೆಯು ಒಂದಾಗಿದ್ದು ವೈವಿಧ್ಯಮಯವು, ಸಮೃದ್ಧವೂ ಆಗಿದೆ. ಜನಪದ ಹಾಡುಗಳು ಜನಪದರ ಭಾವಗಂಗೆಯಿಂದ ಮೂಡಿಬಂದ ಅನರ್ಘ್ಯ ರತ್ನಗಳೇ ಆಗಿವೆ. ದುಗುಡ-ದುಮ್ಮಾನ, ಪ್ರೀತಿ-ವಾತ್ಸಲ್ಯ, ನೋವು-ನಲಿವು, ಕಲ್ಪನೆ-ಕಲಾಭಿರುಚಿ, ಧರ್ಮ-ದರ್ಶನ, ನಂಬಿಕೆ-ಸಂಪ್ರದಾಯ ಇತ್ಯಾದಿ ಎಲ್ಲ ಭಾವಗಳೂ ಗೀತೆಯ ರೂಪದಳೆದು ಜನಮಾನಸದ ಮೌಖಿಕ ಪರಂಪರೆಯ ಮೂಲಕ ತಲತಲಾಂತರದಿಂದ ಮುಂದುವರಿದುಕೊಂಡು ಬಂದಿವೆ. ಶಿಶುಗೀತೆಗಳಿಂದ ಮಹಾಕಾವ್ಯಗಳವರೆಗೆ ಜನಪದ ಗೀತೆಗಳ ವ್ಯಾಪ್ತಿಯು ವಿಶಾಲವಾಗಿ ಹರಡಿಕೊಂಡಿದೆ. ಲೌಖಿಕ ಅನುಭವಗಳು ಇಲ್ಲಿ ಮಡುಗಟ್ಟಿರುವಂತೆ ದೇವರು ಧರ್ಮಕ್ಕೆ ಸಂಬಂಧಿಸಿದ ಪಾರಮಾರ್ಥಿಕ ಅನುಭವಗಳೂ ಇಲ್ಲಿ ಎಡೆಮೂಡಿವೆ.

ಬೆಳಗಾಗೆ ನಾನೆದ್ದು ಯಾರ್‍ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆವಂಥ! ಭೂಮಿತಾಯವ್ನ
ಎದ್ದೊಂದು ಗಳಿಗೆ ನೆನೆದೇನ!!

'ಬೆಳಗಾಗೆ ನಾನೆದ್ದು ಯಾರ್‍ಯಾರ ನೆನೆಯಲಿ' ಎನ್ನುವಲ್ಲಿಯೇ ಅವರ ದೇವರುಗಳ ಪಟ್ಟಿ ಎಷ್ಟು ದೊಡ್ಡದೆಂಬುದು ಗೊತ್ತಾಗುತ್ತದೆ.

ಎದ್ದೋನೆ ನಿಮಧ್ಯಾನ ಏಳುತಲಿ ನಿಮಧ್ಯಾನ
ಸಿದ್ಧರ ಧ್ಯಾನ ಶಿವ ಧ್ಯಾನ! ಮಾ ಶಿವನೆ
ನಿದ್ದೆಗಣ್ಣಾಗೆ ನಿಮಧ್ಯಾನ!!

ಎಚ್ಚರವಾಗಿರುವಾಗ ದೇವರನ್ನು ನೆನೆಯುವುದಷ್ಟೇ ಅಲ್ಲ ನಿದ್ದೆಗಣ್ಣಿನಲ್ಲಿಯೂ ಶಿವನನ್ನು ಸ್ಮರಿಸುತ್ತಾರೆ. ದೇವರನ್ನು ನೆನೆಯದೆ, ಅವನನ್ನು ಪ್ರಾರ್ಥಿಸದೆ ಯಾವಕೆಲಸವನ್ನು ಅವರು ಮಾಡುವುದೇ ಇಲ್ಲ.

ಹೊತ್ತು ಮುಳುಗಿದರೇನು ಕತ್ತಲಾದರೇನು!
ಅಪ್ಪನಿನ ಬಳಿಗೆ ಬರುವೇನು! ಮಾದಯ್ಯ
ನಿನ್ನ ಮುತ್ತೀನ ಬಾಗಿಲು ತೆರಿದೀರೋ!!

ಎಷ್ಟು ಹೊತ್ತಾದರೂ ನಿನ್ನ ದರ್ಶನವನ್ನು ಪಡೆಯಲು ಬಂದೇ ಬರುತ್ತೇನೆ ನಿನ್ನ ದೇವಾಲಯದ ಮುತ್ತಿನ ಬಾಗಿಲನ್ನು ತೆರೆದಿಡು ಎಂದು ಬೇಡುತ್ತಾರೆ. ದೇವರನ್ನು ನೋಡಲು ನಾವು ಶೃಂಗರಿಸಿ ಕೊಂಡು ಕಾಣಿಕೆಯನ್ನು ಕೈಯಲ್ಲಿ ಹಿಡಿದು ಹೋಗಬೇಕಾಗಿಲ್ಲ. ಹೇಗೆ ಹೋದರು ದೇವರು ದರ್ಶನವನ್ನು ನೀಡುತ್ತಾನೆ, ಒಲಿಯುತ್ತಾನೆ, ಅದಕ್ಕೆ ಬೇಕಾಗಿರುವುದು ಬಾಹ್ಯಸೌಂದರ್ಯದ ಭಕ್ತಿಯಲ್ಲ, ಅಂತರಂಗದ ಸುಚಿತ್ವ ಭಕ್ತಿ.

ಒಟ್ಟಾರೆಯಾಗಿ ಜನಪದ ಗೀತೆಗಳಲ್ಲಿ ಭಕ್ತಿಯ ಪರಾಕಾಷ್ಠತೆಯನ್ನು ವ್ಯಕ್ತಪಡಿಸಿ, ದೇವರನ್ನು ಯಾವುದೋ ದೂರದ ಒಂದು ಶಕ್ತಿಯೆಂದು ಭಾವಿಸಿಲ್ಲ ತಮ್ಮ ಹತ್ತಿರದ ಬಂಧು, ಕಷ್ಟಕಾಲದಲ್ಲಿ ಆಗುವ ಆತ್ಮೀಯ ಸ್ನೇಹಿತ, ನಮ್ಮ ತಪ್ಪುಗಳನ್ನು ಶಿಕ್ಷಿಸುವ ತಂದೆ ತಾಯಿ ಎಂದು ತಿಳಿದಿದ್ದಾರೆ. ದೇವರನ್ನು ಕಂಡರೆ ಅವರಿಗೆ ಭಯವೇನೂ ಇಲ್ಲ; ಆದರೆ ಭಕ್ತಿಯಿದೆ, ಗೌರವವಿದೆ. ದೇವರನ್ನು ನಾನಾ ರೀತಿಯಲ್ಲಿ ಸತ್ಕರಿಸಿ ತಣಿಯುವ ಮಹದಾಸೆಯಿದೆ. ಆದ್ದರಿಂದ ಕರೆದಾಗ ದೇವರು ಬರಬೇಕು, ಅವರು ಪ್ರೀತಿಯಿಂದ ನೀಡಿದುದನ್ನು ಸ್ವೀಕರಿಸಬೇಕು. ಅವರ ಮನಸ್ಸಿಗೆ ಆ ಮೂಲಕ ಅವರು ತೃಪ್ತಿಯನ್ನು ನೀಡಬೇಕು. ಇಲ್ಲವಾದರೆ ಅವರು ಕೋಪಿಸಿಕೊಳ್ಳುತ್ತಾರೆ. ಮುನಿಸಿಕೊಳ್ಳುತ್ತಾರೆ. ಹೀಗೆ ಅವರ ಭಕ್ತಿಭಾವವೇ ವಿಶಿಷ್ಟವಾದುದಾಗಿದೆ.

ಕೆಲವೊಂದು ದೇವರು ಮತ್ತು ದೇವಾಲಯಗಳಿಗೆ ಸಂಬಂಧಿಸಿದಂತೆ ಇರುವ ಜನಪದ ಗೀತೆಗಳು ಈ ಕೆಳಕಂಡಂತಿವೆ. ಯಾವುದೇ ಕಾರ್ಯವಿದ್ದರೂ ಮೊದಲಿಗೆ ಪ್ರಾರ್ಥನೆಯೊಂದಿಗೆ ವಿಘ್ನಗಳನಾಶಕ ವಿನಾಯಕನನ್ನು ಸ್ತುತಿಸುವುದು ವಾಡಿಕೆ. ವಿನಾಯಕನನ್ನು ಮೊದಲು ನೆನೆದು ಪೂಜಿಸಿದರೆ ಮುಂದೆ ಯಾವುದೇ ವಿಘ್ನಗಳು ಎದುರಾಗುವುದಿಲ್ಲ ಎಂಬ ನಂಬಿಕೆ ಇದೆ. ಮುಕ್ಕೋಟಿ ದೇವರುಗಳಲ್ಲಿ ವಿನಾಯಕನಿಗೆ ಮೊದಲ ಪೂಜೆ ಸಲ್ಲುವುದು.

## ಪ್ರಾರ್ಥನೆ

**ಶರಣು ಶರಣುವಯ್ಯ ಗಣನಾಯ್ಕ**

ಶರಣು ಶರಣುವಯ್ಯ ಗಣನಾಯ್ಕ

ನಮ್ಮ ಕರುಣಾದಿಂದಲಿ ಕಾಯೋ ಗಣನಾಯ್ಕ

ಎಳ್ಳುಂಡೆ ಜೇನುತುಪ್ಪ ಗಣನಾಯ್ಕ

ನಮಗೆ ವಿದ್ಯಾವ ಕಲಿಸಯ್ಯ ಗಣನಾಯ್ಕ ॥

ಉಸಲಿ ಕಾಯಿಕಡುಬು ಗಣನಾಯ್ಕ

ನಿಮಗೆ ತಪ್ಪಾದೆ ಒಪ್ಪಿಸುವೆ ಗಣನಾಯ್ಕ

ನಿಮಗೆ ಚಿಗುರೆಲೆ ಕಳಿ ಅಡ್ಕೆ ಗಣನಾಯ್ಕ ॥

ಕೊಂಬೆಮೇಗ್ಲ ನಿಂಬೆಹಣ್ಣು ಗಣನಾಯ್ಕ

ನಿಮಗೆ ಜೋಡಿ ಇಡುಗಾಯಿ ಗಣನಾಯ್ಕ

ಕರ್ಪೂರ ಸಾಂಬ್ರಾಣಿ ಗಣನಾಯ್ಕ

ನಿಮ್ಗೆ ಮರುಗ ಮಲ್ಲಿಗೆ ಜಾಜಿ ಗಣನಾಯ್ಕ ॥

ಮೂಷಿಕ ವಾಹನ ಗಣನಾಯ್ಕ

ನಮ್ಮ ಶಿವನ ಕುಮಾರನಯ್ಯ ಗಣನಾಯ್ಕ

ಹೆಂಡ್ರಿಲ್ಲ ಮಕ್ಕಳಿಲ್ಲ ಗಣನಾಯ್ಕ

ನಮ್ಮ ಧ್ಯಾನಕ್ಕೆ ಒಲಿಯಯ್ಯ ಗಣನಾಯ್ಕ ॥

## ಕತ್ತಿ ಪವಾಡ

ಮಂಗಳ ಮಹಿಮ ಲಿಂಗದರೂಪ। ಸಂಗಮೇಶ್ವರ ಮಾದೇವಾ

ಲಿಂಗದ ವರಗಳ ಕರುಣಿಸಯ್ಯಾ ಗಂಗಾಧರನೇ ಮಾದೇವ ॥ಪ॥

ಮಾತು: ನಮ್ಮ ಮಾಯ್ಕಾರ ಗಂಡ ಹುಲಿವಾನದಯ್ಯ ನಮ್ಮಪ್ಪ

ಎಪ್ಪತ್ತೇಳು ಮಲೆಯ ಮಾಯ್ಕಾರ ಮಾದೇವನವರು

ಮಕ್ಕಳನ್ನು ಕೈಲಾಸಕ್ಕೆ ಕರಕ್ಕೊಂಡು ಹೋಗ್ತಾಯಿದ್ದಾರೆ

ಬಿಲ್ಲೂರು ಬಿಲ್ಲಯ್ಯನ ಮುಂದ್ಗಡೆ ಬಿಟ್ಕೊಂಡು

ಕೊಂಟೂರು ಕಾರಯ್ಯನ ಹಿಂದ್ಗಡೆ ಬಿಟ್ಕೊಂಡು

ಹಾಡು: ಆವರಾಳುವ ಗುರು ಹಾದಿನಾಗಿ ಆದಿಗುರು ದಯಮಾಡವರೆ।

ಲಿಂಗದ ವರಗಳ ಕರುಣಿಸಯ್ಯಾ ಗಂಗಾಧರನೇ ಮಾದೇವಾ ॥ಪ॥

ಮಾತು: ಸತ್ಯವಂತೆ ಶರಣೆ ಸಂಕಮ್ಮ ಬಹಳ ಪತಿವ್ರತೆ

ಅಂತವರ ಹೊಟ್ಟೇಲಿ ಹುಟ್ಟಿರುವಂತ

ಮಕ್ಕಳ ಸತ್ಯನೊಂದಪ ಪರೀಕ್ಷೆ ಮಾಡ್ಬೇಕೊಂತೇಳಿ

ಅಪ್ಪ ಮಕ್ಕಳ ನನಗ್ಯಾಕೊ ಆಯಾಸ ಆಯ್ತದೆ

ನೀವಿಬ್ಬರೂ ಆ ದಿಬ್ಬದ ಮ್ಯಾಲೆ

ಆಟ ಆಡ್ಕೊಳೀಂತ ಹೇಳಿದ್ರಂತೆ

ಹಾಡು: ಮಾದೇವ ಮಾತ ಕೇಳವರೆ ಮಕ್ಕಳು ಆಟಕ್ಕಾದ್ರು ಹೊಂಟವರೆ..॥

ಲಿಂಗದ ವರಗಳ ಕರುಣಿಸಯ್ಯ ಗಂಗಾಧರನೇ ಮಾದೇವಾ ॥ಪ॥

ಮಾತು: ನಮ್ಮ ಮಾಯ್ಕಾರ ಮಾದೇವನವರು

ಏನಂತ ಯೋಚ್ನೇ ಮಾಡ್ತಿದ್ದಾರಂದ್ರೆ

ಸತ್ಯವಂತ ಶರಣೆ ಸಂಕಮ್ಮನ ಮಕ್ಳನ್ನ

ಸತ್ಯ ಮಾಡೋಕಿದೆ ಒಳ್ಳೆ ಸಮಯಾಂತೇಳಿ

ಕೆಳಕಾಲ ಕೆಳಕ್ಕಿಟ್ಕೊಂಡು; ಮೇಲ್ಕಾಲ ಮೆಲಿಟ್ಕೊಂಡು

ಪಕ್ಕದಲ್ಲಿ ಒಂದು ಕತ್ತಿ ಮಾಡಿಕೊಂಡವರಂತೆ..

ಹಾಡು: ಅಪ್ಪ ಸತ್ತೋದರಂಗೆ ಮಲಗವರಲ್ಲೋ ಏಳು ಮಲೆಯ ಮಾದೇವಾ

ಲಿಂಗದ ವರಗಳ ಕರುಣಿಸಯ್ಯ ಗಂಗಾಧರನೇ ಮಾದೇವಾ ॥ಪ॥

ಮಾತು: ಜೋಡೆರಡು ಮಕ್ಳು ಗೋಲಿಗಜಗದ ಆಟವ ಆಡ್ಕೊಂಡು

ಗುಡಗುಡನೆ ಓಡಿಬಂದು ನಮ್ಮ ಸ್ವಾಮಿಗಳ ಪಾದಕ್ಕೆರಗಿ ನೋಡಿದರಂತೆ

ಅಯ್ಯೋ ಅಣ್ಣಯ್ಯ ಅಣ್ಣಯ್ಯ ನಮ್ಮನ್ನ ಕರ್ಕೊಂಡು ಬಂದಂತಹ

ತಂದೆಯವರು ಮತ್ತೆ ಬರೋದಿಲ್ಲ ಅಂತ ಹೇಳ್ಬಿಟ್ಟು

ಹಾಡು: ತಂದೆಯ ಋಣವ ಮಡಗಬಾರದು ನಾವು ಪ್ರಾಣವ ಬಿಡಬೇಕು

ಲಿಂಗದ ವರಗಳ ಕರುಣಿಸಯ್ಯಾ ಗಂಗಾಧರನೇ ಮಾದೇವಾ ॥ಪ॥

ಮಾತು: ಅಣ್ಣಯ್ಯ ಅಣ್ಣಯ್ಯ ನಾವು ಹೆಂಗ್ ಪ್ರಾಣ ಬಿಡಬೇಕು ಅಂತಂದ್ರೆ

ಸ್ವಾಮಿಗಳ ಪಕ್ಕದಲ್ಲಿರುವ ಕತ್ತಿನ ತಲಿಮ್ಯಾಲೆ ಮಾಡಿ

ನೆಲಕ್ಕೆ ಚುಚ್ಚಿ ಮರದಿಂದ ಒಂದೇ ಬಾರಿಗೆ ನೆಗೆದು

ಪ್ರಾಣವ ಬಿಡಬೇಕು ಅಂತ ಯೋಚ್ನೆ ಮಾಡುತ್ತಿದ್ರಂತೆ

ಹಾಡು: ಹಾಗಂತ ಅವ್ರೂ ಹೇಳವ್ರಲ್ಲೋ ಕೋಟೆರು ಮಂಡೆಕಾರಯ್ಯ

ಲಿಂಗದ ವರಗಳ ಕರುಣಿಸಯ್ಯಾ ಗಂಗಾಧರನೇ ಮಾದೇವಾ ॥ಪ॥

ಮಾತು: ಜೋಡೆರಡು ಮಕ್ಳೂ ಕತ್ತಿನ ನೆಲಕ್ಕೆ ನೆಟ್ಟು

ಮರ ಹತ್ತಿದರಂತೆ ಸಾಯೋಕ್ಕೋಸ್ಕರ

ಆಗ ನಮ್ಮ ಮಾಯ್ಕಾರ ಮಾದೇವನವರು

ನಾನು ಹೋಗಿ ಬದುಕಿಸಲಿಲ್ಲಾ ಅಂದ್ರೆ

ಮಕ್ಳು ಪ್ರಾಣಾನೆ ಬುಟ್ಟುಬುಡ್ತವೆಂತ ಹೇಳಿ

ಗುಡುಗುಡನೆ ಓಡೋಗಿ

ಎಡಗಡೆ ಕಿಬ್ರಿಲೊಂದು ಬಲಗಡೆ ಕಿಬ್ರಿಲೊಂದು ಮಕ್ಳನ್ನ ಎತ್ಕೊಂಡು

ಎಂತ ಸತ್ಯಾವಂಶ ಮಕ್ಕಳ್ರಪ್ಪ..

ನಿಮ್ಮನ್ನ ಪರೀಕ್ಷೆ ಮಾಡಕ್ಕೋಗಿ

ಸತ್ಯನ ಪರೀಕ್ಷೆ ಮಾಡ್ಕೊಂಡಾಂಗಾಯ್ತು;

ನೀವು ಕತ್ತಿನೆಟ್ಟಂತ ಸ್ಥಳ

ನಾಳೆ ಕಲಿಯುಗದಲ್ಲಿ ಕತ್ತಿ ಪವಾಡ ಅಂತಾಗ್ಲಿಂತ ಹೇಳ್ಬುಟ್ಟು

ಹಾಡು: ಅವ್ರು ಶಾಪವನಾದ್ರೂ ಕೊಟ್ಟವರೆ ಏಳು ಮಲೆಯ ಮಾದೇವಾ

ಲಿಂಗದ ವರಗಳ ಕರುಣಿಸಯ್ಯ ಗಂಗಾಧರನೇ ಮಾದೇವಾ ॥ಪ॥

## ಮಾದೇವ

ಆನೆ ಮಲೆಯ ಹಾಸಿಕೊಂಡವರೆ। ಮಾದೇವ

ಜೇನು ಮಲೆಯ ಹೊದ್ದುಕೊಂಡವರೆ ॥

ಎಪ್ಪತ್ತೇಳು ಮಲೆಯ ಸುರುಳಿಸುತ್ತಿ ನನ್ನೊಡೆಯ

ಏಳು ಬಾಯಿ ಹೊನ್ನುತ್ತದೊಳಗೆ

ಯೋಗಿಯಾಗಿ ಮಲಗವರೆ ॥ಪ॥

ಕೊರಳಲ್ಲಿ ನಾಗ ಸರ್ಪವ ಹಿಡಿದು ಸುತ್ತಿಕೊಂಡವರೆ

ಹದಿನಾರಂಕಣ ಗುಡಿಯೊಳಗೆ ನಗುತ ಕುಳಿತವರೆ

ಮುಂಗೈಯಲ್ಲಿ ಮುತ್ತಿನ ಜೋಳಿಗೆ ಧರಿಸಿಕೊಂಡವರೆ

ಹೆಬ್ಬುಲಿ ಏರಿ ಹೆಜ್ಜೇನು ಮಲಗೆ ಒಬ್ಬರೆ ಹೊಂಟವರೆ

ಸತ್ಯವಂತರ ಸತ್ವ ನೋಡತ ಸಾಲೂರು ಮಠದಲಿ ಕುಳಿತವರೆ ॥ಪ॥

ಉತ್ರಾಜಮ್ಮನ ಮಡಿಲಲಿ ಸಾಮಿ ಮದೇವನಾಗವರೆ

ಕಲ್ಯಾಣ ಪಟ್ಟಣ ಬಸವಣ್ಣನವರಿಗೆ ಗುರುಗಳೇ ಆಗವರೆ

ಸುತ್ತೂರು ಮಠದಲಿ ರಾಗಿಯ ಬೀಸಿ ಶಾಪವ ಕೊಟ್ಟವರೆ

ಕುಂತೂರು ಮಠದಲಿ ಪ್ರಭುಲಿಂಗ ಸ್ವಾಮಿಗೆ ಶ್ರಿಷ್ಯರೆ ಆಗವರೆ

ಕೊಳ್ಳೆಗಾಲದ ಮರಡಿಯ ಗುಡ್ಡೇಲಿ ಮಂಡಿಯೂರಿ ಕುಳಿತವರೆ ॥ಪ॥

ಬೀಡು ಗಂಪಣ್ಣರ ಬೇಡರ ಕಣ್ಣಯ್ಯನ ಭಕ್ತಿಗೆ ಒಲಿದವರೇ

ಮಲೆಯ ಸೋಲಿಗರ ಮನೆದೇವ್ರು ಆಗಿ ಮನದಲಿ ಕುಂತವರೆ

ನಾಗ ಮಲೆಯಲು ನಾಗರ ಹೆಡೆಯ ನೆರಳಲಿ ಮಲಗವರೆ

ಸಂಪಿಗೆ ಹೂವನ್ನ ಕಂಪನ್ನು ತಮ್ಮ ಪರುಷೆಗೆ ಚಲ್ಲವರೆ

ಬೆಟ್ಟಕ್ಕೆ ಬರುವ ಸ್ವಾಮಿ ಮತ್ತಷ್ಟು ಬಾಗ್ಯಕೊಡುವನೆಂದು

ಶರಣ ಸಂಕಮ್ಮನ ಭಕ್ತಿಗೆ ಒಲಿದು

ಸರಗೂರು ಮಠದಲಿ ಕುಳಿತವರೆ ॥ಪ॥

ಜನವಾಣಿ ಬೇರು ಕವಿವಾಣಿ ಹೂ ಎಂಬ ಬಿ.ಎಂ.ಶ್ರೀ ಅವರ ಅರ್ಥಪೂರ್ಣ ನುಡಿಗಳು ಜಾನಪದ ಪರಂಪರೆಯ ಶ್ರೇಷ್ಠತೆಯನ್ನು ಸಾರುತ್ತದೆ. ಜನಪದ ಸಂಸ್ಕೃತಿಯ ದೇಸಿಯ ಮಹಾನಾಯಕರಲ್ಲಿ ಮಾದೇಶ್ವರ ಮತ್ತು ಮಂಟೇಸ್ವಾಮಿ ಶ್ರೇಷ್ಠ ಪ್ರತಿನಿಧಿಗಳಾಗಿದ್ದಾರೆ. ಅದರಲ್ಲೂ ಮಾದೇಶ್ವರ ಲಕ್ಷಾಂತರ ಭಕ್ತರ ಆರಾಧ್ಯ ದೈವವಾಗಿರುವುದನ್ನು ಕಾಣಬಹುದು. ಭಕ್ತಿ ಪರವಶತೆ ಯಿಂದ ಜನಪದರು ಸಾವಿರಾರು ನುಡಿಗಳನ್ನು ಕಟ್ಟಿ ಮಾದೇಶ್ವರನ ಬಗ್ಗೆ ಹಾಡಿ ಹೊಗಳುವ ಮೂಲಕ ತಮ್ಮ ಭಕ್ತಿಯ ಪಾರಮ್ಯತೆಯನ್ನು ಮೆರೆದಿದ್ದಾರೆ.

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಸಮೃದ್ಧ ಕಾಡಿನ ಪರಿಸರದಲ್ಲಿ ನೆಲೆಸಿರುವ ಐತಿಹ್ಯದೊಂದಿಗೆ ಈ ಗೀತೆ ಆರಂಭವಾಗುತ್ತದೆ. ಆನೆಮಲೆ ಎಂದು ಹೆಸರಾಗಿರುವ ಬಹಳ ವಿಶಾಲವಾದ ಭೂಪ್ರದೇಶ. ಇದು ದೂರದಿಂದ ನೋಡುಗರಿಗೆ ಆನೆಯನ್ನು ಹೋಲುವುದರಿಂದ ಆನೆಮಲೆ ಎಂದು ಪ್ರಸಿದ್ಧಿಯಾಗಿದೆ. ಅಂತಹ ವಿಶಾಲವಾದ ಪ್ರದೇಶವನ್ನೆ ಹಾಸಿಕೊಂಡು, ಜೇನಿನಷ್ಟೆ ಸಿಹಿಯಾಗಿರುವ ಜೇನುಮಲೆಯನ್ನು ಹೊದ್ದುಕೊಂಡು ನೆಲೆಸಿರುವ ಮಾದಪ್ಪನ ಬೆಟ್ಟ ಎಂತವರನ್ನು ಆಕರ್ಷಿಸುತ್ತದೆ. ಮಾದಪ್ಪನ ಪರಿಷೆಗೆ ಬರುವ ಜನಸಾಗರ ಸರ್ಪದ ಹಾದಿಯೊಂದಿಗೆ ಸಾಗಿ ಬರುವಾಗ ಅದು ಸುರುಳಿಯಾಕಾರದಲ್ಲಿ ಸುತ್ತಿಬರುವ ಚಂದವ ನೋಡುವ ಸೋಬಗೆ ಸಂಭ್ರಮ. ಎಪ್ಪತ್ತೇಳು ಮಲೆಯ ಮೇಲೆ ನೆಲೆಸಿರುವ ಮುದ್ದು ಮಾದಪ್ಪನ ವೈಭವ ಯೋಗಿಗೆ ಯೋಗಿ ಮಹಾಯೋಗಿಯಾಗಿರುವ ಮಾದೇವನನ್ನು ಬಾಯಿ ತುಂಬಾ ಹೊಗಳುವ ಭಕ್ತರೆ ಧನ್ಯ.

ಮಾದಪ್ಪನ ಭೌತಿಕ ರೂಪದ ವರ್ಣನೆ ಜನಪದ ಪ್ರಜ್ಞೆಯಲ್ಲಿ ವಿಶಿಷ್ಟವಾಗಿ ವ್ಯಕ್ತಗೊಂಡಿದೆ. ಜಂಗಮ ವೇಷಧಾರಿಯಾದ ಮಹಾದೇಶ್ವರ ಕೊರಳಲ್ಲಿ ವಿಷಸರ್ಪವನ್ನು ಸುತ್ತಿ ನಗು ಮುಖದ ವಿಸ್ಮಿತ ಪ್ರಶಾಂತ ಭಾವದಿಂದ ಸಂಚರಿಸುತ್ತ ಮುಂಗೈಯಲ್ಲಿ ಜೋಳಿಗೆ ಧರಿಸಿ ಮನೆ ಮನೆಗೆ ಬಿಕ್ಷೆಗೆ ಹೋಗುವ ಸರಳ ಬದುಕಿನ ಸನ್ಯಾಸತ್ವ ಕಂಡು ಬೆರಗಾಗಿದ್ದಾರೆ. ಕಾಡಿನಲ್ಲಿರುವ ದುಷ್ಟ ಪ್ರಾಣಿಗಳ ನಡುವಿನ ಬದುಕು ಅವರಿಗೆ ಸಹಜವಾಗಿದೆ. ಮಾದಪ್ಪನ ವಾಹನ ಹುಲಿ(ಹೆಬ್ಬುಲಿ) ಏರಿ ಬರುವ ಚಂದವ ಕಂಡು ಭಕ್ತಿಯ ಪರಮ್ಯತೆ ಮೊಳಗುತ್ತದೆ. ದಟ್ಟವಾದ ಕಾಡಿನಲ್ಲಿ ಒಬ್ಬರೆ ಸಂಚರಿಸುವ ಪರಿಯೇ ಬೆರಗು ಮೂಡಿಸುತ್ತದೆ. ಸತ್ಯವಂತ ಸಂಘದ ಸತ್ಯದ ಜ್ಯೋತಿಯಾಗಿ ಸಾಲೂರು ಮಠದಲ್ಲಿ ಬಂದು ನೆಲೆಯಾಗಿರುವುದನ್ನು ಆ ಸ್ಥಳದ ಮಹಿಮೆಯನ್ನು ಭಕ್ತರು ಕೊಂಡಾಡುತ್ತಾರೆ.

ಮಲೆಯ ಮಹಾದೇಶ್ವರನ ಮೇಲೆ ಅಪಾರ ಐತಿಹ್ಯಗಳು ಜನಪದರ ನುಡಿಯಲ್ಲಿ ಕಟ್ಟಲಾಗಿದೆ. ಉತ್ರಾಜಮ್ಮನ ಬೆನ್ನನ್ನು ಸೀಳಿಕೊಂಡು ಹೊರಬಂದು ವಿಸ್ಮಯ ಮೆರೆದ

ಮಹಾಸ್ವಾಮಿ ತಾಯಿಗೆ ನೋವುಂಟು ಮಾಡದ ಪುಣ್ಯಾತ್ಮ. ಕೂಡಲ ಸಂಗಮದ ಕಲ್ಯಾಣಕ್ಕಾಗಿ ಬಂದು ತಮ್ಮ ಪಾಂಡಿತ್ಯ ಪ್ರೌಢಿಮೆಗಳಿಂದ ಅಲ್ಲಿನ ಶರಣರನ್ನು ಗೆದ್ದು ಜಗಜ್ಯೋತಿ ಬಸವಣ್ಣನವರಿಗೆ ಗುರುಗಳಾದವರು 'ಸುತ್ತೂರು ಮಠ ಸುಖ ಅಂತ ಹೋದರೆ ಕುಕ್ಕೆ ತುಂಬ ರಾಗಿ ಇರಲಿ' ಎಂಬ ಶಾಪವನ್ನು ನೀಡಿ ಅಲ್ಲಿನ ವ್ಯವಸ್ಥೆಯ ವಿರುದ್ಧ ತಿರುಗಿ ಬಿದ್ದರು. ಕುಂತೂರು ಮಠದಲಿ ಅಲ್ಲಮಪ್ರಭುಗಳನ್ನು ಕಂಡು ಅವರ ವಿಚಾರಧಾರೆಗಳಿಂದ ಪ್ರಭಾವಿತರಾಗಿ ಪ್ರಭುಗಳ ಬಳಿ ಶಿಷ್ಯತ್ವ ಪಡೆದು ಕೊಳ್ಳೆಗಾಲದ ಮರಡಿಯ ಗುಡ್ಡೆಲಿ ಭಕ್ತಿಗೆ ಶರಣಾಗಿ ಮಂಡಿಯೂರಿ ಕುಳಿತ ನಿಜ ಸಂತರು ಮಾದೇಶ್ವರರು.

ಗುರು ಪರಂಪರೆಯಲ್ಲಿ ಬೆಳೆದ ಮಾದಪ್ಪ ಭಕ್ತರಕರೆಗೆ ಮಗುವಿನಂತೆ ಸ್ಪಂದಿಸುವ ಕರುಣಾಶಾಲಿ. ಬೇಡರ ಕುಲದ ಬೀಡುಗಂಪಣ್ಣನ ಭಕ್ತಿಗೆ ಒಲಿದು, ಸೋಲಿಗ ಸಮುದಾಯದ ಮನೆದೇವರಾಗಿ ನೆಲೆನಿಂತವರೆ. ನಾಗ ಮಲೆಯಲಿ ನಾಗರ ಹೆಡೆಯಲಿ ಪವಡಿಸಿ, ಸಂಪಿಗೆ ಹೂವಿನ ಕಂಪಿನ ಚಲುವಿಗೆ ಒಲಿಯುವ ಮಾಯಕಾರ ಭಕ್ತರ ಕರೆಗೆ ಭಕ್ತಿಯಿಂದ ತನ್ನನ್ನೆ ತಾನು ಸಮರ್ಪಿಸಿ ಕೊಳ್ಳುವ ಮೂಲಕ ಭಕ್ತರಿಗೆ ಭಕ್ತರಾಗುವ ಪರಿಯನ್ನು ಜನಪದರು ಭಕ್ತಿಯ ಪರವಶತೆಯನ್ನು ಗೀತೆಯ ಮೂಲಕ ಕಟ್ಟಿಕೊಟ್ಟಿದ್ದಾರೆ. ಏಳು ಮಲೆಯ ಬೆಟ್ಟಕ್ಕೆ ಬರುವ ಭಕ್ತರಿಗೆ ಸ್ವಾಮಿ ಭಕ್ತಿಯಿಂದ ಒಲಿದು ಸೌಭಾಗ್ಯಗಳನ್ನು ಕರುಣಿಸುತ್ತಾನೆ. ಶರಣ ಸಂಕಮ್ಮನ ಭಕ್ತಿಗೆ ಮೆಚ್ಚಿ ಏಳು ಮಲೆಯಿಂದ ಇಳಿದು ಬಂದು ಸರಗೂರು ಮಠದಲ್ಲಿ ನೆಲೆಸುವ ಮೂಲಕ ಸಂಕಮ್ಮನ ಆಸೆಯನ್ನು ಈಡೇರಿಸಿದ್ದಾನೆ.

ಹೀಗೆ ಜನಪದರ ಅನುಭವದ ನುಡಿಗಳು ಗೀತೆಯ ಮೂಲಕ ಪವಾಡ ಪುರುಷ ಮಾದೇವನನ್ನು ಅವನ ನಡೆನುಡಿಗಳನ್ನು ದೈವತ್ವವನ್ನು ಕಟ್ಟಿಕೊಟ್ಟಿದ್ದಾರೆ.

## ಚಾಮುಂಡಿಯ ಪ್ರಣಯ ರಾಯಭಾರಿ ಉತ್ತನಳ್ಳಿ ಮಾರಿ

ಕೇಳು ಕೇಳು ನನಕಂದ ಉತ್ನಳ್ಳಿ ಮಾರವ್ವಾ
ನಿನ್ನ ಭಾವನಾದ ನಂಜುಂಡೇಶ್ವರ
ಹೋಗಿ ಮೂರು ತಿಂಗಳಾಯ್ತಲ್ಲವ್ವ
ಅನ್ನ ನೀರು
ನಿದ್ದೆಯೊಂದು ಸೇರಿಲ್ಲ
ನೆತ್ತೀಮ್ಯಾಲೆ ನರೇ ಬಂದಿರುವಂತಾ
ಮುದಿನನ್ ಸವ್ತಿಗೆ ಒಲುಕೊಂಡು ಕುಂತವುನಲ್ಲ ಆ..ಆ

ಅವುನ್ಗಾವಾದ್ರೂ ಕಚ್ಚ ಬಾರ್ದೆ
ಚೇಳಾದ್ರೂ ಚುಚ್ಚ ಬಾರ್ದೆ
ಹೊಟ್ಟೆಯ ನೋವು ಬಂದು
ಹಟ್ಟೀಯ ಹಿಡಿಯ ಬಾರ್ದೆ
ನಾಕಾರ ಜೊರ ಬಂದು
ನರಳಾಡಿ ಸಾಯ ಬಾರದೆ
ಕಳ್ಳ ಅವುನಾಯ್ಸ ತೊಡಿಯ
ಬರನಿಲ್ಲ ತಂಗ್ಯಮ್ಮ

ತಂದನ್ನ ತಾನಾನಾ ತಂದನಾನಾ ತಾನಾನಾ
ತಂದನ್ನ ತಂದನ ತಾನಾ ತಂದನಾನಾ ತಾನಾನಾ॥

ತಂಗಿ ಉತ್ನಳ್ಳಿ ಮಾರಿ
ನಂಜಾಲ ಗೂಡಿಗೆ ಹೋಗಿ
ಬಾವುಣ್ಸಿ ಕರ್ದು ಬಾರೆ
ಭಾವ ನಂಜಯ್ಯನ

ತಂದನ್ನ ತಾನಾನಾ ತಂದನಾನಾ ತಾನಾನಾ
ತಂದನ್ನ ತಂದನ ತಾನಾ ತಂದನಾನಾ ತಾನಾನಾ॥

ಅಕ್ಕ ಆಡಿದ ಮಾತ
ಚಿಕ್ಕ ತಂಗ್ಯಮ್ಮ ಕೇಳಿ
ಗಕ್ಕಾನೆ ತೇಜಿಯನೇರಿ
ಹೊಂಟಾಳು ಮಾರವ್ವ

ತಂದನ್ನ ತಾನಾನಾ ತಂದನಾನಾ ತಾನಾನಾ
ತಂದನ್ನ ತಂದನ ತಾನಾ ತಂದನಾನಾ ತಾನಾನಾ॥

ನಿಸ್ರಾತ್ರೆ ಜಾಮುವಂತೆ
ಕಲ್ಲು ನೀರು ಕರಗುವಂತೆ ವ್ಯಾಳ್ಯವಂತೆ
ಸಪ್ಪಟ್ಟು ಸರ್‍ರಾತ್ರೆಯಂತೆ
ಉತ್ನಳ್ಳಿ ಮಾರಮ್ಮನವರು
ಮುಳ್ಳೂರು ಗುಡ್ಡದ ಮ್ಯಾಲೆ
ಮತ್ತೊಂದು ಗುಡ್ಡ ಕುಂತಿರುವಂತೆ ಕುಂತುಕೊಂಡು
ತನ್ನ ಭಾವನಾದ ನಂಜುಂಡೇಶ್ವರನನ್ನ

ಯಾಪ್ರೀತಿ ಅತಿ ಪ್ರೀತಿಯಿಂದ ಕರೀತಿದ್ದಾಳೆ ಅಂದ್ರೆ..

ಭಾವ..ಭಾವೋ..ಮಾತನಾಡಯ್ಯ ಸಂಬು
ಮಾತೀಗೆ ಮರುಳಾದೆ
ಪ್ರೀತಿಯುಳ್ಳರಸೆ ಮಾತನ್ನಾಡೋ
ಸಂಬು– ಮಾತನ್ನಾಡೋ
ಎದ್ದು–ಬೀದಿಗೆ ಬಾರೋ
ಮುದ್ದುಳ್ಳ–ಮುಖವ ತೋರೋ
ಅಂದಕೆ–ದನಿಯ ತೋರೋ
ಚಂದಕೆ–ಮಾತನಾಡೋ
ಚಂದ್ರಾಸೇಕರ ನಂಜುಂಡೇಸ
ಮನಸೆ ಇಲ್ಲುವಯ್ಯೋ
ನಿನ್ನ ಮಡದಿ ಮ್ಯಾಲೆ

ತಂದನ್ನ ತಾನಾನಾ ತಂದನಾನಾ ತಾನಾನಾ
ತಂದನ್ನ ತಂದನ ತಾನಾ ತಂದನಾನಾ ತಾನಾನಾ॥

ಪಚ್ಚೆಯ ತೆನಗಳು ನೀವೆ
ಮೆಚ್ಚಿ ಮುಡಿಯೊಳು ನಾನೆ
ಎಚ್ಚಾಳುಗಾರ ಮಾತನ್ನಾಡೋ
ಹರನೆ–ಮಾತನ್ನಾಡೋ
ಗುರುವೆ–ಮಾತನ್ನಾಡೋ
ಶಿವನೆ–ಮಾತನ್ನಾಡೋ
ಶಂಕರ–ಮಾತನ್ನಾಡೋ
ದೊರೆಯೆ–ಮಾತನ್ನಾಡೋ
ಗಿರಿಗೆ–ಎದ್ದು ಬಾರೋ

ಹರಗ್ವರ ಹರಗ್ವರ ನಂಜುಂಡ ಲಿಂಗು
ಮನಸೆ ಇಲ್ಲವಯ್ಯೊ ನಿನ್ನ ಮಡದಿ ಮ್ಯಾಲೆ

ಕಪನೀಯ ಹೊಳೆಯ ಒಳುಗೆ
ಇಪರೀತವೇನಯ್ಯ
ಹಸುಗೊಂಡು ಇಸವ ಧರಿಸೀದ ನಂಜುಂಡ ಲಿಂಗು
ಇಸವಾಸಕಾರ ಮಾತನ್ನಾಡೋ
ನಡುಗಾಡಿನಲ್ಲಿರೊ ನಂಜುಂಡ ಗುರುವೆ

ಮನಸೆ ಇಲ್ಲುವಯ್ಯಾ ನಿನ್ನ ಮಡದಿ ಮ್ಯಾಲೆ

ತಂದನ್ನ ತಾನಾನಾ ತಂದನಾನಾ ತಾನಾನಾ
ತಂದನ್ನ ತಂದನ ತಾನಾ ತಂದನಾನಾ ತಾನಾನಾ॥

ತಾಳೆಯ ಗರಿಗಳು ನೀವೆ
ಸೀಳಿ ಮುಡಿಯೋಳು ನಾನೆ
ಸೀಲುಗಾರ ನಂಜುಂಡ ಮಾತನ್ನಾಡೋ
ಭಾವ–ಮಾತನ್ನಾಡೋ
ಎದ್ದು ಬೀದಿಗೆ ಬಾರೋ
ಮುದ್ದುಳ್ಳ–ಮಕವ ತೋರೋ
ಅಂದಕ–ದನಿಯ ತೋರೋ
ಚಂದಕೆ–ಮತನ್ನಾಡೋ

ಸೈಸೈಸೈಸೈ ನಂಜುಂಡ ಲಿಂಗು
ಮನಸೆ ಇಲ್ಲುವಯ್ಯೋ ನಿನ್ನ ಮಡದಿ ಮ್ಯಾಲೆ

ತಂದನ್ನ ತಾನಾನಾ ತಂದನಾನಾ ತಾನಾನಾ
ತಂದನ್ನ ತಂದನ ತಾನಾ ತಂದನಾನಾ ತಾನಾನಾ॥
ಉತ್ತನಳ್ಳಿ ಮಾರಮ್ಮನವರು
ತನ್ನ ಭಾವನಾದ ನಂಜುಂಡೇಶ್ವರನ್ನ
ಕರೆಯೊದು ಮೂರು ಮಾತು ಕರೆದು
ಕೂಗೋದು ಮೂರು ಮಾತು ಕೂಗಿ

ಹಿಂದುರುಗಿ ಬರುವಳಲ್ಲೋ
ರಂಭೇ ಉತ್ತುನ್ನಳ್ಳಿ ಮಾರಿ

ತಂದನ್ನ ತಾನಾನಾ ತಂದನಾನಾ ತಾನಾನಾ
ತಂದನ್ನ ತಂದನ ತಾನಾ ತಂದನಾನಾ ತಾನಾನಾ॥

'ಚಾಮುಂಡಿಯ ಪ್ರಣಯ ರಾಯಭಾರಿ ಉತ್ತನಳ್ಳಿ ಮಾರಿ' ಎಂಬ ಜನಪದ ಗೀತೆ ತುಂಬಾ ಗಮನಾರ್ಹವಾದ ಜನಪದ ಸಾಹಿತ್ಯವಾಗಿದೆ. ಈ ಜನಪದ ಗೀತೆಯಲ್ಲಿ ಪ್ರೀತಿ, ವಾತ್ಸಲ್ಯ, ಅಸೂಯೆ, ಮತ್ಸರ, ಸಹೋದರತೆ, ಕೋಪ ಇತ್ಯಾದಿ ಅನೇಕ ನೈತಿಕ ಅಂಶಗಳನ್ನು ಒಳಗೊಂಡಿದೆ. ಇದರ ಮುಖ್ಯ ಸಾರಾಂಶ ಚಾಮುಂಡಿಯ ಪತಿ ನಂಜುಂಡ ಹೆಂಡತಿ ಬಿಟ್ಟು ಪರ

ಹೆಂಗಸಿನ ಸಹವಾಸ ಮಾಡಿರುವುದು. ಇದರಿಂದ ಚಾಮುಂಡಿಯು ಪತಿಯಿಂದ ದೂರವಾಗಿ ವಿರಹವೇದನೆಯಿಂದ ನರಳುವುದು ಮತ್ತು ತನ್ನ ಗಂಡನನ್ನು ಕರೆತರಲು ತಂಗಿಯಾದ ಉತ್ತನಹಳ್ಳಿ ಮಾರಮ್ಮಳನ್ನು ರಾಯಭಾರಿಯಾಗಿ ಕಳುಹಿಸುವುದು. ಅವಳು ಪ್ರೀತಿಯಿಂದ ತನ್ನ ಭಾವನಾದ ನಂಜುಂಡನನ್ನು ಕರೆಯುವುದು ಈ ಗೀತೆಯ ಸಾರಾಂಶವಾಗಿದೆ.

ಈ ಗೀತೆಯ ಒಂದೊಂದು ಸಾಲು ತುಂಬಾ ಮಹತ್ವವನ್ನು ಪಡೆದುಕೊಂಡಿದೆ. ಏಕೆಂದರೆ ಇತ್ತೀಚಿನ ಸಾಮಾಜಿಕ ವ್ಯವಸ್ಥೆಯನ್ನು ಕನ್ನಡಿಯಂತೆ ತೋರಿಸುತ್ತದೆ. ಇಲ್ಲಿ ಗಂಡಹೆಂಡತಿಯ ಸಂಬಂಧಾಂತರಗಳನ್ನು ಎಳೆ ಎಳೆಯಾಗಿ ಗಮನಿಸಬಹುದು. ಚಾಮುಂಡಿ ತನ್ನ ಗಂಡ ತನ್ನನ್ನು ಬಿಟ್ಟು ಹೋಗಿರುವುದರ ಕಾರಣವನ್ನು ನೀಡಿ (ನತ್ತಿ ಮ್ಯಾಲೆ ನರೆ ಬಂದಿರುವಂತಾ ಮುದಿನನ್ ಸವ್ತಿಗೆ ಒಲಕೊಂಡು ಕುಂತವನೆ) ಗಂಡನನ್ನು ಬೈಯುವ ಸಂದರ್ಭ ತುಂಬಾ ಮನೋರಂಜಿತವಾಗಿದೆ. ಇಲ್ಲಿ ಮೇಲ್ನೋಟಕ್ಕೆ ಬರಿ ಬೈಗುಳಗಳನ್ನು ಗಮನಿಸದೆ ಬೈಗುಳದ ಹಿಂದೆ ಇರುವ ಪ್ರೀತಿಯನ್ನು ಗಮನಿಸಬಹುದು. ಈ ಸನ್ನಿವೇಶ ಇಲ್ಲಿಯ ಸಂಸ್ಕೃತಿಯ ಮಹತ್ವವನ್ನು ತಿಳಿಸುತ್ತದೆ. ಅಂದರೆ ತನ್ನ ಗಂಡ ಬೇರೆ ಹೆಂಗಸಿನ ಸಹವಾಸ ಮಾಡಿದ್ದರೂ ಸಹ ಗಂಡನನ್ನು ಕರೆತರಲು ಯತ್ನಿಸುತ್ತಿರುವ ಚಾಮುಂಡಿಯ ಸನ್ನಿವೇಶ ಭಾರತೀಯ ಹೆಣ್ಣು ಮಕ್ಕಳ ಕ್ಷಮಾಪಣೆ ಗುಣದ ಪ್ರತೀಕದಂತೆ ಭಾಸವಾಗುತ್ತದೆ. ಮುಂದೆ ಸಹೋದರತೆಗುಣವನ್ನು ಗಮನಿಸಬಹುದು. ಚಾಮುಂಡಿಯ ತಂಗಿ ಉತ್ತನಹಳ್ಳಿ ಮಾರಮ್ಮ ಅಕ್ಕನ ಕಷ್ಟಕ್ಕೆ ಜೊತೆಯಾಗಿ ಭಾವನನ್ನು ಕರೆತರಲು ಒಪ್ಪಿಗೆ ನೀಡುವ ಸನ್ನಿವೇಶ ತುಂಬಾ ಮಹತ್ವದಾಗಿದೆ. ಅಕ್ಕನ ಅಣತಿಯಂತೆ ಉತ್ತನಹಳ್ಳಿ ಮಾರಮ್ಮ ಭಾವನಾದ ನಂಜುಂಡನನ್ನು ಕರೆತರಲು ಸರಾತ್ರಿಯ ಸಮಯದಲ್ಲಿ ಹೋಗಿ ತುಂಬಾ ಅಕ್ಕರೆಯಿಂದ ಭಾವನನ್ನು ಕರೆಯುವ ಸಂದರ್ಭ ತುಂಬಾ ಮನೋಹರವಾಗಿದೆ. 'ಭಾವ, ಭಾವೋ... ಮಾತನಾಡಯ್ಯ ಸಂಬು ಮಾತೀಗೆ ಮರುಳಾದೆ ಪ್ರೀತಿಯುಳ್ಳರಸ ಮಾತನ್ನಾಡೋ ಸಂಬು...' ಈ ರೀತಿ ಭಾವನನ್ನು ತುಂಬಾ ಪ್ರೀತಿಯ ಅಭಿಮಾನದಿಂದ ಕರೆದು ಅಕ್ಕನೊಟ್ಟಿಗೆ ಸೇರಿಸಲು ಯತ್ನಿಸುತ್ತಾಳೆ. ಇಲ್ಲಿ ನಂಜುಂಡನ ಒಂದೊಂದು ಲೀಲೆಯನ್ನು ಹೊಗಳಿ, ಹೊಗಳಿ ವಿವರಿಸುತ್ತಾಳೆ. ಆದರೆ ಕೊನೆಗೆ ಭಾವನನ್ನು ಕರೆತರುವಲ್ಲಿ ವಿಫಲವಾಗಿ ಹಿಂದೆ ಹೋಗುವ ಸನ್ನಿವೇಶ ತಿಳಿಯುತ್ತದೆ.

ಒಟ್ಟಾರೆ ಈ ಗೀತೆಯಲ್ಲಿ ಚಾಮುಂಡಿ ಮತ್ತು ನಂಜುಂಡ ಹಾಗೂ ಉತ್ತನಹಳ್ಳಿ ಮಾರಮ್ಮಳ ಬಗ್ಗೆ ಮಾಹಿತಿ ನೀಡುವ ಗೀತೆಯಾಗಿದೆ. ಇದರಲ್ಲಿ ಪ್ರಾದೇಶಿಕ ಹಿನ್ನೆಲೆಯ ಮಾಹಿತಿಯನ್ನು ಸಹ ಗುರುತಿಸಬಹುದು. ನಂಜಲಗೂಡು, ಮೈಸೂರು, ಉತ್ತನಹಳ್ಳಿ,

ಮುಳ್ಳುರುಗುಡ್ಡ ಇಂತಹ ಪ್ರದೇಶಗಳ ಹಿನ್ನೆಲೆ ಈ ಜನಪದ ಗೀತೆಯ ಮೂಲಕ ದೊರೆಯುತ್ತದೆ. ಜೊತೆಗೆ ಸಂಸಾರ ಜಂಜಾಟ ಎಂಬುದು ಜನಪದರು ದೈವಸಂಭೂತರೆಂದೇ ನಂಬಿರುವ ನಂಜುಂಡ ಚಾಮುಂಡಿಯರನ್ನೇ ಬಿಟ್ಟಿಲ್ಲ ಎಂಬುದನ್ನು ಗಮನಿಸಬಹುದು.

**ಮುಂಗೊಂಡಾದ....**

ಮುಂಗೊಂಡಾದ ಮಾದೇವನವರು ಮುಂದಾಲ
ಪೂಜೆಗೆ ಬರುವಾಗ ಹಣ್ಣು ಕಾಯಿ ಸಾಮ್ರಾಣಿಯ
ಗಮಲ ಮಂಜಗವುದಾವೆ।

ಬೆಟ್ಟದ ಮಾದೇವ ಬರುವಾಗ
ಹುಟ್ಟುಗಲ್ಲು ಗುಡುಗುಟ್ಟಿದವೋ
ಹುಲಿಯ ಮ್ಯಾಲೆ ಮಾದೇವ ಬರುವ
ಚಂದ ನೋಡಯ್ಯ..

ಮುಂಗೊಂಡಾದ ಮಾದೇಶ್ವರಗೆ ಶರಣು ಶರಣಯ್ಯ
ಮಾಯಕಾರ ಮಾದೇಶ್ವರಗೆ ಶರಣು ಶರಣಯ್ಯ॥

ಕಾಣಿಕೆ ತಂದೀವ್ನಿ ಸ್ವಾಮಿ ಕಾಣೆನಲ್ಲೋ
ಮಾದೇಶ್ವರನಾ...
ಕಾಣಿಕೆ ನೀಡಿ ದೂಪವ ಹಾಕಿ ಬೇಡುವೆ
ಮಾದೇವನಾ...

ಗಂಡುಲಿ ಮ್ಯಾಲಿನ ಗದ್ದುಗೆಯೋ ಸ್ವಾಮಿ
ಹಿಡುಲಿ ಮ್ಯಾಲಿನ ವಿದ್ಯಾರಿಯೋ

ಎತ್ತಿದರು ದುಂಡು ಮಾದೇವನ
ಗಂಡುಲಿಯ ಮ್ಯಾಲೆ

ಮುಂಗೊಂಡಾದ ಮಾದೇಶ್ವರಗೆ ಶರಣು ಶರಣಯ್ಯ
ಮಾಯಕಾರ ಮಾದೇಶ್ವರಗೆ ಶರಣು ಶರಣಯ್ಯ॥
ಕಾಡು ಪಾರಿವಾಳನಕ್ಕಿ ಕನ್ನವವುವು ಮರಿದುಂಬಿಗಳನ್ನು
ಲಾವಳನಕ್ಕಿ ಪಿಕ್ಕಿ ದುಂಡಯ್ಯನ ಕೂಗಿ ಕರೆದಾವೊ॥
ಕೋಗಿಲೆ ಎದ್ದು ಕೊಂಬೆಯನೇರಿ ಕೂಗುತಾವೊ
ರಾಗನೆತ್ತಿ ದುಂಡು ಮಾದೇವನ ಕೂಗುತ್ತಾವೆ

ಕೋಡು ಮುಂಗೊಂಡಾದ॥

ಮುಂಗೊಂಡಾದ ಮಾದೇಶ್ವರಗೆ ಶರಣು ಶರಣಯ್ಯ
ಮಾಯಕಾರ ಮಾದೇಶ್ವರಗೆ ಶರಣು ಶರಣಯ್ಯ॥

ಎಲ್ಲಾ ರೂಪವು ತಾನಂತೆ
ಶಿವ ಎಲ್ಲೆಲ್ಲಿಯು ತಾನಿಹನಂತೆ
ಅಲ್ಲಲ್ಲಿ ಅರಸುವ ಗುಡಿಗಳ ತಿರುಗುವ
ಜನಗಳ ಕಣ್ಣಿಗೆ ಕಲ್ಲಂತೊ..
ಕಣ್ಣಿಲ್ಲದವರಿಗೆ ಕಣ್ಣಂತೆ ಸ್ವಾಮಿ
ಕಣ್ಣಿಗೆ ಕಣ್ಣಾಗಿಹನಂತೆ।
ಎಲ್ಲಾರ ಜೀವದಿ ಮಾದಪ್ಪ
ಬಣ್ಣ ಬಣ್ಣವಾಗಿಹನಂತೆ॥

ಮುಂಗೊಂಡಾದ ಮಾದೇಶ್ವರಗೆ ಶರಣು ಶರಣಯ್ಯ
ಮಾಯಕಾರ ಮಾದೇಶ್ವರಗೆ ಶರಣು ಶರಣಯ್ಯ॥

## ಮಂಟೇಸ್ವಾಮಿ ಕಾಲಜ್ಞಾನ ವಚನ

ಆಡಿದವರ ಮನವ ಬಲ್ಲೆ
ನೀಡಿದವರ ನಿಜವ ಬಲ್ಲೆ
ಸಿದ್ದಯ್ಯ ಸ್ವಾಮಿ ಬನ್ನಿ
ಗುರುಲಿಂಗಯ್ಯ ನೀವೇ ಬನ್ನಿ ॥ಪ॥

ನಾಳೆ ಕಲಿಯುಗದಲ್ಲಿ
ಏನೇನಾಗುತಾದೆ
ಅನ್ನೋದು ಕೇಳು ಕಂದ
ಕೇಳು ಕೇಳುದನೆಲ್ಲ
ತಾಮ್ರದ ಚಪ್ಪೋಡದಲ್ಲಿ
ಬರಕೊಳೊ ನನಕಂದ
ಬರಕೊಂಡುದ್ದ ಓದಿಕೊಂಡು
ಬುದ್ಧಿಯಿಂದ ಬಾಳುಕಂದ ॥ಪ॥

ಕೇಳು ಕೇಳು ನನಕಂದಾ..
ನಾಳೆ ಭೂಮಿ ಗುಡುಗುತಾದೆ

ಕಡಲು ಉಕ್ಕುತೈತೆ
ನೆಲ ಬುಡಮೇಲಾಗುತೈತೆ
ಬಾಲ ಚುಕ್ಕಿ ಮೂಡುತೈತೆ
ಕೊತ್ತಿಗೆ ಕೊಂಬುಟುತಾದೆ
ನುಚ್ಚಕ್ಕಿ ಮೊಳೆಯುತಾದೆ
ಕಲ್ಲು ಕೋಳಿ ಕೂಗುತ್ತಾದೆ
ಕಲ್ಲು ಬಸವ ಗುಟ್ರ ಹಾಕುತಾದೆ ॥ಪ॥

ಕಾವಿ ಹೊದ್ದವರೆಲ್ಲ
ಕಳ್ಳರಾಗಿ ತಿರುಗುತಾರೆ
ದಾಸಯ್ಯ ಗೀಸಯ್ಯರೆಲ್ಲ
ದೇಸಾಂತ್ರ ಹೋಗುತಾರೆ
ಜೋಗಯ್ಯ ಗೊರವಯ್ಯಗಳು
ಗೋಳಾಡಿ ಸಾಯುತಾರೆ
ಗುರುಗಳು ಗುರುಗಳಿಗೆಲ್ಲ
ಗುದ್ದಾಟ ಬರುತದೆ ಕಂದ
ಮಠದ ಗುರುಗಳ ಮೊಗ್ಗಲಿನಲ್ಲಿ
ಒಪ್ಪೊತ್ತಿಗೊಬ್ಬಳು ಮನುಗಿರುತಾಳೆ ॥ಪ॥

ಅನ್ನ ಉಂಟು ಕಾಣೋ
ಆಳು ಸಿಕ್ಕುವುದಿಲ್ಲ
ಹೆಣ್ಣು ಉಂಟು ಕಾಣೋ
ಗಂಡೇ ಸಿಕ್ಕೋದಿಲ್ಲ
ಒಬ್ಬ ಗಂಡಿಗೆ ನಾಳೆ
ಏಳು ಜನ ಹೆಂಡತೀರು
ಏಳು ಜನ ಹೆಂಡರೂವೆ
ನನಗಂಡ ನನಗಂಡ ಅಂತ
ಒಬ್ಬರಿಗೊಬ್ಬರು ಕಂದ
ಬಡಿದಾಡಿ ಸಾಯಬೇಕು

ಅಯ್ಯ ಹೆಂಡ್ತೀರ ಕಾಟ ತಾಳಲಾರ್ದೆ
ಅವ ರಕ್ತ ಕಕ್ಕಿ ಸಾಯಬೇಕು ॥ಪ॥

ಅದು ಅಲ್ಲದೆ ನನಕಂದಾ..
ಗಂಡ ಸತ್ತ ಮೇಲೆ

ಅವ್ರು ಮುಂಡೇರಾಗಬೇಕು
ಗಂಡ ಸತ್ತ ಮುಂಡೆ
ಗಂಡು ಮಗನ ಹೆರಲೇಬೇಕು
ಮುಂಡೆ ಹೆತ್ತ ಮಗನು
ದಂಡೂ ದಾಳಿ ಕಟ್ಟಿ
ಪುಂಡುಗಾರಿ ಆ ಮಗನೆ ನಾಳೆ
ದೇಸಾವ ಕಟ್ಟಾಳುತಾನೆ ॥ಪ॥

ಕಾಡು ನಾಡಾಗುತ್ತೈತೆ
ನಾಡು ಕಾಡಾಗುತ್ತೈತೆ
ಅರಸ ಆಳಾಗುತಾನೆ
ಆಳು ಅರಸಾಗುತಾನೆ
ರಾಜ ರಾಜರಿಗೆಲ್ಲ
ಗೋಜಲಾಟವು ಬಂದು
ಮೀಸೆ ಇಲ್ಲದ ಮುಂಡೆ ಬಂದು
ದೇಸವಾಳುತಾಳೆ ಕಂದ ॥ಪ॥

ಗರತಿ ಗೌಡಿಯಾಗಿ
ಗೌಡಿಯೆ ಗರತಿಯಾಗಿ
ಕುರುಚಿ ಮ್ಯಾಲೆ ಕುಂತು
ಕಾಲ ಕುಣಿಸುತಾಳೆ
ಕಾಲ ಮ್ಯಾಲೆ ಕಾಲಾಕಿ
ದರಬಾರ ಮಾಡುತಾಳೆ

ಈ ಮುಟ್ಟು ಗೌಡಿಯ ಮಕ್ಕಳ ಮಾತೆ
ಮುಂದಾಗಿ ನಡಿಯಬೇಕು ಕಂದ ॥ಪ॥

ಅದು ಅಲ್ಲದೆ ನನಕಂದಾ..
ಅತ್ತೆಯೆ ಸೊಸೆಯಾಗಿ
ಸೊಸೆಯೇ ಅತ್ತೆಯಾಗಿ
ಅತ್ತೆ ಕಾಲ ಹಿಂದಾಗಿ
ಸೊಸೆಯ ಕಾಲ ಮುಂದಾಗಿ
ಅತ್ತೆಗೆ ನೋಡು ಹರಕಲು ಚಾಪೆ
ಸೊಸೆಗೆ ನೋಡು ಮುಕ್ಕಾಲು ಮಂಚ ॥ಪ॥

ಐದು ಅಂಗುಲ ರವುಕೆ
ಮೈಯೆಲ್ಲ ಕಾಣಬೇಕು
ಸೊಂಟದ ಕೆಳೀಕೆ ಕಂದ
ಒಂದು ತುಂಡುಲಂಗ
ಅದು ಗಾಳಿ ಬೀಸಿದಾಗ
ಪಟದಂಗೆ ಹಾರಾಡಬೇಕು
ತಲೆಯ ತುಂಬ ಮುಸುಕು ಹಾಕೊ
ಮುತ್ತೈದೆ ಮೂಲೆ ಸೇರಬೇಕು ॥ಪ॥

ತಂಗಿಯ ಚಂದವ ನಾಳೆ
ಅಣ್ಣನೆ ನೋಡಬೇಕು
ಅಣ್ಣನ ಚಂದವ ನಾಳೆ
ತಂಗಿಯೆ ನೋಡಬೇಕು
ತನಗೆ ಹುಟ್ಟಿದ ಮಗಳ
ತಂದೆ ಕೂಡಲೆ ಬೇಕು
ತಾನು ಹೆತ್ತ ಮಗನ
ತಾಯಿ ಕೂಡಲೆ ಬೇಕು
ಅತ್ತೆ ಅಳಿಯ ಮಾವ ಸೊಸೆ
ಒಂದಾಗಿ ಕೂಡಾಬೇಕು ॥ಪ॥

ಇಂತಿಂತೆ ಕಲಿ ಬಂದು
ಜನವು ಹಾಳಾಗುತ್ತೈತೆ
ಆಡಬಾರದ ಆಟಗಳ
ಈ ಜನರು ಆಡುತಾರೆ
ಇಂತ ಆಟವನೆಲ್ಲ
ನಾ ಕಣ್ಣಿಂದ ನೋಡಲಾರೆ
ನರಮಾನವರ ಕಣ್ಣಿಂದ ನಾನು
ಮರ್ತ್ತ ಲೋಕಕೆ ಮರೆಯಾಗಬೇಕು ॥ಪ॥

## ಕೆಂಪಚಾರಿ ಕುಲುಮೆಯಲ್ಲಿ

ಓಂ ಆದಿ ಜ್ಯೋತಿ ಬನ್ನಿ
ಆದಿಮೂರ್ತಿ ಬನ್ನಿ
ಆದಿ ಶಿವನೆ ಬನ್ನಿ
ನನ್ನ–ಆದಿ ಹರನೆ ಬನ್ನಿ

ಆದಿ ಗುರುವೆ ಬನ್ನಿ
ನನ್ನ–ಆದಿ ಶಂಕರ ಬನ್ನಿ
ಪ್ರಭುಜ್ಯೋತಿ ಬನ್ನಿ
ನನ್ನ–ಪರಂಜ್ಯೋತಿ ಬನ್ನಿ
ಮಂಟ್ಯೇದ ಲಿಂಗು ಬನ್ನಿ
ಮಂಟ್ಯೇದ ಒಡೆಯ ಬನ್ನಿ
ಪದವ ಹೇಳೊ ನಾಲಿಗ್ಗೆ
ನೀವು ಒಲಿದು ಬಪ್ಪ ಧರ್ಮಗುರುವೆ ॥

ಸಿದ್ದಯ್ಯಿ ಸ್ವಾಮಿ ಬನ್ನಿ–ಪವಾಡ
ಗೆದ್ದಯ್ಯ ನೀವೆ ಬನ್ನಿ ॥

ಸಿದ್ದು ಸಿದ್ದುರುಗೆಲ್ಲ ನೀವೆ
ಅತಿ ಮುದ್ದಿ ಘನ ನೀಲಿ
ಸಿದ್ದಯ್ಯ ಸ್ವಾಮಿ ಬನ್ನಿ–ಪವಾಡ
ಗೆದ್ದಯ್ಯ ನೀವೆ ಬನ್ನಿ ॥

ಬಾರದ ಪವಾಡಕೆಲ್ಲ
ಬಂದು ಒದಗೊ ಘನ ನೀಲಿ
ಸಿದ್ದಯ್ಯ ಸ್ವಾಮಿ ಬನ್ನಿ–ಪವಾಡ
ಗೆದ್ದಯ್ಯ ನೀವೆ ಬನ್ನಿ ॥

ಹನ್ನೆರಡು ಕಂಡೂಗ
ಭಂಗಿಸೊಪ್ಪ ತಗದು
ಹನ್ನೆರಡು ಕಂಡೂಗ ಹೊಗೆಯ ಸೊಪ್ಪ ತಗದು
ನಾಗರಾವಿನ ವಿಸ

ಸಿದ್ದಪತ್ತುರೆ ರಸ
ಹದಗೂಡಿದರು ನನ್ನಯ್ಯ
ತಾಮ್ರ ಚಿಲುಮೆಗೆ ತುಂಬಿ
ಕೆಂಪಾಚಾರಿ ಕುಲುಮೆಗೆ
ನನ್ನಿಂಪುಳ್ಳ ಗುರು ಬಂದರಂತೆ
ಸಿದ್ದಯ್ಯ ಸ್ವಾಮಿ ಬನ್ನಿ–ಪವಾಡ
ಗೆದ್ದಯ್ಯ ನೀವೆ ಬನ್ನಿ ॥

ಬ್ರಹ್ಮಚಾರಿಯ ಮಗನು
ನನ್ನ ಎಳೆಯ ಕೆಂಪಣ್ಣ
ಚಿನ್ನದ ಕುರುಚೀಲಿ
ಕುಂತುಕೊಂಡು ಕೆಂಪಣ್ಣ
ಬಂಗಾರದ ವಸ್ತ್ರವ
ಧರುಸುಕೊಂಡು ಮಗನು
ನವರತ್ನದ ವಲ್ಲಿಯ
ಹೊದ್ದುಕೊಂಡು ಕೆಂಪಣ್ಣ
ಹತ್ತು ಬಳ್ಳಿಗು
ಕೆತ್ತಿದುಂಗುರವಂತೆ
ಕತ್ತುನ ತುಂಬ
ಮುತ್ತುನಾರಗಳಂತೆ
ಗುಂಗುರುಗೂದಲ ತಲೆಗೆ
ವಜ್ಜುರ ಕಿರೀಟ ಧರಿಸಿ
ಚಿನ್ನದ ಚಡಾವ
ಪಾದಕೆ ಮೆಟುಕೊಂಡು
ಅತ್ತ ಇತ್ತ ತಿರುಗಿದಾಗ
ಥಣ್ಕ ಪಣ್ಕನೆ ಹೊಳಯೋನಂತೆ

ಸಿದ್ದಯ್ಯ ಸ್ವಾಮಿ ಬನ್ನಿ–ಪವಾಡ
ಗೆದ್ದಯ್ಯ ನೀವೆ ಬನ್ನಿ ॥

ನನ ಎಳೆಯ ಕೆಂಪಣ್ಣನ
ಕಂಡರು ನನಗುರು
ಹರಣ ಭಿಕ್ಷೆ ಅಂದರಂತೆ
ಕ್ವಾರಣ್ಯ ಭಿಕ್ಷೆ ಅಂದರಂತೆ
ಸಿದ್ದಯ್ಯ ಸ್ವಾಮಿ ಬನ್ನಿ–ಪವಾಡ
ಗೆದ್ದಯ್ಯ ನೀವೆ ಬನ್ನಿ ॥

ಭಿಕ್ಷೆ ಅಂದರೆ ಲಕ್ಷವಿಲ್ಲ
ದಾನ ಅಂದರೆ ಗ್ಯಾನ ವಿಲ್ಲ

ಸಿದ್ದಯ್ಯ ಸ್ವಾಮಿ ಬನ್ನಿ–ಪವಾಡ
ಗೆದ್ದಯ್ಯ ನೀವೆ ಬನ್ನಿ ॥

ನನಧರೆಗೆ ದೊಡ್ಡೋರು
ತಂಬೂರಿ ತಂತಿ ಮೀಟಿ
ಸಬ್ತ ಮಾಡಿ ಕರೆದರಂತೆ
ಭಿಕ್ಷೆ ನೀಡೋ ಅಂದರಂತೆ

ಸಿದ್ದಯ್ಯ ಸ್ವಾಮಿ ಬನ್ನಿ–ಪವಾಡ
ಗೆದ್ದಯ್ಯ ನೀವೆ ಬನ್ನಿ ॥

ಧರೆಗೆ ದೊಡ್ಡೋರ ಕಂಡು
ನನ ಮುದ್ದು ಕೆಂಪಣ್ಣ
ಯಾರಲ ಪರದೇಸಿ
ಯಾವೂರಲಾ ಜಂಗೂಮ
ಕಬ್ಬಿಣದ ಕುಲುಮೇಲಿ
ನೊಣಕೇನು ಅಗ್ಗವಪ್ಪ
ಊರಕೇರಿಗೆ ಹೋದರೆ
ನಿನ್ಗೆ ರಾಗಿ ಜ್ವಾಳ ಕೊಡುತಾರೆ

ಸಿದ್ದಯ್ಯ ಸ್ವಾಮಿ ಬನ್ನಿ–ಪವಾಡ
ಗೆದ್ದಯ್ಯ ನೀವೆ ಬನ್ನಿ ॥

ರಾಗೀಗೆ ಬರನಿಲ್ಲ
ಕಂದ–ಜ್ವಾಳಕೆ ಬರನಿಲ್ಲ
ಕಲಿಯ ಬಾರದಿತ್ತು
ಈ ಹಾಳು ಭಂಗಿ ಚಟವ
ಬೆಂಕಿ ಕೆಂಡ ಕೊಟ್ಟು ಮಗನೆ
ನಿನ್ನ–ಮಂದ್ಯಾವ್ರ ಸೇವೆ ಮಾಡಿಸಪ್ಪ

ಸಿದ್ದಯ್ಯ ಸ್ವಾಮಿ ಬನ್ನಿ–ಪವಾಡ
ಗೆದ್ದಯ್ಯ ನೀವೆ ಬನ್ನಿ ॥

ದೇವ್ರು ಅಂದರೆ ಯಾರೋ
ದಿಂಡ್ರು ಅಂದರೆ ಯಾರೋ
ದೇವ್ರು ಮಾಡೋರೆ ನಾವು
ದಿಂಡ್ರು ಮಾಡೋರೆ ನಾವು
ವಾಲೆ ಮಾಡೋರೆ ನಾವು

ತಾಲಿ ಮಾಡೋರೆ ನಾವು
ಗಂಡ ಗಂಡರಿಗೆಲ್ಲ ನಾನೆ
ಮೊದಲ ಗಂಡ ಅಂದನಂತೆ

ಸಿದ್ದಯ್ಯ ಸ್ವಾಮಿ ಬನ್ನಿ–ಪವಾಡ
ಗೆದ್ದಯ್ಯ ನೀವೆ ಬನ್ನಿ ॥

ಮೊದಲ ಗಂಡನು ನೀನೆ
ಮಗನೆ ಮೊದಲು ದೇವನು ನೀನೆ
ಮೊದಲು ಮೊದಲುನುತಿಯ
ಮೊದಲ್ಯಾವುದು ಹೇಳಪ್ಪ
ಮಾರವೆ ಮೊದಲೊ ಬೀಜ ಮೊದಲೋ
ತಿಳಿದಹೇಳು ಅಂದರಂತೆ

ಸಿದ್ದಯ್ಯ ಸ್ವಾಮಿ ಬನ್ನಿ–ಪವಾಡ
ಗೆದ್ದಯ್ಯ ನೀವೆ ಬನ್ನಿ ॥

ಧರೆಗೆ ದೊಡ್ಡವರ ಮಾತ
ಕೇಳಿದನು ಕೆಂಪಣ್ಣ
ಹತ್ತ ಬಾರದ ಕ್ವಾಪ
ಹತ್ತಿ ಕೆಂಪಣ್ಣಗೆ
ಈ ಕಂತೆ ಬೊಂತೆರ ಕಂಡರೆ
ನನ್ಗೆ ಬಾಳ ಕ್ವಾಪ ಅಂದನಂತೆ

ಸಿದ್ದಯ್ಯ ಸ್ವಾಮಿ ಬನ್ನಿ–ಪವಾಡ
ಗೆದ್ದಯ್ಯ ನೀವೆ ಬನ್ನಿ ॥

ಈ ಕಂತೆ ಬೊಂತೇರ ಕಂಡರೆ
ನಿನ್ಗೆ ಕ್ವಾಪ ಅಲ್ಲುವಪ್ಪ
ಈ ಕಂತೆ ಬೊಂತ್ಯಾ ನಾಳೆ ಮಗನೆ
ನಿನ್ನ ಕೈಲೆ ಹೊರಸುತ್ತೀನಿ

ಸಿದ್ದಯ್ಯ ಸ್ವಾಮಿ ಬನ್ನಿ–ಪವಾಡ
ಗೆದ್ದಯ್ಯ ನೀವೆ ಬನ್ನಿ ॥
ಕಿಡು ಕಿಡನೆ ಕ್ವಾಪ ತಾಳಿ

ದುರುಗುಟ್ಟಿ ನೋಡಿ ಕೆಂಪಣ್ಣ
ಬಿಂದ್ಗೆ ಗಾತ್ರ ಕೆಂಡ ತಗ್ದು
ನನ್ನ ಸ್ವಾಮಿ ಮ್ಯಾಲೆ ಎಸೆದನಂತೆ

ಸಿದ್ದಯ್ಯ ಸ್ವಾಮಿ ಬನ್ನಿ–ಪವಾಡ
ಗೆದ್ದಯ್ಯ ನೀವೆ ಬನ್ನಿ ॥

ನನ ಧರೆಗೆ ದೊಡ್ಡೋರು
ಹೊಟ್ಟೆ ತುಂಬ ಹೊಗೆಯ ತುಂಬಿ
ಮಂತ್ರ ಜಪಿಸುತಾರೆ
ಮಾಯ ಹಾಕುತಾರೆ
ಏಳೇಳು ಹದಿನಾಕು
ಮಂತ್ರವ ಹೊಗೆಗೆ ತುಂಬಿ
ಕೆಮಪಾಚಾರ್ಯ ನೆತ್ತಿಮ್ಯಾಲೆ
ಉಫೋ ಅಂತ ಉರುಬುದ್ರಂತೆ

ಸಿದ್ದಯ್ಯ ಸ್ವಾಮಿ ಬನ್ನಿ–ಪವಾಡ
ಗೆದ್ದಯ್ಯ ನೀವೆ ಬನ್ನಿ ॥

**ಮಾರಮ್ಮ**
ಅಕ್ಕಿ ಮಾರಮ್ಮ ಒಕ್ಕೀಳೊ ತೂರೀಳೊ
ಕುಕ್ಕೀಲಿ ಮೂರು ನಮಣಿಯ। ಹಾಕಂದು
ದುಖಃ ಮಾಡೀಲೊ ಶಿವನೀಗೆ

ಮಾರಿಗುಸುತ್ತ ಮಾಲೆಬುಟ್ಟವರ್‍ಯಾರು
ಮಾರವ್ವೆರಣ್ಣ ಹನುಂತ। ಬುಟ್ಟಮ್ಯಾಲೆ
ಮಾರವ್ವ ಗುಡ್ಗೆ ಮರೆಯಾದೊ

ಸೂಲಾದ ಮರಬಂದು ಊರ್ಮುಂದೆ ನಿಂತಾವೆ
ಯಾರು ನೆಟ್ಟಾರೆ ನಿಲವಲ್ಲೊ। ಈರಾರು
ಬಂದಲ್ದೆ ನಿಲವೆಲ್ಲೊ

ಅಕ್ಕ ಮಾರವ್ವ ಅಮತದ ಕಲ್ಲಿನ್ಮ್ಯಾಲೆ
ನಿಂತು ನೂರೆಲೆಯ ಮೊಲ್ಲೋಳೆ। ಮಾರವ್ವ
ಪಂಥ ಬಂದಾವೆ ಗೆಲುಬಾರೆ

ತಾಣದಲಿ ಕೂತಕಂಡು ಏನು ಮಾಡಿ ಮಾರವ್ವ
ತೂಗು ದೀವಿಗೆಯ ಬೆಳಕಲ್ಲೀ। ಕೂತಕುಂಡು
ವಾಲಿವಜ್ಜರವ ಬಿಗಿದಾಳೊ

ಹೊಳಗೆರ ಒಳಗೆ ಗಡುಗ ನಾಡುವಳ್ಯಾರೆ
ಗುಲಗಂಜಿ ಸೀರೆ ನೆರೆಯುವಳೆ। ಮಾರವ್ವ
ಗುಡಗಾಡಿ ಗುಡಿಗೆ ಹೊರಟಾಳೊ

ಒಳಗೆರೆ ಒಳಗೆ ಒಡದಿ ಮೂಡಿರೊಳ್ಯಾರೆ
ಕರೆಯಕೋದರೆ ಬರಳಲ್ಲೊ। ಮಾರವ್ವ
ಕಳಸಕೊಂಡೋಗಿ ಕರತನ್ನಿ

ತಾಳೆಪೂ ತಂದಿವ್ನಿ ತಾಳ ತೆಗ್ಯೆ ಮಾರವ್ವ
ನೆತ್ತಿ ಮೇಗಲ ತಲೆಗೆ ಮಿರಗಾವ। ತಂದಿವ್ನಿ
ತೆಗ್ಯೆ ಚಿನ್ನಾದ ಒಳಚಿಲ್ಕ

ಮಾರವ್ವ ಹೊಯ್ತಾಳೆ ಮದ್ನಾಡಿ ಸೀಮೀಗಿ
ಮಳೆ ಬಂದರೆಲ್ಲಿ ತಂಗೀಳೊ। ಮಾರವ್ವ
ಎಳೆಯ ಹೊಂಬಾಳೆ ಸುಳಿಯಲ್ಲ

ಏರೀಯ ಕೆಳ್ಗೆ ಏಳು ಗುಳ್ಳಾದ ಗಿಡ
ಕಾಯ್ಬೇಕು ಅದ್ರ ಎಲೆಬ್ಯಾಡ। ಮಾರವ್ವ
ನೀಬೇಕು ನಿನ್ನ ಮನೆಬ್ಯಾಡ

ಅಡ್ಡಕುಕೂಮ ಅರದತೋಳಿನ ರವ್ಕೆ
ಅಡ್ಡೇರಿ ಮ್ಯಾಲೆ ಬರುವೋಳೆ। ಮಾರವ್ವ
ನಿನ್ಗಡ್ಡ ಬೀಳೋದು ಗಡುವಿಲ್ಲ

ಕಡೆಯ ಕೋಡೀಲಿ ಮಡಗೀರಿ ಗಿಂಡೀಯ
ಕರೆಯೀರಿ ನನ್ನೂರ ಗುರುಗೋಳ। ಸಿದ್ರಾಮಯ್ನ
ವಾಮಕೊಂಬಾಳ್ಯಾ ತರವೋರೆ

ಊರು ಮುಂದೊಂದು ಉದ್ದಾನಿ ಕಲುಕಟ್ಟೆ
ಬೊಗ್ಗಿ ಕಾಗಜ್ವ ಬರೆವೋಳೆ। ಮಾರವ್ವ

ನಿನ್ನುಬ್ಬು ದಾಳಿಂಬೆ ಮೊಗ್ಗಲ್ವೆ

ಅಕ್ಕ ಮಾರವ್ವೆಗೆ ಕುಕ್ಕೇಲಿ ಕುಕೂಮ
ಲಂಕಾಚಕ್ಕರ್ದ ಗಳಬಂದೊ। ಮಾರವ್ವ
ನಿನ್ನಂಗಳಕೆ ಬಂದೊ ಮಡಿವಾಳ

ಚಿಕ್ಕ ಚಿಕ್ಕ ಬಣ್ಣ ಚಿಕ್ಕ ಪೆಟ್ಟಿಗೆ ಬಣ್ಣ
ಚಿಕ್ಕೋಳೆ ಮಾರವ್ವ ಮೈನೆರೆದ। ಬಣ್ಣಾವ
ಮೆಚ್ಚಿಕೊಂಡೋಗೋ ಮಡಿವಾಳ

ದೊಡ್ಡ ದೊಡ್ಡ ಬಣ್ಣ ದೊಡ್ಡಪೆಟ್ಟಿಗೆ ಬಣ್ಣ
ದೊಡ್ಡೋಳೆ ಮಾರವ್ವ ಮೈನೆರೆದ। ಬಣ್ಣಾವ
ಮುಚ್ಚಿಕೊಂಡೋಗೋ ಮಡಿವಾಳ

ಅಕ್ಕಮಾರವ್ವ ಹತ್ತಾಳಿ ಪೌಳೀಯ
ಹತ್ತಿನೋಡ್ಯಾಳೋ ಕಂದ್ಲೀ(ಯ)। ಈರುಮಕ್ಳ
ಪಟ್ಗಿ ಸಾಲಿಟ್ಟು ಬರವೋರ

ಏರೀಯ ಕೆಳ್ಗೆ ಯಾಕ್ನಿಂತೆ ಮಾರವ್ವ
ಸೀತಾಳಗಾನ ಸಳಗಾನ। ಮಾರವ್ವ
ನಿನ್ನಬ್ಬದೊತ್ತಿಗೆ ಗೊನಬಾಳೆ

ಹೊಂಬಾಳ್ಗೆ ಹೋಗಿ ಒಂಬೈನೂರು ಜಿನವಾದೊ
ಕುಂಬಕ್ಕಿ ಕೊಂಡಿ ಕೊರೆಸಾಲು। ಮಾರವ್ವ
ನಿನ್ನಬ್ಬದೊತ್ತಿಗೆ ಗೊನ ಬಾಳೆ

ಹೆಣ್ಣೆಡ್ಗೆ ಮುಂದೆ ಹೆಣ್ಣು ಮಕ್ಕಳಿಂದೆ
ಬಣ್ಣವ ಸರ್ಗೀನ ಸೊಸೆ ಮುಂದೆ। ಮಾರವ್ವ
ನೀಮುಂದೆ ನಿನ್ನೆಡ್ಗೆ ಮುಂದೆ

ಅಕ್ಕ ಮಾರವ್ವ ಊರ್ದಿಕ ಮುಖವಾದೆ
ನೋಡೋಕೆ ಬಂದವ್ರ ದೊರೆಗೋಳು। ಮಾರವ್ವ
ತೋರೇಳೆ ನಿನ್ನ ಅರಮಾನ್ಯಾ

ಕುಡುತಟ್ಟಿ ಪಡಸಾಲಿ ಮ್ಯಾಲೆ ಕೂತಿರುವಳಿವಳ್ಯಾರೆ

ಕುಕೂಮ್ದ ಸೀರೆ ನೆರಿಯವೈ! ಮಾರವ್ವ
ಕೂತು ನೋಡವ್ವ ಕುಣಿತಾವ

ಮಾರವ್ವ ಮಗನೆತ್ತಿ ಏನುತಂದೆ ಬೊಮಲಿಂಗು
ಮುತ್ತಾಲೆಲಿಗೆಜ್ಜೆ ಮೊರದಲ್ಲಿ! ಪಟ್ಟೆಸೀರೆ
ಅಕ್ಕನ್ಗೆ ತಮ್ಮ ಮಯ್ಯಿ ತಂದ

**ಕಾಳಮ್ಮ**

ಒಳಗೇರೆ ಒಳಗೆ ಗುಡುಗನಾಡುವಳ್ಯಾರೆ
ಗುರುಗಂಜಿ ಸೀರೆ ನೆರಿಯವೈ! ಕಾಳಮ್ಮ
ಗುಡುಗಾಡಿ ಗುಡಿಗೆ ಹೊರಟಾಳೊ

ಪಿಲ್ಲಿ ಕಾಲ್ನೋಳೆ ಪಿರಿಯಾಪಟ್ನದೋಳೆ
ಕಲ್ಮ್ಯೇಲೆ ಕಾಲ ತೊಳಿಯೋಳೆ। ಕಾಳಮ್ಮ
ನಿನ ಪಿಲ್ಲಿ ಸಾವರ್ಕೆ ಬೆಲೆಯಾದೊ

ಅರಸಿಕಾಳವ್ವನ ಗುಡಿಚೆಂದ। ಗುಡ್ಡಾದ
ಮುಂದಾಲೆಬ್ಬಾರೆ ದನಿಚಂದ

**ಮಾದಯ್ಯ**

ಕಗ್ಗಲ್ಲ ಕಣಿವೇಲಿ ಒಬ್ಬೋನೆ ಬತ್ತಿದ್ದೆ
ಹೆಬ್ಬೂಲಿ ಕರ್ಡಿ ಎದುರಾದೊ। ಮಾದಯ್ಯ
ಕಗ್ಗಲ್ಲ ಮ್ಯಾಲೆ ದನಿತೋರೋ

ಸರಗೂರಯ್ನ ಹೆತ್ತಿ ಸತವಂತೆ ನೀಲಮ್ಮ
ಉರಿವ ಕೆಂಡಾವ ಮಡುಲಲ್ಲಿ ತುಮ್ಕೊಂಡು।
ದುಡದಿಂದ ಗಿರಿಯ ಇಳಿದಾಳು

ಮಾದಯ್ಯ ಮಲ್ಲಿಗೆ ಸರಗೂರಯ್ಯ ಸಂಪಿಗೆ
ಇಬ್ಬರಕೈಗೋಳು ಒಂದ್ಗೂಡಿ। ಬರ್ವಾಗ
ಒಬ್ಬೋನೆ ಬಂದು ಶರಣೆಂದ

ಸಂಪೀಗೆ ಹೂನಂಗೆ ಗುಂಪಾಯ್ತು ನಿನ್ಪರ್ಸೆ
ಸಂಪನ್ನಗಾರ ಮಾದಯ್ಯ! ನಿನ್ಪರ್ಸೆ
ಗುಂಪಾಯ್ತು ಕಾದಳ್ಳಿ ಕಣಿವೇಲಿ

ಮಲೆಯಗೋಗುನ್ಗೆ ಮನೆಯ ಹಂಬಲವೇನು
ಮಲೆಯ ಮಾದಯ್ಯಗೆಲೆಯಾದು। ಹೋದನ್ಗೆ
ಹೊದ್ದಿದಾ ಪಾಪ ಪರಿಹಾರ

ಅಪ್ಪ ಮಾದಯ್ನ ತೆಪ್ಪ ತೇರಿನ ಮ್ಯಾಲೆ
ಎಪ್ಪತ್ತು ಲಕ್ಷ ಗಿಣಿಹಿಂಡು। ಕೂತಕಂಡು
ತುಪ್ಪದೆಲಿ ಗುಟುಕ ಕೊಡುತಾವೆ

ಅಣ್ಣ ಮಾದಯ್ನ ಸಣ್ಣತೇರಿನ ಮ್ಯಾಲೆ
ಹನ್ನೆರಡು ಲಕ್ಷ ಗಿಣಿಹಿಂಡು। ಕೂತಕಂಡು
ಎಣ್ಣೇಲಿ ಗುಟುಕ ಕೊಡುತಾವೆ
ಬೆಟ್ಟ ಹತ್ತೀತ ಕಡುಬೆವರು ಬೆವರಿತ
ಯಾಡೆಡಗೆ ಪಾದ ಎಡಗೀತ। ಮಾದಯ್ಯ
ನಿನ ಬೆಟ್ಟ ಹತ್ತೋಕೆ ಬೆಳಕಾಯ್ತು

ಹಾಲಳ್ಳದಲ್ಲಿ ಮಜ್ಜಣ್ದ ಕೊಳದಲ್ಲಿ
ಮಂಜಲ್ದ ಬಲೆಯ ಬುಟಕಂಡು। ಮಾದಯ್ಯ
ಅವ್ನ ಲಿಂಗಾಕೊಸ್ತ್ರಾವ ಧರಿಸ್ಯಾನೊ

ಅಣ್ಣಾನ ಗಿರಿಯಲ್ಲಿ ಸಣ್ಣನೆರಡಕ್ಕಿ
ಸುಣ್ಣ ತುಂಬೀವೊ ಗಿರಿಗೆಲ್ಲ। ಎರಡಕ್ಕಿ
ರನ್ನ ತುಂಬೀವೊ ಕಳಸಾಕೆ

ಅಪ್ಪಾನ ಗಿರಿಯಲ್ಲಿ ಪುಟ್ಟವೆರಡಕ್ಕಿ
ಕಪ್ಪು ತುಂಬೀವೊ ಗಿರಿಗೆಲ್ಲ। ಎರಡಕ್ಕಿ
ಮುತ್ತು(ರತ್ನ) ತುಂಬವೋ ಕಳಸಾಕೆ

ಕುರಿಯ ಕಾಯವ್ನೆ ಕುಕೂಮದ ಕೋಲವ್ನೇ
ಕುರಿಗೊಂದು ಹೆಸ್ರ ಕರೆಯವ್ನೆ। ಮಾದೇವ
ಕುರಿ ಎಲ್ಲಿ ಕುಡ್ದೊ ತಿಳಿಸೀರ। ಮಾದೇವ
ಕುರಿಯೊಂದು ಬಣ್ಣ ತಿರುಗೀವೊ

ಆಡುಕಾಯವ್ನೆ ಜೋಡುಗಂಬಳಿಯವ್ನೆ
ಆಡಿಗೊಂದೆಸ್ರ ಕರೆಯವ್ನೆ ಮಾದೇವ

ಆಡೆಲ್ಲಿ ಕುಡ್ದೊ ತಿಳಿನೀರ। ಮಾದೇವ
ತಾವರೆ ಕಟ್ಟೆ ತುಡಿಯಲ್ಲಿ

ಎತ್ತು ಕಾಯೋನೆ ಪಟ್ಟಿ ಜೋತುರದವ್ನೆ
ಎತ್ತಿಗೊಂದೆಸ್ರ ಕರೆಯೋನೆ। ಮಾದೇವ
ಎತ್ತಿಲ್ಲಿ ಕುಡ್ದೊ ತಿಳಿನೀರ। ಮಾದೇವ
ಅಂತರ ಗಂಗೇಯ ಅರಗೇಲಿ ಕುಡಿದಾರೆ
ಎತ್ತೊಂದು ಬಣ್ಣ ತಿರುಗೀವೋ

ಸಸ್ತ್ರಗಣವೇಲಿ ಹತ್ತೋರು ಇವರ್‍ಯಾರು
ಸತ್ತೆವಂತಾರು ಶರಣಾರು। ಮಾದೇವ
ಸತ್ಯದಿಂದ ಗಿರಿಯ ಇಳಿದಾರೊ
ಮಾದೇವ್ನ ಸುತ್ತ ತೆಂಗಿಲ್ಲ ಹಲಸಿಲ್ಲ
ಮದರಮಗ್ದ ಬಾಳೆ ಮೊದಲಿಲ್ಲ

ಒಕ್ಕಾಲಗೇರಿಗೆ ಹೋದಾನೊ ಮಾದೇವ
ಒಕ್ಕಾಳ ಧೂಪ ಕುಕ್ಕೇಲಿ ತುಮ್ಕಂಡು
ಒಕ್ಕಾಲ ಬುಟ್ಟು ಬರ್‍ನಲ್ಲೊ

ಏರಿಚೆಂದಾಕೆ ನೀರಿನ ಜಾಮಾಕೆ
ಜಾಲದೊವೀನ ಗಮನಾಕೆ। ಮಾದೇವ
ಹೆಬ್ಬೂಲಿ ಬ್ಯಾಟೆಗೊರಟಾನೊ

ಓಗೋಣೆಗುಂಟ ಓಣೀ ಬೆಬ್ಬಳಿಗುಂಟ
ಜೀಣೀಯ ಹುಲ್ಲ ತುಳಕಂಡು। ಮಾದೇವ
ಅವ್ನು ಈ ಬೂಲಿ ಬ್ಯಾಟೆಗೊರಟಾನೊ

ಹುಲಿಯ ಹೊಡ್ಕಂಡು ಚರ್‍ಮಾವ ಸುಲ್ಕಂಡು
ಕರಡೀಯ ಕಣ್ಣ ಕಳಕಂಡು। ಮಾದೇವ
ಗರಡಾನ ಮ್ಯಾಲೆ ಮೆರದಾನೊ

ಎಂಟುಲಿ ಹೊಡ್ಕಂಡು ಕುಂಟುಲಿ ಮ್ಯಾಲೆ ಕೂತಕಂಡು
ನಾಂಟ್ಯವಾಡೂತ ಬರವೋನೆ। ಮಾದೇವು
ಗಂಟೆ ಸದ್ದೀಗೆ ನಲಿದಾನೊ.

## 8.3 ಸ್ಥಳನಾಮಗಳು

ಒಂದು ನಾಡಿನ ಸಂಸ್ಕೃತಿಯ ಭಾಗವಾಗಿ ಯಾವುದೇ ಪ್ರದೇಶವನ್ನಾದರೂ ಒಂದು ಹೆಸರಿನಿಂದ ಕರೆಯಲಾಗುತ್ತದೆ. ಸ್ಥಳನಾಮವೆಂದರೆ ಸ್ಥಳದ ಮೂಲವನ್ನು ಅರಿಯುವುದು ಎಂದರ್ಥ. ಜಾನಪದ ವಿಜ್ಞಾನ, ಮಾನವ ಸಂಸ್ಕೃತಿ ವಿಜ್ಞಾನ, ಭಾಷಾವಿಜ್ಞಾನ ಮುಂತಾದ ಶಾಖೆಗಳ ಅನ್ವಯದ ದೃಷ್ಟಿಯಿಂದ ಹೆಚ್ಚು ಅರ್ಥಪೂರ್ಣವಾಗಿ ಮತ್ತು ತಾಂತ್ರಿಕವಾಗಿ ಸ್ಥಳನಾಮಗಳನ್ನು ವಿವರಿಸಬಹುದಾಗಿದೆ.

ಒಂದು ಸ್ಥಳನಾಮದ ಅಧ್ಯಯನ ಅಲ್ಲಿನ ಸುತ್ತಮುತ್ತಲಿನ ಪಾಳಯಗಾರರು, ರಾಜರು, ನಾಡನ್ನು ಕಟ್ಟಿದ ವೀರರು, ಕೆರೆಕಟ್ಟೆಗಳನ್ನು ನಿರ್ಮಿಸಿದ ಗಾವುಂಡರು ಮತ್ತು ದೈವಿಕಶಕ್ತಿ ನೆಲೆಗೊಂಡ ಇತಿಹಾಸನ್ನು ಹೇಳುವುದೇ ಆಗಿದೆ. ಯಾವುದೇ ಸಂಸ್ಕೃತಿಯ ತಳಹದಿ ಗ್ರಾಮಗಳಾಗಿವೆ. ಎಲ್ಲ ಐತಿಹಾಸಿಕ ವಿವರಗಳೂ, ಸಾಹಿತ್ಯಿಕ ವಿಚಾರಗಳೂ, ಸಾಂಸ್ಕೃತಿಕ ಮಾಹಿತಿಗಳೂ ಸ್ಥಳನಾಮಗಳಿಂದ ದೊರೆಯುತ್ತವೆ. ಆದೃಷ್ಟಿಯಿಂದ ಸ್ಥಳನಾಮಗಳು ಆ ಒಂದು ಪ್ರದೇಶದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ದಾಖಲಾತಿಯಾಗಿಯೂ ಮಹತ್ವ ಪಡೆದು ಕೊಳ್ಳುತ್ತವೆ.

"ಜಾನಪದ ದೃಷ್ಟಿಯಿಂದ ಸ್ಥಳನಾಮಗಳ ಅಧ್ಯಯನ ಸ್ವಾರಸ್ಯಕರವಾಗಿದೆ. ಜನತೆಯ ಮನೋಧರ್ಮವನ್ನು, ಅವರ ಬುದ್ಧಿ ಸಾಮರ್ಥ್ಯವನ್ನು ಹಾಗೂ ಸಂಸ್ಕೃತಿಯನ್ನು ಅರಿಯುವ ಕಾರಣಕ್ಕಾಗಿಯೂ ಅದಕ್ಕೆ ಬೆಲೆಯಿದೆ. ಹಲವಾರು ಸ್ಥಳಗಳಿಗೆ ಹೆಸರು ಕೊಟ್ಟವರು ಜನಪದರೆಂಬುದನ್ನು ಮರೆಯಲಾಗದು"[33] ಕಾಲನಂತರದಲ್ಲಿ ಭಾಷೆಯ ಬೆಳವಣಿಗೆಯಿಂದಾಗಿ, ನಗರದ ಜನರ ಪ್ರಭಾವದಿಂದಾಗಿ ಅಥವಾ ಬೇರೆ ಭಾಷೆ, ಉಪಭಾಷೆಯನ್ನು ಬಳಸುವ ಜನರ ಸಂಪರ್ಕದಿಂದಾಗಿ ಆ ಹೆಸರುಗಳು ತಮ್ಮ ಮೂಲಸ್ವರೂಪವನ್ನೂ, ಅರ್ಥವನ್ನು ಕಳೆದುಕೊಳ್ಳುವ ಸಂಭವವುಂಟು.

ಮೂಲರೂಪಾರ್ಥಗಳು ವಿಸ್ಮೃತಿಯ ಗರ್ಭದಲ್ಲಿ ಹೂತುಕೊಂಡಾಗ, ಮುಂದಿನ ಪೀಳಿಗೆಯ ಜನ ಕಲ್ಪನಾ ಸಾಮರ್ಥ್ಯದಿಂದ ಆ ಹೆಸರುಗಳ ಸುತ್ತ ಅನೇಕ ಕಥೆಗಳನ್ನು ಹೆಣೆದು, ಪೌರಾಣಿಕ ಪ್ರಪಂಚಕ್ಕೂ ಅಕ್ಷಯ ನಿಧಿಯನ್ನು ಒದಗಿಸುವ ಸಂಭವವುಂಟು. ಆ ಹೆಸರುಗಳಿಗೆ ಏನಾದರೊಂದು ಕಾರಣವನ್ನು ಹುಡುಕಬೇಕೆನ್ನುವ ಮನಸ್ಸಿನಿಂದ ಊಹೆಯನ್ನವಲಂಬಿಸಿ, ನಿರ್ಮಿಸುವಂಥ ಕಥೆಗಳು ವೈಜ್ಞಾನಿಕ ಅಧ್ಯಯನಕ್ಕೆ ಸಹಾಯಕವಾಗದಿದ್ದರೂ ಸಾಮಾನ್ಯ

ಜನತೆಯ ಕಲ್ಪನಾ ಸಾಮರ್ಥ್ಯ, ಅವರ ಪದ್ಧತಿ ಪರಂಪರೆ ಹಾಗೂ ಅವರ ಸಂಸ್ಕೃತಿಯನ್ನು ತಿಳಿಸುವಂತಿರುತ್ತವೆ.

"ಹೆಸರು ಬರಿಯ ಅಭಿಜ್ಞಾನಭರಣವಲ್ಲ ಅದು ಸಂಕೇತವೂ ಅಲ್ಲ. ಅದೊಂದು ಪ್ರತಿಮೆ, ಶಕ್ತಿಭಂಡಾರ, ವಿದ್ವಜ್ಜನರ ಕಲ್ಪತರು. ಅದರಿಂದ ಸ್ಮರಣಧಾರಣ ಶಕ್ತಿಗಳು ವೃದ್ಧಿಸುತ್ತದೆ. ವಿಚಾರ ಶಕ್ತಿ ಸ್ಫುರಿಸುತ್ತದೆ"[34]

ಮೈಸೂರು ನಗರವು ಸುತ್ತಮುತ್ತಣ ಪ್ರದೇಶಗಳನ್ನು ಒಳಗೊಂಡಂತೆ ಹತ್ತು ಹಲವಾರು ಗ್ರಾಮಗಳನ್ನು ತನ್ನ ತೋಳ್ತೆಕ್ಕೆಯೊಳಗೆ ಸೇರ್ಪಡೆಗೊಳಿಸಿಕೊಂಡಿದೆ. ಆದುದರಿಂದ ಅವುಗಳ ಇತಿಹಾಸ ಹಿನ್ನೆಲೆ, ಸ್ಥಳಮಹಿಮೆ ಮುಂತಾದವುಗಳನ್ನು ಅರಿಯುವುದು ಅವಶ್ಯಕವಾಗಿದೆ.

**ಅಗ್ರಹಾರ** : 'ಅಗ್ರಹಾರ' ಎಂಬ ಪದವು ಸಂದರ್ಭೋಚಿತವಾಗಿ ಹಲವಾರು ಅರ್ಥಗಳನ್ನು ಒಳಗೊಂಡಿದೆ. ಧಾರ್ಮಿಕ ಕಾರ್ಯಗಳನ್ನು ಮಾಡುವ ಬ್ರಾಹ್ಮಣರು ವಾಸಿಸುವ ಸ್ಥಳವೆಂತಲು, ಬ್ರಾಹ್ಮಣರಿಗೆ ನೀಡಿದ ಭೂದಾನವೆಂತಲೂ ಕರೆಯಬಹುದಾಗಿದ್ದು, ಶ್ರೇಷ್ಠರಾದವರಿಗೆ ನೀಡುವ ಪ್ರದೇಶವೆಂದು ಗುರುತಿಸಲಾಗಿದೆ. "ಮುಮ್ಮಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ಸಮಯದಲ್ಲಿ ಅವರ ಧರ್ಮಪತ್ನಿಯರಾದ ಲಕ್ಷ್ಮೀವಿಲಾಸದ ದೇವಾಜಮ್ಮಣ್ಣಿ ದೇವಾಂಬಾ ಅಗ್ರಹಾರವನ್ನು, ಕೃಷ್ಣವಿಳಾಸದ ಲಿಂಗಾಜಮ್ಮಣ್ಣಿ ಲಿಂಗಾಂಬಾ ಅಗ್ರಹಾರವನ್ನು, ರಮಾವಿಳಾಸದ ಚಲುವಾಜಮಣ್ಣಿ ಚಲುವಾಂಬಾ ಅಗ್ರಹಾರವನ್ನು ದಾನ ಕೊಟ್ಟಿರುವುದನ್ನು ಕ್ರ.ಶ.1821ರ ಶಾಸನವು ತಿಳಿಸುತ್ತದೆ"[35]

**ಆಲನಹಳ್ಳಿ** : ಆಲನಹಳ್ಳಿಯಲ್ಲಿ ಶತಮಾನಗಳಷ್ಟು ಹಳೆಯದಾದ ಆಲದ ಮರವಿದೆ. ಆಕಾರಣದಿಂದ 'ಆಲದಹಳ್ಳಿ' ಎಂಬ ಹೆಸರಿದ್ದು ಕ್ರಮೇಣ ಭಾಷಾ ಉಚ್ಚಾರಣಾ ದೋಷದಿಂದ ಆಲದ>ಹಳ್ಳಿ, ಆಲನ>ಹಳ್ಳಿ ಆಗಿರುವ ಸಾಧ್ಯತೆ ಇದೆ. ಇದು ಪರಿಸರವಾಚಿ ಸ್ಥಳನಾಮವಾಗಿದೆ. "ಕ್ರಿ.ಶ.1829ರ ಕಾಲದ ಶಾಸನದಲ್ಲಿ ಉಲ್ಲೇಖಗೊಂಡಿದ್ದು ಬಹಳ ಹಿಂದಿನಿಂದಲೂ ಆಲನಹಳ್ಳಿ ಎಂಬ ಹೆಸರು ಬಳಕೆಯಾಗುತ್ತಾ ಬಂದಿರುವುದನ್ನು ಕಾಣಬಹುದಾಗಿದೆ"[36]

**ಉತ್ತನಹಳ್ಳಿ** : ಜ್ವಾಲಾಮುಖಿ ತ್ರಿಪುರ ಸುಂದರಿ ಶಾಕ್ತ ದೇವತೆಯಾಗಿದ್ದು ಉತ್ತನಹಳ್ಳಿ ಮಾರಮ್ಮ, ಉತ್ತನಾಳಮ್ಮ ಎಂದೇ ಪ್ರಸಿದ್ಧಿ ಪಡೆದಿದೆ. "19ನೇ ಶತಮಾನದ ಶಾಸನವೊಂದರಲ್ಲಿ ಉತ್ತನಹಳ್ಳಿ ಎಂದು ಉಲ್ಲೇಖವಾಗಿರುವುದನ್ನು ಕಾಣಬಹುದು"[37] ಉತ್ತನಹಳ್ಳಿ ಬಹಳ ಪ್ರಾಚೀನವಾದ ಹೆಸರಾಗಿದ್ದು ಅದು ಉತ್ತಮರಹಳ್ಳಿ> ಉತ್ತಮಹಳ್ಳಿ> ಉತ್ತನಹಳ್ಳಿ ಆಗಿ ಉಚ್ಚಾರಗೊಂಡಿರುವ ಸಾಧ್ಯತೆ ಇದೆ. ಉತ್ತಮರು ಎಂದರೆ ಮೇಲ್ವರ್ಗದವರು ವಾಸಿಸುವ ಪ್ರದೇಶವಾಗಿದ್ದಿರ

ಬಹುದಾಗಿದ್ದು, 'ಮ'ಕಾರ ಲೋಪವಾಗಿ 'ನ'ಕಾರ ಆದೇಶವಾಗಿ ಉತ್ತನಹಳ್ಳಿ ಆಗಿರುವ ಸಾಧ್ಯತೆ ಇದೆ.

**ಕುಕ್ಕರಹಳ್ಳಿ** : ಕುಕ್ಕರಹಳ್ಳಿ ಕುಕ್ಕು ಎಂಬುದು ಕ್ರಿಯಾಧಾತು ಪದವಾಗಿದ್ದು, ಇದರ ಅರ್ಥ 'ಒಗೆ', 'ಸೊಣೆ' (ಬಟ್ಟೆ ಕುಕ್ಕು, ಬಟ್ಟೆ ಸೆಣೆ, ಬಟ್ಟೆ ಒಗೆ) ಎಂದು ಅರ್ಥ ಇರುವುದಿದೆ. ಅಲ್ಲದೆ ಈ ಗ್ರಾಮದ ಪಕ್ಕದಲ್ಲಿಯೇ ಕೆರೆಯು ಇರುವುದರಿಂದ ಇವೆರಡಕ್ಕೂ ಸಂಬಂಧ ಕಲ್ಪಿಸಿ ನೋಡ ಬಹುದಾಗಿದೆ. ಕುಕ್ಕುವವರಹಳ್ಳಿ> ಕುಕ್ಕುವರಹಳ್ಳಿ> ಕುಕ್ಕುರಹಳ್ಳಿ> ಕುಕ್ಕರಹಳ್ಳಿ ಎಂದು ಉಚ್ಚಾರಣೆಯಲ್ಲಿ ರೂಪಾಂತರ ಹೊಂದಿರುವ ಸಾಧ್ಯತೆ ಇದೆ. ಇಲ್ಲಿಯ ಜನರು ಬಟ್ಟೆಯನ್ನು ತೊಳೆಯಲು ಈ ಕೆರೆಯನ್ನು ಆಶ್ರಯಿಸಿರಬೇಕು ಹಾಗಾಗಿ ಊರಿಗೆ ಈ ಹೆಸರು ಬಂದಿರಬಹುದು. ಇದಕ್ಕೆ ಪೂರಕವಾಗಿ 12ನೇ ಶತಮಾನದ ಕ್ರಾಂತಿಕಾರಿ ಶರಣ ಮಡಿವಾಳ ಮಾಚಯ್ಯನ ದೇವಾಲಯವಿದ್ದು ಇಂದಿಗೂ ಮಡಿವಾಳ ಜನರು ಅದೇ ಸ್ಥಳದಲ್ಲಿ ಬಟ್ಟೆ ಕುಕ್ಕುತ್ತಿರುವುದರಿಂದ ಈ ಹೆಸರು ಬಂದಿರಲು ಪುಷ್ಟಿನೀಡುತ್ತದೆ.

ಕುಕ್ಕರಹಳ್ಳಿಯಲ್ಲಿ ಮಾರಮ್ಮನ ಗುಡಿಯ ಮುಂದೆ 'ನಡತಲೆ ಕಲ್ಲು' ಎಂಬ ಕಲ್ಲಿದೆ. ಅಲ್ಲಿ ಮಂಡಿನೋವು, ಮಂಡಿ ಊತವಿರುವವರು ನಡತಲೆ ಕಲ್ಲಿಗೆ ಕುಕ್ಕರಗಾಲಿನಲ್ಲಿ ಕುಳಿತು ಮಂಡಿಯನ್ನು ತಾಕಿಸಬೇಕು. ಹೀಗೆ ಐದುವಾರಗಳು ಮಾಡಿದರೆ ಆಗ ನೋವು ಮಾಯ ವಾಗುತ್ತದೆಂಬ ನಂಬಿಕೆಯಿದೆ ಹಾಗಾಗಿ ಕುಕ್ಕರಗಾಲಿನಲ್ಲಿ ಕುಳಿತು ಮಂಡಿತಾಕಿಸುವುದರಿಂದ ಕುಕ್ಕರಗಾಲೂರು ಎಂದು ಪ್ರಸಿದ್ಧವಾಗಿ ಅನಂತರದಲ್ಲಿ ಕುಕ್ಕರಗಾಲಹಳ್ಳಿ> ಕುಕ್ಕರಲಹಳ್ಳಿ> ಕುಕ್ಕರಹಳ್ಳಿ ಎಂದು ಉಚ್ಚಾರಣೆಯಲ್ಲಿ ರೂಪಾಂತರ ಆಗಿರಬಹುದು. ಈ ನಡತಲೆಕಲ್ಲಿನ ಬಗ್ಗೆ ಇಂದಿಗೂ ಕೂಡ ನಂಬಿಕೆಯನ್ನು ಹೊಂದಲಾಗಿದೆ. ಈ ಊರಿನಲ್ಲಿ ಕ್ರಿ.ಶ.10ನೇ ಶತಮಾನದ ಚಾಲುಕ್ಯರ ಸಾಮಂತ ರಾಜನೆನಿಸಿದ ನರಸಿಂಗನ ಕಾಲಾವಧಿಯೆನ್ನಲಾಗಿದ್ದು, ಇಷ್ಟು ಪ್ರಾಚೀನ ಪರಂಪರೆಯನ್ನೊಂದಿದ ಶಾಸನ ಈ ಊರಿನಲ್ಲಿ ಲಭ್ಯವಿದೆ.

**ಚಾಮುಂಡಿಬೆಟ್ಟ** : "ಕ್ರಿ.ಶ.1127ರ ಹೊಯ್ಸಳದೇವ ವಿಷ್ಣುವರ್ಧನನು ಗಂಗವಾಡಿ ತೊಂಬತ್ತಾರು ಸಾಸಿರ ನಾಡಿನ ಆಡಳಿತಾವಧಿಯು ಚಾಮುಂಡಿಬೆಟ್ಟದ ಶಾಸನದಲ್ಲಿ ಮಬ್ಬೆಲತೀರ್ಥವೆಂದೆ ಹೆಸರುವಾಸಿಯಾಗಿತ್ತು"[38] "ಕ್ರಿ.ಶ.1211ರ ಹೊಯ್ಸಳ ವೀರಬಲ್ಲಾಳನ ಆಡಳಿತಾವಧಿಯ ಶಾಸನದಲ್ಲಿಯೂ ಮರ್ಬಳೇಶ್ವರ ಬೆಟ್ಟವೆಂದೇ ಹೇಳಲಾಗಿದೆ"[39] ಮೈಸೂರು ಮಹಾರಾಜರ ಆಳ್ವಿಕೆ ಆರಂಭವಾದ ಅನಂತರದ ದಿನಗಳಲ್ಲಿ 12ನೇ ಶತಮಾನದಿಂದ ಚಾಮುಂಡಿಯನ್ನು ಮನೆದೇವರನ್ನಾಗಿ ಪೂಜಿಸಲು ಆರಂಭಿಸಿದರೆಂದು ತಿಳಿದು ಬರುತ್ತದೆ. ಈ ಸ್ಥಳಕ್ಕೆ

ಚಾಮುಂಡಿಬೆಟ್ಟವೆಂಬ ಹೆಸರು ಬರಲು ಚಂಡ ಮತ್ತು ಮುಂಡರೆನ್ನುವ ರಾಕ್ಷಸರನ್ನು ಚಾಮುಂಡಿ ಕೊಂದುದರ ಪರಿಣಾಮವಾಗಿ ಈ ಹೆಸರು ಬಂದಿರಬಹುದು ಎಂಬುದಕ್ಕೆ ಹಲವಾರು ದಾಖಲೆಗಳು ಸಿಗುತ್ತವೆ.

**ಬೋಗಾದಿ** : ಬೋಗಾದಿಯಲ್ಲಿರುವ ಗಂಗರ ಕಾಲದ ಭೋಗೇಶ್ವರ ದೇವಾಲಯವು ಬೋಗಾದಿ ಎಂಬ ಹೆಸರು ಬರಲು ಕಾರಣವಾಗಿದೆ. ಬೋಗವದಿ> ಬೋಗೇವರ ವೀದಿ> ಬೋಗವೀದಿ> ಬೋಗವದಿ> ಬೋಗಾದಿ ಆಗಿದೆ. ಇದಕ್ಕೆ ಪ್ರಾಚೀನ ಕಾಲದ ಹಿನ್ನೆಲೆಯಿರುವುದರಿಂದ ಹಳೇ ಬೋಗಾದಿ ಎಂದು ಕರೆಯುವುದಿದೆ. **"**ಕ್ರಿ.ಶ.1175ರ ಹೊಯ್ಸಳ ಅರಸನಾದ ಇಮ್ಮಡಿ ವೀರಬಲ್ಲಾಳನ ಆಡಳಿತಾವಧಿಯ ಶಾಸನದಲ್ಲಿ ಬೋಗವದಿ ಗ್ರಾಮದ ಉಲ್ಲೇಖವಿದೆ**"**[40]

**ಇಟ್ಟಿಗೆಗೂಡು** : ಇಟ್ಟಿಗೆಗೂಡು ಹೆಸರೇ ಸೂಚಿಸುವಂತೆ ಇಟ್ಟಿಗೆಗಳನ್ನು ತಯಾರಿಸುತ್ತಿದ್ದ ಪ್ರದೇಶವಾಗಿರುವಂತೆ ಕಂಡುಬರುತ್ತದೆ. ಸ್ಥಳಿಯರಾದ ಶಿವಣ್ಣ ಎಂಬುವವರು ಮದ್ರಾಸ್ ಇಟ್ಟಿಗೆ ತಯಾರಿಸುತ್ತಿದ್ದ ಈ ಪ್ರದೇಶದಲ್ಲಿ ಇಟ್ಟಿಗೆಗೂಡು ನಿರ್ಮಿಸಲು ಆರಂಭಿಸಿದರು. ಅಂದಿನಿಂದ ಈ ಪ್ರದೇಶ ಇಟ್ಟಿಗೆಗೂಡು ಎಂದೇ ಜನಜನಿತವಾಯಿತು ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಕ್ರಿ.ಶ.18ನೇ ಶತಮಾನದ ಪೂರ್ವಾರ್ಧದಲ್ಲಿ ಹೈದರಾಲಿಯು ದಳವಾಯಿ ನಂಜರಾಜಯ್ಯನ ಸೈನ್ಯದ ತುಕಡಿಯ ಪ್ರತಿನಿಧಿಯಾಗಿದ್ದನು. ಇವನು ತಿರುಚನಾಪಳ್ಳಿಯ ಮೇಲೆ ದಂಡೆತ್ತಿ ಹೋಗಿದ್ದ ಸಂದರ್ಭದಲ್ಲಿ ತಮಿಳರು ತೋಟದ ಕೆಲಸದಲ್ಲಿ ನಿಷ್ಣಾತರಾಗಿದ್ದನ್ನು ಕಂಡು ಅವನೊಟ್ಟಿಗೆ ಎರಡುಸಾವಿರ ಜನರನ್ನು ಕರೆತಂದು ಬೆಂಗಳೂರಿಗೆ ಅರ್ಧ ಜನರು ಮತ್ತು ಮೈಸೂರಿನಲ್ಲಿ ಅರ್ಧ ಜನರನ್ನು ನೆಲೆನಿಲ್ಲಿಸಿದನೆಂದು ತಿಳಿದು ಬರುತ್ತದೆ. ಮೊದಲಿಗೆ ಕ್ಯಾತಮಾರನಹಳ್ಳಿಯಲ್ಲಿ ನೆಲೆನಿಂತರು ಅಲ್ಲಿಂದ ಅವರನ್ನು ತೆರವುಗೊಳಿಸಿದ್ದರಿಂದ ಈಗಿನ ಇಟ್ಟಿಗೆಗೂಡು ಪ್ರದೇಶಕ್ಕೆ ಬಂದು ಇಟ್ಟಿಗೆ ತಯಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಇಟ್ಟಿಗೆಗೂಡನ್ನು ನಿರ್ಮಿಸುತ್ತಿದ್ದರಿಂದ ಇಟ್ಟಿಗೆಗೂಡು ಎಂದು ಪ್ರಸಿದ್ಧಿಯಾಯಿತು.

**ಈರನಗೆರೆ ಮತ್ತು ಕ್ಯಾತಮಾರನಹಳ್ಳಿ** : ಮೈಸೂರು ಅರಸರಾದ ಯದುರಾಯ ಮತ್ತು ಕೃಷ್ಣರಾಯರು ಕಾರುಗಳ್ಳಿಯ ಮಾರನಾಯಕನನ್ನು ಕೊಂದ, ಅದೇ ಊರಿನಲ್ಲಿದ್ದ ಅವನ ಸಂಬಂಧಿಕರೆಲ್ಲರನ್ನು ಕೊಲ್ಲುತ್ತಾರೆ. ಅವರ ಸಂಬಂಧಿಕರಲ್ಲಿ ಒಬ್ಬ ಹೆಂಗಸು ತುಂಬು ಗರ್ಭಿಣಿಯಾಗಿದ್ದರಿಂದ ಅವಳಿಗೆ ಏನು ಮಾಡುವುದಿಲ್ಲ. ಅವಳು ಕಾರುಗಳ್ಳಿಯಿಂದ ಮೈಸೂರಿನ ಉತ್ತರದಿಕ್ಕಿಗೆ ಬರುವಾಗ ಆಲಮ್ಮಕ್ಯಾತೆಯ ದೇವರ ಕಲ್ಲಿನ ಬಳಿ ಅವಳಿ ಮಕ್ಕಳಿಗೆ ಜನ್ಮ ನೀಡಿದಳು. ಒಂದು ಮಗುವಿಗೆ ಕ್ಯಾತೆಯ ದೇವಾಲಯದ ಬಳಿಹುಟ್ಟಿದ್ದರಿಂದ **'**ಕ್ಯಾತಮಾರ**'**

ಎಂದು ಮತ್ತೊಬ್ಬನಿಗೆ 'ಈರ' ಎಂದು ಹೆಸರಿಟ್ಟಳಂತೆ. ಆದ್ದರಿಂದ ಈರನು ಇದ್ದ ಊರೆ ಮುಂದೆ ಈರನಗೆರೆ ಹಾಗೂ ಕ್ಯಾತಮಾರ ಇದ್ದ ಊರೇ ಕ್ಯಾತಮಾರನಹಳ್ಳಿ ಆಯಿತೆಂದು ತಿಳಿದು ಬರುತ್ತದೆ.

**ಈರನಗೆರೆ** : ಈರನಗೆರೆ ಮೈಸೂರು ದೊರೆಗೂ ಮತ್ತು ಪಿರಿಯಾಪಟ್ಟಣದ ಅರಸನಾಗಿದ್ದ ವೀರರಾಜನಿಗೆ ಯುದ್ಧ ನಡೆಯಿತು. ಈ ಯುದ್ಧದಲ್ಲಿ ಊರಿನ ಯುವಕರು ವೀರಾವೇಶದಿಂದ ಹೋರಾಡಿ ಜಯತಂದಿತ್ತರು. ಅದೇ ಸಂದರ್ಭದಲ್ಲಿ ಕೆಲವರು ಅಸುನೀಗಿದರು. ಆಗ ಅರಸರು ವೀರಾವೇಶದಿಂದ ಹೋರಾಡಿ ಅಸುನೀಗಿದ ವೀರರ ನೆನಪಿಗಾಗಿ ಅನೇಕ ವೀರಗಲ್ಲುಗಳನ್ನು ಅದೇ ಊರಿನಲ್ಲಿ ನೆಡೆಸಿದರು. ಕೆಲವು ಬಂಧುಗಳು ತಮ್ಮ ಸಂಬಂಧಿಕರ ವೀರಗಲ್ಲುಗಳನ್ನು ತಮ್ಮ ತಮ್ಮ ಊರುಗಳಿಗೆ ಕೊಂಡೊಯ್ದರು. ಆ ಊರಿನಲ್ಲಿ ಹೆಚ್ಚು ವೀರಗಲ್ಲುಗಳು ಇದ್ದುದರಿಂದ ಆ ಊರಿಗೆ ವೀರರಗೆರೆ> ವೀರನಗೆರೆ ಎಂದು ಹೆಸರಾಯಿತೆಂದು ತಳಿಯುತ್ತದೆ.

**ಪಡುವಾರಹಳ್ಳಿ** : ಮೈಸೂರು ನಗರದಿಂದ ಪಡುವಣದಿಕ್ಕಿಗೆ ಇರುವ ಕಾರಣದಿಂದ ಪಡುವಾರಹಳ್ಳಿಗೆ ಈ ಹೆಸರು ಬಂದಿರಬಹುದು. ಪಡುವಣಹಳ್ಳಿ> ಪಡುವನಹಳ್ಳಿ> ಪಡುವರಹಳ್ಳಿ> ಪಡುವಾರಹಳ್ಳಿ ಎಂದು ಉಚ್ಚಾರಣೆಯಿಂದ ಬದಲಾವಣೆಯಾಗಿರುವ ಸಾಧ್ಯತೆ ಇದೆ. ಪಡುವಾರಹಳ್ಳಿಯಲ್ಲಿ ಈ ಮೊದಲು ಪರಿವಾರದ ಜನರು ಹೆಚ್ಚು ಇದ್ದುದರಿಂದ ಪಡುವಾರಹಳ್ಳಿಯಾಗಿರುವ ಸಾಧ್ಯತೆ ಇದೆ ಎಂದು ಹಲವು ವಿದ್ವಾಂಸರ ಅಭಿಪ್ರಾಯವಾಗಿದೆ. ಪರಿವಾರದವರೆಂದರೆ ಮೀನು ಹಿಡಿಯುವ ವೃತ್ತಿಯವರಾಗಿದ್ದು, ಅವರು ಪಡುವಾರಹಳ್ಳಿಯ ಪಕ್ಕದಲ್ಲೆ ಇರುವ ಕುಕ್ಕರಹಳ್ಳಿಯಲ್ಲಿ ಮೀನನ್ನು ಹಿಡಿಯುತ್ತಿದ್ದುದು ಪುಷ್ಠಿನೀಡುತ್ತದೆ. ಹಾಗಾಗಿ ಪರಿವಾರದವರ ಹಳ್ಳಿಯಾಗಿ ಕಾಲಕ್ರಮೇಣ ಅದು ಪಡುವಾರಹಳ್ಳಿ ಆಗಿರಬಹುದಾಗಿದೆ. ಇದೇ ಊರಿನಲ್ಲಿ ಜೋಡಿ ಮಾರಮ್ಮನ ಹಳೆಯ ದೇವಾಲಯವಿದ್ದು, ಅದರಲ್ಲಿ ಪೂಜೆ ಮಾಡುವವರು ನಾಯಕ ಸಮೂದಾಯದವರೇ ಆಗಿದ್ದಾರೆ.

**ಕೆಸರೆ** : ಕೆಸರೆ ಎಂದರೆ ಹಸಿಯಾದ ಮಣ್ಣು ಎಂದರ್ಥವಿದೆ. ಇದಕ್ಕೆ ಪೂರಕವೆಂಬಂತೆ ಮೈಸೂರು ನಗರದ ಕಡೆಯಿಂದ ಬರುವ ಎಲ್ಲಾ ನೀರು ಈ ಭಾಗದಲ್ಲಿ ಬಂದು ಸೇರುತ್ತಿದೆ. ಏಕೆಂದರೆ ಈ ಪ್ರದೇಶ ತಗ್ಗು ಸಥಳದಲ್ಲಿದ್ದು, ಕೆಸರಿನಿಂದ ಆವೃತವಾಗಿತ್ತು ಎಂಬುದು ಹಲವರ ಅಭಿಪ್ರಾಯವಾಗಿದೆ. ಅಲ್ಲದೇ ಕೆಸರೆ ಸ್ಥಳನಾಮವು ಪ್ರಾಚೀನ ಪರಂಪರೆಯೊಂದಿಗೆ ಸೇರಿಕೊಂಡಿದೆ. ಇದಕ್ಕೆ ಪೂರಕವಾಗಿ ಹಲವು ಯುದ್ಧಗಳಿಗೆ ವೇದಿಕೆಯಾಗಿರುವುದಕ್ಕೆ ಅಲ್ಲಿರುವ ವೀರಗಲ್ಲುಗಳು ಸಾಕ್ಷಿಯಾಗಿವೆ.

**ಮಂಡಿಮೊಹಲ್ಲಾ** : ಹೆಸರೇ ಸೂಚಿಸುವಂತೆ ಮಂಡಿ ಎಂದರೆ ವ್ಯಾಪಾರ ನಡೆಯುವ ಸ್ಥಳ ಅಥವಾ ವ್ಯಾಪಾರವೇ ಪ್ರಧಾನವಾಗಿದ್ದ ಜಾಗವಾಗಿದ್ದು ಈ ಪ್ರದೇಶ ಟಿಪ್ಪುಸುಲ್ತಾನನ ಆಡಳಿತಾವಧಿಯಲ್ಲಿ ತಲೆ ಎತ್ತಿದವಾದರಿಂದ ಅವರು ವಾಸಿಸುವ ಸ್ಥಳಕ್ಕೆ ಮೊಹಲ್ಲಾ ಎಂದು ಕರೆಯುತ್ತಿದ್ದರು. ಆದ್ದರಿಂದ ಮೊಹಲ್ಲಾ ಎಂಬ ಪೂರ್ವಪದವಾಗಿ ಬಳಸಿದ್ದರಿಂದ ಅದು ಮಂಡಿ+ಮೊಹಲ್ಲ ಮಂಡಿಮೊಹಲ್ಲ ಆಗಿರಬಹುದಾಗಿದೆ.

**ಲಷ್ಕರ್ ಮೊಹಲ್ಲಾ** : ಮೇಲೆ ತಿಳಿಸಿದಂತೆ ಈ ಪ್ರದೇಶವು ಸಹಾ ಟಿಪ್ಪುಸುಲ್ತಾನನ ಆಡಳಿತಾವಧಿಯಲ್ಲಿ ತಲೆ ಎತ್ತಿದ್ದು, ಅಲ್ಲಿ ಸೈನಿಕರು ಹೆಚ್ಚಾಗಿ ವಾಸಿಸುತ್ತಿದ್ದರು. ಇಲ್ಲಿ ಸೈನಿಕರು ಎಂದರೆ ಲಷ್ಕರ್ ಎಂದು ಕರೆಯಲಾಗುತ್ತಿತ್ತು. ಆದುದರಿಂದ ಈ ಪ್ರದೇಶವನ್ನು ಲಷ್ಕರ್ (ಸೈನಿಕರು)+ಮೊಹಲ್ಲಾ(ವಾಸಿಸುವ ಸ್ಥಳ) ಎಂದು ಪ್ರಸಿದ್ಧವಾಗಿರಬಹುದು.

ಒಂದು ಕಾಲದಲ್ಲಿ ಜನಪದರ ಏಕೈಕ ಮನರಂಜನ ಹಾಗೂ ಬೋಧನ ಸಾಧನಗಳಾಗಿದ್ದ ಕಲೆ ಮತ್ತು ಸಾಹಿತ್ಯಗಳು ಇಂದು ಆ ಸ್ಥಾನವನ್ನು ಅಷ್ಟರ ಮಟ್ಟಿಗೆ ಉಳಿಸಿಕೊಂಡಿಲ್ಲ ಎಂದೇ ಹೇಳಬಹುದು. ಅದಕ್ಕೆ ಕಾರಣಗಳು ಹಲವಾರು. ಸಾಮಾಜಿಕ, ಆರ್ಥಿಕ ಪರಿಸ್ಥಿತಿಯ ಏರುಪೇರುಗಳು, ಆಧುನೀಕತೆಯ ಪ್ರಭಾವ ಮುಂತಾದವುಗಳನ್ನು ಗುರುತಿಸಬಹುದು. ಪ್ರದರ್ಶನಾತ್ಮಕ ಕಲೆಗಳನ್ನು ಹೊರತು ಪಡಿಸಿದರೆ ಇತರೆ ಕಲೆ ಮತ್ತು ಸಾಹಿತ್ಯದ ಪ್ರಕಾರಗಳಾದ ಗಾದೆ, ಒಗಟು, ನುಡಿಗಟ್ಟು, ಬೈಗುಳ, ಕಥೆ, ಗೀತೆ ಮುಂತಾದವುಗಳ ಬಳಕೆ ಕಡಿಮೆಯೇ. ಪ್ರದರ್ಶನಾತ್ಮಕ ಕಲೆಗಳನ್ನು ಬಿಟ್ಟರೆ ಗೀತೆಗಳು ಎರಡನೆ ಸಾಲಿನಲ್ಲಿ ನಿಲ್ಲುತ್ತವೆ. ಏಕೆಂದರೆ ಪ್ರದರ್ಶನಾತ್ಮಕ ಕಲೆಗಳು ಮತ್ತು ಗೀತೆಗಳು ಜೊತೆಗೂಡಿ ಪ್ರದರ್ಶನವಾಗುವುದೇ ಕಾರಣವಾಗಿದೆ.

## ಕೊನೆ ಟಿಪ್ಪಣಿಗಳು

1. ಡಾ.ಎಸ್.ಶ್ರೀಕಂಠಶಾಸ್ತ್ರೀ, ಸಂಶೋಧನ ಲೇಖನಗಳು, ಪು.ಸಂ–371.
2. ಡಾ.ಚಕ್ಕೆರೆ ಶಿವಶಂಕರ್, ಜಾನಪದ ತಿಳುವಳಿಕೆ,
3. ಪ್ರೊ.ಅರವಿಂದ ಮಾಲಗತ್ತಿ(ಪ್ರ.ಸಂ), ಕನ್ನಡ ವಿಷಯ ವಿಶ್ವಕೋಶ–ಜಾನಪದ, ಪು.ಸಂ–1090.
4. ಚೇತನ.ಎಚ್.ಆರ್, ದಕ್ಷಿಣ ಕರ್ನಾಟಕದ ಜನಪದ ನೃತ್ಯಗಳು, ಅಪ್ರಕಟಿತ ಮಹಾಪ್ರಬಂಧ ಪು.ಸಂ–70.
5. ಕ್ಯಾತನಹಳ್ಳಿರಾಮಣ್ಣ(ಲೇ), ವೀರಗಾಸೆ, ಜಾನಪದ ವಿಷಯ ವಿಶ್ವಕೋಶ, ಪು.ಸಂ–1080.
6. ಡಾ.ಸಿದ್ಧಲಿಂಗಯ್ಯ, ಗ್ರಾಮದೇವತೆಗಳು, ಪು.ಸಂ–35.
7. ಸಿ.ಪಿ.ಕೆ, ಆಯ್ದ ಕುವೆಂಪು ಕವನಗಳು, ಪು.ಸಂ–78.
8. ಲಕ್ಕಪ್ಪಗೌಡ.ಎಚ್.ಜೆ, ಒಗಟುಗಳು.
9. ಸುಧಾಕರ, ಜನಪದ ನುಡಿಗಟ್ಟುಗಳ ಕೋಶ, 2006, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
10. ನಾಗರಾಜ.ಸಿ.ಪಿ, ಬಯ್ಗುಳ, 2014, ನಾಗು ಸ್ಮಾರಕ ಪ್ರಕಾಶನ, ಬೆಂಗಳೂರು.
11. ಪ್ರೊ.ಅರವಿಂದ ಮಾಲಗತ್ತಿ(ಪ್ರ.ಸಂ), ಕನ್ನಡ ವಿಷಯ ವಿಶ್ವಕೋಶ–ಜಾನಪದ, 2006,
12. ನಾಗರಾಜ.ಸಿ.ಪಿ, ಬಯ್ಗುಳ, 2014, ನಾಗು ಸ್ಮಾರಕ ಪ್ರಕಾಶನ, ಬೆಂಗಳೂರು.
13. ಪ್ರೊ.ಅರವಿಂದಮಾಲಗತ್ತಿ(ಪ್ರ.ಸಂ), ಕನ್ನಡ ವಿಷಯ ವಿಶ್ವಕೋಶ–ಜಾನಪದ, ಪು.ಸಂ–174.
14. ಮಂಜಪ್ಪಶೇಟ್ಟಿ ಮಸಗಲಿ ಎಂ.ಪಿ, ಮೈಸೂರು ಅರಮನೆ, ಪು.ಸಂ–61.
15. ಅದೇ, ಪು.ಸಂ–63,64.
16. ಅದೇ, ಪು.ಸಂ–65.
17. ಅದೇ, ಪು.ಸಂ–67,68.
18. ಹೆಚ್.ಗಂಗಾಧರ, ಶ್ರೀಚಾಮುಂಡೇಶ್ವರಿ ಮಹಿಮೆ, ಪು.ಸಂ–1,2.
19. ವಕ್ತೃ: ತಮ್ಮಯ್ಯ, ವೀರನಗೆರೆ, ವಯಸ್ಸು–56.
20. ವಕ್ತೃ: ವಿಷಕಂಟೇಗೌಡ, ಕುಂಬಾರ ಕೊಪ್ಪಲು, ವಯಸ್ಸು–58.
21. ಡಾ.ಎಂಪಿ. ಮಂಜಪ್ಪಶೆಟ್ಟಿ, ಮೈಸೂರು ಅರಮನೆ, ಪು.ಸಂ–70.

22. ಕ್ಯಾತನಹಳ್ಳಿ ರಾಮಣ್ಣ, ಕೆಲವು ಐತಿಹ್ಯಗಳು.

23. ವಕ್ತೃ: ಮಾದೇಗೌಡರು, ಅಧ್ಯಕ್ಷರು, ಕುಂಬಾರ ಕೊಪ್ಪಲು, ವಯಸ್ಸು–56.

24. ಪ್ರೊ.ಕೆ.ಎಸ್.ರಂಗಪ್ಪ(ಪ್ರ.ಸಂ), ಮೈಸೂರು ದರ್ಶನ, ಭಾಗ–1, ಪು.ಸಂ–482.

25. ವಕ್ತೃ: ವೆಂಕಟರಮಣಭಟ್ಟ, ಅರ್ಚಕರು, ನಿಂಬುಜಾದೇವಿ ದೇವಾಲಯ.

26. ಡಾ.ವಾಸುದೇವಮೂರ್ತಿ, ಅಶೋಕಪುರಂ:ಒಂದು ಜಾನಪದೀಯ ಅಧ್ಯಯನ, ಪು.ಸಂ–184.

27. Branislaw Malinowiaski, magic, science and religion and other essays, p.101.

28. ಡಾ.ಸಿದ್ಧಲಿಂಗಯ್ಯ, ಗ್ರಾಮದೇವತೆಗಳು, ಪು.ಸಂ–41.

29. ವಿಜಯ ನಂಜುಂಡಯ್ಯ, ಪವಿತ್ರ ತುಳಸಿ, ಮೈಸೂರು ಮಿತ್ರ, ಪು.ಸಂ–6, ದಿನಾಂಕ:18.11.2018.

30. ಪ್ರೊ.ರಂಗಪ್ಪ.ಕೆ.ಎಸ್.(ಪ್ರ.ಸಂ), ಮೈಸೂರು ದರ್ಶನ, ಭಾಗ–1, ಪು.ಸಂ–333,334.

31. ಪುರಾಣ ಗ್ರಂಥಗಳಲ್ಲಿ ವೃಕ್ಷಗಳು, ಮೈಸೂರು ಮಿತ್ರ, ಸಾಪ್ತಾಹಿಕ ಪುರವಣಿ, ದಿನಾಂಕ:24.06.2018, ಪು.ಸಂ–3.

32. ರಾಗೌ, ಜನಪದ ಸಾಹಿತ್ಯ ರೂಪಗಳು, ಪು.ಸಂ–5.

33. ಡಾ.ಅರವಿಂದಮಾಲಗತ್ತಿ(ಪ್ರ.ಸಂ), ಕನ್ನಡ ವಿಷಯ ವಿಶ್ವಕೋಶ–ಜಾನಪದ, ಪು.ಸಂ–1198.

34. ಡಾ.ದೇ.ಜ.ಗೌ, ಸ್ಥಳನಾಮ ವ್ಯಾಸಂಗ, ಪು.ಸಂ–13.

35. ಬಾ.ರಾ.ಗೋಪಾಲ್, ಎ.ಕ, ಸಂಪುಟ–5, ಮೈಸೂರು–1,2,3, ಪು.145, 146, 147.

36. ಅದೇ, ಮೈಸೂರು–134, ಆಲನಹಳ್ಳಿ, ಪು.ಸಂ–275.

37. ಅದೇ, ಚಾಮುಂಡಿಬೆಟ್ಟ, ಪು.ಸಂ–289.

38. ಅದೇ, ಮೈಸೂರು–135, ಚಾಮುಂಡಿಬೆಟ್ಟ, ಪು.ಸಂ–275.

39. ಅದೇ, ಮೈಸೂರು–139, ಚಾಮುಂಡಿಬೆಟ್ಟ, ಪು.ಸಂ–277.

40. ಅದೇ, ಮೈಸೂರು–221, ಹಳೆಬೋಗಾದಿ, ಪು.ಸಂ–320.

# ಅಧ್ಯಾಯ–9

## ಆಧುನೀಕರಣದ ಪ್ರಭಾವದಲ್ಲಿ ಪಾರಂಪರಿಕ ದೇವಾಲಯಗಳು

ನಿಸರ್ಗದಿಂದ ಆಗುವ ವಿಕೋಪಗಳಿಗೆ ದೇವರು ಕೋಪ ಮಾಡಿಕೊಂಡಿರುವುದು ಅಥವಾ ಮುನಿಸಿಕೊಂಡಿರುವುದೇ ಕಾರಣವೆಂದು ತಿಳಿದ ಪೂರ್ವಿಕರು ದೇವ–ದೇವತೆಗಳನ್ನು ತೃಪ್ತಿಗೊಳಿಸುವುದರಿಂದ ಈ ವಿಕೋಪದಿಂದ ದೂರ ಉಳಿಯಲು ಸಾಧ್ಯವೆಂದು ಭಾವಿಸಿ ತಮ್ಮ ಸುತ್ತಮುತ್ತಲ ಪರಿಸರದೊಂದಿಗೆ ಹೊಂದಾಣಿಕೆಯನ್ನು ಮಾಡಿಕೊಂಡರು. ಹೀಗೆ ಮಾಡಿಕೊಂಡ ಹೊಂದಾಣಿಕೆಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತ ಬಂದವು. ಮೊದಲಿಗೆ ಸಂಪ್ರದಾಯದ ರೀತಿಯಲ್ಲಿ ಪಾಲಿಸಿಕೊಂಡು ಬಂದ ಆಚರಣೆಗಳು ಕಾಲಕಳೆದಂತೆ ವ್ಯತ್ಯಾಸವನ್ನು ಪಡೆದುಕೊಂಡವು. ಉದಾಹರಣೆಗೆ: ಹಿಂದಿನ ಕಾಲದಲ್ಲಿ ಕಲ್ಲಿನ ರಂಗೋಲಿ ಪುಡಿಯಲ್ಲಿ ರಂಗೋಲಿಯನ್ನು ಹಾಕುವ ರೂಢಿ ಸಂಪ್ರದಾಯವಾಗಿತ್ತು. ಆದರೆ ಈಗ ಅದು ಬದಲಾಗಿ ಮನೆಯ ಮುಂದೆ, ದೇವಾಲಯಗಳ ಮುಂದೆ ಬಣ್ಣ ಬಣ್ಣದ ಅನೇಕ ಬಗೆಯ ರಂಗವಲ್ಲಿಗಳು ರೂಪುಗೊಳ್ಳುತ್ತಿರುವುದನ್ನು ಕಾಣಬಹುದು. ಹೀಗೆ ಪ್ರತಿ ಹಂತದಲ್ಲೂ ಮಾನವ ಬದಲಾಗುತ್ತಿದ್ದಾನೆ. ದೈಹಿಕವಾಗಿ, ಮಾನಸಿಕವಾಗಿ, ರೂಢಿಗತವಾಗಿ ತನ್ನನ್ನು ತಾನು ಪರಿಸ್ಥಿತಿಗೆ ಹೊಂದಿಸಿಕೊಂಡು ಬಾಳಲು ಪ್ರಯತ್ನಿಸುತ್ತಿದ್ದಾನೆ. ಹಿಂದಿನ ಕಾಲದಲ್ಲಿ ವಸ್ತು ವಿನಿಮಯ ನಡೆಯುತ್ತಿತ್ತು. ಈಗ ಹಣದ ವಿನಿಮಯ ನಡೆಯುತ್ತಿದೆ. ಹಾಗೆ ಸ್ವಲ್ಪಮಟ್ಟಿಗೆ ಸಂಪ್ರದಾಯಗಳೂ ಬದಲಾದವು. ವ್ಯಕ್ತಿ ಹಾಗೂ ಸಮಾಜದಲ್ಲಿ ಕಾಲದಿಂದ ಕಾಲಕ್ಕೆ ಹೀಗೆ ಅನೇಕ ಬದಲಾವಣೆಗಳು ನಡೆಯುತ್ತಿವೆ. ಇದು ಸಂಕ್ರಮಣದ ಲಕ್ಷಣವಾಗಿದೆ. ಸಂಕ್ರಮಣ ಎಂದರೆ ಒಂದು ಸ್ಥಿತಿಯಿಂದ ಇನ್ನೊಂದು ಸ್ಥಿತಿಗೆ ಪಾದಾರ್ಪಣೆ ಮಾಡುವುದಾಗಿದೆ.

ನಗರ ಪ್ರದೇಶದ ಆಧುನೀಕರಣದ ಆಕರ್ಷಣೆಯಿಂದ ಕಳೆದು ಹೋಗುತ್ತಿರುವ ಸಂಪ್ರದಾಯಗಳು ಇಂದಿನ ಗ್ರಾಮಗಳಲ್ಲೂ ಬಹುಶಃ ಕಡಿಮೆ ಪ್ರಮಾಣದಲ್ಲಿ ಕಾಣುತ್ತಿವೆ. ಈ ನಿಟ್ಟಿನಲ್ಲಿ ಬದಲಾಗುತ್ತಿರುವ ಪಾರಂಪರಿಕ ದೇವಾಲಯಗಳ ಅಸ್ತಿತ್ವ ಹಾಗೂ ಆಚರಣೆಗಳಿಗೆ ಕಾರಣವೇನೆಂಬುದನ್ನು ಗುರುತಿಸುವುದು ಗಮನಾರ್ಹವಾಗಿದೆ. ಆಧುನೀಕರಣದ ಪ್ರಭಾವವನ್ನು ಈ ಕೆಳಕಂಡಂತೆ ಗುರುತಿಸಲಾಗಿದೆ.

## 9.1 ಆಧುನೀಕರಣದ ಪ್ರಭಾವಗಳು

**ಹೊಸಧರ್ಮಗಳ ಉದಯ** : ಮೈಸೂರು ನಗರವು ಹಲವು ಧರ್ಮಗಳ ನೆಲೆಬೀಡಾಗಿದೆ. ಇಲ್ಲಿ ಜೈನಧರ್ಮ, ಬೌದ್ಧಧರ್ಮ, ಕ್ರೈಸ್ತಧರ್ಮ, ಹಿಂದೂ, ಮುಸ್ಲಿಂ ಹೀಗೆ ಹಲವು ಧರ್ಮಗಳ ಉದಯದಿಂದ ಏನನ್ನು ಸ್ವೀಕರಿಸಬೇಕು, ಏನನ್ನು ಬಿಡಬೇಕೆಂಬ ಸಂದಿಗ್ಧತೆ ಉಂಟಾಗುತ್ತಿದೆ. ಸಾಮಾಜಿಕ ಮೇಲ್ಚಲನೆ ಮನೋಭಾವ ಸಮಾಜದಲ್ಲಿ ಇರುವುದರಿಂದ ಆಧುನೀಕರಣತೆ ಮತ್ತು ಶಿಷ್ಟತೆಯ ಅನುಕರಣೆ ಕೆಲವು ಮಟ್ಟಿಗೆ ಪ್ರಭಾವ ಬೀರುವ ಸಾಧ್ಯತೆ ಇದೆ. ಮೈಸೂರು ನಗರದಲ್ಲಿ ಬೌದ್ಧ ಧರ್ಮ ಮತ್ತು ಕ್ರೈಸ್ತ ಧರ್ಮಗಳಿಗೆ ಹೆಚ್ಚಿನದಾಗಿ ಹಿಂದುಗಳು ಮತಾಂತರ ವಾಗುತ್ತಿರುವುದನ್ನು ಗುರುತಿಸಲಾಗಿದೆ

**ಹೊಸ ದೇವರುಗಳ ಉದಯ** : ಅನೇಕ ವರ್ಷಗಳ ಹಿಂದಿನಿಂದ ನಡೆದುಕೊಂಡು ಬರುತ್ತಿರುವ ಪಾರಂಪರಿಕ ದೇವರುಗಳ ಆರಾಧನೆಯು ಕೆಲವು ದೇವರುಗಳ ಉದಯದಿಂದ ಸ್ವಲ್ಪಮಟ್ಟಿನ ಬದಲಾವಣೆಗೆ ಒಳಗಾಗಿವೆ. ಕಲ್ಕಿ ಭಗವಾನ್, ಓಂಶಕ್ತಿ, ಶ್ರೀಶಕ್ತಿ, ಅಮ್ಮಭಗವಾನ್ ಹೀಗೆ ಇತ್ತೀಚಿನ ಅನೇಕ ಹೊಸ ದೇವರುಗಳ ಉದಯ, ಪೂಜಾವಿಧಾನ ಮತ್ತು ಆಚರಣೆಗಳು ಪಾರಂಪರಿಕ ದೇವಾಲಯಗಳ ಮೇಲೆ ಪರಿಣಾಮ ಬೀರುತ್ತಿವೆ.

**ಮಾನವ ಪೂಜೆ** : ಇತ್ತೀಚಿಗೆ ಹೆಚ್ಚಾಗಿರುವ ಒಂದು ಪೂಜಾ ವಿಧಾನವೇ ಈ ಮಾನವ ಪೂಜೆ. ದೇವರಿಗೆ ಮಾನವನಂತೆ ಎಲ್ಲಾ ಹೋಲಿಸುವ ಪ್ರತೀತಿ ಈ ಹಿಂದೆ ಪಾರಂಪರಿಕ ದೇವರುಗಳಲ್ಲಿ ಹೆಚ್ಚಾಗಿತ್ತು. ಈಗಲೂ ಇದೆ. ಅಂದರೆ ಪಾರಂಪರಿಕವಾಗಿ ಬಂದಿರುವ ದೇವ-ದೇವತೆಗಳಿಗೆ ಗಂಡ, ಹೆಂಡತಿ, ಅತ್ತೆ, ಮಾವ, ಮಕ್ಕಳು ಮುಂತಾದ ಹೋಲಿಕೆಗಳನ್ನು ಮಾಡುತ್ತಾರೆ. ಇದಕ್ಕೆ ಉತ್ತಮ ಉದಾಹರಣೆ ಮಾರಮ್ಮನ ಕಥೆಗಳು. ಶ್ರೀರಾಮ ಮಾನವನಾಗಿ ಕಷ್ಟನಷ್ಟಗಳನ್ನು ಸಹಿಸಿ ದೇವರ ಎತ್ತರಕ್ಕೆ ಏರಿದನೆಂಬುದಕ್ಕೆ ಅನುಮಾನವಿಲ್ಲ. ಹಾಗೆಯೇ ಇಂದು ದೇವರಸ್ಥಾನದಲ್ಲಿ ಜಗದ್ಗುರುಗಳನ್ನು, ಮಠಾಧೀಪತಿಗಳನ್ನು, ಸನ್ಯಾಸಿಗಳನ್ನು, ಸ್ವಾಮೀಜಿಗಳನ್ನು ಪೂಜಿಸುವ ರೂಢಿ ಇತ್ತೀಚೆಗೆ ಹೆಚ್ಚಾಗಿದೆ.

**ಧಾರ್ಮಿಕ ಶ್ರದ್ಧೆ ಕಳೆದುಕೊಳ್ಳುತ್ತಿರುವುದು** : ಆಧುನೀಕರಣದ ಪ್ರಭಾವದಿಂದ ನಮ್ಮ ಪೂರ್ವಿಕರು ಆಚರಿಸುತ್ತಿದ್ದ ಅನೇಕ ಆಚಾರ-ವಿಚಾರಗಳು ಇಂದು ಕಣ್ಮರೆಯಾಗುತ್ತಿವೆ. ಸಮಾಜದಲ್ಲಿ ನೈತಿಕತೆ ಮತ್ತು ಒಳಿತಿನ ಉಳಿವಿಗಾಗಿ ಹಿರಿಯರು ರೂಪಿಸಿದ ನಿಯಮಗಳು ಮತ್ತು ಆಚರಣೆಗಳು ಇಂದು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿವೆ. ಇದಕ್ಕೆ ಕಾರಣ ಇತ್ತೀಚಿನ ಪೀಳಿಗೆ ಸ್ವಲ್ಪಮಟ್ಟಿನ ಧಾರ್ಮಿಕ

ಶ್ರದ್ಧೆಯನ್ನು ಕಳೆದುಕೊಳ್ಳುತ್ತಿರುವುದಾಗಿದೆ. ಇದಕ್ಕೆ ನಾನಾ ಕಾರಣಗಳನ್ನು ಗುರುತಿಸಬಹುದು. ಇಂದಿನ ಆಧುನಿಕತೆಯ ವೇಗಕ್ಕೆ ಹೊಂದಿಕೊಳ್ಳಲು ಪ್ರಯತ್ನಿಸುತ್ತಿರುವ ಯುವ ಪೀಳಿಗೆ ಸಮಾಜದ ರೀತಿ, ನೀತಿ, ಸಂಪ್ರದಾಯಗಳನ್ನು ಯಾವುದೇ ಕಾರಣಕ್ಕೂ ಕಳೆದುಕೊಳ್ಳ ಬಯಸುವುದಿಲ್ಲ. ದೇವರು, ಧರ್ಮ, ಆಚಾರ-ವಿಚಾರಗಳು ಒಂದು ಹಂತದವರೆಗೆ ಸ್ವಲ್ಪಮಟ್ಟಿಗೆ ಸರಿ ಎಂದು ತಿಳಿದು ಅದನ್ನು ನಡೆಸಿಕೊಂಡು ಬರುತ್ತಾರೆ. ಹಾಗೆಂದ ಮಾತ್ರಕ್ಕೆ ಮರೆತಿದ್ದಾರೆಂದಲ್ಲ. ತಮ್ಮ ಶಕ್ತ್ಯಾನುಸಾರ ದೇವರ ಸೇವೆಗೆ ತಮ್ಮನ್ನು ತೊಡಗಿಸಿಕೊಂಡು, ಅನಂತರ ಇಂದಿನ ವಾಸ್ತವ ಬದುಕಿನೆಡೆಗೆ ಮುಖ ಮಾಡುತ್ತಾರೆ.

**ಗ್ರಾಮ ಮತ್ತು ನಗರದ ಸಮ್ಮಿಲನದಿಂದ ದ್ವಂದ್ವ ನಡವಳಿಕೆ** : ಮೈಸೂರು ನಗರವು ತನ್ನ ವ್ಯಾಪ್ತಿಯನ್ನು ವಿಸ್ತರಿಸಿದಂತೆಲ್ಲಾ ಅಕ್ಕ ಪಕ್ಕದ ಗ್ರಾಮಗಳನ್ನು ತನ್ನ ತೆಕ್ಕೆಯೊಳಗೆ ಸೇರಿಸಿಕೊಳ್ಳುತ್ತಾ ಸಾಗುತ್ತಿದೆ. ಅಲ್ಲದೆ ಮೈಸೂರು ನಗರದ ಮಧ್ಯಭಾಗದಲ್ಲೇ ಇನ್ನೂ ಹಲವಾರು ಗ್ರಾಮಗಳು ತನ್ನ ಸೊಗಡನ್ನು ಉಳಿಸಿಕೊಂಡಿವೆ ಉದಾಹರಣೆಗೆ: ಪಡುವಾರಹಳ್ಳಿ, ಕನ್ನೇಗೌಡನಕೊಪ್ಪಲು, ಕುಂಬಾರಕೊಪ್ಪಲು ಮುಂತಾದವುಗಳು. ಇಲ್ಲಿ ಗ್ರಾಮೀಣ ಸೊಗಡನ್ನು ಉಳಿಸಿಕೊಳ್ಳಬೇಕಾ ಅಥವಾ ಆಧುನೀಕರಣದ ನಗರ ಸಂಸ್ಕೃತಿಯನ್ನು ಪಾಲಿಸಬೇಕಾ ಎಂಬ ಗೊಂದಲದಲ್ಲಿ ಎರಡನ್ನು ಸರಿಯಾಗಿ ಪಾಲಿಸಲಾಗದ ಸ್ಥಿತಿಯಲ್ಲಿದ್ದಾರೆ.

**ಸಂಸ್ಕೃತೀಕರಣಕ್ಕೆ ಒಳಗಾಗುತ್ತಿರುವುದು** : ಸರ್ವಧರ್ಮ ಸಮನ್ವಯದ ಬೀಡಾಗಿರುವ ಮೈಸೂರು ನಗರದಲ್ಲಿ ಹಲವಾರು ಧರ್ಮಿಯರು ವಾಸಮಾಡುತ್ತಿರುವುದು ಇದಕ್ಕೆ ಕಾರಣವಾಗಿರಬಹುದು. ಇದರಿಂದ ಮಾನವ ಹಾಗೂ ಅವನ ನಡವಳಿಕೆಗಳು, ಆಚಾರ-ವಿಚಾರಗಳು ಸಂಸ್ಕೃತೀಕರಣಕ್ಕೆ ಒಳಗಾಗುತ್ತಿದೆ. ಉದಾಹರಣಗೆ: ಈ ಹಿಂದೆ ನಡೆಯುತ್ತಿದ್ದ ಬೆನ್ನು ಸಿಡಿ ಬದಲಿಗೆ ಈಗ ಬಟ್ಟೆ ಸಿಡಿ ಬಂದಿದೆ. ಬೆತ್ತಲೆ ಸೇವೆಯ ಬದಲು ಬೇವಿನ ಉಡುಗೆ ಹಾಕಿಕೊಂಡು ದೇವಿಗೆ ಹರಕೆ ತೀರಿಸುವ ಪದ್ಧತಿ ಬಂದಿದೆ. ಪೂರ್ತಿ ಮುಡಿಯನ್ನು ಕೊಡುವ ಬದಲು ಪಂಚಮುಡಿ ಅಥವಾ ಸ್ವಲ್ಪ ಕೂದಲನ್ನು ನೀಡುವ ಪದ್ಧತಿಯನ್ನು ಕಾಣಬಹುದು. ಕೋಣವನ್ನು ಬಲಿಕೊಡುವ ಬದಲು ಅದರ ರಕ್ತವನ್ನು ಸ್ವಲ್ಪ ತೆಗೆದು ದೇವರಿಗೆ ಅರ್ಪಿಸುವ ಪದ್ಧತಿ ಬಂದಿದೆ. ಇವೆಲ್ಲವೂ ಸಂಸ್ಕೃತೀಕರಣದ ಪ್ರಭಾವಗಳೇ ಆಗಿವೆ. ಸಮಾಜದಲ್ಲಿ ಈ ಬದಲಾವಣೆಗೆ 'ಮೇಲ್ಮುಖ'ಚಲನೆ ಎಂದು ಕರೆಯಲಾಗುತ್ತದೆ. ಇದರಿಂದ ಸಮಾಜದಲ್ಲಿನ ಕೆಲವು ಮೌಢ್ಯಗಳು ಮರೆಯಾಗುತ್ತಿರುವುದು ಸಂತಷದ ವಿಷಯವಾಗಿದೆ.

**ವೈಜ್ಞಾನಿಕ ದೃಷ್ಟಿಕೋನ** : ಇಂದಿನ ಆಧುನಿಕ ಸಂದರ್ಭದಲ್ಲಿ ಯಾವುದೇ ವಿಷಯವಾದರೂ ಅದನ್ನು ವೈಜ್ಞಾನಿಕ ದೃಷ್ಟಿಕೋನದಿಂದ ನೋಡುವ ಜಾಗೃತ ಮನಸ್ಸುಗಳು ಹುಟ್ಟಿಕೊಂಡಿವೆ. ಇದಕ್ಕೆ ಪಾರಂಪರಿಕ ದೇವಾಲಯಗಳ ಆಚರಣೆಗಳೂ ಹೊರತಲ್ಲ. ಕೊಂಡ ಹಾಯುವುದು, ಬಾಯಿಬೀಗ, ಸಿಡಿಯಂತಹ ಕೆಲವು ಆಚರಣೆಗಳನ್ನು ವೈಜ್ಞಾನಿಕವಾಗಿ ಪರೀಕ್ಷಿಸುವುದನ್ನು ಇಂದು ಅನೇಕ ನಗರ ಹಾಗೂ ಗ್ರಾಮಗಳಲ್ಲಿಯು ಕಾಣಬಹುದು. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಭಾರತೀಯ ವಿಜ್ಞಾನಮಂದಿರ ಮುಂತಾದ ಸಂಸ್ಥೆಗಳ ಮೂಲಕ ಡಾ.ಎಚ್.ನರಸಿಂಹಯ್ಯ, ಡಾ.ಸಿ.ಆರ್.ಚಂದ್ರಶೇಖರ್ ಮತ್ತಿತರ ವ್ಯಕ್ತಿಗಳು ಜನರಿಗೆ ಜಾಗೃತಿಗಾಗಿ ನಡೆಸಿದ ಪವಾಡ ರಹಸ್ಯ ಬಯಲು, ಭಾನಾಮತಿ ಮುಂತಾದ ಕಾರ್ಯಕ್ರಮಗಳು ಜನರಲ್ಲಿ ಜಾಗೃತಿಯನ್ನು ಮೂಡಿಸುವಲ್ಲಿ ಪರಿಶ್ರಮವಹಿಸಿವೆ. ಹೀಗಾಗಿ ಬಾಯಿಬೀಗ, ಸಿಡಿ ಮುಂತಾದ ಆಚರಣೆಗಳ ಬಗ್ಗೆ ಜನ ಪರೀಕ್ಷಿಸಿ ನೋಡುತ್ತಾರೆ.

**ಭಕ್ತಿಯ ಪಲಾಯನವಾಗುವಿಕೆ** : ಆಧುನಿಕ ಯುಗಕ್ಕೆ ತಕ್ಕಂತೆ ಹೆಜ್ಜೆಯನ್ನು ಹಾಕುತ್ತಿರುವ ಮಾನವ ತನ್ನ ಮೂಲಭೂತ ಸೌಕರ್ಯಗಳಿಂದ ಹಿಡಿದು ನಂಬಿಕೆ, ಆಚಾರ–ವಿಚಾರ, ಸಂಪ್ರದಾಯಗಳವರೆಗೆ ತನಗೆ ಬೇಕೆನಿಸಿದಂತೆ ಬದಲಾವಣೆಯನ್ನು ಮಾಡಿಕೊಳ್ಳುತ್ತಿದ್ದಾನೆ. ಇದಕ್ಕೆ ಭಕ್ತಿಯೂ ಹೊರತಾಗಿಲ್ಲ. ಬಹುತೇಕ ಗಂಟೆಗಟ್ಟಲೆ ಕುಳಿತು ಪೂಜೆಯನ್ನು ಸಲ್ಲಿಸುತ್ತಿದ್ದ ಮಾನವ ಇಂದಿನ ಯುಗಧರ್ಮಕ್ಕೆ ತಕ್ಕಂತೆ ದೇವರಿಗೆ ಸೇವೆಯನ್ನು ಸಲ್ಲಿಸುವ ವಿಧಾನವನ್ನು ಬದಲಾಯಿಸಿಕೊಂಡಿದ್ದಾನೆ. ತನಗೆ ಬೇಕೆನಿಸಿದಾಗ ದೇವರಿಗೆ ಪೂಜೆ ಸಲ್ಲಿಸುವ, ತನ್ನ ಇಚ್ಚೆಗಳು ಫಲಿಸದಿದ್ದರೆ ಪಲಾಯನಗೈಯುವ ನಡವಳಿಕೆಯಿಂದ ದೇವರುಗಳು ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತಿವೆ.

**ವಾಣಿಜ್ಯೀಕರಣಕ್ಕೆ ಒಳಗಾಗಿರುವುದು** : ಮೈಸೂರು ನಗರದ ಪ್ರಮುಖ ದೇವಾಲಯಗಳೆಲ್ಲವೂ ವಾಣಿಜ್ಯೀಕರಣಕ್ಕೆ ಒಳಗಾಗಿರುವುದನ್ನು ಕಾಣಬಹುದಾಗಿದೆ. ದೇವಾಲಯಗಳು ಪ್ರತಿಷ್ಠೆಯ ಕಣಗಳಾಗಿವೆ. ಆದುದರಿಂದಾಗಿ ದೇವಾಲಯಗಳನ್ನು ವಿಜೃಂಭಿಸುವ ಪ್ರಯತ್ನದಲ್ಲಿ ಆರ್ಥಿಕತೆಗಾಗಿ ಎಲ್ಲವನ್ನು ವಾಣಿಜ್ಯೀಕರಣಕ್ಕೆ ಒಳಪಡಿಸಲಾಗುತ್ತಿದೆ. ಉದಾಹರಣೆಗೆ: ಚಾಮುಂಡೇಶ್ವರಿ ದೇವಾಲಯಕ್ಕೆ ಭಕ್ತರ ಸಂಖ್ಯೆ ಜಾಸ್ತಿಯಾದಾಗ ವಿಶೇಷ ದರ್ಶನ ಪಡೆಯಲು ಶುಲ್ಕ ಕಟ್ಟಿ ಹೋಗಬೇಕು, ವಿಶೇಷ ಪೂಜೆಗೆ ಇಂತಿಷ್ಟು ಹಣ ಸಂದಾಯ ಮಾಡಬೇಕು, ವಸ್ತುಗಳ ಬೆಲೆಯೂ ದುಬಾರಿಯಾಗುತ್ತಿದೆ, ದೇಣಿಗೆ ಕೊಟ್ಟವರಿಗೆ ದರ್ಶನಕ್ಕೆ ಬೇರೆ ವ್ಯವಸ್ಥೆ ಮಾಡುವುದು ಹೀಗೆ

ಪ್ರತಿಷ್ಠೆಯ ಕಣವಾಗಿ ವಾಣಿಜ್ಯೀಕರಣಕ್ಕೆ ಒಳಗಾಗಿ ಪಾರಂಪರಿಕತೆಯನ್ನು ಮರೆತು ಸಮಯಕ್ಕೆ ತಕ್ಕಂತೆ ಬದಲಾವಣೆಗೂ ಒಳಗಾಗುತ್ತಿವೆ.

**ದೇವಾಲಯಗಳನ್ನು ಮುಜರಾಯಿ ಇಲಾಖೆಯ ಆಡಳಿತಕ್ಕೆ ಒಳಪಡಿಸಿದ್ದು** : ಇಂದು ಬಂಡವಾಳಶಾಹಿಗಳ ಹಿಡಿತಕ್ಕೆ ಸಿಲುಕಿ ದೇವಾಲಯಗಳು ನಲುಗುವ ಸ್ಥಿತಿಗೆ ಬಂದಿವೆ. ಸಮಾಜದಲ್ಲಿ ನೈತಿಕ ಪ್ರಜ್ಞೆಯನ್ನು ಮೂಡಿಸುವ ಹಾಗೂ ಸಾಂಸ್ಕೃತಿಕ ಬದುಕನ್ನು ರೂಪಿಸುವ ಗುರುತರ ಜವಾಬ್ದಾರಿಯನ್ನು ಹೊತ್ತಿದ್ದ ದೇವಾಲಯಗಳು ಇಂದು ರಾಜಕೀಯ ಪಟ್ಟಭದ್ರ ಹಿತಾಸಕ್ತಿಗಳ ಪ್ರಭಾವದಿಂದ ಅನೇಕ ಬದಲಾವಣೆಗೆ ಒಳಗಾಗಿದೆ. ಪಾರಂಪರಿಕ ದೇವಾಲಯಗಳ ಹಬ್ಬ ಮತ್ತು ಜಾತ್ರೆಗಳನ್ನು ರಾಜಕೀಯ ಮುಖಂಡರು ತಮ್ಮ ವೇದಿಕೆಗಳನ್ನಾಗಿಸಿಕೊಂಡು ಜನರ ಮನಸ್ಸನ್ನು ಪರಿವರ್ತಿಸುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ದೇವಾಲಯಗಳು ಮುಜರಾಯಿ ಇಲಾಖೆಯ ಆಶ್ರಯದಲ್ಲಿ ತನ್ನೆಲ್ಲಾ ಚಟುವಟಿಕೆಗಳನ್ನು ನಡೆಸುವುದರಿಂದ ಇವು ಇಷ್ಟವಿರಲಿ ಇಲ್ಲದಿರಲಿ ಸಮಾಜದ ಹಿತಾಸಕ್ತಿಗಾಗಿ ಅನೇಕ ಆದೇಶಗಳನ್ನು ಪಾಲಿಸಲೇಬೇಕಾಗುತ್ತದೆ. ಹೀಗಾಗಿ ದೇವಾಲಯಗಳು ತಮ್ಮ ನಿಜವಾದ ಸ್ವರೂಪ ಹಾಗೂ ಗುಣಲಕ್ಷಣಗಳನ್ನು ಕಳೆದುಕೊಳ್ಳುತ್ತಿವೆ.

**ತೋರ್ಪಡಿಕೆ ಅಥವಾ ಪ್ರತಿಷ್ಠೆಗಾಗಿ ಭಕ್ತಿ–ದಾನ ಧರ್ಮ** : ಮನುಷ್ಯ ಆಧುನೀಕತೆಗೆ ಒಗ್ಗಿಕೊಂಡಂತೆ ಅವನ ಅಭಿವೃದ್ಧಿ ಅಥವಾ ಬೆಳವಣಿಗೆಯು ಉತ್ತಮವಾಗುತ್ತ ಸಾಗಿದಂತೆ ಅವನು ಪಾರಂಪರಿಕತೆಯನ್ನು ಮರೆಯುತ್ತಿದ್ದಾನೆ. ಹಿಂದೆ ನಡೆಸಿಕೊಂಡು ಬರುತ್ತಿದ್ದ ನಂಬಿಕೆ ಆಚರಣೆ ಗಳೆಲ್ಲವನ್ನು ಗಾಳಿಗೆ ತೂರಿ ಇಂದು ತೋರ್ಪಡಿಕೆಗಾಗಿ ಭಕ್ತಿಯನ್ನು ತೋರುತ್ತಿದ್ದಾನೆ. ಪ್ರತಿಷ್ಠೆಗಾಗಿ ಹೆಚ್ಚಿನ ದೇಣಿಗೆಯನ್ನು ಕೊಡುವುದು, ವೈಭವಾತ್ಮಕವಾಗಿ ಪೂಜೆ ಪುನಸ್ಕಾರಗಳನ್ನು ಮಾಡಿಸುವುದು, ಪತ್ರಿಕೆಗಳಲ್ಲಿ ಪ್ರಕಟಣೆಕೊಡಿಸುವುದು, ದಾನ ಧರ್ಮ ಮಾಡುವುದು ಮಾಡುತ್ತಿದ್ದಾನೆ ಒಂದು ಕಡೆ ಇದರಿಂದ ದೇವಾಲಯದ ಅಭಿವೃದ್ಧಿಯಾದರೂ ನಂಬಿಕೆ ಆಚರಣೆಗಳ ಮೇಲೆ ಗಾಢವಾದ ಪ್ರಭಾವವನ್ನು ಬೀರಿ ಬದಲಾವಣೆಯ ಹಾದಿಯನ್ನು ತುಳಿಯಲು ಪ್ರೋತ್ಸಹಿಸಿದಂತಾಗುತ್ತಿದೆ.

**ಆಧುನಿಕ ಪೂಜಾ ವಿಧಾನಗಳು** : ಮೈಸೂರು ನಗರದ ದೇವಾಲಯಗಳಲ್ಲಿ ಇಂದು ಆಧುನಿಕ ಪೂಜಾವಿಧಾನಗಳದ್ದೆ ಹಾವಳಿಯಾಗಿದೆ. ಅಲ್ಲದೆ ಜನರು ಅದನ್ನೇ ಒಪ್ಪಿಕೊಳ್ಳುವ ಸ್ಥಿತಿಗೆ ತಲುಪಿದ್ದಾರೆ. ಜೋರಾಗಿ ಮಂತ್ರಘೋಶಗಳನ್ನು ಹೇಳುವುದು, ವಿಜೃಂಭಣೆಯಿಂದ ದೀಪ ಬೆಳಗುವುದು, ಧೂಪ ಹಾಕುವುದು, ಅಭಿಷೇಕ ಮಾಡುವುದು, ವಾದ್ಯನುಡಿಸುವುದು ನೋಡುಗರಿಗೆ

ಹೆಚ್ಚಿನ ಆಕರ್ಷಣೆಯನ್ನು ತಂದು ಕೊಡಬಹುದು. ಆದರೆ ಆಕರ್ಷಿತರಾದ ಜನರಿಗೆ ಮಂತ್ರಘೋಶದ ಗಂದಗಾಳಿಯು ಗೊತ್ತಿರುವುದಿಲ್ಲ.

ಯಾಂತ್ರಿಕ ಪೂಜಾ ವಿಧಿ ವಿಧಾನಗಳು ಫಲನೀಡಲ್ಲ "ಮಹಾದಾರ್ಶನಿಕ ಶ್ರೀ ರಾಮಾನುಜಾ ಚಾರ್ಯರು ದೇವತಾ ಪ್ರಾರ್ಥನೆಯಲ್ಲಿ ಭಕ್ತಿನಿಷ್ಠೆಯ ಮಹತ್ವವನ್ನು ಸಾರಿದ್ದಾರೆ. ಆದರೆ ಪ್ರಸ್ತುತ ಬಹುತೇಕರು ಭಕ್ತಿನಿಷ್ಠೆಗೆ ಆದ್ಯತೆ ನೀಡದೇ ಯಾಂತ್ರಿಕವಾಗಿ ಪೂಜಾ ಕೈಂಕರ್ಯ ನೆರವೇರಿಸುವ ಪ್ರವೃತ್ತಿಯಲ್ಲಿ ತೊಡಗಿದ್ದು, ಯಾಂತ್ರಿಕ ಪೂಜಾ ವಿಧಿವಿಧಾನಗಳು ಫಲ ನೀಡುವುದಿಲ್ಲ ಎಂದು ಮೈಸೂರಿನ ಶ್ರೀಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿ ತಿಳಿಸಿದರು"[1]

**ಬದಲಾಗುತ್ತಿರುವ ಪೂಜಾ ವಾದ್ಯಗಳು** : ಇಂದು ದೇವಾಲಯಗಳಲ್ಲಿ ಹಿಂದಿನ ಪೂಜಾ ವಾದ್ಯಗಳನ್ನು ಹುಡುಕಿದರು ನೋಡಲು ಸಿಗುವುದಿಲ್ಲ. ಕೊಂಬು, ಕಹಳೆ, ಜಾಗಟೆ, ತಮಟೆ, ನಗಾರಿಗಳು ಪೂಜಾವಾದ್ಯಗಳಾಗಿ ಬಳಕೆಯಾಗಿದ್ದು, ಇಂದು ಕೆಲವೇ ಕೆಲವು ದೇವಾಲಯಗಳಲ್ಲಿ ಜಾಗಟೆಯೊಂದನ್ನು ಮಾತ್ರ ನೋಡಲು ಸಿಗುತ್ತದೆ. ಆದರೆ ಉಳಿದ ವಾದ್ಯಪರಿಕರಗಳು ಸಿಗುವುದಿಲ್ಲ. ಬದಲಾಗಿ ಆಧುನಿಕ ಹಾಗೂ ಯಾಂತ್ರಿಕವಾದ ಪ್ಲಾಸ್ಟಿಕ್ ನಗಾರಿಗಳು ದೇವಾಲಯಗಳಲ್ಲಿ ಹೆಚ್ಚು ಸದ್ದನ್ನು ಮಾಡುತ್ತಿವೆ. ಇನ್ನು ಕೆಲವುಕಡೆಗಳಲ್ಲಿ ರೆಕಾರ್ಡ್‌ಮಾಡಿರುವ ವಾದ್ಯದ ಸದ್ದುಗಳು ಹಾಗೂ ದೇವರ ಸ್ತುತಿಗಳು ವಿಜೃಂಭಿಸುತ್ತಿವೆ. ಇದರಿಂದ ಹಳೆಯ ವಾದ್ಯಪರಿಕರಗಳೆಲ್ಲವು ಮೂಲೆಗುಂಪಾಗಿ, ಮಾನವ ಯಾಂತ್ರಿಕ ಪೂಜಾವಿಧಾನಗಳೆಡೆಗೆ, ಯಾಂತ್ರಿಕ ಜೀವನದೆಡೆಗೆ ವೇಗವಾಗಿ ಹೆಜ್ಜೆಹಾಕುತ್ತಿದ್ದಾನೆ.

ಒಟ್ಟಾರೆಯಾಗಿ ಮೈಸೂರು ನಗರದ ಪಾರಂಪರಿಕ ದೇವಾಲಯಗಳು ಅಸ್ಥಿರ ಸ್ಥಿತಿಯಿಂದ ಸಂಸ್ಕೃತಿಯ ಅಸ್ತಿತ್ವವೂ ಬದಲಾಗುವ ಪರಿಸ್ಥಿತಿ ಉದ್ಭವಿಸಿದೆ. ಈ ಹಿಂದೆ ಪಾರಂಪರಿಕ ದೇವಾಲಯಗಳಲ್ಲಿ ಹಬ್ಬ ಮತ್ತು ಜಾತ್ರೆಗಳು ಹೆಚ್ಚು ದಿನಗಳ ಕಾಲ ನಡೆಯುತ್ತಿತ್ತು. ಜಾತ್ರೆಯಲ್ಲಿ ನಡೆಯುತ್ತಿದ್ದ ದಾಸೋಹ ಸೇವಾಕಾರ್ಯ ಜನರನ್ನು ದಾನ ಧರ್ಮದ ಕಡೆಗೆ ಸೆಳೆದು ಅವರನ್ನು ಪುಣ್ಯಪ್ರಾಪ್ತಿಗೆ ಪ್ರೇರೇಪಿಸುತ್ತಿತ್ತು. ಇಂದು ಜನರ ಬದುಕಿನಲ್ಲಿ ಗೊತ್ತಿದ್ದೋ, ಗೊತ್ತಿಲ್ಲದೆಯೋ ಸಮಯ ಪ್ರಜ್ಞೆಯ ಪ್ರಭಾವ ಬೆಳೆಯತೊಡಗಿದೆ. ಇವೆಲ್ಲದರ ಪ್ರಭಾವದಿಂದ ಭಕ್ತಾದಿಗಳು ತಮ್ಮ ಕೈಲಾದಷ್ಟು ಕಾಣಿಕೆ ದೇವರಿಗೆ ನೀಡಿ ಕೈ ತೊಳೆದುಕೊಳ್ಳುತ್ತಿದ್ದಾರೆ. 'ಜನ ಮರುಳೊ ಜಾತ್ರೆ ಮರುಳೊ' ಎಂಬ ಗಾದೆಗೆ ಅಪವಾದವೆಂಬಂತೆ ಜನ ಯಾಂತ್ರಿಕವಾಗಿದ್ದಾರೆ. ತಲತಲಾಂತರದಿಂದ ಬಂದ ನಿಷ್ಠೆ ಮತ್ತು ಭಕ್ತಿಯಿಂದ ನೆರವೇರುತ್ತಿದ್ದ ಹಬ್ಬ ಜಾತ್ರೆಗಳು ಕಾಲಕಳೆದಂತೆ ತನ್ನ

ತೀವ್ರತೆಯನ್ನು ಕಳೆದುಕೊಳ್ಳುತ್ತಿದೆ. ಜನರು ಅತ್ತ ಪರಂಪರಾಗತ ನಂಬಿಕೆಯನ್ನು ಬಿಡದೆ ಇತ್ತ ಆಧುನಿಕ ವಿಚಾರವನ್ನು ಪೂರ್ಣವಾಗಿ ಒಪ್ಪಿಕೊಳ್ಳದೆ ತ್ರಿಶಂಕು ಸ್ಥಿತಿಯಲ್ಲಿ ಜೀವನ ನಡೆಸುತ್ತಿರುವುದನ್ನು ಕಾಣಬಹುದಾಗಿದೆ.

## 9.2 ಹಬ್ಬ–ಜಾತ್ರೆ–ದೈವಾರಾಧನೆ ಮತ್ತು ಆಧುನೀಕತೆ

ಪ್ರತಿಯೊಂದು ಪ್ರದೇಶದಲ್ಲಿ ಆಯಾ ಪ್ರದೇಶಕ್ಕೆ ಅನುಗುಣವಾಗಿ ಅನೇಕ ವೈವಿಧ್ಯತೆಗಳನ್ನು ಕಾಣುತ್ತೇವೆ. ಮೈಸೂರು ನಗರ ವ್ಯಾಪ್ತಿಯೊಳಗೆ ವಾಸಿಸುವ ಹಲವಾರು ಭಿನ್ನ ಸಮುದಾಯಗಳು ಕೂಡಿ ಸಹಕಾರದ ಬಾಳ್ವೆಯನ್ನು ಹಿಂದಿನಿಂದಲೂ ನಡೆಸಿಕೊಂಡು ಬಂದಿರುತ್ತಾರೆ. ತಮ್ಮ ಪ್ರದೇಶಕ್ಕೆ, ಸಮುದಾಯಕ್ಕೆ ಪೂರಕವಾಗಿ ಒಂದಕ್ಕಿಂತಲೂ ಹೆಚ್ಚು ದೈವಗಳನ್ನು ಆರಾಧಿಸುವ ಸಂಪ್ರದಾಯವಿದ್ದರೂ, ಪರಸ್ಪರ ಪೂರಕ ಹಾಗೂ ಹೊಂದಾಣಿಕೆಯಿಂದ ಪಾರಂಪರಿಕವಾಗಿ ರೂಢಿಗತವಾಗಿ ಬಂದಿರುವ ಹಬ್ಬ, ಜಾತ್ರೆ, ಉತ್ಸವ, ಆಚರಣೆ, ನಂಬಿಕೆ, ನಿಷೇಧ, ಹರಕೆ ಇನ್ನು ಅನೇಕ ಆಚರಣೆಗಳನ್ನು ರೂಢಿಸಿಕೊಂಡು ಬಂದಿರುವುದನ್ನು ಕಾಣಬಹುದು.

ವಿಜ್ಞಾನದ ಪ್ರಗತಿ, ವೈಚಾರಿಕತೆಯ ಅರಿವು ಇವೆಲ್ಲದರ ನಡುವೆ ಇಂದಿಗೂ ಕಾಡುವ ಪ್ರಶ್ನೆ ಆಸ್ತಿಕರು, ನಾಸ್ತಿಕರು ಎಂಬ ವಾದ–ವಿವಾದ, ದೈವದ ಇರುವಿಕೆಯ ಬಗೆಗಿನ ಖಚಿತತೆ, ದೈವ ಅಥವಾ ದೇವರ ಬಗೆಗೆ ಇಂದಿಗೂ ಒಮ್ಮತದ ನಿರ್ಧಾರಗಳಿಲ್ಲ. ಆದಾಗ್ಯೂ ಜಗತ್ತಿನಾದ್ಯಾಂತ ಹತ್ತು ಹಲವಾರು ಧರ್ಮಗಳು ಮತ್ತು ಲಕ್ಷಾಂತರ ದೈವಗಳ ಆರಾಧನೆ ಪ್ರತಿನಿತ್ಯ ಎಲ್ಲಾ ಸಮುದಾಯಗಳಲ್ಲಿಯೂ ನಡೆಯುತ್ತಿದೆ. ಕೋಟ್ಯಾನು ಕೋಟಿ ಜನರು ವ್ರತ, ಉಪವಾಸ, ಉತ್ಸವ, ತೇರು, ಜಾತ್ರೆ, ಹುಣ್ಣಿಮೆ, ಪೂಜೆ–ಪುನಸ್ಕಾರ, ಬಲಿ, ಆಚರಣೆ ಹರಕೆಯಂತಹ ಕಾರ್ಯಗಳಲ್ಲಿ ನಿರಂತರವಾಗಿ ತಮ್ಮ ಇಷ್ಟದೈವ ಹಾಗೂ ಕುಲದೈವಗಳ ಆರಾಧನೆ, ಆಚರಣೆಯಲ್ಲಿ ತೊಡಗಿರುವುದುಂಟು. ಇದಕ್ಕೆ ಮೈಸೂರು ನಗರ ಹೊರತಾಗಿಲ್ಲ.

ಅನಾದಿಕಾಲದಿಂದಲೂ ಮಾನವ ನಂಬಿಕೆ ಮತ್ತು ತತ್ಸಂಬಂಧವಾದ ಆಚರಣೆಗಳನ್ನು ನಡೆಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಕಾಲ, ಮನೋಭಾವಕ್ಕೆ ಅನುಗುಣವಾಗಿ ಹೊಸ ಹೊಸ ನಂಬಿಕೆ ಮತ್ತು ಆಚರಣೆಗಳು ಪ್ರವೇಶ ಪಡೆಯುತ್ತಲೇ ಇರುತ್ತವೆ. ನಂಬಿಕೆ ಮತ್ತು ಆಚರಣೆಗಳು ಕೇವಲ ಒಂದೆರಡು ವರ್ಷಗಳಲ್ಲಿ ರೂಢಿಗೆ ಬಂದವುಗಳಲ್ಲ. ಅನಾದಿಕಾಲದಿಂದ ಇಂದಿನವರೆಗೂ ತಲೆ–ತಲೆಮಾರಿನಿಂದ ಮುಂದುವರೆದುಕೊಂಡು ಬಂದಿವೆ. ಇವುಗಳು ಮಾನವನ ಮಾನಸಿಕ ನೆಮ್ಮದಿಗಾಗಿ ಮಾಡಿಕೊಂಡಿರುವ ಚಿಕಿತ್ಸಕ ಸ್ವರೂಪದ ಸಾಧನಗಳೆನ್ನಬಹುದು.

ಕಾಲಕಳೆದಂತೆ ಜನರು ಆಧುನಿಕ ಜೀವನಶೈಲಿಗೆ ಹೊಂದಿಕೊಂಡಂತೆ ನಮ್ಮ ಪಾರಂಪರಿಕ ಆಚರಣೆಗಳು ಮಂಕಾಗುತ್ತಿರುವುದನ್ನು ಕಾಣಬಹುದು. ಇದಕ್ಕೆಲ್ಲ ಮುಖ್ಯ ಕಾರಣ ಧಾರ್ಮಿಕ ಶ್ರದ್ಧೆ ಕುಂಠಿತವಾಗುತ್ತಿರುವುದು ಮತ್ತು ಆಧುನೀಕತೆಯ ಪ್ರಭಾವ. "ಒಂದು ಕಡೆ ದೇವರಲ್ಲಿ ನಂಬಿಕೆ, ಇನ್ನೊಂದು ಕಡೆ ಆಧುನಿಕತೆಯ ವೈಚಾರಿಕತೆ, ವಿಚಾರಧಾರೆಗಳ ಆಕ್ರಮಣದ ಇಕ್ಕಳದಲ್ಲಿ ಸಿಕ್ಕ ಇಂದಿನ ಮನುಷ್ಯ ಒದ್ದಾಡುತ್ತಿದ್ದಾನೆ. ಆದರೂ ಸಹ ದೇವತೆಗಳ ಮೇಲಿನ ಭಕ್ತಿ ನಂಬಿಕೆಗಳು ಕಡಿಮೆಯಾಗಿಲ್ಲ ಎಂಬುದು ಗಮನಾರ್ಹವಾಗಿದೆ. ಇವತ್ತಿನ ಆಧುನಿಕ ಸಂದರ್ಭದಲ್ಲಿ ಗ್ರಾಮದೇವತೆಗಳ ಉಳಿವು ನಮ್ಮ ಗ್ರಾಮೀಣ ಪ್ರದೇಶದಲ್ಲಿ ಕಾಣಬಹುದು. ಇಲ್ಲಿ ಮುಖ್ಯವಾಗಿ ನಾಗರಿಕತೆ ಬದಲಾದಂತೆ ಸಂಸ್ಕೃತಿಗಳು ಚಲನೆಗೊಳ್ಳುತ್ತವೆ. ಸಂಸ್ಕೃತಿ ಬದಲಾದಂತೆ ಜನರಲ್ಲಿ ನಂಬಿಕೆ ಸಂಪ್ರದಾಯಗಳು ಬದಲಾಗುವುದು ಸೃಷ್ಠಿಯ ಸಹಜಗುಣ. ಆದರೂ ಮೂಲಭೂತವಾಗಿ ಜೀವನದಲ್ಲಿ ಅಳವಡಿಸಿಕೊಂಡಿರುವಂಥ ಅಂಶಗಳು ಮಾತ್ರ ಹೋಗುವುದಿಲ್ಲ ಎಂಬ ಮಾತು ಸಮಂಜಸವಾದುದು"[2]

## 9.3 ನಗರ ಜಾನಪದ

ಜಾನಪದವು ಎಲ್ಲಾ ಕಾಲಕ್ಕೆ ಸ್ವೀಕೃತವಾದದ್ದು, ಆಧುನಿಕತೆಯನ್ನು ಒಳಗೊಂಡು ಮುಂದುವರೆಯುತ್ತದೆ. ಜಾನಪದದ ಮೇಲೆ ಆಧುನಿಕ ಪ್ರಭಾವವನ್ನು ಅಲ್ಲಗಳೆಯುವಂತಿಲ್ಲ. ಸಾಮಾಜಿಕ ಸಾಂಸ್ಕೃತಿಕ ಚಳುವಳಿಗಳು, ವೈಯಕ್ತಿಕ ಪ್ರಭಾವಗಳು, ವರ್ತನೆಗಳು ಜಾನಪದದಲ್ಲಿ ತೆರೆದ ಮನಸ್ಸಿನಿಂದ ಸ್ವೀಕೃತವಾಗುತ್ತಿವೆ. ಈ ದೃಷ್ಟಿಯಿಂದ ಸಾಂಸ್ಕೃತಿಕ ವಿಕಾಸವಾದಂತೆಲ್ಲಾ ಜಾನಪದವು ನಶಿಸುತ್ತದೆ ಎಂಬ ಆತಂಕವನ್ನು ದೂರ ತಳ್ಳಿ, ಕಾಲ ಕಾಲಕ್ಕಾಗುವ ಬದಲಾವಣೆಗಳನ್ನು ಒಪ್ಪಿಕೊಂಡು ಜಾನಪದವನ್ನು ಅಧ್ಯಯನ ಮಾಡಿದಾಗ ಜಾನಪದ ಬದುಕಿಗೆ ಹೊಸ ಅರ್ಥ ಹೊಸ ಹುಟ್ಟು ಪ್ರಾಪ್ತವಾಗುತ್ತದೆ.

ಜಾನಪದವು ನಶಿಸುತ್ತಿದೆ ಮತ್ತು ಜಾನಪದವು ಚಲನಶೀಲವಾದುದು ಈ ಎರಡರ ನಡುವೆ ಕರ್ನಾಟಕ ಜಾನಪದ ಅಧ್ಯಯನ ಗೊಂದಲದಲ್ಲಿದೆ. ಇದಕ್ಕೆ ಮುಖ್ಯ ಕಾರಣ ಜಾನಪದವು ತನ್ನನ್ನು ವೈಜ್ಞಾನಿಕವಾಗಿ ನಿರ್ಣಯಿಸಿಕೊಳ್ಳದಿರುವುದು ಮತ್ತು ಜಾನಪದದ ವ್ಯಾಪ್ತಿ ಎಲ್ಲಿಂದ ಎಲ್ಲಿಯವರೆಗೆ ಎಂಬುದು ನಿರ್ದಿಷ್ಟಗೊಂಡಿಲ್ಲದಿರುವುದು. ಜಾನಪದ ಎಂದಾಕ್ಷಣ ಪುಳಕಿತ ಗೊಳ್ಳುವ ಭಾವುಕ ಪ್ರವೃತ್ತಿ ಮತ್ತು ಜಾನಪದ ನಶಿಸುತ್ತಿದೆ ಎನ್ನುವ ಅವೈಚಾರಿಕ ಕೊರಗುಗಳನ್ನು ಬದಿಗೊತ್ತಿ, ಜಾಗತಿಕ ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ಜಾನಪದದ ವ್ಯಾಪ್ತಿಯನ್ನು ಗುರುತಿಸಿ ಕೊಳ್ಳಬೇಕಾದದ್ದು ಈಗ ನಮ್ಮ ಮುಂದಿರುವ ಜವಬ್ದಾರಿಯಾಗಬೇಕು. ಈ

ಹಿನ್ನೆಲೆಯಲ್ಲಿ ನಗರ ಜಾನಪದದ ನೆಲೆಗಳನ್ನು ಅರ್ಥೈಸಿಕೊಳ್ಳುವಾಗ ಮೊದಲಿಗೆ ಎರಡು ಅಂಶಗಳನ್ನು ನಾವು ಸ್ಪಷ್ಟಪಡಿಸಿಕೊಳ್ಳಬೇಕು.

1. ಮೌಖಿಕ ರೂಪದಲ್ಲಿರುವುದು ಮಾತ್ರವೇ ಜಾನಪದ ಎಂಬ ಪರಿಕಲ್ಪನೆಯನ್ನು ಬದಲಾಯಿಸಿಕೊಳ್ಳತಕ್ಕದ್ದು.
2. ನಗರದಲ್ಲಿ ವಾಸಿಸುವ ಜನಸಮುದಾಯವು ಜನಪದರಲ್ಲ ಎಂಬ ತಿಳುವಳಿಕೆಯನ್ನು ಮಾರ್ಪಡಿಸಿಕೊಳ್ಳಬೇಕಾದದ್ದು.

ಜಾನಪದವನ್ನು ಅದು ಹುಟ್ಟುವ ಸಾಂಸ್ಕೃತಿಕ ಸಂದರ್ಭವನ್ನು ಗಮನದಲ್ಲಿರಿಸಿಕೊಂಡು ಅರ್ಥೈಸಬೇಕಾಗಿರುತ್ತದೆ. ಈ ದಿಸೆಯಲ್ಲಿ ನಗರ ಜಾನಪದವು ಅದು ಮುಂದುವರೆದಿರಲಿ ಅಥವಾ ಹಿಂದುಳಿದದ್ದಾಗಿರಲಿ ತನ್ನದೇ ಆದ ನಂಬಿಕೆ, ಸಂಪ್ರದಾಯ, ಆಚರಣೆ, ವಿಧಿ–ನಿಷೇಧಗಳನ್ನು ಹೊಂದಿರುತ್ತದೆ.

**ಇ.ಬಿ.ಟೈಲರ್ ಹೇಳುವಂತೆ "**ಪ್ರತಿಯೊಂದು ಸಮುದಾಯದಲ್ಲಿಯೂ ಆಚಾರ, ವಿಚಾರ, ನಡೆನುಡಿ, ನಂಬಿಕೆ ವರ್ತನೆ ಮುಂತಾದವುಗಳನ್ನುಳ್ಳದ್ದೇ ಸಂಸ್ಕೃತಿ" ಎಂದಿದ್ದಾರೆ. ಇಂತಹ ಸಂಸ್ಕೃತಿಯಲ್ಲಿ ಹುಟ್ಟಿಕೊಳ್ಳುವ ಜಾನಪದವು ಎಂತಹ ಬದಲಾವಣೆ ಘಟಿಸಿದರೂ ಅದೆಲ್ಲವನ್ನು ತನ್ನಲ್ಲಿ ಅಂತರ್ಗತಿಸಿಕೊಂಡು ಹೊಸರೂಪ, ಹೊಸ ಬಲಗಳೊಂದಿಗೆ ಅಭಿವ್ಯಕ್ತಿ ಪಡೆದುಕೊಳ್ಳುತ್ತದೆ. ಆಧುನಿಕ ಬದುಕಿನಲ್ಲಿ ಯಾವ ಸೌಕರ್ಯಗಳು ಮನುಷ್ಯನನ್ನು ನಾಗರಿಕನನ್ನಾಗಿ ಮಾಡಲು ಸಹಾಯಕವಾಗಿರುವುದೋ ಅವು ಇರುವಲ್ಲೆಲ್ಲಾ ಜಾನಪದವಿದ್ದೇ ಇರುತ್ತದೆ. ಜಾನಪದ ಎನ್ನುವುದು ಹಿಂದುಳಿದ, ಅನಕ್ಷರಸ್ಥ ಗ್ರಾಮೀಣ ಸಮಾಜದಲ್ಲಿ ಮಾತ್ರವೇ ಇರಬೇಕೆಂಬ ಕಟ್ಟುಪಾಡೇನಿಲ್ಲ. ಒಟ್ಟಾರೆ ಮನುಷ್ಯ ಬದುಕನ್ನು ತಬ್ಬಿ ಹಿಡಿದಿರುವ ಜಾನಪದದ ಪ್ರಭಾವಕ್ಕೆ ಒಳಗಾಗದ ನಾಗರೀಕನಿಲ್ಲ ಎಂದೇ ಹೇಳಬಹುದು. ನಾಗರಿಕತೆ ಬೆಳೆದಂತೆ, ಬದಲಾದ ಸಂದರ್ಭದಲ್ಲಿ ಜಾನಪದವೂ ಬೆಳೆಯುತ್ತಾ ಸಾಗುತ್ತದೆ. ನಗರಗಳಲ್ಲಿ ಬದುಕುವವರು ಪರಂಪರಾಗತ ನಂಬಿಕೆ, ನಡವಳಿಕೆ, ರೀತಿ–ನೀತಿ, ಆಚಾರ–ವಿಚಾರಗಳನ್ನು ಅನುಸರಿಸಿಕೊಂಡು ಬಂದವರೇ ಆಗಿರುತ್ತಾರೆ. ಬೆಂಗಳೂರಿನ ಕರಗ, ಮೈಸೂರಿನ ಚಾಮುಂಡಿ ಹಬ್ಬವಾಗಲಿ, ಧಾರವಾಡದ ಪಂಚಮಿ ಹಬ್ಬವಾಗಲಿ ಇಂದಿಗೂ ತನ್ನೆಲ್ಲ ಸೊಗಸು ಸಂಭ್ರಮಗಳೊಂದಿಗೆ ಆಚರಿಸಲ್ಪಡುತ್ತಲೇ ಬಂದಿರುವುದೇ ಇದಕ್ಕೆ ಸಾಕ್ಷಿಯಾಗಿದೆ.

## 9.4 ಮೌಢ್ಯಾಚರಣೆ ಪ್ರತಿಬಂಧಕ ವಿಧೇಯಕ

'ಕರ್ನಾಟಕ ಮೂಢನಂಬಿಕೆ ಆಚರಣೆಗಳ ಪ್ರತಿಬಂಧಕ ವಿಧೇಯಕ 2013', ರಾಷ್ಟ್ರೀಯ ಕಾನೂನು ಶಾಲೆಯ ಸಾಮಾಜಿಕ ಪ್ರತ್ಯೇಕತೆ ಮತ್ತು ಒಳಗೊಳ್ಳುವಿಕೆ ನೀತಿ ಅಧ್ಯಯನ ಕೇಂದ್ರದ ಉಪಕ್ರಮದಲ್ಲಿ ರಚಿಸಲಾದ ಮಾದರಿ ಕರಡು ಪ್ರತಿಯಲ್ಲಿ ನಾಡಿನ ಅನೇಕ ವಿದ್ವಾಂಸರು, ಪ್ರಗತಿಪರ ಹಿತಚಿಂತಕರು ನಂಬಿಕೆ, ಸಂಪ್ರದಾಯ, ಆಚರಣೆ, ಮೌಢ್ಯಗಳ ಬಗ್ಗೆ ತಮ್ಮದೇ ಆದ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಪ್ರಗತಿ ವಿರೋಧವಾದ ಮೌಢ್ಯಗಳು ಯಾವುವು, ಅವುಗಳಿಂದ ಜನಸಮೂಹದ ಮೇಲಾಗುವ ದುಷ್ಪರಿಣಾಮಗಳೇನು, ಈ ವಿಧೇಯಕದಡಿಯಲ್ಲಿ ತಂದು ನಿಷೇಧಿಸಬೇಕಾದ ಪದ್ಧತಿಗಳಾವುವು ಎಂಬ ವಿಚಾರಗಳ ಬಗ್ಗೆ ಮಾಹಿತಿ ನೀಡಲಾಗಿದೆ.

ಜನಪದ ನಂಬಿಕೆಯು ಸಾಂಪ್ರದಾಯಿಕವಾಗಿ ಅಂಗೀಕೃತವಾದ ಒಂದು ಪರಿಕಲ್ಪನೆ, ಇದು ಕಾರ್ಯ, ಕಾರಣ ಮತ್ತು ಪರಿಣಾಮದ ಸಂಬಂಧವನ್ನು ಹಾಗೂ ಭೂತ–ವರ್ತಮಾನ–ಭವಿಷ್ಯತ್ತಿನ ಸಂಗತಿಗಳನ್ನು ಒಳಗೊಂಡಿರುತ್ತದೆ. ಇದು ಆಯಾ ವ್ಯಕ್ತಿಯ ಧೋರಣೆ ಮತ್ತು ವಿಶ್ವಾಸಕ್ಕೆ ಸಂಬಂಧಿಸಿದ್ದಾಗಿದೆ. ಬದುಕಿನ ಸಮಸ್ಯೆಗಳನ್ನು ನಿವಾರಿಸಲು ಅಥವಾ ಘಟಿಸುವಂತಹದ್ದನ್ನು ಮುನ್ನವೇ ತಡೆಯಲು ಬಳಸುವ ಒಂದು ಅನಿಶ್ಚಿತವಾದ ಪರಿಕಲ್ಪನೆ. ಜನಪದ ನಂಬಿಕೆಗಳಲ್ಲಿ ವೈಜ್ಞಾನಿಕ ಎನ್ನಬಹುದಾದ ನಂಬಿಕೆಗಳ ಮೇಲೆಯೇ ಆಚರಣೆ ಮತ್ತು ಸಂಪ್ರದಾಯಗಳು ರೂಪು ಗೊಂಡಿರುತ್ತವೆ. ಈ ನಂಬಿಕೆಗಳೇ ವಿಧಿನಿಷೇಧಗಳಿಗೂ ಕಾರಣವಾಗುತ್ತವೆ. ಮೌಢ್ಯಾಚರಣೆಯ ವಿಧಿನಿಷೇಧಗಳು ಅಧಿಕವಾಗುತ್ತಾ ಹೋದಂತೆ ಬದುಕು ಉಸಿರುಗಟ್ಟುವ ವಾತಾವರಣಕ್ಕೆ ತಿರುಗುತ್ತದೆ. ನರಕವಾಗುತ್ತದೆ.

ಎಲ್ಲಾ ಸಂಪ್ರದಾಯ, ಆಚರಣೆಗಳ ಸಮಾಜಕ್ಕೆ ನಂಬಿಕೆಗಳೇ ಕಾರಣವಾಗಿವೆ. ನಂಬಿಕೆಗಳಲ್ಲಿ ಭಿನ್ನ ವಿಧಗಳಿದ್ದಂತೆ ಆಚರಣೆ ಮತ್ತು ಸಂಪ್ರದಾಯಗಳಲ್ಲಿಯೂ ಭಿನ್ನತೆ ಇದೆ. ಆಚರಣಾ ಸಂಪ್ರದಾಯದಲ್ಲಿ ಕೆಲವು ವೈಜ್ಞಾನಿಕವಾಗಿದ್ದರೆ ಇನ್ನು ಕೆಲವು ಅವೈಜ್ಞಾನಿಕವಾಗಿಯೂ ಅಸ್ತಿತ್ವದಲ್ಲಿವೆ. ಮೌಢ್ಯ ಸಂಪ್ರದಾಯ, ಆಚರಣೆಗಳು ಅನಾರೋಗ್ಯಕರ ಮತ್ತು ಅಪಾಯಕಾರಿ ಯಾದವು. ಇಂಥವುಗಳ ಮುಂದುವರಿಕೆಗಾಗಿಯೇ ಜೋತಿಷ್ಯ, ಜಾತಕ, ವಾಸ್ತು, ಮಾಟ–ಮಂತ್ರ, ಮೋಡಿ, ಭಾನಾಮತಿ, ವಶೀಕರಣ, ಬಲಿ ಮುಂತಾದವು ಬಂದುದಾಗಿದ್ದು ದೇವರು, ಧರ್ಮ ದೊಂದಿಗೆ ಸಂಬಂಧವನ್ನು ಸಾಧಿಸಿವೆ.

ದೇವರು–ಧರ್ಮದ ಮೇಲಿನ ಶ್ರದ್ಧೆಯನ್ನು ಮಸೂದೆಯು ಪ್ರಶ್ನಿಸಿಲ್ಲ. ಶ್ರದ್ಧೆಯ ಮೂಲ ಭರವಸೆ ಇದು ಸಾಮಾನ್ಯ ಜನತೆಯ ಸಮಸ್ಯೆಯ ಪರಿಹಾರದ ಆಶಾಕಿರಣ. ಅದು

ಅನಿಶ್ಚಿತವಾದುದು. ಮುಂದೆ ಈ ನಂಬಿಕೆಗಳಲ್ಲಿ ಅಸಮಾನ್ಯತೆ ಹಾಗೂ ಚಮತ್ಕಾರಿ ವಿದ್ಯೆಗಳು, ಕಲೆಗಳು, ಧರ್ಮ ದೇವರೊಂದಿಗೆ ಕಸಿಕಟ್ಟುವ ಕ್ರಿಯೆಯಿಂದ ಸಂಬಂಧ ಸಾಧಿಸುತ್ತವೆ. ಮಕ್ಕಳಾಗದವರು ಸಿಡಿಯಾಡಿದರೆ ಮಕ್ಕಳಾಗುತ್ತವೆ ಎನ್ನುವುದೊಂದು ನಂಬಿಕೆ. ಬೆನ್ನು ಸಿಡಿ ಭಯಾತ್ಮಕ ಮತ್ತು ಭಿಭತ್ಸವಾದ ಆಚರಣೆ. ಕಬ್ಬಿಣದ ಕೊಂಡಿಯನ್ನು ಬೆನ್ನು ಹುರಿಗೆ ರಕ್ತಬರದಂತೆ ಚುಚ್ಚುವುದು ಒಂದು ತಾಂತ್ರಿಕ ಕಲೆ. ಹೀಗೆ ಚುಚ್ಚುವುದನ್ನು ದೈವೀಕಶಕ್ತಿಗೆ ಆರೋಪಿಸಿ, ನಂಬಿಕೆಗೆ ತಳುಕು ಹಾಕಿ ಸಂಬಂಧವನ್ನು ಸಾಧಿಸಲಾಗುತ್ತದೆ. ಮಕ್ಕಳಾಗದಿರುವುದಕ್ಕೂ ಸಿಡಿಯಾಡುವುದಕ್ಕೂ ಯಾವ ಸಂಬಂಧ ಇಲ್ಲದಿದ್ದರು, ಬಂಜೆತನದ ಮುಕ್ತಿಗಾಗಿ ಭಾವನಾತ್ಮಕ ಮನಸ್ಸು ಏನೆಲ್ಲ ಮಾಡಲು ಮುಂದಾಗುತ್ತದೆ. ಹೀಗಾಗಿ ನಿಷೇಧ ನಂಬಿಕೆಗಲ್ಲ ಅಥವಾ ಸಾಮಾನ್ಯ ವ್ಯಕ್ತಿಯ ಶ್ರದ್ಧೆಗೂ ಅಲ್ಲ. ಅವರವರ ನಂಬಿಕೆ ಶ್ರದ್ಧೆಗಳನ್ನು ಪಾಲಿಸಲು ಎಲ್ಲರೂ ಸ್ವತಂತ್ರರಾಗಿರುತ್ತಾರೆ. ಎನ್ನುವುದನ್ನು ಮಸೂದೆಯಲ್ಲಿ ಸ್ಪಷ್ಟಪಡಿಸಿದೆ. ನಾವಿಲ್ಲಿ ನಿಷೇಧಿಸಬೇಕಿರುವುದು ನಂಬಿಕೆಯನ್ನಲ್ಲ. ಅರ್ಥಹೀನ ಆಚರಣೆಗಳನ್ನು ಮತ್ತು ಮಸೂದೆಯ ಆಶಯ ಸಾಮಾನ್ಯ ಜನತೆಯ ನಂಬಿಕೆಯನ್ನು ದುರ್ಬಳಕೆ ಮಾಡಿಕೊಳ್ಳುವುದನ್ನು ತಪ್ಪಿಸಬೇಕು ಎನ್ನುವುದಾಗಿದೆ. ವಿದೇಯಕ ಮೌಢ್ಯಾಚರಣೆಯ ಪ್ರತಿಬಂಧಕವನ್ನು ಎರಡು ಮಾರ್ಗಗಳಲ್ಲಿ ಬಳಸಿಕೊಳ್ಳಲು ಸೂಚಿಸಿದೆ.

**ಹೆಚ್ಚು ಶಿಕ್ಷೆ ಇರುವ ನಿಷೇಧಿತ ಮೌಢ್ಯಾಚಾರಣೆಗಳು:**

ನರಬಲಿ, ಭೂತೋಚ್ಚಾಟನೆ, ಅಘೋರಿ, ಸಿದ್ದು ಭುಕ್ತಿ, ವಾಮಾಚಾರ ಅಥವಾ ಮಾಟ, ಸಿಡಿ ಆಚರಣೆ, ಮಕ್ಕಳನ್ನು ಮುಳ್ಳಿಗೆ ಎಸೆಯುವುದು, ಋತುಮತಿ, ಗರ್ಭಿಣಿಯರನ್ನು ಊರ ಹೊರಗಿಡುವುದು, ಓಕುಳಿಯಲ್ಲಿ ಕೆಳವರ್ಗದ ಸ್ತ್ರೀಯರನ್ನ ಬಳಸುವುದು, ಬೆತ್ತಲೆ ಸೇವೆ ಆಚರಣೆ, ಗಾವು ಸಿಗಿಯುವುದು, ಮಡೆಸ್ನಾನ, ಪಂಕ್ತಿಬೇಧ ಇಂತವುಗಳನ್ನು ಆಚರಿಸದಂತೆ ನಿಷೇಧ ಹೇರಬೇಕೆಂಬುದನ್ನು ಮೊದಲ ಗುಂಪಿನಲ್ಲಿ ಸೂಚಿಸಿದೆ.

**ಎರಡನೆಯ ಗುಂಪಿನಲ್ಲಿ ಬರುವ ಕಡಿಮೆ ಶಿಕ್ಷೆ ಇರುವ ನಿಷೇಧಿತ ಮೌಢ್ಯಾಚರಣೆಗಳು:**

ಭವಿಷ್ಯವಾಣಿ ನಿಜವಾಗುತ್ತದೆ ಎಂದು ನಂಬಿಸಿ ಅವಮಾನಕರ ಆಚರಣೆಗಳನ್ನು ಮಾಡಿಸುವುದು, ವ್ಯಕ್ತಿಗಳಿಗೆ ಆರ್ಥಿಕನಷ್ಟ ಉಂಟಾಗುವಂತೆ ಕಾರಣವಾಗುವ ಹಾನಿಕಾರಕ ಭವಿಷ್ಯ ನುಡಿಯುವುದು, ಜ್ವಾಲೆಯನ್ನು ಬರಿಕೈಗಳಿಂದ ಮುಟ್ಟುವಂತೆ ಒತ್ತಾಯ, ಹಿಂಸೆ ಇಂಥ ಆಚರಣೆಗೆ ಪ್ರೇರೇಪಿಸುವ ಪರಿಚಾರಕರುಗಳನ್ನು ಕಾನೂನು ವ್ಯಾಪ್ತಿಗೆ ಒಳಪಡಿಸುವಂತೆ ಮಾಡಬೇಕಾಗಿದೆ. ಹೀಗೆ ಇನ್ನು ಅನೇಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಹಲವು ವಿಚಾರಗಳನ್ನು, ಮೌಢ್ಯಗಳನ್ನು ವಿದೇಯಕದಡಿಯಲ್ಲಿ ಸೂಚಿಸಲಾಗಿದೆ.

ಹೀಗೆ ಅಮಾಯಕ ಹೆಣ್ಣುಮಕ್ಕಳನ್ನು ಬೆತ್ತಲೆಗೊಳಿಸುವ, ಮುಗ್ಧ ಮಕ್ಕಳನ್ನು ಕೊಲ್ಲುವ ಮೌಢ್ಯವನ್ನು ಪ್ರಜ್ಞಾವಂತರಾದವರು ಎಂದಿಗೂ ಬೆಂಬಲಿಸಲು ಸಾಧ್ಯವಿಲ್ಲ. ಈ ಮೌಢ್ಯಗಳನ್ನು ತಡೆಗಟ್ಟುವ ಕಾಯಿದೆ ಬಗ್ಗೆ ಪ್ರಶ್ನೆಬಂದಾಗಲೆಲ್ಲ ದಿಕ್ಕು ತಪ್ಪಿಸುವ ಚರ್ಚೆಗಳು ನಡೆಯುತ್ತವೆ. ಹೀಗಾಗಿ ಜನರ ಧಾರ್ಮಿಕ ಭಾವನೆ, ನಂಬಿಕೆಗಳಿಗೆ ಆರೋಗ್ಯಕರ ಸಮಾಜಕ್ಕೆ ಪೂರಕವಾದ ಆಚರಣೆಗಳನ್ನು ಉಳಿಸಿ ಅನಾರೋಗ್ಯಕರ ನಂಬಿಕೆ ಪದ್ಧತಿಗಳನ್ನು ತೊಲಗಿಸಲು ಕಾಯಿದೆ ಬೇಕಾಗಿದೆ.

## ಕೊನೆ ಟಿಪ್ಪಣಿಗಳು

1. ಮೈಸೂರು ಮಿತ್ರ, ದಿನಾಂಕ:20.08.2018, ಪು.ಸಂ–9.
2. ಸಿ.ಟಿ.ಗುರುಪ್ರಸಾದ್, ಏಳು ಊರಿನ ದೇವತೆಗಳು, ಪು.ಸಂ–48.

# ಉಪಸಂಹಾರ

'ಮೈಸೂರು ನಗರ' ಪ್ರಾಚೀನ ಕಾಲದಿಂದಲೂ ತನ್ನದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿರುವ ಪ್ರದೇಶವಾಗಿದೆ. ಇಂತಹ ಮಹತ್ವಪೂರ್ಣ ಸ್ಥಳದ ಐತಿಹಾಸಿಕ, ಪೌರಾಣಿಕ, ಜಾನಪದೀಯ ಪರಂಪರೆಯನ್ನು ಅಧ್ಯಯನ ಮಾಡುವ ಉದ್ದೇಶದಿಂದ 'ಮೈಸೂರು ನಗರದ ಪಾರಂಪರಿಕ ದೇವಾಲಯಗಳ ಜಾನಪದೀಯ ಅಧ್ಯಯನ' ಎಂಬ ಮಹಾಪ್ರಬಂಧವನ್ನು ರಚಿಸಲಾಗಿದೆ. ಈ ಅಧ್ಯಯನಕ್ಕೆ ಆಕರಗಳನ್ನಾಗಿ ಇಲ್ಲಿ ದೊರೆತಿರುವ ಶಾಸನಗಳು, ಗ್ರಂಥಗಳು ಮತ್ತು ಲೇಖನಗಳನ್ನು ಬಳಸಿಕೊಳ್ಳಲಾಗಿದೆ. ಅಲ್ಲದೆ ಮೈಸೂರು ನಗರದ ದೇವಾಲಯಗಳಲ್ಲಿ ಕ್ಷೇತ್ರ ಕಾರ್ಯನಡೆಸಿ, ಅಗತ್ಯ ವಿಷಯ ಸಂಗ್ರಹಣೆ ಮಾಡುವ ಮೂಲಕ ಪಾರಂಪರಿಕ ದೇವಾಲಯಗಳ ಜಾನಪದೀಯ ಅಂಶಗಳನ್ನು ತಲಸ್ಪರ್ಶಿಯಾಗಿ ವಿಶ್ಲೇಷಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗಿದೆ.

'ಮೈಸೂರು ನಗರ' ಚಾರಿತ್ರಿಕ ದೃಷ್ಟಿಕೋನದಿಂದ ಅತ್ಯಂತ ಪ್ರಾಚೀನ ಸ್ಥಳವಾಗಿದೆ. ಮೈಸೂರಿಗೆ ಸುಮಾರು ಕ್ರಿ.ಪೂ.ಮೂರನೇ ಶತಮಾನದಷ್ಟು ಪ್ರಾಚೀನತೆಯ ಇತಿಹಾಸವಿರುವುದು ಕಾಣುತ್ತೇವೆ. ಅಂತೆಯೇ ಮೈಸೂರು ನಗರದ ಪಾರಂಪರಿಕ ದೇವಾಲಯಗಳಿಗೂ, ಮೈಸೂರಿಗೂ ಇರುವ ಸಂಬಂಧವನ್ನು ಗುರುತಿಸಬಹುದಾಗಿದೆ. ಅಂತೆಯೆ ಮೈಸೂರು ನಗರದ ದೇವಾಲಯಗಳು ಅಷ್ಟೇ ಪ್ರಾಚೀನವಾದವುಗಳಗಿವೆ.

ಈ ಮಹಾಪ್ರಬಂಧವನ್ನು ಅಧ್ಯಯನದ ದೃಷ್ಟಿಯಿಂದ ಒಂಬತ್ತು ಅಧ್ಯಾಯಗಳನ್ನಾಗಿ ವಿಭಾಗಿಸಿಕೊಳ್ಳಲಾಗಿದೆ. ಮೊದಲ ಅಧ್ಯಾಯ ಮೈಸೂರು ನಗರದ ಸಾಂಸ್ಕೃತಿಕ ಹಿನ್ನೆಲೆಗಳಲ್ಲಿ ಭೌಗೋಳಿಕವಾಗಿ ಮೈಸೂರು ನಗರವು ಹಲವು ಹಳ್ಳಿಗಳನ್ನು ತನ್ನ ಒಡಲಿನೊಳಗೆ ಅಡಗಿಸಿಕೊಂಡಿರುವ ಸಾಂಸ್ಕೃತಿಕ ನಗರವಾಗಿದೆ. ಜನಸಂಖ್ಯೆ ಬೆಳೆದಂತೆ ಮೈಸೂರು ನಗರದ ವ್ಯಾಪ್ತಿಯು ವಿಸ್ತರಿಸಿಕೊಳ್ಳುತ್ತಿರುವುದರಿಂದ ನಗರದ ಗಡಿ ಪ್ರದೇಶದಲ್ಲಿರುವ ಗ್ರಾಮಗಳನ್ನು ತನ್ನೊಳಗೆ ಸೇರಿಸಿಕೊಂಡು ಹಳ್ಳಿಯ ಮಣ್ಣಿನ ತಾಜಾತನದ ಸೊಗಡನ್ನು ಉಳಿಸಿಕೊಂಡು ಬರುತ್ತಿರುವುದನ್ನು ಗುರುತಿಸಲಾಗಿದೆ.

ಪೌರಾಣಿಕವಾಗಿ ಮೈಸೂರಿನ ಬಗೆಗೆ ಹಲವಾರು ಉಲ್ಲೇಖಗಳಿವೆ. ಮಾರ್ಕಂಡೇಯ ಮತ್ತು ಮತ್ಸಪುರಾಣಗಳಲ್ಲಿ 'ಮಾಹಿಷಿಕ', ಬ್ರಹ್ಮಾಂಡ ಪುರಾಣದಲ್ಲಿ 'ಮಹಿಸಿಕ', ಪದ್ಮ ಪುರಾಣದಲ್ಲಿ 'ಮಾಹಿಷಿಕ', ವಾಯುನಾಮ ಪುರಾಣಗಳಲ್ಲಿಯೂ ಈ ಹೆಸರು ಉಲ್ಲೇಖವಾಗಿದೆ.

ಚಾರಿತ್ರಿಕವಾಗಿ ಮೂರನೇ ಶತಮಾನದಲ್ಲಿ ಮೈಸೂರು ಪ್ರದೇಶ ಗಂಗರ ಆಳ್ವಿಕೆಗೆ ಒಳಪಟ್ಟಿತ್ತು. ನಾಲ್ಕನೆಯ ಶತಮಾನದಲ್ಲಿ ಮೌರ್ಯವಂಶದ ಅಶೋಕನು ಮಹಿಷಮಂಡಲಕ್ಕೆ ಬೌದ್ಧ ಧರ್ಮ ಪ್ರಚಾರಕ್ಕೆ ಥೇರ ಮಹಾದೇವನನ್ನು ಕಳುಹಿಸಿದನೆಂದು ಮಹಾವಂಶದಲ್ಲಿ ಉಲ್ಲೇಖಿಸಲಾಗಿದೆ. ಹೀಗೆ ಹಲವಾರು ರಾಜ ವಂಶಗಳು ಮೈಸೂರು ಪ್ರದೇಶವನ್ನು ಆಡಳಿತ ನಡೆಸಿವೆ. ಮತ್ತೆ ಕೆಲವು ರಾಜ ವಂಶಗಳು ಮೈಸೂರು ಪ್ರದೇಶದೊಂದಿಗೆ ಸಂಪರ್ಕ ಹೊಂದಿದ್ದವೆಂದು ಗುರುತಿಸಲಾಗಿದೆ.

ಮೈಸೂರು ನಗರ ಧಾರ್ಮಿಕವಾಗಿ ಸರ್ವಧರ್ಮ ಸಮನ್ವಯದ ಬೀಡಾಗಿದೆ. ಹಿಂದೂ, ಕ್ರೈಸ್ತ, ಮುಸ್ಲಿಂ, ಜೈನ, ಬೌದ್ಧ ಮುಂತಾದ ಧರ್ಮಗಳನ್ನು ಇಲ್ಲಿ ಕಾಣಬಹುದಾಗಿದ್ದು ರಾಜ ಮಹಾರಾಜರ ಕಾಲದಿಂದಲೂ ಈ ಎಲ್ಲಾ ಧರ್ಮಗಳಿಗೆ ಪ್ರೋತ್ಸಾಹ ನೀಡಿರುವುದು ಕಂಡು ಬಂದರೂ, ಹಿಂದೂ ದೇವಾಲಯಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿ ಚಾಮುಂಡೇಶ್ವರಿಯನ್ನು ಕುಲದೇವತೆ ಹಾಗೂ ನಾಡಿನ ಅಧಿದೇವತೆಯಾಗಿ ಪೂಜಿಸುತ್ತ ಬಂದಿದ್ದಾರೆ. ಅಂತೆಯೇ ಸುಸಂಸ್ಕೃತ, ಸುಸರ್ಜಿತವಾದ ಸಾಮಾಜಿಕ ಹಿನ್ನೆಲೆಯನ್ನು ಹೊಂದಿ, ಭೌತಿಕ ಮತ್ತು ಭಾವನಾತ್ಮಕ ಅವಶ್ಯಕತೆಗಳಿಗೆ ಅನುಗುಣವಾಗಿ ಮೈಸೂರು ನಗರದ ಜನರು ಸಾಮಾಜಿಕವಾಗಿ ಅವಿಭಾಜ್ಯ ಅಂಗವಾಗಿರುವುದು ಕಂಡುಬಂದಿದೆ.

ಆರ್ಥಿಕವಾಗಿ ಈ ಹಿಂದೆ ಮೈಸೂರು ನಗರದಲ್ಲಿ ವ್ಯವಸಾಯವೇ ಪ್ರಧಾನವಾಗಿತ್ತು. ಪ್ರಸ್ತುತವಾಗಿ ಎಲ್ಲಾ ಸೌಲಭ್ಯಗಳನ್ನು ಹೊಂದಿ, ಆಧುನಿಕ ತಂತ್ರಜ್ಞಾನದೊಂದಿಗೆ ನಾಗಾಲೋಟದಲ್ಲಿ ಬೆಳೆಯುತ್ತಿದೆ. ವಾಣಿಜ್ಯ–ವ್ಯಾಪಾರ, ಕೈಗಾರಿಕೆ, ಪ್ರವಾಸೋದ್ಯಮ ಕೇಂದ್ರ ಮತ್ತು ಸಾಂಸ್ಕೃತಿಕ ನಗರವಾಗಿ ಬೆಳವಣಿಗೆ ಸಾಧಿಸಿದರೂ, ಅದು ಪ್ರಧಾನವಾಗಿ ಐತಿಹಾಸಿಕ ಮತ್ತು ಧಾರ್ಮಿಕ ಕ್ಷೇತ್ರ ಎಂಬುದನ್ನು ಮರೆಯುವಂತಿಲ್ಲ. ಸಾಹಿತ್ಯಿಕವಾಗಿ ಮೈಸೂರು ಒಡೆಯರು ಹೆಚ್ಚು ಪ್ರೋತ್ಸಾಹ ನೀಡಿ ತಾವು ಸ್ವತಃ ಸಾಹಿತಿಗಳಾಗಿ ಹಲವಾರು ಗ್ರಂಥಗಳನ್ನು ರಚನೆ ಮಾಡಿರುತ್ತಾರೆ. ರಾಜ ಮಹಾರಾಜರ ಆಳ್ವಿಕೆಗೆ ಒಳಪಟ್ಟ ಮೈಸೂರು ರಾಜಕೀಯವಾಗಿ ಪ್ರಬುದ್ಧವಾಗಿದೆ. 1888ರಲ್ಲಿ ಮೈಸೂರು ನಗರದ ಸ್ಥಳೀಯ ಸರ್ಕಾರ ಸ್ಥಾಪನೆಯಾಗಿ, 1977ರಲ್ಲಿ ಮಹಾನಗರ ಪಾಲಿಕೆಯಾಗಿ ಬದಲಾಗಿದೆ. ಅಲ್ಲದೆ ಹಲವಾರು ರಾಜಕೀಯ ಧುರೀಣರನ್ನು ಕೊಡುಗೆಯಾಗಿ ನೀಡಿದೆ. ಆಧುನಿಕ ಶಿಕ್ಷಣ ನೀಡುವ ತಾಣವಾಗಿ 'ಶಿಕ್ಷಣಕಾಶಿ' ಎಂದು ಗುರುತಿಸಿಕೊಂಡಿದೆ.

ಎರಡನೆ ಅಧ್ಯಾಯ ದೇವಾಲಯಗಳ ಪಾರಂಪರಿಕ ಇತಿಹಾಸದಲ್ಲಿ ಪರಂಪರೆ ಎಂದರೇನು ಎಂಬುದನ್ನು ವಿಶ್ಲೇಷಿಸಲಾಗಿದೆ. ಪರಂಪರೆ ತಲೆಮಾರಿನಿಂದ ತಲೆಮಾರಿಗೆ ಸಂಸ್ಕೃತಿಯಿಂದ ರೂಪುಗೊಂಡು, ಅದರ ಗುಣಮಟ್ಟದ ಸೂಚಕವಾಗಿದೆ ಎಂದು ವಿವರಿಸಲಾಗಿದೆ.

ದೇವಾಲಯಗಳ ಉಗಮ, ಬೆಳವಣಿಗೆ ಮತ್ತು ಇತಿಹಾಸವನ್ನು ವಿಶ್ಲೇಷಿಸಿ ವಿವರಿಸಲಾಗಿದೆ. ಮಾನವನಲ್ಲಿ ನಿಸರ್ಗ ಕ್ರಿಯೆಗಳಿಂದ ಉಂಟಾದ ಭಯವೇ ದೇವರ ಹುಟ್ಟಿಗೆ ಕಾರಣವಾಗಿದೆ. ಪ್ರಕೃತಿ ಆರಾಧನೆಗೆ ತೊಡಗಿದ ಮಾನವ ಮೊದಲಿಗೆ ಬೆಟ್ಟ–ಗುಡ್ಡ, ಗಾಳಿ–ನೀರು, ಗಿಡ–ಮರ, ಪ್ರಾಣಿ–ಪಕ್ಷಿಗಳನ್ನು ಪೂಜಿಸಲು ಪ್ರಾರಂಭಿಸಿ, ಅನಂತರ ದೇವರು ತನ್ನಂತೆಯೇ ಎಂದು ಅದಕ್ಕೊಂದು ಆಕೃತಿ ನೀಡಿ, ಅದಕ್ಕೊಂದು ಆಲಯ ನಿರ್ಮಿಸಿ ಆರಾಧಿಸ ತೊಡಗಿದ. ಹೀಗೆ ಇಂದು ವಿಜೃಂಭಿಸುತ್ತಿರುವ ದೇವಾಲಯಗಳು ಬೆಳೆದು ನಿಂತಿರುವುದನ್ನು ಕಾಣಬಹುದಾಗಿದೆ.

'ಮೈಸೂರು' ನಿಷ್ಪತ್ತಿಗೂ, ಮೈಸೂರು ನಗರದ ದೇವಾಲಯಗಳ ಪ್ರಾಚೀನತೆಗೂ ನಿಕಟವಾದ ಸಂಬಂಧವಿರುವುದನ್ನು ಗುರುತಿಸಲಾಗಿದೆ. ಕ್ರಿ.ಶ.ಮೂರನೆ ಶತಮಾನದಲ್ಲಿ ಬೌದ್ಧ ಮತಪ್ರಸಾರಕ್ಕೆ 'ಮಹಿಷ ಮಂಡಲ' ಪ್ರಾಂತ್ಯಕ್ಕೆ ಥೇರ ಮಹದೇವನನ್ನು ಕಳುಹಿಸಿರುವುದು ಮಹಾವಂಶದಲ್ಲಿ ದಾಖಲಾಗಿದೆ. ಮಹಿಷನನ್ನು ಚಾಮುಂಡಿ ಕೊಂದದ್ದರಿಂದ ಚಾಮುಂಡೇಶ್ವರಿಯ ಕಾಲವನ್ನು ಇದೇ ಸಂದರ್ಭಕ್ಕೆ ಅಥವಾ ಇದಕ್ಕಿಂತ ಹಿಂದಕ್ಕೂ ಊಹಿಸಬಹುದೆಂದು ಗುರುತಿಸಲಾಗಿದೆ. ಆದರೆ ಪ್ರಾಚೀನ ಶಾಸನಗಳ ಪ್ರಕಾರ ಮೈಸೂರಿನ ಮಹಾಬಲೇಶ್ವರ ದೇವಾಲಯ ಕ್ರಿ.ಶ.ಸುಮಾರು 950 ಎಂದು ತಿಳಿದುಬಂದಿದೆ. ಅಲ್ಲದೆ ದೇವಾಲಯದ ಪ್ರಾಚೀನತೆಯನ್ನು ಶಾಸನಗಳಲ್ಲಿ ಹುಡುಕುವ ಸಂದರ್ಭದಲ್ಲಿ ರಾಜರು, ರಾಣಿಯರು, ವರ್ತಕರು, ಸೇವಕರು ಮುಂತಾದವರು ಮೈಸೂರು ನಗರದ ದೇವಾಲಯಗಳನ್ನು, ದೇವಾಲಯದ ಗೋಪುರಗಳನ್ನು ಹಾಗೂ ಆಭರಣಗಳು, ವಸ್ತ್ರಗಳು, ದಾನಗಳನ್ನು ಧಾರ್ಮಿಕ ಕಾರ್ಯಗಳಿಗಾಗಿ ನೀಡಿರುವುದನ್ನು ಗುರುತಿಸಲಾಗಿದೆ. ಇದರಿಂದ ಧಾರ್ಮಿಕ ಕಾರ್ಯಗಳಲ್ಲಿ ಜನಸಾಮಾನ್ಯರೆಲ್ಲರೂ ಭಾಗಿಯಾಗಲು ಅವಕಾಶವಿತ್ತೆಂದು ಶಾಸನಗಳು ತಿಳಿಸುತ್ತವೆ.

ನಾಣ್ಯಗಳು ಮುದ್ರಿತವಾದ ವರ್ಷ ಹಾಗೂ ಅದರಲ್ಲಿರುವ ದೇವರುಗಳ ಚಿತ್ರ ಮತ್ತು ಹೆಸರುಗಳು ದೇವಾಲಯಗಳ ಪ್ರಾಚೀನತೆಯನ್ನು ತಿಳಿಸುತ್ತವೆ. ಯಾವ ಅರಸರ ಕಾಲದಲ್ಲಿ ಯಾವ ನಾಣ್ಯಗಳಿದ್ದವು, ಅವರು ನಾಣ್ಯಗಳಲ್ಲಿ ಮುದ್ರಿಸಿರುವ ದೇವರುಗಳನ್ನು ಆರಾಧಿಸುತ್ತಿದ್ದು, ಆ ದೇವರುಗಳಿಗೆ ನಡೆದು ಕೊಳ್ಳುತ್ತಿದ್ದಿರಬೇಕು. ಆದುದರಿಂದ ಅದೇ ದೇವರುಗಳಿಗೆ ಗುಡಿ ಗೋಪುರಗಳನ್ನು ಕಟ್ಟಿಸಿದ್ದಾರೆಂದು ಗುರುತಿಸಲಾಗಿದೆ. ಅಂತೆಯೆ 16ನೇ ಶತಮಾನದಿಂದೀಚೆಗೆ ಬಂದಿರುವ ಗ್ರಂಥಗಳು ಮೈಸೂರಿನ ಇತಿಹಾಸ ಹಾಗೂ ದೇವಾಲಯಗಳ ಪ್ರಾಚೀನತೆಯನ್ನು ತಿಳಿಸುತ್ತವೆ.

ಮೂರನೆ ಅಧ್ಯಾಯ ದೇವಾಲಯಗಳ ವರ್ಗೀಕರಣದಲ್ಲಿ ಅಧ್ಯಯನದ ಉದ್ದೇಶದಿಂದ ಶೈವ, ವೈಷ್ಣವ, ಶಕ್ತಿ ಮತ್ತು ಇತರೆ ದೇವತೆಗಳು ಎಂದು ವರ್ಗೀಕರಿಸಿಕೊಳ್ಳಲಾಗಿದೆ. ಶೈವ ಧರ್ಮವು ಭಾರತದ ಪ್ರಾಚೀನ ಧರ್ಮಗಳಲ್ಲೊಂದು ಶಿವನ ಆರಾಧನೆಯ ವಿವರವು ವೇದಕಾಲಕ್ಕಿಂತಲು ಹಿಂದೆ ಹರಪ್ಪ ಮಹೇಂಜೋದಾರೋಗಳ ಸೈಂಧವ ಸಂಸ್ಕೃತಿಯನ್ನು ಪರಿಶೀಲಿಸಿದರೆ ಅದು ಪಶುಪತಿ, ಮಹಾಯೋಗಿಯೂ ಆದ ಶಿವನ ಸ್ವರೂಪವನ್ನು ಸೂಚಿಸುತ್ತದೆ ಎಂದು ಸರ್.ಜಾನ್.ಮಾರ್ಷಲ್ ಗುರುತಿಸಿದ್ದಾರೆ. ಶೈವ ಧರ್ಮಿಯರಿಗೆ ಆರಾಧ್ಯ ದೈವವಾಗಿರುವ ಶಿವನನ್ನು ಲಿಂಗ ರೂಪವಾಗಿಯೂ, ಸಾಕಾರ ಮತ್ತು ನಿರಾಕಾರವಾಗಿಯೂ ಆರಾಧಿಸುವುದನ್ನು ಗುರುತಿಸಲಾಗಿದೆ. ದೇವಾಲಯಗಳ ಪಟ್ಟಿ ನೀಡಿ ಅವುಗಳ ವಿವರವನ್ನು ನೀಡುವಾಗ, ಆ ದೇವಾಲಯಗಳಲ್ಲಿ ನಡೆಯುವ ಪೂಜೆ ಪುನಸ್ಕಾರಗಳು, ಹಬ್ಬ–ಹರಿದಿನಗಳು, ಜಾತ್ರೆ–ಉತ್ಸವಗಳನ್ನು ತಿಳಿಸಲಾಗಿದೆ.

ವೈಷ್ಣವ ಧರ್ಮವನ್ನು ವೇದಗಳಲ್ಲಿ ಗುರುತಿಸಲಾಗಿದೆ. ವಿಷ್ಣು ವೈಷ್ಣವರ ಆರಾಧ್ಯ ದೈವವಾಗಿದ್ದಾನೆ. ಮೈಸೂರು ನಗರದಲ್ಲಿ ಪಾರಂಪರಿಕವಾಗಿರುವ ವೈಷ್ಣವ ದೇವಾಲಯಗಳನ್ನು ಪಟ್ಟಿಮಾಡಿ ಅವುಗಳ ಮಾಹಿತಿಯಲ್ಲಿ ಎಲ್ಲಿ ಸ್ಥಾಪನೆಯಾಯಿತು, ಯಾವಾಗ ಸ್ಥಾಪನೆಯಾಯಿತು, ಯಾರಿಂದ ಸ್ಥಾಪನೆಯಾಯಿತು ಎಂಬೆಲ್ಲ ಮಾಹಿತಿಯ ಜೊತೆಯಲ್ಲಿ ಆ ದೇವಾಲಯಗಳಲ್ಲಿ ನಡೆಯುವ ಪೂಜೆ–ಪುನಸ್ಕಾರ, ಹಬ್ಬ–ಹರಿದಿನಗಳು, ಜಾತ್ರೆ–ಉತ್ಸವಗಳು ಯಾವುವೆಂದು ಗುರುತಿಸಲಾಗಿದೆ.

ಪ್ರಾಚೀನ ಹಿಂದೂ ಪರಂಪರೆಯು ನೆಲೆಗೊಂಡ ದಿನದಿಂದಲೇ ಶಾಕ್ತ ಪರಿಕಲ್ಪನೆ ತಲೆಯೆತ್ತಿದೆ. ದಾಖಲೆಗಳ ಕೊರತೆ ಇದ್ದರೂ ಶಕ್ತಿಯ ಆರಾಧನೆ ಅನಾದಿಕಾಲದಿಂದಲೂ ನಡೆದು ಬಂದಿರುವುದು ಪುರಾಣಗಳಲ್ಲಿ ಉಲ್ಲೇಖಿತವಾಗಿದೆ. ಶಾಕ್ತಪಂಥ ಒಂದು ಕಾಲದಲ್ಲಿ ಈ ದೇಶದ ಬಹುಭಾಗವನ್ನು ವ್ಯಾಪಿಸಿತ್ತು. ಕ್ರಿ.ಶ.ಆರನೆಯ ಶತಮಾನದಿಂದ ಹತ್ತನೆಯ ಶತಮಾನದವರೆಗೆ ಈ ಮತದ ಪ್ರಭಾವ ಅಧಿಕವಾಗಿತ್ತೆಂದು ತಿಳಿದು ಬರುತ್ತದೆ. ಮೈಸೂರು ಪ್ರದೇಶದಲ್ಲಿ ಶಕ್ತಿದೇವತೆಗಳ ಪರಂಪರೆಯ ಅಸ್ತಿತ್ವವನ್ನು ಗಂಗರಕಾಲದ ಹಿನಕಲ್ ಗ್ರಾಮದ ನನ್ನೇಶ್ವರ ದೇವಾಲಯದಲ್ಲಿನ ಸಪ್ತಮಾತೃಕೆಯರ ವಿಗ್ರಹಗಳು ಕ್ರಿ.ಶ.8ನೇ ಶತಮಾನದವು ಎಂದು ಗುರುತಿಸಲಾಗಿದೆ. ಈ ಪ್ರದೇಶದಲ್ಲಿ ಮೈಸೂರು ಅರಸರ ಮನೆದೇವತೆಯಾಗಿ ಶ್ರೀ ಚಾಮುಂಡೇಶ್ವರಿಯನ್ನು ಆರಾಧಿಸಲು ತೊಡಗಿದ ತರುವಾಯ ಶಾಕ್ತಪಂಥವು ಹೆಚ್ಚು ವಿಜೃಂಭಿಸಿದೆ. ಶಕ್ತಿ ದೇವತೆಗಳ ದೇವಾಲಯಗಳಲ್ಲಿ

ನಡೆಯುವ ಪೂಜೆ–ಪುನಸ್ಕಾರ, ಹಬ್ಬ–ಹರಿದಿನ, ಜಾತ್ರೆ–ಉತ್ಸವಗಳು ಯಾವುವೆಂದು ತಿಳಿಸಲಾಗಿದೆ.

ಇತರೆ ದೇವಾಲಯಗಳ ಗುಂಪಿನಲ್ಲಿ ಶೈವ, ವೈಷ್ಣವ, ಶಕ್ತಿ ದೇವತೆಗಳನ್ನು ಹೊರತುಪಡಿಸಿ ಉಳಿದ ದೇವರುಗಳನ್ನು ಪಟ್ಟಿಮಾಡಲಾಗಿದೆ ಉದಾಹರಣೆಗೆ: ಸಾಯಿಬಾಬ, ರಾಘವೇಂದ್ರ, ಶನೇಶ್ವರ, ನವಗ್ರಹ ಮುಂತಾದ ದೇವರುಗಳು. ಈ ದೇವರುಗಳ ದೇವಾಲಯದಲ್ಲಿ ನಡೆಯುವ ಹಬ್ಬ–ಹರಿದಿನ, ಪೂಜೆ–ಪುನಸ್ಕಾರ, ಜಾತ್ರೆ–ಉತ್ಸವಗಳನ್ನು ಹೆಸರಿಸಲಾಗಿದೆ.

ನಾಲ್ಕನೆ ಅಧ್ಯಾಯ ಪಾರಂಪರಿಕ ದೇವಾಲಯಗಳ ರಚನೆ ಮತ್ತು ಭೌತಿಕ ಸಂಸ್ಕೃತಿಯಲ್ಲಿ ದೇವಸ್ಥಾನಗಳು ಸಾರ್ವಜನಿಕವಾಗಿ ಇರುವ ಸಾಮೂಹಿಕ ಪೂಜೆಗೆ ಮತ್ತು ವ್ಯಕ್ತಿಗತವಾದ ಪೂಜೆ ಆರಾಧನೆಗಳನ್ನು ನಡೆಸಲು ಅವಕಾಶ ಒದಗಿಸುವ ಪೂಜಾಸ್ಥಳವಾಗಿದೆ. ದೇವಾಲಯ ನಿರ್ಮಾಣವನ್ನು ಎಲ್ಲಾ ಕಾಲದಲ್ಲಿಯೂ ಪ್ರಮುಖ ಪುಣ್ಯಕಾರ್ಯವೆಂದು ಭಾವಿಸಲಾಗಿರುವುದನ್ನು ಗುರುತಿಸಲಾಗಿದೆ. ದೇವಾಲಯಗಳ ರಚನೆ ಅಥವಾ ನಿರ್ಮಾಣವನ್ನು ಎಲ್ಲಿ, ಹೇಗೆ ಮಾಡಬೇಕು ಎಂಬುದನ್ನು ವಿಷ್ಣುಪುರಾಣದಲ್ಲಿ ವಿವರಿಸಿರುವುದನ್ನು ವಿಶ್ಲೇಷಿಸಲಾಗಿದೆ. ಯಾವುದೇ ಗ್ರಾಮದಲ್ಲಿನ ದೇವಾಲಯಗಳನ್ನು ಗಮನಿಸಿದರೆ ಗ್ರಾಮದ ಮುಂಭಾಗ ಅಥವಾ ಹೊರಗೆ ಹಲವಾರು ದೇವಾಲಯಗಳಿರುವುದು ಕಂಡುಬಂದಿವೆ. ದೇವಾಲಯಗಳ ಹಿಂಭಾಗಕ್ಕೆ ಆದಂತೆ ದೇವಾಲಯಗಳ ನಿರ್ಮಾಣ ಮಾಡಿದರೆ, ಗ್ರಾಮವನ್ನು ದೇವಾಲಯ ಕಾಯುತ್ತಿರುತ್ತದೆ ಎಂಬ ನಂಬಿಕೆಗೂ ವಿಷ್ಣುಪುರಾಣಕ್ಕೂ ಕೆಲವು ಸಾಮ್ಯತೆಗಳನ್ನು ಗುರುತಿಸಲಾಗಿದೆ. ಚಾಮುಂಡೇಶ್ವರಿ ದೇವಾಲಯದ ತಳಭಾಗದಲ್ಲಿ ಮತ್ತು ಹಿಂದಕ್ಕೆ ಆದಂತೆ ಮೈಸೂರು ನಗರದ ನಿರ್ಮಾಣವಾಗಿರುವುದು ಇವುಗಳಿಗೆ ಇಂಬು ನೀಡುತ್ತದೆ.

ಮೈಸೂರು ನಗರದ ಪಾರಂಪರಿಕ ದೇವಾಲಯಗಳ ರಚನೆಯಲ್ಲಿ ಕೆಲವೊಂದು ಜಾನಪದೀಯ ಅಂಶಗಳನ್ನು ಗುರುತಿಸಲಾಗಿದೆ. ಯಾವುದೇ ದೇವಾಲಯವಾದರೂ ಅದರ ಹಿಂದೆ ಅಥವಾ ಒಳಗೆ ದೈವತ್ವವಿರುವ ಅರಳಿ, ಬೇವು, ಬಿಲ್ವ, ಬಸರಿ, ಬನ್ನಿ ಮುಂತಾದ ಯಾವುದಾದರೂ ಒಂದು ಮರಗಳಿರುವುದನ್ನು ಗುರುತಿಸಲಾಗಿದೆ. ದೇವಾಲಯಗಳನ್ನು, ದೇವರ ಮೂರ್ತಿಯನ್ನು ಸೂರ್ಯಾಭಿಮುಖವಾಗಿ ನಿರ್ಮಿಸಿರುವುದು, ಗರ್ಭಗುಡಿಗಳು ಜನಪದರ ಕಲ್ಪನೆಯಲ್ಲಿರುವಂತೆಯೇ ಇಂದು ಇರುವುದು, ಜನಪದರ ಗುಡಿಗಳಂತೆ ಗರ್ಭಗುಡಿಯ ಅಳತೆ ಚಿಕ್ಕದಾಗಿರುವುದು, ಜನಪದರ ಗುಡಿಗಳ ಸಾಮ್ಯತೆಯನ್ನು ಹೊಂದಿವೆ. ದೇವರನ್ನು ಎತ್ತರದ ಪೀಠದ ಮೇಲೆ ಪ್ರತಿಷ್ಠಾಪಿಸುವುದು, ಜನಪದರು ದೇವರನ್ನು ಎತ್ತರದ ಸ್ಥಾನದಲ್ಲಿರಿಸಿ

ಗೌರವದಿಂದ ಪೂಜಿಸುವುದರ ಪ್ರತೀಕವಾಗಿದೆ. ಸರಳತೆಗೆ ಸಾಕ್ಷಿಯಾಗಿ ದೇವಾಲಯಗಳಲ್ಲಿ ಚಪ್ಪಡಿಯ ಹಾಸುಗಳಿರುವುದನ್ನು ಗುರುತಿಸಲಾಗಿದೆ. ಮೈಸೂರು ಅರಸರು ವಾಸ್ತು ಶಿಲ್ಪಕ್ಕೆ ಸಂಬಂಧಿಸಿದಂತೆ ಹಲವಾರು ದೇವಾಲಯಗಳನ್ನು ಕಟ್ಟಿಸಿರುವುದು ಕಾಣಬಹುದಾಗಿದೆ

ಜನಪದ ಮೂರ್ತಿಶಿಲ್ಪಗಳನ್ನು ಕೆಲವೊಂದು ದೇವಾಲಯಗಳಲ್ಲಿ ಗುರುತಿಸಲಾಗಿದೆ. ಮೈಸೂರಿನ ಕೋಡಿ ಬೈರವೇಶ್ವರ ಮತ್ತು ಉತ್ತನಹಳ್ಳಿ ಸಿದ್ದೇಶ್ವರ ದೇವಾಲಯದಲ್ಲಿರುವ ಭೈರವೇಶ್ವರ ವಿಗ್ರಹ, ಹಿನಕಲ್‌ನ ಕೆಲ್ಲಮ್ಮ ದೇವಾಲಯದಲ್ಲಿನ ಮಹಿಷ ಮರ್ಧಿನಿಯ ಶಿಲ್ಪ, ಪ್ರಸನ್ನ ಕೃಷ್ಣಸ್ವಾಮಿ ಮತ್ತು ಲಕ್ಷ್ಮಿ ವೆಂಕಟರಮಣಸ್ವಾಮಿ ದೇವಾಲಯದಲ್ಲಿರುವ ಶ್ರೀನಿವಾಸ ಅಥವಾ ತಿಮ್ಮಪ್ಪ ಶಿಲ್ಪ, ಲಕ್ಷ್ಮಿರಮಣಸ್ವಾಮಿ ಮತ್ತು ಪ್ರಸನ್ನ ಕೃಷ್ಣಸ್ವಾಮಿ ದೇವಾಲಯದಲ್ಲಿರುವ ವರದರಾಜಸ್ವಾಮಿ ಮೂರ್ತಿ, ಬೆಟ್ಟದ ಆಂಜನೇಯ ಮತ್ತು ಸುಬ್ರಾಯ ಗೋಪಾಲದಾಸ ದೇವಾಲಯದಲ್ಲಿನ ಆಂಜನೇಯ ಮೂರ್ತಿ, ಮಹಾಬಲೇಶ್ವರ ದೇವಾಲಯದ ವೀರಭದ್ರಸ್ವಾಮಿ ಮೂರ್ತಿಗಳನ್ನು ಗುರುತಿಸಿ ಜಾನಪದೀಯ ಅಂಶಗಳ ಬಗ್ಗೆ ವಿವರಿಸಿ ವಿಶ್ಲೇಷಿಸಲಾಗಿದೆ. ಮೈಸೂರು ನಗರದ ಯಾವುದೇ ದೇವಾಲಯದಲ್ಲಿ ಮಿಥುನ ಶಿಲ್ಪಗಳು ಕಂಡುಬರದಿರುವುದನ್ನು ಗುರುತಿಸಲಾಗಿದೆ.

ದೇವಾಲಯಗಳಲ್ಲಿ ಜಾನಪದ ವಾದ್ಯಗಳ ಬಳಕೆಯನ್ನು ಗುರುತಿಸಿ ವಿವರಿಸಲಾಗಿದೆ. ಘಂಟೆ, ಜಾಗಟೆ, ಕೊಂಬು, ಕಹಳೆ, ನಗಾರಿ, ಶಂಖ, ತಮಟೆ ಮುಂತಾದವುಗಳ ಬಳಕೆಯ ಸಂದರ್ಭಗಳನ್ನು ತಿಳಿಸಲಾಗಿದೆ. ಘಂಟೆಗಳಿಲ್ಲದೆ ಇರುವ ದೇವಾಲಯಗಳನ್ನು ಕಾಣಲು ಸಾಧ್ಯವೇ ಇಲ್ಲ. ಅಂತೆಯೇ ದೇವರುಗಳಿಗೆ ಧರಿಸುವ ಆಭರಣಗಳು ಮತ್ತು ವಸ್ತ್ರಗಳ ಬಗ್ಗೆ ಮಾಹಿತಿ ನೀಡಲಾಗಿದೆ. ದೇವಾಲಯಗಳಲ್ಲಿ ಕನ್ನಡಿ, ಛತ್ರಿ–ಚಾಮರಗಳ ಬಗ್ಗೆ ವಿಶ್ಲೇಷಿಸಲಾಗಿದೆ. ಮಾನವ ಓಡಾಡಲು ವಾಹನಗಳನ್ನು ಬಳಸುವಂತೆ ದೇವರಿಗೂ ಮೆರವಣಿಗೆ, ಉತ್ಸವಗಳಿಗೆ ವಾಹನಗಳಿರುವುದನ್ನು ಗುರುತಿಸಲಾಗಿದೆ. ತೇರು, ಪಲ್ಲಕ್ಕಿ, ಸಿಂಹವಾಹನ, ಹುಲಿವಾಹನ, ಗರುಡ ವಾಹನ, ಹನುಮವಾಹನ, ಹಂಸವಾಹನ, ಶೇಷವಾಹನ ಹೀಗೆ ಹಲವಾರು ವಾಹನ ಗಳಿರುವುದನ್ನು ಹಾಗೂ ಅದನ್ನು ಯಾವ ದೇವರುಗಳ ವಾಹನವಾಗಿ ಮತ್ತು ಯಾವ ಸಂದರ್ಭಗಳಲ್ಲಿ ಬಳಸಲಾಗುತ್ತಿದೆ ಎಂದು ಗುರುತಿಸಿ ವಿಶ್ಲೇಷಿಸಲಾಗಿದೆ.

ಐದನೆ ಅಧ್ಯಾಯ ಪಾರಂಪರಿಕ ದೇವಾಲಯಗಳ ಸಾಮಾಜಿಕ ಸಂಪ್ರದಾಯಗಳಲ್ಲಿ ಜನಪದರು ಇಂದಿಗೂ ಹೊಂದಿರುವ ನಂಬಿಕೆಗಳಿಗೆ ಸಂಬಂಧಿಸಿದಂತೆ ಕುಕ್ಕರಹಳ್ಳಿಯ ನಡುತಲೆಕಲ್ಲಿನ ಪೂಜೆ, ಕರಗದ ನಂಬಿಕೆ, ಮಾರಮ್ಮ ದೇವರ ಕುರಿತ ನಂಬಿಕೆಗಳು, ಪವಾಡದ

ಬಗೆಗಿನ ನಂಬಿಕೆಗಳು, ನಗರದ ನೂರೊಂದು ಗಣಪತಿ ದೇವಾಲಯದಲ್ಲಿನ ವಾಹನ ಪೂಜೆಗಳ ಮೇಲಿನ ನಂಬಿಕೆ, ಹೂವು ಕೇಳುವ ನಂಬಿಕೆ ಮುಂತಾದವುಗಳನ್ನು ವಿವರಿಸಿ ವಿಶ್ಲೇಷಿಸಲಾಗಿದೆ.

ಆಚರಣೆಗೆ ಸಂಬಂಧಿಸಿದಂತೆ ಹರಕೆ ತೀರಿಸುವ ಆಚರಣೆಗಳಾದ ಒಡಬಾಯಿ, ಮಡೆ, ಅಂಬಲಿ ಸೇವೆ, ಬಲಿ ಆಚರಣೆ, ತಂಪಿನ ಆಚರಣೆ, ಭಂಗಿಸೇವೆ, ಕರಗದ ಆಚರಣೆ ಮುಂತಾದ ಆಚರಣಾ ವಿಧಾನಗಳನ್ನು ಗುರುತಿಸಿ ಅವುಗಳನ್ನು ವಿವರಿಸಿ ವಿಶ್ಲೇಷಿಸಲಾಗಿದೆ. ಅಂತೆಯೇ ನಂಬಿಕೆ ಆಚರಣೆಗಳಿಗೆ ಸಂಬಂಧಿಸಿದ ವಿಧಿನಿಷೇಧಗಳನ್ನು ಗುರುತಿಸಿ ಅವುಗಳಿಗೆ ಕಾರಣಗಳನ್ನು ವಿಶ್ಲೇಷಿಸಲಾಗಿದೆ. ಹಬ್ಬಗಳನ್ನು ವಿವರಿಸಿ, ಜಾತ್ರೆ ಉತ್ಸವಗಳನ್ನು ಗುರುತಿಸಿ, ಹಬ್ಬ ಜಾತ್ರೆಗಳ ಪ್ರಾಮುಖ್ಯತೆಯನ್ನು ತಿಳಿಸಲಾಗಿದೆ. ಸಾಮಾನ್ಯವಾಗಿ ನಂಬಿಕೆ ಆಚರಣೆಗಳಿಗೆ ಹರಕೆಗಳು ಪೂರಕವಾಗಿದ್ದು, ಹರಕೆಗಳ ವಿಧಗಳು, ಹರಕೆಯ ಪದ್ಧತಿಗಳ ಪಟ್ಟಿ ಮಾಡಿ ವಿವರಿಸಿ ವಿಶ್ಲೇಷಿಸಲಾಗಿದೆ.

ದೇವಾಲಯಗಳಲ್ಲಿರುವ ಮರ–ಗಿಡಗಳಿಗೆ ಸಂಬಂಧಿಸಿದಂತೆ ನಂಬಿಕೆ ಆಚರಣೆಗಳನ್ನು ಮರ ಮತ್ತು ಪತ್ರೆಗಳಲ್ಲಿ ಗುರುತಿಸಿ ಯಾವ ದೇವರಿಗೆ ಯಾವ ಮರ ಸಂಬಂಧಿಸಿದೆ, ಯಾವ ಮರದಲ್ಲಿ ಯಾವ ದೇವರುಗಳು ವಾಸಿಸುತ್ತಾರೆ, ಯಾವ ದೇವರ ಪೂಜೆಗೆ ಪತ್ರೆಗಳನ್ನು ಬಳಸಲಾಗುತ್ತದೆ ಎಂಬ ಮಾಹಿತಿಯನ್ನು ನೀಡಲಾಗಿದೆ. ದೇವಾಲಯಗಳಿಗೆ ಸಂಬಂಧಿಸಿದಂತೆ ಪ್ರಾಣಿ ಸಂಬಂಧಿ ನಂಬಿಕೆ ಮತ್ತ ಆಚರಣೆಗಳ ಬಗ್ಗೆ ಗುರುತಿಸಿ ವಿವರಿಸಲಾಗಿದೆ. ಅನ್ನದಾಸೋಹ, ಪ್ರಸಾದ, ಪರ, ಅಭಿಷೇಕ, ತಾಯಿತ, ಯಂತ್ರ, ಆಣೆ–ಪ್ರಮಾಣಗಳು, ತಪ್ಪು ಕಾಣಿಕೆಗಳ ಬಗ್ಗೆ ವಿಷಯ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

ಆರನೆ ಅಧ್ಯಾಯ ಪಾರಂಪರಿಕ ದೇವಾಲಯಗಳ ಆಡಳಿತ ಮತ್ತು ಆರ್ಥಿಕತೆಯಲ್ಲಿ ಮೈಸೂರು ಅರಸರ ಕಾಲದಲ್ಲಿನ ದೇವಾಲಯಗಳ ಆಡಳಿತ ಮತ್ತು ಆರ್ಥಿಕತೆಗೆ ಸಂಬಂಧಿಸಿದಂತೆ ಅಂದು ಇದ್ದ ಇಲಾಖೆಗಳಾದ ಮುಜರಾಯಿ, ಅರಮನೆ ಬೊಕ್ಕಸ, ಚಾಮುಂಡಿತೊಟ್ಟಿಗಳ ಜವಾಬ್ದಾರಿಯನ್ನು ವಿವರಿಸಲಾಗಿದೆ. ಅಂತೆಯೇ ಇಂದು ಅದೇ ಕೆಲಸವನ್ನು ಸರ್ಕಾರ, ಮುಜರಾಯಿ ಇಲಾಖೆ, ಮಾಡುತ್ತಿದೆ. ದೇವಾಲಯಗಳಿಗೆ ಸರ್ಕಾರ ಧನಸಹಾಯ ನೀಡುವುದು, ಕಾಣಿಕೆಗಳ ವಿಲೇವಾರಿ, ದೇವಾಲಯದ ರಕ್ಷಣೆ ಮತ್ತು ಜೀರ್ಣೋದ್ಧಾರ ಕಾರ್ಯಗಳನ್ನು ಮಾಡುತ್ತಿದೆ. ಆಡಳಿತಕ್ಕೆ ಸಂಬಂಧಿಸಿದಂತೆ ಮುಜರಾಯಿ ಇಲಾಖೆ, ದೇವಾಲಯಗಳ ಆಡಳಿತ ಮಂಡಳಿ, ಪೂಜಾರಿಗಳು, ಭಕ್ತರ ಪಾತ್ರಗಳನ್ನು ವಿವರಿಸಿ ವಿಶ್ಲೇಷಿಸಲಾಗಿದೆ. ದೇವಾಲಯದ ಆರ್ಥಿಕತೆಗೆ ಸಂಬಂಧಿಸಿದಂತೆ ಸರ್ಕಾರ, ಪ್ರವಾಸೋದ್ಯಮ ಇಲಾಖೆ, ಆಡಳಿತ ಮಂಡಳಿ,

ಪೂಜಾರಿಗಳು, ಭಕ್ತರ ಪಾತ್ರಗಳಲ್ಲಿ ಹರಕೆ, ದಾನ, ದೇಣಿಗೆ, ಸಹಾಯ ಧನ, ಸೇವಾ ಶುಲ್ಕಗಳು, ವಾಣಿಜ್ಯ-ವ್ಯಾಪಾರ, ಭೌತಿಕ ಆಸ್ತಿ ಮುಂತಾದವುಗಳ ಕುರಿತಾಗಿ ಗುರುತಿಸಿ ವಿಶ್ಲೇಷಿಸಲಾಗಿದೆ.

ಏಳನೆ ಅಧ್ಯಾಯ ದೇವಾಲಯಗಳ ವರ್ಣ-ವರ್ಗಗಳ ಸಂಬಂಧ ಹಾಗೂ ಭಕ್ತ ಪರಂಪರೆಯಲ್ಲಿ ಈ ಹಿಂದಿನಿಂದಲೂ ನಡೆದು ಬಂದಿರುವ ವರ್ಣವ್ಯವಸ್ಥೆಯಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರ ಎಂಬ ವರ್ಣಗಳನ್ನು ಮತ್ತು ಅವರ ಸ್ಥಾನ-ಮಾನಗಳನ್ನು ಗುರುತಿಸಲಾಗಿದೆ. ಜಾತಿ ಸಮುದಾಯಗಳು ಪೂಜಿಸುವ ದೇವರುಗಳ ವಿವರ ಹಾಗೂ ಅವರಲ್ಲಿರುವ ಕೆಲವು ನಂಬಿಕೆ ಆಚರಣೆಗಳ ವಿವರವನ್ನು ವಿವರಿಸಲಾಗಿದೆ. ದೇವಾಲಯಗಳಿಗೆ ಸಂಬಂಧಿಸಿದಂತೆ ದಲಿತರ ಸ್ಥಿತಿಗತಿ, ದೇವಾಲಯಗಳಿಗೆ ದಲಿತರ ಪ್ರವೇಶ, ಅಂದು ಇಂದು ಸ್ತ್ರೀಯರ ಸ್ಥಾನಮಾನ, ದೇವದಾಸಿ ಪದ್ಧತಿ ಮುಂತಾದವುಗಳನ್ನು ವಿಶ್ಲೇಷಿಸಲಾಗಿದೆ. ಇಂದು ಮೈಸೂರಿನ ಎಲ್ಲಾ ದೇವಾಲಯಗಳಿಗೂ ದಲಿತರ ಪ್ರವೇಶವಿದೆ. ಹಾಗೆಯೇ ಮೈಸೂರು ನಗರದಲ್ಲಿ ದೇವದಾಸಿಪದ್ದತಿ ಇರುವುದಿಲ್ಲ ಎಂಬುದನ್ನು ಗುರುತಿಸಲಾಗಿದೆ.

ದೇವಾಲಯಗಳಲ್ಲಿ ಹಿಂದಿನಿಂದಲೂ ಹಲವಾರು ಭಕ್ತ ಪರಂಪರೆಗಳು ನಡೆದುಕೊಂಡು ಬಂದಿರುವುದನ್ನು ಕಾಣುತ್ತೇವೆ. ಪ್ರಭುತ್ವ, ರಾಜಮಹಾರಾಜರು, ಒಕ್ಕಲು, ದಾಸಯ್ಯ, ದೇವರಗುಡ್ಡರು, ನೀಲಗಾರರು, ಪೂಜಾರಿಗಳ ಪರಂಪರೆ ಯಾವ ರೀತಿಯಲ್ಲಿ ನಡೆದುಕೊಂಡು ಬಂದಿರುತ್ತಾರೆ, ಈಗ ಹೇಗೆ ನಡೆದುಕೊಳ್ಳುತ್ತಿದ್ದಾರೆ ಎಂಬುದನ್ನು ಗುರುತಿಸಿ ವಿಶ್ಲೇಷಿಸಲಾಗಿದೆ

ಎಂಟನೆ ಅಧ್ಯಾಯ ಪಾರಂಪರಿಕ ದೇವಾಲಯಗಳ ಕಲೆ ಮತ್ತು ಸಾಹಿತ್ಯದಲ್ಲಿ ದೇವಾಲಯಗಳ ಹಬ್ಬ-ಜಾತ್ರೆ, ಉತ್ಸವ, ನಂಬಿಕೆ-ಆಚರಣೆ ಮುಂತಾದವುಗಳಿಗೆ ಸಂಬಂಧಿಸಿದಂತೆ ಜನಪದ ಪ್ರದರ್ಶನಾತ್ಮಕ ಕಲೆಗಳನ್ನು ಗುರುತಿಸಿ ಅವುಗಳ ವಿವರ ಹಾಗೂ ಅವುಗಳ ಪ್ರದರ್ಶನದ ಬಗ್ಗೆ ವಿಶ್ಲೇಷಿಸಲಾಗಿದೆ. ಕಂಸಾಳೆ, ವೀರಗಾಸೆ, ವೀರಭದ್ರನ ಕುಣಿತ, ಪೂಜಾಕುಣಿತ, ನಂದಿಧ್ವಜ ಕುಣಿತ, ಕೀಲು ಕುದುರೆ, ಗಾರುಡಿಗೊಂಬೆ ಕುಣಿತ, ಕೋಲಾಟ, ದೊಣ್ಣೆವರಸೆ ಮುಂತಾದವುಗಳು. ಅಂತೆಯೇ ದೇವರು ದೇವಾಲಯ, ಹಬ್ಬ-ಜಾತ್ರೆ, ಉತ್ಸವ, ನಂಬಿಕೆ-ಆಚರಣೆ ಮುಂತಾದವುಗಳಿಗೆ ಸಂಬಂಧಿಸಿದಂತೆ ಜನಪದ ಸಾಹಿತ್ಯದ ಪ್ರಕಾರಗಳಾದ ಗಾದೆ, ಒಗಟು, ನುಡಿಗಟ್ಟು, ಬೈಗುಳ, ಐತಿಹ್ಯ, ಕಥೆ, ಪುರಾಣ, ಗೀತೆ, ಸ್ಥಳಪುರಾಣಗಳು ಹೀಗೆ ಇನ್ನು ಹಲವಾರು ಬಗೆಗಳಲ್ಲಿ ವ್ಯಕ್ತಗೊಂಡಿರುವ ಜನಪದೀಯತೆಯನ್ನು ಗುರುತಿಸಿ, ವಿವರಿಸಿ, ವಿಶ್ಲೇಷಿಸಲಾಗಿದೆ.

ಒಂಬತ್ತನೆ ಅಧ್ಯಾಯ ಆಧುನೀಕರಣದ ಪ್ರಭಾವದಲ್ಲಿ ಪಾರಂಪರಿಕ ದೇವಾಲಯಗಳಲ್ಲಿ ಪಾರಂಪರಿಕ ದೇವಾಲಯಗಳ ಮೇಲೆ ಏನೆಲ್ಲಾ ಪ್ರಭಾವವನ್ನು ಬೀರಿದೆ ಎಂಬುದಕ್ಕೆ ಕೆಲವೊಂದು ಕಾರಣಗಳನ್ನು ಗುರುತಿಸಿ ಪಟ್ಟಿ ಮಾಡಿ ವಿವರಿಸಲಾಗಿದೆ. ಹಬ್ಬ-ಜಾತ್ರೆ-ದೈವಾರಾಧನೆ ಹೇಗೆ ಆಧುನೀಕರಣಗೊಂಡಿದೆ ಎಂಬುದನ್ನು ವಿಶ್ಲೇಷಿಸಲಾಗಿದೆ. ನಗರ ಜಾನಪದ ಎಂದರೇನು? ಎಂದು ವಿವರಿಸಲಾಗಿದ್ದು, ದೇವಾಲಯಗಳಲ್ಲಿನ ನಂಬಿಕೆ ಮತ್ತು ಆಚರಣೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ಮೌಢ್ಯಾಚರಣೆ ಪ್ರತಿಬಂಧಕ ವಿಧೇಯಕದ ಬಗ್ಗೆ ವಿಶ್ಲೇಷಿಸಲಾಗಿದೆ. ಆಚರಣೆ ಬೇಕು ಆದರೆ ಮೌಢ್ಯಾಚರಣೆಗಳು ಬೇಡ ಎಂಬ ಸಂದೇಶವನ್ನು ನೀಡಲಾಗಿದೆ.

ಈ ಒಂಬತ್ತು ಅಧ್ಯಾಯಗಳನ್ನು ಹೊಂದಿರುವ ಈ ಮಹಾಪ್ರಬಂಧದ ಕೊನೆಯ ಭಾಗವಾದ ಅನುಬಂಧದಲ್ಲಿ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಕೆಲವು ಪ್ರಮುಖ ಛಾಯಾಚಿತ್ರಗಳನ್ನು ವಿವರಣೆಯೊಂದಿಗೆ ಪೂರಕವಾಗಿ ನೀಡಲಾಗಿದೆ. ಇದೇ ಸಂದರ್ಭದಲ್ಲಿ ಅಮೂಲ್ಯ ಮಾಹಿತಿಗಳನ್ನು ನೀಡಿದ ವಕ್ತೃಗಳ ವಿವರವನ್ನು ಹಾಗೂ ಅವರಿಗೆ ಕೇಳಲಾದ ಪ್ರಶ್ನಾವಳಿ ಸೂಚಿಯನ್ನು ನೀಡಲಾಗಿದೆ. ಅಧ್ಯಯನಕ್ಕೆ ಬಳಸಲಾಗಿರುವ ಆಕರ ಗ್ರಂಥಗಳು ಮತ್ತು ಪರಾಮರ್ಶನ ಗ್ರಂಥಗಳ ಲೇಖಕರ ಪಟ್ಟಿಯನ್ನು ಅಕಾರಾದಿಯಲ್ಲಿ ನೀಡಲಾಗಿದೆ.

ಒಟ್ಟಾರೆಯಾಗಿ ಮೈಸೂರು ನಗರದಲ್ಲಿರುವ ಪಾರಂಪರಿಕ ದೇವಾಲಯಗಳ ಜಾನಪದೀಯತೆಯನ್ನು ಕಟ್ಟಿಕೊಡಲು ಸ್ವತಃ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿಗಳೊಂದಿಗೆ, ವಕ್ತೃಗಳು, ಶಾಸನಗಳು, ಸಾಹಿತ್ಯ ಗ್ರಂಥಗಳನ್ನು ಆಕರಗಳನ್ನಾಗಿಟ್ಟುಕೊಂಡು ಅವುಗಳ ಸಹಾಯದಿಂದ ನನ್ನ ಅಧ್ಯಯನದ ಮಿತಿಯಲ್ಲಿ ಮೈಸೂರು ನಗರದ ಪಾರಂಪರಿಕ ದೇವಾಲಯಗಳ ಜಾನಪದೀಯ ಪರಂಪರೆಯನ್ನು ಒಳಗೊಂಡ ಸಮಗ್ರವಾದ ಮಾಹಿತಿಯನ್ನು ಈ ಮಹಾಪ್ರಬಂಧದ ರೂಪದಲ್ಲಿ ರಚಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗಿದೆ. ಜಾನಪದವೆಂದರೆ ನಿತ್ಯ ಬದಲಾವಣೆಗೊಳ್ಳುವಂತಹುದು. ನಿರಂತರ ಬದಲಾವಣೆಯಿಂದ ಜಾನಪದದಲ್ಲಿ ಹಲವಾರು ವ್ಯತ್ಯಯಗಳಾಗಬಹುದು. ಈ ಸಂಶೋಧನೆಯೇ ಅಂತಿಮವಲ್ಲ. ಕಾಲಚಕ್ರದ ತಿರುಗುಣಿಯಲ್ಲಿ ನನ್ನರಿವಿಗೆ ಬರದಂತಹ ಬದಲಾವಣೆಗಳು ಆಗಿರಬಹುದಾದ ಸಾಧ್ಯತೆಗಳನ್ನು ಅಲ್ಲಗಳೆಯಲಾಗುವುದಿಲ್ಲ. ಈ ಮಹಾಪ್ರಬಂಧದ ಗುಣದೋಷಗಳನ್ನು ಪ್ರಾಜ್ಞರು ತಿಳಿಸಿದರೆ ವಿನಮ್ರವಾಗಿ ಅವುಗಳನ್ನು ಸ್ವೀಕರಿಸುತ್ತೇನೆ ಗೌರವ ಪೂರ್ವಕ ವಂದನೆಗಳು.

**ಮುಂದಿನ ಅಧ್ಯಯನದ ಅಥವಾ ಸಂಶೋಧನೆಯ ಸಾಧ್ಯತೆಗಳು**

- ಮೈಸೂರು ನಗರದ ಚರ್ಚ್‌ಗಳ ಜಾನಪದ.
- ಮೈಸೂರು ನಗರದ ಮಸೀದಿಗಳ ಜಾನಪದ.
- ಮೈಸೂರು ನಗರದ ಬೌದ್ಧ ವಿಹಾರಗಳ ಜಾನಪದ.
- ಮೈಸೂರು ನಗರದ ಜೈನ ಮಂದಿರಗಳ ಜಾನಪದ.
- ಮೈಸೂರು ನಗರದ ಶಾಸನಗಳ ಜಾನಪದ.
- ಮೈಸೂರು ನಗರದ ವೀರಶೈವ ಮಠಗಳ ಜಾನಪದ.
- ದೇವಾಲಯಗಳಲ್ಲಿರುವ ಗಿಡ–ಮರಗಳ ಜಾನಪದ.
- ದೇವಾಲಯಗಳಲ್ಲಿ ಬಳಸುವ ಹೂವುಗಳ ಜಾನಪದ.
- ಜನಪದ ಸಾಹಿತ್ಯದಲ್ಲಿ ದೇವರು.
- ಜನಪದ ಸಾಹಿತ್ಯದಲ್ಲಿ ದೇವಾಲಯ ಮತ್ತು ದೈವಿ ಚಿಂತನೆ.
- ದೇವಾಲಯ ಮತ್ತು ಮಠಗಳ ತೌಲನಿಕ ಜಾನಪದ.
- ಜನಪದ ಕಥೆಗಳಲ್ಲಿ ದೇವರು.
- ದೇವಾಲಯಗಳಲ್ಲಿನ ಹರಕೆ ಪದ್ಧತಿ. ಎಂಬ ವಿಷಯಗಳ ಮೇಲೆ ಸಂಶೋಧನೆಯನ್ನು ಕೈಗೊಳ್ಳಬಹುದಾಗಿದೆ.

# ಗ್ರಂಥ ಸೂಚಿಗಳು


1. ಅಂಬಳಿಕೆ ಹಿರಿಯಣ್ಣ : **ಜಾನಪದ ವೀಕ್ಷಣೆ,** ಪ್ರಜ್ವಲ ಪ್ರಕಾಶನ, ಮೈಸೂರು, 1987.
2. ಅರವಿಂದ ಮಾಲಗತ್ತಿ (ಪ್ರ.ಸಂ) : **ಕನ್ನಡ ವಿಷಯ ವಿಶ್ವಕೋಶ–ಜಾನಪದ,** ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಅಪರ್ಣ.ಕೂ.ಸ : **ದೇವಾಲಯ ವಾಸ್ತುಶಿಲ್ಪ ಪರಿಚಯ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, 1999.
4. ಆರಾಧ್ಯ. ಬಿ.ಎಂ.ಎಂ : **ಶೈವಸ್ತೋತ್ರ ಮಾಲಾ ಮತ್ತು ರುದ್ರಾಕ್ಷಿ,** ರಿಯಾ ಏಜೆನ್ಸಿಸ್, ಕುವೆಂಪುನಗರ, ಮೈಸೂರು–2009.
5. ಕರೀಂಖಾನ್.ಎಸ್.ಕೆ(ಸಂ) : **ಕರ್ನಾಟಕ ಜಾನಪದ,** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, 1989.
6. ಕಲಬುರ್ಗಿ.ಎಂ.ಎಂ : **ಕನ್ನಡ ಸಂಶೋಧನ ಶಾಸ್ತ್ರ,** ಸ್ವಪ್ನ ಬುಕ್‌ಹೌಸ್, ಬೆಂಗಳೂರು, 2009.
7. ಕಲುಬುರ್ಗಿ.ಎಂ.ಎಂ : **ಸಂಸ್ಕೃತಿ–ವಿಕೃತಿ,** ಸುವರ್ಣ ಸಾಹಿತ್ಯ ಗ್ರಂಥಮಾಲೆ, ಸುವರ್ಣ ಕರ್ನಾಟಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು–2006.
8. ಕೃಷ್ಣಮೂರ್ತಿ.ಕೆ.ಆರ್ : **ಜೀವದ ಉತ್ಪತ್ತಿ ಮತ್ತು ದೇವರು,** ಜನಪದ ಪ್ರಕಾಶನ, ಬೆಂಗಳೂರು.
9. ಗುರುಪ್ರಸಾದ್.ಸಿ.ಟಿ : **ಏಳುಊರಿನ ದೇವತೆಗಳು: ಒಂದು ಅಧ್ಯಯನ,** ಪ್ರಸಾರಾಂಗ ಹಂಪಿ ವಿಶ್ವವಿದ್ಯಾಲಯ, 2005.
10. ಗೋಪಾಲ್.ಬಾ.ರಾ : **ಕರ್ನಾಟಕದ ಕಲೆಗಳು,** ಸಂಪುಟ–4, **ವಾಸ್ತು,** ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು, 2003.
11. ಗೋವಿಂದರಾಜು.ಟಿ : **ಚನ್ನಾದೇವಿ ಅಗ್ರಹಾರ ಜಾನಪದೀಯ ಅಧ್ಯಯನ,** ಪುಸ್ತಕ ಜೇನು, ಚೆನ್ನಾದೇವಿ ಅಗ್ರಹಾರ, 1993.
12. ಚಂದ್ರು ಕಾಳೇನಹಳ್ಳಿ : **ನಗರ ಜಾನಪದ,** ಭಾರತೀ ಪ್ರಕಾಶನ, ಮೈಸೂರು–1978.
13. ಚಂದ್ರಶೇಖರ.ಬಿ.ಪಿ : **'ಪಟ್ಟದಕಲ್ಲಿನ ಚಾಲುಕ್ಯರ ಕಾಲದ ದೇವಾಲಯಗಳು: ಒಂದು ಬಹುಮುಖಿ ಅಧ್ಯಯನ',** (ಅಪ್ರಕಟಿತ) ಮೈಸೂರು ವಿಶ್ವವಿದ್ಯಾನಿಲಯ, 2012.

14. ಚಿಕ್ಕಮಾದು,ಎನ್.ಎನ್ : **ಮೈಸೂರು ತಾಲೂಕು ಗ್ಯಾಸೆಟಿಯರ್**, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು, 2010.
15. ಚಿನ್ನಸ್ವಾಮಿ ಸೋಸಲೆ.ಎನ್(ಸಂ) : **ಸಾಮ್ರಾಜ್ಯ ಮತ್ತು ಸಂಸ್ಥಾನ**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004.
16. ಚಿನ್ನಸ್ವಾಮಿ ಸೋಸಲೆ.ಎನ್(ಸಂ) : **ದಿವಾನ್ ಸರ್ ಮಿರ್ಜಾ ಎಂ ಇಸ್ಮಾಯಿಲ್ ಕಾಲದ ಮೈಸೂರು ಸಂಸ್ಥಾನ**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2012.
17. ಜಗದೀಶ.ಟಿ.ಎಲ್ : **ಶಾಸನಗಳ ಹಿನ್ನೆಲೆಯಲ್ಲಿ ಮೈಸೂರು:ಸಾಂಸ್ಕೃತಿಕ ಅಧ್ಯಯನ**, ಅಪ್ರಕಟಿತ ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, 2016
18. ಜಯಲಕ್ಷಮ್ಮ.ಪಿ.ಆರ್(ಸಂ) : **ಕಾವ್ಯಗಾಯನ ಸ್ತೋತ್ರ ಮಂಜರಿ**, ಗೀತಾಬುಕ್ ಹೌಸ್, ಮೈಸೂರು, 1997.
19. ಜವರೇಗೌಡ.ದೇ : **ಜಾನಪದ ಅಧ್ಯಯನ**, ಚೇತನ ಬುಕ್ ಹೌಸ್, ಮೈಸೂರು.
20. ತಿಪ್ಪೆರುದ್ರಸ್ವಾಮಿ.ಎಚ್ : **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು, 1974.
21. ತಿಪ್ಪೇಸ್ವಾಮಿ.ಜಿ.ಆರ್ : **ಜಾಗತೀಕರಣ ಮತ್ತು ಜಾನಪದ**, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು, 2011.
22. ತಿಪ್ಪೇಸ್ವಾಮಿ.ಜಿ.ಆರ್ : **ಮೈಸೂರು ಚಾಮುಂಡಿ**, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ
23. ತಾಪಿ.ಧರ್ಮಾರಾವ್ : **ದೇವಾಲಯಗಳು ಮತ್ತು ಲೈಂಗಿಕ ಶಿಲ್ಪ**, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು, 2007.
24. ದಾಸೇಗೌಡ.ಜಿ.ವಿ : **ಮಂಡ್ಯಜಿಲ್ಲೆಯ ಜಾತ್ರೆಗಳು**, ಗ್ರಾಮಸಂಸ್ಕೃತಿ ಮಾಲೆ–6, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2000.
25. ನಂಜುಂಡಪ್ಪ.ವೈ.ಡಿ: **ಪುರಾಣ ದೇವತೆಗಳ ಪರಾಮರ್ಶೆ ಮತ್ತು ದೇವರು**, ಸಿದ್ಧ ಸಾಹಿತ್ಯ ಪ್ರಕಾಶನ, ಅರಸಿಕೆರೆ, 2005.
26. ನಾಗರಾಜ.ಸಿ.ಪಿ : **ಬಯ್ಯುಳ**, ನಾಗು ಸ್ಮಾರಕ ಪ್ರಕಾಶನ, ಬೆಂಗಳೂರು, 2014.
27. ನಂಜರಾಜ ಅರಸ್.ಪಿ.ವಿ : **ಮೈಸೂರು ನೂರಿನ್ನೂರು ವರ್ಷಗಳ ಹಿಂದೆ**, ಅಭಿರುಚಿ ಪ್ರಕಾಶನ, ಮೈಸೂರು, 2011.
28. ನರಸಿಂಹಮೂರ್ತಿ.ಹೆಚ್.ವಿ : **ನಮ್ಮ ದೇವಾಲಯಗಳು**, ವಿಕಾಸ ಪ್ರಕಾಶನ, 2009.

29. ನಾಯಕ.ಎನ್.ಆರ್ : **ಉತ್ತರ ಕನ್ನಡ ಜಿಲ್ಲೆಯ ಗ್ರಾಮದೇವತೆಗಳ ಹಾಡುಗಳು,** ಜಾನಪದ ಪ್ರಕಾಶನ, ಹೊನ್ನಾವರ, 2002.

30. ನಿರಂಜನ.ರಾ.ನ : **ಕುಕ್ಕಲನಾಡು ದೇವಾಲಯ ಮತ್ತು ಶಿಲ್ಪಗಳು,** ಪ್ರಸರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ–2011.

31. ಪದ್ಮಪ್ರಸಾದ್.ಎಸ್.ಪಿ : **ಜೈನ ಜನಪದ ಸಾಹಿತ್ಯ ಸಂಪಾದನೆ ಮತ್ತು ಅಧ್ಯಯನ**, ಸಹನಾ ಪ್ರಕಾಶನ, ಶಿವಮೊಗ್ಗ–1987.

32. ಪರಶಿವಮೂರ್ತಿ.ಡಿ.ವಿ(ಸಂ) : **ಶಾಸನ ಅಧ್ಯಯನ**, ಸಂಪುಟ–4, ಸಂಚಿಕೆ–1 ಮತ್ತು 2, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ–2010.

33. ಪ್ರಭಾಕರ.ಎ.ಎಸ್ : **ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು**, ಬುಡಕಟ್ಟು ಅಧ್ಯಯನ ಮಾಲೆ–3, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000.

34. ಬಸವರಾಜ ಸಬರದ : **ಜಾನಪದ ಆಯಾಮಗಳು**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010.

35. ಬಸವರಾಜ ಸಬರದ : **ಜನಪದ ದೈವಗಳು**, ಹಂಪಿ ವಿಶ್ವವಿದ್ಯಾಲಯ, 2009.

36. ಬಸವರಾಜ ನೆಲ್ಲಿಸರ(ಸಂ) : **ಜನಪದ ಕಾವ್ಯಸಂಚಯ**, ಕನ್ನಡ ವಿಭಾಗ ಸ್ನಾತಕೋತ್ತರ ಕೇಂದ್ರ ಬಿ.ಆರ್.ಪ್ರಾಜೆಕ್ಟ್, 1984.

37. ಬರಗೂರು ರಾಮಚಂದ್ರಪ್ಪ : **ಪರಂಪರೆಯೊಂದಿಗೆ ಪಿಸುಮಾತು**, ಅಂಕಿತ ಪುಸ್ತಕ ಪ್ರಕಾಶನ, ಬಸವನಗುಡಿ, ಬೆಂಗಳೂರು, 2011.

38. ಭೀಮರಾವ್ ಚಿಟಗುಪ್ಪಿ : **ಸಂಶೋಧನ ಪಂಚದಳಿ**, ಉಷಾ ಸಾಹಿತ್ಯ ಮಾಲೆ, ಮೈಸೂರು.

39. ಭೂಸನೂರುಮಠ.ಸಂ.ಶಿ(ಸಂ) : **ವಚನ ಸಾಹಿತ್ಯ ಸಂಗ್ರಹ,** ಸುವರ್ಣ ಸಾಹಿತ್ಯ ಗ್ರಂಥಮಾಲೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006.

40. ಬೊಳುವಾರು ಮಹಮ್ಮದ್ ಕುಂಞ : **ದೇವರುಗಳ ರಾಜ್ಯದಲ್ಲಿ**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, 1980.

41. ಮಂಜುನಾಥ್.ಸಿ.ಯು : **ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ** (ಕ್ರಿ.ಶ.1150 ರಿಂದ 1340), ಚಿತ್ಕಲಾ ಪ್ರಕಾಶನ ಕುಪ್ಪಂ.

42. ಮಂಜುನಾಥ ಬೇವಿನಕಟ್ಟೆ(ಸಂ) : **ಜಾನಪದ ಕರ್ನಾಟಕ,** ಸಂಪುಟ–06, ಸಂಚಿಕೆ–02, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009.

43. ಮಂಜಪ್ಪಶೆಟ್ಟಿ ಮಸಗಲಿ.ಎಂ.ಪಿ : **ಮೈಸೂರು ಅರಮನೆ**, ಮಸಗಲಿ ಪ್ರಕಾಶನ, ಮೈಸೂರು, 2003.
44. ಮೈಲಹಳ್ಳಿರೇವಣ್ಣ(ಸಂ) : **ಜಂಬುನೇರ್ಲೆಣ್ಣು ಜಗ್ಗಿಬಿದ್ದಾವೆ**, ಎನ್.ಆರ್.ಎ.ಎಮ್.ಎಚ್. ಪ್ರಕಾಶನ, ಕೋಟೇಶ್ವರ, ದ.ಕ, 1992.
45. ಮೈಲಹಳ್ಳಿ ರೇವಣ್ಣ : **ಜನಪದ ಗಾದೆ ಮತ್ತು ಒಗಟುಗಳು,** ಪ್ರೇಮ ಪ್ರಕಾಶನ, ದಾವಣಗೆರೆ, 2012.
46. ಮೊಗಳ್ಳಿ ಗಣೇಶ್(ಸಂಗ್ರಹ) : **ಮಲೆಮಾದೇಶ್ವರ ಕಾವ್ಯ**, ಕನ್ನಡ ಸಾಹಿತ್ಯ ಅಕಾಡೆಮಿ ಬೆಂಗಳೂರು, 1996.
47. ಮನೋಹರ.ಎಸ್.ದೊಡ್ಡಮನಿ : **ಮೂರು ಜಾವಿ ದೇವರ ಪರಂಪರೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ–2011.
48. ಮೂರ್ತಿರಾವ್.ಎ.ಎನ್ : **ದೇವರು,** ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು, 2005.
49. ಮಹದೇವ : **ಮಂಡ್ಯ ಮತ್ತು ಮದ್ದೂರು ತಾಲ್ಲೂಕುಗಳ ಪ್ರಮುಖ ದೇವಾಲಯಗಳು ಮತ್ತು ಶಾಸನಗಳು: ಒಂದು ಸಾಂಸ್ಕೃತಿಕ ಅಧ್ಯಯನ'**, ಮೈಸೂರು ವಿಶ್ವವಿದ್ಯಾನಿಲಯ, 2011.
50. ರಘೋತ್ತಮ ತೀರ್ಥ.ಎಂ.ಎಚ್ : **ಭಾರತ–ತೀರ್ಥಕ್ಷೇತ್ರ ಸಂಗಮ** – 1008
51. ರಾಗೌ : **ನಮ್ಮಗಾದೆಗಳು**, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು, 2009.
52. ರಾಗೌ : **ನಮ್ಮ ಒಗಟುಗಳು**, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು, 2010.
53. ರಾಜಶೇಖರ.ಪಿ.ಕೆ : **ಚಾಮುಂಡಿ ಸಿರಿ ಚಾಮುಂಡಿ**, ಹೊನ್ನಾರು ಚೈತ್ರ ಪ್ರಕಾಶನ, ಮೈಸೂರು, 1994.
54. ರಾಜಶೇಖರ.ಪಿ.ಕೆ.(ಸಂ) : **ಮಲೆಯ ಮಾದೇಶ್ವರ,** (ಸಂಪುಟ–1), ಕನ್ನಡ ಮತ್ತು ಸಂಸ್ಕೃತಿ ಇಲಾಖೆ–ಬೆಂಗಳೂರು–2006
55. ರಾಜಶೇಖರ.ಪಿ.ಕೆ.(ಸಂ) : **ಮಲೆಯ ಮಾದೇಶ್ವರ**, (ಸಂಪುಟ–2), ಕನ್ನಡ ಮತ್ತು ಸಂಸ್ಕೃತಿ ಇಲಾಖೆ–ಬೆಂಗಳೂರು–2006.
56. ಪ್ರೊ.ರಂಗಪ್ಪ.ಕೆ.ಎಸ್(ಸಂ) : **ಮೈಸೂರು ದರ್ಶನ**, ಸಂಪುಟ–1, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, 2001.
57. ರಂಜಾನ್ ದರ್ಗಾ : **ಜಾತಿವ್ಯವಸ್ಥೆಗೆ ಸವಾಲಾದ ಶರಣರು**, ಲೋಹಿಯಾ ಪ್ರಕಾಶನ, ಬಳ್ಳಾರಿ, 2013.

58. ರಾಮಚಂದ್ರರಾವ್.ಸಾ.ಕೃ : **ಭಾರತದ ದೇವಾಲಯ ನೆಲೆ – ಹಿನ್ನೆಲೆ**, ಸುರಮಾ ಪ್ರಕಾಶನ, ಬೆಂಗಳೂರು, 2010.

59. ರಾಮಚಂದ್ರರಾವ್.ಎಸ್.ಕೆ : **ಕನ್ನಡನಾಡಿನ ಧಾರ್ಮಿಕ ಪರಂಪರೆ,** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, 1983.

60. ರಾಘವೇಂದ್ರ ಪಾಟೀಲ : **ತೇರು,** ಆನಂದಕಂದ ಗ್ರಂಥಮಾಲೆ, 2007.

61. ಲಕ್ಕಪ್ಪಗೌಡ.ಎಚ್.ಜೆ(ಸಂ) : **ಒಗಟುಗಳು,** ಕನ್ನಡಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ, 1973.

62. ಲಕ್ಷ್ಮೀದೇವಿ.ಎಸ್ : **ಗ್ರಾಮ ಮತ್ತು ಶಿಷ್ಟ ದೇವತೆಗಳು**, ಚಿತ್ಕಲಾ ಪ್ರಕಾಶನ, ಕುಪ್ಪಂ, 2007.

63. ಲಕ್ಷ್ಮೀಪುರಂ ಶ್ರೀನಿವಾಸಚಾರ್ಯ : **ಹಿಂದೂ ದರ್ಶನ ಸಾರ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ–ಬೆಂಗಳೂರು–2006.

64. ಲಿಂಗಯ್ಯ.ಡಿ : **ಜಾನಪದ ಶೋಧನ**, ದಿನಕರ ಪ್ರಕಾಶನ, ಬೆಂಗಳೂರು, 2000.

65. ಲಿಂಗಯ್ಯ.ಡಿ : **ಕರ್ನಾಟಕದ ಗ್ರಾಮದೇವತೆಗಳು**, ಐ.ಬಿ.ಹೆಚ್.ಪ್ರಕಾಶನ, ಬೆಂಗಳೂರು, 1984.

66. ವಾಲೀಕಾರ ಚನ್ನಣ್ಣ : **ಹೈದರಾಬಾದ್ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ**, ದಲಿತ ಬಂಡಾಯ ಸಾಹಿತ್ಯ ಪ್ರಕಾಶನ, ಗುಲ್ಬರ್ಗ, 1995.

67. ವಾಸುದೇವಮೂರ್ತಿ.ಕೆ : **ಅಶೋಕಪುರಂ: ಒಂದು ಜಾನಪದೀಯ ಅಧ್ಯಯನ**, ಅಭಿರುಚಿ ಪ್ರಕಾಶನ, ಮೈಸೂರು–2001

68. ವೃಷಭಕುಮಾರ್ : **ಮೈಸೂರು ಜಿಲ್ಲೆಯ ಐತಿಹ್ಯಗಳು**, ಕರ್ನಾಟಕ ಜಾನಪದ ಅಕಾಡೆಮಿ 2010.

69. ವೀರಭದ್ರ.ಬಿ.ವಿ : **ಧರ್ಮ ಮತ್ತು ವೈಚಾರಿಕತೆ,** ನವಕರ್ನಾಟಕ ಪ್ರಕಾಶನ, ಬೆಂಗಳೂರು, 2001.

70. ಶಂಕರನಾರಾಯಣರಾವ್.ಎನ್.ಪಿ : **ಪಂಜಿರಿಯರವ ಸಮಾಜ ಮತ್ತು ಜಾನಪದ ಇತಿಹಾಸ**, ಅಭಿನವ ಪ್ರಕಾಶನ, ಬೆಂಗಳೂರು, 2005.

71. ಶಿರೂರ.ಬಿ.ವ್ಹಿ : **ಸಂಶೋಧನ ಸ್ವರೂಪ**, ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ, 2008.

72. ಶ್ರೀಕಂಠ ಕೂಡಿಗೆ(ಸಂ) : **ಜಾನಪದದ ವಿವಿಧ ಮುಖಗಳು,** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

73. ಶ್ರೀಕಂಠಶಾಸ್ತ್ರಿ.ಎಸ್ : **ಭಾರತೀಯ ಸಂಸ್ಕೃತಿ,** ಸುವರ್ಣ ಸಾಹಿತ್ಯ ಗ್ರಂಥ ಮಾಲೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ–ಬೆಂಗಳೂರು–2006.

74. ಶ್ರೀಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು: **ಭಕ್ತಿಚಂದ್ರಿಕೆ,** ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ–2008.

75. ಶ್ರೀಧರಮೂರ್ತಿ.ಎ : **ಕರ್ನಾಟಕದ ದೇವಾಲಯಗಳಲ್ಲಿ ಮಿಥುನ ಮತ್ತು ದೇವಾಂಗನಾ ಶಿಲ್ಪಗಳು: ಒಂದು ಅಧ್ಯಯನ,**(ಅಪ್ರಕಟಿತ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 2010.

76. ಸಂಪತ್ಕುಮಾರಾಚಾರ್ಯ.ವಿ.ಎಸ್ : **ಭಾರತೀಯ ವೈಜ್ಞಾನಿಕ ಪರಂಪರೆ ಅಂದು ಇಂದು,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.

77. ಸುಧಾಕರ : **ಜನಪದ ನಡಿಗಟ್ಟುಗಳ ಕೋಶ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006.

78. ಸತೀಶ್ ಬಾಬು.ಎಂ.ಸಿ : **'ಪಾಂಡವಪುರ ತಾಲ್ಲೂಕಿನ ದೇವಾಲಯಗಳ ಸಮಗ್ರ ಅಧ್ಯಯನ'** (ಕ್ರಿ.ಶ. 10ನೇ– 16ನೇ ಶತಮಾನದವರೆಗೆ), ಮೈಸೂರು ವಿಶ್ವವಿದ್ಯಾನಿಲಯ, 2011.

79. ಸುರೇಶ.ಬಿ.ಸಿ : **ಚಿಕ್ಕಮಗಳೂರು ಜಿಲ್ಲೆಯ ದೇವಾಲಯಗಳ ಕಲೆ ಮತ್ತು ವಾಸ್ತುಶಿಲ್ಪ: ಒಂದು ವಿವರಣಾತ್ಮಕ ಅಧ್ಯಯನ,** ಮೈಸೂರು ವಿಶ್ವವಿದ್ಯಾನಿಲಯ, 2009.

80. ಸಿದ್ಧಲಿಂಗಯ್ಯ : **ಗ್ರಾಮದೇವತೆಗಳು,** ಅಂಕಿತ ಪುಸ್ತಕ ಪ್ರಕಾಶಕರು, ಬೆಂಗಳೂರು, 2009.

81. ಸಿದ್ದರಾಮಯ್ಯ.ಎಸ್.ಜಿ ಮತ್ತು ಸಂಧ್ಯಾರೆಡ್ಡಿ(ಸಂ) : **ಜನಪದ ಕಾವ್ಯ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು–2006.

82. ಸಿದ್ದುಸ್ವಾಮಿ : **ಮಹಿಷಮಂಡಲ,** ಗೌತಮ ಪ್ರಕಾಶನ, ಮೈಸೂರು, 2011

83. ಸಿದ್ದುಸ್ವಾಮಿ : **ಪ್ರಾಚೀನ ಅಸುರ ರಾಷ್ಟ್ರ(ಮಹಾ ಮಹಿಷ ಕಾಂಡ),** ಶ್ರೀರಾಮ ಪ್ರಕಾಶನ, ಮಂಡ್ಯ, 2016.

84. ಸಿದ್ಧನಗೌಡರ್ : **'ಲಕ್ಕುಂಡಿ ದೇವಾಲಯಗಳು ಒಂದು ಅಧ್ಯಯನ'**(ಅಪ್ರಕಟಿತ)**,** ಮೈಸೂರು ವಿಶ್ವವಿದ್ಯಾನಿಲಯ, 2012.

85. ಹಳ್ಳಿಖೇರಿ.ಎಫ್.ಟಿ : **ಹಸ್ತಪ್ರತಿ ಕ್ಷೇತ್ರಕಾರ್ಯ,** ಪ್ರಸರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ–2000.

86. ಹಿರೇಮಠ.ಎಸ್.ಎಸ್ : **ಕೊಪ್ಪಳ ಜಿಲ್ಲೆಯ ಜಾತ್ರೆಗಳು,** ಗ್ರಾಮಸಂಸ್ಕೃತಿ ಮಾಲೆ–5, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2000.

87. ಹೆಬ್ಬಾಲೆ ಕೆ ನಾಗೇಶ್ : **ಬಹುಸಂಸ್ಕೃತಿ ಮತ್ತು ದೇಸಿ ಜಾತ್ರೆಗಳ ಮಹಾಸಮನ್ವಯ,** ಪ್ರಸರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2011.

88. ಹೆಬ್ಬಾಲೆ.ಕೆ.ನಾರ್ಗೇಶ್(ಸಂ) : **ಜಾನಪದ ಕರ್ನಾಟಕ,** ಸಂಪುಟ–5, ಸಂಚಿಕೆ–2, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006.

89. ಹೆಬ್ಬಾಲೆ ಕೆ ನಾಗೇಶ್(ಸಂ) : **ಜಾನಪದ ಕರ್ನಾಟಕ**, ಸಂಪುಟ–06, ಸಂಚಿಕೆ–1, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006.

## ನಿಯತಕಾಲಿಕೆಗಳು

- ಪ್ರಬುದ್ಧ ಕರ್ನಾಟಕ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- ಮಾನವಿಕ ಕರ್ನಾಟಕ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- ಶೋಧ ಭಾರತಿ, ಭಾರತಿ ಕನ್ನಡ ಅಧ್ಯಯನ ಮತ್ತು ಸಂಶೊಧನ ಕೇಂದ್ರ, ಭಾರತಿನಗರ, ಮದ್ದೂರು.
- ಸಾಧನೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
- ಕಸ್ತೂರಿ, ಕರ್ಮವೀರ, ಜಾನಪದ, ತರಂಗ, ಸುಧಾ, ತುಷಾರ.

## ದಿನಪತ್ರಿಕೆಗಳು

ಪ್ರಜಾವಾಣಿ, ಕನ್ನಡಪ್ರಭ, ಸಂಯುಕ್ತ ಕರ್ನಾಟಕ, ಉದಯವಾಣಿ, ವಿಜಯ ಕರ್ನಾಟಕ, ಮೈಸೂರು ಮಿತ್ರ, ಆಂದೋಲನ, ವಿಜಯವಾಣಿ, ಹೊಸದಿಗಂತ.

## ವಕ್ತೃ ಸೂಚಿ

| ಸಂ | ವಕ್ತೃವಿನ ಹೆಸರು | ವಯಸ್ಸು | ವೃತ್ತಿ | ಪ್ರದೇಶ |
|---|---|---|---|---|
| 1 | ಅಮರನಾಥ್ | 56 | ಅರ್ಚಕರು | ಇಟ್ಟಿಗೆಗೂಡು |
| 2 | ಆರ್ಮುಗಂ | 55 | ಚಾಲಕ | ಜ್ಯೋತಿನಗರ |
| 3 | ಆರ್ ಮೂರ್ತಿ | 50 | ಉಪಾಧ್ಯಕ್ಷರು ಮಾರಮ್ಮ ದೇವಾಲಯ | ಕನ್ನೇಗೌಡನಕೊಪ್ಪಲು |
| 4 | ಡಾ.ಕೆ.ವಾಸುದೇವಮೂರ್ತಿ | 52 | ಸಂಶೋಧನ ಸಹಾಯಕರು | 6ನೇಕ್ರಾಸ್ ಅಶೋಕಪುರಂ |
| 5 | ಕಮಲ | 45 | ಗೃಹಿಣಿ | 5ನೇಕ್ರಾಸ್ ಅಶೋಕಪುರಂ |
| 6 | ಚಿಕ್ಕರಸಿನಾಯಕ | 47 | ಪೂಜಾರಿ | ಪಡುವಾರಹಳ್ಳಿ |
| 7 | ಲಕ್ಷ್ಮಿ | 45 | ಗೃಹಿಣಿ | ವೀರನಗೆರೆ |
| 8 | ಎಂ.ರಾಮೇಗೌಡ | 55 | ವ್ಯವಸಾಯ | ಕನ್ನೇಗೌಡನಕೊಪ್ಪಲು |
| 9 | ಬಸವರಾಜು | 43 | ಅರ್ಚಕರು | ನಜರ್‌ಬಾದ್ |
| 10 | ಮಾದೇಗೌಡರು | 56 | ಅಧ್ಯಕ್ಷರು ಮಾದೇಶ್ವರ ದೇವಸ್ಥಾನ | ಕುಂಬಾರಕೊಪ್ಪಲು |
| 11 | ಸುಂದರೇಶ್ | 42 | ಅರ್ಚಕರು | ಗನ್‌ಹೌಸ್ |
| 12 | ವತ್ಸ | 58 | ಪ್ರಧಾನ ಅರ್ಚಕರು | ವಿ.ವಿ.ಮೊಹಲ್ಲ |
| 13 | ಶ್ರೀನಿಧಿ | 47 | ಸದಸ್ಯರು | ಮಂಡಿಮೊಹಲ್ಲಾ |
| 14 | ಎಸ್.ಕೃಷ್ಣಮೂರ್ತಿ | 54 | ಪ್ರಧಾನ ಅರ್ಚಕರು | ಇರ್ವಿನ್ ರಸ್ತೆ |
| 15 | ಎಂ.ಎನ್.ತಿಲಕ ಜಟ್ಟಿ | 48 | ಸಹಾಯಕರು | ನಜರ್‌ಬಾದ್ |
| 16 | ಆರ್.ವೆಂಕಟೇಶ್ | 52 | ಅಧ್ಯಕ್ಷರು | ನಜರ್‌ಬಾದ್ |
| 17 | ನರಸಿಂಹ ಉಪಾಧ್ಯಾಯರು | 55 | ಪ್ರಧಾನ ಅರ್ಚಕರು | ರಾಮಾನುಜ ರಸ್ತೆ |
| 18 | ಜವರಪ್ಪ | 70 | ವ್ಯವಸಾಯ | ಉತ್ತನಹಳ್ಳಿ |
| 19 | ಬೋಗೇಗೌಡ | 56 | ವ್ಯವಸಾಯ | ಉತ್ತನಹಳ್ಳಿ |
| 20 | ರಮೇಶ್ | 46 | ಚಾಲಕ | ಇಟ್ಟಿಗೆಗೂಡು |

| | | | | |
|---|---|---|---|---|
| 21 | ಮಹಾದೇವಸ್ವಾಮಿ | 49 | ಕೂಲಿ | ಇಟ್ಟಿಗೆಗೂಡು |
| 22 | ಸಿದ್ದಮ್ಮ | 72 | ಗೃಹಿಣಿ | ಕುಕ್ಕರಹಳ್ಳಿ |
| 23 | ಶಶಿಕಲಾ | 33 | ಗೃಹಿಣಿ | ದಟ್ಟಗಳ್ಳಿ |
| 24 | ಪೆರುಮಾಳ್ | 60 | ನಿ.ಪೌರಕಾರ್ಮಿಕ | ಜ್ಯೋತಿನಗರ |
| 25 | ನಾಗಪ್ಪ | 76 | ಅರ್ಚಕರು | ಹಿನಕಲ್ |
| 26 | ಲೋಕೇಶ್ | 42 | ಅರ್ಚಕರು | ಕೆ.ಜಿ.ಕೊಪ್ಪಲು |
| 27 | ನಾಗರಾಜು | 54 | ಅರ್ಚಕರು | ಮಹಾತ್ಮಗಾಂಧಿ ರಸ್ತೆ |
| 28 | ವೆಂಕಟೇಶ್‌ದಾಸ್ | 60 | ಅರ್ಚಕರು | ಕೃಷ್ಣವಿಲಾಸ ರಸ್ತೆ |
| 29 | ರವಿಚಂದ್ರ | 49 | ಅರ್ಚಕರು | ಕುಂಬಾರ ಕೊಪ್ಪಲು |
| 30 | ಕಿರಣ್ ಭಟ್ | 37 | ಅರ್ಚಕರು | ರಾಜೀವ್‌ನಗರ |
| 31 | ಭಾನುಪ್ರಕಾಶ್ | 44 | ಸದಸ್ಯರು | ರಾಜೇಂದ್ರನಗರ |
| 32 | ಎಂ.ರುದ್ರೇಶ್ | 48 | ಸದಸ್ಯರು | ಮಂಡಿಮೊಹಲ್ಲ |
| 33 | ನಾರಾಯಣ | 53 | ವ್ಯವಸಾಯ | ಕ್ಯಾತಮಾರನಹಳ್ಳಿ |
| 34 | ಮಾದಯ್ಯ | 70 | ವ್ಯವಸಾಯ | ವೀರನಗೆರೆ |
| 35 | ರಾಘವೇಂದ್ರ | 58 | ಸದಸ್ಯರು | ಹೆಬ್ಬಾಳು |
| 36 | ಶಂಕರ್ ಸಿಂಗ್ | 60 | ಸದಸ್ಯರು | ಹಿನಕಲ್ |
| 37 | ಸೌಭಾಗ್ಯ | 58 | ಗೃಹಿಣಿ | ಚಾಮುಂಡಿಬೆಟ್ಟ |
| 38 | ಗಂಗಾಧರ | 36 | ದೇವರಗುಡ್ಡ | ಜೆ.ಪಿ.ನಗರ |
| 39 | ಸ್ವಪ್ನ | 38 | ಗೃಹಿಣಿ | ಗಾಂಧಿನಗರ |
| 40 | ಮದುಚಂದ್ರ | 61 | ಅರ್ಚಕರು | ಒಂಟಿಕೊಪ್ಪಲು |

## ಪ್ರಶ್ನಾವಳಿ

**ದಿನಾಂಕ:** **ಸಮಯ:** **ಸ್ಥಳ:**

**ವಕ್ತೃವಿನ ವಿವರ:**

**ಹೆಸರು:** **ವಯಸ್ಸು:** **ವೃತ್ತಿ:** **ಜಾತಿ:** **ಸ್ಥಳ:** **ವಿದ್ಯಾಭ್ಯಾಸ:**

1. ದೇವಾಲಯದ ಹೆಸರು (ಮೂಲ ಹೆಸರು) ಏನು?
2. ದೇವಾಲಯದ ಸ್ಥಾಪನೆಯ ವರ್ಷ:
3. ದೇವಾಲಯದ ಸಂಸ್ಥಾಪಕರು ಯಾರು?
4. ದೇವಾಲಯಕ್ಕೆ ರಾಜ ಮಹಾರಾಜರೊಂದಿಗೆ ಸಂಬಂಧವಿದೆಯೆ?
5. ದೇವರ ಮೂರ್ತಿಯನ್ನು ಎಲ್ಲಿಂದ ತಂದು ಪ್ರತಿಷ್ಠಾಪಿಸಲಾಗಿದೆ?
6. ದೇವಾಲಯದ ವಾಸ್ತು ರಚನಾ ಶೈಲಿ ಯಾವುದು?
7. ದೇವಾಲಯದ ಸ್ಥಳಪುರಾಣದ ಬಗ್ಗೆ ಏನಾದರು ವಿವರಗಳಿವೆಯೆ?
8. ದೇವಾಲಯಕ್ಕೆ ಸಂಬಂಧಿಸಿದ ಇತಿಹಾಸವೇನಾದರು ಇದೆಯೆ?
9. ದೇವಾಲಯಕ್ಕೆ ಸಂಬಂಧಿಸಿದ ಶಾಸನಗಳೇನಾದರು ಇವೆಯೆ?
10. ದೇವಾಲಯಕ್ಕೆ ಸಂಬಂಧಿಸಿದ ಐತಿಹ್ಯಗಳೇನಾದರು ಇವೆಯೆ?
11. ದೇವಾಲಯಕ್ಕೆ ಸಂಬಂಧಿಸಿದ ಮಾಸ್ತಿಕಲ್ಲು, ವೀರಗಲ್ಲು, ಗರುಡಗಂಭ, ತಾಳೆಗರಿ, ಓಲೆಗರಿ ಅಥವಾ ಹಸ್ತಪ್ರತಿಗಳ ವಿವರ
12. ದೇವಾಲಯದಲ್ಲಿ ನಡೆಯುವ ಹಬ್ಬ ಮತ್ತು ಉತ್ಸವಗಳಾವುವು?
13. ದೇವಾಲಯಕ್ಕೆ ಸಂಬಂಧಿಸಿದಂತೆ ಇರುವ ನಂಬಿಕೆಗಳಾವುವು?
14. ದೇವಾಲಯಕ್ಕೆ ಸಂಬಂಧಿಸಿದಂತೆ ಇರುವ ಸಂಪ್ರದಾಯಾಚರಣೆಗಳಾವುವು?
15. ದೇವಾಲಯಕ್ಕೆ ಸಂಬಂಧಿಸಿದಂತೆ ವಿಧಿ ನಿಷಿದ್ಧಗಳೇನಾದರು ಇವೆಯೆ?
16. ದೇವಾಲಯದಲ್ಲಿ ತೇರು, ಪಲ್ಲಕ್ಕಿ ಇದೆಯೆ? ಜಾತ್ರೆನಡೆಯತ್ತದೆಯೆ?
17. ದೇವಾಲಯಕ್ಕೆ ಲಾಂಛನ ಚಿಹ್ನೆ ಇದೆಯೆ? : ಯಾವುದು?
18. ದೇವಾಲಯದಲ್ಲಿ ಪೂಜೆಗೆ ಬಳಸಲಾಗುವ ವಿಶೇಷ ವಸ್ತು, ಪರಿಕರಗಳಾವುವು?
19. ದೇವಾಲಯದ ವಿಶೇಷತೆಗಳೇನು?
20. ದೇವಾಲಯದಲ್ಲಿ ಮಹತ್ವದ ಘಟನೆಗಳೇನಾದರು ನಡೆದಿವೆಯೆ?
21. ಈ ದೇವಾಲಯದೊಂದಿಗೆ ಇತರೆ ದೇವಾಲಯಗಳ ಸಂಬಂಧ

22. ದೇವಾಲಯದ ಜೀರ್ಣೋದ್ಧಾರ ಮಾಡಲಾಗಿದೆಯೆ?

23. ದೇವಾಲಯದಲ್ಲಿ ಜನಪದ ಪ್ರದರ್ಶನಾತ್ಮಕ ಕಲೆಗಳೇನಾದರು ಪ್ರದರ್ಶನಗೊಳ್ಳುತ್ತವೆಯೆ?

24. ದೇವಾಲಯದಲ್ಲಿ ಮಾನವರ ಮೇಲೆ ದೈವಗಳ ಆಹ್ವಾಹನೆಯಾಗುತ್ತದೆಯೆ(ಪ್ರಶ್ನೋತ್ತರ)?

25. ದೇವಾಲಯದಲ್ಲಿ ಪ್ರಸಾದ ವಿನಿಯೋಗ ಸಂಪ್ರದಾಯವಿದೆಯೆ? ಯಾವ ಯಾವ ಪ್ರಸಾದ?

26. ದೇವಾಲಯದಲ್ಲಿನ ತತ್ವಗಳೇನಾದರು ಇವೆಯೆ?

27. ದೇವಾಲಯಕ್ಕೆ ಯಾತ್ರೆ, ತೀರ್ಥಯಾತ್ರೆಯೊಂದಿಗೆ ಸಂಬಂಧವಿದೆಯೆ?

28. ದೇವಾಲಯದಲ್ಲಿ ಮಹಿಳಾ ಅರ್ಚಕರಿದ್ದಾರೆಯೆ?

29. ದೇವಾಲಯಗಳಿಗೂ ದಲಿತರಿಗೂ ಇರುವ ಸಾಂಸ್ಕೃತಿಕ ಸಂಬಂಧ:

30. ದೇವಾಲಯದ ಆಹಾರ ಪದ್ಧತಿಗಳೇನು?

31. ದೇವಾಲಯದ ಸಾಮಾಜಿಕ ಕಾರ್ಯಗಳೇನು?

32. ದೇವಾಲಯ ಮುಜರಾಯಿ ಇಲಾಖೆಗೆ ಒಳಪಟ್ಟಿದೆಯೆ?

33. ದೇವಾಲಯಕ್ಕೆ ಆಡಳಿತ ಮಂಡಳಿ ಅಥವಾ ಧರ್ಮದರ್ಶಿ ಮಂಡಳಿ ಇದೆಯೆ?

34. ದೇವಾಲಯದ ಆದಾಯದ ಮೂಲಗಳಾವುವು?

35. ದೇವಾಲಯದಲ್ಲಿರುವ ಧಾರ್ಮಿಕ ವಾದ್ಯಗಳಾವುವು?

36. ದೇವರ ಉಡುಗೆ-ತೊಡುಗೆ, ಆಭರಣಗಳಾವುವು?

37. ಪೂಜಾರಿಗಳು ಪಾರಂಪರಿಕವಾಗಿ ಬಂದವರೆ? ಯಾವ ಸಮುದಾಯದವರು?

38. ದೇವಾಲಯದೊಂದಿಗೆ ಪ್ರವಾಸೋದ್ಯಮದ ಸಂಬಂಧ

39. ದೇವಾಲಯದ ಪೂಜಾ ವಿಧಿ ವಿಧಾನಗಳಾವುವು?

40. ದೇವಾಲಯದಲ್ಲಿ ನಡೆಯುವ ಬಲಿ, ಹರಕೆ, ಕಾಣಿಕೆ, ಹುಂಡಿಯ ವಿಚಾರಗಳು:

41. ದೇವಾಲಯಕ್ಕೆ ಸಂಬಂಧಿಸಿದ ವ್ರತ ಮತ್ತು ಸೇವೆಗಳು:

42. ವಾಮಾಚಾರ ಕ್ರಿಯೆಗೆ ಸಂಬಂಧಿಸಿದಂತೆ ತಡೆ ಒಡೆಯುವ ಪ್ರಕ್ರಿಯೆ ಇದೆಯೆ.

43. ದೇವಾಲಯದಲ್ಲಿ ಮಿಥುನ ಶಿಲ್ಪಗಳಿವೆಯೆ.



ಶ್ರೀ ಚಾಮುಂಡೇಶ್ವರಿ



ಚಾಮುಂಡೇಶ್ವರಿ ದೇವಾಲಯ, ಚಾಮುಂಡಿಬೆಟ್ಟ



**ಚಾಮುಂಡೇಶ್ವರಿ ರಥೋತ್ಸವ**




**ಮಹಾಬಲೇಶ್ವರ ದೇವಾಲಯ ಚಾಮುಂಡಿಬೆಟ್ಟ**




**ಚಾಮುಂಡಿಬೆಟ್ಟದ 700ನೇ ಮೆಟ್ಟಿಲಿನಲ್ಲಿರುವ ನಂದಿ**



**ಉತ್ತನಹಳ್ಳಿ ಮಾರಮ್ಮ ದೇವಾಲಯ**



ಬಿಸಿಲು ಮಾರಮ್ಮ ದೇವಾಲಯ



ಭೋಗೇಶ್ವರ ದೇವಾಲಯ ಬೋಗಾದಿ



**ಕ್ಯಾತಮಾರನಹಳ್ಳಿ ಹುಲಿಯಮ್ಮ ಜಾತ್ರೆ**



**ಪೂಜಾ ಸಾಮಾಗ್ರಿಗಳ ಅಂಗಡಿ**




ಎಣ್ಣೆಗಾಣ ನನ್ನೇಶ್ವರ ದೇವಾಲಯ, ಹಿನಕಲ್



ನನ್ನೇಶ್ವರ ದೇವಾಲಯ, ಹಿನಕಲ್



ನನ್ನೇಶ್ವರ ದೇವಾಲಯದ ಕಲ್ಯಾಣಿ, ಹಿನಕಲ್



ಮಾದೇಶ್ವರ ದೇವಾಲಯ ಕುಂಬಾರಕೊಪ್ಪಲು



ಆಧಿಶಕ್ತಿ ಬನ್ನಿಮರದಮ್ಮ ದೇವಾಲಯ ಕುಂಬಾರಕೊಪ್ಪಲು



ಜೋಡಿ ಮಾರಮ್ಮ ದೇವಾಲಯ ಪಡುವಾರಹಳ್ಳಿ




ಚಂದ್ರಮೌಳೇಶ್ವರ ದೇವಾಲಯ, ಕೆ.ಇ.ಬಿ ಸರ್ಕಲ್




ಘಂಟೆ ಬಸಪ್ಪನ ದೇವಸ್ಥಾನ, ದಟ್ಟಗಳ್ಳಿ



**ಆಂಜನೇಯ ದೇವಾಲಯ, ಕುವೆಂಪುನಗರ**



**ಸಪ್ತಮಾತೃಕೆ ದೇವಾಲಯ ಬೋಗಾದಿ**



ಹರಕೆಯ ಕಾಸನ್ನು ಘಂಟೆಗೆ ಕಟ್ಟಿರುವುದು



ನಿಂಬೆಹಣ್ಣಿನ ದೀಪದಾರತಿ



ನೂರೊಂದು ಗಣಪತಿ ದೇವಾಲಯದಲ್ಲಿ ವಾಹನ ಪೂಜೆ ಮಾಡಿಸುತ್ತಿರುವುದು



ಎಡೆ ಹೊತ್ತು ಸಾಗುತ್ತಿರುವುದು ಬಂದಂತಮ್ಮ ಕಾಳಮ್ಮ ದೇವಾಲಯ ಕನ್ನೆಗೌಡನ ಕೊಪ್ಪಲು



ಎಡೆ ಅರ್ಪಿಸಿರುವುದು



ನಾಗರ ಕಲ್ಲು



ನಾಗರಕಲ್ಲಿಗೆ ಪೂಜೆ ಸಲ್ಲಿಸುತ್ತಿರುವುದು



ತಂಬಿಟ್ಟಿನ ಆರತಿ



ತಂಬಿಟ್ಟಿನಾರತಿ ಪೂಜೆ



ಅಶೋಕಪುರಂನ ಸಿದ್ದಪ್ಪಾಜಿ ದೇವಾಲಯದ ಮುಂದೆ ಕೊಂಡ ಹಾಕಿರುವುದು



**ಸಿದ್ದಪ್ಪಾಜಿ ತೇರು ಅಶೋಕಪುರಂ**



**ದೊಡ್ಡಮ್ಮ ತಾಯಿ ದೇವಾಲಯ ತೊಣಚಿಕೊಪ್ಪಲು**



ಚಂದ್ರಮೌಳೀಶ್ವರ ದೇವಾಲಯ ಸರಸ್ವತಿಪುರಂ



ಮಾರುತಿ ದೇವಾಲಯ ತೊಣಚಿಕೊಪ್ಪಲ



ಪ್ರಸನ್ನ ಶಿವಲಿಂಗೇಶ್ವರಸ್ವಾಮಿ ದೇವಾಲಯ ಕುವೆಂಪುನಗರ



ಹುಲಿ ವಾಹನದ ಮೇಲೆ ಮಾದೇಶ್ವರ ಮೆರವಣಿಗೆ



ನಡೆ ಮಡಿಹಾಸಿನ ಮೇಲೆ ಸಾಗುತ್ತಿರುವುದು



ಬಾಯಿಬೀಗದ ಹರಕೆ ತೀರಿಸುತ್ತಿರುವುದು




ಬಾಯಿಬೀಗದ ಹರಕೆ ತೀರಿಸುತ್ತಿರುವ ಮಹಿಳೆ



ಕಂಡಾಯಗಳ ಮೆರವಣಿಗೆ



ಬೆಳ್ಳಿಯ ರಥ



ಚಾಮುಂಡೇಶ್ವರಿ ತೆಪ್ಪೋತ್ಸವ ದೇವಿಕೆರೆ



ಕರಗಕ್ಕೆ ಪೂಜೆ ಸಲ್ಲಿಸುತ್ತಿರುವುದು



ಕರಗ ಹೊತ್ತಿರುವುದು



ಬೀಸು ಕಂಸಾಳೆ ನೃತ್ಯ



ಪೂಜಾ ಕುಣಿತ



ವೀರಭದ್ರನ ಕುಣಿತ




ವೀರಗಾಸೆ



ಪಟ ಕುಣಿತ



ಕೀಲು ಕುದುರೆ




**Mysore city Old Map**




**Mysuru city New Map**